# ಸದ್ಯದ ವಿಷಯದ ಮಟ್ಟಿಗೆ ಸೀಮಿತರಾಗೋಣ

**''ನಾನು ಯಾವ ವಿಷಯದಲ್ಲಾದರೂ ನಾಚಿಕೆ ಪಡದೆ ಎಂದಿನಂತೆ ಈಗಲೂ ಸಹ ತುಂಬಾ ಧೈರ್ಯ ದಿಂದಿರುವದರಿಂದ ...... ನನ್ನ ದೇಹದ ಮೂಲಕ ಕ್ರಿಸ್ತನಿಗೆ ಮಹಿಮೆಯುಂಟಾಗಬೇಕೆಂದು ನನಗೆ ಬಹಳ ಅಭಿಲಾಷೆಯದೆ.'' - (ಫಿಲಿಪ್ಪಿ - 1:20)**

My utmost for His Highest ''ನನ್ನ ಸರ್ವಸ್ವವೂ ಆತನ ಘನತೆಗಾಗಿ''. ''ನಾನು ಯಾವ ವಿಷಯದಲ್ಲಾದರೂ ಎಂದಿಗೂ ನಾಚಿಕೆ ಪಡದೆ... ಇರಬೇಕೆಂದು ನನಗೆ ಬಹಳ ಅಭಿಲಾಷೆಯಿದೆ; ಹಾಗೆಯೇ ಆಗುವದೆಂದು ಭರವಸೆ ಉಂಟು''. ತನಗೆ ಒಪ್ಪಿಸಿ ಕೊಡೆಂದು ಯೇಸು ಸ್ವಾಮಿಯು ಬಯಸುವ ನಮ್ಮ ಜೀವಿತ ಕ್ಷೇತ್ರವನ್ನು ನಾವು ಆತನಿಗೆ ಒಪ್ಪಿಸಿ ಕೊಡದಿದ್ದಾಗ ಮಾತ್ರ, ನಾವೆಲ್ಲರೂ ನಾಚಿಕೆಗೊಳಗಾಗುತ್ತೇವೆ. ಶ್ರೀ ಪೌಲನು ಹೇಳುತ್ತಿರುವನೋ ಎಂಬಂತಿರುವ ವಾಕ್ಯ - ''ನನ್ನ ಸರ್ವಸ್ವವೂ ಆತನ ಘನತೆಗಾಗಿ'', ಎಂಬುದೊಂದೇ ನಿಶ್ಚಿತವಾದ ನನ್ನ ಧ್ಯೇಯ''. ಆ ಮಟ್ಟಕ್ಕೆ ತಲುಪುವುದೇ ನನ್ನ ಆತ್ಮ ಶಕ್ತಿಯ ಮುಂದಿರುವ ಪ್ರಶ್ನೆ, ಅದು ಚರ್ಚಾವಿಷಯವಲ್ಲ, ವಿವೇಚನೆಯ ಪ್ರಶ್ನೆಯಲ್ಲ ; ಈ ವಿಷಯದ ಮಟ್ಟಿಗೆ ಸಂಪೂರ್ಣವಾಗಿ ಮತ್ತು ಅಪರಿವರ್ತನೀಯವಾಗಿ ಆತನಿಗೆ ಒಪ್ಪಿಸಿಕೊಡಬೇಕು. ಅಂಥ ನಿರ್ಧಾರಗಳು ಬೇರೆಯವರ ಮೇಲೆ ಎಂಥಾ ಪರಿಣಾಮಗಳನ್ನುಂಟು ಮಾಡಬಹುದೆಂಬುದನ್ನು ನಾವು ಪರಿಶೀಲಿಸುತ್ತಿರುವೆವು ಎಂದು ಹೇಳಿಕೊಳ್ಳುತ್ತಿದ್ದರೂ, ಅದನ್ನು ಇನ್ನು ಕೈಗೊಳ್ಳದಿರುವ ಕಾರಣವೆಂದರೆ, ನಮ್ಮನ್ನು ನಾವು ಹದ್ದು ಮೀರಿ ಪರಿಗಣಿಸಿಕೊಂಡಿರುತ್ತೇವೆ. ಯೇಸು ಕ್ರಿಸ್ತನ ಈ ಕರೆಯುವಿಕೆಗೆ ವಿಧೇಯ ರಾಗುವುದರಿಂದ, ಇತರರು ತೆರಬೇಕಾದ ಬೆಲೆಯನ್ನು ನಾವು ಪರಿಶೀಲಿಸುವುದಾದರೆ, ನಮ್ಮ ವಿಧೇಯತೆ ಯಿಂದುಂಟಾಗುವ ಪರಿಣಾಮವೇನೆಂಬುದು ದೇವರಿಗೆ ತಿಳಿಯುತ್ತಿಲ್ಲವೆಂದು ಆತನಿಗೆ ನಾವು ಹೇಳಿದಂತಾ ಗುತ್ತದೆ. ಪ್ರಸ್ತುತ ನಮ್ಮ ಮುಂದಿರುವ ವಿಷಯಾಂಶಕ್ಕೆ ಸೀಮಿತರಾಗಿರೋಣ; ಅದಲ್ಲವೂ ಆತನಿಗೆ ಗೊತ್ತುಂಟು. ಎಲ್ಲಾ ಯೋಚನೆಗಳನ್ನು ಹೊರಗಿಟ್ಟು ''ನನ್ನ ಸರ್ವಸ್ವವೂ ಆತನ ಘನತೆಗಾಗಿ'' ಎನ್ನುವ ಒಂದೇ ಒಂದು ವಿಷಯಾಂಶಕ್ಕೆ ಬದ್ಧರಾಗಿ ದೇವರ ಸನ್ನಿಧಿ ಯಲ್ಲಿ ಕಾಣಿಸಿಕೊಳ್ಳೋಣ. ಸಂಪೂರ್ಣವಾಗಿ, ಕೇವಲ ಆತನಿಗಾಗಿ ಮಾತ್ರವೇ ನಾನಿರುತ್ತೇನೆ ಎಂದು ದೃಢವಾಗಿ ನಾನು ನಿಶ್ಚಯಿಸಿಕೊಂಡಿದ್ದೇನೆ.

My undeterredness ನನ್ನ ನಿರ್ಭಯತ್ವವೆಲ್ಲಾ ಆತನ ಪರಮ ಪರಿಶುದ್ಧತೆಗಾಗಿ ''ಬದುಕಿದರೂ ಸರಿಯೇ, ಸತ್ತರೂ ಸರಿಯೆ'' (ಫಿಲಿಪ್ಪಿ 1:21) ದೇವರು ಇಚ್ಛಿಸಿದಂತೆಯೇ ಮಾಡ ಬೇಕೆಂದಿರುವ ಪೌಲನನ್ನು ಅಡ್ಡಿಪಡಿಸುವಂಥಾದ್ದೇನೂ ಇಲ್ಲವೆಂದು ಆತನು ದೃಢನಿಶ್ಚಯದಲ್ಲಿದ್ದಾನೆ. ದೇವರ ಚಿತ್ತವನ್ನನುಸರಿಸುವ ಮುಂಚೆ ದೇವರ ಮೃದುವಾದ ಮದಡುವಿಕೆಗೆ ನಾವು ಲಕ್ಷಕೊಡುವುದಿಲ್ಲ ವಾದ್ದರಿಂದ ದೈವ ವ್ಯವಸ್ಥೆಯು ನಮ್ಮ ಜೀವಿತದಲ್ಲಿ ಸಂಕಷ್ಟವನ್ನುಂಟು ಮಾಡುತ್ತದೆ. ನಿನ್ನ ಸ್ವಯ ಸರ್ವಸ್ವವೆಲ್ಲಾ ಕೇವಲ ನನಗೆ ಮಾತ್ರ ಎಂದು ಆತನು ಕೇಳುವಂಥಾ ಒಂದು ನೆಲೆಗೆ ದೇವರು ನಿನ್ನನ್ನು ಬರಮಾಡುತ್ತಾನೆ. ಅಲ್ಲಿ ನಾವು ಚರ್ಚೆ ಮಾಡಲು ಸಿದ್ಧರಾಗುತ್ತೇವೆ; ಆಗ, ಅಲ್ಲಿಯೇ, ದೈವ ನಿಯಮಿತ ಬಿಕ್ಕಟ್ಟನ್ನು ಆತನು ಉಂಟು ಮಾಡುತ್ತಾನೆ. ಆ ಕ್ಷಣದಲ್ಲಿಯೇ, ನಾವು ಅಂತಿಮ ತೀರ್ಮಾನವನ್ನು ಮಾಡಲೇ ಬೇಕಾಗುತ್ತದೆ - ಆತನಿಗಾಗಿ, ಆತನ ವಿರುದ್ಧವಾಗಿ; ಇಂಥಾ ಸನ್ನಿವೇಶದ ಹಂತದಿಂದಲೇ ನಮ್ಮೊಳಗೆ ''ಮಹಾವಿಭಜನೆ''ಯು ಆರಂಭವಾಗುತ್ತದೆ.

ಈ ದಾರಿಯಲ್ಲಿ ಬಿಕ್ಕಟ್ಟು ನಿನಗುಂಟಾಗಿದ್ದರೆ, ಕೂಡಲೇ ಸಂಕಲ್ಪವೆಸಗುವ ನಿನ್ನ ಆತ್ಮನ ಮೇಲಿರುವ ನಿನ್ನ ಹಕ್ಕನ್ನು ಸಂಪೂರ್ಣವಾಗಿಯೂ, ಖಂಡಿತವಾಗಿಯೂ ದೇವರಿಗೆ ಒಪ್ಪಿಸಿ ಬಿಡಬೇಕು.

**ಜನವರಿ – 2**

# ಹೋಗಬೇಕಾದ ಸ್ಥಳವು ಯಾವುದೆಂದು ತಿಳಿಯದೆ ನೀನು ಹೊರಡಬಲ್ಲೆಯೋ ?

**''ತಾನು ಹೊರಗೆ ಹೋಗಬೇಕಾದ ಸ್ಥಳವು ಯಾವುದೆಂದು ತಿಳಿಯದೆ ಹೊರಟನು'' – ಇಬ್ರಿಯ 11:8**

ಹೀಗೆ ನೀನೆಂದಾದರೂ ಹೊರಗೆ ಹೊರಟ್ಟಿದ್ದೆಯೋ? ಹಾಗೇನಾದರೂ ನೀನು ಹೊರಟಿರುವಾಗ, ಯಾರಾದರೂ ನಿನ್ನನ್ನು, ನೀನೇನು ಮಾಡುತ್ತಿರುವಿ ಎಂದು ಕೇಳಿದರೆ, ತರ್ಕಬದ್ಧ ಹೇಳಿಕೆ ಕೊಡಲು ನಿನ್ನಲ್ಲಿ ಏನೂ ಇರುವುದಿಲ್ಲ. ಕ್ರಿಸ್ತೀಯ ಸೇವೆಯಲ್ಲಿರುವ ಬಿಕ್ಕಟ್ಟುಗಳಲ್ಲಿ ಇದೂ ಒಂದು ಪ್ರಶ್ನೆ – ''ನೀನು ಏನು ಮಾಡಬೇಕೆಂದು ನಿರೀಕ್ಷಿಸುತ್ತಿರುವಿ?'' ನೀನೇನು ಮಾಡ ಬೇಕಾಗಿದೆಯೋ ಅದು ನಿನಗೇ ತಿಳಿದಿಲ್ಲ; ದೇವರು ಏನು ಮಾಡುತ್ತಿರುವನೋ ಅದು ಆತನಿಗೆ ಗೊತ್ತುಂಟು ಎಂಬುದೊಂದೇ ನಿನಗೆ ತಿಳಿದಿರುವ ವಿಷಯ. ಒಂದು ವೇಳೆ ನಿನ್ನ ಜೀವಿತದ ಪ್ರತಿಯೊಂದು ವಿಷಯಗಳಿಂದ ಹೊರಗೆ ಹೊರಡಬೇಕಾಗಿದ್ದರೆ, ನೀನು ದೇವರಲ್ಲಿ ಸಂಪೂರ್ಣ ಭರವಸೆಯನ್ನಿಟ್ಟು , ಆತನ ವಿಷಯದ ನಿನ್ನ ಮನೋಭಾವವನ್ನು ಸದಾ ಪರಿಶೀಲಿಸುತ್ತಿರಬೇಕು. ಇಂಥಾ ಮನೋ ಭಾವನೆಯೇ ಸದಾಕಾಲಕ್ಕೂ ನಿನ್ನನ್ನು ಆಶ್ಚರ್ಯ ಚಕಿತನಾಗುವಂತೆ ಮಾಡುತ್ತದೆ, ಯಾಕೆಂದರೆ ದೇವರು ಮುಂದೇನು ಮಾಡುವನೋ ಅದು ನಿನಗೆ ತಿಳಿದಿರುವುದಿಲ್ಲ. ಪ್ರತಿದಿನ ಬೆಳಿಗ್ಗೆ ನೀನೆಚ್ಚರಗೊಂಡಾಗ, ದೇವರಲ್ಲಿ ಭರವಸೆಯಿಟ್ಟು , ''ಹೊರಗೆ ಹೊರಡು''. ''... ಪ್ರಾಣಧಾರಣೆಗೆ ಏನು ಊಟ ಮಾಡಬೇಕು? ದೇಹರಕ್ಷಣೆಗೆ ........... ಎಂದು ಚಿಂತೆಮಾಡಬೇಡಿರಿ''. (ಲೂಕ 12 : 22) ಈವರೆಗೆ ನೀನು ''ಹೊರಗೆ ಹೊರಡು'' ವ ಮೊದಲು ಚಿಂತಿಸುತ್ತಿದ್ದ ಎಲ್ಲಾ ವಿಷಯಗಳ ಬಗ್ಗೆ ಇನ್ನು ಮೇಲೆ ಚಿಂತಿಸಬೇಡ.

ದೇವರು ಮುಂದೇನು ಮಾಡಬಹುದೆಂದು, ನೀನು ಆತನನ್ನು ಕೇಳುತ್ತಲೇ ಇರುವೆಯೋ ? ಅದನ್ನು ಆತನು ನಿನಗೆ ತಿಳಿಯಪಡಿಸುವುದೇ ಇಲ್ಲ ಹಾಗೂ ಸದ್ಯದಲ್ಲಿ ತಾನೇನು ಮಾಡುತ್ತಿದ್ದಾನೆಂಬುದನ್ನು ನಿನಗೆ ತಿಳಿಸುವುದಿಲ್ಲ; ಆದರೆ, ತಾನು ಯಾರು ಎಂಬುದನ್ನು ನಿನಗೆ ಪ್ರಕಟಪಡಿಸುತ್ತಾನೆ. ಅದ್ಭುತ ಕೃತ್ಯಗಳನ್ನೆಸಗುವ ದೇವರಲ್ಲಿ ನಿನಗೆ ಭರವಸೆ ಇದೆಯೋ ? ಆತನೇನು ಮಾಡಿದರೂ, ನಿನಗದು ತೃಣಮಾತ್ರವೂ, ಆಶ್ಚರ್ಯಚಕಿತ ವಲ್ಲದಷ್ಟರ ಮಟ್ಟಿಗೆ ನಿನ್ನನ್ನು ನೀನು ಆತನಿಗೆ ಸಮರ್ಪಿಸಿ ಕೊಳ್ಳಬಲ್ಲೆಯೋ?

ನೀನು ಯಾರನ್ನು ದೇವರೆಂದು ಬಲ್ಲೆಯೋ ಆ ದೇವರನ್ನು ನಂಬಿದ ನೀನು ಆತನಿಗೆ ಅತೀ ಹತ್ತಿರದಲ್ಲಿದ್ದಾಗ, ಚಿಂತೆ ಮಾಡುವುದು ಎಂಥಾ ಅಸಂಭದ್ಧತೆ! ದೇವರನ್ನು ಆತುಕೊಂಡು ಸದಾ ''ಹೊರಗೆ ಹೊರಡು''ವುದೇ ನಿನ್ನ ಜೀವಿತದ ಮನೋಧರ್ಮವಾಗಿರಲಿ, ಆ ಜೀವಿತವು ಅವರ್ಣನೀಯ ರಮ್ಯತೆಯನ್ನು ಹೊಂದಿ, ಯೇಸುಕ್ರಿಸ್ತನನ್ನು ಮೆಚ್ಚಿಸುವಂಥದ್ದಾಗಿದೆ. ನಿನ್ನ ನಿಶ್ಚಿತಾಭಿಪ್ರಾಯಗಳ, ನಿನ್ನ ತತ್ವ ಸಿದ್ಧಾಂತಗಳ, ನಿನ್ನ ಅನುಭವಗಳ ''ಹೊರಗೆ ಹೊರಡು''ವುದನ್ನು ಸಾಧಿಸುತ್ತಿರಬೇಕು, ಎಷ್ಟರಮಟ್ಟಿಗೆಂದರೆ, ನಿನ್ನ ನಂಬಿಕೆಗೆ ಸಂಬಂಧ ಪಟ್ಟಂತೆ ನಿನಗೂ ಮತ್ತು ದೇವರಿಗೂ ನಡುವೆ ಏನೇನೂ ಇರದಷ್ಟರ ಮಟ್ಟಿಗೆ.

# ಮುಗಿಲೂ ಮತ್ತು ಕಾರ್ಗತ್ತಲೆ

**''ಮುಗಿಲೂ ಕಾರ್ಗತ್ತಲೆಯೂ ಆತನ ಸುತ್ತಲೂ ಇರುತ್ತವೆ'' - (ಕೀರ್ತನೆ - 97:2)**

ದೇವರ ಆತ್ಮನಿಂದ ಹೊಸದಾಗಿ ಹುಟ್ಟಿದಿರುವ ವ್ಯಕ್ತಿಯು, 'ಯೇಸುಕ್ರಿಸ್ತನ ಉಪದೇಶಗಳು ಸರಳವಾದವುಗಳೆಂದು' ನಿನಗೆ ಹೇಳುವನು. ಆದರೆ ನೀನು ಪವಿತ್ರಾತ್ಮನ ದೀಕ್ಷೆಹೊಂದಿದಾಗ ''ಮುಗಿಲೂ ಕಾರ್ಗತ್ತಲೂ ಆತನ ಸುತ್ತಲೂ ಇರುತ್ತವೆ'' ಎಂಬುದು ನಿನಗೆ ಗೋಚರಿಸುತ್ತದೆ. ಯೇಸುಕ್ರಿಸ್ತನ ಬೋಧನೆಗಳ ನಿಕಟ ಸಂಬಂಧದೊಳಗೆ ನಾವು ಬಂದಾಗ, ಈ ವಿಷಯದ ಪ್ರಥಮ ಒಳನೋಟದ ಅರಿವು ನಮಗಾಗುತ್ತದೆ. ನಮ್ಮ ಅಂತರಂಗದಲ್ಲಿ ಪ್ರಕಾಶಿಸುತ್ತಿರುವ ದೇವರ ಆತ್ಮನ ಬೆಳಕಿನ ಮೂಲಕವೇ ನಾವು ಯೇಸುಕ್ರಿಸ್ತನ ಬೋಧನೆಗಳನ್ನು ಅರ್ಥಮಾಡಿಕೊಳ್ಳಬಲ್ಲೆವು. ಹಳಸಾದ ಧಾರ್ಮಿಕ ಪಾದರಕ್ಷೆಗಳನ್ನು (ಕಟ್ಟುಪಾಡು, ನಿಯಮಗಳನ್ನು) ವರ್ಜಿಸಿರುವ ಮತ್ತು ದೇವರನ್ನು ಸಮೀಪಿಸುವಾಗ ತೋರುವ ನಮ್ಮ ಅನುಚಿತ ಅತಿ ಸಲಿಗೆಯನ್ನು ತೊರೆದಿರುವ ಅನುಭವ ನಮಗಿಲ್ಲದಿದ್ದರೆ, ನಾವೆಂದಾದರೂ ದೇವರ ಸನ್ನಿಧಿಯಲ್ಲಿ ಇದ್ದೆವು ಎಂಬುದು ನಿಜವಾಗಿಯೂ ಸಂದೇಹಾಸ್ಪದವಾದದ್ದು. ದೇವರನ್ನು ಸಮೀಪಿಸುವ ವಿಷಯದಲ್ಲಿ ಹುಡುಗಾಟಿಕೆ ಮತ್ತು ಅತಿ ಸಲುಗೆಯನ್ನು ತೋರುವ ಜನರು ಇಂದಿಗೂ ಯೇಸುಕ್ರಿಸ್ತನ ಪರಿಚಯವನ್ನು ಹೊಂದಿದವರಲ್ಲ. ಯೇಸುಕ್ರಿಸ್ತನು ಏನು ಮಾಡುವನೆನ್ನುವುದನ್ನು ಮನಗಾಣುವ ಸ್ವಾತಂತ್ರ್ಯವನ್ನು ಮತ್ತು ಅದರ ವಿಸ್ಮಯಭರಿತ ಮಹದಾನಂದವನ್ನು ಮೊದಲು ಅನುಭವಿಸಿದ ನಂತರವೇ, ಆತನು ಯಾರಿರಬಹುದೆಂದು ಅರಿಯಬೇಕಾದ ಅಭೇದ್ಯ ''ಕಾರ್ಗತ್ತಲೆ''ಯು ನಮಗೆ ಗೋಚರಿಸುತ್ತದೆ.

ಯೇಸುಸ್ವಾಮಿ ಹೇಳಿದ್ದು, ''ನಾನು ನಿಮಗೆ ಹೇಳುತ್ತಿರುವ ಮಾತುಗಳೇ - ಹೇಳಿದ್ದ ಮಾತುಗಳು ಅಲ್ಲ - ಆತ್ಮವಾಗಿಯೂ ಜೀವವಾಗಿಯೂ ಅವೆ'' (ಯೋಹಾನ - 6:63) ಸತ್ಯವೇದವೆಂದರೆ ಅನೇಕಾನೇಕ ವಾಕ್ಯಗಳಷ್ಟೇ ಎಂದೆನಿಸಿತ್ತು. ಆದರೆ ''ಮುಗಿಲು ಮತ್ತು ಕಾರ್ಗತ್ತಲು'' ನುಡಿಗಳು ಇದ್ದಕ್ಕಿದ್ದಂತೆಯೇ ಆತ್ಮವಾಗಿಯೂ ಜೀವವಾಗಿಯೂ ತುಂಬಿಕೊಳ್ಳುತ್ತವೆ. ಇದಕ್ಕೆ ಕಾರಣ ಯೇಸುಸ್ವಾಮಿಯವರು ನಮ್ಮ ನಿರ್ದಿಷ್ಟ ಸ್ಥಿತಿಗತಿಗಳಲ್ಲಿ ಅವುಗಳನ್ನು ನಮಗೆ ಪುನಃ ನುಡಿಯುವುದರಿಂದ. ದೇವರು ಮಾತಾಡುವ ರೀತಿಯೇ ಹೀಗೆ-ದರ್ಶನಗಳಲ್ಲಿ ಅಲ್ಲ, ಕನಸುಗಳಲ್ಲಿ ಅಲ್ಲ ಆದರೆ ವಾಕ್ಯಗಳಲ್ಲಿ; ಅತ್ಯಂತ ಸರಳ ವಾಕ್ಯಗಳ ಮೂಲಕವೇ ಮನುಷ್ಯನು ದೇವರ ಬಳಿಗೆ ಬರುತ್ತಾನೆ.

# ನಾನು ಯಾಕೆ ಈಗ ನಿನ್ನ ಹಿಂದೆ ಬರಲಾರೆನು ?

**ಪೇತ್ರನು ಆತನಿಗೆ ''ಸ್ವಾಮಿ ನಾನು ಯಾಕೆ ಈಗ ನಿನ್ನ ಹಿಂದೆ ಬರಲಾರೆನು?'' – (ಯೋಹಾನ – 13:37)**

ನೀನು ಮಾಡಬೇಕಾಗಿರುವದನ್ನು ಮಾಡದಿರುವುದರ ಕಾರಣವನ್ನು ಗ್ರಹಿಸಲಾಗದ ಸಮಯಗಳು ನಿನಗಿರುತ್ತವೆ. ದೇವರು ಖಾಲಿ ಜಾಗವನ್ನು ಅಂದರೆ ಸ್ಥಬ್ದನಾಗಿ ಕಾದುಕೊಂಡಿರುವ ಸಮಯವನ್ನು ನಿನ್ನೆದುರಿಗೆ ತಂದಾಗ ಅದನ್ನು ತುಂಬಿಸಬೇಡ, ಅಂದರೆ ಚಿಂತನೆ ಮತ್ತು ಚಟುವಟಿಕೆ ಗಳಿಂದ ಅದನ್ನು ತುಂಬಿಸಬೇಡ; ಸ್ಥಬ್ದನಾಗಿ ಕಾದುಕೊಂಡಿರಬೇಕು. ಶುದ್ಧೀಕರಣವೆಂದರೇನು ಎಂಬುದನ್ನು ನಿನಗೆ ಬೋಧಿಸಲು ಆ ಬರಿದಾದ ಸಮಯವುಂಟಾಗಿರಬಹುದು, ಇಲ್ಲವೆ ಶುದ್ಧೀಕರಣದ ನಂತರ ದೇವಸೇವೆ ಎಂದರೇನು ಎಂಬುದನ್ನು ನಿನಗೆ ತಿಳಿಸಲೂ ಸಹಾ ಅದಿರಬಹುದು. ದೇವರ ಮಾರ್ಗದರ್ಶನಕ್ಕಿಂತ ಮೊದಲೇ ನೀನು ಮುಂದೆ ಸಾಗಬೇಡ; ಅಲ್ಲಿ ನಿನಗೇನಾದರೂ ತೃಣಮಾತ್ರದಷ್ಟು ಸಂಶಯವಿದ್ದರೆ, ದೇವರು ನಿನಗೆ ಮಾರ್ಗದರ್ಶನ ಮಾಡುತ್ತಿಲ್ಲ. ಯಾವಾಗ ಸಂಶಯ ಉಂಟಾಗುವದೋ ಆಗ ಸ್ಥಬ್ದನಾಗು – ಕಾದಿರು.

ದೇವರ ಚಿತ್ತವೇನೆಂದು ಪ್ರಾರಂಭದಲ್ಲಿಯೇ ಸ್ಪಷ್ಟವಾಗಿ ನೀನು ಕಾಣಬಹುದು – ಯಾವುದೋ ಒಂದು ಸ್ನೇಹದ ವಿಚ್ಛೇದನೆ, ವ್ಯವಹಾರದ ಬಾಂಧವ್ಯವೊಂದು ಮುರಿದು ಹೋಗುವಿಕೆ, ಮುಂತಾದ ವಿಷಯಗಳಲ್ಲಿ, ನೀನೇನು ಮಾಡಬೇಕೆಂದಿರುವಿಯೋ, ಅದು ದೇವರ ಚಿತ್ತವೆನ್ನುವ ಸ್ಪಷ್ಟ ಸಂವೇದನೆಯು ನಿನಗಾಗಿರಬಹುದು, ಆದರೆ ಆ ಸಂವೇದನೆಯನ್ನಾಧರಿಸಿದ ಅಂತಃ ಪ್ರಚೋದನೆಯಿಂದ ಕಾರ್ಯೋನ್ಮುಖ ನಾಗಬೇಡ. ಒಂದು ವೇಳೆ ನೀನು ಕಾರ್ಯ ಪ್ರಯುಕ್ತನಾದರೇ ಸರಿಪಡಿಸಲು ಅನೇಕ ವರ್ಷಗಳೇ ಬೇಕಾಗುವಂಥ ತೊಂದರೆಗಳನ್ನುಂಟು ಮಾಡಿಕೊಳ್ಳುವಿ. ದೇವರು ಅದನ್ನು ಸಾಧಿಸುವ ಸಮಯಕ್ಕಾಗಿ ಕಾದಿರು. ದುಃಖ ವಿಲ್ಲದ, ಯಾವುದೇ ನಿರಾಶೆ ಇಲ್ಲದ ರೀತಿಯಲ್ಲಿ ಆತನೇ ಅದನ್ನು ಮಾಡುವನು. ಅದು ದೇವರ ಪರಮ ಚಿತ್ತದ ಪ್ರಶ್ನೆಯಾಗಿದ್ದರೆ, ಅಲ್ಲಿ ದೇವರು ತಾನೇ ಮುಂದುವರೆಯುವ ತನಕ ಕಾದಿರು.

ದೇವರ ದಾರಿಗಾಗಿ ಪೇತ್ರನು ಕಾಯಲಿಲ್ಲ, ತನ್ನ ಪರೀಕ್ಷೆ ಎಲ್ಲಿ ಬರಬಹುದೆಂದು ತನ್ನ ಮನದಲ್ಲಿ ಮುಂದಾಗಿ ಎಣಿಸಿಕೊಂಡನು, ಆದರೆ ಆ ಪರೀಕ್ಷೆ ಎಲ್ಲಿ ಬರಬಹುದೆಂದು ಆತನು ಊಹಿಸಿದ್ದನೋ ಅಲ್ಲಿ ಅದು ಬರಲಿಲ್ಲ. ''ನಿನಗಾಗಿ ನನ್ನ ಪ್ರಾಣವನ್ನಾದರೂ ಕೊಟ್ಟೇನು''. ಪೇತ್ರನ ಘೋಷಣೆ ಪ್ರಾಮಾಣಿಕ ವಾಗಿತ್ತಾದರೂ, ಅದು ಮೂಢತನದ್ದಾಗಿತ್ತು. ಯೇಸು ಸ್ವಾಮಿಯು ''ನನ್ನನ್ನು ಅರಿಯೆನೆಂದು ನೀನು ಮೂರುಸಾರಿ ಹೇಳುವ ತನಕ ಕೋಳಿ ಕೂಗುವುದೇ ಇಲ್ಲ'' ವೆಂದು ಪ್ರತ್ಯುತ್ತರಿಸಿದ್ದರು – (ಯೋಹಾನ – 13:38) ಪೇತ್ರನಿಗೆ ತನ್ನ ವಿಷಯದಲ್ಲಿದ್ದ ತಿಳುವಳಿಕೆಗಿಂತಲೂ, ಆಳವಾಗಿ ಅವನನ್ನರಿತವರೊಬ್ಬರು ಹೇಳಿದ ಮಾತುಗಳವು. ಪೇತ್ರನು ಆ ಸಮಯದಲ್ಲಿ ಯೇಸು ಸ್ವಾಮಿಯನ್ನು ಅರ್ಥ ಮಾಡಿಕೊಳ್ಳಲಿಲ್ಲ. ಯಾಕೆಂದರೆ ಅವನಿಗೆ ತಾನು ಯಾರು, ಏನಾಗಿದ್ದೇನೆ ಎಂಬುದಾಗಲೀ, ತನ್ನ ತ್ರಾಣವೆಷ್ಟೆಂಬುದಾಗಲೀ ಅವನಿಗೆ ತಿಳಿದಿರಲಿಲ್ಲ. ಯೇಸು ಕ್ರಿಸ್ತನೆಡೆಗೆ ನಾವು ಆಕರ್ಶಿಸಲ್ಪಡಲೂ ಮತ್ತು ಯೇಸುಕ್ರಿಸ್ತನ ಮೋಹಕ ಸೆಳೆತವನ್ನು ಅನುಭವಿಸಲು ಸಾಧಾರಣ ಶ್ರದ್ಧೆಯೇ ಸಾಕೆಂದು ನಮಗೆ ತೋರಬಹುದು. ಆದರೆ, ಅದು ನಮ್ಮನ್ನು ಆತನ ಶಿಷ್ಯರನ್ನಾಗಿ ಸುವುದಿಲ್ಲ. ಸ್ವಾಭಾವಿಕ ಶ್ರದ್ಧೆಯು ಯಾವಾಗಲಾದರೂ, ಎಲ್ಲಾದರೊಂದು ಕಡೆ ಯೇಸುವನ್ನು ತಿರಸ್ಕರಿಸಬಹುದು.

# ಅನುಸರಿಸುವ ಬಲಭರಿತ ಜೀವನ

**ಯೇಸು : - ''ನಾನು ಹೋಗುವಲ್ಲಿಗೆ ನೀನು ಈಗ ನನ್ನ ಹಿಂದೆ ಬರಲಾರಿ ತರುವಾಯ ನನ್ನ ಹಿಂದೆ ಬರುವಿ'' ಅಂದನು - (ಯೋಹಾನ - 13:36)**

''ಇದನ್ನು ಹೇಳಿ ಆತನು ಅವನಿಗೆ ನನ್ನನ್ನು ಹಿಂಬಾಲಿಸು'' ಎಂದು (ಯೋಹಾನ 21:19) ಹೇಳಿದನು. ಮೂರುವರ್ಷಗಳ ಹಿಂದೆಯೂ ಸಹಾ ಯೇಸು ಸ್ವಾಮಿಯು ಪೇತ್ರನಿಗೆ ''ನನ್ನನ್ನು ಹಿಂಬಾಲಿಸು'' ಎಂದು ಹೇಳಿದ್ದನು (ಮತ್ತಾಯ-4:19). ಆಗ ಪೇತ್ರನು ಸಲೀಸಾಗಿ ಆತನನ್ನು ಹಿಂಬಾಲಿಸಿದ್ದನು, ಅವನ ಮೇಲೆ ಯೇಸುವಿನ ಆಕರ್ಷಣೆಯ ಸೆಳೆತವಿತ್ತು, ಹಾಗೆ ಹಿಂಬಾಲಿಸಲು ಅವನಿಗೆ ಪವಿತ್ರಾತ್ಮನ ಸಹಾಯ ಬೇಕಾಗಿರಲಿಲ್ಲ. ಅನಂತರ ಪೇತ್ರನು ಮುಖ್ಯವಾದ ಒಂದು ಗಮ್ಯ ಸ್ಥಳಕ್ಕೆ ಆಗಮಿಸಿ ಅಲ್ಲಿ ಯೇಸುಸ್ವಾಮಿಯನ್ನು ನಿರಾಕರಿಸಿದನು ಮತ್ತು ಅಲ್ಲಿಯೇ ಆತನ ಹೃದಯವು ಸೀಳಿಹೋಯಿತು. ಆಗ ಆತನು ಪವಿತ್ರಾತ್ಮನನ್ನು ಸ್ವೀಕರಿಸಿದನು ಮತ್ತು ಈಗ ಯೇಸುಸ್ವಾಮಿಯು ಪುನಃ ಅವನಿಗೆ ಹೇಳಿದನು ''ನನ್ನನ್ನು ಹಿಂಬಾಲಿಸು''. ಕ್ರಿಸ್ತೇನು ಸ್ವಾಮಿಯ ಹೊರತು ಈಗ ಬೇರೆ ಯಾವ ದೇಹಾಕೃತಿಯೂ ಆತನ ಮುಂದೆ ಇಲ್ಲ. ''ನನ್ನನ್ನು ಹಿಂಬಾಲಿಸು'' ಎಂಬ ಮೊದಲನೆಯ ಕರೆಯುವಿಕೆಯಲ್ಲಿ ಯಾವ ಗೂಢಾರ್ಥವು ಇರಲಿಲ್ಲ, ಅದೊಂದು ಸಾಮಾನ್ಯ ಬಾಹ್ಯ ಅನುಸರಿಸುವಿಕೆಯಾಗಿತ್ತು; ಈಗ ಅದು ಆಂತರ್ಯದ ಮರಣದಲ್ಲಿ ಕ್ರಿಸ್ತನನ್ನು ಹಿಂಬಾಲಿಸುವುದಾಗಿದೆ. (ಯೋಹಾನ - 21:18)

ಈ ಕಾಲಾಂತರದ ನಡುವೆ ಪೇತ್ರನು ಆಣೆಗಳನಿಟ್ಟು ಶಪಿಸುತ್ತಾ ಯೇಸುಸ್ವಾಮಿಯನ್ನು ನಿರಾಕರಿಸಿದ್ದನು. (ಮತ್ತಾಯ-26:69-75 ನೋಡಿರಿ) ತನ್ನೆಲ್ಲಾ ಸ್ವಯಂ ಸಂಪೂರ್ಣತೆ ಮತ್ತು ತನ್ನ ಸ್ವಾಭಾವಿಕ ವ್ಯಕ್ತಿತ್ವದ ಅಂತ್ಯಕ್ಕೆಬಂದಿದ್ದನು. ಮತ್ತೊಮ್ಮೆ ಆಧಾರವಾಗಬಲ್ಲ, ತನ್ನದೇ ಆದ ದಾರದೆಳೆಯಷ್ಟು ತೃಣತ್ರಾಣವೂ ಈಗ ಅವನಲ್ಲಿರಲಿಲ್ಲ. ತನ್ನ ಈ ನಿರ್ಗತಿಕ ಸ್ಥಿತಿಯಲ್ಲಿಯೇ, ಜೀವಿತನಾಗಿ ಎದ್ದಿರುವ ಸ್ವಾಮಿಯವರಿಂದ ಕೊಡುಗೆಯನ್ನು ಸ್ವೀಕರಿಸಲು ಯೋಗ್ಯವಾದ ಗತಿಯನ್ನು ಮುಟ್ಟಿದನು. ''ಆತನು ಅವರ ಮೇಲೆ ಊದಿ ಅವರಿಗೆ ಪವಿತ್ರಾತ್ಮವರವನ್ನು ತಕ್ಕೊಳ್ಳಿರಿ'' (ಯೋಹಾನ-20:22). ದೇವರು ನಿನ್ನಲ್ಲಿ ಏನೆಲ್ಲಾ ಬದಲಾವಣೆಗಳನ್ನು ಪೂರ್ಣ ಗೊಳಿಸಿದ್ದರೂ, ಅದು ಮುಖ್ಯವಲ್ಲ, ಅವುಗಳನ್ನು ಆಧಾರ ಮಾಡಿಕೊಳ್ಳಬೇಡ, ಒಬ್ಬನೇ ಒಬ್ಬ ವ್ಯಕ್ತಿ - ಕ್ರಿಸ್ತೇಸುಸ್ವಾಮಿಯನ್ನು ಮತ್ತು ಆತನು ದಯಪಾಲಿಸುವ ಆತ್ಮನನ್ನು ಮಾತ್ರ ಆಧಾರ ಮಾಡಿಕೊಂಡಿರಬೇಕು.

ನಮ್ಮೆಲ್ಲಾ ಪ್ರತಿಜ್ಞೆಗಳು, ಸಂಕಲ್ಪಗಳು ಬೊಂಕುವುದರಲ್ಲಿ ಅಂತ್ಯಗೊಳ್ಳುತ್ತವೆ, ಯಾಕೆಂದರೆ ಅವುಗಳನ್ನು ಕಾರ್ಯರೂಪಕ್ಕೆ ತರಲು ನಮಗೆ ಶಕ್ತಿಯಿಲ್ಲ. ನಾವು ನಮ್ಮ ಅಂತ್ಯದೆಸೆಗೆ - ಕಲ್ಪನೆಯಲ್ಲಿ ಅಲ್ಲ, ನಿಜವಾಗಿಯೂ ಬಂದಾಗ, ನಾವು ಪವಿತ್ರಾತ್ಮನನ್ನು ಸ್ವೀಕರಿಸಲು ಯೋಗ್ಯರಾಗಿರುತ್ತೇವೆ. ''ಪವಿತ್ರಾತ್ಮವರವನ್ನು ತಕ್ಕೊಳ್ಳಿರಿ''. ಈ ವಾಕ್ಯದ ಹಿಂದಿರುವ ಉದ್ದೇಶ - ಪವಿತ್ರಾತ್ಮನ ಆಕ್ರಮಣ. ಈಗ ನಮ್ಮ ಜೀವಿತಗಳಿಗೆ ಮಾರ್ಗದರ್ಶನ ಮಾಡುವ ಒಂದೇ ಒಂದು ಧೃವತಾರೆ - ಪ್ರಭು ಯೇಸುಕ್ರಿಸ್ತನು.

# ಆರಾಧನೆ

**''ತನ್ನ ಗುಡಾರವನ್ನು ಹಾಕಿಸಿ ಇಳುಕೊಂಡನು, ಪಶ್ಚಿಮಕ್ಕೆ ಬೇತೇಲೂ ಪೂರ್ವಕ್ಕೆ ಆಯಿ ಎಂಬ ಊರೂ ಇದ್ದವು. ಅಲ್ಲಿಯೂ ಕರ್ತನಿಗೋಸ್ಕರ ಯಜ್ಞವೇದಿಯನ್ನು ಕಟ್ಟಿಸಿದನು'' - (ಆದಿಕಾಂಡ - 12:8)**

ದೇವರು ನಿನಗೆ ದಯಪಾಲಿಸಿದ ಅತ್ಯುತ್ತಮವಾದದ್ದನ್ನು ಆತನಿಗೆ ಹಿಂತಿರುಗಿಸುವುದೇ ಆರಾಧನೆ. ನಿನ್ನಲ್ಲಿರುವ ಶ್ರೇಷ್ಠವಾದುದನ್ನು ಏನು ಮಾಡುತ್ತಿರುವಿ ಎಂಬ ವಿಷಯದಲ್ಲಿ ಎಚ್ಚರಿಕೆಯಿಂದಿರು. ನೀನು ದೇವರಿಂದ ಒಂದು ಆಶೀರ್ವಾದವನ್ನು ಪಡೆದಾಗ, ಅದನ್ನೇ ಆತನಿಗೆ ಪ್ರೀತಿಯ ಕಾಣಿಕೆಯಾಗಿ ಹಿಂತಿರುಗಿಸಬೇಕು. ದೇವರ ಸಾನಿಧ್ಯದಲ್ಲಿ ಧ್ಯಾನ ಮಾಡಲು ಸಮಯವನ್ನಿರಿಸಬೇಕು ಮತ್ತು ವಿವೇಕ ಪೂರ್ವಕವಾದ ಆರಾಧನೆಯಾಗಿ ದೇವರಿಂದ ಹೊಂದಿದ ಆಶೀರ್ವಾದವನ್ನು ಆತನಿಗೆ ಹಿಂತಿರುಗಿಸಬೇಕು. ನೀನೇನಾದಾರೂ ದೇವರ ಆಶೀರ್ವಾದವನ್ನು ನಿನಗಾಗಿ ಕೂಡಿಸಿಟ್ಟುಕ್ಕೊಂಡರೆ, ಕೂಡಿಸಿಟ್ಟುಕ್ಕೊಂಡ ಮನ್ನವು ಹೇಗೆ ಕೊಳೆತು ಹೋಯಿತೋ ಹಾಗೆಯೇ ನಿನ್ನಲ್ಲಿದ್ದ ಆಶೀರ್ವಾದವು ಆತ್ಮೀಕ ಕೊಳೆತಕ್ಕೊಳಗಾಗುತ್ತದೆ. ಆತ್ಮೀಕ ವಿಷಯವೊಂದನ್ನು ನಿನಗಾಗಿ ತೆಗೆದಿಟ್ಟುಕೊಳ್ಳಲು ದೇವರೆಂದಿಗೂ ನಿನಗೆ ಆಸ್ಪದಕೊಡುವುದಿಲ್ಲ. ಅದನ್ನು ಆತನಿಗೆ ಹಿಂತಿರುಗಿಸಲೇ ಬೇಕಾಗುತ್ತದೆ, ಮತ್ತು ದೇವರು ಅದನ್ನು ಇತರರಿಗೆ ಆಶೀರ್ವಾದವಾಗಿ ಉಪಯೋಗಿಸುತ್ತಾನೆ.

ದೇವರ ಅನ್ಯೋನ್ಯತೆಯ ಗುರುತು 'ಬೇತೇಲ್' ಎನ್ನುವ ಊರು, 'ಆಯಿ' ಎನ್ನುವ ಊರು ಪ್ರಾಪಂಚಿಕದ ಚಿಹ್ನೆ. ಇವೆರಡರ ಮಧ್ಯೆ ಅಬ್ರಹಾಮನು ತನ್ನ ಗುಡಾರವನ್ನು ಎತ್ತಿ ನಿಲ್ಲಿಸಿದನು. ಖಾಸಗಿಯಾಗಿ ದೇವರೊಂದಿಗೆ ನಾವು ಕಳೆಯುವ ಸಹವಾಸ ಮತ್ತು ಒಂದಾಗಿರುವಿಕೆಯ ಆಧಾರದ ಮೇಲೆಯೇ, ದೇವರಿಗಾಗಿ ನಾವು ಮಾಡುವ ಸಾರ್ವಜನಿಕ ಸೇವೆಯನ್ನು ಅಳೆಯಲಾಗುತ್ತದೆ. ಪ್ರತಿಸಲವೂ ದೇವರ ಆರಾಧನೆಗಾಗಿ ಅವಸರದ ನುಗ್ಗಾಟವು ಸರಿಯಲ್ಲ; ದೇವರನ್ನು ಆರಾಧಿಸಲು ಯಾವಾಗಲೂ ಸಾಕಷ್ಟು ಸಮಯವಿದೆ. ದೇವರೊಂದಿಗೆ ಪ್ರಶಾಂತ ಸಮಯವನ್ನು ಕಳೆಯಬೇಕೆಂದು ನಿಗದಿಪಡಿಸಿದ ದಿನಗಳೇ, ದೇವರೊಂದಿಗೆ ನಾವು ಕಳೆಯುವ ಏಕಾಂತ ಸಮಯದ ಅಗತ್ಯತೆಯಿಂದ ನಮ್ಮನ್ನು ಪಲ್ಲಟಗೊಳಿಸುವ ಉರುಲುಗಳಾಗಿ ಬಿಡುತ್ತವೆ. ಪ್ರಪಂಚದ ಸದ್ದುಗದ್ದಲದ ಎಂಥಾ ನಮ್ಮ ಸಮಯಗಳಲ್ಲೂ, ದೇವರ ಧ್ಯಾನದಲ್ಲಿ ಮಗ್ನರಾಗಲು ಸಮಯವಿರುವಂತೆ ಎರಡರ ಮಧ್ಯದಲ್ಲಿ ನಮ್ಮ ಗುಡಾರವನ್ನೆತ್ತಿ ನಿಲ್ಲಿಸಬೇಕು. ಆತ್ಮೀಕ ಜೀವನದಲ್ಲಿ ಮೂರು ಹಂತಗಳಿಲ್ಲ - ಆರಾಧನೆ, ಕಾಯುವಿಕೆ ಮತ್ತು ಕ್ರಿಯೆ. ಇವುಗಳ ವಿಷಯದಲ್ಲಿ ನಮ್ಮಲ್ಲಿ ಕೆಲವರು, ಆಧ್ಯಾತ್ಮಿಕ ಕಪ್ಪೆಗಳಂತೆ ಕುಪ್ಪಳಿಸುತ್ತಾರೆ. ಆರಾಧನೆಯಿಂದ ಕಾಯುವಿಕೆಗೆ, ಕಾಯುವಿಕೆಯಿಂದ ಕರ್ಮಕ್ಕೆ ಕುಪ್ಪಳಿಸುತ್ತಾರೆ. ಆದರೆ ಇವು ಮೂರೂ ಒಟ್ಟಾಗಿಯೇ ಮುಂದುವರಿಯಬೇಕೆಂಬುದೇ ದೇವರ ಉದ್ದೇಶ. ನಮ್ಮ ಸ್ವಾಮಿಯ ಜೀವಿತದಲ್ಲಿ ಈ ಮೂರೂ ಸಮರಸದಿಂದ ಕೂಡಿ ಐಕ್ಯತೆಯಲ್ಲಿದ್ದವು. ಆತನು ಅವಸರ ರಹಿತನೂ ವಿರಾಮರಹಿತನೂ ಆಗಿದ್ದನು. ಅದು ಒಂದು ಶಿಸ್ತು. ಒಂದೇ ಬಾರಿಗೆ ನಾವು ಅವೆಲ್ಲವುಗಳನ್ನು ಸಾಧಿಸಲಾರೆವು.

# ಯೇಸುವಿನೊಂದಿಗೆ ಆತ್ಮೀಯತೆ

**''.... ನಾನು ಇಷ್ಟು ದಿವಸ ನಿಮ್ಮ ಸಂಗಡ ಇದ್ದರೂ, ನೀನು ಇನ್ನೂ ನನ್ನನ್ನು ಅರಿತುಕೊಳ್ಳಲಿಲ್ಲವೇ ?'' - (ಯೋಹಾನ - 14:8)**

ಗದರಿಸಬೇಕೆಂದಾಗಲೀ, ಆಶ್ಚರ್ಯದಿಂದಾಗಲೀ ಯೇಸುಸ್ವಾಮಿಯು ಈ ಮಾತುಗಳನ್ನಾಡಲಿಲ್ಲ; ಇನ್ನಷ್ಟೂ ತನ್ನ ಸನಿಹಕ್ಕೆ ಸಾಗಿ ಬರುವಂತೆ ಅತನು ಫಿಲಿಪ್ಪನನ್ನು ಉತ್ತೇಜಿಸುತ್ತಿದ್ದನು. ಅಂತಿಮವಾಗಿ ನಾವು ಆತ್ಮೀಯತೆಯಲ್ಲಿ ಸೇರಬೇಕಾಗಿರುವ ವ್ಯಕ್ತಿ ಯೇಸು ಸ್ವಾಮಿಯೇ. ಪಂಚಾಶತ್ತಮಕ್ಕೆ ಮೊದಲು ಶಿಷ್ಯರು ದೆವ್ವಗಳನ್ನು ಬಿಡಿಸುವ ಮತ್ತು ಉಜ್ಜೀವನವನ್ನುಂಟು ಮಾಡುವ ಶಕ್ತಿಯನ್ನು ತಮಗೆ ಕೊಟ್ಟವನು ಯೇಸುವೇ ಎಂದು ಅರಿತಿದ್ದರು - (ಲೂಕ-10:18-20 ನೋಡಿರಿ) ಅದೊಂದು ವಿಸ್ಮಯಭರಿತ ಆತ್ಮೀಯತೆಯಾಗಿತ್ತು, ಆದರೆ, ಅದಕ್ಕಿಂತಲೂ ನಿಕಟ ಸಂಬಂಧವೊಂದು ಮುಂದೆ ಅವರಿಗೊದಗುವುದಿತ್ತು ''ನಿಮ್ಮನ್ನು ಸ್ನೇಹಿತರೆಂದು ಹೇಳಿದ್ದೇನೆ'' (ಯೋಹಾನ-15:15) ಈ ಜಗತ್ತಿನಲ್ಲಿ ನಿಜವಾದ ಸ್ನೇಹ ತುಂಬಾ ವಿರಳವಾದದ್ದು. ಅದರ ಅರ್ಥವೆಂದರೆ ಒಬ್ಬನೊಂದಿಗೆ ಮಾತ್ರ ಧ್ಯಾನದಲ್ಲಿ, ಹೃದಯದಲ್ಲಿ ಮತ್ತು ಆತ್ಮದಲ್ಲಿ ಗುರುತಿಸಿಕೊಳ್ಳುವುದು, ಇಂಥಾ ನಿಕಟ ಬಾಂಧವ್ಯವನ್ನು ಯೇಸುವಿನಲ್ಲಿ ಹೊಂದುವುದಕ್ಕಾಗಿಯೇ ಜೀವಿತದ ಸೂತ್ರಗಳೂ ರೂಪಿಸಲ್ಪಟ್ಟಿವೆ. ಆತನ ಆಶೀರ್ವಾದಗಳನ್ನು ಹೊಂದುತ್ತೇವೆ ಮತ್ತು ಆತನ ವಾಕ್ಯಗಳನ್ನು ಅರಿತಿದ್ದೇವೆ, ಆದರೂ, ನಿಜವಾಗಿಯೂ ನಾವು ಆತನನ್ನು ಅರಿತಿದ್ದೇವೆಯೋ ?

ಯೇಸುಸ್ವಾಮಿಯು ಹೇಳಿದನು ''ನಾನು ಹೋಗುವುದು ನಿಮಗೆ ಹಿತಕರವಾಗಿದೆ'' (ಯೋಹಾನ - 16:17) ಅವರನ್ನು ಇನ್ನೂ ಹೆಚ್ಚಾದ ನಿಕಟ ಸಂಬಂಧದಲ್ಲಿ ಸೇರಿಸುವಂತೆ ಈಗಿನ ಸಂಬಂಧವನ್ನು ತ್ಯಜಿಸಿದನು. ಹೆಚ್ಚು ಹೆಚ್ಚಾದ ಆತ್ಮೀಯ ನಿಕಟ ಸಂಬಂಧದಲ್ಲಿ ಮುಂದೆ ಸಾಗಲು ಶಿಷ್ಯರು ಸಮಯ ವಿರಿಸಿಕೊಂಡಷ್ಟು ಯೇಸುಸ್ವಾಮಿಗೆ ಆನಂದವಾಗುತ್ತದೆ. ಯೇಸುಕ್ರಿಸ್ತನೊಡನಿರುವ ಆತ್ಮೀಯ ಸಂಬಂಧವು, ಅದು ಕೊಡುವ ಫಲದಿಂದ ಕಾಣಬರುವದೆಂದು ವೇದ ವಾಕ್ಯದಲ್ಲಿ ತಿಳಿಸಲ್ಪಟ್ಟಿದೆ.

ಒಮ್ಮೆ ನಾವು ಕ್ರಿಸ್ತೇಸುವಿನಲ್ಲಿ ನಿಕಟಬಾಂಧವ್ಯವನ್ನು ಹೊಂದಿದ್ದಾದರೆ, ನಾವೆಂದಿಗೂ ಒಬ್ಬಂಟಿಗರಾಗಿರುವುದೇ ಇಲ್ಲ , ಮತ್ತು ಸಹಾನುಭೂತಿಯ ಅಗತ್ಯವೂ ನಮಗಿರುವುದಿಲ್ಲ. ಅನುಕಂಪಭಾವರಹಿತರಾಗಿ ಸದಾಕಾಲ ನಮ್ಮ ಹೃದಯಗಳನ್ನು ಆತನಿಗೆ ಧಾರೆಯೆರೆಯಬಲ್ಲೆವು. ಒಬ್ಬ ಕ್ರಿಸ್ತಭಕ್ತನು ಯೇಸುವಿನೊಡನೆ ಆತ್ಮೀಯ ಸಂಬಂಧವನ್ನು ಹೊಂದಿರುವುದರಿಂದ ಅವನು ತನ್ನ ಸ್ವಂತ ಪ್ರಭಾವವನ್ನು ಬೀರಿರುವುದಿಲ್ಲ, ಬದಲಾಗಿ ತನ್ನ ಜೀವನವನ್ನು ತಡೆರಹಿತವಾಗಿ ನಿಯಂತ್ರಿಸುವಾತನು ಯೇಸುವೇ ಎನ್ನುವ ಸಂಕೇತಗಳನ್ನು ಪ್ರದರ್ಶಿಸುತ್ತಿರುತ್ತಾನೆ, ಯಾಕೆಂದರೆ ಅವನ ಜೀವಿತದ ಪ್ರತಿಯೊಂದು ಕ್ಷೇತ್ರದಲ್ಲಿರುವ ಅಗಾಧಗಳಲ್ಲಿ ಯೇಸುಕ್ರಿಸ್ತನು ತೃಪ್ತಿಗೊಂಡಿರುತ್ತಾನೆ. ಅಂಥಾ ಜೀವನದ ಪ್ರಕಟಿತ ಪ್ರಭಾವವೆಂದರೆ ತನ್ನೊಂದಿಗೆ ನಿಕಟ ಬಾಂಧವ್ಯವಿದ್ದವರಿಗೆ ಬಲವುಳ್ಳ ಶಾಂತ ಚಿತ್ತವನ್ನು ಯೇಸುಸ್ವಾಮಿಯು ದಯಪಾಲಿಸಿರುತ್ತಾನೆ.

# ನನ್ನ ಯಜ್ಞ ಜೀವಂತವೇ ?

**‘‘...... ಅಬ್ರಹಾಮನು ಯಜ್ಞವೇದಿಯನ್ನು ಕಟ್ಟಿ, ಕಟ್ಟಿಗೆಯನ್ನು ಒಟ್ಟಿ ತನ್ನ ಮಗನಾದ ಇಸಾಕನ ಕೈ ಕಾಲುಗಳನ್ನು ಬಿಗಿದು .....’’ - (ಆದಿಕಾಂಡ - 22:9)**

ಈ ಘಟನೆಯು, ನಮ್ಮ ಸ್ವಂತ ಮರಣ ಯಜ್ಞವನ್ನೇ ದೇವರು ಅಂತಿಮವಾಗಿ ನಮ್ಮಿಂದ ಬಯಸುವನೆಂದು ತಪ್ಪಾಗಿ ಯೋಚಿಸುವ ಪ್ರಮಾದದ ಚಿತ್ರವಾಗಿದೆ. ಯೇಸುಕ್ರಿಸ್ತನು ಮಾಡಿದ್ದನ್ನು ನಾವು ಮಾಡಲು ಸಾಧ್ಯವಾಗುವಂತೆ ನಮ್ಮನ್ನು ಬಲಪಡಿಸಿ, ಲೌಕಿಕ ಬದುಕಿನ ಮರಣದ ಮುಖಾಂತರ ಮಾಡಬಲ್ಲ ಯಜ್ಞವನ್ನು ದೇವರು ನಮ್ಮಿಂದ ಬಯಸುತ್ತಾನೆ. ‘‘ನಿನ್ನ ಸಂಗಡ ಸಾಯುವುದಕ್ಕೂ ಸಿದ್ಧನಿದ್ದೇನೆ’’ ಎಂಬುದಲ್ಲ, ಅದರ ಬದಲು ‘‘ದೇವರಿಗೆ ನನ್ನ ಜೀವಿತವನ್ನು ಯಜ್ಞಮಾಡುವ ಹಾಗೆ ಯೇಸುವಿನೊಂದಿಗೆ ಆತನ ಮರಣದಲ್ಲಿ ನನ್ನನ್ನು ಗುರುತಿಸಿಕೊಳ್ಳಲು ನಾನು ಸಿದ್ಧನಿದ್ದೇನೆ’’ ಎಂಬುದೇ ಜೀವನಯಜ್ಞ. ನಾವು ಎಲ್ಲವನ್ನು ತ್ಯಜಿಸಬೇಕೆನ್ನುವುದೇ ದೇವರ ಬಯಕೆ ಇರಬಹುದೆಂದು ನಾವು ಯೋಚಿಸುತ್ತೇವೆ; ಆದರೆ ಅಂಥಾ ಚಿಂತನೆ ಮಾಡುವ ಪ್ರಮಾದದಿಂದ ದೇವರು ಅಬ್ರಹಾಮನನ್ನು ಶುದ್ಧೀಕರಿಸಿದನು; ಅದೇ ಕಾರ್ಯ ವಿಧಾನವು ನಮ್ಮ ಜೀವಿತದಲ್ಲಿಯೂ ನಡೆಯುತ್ತದೆ. ತ್ಯಜಿಸಬೇಕೆನ್ನುವ ಕಾರಣಕ್ಕಾಗಿ ಎಲ್ಲವನ್ನೂ ತ್ಯಜಿಸ ಬೇಕೆಂದು ದೇವರೆಲ್ಲಿಯೂ ಹೇಳಿಲ್ಲ. ಹೊಂದಲರ್ಹವಾದದ್ದನ್ನು ಮಾತ್ರವೇ ಹೊಂದಲು, ಅಂದರೆ ತನ್ನೊಂದಿಗಿರುವ ಜೀವಿತವನ್ನು ಹೊಂದಬೇಕೆಂಬ ಕಾರಣಕ್ಕಾಗಿ ಬೇರೆ ಎಲ್ಲವನ್ನೂ ತ್ಯಜಿಸೆಂದು ದೇವರು ಹೇಳುತ್ತಿದ್ದಾನೆ. ಜೀವಿತವನ್ನು ತಡೆಹಿಡಿದಿರುವ ಬಂಧನಗಳನ್ನು ಸಡಿಲ ಪಡಿಸುವುದೇ ನಮ್ಮ ಮುಂದಿರುವ ಪ್ರಶ್ನೆ. ಕ್ರಿಸ್ತನ ಮರಣದೊಂದಿಗೆ ನಮ್ಮನ್ನು ಗುರುತಿಸಿಕೊಂಡ ಕ್ಷಣವೇ ನಮ್ಮೀ ಬಂಧನಗಳು ಸಡಿಲಗೊಳ್ಳುವವು ಮತ್ತು ನಾವು ದೇವರ ಬಾಂಧವ್ಯದಲ್ಲಿ ಸೇರಿ, ಅಲ್ಲಿ ನಾವು ಆತನಿಗಾಗಿ ನಮ್ಮ ಜೀವಿತಗಳನ್ನೇ ಯಜ್ಞಾರ್ಪಣೆ ಮಾಡಬಲ್ಲೆವು.

ನಿನ್ನ ಜೀವಿತವನ್ನು ಆತನಿಗಾಗಿ ಮರಣಕ್ಕೊಪ್ಪಿಸುವುದು ದೇವರಿಗೆ ಬೆಲೆಯುಳ್ಳದ್ದೇನಲ್ಲ. ನೀನು ಸಜೀವ ಯಜ್ಞವಾಗುವುದೇ ದೇವರಿಗೆ ಬೇಕಾಗಿದೆ. ಯೇಸುಕ್ರಿಸ್ತನ ಮೂಲಕ ರಕ್ಷಿಸಿ ಶುದ್ಧೀಕರಿಸಲ್ಪಡುವ ನಿನ್ನೆಲ್ಲಾ ಶಕ್ತಿ ಸಾಮರ್ಥ್ಯಗಳು ಆತನವೇ ಆಗಿಬಿಡುತ್ತವೆ. ದೇವರು ಅಂಗೀಕರಿಸುವುದು ಇದನ್ನೇ.

# ಪ್ರಾರ್ಥನಾಪೂರ್ವಕ ಆತ್ಮಾವಲೋಕನ

**''...... ನಿಮ್ಮ ಆತ್ಮ, ಪ್ರಾಣ, ಶರೀರಗಳು ದೋಷವಿಲ್ಲದೆ ಸಂಪೂರ್ಣವಾಗಿ ಕಾಣಿಸುವಂತೆ ಕಾಪಾಡಲ್ಪಡಲಿ'' – (1 ಥೆಸಲೋನಿಕ – 5:23)**

''ನಿಮ್ಮ ಆತ್ಮವು ಸಂಪೂರ್ಣವಾಗಿ ......'' ನಾವು ತಲುಪಲಾರದಂಥ ನಮ್ಮ ವ್ಯಕ್ತಿತ್ವದ ಅಂತರಾಳದ ಕತ್ತಲು ಪ್ರದೇಶಗಳಲ್ಲಿ ಪವಿತ್ರಾತ್ಮನು ಗೂಢಾರ್ಥಗಳ ಕಾರ್ಯವನ್ನೆಸಗುತ್ತಾನೆ. 139ನೇ ದಾವೀದನ ಕೀರ್ತನೆಯನ್ನು ಪರಿಸಿರಿ; ಕೀರ್ತನಾಗಾರನು ಹೀಗೆ ಒತ್ತು ಕೊಡುತ್ತಾನೆ – 'ದೇವರೇ, ನೀನು ಪ್ರಾತಃ ಕಾಲಕ್ಕೆ ದೇವರಾಗಿದ್ದೀ, ದೀರ್ಘ ರಾತ್ರಿಗಳ ದೇವರೂ ನೀನೇ, ಅತ್ಯುನ್ನತ ಪರ್ವತಗಳ ದೇವರೂ ನೀನೇ, ಸಾಗರಗಳ ದೇವರೂ ನೀನೇ; ಆದರೆ ನನ್ನ ದೇವರೇ, ನನ್ನ ಅಂತರಂಗವು ಪ್ರಾತಃ ಕಾಲದ ದಿಗಂತದಾಚೆಗೆ ವಿಸ್ತರಿಸುತ್ತದೆ. ಭೂರಾತ್ರಿಗಳ ಕತ್ತಲುಗಳಿಗಿಂತಲೂ ಆಳವಾದ ಕತ್ತಲಿನಲ್ಲಿ ಸಾಗುತ್ತದೆ. ಅತ್ಯುನ್ನತವಾದ ಪರ್ವತದ ತುದಿಗೂ ಮೀರಿ ಮೇಲೆ ಹೋಗುತ್ತದೆ. ಸೃಷ್ಠಿಯ ಯಾವುದೇ ಸಮುದ್ರದ ತಳದಾಳದ ಕೆಳಗೂ ಇಳಿಯುತ್ತದೆ – ಓ ದೇವರೇ, ಇವೆಲ್ಲವುಗಳಿಗೂ ನೀನೇ ದೇವರಾಗಿರುವಿ. ನನ್ನ ದೇವರು ನೀನಾಗಿರು. ಅತ್ಯುನ್ನತೆಯನ್ನು ಮೀರಿದ ಎತ್ತರವನ್ನು ನಾನು ತಲುಪಲಾರೆ ಇಲ್ಲವೇ ಆಳದ ಅಗಾದದ ಅಂತರಕ್ಕೆ ನಾನಿಳಿಯಲಾರೆ, ನಾನು ಗುರುತಿಸಲಾರದ ಉದ್ದೇಶಗಳು ನನ್ನಲ್ಲಿವೆ. ನಾನು ಗ್ರಹಿಸಲಾರದ ಕನಸುಗಳಿವೆ. – ''ನನ್ನ ದೇವರೇ ನನ್ನನ್ನು ಪರೀಕ್ಷಿಸು''.

ನಾವು ಎಲ್ಲಿಯವರೆಗೆ ಹೋಗಬಲ್ಲೆವು ಎಂಬುದನ್ನು ಮೀರಿ ಸಾಗುವ ನಮ್ಮ ಆಲೋಚನಾ ಗತಿಯನ್ನು ದೇವರು ರಕ್ಷಿಸಬಲ್ಲನು ನಾವು ನಂಬುತ್ತೇವೆಯೋ ? ''ಯೇಸುವಿನ ರಕ್ತವು ಸಕಲ ಪಾಪವನ್ನು ನಿವಾರಣೆ ಮಾಡಿ ನಮ್ಮನ್ನು ಶುದ್ಧಿ ಮಾಡುತ್ತದೆ'' (1 ಯೋಹಾನ 1:17) ಒಂದು ವೇಳೆ, ಈ ವಾಕ್ಯದ ಅರ್ಥವು ನಮ್ಮ ಪ್ರಜ್ಞಾನುಭವದ ಶುದ್ಧೀಕರಣ ಮಾತ್ರವೇ ಆಗಿದ್ದರೆ, ದೇವರೇ ನಮ್ಮ ಮೇಲೆ ಕರುಣೆಯಿಡಬೇಕು. ಒಬ್ಬ ವ್ಯಕ್ತಿಯು ಪಾಪದ ದೆಸೆಯಿಂದ ಮಂದಬುದ್ಧಿಯುಳ್ಳವನಾಗಿಬಿಟ್ಟರೆ, ಅವನು ತನಗೆ ಪಾಪದ ಪ್ರಜ್ಞೆಯೇ ಇಲ್ಲವೆಂದು ಹೇಳುತ್ತಾನೆ. ದೇವರು ಬೆಳಕಿನಲ್ಲಿರುವಂತೆಯೇ, ನಾವೂ ಬೆಳಕಿನಲ್ಲಿರುವವರಾದರೆ, ನಮ್ಮ ಆತ್ಮದ ಅತ್ಯುನ್ನತೆ ಮತ್ತು ಆತ್ಮದ ಆಗಾಧ ಆಳದವರೆಗೂ ಪಾಪನಿವಾರಣೆಯಾಗಿ ಶುದ್ಧೀಕರಣವಾಗುತ್ತದೆ. ಕ್ರಿಸ್ತೇಸುವನ್ನು ಕಾಯ್ದು ಕಾಪಾಡಿದ ಆತ್ಮವೇ ನಮ್ಮ ಆತ್ಮಗಳನ್ನು ಕಾಯ್ದು ಪರಿಪಾಲಿಸುತ್ತದೆ. ಪರಿಶುದ್ಧಾತ್ಮನ ಬೆರಗುಗೊಳಿಸುವ ಪವಿತ್ರತೆಯಲ್ಲಿ ದೇವರು ನಮ್ಮನ್ನು ಕಾಯುತ್ತಿರುವಾಗ, ನಮ್ಮ ಆತ್ಮ, ಅಂತರಂಗ ಮತ್ತು ಶರೀರಗಳು ನಿಷ್ಕಳಂಕ ಸಮಗ್ರತೆಯಲ್ಲಿ ಯೇಸುಕ್ರಿಸ್ತನು ಬರುವವರೆಗೂ, ದೇವರ ದೃಷ್ಟಿಯಲ್ಲಿ ಖಂಡನಾರ್ಹ ವಾಗದಂತೆ ಕಾಪಾಡಲ್ಪಡುತ್ತವೆ.

ಇಂಥಾ ಗಹನವಾದ ದೇವರ ಸತ್ಯತೆಗಳನ್ನು ಕುರಿತು ಯೋಚಿಸುವುದು ಉಚಿತವಾದರೂ, ಆಲೋಚಿಸಲು ನಮ್ಮ ಮನಸ್ಸುಗಳನ್ನು ನಾವು ಬಿಡುವುದಿಲ್ಲ.

# ತೆರೆದ ದೃಷ್ಠಿ

**''...... ಹೊಂದುವಂತೆ ಅವರ ಕಣ್ಣುಗಳನ್ನು ತೆರೆಯಬೇಕೆಂದು'' - (ಅ.ಕೃ. 26;18)**

ಈ ವಾಕ್ಯವು ಇಡೀ ಹೊಸ ಒಡಂಬಡಿಯಲ್ಲಿ ಯೇಸುಕ್ರಿಸ್ತನ ಒಬ್ಬ ಶಿಷ್ಯನು ಮಾಡಿದ ಧರ್ಮ ಪ್ರಚಾರದ ಮಹತ್ವದ ಸಾರಾಂಶವಾಗಿದೆ.

ದೇವರ ಮಾಡಿದ ಮೊದಲನೆಯ ಪರಮ ಕೃಪಾಕಾರ್ಯವು ಸಂಕ್ಷೇಪವಾಗಿ ಈ ವಾಕ್ಯದಲ್ಲಡಗಿದೆ. ''ಅವರು ಪಾಪಪರಿಹಾರವನ್ನು ಹೊಂದುವಂತೆ''; ಒಬ್ಬ ಮನುಷ್ಯನು ವ್ಯಕ್ತಿಗತ ಕ್ರಿಸ್ತೀಯ ಅನುಭವಗಳಲ್ಲಿ ನಿರಾಶನಾಗಿದ್ದರೆ, ಅದರ ಕಾರಣ ಬಹುಮಟ್ಟಿಗೆ ಆತನು ಯೇಸುಕ್ರಿಸ್ತನಿಂದ ಏನನ್ನು ಪಡೆದಿರಲಾರನು. ಒಬ್ಬ ಮನುಷ್ಯನು ರಕ್ಷಿಸಲ್ಪಟ್ಟಿರುವುದಕ್ಕಿರುವ ಒಂದೇ ಒಂದು ಸಾಕ್ಷಿ ಎಂದರೆ ಅವನು ಯೇಸುವಿನಿಂದ ಏನನ್ನೋ ಪಡೆದಿರುತ್ತಾನೆ. ಜನರು ಕತ್ತಲೆಯಿಂದ ಬೆಳಕಿಗೆ ಹೊರಳುವಂತೆ ಅವರ ಕಣ್ಣುಗಳನ್ನು ತೆರೆಯ ಮಾಡುವುದೇ ದೇವರ ಸೇವಕರಾದ ನಮ್ಮ ಕೆಲಸ, ಅದು ರಕ್ಷಣಾ ಕಾರ್ಯವಲ್ಲ ; ಅದೊಂದು ಪರಿವರ್ತನೆ - ಜಾಗೃತ ಗೊಂಡ ವ್ಯಕ್ತಿಯೊಬ್ಬನ ಪ್ರಯಾಸ ಮಾತ್ರ. ಹೆಸರಿಗೆ ಮಾತ್ರ ಕ್ರೈಸ್ತರೆನಿಸಿಕೊಳ್ಳುವವರಲ್ಲಿ ಬಹುಪಾಲು ಇಂಥವರದ್ದೇ, ಅಂದರೆ ಅವರು ಕೇವಲ ಪರಿವರ್ತನೆಗೊಳಗಾದವರು ಮಾತ್ರ ಎಂದು ನಾನು ಹೇಳಿದರೆ, ಅದೊಂದು ಸಾರಾಸಗಟಾದ ಹೇಳಿಕೆ ಎಂದು ನನಗನ್ನಿಸುವುದಿಲ್ಲ. ಅವರ ಕಣ್ಣುಗಳು ತೆರೆಯಲ್ಪಟ್ಟಿವೆ, ಆದರೆ ಅವರೇನನ್ನೂ ಪಡೆದುಕೊಂಡಿಲ್ಲ. ಪರಿವರ್ತನೆಯು ಪುನರ್ಜನ್ಮವಲ್ಲ. ಈ ವಿಷಯವನ್ನು ಸದ್ಯದ ನಮ್ಮ ಬೋಧನೆಗಳಲ್ಲಿ ನಿರ್ಲಕ್ಷಿಸಿದ ಅಂಶವಿದು. ಒಬ್ಬ ಮನುಷ್ಯನು ಹೊಸದಾಗಿ ಹುಟ್ಟಿದಾಗ, ಸರ್ವಶಕ್ತನಾದ ದೇವರಿಂದ ಬಹುಮಾನವಾಗಿ ಏನನ್ನೋ ಹೊಂದಿದ್ದೇನೆಂದೂ ಮತ್ತು ಅದು ತನ್ನ ಸ್ವಂತ ನಿರ್ಧಾರಗಳಿಂದ ಅಲ್ಲವೆಂದೂ ಅವನು ಅರಿತಿರುವನು. ಜನರು ತಮ್ಮ ಹರಕೆಗಳನ್ನು ಹೊರುತ್ತಾರೆ, ತಮ್ಮ ಪ್ರತಿಜ್ಞೆಗಳನ್ನು ಪ್ರತಿಪಾದಿಸುತ್ತಾರೆ, ಮುಂದೆ ಸಾಗಲೂ ದೃಢ ನಿರ್ಧಾರ ಕೈಕೊಳ್ಳುತ್ತಾರೆ. ಆದರೆ, ಇವುಗಳಾವೂ ರಕ್ಷಣೆಯಲ್ಲ. ರಕ್ಷಣೆಯ ಅರ್ಥವೆಂದರೆ ಯೇಸುಕ್ರಿಸ್ತನಿಂದ ಹಕ್ಕು ಪಡೆದವರಾಗಿ, ದೇವರಿಂದ ಏನನ್ನಾದರೂ ಪಡೆಯುವ ಮಟ್ಟಕ್ಕೆ ಅಂದರೆ ಪಾಪ ಕ್ಷಮೆಯನ್ನು ಹೊಂದುವುದಕ್ಕಾಗಿ ನಾವು ಬರ ಮಾಡಲ್ಪಟ್ಟಿದ್ದೇವೆ.

ಆಗ ಕೃಪೆಯ ಎರಡನೇ ಮಹಾಕಾರ್ಯವು ಅದನ್ನು ಅನುಸರಿಸಿ ಬರುವುದು. ''ಪವಿತ್ರ ರಾದವರಲ್ಲಿ ಹಕ್ಕನ್ನು ಹೊಂದುವಂತೆ'' ಶುದ್ಧೀಕರಣದಲ್ಲಿ ಹೊಸದಾಗಿ ಹುಟ್ಟಿದ ಆತ್ಮವು, ಉದ್ದೇಶ ಪೂರ್ವಕವಾಗಿ ತನ್ನೆಲ್ಲಾ ಹಕ್ಕುಗಳನ್ನು ಯೇಸುಕ್ರಿಸ್ತನಿಗೆ ಬಿಟ್ಟುಕೊಟ್ಟು, ಇತರರಲ್ಲಿ ದೇವರಿಗಿರುವ ಆಸಕ್ತಿಗಳಲ್ಲಿ ತನ್ನನ್ನು ಗುರುತಿಸಿಕೊಳ್ಳುತ್ತದೆ.

# ದೇವರಿಗೆ ನಾನು ತೋರುವ ವಿಧೇಯತೆಯು ಇತರರನ್ನು ಬೆಲೆ ತೆರುವಂತೆ ಮಾಡುತ್ತದೆ

**''.... ಸಿಮೋನನೆಂಬವನನ್ನು ಹಿಡಿದು ಶಿಲುಬೆಯನ್ನು ಅವನ ಮೇಲೆ ಇಟ್ಟು'' - (ಲೂಕ 23:26)**

ನಾವು ದೇವರಿಗೆ ವಿಧೇಯರಾಗುವುದರಿಂದ ನಮಗಿಂತಲೂ ಹೆಚ್ಚಾಗಿ ಇತರರು ಬೆಲೆ ತೆರಬೇಕಾಗುತ್ತದೆ, ಅಲ್ಲಿಯೇ ಇದೆ - ಚುಚ್ಚುವಿಕೆ. ನಾವು ನಮ್ಮ ಸ್ವಾಮಿಯನ್ನು ಪ್ರೀತಿಸುತ್ತಿದ್ದರೆ, ವಿಧೇಯತೆ ಗಾಗಿ ನಾವು ಬೆಲೆ ತೆರಬೇಕಿಲ್ಲ, ಅದು ಆನಂದ ಮಯವೂ ಹೌದು, ಆದರೆ ಯಾರು ಆತನನ್ನು ಸಾಕಷ್ಟು ಪ್ರೀತಿಸುವುದಿಲ್ಲವೋ ಅವರು ಮಾತ್ರ ನಮ್ಮ ವಿಧೇಯತೆಯ ನಿಮಿತ್ತ ಅಪಾರ ಬೆಲೆ ತೆರಬೇಕಾಗುತ್ತದೆ. ದೇವರಿಗೆ ನಾವು ವಿಧೇಯರಾಗುವುದರಿಂದ, ಇತರರ ಯೋಜನೆಗಳು ಅಸ್ತವ್ಯಸ್ತಗೊಳ್ಳುತ್ತವೆ, ಆಗ ಅವರು ನಮ್ಮನ್ನು ಕೆಣಕುತ್ತಾರೆ, ''ಇದನ್ನು ಕ್ರೈಸ್ತತ್ವವೆನ್ನುವಿರೋ ?'' ನಾವು ಅವರ ವೇದನೆಗಳನ್ನು ತಡೆಹಿಡಿಯ ಬಹುದಾದರೂ, ದೇವರಿಗೆ ನಾವು ವಿಧೇಯರಾಗಿದ್ದರೆ, ಅವುಗಳನ್ನು ತಡೆಯಬಾರದು. ಬೆಲೆ ತೆರಲು ಅವರಿಗೆ ಬಿಡಬೇಕು.

ನಮ್ಮ ವಿಧೇಯತೆಯು ಇತರರನ್ನು ಬೆಲೆ ತೆರುವಂತೆ ಮಾಡುತ್ತಿರುವಾಗ, ನಮ್ಮ ಮಾನವ ಸಹಜ ಅಹಂಕಾರವು, ತನ್ನಷ್ಟಕ್ಕೆ ತಾನೇ ಬೇರೂರಿಕೊಂಡು ''ಯಾರಿಂದಲೂ ಏನನ್ನೂ ನಾನೆಂದಿಗೂ ಪಡೆದುಕೊಳ್ಳುವುದೇ ಇಲ್ಲ''ವೆಂದು ನಾವು ಹೇಳುತ್ತೇವೆ. ಆದರೆ ನಾವು ಪಡೆದುಕೊಳ್ಳಲೇಬೇಕು, ಇಲ್ಲವೇ ದೇವರಿಗೆ ಅವಿಧೇಯರಾಗಬೇಕು. ಇತರರೊಂದಿಗೆ ನಾವು ಹೊಂದಿರುವ ಸಂಬಂಧವು, ಇತರರೊಂದಿಗೆ ಯೇಸುಕ್ರಿಸ್ತನು ಹೊಂದಿದ್ದ ಸಂಬಂಧಕ್ಕಿಂತ ಬೇರೆಯಾಗಿರಬೇಕೆಂದು ಯೋಚಿಸುವ ಹಕ್ಕು ನಮಗೆ ಇಲ್ಲ. (ಲೂಕ-2:3 ನೋಡಿರಿ).

ಎಲ್ಲವನ್ನೂ ನಾವೇ ಭರಿಸುತ್ತೇವೆಂದು ಹೇಳಿದಾಗಲೇ ಆತ್ಮೀಕ ಜೀವಿತದಲ್ಲಿ ಸ್ಥಗಿತತೆಯುಂಟಾಗುತ್ತದೆ, ಅದು ನಮ್ಮಿಂದಾಗುವುದಿಲ್ಲ, ಯಾಕೆಂದರೆ ದೇವರ ಸರ್ವಾನ್ವಯ ಉದ್ದೇಶಗಳಲ್ಲಿ ನಾವೆಷ್ಟರ ಮಟ್ಟಿಗೆ ತೊಡಗಿಸಿಕೊಂಡಿರುವೆವೆಂದರೆ, ನಾವು ಆತನಿಗೆ ವಿಧೇಯರಾದ ಕೂಡಲೇ ಬೇರೆಯವರು ಅದರ ಪರಿಣಾಮ ಕ್ಕೊಳಗಾಗುತ್ತಾರೆ. ದೇವರಲ್ಲಿರುವ ನಮ್ಮ ವಿಧೇಯತ್ವಕ್ಕೆ ನಾವು ನಿಷ್ಠರಾಗಿರಬಲ್ಲೆವೋ ಮತ್ತು ನಮ್ಮ ಮುಕ್ತ ಜೀವಿತವನ್ನು ತಿರಸ್ಕರಿಸಿ ದೀನತೆಯಲ್ಲಿ ಮುಂದೆ ಸಾಗಬಲ್ಲೆವೋ ? ಅಥವಾ ಬೇರೊಂದು ದಾರಿ ಹಿಡಿದು ''ಇತರರು ಸಂಕಟಕ್ಕೊಳಗಾಗುವಂಥಾದ್ದನ್ನು ನಾನು ಮಾಡಲಾರೆ'' ಎಂದು ಹೇಳುವೆವೋ ? ಅದನ್ನು ನಾವು ಆಯ್ಕೆಮಾಡಿದರೆ, ನಾವು ದೇವರಿಗೆ ಅವಿಧೇಯರಾಗಬಹುದು ಮತ್ತು ಆ ಸನ್ನಿವೇಶ ದಲ್ಲಿ ಅದು, ಸದ್ಯದ ಪರಿಹಾರವನ್ನು ನೀಡಬಲ್ಲದು ನಿಜ, ಆದರೆ ಅದು ನಮ್ಮ ಕರ್ತನಿಗೆ ವ್ಯಥೆಯನ್ನುಂಟು ಮಾಡುತ್ತದೆ. ನಾವು ದೇವರಿಗೆ ವಿಧೇಯರಾದರೆ, ನಮ್ಮ ವಿಧೇಯತೆಯ ಪರಿಣಾಮದಿಂದ ವಿಪರೀತ ಸ್ಥಿತಿಗತಿಗೊಳಗಾದವರನ್ನು ಆತನೇ ಸಂರಕ್ಷಿಸುತ್ತಾನೆ. ನಾವು ಮಾತ್ರ ಕೇವಲ ವಿಧೇಯರಾಗಬೇಕು ಮತ್ತು ಪರಿಣಾಮಗಳೆಲ್ಲವನ್ನೂ ಆತನಿಗೆ ಬಿಡಬೇಕು.

ನೀನು ಆತನಿಗೆ ವಿಧೇಯನಾಗುವುದರಿಂದುಂಟಾಗುವ ಪರಿಣಾಮಗಳನ್ನು ಕುರಿತು, ದೇವರಿಗೇ ತಿಳಿಸಿ ಹೇಳುವ ನಿನ್ನ ಮನೋಧರ್ಮದ ಬಗ್ಗೆ, ನೀನು ಎಚ್ಚರ ದಿಂದಿರಬೇಕು.

# ನೀನು ಎಂದಾದರೂ ದೇವರೊಂದಿಗೆ ಏಕಾಂಗಿಯಾಗಿದ್ದೆಯೋ?

**''ಆದರೆ ಪ್ರತ್ಯೇಕವಾಗಿ ಆತನು ತನ್ನ ಆಪ್ತ ಶಿಷ್ಯರಿಗೆ ಎಲ್ಲವನ್ನು ಬಿಚ್ಚಿಹೇಳಿದನು'' - (ಮಾರ್ಕ-4:34)**

ಆತನೊಡನೆ ನಮ್ಮ ಏಕಾಂತತೆ : ಎಲ್ಲಾ ಸಮಯಗಳಲ್ಲಿಯೂ ಯೇಸು ಕ್ರಿಸ್ತನು ನಮ್ಮನ್ನು ಪ್ರತ್ಯೇಕವಾಗಿ ಬರಮಾಡಿಕೊಂಡು ಅಲ್ಲಿ ವಿಷಯಗಳನ್ನು ಅರ್ಥೈಸಿ ವಿವರಿಸುವನೆಂದಲ್ಲ ; ನಾವು ಗ್ರಹಿಸಲು ಯೋಗ್ಯರಾಗುತ್ತಿದ್ದ ಹಾಗೆ, ಆತನು ಸೂಕ್ತವಿಷಯಗಳನ್ನು ವಿವರಿಸುತ್ತಿರುತ್ತಾನೆ. ಇಂದು ಇತರರ ಜೀವಿತಗಳು ನಮಗೆ ದೃಷ್ಟಾಂತ ಮಾತ್ರವಾಗಿರುತ್ತವೆ, ನಮ್ಮ ಸ್ವಂತ ಆತ್ಮಗಳನ್ನು ನಾವೇ ವಿವರವಾಗಿ ವಿವೇಚಿಸಿಕೊಳ್ಳ ಬೇಕೆಂದು ದೇವರು ಬಯಸುತ್ತಾನೆ. ಇದೊಂದು ಮಂದಗತಿಯ ಕಾರ್ಯ, ಮಂದಗತಿ ಎಷ್ಟೆಂದರೆ ಒಬ್ಬ ಪುರುಷ ಇಲ್ಲವೇ ಒಬ್ಬ ಸ್ತ್ರೀಯನ್ನು ತನ್ನ ಸ್ವಂತ ಉದ್ದೇಶಕ್ಕನುಗುಣವಾಗಿ ರೂಪಿಸಲು ದೇವರಿಗೆ ಕಾಲಾನು ಕಾಲವೇ ಬೇಕಾಗುತ್ತದೆ. ನಾವು ಆತನಿಗೆ ಉಪಯೋಗವಾಗಲಿರುವ ಮಾರ್ಗವೆಂದರೆ, ನಮ್ಮ ಸ್ವಭಾವದ ವಕ್ರತೆ ಮತ್ತು ಬಿರುಕುಗಳಲ್ಲಿ ದೇವರು ನಮ್ಮನ್ನು ಸಾಗಿಸಬೇಕು; ನಮ್ಮ ಬಗ್ಗೆ ನಾವೆಷ್ಟು ತಿಳಿಗೇಡಿಗಳಾಗಿದ್ದೇ ವೆಂಬುದೆಂಥಾ ದಿಗ್ಭ್ರಮೆ ! ನಮ್ಮಲ್ಲಿ ಬೇರೂರಿರುವ ಅಹಂಕಾರ, ಅಸೂಯೆ ಮತ್ತು ಆಲಸ್ಯಗಳನ್ನು ನೋಡಿದಾಗ್ಯೂ ನಾವರಿಯಲಿಲ್ಲ. ಯೇಸುಸ್ವಾಮಿಯ ಕೃಪೆಯು ಕಾರ್ಯಾರಂಬಿಸುವ ಮೊದಲು, ನಮ್ಮ ಶರೀರವು ಎಂಥೆಂಥವುಗಳಿಗೆ ಆಶ್ರಯ ನೀಡಿತ್ತೆಂಬದನ್ನು ಆತನು ನಮಗೆ ಪ್ರಕಟಪಡಿಸುತ್ತಾನೆ. ನಮ್ಮಲ್ಲಿ ಎಷ್ಟು ಜನರು ಧೈರ್ಯದಿಂದ ತಮ್ಮ ಅಂತರಂಗವನ್ನು ದೃಷ್ಟಿಸಲು ಮುಂದಾಗುತ್ತಾರೆ ?

ನಮ್ಮನ್ನು ನಾವು ಅರ್ಥಮಾಡಿಕೊಂಡಿದ್ದೇವೆಂಬ ಹೆಮ್ಮೆಯ ಭಾವದ ಕೊನೆತೃಣವನ್ನು ನಮ್ಮಿಂದ ಮೊದಲು ತೊಲಗಿಸಬೇಕು. ಒಬ್ಬನೇ ಒಬ್ಬನು ನಮ್ಮನ್ನು ಅರ್ಥಮಾಡಿಕೊಳ್ಳುತ್ತಾನೆ - ಆತನು ದೇವರು. ಹೆಮ್ಮೆಯೇ ನಮ್ಮ ಆತ್ಮೀಕ ಜೀವನದ ಅತಿ ದೊಡ್ಡ ಶಾಪ. ದೇವರ ದೃಷ್ಟಿಯಲ್ಲಿ ನಾವೇನಾಗಿದ್ದೇವೆಂಬುದರ ಕ್ಷಣದರ್ಶನ ನಮಗಿದ್ದರೆ, ''ನಾವೆಂಥಾ ಆಯೋಗ್ಯರು'' ಎಂದು ನಾವು ಹೇಳುವುದೇ ಇಲ್ಲ. ಯಾಕೆಂದರೆ ಅಂಥಾ ಹೇಳಿಕೆಗೂ ಮೀರಿದ ಅಧಮರು ನಾವಾಗಿದ್ದೇವೆಂಬುದನ್ನು ನಾವು ಅರಿತಿರುತ್ತೇವೆ. ನಾವು ಅಯೋಗ್ಯರು ಎಂದು ಎಲ್ಲಿಯವರೆಗೆ ನಾವು ಖಚಿತವಾಗಿ ತಿಳಿಯುವುದಿಲ್ಲವೋ ಅಲ್ಲಿಯವರೆಗೆ, ನಾವು ಒಂಟಿಯಾಗಿ ಆತನಿಗೆ ಸಿಕ್ಕುವ ತನಕ ದೇವರು ನಮ್ಮನ್ನು ಇಕ್ಕಟ್ಟುಗಳಲ್ಲಿರಿಸುತ್ತಾನೆ. ತೃಣ ಮಾತ್ರದಷ್ಟುಗರ್ವ ವಾಗಲೀ, ಕುಯುಕ್ತಿಯಾಗಲೀ, ಎಲ್ಲಿಯಾದರೂ ಉಳಿದಿದ್ದರೆ, ಯೇಸುಕ್ರಿಸ್ತನು ಯಾವ ವಿಷಯವನ್ನೂ ವಿವರಿಸಿ ತಿಳಿಸುವುದಿಲ್ಲ. ಆದರೆ ಜ್ಞಾನದ ಗರ್ವ ಭಂಗವಾದ ಗಾಯಗಳ ಮೂಲಕ, ಮನಗುಂದಿದ ಹೃದಯದ ಮೂಲಕ ನಾವು ಸಾಗಿಹೋಗುವಂತೆ ಆತನು ಮಾಡುತ್ತಾನೆ. ನಮ್ಮಲ್ಲಿರುವ ಅತಿರೇಕದ ವಾತ್ಸಲ್ಯಗಳನ್ನು, ಯಾವ ವಿಷಯಗಳ ಬಗ್ಗೆ ನಮ್ಮನ್ನು ಒಬ್ಬಂಟಿಗರಾಗಿದ್ದಾಗ ಹಿಡಿಯುವನೆಂದು ನಾವು ಯೋಚಿಸಿರಲಿಲ್ಲವೋ ಅವುಗಳನ್ನು, ನಮಗೆ ಪ್ರಕಟಪಡಿಸುವನು. ನಮ್ಮ ತರಗತಿಗಳಲ್ಲಿ ಅನೇಕ ವಿಷಯಗಳನ್ನು ಕೇಳಿಸಿಕೊಳ್ಳುತ್ತೇವೆ. ಆದರೆ ಅವು ನಮಗೆ ಈವರೆಗೂ ಬಯಲಾದ ವುಗಳಲ್ಲ ; ದೇವರೊಡನೆ ಏಕಾಂಗಿಯಾಗಿದ್ದಾಗ ಮಾತ್ರ ಅವು ಬಯಲಾಗುತ್ತವೆ.

# ನೀನು ಎಂದಾದರೂ ದೇವರೊಂದಿಗೆ ಏಕಾಂಗಿಯಾಗಿದ್ದೆಯೋ?

**''ಆತನು ಒಬ್ಬನೇ ಇದ್ದಾಗ ... ಹನ್ನೆರಡು ಮಂದಿ ಶಿಷ್ಯರು ... ಆತನನ್ನು ಕೇಳಿದರು''**
**– (ಮಾರ್ಕ 4:10)**

ನಮ್ಮೊಡನೆ ಆತನ ಏಕಾಂತವಾಸ; ಸಂಕಟ, ಹೃದಯವೇದನೆ, ಇಲ್ಲವೇ ಶೋಧನೆ, ನಿರಾಶೆ, ವ್ಯಾಧಿ ಅಥವಾ ಭಗ್ನಪ್ರೇಮ, ಹತ್ತಿಡಲ್ಪಟ್ಟ ಒಲವುಗಳು, ಮುರಿದ ಗೆಳೆತನ, ಹೊಸ ಸ್ನೇಹ – ಇವುಗಳ ಮುಖಾಂತರ ನಾವು ತನ್ನೊಡನೆ ಒಬ್ಬಂಟಿಗರಾಗಿರುವಂತೆ ದೇವರು ಮಾಡಿದಾಗ – ನಾವು ಮೂಕರಾಗುತ್ತೇವೆ ಮತ್ತು ಒಂದು ಪ್ರಶ್ನೆಯನ್ನಾದರೂ ಕೇಳುವುದಿಲ್ಲ, ಆಗ ಆತನು ನಮಗೆ ವಿವರವಾಗಿ ಅರ್ಥೈಸಿ ಕಲಿಸಿಕೊಡಲು ಪ್ರಾರಂಭಿಸುವನು. ಯೇಸು ಕ್ರಿಸ್ತನು ಆ ಹನ್ನೆರಡು ಜನರಿಗಿತ್ತ ತರಬೇತಿಯನ್ನು ಗಮನಿಸಿರಿ. ಅವರು ಆತನ ಶಿಷ್ಯರು, ತನ್ನ ಸಂಗಡವೆ ಇದ್ದವರು – ಹೊರಗಿದ್ದ ಬೇರೆ ಗುಂಪಲ್ಲ, ಅದೇ ಶಿಷ್ಯರು ಗೊಂದಲಕ್ಕೊಳ ಗಾಗಿದ್ದಾರೆ. ಅವರೇ ಒಂದೇ ಸಮನಾಗಿ ಪ್ರಶ್ನೆ ಕೇಳುತ್ತಿದ್ದಾರೆ ಮತ್ತು ಆತನು ಸಹಾ ಒಂದೇ ಸಮನಾಗಿ ಅವರಿಗೆ ವಿಷಯ ಗಳನ್ನು ವಿವರಿಸುತ್ತಿದ್ದಾನೆ. ಆದರೆ ಅವರು ಪರಿಶುದ್ಧಾತ್ಮನನ್ನು ಹೊಂದಿದ ನಂತರವೇ ನಿಜವಾಗಿ ವಿಷಯಗಳನ್ನು ಗ್ರಹಿಸಿದರು (ಯೋಹಾನ–14:26 ನೋಡಿರಿ)

ದೇವರೊಂದಿಗೆ ನೀನು ಮುಂದೆ ಸಾಗುತ್ತಿರುವುದು ನಿಮಗೆ ಸ್ಪಷ್ಟವಾಗಿರುವಾಗ, ಆತನು ನಿನ್ನ ಆತ್ಮವನ್ನು ಯಾವ ರೀತಿ ನಿಭಾಯಿಸಿ ತರಬೇತಿಗೊಳಿಸುವನೆಂಬುದೊಂದನ್ನೇ ನಿನಗೆ ಸ್ಪಷ್ಟಪಡಿಸಲು ದೇವರು ಬಯಸುತ್ತಿದ್ದಾನೆ. ನಿನ್ನ ಸಹೋದರನ ದುಃಖ ಮತ್ತು ಅವನ ಗೊಂದಲದ ಪರಿಸ್ಥಿತಿಗಳು, ನಿನ್ನನ್ನು ಗಲಿಬಿಲಿಗೊಳಿ ಸುತ್ತವೆ. ನಮ್ಮ ಸ್ವಂತ ಹೃದಯಗಳಲ್ಲಿಯೂ ಅಂಥಾ ಅವಸ್ಥೆಗೆ ಕಾರಣವಾಗಬಹುದಾದ ಪಿಡುಗುಗಳಿವೆ ಎಂದು ತಿಳಿಯ ಪಡಿಸುವ ಒಂದು ಡೋಸ್ ದೇವರು ನಮಗೆ ಕೊಡುವವರೆಗೂ, 'ಅವನ ಪರಿಸ್ಥಿತಿಗಳೆಲ್ಲಾ ನಮಗೆ ತಿಳಿದಿವೆ' ಎಂಬ ಭಾವನೆಯಲ್ಲಿ ನಾವಿರುತ್ತೇವೆ. ಸ್ವಂತ ಹೃದಯದಲ್ಲಿರುವ ಹಠಮಾರಿತನದ ಮತ್ತು ಅಲಕ್ಷತನದ ಇಡೀ ಕ್ಷೇತ್ರಗಳನ್ನು ಪವಿತ್ರಾತ್ಮನು ನಮ್ಮಲ್ಲಿ ಪ್ರತಿಯೊಬ್ಬರಿಗೆ ಪ್ರಕಟಿಸ ಬೇಕಾಗಿದೆ ಮತ್ತು ಯೇಸುಕ್ರಿಸ್ತನು ಯಾವಾಗ ನಮ್ಮನು ಏಕಾಂತದಲ್ಲಿ ಸಂಧಿಸುವನೋ, ಆಗ ಮಾತ್ರ ಅದು ಸಾಧ್ಯ. ಈಗಲಾದರೂ ನಾವು ಆತನೊಡನೆ ಒಂಟಿಗರಾಗಿದ್ದೇವೆಯೋ ಅಥವಾ ರಂಬಾಟದ ಭಾವನೆಗಳನ್ನು ಓಲೈಸುತ್ತಿರುವೆವೋ ? ದೇವರ ಸೇವೆಯಲ್ಲಿ ಗುಲ್ಲೆಬ್ಬಿಸುವ ಮೈತ್ರಿಗಳಲ್ಲಿದ್ದೇವೆಯೋ ? ನಮ್ಮ ಶರೀರಕ್ಕೆ ಸಂಬಂಧಿಸಿದಂತೆ ಗುಲ್ಲೆಬ್ಬಿಸುವ ಅಲ್ಪಾಡಂಬರಗಳಲ್ಲಿ ತೊಡಗಿದ್ದೇವೆಯೋ ? ಇಂಥಾ ಗದ್ದಲದ ಪ್ರಶ್ನೆಗಳನ್ನೆಲ್ಲಾ ತಲೆಯಿಂದ ಹೊರದೊಬ್ಬಿ, ಆತನೊಡನೆ ಏಕಾಂತತೆಯಲ್ಲಿರದಿದ್ದರೆ, ಯೇಸುಕ್ರಿಸ್ತನು ನಮಗೇನನ್ನೂ ಸ್ಪಷ್ಟವಾಗಿ ವಿವರಿಸಲಾರನು.

# ದೇವರಿಂದ ಕರೆಯಲ್ಪಟ್ಟವರು

**''ಆಗ ಯಾವನನ್ನು ಕಳುಹಿಸಲಿ, ಯಾವನು ನಮಗೋಸ್ಕರ ಹೋಗುವನು ಎಂಬ ಕರ್ತನ ನುಡಿಯನ್ನು ಕೇಳಿ ಇಗೋ, ನಾನಿದ್ದೇನೆ ನನ್ನನ್ನು ಕಳುಹಿಸು'' - (ಯೆಶಾಯ - 6:8)**

ದೇವರು ತನ್ನ ಕರೆಯುವಿಕೆಯನ್ನು ಯೆಶಾಯನಿಗೆ ಸಂಬೋಧಿಸಿರಲಿಲ್ಲ. ''ಯಾರು ನಮಗಾಗಿ ಹೋಗುವರು ?'' ಎಂದು ದೇವರು ಹೇಳುವುದನ್ನು ಯೆಶಾಯನು ಹೊಂಚಿ ಕೇಳಿಸಿಕೊಂಡಿದ್ದನು. ದೇವರ ಕರೆಯುವಿಕೆಯು ನಿರ್ದಿಷ್ಟರಾದ ಕೆಲವರಿಗಷ್ಟೇ ಎಂದಲ್ಲ, ಅದು ಪ್ರತಿಯೊಬ್ಬರಿಗೂ ಸಂಬೋಧಿಸಿದ ಕರೆಯುವಿಕೆಯಾಗಿದೆ. ನಾನು ದೇವರ ಕರೆಯುವಿಕೆಯನ್ನು ಕೇಳಿಸಿಕೊಳ್ಳುವೆನೋ ಇಲ್ಲವೊ ಎಂಬುದು ನನ್ನ ಕಿವಿಗಳ ಸ್ಥಿತಿಯನ್ನು ಅವಲಂಬಿಸಿದೆ ಮತ್ತು ನಾನೇನನ್ನು ಕೇಳಿಸಿಕೊಳ್ಳುವೆನೆಂಬುದು ನನ್ನ ಸ್ವಭಾವ ವನ್ನಾಧರಿಸಿದೆ. ''ಕರೆಯಲ್ಪಟ್ಟವರು ಬಹುಜನ, ಆಯಲ್ಪಟ್ಟವರು ಸ್ವಲ್ಪಜನ'' (ಮತ್ತಾಯ - 22:14) ಅಂದರೆ ಕೆಲವರು ಮಾತ್ರ ತಾವು ಆಯಲ್ಪಟ್ಟವರೆಂದು ಸಾಕ್ಷಿ ಪೂರ್ವಕವಾಗಿ ಸಮರ್ಥಿಸುತ್ತಾರೆ. ಆದರೆ ಯೇಸುಕ್ರಿಸ್ತನ ಮುಖಾಂತರ ದೇವರ ಬಾಂಧವ್ಯದಲ್ಲಿ ಬಂದು ಸೇರಿದವರೇ ಆರಿಸಲ್ಪಟ್ಟವರು, ಅವರ ಸ್ವಭಾವವು ಮಾರ್ಪಟ್ಟಿದೆ, ಅವರ ಕಿವಿಗಳು ಚೊಕ್ಕಟಗೊಂಡು ತೆರೆಯಲ್ಪಟ್ಟಿವೆ. ''ಯಾರು ನನಗಾಗಿ ಹೋಗುವರು ?'' ಎಂದು ಸದಾ ಪ್ರಶ್ನಿಸುವ ಮೃದುವಾದ ಮಂದವಾಣಿಯನ್ನು ಆಲಿಸುವರು ಅವರೇ. ದೇವರು ಒಬ್ಬನನ್ನು ತನಗಾಗಿ ಪ್ರತ್ಯೇಕಿಸಿ ಅವನಿಗೆ ''ಈಗ ನೀನು ಹೋಗು'' ಎಂದೆನ್ನುವ ಪ್ರಶ್ನೆ ಇಲ್ಲಿ ಇಲ್ಲ. ದೇವರು ಯೆಶಾಯನ ಮೇಲೆ ಬಲವಾದ ಪ್ರಚೋದನೆಯನ್ನು ಹೇರಲಿಲ್ಲ. ಆದರೆ ಯೇಶಾಯನು ದೇವ ಸನ್ನಿಧಿ ಯಲ್ಲಿದ್ದು ಆತನ ಕರೆಯುವಿಕೆಯನ್ನು ಹೊಂಚಿಲಾಲಿಸಿದನು ''ಇಗೋ, ನಾನಿದ್ದೇನೆ ನನ್ನನ್ನು ಕಳುಹಿಸು'' ಎಂದು ಪ್ರಜ್ಞಾಪೂರ್ವಕವಾಗಿ ಸ್ವತಂತ್ರವಾಗಿ ನಿವೇದಿಸುವುದನ್ನು ಹೊರತುಪಡಿಸಿ ಹೇಳುವುದಕ್ಕೆ ಬೇರೇನೂ ತನಗಿಲ್ಲವೆಂಬುದನ್ನು ಅವನು ತಿಳಿದಿದ್ದನು.

ದೇವರು, ಒತ್ತಾಯ ಪಡಿಸುತ್ತಾ ಹಾಗೂ ಮನವಿ ಮಾಡುತ್ತಾ ನಿನ್ನ ಬಳಿಗೆ ಬರುವನೆಂಬ ಅಪೇಕ್ಷೆ ನಿನ್ನದಾಗಿದ್ದರೆ ಅದನ್ನು (ಅಂತಹ ಭಾವನೆಯನ್ನು) ನಿನ್ನ ಮನಸ್ಸಿನಿಂದ ಮೊದಲು ತೆಗೆದುಹಾಕು. ಯೇಸು ಸ್ವಾಮಿಯು ತನ್ನ ಶಿಷ್ಯರನ್ನು ಕರೆದಾಗ ಪ್ರತಿರೋಧಿಸಲಾಗದ ಹೊರಗಿನ ಪ್ರಚೋದನೆಗಳೇನೂ ಅಲ್ಲಿ ಇರಲಿಲ್ಲ. ಅಲ್ಲಿದ್ದದ್ದು ಕೇವಲ ಮೃದುವಾದ, ಗಾಢಾನುರಾಗದಿಂದ ಕೂಡಿದ ಒತ್ತಾಯಿಸುವಿಕೆ ಮಾತ್ರ ''ನನ್ನನ್ನು ಹಿಂಬಾಲಿಸು.'' ಯಾವ ಜನರ ಸಂವೇದನೆಗಳು ಜಾಗೃತವಾಗಿದ್ದವೋ, ಅಂಥವರಿಗೆ ಮಾತ್ರ ಆತನು ನುಡಿದ ಮಾತುಗಳವು. ದೇವರಿಗೆ ನಾವು ಮುಖಾಮುಖಿಯಾಗಿ ಬರುವಂತೆ ಮಾಡಲು ದೇವರ ಆತ್ಮನಿಗೆ ನಾವು ಎಡೆಗೊಟ್ಟರೆ, ಯೆಶಾಯನ ಆಲೈಸುವಿಕೆಯನ್ನು ಹೋಲುವಂಥದೊಂದನ್ನು ನಾವು ಸಹಾ ಆಲಿಸಬಹುದು; ಆಗ ಪರಿಪೂರ್ಣ ಸ್ವಾತಂತ್ರ್ಯತೆಯಿಂದ ನಾವು ಹೇಳುತ್ತೇವೆ. ''ಇಗೋ ನಾನಿದ್ದೇನೆ ನನ್ನನ್ನು ಕಳುಹಿಸು''

# ಶುಭ್ರತೆಯಲ್ಲಿ ನೀನು ನಡೆಯುತ್ತಿರುವಿಯೋ ?
# (ಹೊಸಬರಾಗಿ ನಡಕೊಳ್ಳುತ್ತಿರುವಿಯೋ ?)

**''.... ಆತನೊಂದಿಗೆ ಹೂಣಲ್ಪಟ್ಟೆವು .... ಆದದರಿಂದ ... ಹೊಸಬರಾಗಿ ನಡಕೊಳ್ಳಬೇಕು''**
**- (ರೋಮಾ - 6:4)**

''ಶ್ವೇತ ಶವಸಂಸ್ಕಾರ '' – ಹಳೇ ಜೀವಿತದ ಅಂತ್ಯ ಕ್ರಿಯೆ; ಅದರ ಮೂಲಕ ಸಾಗದ ವಿನಃ ಯಾರೊಬ್ಬರೂ ಪೂರ್ಣ ಶುದ್ಧೀಕರಣದ ಅನುಭವದಲ್ಲಿ ಸೇರಲಾರರು. ಇಂಥಾ ಮರಣದ ಬಿಕ್ಕಟ್ಟು ಎಂದೂ ಇರದಿದ್ದ ಪಕ್ಷದಲ್ಲಿ, ಶುದ್ಧೀಕರಣವು ಕೇವಲ ಜಾರಿ ಹೋಗುವ ಒಂದು ದರ್ಶನಕ್ಕಿಂತಲೂ ಹಿರಿದಾದುದಲ್ಲ. ಅಲ್ಲಿ ಶ್ವೇತ ಶವ ಸಂಸ್ಕಾರವಾಗಿರಲೇಬೇಕು. ಆ ಮರಣಕ್ಕೆ ಒಂದೇ ಒಂದು ಪುನರ್ಜನ್ಮವಿದೆ – ಅದು ಯೇಸು ಕ್ರಿಸ್ತನ ಜೀವಿತದಲ್ಲಿ ಪುನಃ ಜೀವಿಸುವುದು. ಆ ಜೀವಿತವನ್ನು ಯಾವ ಶಕ್ತಿಯೂ ಅಸ್ತವ್ಯಸ್ತ ಗೊಳಿಸಲಾರದು; ಆ ಜೀವಿತವು ಒಂದೇ ಒಂದು ಉದ್ದೇಶಕ್ಕಾಗಿ ದೇವರಲ್ಲಿ ಒಂದಾಗಿದೆ. – ಆತನ ಸಾಕ್ಷಿಯಾಗಿ ಜೀವಿಸಲು. ನಿಜವಾಗಿಯೂ ನೀನು ನಿನ್ನ ಹಳೇ ಜೀವಿತದ ಅಂತ್ಯಕ್ಕೆ ಬಂದಿರುವಿಯೋ? ಭಾವನಾತ್ಮಕವಾಗಿ ಅನೇಕಸಲ ಹಾಗೆ ಬಂದಿರುವುದುಂಟು, ಆದರೆ ಇಂದು ಖಂಡಿತವಾಗಿಯೂ ಬಂದಿರುವಿಯೋ? ನೀನು ಸಂಭ್ರಮದಿಂದ ಮರಣಿಸುವುದಾಗಲಿ ಮತ್ತು ಸಡಗರದಿಂದ ನಿನ್ನ ಶವ ಸಂಸ್ಕಾರಕ್ಕೆ ಹೋಗುವುದಾಗಲೀ ಸಾಧ್ಯವಿಲ್ಲ. ಮರಣವೆಂದರೆ ನೀನು ಇನ್ನಿಲ್ಲದಿರುವಿಕೆ. ಈ ವರೆಗೂ ಪ್ರಯಾಸಪಡುತ್ತಿರುವ 'ಶ್ರದ್ಧಾವಂತ ಕ್ರೈಸ್ತನಾಗಿರುವಿಕೆಯನ್ನು' ಇನ್ನು ಮೇಲೆ ಕೊನೆಗಾಣಿಸಬೇಕೆಂದು ದೇವರೊಡನೆ ಸಮ್ಮತಿಸುವಿಯೋ? ನಾವು ಸ್ಮಶಾನದ ಹೊರ ಪರಿಧಿ ಯಲ್ಲಿ ಸುತ್ತುತ್ತೇವೆ, ಆದರೆ ಮರಣಿಸಲು ನಿರಾಕರಿಸುತ್ತೇವೆ. ಮರಣಕ್ಕಾಗಿ ಶ್ರಮಿಸುತ್ತಿರುವುದಲ್ಲ, ಮರಣಿಸುತ್ತಲೇ, ಇರುವುದಕ್ಕಾಗಿ ಶ್ರಮಿಸಬೇಕು. – ''ಆತನ ಮರಣದಲ್ಲಿ ಪಾಲುಗಾರರಾಗಿ ಆತನೊಂದಿಗೆ ಹೂಣಲ್ಪಟ್ಟೆವು'' (ರೋಮಾ – 6:3)

ನಿನಗೆ, ನಿನ್ನ ಶ್ವೇತ ಶವ ಸಂಸ್ಕಾರವಾಗಿದೆಯೋ? ಇಲ್ಲವೇ ನಿನ್ನ ಕಪಟ ಧಾರ್ಮಿಕತೆಯಿಂದ ನಿನ್ನ ಆತ್ಮವನ್ನು ಮೋಸಗೊಳಿಸುತ್ತಿರುವೆಯೋ ? ಇದೇ ಅಂತಿಮ ದಿನವೆಂದು ನಿನ್ನ ಜೀವಿತದಲ್ಲಿ ಗುರುತಿಸಿಕೊಂಡ ಸ್ಥಳವೇನಾದರೂ ಇದೆಯೋ? ಪರಿಶುದ್ಧತೆಯಿಂದಲೂ ಅಸಾಧಾರಣ ಕೃತಜ್ಞತಾ ಸ್ಮರಣೆಯಿಂದಲೂ, ನಿನ್ನ ನೆನಪು ಆ ಸ್ಥಳದವರೆಗೆ ಹಿಂದೆ ಸಾಗಿ ಹೋಗಿದೆಯೊ? ಹೌದು! ಅದು ಅಂದೇ, ''ಆ ಶ್ವೇತ ಶವಸಂಸ್ಕಾರ'' ವಾದದ್ದು, ಹೌದು, ಅಲ್ಲಿಯೇ ದೇವರೊಂದಿಗೆ ಒಪ್ಪಂದ ಮಾಡಿಕೊಂಡಿರುವೆನು'' ಎಂದು ನೀನು ಹೇಳಬಲ್ಲೆಯೋ ?

''ದೇವರ ಚಿತ್ತವೇನೆಂದರೆ ನೀವು ಶುದ್ಧರಾಗಿ ಇರಬೇಕೆಂಬುದೇ'' – (1 ಥೆಸಲೋನಿಕ – 4:3) – ದೇವರ ಚಿತ್ತವೇನೆಂಬುದನ್ನು ನೀನು ಗ್ರಹಿಸಿದಾಗ, ನೀನು ಸಹಜವಾಗಿ ಆ ಶುದ್ಧೀಕರಣದಲ್ಲಿ ಸೇರಿಬಿಡುವೆ. ಹಾಗಾದರೇ ಇಂದೇ ಆ ''ಶ್ವೇತಶವಸಂಸ್ಕಾರ'' ದಲ್ಲಿ ಸಾಗಲು ಸಿದ್ಧನಿರುವಿಯೋ ? ಭೂಮಿಯಲ್ಲಿ ನಿನ್ನ ಹಳೇ ಜೀವಿತಕ್ಕೆ ಇದೇ ಕೊನೆಯ ದಿನವೆಂದು ದೇವರೊಡನೆ ಸಮ್ಮತಿಸುವಿಯೋ ? ಆ ಒಪ್ಪಂದದ ಸಮಯವು ನಿನ್ನನ್ನು ಮಾತ್ರ ಅವಲಂಬಿಸಿದೆ.

# ದೇವರ ಸ್ವಭಾವದ ಧ್ವನಿ

**'' ಆಗ ಯಾವನನ್ನು ಕಳುಹಿಸಲಿ ? ........ ಎಂದು ಕರ್ತನ ನುಡಿಯನ್ನು ಕೇಳಿ......''**
**- (ಯೆಶಾಯ - 6:8)**

ದೇವರ ಕರೆಯುವಿಕೆಯನ್ನು ಕುರಿತು ನಾವು ಮಾತಾಡುತ್ತಿರುವಾಗ, ಪ್ರಾಮುಖ್ಯವಾದ ಭಾವವೊಂದನ್ನು ಮರೆಯುತ್ತೇವೆ - ಕರೆಯುತ್ತಿರುವಾತನ ಸ್ವಭಾವವನ್ನು. ಸಮುದ್ರದ ಕರೆಯುವಿಕೆ, ಪರ್ವತ ಗಳ ಕರೆಯುವಿಕೆ, ಹಿಮಗಿರಿಗಳ ಕರೆಯುವಿಕೆಗಳುಂಟು, ಆದರೆ ಕೆಲವರಿಗೆ ಮಾತ್ರ ಈ ಕರೆಯುವಿಕೆಯು ಕೇಳಿಸುತ್ತದೆ. ಕರೆಯುವಿಕೆಯು ಎಲ್ಲಿಂದ ಬಂತೋ, ಅದು ಅದರ ಸ್ವಭಾವದ ಅಭಿವ್ಯಕ್ತನೆಯಾಗಿದೆ ಮತ್ತು ನಮ್ಮೊಳಗೆ ಅದೇ ಸ್ವಭಾವವಿದ್ದಾಗ ಮಾತ್ರ ಆ ಕರೆಯುವಿಕೆಯನ್ನು ಗುರುತಿಸುತ್ತೇವೆ. ದೇವರ ಕರೆಯು ವಿಕೆಯು ದೇವರ ಸ್ವಭಾವದ ಅಭಿವ್ಯಕ್ತನೆಯೇ ಹೊರತು ನಮ್ಮ ಸ್ವಭಾವದ್ದಲ್ಲ. ದೇವರ ಕರೆಯುವಿಕೆಯು ಹಗ್ಗದ ಎಳೆಗಳಂತಿದ್ದು, ದೇವರು ತನ್ನ ಕೃಪಾಕನಿಕರದಿಂದ ಅವುಗಳನ್ನು ನಮಗಾಗಿ ಎಣೆಯುತ್ತಿರುವುದನ್ನು ನಾವು ಗುರುತಿಸುತ್ತೇವೆ - ಬೇರೆ ಯಾರೂ ಅಲ್ಲ .  ಒಂದು ನಿರ್ದಿಷ್ಟ ವಿಷಯವೊಂದನ್ನು ನಮಗಾಗಿ ಆತನ ಸ್ವರವು ಎಳೆ ಎಳೆಯಾಗಿ ಪೋಣಿಸುತ್ತಿರುವಾಗ, ಇದರ ಬಗ್ಗೆ ಬೇರೆಯವರನ್ನು ವಿಚಾರಿಸುವುದರಿಂದೇನೂ ಉಪಯೋಗವಿಲ್ಲ. ದೇವರ ಕರೆಯುವಿಕೆಯ ಗಹನವಾದ ವಿವರಗಳನ್ನು ನಮ್ಮ ಆತ್ಮ ಮತ್ತು ದೇವರ ನಡುವೆ ಮಾತ್ರ ಇರಿಸಿಕೊಳ್ಳಬೇಕು.

ದೇವರ ಕರೆಯುವಿಕೆಯು, ನನ್ನ ಸ್ವಭಾವದ ಪ್ರತಿಧ್ವನಿಯಲ್ಲ; ನನ್ನ ಒಲವುಗಳನ್ನು, ನನ್ನ ವೈಯಕ್ತಿಕ ಮನೋಭಾವನೆಗಳನ್ನು ಅದು ಗಣನೆಗೆ ತೆಗೆದುಕೊಳ್ಳುವುದಿಲ್ಲ. ಎಲ್ಲಿಯವರೆಗೆ ನಾನು, ನನ್ನ ವ್ಯಕ್ತಿಗತ ಗುಣ ಸಾಮರ್ಥ್ಯ, ಸ್ವಭಾವಗಳಲ್ಲಿ ಮುಳುಗಿರುತ್ತಾ,  ನಾನು ಯಾವ ಕಾರ್ಯಕ್ಕೆ ಯೋಗ್ಯನಾಗಿ ರಬಲ್ಲೆನೆಂಬುದನ್ನು ಮನನ ಮಾಡುತ್ತಿರುವೆನೋ, ಅಲ್ಲಿಯ ವರೆಗೆ ದೇವರ ಕರೆಯುವಿಕೆಯ ಸ್ವರವೆಂದೂ ನನಗೆ ಕೇಳಿ ಬರುವುದಿಲ್ಲ. ಆದರೆ ಆತನ ಭಾಂಧವ್ಯದಲ್ಲಿ ನಾನು ಸೇರಿದಾಗ, ಯೆಶಾಯನಿದ್ದಂಥ ಸ್ಥಿತಿಯಲ್ಲಿಯೇ ನಾನಿ ರುತ್ತೇನೆ. ಯೆಶಾಯನು ಆಗ ತಾನೇ ತಾಳಿದ, ಅಂಥಾ ದೊಡ್ಡ ಸತ್ವ ಪರೀಕ್ಷಾ ಕಾಲದಲ್ಲಿ ಆತನ ಆತ್ಮವು ದೇವರೊಂದಿಗೆ ಎಷ್ಟರ ಮಟ್ಟಿಗೆ ಮೇಳೈಸಿತ್ತೆಂದರೆ ದೇವರ ಕರೆಯುವಿಕೆಯನ್ನು ಆತನು ಅಚ್ಚರಿಗೊಂಡ ತನ್ನ ಆತ್ಮದಲ್ಲಿ ಗುರುತಿಸಿದನು. ನಮ್ಮಲ್ಲಿ ಬಹುಪಾಲು ಜನರು ತಮಗಾಗಿ ಮಾತ್ರವೇ ವಿಶಿಷ್ಟ ಕರೆ ಇದ್ದ ಹೊರತು ಬೇರಾವುದಕ್ಕೂ ಕಿವಿಗೊಡುವುದಿಲ್ಲ. ದೇವರು ಹೇಳುವದೊಂದನ್ನೂ ನಾವು ಕೇಳಿಸಿಕೊಳ್ಳುವುದಿಲ್ಲ. ದೇವರ ಕರೆಯುವಿಕೆಯ ವಲಯದಲ್ಲಿ ನಾವು ಸೇರಬೇಕಾದರೆ ನಮ್ಮಲ್ಲಿ ಅಗಾಧ ಬದಲಾವಣೆಯಾಗಬೇಕು.

# ಸ್ವಾಭಾವಿಕ ಜೀವಿತದ ಕಸಬು

**'' ........ಆತನನ್ನು ನನ್ನೊಳಗೆ ಪ್ರಕಟಿಸುವದಕ್ಕೆ ಇಚ್ಛೈಸಿದಾಗಲೇ ..........''**
**- (ಗಲಾತ್ಯ 1:15:16)**

ದೇವರ ಕರೆಯುವಿಕೆಯು ಒಂದು ನಿರ್ದಿಷ್ಟ ಸೇವೆಗಾಗಿರುವ ಕರೆಯಲ್ಲ; ದೇವರ ಸ್ವಭಾವ ದೊಂದಿಗೆ ನನ್ನ ಸಂಪರ್ಕವಿರುವುದರಿಂದ, ನಾನು ಆತನಿಗಾಗಿ ಏನು ಮಾಡಬೇಕಾಗಿರುವುದನ್ನು , ಆ ಕರೆಯುವಿಕೆಯು ನನಗೆ ಮನಗಾಣಿಸಿದೆ ಎಂದು ಅರ್ಥೈಸಿಕೊಳ್ಳಬಹುದು. ದೇವರ ಕರೆಯುವಿಕೆಯು ಮೂಲತಃ ಆತನ ಸ್ವಭಾವದ ಅಭಿವ್ಯಕ್ತನೆಯಾಗಿದೆ; ನನ್ನ ಸ್ವಭಾವದ ಫಲವೇ ನನ್ನ ಸೇವಾವೃತ್ತಿ ಯಾಗಿದೆ. ಸ್ವಾಭಾವಿಕ ಜೀವಿತದ ಕಸಬನ್ನು ಕುರಿತು ಪೌಲನ ಹೇಳಿಕೆ ಹೀಗಿದೆ - ''ನಾನು ತಾಯಿಯ ಗರ್ಭದಲ್ಲಿದ್ದಾಗಲೇ ನನ್ನನ್ನು ಪ್ರತ್ಯೇಕಿಸಿ ತನ್ನ ಕೃಪೆಯಿಂದ ಕರೆದ ದೇವರು ತನ್ನ ಮಗನನ್ನು ನಾನು ಅನ್ಯ ಜನಗಳಲ್ಲಿ ಪ್ರಸಿದ್ಧಿ ಪಡಿಸುವವನಾಗಬೇಕೆಂದು''.

ಅತ್ಯಧಿಕವಾಗಿ ಸೂಸಿ ಹರಿಯುವ ಶ್ರದ್ಧೆಯೇ ನಿಜವಾದ ಸೇವೆ. ಗಂಭೀರವಾಗಿ ಹೇಳುವುದಾದರೆ, ಸೇವೆಗಾಗಿ ಕರೆಯುವಿಕೆ ಇರುವುದಿಲ್ಲ; ನಾನು ಮಾಡುತ್ತಿರುವ ಅಲ್ಪಸೇವೆಯು, ಅದು ದೇವರ ಸ್ವಭಾವ ದೊಂದಿಗೆ ನನ್ನನ್ನು ಗುರುತಿಸಿಕೊಂಡಿದ್ದುದರ ಪ್ರತಿಧ್ವನಿಯಾಗಿದೆ. ಸೇವೆಯು ನನ್ನ ಜೀವಿತದ ಸಹಜಭಾಗ. ದೇವರು ನನ್ನನ್ನು ತನ್ನ ಬಾಂಧವ್ಯದಲ್ಲಿ ಸೇರಿಸಿಕೊಂಡಿದ್ದರಿಂದಲೇ ನಾನು ಆತನ ಕರೆಯುವಿಕೆಯನ್ನು ಅರ್ಥ ಮಾಡಿ ಕೊಳ್ಳುವೆನು, ಆಗ ಆತನ ಮೇಲಿರುವ ಪೂರ್ಣ ಪ್ರೀತಿಯಿಂದ ನನ್ನಷ್ಟಕ್ಕೆ ನಾನೇ ಸೇವೆಸಲ್ಲಿಸುತ್ತೇನೆ. ದೇವರ ಕರೆಯುವಿಕೆಯನ್ನಾಲೈಸಿದ ಸ್ವಭಾವದ, ವಿವೇಚನಾ ಯುಕ್ತ, ಪ್ರೇಮ ಕಾಣಿಕೆಯೇ ದೇವರ ಸೇವೆ. ನನ್ನ ಸೇವೆಯು ನನ್ನ ಸ್ವಭಾವಕ್ಕೆ ಸರಿಹೊಂದಿದ ಸೇವೆಯಾಗಿ ವ್ಯಕ್ತಗೊಳ್ಳುತ್ತದೆ. ದೇವರ ಕರೆಯುವಿಕೆಯು ಆತನ ಸ್ವಭಾವವನ್ನು ವ್ಯಕ್ತ ಮಾಡುತ್ತದೆ. ಈ ಕಾರಣದಿಂದ ನಾನು ಆತನ ಸ್ವಭಾವವನ್ನು ಹೊಂದಿಕೊಂಡು ಆತನ ಕರೆಯುವಿಕೆಯನ್ನು ಆಲಿಸಿದ ಕೂಡಲೇ, ದೈವ ಸ್ವಭಾವವು ಇಬ್ಬರಲ್ಲಿಯೂ ಏಕತ್ರವಾಗಿ ಧ್ವನಿಗೊಂಡು, ಇಬ್ಬರೂ ಸೇರಿ ಸೇವೆ ಮಾಡುತ್ತೇವೆ. ದೇವಕುಮಾರನು ನನ್ನಲ್ಲಿ ಪ್ರಕಟಗೊಳ್ಳುತ್ತಾನೆ ಮತ್ತು ಆತನ ಮೇಲೆ ನನಗಿರುವ ಶ್ರದ್ಧೆಯಿಂದ ನನ್ನ ಸಾಮಾನ್ಯ ಜೀವಿತದಲ್ಲಿಯೇ ಆತನ ಸೇವೆಯನ್ನು ಮಾಡುತ್ತೇನೆ.

# ಅವರು ಸ್ವಾಮಿಯವರು !

**'' ತೋಮನು ಆತನಿಗೆ - ನನ್ನ ಸ್ವಾಮಿ, ನನ್ನ ದೇವರು ! ಎಂದು ಹೇಳಿದನು'' -**
**(ಯೋಹಾನ - 20:28)**

ಯೇಸುಕ್ರಿಸ್ತನು ಆಕೆಯನ್ನು ''ಅಮ್ಮಾ, ನೀರು ಕುಡಿಯುವುದಕ್ಕೆ ಕೊಡು'' ಎಂದು ಹೇಳಿದನು. (ಯೋಹಾನ 4:8) ನಾವೇ ಆತನ ಬಾಯಾರಿಕೆಯನ್ನು ತಣಿಸಬೇಕಾಗಿರುವಾಗ, ನಮ್ಮಲ್ಲಿ ಎಷ್ಟು ಜನರು ಯೇಸುಕ್ರಿಸ್ತನೇ ತಮ್ಮ ಬಾಯಾರಿಕೆಯನ್ನು ತಣಿಸಲು ನೀರುಣಿಸಬೇಕೆಂದು ಆತನಿಗೆ ಮುಗಿಬಿದ್ದಿದ್ದಾರೆ! ನಮ್ಮನ್ನು ತೃಪ್ತಿಪಡಿಸೆಂದು ನಾವು ಆತನ ಬಳಿಗೆ ಹೋಗುವುದರ ಬದಲು, ಆತನನ್ನು ತಣಿಸಲು ನಾವೇ ಕಡೇ ಹನಿಯವರೆಗೆ ನಮ್ಮ ಜೀವಿತಗಳನ್ನು ಧಾರೆಯಾಗಿ ಸುರಿಯಬೇಕು. ''ನನಗೆ ಸಾಕ್ಷಿಗಳಾಗಿರಬೇಕು'' (ಅ.ಕೃ. 1:8) ಆತನು ನಮ್ಮನ್ನು ಎಲ್ಲಿ ಇರಿಸಿದರೂ, ನಮ್ಮನ್ನು ಯಾವುದೋ ಸ್ಥಳಕ್ಕೆ ಕಳುಹಿಸಿಕೊಟ್ಟರೂ ಅಲ್ಲಿ ನಾವು ಆತನಿಗೆ ತೃಪ್ತಿಯಾಗುವಂತೆ, ಕಳಂಕವಿಲ್ಲದೆ, ರಾಜಿ ಮಾಡಿಕೊಳ್ಳದೆ, ಭ್ರಷ್ಟತೆಯಿಲ್ಲದ ಶ್ರದ್ಧಾ ಜೀವಿತವನ್ನು ಆತನಿಗೆ ಧಾರೆಯಾಗಿ ಸುರಿಯಬೇಕು (ಜೀವಿಸಬೇಕು).

ಯೇಸುಕ್ರಿಸ್ತನಲ್ಲಿ ನಿಮಗಿರುವ ಶ್ರದ್ಧೆಗೆ ಸ್ಪರ್ಧೆಯನ್ನೊಡ್ಡುವಂಥವುಗಳ ಬಗ್ಗೆ ಎಚ್ಚರದಿಂದಿರಿ. ಯೇಸುವಿನಲ್ಲಿರುವ ನಿಮ್ಮ ನಿಷ್ಠೆಗೆ ಮುಖ್ಯ ಪ್ರತಿ ಸ್ಪರ್ಧಿ ಎಂದರೆ-ನಾವು ಮಾಡುವ ಆತನ ಸೇವೆಯೇ. ಆತನ ಸಾಕ್ಷಿಗಳಾಗಿ ಕಡೇ ಹನಿಯವರೆಗೆ ಬಸಿದುಹೋಗುವುದಕ್ಕಿಂತಲೂ, ಸೇವೆ ಸಲ್ಲಿಸುವುದು ಬಹು ಸುಲಭ. ಕರೆಯುವಿಕೆಯ ಒಂದೇ ಒಂದು ಉದ್ದೇಶವೆಂದರೆ, ಅದು ದೇವರನ್ನು ಸಂತೃಪ್ತಿಪಡಿಸುವದಕ್ಕಷ್ಟೇ ಹೊರತು, ಆತನಿಗಾಗಿ ಏನಾದರೂ ಮಾಡಬೇಕೆಂಬುವದಕ್ಕಲ್ಲ. ದೇವರಿಗಾಗಿ ಯುದ್ಧವೆಸಗಲು ನಮ್ಮನ್ನು ಕಳುಹಿಸಿಲ್ಲ. ಆದರೂ ತನ್ನ ಹೋರಾಟಗಳಲ್ಲಿ ದೇವರು ನಮ್ಮನ್ನು ಉಪಯೋಗಿಸಿಕೊಳ್ಳಲು ನಾವಿಲ್ಲಿದ್ದೇವೆ. ನಾವು ಯೇಸುಕ್ರಿಸ್ತನಿಗಿಂತಲೂ ಮಿಗಿಲಾಗಿ ಆತನ ಸೇವೆಗೆ ಮಾತ್ರ ನಿಷ್ಠರಾಗಿದ್ದೇವೆಯೋ?

# ದರ್ಶನ ಮತ್ತು ಕತ್ತಲೂ

**'' ಕಾರ್ಗತ್ತಲು ಅವನ ಮೇಲೆ ಕವಿಯಿತು'' - (ಆದಿಕಾಂಡ - 15:12)**

ದೇವರು ಒಬ್ಬ ಭಕ್ತನಿಗೆ ಯಾವಾಗ ದರ್ಶನಗಳನ್ನೀಯುವನೋ, ಆಗ ಅವನನ್ನು ತನ್ನ ಕರಗಳ ನೆರಳಿನಲ್ಲಿ ಮರೆ ಮಾಡಿರುವನೋ ಎಂಬತ್ತಿರುತ್ತದೆ. (ಯೆಶಾಯ - 49:2) - ಅಂಥಾ ಸಮಯ ದಲ್ಲಿ ಮೌನದಿಂದಿದ್ದು ಆಲಿಸುವುದೇ ಭಕ್ತನ ಕರ್ತವ್ಯ. ಕಣ್‌ಕುಕ್ಕುವ ಬೆಳಕಿನಿಂದಲೂ ಕತ್ತಲುಂಟಾಗುವುದು, ಆಗ ಅದೇ ಆಲಿಸುವ ಸಮಯ; ದೇವರು ಬೆಳಕನ್ನೀಯುವವರೆಗೂ ಕಾದಿರದೆ, ಕತ್ತಲೆಯಲ್ಲಿರುವಾಗಲೇ, ಒಳ್ಳೆಯದೆನ್ನುವ ಒಂದು ಸಲಹೆಯನ್ನು ಅಬ್ರಹಾಮನು ಆಲಿಸಿದ ವಿವರಣೆಯನ್ನು ಆದಿಕಾಂಡ 16ನೇ ಅಧ್ಯಾಯದಲ್ಲಿ ಕಾಣಬಹುದು (ಅತ್ಯುತ್ತಮವಾದ ಆಲಿಸುವಿಕೆಯಾದ ಅಬ್ರಹಾಮ ಹಾಗರಳ ಕಥೆ) ಯಾವಾಗ ದೇವರು ದರ್ಶನವನ್ನೀಯುತ್ತಾನೋ, ಕತ್ತಲು ಅದನ್ನು ಅನುಸರಿಸಿ ಬರುತ್ತದೆ, ಕಾದಿರು. ಆತನ ಸಮಯಕ್ಕಾಗಿ ನೀನು ಕಾದುಕೊಂಡಿದ್ದರೆ ಆತನು ನಿನಗಿತ್ತ ದರ್ಶನವು ನಿನ್ನ ಜೀವನದಲ್ಲಿ ವಾಸ್ತವವಾಗಿ ಘಟಿಸುವಂತೆ ಮಾಡುವನು. ದೇವರು ತನ್ನ ಮಾತುಗಳನ್ನು ನೆರವೇರಿಸುವಂತೆ, ನೀನು ಆತನಿಗೆ ಸಹಾಯ ಮಾಡ ಲೆತ್ನಿಸಬೇಡ. ಇಂಥಾ ಒಂದು ಸ್ಥಿತಿಯ ಹದಿಮೂರು ವರ್ಷದ ಮೌನಕಾಲದಲ್ಲಿ ಅಬ್ರಾಮನು ಸಾಗಿಹೋದನು; ಆದರೆ ಆ ವರುಷಗಳಲ್ಲಿ ಅವನ ಸ್ವಸಾಮರ್ಥ್ಯ ವೆಲ್ಲಾ ನಾಶವಾಯಿತು ಮತ್ತು ಸಾಮಾನ್ಯ ಜ್ಞಾನ ಮಾರ್ಗಗಳನ್ನು ಆತುಕೊಳ್ಳುವ ಸಾಧ್ಯತೆಗಳೆಲ್ಲವೂ ಅಳಿದುಹೋದವು. ಆ ಮೌನ ವರುಷಗಳು ಅಬ್ರಾಮನಿಗೆ ಶಿಸ್ತಿನ ಶಿಕ್ಷಣಕಾಲವಾಗಿದ್ದವೇ ಹೊರತು, ದೇವರು ಅಸಂತೋಷಗೊಂಡ ಕಾಲವಲ್ಲ. ನಿನ್ನ ಜೀವಿತವು ಆನಂದ ಭರವಸೆಗಳಿಂದ ತುಂಬಿದೆ ಎಂದು ಮೌನ ಕಾಲದಲ್ಲಿ ನಟಿಸುವ ಅಗತ್ಯತೆ ನಿನಗಿರುವುದಿಲ್ಲ. ''ಆದರೆ ದೇವರನ್ನು ಆತುಕೊಂಡಿರು'' (ಯೆಶಾಯ 50:10-11 ನೋಡಿರಿ).

ನನ್ನ ಶರೀರದ ಮೇಲೆ ನನಗೇನಾದರೂ ವಿಶ್ವಾಸವಿದೆಯೋ? ಅಥವಾ 'ನಾನು'ನಲ್ಲಿ ಮತ್ತು ದೇವ ಜನರಲ್ಲಿ, ದೈವ ಗ್ರಂಥಗಳಲ್ಲಿ, ಪ್ರಾರ್ಥನೆಗಳಲ್ಲಿ ಹಾಗೂ ಜೀವಿತದ ಭಾವ ಪರವಶತೆಯಲ್ಲಿ ನನಗಿದ್ದ ಎಲ್ಲಾ ಭರವಸೆಗಳನ್ನು ಮೀರಿದ ಭರವಸೆಯಲ್ಲಿರುವೆನೊ ? ಈಗ ನನ್ನ ವಿಶ್ವಾಸವನ್ನೆಲ್ಲಾ ದೇವರಲ್ಲಿಯೇ ಇರಿಸಿಕೊಂಡಿರುವೆನೇ ಹೊರತು ಆತನ ಆಶೀರ್ವಾದಗಳಲ್ಲಿ ಅಲ್ಲವಲ್ಲವೇ ? ''ನಾನೇ ಸರ್ವಶಕ್ತ ದೇವರು'' ''ಎಲ್‌ಷಡ್ಡಾಯ್'' - ತಂದೆಯೂ ತಾಯಿಯೂ ಆಗಿರುವ ದೇವರು. (ಆದಿಕಾಂಡ - 17:1) ದೇವರನ್ನು ವಾಸ್ತವವಾಗಿ ಅರಿಯುವ ಒಂದೇ ಒಂದು ವಿಷಯಕ್ಕಾಗಿ ನಾವೆಲ್ಲರೂ ಶಿಕ್ಷಣ ಹೊಂದುತ್ತೇವೆ. ದೇವರು ವಾಸ್ತವವಾದ ಕೂಡಲೇ, ಬೇರೆ ಜನರೆಲ್ಲಾ ಛಾಯಾ ದೃಶ್ಯರಾಗುವರು. ಬೇರೆ ಸಂತರು ಮಾಡಿದ್ದಾಗಲೀ ಹೇಳಿದ್ದಾಗಲೀ, ದೇವರಲ್ಲಿ ಸ್ಥಿರಗೊಂಡವನನ್ನು ಎಂದೂ ವಿಚಲಿತಗೊಳಿಸಲಾರವು.

# ಪ್ರತಿಯೊಂದಕ್ಕೂ ನೀನು ಹೊಸತನದಿಂದಿರುವಿಯೋ ?

**''ಒಬ್ಬನು ಹೊಸದಾಗಿ ಹುಟ್ಟದಿದ್ದರೆ ಅವನು ದೇವರ ರಾಜ್ಯವನ್ನು ಕಾಣಲಾರನು''– (ಯೋಹಾನ 3:3)**

ಕೆಲವು ವೇಳೆ ನಾವು ಪಾರ್ಥನಾ ಕೂಟಗಳಲ್ಲಿ ಭಾಗವಹಿಸಲು ಉಲ್ಲಾಸದಿಂದಿರುತ್ತೇವೆಯೋ ಹೊರತು ಪಾದರಕ್ಷೆಗಳಿಗೆ ಪಾಲಿಶ್ ಮಾಡಲು – ನಮ್ಮ ದೈನಂದಿನ ಮಾಮೂಲಿ ಕೆಲಸಗಳಿಗಾಗಿಯಲ್ಲ.

ಪರಿಶುದ್ಧಾತ್ಮನಿಂದ ಹೊಸದಾಗಿ ಹುಟ್ಟುವುದು ನಿಸ್ಸಂದೇಹವಾಗಿಯೂ ಅದು ದೇವರಕಾರ್ಯ, ಅದು ವಾಯುವಿನಂತೆ ರಹಸ್ಯಮಯ ಮತ್ತು ದೇವರಂತೆ ಆಶ್ಚರ್ಯಕರ. ಅದು ಎಲ್ಲಿಂದ ಪ್ರಾರಂಭ ವಾಯಿತೋ ನಮಗೆ ತಿಳಿಯದು, ನಮ್ಮ ವ್ಯಕ್ತಿಗತ ಜೀವನದ ಅಂತರಂಗದಲ್ಲಿ ಅದನ್ನು ರಹಸ್ಯವಾಗಿ ರಿಸಲಾಗಿದೆ. ಸೆಲೆ ಬತ್ತದ, ಚಿರಂತನವಾದ, ಶಾಶ್ವತವಾದ ಜೀವಿತದ ಆರಂಭವೇ ಮೇಲಿನಿಂದ ಹೊಸದಾಗಿ ಹುಟ್ಟುವಿಕೆಯಾಗಿದೆ. ನಿತ್ಯವೂ ಹೊಸತನದಿಂದ ಆಲೋಚಿಸುತ್ತಾ, ನುಡಿಯುತ್ತಾ, ಬಾಳುತ್ತಾ, ಸದಾ ವಿಸ್ಮಯ ಭರಿತ ದೈವ ಜೀವಿತದಲ್ಲಿರುವುದೇ ಹೊಸದಾಗಿ ಹುಟ್ಟುವಿಕೆ. ಜೀವಿತದಲ್ಲಿ ಹೊಸತನವಿರದ ಹಳಸಿದ ನೀರಸ ಜೀವಿತವೇ, ದೇವರೊಂದಿಗೆ ಸಂಬಂಧವನ್ನು ಕಳಚಿಕೊಂಡ ಸೂಚನೆಯಾಗಿದೆ. 'ನಾನು ಇದನ್ನು ಈಗಲೇ ಮಾಡಬೇಕು, ಇಲ್ಲವೇ ಅದನ್ನೆಂದಿಗೂ ಮಾಡಲಾಗದು'–ಇದೇ ನೀರಸತೆಯ ಪ್ರಥಮ ಸೂಚನೆ. ನಾವು ಈ ಕ್ಷಣದಲ್ಲಿ ಉಲ್ಲಾಸ ಭರಿತರಾಗಿ ಹೊಸತನದಿಂದಿರುವೆವೋ ? ಇಲ್ಲವೇ ನಿಸ್ಸತ್ವದಿಂದ ಏನನ್ನಾದರೂ ಮಾಡಬೇಕಾಗಿದೆ ಎಂದು ನಮ್ಮ ಮನವನ್ನು ಕೆದಕುತ್ತಿರುವೆವೋ? ನಿತ್ಯ ಹೊಸತನವು ದೇವರಿಗೆ ತೋರುವ ವಿಧೇಯತೆಯಿಂದುಂಟಾಗುವುದಿಲ್ಲ – ಪರಿಶುದ್ಧಾತ್ಮನಿಂದಲೇ ಆಗುತ್ತದೆ; ''ವಿಧೇಯತೆಯು ದೇವರು ಬೆಳಕಿನಲ್ಲಿರುವಂತೆಯೇ ನಮ್ಮನ್ನೂ ಬೆಳಕಿನಲ್ಲಿ ನಡಿಸುವುದು'' (1ಯೊಹಾನ 1:7 ನೋಡಿರಿ)

ದೇವರೊಂದಿಗಿರುವ ನಿನ್ನ ಸಂಬಂಧವನ್ನು ಜಾಗರೂಕತೆಯಿಂದ ಕಾಯ್ದುಕೋ, ಯೇಸು ಸ್ವಾಮಿಯು ಹೀಗೆ ಪ್ರಾರ್ಥಿಸಿದನು, ''ನಾವು ಒಂದಾಗಿರುವ ಪ್ರಕಾರ ಅವರೂ ಒಂದಾಗಿರಬೇಕೆಂದು (ಯೋಹಾನ – 17:22)'' ಇಬ್ಬರ ನಡುವೆ ಏನೊಂದು ಇಲ್ಲ, ನಿನ್ನೆಲ್ಲಾ ಜೀವಿತವನ್ನು ಯೇಸುಕ್ರಿಸ್ತನಿಗೆ ಸದಾ ಕಾಲವೂ ತೆರೆದಿಟ್ಟಿರಬೇಕು. ಆತನೊಡನೆ ಮುಗ್ಧತೆಯ ನಟನೆ ಮಾಡಬೇಡ, ದೇವರಿಂದಲೇ ಹೊರತು ಬೇರೊಂದು ಮೂಲದಿಂದ ನಿನ್ನ ಜೀವನವನ್ನು ಪಡೆಯುತ್ತಿರುವೆಯೋ ? ಆತನಲ್ಲದೆ, ಬೇರೊಬ್ಬನ ಮೇಲೆ, ಬೇರೆ ಮೂಲದ ಮೇಲೆ ನೀನು ಆಧಾರಗೊಂಡಿದ್ದರೆ, ಆತನು ಯಾವಾಗ ಹೊರಟು ಹೋದನೋ ನೀನೆಂದಿಗೂ ಅರಿಯಲಾರಿ.

ಹೊಸದಾಗಿ ಹುಟ್ಟುವುದೆಂದರೆ ಅದು ಸಾಮಾನ್ಯವಾದ ನಮ್ಮ ಗ್ರಹಿಕೆಗೆಗಿಂತಲೂ ತುಂಬಾ ಹಿರಿದಾದದ್ದು. ಅದು ನಮಗೆ ಹೊಸ ದೃಷ್ಟಿಯನ್ನು ಕೊಡುತ್ತದೆ ಮತ್ತು ಎಲ್ಲಾ ವಿಷಯಗಳಲ್ಲಿಯೂ ನಾವು ನಿತ್ಯ ಹೊಸತನದಿಂದ ಇರುವಂತೆಯೂ ಮತ್ತು ಎಂದಿಗೂ ಬತ್ತಿಹೋಗದ ದೇವರ ಜೀವಿತದಲ್ಲಿ ನಮ್ಮನ್ನಿರಿಸುತ್ತದೆ.

# ದೇವರು ಜ್ಞಾಪಕದಲ್ಲಿಟ್ಟುಕೊಂಡಿರುವುದನ್ನು ಸ್ಮರಿಸು

**'' ನೀನು ಯೌವನದಲ್ಲಿ ನನ್ನ ಮೇಲೆ ಇಟ್ಟಿದ್ದ ಪ್ರೀತಿಯನ್ನು ಜ್ಞಾಪಕದಲ್ಲಿಟ್ಟಿದ್ದೇನೆ'' – (ಯೆರೆಮಿಯಾ – 2:2)**

ನಾನು ಈವರೆಗೂ ಇದ್ದ ಹಾಗೆ ದೇವರಲ್ಲಿ ಪ್ರೀತಿ ಸೌಹಾರ್ಧ ತೆಗಳನಿಟ್ಟುಕೊಂಡಿ ರುವೆನೋ ಅಥವಾ ತಾನಾಗಿಯೇ ದೇವರು ನನ್ನನ್ನು ಪ್ರೀತಿಸಲಿ ಎಂದು ನಿರೀಕ್ಷಿಸುತ್ತಿರುವೆನೊ ? ನನ್ನ ಜೀವಿತದ ಚಿಕ್ಕಪುಟ್ಟವು ಮೊದಲುಗೊಂಡು ಎಲ್ಲಾ ಸಂಗತಿಗಳೂ ಆತನ ಹೃದಯವನ್ನು ಹರ್ಷಪಡಿಸುತ್ತಿರುವವೋ ಅಥವಾ ಎಲ್ಲಾ ವಿಷಯಗಳೂ ಪ್ರಯಾಸಕರವಾಗಿ ಪರಿಣಮಿ ಸುತ್ತಿರುವ ನಿಮಿತ್ತ ನಾನು ಯಾವಾಗಲೂ ಕುಂಯ್‌ಗುಟ್ಟುತ್ತಿರುವೆನೋ ? ದೇವರು ಯಾವುದನ್ನು ಅಮೂಲ್ಯ ವೆನ್ನುತ್ತಾನೆಯೋ ಅದನ್ನು ಮರೆತ ಆತ್ಮದಲ್ಲಿ ಆನಂದವೇ ಇರುವುದಿಲ್ಲ. ಯೇಸುಕ್ರಿಸ್ತನಿಗೆ ನನ್ನ ಅಗತ್ಯವಿದೆ ಎಂದು ಯೋಚಿಸುವುದು ಒಂದು ಮಹತ್ವದ ಸಂಗತಿ – ''ಕುಡಿಯುವದಕ್ಕೆ ನೀರು ಕೊಡು'' (ಯೋಹಾನ – 4:7). ಕಳೆದ ವಾರ ನಾನೆಷ್ಟು ಒಲವನ್ನು ಆತನಿಗೆ ತೋರಿಸಿದ್ದೇನೆ ? ನನ್ನ ಜೀವಿತವು ಆತನ ವ್ಯಕ್ತಿತ್ವವನ್ನು ಸೂಕ್ತ ರೀತಿಯಲ್ಲಿ ವ್ಯಕ್ತಪಡಿಸಿದೆಯೋ ?

ದೇವರು ತನ್ನ ಜನರಿಗೆ ಹೇಳುತ್ತಿರುವನು – ''ಈಗ ನೀವು ನನ್ನೊಡನೆ ಒಲವಿನಿಂದಿಲ್ಲ, ಆದರೆ ಹಿಂದೆ ನೀವು ಒಲವಿನಿಂದಿದ್ದ ಕಾಲವನ್ನು ಸ್ಮರಿಸುವೆನು'' ''ನಿನ್ನ ಯೌವನದಲ್ಲಿ ನನ್ನ ಮೇಲೆ ಇಟ್ಟಿದ್ದ ಪ್ರೀತಿಯನ್ನು ವಿವಾಹಕಾಲದ ನಿನ್ನ ಪ್ರೇಮವನ್ನು ನಿನ್ನ ಹಿತಕ್ಕಾಗಿ ಜ್ಞಾಪಕದಲ್ಲಿಟ್ಟಿದ್ದೇನೆ''. ಆತನ ಮೇಲಿರುವ ನನ್ನ ಶ್ರದ್ಧೆಯನ್ನು ಸಿದ್ಧಾಂತ ಪಡಿಸಲು ನಾನು ನಿಶ್ಚಿತ ಕ್ರಮವನ್ನು ಈಗ ಮೀರಿದಾಗ ಪ್ರಾರಂಭದಲ್ಲಿ ಯೇಸುಕ್ರಿಸ್ತನಲ್ಲಿ ನಾನಿಟ್ಟಿದ್ದ ಮಿತಿ ಮೀರಿದ ಪ್ರೀತಿಯು ಈಗಲೂ ನನ್ನಲ್ಲಿ ತುಂಬಿತುಳುಕುತ್ತಿದೆಯೋ ? ಆತನನ್ನೇ ಹೊರತು ಬೇರೆಯಾರನ್ನು ನಾನು ಲೆಕ್ಕಿಸದಿದ್ದ ಆ ಕಾಲವನ್ನು ನಾನಿನ್ನೂ ಸ್ಮರಿಸುತ್ತಿರುವುದನ್ನು ಆತನು ಈಗಲೂ ನನ್ನಲ್ಲಿ ಕಾಣುವನೋ ? ಈಗಲೂ ನಾನು ಹಾಗೆಯೇ ಇರುವೆನೋ ಅಥವಾ ಆತನಿಗೆ ಪ್ರೀತಿಯನ್ನು ತೋರಿಸುವಾಗ ಲೌಕಿಕವಾಗಿ ಚತುರನಾಗಿರುವೆನೋ ? ಆತನು ನನ್ನನ್ನೆಲ್ಲಿಗೆ ಕರೆದೊಯ್ಯುವನೆಂಬುದನ್ನು ಎಳ್ಳಷ್ಟು ಚಿಂತಿಸದ ಮಟ್ಟಿಗೆ ನಾನು ಆತನನ್ನು ಪ್ರೀತಿಸುತ್ತಿರುವೆನೋ? ಅಥವಾ ನನಗೆ ಸಲ್ಲಬೇಕಾದ ಗೌರವವೆಷ್ಟೆಂದು ದೃಷ್ಟಿಸುತ್ತಾ ಅದಕ್ಕೆ ತಕ್ಕಷ್ಟು ಮಾತ್ರ ಆತನ ಸೇವೆಯನ್ನು ಮಾಡಬೇಕೆಂದು ವಿವೇಚಿಸುತ್ತಿರುವೆನೋ ?

ನನ್ನ ಬಗ್ಗೆ ದೇವರು ಏನು ಜ್ಞಾಪಿಸಿಕೊಳ್ಳುವನೆಂಬುದನ್ನು ನಾನು ನೆನಸಿಕೊಳ್ಳುತ್ತಾ ಇರುವಾಗ, ದೇವರು ಈ ವರೆಗೂ ಇದ್ದ ಹಾಗೆ ಈಗ ಇಲ್ಲವೆಂಬಂತೆ ನಾನು ಕಂಡುಕೊಂಡಿದ್ದರೆ, ಅದು ನನ್ನಲ್ಲಿ ನಾಚಿಕೆ ಮತ್ತು ದೈನ್ಯತೆಗಳನ್ನುಂಟು ಮಾಡಲಿ, – ಯಾಕೆಂದರೆ ಪಶ್ಚಾತ್ತಾಪವನ್ನುಂಟು ಮಾಡುವ ದೈವಿಕ ವ್ಯಥೆಯನ್ನು ಆ ನಾಚಿಕೆಯು ನನ್ನಲ್ಲುಂಟುಮಾಡುವುದು. ''ದೇವರ ಚಿತ್ತಾನುಸಾರವಾಗಿರುವ ದುಃಖವು ಮಾನಸಾಂತರ ವನ್ನುಂಟು ಮಾಡಿ, ರಕ್ಷಣೆಗೆ ಕಾರಣ ವಾಗಿದೆ ''– (2ಕೊರಿ 7:10)

# ನಾನು ದೃಷ್ಟಿಸುತ್ತಿರುವುದೇನನ್ನು ?

**''ನನ್ನ ಕಡೆಗೆ ತಿರುಗಿಕೊಳ್ಳಿರಿ, ರಕ್ಷಣೆಯನ್ನು ಹೊಂದಿಕೊಳ್ಳಿರಿ'' – (ಯೆಶಾಯ – 45:22)**

ದೇವರು ತಾನೇ ನಮ್ಮ ಬಳಿಗೆ ಆಶೀರ್ವಾದಗಳೊಡನೆ ಬಂದು ನಮ್ಮನ್ನು ರಕ್ಷಿಸಲೆಂದು ನಾವು ಅಪೇಕ್ಷಿಸುತ್ತಿರುವೆವೋ ? ''ನನ್ನ ಕಡೆಗೆ ತಿರುಗಿಕೊಂಡು, ನೀವು ರಕ್ಷಣೆ ಹೊಂದಿರಿ .....'' ದೇವರ ಮೇಲೆ ಏಕಾಗ್ರತೆಯನ್ನಿರಿಸುವುದು ಅಧ್ಯಾತ್ಮಿಕ ಕ್ಷೇತ್ರದಲ್ಲಿ ತುಂಬಾ ಕಷ್ಟಕರವಾದದ್ದು. ಆತನ ಆಶೀರ್ವಾದಗಳೇ ಇದನ್ನು ಕಷ್ಟಕರವಾಗಿ ಮಾಡುತ್ತವೆ; ತೊಂದರೆಗಳು ಬಹುತೇಕ ಯಾವಾಗಲೂ ನಾವು ದೇವರನ್ನು ದೃಷ್ಠಿಸುವಂತೆ ಮಾಡುತ್ತವೆ. ಆತನ ಆಶೀರ್ವಾದಗಳಾದರೋ ನಾವು ಬೇರೊಂದು ಕಡೆ ದೃಷ್ಟಿಸುವಂತೆ ಮಾಡುವವು. ಪರ್ವತಪ್ರಸಂಗದ ಬೋಧನೆಗಳ ಪರಿಣಾಮವು – ನಿಮ್ಮ ತನು, ಮನ, ಹೃದಯದ ಎಲ್ಲಾ ಭಾವನೆಗಳೂ ಕ್ರಿಸ್ತೇಸುವಿನಲ್ಲಿ ಏಕಾಗ್ರತೆಗೊಳ್ಳುವತನಕ ನಿಮ್ಮ ಎಲ್ಲಾ ಆಸಕ್ತಿಗಳನ್ನು ಸಂಕುಚಿತಗೊಳಿಸಿರಿ ಎಂಬುದೇ.

ನಮ್ಮಲ್ಲಿ ಅನೇಕರು ಕ್ರೈಸ್ತನಾದವನು ಹೇಗಿರಬೇಕೆಂಬ ಬೌದ್ಧಿಕ ಪರಿಕಲ್ಪನೆಯನ್ನು ಹೊಂದಿರುತ್ತೇವೆ ಮತ್ತು ಅದನ್ನೇ ಕ್ರೈಸ್ತ ಭಕ್ತರ ಜೀವಿತದಲ್ಲಿ ಕಾಣಲು ನಾವು ಇಚ್ಛಿಸುವದೇ, ದೇವರ ಮೇಲೆ ಏಕಾಗ್ರತೆ ಯನ್ನಿರಿಸುವ ದಾರಿಯಲ್ಲಿ ಅಡೆತಡೆಯನ್ನೊಡ್ಡುತ್ತದೆ. ಇದು ರಕ್ಷಣೆಯಲ್ಲ, ರಕ್ಷಣೆಯು ಅಷ್ಟು ಸರಳವೂ ಅಲ್ಲ. ''ನನ್ನ ಕಡೆಗೆ ತಿರುಗಿರಿ, ರಕ್ಷಿಸಲ್ಪಡುವಿರಿ'' ಎಂದು ಅಲ್ಲ , ಆದರೆ ''ನೀವು ರಕ್ಷಿಸಲ್ಪಟ್ಟಿರುವಿರಿ'' ಎಂಬುದೇ. ನಾವು ಯಾವುದನ್ನರಸಿ ದೃಷ್ಟಿಸುತ್ತಿರುವೆವೋ ಅದನ್ನು, ನಾವು ದೇವರಲ್ಲಿ ಏಕಾಗ್ರ ಚಿತ್ತವುಳ್ಳವ ರಾಗಿದ್ದರೆ ಕಂಡು ಕೊಳ್ಳುತ್ತೇವೆ. ನಾವು ದೇವರಲ್ಲಿ ಮನಸ್ಸಿಡದೆ, ಅನ್ಯಮನಸ್ಕರಾಗಿ ದೇವರ ಮೇಲೆ ಮುನಿಸಿಕೊಂಡಿರುತ್ತೇವೆ. ಆತನಾದರೋ ಸದಾ ಹೇಳುತ್ತಲೇ ಇರುವನು – ''ಕಣ್ಣೆತ್ತಿ ದೃಷ್ಟಿಸಿರಿ ಮತ್ತು ರಕ್ಷಣೆ ಹೊಂದಿರಿ'' ನಮ್ಮ ತೊಂದರೆಗಳು, ಮತ್ತು ಶೋಧನೆಗಳು, ಈ ಬೇಸಿಗೆಯಲ್ಲಿ ಏನು ಮಾಡಬೇಕೆಂದಿ ರುವದರ ಬಗ್ಗೆ ಮನಸ್ಸಿನ ಹರಡಿಕೆಗಳು, ಇಲ್ಲವೇ ನಾಳಿನ ಬೇಕು ಬೇಡಗಳು ಇವೆಲ್ಲವೂ ದೇವರನ್ನು ದೃಷ್ಟಿಸಿದಾಕ್ಷಣ ಮಾಯವಾಗಿ ಬಿಡುತ್ತವೆ.

ನಿನ್ನನ್ನು ನೀನೇ ಬಡಿದೆಚ್ಚರಿಸು ಮತ್ತು ದೇವರನ್ನು ದೃಷ್ಟಿಸು. ಆತನಲ್ಲಿ ನಿರೀಕ್ಷೆಯನ್ನು ಬೆಳೆಸಿಕೋ. ನೂರೊಂದು ವಿಷಯಗಳು ನಿನ್ನನ್ನು  ಒತ್ತಾಯ ಪಡಿಸುತ್ತಿದ್ದರೂ ಚಿಂತೆಯಿಲ್ಲ, ದೃಢನಿಶ್ಚಯದಿಂದ ಅವುಗಳನ್ನು ಬದಿಗಿರಿಸಿ ದೇವರನ್ನು ದೃಷ್ಟಿಸು. ''ನನ್ನ ಕಡೆಗೆ ತಿರುಗಿರಿ'' ನೀನು ದೃಷ್ಟಿಸಿದ ಕ್ಷಣವೇ ರಕ್ಷಣೆಯು ಅಲ್ಲಿಯೇ ಇದೆ.

# ಒಳನೋಟದಿಂದಾದ ರೂಪಾಂತರ

**''ನಾವೆಲ್ಲರೂ ಮುಸುಕು ತೆಗೆದಿರುವ ಮುಖದಿಂದ ಕರ್ತನ ಪ್ರಭಾವವನ್ನು ದರ್ಪಣದಲ್ಲಿ ಕಾಣಿಸುತ್ತದೋ ಎಂಬಂತೆ ದೃಷ್ಟಿಸುವವರಾಗಿದ್ದು'' - (2ಕೊರಿಂಥ-3:18)**

ದೇವರ ಸನ್ನಿಧಿಯಲ್ಲಿ ಮುಸುಕಿಲ್ಲದ ಯಥಾರ್ಥತ್ವವೇ ಕ್ರೈಸ್ತನಾದವನ ಬಾಹ್ಯಜೀವಿತದ ಲಕ್ಷಣವಾಗಿದೆ ಮತ್ತು ಅಂಥಾ ಜೀವಿತವೇ ಇತರರಿಗೆ ದರ್ಪಣವಾಗಿರುತ್ತದೆ. ದೇವರಾತ್ಮನು ನಮ್ಮನ್ನು ಆವರಿಸಿದಾಗ, ನಾವು ರೂಪಾಂತರಗೊಂಡು, ದೇವರನ್ನು ಆತನ ಪ್ರಭಾವವನ್ನೂ ದೃಷ್ಟಿಸುವುದರಿಂದ ನಾವು ದರ್ಪಣಗಳಾಗಿಬಿಡುತ್ತೇವೆ. ವ್ಯಕ್ತಿಯೊಬ್ಬನು ದೇವರ ಪ್ರಭಾವದ ರೂಪದರ್ಶಿಯಾಗಿದ್ದರೆ, ಅವನು ಯೇಸುಸ್ವಾಮಿಯ ಸ್ವಭಾವವನ್ನು ಪ್ರತಿಫಲನ ಮಾಡುತ್ತಿರುವ ದರ್ಪಣವೆಂದು ನಿನ್ನ ಅಂತರಂಗಕ್ಕೆ ತೋರಿಬರುತ್ತದೆ. ನಿನ್ನೊಳಗಿರುವ ಅಂಥಾ ದರ್ಪಣವನ್ನು ಮುಸುಕು ಮಾಡುವಂಥವುಗಳ ಬಗ್ಗೆ ಎಚ್ಚರ ದಿಂದಿರಬೇಕು. ಸಾಧಾರಣವಾಗಿ ನಿನ್ನಲ್ಲಿರುವ ಉತ್ತಮವೇ ಅದನ್ನು ಮುಸುಕು ಮಾಡುವುದು, ಆದ ಕಾರಣ ಉತ್ತಮವು ಎಂದಿಗೂ ಅತ್ಯುತ್ತಮವಲ್ಲ.

ನಮ್ಮ ಜೀವಿತವನ್ನು ದೇವರ ಮುಂದೆ ತೆರೆದಿಡುವ ಏಕಾಗ್ರತೆಯೇ ನಮ್ಮ ಮತ್ತು ನಿಮ್ಮ ಜೀವಿತದ ಸುವರ್ಣ ಸೂತ್ರವಾಗಿದೆ. ಉಳಿದೆಲ್ಲವೂ ಅಂದರೆ ನಿನ್ನ ಕೆಲಸ, ಉಡುಪು, ಆಹಾರ, ಭೂಮಿಯ ಮೇಲಿರುವುದೆಲ್ಲವನ್ನು - ದೇವರ ಮೇಲಿನ ಏಕಾಗ್ರತೆಯೊಂದನ್ನು ಬಿಟ್ಟು - ಸಂಪೂರ್ಣವಾಗಿ ಬದಿಗೆ ಸರಿಸಿಬಿಡು, ಯಾಕೆಂದರೆ ಬೇರೆಲ್ಲಾ ವಿಷಯಗಳ ಕಾರ್ಯ ನಿರತ ಜೀವನದ ನುಗ್ಗಾಟವೇ ದೇವರ ಮೇಲಿನ ಏಕಾಗ್ರತೆ ಯನ್ನು ಹಿಂದೂಡುತ್ತದೆ. ಜೀವನದುದ್ದಕ್ಕೂ ಸಂಪೂರ್ಣವಾಗಿ ಆತ್ಮೀಕರಾಗಿರುತ್ತಾ ದೇವರ ಪ್ರಭಾವದ ದೃಷ್ಟಿಸುವಿಕೆಯನ್ನು ನಾವು ಕಾಪಾಡಿಕೊಂಡಿರಬೇಕು. ಬೇರೆಲ್ಲಾ ವಿಷಯಗಳು ತಮ್ಮಿಚ್ಛೆಯಂತೆ ತಾವಾಗಿ ಬಂದು ಹೋಗಲಿ, ತಮ್ಮ ಇಚ್ಛೆಯಂತೆ ಬೇರೆ ಜನರೇನೇ ಖಂಡಿಸಲಿ, ಏನಾದರೂ ಆಗಲಿ, ನೀವು ಮಾತ್ರ ಕ್ರಿಸ್ತನೊಂದಿಗೆ ದೇವರಲ್ಲಿ ಮರೆಯಾಗಿಟ್ಟಿರುವ ನಿಮ್ಮ ಜೀವಿತವನ್ನು ಮೊಬ್ಬಾಗಿಸುವಂಥವು ಗಳಲ್ಲೊಂದಕ್ಕೂ ಒಳಬರಲು ಅವಕಾಶ ನೀಡಬೇಡಿರಿ. (ಕೊಲಸ್ಸೆ 3:3) ಆತುರ ತುಂಬಿದ ಜೀವನ ಕ್ರಮದ ದೆಸೆಯಿಂದ ಆತನಲ್ಲಿ ನೆಲೆಗೊಂಡಿರುವ ಈ ಬಾಂಧವ್ಯದಿಂದ ಹೊರಗೆ ಹೋಗಲು ಎಂದೂ ಅವಸರ ಪಡಬೇಡಿರಿ. ಇದೊಂದು ವಿಷಯವು ನಮ್ಮನ್ನು ಸುಲಭವಾಗಿ ಹೊಯ್ದಾಡುವಂತೆ ಮಾಡುತ್ತದೆಯಾದರೂ ನೀವು ಹಾಗಾಗಬಾರದು. ಕ್ರಿಸ್ತೀಯ ಜೀವಿತದ ಅತ್ಯಂತ ಕಠಿಣ ಶಿಕ್ಷಣದಿಂದ ನಾವು ಕಲಿಯ ಬೇಕಾಗಿರುವುದು - ''ಕರ್ತನ ಪ್ರಭಾವವು ದರ್ಪಣದಲ್ಲಿ ಕಾಣಿಸುತ್ತದೋ'' ಎಂಬಂತೆ ಏಕಾಗ್ರತೆಯಿಂದ ದೃಷ್ಟಿಸುವುದೇ.

# ಸಂಪೂರ್ಣ ಸ್ವಾಧೀನ ಪಡಿಸಿಕೊಳ್ಳುವ ನಿರ್ದೇಶನ

**''ಇದಕ್ಕೋಸ್ಕರ ನಿನಗೆ ಕಾಣಿಸಿಕೊಂಡಿದ್ದೇನೆ'' - (ಅ.ಕೃ-26:16)**

ದಮಸ್ಕದ ದಾರಿಯಲ್ಲಿ ಪೌಲನಿಗಾದ ದರ್ಶನವು ಗತಿಸಿಹೋಗುವಂಥಾ ಭಾವೋದ್ವೇಗವಲ್ಲ, ಪರವಶತೆಯೂ ಅಲ್ಲ , ಅದೊಂದು ಅತ್ಯಂತ ಸ್ಪಷ್ಟವಾದ, ಮಹತ್ವಪೂರ್ಣ ನಿರ್ದೇಶನಗಳನ್ನೀಯುವ ದರ್ಶನ. ಅಲ್ಲಿ ಪೌಲನು ಹೇಳಿದ್ದು - ''ಪರಲೋಕದಿಂದ ನನಗೆ ಉಂಟಾದ ಆ ದರ್ಶನಕ್ಕೆ ನಾನು ಅವಿಧೇಯನಾಗದೆ'' (ಅ.ಕೃ. 26:19). 'ನಿನ್ನ ಇಡೀ ಜೀವಿತವೆಲ್ಲವೂ ನನ್ನಿಂದ ಆಳಲ್ಪಡಬೇಕು.; ನಿನ್ನದಾದುವುಗಳೇನೂ ನಿನಗಿರಬಾರದು. ನಿನ್ನದೇ ಆದ ಗುರು ಇರಬಾರದು ಮತ್ತು ನನ್ನದಲ್ಲದ (ಕ್ರಿಸ್ತನದಲ್ಲದ) ಯಾವ ಉದ್ದೇಶವೂ ನಿನಗಿರಬಾರದು' ಎಂದು ಖಂಡಿತವಾಗಿ ಯೇಸುಸ್ವಾಮಿಯವರು ಪೌಲನಿಗೆ ಹೇಳಿದನು (ಯೋಹಾನ 15:16 ನೋಡಿರಿ) ''ನಾನು ನಿಮ್ಮನ್ನು ಆರಿಸಿತೆಗೆದು ಕೊಂಡಿದ್ದೇನೆ'' - ನಮಗೂ ಹೇಳಿದನೇ ?

ನಾವು ಹೊಸದಾಗಿ ಹುಟ್ಟಿದಾಗ ದೇವರಿಂದ ದರ್ಶನಗಳು ನಮಗುಂಟಾಗುತ್ತವೆ. ಸ್ವಲ್ಪಮಟ್ಟಿಗಾದರೂ ನಾವು ಅಧ್ಯಾತ್ಮಿಕರಾಗಿದ್ದರೆ, ನಾವು ಹೇಗಿರಬೇಕೆಂದು ಯೇಸುಕ್ರಿಸ್ತನು ಬಯಸುವ ದರ್ಶನಗಳು ನಮಗುಂಟಾಗುತ್ತವೆ, ನಮಗೆ ಉಂಟಾದ ದರ್ಶನಕ್ಕೆ ನಾವು ಅವಿಧೇಯರಾಗದಿರುವುದನ್ನು ಕಲಿತು ಕೊಳ್ಳುವುದು ತುಂಬಾ ಪ್ರಾಮುಖ್ಯದ ವಿಷಯ ಮತ್ತು ಅದನ್ನು ಸಾಧಿಸಲಾಗದು ಎಂದು ಹೇಳಬಾರದು. ದೇವರು ಲೋಕವನ್ನು ಪಾಪದಿಂದ ಬಿಡುಗಡೆ ಮಾಡಿದ್ದಾನೆಂದು ತಿಳಿಯುವುದಷ್ಟೇ ಸಾಲದು, ಯೇಸು ಕ್ರಿಸ್ತನು ವಾಸ್ತವದಲ್ಲಿ ಮಾಡಿರುವದೆಲ್ಲವನ್ನೂ ಪವಿತ್ರಾತ್ಮನು ನನ್ನ ಜೀವಿತದಲ್ಲಿ ಫಲಪ್ರದ ಗೊಳಿಸುವನೆಂದು ತಿಳಿಯಬೇಕು; ಆತನೊಂದಿಗೆ ವೈಯಕ್ತಿಕ ಸಂಬಂಧವಿರುವ ತಳಹದಿಯನ್ನೇ ನಾನು ಹೊಂದಬೇಕು. ಪೌಲನಿಗೆ ಸಾರಿ ಹೇಳಲು ಯಾವುದೇ ಸಂದೇಶವನ್ನಾಗಲೀ, ಸಿದ್ಧಾಂತ ವನ್ನಾಗಲೀ ಕೊಟ್ಟಿರಲಿಲ್ಲ, ಆದರೆ ಪೌಲನು ಪೂರ್ಣ ಸ್ಪಷ್ಟವಾದ, ವ್ಯಕ್ತಿಗತವಾದ, ಪರವಶ ಗೊಳಿಸುವ ಯೇಸುಕ್ರಿಸ್ತನ ಅನ್ಯೋನ್ಯತೆಯಲ್ಲಿ ಸೇರಿಸಲ್ಪಟ್ಟನು. ಅ.ಕೃ. 26:16ನೇ ವಚನವು ಅತ್ಯಂತ ಪರಿಣಾಮಕಾರಿ ಯಾಗಿದೆ - ''ನಿನ್ನನ್ನು ನನ್ನ ಸೇವಕನನ್ನಾಗಿಯೂ ಮತ್ತು ಸಾಕ್ಷಿಯಾಗಿಯೂ'' ಕ್ರಿಸ್ತನೊಂದಿಗೆ ವ್ಯಕ್ತಿಗತ ಸಂಬಂಧವಲ್ಲದೆ, ಅಲ್ಲಿ ಬೇರೇನೂ ಇಲ್ಲ. ಪೌಲನು ವ್ಯಕ್ತಿಗೆ ನಿಷ್ಠೆಯುಳ್ಳವನಾಗಿದ್ದನೇ ವಿನಃ ಹೇತುವಿಗಲ್ಲ, ಆತನು ಪರಿಪೂರ್ಣವಾಗಿ ಯೇಸು ಕ್ರಿಸ್ತನವನಾಗಿದ್ದನು. ಬೇರಾವುದನ್ನು ದೃಷ್ಟಿಸಲಿಲ್ಲ; ಬೇರೆ ಯಾವುದಕ್ಕಾಗಿಯೂ ಆತನು ಜೀವಿಸಲಿಲ್ಲ. ''ನಾನು ಶಿಲುಬೆಗೆ ಹಾಕಲ್ಪಟ್ಟವನಾದ ಯೇಸುಕ್ರಿಸ್ತನನ್ನೇ ಹೊರತು ಬೇರೆಯಾವುದನ್ನು ತಿಳಿಯದವನಾಗಿ ನಿಮ್ಮಲ್ಲಿ ಇರುವೆನೆಂದು ತೀರ್ಮಾನಿಸಿಕೊಂಡೆನು.'' (1 ಕೊರಿಂಥ 2:2)

# ದೇವರಿಗೆ ಸ್ಥಳವಿರಲಿ

**''ತನ್ನ ಕೃಪೆಯಿಂದ ಕರೆದ ದೇವರು'' – (ಗಲಾತ್ಯ -1:15)**

ದೇವರ ಸೇವಕರಾದ ನಾವು ದೇವರಿಗೆ ಸ್ಥಳಾವಕಾಶ – ಬೇಕಾದಷ್ಟು ಚಲನಾವಕಾಶ ವನ್ನು – ಕೊಡಲು ಕಲಿಯಬೇಕು. ಲೆಕ್ಕಾಚಾರ ಮತ್ತು ಅಂದಾಜು ಮಾಡಿ, ಇದು ಮತ್ತು ಅದು ಸಂಭವಿಸುವದೆಂದು ನುಡಿಯುತ್ತೇವೆ. ಆದರೆ ದೇವರು ತನ್ನಿಷ್ಟದಂತೆ ಆಗಮಿಸಿದಾಗ ಆತನಿಗೆ ಸ್ಥಳ ಕೊಡುವುದನ್ನು ನಾವು ಮರೆಯುತ್ತೇವೆ. ಒಂದು ವೇಳೆ ನಾವು ಎಣಿಸದ ರೀತಿಯಲ್ಲಿ ನಮ್ಮ ಪ್ರಾರ್ಥನಾಕೂಟಗಳಿಗೆ ಅಥವಾ ನಮ್ಮ ಬೋಧನೆಗಳಿಗೆ ದೇವರು ಆಗಮಿಸಿದರೆ ನಾವು ವಿಸ್ಮಯ ಚಕಿತರಾಗಬಹುದೇ ? ನಿರ್ದಿಷ್ಟವಾದ ದಾರಿ ಯೊಂದರಲ್ಲಿ ದೇವರು ಬರುವನೆಂದು ನೀನು ಆತನ ದಾರಿನೋಡಬೇಡ ಆದರೆ ಆತನನ್ನು ಕಾಣಲು ಎದುರು ನೋಡುತ್ತಿರಬೇಕು. ಆತನಿಗೆ ಸ್ಥಳಾವಕಾಶವನ್ನೊದಗಿಸುವ ರೀತಿಯೇ ಇದು. ಆತನ ಆಗಮನವನ್ನು ನಿರೀಕ್ಷಿಸು, ಆದರೆ ನಿಶ್ಚಿತ ಮಾರ್ಗದಲ್ಲಿ ಆತನನ್ನು ನಿರೀಕ್ಷಿಸಬೇಡ. ನಾವು ದೇವರನ್ನು ಎಷ್ಟೇ ಹೆಚ್ಚಾಗಿ ತಿಳಿದಿದ್ದರೂ ನಮಗರಿವಿರಬೇಕಾದ ಮುಖ್ಯ ವಿಷಯವೆಂದರೆ, ಆತನು ಯಾವುದೇ ಕ್ಷಣದಲ್ಲಿ ಆಗಮಿಸಿ ಒಳ ನುಗ್ಗಬಹುದು, ಇಂಥಾ ವಿಸ್ಮಯ ಭರಿತ ವಿಷಯವನ್ನು ನಾವು ನಿರ್ಲಕ್ಷಿಸಿದಾಗ್ಯೂ ದೇವರು ಮಾತ್ರ ಬೇರಿನ್ನಾವ ರೀತಿಯಲ್ಲಿಯೂ ಕಾರ್ಯ ಸಾಧಿಸುವುದಿಲ್ಲ. ಆಕಸ್ಮಿಕವಾಗಿ ಧಿಡೀರನೆ ದೇವರು ನಮ್ಮ ಜೀವಿತವನ್ನು ಸಂಧಿಸುತ್ತಾನೆ. ''ತನ್ನ ಕೃಪೆಯಿಂದ ಕರೆದ ದೇವರು.''

ದೇವರ ವಿಸ್ಮಯ ಭರಿತ ಶಕ್ತಿಯು ನಿಮ್ಮ ಬಲಗಡೆಗೂ ಮತ್ತು ಎಡಗಡೆಯೂ ಹೊರಚಿಮ್ಮುವಷ್ಟು ನಿಕಟವಾಗಿರುವಂತೆ ನಿಮ್ಮ ಜೀವಿತವನ್ನು ಸದಾ ದೇವರ ಸಂಪರ್ಕದಲ್ಲಿ ರಿಸಿಕೊಳ್ಳಿರಿ. ಯಾವಾಗಲೂ ಆತನ ನಿರೀಕ್ಷಣೆಯಲ್ಲಿಯೇ ಇರಬೇಕು ಮತ್ತು ತನ್ನಿಚ್ಛೆಯಂತೆ ಆಗಮಿಸುವ ದೇವರಿಗೆ ಸ್ಥಳ ಕೊಡಲು ಎಚ್ಚರ ವಹಿಸಬೇಕು.

# ಮತ್ತೊಮ್ಮೆ ದೃಷ್ಟಿಸಿರಿ ಮತ್ತು ಪ್ರತಿಷ್ಠಿಸಿಕೊಳ್ಳಿರಿ

**''ಅಡವಿಯ ಹುಲ್ಲಿಗೆ ದೇವರು ಹೀಗೆ ಉಡಿಸಿದರೆ, ಅದಕ್ಕಿಂತ ಎಷ್ಟೋ ಹೆಚ್ಚಾಗಿ ಉಡಿಸಿ ತೊಡಿಸುವನಲ್ಲವೇ'' - (ಮತ್ತಾಯ -6:30)**

ನಾವು ಸರಳರಲ್ಲದಿದ್ದರೆ ಯೇಸುಸ್ವಾಮಿಯ ಇಂಥಾ ಸಾಮಾನ್ಯ ಹೇಳಿಕೆ ಗಳು ನಮ್ಮನ್ನು ಸದಾ ತಬ್ಬಿಬ್ಬುಗೊಳಿಸುತ್ತವೆ. ಯೇಸುಕ್ರಿಸ್ತನ ಸರಳತೆಯಷ್ಟು ನಾವು ಸರಳರಾಗಿ ರುವುದು ಹೇಗೆ ? ಆತನ ಆತ್ಮವನ್ನು ಸ್ವೀಕರಿಸುವ ಮೂಲಕ ; ಆತನನ್ನು ಗುರುತಿಸಿ ಮತ್ತು ಆತನನ್ನು ಆತುಕೊಳ್ಳುವ ಮೂಲಕ ; ದೇವರ ವಾಕ್ಯವನ್ನು ಆತನು ಪ್ರಕಟಿಸುತ್ತಿರುವಾಗ ಆತನಿಗೆ ವಿಧೇಯರಾಗುವ ಮೂಲಕ ; ಆಗ ನಮ್ಮ ಜೀವಿತವು ಅಮೋಘವಾದ ಸರಳ ಜೀವಿತವಾಗುತ್ತದೆ. ''ಯೋಚಿಸಿ ತಿಳಿಯಿರಿ'' ಯೇಸುಸ್ವಾಮಿಯು ಹೇಳಿದ್ದು, ನೀವು ದೇವರೊಂದಿಗೆ ಯೋಗ್ಯ ಬಾಂಧವ್ಯವನ್ನು ಹೊಂದಿದ್ದರೆ, ''ಅಡವಿಯ ಹುಲ್ಲಿಗೆ ಹೀಗೆ ಉಡಿಸಿದ ದೇವರು ಅದಕ್ಕಿಂತ ಎಷ್ಟೋ ಹೆಚ್ಚಾಗಿ ನಿಮಗೆ ಉಡಿಸಿ ತೊಡಿಸುವನಲ್ಲವೇ ?'' ಆತ್ಮೀಕ ಸಂಬಂಧಗಳಲ್ಲಿ ಪ್ರತಿಯೊಂದು ಸಲ ನಾವು ಹಿಂದೇಟು ಹಾಕಿದ್ದ ಕಾರಣವೆಂದರೆ ನಾವು ಯೇಸುಕ್ರಿಸ್ತ ನಿಗಿಂತಲೂ ಹೆಚ್ಚು ತಿಳಿದವರಂತೆ ಉದ್ಧಟರಾಗಿ ನಮ್ಮನ್ನು ನಾವು ಗುರುತಿಸಿಕೊಂಡಿರುತ್ತೇವೆ. ಪ್ರಪಂಚದ ಚಿಂತೆಗಳನ್ನು ಒಳಗೆ ಬರಮಾಡಿಕೊಂಡಿದ್ದೇವೆ ಮತ್ತು ಪರಲೋಕದ ತಂದೆಯ ''ಎಷ್ಟೋ ಹೆಚ್ಚಾಗಿ'' ಎಂಬುದನ್ನು ಮರೆತು ಬಿಟ್ಟಿದ್ದೇವೆ. (ಮತ್ತಾಯ - 13:22)

''ಆಕಾಶದಲ್ಲಿ ಹಾರಾಡುವ ಹಕ್ಕಿಗಳನ್ನು ನೋಡಿರಿ'' - ತಮ್ಮೊಳಗಿರುವ ಜೀವನಿಯಮಕ್ಕೆ ಅಂದರೆ ಪ್ರಕೃತಿಯ ನಿಯಮಕ್ಕೆ ವಿಧೇಯರಾಗಿರುವುದೊಂದೇ ಅವುಗಳ ಗುರಿ; ಮತ್ತು ದೇವರು ಅವುಗಳನ್ನು ಸಾಕಿ ಸಲಹುತ್ತಾನೆ. ನೀನು ದೇವರೊಂದಿಗೆ ಯೋಗ್ಯ ಸಂಬಂಧವನ್ನಿರಿಸಿಕೊಂಡು ಮತ್ತು ನಿನ್ನೊಳಗಿರುವ ದೇವರ ಆತ್ಮನಿಗೆ ವಿಧೇಯನಾದರೆ, ದೇವರು ನಿನ್ನ ರೆಕ್ಕೆಗಳನ್ನು ಕಾಯುವನು ಎಂದು ಯೇಸು ನುಡಿಯುತ್ತಾನೆ.

''ಅಡವಿಯ ಹೂವುಗಳು ಬೆಳೆಯುವ ರೀತಿಯನ್ನು ಯೋಚಿಸಿ, ತಿಳಿಯಿರಿ'' (ಮತ್ತಾಯ - 6:28) ಅವು ಎಲ್ಲಿ ನೆಡಲ್ಪಟ್ಟಿವೆಯೋ ಅಲ್ಲಿಯೇ ಬೆಳೆಯುತ್ತವೆ. ನಮ್ಮಲ್ಲಿ ಅನೇಕರು ದೇವರು ನಮ್ಮನ್ನಿರಿಸಿದ ಸ್ಥಳದಲ್ಲಿ ಬೆಳೆಯಲು ನಿರಾಕರಿಸುತ್ತೇವೆ, ಅದರಿಂದಾಗಿ ನಾವು ಯಾವ ಸ್ಥಳದಲ್ಲಿಯೂ ಬೇರೂರುವುದಿಲ್ಲ. ದೇವರು ನಮಗೆ ಅನುಗ್ರಹಿಸಿದ ಜೀವಿತದ ನೈತಿಕ ವಿಧಿಗೆ ನಾವು ವಿಧೇಯ ರಾಗುವುದಾದರೆ, ಆತನು ನಮ್ಮ ಉಳಿದೆಲ್ಲಾ ವಿಷಯಗಳನ್ನು ತಾನೇ ನೋಡಿಕೊಳ್ಳುತ್ತಾನೆಂದು ಯೇಸು ಸ್ವಾಮಿ ಹೇಳುತ್ತಿದ್ದಾನೆ; ಯೇಸು ಕ್ರಿಸ್ತನು ನಮಗೆ ಸುಳ್ಳನ್ನು ಹೇಳುತ್ತಿದ್ದಾನೆಯೇ ? ಒಂದು ವೇಳೆ ಈ 'ಎಷ್ಟೋ ಹೆಚ್ಚಾಗಿ' ನಮ್ಮ ಅನುಭವಕ್ಕೆ ಬಾರದೇ ಹೋಗಿದ್ದರೆ, ಅದರ ಕಾರಣ, ನಾವು ಜೀವಿತದ ಗೊಂದಲ ಮತ್ತು ಚಿಂತನೆಗಳನ್ನು ಓಲೈಸುತ್ತಾ ನಮಗೆ, ದೇವರು ದಯಪಾಲಿಸಿರುವ ಜೀವ ವಿಧಿಗೆ ನಾವು ವಿಧೇಯರಾಗಲಿಲ್ಲವಾದ್ದರಿಂದಲೇ. ಪೂರ್ಣ ಎಚ್ಚರದಿಂದ ದೇವರ ಕಾರ್ಯಗಳಲ್ಲಿ ಮಗ್ನ ರಾಗಲು ನಾವು ಸ್ವತಂತ್ರರಾಗಿರುವಾಗ, ಅಲ್ಲ ಸಲ್ಲದ ಪ್ರಶ್ನೆಗಳನ್ನು ದೇವರ ಮುಂದೆ ಮಂಡಿಸುತ್ತಾ ಸಮಯವನ್ನೆಷ್ಟು ವ್ಯರ್ಥ ಮಾಡಿರುವೆವು? ದೇವರು ನನ್ನನ್ನು ನೇಮಕ ಮಾಡಿಕೊಂಡಿರುವ ಸಂಗತಿ ಯೊಂದನ್ನು ಬಿಟ್ಟು , ಬೇರೆ ಎಲ್ಲವುದರಿಂದ ಸತತವಾಗಿ ನನ್ನನ್ನು ಪ್ರತ್ಯೇಕಿಸಿಕೊಳ್ಳುತ್ತಾ ಇರುವುದೇ ಪ್ರತಿಷ್ಠೆಗೊಂಡಿರುವುದರ ಅರ್ಥ. ಪ್ರತಿಷ್ಠಿಸಿಕೊಳ್ಳುವುದೆಂದರೆ ಒಮ್ಮೆ ಮಾಡಿ ಮುಗಿಸುವ ಪ್ರಕ್ರಿಯೆ ಯಲ್ಲ, ಅದು ಸತತವಾಗಿ ಮುನ್ನಡೆಯುವ ಕಾರ್ಯವಿಧಿ. ನನ್ನ ಜೀವಿತಕಾಲದ ಪ್ರತಿದಿನವೂ ದೇವರನ್ನು ಅರಿಯಲು ನನ್ನನ್ನು ನಾನು ನಿರಂತರವಾಗಿ ಪ್ರತ್ಯೇಕಿಸಿ ಕೊಳ್ಳುತ್ತಿರುವೆನೋ ?

# ಪುನಃ ದೃಷ್ಟಿಸು ಮತ್ತು ಆಲೋಚಿಸು

**''ನಮ್ಮ ಪ್ರಾಣಧಾರಣೆಗೆ .......... ಚಿಂತೆ ಮಾಡಬೇಡಿರಿ'' – (ಮತ್ತಾ –6:25)**

''ಪ್ರಪಂಚದ ಚಿಂತೆಯೂ, ಐಶ್ವರ್ಯದಿಂದುಂಟಾಗುವ ಮೋಸವೂ'' (ಮತ್ತಾ – 13:22) ನಮ್ಮೊಳಗೆ ನುಗ್ಗಿ ಪ್ರವೇಶ ಮಾಡುವ ವಿಷಯಾಭಿಲಾಷೆ ಮುಂತಾದವುಗಳು, ದೇವರು ತನ್ನ ಕೃಪೆಯಿಂದ ನಮ್ಮೊಳಗೆ ಇರಿಸಿದವುಗಳನ್ನು ಉಸಿರುಗಟ್ಟಿಸುವಂತೆ ಅವು ಮುತ್ತುತ್ತವೆ ಎಂಬ ಒಂದು ಎಚ್ಚರಿಕೆಯನ್ನು ಇಲ್ಲಿ ಪುನರುಚ್ಚರಿಸುವ ಅಗತ್ಯವಿದೆ. ಇವುಗಳ ಉಬ್ಬರವಿಳಿತದ, ಮರುಕಳಿಸುವಿಕೆಯ ಅತಿಕ್ರಮಣದಿಂದ ನಮಗೆಂದಿಗೂ ಬಿಡುಗಡೆಯಿಲ್ಲ. ಒಂದುವೇಳೆ ಇದು ವಸ್ತ್ರ, ಆಹಾರದ ದಾರಿಯಲ್ಲಿ ಬರದಿದ್ದರೆ, ಹಣ ಅಥವಾ ಹಣವಿಲ್ಲದಿ ರುವಿಕೆಯ ದಾರಿಯಲ್ಲಿ ಅದು ಬಂದೇ ಬರುತ್ತದೆ; ಸ್ನೇಹಿತರು, ಸ್ನೇಹಿತರಿಲ್ಲದಿರುವಿಕೆ; ಅಥವಾ ಕಠಿಣ ಪರಿಸ್ಥಿತಿಗಳ ದಾರಿಯಲ್ಲಿ ಅದು ಬಂದೇ ಬರುತ್ತದೆ. ಅದೊಂದು ಏಕಪ್ರಕಾರವಾದ ನಿರಂತರ ಅತಿಕ್ರಮಣ ಮತ್ತು ಈ ಅತಿಕ್ರಮಣದ ವಿರುದ್ಧ ನಮ್ಮನ್ನು ಸೂಕ್ತ ಮಟ್ಟಕ್ಕೇರಿಸಲು ದೇವರ ಆತ್ಮನಿಗೆ ನಾವು ಆಸ್ಪದವೀಯದೇ ಇದ್ದರೆ, ಇವೆಲ್ಲವುಗಳೂ ಮಹಾ ಪ್ರವಾಹದಂತೆ ಒಳನುಗ್ಗುತ್ತವೆ.

''ನಮ್ಮ ಪ್ರಾಣಧಾರಣೆಗೆ ಏನು ಮಾಡಬೇಕೆಂದು ಚಿಂತೆ ಮಾಡಬೇಡಿರಿ. ಒಂದೇ ಒಂದರ ಬಗ್ಗೆ ಆಸಕ್ತಿಯುಳ್ಳವರಾಗಿರ್ರಿ'' ನಮ್ಮ ಸ್ವಾಮಿಯು ಹೇಳಿದ್ದು – ''ಅದು ನನ್ನೊಡನಿರಬೇಕಾದ ನಿನ್ನ ಬಾಂಧವ್ಯ''. ಲೌಕಿಕಪ್ರಜ್ಞೆ ಗಟ್ಟಿಯಾಗಿ ಕೂಗಿ ಹೇಳುತ್ತದೆ – ''ಅದೆಲ್ಲಾ ಅಸಂಬದ್ದತೆ. ನಾನು ಹೇಗೆ ಬದುಕ ಬೇಕೆಂದು ನಾನು ಚಿಂತಿಸಲೇ ಬೇಕು. ನಾನು ಏನು ಊಟ ಮಾಡಬೇಕು, ಏನು ಕುಡಿಯಬೇಕೆಂದು ನಾನು ಆಲೋಚಿಸಲೇ ಬೇಕು'', ಅದನ್ನೇ ಮಾಡ ಬಾರದೆಂದು ಯೇಸುಸ್ವಾಮಿಯು ಹೇಳುತ್ತಾನೆ. ನಮ್ಮ ಜೀವನದ ನಿರ್ದಿಷ್ಟ ಪರಿಸ್ಥಿತಿಗಳನ್ನು ಗ್ರಹಿಸಲಾರದ ವ್ಯಕ್ತಿಯೊಬ್ಬನ ಹೇಳಿಕೆ ಇದು ಎಂಬುದಾಗಿ ಯೋಚಿಸುವ ವಿಷಯದಲ್ಲಿ ಎಚ್ಚರದಿಂದಿರಬೇಕು. ಯೇಸುಕ್ರಿಸ್ತನು ನಮಗಿಂತಲೂ ಹೆಚ್ಚಾಗಿ ನಮ್ಮ ಸ್ಥಿತಿಗತಿಗಳನ್ನು ಬಲ್ಲನು ಮತ್ತು ಈ ಸಂಗತಿಗಳನ್ನೇ ನಮ್ಮ ಜೀವಿತದ ಒಂದು ಮುಖ್ಯ ಆಸ್ಥೆಯಾಗಿ ಮಾಡಿಕೊಂಡು ಅವುಗಳ ಬಗ್ಗೆಯೇ ಸದಾ ನಾವು ಚಿಂತಿಸುತ್ತಿರಬಾರದೆಂದು ಆತನು ಹೇಳುತ್ತಾನೆ. ಯಾವಾಗ ಈ ವಿಷಯಗಳು ನಿಮ್ಮಲ್ಲಿ ಸ್ಪರ್ಧಿಸುತ್ತಿರುವವೋ, ಆಗ ದೇವರೊಂದಿಗಿರುವ ನಿಮ್ಮ ಸಂಬಂಧವನ್ನು ಮೊದಲು ಮುಂದಿಡುವದರಲ್ಲಿ ನೀವು ದೃಢವಾಗಿರ್ರಿ.

''ಆ ಹೊತ್ತಿನ ಕಾಟ ಆ ಹೊತ್ತಿಗೇ ಸಾಕು''. ಈ ದಿನ ಅವೆಷ್ಟು ಕಾಟಗಳು ನಿನ್ನನ್ನು ಹೆದರಿಸುತ್ತಿವೆ ? ಯಾವ ವಿಧದ ಕ್ಷುದ್ರಮರಿಪಿಶಾಚಿಗಳು ನಿನ್ನನ್ನು ಕೆಕ್ಕರಿಸಿ ನೋಡುತ್ತಾ ''ಈಗ, ಮುಂಬರುವ ಈ ಬೇಸಿಗೆಯಲ್ಲಿ ಅಥವಾ ಮುಂದಿನ ಮಾಸದಲ್ಲಿ ನೀನೇನು ಮಾಡಬೇಕೆಂದುಕೊಂಡಿರುವಿ?'' ಎಂದು ಭವಿಷ್ಯದ ಬಗ್ಗೆ ಹೇಳುತ್ತಿರುವವೋ ?. ಆದರೆ ಯೇಸು ಹೇಳುತ್ತಾರೆ – ''ನೀನು ಯಾವುದಕ್ಕೂ ತವಕ ಪಡಬೇಡ''. ಆದ್ದರಿಂದ ಪುನಃ ದೃಷ್ಟಿಸು ಮತ್ತು ಆಲೋಚಿಸು, ಪರಲೋಕದ ತಂದೆಯ ''ಇನ್ನೂ ಹೆಚ್ಚಾಗಿ'' ಎಂಬ ವಚನದ ಮೇಲೆ ನಿನ್ನ ಮನಸ್ಸು ದೃಢವಾಗಿರಲಿ.

# ಯಾರಾದರೂ ಯೇಸುವನ್ನು ಅಷ್ಟು ಪರಿಹಿಂಸಬಹುದೆ ?

**''ಸೌಲನೇ, ಸೌಲನೇ, ನನ್ನನ್ನು ಯಾಕೆ ಹಿಂಸೆ ಪಡಿಸುತ್ತೀ ?'' - (ಅ.ಕೃ - 26:14)**

ದೇವರಿಗಾಗಿ ಜೀವಿಸಲು ನನ್ನದೇ ಆದ ದಾರಿಯಲ್ಲಿ ನಾನು ಮುನ್ನುಗ್ಗುತ್ತಿರುವೆನೋ ? ಪವಿತ್ರಾತ್ಮನಿಂದಲೂ ಬೆಂಕಿಯಿಂದಲೂ ಆಗುವ ಸ್ನಾನದೀಕ್ಷೆಯ ಅನುಭವ ನಮಗಾಗದ ಹೊರತು ಇಂಥಾ ಸ್ವಸಂಕಲ್ಪದ ಕಂಟಕದಿಂದ ನಾವು ಬಿಡುಗಡೆಯಾಗಲಾರೆವು (ಮತ್ತಾಯ 3:11). ಮೊಂಡುತನ, ಮತ್ತು ದುರಾಗ್ರಹಗಳು ಸದಾ ಯೇಸುಕ್ರಿಸ್ತನನ್ನು ಇರಿಯುತ್ತವೆ, ಬೇರೆ ಯಾರನ್ನೂ ನೋಯಿಸದಿದ್ದರೂ, ಅವು ಆತನ ಆತ್ಮವನ್ನು ಗಾಯಗೊಳಿಸುತ್ತವೆ. ನಾವು ಯಾವಾಗ ಹಠಮಾರಿಗಳೂ ಮತ್ತು ಸ್ವೇಚ್ಛಾ ಪ್ರವೃತ್ತಿಯುಳ್ಳವರೂ ಆಗಿರುವೆವೋ ಹಾಗೂ ಯಾವಾಗ ನಮ್ಮ ಮಹತ್ಕಾಂಕ್ಷೆಗಳೇ ಮುನ್ನುಗ್ಗುತ್ತಿರುವವೋ ಆಗ ನಾವು ಯೇಸುವನ್ನು ಈ ಪರಿ ನೋಯಿಸುತ್ತೇವೆ. ನಮ್ಮ ಹಕ್ಕುಗಳ ಮೇಲೆ ನಾವು ನೆಲೆನಿಂತ ಪ್ರತಿಸಲವೂ ನಾವು ನಿಶ್ಚಯಿಸಿದದ್ದನ್ನೇ ಮಾಡಲು ಒತ್ತಾಯ ಮಾಡುತ್ತೇವೆ ಮತ್ತು ಆಗಲೇ ನಾವು ಯೇಸುವನ್ನು ಹಿಂಸಿಸುತ್ತೇವೆ. ಯಾವಾಗ ನಾವು ಸ್ವಂತ ಘನತೆ ಗೌರವಗಳಲ್ಲಿ ನೆಲೆ ನಿಲ್ಲುತ್ತೇವೆಯೋ, ಆಗಲೇ ದೇವರ ಆತ್ಮಕ್ಕೆ ವ್ಯವಸ್ಥಿತವಾಗಿ ಕಿರುಕುಳ ಮತ್ತು ವ್ಯಥೆಯನ್ನುಂಟು ಮಾಡುತ್ತೇವೆ ಮತ್ತು ನಾವು ಈ ವರೆಗೂ ಯೇಸುವನ್ನೇ ಹಿಂಸಿಸುತಿದ್ದೇವೆಂಬುದು ಕಡೆಗೊಮ್ಮೆ ನಮ್ಮ ಅರಿವಿಗೆ ಬಂದಾಗ, ನಮ್ಮನ್ನು ಅತ್ಯಂತ ಛಿದ್ರಗೊಳಿಸುವ ಪ್ರಕಟನೆ ಅದಾಗಿರಬಲ್ಲದು.

ದೇವರ ವಾಕ್ಯವನ್ನು ನಾನು ನಿಮಗೆ ಬೋಧಿಸುವಾಗ, ಆ ವಾಕ್ಯವು ನನಗೆ ಘನವಾದದ್ದೂ ಹೃದಯದಾಳಕ್ಕೆ ಇಳಿಯುವಷ್ಟು ಹರಿತವಾಗಿ ಇದ್ದಿತ್ತೇ ? ಅಥವಾ ನಾನು ಘಂಟಾ ಘೋಷವಾಗಿ ಬೋಧಿಸಿದ್ದುದು ಕೇವಲ ಮಿಥ್ಯೆ ಎನ್ನುವಂತೆ ನನ್ನ ನಿಜ ಜೀವಿತವು ಕೇವಲ ನಟನೆಯ ಜೀವಿತವಾಗಿದ್ದಿತೇ ? ನಾನು ಶುದ್ಧೀಕರಣವನ್ನು ಬೋಧಿಸುತ್ತಿರಬಹುದು, ಆದರೂ ಯೇಸುಕ್ರಿಸ್ತನನ್ನು ಹಿಂಸಿಸುವ ಆತ್ಮ ಅಂದರೆ ಸೈತಾನನ ಆತ್ಮವನ್ನು ನನ್ನಲ್ಲಿ ಪ್ರದರ್ಶಿಸುತ್ತಿರುತ್ತೇನೆ. ಯೇಸುಸ್ವಾಮಿಯ ಆತ್ಮವು ಒಂದೇ ಒಂದು ವಿಷಯದಲ್ಲಿ ಸೂಕ್ಷ್ಮ ಪ್ರಜ್ಞೆಯುಳ್ಳದ್ದಾಗಿದೆ. ಅದು - ತಂದೆಯೊಡನೆ ಪರಿಪೂರ್ಣವಾಗಿ ಒಂದಾಗಿರುವುದು. ''ನಾನು ಸಾತ್ವಿಕನೂ, ದೀನ ಮನಸ್ಸುಳ್ಳವನೂ ಆಗಿರುವುದರಿಂದ ನನ್ನ ನೊಗವನ್ನು ನಿಮ್ಮ ಮೇಲೆ ತೆಗೆದುಕೊಂಡು ನನ್ನಲ್ಲಿ ಕಲಿತುಕೊಳ್ಳಿರಿ'' (ಮತ್ತಾಯ - 11:29) ಎಂದು ಆತನು ಹೇಳುತ್ತಾನೆ. ನಾನು ಏನೆಲ್ಲವನ್ನು ಮಾಡಿದರೂ, ಅದು ದೇವರಲ್ಲಿ ನನ್ನ ಒಂದುಗೂಡಿರುವಿಕೆಯ ಆಧಾರದ ಮೇಲೆ ಇರಬೇಕೇ ವಿನಃ ದೈವಭಕ್ತನಾಗ ಬಯಸುವ ಸ್ವಚ್ಛಂದ ನಿರ್ಧಾರಗಳಿಂದಲ್ಲ. ನಾನು ಹಾಗೆ ಮಾಡುವುದರ ಅರ್ಥವೆಂದರೆ, ನನ್ನನ್ನು ಯಾರಾದರೂ ಸರಳವಾಗಿ ತಮ್ಮ ಸ್ವಾರ್ಥಕ್ಕೆ ಬಳಸಿಕೊಳ್ಳಬಹುದು, ಸುಲಭವಾಗಿ ನನ್ನನ್ನು ಹಳ್ಳಕ್ಕೆ ತಳ್ಳಬಹುದು, ಸಲೀಸಾಗಿ ನನ್ನನ್ನು ನಿರ್ಲಕ್ಷಿಸಬಹುದು; ಆದಾಗ್ಯೂ ಇಂಥಾ ಸ್ಥಿತಿಗತಿಗಳಿಗೆ ಯೇಸುಕ್ರಿಸ್ತನ ನಿಮಿತ್ತ ನನ್ನನ್ನು ಒಪ್ಪಿಸಿಕೊಟ್ಟರೆ, ಆಗ ಆತನು ಹಿಂಸೆ ಪಡುವುದನ್ನು, ನಾನು ತಡೆಯಬಹುದು.

# ಒಬ್ಬನು ಅಷ್ಟು ಪರಿ ಅರಿವಿಲ್ಲದವನಾಗಿರುವನೆಂದು (ತಿಳುವಳಿಕೆಯಿಲ್ಲದವನೆಂದು) ನಂಬಲಸಾಧ್ಯ.

**''ಕರ್ತನೇ, ನೀನಾರು ?'' - (ಅ.ಕೃ- 26:15)**

''ಕರ್ತನು ನನ್ನ ಮೇಲೆ ಬಲವಾದ ಕೈಯನ್ನಿಟ್ಟು – ಹೀಗೆಂದನು'' (ಯೆಶಾಯ – 8:11) ಯೇಸುಸ್ವಾಮಿಯವರು ಮಾತಾಡುತ್ತಿರುವಾಗ ತಪ್ಪಿಸಿ ಕೊಳ್ಳಲು ಸಾಧ್ಯವಿಲ್ಲ. ನಮ್ಮ ಗ್ರಹಿಕೆಗಳನ್ನು ತನ್ನ ಸ್ವಾಧೀನ ಮಾಡಿಕೊಂಡು, ಸರ್ವಾಧಿಕಾರದಿಂದ ಯೇಸುಕ್ರಿಸ್ತನು ನಮ್ಮ ಬಳಿಗೆ ಬರುವನು. ದೇವರ ಸ್ವರವು ನಿನಗೆ ನೇರವಾಗಿ ನುಡಿಯಿತೋ ? ಹಾಗಿದ್ದರೆ ಅದು ನೀನು ಚೆನ್ನಾಗಿ ಅರಿತಿರುವ ಭಾಷೆಯಲ್ಲಿ, ಆತ್ಮೀಯತೆಯಿಂದ ತುಂಬಿ ಒತ್ತಾಯ ಪಡಿಸುವ ಆ ಧ್ವನಿಯನ್ನು ನೀನು ತಪ್ಪಾಗಿ ಗ್ರಹಿಸಲು ಸಾಧ್ಯವಿಲ್ಲ. ನಿನ್ನ ಕಿವಿಗಳ ಮೂಲಕವಲ್ಲ, ಅದು ನಿನ್ನ ಸಂದರ್ಭಗಳ ಮೂಲಕ ಕೇಳಿ ಬಂದಿರುತ್ತದೆ.

ನಮ್ಮ ನಂಬಿಕೆಗಳನುಸಾರವಾಗಿ ನಾವೇ ದೃಢ ಪಡಿಸಿಕೊಂಡ ವಿಶ್ವಾಸವನ್ನು ದೇವರು ಭಗ್ನಗೊಳಿಸಬೇಕಾಗಿದೆ. ''ಇದನ್ನೇ ನಾನು ಮಾಡಬೇಕಾಗಿರುವುದೆಂದು ನನಗೆ ಗೊತ್ತಿದೆ'' ಎನ್ನುತ್ತಿರುವಾಗಲೇ ನಮ್ಮ ಅಗಾಧವಾದ ಮೂರ್ಖತನವನ್ನು ಬಯಲುಮಾಡು ವಂತೆ ದೇವರ ಸ್ವರವು ನಮ್ಮನ್ನು ಸದೆಬಡಿಯುವ ರೀತಿಯಲ್ಲಿ ನಮಗೆ ಕೇಳಿಬರುತ್ತದೆ. ಆತನ ಸೇವೆ ಮಾಡಬೇಕೆಂದು ನಿರ್ಧರಿಸಿಕೊಂಡ ಪ್ರತಿಯೊಂದು ಮಾರ್ಗದಲ್ಲಿಯೂ ಆತನ ಬಗ್ಗೆ ನಿರ್ಲಕ್ಷತೆಯನ್ನು ತೋರಿಸಿದ್ದೇವೆ. ಆತನದಲ್ಲದ ಆತ್ಮದಿಂದ ಯೇಸುವನ್ನು ನಾವು ಸೇವಿಸುತ್ತೇವೆ ಹಾಗೂ ಆತನ ಪರವಾಗಿ ವಕಾಲತ್ತುವಹಿಸಿ ಆತನನ್ನು ನೋಯಿಸುತ್ತೇವೆ, ದೈವೀಕವಾದ ಆತನ ಸಮರ್ಥನೆಗಳನ್ನು ಪೈಶಾಚಿಕವಾಗಿ ಪ್ರತಿಪಾದಿಸುತ್ತೇವೆ. ಹಾಗೆ ಮಾಡುವಾಗ ನಮ್ಮ ನುಡಿಗಳು ಸರಿಯಾಗಿಯೇ ಇರಬಹುದು. ಆದರೆ ನಮ್ಮಲ್ಲಿರುವ ಆತ್ಮವು ಶತ್ರುವಿನ ಆತ್ಮವಾಗಿದೆ. ಯೇಸುಕ್ರಿಸ್ತನು ಒಮ್ಮೆ ತನ್ನ ಶಿಷ್ಯರನ್ನು ಗದರಿಸಿ, ಅವರೆಂಥಾ ಆತ್ಮವನ್ನು ಹೊಂದಿರುವರೆಂದು ತಿಳಿಸಿದನು. ನಮ್ಮ ಸ್ವಾಮಿಯವರ ಆತ್ಮವು ಎಂಥಾದ್ದೆಂಬುದನ್ನು 1 ಕೊರಿಂಥ 13 ರಲ್ಲಿ ವಿವರಿಸಲಾಗಿದೆ.

ಯೇಸುವನ್ನು ನನ್ನದೇ ಆದ ದಾರಿಯಲ್ಲಿ ಸೇವಿಸುವೆನೆಂಬ ಆಸಕ್ತಿ ಭರಿತ ನಿರ್ಧಾರಗಳಿಂದ ನಾನು ಆತನನ್ನು ಹಿಂಸೆ ಪಡಿಸುತ್ತಿರುವೆನೋ ? ನಾನು ನನ್ನ ಕಾರ್ಯವನ್ನು ತೃಪ್ತಿಕರವಾಗಿ ಮಾಡಿ ಮುಗಿಸಿರುವೆನೆಂದು ಕಲ್ಪಿಸಿಕೊಂಡು, ಕಾರ್ಯವೆಸಗುತ್ತಿರುವಾಗ ಆತನನ್ನು ನೋಯಿಸಿದ್ದಾದರೆ, ನಾನು ಮಾಡಿದ ಕಾರ್ಯವು, ಅದು ನಾನು ಮಾಡಬೇಕಾಗಿದ್ದ ಕಾರ್ಯವಲ್ಲ, ಅದನ್ನು ಮಾಡಲು ಅನುಸರಿಸುವ ಮಾರ್ಗವು ದೀನತೆ ಮತ್ತು ಸಂತೈಸುವ ಆತ್ಮವನ್ನು ಪೋಷಿಸುವ ಮಾರ್ಗವಾಗಿರಲಿಲ್ಲ. ಅದು ನನ್ನ ಸ್ವಸಂತೃಪ್ತಿಯ ಮಾರ್ಗವಾಗಿತ್ತು. ಅಹಿತಕರವಾದದ್ದೆಲ್ಲವನ್ನೂ ನಮ್ಮ ಕರ್ತವ್ಯವೆಂದು ನಾವು ಊಹಿಸುತ್ತೇವೆ ! ''ನನ್ನ ದೇವರೇ, ನಿನ್ನ ಚಿತ್ತವನ್ನು ಅನುಸರಿಸುವದೇ ನನ್ನ ಸಂತೋಷವು'' (ಕೀರ್ತನೆ 40:8) ಎಂದು ಹೇಳುವ ಯೇಸು ಸ್ವಾಮಿಯ ಆತ್ಮಕ್ಕೆ ತಕ್ಕಂತೆ ನನ್ನ ಆತ್ಮವೂ ಸ್ಪಂದಿಸಬಲ್ಲದೆ !

# ವಿಧೇಯತೆಯ ಧರ್ಮಸಂಕಟ

**''ತಾನು ಕಂಡದ್ದನ್ನು ಏಲಿಗೆ ತಿಳಿಸುವದಕ್ಕೆ ಭಯ ಪಟ್ಟನು'' - (1 ಸಮುವೇಲ - 3:15)**

ನಾವು ಗಾಬರಿಗೊಳ್ಳುವಂಥಾ ರೀತಿಯಲ್ಲಿ ದೇವರು ಮಾತಾಡುವುದು ವಿರಳ, ಆದರೆ ಆತನು ಅಪರೂಪಕ್ಕೆ ಮಾತಾಡಿದರೂ ನಾವು ಸುಲಭವಾಗಿ ಅಪಾರ್ಥ ಮಾಡಿಕೊಳ್ಳುತ್ತೇವೆ, ''ಅದು ನಿಜವಾಗಿಯೂ ದೇವರ ಸ್ವರವೇ ?'' ಎಂದು ಹೇಳುತ್ತೇವೆ. (ಯೆಶಾಯ 8:11) ''ಕರ್ತನು ಬಲವಾದ ಹಸ್ತದಿಂದ'' ತನ್ನೊಡನೆ ಮಾತನಾಡಿದನೆಂದು, ಅಂದರೆ ತನ್ನ ಮೇಲೆರಗಿದ ಪರಿಸ್ಥಿತಿಗಳ ಒತ್ತಡದ ಮೂಲಕ ದೇವರು ಮಾತಾಡಿದನೆಂದು ಯೆಶಾಯನು ಹೇಳುತ್ತಿದ್ದಾನೆ. ಸರ್ವಶಕ್ತನಾದ ದೇವರ ಹಸ್ತವಲ್ಲದೆ ಬೇರಾವುದೂ ನಮ್ಮ ಜೀವಿತವನ್ನು ಸ್ಪರ್ಶಿಸಲಾರದು, ಆದರೆ ದೇವರು ತಾನಾಗಿಯೇ ಮಾತಾಡುತ್ತಿದ್ದಾನೆ, ಅದು ಆತನ ಹಸ್ತವೇ ಅಥವಾ ಕೇವಲ ಮಾನಸಿಕ ಸಂಭವಿಸುವಿಕೆಯೋ, ಎಂದು ನಾವು ವಿವೇಚಿಸುತ್ತೇವೆಯೇ?

''ದೇವರೇ ಮಾತನ್ನಾಡು'' ಎನ್ನುವ ಅಭ್ಯಾಸವನ್ನು ರೂಢಿಸಿಕೊಳ್ಳಿರಿ, ಆಗ ಜೀವಿತವು ಪ್ರೇಮ ಭರಿತವಾಗುತ್ತದೆ. (1ಸಮು-3:9) ಒತ್ತಡಕ್ಕೊಳಗಾದ ಪ್ರತಿ ಸಮಯದಲ್ಲಿಯೂ ಹೇಳಿರಿ, - ''ಸ್ವಾಮಿ ಮಾತನಾಡು'', ಕಿವಿಗೊಟ್ಟು ಆಲಿಸಲು ಸಮಯ ಕೊಡಿರಿ. ಶಿಕ್ಷಿಸುವುದು, ಶಿಸ್ತು ಕಲಿಸುವ ವಿಧಾನಕ್ಕಿಂತಲೂ ಹೆಚ್ಚಿನದು. ''ದೇವರೇ ಮಾತನ್ನಾಡು'' ಎಂದು ನಾನು ನುಡಿಯುವಂಥ ಸ್ಥಿತಿಗೆ ಅದು ನನ್ನನ್ನು ಬರಮಾಡುತ್ತದೆ. ದೇವರು ನಿನ್ನೊಂದಿಗೆ ಹಿಂದೆ ಮಾತನಾಡಿದ್ದ ಸಮಯವನ್ನು ಸ್ಮರಿಸು. ಆತನು ಆಗ ಹೇಳಿದ್ದನ್ನು ಈಗ ನೀನು ಮರೆತಿರುವಿಯೋ ? ಅದು ಲೂಕ 11:13 ಆಗಿತ್ತೊ ಇಲ್ಲವೇ 1 ಥೆಸ -5:23 ಆಗಿತ್ತೋ ? ನಾವು ಕಿವಿಗೊಟ್ಟು ಆಲಿಸುತ್ತಿರುವಾಗ ನಮ್ಮ ಕಿವಿಗಳು ಸೂಕ್ಷ್ಮವಾಗುತ್ತವೆ ಮತ್ತು ಯೇಸುವಿನಂತೆ ನಾವು ಸದಾ ದೇವರ ಸ್ವರವನ್ನು ಕೇಳಿಸಿಕೊಳ್ಳುತ್ತೇವೆ.

ದೇವರು ನನಗೆ ತಿಳಿಯಪಡಿಸಿದ್ದನ್ನು ನಾನು ನನ್ನ 'ಏಲಿಗೆ' ಹೇಳಬಹುದೋ ? ಆಗಲೇ ವಿಧೇಯತೆಯ ಧರ್ಮ ಸಂಕಟ ಉಂಟಾಗುವುದು. ನಮಗೆ ಗೊತ್ತಿರುವ ಉತ್ತಮ ಜನರಂತೆ ಅನನುಭವಿ ಆಶ್ರಯದಾತನಾಗಿ - ನಾನು ಅರಿತಿರುವ ಅತ್ಯುತ್ತಮ ವ್ಯಕ್ತಿಗಳಾದ 'ಏಲಿ' ಯನ್ನು ರಕ್ಷಿಸಬೇಕು ಎನ್ನುತ್ತಾ, ನಾವು ದೇವರಿಗೆ ಅವಿಧೇಯರಾಗುತ್ತೇವೆ. ''ಏಲಿಗೆ ತಿಳಿಸು'' ಎಂದು ದೇವರು ಸಮುವೇಲನಿಗೆ ಹೇಳಲಿಲ್ಲ. ಅದನ್ನು ಅವನೇ ತೀರ್ಮಾನಿಸತಕ್ಕದ್ದು. ನಿನಗುಂಟಾದ ದೇವರ ಕರೆಯುವಿಕೆಯು ಏಲಿಯನ್ನು ಗಾಯಗೊಳಿಸಬಹುದು; ಆದರೆ ಬೇರೆಯವರ ಜೀವಿತದ ನೋವು ತಡೆಗಟ್ಟಲು ನಾನು ಯತ್ನಿಸುವುದಾದರೆ, ಅದು ನಿನ್ನ ಆತ್ಮ ಮತ್ತು ದೇವರ ನಡುವಿರುವ ಅಡಚಣೆಯನ್ನು ರುಜು ಪಡಿಸುತ್ತದೆ. ಬಲಗೈ ಕತ್ತರಿಸಿ ಹಾಕುವುದನ್ನು ಮತ್ತು ಬಲಗಣ್ಣನ್ನು ಕಿತ್ತು ಬಿಡುವುದನ್ನು ನೀನು ತಡೆಯಲೆತ್ನಿಸಿದರೆ - ಅದು ನಿನ್ನ ಸರ್ವನಾಶನಕ್ಕಾಗಿಯೇ!

ತನ್ನ ಸನ್ನಿಧಿಯಲ್ಲಿ ನೀನೇ ತೀರ್ಮಾನಿಸುವಂತೆ ದೇವರು ಮಾಡಿದಾಗ, ನೀನು ಇತರರ ಸಲಹೆಯನ್ನು ಕೇಳಬೇಡ, ಇತರರ ಸಲಹೆಯನ್ನು ನೀನು ಕೇಳುವಿಯಾದರೆ ಬಹುತೇಕ ನೀನು ಸೈತಾನನ ಪಕ್ಷವಹಿಸಿರುವಿ. ''ಇಚ್ಛೈಸಿದಾಗಲೇ ನಾನು ಮನುಷ್ಯರ ಆಲೋಚನೆಯನ್ನು ವಿಚಾರಿಸದೆ....'' (ಗಲಾತ್ಯ - 1:16)

# ನಿನಗಾದ ಕರೆಯುವಿಕೆಯನ್ನು ಗಮನಿಸುವಿಯೋ ?

**''ದೇವರ ಸುವಾರ್ತೆಯನ್ನು ಸಾರುವದಕ್ಕೆ ನೇಮಿಸಲ್ಪಟ್ಟವನೂ'' - (ರೋಮಾ 1:1)**

ನಮಗಿರುವ ಕರೆಯುವಿಕೆಯು ನಾವು ಪವಿತ್ರರಾದ ಸ್ತ್ರೀ ಮತ್ತು ಪುರುಷರಾಗಿರಬೇಕೆನ್ನುವುದಕ್ಕಲ್ಲ, ಆದರೆ ಪ್ರಥಮವಾಗಿ ದೇವರ ಸುವಾರ್ತೆಯನ್ನು ಸಾರಲು ನಾವು ಕರೆಯಲ್ಪಟ್ಟಿರುತ್ತೇವೆ. ದೇವರ ಸುವಾರ್ತೆಯು ಶಾಶ್ವತವಾದ ಸತ್ಯತೆ ಎಂದು ನಾವು ಗ್ರಹಿಸುವುದೇ ಯಾವಾಗಲೂ ಮುಖ್ಯವಾದ ಒಂದು ವಿಷಯವಾಗಿದೆ. ಈ ಸತ್ಯತೆಯು ಮಾನವನ ಸಜ್ಜನಿಕೆಯಲ್ಲ, ಪವಿತ್ರತೆಯಲ್ಲ, ಸ್ವರ್ಗವಲ್ಲ, ನರಕವಲ್ಲ - ಅದು ಪಾಪದಿಂದ ಬಿಡುಗಡೆ. ಈ ಸತ್ಯವನ್ನು ಗ್ರಹಿಸುವುದೇ ಇಂದಿನ ಕ್ರೈಸ್ತ ಸೇವಕರ ಪ್ರಮುಖ ಅವಶ್ಯಕತೆಯಾಗಿದೆ. ಪಾಪದಿಂದ ಬಿಡುಗಡೆಯೇ ನಿಜ ಸತ್ಯತೆ ಎಂಬ ವಾಸ್ತವದ ದೈವ ಪ್ರಕಟನೆಯನ್ನು ದೇವರ ಸೇವಕರಾದ ನಾವು ಅಭ್ಯಾಸ ಮಾಡಿಕೊಳ್ಳಬೇಕು. ವ್ಯಕ್ತಿಗತ ಪವಿತ್ರತೆಯು ಪಾಪ ವಿಮೋಚನೆಯ ಕಾರ್ಯಫಲವೇ ಹೊರತು, ಕಾರಣವಲ್ಲ. ನಾವೇನಾದರೂ ಮಾನವನ ಸಜ್ಜನಿಕೆಯಲ್ಲಿ, ಪಾಪ ವಿಮೋಚನೆಯ ಕಾರ್ಯಫಲದಲ್ಲಿ, ವಿಶ್ವಾಸವಿಟ್ಟಿದ್ದರೆ, ಪರೀಕ್ಷಾ ಕಾಲದಲ್ಲಿ ಸೋತು ಹೋಗುತ್ತೇವೆ.

ತನ್ನನ್ನು ತಾನೇ ಪ್ರತ್ಯೇಕಿಸಿಕೊಂಡೆನೆಂದು ಪೌಲನು ಹೇಳಲಿಲ್ಲ. ಆದರೆ ಆತನು ಹೇಳಿದ್ದು - ''ನನ್ನನ್ನು ಪ್ರತ್ಯೇಕಿಸಿ ತನ್ನ ಕೃಪೆಯಿಂದ ಕರೆದ ದೇವರು'' ''(ಗಲಾತ್ಯ - 1:15)''. ಪೌಲನು ತನ್ನ ನಡತೆಯ ಬಗ್ಗೆ ಅತಿ ಸೂಕ್ಷ್ಮವಾದ ಪ್ರತಿಕ್ರಿಯೆಯನ್ನು ತೋರುತ್ತಿರಲಿಲ್ಲ. ಎಲ್ಲಿಯವರೆಗೆ ನಮ್ಮ ದೃಷ್ಟಿಯು ನಮ್ಮ ವ್ಯಕ್ತಿಗತ ಪರಿಶುದ್ಧತೆಯ ಕಡೆಗೆ ಹಾಯುತ್ತಿರುವುದೋ ಅಲ್ಲಿಯ ತನಕ 'ಪಾಪದಿಂದ ಬಿಡುಗಡೆ' ಎನ್ನುವ ವಾಸ್ತವದ ಸನಿಹಕ್ಕೆಂದಿಗೂ ನಾವು ಬರಲಾರೆವು. ದೇವ ಸೇವಕರು ಅನೇಕ ವೇಳೆ ಕುಸಿದು ಬೀಳುವರು - ಕಾರಣವೆಂದರೆ ಅವರ ಎಲ್ಲಾ ಆಶೆಗಳೂ ತಮ್ಮ ಸಜ್ಜನಿಕೆಗಾಗಿಯೇ ಹೊರತು ದೇವರಿಗಾಗಿಯಲ್ಲ. ''ಕೊಳಕು ತುಂಬಿದ ಮಾನವ ಜೀವಿತದ ಪರವಾಗಿ ನಿಷ್ಠುರತೆಯಿಂದ ಕೂಡಿದ ಪಾಪವಿಮೋಚನೆಯನ್ನು ನಾನು ಮುಖಾಮುಖಿಯಾಗಿ ಎದುರಿಸಬೇಕೆಂದು ಮಾತ್ರ ನನ್ನನ್ನು ಕೇಳಬಾರದು. ನನ್ನ ಸ್ವಂತ ದೃಷ್ಟಿಗೆ ತುಂಬಾ ಅಪೇಕ್ಷಣೀಯವಾದದ್ದನ್ನು ದೇವರು ಮಾಡಬಲ್ಲನೋ ಎಂಬುದು ಮಾತ್ರ ನನಗೆ ಬೇಕಾಗಿದೆ'', ಈ ರೀತಿ ಮಾತನಾಡುವುದು - ದೇವರ ಸುವಾರ್ತೆಯ ಸತ್ಯತೆಯು ಇನ್ನೂ ನನ್ನ ಮನಮುಟ್ಟಲಿಲ್ಲವೆನ್ನುವುದರ ಕುರುಹು ಆಗಿದೆ; ದೇವರಿಗಾಗಿ ದುಡುಕಿನ ಪರಿತ್ಯ ಜಿಸುವಿಕೆ ಅಲ್ಲಿ ಇಲ್ಲ. ಕೇವಲ ನನ್ನ ಗುಣ ನಡತೆಯೇ ನನ್ನ ಆಸಕ್ತಿಯಾಗಿದ್ದರೆ, ದೇವರು ನನ್ನನ್ನು ಬಿಡುಗಡೆ ಮಾಡಲಾರನು. ಪೌಲನು ತನ್ನ ಬಗ್ಗೆ ಪ್ರಜ್ಞೆ ಇಲ್ಲದವನಾಗಿದ್ದನು, ಅವನು ಪರಿಣಾಮಗಳನ್ನು ಲೆಕ್ಕಿಸದೆ ತನ್ನನ್ನು ಪರಿತ್ಯಕ್ತ ಮಾಡಿಕೊಂಡನು. ಒಂದೇ ಒಂದು ಉದ್ದೇಶಕ್ಕಾಗಿ ದೇವರಿಂದ ನೇಮಿಸಲ್ಪಟ್ಟನು ''ದೇವರ ಸುವಾರ್ತೆಯನ್ನು ಸಾರುವುದಕ್ಕಾಗಿ'' (ರೋಮಾ 9:34).

# ದೇವರ ಕರೆಯುವಿಕೆ

**''ದೀಕ್ಷಾಸ್ನಾನ ಮಾಡಿಸುವುದಕ್ಕಲ್ಲ ಸುವಾರ್ತೆಯನ್ನು ಸಾರುವದಕ್ಕೇ ಕ್ರಿಸ್ತನು ನನ್ನನ್ನು ಕಳುಹಿಸಿದನು''**
**- (1 ಕೊರಿಂಥ-1:17)**

ಸುವಾರ್ತೆಯನ್ನು ಸಾರುವುದಕ್ಕಾಗಿಯೇ ದೇವರ ಕರೆಯುವಿಕೆಯು ತನಗುಂಟಾಗಿದೆಯೆಂದು ಪೌಲನು ಇಲ್ಲಿ ಹೇಳುತ್ತಿದ್ದಾನೆ; ಪೌಲನ ಗ್ರಹಿಕೆಯಲ್ಲಿ ''ಸುವಾರ್ತೆ''ಯ ಅರ್ಥವೇನೆಂಬುದನ್ನು ನಾವು ನೆನಪಿನಲ್ಲಿಡಬೇಕು, ಅಂದರೆ ನಮ್ಮ ಸ್ವಾಮಿಯಾದ ಯೇಸುಕ್ರಿಸ್ತನಲ್ಲಿರುವ ಪಾಪವಿಮೋಚನೆಯ ವಾಸ್ತವವೇ ಆ ಸುವಾರ್ತೆ. ನಾವು ಮಾತ್ರ ಶುದ್ಧೀಕರಣವನ್ನು ಮುಖ್ಯವಾಗಿರಿಸಿಕೊಂಡು ಅದನ್ನೇ ಸಾರುವ ಒಲವುಳ್ಳವರಾಗಿದ್ದೇವೆ. ಈ ವಿಷಯಗಳನ್ನು ಪರಾಮರ್ಶಿಸುವಾಗ ಪೌಲನು ತನ್ನ ವ್ಯಕ್ತಿಗತ ಅನುಭವಗಳನ್ನು ವಿಷಯ ವಿಷದೀಕರಣಕ್ಕಾಗಿ ಮಾತ್ರ ಪ್ರಸ್ಥಾಪಿಸುತ್ತಿರುವನೇ ಹೊರತು, ಅದೇ ವಿಷಯದ ಅಂತಿಮವಲ್ಲ. ರಕ್ಷಣೆ ಮತ್ತು ಶುದ್ಧೀಕರಣ - ಇವುಗಳನ್ನು ಸಾರುವುದಕ್ಕೆ ನಾವು ನೇಮಿಸಲ್ಪಡಲಿಲ್ಲ, ಯೇಸುಕ್ರಿಸ್ತನನ್ನೇ ಎತ್ತಿ ಹಿಡಿದು ಸಾರಲು, ನಾವು ನೇಮಕ ಹೊಂದಿರುವೆವು. (ಯೋಹಾನ 12:32 ನೋಡಿರಿ) ನನ್ನನ್ನು ಪುಣ್ಯಪುರುಷನನ್ನಾಗಿ ಮಾಡುವುದಕ್ಕೋಸ್ಕರವೇ ಯೇಸುಕ್ರಿಸ್ತನು ಪಾಪವಿಮೋಚನೆಯ ಕಾರ್ಯದಲ್ಲಿ ಶ್ರಮೆ ಪಟ್ಟನೆಂದು ಹೇಳುವುದು ನ್ಯಾಯದ ಅಪಹಾಸ್ಯವೇ ಸರಿ. ಈ ವಿಮೋಚನಾ ಕಾರ್ಯದಲ್ಲಿ ಇಡೀ ಲೋಕವನ್ನೇ ಪಾಪದಿಂದ ಬಿಡುಗಡೆ ಮಾಡಲು ಯೇಸುಕ್ರಿಸ್ತನು ಶ್ರಮೆಯನ್ನು ಅನುಭವಿಸಿದನು ಮತ್ತು ಆ ಮೂಲಕ, ಲೋಕ ಸ್ವರೂಪದಲ್ಲಿ ಏರುಪೇರುಗಳಿಲ್ಲದಂತೆ ಅದನ್ನು ದೋಷರಹಿತವಾಗಿಸಿ, ಅದನ್ನು ಸೃಷ್ಠಿ ಪ್ರಥಮದಲ್ಲಿದ್ದ ಅದರ ಪೂರ್ವಸ್ಥಿತಿಗೆ ತಂದು ದೇವರ ಸನ್ನಿಧಾನದಲ್ಲಿ ನಿಲ್ಲಿಸಲು ಆತನು ಶ್ರಮೆಯನ್ನು ಅನುಭವಿಸಿದನು. ಈ ವಿಮೋಚನೆಯನ್ನು ನಾವು ಅನುಭವಿಸಬಹುದೆಂಬ ಸತ್ಯವೇ ಅದರಲ್ಲಡಗಿರುವ ದೈವ ಸಾಮರ್ಥ್ಯವನ್ನು ವಿವರಿಸುತ್ತದೆ, ಆದರೆ ಅಂಥಾ ವ್ಯಕ್ತಿಗತ ಅನುಭವವು ವಿಮೋಚನೆಯ ಉಪಫಲವೇ ಹೊರತು ವಿಮೋಚನಾಕಾರ್ಯದ ಅಂತಿಮಗುರಿಯಲ್ಲ; ದೇವರು ಮಾನವನೇ ಆಗಿದ್ದ ಪಕ್ಷದಲ್ಲಿ ನಮ್ಮ ಶುದ್ಧೀಕರಣಕ್ಕಾಗಿ, ನಮ್ಮ ರಕ್ಷಣೆಗಾಗಿ ನಾವು ನಿರಂತರವಾಗಿ ಆತನನ್ನು ಬೇಡಿ ಕಾಡಿಸುವುದರಿಂದ ಆತನು ಆಯಾಸಗೊಂಡು ಬಳಲಿಬೆಂಡಾಗಿ ಬಿಡುತ್ತಿದ್ದನು. ನಮಗೆ ಬೇಕಾಗಿರುವ ವಿಷಯಗಳಿಗಾಗಿ, ಯಾವುದೋ ಒಂದು ಸಂಗತಿಯಿಂದ ಬಿಡುಗಡೆ ಹೊಂದುವ ಸಲುವಾಗಿ ಮುಂಜಾನೆಯಿಂದ ಸಂಜೆಯವರೆಗೆ ಆತನನ್ನು ಬೇಡಿಕೊಳ್ಳುತ್ತಾ ಆತನ ಸಾಮರ್ಥ್ಯಕ್ಕೆ ಹೊರೆಯಾಗಿ ಬಿಡುತ್ತಿದ್ದೆವು. ದೇವರ ಸುವಾರ್ತೆಗೆ ಆಧಾರಶಿಲೆ ಯಾಗಿರುವ (ಲೋಕ ವಿಮೋಚನೆ) ವಾಸ್ತವವನ್ನು ನಾವು ಗ್ರಹಿಸಿದಾಗ ಅಲ್ಪವಾದ ವೈಯಕ್ತಿಕ ಸಮಸ್ಯೆ ಗಳನ್ನು ದೇವರ ಮುಂದೆ ಇನ್ನೆಂದಿಗೂ ನಾವು ಪ್ರಸ್ತಾಪಿಸುವುದಿಲ್ಲ.

ಇಂಥಾ ದೇವರ ಸುವಾರ್ತೆಯನ್ನು ಸಾರುವುದೊಂದೇ ಪೌಲನ ಜೀವಿತದ ತೀವ್ರಾಸಕ್ತಿಯಾಗಿದ್ದಿತು. ಇದೊಂದೇ ಕಾರಣಕ್ಕಾಗಿ ಆತನು ತನ್ನ ಮೇಲೆ ಎರಗಿಬಂದ ಹೃದಯ ವೇದನೆಗಳನ್ನು ಹಿಂಸೆಗಳನ್ನು ಮತ್ತು ಭ್ರಮ ನಿರಸನಗಳನ್ನು ಸ್ವಾಗತಿಸಿದನು. ಇವುಗಳೇ ಆತನನ್ನು ದೇವರ ಸುವಾರ್ತೆಗಾಗಿ ಆತನಿಗಿದ್ದ ಅಚಲ ನಿಷ್ಠೆಯಲ್ಲಿ ಭದ್ರಪಡಿಸಿದ್ದವು.

# ಕರೆಯುವಿಕೆಯಲ್ಲಿರುವ ಒತ್ತಾಯ

**''ಸಾರಲೇ ಬೇಕೆಂಬ ನಿರ್ಬಂಧ ನನಗುಂಟು'' - (1 ಕೊರಿಂಥ 1:9)**

ದೇವರ ಕರೆಯುವಿಕೆಗೆ ಕಿವಿಗೊಡಲು ನಿರಾಕರಿಸುವುದರ ಬಗ್ಗೆ ಎಚ್ಚರವಿರಲಿ. ರಕ್ಷಣೆ ಹೊಂದಿದ ಪ್ರತಿಯೊಬ್ಬನೂ ರಕ್ಷಣಾಕಾರ್ಯದ ಸತ್ಯತೆಯನ್ನು ಕುರಿತು, ಸಾಕ್ಷಿ ನೀಡಲು ಕರೆಯಲ್ಪಡುವನು; ಸಾಕ್ಷಿಯ ಈ ಕರೆಯುವಿಕೆಯು ಸುವಾರ್ತೆಯನ್ನು ಸಾರುವುದಕ್ಕಾದ ಕರೆಯುವಿಕೆಯಲ್ಲ, ಅದು ಬೋಧನೆಗಳಲ್ಲಿ ಉಪಯೋಗಿಸಬಹುದಾದ ದೃಷ್ಟಾಂತಕ್ಕಾಗಿ ಮಾತ್ರ. ಶ್ರೀ ಪೌಲನು ದೇವರ ಸುವಾರ್ತೆಯನ್ನು ಸಾರಲೇಬೇಕೆಂಬ ಒತ್ತಾಯ ಭರಿತ ನಿರ್ಬಂಧ ಮತ್ತು ಆ ನಿರ್ಬಂಧವು ಉಂಟು ಮಾಡುವ ಪ್ರಬಲ ವೇದನೆಯನ್ನು, ಇಲ್ಲಿ ಪರಾಮರ್ಶಿಸುತ್ತಿರುವನು. ತಮ್ಮ ರಕ್ಷಣೆಗಾಗಿ ದೇವರ ಬಳಿಗೆ ಬರುವವರಿಗೆ, ಪೌಲನ ಈ ಹೇಳಿಕೆಯನ್ನೆಂದಿಗೂ ಅನ್ವಯಿಸಲೆತ್ನಿಸಬೇಡ. ರಕ್ಷಣೆ ಹೊಂದುವುದಕ್ಕಿಂತ ಸರಳ ಸುಲಭ ವಾದದ್ದು ಬೇರೊಂದಿಲ್ಲ, ಯಾಕೆಂದರೆ ಅದು ದೇವರೇ ಮಾಡಿದ ಪರಮ ಕಾರ್ಯವಾಗಿದೆ. ''ನನ್ನ ಕಡೆಗೆ ತಿರುಗಿ ಕೊಳ್ಳಿರಿ, ರಕ್ಷಣೆಯನ್ನು ಹೊಂದಿಕೊಳ್ಳಿರಿ'' (ಯೆಶಾಯ 45:22) ರಕ್ಷಣೆ ಹೊಂದಲು ವಿಧಿಸುವಂಥಾ ಯಾವುದೇ ಶರತ್ತುಗಳನ್ನು ಯೇಸುಸ್ವಾಮಿಯು ತನ್ನ ಶಿಷ್ಯತ್ವಕ್ಕಾಗಿ ಕರೆಯಲ್ಪಟ್ಟವರಿಗೆ ವಿಧಿಸುವುದಿಲ್ಲ. ದಂಡನಾರ್ಹರೆಂಬ ತೀರ್ಪಿಗೊಳಗಾದ ನಾವು ಯೇಸುಕ್ರಿಸ್ತನ ಶಿಲುಬೆಯ ಮುಖಾಂತರದಿಂದ ಮಾತ್ರವೇ ರಕ್ಷಣೆ ಹೊಂದುತ್ತೇವೆ. ಆದರೆ ಆತನ ಶಿಷ್ಯತ್ವವಾದರೋ ಅದು ನಿನ್ನ ಆಯ್ಕೆಯನ್ನು ಅವಲಂಬಿಸಿದೆ ''ಯಾವನಾದರೂ'' (ಲೂಕ 14:26) ಇದೇ ಶಿಷ್ಯತ್ವಕ್ಕಿರುವ ವಿಧಿ.

ಶ್ರೀ ಪೌಲನ ಹೇಳುವ ಮೇಲಿನ ವಾಕ್ಯವು ಯೇಸುಕ್ರಿಸ್ತನ ಸೇವಕನಾಗಲು ಸಮರ್ಪಿಸಿಕೊಂಡವನಿಗೆ ಸಂಬಂಧಿಸಿದೆ ಮತ್ತು ನಾವು ಮಾಡಬೇಕಾದುದೇನು, ನಾವು ಹೋಗಬೇಕಾದದ್ದೆಲ್ಲಿಗೆ ಎಂಬ ವಿಚಾರಗಳಲ್ಲಿ ನಮ್ಮ ಒಪ್ಪಿಗೆಯನ್ನೆಂದೂ ಅದು ಕೇಳುವುದಿಲ್ಲ. ದೇವರು ತನ್ನ ಸ್ವಸಂತೋಷ ಕೋಸ್ಕರ ನಮ್ಮನ್ನು 'ಮುರಿಯಲ್ಪಟ್ಟ ರೊಟ್ಟಿಯನ್ನಾಗಿಯೂ ಸುರಿಯಲ್ಪಟ್ಟ ದ್ರಾಕ್ಷಾರಸ' ವನ್ನಾಗಿಯೂ ಮಾಡುವನು. ''ಸುವಾರ್ತೆಯನ್ನು ಸಾರುವುದಕ್ಕೆ ನೇಮಿಸಲ್ಪಟ್ಟವನು'' (ರೋಮಾ 1:1) ಎಂದರೆ ದೇವರ ಕರೆಯುವಿಕೆಗೆ ಅವನು ಕಿವಿಗೊಡಬಲ್ಲವನೆಂದು ಮತ್ತು ಯಾವನಾದರೂ ಒಬ್ಬನು ದೇವರ ಅಂಥಾ ಕರೆಯುವಿಕೆಯನ್ನು ಕೇಳಿಸಿಕೊಳ್ಳಲಾರಂಭಿಸಿದರೆ ಯೇಸುಕ್ರಿಸ್ತನ ಹೆಸರಿಗೆ ತಕ್ಕಂತೆ ಕಷ್ಟ ಸಂಕಟಗಳುಂಟಾಗುತ್ತವೆ. ಪ್ರತಿಯೊಂದು ಮಹತ್ವಕಾಂಕ್ಷೆಗಳು, ಅವು ಚಿಗುರುತ್ತಿರುವಾಗಲೇ ಚಿವಿಟಿ ಹಾಕಲ್ಪಡುತ್ತವೆ. ಜೀವಿತದ ಒಂದೊಂದು ಇಚ್ಛೆಗಳೂ, ಬತ್ತಿಸಲ್ಪಡುತ್ತವೆ, ಪ್ರತಿಯೊಂದು ದೃಷ್ಟಿಕೋನವೂ ಸಂಪೂರ್ಣವಾಗಿ ಅಳಿದು ನಿರ್ಮೂಲವಾಗಿ ಬಿಡುತ್ತದೆ, ಆದರೆ ಒಂದೇ ಒಂದು ಉಳಿಯುತ್ತದೆ - ''ಸುವಾರ್ತೆಗಾಗಿ ಪ್ರತ್ಯೇಕಿಸಲ್ಪಟ್ಟಿರುವಿಕೆ''. ಒಮ್ಮೆ ದೇವರ ಕರೆಯುವಿಕೆಯುಂಟಾದ ಮೇಲೆ, ಬೇರಿನ್ನಾವುದೇ ದಿಕ್ಕಿನಲ್ಲಿ ಸಾಗಲು ಮುಂದಡಿ ಇಡುವವನ ಗತಿಯನ್ನು ಹೇಗೆ ಹೇಳಲಿ! ಸುವಾರ್ತೆಯನ್ನು ಸಾರಿ ಹೇಳುವ ಒಬ್ಬ ಪುರುಷ ನನ್ನಾಗಲೀ ಇಲ್ಲವೇ ಸ್ತ್ರೀಯನ್ನಾಗಲೀ ಇಲ್ಲಿ ದೇವರು ಹಿಡಿದಿರುವನೋ ಎಂಬುದನ್ನರಿಯುವುದಕ್ಕಾಗಿಯೇ ಈ ಸತ್ಯವೇದ ತರಬೇತಿ ವಿದ್ಯಾಲಯವು ಸ್ಥಾಪಿತಗೊಂಡಿದೆ; ಸ್ಪರ್ಧಾತ್ಮಕವಾಗಿರುವ ಇತರ ಕರೆಯುವಿಕೆಗಳ ಬಗ್ಗೆ ಎಚ್ಚರದಿಂದಿರಬೇಕು.

# 'ಲೋಕದ ಕಸವು' ಆಗುವುದು

**''ನಾವು ಈಗಿನವರೆಗೂ ಲೋಕದ ಕಸವೋ ಎಲ್ಲಾದರ ಹೊಲಸೋ ಎಂಬಂತೆ ಆಗಿದ್ದೇವೆ'' - (1 ಕೊರಿಂಥ-4:9-13)**

ಈ ವಾಕ್ಯಗಳು ಅತಿಶಯೋಕ್ತಿಗಳಲ್ಲ. ಸುವಾರ್ತಾ ಸೇವಕರೆಂದು ಕರೆದುಕೊಂಡಿರುವ ನಮಗೆ ನಮ್ಮ ಜೀವಿತದಲ್ಲಿ ಈ ಮಾತುಗಳು ನಿಜವಲ್ಲದಿರುವುದಕ್ಕೆ ಕಾರಣ, ಈ ವಾಕ್ಯಗಳನ್ನು ಪ್ರಯೋಗಿಸುವಾಗ ಇವುಗಳ ನಿಜವಾದ ಅರ್ಥವನ್ನು ಶ್ರೀ ಪೌಲನು ಮರೆತು ಹೋಗಿರುವನೆಂಬುದಲ್ಲ , ಆದರೆ ನಮ್ಮದೇ ಆದ ಪ್ರತ್ಯೇಕ ಒಲವು ಆಕರ್ಷಣೆಗಳು ಬಹಳವಾಗಿ ನಮಗಿರುವುದರಿಂದ, ನಮ್ಮನ್ನು ನಾವು ಲೋಕದ ಕಸವನ್ನಾಗಿ ಮಾಡಿಕೊಳ್ಳಲಾರೆವು. ''ಕ್ರಿಸ್ತನ ಸಂಕಟಗಳಲ್ಲಿ ಇನ್ನೂ ಉಳಿದದ್ದನ್ನು ನನ್ನ ಶರೀರದಲ್ಲಿ ಅನುಭವಿಸಿ ತೀರಿಸುತ್ತೇನೆ'' (ಕೊಲೊಸ್ಸ 1:24) ಇದು ಪವಿತ್ರೀಕರಣಕ್ಕಾದ ಸಾಕ್ಷಿಯಲ್ಲ, ಆದರೆ 'ಸುವಾರ್ತೆಯನ್ನು ಸಾರುವುದಕ್ಕೆ ನೇಮಿಸಲ್ಪಟ್ಟವನು'. (ರೋಮಾಯ 1:1) ಎಂಬದಕ್ಕೆ ಸಾಕ್ಷಿಯಾಗಿದೆ.

''ಪ್ರಿಯರೇ, ನೀವು ಪರಿಶೋಧನೆಗಾಗಿ ಪುಟಕ್ಕೆ ಹಾಕಲ್ಪಟ್ಟದ್ದಕ್ಕೆ ಆಶ್ಚರ್ಯ ಪಡಬೇಡಿರಿ, ವಿಪರೀತವಾದ ಸಂಗತಿ ಸಂಭವಿಸಿತೆಂದು ಯೋಚಿಸಬೇಡಿರಿ'' (1ಪೇತ್ರ 4:12) ನಾವು ಎದುರಿಸುತ್ತಿರುವ ಸಂಗತಿಗಳು ವಿಚಿತ್ರವಾಗಿವೆ ಎಂದು ಭಾವಿಸುತ್ತಿರುವೆವಾದರೆ ಅದಕ್ಕೆ ಕಾರಣ, ನಾವು ಭಯಗ್ರಸ್ತರೂ ಹೇಡಿಗಳೂ ಆಗಿರುವುದರಿಂದಲೇ. ಸ್ವಂತ ಆಸಕ್ತಿ ಮತ್ತು ಆಶೆಗಳ ನಿಮಿತ್ತ ನಾವು ಕಸ ಮತ್ತು ಹೊಲಸು ರಾಡಿಯ ಹೊರಗೇ ಉಳಿದು ಹೇಳುತ್ತೇವೆ - ''ನಾನು ಇದಕ್ಕೆ ಶರಣಾಗಲಾರೆನು, ನಾನು ತಲೆ ಬಾಗಿಸ ಲಾರೆನು, ನಡು ಬಗ್ಗಿಸಲಾರೆನು''; ಅದನ್ನು ನೀನು ಮಾಡಬೇಕಾಗಿಲ್ಲ. ನೀನು ಇಷ್ಟಪಟ್ಟರೆ ಕೂದಲೆಳೆಯಷ್ಟರಲ್ಲಿ ರಕ್ಷಿಸಲ್ಪಡಲೂಬಹುದು. ಸುವಾರ್ತೆ ಸಾರಲು ನೀನು ನೇಮಿಸಲ್ಪಟ್ಟ ವನೆಂಬ ದೇವರ ಗಣನೆ ಯನ್ನು ನೀನು ತಿರಸ್ಕರಿಸಬಹುದು, ಇಲ್ಲವೇ ''ದೇವರ ಸುವಾರ್ತೆಯನ್ನು ಸಾರುತ್ತಿರುವವರೆಗೂ ಲೋಕದ ಕಸವೂ ಹೊಲಸೂ ಎಂಬಂತೆ ನನ್ನನ್ನು ನಡೆಸಿ ಕೊಂಡರೂ, ಅದನ್ನು ನಾನು ಲೆಕ್ಕಿಸುವುದೇ ಇಲ್ಲವೆಂದು'' ಘೋಷಿಸಬಹುದು. ದೇವರ ಸುವಾರ್ತೆಯ ಸತ್ಯಕ್ಕೋಸ್ಕರ ಪ್ರಾಣಾಹುತಿ ಮಾಡಿಕೊಳ್ಳಲು ಸಿದ್ದನಿರುವವನೇ ಯೇಸುಕ್ರಿಸ್ತನ ಸೇವಕನು. ಶುದ್ಧ ನಡತೆಯುಳ್ಳ ಒಬ್ಬ ಪುರುಷನಾಗಲೀ ಸ್ತ್ರೀಯಾಗಲೀ ತಾತ್ಸಾರ, ಅವಿನೀತಿ, ವಿಶ್ವಾಸಭ್ರಷ್ಟತೆ ಇಲ್ಲವೇ ಅಪ್ರಮಾಣಿಕತೆಗಳನ್ನು ಅವರು ಎದುರಿಸಿದಾಗ, ಅವರಲ್ಲುಂಟಾಗುವ ಹಿನ್ನೆಗತವು, ಅವರ ಮಾನವೀಯ ಸುಗುಣಗಳ ಮೇಲೆ ಎಷ್ಟರ ಮಟ್ಟಿಗೆ ನಿರಾಶಾ ಭರಿತ ಮನಗುಂದುವಿಕೆಯನ್ನುಂಟು ಮಾಡುತ್ತವೆಂದರೆ, ಸನ್ನಡತೆಯ ವ್ಯಕ್ತಿಯು, ತನ್ನ ಮನ ನೋಯಿಸಿದವರಿಗೆ ತನ್ನ ಹೃದಯದ ಬಾಗಿಲನ್ನು ಮುಚ್ಚಿಯೇ ಬಿಡುವನು, ಆದರೆ ದೇವರಿಂದ ಉಂಟಾದ ವಿಮೋಚನೆಯಲ್ಲಿರುವ ಸತ್ಯತೆಯ ಅಚ್ಚರಿಯೆಂದರೆ ಅತ್ಯಂತ ಹೇಯ ಮತ್ತು ಕ್ರೂರ ಆಕ್ರಮಣಕಾರನು ಸಹಾ ದೇವರ ಪ್ರೀತಿಯ ಸಾಗರದಾಳವನ್ನೆಂದಿಗೂ ಬಸಿದು ಬರಿದು ಮಾಡ ಲಾರನು. ಆಶ್ಚರ್ಯಕರ ಪುರುಷ ನನ್ನಾಗಿ ಮಾಡಿ ತೋರಿಸಲು ದೇವರು ತನ್ನನ್ನು ನೇಮಿಸಿದನೆಂದು ಶ್ರೀ ಪೌಲನು ಹೇಳಲಿಲ್ಲ ಆದರೆ ''ತನ್ನ ಮಗನನ್ನು ಪ್ರಸಿದ್ಧಿ ಪಡಿಸುವು ದಕ್ಕಾಗಿಯೇ'' (ಗಲಾತ್ಯ 1:16) ನೇಮಿಸಲ್ಪಟ್ಟಿರುವೆನೆಂದೇ ಆತನು ಹೇಳಿದನು.

# ಒತ್ತಾಯ ಪಡಿಸುವ ಆತನ ಮಹಿಮಾ ಶಕ್ತಿ

**''ಕ್ರಿಸ್ತನ ಪ್ರೀತಿಯು ನಮಗೆ ಒತ್ತಾಯ ಮಾಡುತ್ತದೆ'' – (2 ಕೊರಿಂಥ 5:14)**

ಯೇಸು ಕ್ರಿಸ್ತನ ಪ್ರೀತಿಯು ತನ್ನನ್ನು ಆಳುತ್ತಿದೆಯೆಂದೂ, ತನ್ನನ್ನು ಸ್ವಾಧೀನ ಪಡಿಸಿಕೊಂಡಿದೆ ಎಂತಲೂ, ಅದು ತನ್ನನ್ನು ಕಬ್ಬಿಣದ ಹಿಡಿಕೆಯಲ್ಲಿ ಹಿಡಿದಿಟ್ಟಿದೆಯೆಂದೂ, ಶ್ರೀ ಪೌಲನು ಹೇಳುತ್ತಿದ್ದಾನೆ. ದೇವರ ಪ್ರೀತಿಯ ಹಿಡಿತದಲ್ಲಿ ಬಂಧಿಸಲ್ಪಡುವುದೇನೆಂಬುದನ್ನು ನಮ್ಮಲ್ಲಿ ಕೆಲವರು ಮಾತ್ರ ಬಲ್ಲರು. ನಾವೆಲ್ಲರೂ ನಮ್ಮ ಅನುಭವಗಳ ಒತ್ತಾಯದ ಹಿಡಿತದಲ್ಲಿ ಮಾತ್ರವೇ ಇದ್ದೇವೆ. ತನ್ನ ಜೀವನ ದಿಗಂತದಲ್ಲಿ ಬೇರೇನೂ ಕಾಣದಿರುವಷ್ಟರ ಮಟ್ಟಿಗೆ ಶ್ರೀ ಪೌಲನನ್ನು ಒಂದೇ ಸಂಗತಿಯು ಹಿಡಿದಿಟ್ಟಿದೆ – ಅದು ದೇವರಪ್ರೀತಿ. ''ಕ್ರಿಸ್ತನ ಪ್ರೀತಿಯು ನಮಗೆ ಒತ್ತಾಯ ಮಾಡುತ್ತದೆ'' ಸ್ತ್ರೀ ಅಥವಾ ಪುರುಷ ಯಾರೇ ಇರಲಿ, ಅವರ ಜೀವಿತದಲ್ಲಿ ಈ ನುಡಿಗಳು ಶೃತಿಗೊಂಡಾಗ ನೀನೆಂದೂ ಅವುಗಳನ್ನು ತಪ್ಪಾಗಿ ಭಾವಿಸಲಾರೆ; ಅಂಥಾ ಜೀವಿತದಲ್ಲಿ ದೇವರ ಆತ್ಮನ ಚಲಿಸುವಿಕೆಗೆ ಯಾವ ಅಡೆತಡೆಯೂ ಇಲ್ಲದಿರುವುದನ್ನು ನೀನು ಮನಗಾಣುವಿ.

ದೇವರಾತ್ಮನಿಂದ ನಾವು ಹೊಸದಾಗಿ ಹುಟ್ಟಿದಾಗ ನಾವು ಕೊಡುವ ಸಾಕ್ಷಿಯು, ದೇವರು ನಮಗೇನೇನು ಮಾಡಿದ್ದಾನೆಂಬ ಆಧಾರದ ಮೇಲೆ ಆ ಸಾಕ್ಷಿಯು ಇರುತ್ತದೆ, ಅದು ಸರಿಯಾದದ್ದೇ. ಆದರೆ ಒಮ್ಮೆ ''ಪವಿತ್ರಾತ್ಮವು ನಿಮ್ಮ ಮೇಲೆ ಬರಲು ನೀವು ಬಲವನ್ನು ಹೊಂದಿ'' ..... (ಅ. ಕೃ. 1:8) ದಾಗ ನಾವು ಹೇಳುತ್ತಿರುವ ಸಾಕ್ಷಿಯ ಆಧಾರಗಳು ಇನ್ನೆಂದಿಗೂ ಇಲ್ಲದ ಹಾಗೆ ಸಂಪೂರ್ಣವಾಗಿ ಅಳಿಸಿ ಹಾಕಲ್ಪಡುತ್ತವೆ. ''ನೀವು ನನಗೆ ಸಾಕ್ಷಿಗಳಾಗಿರಬೇಕು'' ಎಂದು ಹೇಳಿದ ಯೇಸುಸ್ವಾಮಿಯ ವಾಕ್ಯದ ಸತ್ಯಾರ್ಥವನ್ನು ನಾವು ಗ್ರಹಿಸಲಾರಂಭಿಸುತ್ತೇವೆ. ಯೇಸುಕ್ರಿಸ್ತನು ನಮಗೇನು ಮಾಡಬಲ್ಲನು ಎಂಬುದಕ್ಕೆ ಸಾಕ್ಷಿಯಲ್ಲ – ಅಂಥಾ ಸಾಕ್ಷಿಯು ಕೇವಲ ಪ್ರಾಥಮಿಕ ಮಟ್ಟದ್ದು – ''ನನಗೆ ಸಾಕ್ಷಿಗಳಾಗಿರಬೇಕು'' ಎಂಬುದೇ ನಿಜವಾದ ಸಾಕ್ಷಿ. ನಮಗಾಗುವ ಹೊಗಳಿಕೆ, ಇಲ್ಲವೆ ತೆಗಳಿಕೆ, ಹಿಂಸೆಯಾಗಲೀ ಇಲ್ಲವೇ ಪ್ರಶಸ್ತಿಯೇ ಆಗಿರಲಿ, ಏನೆಲ್ಲವೂ  ನಮಗೆ ಘಟಿಸಿದರೂ, ಅವು ಸ್ವತಃ ಯೇಸುಕ್ರಿಸ್ತನಿಗೆ ಘಟಿಸುತ್ತಿರುವವೋ, ಎಂಬಂತೆ ಅವುಗಳನ್ನು ನಾವು ಸ್ವೀಕರಿಸುತ್ತೇವೆ. ಆದರೆ ಯೇಸುಕ್ರಿಸ್ತನ ಮಹಿಮಾ ಶಕ್ತಿಯ ಒತ್ತಾಯ ವಿಲ್ಲದೆ ಯಾರೂ ಆತನಿಗೋಸ್ಕರ ಇಂಥಾ ನಿಲುವನ್ನು ತಾಳುವುದಿಲ್ಲ. ಇದೇ ಬಹುಮುಖ್ಯವಾದ ಸಂಗತಿ, ಆದರೂ  ಕ್ರಿಸ್ತನ ಸೇವಕರು ಅದೊಂದನ್ನೇ ಕೊನೆಯವರೆಗೂ ಗ್ರಹಿಸದಿರುವುದೇ ಅಚ್ಚರಿ ಎನಿಸುತ್ತದೆ. ಕ್ರಿಸ್ತನ ಪ್ರೀತಿಯು ತನ್ನನ್ನು ಭದ್ರ ಮುಷ್ಟಿಯಲ್ಲಿ ಹಿಡಿದಿಟ್ಟಿದೆಯೆಂದು ಪೌಲನು ಹೇಳುತ್ತಿರುವನು; ಆದ್ದರಿಂದಲೇ ಆತನು ಏನು ಮಾಡುತ್ತಿರು ವನೋ ಅದನ್ನೇ ಮಾಡುತ್ತಿದ್ದಾನೆ. ಜನರು ಆತನನ್ನು ಮತಿಭ್ರಷ್ಟನೆಂದೂ ಇಲ್ಲವೆ ಸಮಚಿತ್ತನು ಎಂದು ಹೇಗಾದರೂ ಕರೆಯಲಿ, ಅದನ್ನು ಪೌಲನು ಗಣನೆಗೆ ತರುವುದೇ ಇಲ್ಲ. ಒಂದೇ ಒಂದು ವಿಷಯಕ್ಕಾಗಿ ಆತನು ಜೀವಿಸುತ್ತಿದ್ದಾನೆ, ಅದೇನೆಂದರೆ ಜನರು ದೇವರ ನ್ಯಾಯ ಸ್ಥಾನಕ್ಕೆ ಬರದಂತೆ ಮತ್ತು ಕ್ರಿಸ್ತನ ಪರಮ ಪ್ರೀತಿಯ  ವಿಷಯದಲ್ಲಿ ಅವರ ಮನವೊಲಿಸುವದಕ್ಕೆ ಮಾತ್ರವೇ ಜೀವಿಸುತ್ತಿದ್ದಾನೆ. ''ಯೇಸುಕ್ರಿಸ್ತನ ಪ್ರೀತಿಯು'' ಇದಕ್ಕಾಗಿ ನಾವು ಮಾಡುವ ಸಂಪೂರ್ಣ ಶರಣಾ ಗತಿಯೇ ನಮ್ಮ ಜೀವಿತವನ್ನು ಫಲಪ್ರದ ಗೊಳಿಸುತ್ತದೆ. ಆ ಜೀವಿತವೇ ದೇವರ ಪ್ರಭಾವದ, ಆತನ ಪರಿಶುದ್ಧತೆಯ ಚಿತ್ರವಾಗಿರುತ್ತದೆ. ಅಂಥಾ ಜೀವಿತವು ವೈಯಕ್ತಿಕ ಶುದ್ಧತೆಗೆ ಆದ್ಯತೆ ನೀಡುವದೇ ಇಲ್ಲ.

# ಯಜ್ಞಾರ್ಪಿತನಾಗಲು ಸಿದ್ಧನಿರುವಿಯೋ ?

**''ನಿಮ್ಮ ನಂಬಿಕೆಯೆಂಬ ಯಜ್ಞವನ್ನು ದೇವರಿಗರ್ಪಿಸುವ ಸೇವೆಯಲ್ಲಿ ನಾನೇ ಪಾನದ್ರವ್ಯವಾಗಿ ಅರ್ಪಿತವಾಗಬೇಕಾದರೂ ನನಗೆ ಸಂತೋಷ ನಿಮ್ಮೆಲ್ಲರ ಕೂಡ ಸಂತೋಷ '' - (ಫಿಲಿಪ್ಪಿ 2:17)**

ಕ್ರಿಸ್ತ ನಂಬಿಕೆಯಲ್ಲಿರುವ ಬೇರೊಬ್ಬನ ಕಾರ್ಯಸಫಲತೆಗಾಗಿ ನಿನ್ನನ್ನು ನೀನು ತ್ಯಾಗಾರ್ಪಣೆ ಮಾಡಿಕೊಳ್ಳಲು ಸಿದ್ಧನಿರುವೆಯೋ ? ಇತರರ ಸೇವಾ ಸಾಫಲ್ಯಕ್ಕಾಗಿ, ಅವರ ವಿಶ್ವಾಸವೃದ್ಧಿಗಾಗಿ, ನಿನ್ನನ್ನು ನೀನು ''ಪಾನದ್ರವ್ಯವಾಗಿ'' ನಿನ್ನ ಪ್ರಾಣ ರಕ್ತವನ್ನು ಧಾರೆಯೆರೆಯ ಬಲ್ಲೆಯೋ ? (ಅಂದರೆ ಹಾಗೆ ಮಾಡಿದ ತ್ಯಾಗವು ಯಾರ ಗಣನೆಗೂ ಬಾರದೆ ಶೂನ್ಯನಂತಿರಲು ನೀನು ಸಿದ್ಧನಿರುವೆಯೋ ?) ಅಥವಾ ''ಈಗಲೇ ಆ ರೀತಿಯಾಗಿ ಅರ್ಪಿತವಾಗಲು ನನಗೆ ಇಚ್ಛೆ ಇಲ್ಲ, ಸೇವೆಯನ್ನು ಯಾವ ರೀತಿಯಲ್ಲಿ ಮಾಡಬೇಕೆಂದು ದೇವರು ನಿರ್ದೇಶಿಸುವುದು ನನಗೆ ಬೇಡವಾಗಿದೆ, ನಾನು ಮಾಡುವ ನನ್ನ ಅರ್ಪಣೆಯ ಸಮಯ ಮತ್ತು ಸ್ಥಳಗಳನ್ನು ನಾನೇ ಆಯ್ಕೆ ಮಾಡುವೆ ಮತ್ತು ನಾನು ಮಾಡುವ ಅರ್ಪಣೆಯನ್ನು ವೀಕ್ಷಿಸುತ್ತಾ 'ಭಲೆ ಚೆನ್ನಾಗಿ ಮಾಡಿದೆ' ಎಂದು ಹೇಳುವ ಯೋಗ್ಯ ಜನರು ನನ್ನ ಯಜ್ಞಾರ್ಪಣೆಯ ಸ್ಥಳದಲ್ಲಿರಬೇಕೆಂದು ನಾನು ಬಯಸುತ್ತೇನೆ'' ಎಂಬದಾಗಿ ನೀನು ಹೇಳುವಿಯೋ?

ಗಂಭೀರವಾದ ವೀರಾವೇಶದಿಂದ ದೇವಸೇವೆ ಮಾಡುವ ಏಕ ಮಾತ್ರ ಹಾದಿಯಲ್ಲಿ ಮುಂದೆ ಸಾಗುವುದು ಒಂದು ವಿಧವಾದರೆ, ದೇವರು ರಚಿಸಿದ ವಿನ್ಯಾಸದಂತೆ ಇತರರ ಕಾಲ್ಒರಸಾಗಿ (DOOR MAT) ಮುಂದರಿಯುವುದು ಮತ್ತೊಂದು ವಿಧ. ''ಬಡವ ನಾಗಿರಲೂ ಬಲ್ಲೆನು .....'' (ಫಿಲಿಪ್ಪಿ 4:12) ಎಂದು ಹೇಳುವುದನ್ನು ದೇವರು ನಿನಗೆ ಕಲ್ಪಿಸಿಕೊಡಲಿಚ್ಛಿಸುತ್ತಿರಬಹುದು; ಹಾಗೆ ಅರ್ಪಿಸಲ್ಪಡಲು ಸಿದ್ಧ ನಿರುವೆಯೋ ? ತುಂಬಿದ ಬಕೆಟಿನಲ್ಲಿ ಒಂದು ಹನಿಗಿಂತಲೂ ಅಲ್ಪವೆಂದೆಣಿಸಲ್ಪಡಲು ಸಿದ್ಧನಿರುವೆಯೋ ? ನಿನ್ನ ಜೀವಿತ ಕಾಲದಲ್ಲಿ ನೀನು ಮಾಡಿದ ಸಕಲ ಸೇವೆಯನ್ನು ಯಾರೂ, ಎಂದೂ, ನೆನಸದಷ್ಟರ ಮಟ್ಟಿಗೆ ಗಣನಾ ಶೂನ್ಯನಾಗಿ, ಸ್ಥಿತಿ ಶೂನ್ಯನಾಗಿರಲು ನೀನು ಸಿದ್ಧನಿರುವೆಯೋ ? ವ್ಯಯಿಸಲ್ಪಡಲು ಮತ್ತು ವ್ಯಯ ಗೊಂಡು ಹೇಳ ಹೆಸರಿಲ್ಲದಂತಾಗಲು ಸಿದ್ಧನಿರುವೆಯೋ ? ''ಸೇವೆ ಮಾಡಿಸಿಕೊಳ್ಳುವುದಕ್ಕಲ್ಲ - ಸೇವೆ ಮಾಡಲು'' ಸಿದ್ಧನಿರುವೆಯೋ ? ಕೆಲವು ದೇವಭಕ್ತರು ಕೆಳಮಟ್ಟದ ಸೇವಾಕಾರ್ಯಗಳನ್ನು ಮಾಡುವುದಿಲ್ಲ, ಯಾಕೆಂದರೆ ಅದು ಅವರ ಗೌರವಕ್ಕೆ ಕುಂದು ಎಂದು ತಿಳಿದು, ದೇವ ಭಕ್ತರೆನೆಸಿಕೊಳ್ಳುತ್ತಾ ಉಳಿದಿರುತ್ತಾರೆ.

# ಯಜ್ಞಾರ್ಪಿತನಾಗಲು ಸಿದ್ಧನಿರುವಿಯೋ ?

**''ನಾನಂತೂ ಈಗಲೇ ಪಾನದ್ರವ್ಯವಾಗಿ ಅರ್ಪಿತನಾಗುತ್ತಾ ಇದ್ದೇನೆ'' –**
**(2 ತಿಮೋಥಿ 4:6)**

''ಅರ್ಪಿತನಾಗಲು ಈಗ ನಾನು ಸಿದ್ಧನಿರುವೆ'' – ಇದೊಂದು ನಿನ್ನ ಸಂಕಲ್ಪದ ನಡವಳಿಕೆ, ಅದು ನಿನ್ನ ಮನಸ್ಸಿನ ಭಾವಾವೇಶವಲ್ಲ; ನೀನು ಪಾನದ್ರವ್ಯವಾಗಿ ಅರ್ಪಿತನಾಗಲು ಸಿದ್ಧನಿರುವೆನೆಂದೂ, ಪರಿಣಾಮ ಗಳೇನೇ ಉಂಟಾಗಲಿ, ದೇವರು ತನಗಿಷ್ಟಬಂದ ಮಾರ್ಗವನ್ನು ನನಗಾಗಿ ಹೇಗೆ ಬೇಕಾದರೂ ಆಯ್ಕೆ ಮಾಡಲಿ, ನೀನು ಮಾತ್ರ ಒಂದೆಳೆಯಷ್ಟಾದರೂ ದೂರುವುದಿಲ್ಲವೆಂದೂ. ದೇವರಿಗೆ ಹೇಳಿಬಿಡು. ಏಕಾಂತ ದಲ್ಲಿ ದೇವರು ನಿನ್ನನ್ನು ಸಂಕಷ್ಟದಲ್ಲಿ ರಿಸುತ್ತಾನೆ ಮತ್ತು ಅಲ್ಲಿರುವಾಗ ಒಬ್ಬ ವ್ಯಕ್ತಿಯು ಇನ್ನೊಬ್ಬನಿಗೆ ಸಹಾಯ ಮಾಡುವುದಿಲ್ಲ. ಆಗ ಹೊರಗಿನ ನೋಟಕ್ಕೆ ನಿನ್ನ ಜೀವಿತವು ಮೊದಲಿದ್ದಂತೆಯೇ ಕಾಣಿಸುತ್ತಿರುವುದು; ಆದರೆ ನಿನ್ನ ಸಂಕಲ್ಪದಲ್ಲಿ ವ್ಯತ್ಯಾಸವಿರುತ್ತದೆ. ಅಂತರಂಗದ ಸಂಕಷ್ಟಗಳಲ್ಲಿ ಮೊದಲು ಸಾಗಿ ಹೋಗು; ಅನಂತರ ಅವು ಬಹಿರಂಗದಲ್ಲಿ ನಿನ್ನ ಮೇಲೆ ಆಕ್ರಮಣ ಮಾಡಿದಾಗ ನೀನು ತೆರಬೇಕಾದ ಬೆಲೆಯ ಬಗ್ಗೆ ನಿನಗೆ ಕಾಳಜಿಯೇ ಇರುವುದಿಲ್ಲ. ಈ ಮಾರ್ಗದ ಮೂಲಕ ಅಂತರಂಗದಲ್ಲಿ , ನಿನ್ನ ಇಚ್ಛಾಶಕ್ತಿಯ ಮಟ್ಟದಲ್ಲಿ ದೇವರ ನಡವಳಿಕೆಗೊಳಪಡದಿದ್ದರೆ, ನಿನಗಾಗಿ ಸ್ವಾನುಭೂತಿ ಯನ್ನು ನೀನೇ ಬಡಿದೆಬ್ಬಿಸುವುದರಲ್ಲಿ ಕೊನೆಗೊಳ್ಳುವಿ.

''ಯಜ್ಞವಸ್ತುವನ್ನು ಯಜ್ಞವೇದಿಯ ಕೊಂಬುಗಳಿಗೆ ಹಗ್ಗಗಳಿಂದ'' ಬಲವಾಗಿ ಬಂಧಿಸು (ಕೀರ್ತ 118:17) ಯಜ್ಞವೇದಿ ಎಂದರೆ ದಹಿಸುವಿಕೆ, ಶುದ್ದೀಕರಿಸುವಿಕೆ ಮತ್ತು ಒಂದು ಉದ್ದೇಶಕ್ಕಾಗಿ ಪ್ರತ್ಯೇಕಿಸ ಲ್ಪಡುವಿಕೆ, ದೇವರಿಂದುಂಟಾಗದ ಪ್ರತಿಯೊಂದು ಆಕರ್ಷಣೆಗಳ ಮತ್ತು ದೇವರಿಗೆ ಹೊಂದಿಕೊಳ್ಳಲಾಗದ ಒಲವುಗಳ ನಾಶನಪಡಿಸುವಿಕೆ. ಅದನ್ನು ನೀನು ಮಾಡುವುದಿಲ್ಲ, ದೇವರೇ ಅದನ್ನು ಮಾಡುತ್ತಾನೆ; ನೀನೇ ಅಂಥಾ ಯಜ್ಞ ವಸ್ತುಗಳನ್ನು ಯಜ್ಞವೇದಿಯ ಕೊಂಬುಗಳಿಗೆ ಬಂಧಿಸು; ಬೆಂಕಿಯು ಉರಿಯಲಾರಂಭಿಸಿ ದಾಗ ಸ್ವಾನುಕಂಪಕ್ಕೆ ದಾರಿ ಮಾಡಿಕೊಡುವುದರ ಬಗ್ಗೆ ಎಚ್ಚರದಿಂದಿರು. ಇಂಥಾ ಬೆಂಕಿ ಜ್ವಾಲೆಯ ನಂತರ, ನಿನ್ನನ್ನು ಪೀಡಿಸುವಂಥಾದ್ದಾಗಲೀ, ನಿನ್ನನ್ನು ಕುಗ್ಗಿಸುವಂಥಾದ್ದಾಗಲೀ ಇರುವುದೇ ಇಲ್ಲ. ಸಂಕಷ್ಟಗಳು ನಿನಗೆ ಎದುರಾದಾಗ, ಈ ವರೆಗೆ ಅವು ಯಾವರೀತಿಯಲ್ಲಿ ನಿನ್ನ ಮೇಲೆ ಪರಿಣಾಮ ಬೀರುತ್ತಿದ್ದವೋ ಹಾಗೆ ಇನ್ನು ಮುಂದೆ ನಿನ್ನನ್ನು ಸ್ಪರ್ಶಿಸಲಾರವು ಎಂಬುದನ್ನು ನೀನೇ ಮನಗಾಣುವಿ. ನೀನು ಆರಿಸಿಕೊಂಡಿರುವ ಅಗ್ನಿ ಪಥ ಯಾವುದು ?

ಅರ್ಪಿತನಾಗಲು ಸಿದ್ಧನಿರುವೆನೆಂಬುದಾಗಿ ನೀನೇ ದೇವರಲ್ಲಿ ನಿವೇದಿಸು. ಆಗ ದೇವರು ಹೇಗೆ ಇರುವನೆಂದು ನೀನು ಕನಸು ಕಂಡಿದ್ದೆಯೋ ಹಾಗೆಯೇ ತಾನಿದ್ದೇನೆಂದು ದೇವರೇ ನಿನಗೆ ಸ್ಥಿರಪಡಿಸುವನು.

# ಖಿನ್ನತೆಯ ಶಿಕ್ಷಣ

**''ನಾವಾದರೋ ಇಸ್ರಾಯೇಲ್ ಜನರನ್ನು ಬಿಡಿಸತಕ್ಕವನು ಆತನೇ ಎಂದು ನಿರೀಕ್ಷಿಸಿಕೊಂಡಿದ್ದೆವು. ಇದು ಮಾತ್ರವಲ್ಲದೆ ಆ ಕಾರ್ಯಗಳು ನಡೆದು ಈ ಹೊತ್ತು ಮೂರನೆಯ ದಿನ'' - (ಲೂಕ 24:21)**

ಶಿಷ್ಯರು ಹೇಳಿದ ಪ್ರತಿಯೊಂದು ಘಟನೆಗಳೂ ಸರಿಯಾದವುಗಳೇ ಆಗಿದ್ದವು, ಆದರೆ ಆ ಘಟನೆ ಗಳಿಂದ ಅವರು ಗ್ರಹಿಸಿಕೊಂಡದ್ದು ಮಾತ್ರ ಸರಿಯಾಗಿರಲಿಲ್ಲ. ಆತ್ಮೀಕ ಖಿನ್ನತೆಯನ್ನು ರಸರುಚಿ ಗೊಳಿಸುವ ಯಾವುದೇ ವಿಷಯವು ಎಂದಿಗೂ ಸರಿಯಾದುದಲ್ಲ. ನಿರಾಸೆ ಮತ್ತು ಕುಗ್ಗುವಿಕೆಗಳು ನನ್ನನ್ನು ಸಂಧಿಸಿದಾಗ ಅದಕ್ಕೆ ನಾನು ಕಾರಣವೇ ಹೊರತು ದೇವರಲ್ಲ, ಬೇರೆ ಯಾರೂ ಅಲ್ಲ. ಇರುವ ಎರಡು ಮೂಲಗಳಲ್ಲಿ ಯಾವುದಾದರೂ ಒಂದು ಮೂಲದಿಂದ ಖಿನ್ನತೆಯು ಹೊರ ಹೊಮ್ಮುವುದು - ಉತ್ಕಟ ವಾದ ವಿಷಯಾಭಿಲಾಷೆಯನ್ನು ನಾನು ತೃಪ್ತಿಗೊಳಿಸಿರುವೆನು ಎಂಬುದು ಒಂದು, ಅದನ್ನು ತೃಪ್ತಿಪಡಿಸ ಲಿಲ್ಲ ಎಂಬುದು ಇನ್ನೊಂದು. ವಿಷಯಾಭಿಲಾಸೆ (Lust) ಎಂದರೆ ಈಗಿಂದೀಗಲೇ ಅದನ್ನು ನಾನು ಪಡೆಯಲೇ ಬೇಕೆನ್ನುವ ಸೆಳೆತ. ಆತ್ಮೀಕ ವಿಷಯಾಭಿಲಾಶೆಯು, ದೇವರಿಂದ ತತ್‌ಕ್ಷಣದ ಉತ್ತರವನ್ನು ಒತ್ತಾಯಿಸಿ ಬಯಸುತ್ತದೆ, ಆದರೆ ಉತ್ತರಿಸಬಲ್ಲ ದೇವರನ್ನು ಅದು ಅರಸುವುದೇ ಇಲ್ಲ. ದೇವರೇನು ಮಾಡ ಬಹುದೆಂದು ನಾನು ನಂಬಿದ್ದೇನೆ? ಆದರೆ ಈ ದಿನ, 'ಇದು ಮೂರನೇ ದಿನ' ನಾನು ನಂಬಿ ಬಯಸಿದ್ದನ್ನು ಇಂದಿಗೂ, ಇನ್ನೂ, ದೇವರು ಮಾಡಲಿಲ್ಲ , ಆದ್ದರಿಂದ ನಾನು ಖಿನ್ನನಾಗಿರುವುದು ಸರಿಯೇ ಮತ್ತು ದೇವರನ್ನು ದೂಷಿಸುವುದೂ ಸರಿಯಾದದ್ದೇ. ದೇವರು ನಮ್ಮ ಪ್ರಾರ್ಥನೆಗಳಿಗೆ ಉತ್ತರಿಸುವನು ಎಂಬ ಅಂಶದ ಮೇಲೆ ನಮ್ಮ ಆಶೆ ಆಗ್ರಹಗಳು ಇರುವಾಗಲೆಲ್ಲಾ ನಾವು ಹೀಗೆಯೇ ದಾರಿ ತಪ್ಪಿರುತ್ತೇವೆ. ಪ್ರಾರ್ಥನೆಯ ಮರ್ಮ, ಮಹತ್ವವೆಲ್ಲಾ, ದೇವರನ್ನು ಹಿಡಿದುಕೊಳ್ಳುವುದಕ್ಕಾಗಿ ಮಾತ್ರವೇ ಹೊರತು ದೇವರಿಂದ ಉತ್ತರ ಪ್ರತ್ಯುತ್ತರಗಳನ್ನು ಪಡೆಯುವುದಕ್ಕಾಗಿ ಅಲ್ಲ. ಖಿನ್ನತೆಯಲ್ಲಿದ್ದು ಕೊಂಡೇ, ಶರೀರಾ ರೋಗ್ಯದಲ್ಲಿ ದೃಢವಾಗಿರುವುದು ಅಸಾಧ್ಯ. ಖಿನ್ನನಾಗಿರುವುದೇ ರೋಗಲಕ್ಷಣ, ಆತ್ಮೀಕ ವಿಷಯ ಗಳಲ್ಲಿಯೂ ಇದು ಸತ್ಯ. ಆತ್ಮೀಕ ವಿಷಯಗಳಲ್ಲಿ ಖಿನ್ನತೆಯು ಖಂಡಿತವಾಗಿಯೂ ತಪ್ಪಾದುದಾಗಿದೆ ಮತ್ತು ಅದಕ್ಕಾಗಿ ನಮ್ಮನ್ನು ನಾವೇ ದೂಷಿಸಿಕೊಳ್ಳಬೇಕು.

ಸ್ವರ್ಗಲೋಕದ ಸ್ವಪ್ನದೃಶ್ಯಗಳನ್ನು ಕಾಣಲು ನಾವು ಬಯಸುತ್ತೇವೆ. ದೈವಶಕ್ತಿಯ ಮಹತ್ಕಾರ್ಯಗಳನ್ನು, ಭೂಕಂಪಗಳನ್ನು ಮತ್ತು ಮೇಘಧ್ವನಿಯನ್ನು ನಾವು ನಿರೀಕ್ಷಿಸುತ್ತೇವೆ. (ಇಂಥಾ ಮನೋಸ್ಥಿತಿಯೇ ನಾವು ಖಂಡಿತವಾಗಿಯೂ ಖಿನ್ನರಾಗಿರುವುದನ್ನು ಸ್ಥಿರ ಪಡಿಸುವುದು) ಮತ್ತು ಸದಾಕಾಲ ನಾವಿರುವ ಸಹಜ ಪರಿಸರದಲ್ಲಿ, ನಮ್ಮ ಸುತ್ತಮುತ್ತಲಿನ ಜನ ಜೀವನದ ನಡುವೆ, ದೇವರು ತಾನಿರುತ್ತಾ ಕಾರ್ಯಗಳನ್ನು ನಡೆಸುತ್ತಿರುವನೆಂದು, ನಾವು ಕನಸು ಮನಸ್ಸಿನಲ್ಲಿಯೂ ಊಹಿಸುವುದಿಲ್ಲ. ಸದ್ಯದಲ್ಲಿ ನಮ್ಮ ಮುಂದಿರುವ ಕರ್ತವ್ಯಗಳಲ್ಲಿ ನಮ್ಮನ್ನು ತೊಡಗಿಸಿಕೊಂಡರೆ, ಅಲ್ಲಿಯೇ ನಾವು ಆತನನ್ನು ಕಾಣುತ್ತೇವೆ. ದೈನಂದಿನ ಜೀವನದ ಗತಿಯಲ್ಲಿ ಯೇಸುಕ್ರಿಸ್ತನ ದೈವತ್ವವಿರುತ್ತದೆ ಎಂಬುದನ್ನು ನಾವು ಗ್ರಹಿಸಿದಾಗಲೇ ದೇವರು ಮಾಡಿದ ಅತ್ಯದ್ಭುತ ಕಾರ್ಯದ ವಾಸ್ತವಿಕತೆಯನ್ನು ನಾವು ತಿಳಿಯುತ್ತೇವೆ.

# ತತ್‌ಕ್ಷಣದ ಮತ್ತು ಒತ್ತಾಯದ ಪವಿತ್ರೀಕರಣದ ಬೆಲೆ

**''ಶಾಂತಿದಾಯಕನಾದ ದೇವರು ತಾನೇ ನಿಮ್ಮನ್ನು ಪರಿಪೂರ್ಣವಾಗಿ ಪವಿತ್ರ ಮಾಡಲಿ'' – (1ಥೆಸ 5:23)**

'ನಮ್ಮನ್ನು ಪವಿತ್ರೀಕರಿಸು' ಎಂದು ನಾವು ದೇವರನ್ನು ಪ್ರಾರ್ಥಿಸುವಾಗ ಅದನ್ನು ಹೊಂದಲು ಅವಶ್ಯವಿರುವ ಮೇಲಿನ ವಚನದ ಮಟ್ಟವನ್ನು ಸಾಧಿಸಲು ನಾವು ಸಿದ್ಧರಿರುವೆವೋ? ಪವಿತ್ರೀಕರಣ ಎನ್ನುವ ಪದವನ್ನು ನಾವು ಲಘುವಾಗಿ ಪರಿಗಣಿಸುತ್ತೇವೆ. ಪವಿತ್ರೀಕರಣದ ಬೆಲೆಯನ್ನು ತೆರಲು ನಾವು ಸಿದ್ಧರಿರುವೆವೋ? ಲೌಕೀಕ ಜೀವನದ ಎಲ್ಲಾ ಆಸಕ್ತಿಗಳನ್ನು ಉತ್ಕಟವಾಗಿ ಕಿರಿದು ಮಾಡಿಕೊಂಡು, ದೈವಾಸಕ್ತಿಗಳನ್ನು ಅತ್ಯಧಿಕವಾಗಿ ಹಿರಿದು ಮಾಡುವುದೇ ಆ ಬೆಲೆ. ದೇವರ ದೃಷ್ಟಿಕೋಣಗಳ ವಿಷಯದಲ್ಲಿ ನಾವು ಉತ್ಕಟವಾದ ಚಿತ್ತ ಏಕಾಗ್ರತೆ ಯಿಂದಿರುವುದೇ ಪವಿತ್ರೀಕರಣ. ದೇವರ ಕಾರ್ಯೋದ್ದೇಶಗಳಿಗಾಗಿ ನಮ್ಮ ಆತ್ಮ ಪ್ರಾಣ, ಶರೀರಗಳ ಎಲ್ಲಾ ತ್ರಾಣವನ್ನು ಸರಪಳಿಗಳಿಂದ ಬಂಧಿಸಿ, ದೇವರಿಗೆ ಪ್ರತಿಷ್ಠಿಸಿಕೊಳ್ಳುವುದೇ ಪವಿತ್ರೀಕರಣ. ಯಾವ ಉದ್ದೇಶಕ್ಕಾಗಿ ದೇವರು ನಮ್ಮನ್ನು ಪ್ರತ್ಯೇಕಿಸಿಕೊಂಡಿರುವನೋ ಅದೆಲ್ಲವನ್ನು ಆತನು ನಮ್ಮಲ್ಲಿ ನೆರವೇರಿಸಿಕೊಳ್ಳಲು ನಾವು ಸಿದ್ದರಿರುವೆವೋ ? ಆತನು ತನ್ನ ಉದ್ದೇಶಗಳನ್ನು ನಮ್ಮಲ್ಲಿ ಕಾರ್ಯಗತ ಮಾಡಿಕೊಂಡು ನಂತರ ಯೇಸುಕ್ರಿಸ್ತನಂತೆ, ದೇವರ ಚಿತ್ತವನ್ನು ನೆರವೇರಿಸುವುದಕ್ಕೆ ಮಾತ್ರವೇ ನಮ್ಮನ್ನು ನಾವು ಪ್ರತ್ಯೇಕಿಸಿ ಕೊಂಡಿರಬಲ್ಲೆವೋ? ''ಇವರಿಗೋಸ್ಕರ ನಾನು ನನ್ನನ್ನು ಪ್ರತಿಷ್ಠೆ ಪಡಿಸಿಕೊಳ್ಳುತ್ತೇನೆ'' (ಯೋಹಾನ 17:19) ನಮ್ಮಲ್ಲಿ ಹಲವರು ಪ್ರತಿಷ್ಠೀಕರಣದ ಅನುಭವವನ್ನು ಹೊಂದದಿರಲು ಕಾರಣವೆಂದರೆ ಆ ಪ್ರತಿಷ್ಠೀಕರಣದ ಅರ್ಥವನ್ನು ದೇವರ ದೃಷ್ಟಿಕೋನದಂತೆ ಗ್ರಹಿಸಲು ನಮಗಾಗುವುದಿಲ್ಲ. ಪವಿತ್ರೀಕರಿಸಲ್ಪಡುವುದು ಎಂದರೆ ನಾವು ಯೇಸುಸ್ವಾಮಿಯಲ್ಲಿ ಒಂದಾಗುವುದರ ಮೂಲಕ ಆತನನ್ನು ಆಳುವ ಸ್ವಭಾವವು, ನಮ್ಮನ್ನು ಸಹಾ ಆಳುತ್ತದೆ. ಅದರ ಬೆಲೆ ತೆರಲು ನಾವು ಸಿದ್ಧರಿರುವೆವೋ? ನಮ್ಮೊಳಗಿರುವ ದೇವರದಲ್ಲದ ಪ್ರತಿಯೊಂದನ್ನು ತ್ಯಜಿಸುವುದೇ ಆ ಬೆಲೆಯಾಗಿದೆ.

ಪೌಲನು ಮಾಡಿದ ಈ ಪ್ರಾರ್ಥನೆಯ ಸಂಪೂರ್ಣಾರ್ಥದ ಎಳೆತದೊಳಗೆ ನಾವು ಸೇರುವೆವೋ? ''ಸ್ವಾಮಿ ನಿನ್ನ ಕೃಪೆಯಿಂದ ರಕ್ಷಿಸಲ್ಪಟ್ಟ ಪಾಪಿಯನ್ನು ನೀನೆಷ್ಟರ ಮಟ್ಟಿಗೆ ಪವಿತ್ರಗೊಳಿಸುವಿಯೋ ಅಷ್ಟರ ಮಟ್ಟಿಗೂ ನನ್ನನ್ನೂ ಸಹ ರಕ್ಷಿಸಿ ಪವಿತ್ರಮಾಡು'' ಎಂದು ಹೇಳಲು ನಾವು ಸಿದ್ಧರಿರುವೆವೋ ? ತಾನು ತಂದೆಯಲ್ಲಿ ಒಂದಾಗಿರುವ ಪ್ರಕಾರ ನಾವೂ ತನ್ನಲ್ಲಿ ಒಂದಾಗಿರಬೇಕೆಂದು ಯೇಸುಸ್ವಾಮಿಯವರು ಪ್ರಾರ್ಥಿಸಿದ್ದಾರೆ (ಯೋಹಾನ 17:21–23 ನೋಡಿರಿ) ಒಬ್ಬನ ಜೀವಿತದಲ್ಲಿ ಪವಿತ್ರಾತ್ಮನ ಇರುವಿಕೆಯ ಪ್ರಬಲ ಸಾಕ್ಷಿಯೆಂದರೆ ಅವನ ಜೀವಿತವು ಕ್ರಿಸ್ತನ ಕುಟುಂಬಕ್ಕೆ ಸೇರಿದವರ ಹೋಲಿಕೆಯಂತಿರುತ್ತದೆ ಮತ್ತು ಆತನಂತಿರದವುಗಳಿಂದ ಬಿಡುಗಡೆ ಪಡೆದಿರುತ್ತದೆ. ಪವಿತ್ರಾತ್ಮನೆಸಗುವ ಇಂಥಾ ಕಾರ್ಯಕ್ಕಾಗಿ ನಮ್ಮನ್ನು ನಾವು ಪ್ರತ್ಯೇಕಿಸಿ ಬದಿಗಿರಿಸಿಕೊಳ್ಳಲು ಸಿದ್ಧರಿರುವೆವೋ ?

# ಆತ್ಮೀಕವಾಗಿ ದಣಿದು ಬಳಲಿರುವೆಯೋ ?

**''ಯಹೋವನು ನಿರಂತರ ದೇವರೂ ... ಆತನು ದಣಿದು ಬಳಲುವದಿಲ್ಲ''–(ಯೆಶಾಯ 40:28)**

ದಣಿದು ಬಳಲುವುದೆಂದರೆ ಶರೀರದ ಜೀವಧಾರಕ ಚೈತನ್ಯಗಳೆಲ್ಲಾ ವ್ಯಯಿಸಲ್ಪಟ್ಟು ಕ್ಷೀಣವಾಗಿ ರುತ್ತವೆ. ಪಾಪದ ಮೂಲಕ ಆತ್ಮೀಕ ಬಳಲಿಕೆ ಯುಂಟಾಗುವುದಿಲ್ಲ, ಆದರೆ ದೇವ ಸೇವೆ ಮಾಡುವುದರಿಂದ ಆತ್ಮೀಕ ಬಳಲಿಕೆಯುಂಟಾಗುತ್ತದೆ, ನೀನು ಪೂರ್ಣವಾಗಿ ದಣಿದು ಬಳಲಿ ಹೋಗಿರುವೆಯೋ ಅಥವಾ ಇಲ್ಲವೋ? ಎಂಬುದು, ನೀನು ನಿನ್ನ ತ್ರಾಣಕ್ಕೆ ಬೇಕಾದ ಸರಬರಾಜನ್ನು ಎಲ್ಲಿಂದ ಪಡೆಯುತ್ತಿರುವಿ ಎಂಬುದನ್ನಾಧರಿಸಿದೆ. ''ನನ್ನ ಕುರಿಗಳನ್ನು ಮೇಯಿಸು'' ಎಂದು ಯೇಸು ಸ್ವಾಮಿಯು ಪೇತ್ರನಿಗೆ ಹೇಳಿದನು, ಆದರೆ ಅವನಿಗೆ ಮೇಯಿಸಲು ಏನನ್ನೂ ಕೊಡಲಿಲ್ಲ. ಮುರಿಯಲ್ಪಟ್ಟ ರೊಟ್ಟಿಯನ್ನಾಗಿಯೂ ಸುರಿಯಲ್ಪಟ್ಟ ದ್ರಾಕ್ಷಾರಸವನ್ನಾಗಿಯೂ ಸಂಸ್ಕರಿಸುವ ಪ್ರಕ್ರಿಯೆಯ ಮರ್ಮವೆಂದರೆ, ಜನರ ಆತ್ಮಗಳು ದೇವರಲ್ಲಿ ನೇರವಾಗಿ ಪೋಷಣೆ ಹೊಂದುವುದನ್ನು ಕಲಿತುಕೊಳ್ಳುವ ತನಕ, ನೀನೇ ಆ ಆತ್ಮಗಳಿಗೆ ಪೌಷ್ಠಿಕ ಆಹಾರವಾಗಿರಬೇಕು. ಅವರು ನಿನ್ನನ್ನೇ ತಳಮಟ್ಟ ಬಸಿದು ಬರಿದು ಮಾಡಬೇಕು. ನಿನ್ನ ಎಲ್ಲಾ ಸರಬರಾಜುಗಳನ್ನು ಮರಳಿ ತುಂಬಿ ಭರ್ತಿ ಮಾಡಿ ಕೊಂಡಿರಲು ಎಚ್ಚರದಿಂದಿರಬೇಕು. ಇಲ್ಲವಾದರೆ ನಿರೀಕ್ಷೆಗೆ ಮುಂಚೆಯೇ ಬಳಲಿ ಬೆಂಡಾಗಿಬಿಡುವೆ. ಜನರ ಆತ್ಮಗಳು ಯೇಸುಸ್ವಾಮಿಯಲ್ಲಿ ತಮ್ಮ ಜೀವನಾಧಾರಗಳನ್ನು ತಮ್ಮಷ್ಟಕ್ಕೆ ತಾವೇ ಸೆಳಕೊಳ್ಳಲು ಸಾಧ್ಯವಾಗುವವರೆಗೆ ಆ ಆತ್ಮಗಳು ನಿನ್ನೊಳಗಿಂದಲೇ ಜೀವಾಧಾರಗಳನ್ನು ಸೆಳೆದುಕೊಳ್ಳ ಬೇಕಾಗುತ್ತದೆ; ಅವರು ತಮ್ಮ ಪೋಷಣೆಯನ್ನು ದೇವರಿಂದ ನೇರವಾಗಿ ಪಡೆದುಕೊಳ್ಳಲು ಅರಿಯುವ ತನಕ ಅವರಿಂದ ನೀನು ಅಕ್ಷರಶಃ (ಮೊಲೆ ಕುಡಿಯುವ ಮಗುವಿನಂತೆ) ಚೀಪಲ್ಪಡಬೇಕು. ದೇವರ ಕುರಿಮರಿ ಗಳಿಗಾಗಿ, ಆತನ ಕುರಿಗಳಿಗಾಗಿ ಹಾಗೂ ಆತನಿಗಾಗಿ, ನಾವು ಋಣಸ್ತ್ರಯರಾಗಿರಬೇಕು.

ಈಗ ದೇವರ ಸೇವೆಯಲ್ಲಿ ನೀನು ಅನುಸರಿಸುತ್ತಿರುವ ಮಾರ್ಗವು ನಿನ್ನನ್ನು ದಿಕ್ಕುತಪ್ಪಿಸಿ ಬಳಲುವಿಕೆಯಲ್ಲಿ ನುಸುಳಿಸಿತೇ ? ನಿನ್ನ ಆಸೆ ಆಕಾಂಕ್ಷೆಗಳನ್ನು ಮತ್ತು ಒಲವುಗಳನ್ನು ಹೊಸತುಮಾಡಿ ಅವುಗಳನ್ನು ಪುನಃಶ್ಚೇತನಗೊಳಿಸು. ನಿನ್ನ ಸೇವೆಯನ್ನು ಎಲ್ಲಿಂದ ಪ್ರಾರಂಭಿಸಿರುವಿ? ನಿನ್ನದೇ ಆದ ಸಹಾನುಭೂತಿಯಿಂದಲೋ ಅಥವಾ ಯೇಸುಕ್ರಿಸ್ತನಿಂದ ಉಂಟಾದ ಬಿಡುಗಡೆಯ ಆಧಾರದ ಮೇಲೆಯೋ ? ಈ ಸೇವಾಕಾರ್ಯರಂಭವನ್ನು ಹುಡುಕುತ್ತಾ ಸತತವಾಗಿ ನೆನಪಿನಾಳಕ್ಕೆ ಮರು ಪ್ರಯಾಣಿಸಿ, ಸೇವೆಯನ್ನು ಕೈಗೆತ್ತಿಕೊಳ್ಳಲು ಕಾರಣವಾಗಿದ್ದ ಮೂಲಶಕ್ತಿ ಯಾವುದೆಂಬುದನ್ನು ನೆನಸಿಕೋ; ಆಗ ''ಓ ಸ್ವಾಮಿ, ನಾನು ಬಹಳವಾಗಿ ದಣಿದು ಬಳಲಿ ಹೋಗಿರುವೆನು'' ಎಂದು ಹೇಳಲು ನಿನಗೆ ಯಾವ ಹಕ್ಕೂ ಇರುವುದಿಲ್ಲ. ನೀನು ಹೀಗೆ ಬಳಲಿ ಹೋಗಲೆಂದೇ ಆತನು ನಿನ್ನನ್ನು ರಕ್ಷಿಸಿ ತನಗಾಗಿ ಪ್ರತಿಷ್ಠಿಸಿ ಕೊಂಡಿರುವನು. ದೇವರಿಗಾಗಿ ನಿಸ್ಸಾರವಾಗಿ ಬೆಂಡಾಗಬೇಕು, ಆದರೆ ಒಂದು ಮಾತ್ರ ನಿನಗೆ ನೆನಪಿರಲಿ ನಿನ್ನ ಎಲ್ಲಾ ಸರಬರಾಜುಗಳು ಆತನಿಂದಲೇ ಒದಗುತ್ತಿರುತ್ತವೆ. ''ನನ್ನ (ಜೀವಜಲದ) ಒರತೆ ಗಳೆಲ್ಲಾ ನಿನ್ನಲ್ಲಿಯೇ ಅವೆ'' (ಕೀರ್ತನೆ 87:7) ನೀನು ಸೇವೆಯಲ್ಲಿ ನಿತ್ರಾಣನಾಗುವುದಿಲ್ಲ.

# ದೇವರ ವಿಷಯದಲ್ಲಿ ನಿನ್ನ ಕಲ್ಪನಾಶಕ್ತಿಯೂ ಕೊರತೆಗೊಳಗಾಗಿದೆಯಾ ?

**''ನಿಮ್ಮ ಕಣ್ಣುಗಳನ್ನು ಮೇಲಕ್ಕೆತ್ತಿಕೊಂಡು ನೋಡಿರಿ ! ಈ ನಕ್ಷತ್ರಗಳನ್ನು ಸೃಷ್ಟಿಸಿದಾತನು ಯಾರು ?'' - (ಯೆಶಾಯ 40:26)**

ಪ್ರವಾದಿಯಾದ ಯೆಶಾಯನ ಕಾಲದಲ್ಲಿ, ದೇವ ಜನಾಂಗವು ಕಲ್ಪನಾ ಮೂರ್ತಿಗಳನ್ನು ದೃಷ್ಟಿಸು ವದರ ಮೂಲಕ, ದೇವರನ್ನು ಕಾಣುವ ತಮ್ಮ ಸಹಜ ಕಲ್ಪನಾಶಕ್ತಿಯನ್ನು ಕೊರತೆಗೊಳಪಡಿಸಿಕೊಂಡಿದ್ದರು. ಯೆಶಾಯನು ಅವರನ್ನು ಆಕಾಶದ ಕಡೆಗೆ ಕಣ್ಣೆತ್ತಿ ನೋಡುವಂತೆ ಮಾಡಿ, ಅವರ ಭಾವನಾಶಕ್ತಿಯನ್ನು ತಕ್ಕ ರೀತಿಯಲ್ಲಿ ಉಪಯೋಗಿಸುವಂತೆ ಮಾಡಿದನು. ಭಕ್ತನಿಗೆ ನಿಸರ್ಗವು ಪರಮ ಪವಿತ್ರವಾಗಿದೆ. ನಾವು ದೇವರ ಮಕ್ಕಳಾಗಿದ್ದರೆ ನಿಸರ್ಗದಲ್ಲಿ ಅತ್ಯಮೋಘ ಐಶ್ವರ್ಯ ರಾಶಿಯನ್ನು ಕಾಣುವೆವು; ಕೊರತೆಯಲ್ಲಿರುವ ನಮ್ಮ ಕಲ್ಪನಾಶಕ್ತಿಯನ್ನು ಯಥಾರ್ಥವಾಗಿ ಉಪಯೋಗಿಸಿದರೆ ಬೀಸುವ ಎಲ್ಲಾ ಮಾರುತಗಳಲ್ಲಿ, ವರ್ಷದ ಪ್ರತಿಯೊಂದು ಹಗಲಿನಲ್ಲಿ ಮತ್ತು ರಾತ್ರಿಯಲ್ಲಿ, ಆಕಾಶದಲ್ಲಿ ಕಾಣಬರುವ ಎಲ್ಲಾ ಸೂಚನೆಗಳಲ್ಲಿ, ನೆಲದ ಮೇಲಿನ ಪ್ರತಿಯೊಂದು ಅರಳುವಿಕೆಯಲ್ಲಿ ಮತ್ತು ಬಾಡುವಿಕೆಯಲ್ಲಿ, ದೇವರು ನಮ್ಮ ಹತ್ತಿರ ಬರುತ್ತಿರುವುದನ್ನು ಕಾಣುತ್ತೇವೆ.

ಕಲ್ಪನಾ ಶಕ್ತಿಯನ್ನು ಸೆರೆ ಹಿಡಿದು ಬಂಧಿಸುವುದೇ ಆತ್ಮೀಕ ಏಕಾಗ್ರತೆಯ ಒಂದು ನಿಜ ಪರೀಕ್ಷೆ. ನಿನ್ನ ಕಲ್ಪನಾ ಶಕ್ತಿಯು ಒಂದು ಕಲ್ಪನಾ ಮೂರ್ತಿಯನ್ನು ದೃಷ್ಟಿಸುತ್ತಿದೆಯೇ ? ಆ ಕಲ್ಪನಾ ಮೂರ್ತಿ ನೀನೇ ಆಗಿರುವಿಯೋ? ನಿನ್ನ ಕರ್ತವ್ಯವೋ? ಕರ್ತವ್ಯನಿರತನಾದವನೊಬ್ಬನು ಹೇಗಿರಬೇಕೆಂಬ ನಿನ್ನ ಪರಿಕಲ್ಪ ನೆಯೋ? ರಕ್ಷಣೆ ಮತ್ತು ಶುದ್ಧೀಕರಣಗಳ ವಿಷಯದಲ್ಲಿ ನಿನ್ನದೇ ಆದ ಅನುಭವಗಳೋ ? ಹಾಗಿದ್ದರೆ ನಿನ್ನ ಭಾವನಾ ಶಕ್ತಿಯೂ ಕೊರತೆಗೊಳಗಾಗಿದೆ ಮತ್ತು ಬಿಕ್ಕಟ್ಟುಗಳನ್ನು ಎದುರಿಸಲು ನಿನ್ನಲ್ಲಿ ಯಾವ ಬಲವೂ ಇಲ್ಲ, ನೀನು ಕತ್ತಲೆಯಲ್ಲಿ ಮಾತ್ರ ಬಾಳುವಿ. ನಿನ್ನ ಕಲ್ಪನಾಶಕ್ತಿಯು ಕೊರತೆಯಲ್ಲಿದ್ದರೆ, ಅದನ್ನು ನೀಗಿಸಲು ನಿನ್ನ ಅನುಭವಗಳತ್ತ ದೃಷ್ಟಿ ಹರಿಸಬೇಡ; ಈಗ ನಿನಗೆ ಅಗತ್ಯವಾಗಿರುವುದು ಸ್ವತಃ ದೇವರೇ; ಸ್ವಯಂನಿಂದ ನೀನು ಹೊರಗೆ ಹೊರಟು ಬಾ, ಕಲ್ಪನಾ ಮೂರ್ತಿಗಳಿಂದ ದೂರ ಸರಿ, ನಿನ್ನ ಕಲ್ಪನಾಶಕ್ತಿಯನ್ನು ಕೊರತೆಗೊಳಿಸುವಂಥವುಗಳಿಂದ ದೂರಸರಿದು, ಸ್ವಯಂ ಅನ್ನು ಪ್ರಬೋಧಿಸು. ಯೆಶಾಯನು ಜನರಿಗೆ ಮಾಡಿದ ಮೂದಲಿಕೆಯನ್ನು ಗ್ರಹಿಸು ಮತ್ತು ವಿವೇಚನಾಪೂರ್ವಕ ವಾಗಿ ನಿನ್ನ ಕಲ್ಪನಾಶಕ್ತಿಯನ್ನು ದೇವರ ಕಡೆಗೆ ತಿರುಗಿಸು.

ನಿನ್ನ ಪ್ರಾರ್ಥನೆಗಳು ಬೇಸರಕರವಾಗಿಯೂ, ನಿಷ್ಫಲವಾಗಿಯೂ ಇರುತ್ತಿದ್ದರೆ, ಅಲ್ಲಿ ದೇವರನ್ನು ಕಾದುಕೊಂಡಿರಬೇಕಾದ ಸಹನೆಯೂ ಭಾವನಾಶಕ್ತಿಯು ನಿನ್ನಲ್ಲಿಲ್ಲವಾಗಿದೆ. ಸ್ಪಷ್ಟ ವಿವೇಚನೆಯಿಂದ ದೇವರ ಮುಂದೆ ಪ್ರಾರ್ಥನೆಯನ್ನು ನಿವೇದಿಸಲು ನಿನ್ನಲ್ಲಿ ಬಲವೇ ಇಲ್ಲ. ವೈಯಕ್ತಿಕ ಸಂಪರ್ಕ ಸಾಧನೆಗಾಗಿ ಪ್ರಾರ್ಥಿಸುವುದಕ್ಕಿಂತಲೂ ಮಿಗಿಲಾಗಿ ಪರಾರ್ಥ ಪ್ರಾರ್ಥನೆಗಳ ಮೂಲಕ ಮುರಿಯಲ್ಪಟ್ಟ ರೊಟ್ಟಿಯೂ ಸುರಿಯಲ್ಪಟ್ಟ ದ್ರಾಕ್ಷಾರಸವೂ ಆಗುವುದು ಹೇಗೆಂಬುದನ್ನು ನಾವು ಅರಿತುಕೊಳ್ಳಬೇಕು. ಈ ಕಲ್ಪನಾ ಶಕ್ತಿಯು, ಭಕ್ತನಿಗೆ ದೇವರು ದಯಪಾಲಿಸಿದ ದೊಡ್ಡ ಬಲವಾಗಿದೆ, ಅದರಿಂದ ಅವನು ತನ್ನನ್ನು ತನ್ನೊಳಗಿಂದ ಹೊರಗಿರಿಸಿಕೊಂಡು, ಈ ವರೆಗೆ ತಾನೆಂದೂ ಇರದಿದ್ದ ದೈವ ಬಾಂಧವ್ಯದೊಳಗೆ ತನ್ನನ್ನು ತಾನು ಸೇರಮಾಡಿಕೊಳ್ಳುತ್ತಾನೆ.

# ದೇವರಲ್ಲಿಟ್ಟಿರುವ ನಿನ್ನ ನಿರೀಕ್ಷೆ ಸ್ಮೃತಿತಪ್ಪಿ ಮರಣಿಸುತ್ತಿರುವುದೇ?

**''ಸ್ಥಿರಚಿತ್ತನನ್ನು ಶಾಂತಿಯಲ್ಲಿ ನೆಲೆಗೊಳಿಸಿ ಕಾಯುವಿ ಅವನಿಗೆ ನಿನ್ನಲ್ಲಿ ಭರವಸವಿದೆ'' -**

**(ಯೆಶಾಯ 26:3)**

ನಿನ್ನ ಮನೋಭಾವವು ದೇವರಲ್ಲಿ ನೆಲೆಗೊಂಡಿರುವುದೋ ? ಇಲ್ಲವೇ ಕೊರತೆಯಲ್ಲಿದೆಯೋ? ಕೊರತೆಗೊಳಗಾದ ಕಲ್ಪನಾಬಲವೇ ಸೇವಕನ ಜೀವಿತದಲ್ಲಿ ಬಳಲುವಿಕೆಗೆ ಮತ್ತು ಸತ್ವಹರಣಕ್ಕೆ ಬಲವಾದ ಮೂಲಕಾರಣವಾಗಿದೆ. ಒಂದು ವೇಳೆ ನಿನ್ನ ಭಾವನೆಗಳನ್ನು ಈವರೆಗೂ ದೇವರಮುಂದೆ ಸಮರ್ಪಕವಾಗಿ ನಿರೂಪಿಸಲಾಗದೇ ಇದ್ದರೆ, ಈಗಲೇ ಅದನ್ನು ಮಾಡಲಾರಂಭಿಸು; ದೇವರು ತಾನೇ ನಿನ್ನ ಬಳಿಬರಲೆಂದು ನೀನು ಕಾಯುತ್ತಿರುವುದು ಕೇವಲ ನಿಶ್ಪ್ರಯೋಜಕವಾಗಿದೆ. ಕಲ್ಪನಾ ಮೂರ್ತಿಗಳ ಕಡೆಗಿರುವ ನಿನ್ನೆಲ್ಲಾ ಭಾವನೆಗಳನ್ನು ಅಲ್ಲಿಂದ ತೊಲಗಿಸಿಬಿಟ್ಟು, ದೇವರ ಕಡೆಗೆ ತಿರುಗಿಕೊಂಡು ರಕ್ಷಣೆಹೊಂದು. ಕಲ್ಪನಾ ಶಕ್ತಿಯು ದೇವರು ನಮಗೆ ದಯಪಾಲಿಸಿದ ಉತ್ಕೃಷ್ಟವಾದ ಬಹುಮಾನ ಮತ್ತು ಅದು ಸಂಪೂರ್ಣವಾಗಿ ದೇವರಿಗಾಗಿ ಮೀಸಲಿಡಬೇಕು. ನೀನೇನಾದರೂ ನಿನ್ನೆಲ್ಲಾ ಯೋಚನೆಗಳನ್ನು ಕ್ರಿಸ್ತನಿಗೆ ವಿಧೇಯವಾಗುವಂತೆ ಸೆರೆ ಹಿಡಿದರೆ, ದುಃಖ, ಸಂಕಟಗಳು ನಿನಗೆದುರಾದಾಗ ನಿನ್ನ ನಂಬಿಕೆಗೆ ಇದೇ ಬಲವಾದ ದೊಡ್ಡ ಸಂಪತ್ತು ಆಗಿರುತ್ತದೆ. - ಯಾಕೆಂದರೆ ಆಗ ನಿನ್ನ ನಂಬಿಕೆ ಹಾಗೂ ದೇವರ ಆತ್ಮನು ಜೊತೆಯಾಗಿ ಕಾರ್ಯಸಾಧನೆ ಮಾಡುವವು. ದೇವರಿಗೆ ಗೌರವ, ಕೃತಜ್ಞತೆ ಸಲ್ಲಿಸಲು ಯೋಗ್ಯವಾದ ಉದ್ದೇಶಗಳು ಮತ್ತು ಚಿಂತನೆಗಳು ನಿನ್ನಲ್ಲಿ ಉಂಟಾದಾಗ ಅವುಗಳನ್ನು ಪ್ರಕೃತಿಯ ಚಟುವಟಿಕೆಗಳಿಗೆ ಹೋಲಿಸಿ, ಸಂಬಂಧ ಕಲ್ಪಿಸುವುದನ್ನು ನೀನು ಕಲಿಯಬೇಕು. ಪ್ರಕೃತಿಯ ಚಟುವಟಿಕೆ ಎಂದರೆ ಸೂರ್ಯೋದಯಗಳು, ಸೂರ್ಯಾಸ್ತಮಗಳು, ಸೂರ್ಯ ಮತ್ತು ನಕ್ಷತ್ರಗಳು, ಋತುಗಳ ಬದಲಾವಣೆ ಮುಂತಾದವುಗಳೊಡನೆ ನಿನ್ನ ಮನೋಭಾವವನ್ನು ಸಮ್ಮಿಳಿತಗೊಳಿಸಬೇಕು. ಆಗ ನಿನ್ನ ಚಿಂತನೆಗಳು, ನಿನ್ನ ಮನೋಭಾವನೆಗಳು ನಿನ್ನ ಅಂತಃ ಪ್ರೇರಣಾಧೀನವಾಗದೆ, ಅವು ಯಾವಾಗಲೂ ದೇವರ ಸೇವಾರ್ಥವಾಗಿರುತ್ತವೆ.

''ನಮ್ಮ ಪಿತೃಗಳಂತೆ ನಾವೂ ಪಾಪಿಗಳು, ಅಪರಾಧ ಮಾಡಿದೆವು'' ''ನಿನ್ನ ಅದ್ಭುತ ಕ್ರಿಯೆಗಳನ್ನು ......... ಸ್ಮರಿಸಲಿಲ್ಲ'' ....... (ಕೀರ್ತನೆ 106:6-7) ಹಾಗಿದ್ದರೆ ಹೀಗೆ ಸ್ಮರಣೆ ತಪ್ಪಿಸುವಂಥಾ ನಿದ್ರೆಬರಿಸುವ ಸ್ಥಳದಲ್ಲಿ ಚುಚ್ಚುವ ಮೊನಚಾದ ಅಸ್ತ್ರವನ್ನಿರಿಸು. ''ದೇವರು ಸದ್ಯಕ್ಕೆ ಮಾತನಾಡುತ್ತಿಲ್ಲ'' ಎಂದು ಹೇಳಿಕೊಳ್ಳಬೇಡ, ದೇವರು ಖಂಡಿತವಾಗಿಯೂ ಮಾತಾಡುತ್ತಿರುವನು. ನೀನು ಯಾರಿಗೆ ಸೇರಿದವನು, ಮತ್ತು ಈಗ ಯಾರನ್ನು ಸೇವಿಸುತ್ತಿರುವಿ ಎಂಬುದನ್ನು ಜ್ಞಾಪಕಕ್ಕೆ ತಂದುಕೋ. ಹೀಗೆ ಸ್ಮರಣೆ ಮಾಡಿಕೊಂಡು ನಿನ್ನನ್ನು ನೀನೇ ಹುರಿದುಂಬಿಸಬೇಕು. ಆಗ ದೇವರಲ್ಲಿ ನೀನಿಟ್ಟಿರುವ ವಾತ್ಸಲ್ಯವು ಹತ್ತು ಪಟ್ಟು ಹೆಚ್ಚಾಗುವುದು. ನಿನ್ನ ಭಾವನಾ ಶಕ್ತಿಯು ಇನ್ನೆಂದಿಗೂ ಅಭಾವಕ್ಕೊಳಗಾಗುವುದಿಲ್ಲ. ಅದು ಚುರುಕಾಗುತ್ತದೆ, ಕುತೂಹಲ ಭರಿತವಾಗುತ್ತದೆ. ನಿನ್ನ ನಿರೀಕ್ಷೆಗಳೂ ವರ್ಣಿಸಲಸಾದ್ಯವಾದ ರೀತಿಯಲ್ಲಿ ಕೈಗೂಡುತ್ತವೆ.

# ನಾನು ಆಲಿಸಲೇಬೇಕೆ ?

**''ನೀನೇ ನಮ್ಮ ಸಂಗಡಮಾತಾಡು, ನಾವು ಕೇಳುವೆವು. ದೇವರುನಮ್ಮ ಸಂಗಡ ಮಾತಾಡಿದರೆ ನಾವು ಸತ್ತೇವು'' - (ವಿಮೋಚನಕಾಂಡ 20:19)**

ಪ್ರಜ್ಞಾಪೂರ್ವಕವಾಗಿ ನಾವು ದೇವರಿಗೆ ಅವಿಧೇಯರಾಗುವುದಿಲ್ಲ, ಆದರೆ ನಾವು ಸಹಜವಾಗಿ ಆತನನ್ನು ಲಕ್ಷಿಸುವುದಿಲ್ಲ. ದೇವರು ತನ್ನ ಆಜ್ಞಾವಿಧಿಗಳನ್ನು ನಮಗೆ ಕೊಟ್ಟಿರುತ್ತಾನೆ. ಅವು ಅಲ್ಲಿಯೇ ಇವೆ, ನಾವು ಮಾತ್ರ ಅವುಗಳಿಗೆ ಗಮನಕೊಡುವುದಿಲ್ಲ. ಇಚ್ಛಾಪೂರ್ವಕ ಅವಿಧೇಯತೆ ಯಿಂದಲ್ಲ, ಆದರೆ ನಾವು ದೇವರನ್ನು ನಿಜವಾಗಿಯೂ ಪ್ರೀತಿಸುವುದಿಲ್ಲ, ಗೌರವಿಸುವುದೂ ಇಲ್ಲವಾದ್ದರಿಂದ. ''ನೀವು ನನ್ನನ್ನು ಪ್ರೀತಿಸುವವರಾದರೆ ನನ್ನ ಆಜ್ಞೆಗಳನ್ನು ಕೈಕೊಂಡು ನಡೆಯುವಿರಿ'' (ಯೋಹಾನ-14:15). ಸತತವಾಗಿ ನಾವು ದೇವರಿಗೆ ಅಗೌರವ ತೋರಿಸಿದ್ದೇವೆಂಬುದನ್ನು ಒಮ್ಮೆ ಮನಗಂಡಿದ್ದೇಯಾದರೆ ನಾವು ದೇವರಿಗೆ ಲಕ್ಷ್ಯ ಕೊಡದಿದ್ದುದರಿಂದ ಉಂಟಾಗುವ ನಾಚಿಕೆ ಮತ್ತು ದೈನ್ಯತೆಗಳು ನಮ್ಮನ್ನು ಆವರಿಸಿಕೊಳ್ಳುತ್ತವೆ.

''ನೀನೇ ನಮ್ಮ ಸಂಗಡ ಮಾತಾಡು ನಾವು ಕೇಳುವೆವು ದೇವರು ನಮ್ಮ ಸಂಗಡ ಮಾತಾಡಿದರೆ!'' (ಮಾತಾಡುವುದು ಬೇಡ) ದೇವರು ನಮ್ಮೊಂದಿಗೆ ಮಾತಾಡುವುದನ್ನು ತಪ್ಪಿಸಿಕೊಂಡು ಆತನ ಸೇವಕ ರೊಂದಿಗೆ ಮಾತನಾಡುವ ಒಲವು ತೋರಿಸುವುದರ ಮೂಲಕ ನಾವೆಷ್ಟು ಲಘುವಾಗಿ ದೇವರನ್ನು ಪ್ರೀತಿಸು ತ್ತಿದ್ದೇವೆಂಬುದನ್ನು ತೋರ್ಪಡಿಸಿಕೊಳ್ಳುತ್ತೇವೆ. ಇತರರು ಮಂಡಿಸುವ (ದೇವರ ವಿಷಯದ) ಸಾಕ್ಷಿಗಳನ್ನು ಆಲಿಸಲು ಇಚ್ಛೈಸುತ್ತೇವೆ. ಆದರೆ ದೇವರು ಸ್ವತಃ ನಮ್ಮೊಂದಿಗೆ ಮಾತನಾಡುವುದನ್ನು ಆಲೈಸಲು ನಮಗೆ ಇಚ್ಛೆ ಇಲ್ಲ. ದೇವರು ನಮ್ಮ ಸಂಗಡ ಮಾತಾಡುವನೆಂದರೆ ನಾವೇಕೆ ಅಷ್ಟಾಗಿ ಹೆದರಿ ದಿಗಿಲು ಬೀಳುತ್ತೇವೆ ? ಯಾಕೆಂದರೆ ನಮಗೆ ತಿಳಿದಿದೆ; - ದೇವರು ಮಾತನಾಡಿದರೆ, ಆತನು ಹೇಳಿದ್ದನ್ನು ಕೇಳಿ ವಿಧೇಯತೆಯಿಂದ ಅದನ್ನು ಮಾಡಿ ಮುಗಿಸಲೇಬೇಕು, ಇಲ್ಲವೇ ನಿನ್ನ ಆಜ್ಞೆಯನ್ನು ನಾವು ಪಾಲಿಸುವುದಿಲ್ಲವೆಂದು ದೇವರಿಗೆ ಹೇಳಬೇಕು. ಆದರೆ ನಾವು ಕೇಳಿಸಿ ಕೊಂಡದ್ದು ದೇವ ಸೇವಕನ ಸ್ವರ ಮಾತ್ರವಾಗಿದ್ದರೆ, ಅದು ಆಜ್ಞಾರ್ಥಕ ವಲ್ಲವೆಂದು ನಾವು ಭಾವಿಸಿಕೊಂಡು ಹೀಗೆ ಹೇಳಬಹುದು ''ಅದು ಸರಿ. ನೀನೇನು ಹೇಳುತ್ತಿರುವಿಯೋ, ಅದು ದೈವಸತ್ಯವಿರಬಹುದೆಂಬುದನ್ನು ನಾನು ನಿರಾಕರಿಸುವುದಿಲ್ಲವಾದರೂ ಆ ಹೇಳಿಕೆಯೂ ಕೇವಲ ನಿನ್ನದೇ ಆದ ಅಭಿಪ್ರಾಯಗಳಿಂದ ಕೂಡಿರಲೂಬಹುದು'' ಎಂದು.

ನನ್ನನ್ನು ತನ್ನ ಮಗನನ್ನಾಗಿ ನಡೆಸಿಕೊಂಡು ನನ್ನನ್ನು ಪರಾಂಬರಿಸುತ್ತಿರುವ ದೇವರನ್ನು ಯಾವಾಗಲೂ ಅಲಕ್ಷ್ಯಮಾಡುವುದರ ಮೂಲಕ, ನಾನು ಆತನನ್ನು ದೀನಾವಸ್ಥೆಯ ಸ್ಥಿತಿಗೊಯ್ದಿರುವೆನೇ ? ನಾನು ಆತನಿಗೆ ಕಿವಿಗೊಟ್ಟರೆ, ನಾನು ಹೊರೆಸಿದ ದೀನಾವಸ್ಥೆಯು ಹಿಂತಿರುಗಿ ನನ್ನ ಮೇಲೆ ಬರುತ್ತದೆ - ''ಕರ್ತನೇ ನಾನೇಕೆ ಇಷ್ಟು ಮಂದಬುದ್ಧಿ ಯುಳ್ಳವನೂ, ಹಠಮಾರಿಯೂ ಆಗಿದ್ದೆನು ?'' ಒಮ್ಮೆ ನಾವು ದೇವರಿಗೆ ಕಿವಿಗೊಟ್ಟು ಆಲಿಸಿದರೆ ಇಂಥಾ ದೀನತೆಯ ಪ್ರತಿಕ್ರಿಯು ಅದರ ಪ್ರತಿಫಲವಾಗಿರುತ್ತದೆ. ಆತನ ಸ್ವರವನ್ನು ಕಡೆಗೊಮ್ಮೆ ನಾನು ಕೇಳಿಸಿಕೊಂಡ ನಂತರ, ಆತನ ಸ್ವರವನ್ನು ಕೇಳಿಸಿಕೊಳ್ಳಲು ಇಷ್ಟು ದೀರ್ಘಕಾಲ ಬೇಕಾಯಿತಲ್ಲವೇ ಎಂಬ ಲಜ್ಜೆಯಿಂದುಂಟಾದ ಸ್ಫೂರ್ತಿಯು ನಿಜವಾದ ಆನಂದವನ್ನುಂಟುಮಾಡುತ್ತದೆ.

# ಆಲಿಸುವ ಶ್ರದ್ಧೆ

**''ಅಪ್ಪಣೆಯಾಗಲಿ, ನಿನ್ನ ದಾಸನು ಕಾದಿದ್ದಾನೆ'' - (1 ಸಮುವೇಲ 3:10)**

ದೇವರು ನುಡಿದ ಒಂದು ವಿಷಯವನ್ನು ನಾನು ಕಿವಿಗೊಟ್ಟು ಆಲಿಸಿರುವುದು ನಿಜ ವಾಗಿದ್ದರೂ, ಇನ್ನೂ ಮುಂದೆಯೂ ದೇವರು ಹೇಳುವುದನ್ನೆಲ್ಲಾ ನಾನು ಕಿವಿಗೊಟ್ಟು ಕೇಳಿಸಿಕೊಳ್ಳ ಬೇಕೆಂಬುದಕ್ಕೆ ಅದು ದಾರಿಯಾಗುವುದಿಲ್ಲ. ದೇವರು ಹೇಳುವಂಥವುಗಳಿಗೆ ನಮ್ಮ ಬುದ್ಧಿಯ ಹಾಗೂ ಹೃದಯದ ಮಂದ ಸ್ಪಂದನೆಗಳನ್ನು ತೋರುವ ಮೂಲಕ ನಾವು ದೇವರನ್ನು ಪ್ರೀತಿಸುವದಿಲ್ಲ, ಆತನನ್ನು ಗೌರವಿಸುವುದಿಲ್ಲ ವೆಂಬುದನ್ನು ನಾವು ಪ್ರದರ್ಶಿಸುತ್ತೇವೆ. ನಾನು ನನ್ನ ಸ್ನೇಹಿತನನ್ನು ಪ್ರೀತಿಸುತ್ತಿದ್ದರೆ, ಆತನೇನನ್ನು ಬಯಸುತ್ತಿದ್ದಾ ನೆಂಬುದನ್ನು ನನ್ನ ಮನೋ ಬುದ್ಧಿಯಿಂದ ಪತ್ತೆ ಹಚ್ಚುವೆನಲ್ಲವೇ! ಆದ್ದರಿಂದಲೇ ಯೇಸುಸ್ವಾಮಿಯು ಹೇಳಿದನು ''ನೀವು ನನ್ನ ಸ್ನೇಹಿತರು'' (ಯೊಹಾನ 15:14). ಯೇಸುಸ್ವಾಮಿಯ ಆಜ್ಞೆಯೊಂದಕ್ಕೆ ಈ ವಾರದಲ್ಲಿ ನಾನು ಅವಿಧೇಯ ನಾಗಿದ್ದೆನೋ ? ಅದು ಯೇಸುಕ್ರಿಸ್ತನ ಆಜ್ಞೆ ಎನ್ನುವುದನ್ನು ಅರಿತಿದ್ದರೆ, ನಾನು ಪ್ರಜ್ಞಾಪೂರ್ವಕವಾಗಿ ಅದನ್ನು ಮೀರುತ್ತಿರಲಿಲ್ಲ ; ಆದಾಗ್ಯೂ ನಮ್ಮಲ್ಲಿ ಅನೇಕರು ದೇವರು ಮಾತಾಡಿಯೇ ಇಲ್ಲವೆಂಬಂತೆ, ದೇವರು ಹೇಳುತ್ತಿರುವುದನ್ನು ಕೇಳಿಸಿಕೊಳ್ಳಲು ಸಹಾ ಮನಸ್ಸುಮಾಡದೆ, ದೇವರಿಗೆ ಅಗೌರವವನ್ನು ತೋರಿಸುತ್ತೇವೆ.

ನನ್ನ ಆತ್ಮಿಕ ಜೀವಿತದ ವಿಧಿಯು ಎಷ್ಟರ ಮಟ್ಟಿಗೆ ಯೇಸು ಕ್ರಿಸ್ತನೊಂದಿಗೆ ಗುರುತಿಸಲ್ಪಟ್ಟಿದೆ ಎಂದರೆ, ನಾನು ಸದಾಕಾಲ ದೇವರ ಸ್ವರವನ್ನು ಕೇಳಿಸಿಕೊಳ್ಳುತ್ತೇನೆ ಮತ್ತು ನಾನು ಹೇಳುವುದನ್ನೆಲ್ಲಾ ದೇವರು ಕೇಳಿಸಿಕೊಳ್ಳುವನೆಂದು ನಾನು ಬಲ್ಲೆನು (ಯೋಹಾನ 11:41) ನಾನು ಯೇಸುಕ್ರಿಸ್ತನೊಂದಿಗೆ ಐಕ್ಯವಾಗಿದ್ದರೆ, ಆಲಿಸುವ ಶ್ರದ್ಧೆಯ ಮೂಲಕ ನಾನು ಸದಾ ದೇವರ ಸ್ವರಕ್ಕೆ ಕಿವಿಗೂಡುವೆನು. ಒಂದು ಲಿಲ್ಲಿ ಹೂ, ಒಂದು ಮಗು, ಇಲ್ಲವೇ ಒಬ್ಬ ದೇವರ ಸೇವಕ, ಹೀಗೆ ಯಾರಾದರೂ ದೇವರ ಸಂದೇಶ ವನ್ನು ನನಗೆ ತಿಳಿಸುವರು. ಆದರೆ ಇತರ ವಿಷಯಗಳಲ್ಲಿ ಮಗ್ನವಾಗಿರುವ ನನ್ನ ಗಮನವೇ ದೇವರ ಸಂದೇಶವನ್ನಾಲಿಸಲು ಅಡ್ಡಿ ಮಾಡುತ್ತದೆ. ನಾನು ದೇವರಿಗೆ ಕಿವಿಗೂಡುವುದೇ ಇಲ್ಲವೆಂದಲ್ಲ. ನನ್ನ ಜೀವಿತದ ಮುಖ್ಯ ಕ್ಷೇತ್ರಗಳಲ್ಲಿ ನಾನು ನಿಷ್ಠೆಯುಳ್ಳವನಾಗಿರುವುದಿಲ್ಲ ; ನನ್ನ ಸ್ವಂತ ವಿಚಾರಗಳಿಗೆ, ಸೇವೆಗೆ, ನಂಬಿಕೆಗಳಿಗೆ ನಾನು ಶ್ರದ್ಧೆಯುಳ್ಳ ವನಾಗಿರುತ್ತೇನೆ. ದೇವರು ತನ್ನಿಷ್ಟದಂತೆ ಏನು ಬೇಕಾದರೂ ಹೇಳಲಿ, ಆದರೆ ಹೇಳಿದ್ದೆಲ್ಲವನ್ನೂ ನಾನು ಕೇಳಿಸಿ ಕೊಳ್ಳುವುದಿಲ್ಲ. ಅಂದರೆ ನನಗೆ ಬೇಕಾದವುಗಳನ್ನಷ್ಟೇ ಕೇಳಿಸಿಕೊಳ್ಳುತ್ತೇನೆ. ದೇವರ ಶಿಶು ವಾದವನಿಗಿರ ಬೇಕಾದ ಪ್ರವೃತ್ತಿ ''ಮಾತನಾಡು ನಿನ್ನ ಸೇವಕನು ಕೇಳಿಸಿಕೊಳ್ಳುವನು'' ಎಂದಿರಬೇಕು. ಆಲಿಸುವುದನ್ನು ಶ್ರದ್ಧಾಪೂರ್ವಕವಾಗಿ ಬೆಳೆಸಿಕೊಳ್ಳದೇ ಹೋದರೆ, ಕೇವಲ ಕೆಲವೇ ನಿಶ್ಚಿತ ಸಮಯದಲ್ಲಿ ಮಾತ್ರ ದೇವರ ಸ್ವರವನ್ನು ಕೇಳಿಸಿಕೊಳ್ಳುತ್ತೇವೆ; ಉಳಿದ ಸಮಯಗಳಲ್ಲಿ, ನನಗಿಷ್ಟವಾದ, ಇಲ್ಲವೇ ನಾನು ಮಾಡಲೇ ಬೇಕೆಂದು ಮನವರಿಕೆ ಮಾಡಿಕೊಂಡ ವಿಷಯ ಕಾರಣದಿಂದ, ನಾನು ದೇವರ ಸ್ವರಕ್ಕೆ ಕಿವುಡಾಗಿಬಿಡುವೆನು, ಮತ್ತು ದೇವರ ಮಗುವಿನಂತೆ ನಾನು ಜೀವಿಸುವುದಿಲ್ಲ. ಈ ದಿನವೇನಾದರೂ ದೇವರ ಸ್ವರವನ್ನು ಕೇಳಿಸಿ ಕೊಂಡಿರುವೆನೋ?

# ಗಮನಿಸುವ ಶಿಕ್ಷಣ

**''ನಾನು ಕತ್ತಲಲ್ಲಿ ನಿಮಗೆ ಹೇಳುವದನ್ನು ನೀವು ಬೆಳಕಿನಲ್ಲಿ ಹೇಳಿರಿ ಮತ್ತು ಕಿವಿಯಲ್ಲಿ ಕೇಳಿದ್ದನ್ನು ಮಾಳಿಗೆಗಳ ಮೇಲೆ ನಿಂತು ಸಾರಿರಿ'' - (ಮತ್ತಾಯ - 10:27)**

ದೇವರು ತನ್ನ ಸಮಯಾನುಸಾರ ನಮ್ಮನ್ನು ಅಂಧಕಾರದ ಶಿಕ್ಷಣದ ಮೂಲಕ ತನ್ನನ್ನು ಎಚ್ಚರಿಕೆಯಿಂದ ಗಮನಿಸಲು ಬೋಧಿಸುವನು. ಹಾಡುವ ಹಕ್ಕಿಗಳಿಗೆ ಹಾಡುವುದನ್ನು ಕತ್ತಲೆಯಲ್ಲಿ ಕಲಿಸಲಾಗುವುದು; ಹಾಗೆಯೇ ನಾವು ದೇವರಿಗೆ ಕಿವಿಗೂಡುವುದನ್ನು ಕಲಿಯುವವರೆಗೆ, ಆತನು ತನ್ನ ಹಸ್ತದ ನೆರಳಿನಲ್ಲಿ ನಮ್ಮನ್ನು ಹುದುಗಿಸಿಡುತ್ತಾನೆ. ನಾನು ನಿಮಗೆ ''ಕತ್ತಲೆಯಲ್ಲಿ ಹೇಳುವುದನ್ನು''- ದೇವರು ಕತ್ತಲೆಯಲ್ಲಿ ನಿನ್ನನ್ನೆಲ್ಲಿರಿಸುವನೆಂಬುದನ್ನು ಎಚ್ಚರದಿಂದ ಗಮನಿಸು ಮತ್ತು ನೀನು ಅಲ್ಲಿರುವಾಗ ನಿನ್ನ ಬಾಯಿಯನ್ನು ಮುಚ್ಚಿಕೊಂಡಿರು. ಸದ್ಯದಲ್ಲಿ ನಿನ್ನ ಜೀವಿತದಲ್ಲಿ ನಿನಗೊದಗಿರುವ ಸನ್ನಿವೇಶದಲ್ಲಿ ನೀನು ಕತ್ತಲೆಯಲ್ಲಿರುವಿಯೋ? ಅಥವಾ ದೇವರೊಂದಿಗಿರುವ ಜೀವಿತವು ಸಹಾ ಕತ್ತಲೆಯಲ್ಲಿದೆಯೋ ? ಹಾಗಿದ್ದರೆ ಮೌನವಾಗಿರು. ಕತ್ತಲಲ್ಲಿ ನೀನು ಬಾಯಿ ತೆರೆಯುವುದಾದರೆ ತಪ್ಪಾದ ಚಿತ್ತ ಸ್ಥಿತಿಯಲ್ಲಿ ನೀನು ಮಾತಾಡುವಿ; ಕತ್ತಲೆಯ ಸಮಯವೇ ಗಮನವಿಟ್ಟು ದೇವರಿಗೆ ಕಿವಿಗೊಡುವ ಸಮಯ. ಇದರ ವಿಷಯವಾಗಿ ಇತರರೊಡನೆ ಮಾತನಾಡಬೇಡ, ಈ ಅಂಧಕಾರದ ಕಾರಣವನ್ನರಿಯಲು ಪುಸ್ತಕಗಳನ್ನು ಓದಬೇಡ, ಆದರೆ ಕತ್ತಲೆಯಲ್ಲಿ ಕಿವಿಗೊಟ್ಟು ಆಲಿಸು, ಮತ್ತು ಗಮನ ಕೊಡು. ನೀನು ಇತರರೊಂದಿಗೆ ಮಾತಾಡುತ್ತಿದ್ದರೆ, ದೇವರು ಹೇಳುವುದನ್ನು ನೀನು ಕೇಳಿಸಿಕೊಳ್ಳುವುದಿಲ್ಲ. ನೀನು ಕತ್ತಲೆಯಲ್ಲಿದ್ದಾಗ ಗಮನವಿಟ್ಟು ಕಿವಿಗೊಡು, ಆಲಿಸು; ನೀನು ಬೆಳಕಿನೊಳಗೆ ಬಂದಾಗ ಬೇರೆಯವನೊಬ್ಬನಿಗೆ ಸಾರಲು ಅತ್ಯಂತ ಬೆಲೆಯುಳ್ಳ ಸಂದೇಶವನ್ನು ದೇವರು ನಿನಗೆ ದಯಪಾಲಿಸಿರುತ್ತಾನೆ.

ಕತ್ತಲೆಯ ಪ್ರತಿಸಮಯದ ನಂತರ ಪರಮಾನಂದದ ಮತ್ತು ದೀನತೆಯ ಮಿಶ್ರಾನುಭವವು ನಮಗುಂಟಾಗುತ್ತದೆ. (ಕೇವಲ ಪರಮಾನಂದವೇ ಆಗಿದ್ದರೆ ನಾವು ದೇವರ ಸ್ವರಕ್ಕೆ ಕಿವಿಗೊಟ್ಟಿರುವುದು ಸಂಶಯವೇ). ದೇವರು ಮಾತನಾಡುವುದನ್ನು ಕೇಳಿಸಿಕೊಳ್ಳುವುದರಲ್ಲಿ ಪರಮಾನಂದವಿದೆ ಆದರೆ ಅದಕ್ಕೂ ಮುಖ್ಯವಾಗಿ ಆತನ ಸ್ವರವನ್ನು ಕೇಳಿಸಿಕೊಳ್ಳಲು ಇಷ್ಟುಕಾಲ ಬೇಕಾಯಿತೇ ಎಂಬ ದೈನ್ಯತೆ ಅಲ್ಲಿ ಇರುತ್ತದೆ. ಎಷ್ಟೋ ಕಾಲದಿಂದ ನಾನು ಅದನ್ನು ಕೇಳಿಸಿಕೊಳ್ಳುತ್ತಾ ಇದ್ದೇನಲ್ಲಾ! ನಾನೆಷ್ಟು ಮಂದ ಗ್ರಾಹಿಯಾಗಿದ್ದೆನಲ್ಲಾ! ಆದರೂ ದೇವರು ಈ ಎಲ್ಲಾ ದಿವಸಗಳಲ್ಲಿ, ಎಲ್ಲಾ ವಾರಗಳಲ್ಲಿ ಹೇಳುತ್ತಲೇ ಇದ್ದನಲ್ಲವೇ! ಈಗ ಇಂಥಾ ದೀನತೆಯನ್ನು ಬಹುಮಾನವಾಗಿ ಕೊಡುತ್ತಿದ್ದಾನೆ ಮತ್ತು ಇದು ನಮ್ಮ ಹೃದಯಕ್ಕೆ ಸೌಮ್ಯತೆ, ಮೃದುತ್ವವನ್ನು ತಂದುಕೊಟ್ಟು, ಇನ್ನು ಮೇಲೆ ಹೃದಯವನ್ನು ದೇವರಿಗೆ ಕಿವಿಗೊಟ್ಟು, ಕೇಳಿಸಿ ಕೊಳ್ಳುವಂತೆ ಮಾಡುತ್ತದೆ.

# ನನ್ನ ತಮ್ಮನನ್ನು ಕಾಯುವವನು ನಾನೋ ?

**''ನಮ್ಮಲ್ಲಿ ಒಬ್ಬನಾದರೂ ತನಗಾಗಿ ಬದುಕುವುದೂ ಇಲ್ಲ'' - (ರೋಮಾ - 14:7)**

ದೇವರ ಸಮ್ಮುಖದಲ್ಲಿ ಇತರರ ಜೀವಿತಗಳಿಗೋಸ್ಕರ ಆತ್ಮೀಕವಾಗಿ ನೀನು ಹೊಣೆಗಾರನಾಗಿರುವೆನೆಂಬುದು ನಿನಗೆ ಎಂದಾದರೂ ಹೊಳೆದಿದೆಯೇ ? ಉದಾಹರಣೆಗೆ, ನನ್ನ ಸಾಮಾನ್ಯ ಜೀವಿತದಲ್ಲಿ ದೇವರಿಂದ ಓರೆಯಾಗಲು ನಾನು ಆಸ್ಪದವಿತ್ತರೆ, ನನ್ನನ್ನು ಬಲ್ಲವರು ಮತ್ತು ನನ್ನ ಸುತ್ತಮುತ್ತಲಿರುವವರು, ಈ ಓರೆಯಾಗುವಿಕೆಯಿಂದ ತುಂಬಾ ಕಷ್ಟಕ್ಕೊಳಗಾಗುತ್ತಾರೆ. ''ನಾವು ಪರಲೋಕದಲ್ಲಿ ಆತನೊಂದಿಗೆ ಕುಳಿತಿರುವೆವು'' (ಎಫೆ 2:6). ಒಂದು ಅಂಗಕ್ಕೆ ನೋವಾದರೆ ಎಲ್ಲಾ ಅಂಗಗಳಿಗೂ ನೋವಾಗುತ್ತದೆ. (1ಕೊರಿಂಥ 12:26) ನಮ್ಮ ಜೀವಿತದಲ್ಲಿ ಶಾರೀರಿಕ ಸ್ವಾರ್ಥತೆ, ಮಾನಸಿಕ ಮುಗ್ಗಲುಗೇಡಿತನ, ನೈತಿಕತೆ ಮೊಂಡುತನ ಮತ್ತು ಆತ್ಮೀಕ ಬಲಹೀನತೆ - ಇವುಗಳಿಗೆ ಒಮ್ಮೆ ಆಸ್ಪದಮಾಡಿಕೊಟ್ಟರೆ,- ನಮ್ಮ ಜೀವಿತವನ್ನೇ ಆದರ್ಶವಾಗಿಟ್ಟುಕೊಂಡಿರುವ ಸುತ್ತಮುತ್ತಲಿರುವ ನನ್ನ ಸಮೂಹದವರೆಲ್ಲರೂ ನರಳುತ್ತಾರೆ. ದೇವರಿಂದ ಓರೆಯಾಗಿರುವ ನೀನೇನೋ ಹೇಳಬಹುದು. ''ಆದರೆ ದೇವರು ಇಂಥಾ ಒಂದು ಸ್ಟಾಂಡರ್ಡನ್ನು ನಿಗದಿಪಡಿಸಿದರೆ, ಆ ಮಟ್ಟವನ್ನು ಮುಟ್ಟಲು ಯಾರೂ ತಾನೇ ತಕ್ಕಷ್ಟು ಯೋಗ್ಯರಾಗಿರುವರು?'' ನಿಜವೆಂದರೆ ದೇವರೇ ನಮ್ಮ ಯೋಗ್ಯತೆ, ಆತನು ಮಾತ್ರವೇ.

''ನೀವು ನನಗೆ ಸಾಕ್ಷಿಗಳಾಗಿರಬೇಕು'' (ಅ.ಕೃ 1:8) ಯೇಸುಕ್ರಿಸ್ತನಿಗಾಗಿ ನಮ್ಮಲ್ಲಿರುವ ಬೌದ್ಧಿಕ ಮತ್ತು ನೈತಿಕಬಲದ ಹಾಗೂ ಆತ್ಮೀಕಬಲದ ಕೊನೆಯ ಹನಿಯವರೆಗೆ ವ್ಯಯಮಾಡಿಕೊಳ್ಳಲು ನಮ್ಮಲ್ಲಿ ಎಷ್ಟು ಜನ ಸಿದ್ಧರಿದ್ದೇವೆ? ಇಂಥಾ ವ್ಯಯಿಸಲ್ಪಡುವಿಕೆಯೇ ದೇವರ ದೃಷ್ಟಿಯಲ್ಲಿ ''ಸಾಕ್ಷಿಗಳಾಗಿರುವಿರಿ'' ಎಂಬ ವಾಕ್ಯದ ಅರ್ಥ. ಇದಕ್ಕೆ ಕಾಲಾವಕಾಶಬೇಕು, ಆದ್ದರಿಂದ ನಿನ್ನೊಡನೆ ನೀನೇ ತಾಳ್ಮೆಯಿಂದಿರಬೇಕು. ದೇವರು ನಮ್ಮನ್ನು ಭೂಮಿಯ ಮೇಲೆ ಇರಿಸಿದ್ದಾನೆ ಯಾತಕ್ಕಾಗಿ ? ಕೇವಲ ರಕ್ಷಿಸಲ್ಪಡಲಿ ಮತ್ತು ಶುದ್ಧೀಕರಿ ಸಲ್ಪಡಲಿ ಎಂದೋ? ಎಂದಿಗೂ ಅಲ್ಲ; ನಾವು ಆತನ ಸಾಕ್ಷಿಗಳಾಗಿ, ಆತನಿಗಾಗಿಯೇ ಇರಲೆಂದು. ಆತನಿಗಾಗಿ ಮುರಿಯಲ್ಪಟ್ಟ ರೊಟ್ಟಿಯೂ ಸುರಿಯಲ್ಪಟ್ಟ ದ್ರಾಕ್ಷಾರಸವೂ ಆಗಲು ನಾನು ಸಿದ್ಧನಿರುವೆನೋ ? ಯೇಸು ಕ್ರಿಸ್ತನಿಗಾಗಿ ಶಿಷ್ಯನನ್ನು, ಶಿಷ್ಯಳನ್ನು ಮಾಡುವ ಒಂದೇ ಒಂದು ಉದ್ದೇಶಕ್ಕಾಗಿ ಮಾತ್ರವೇ ಹೊರತು, ಬೇರೆ ಯಾವುದಕ್ಕೂ ಉಪಯೋಗಕ್ಕೆ ಬಾರದ ಅಂದರೆ ಈ ಕಾಲಕ್ಕೆ ಸಲ್ಲದವನು, ಈ ಲೋಕ ಜೀವಿತಕ್ಕೆ ಸಲ್ಲದವನು, ಜೀವಿತದ ಎಲ್ಲಾ ದೃಷ್ಟಿಕೋನಗಳಿಂದಲೂ ಸಲ್ಲದವನೂ, ಆಗಿರಲು ಸಿದ್ಧನಿರುವೆಯೋ? ದೇವರು ಮಾಡಿದ ವರ್ಣಿಸಲಸಾಧ್ಯವಾದ ಅದ್ಭುತವಾದ ರಕ್ಷಣಾ ಕಾರ್ಯಕ್ಕಾಗಿ ''ವಂದನೆ ದೇವರೇ'' ಎಂದು ಹೇಳುವ ಜೀವಿತವೇ ದೇವಸೇವಕನ ಜೀವಿತ. ದೇವರ ಸೇವೆಯಲ್ಲಿರುವ ನಮ್ಮಲ್ಲಿ ಯಾರಾದರೂ ಆತನ ಉಪಯೋಗಕ್ಕೆ ಅಯೋಗ್ಯರಾದರೆ, ತಿರಸ್ಕರಿಸಲ್ಪಟ್ಟು ಹೊರಗೆ ಎಸೆಯಲ್ಪಡುವ ನಾಣ್ಯದಂತೆ ದೇವರು ನಮ್ಮನ್ನು ತೊರೆದು ಬಿಟ್ಟು, ತನ್ನ ಸೇವೆಯಿಂದ ತಳ್ಳಿ ಬಿಡುವ ಸಾಧ್ಯತೆಯುಂಟೆಂಬುದನ್ನು ನೆನಪಿಡಿರಿ. ''ನಾನೇ ಅಯೋಗ್ಯ ನೆನಿಸಿಕೊಂಡೇನೋ ಎಂಬ ಭಯದಿಂದ ನನ್ನ ಮೈಯನ್ನು ಜಜ್ಜಿ ಸ್ವಾಧೀನ ಪಡಿಸಿಕೊಳ್ಳುತ್ತೇನೆ''. (1 ಕೊರಿಂಥ 9:27)

# ಆತ್ಮೀಕ ಕ್ರಿಯಾಶಕ್ತಿಯ ಪ್ರೇರಣೆ

**''ಸತ್ತವರನ್ನು ಬಿಟ್ಟು ಏಳು'' - (ಎಫೆಸ- 5:14)**

ಮೊದಲ ಹೆಜ್ಜೆಯನ್ನಿಡಬಲ್ಲ ಕ್ರಿಯಾಶೀಲತೆಗಳೆಲ್ಲವೂ ದೈವ ಪ್ರೇರಿತ ವೆಂದಲ್ಲ, ಒಬ್ಬನು ಬೇಕಾದರೆ ಹೀಗೆ ಹೇಳಬಹುದು ''ಚೈತನ್ಯಭರಿತನಾಗು, ನಿನ್ನಲ್ಲಿರುವ ನಿರಾಸಕ್ತಿಯ ಕತ್ತುಹಿಡಿದು ಹೊರಕ್ಕೆಸೆದುಬಿಡು, ನಿನ್ನ ಮುಂದಿರುವ ಕಾರ್ಯದಲ್ಲಿ ಕೂಡಲೇ ಮುನ್ನುಗ್ಗು'' ಹೀಗೆಲ್ಲಾ ಹೇಳುವುದು ಸಾಮಾನ್ಯ ಮನುಷ್ಯನ ಪ್ರಚೋದನೆಯಾಗಿದೆ. ಆದರೆ ದೇವರ ಆತ್ಮನು ನಮ್ಮೊಳಗೆ ಪ್ರವೇಶಿಸಿ ''ಬಕ್ ಅಪ್'' ಎಂದು ಹುರಿದುಂಬಿಸಿ ದಾಗ ಚೈತನ್ಯಭರಿತರಾಗಿ ಮುನ್ನುಗ್ಗಿದ್ದರೆ ಅದು ದೈವಪ್ರೇರಣೆ.

ನಾವು ಚಿಕ್ಕವರಿರುವಾಗ ಬೇಕಾದಷ್ಟು ದರ್ಶನಗಳನ್ನು ಆದರ್ಶಗಳನ್ನು ಹೊಂದಿರುತ್ತೇವೆ. ಆದರೆ, ಇಂದು ಇಲ್ಲವೇ ಮುಂದೊಂದು ದಿನ ಈ ದರ್ಶನ ಮತ್ತು ಆದರ್ಶಗಳನ್ನು ನನಸು ಮಾಡಲು ನಮ್ಮಲ್ಲಿ ಸಾಮರ್ಥ್ಯವಿಲ್ಲವೆಂಬುದನ್ನು ನಾವು ಮನಗಾಣುತ್ತೇವೆ. ನಾವು ಮಾಡಲಿಚ್ಛಿಸಿದವುಗಳನ್ನು ಮಾಡಲು ನಮಗಾಗುವುದಿಲ್ಲ. ನಮ್ಮ ದರ್ಶನ ಮತ್ತು ಆದರ್ಶಗಳ ಮೃತಸ್ಥಿತಿಗೆ ನಾವು ಹೊಂದಿಕೊಳ್ಳುವ ಮನೋಸ್ಥಿತಿಯಲ್ಲಿರುತ್ತೇವೆ. ಆಗ ದೇವರು ನಮ್ಮ ಬಳಿಗೆ ಬಂದು ''ಸತ್ತವರೊಳಗಿಂದ ಎದ್ದು ಬಾ'' ಎಂದು ಹೇಳುತ್ತಾನೆ. ದೇವರಿಂದ ನಮಗುಂಟಾಗುವ ಈ ಪ್ರೇರಣೆಯು ಅದ್ಭುತ ಶಕ್ತಿಯಿಂದ ಕೂಡಿರುವುದರಿಂದ ನಾವು ಸತ್ತವರೊಳಗಿಂದ ಎದ್ದು ಬಂದು ಈವರೆಗೂ ಮಾಡಲಸಾಧ್ಯವಾದವುಗಳನ್ನು ಸಾಧಿಸಲು ಬಲ ಹೊಂದಿರುತ್ತೇವೆ. ದೈವ ಪ್ರೇರಣೆಯಲ್ಲಿರುವ ಗಮನಾರ್ಹ ಅಂಶವೆಂದರೆ, ನಾವು ಮುಂದಡಿಯನ್ನಿಡಲು ಉಪಕ್ರಮಿಸಿದಾಗ ಮಾತ್ರವೇ ಆ ಪ್ರಾಣಬಲವು ನಮಗೊದಗುತ್ತದೆ. ಜಯ ಪಡೆಯುವ ಜೀವಬಲವನ್ನು ಮೊದಲಿಗೇ ದೇವರು ನಮಗೆ ಕೊಡುವುದಿಲ್ಲ ; ನಾವು ಜಯಸಾಧನೆಗಾಗಿ ಮುನ್ನುಗ್ಗುತ್ತಿರುವಾಗ ದೈವ ಬಲವು ಬಂದೊದಗುತ್ತದೆ. ದೇವರ ಪ್ರೇರಣೆಯು ನಮಗೆ ಉಂಟಾದಾಗ ''ಸತ್ತವರೊಳಗಿನಿಂದ ಎದ್ದು ಬಾ'' ಎಂದು ದೇವರು ಹೇಳಿದರೆ ನಾವು ಎದ್ದು ಬರಬೇಕು. ಎದ್ದೇಳುವ ಉಪಕ್ರಮವನ್ನು ನಾವು ಮಾಡಬೇಕು. ಅದನ್ನು ದೇವರು ಮಾಡುವುದಿಲ್ಲ. ಸತ್ತವರೊಳಗಿಂದ ನಮ್ಮನ್ನು ಆತನು ಎತ್ತುವುದಿಲ್ಲ. ಮೊದಲ ಹೆಜ್ಜೆ ನಿನ್ನದಾಗಿರಬೇಕು. ಯೇಸುಸ್ವಾಮಿಯವರು ಕೈ ಬತ್ತಿಹೋಗಿದ್ದ ಆ ಮನುಷ್ಯನಿಗೆ 'ನಿನ್ನ ಕೈ ಚಾಚು' ಎಂದು ಹೇಳಿದಾಗ, ಆ ಮನುಷ್ಯನು ಕೈಯನ್ನು ಚಾಚುವ ಯತ್ನವನ್ನು ಮಾಡುತ್ತಿರುವಾಗಲೇ, ಅವನು ಗುಣ ಹೊಂದಿದ್ದನು. ಅವನು ಪ್ರಥಮ ಯತ್ನ ಮಾಡಲೇ ಬೇಕಾಗಿದ್ದಿತು. ನಾವು ಜಯಗಳಿಸಬೇಕೆಂದು ಮೊದಲು ಹೆಜ್ಜೆಯನ್ನಿಡಬೇಕು. ಆಗ ದೈವಪ್ರಾಣವು ಹರಿದು ಬಂದರೆ, ಇದಕ್ಕೆ ದೈವ ಪ್ರೇರಣೆಯೇ ಕಾರಣವೆಂಬುದನ್ನು ತಿಳಿಯುತ್ತೇವೆ.

# ಖಿನ್ನತೆಯ ವಿರುದ್ಧ ಮೊದಲ ಹೆಜ್ಜೆ

**''ಎದ್ದು ಊಟ ಮಾಡು'' - (1 ಅರಸು 19:5)**

ದೇವ ದೂತನು ಖಿನ್ನನಾಗಿದ್ದ ಎಲೀಯನಿಗೆ, ದಿವ್ಯದರ್ಶನವೊಂದನ್ನು ಕೊಡಲಿಲ್ಲ ಅಥವಾ ಸಮಯಾನುಸಾರದ ದೈವ ಶಾಸ್ತ್ರಗಳನ್ನು ವಿವರಿಸಿ ಹೇಳಲಿಲ್ಲ ಹಾಗೂ ಗಮನಾರ್ಹವಾದದ್ದೇನನ್ನೂ ಮಾಡಲಿಲ್ಲ, ಆದರೆ ಅತಿಸಾಧಾರಣವಾದದ್ದನ್ನು ಮಾಡಲು ಅವನಿಗೆ ಹೇಳಿದನು, - 'ಎದ್ದು ಕುಳಿತು ಊಟ ಮಾಡು'. ನಾವೆಂದೂ ಮಾನಸಿಕ ಕುಸಿತಕ್ಕೆ ಒಳಗಾಗದೇ ಇದ್ದೇವೆಂದರೆ, ಅದು ಸ್ಫಟಿಕದ ಲಕ್ಷಣ, ಅಂದರೆ ಜೀವವಿಲ್ಲದ ಪದಾರ್ಥಗಳ ಲಕ್ಷಣ, ಮನುಷ್ಯನು ಮಾನಸಿಕ ಕುಸಿತಕ್ಕೊಳಗಾಗಬಲ್ಲನು ಮತ್ತು ಆಗಿಯೇ ಆಗುವನು ಕೂಡಾ ! ಇಲ್ಲದೇ ಹೋದರೆ ಆನಂದ ಪರವಶತೆಯನ್ನು ಅನುಭವಿಸುವ ಸಾಮರ್ಥ್ಯ ಅವನಲ್ಲಿರುವುದಿಲ್ಲ. ಕೆಲವು ವಿಷಯಗಳು ಖಿನ್ನತೆಯನ್ನುಂಟು ಮಾಡುವುದಕ್ಕಾಗಿಯೇ ಅಸ್ತಿತ್ವದಲ್ಲಿವೆ. ಉದಾಹರಣೆ : ಮರಣಕ್ಕೆ ಸಂಬಂಧಿಸಿದ ವಿಷಯಗಳು. ನಿನ್ನನ್ನು ನೀನು ವಿಮರ್ಶಿಸಿಕೊಳ್ಳುವಾಗ ಮಾನಸಿಕ ಕುಸಿತಕ್ಕೊಳಗಾಗಬಲ್ಲ ನಿನ್ನ ಸಾಮರ್ಥ್ಯವೆಷ್ಟಿದೆಯೆಂಬುದನ್ನು ಗಣನೆಗೆ ತಂದು ಕೊಳ್ಳಬೇಕು.

ದೇವರ ಆತ್ಮನು ನಮ್ಮಲ್ಲಿ ಪ್ರವೇಶಿಸಿದಾಗ ನಮಗೆ ದಿವ್ಯದರ್ಶನಗಳನ್ನು ಕೊಡುವುದಿಲ್ಲ; ಊಹಿಸಬಹುದಾದ ಅತೀ ಸಹಜ ಸಾಮಾನ್ಯ ವಿಷಯಗಳನ್ನು ಮಾಡಲು ಹೇಳುತ್ತಾನೆ. ಖಿನ್ನತೆಯು ದೇವರ ಸೃಷ್ಟಿಗಳಾದ ಸಾಮಾನ್ಯ ವಿಷಯಗಳಿಂದ ಬೇರೆ ಕಡೆಗೆ ಖಂಡಿತವಾಗಿ ನಮ್ಮನ್ನು ತಿರುಗಿಸಿ ಬಿಡುತ್ತದೆ; ಆದರೆ ದೇವರು ಯಾವಾಗ ಬರುವನೊ, ಆಗ ಉಂಟಾಗುವ ಪ್ರೇರೇಪಣೆಯು, ಸಾಮಾನ್ಯವಾಗಿರುವ ಸರಳ ಸಂಗತಿಗಳನ್ನೇ ನಾವು ಮಾಡುವಂತೆ ಹುರಿದುಂಬಿಸುತ್ತದೆ. ಆಗ ಯಾವ ಸಂಗತಿಗಳಲ್ಲಿ ದೇವರಿರ ಬಹುದೆಂದು ನಾವು ಊಹಿಸಿಯೂ ಇರಲಿಲ್ಲವೋ ಅಂಥವುಗಳನ್ನು ಮಾಡುತ್ತಿರುವಾಗ ಅವುಗಳಲ್ಲಿಯೇ ದೇವರ ಅಸ್ತಿತ್ವವನ್ನು ಕಾಣುತ್ತೇವೆ. ಈ ರೀತಿಯಲ್ಲಿ ಒದಗುವ ಪ್ರೇರಣೆಯೇ ಖಿನ್ನತೆಯನ್ನು ಎದುರಿಸುವ ಸ್ಫೂರ್ತಿಯಾಗಿದೆ; ಮುಂದಿನ ಕಾರ್ಯವನ್ನು ನಾವು ಮಾಡಬೇಕು, ಅದನ್ನು ದೈವ ಪ್ರೇರಣೆಯಲ್ಲಿಯೇ ಮಾಡಬೇಕು; ಮನೋಗ್ಲಾನಿಯನ್ನು ಜಯಿಸಬೇಕೆಂಬ ಉದ್ದೇಶದಿಂದ ಕಾರ್ಯಮಾಡಿದರೆ ಅದನ್ನು ಇನ್ನೂ ಗಾಢಗೊಳಿಸುತ್ತೇವೆ. ಒಂದು ಕಾರ್ಯವನ್ನು ನಾವು ಮಾಡಬೇಕೆಂದು ನಮ್ಮ ಆಂತರ್ಯವು ನಮಗೆ ಬೋಧಿಸುವಂತೆ ದೇವರ ಆತ್ಮನು ಮಾಡಿದರೆ, ಆ ಕಾರ್ಯವನ್ನು ಮಾಡಿಯೇ ತೀರಲು ನಾವು ಮುಂದಡಿ ಇಡಬೇಕು. ಆಗ ಖಿನ್ನತೆಯು ನಮ್ಮಿಂದ ತೊಲಗಿ ಹೋಗುತ್ತದೆ. ನಾವು ಎದ್ದುನಿಂತು ದೇವರಿಗೆ ವಿಧೇಯ ರಾಗುತ್ತೇವೆ. ಜೀವಿತದ ಉನ್ನತ ಘಟ್ಟವನ್ನು ಪ್ರವೇಶಿಸುತ್ತೇವೆ.

# ಹತಾಶೆಯ ವಿರುದ್ಧ ಮೊದಲ ಹೆಜ್ಜೆ

**''ಏಳಿರಿ, ಹೋಗೋಣ'' - (ಮತ್ತಾಯ 26:46)**

ಶಿಷ್ಯರು ಯಾವ ಸಮಯದಲ್ಲಿ ಎಚ್ಚರದಿಂದಿರಬೇಕಾಗಿದ್ದಿತ್ತೋ ಆ ಸಮಯ ದಲ್ಲಿಯೇ ನಿದ್ರೆ ಮಾಡಿದರು ಮತ್ತು ತಾವೇನು ಮಾಡಿದೆವೆಂಬ ಅರಿವು ಅವರಿಗುಂಟಾದಾಗ, ಅದು ಅವರಲ್ಲಿ ಹತಾಶೆ ಯನ್ನುಂಟು ಮಾಡಿತು. ತಪ್ಪನ್ನು ಸರಿಪಡಿಸಲಸಾಧ್ಯವೆಂಬ ಅರಿವು, ನಮ್ಮನ್ನು ಹತಾಶರನ್ನಾಗಿಸುತ್ತದೆ. ನಾವು ಹೇಳುತ್ತೇವೆ, ''ಏನೆಲ್ಲವೂ ಆಗಿಹೋಯಿತು. ಇನ್ನು ಮುಂದಿನ ಪ್ರಯತ್ನವೆಲ್ಲಾ ನಿಷ್ಪ್ರಯೋಜಕವಾದದ್ದು''. ಈ ರೀತಿಯ ಹತಾಶೆಯು ಬಹು ಅಸಾಧಾರಣವಾದದ್ದೆಂದು ನಾವು ಯೋಚಿಸುವುದಾದರೆ, ನಾವು ತಪ್ಪಾದ ಗ್ರಹಿಕೆಯಲ್ಲಿ ಇದ್ದೇವೆ. ಹಾಗಾಗುವದು ಮಾನವನ ಸಹಜವಾದ ಒಂದು ಅನುಭವವಷ್ಟೇ ! ಕಾರ್ಯ ಸಾಧನೆಗಾಗಿ ಒದಗಿದ ಮಹತ್ವದ ಸುಸಂದರ್ಭದಲ್ಲಿ ನಾವು ಅದನ್ನು ಸಾಧಿಸಲಿಲ್ಲವೆಂಬುದನ್ನು ನಾವು ತಿಳಿದು ಯೋಚಿಸಿದಾಗಲೇ ನಾವು ಹತಾಶರಾಗಿ ಆಳಕ್ಕೆ ಮುಳುಗಿ ಹೋಗುತ್ತೇವೆ, ಅಂಥಾ ಸಮಯ ದಲ್ಲಿಯೇ ಯೇಸುಸ್ವಾಮಿಯು ನಮ್ಮ ಹತ್ತಿರಕ್ಕೆಬಂದು ಹೇಳುತ್ತಾನೆ, ''ಆ ವಿಷಯದಲ್ಲಿ ಇನ್ನು ಯೋಚಿಸ ಬೇಡ, ಆ ಸಂದರ್ಭವು ನಿರಂತರವಾಗಿ ಕಳೆದುಹೋಯಿತು. ನೀನದನ್ನು ಈಗ ಬದಲಿಸಲಾರೆ, ಆದರೆ ನೀನೆದ್ದು ಮುಂದಿನ ಕಾರ್ಯದಲ್ಲಿ ತೊಡಗು, ಆಗಿ ಹೋದದ್ದು ಸದಾ ಕಾಲಕ್ಕೂ ನಿದ್ರೆ ಹೋಗಲಿ, ಆದರೆ ಅದು ಕ್ರಿಸ್ತನ ಎದೆಯ ಮೇಲೆ ನಿದ್ರಿಸಲಿ, ನೀನೆದ್ದು ಅನಿವಾರ್ಯವಾಗಿರುವ ಭವಿಷ್ಯದೊಳಗೆ ಕ್ರಿಸ್ತನೊಂದಿಗೆ ಜೊತೆಯಾಗಿ ಹೊರಡು''.

ಪ್ರತಿಯೊಬ್ಬರಾದ ನಮ್ಮ ಜೀವಿತದಲ್ಲಿ ಇಂಥಾ ಅನುಭವಗಳಿದ್ದೇ ಇರುತ್ತದೆ. ನಾವು ಹತಾಶೆ ಯಲ್ಲಿದ್ದೇವೆ, ಯಥಾಸ್ಥಿತಿಗಳಿಂದಲೂ ಹತಾಶೆಯುಂಟಾಗುತ್ತದೆ. ವಾಸ್ತವ ಸ್ಥಿತಿಗತಿಗಳಿಂದುಂಟಾದ ಹತಾಶೆಯ ಆಳದಿಂದ ಎದ್ದು ಮೇಲೇಳಲಾಗುತ್ತಿಲ್ಲ. ಇಂಥಾ ಒಂದು ಸಂದರ್ಭದಲ್ಲಿಯೇ, ಶಿಷ್ಯರು ಕ್ಷಮಾರ್ಹವಲ್ಲದ ನಿಕೃಷ್ಟಕಾರ್ಯವನ್ನು ಮಾಡಿಬಿಟ್ಟಿದ್ದಾರೆ. ಯೇಸುಕ್ರಿಸ್ತನೊಂದಿಗೆ ಎಚ್ಚರವಾಗಿರಲೇ ಬೇಕಾಗಿದ್ದ ಸಂದರ್ಭದಲ್ಲಿ ತೂಕಡಿಸಿ ನಿದ್ರೆ ಮಾಡಿ ಬಿಟ್ಟರು. ಆದರೆ ಯೇಸು ಸ್ವಾಮಿಯು ಅವರ ಬಳಿಗೆ ಬಂದು ಹತಾಶೆಯ ವಿರುದ್ಧವಾಗಿರುವ ದೈವ ಸ್ಫೂರ್ತಿಯನ್ನು ಅವರಿಗೊದಗಿಸಿ, ''ಎಚ್ಚರಗೊಳ್ಳಿರಿ, ಮುಂದಿನ ಕಾರ್ಯ ಮಾಡಿರಿ'' ಎಂದು ಹೇಳಿದನು. ನಾವು ದೇವರಿಂದ ಪ್ರೇರೇಪಿಸಲ್ಪಟ್ಟವರಾಗಿದ್ದರೆ ನಾವು ಮಾಡಬೇಕಾದ ಮುಂದಿನ ಕೆಲಸವೇನು ? ಆತನಲ್ಲಿ ಸಂಪೂರ್ಣವಾಗಿ ವಿಶ್ವಾಸವಿಟ್ಟು ಆತನು ಮಾಡಿದ ಬಿಡುಗಡೆಯ ನೆಲೆಯ ಮೇಲೆ ಪ್ರಾರ್ಥನೆ ಮಾಡಬೇಕು. ಕಳೆದಹೋದ ಪರಾಭವದ ಭಾವವು ನಿನ್ನನ್ನೆಂದಿಗೂ ಮತ್ತು ನಿನ್ನ ನೂತನ ಕಾರ್ಯ ಚಟುವಟಿಕೆಗಳನ್ನೆಂದಿಗೂ ಹಾಳು ಗೆಡವದಿರಲಿ.

# ದಾಸತ್ವದ ವಿರುದ್ಧ ಮೊದಲ ಹೆಜ್ಜೆ

**''ಏಳು ಪ್ರಕಾಶಿಸು'' - (ಯೆಶಾಯ 60:1)**

ದೇವರು ಅಸ್ತಿತ್ವದಲ್ಲಿ ಇಲ್ಲವೆಂದೇ ತಿಳಿದು (ದಾಸತ್ವದ ವಿರುದ್ಧ) ನಾವು ನಮ್ಮ ಮೊದಲ ಹೆಜ್ಜೆಯನ್ನಿಡಬೇಕು. ದೇವರ ಸಹಾಯಕ್ಕಾಗಿ ಕಾದಿರುವುದರಿಂದೇನೂ ಉಪಯೋಗವಿಲ್ಲ. ಆತನು ಹಾಗೆ ಸಹಾಯ ಮಾಡುವುದೂ ಇಲ್ಲ; ಆದರೆ ನಾವು ಮೇಲಕ್ಕೆದ್ದು ನಿಂತಕೂಡಲೇ ಆತನು ಅಲ್ಲಿಯೇ ಇರುವುದನ್ನು ಕಾಣುತ್ತೇವೆ. ದೇವರು ಪ್ರೇರೇಪಿಸಿದಾಗ ಉಂಟಾಗುವ ಸ್ಫೂರ್ತಿಯು ನೈತಿಕವಾಗಿರುತ್ತದೆ. ಆ ಕ್ಷಣದಲ್ಲಿಯೇ ನಾವು ಕಾರ್ಯನಿರತರಾಗಬೇಕಲ್ಲದೆ, ಕೊರಡಿನಂತೆ ಬಿದ್ದಿರಬಾರದು. ನಾವು ಎದ್ದು ನಿಂತು ಉಲ್ಲಾಸದಿಂದ ಮಿನುಗುವೆವಾದರೆ, ದಾಸತ್ವವು ದೈವಿಕವಾಗಿ ರೂಪಾಂತರ ಗೊಳ್ಳುವುದು. ಶ್ರಮೆಯುಳ್ಳ ದಾಸತ್ವವು ನಮ್ಮ ಗುಣಲಕ್ಷಣಗಳನ್ನು ಒರೆ ಹಚ್ಚುವ ಉತ್ತಮ ಒರೆಗಲ್ಲುಗಳ ಲ್ಲೊಂದಾಗಿದೆ, ಇಂಥ ಶ್ರಮದಾಯಕ ಆದರ್ಶಕರವಾದ ಚಾಕರಿಗಳಿಂದ ಬಹುದೂರಕ್ಕೆ ಸರಿಸಲ್ಪಟ್ಟಿರುತ್ತದೆ. ಅದು ಅತ್ಯಂತ ಕೀಳಾದದ್ದೊ, ಕೊಳಕಾದದ್ದೊ, ಆಯಾಸಕರವಾದದ್ದು ಮತ್ತು ಬಹು ಕಷ್ಟಕರವಾದದ್ದೊ ಆಗಿದೆ. ಅದರ ಅನುಭವವು ನಮಗಾದಾಗ ನಾವು ಆತ್ಮೀಕವಾಗಿ ಪ್ರಾಮಾಣಿಕರಾಗಿರುವೆವೋ, ಇಲ್ಲವೋ ? ಎಂಬುದನ್ನು ಕ್ಷಣಮಾತ್ರದಲ್ಲಿ ನಾವು ತಿಳಿಯುತ್ತೇವೆ. (ಯೋಹಾನ - 13 ರನ್ನು ಓದಿಕೊಳ್ಳಿರಿ) ದೈವಾತಾರವೇ, ಅತ್ಯಂತ ನಿರಾಶಾದಾಯಕವಾದ ಒಂದು ದಾಸನ ಚಾಕರಿ ಮಾಡುವುದನ್ನು ನಾವು ಕಾಣುತ್ತೇವೆ - ಪಾದಗಳನ್ನು ತೊಳೆದಿದ್ದಾನೆ. ''ಮತ್ತು ಆತನು ತೊಳೆದಿರಲಾಗಿ ನೀವು ಸಹಾ ಒಬ್ಬರ ಕಾಲನ್ನು ಒಬ್ಬರು ತೊಳೆಯುವ ಹಂಗಿನಲ್ಲಿದ್ದೀರಿ'' - (ಯೋಹಾನ 10:14). ದಾಸತ್ವವು ದೇವರ ಬೆಳಕಿನಲ್ಲಿ ಪ್ರಕಾಶಿಸಬೇಕಾದರೆ ಅಂದರೆ ಮೆಚ್ಚುಗೆಯ ಗಣನೆಗೆ ಪಾತ್ರವಾಗ ಬೇಕೆಂದರೆ ಆ ಚಾಕರಿಯನ್ನೆಸಗಲು ದೇವರ ಪ್ರೇರಣೆಯು ಅಗತ್ಯವಾಗಿದೆ. ಮಾಡಬೇಕಾದ ಒಂದು ನಿರ್ದಿಷ್ಟ ಕೆಲಸವನ್ನು ಕೆಲವರು ಮಾಡಿಬಿಡುವರು, ಆದರೆ ಅವರು ಆ ಕಾರ್ಯವನ್ನು ಮಾಡಿ ಮುಗಿಸುವ ವಿಧಾನದ ಫಲವಾಗಿ ಆ ಕೆಲಸವು ಎಂದೆಂದಿಗೂ ಪವಿತ್ರವೆನಿಸಿಕೊಳ್ಳುವುದು ಮತ್ತು ಆದರ್ಶನೀಯವಾಗಿ ಬಿಡುವುದು. ಈ ಕಾರ್ಯವು ಸಾಮಾನ್ಯ ಸನ್ನಿವೇಶಗಳಲ್ಲಿ ನಡೆಯುವ ಸರ್ವ ಸಾಧಾರಣವಾದ ದೈನಂದಿನ ಕಾರ್ಯವೇ ಆಗಿರಬಹುದು; ಆದರೆ ಒಬ್ಬ ವ್ಯಕ್ತಿಯು ಆ ಕಾರ್ಯವನ್ನು ನೆರವೇರಿಸುವ ಪ್ರಕ್ರಿಯೆಯನ್ನು ನಾವು ನೋಡಿದ ನಂತರ, ಅದೇ ಕಾರ್ಯವು ವಿಶಿಷ್ಟವಾಗಿ ನಮಗೆ ಕಾಣುತ್ತದೆ. ನಮ್ಮ ಸ್ವಾಮಿಯು ನಮ್ಮ ಮೂಲಕ ಒಂದು ಕಾರ್ಯವನ್ನು ಮಾಡಿದಾಗ ಆತನು ಆ ಕಾರ್ಯವನ್ನು ರೂಪಾಂತರ ಗೊಳಿಸುವನು. ಯೇಸುಸ್ವಾಮಿಯು ನಮ್ಮ ಮಾನವ ಶರೀರವನ್ನು ತನ್ನ ಮೇಲೆ ಧರಿಸಿಕೊಂಡು ಅದನ್ನು ರೂಪಾಂತರಗೊಳಿಸುತ್ತಾನೆ. ಮತ್ತು ಭಕ್ತರಾದವರೆಲ್ಲರಿಗೆ ಆ ಶರೀರವೇ ಪವಿತ್ರಾತ್ಮನ ದೇಗುಲವಾಗಿ ಬಿಟ್ಟಿತು. (1 ಕೊರಿಂಥ - 6:19)

# ಕನಸು ಕಾಣುವಿಕೆಯ ವಿರುದ್ಧ ಮೊದಲ ಹೆಜ್ಜೆ

**''ಏಳಿರಿ, ಇಲ್ಲಿಂದ ಹೋಗೋಣ'' - (ಯೋಹಾನ 14:31)**

ಒಂದು ಕಾರ್ಯವನ್ನು ಸರಿಯಾಗಿ ಮಾಡುವಂತೆ ಆ ವಿಷಯದಲ್ಲಿ ಕನಸು ಕಾಣುವುದು ಸರಿಯಾದದ್ದೇ; ಆದರೆ ಅದನ್ನು ಕಾರ್ಯಗತಗೊಳಿಸುತ್ತಿರಬೇಕಾದ ಸಮಯದಲ್ಲಿಯೂ ಅದರ ಬಗ್ಗೆ ಇನ್ನೂ ಕನಸುಕಾಣುತ್ತಾ ಇರುವುದು ತಪ್ಪು. ಯೇಸು ಸ್ವಾಮಿಯು ತನ್ನ ಶಿಷ್ಯರಿಗೆ ಮಹತ್ವದ ವಿಷಯಗಳನ್ನು ತಿಳಿಸಿದ ನಂತರ, ಅವರಿಗೆ 'ಅಲ್ಲಿಂದ ಹೊರಟುಹೋಗಿ ಆ ಎಲ್ಲಾ ವಿಷಯಗಳನ್ನು ಕುರಿತು ಧ್ಯಾನ ಮಾಡಿರಿ' ಎಂದು ಹೇಳುತ್ತಾನೆಂದು ನಾವು ಭಾವಿಸಿದ್ದೆವು; ಆದರೆ ಯೇಸುಸ್ವಾಮಿಯು ಭಾವುಕತೆಯ ಹಗಲುಗನಸುಗಳಲ್ಲಿ ಮುಳುಗಲು ಶಿಷ್ಯರಿಗೆ ಆಸ್ಪದ ಕೊಡಲಿಲ್ಲ. ದೇವರ ಚಿತ್ತವೇನೆಂಬುದನ್ನು ಕಂಡುಕೊಳ್ಳುತ್ತಿರುವಾಗ ನಾವು ದೇವರ ಸಂಪರ್ಕವನ್ನು ಹೊಂದಿದ ಸಮಯದಲ್ಲಿ ಕನಸುಕಾಣುತ್ತಿದ್ದರೇ ಅದು ಸರಿಯೇ, ಆದರೆ ನಾವೇನು ಮಾಡಬೇಕೆಂದು ದೇವರು ಹೇಳಿದ ನಂತರವೂ ಅದೇ ವಿಷಯದ ಬಗ್ಗೆ ಕಾಲಹರಣಮಾಡುವ ಕನಸು ಕಾಣುವಿಕೆಯ ಒಲವು ನಮಗಿದ್ದರೆ, ಅದು ಶುದ್ಧ ತಪ್ಪು ಮತ್ತು ದೇವರು ಅದನ್ನು ಆಶೀರ್ವದಿಸುವುದಿಲ್ಲ. ಈ ರೀತಿಯ ಕನಸು ಕಾಣುವಿಕೆ ಯವಿರುದ್ಧ, ದೇವರ ಕ್ರಮವು ಒಂದು ತಿವಿತದ ರೂಪದಲ್ಲಿರುತ್ತದೆ. ತಿವಿತ ಎಂದರೆ ''ಕುಳಿತು ಕೊಳ್ಳಬೇಡ ಅಥವಾ ನಿಂತುಕೊಳ್ಳಬೇಡ ಆದರೆ ಮುಂದೆ ಸಾಗು.''

''ನೀವು ವಿಂಗಡವಾಗಿ ಬನ್ನಿರಿ'' (ಮಾರ್ಕ 6:31) ಎಂದು ದೇವರು ಹೇಳಿರುವುದರಿಂದ, ನಾವು ದೇವರ ಸನ್ನಿಧಿಯಲ್ಲಿ ಮೌನವಾಗಿ ಕಾಯುತ್ತಾ ಇದ್ದರೆ, ಅದು ಹಗಲು ಕನಸುಕಾಣುವಿಕೆ ಎಂದೆನಿಸದೆ, ಅದು ದೇವರು ನಮ್ಮಿಂದ ಬಯಸುತ್ತಿರುವುದೇನಿರಬಹುದೆಂಬುದನ್ನು ಕಂಡುಕೊಳ್ಳಲು ದೇವರ ಸನ್ನಿಧಿಯಲ್ಲಿ ನಾವು ಮಾಡುವ ಒಂದು ಧ್ಯಾನವೆನಿಸುವುದು. ದೇವರು ನಮ್ಮೊಂದಿಗೆ ಮಾತಾಡಿದ ನಂತರವೂ ಕನಸು ಕಾಣುವಿಕೆಯಲ್ಲಿ ಮಗ್ನರಾಗುವುದರ ಬಗ್ಗೆ ಎಚ್ಚರವಿರಬೇಕು. ನಿನ್ನ ಎಲ್ಲಾ ಕನಸುಗಳಿಗೆ, ನಿನ್ನ ಆನಂದಕ್ಕೆ, ನಿನ್ನ ಸಂತಸಕ್ಕೆ, ದೇವರೇ ಮೂಲನಾಗಿರಲಿ. ನೀನು ಎದ್ದು ಹೊರ ನಡೆದು ದೇವರು ತಿಳಿಯಪಡಿಸಿರುವುದಕ್ಕೆ ವಿಧೇಯನಾಗು. ನೀನು ಯಾರನ್ನಾದರೂ ಪ್ರೀತಿಸುತ್ತಿದ್ದರೆ, ನೀನು ಪ್ರೀತಿಸುವವರ ಬಗ್ಗೆ ಸದಾಕಾಲ ಹಗಲು ಕನಸು ಕಾಣುತ್ತಾ ಕುಳಿತುಕೊಳ್ಳದೆ ಎದ್ದುಹೋಗಿ ಅವರಿಗೋಸ್ಕರ ಏನನ್ನಾದರೂ ಮಾಡು. ಅದನ್ನೇ ಯೇಸು ಕ್ರಿಸ್ತನು ನಮ್ಮಿಂದ ಬಯಸುವನು. ದೇವರು ನಮ್ಮೊಡನೆ ಮಾತನಾಡಿದ ನಂತರವೂ ಆ ವಿಷಯದಲ್ಲಿ ಇನ್ನೂ ಕನಸು ಕಾಣುತ್ತಿಲಿರುವುದು, ದೇವರಲ್ಲಿ ನಮಗೆ ವಿಶ್ವಾಸವಿಲ್ಲವೆಂಬುವುದರ ಸೂಚನೆಯಾಗಿದೆ.

# ಆತನಿಗಾಗಿ ಎಂದಾದರೂ ಪರವಶಗೊಂಡಿರುವಿಯೋ ?

**''ಈಕೆ ನನಗೆ ಒಳ್ಳೆಯ ಕಾರ್ಯವನ್ನು ಮಾಡಿದ್ದಾಳೆ'' - (ಮಾರ್ಕ 14:6)**

ಮಾನವನ ಪ್ರೀತಿಯು ಅವನ ಸ್ವಯಃನ್ನು ದಾಟಿ ಆಚೆಗೆ ಹೋಗದೇ ಇದ್ದರೆ ಅದು ಪ್ರೀತಿಯಲ್ಲ. ಪ್ರೀತಿಯು ಸದಾ ವಿವೇಚಿಸುವಂಥದ್ದೂ, ಸದಾ ಜ್ಞಾನವುಳ್ಳದ್ದು, ಸದಾ ಸೂಕ್ಷ್ಮ ಸಂವೇದಿಯೂ, ಸದಾ ಲೆಕ್ಕಚಾರ ಮಾಡುವಂಥಾದ್ದೂ, ಪರವಶತೆಗೊಳಗಾಗದೇ ಇರುವಂಥಾದ್ದೂ ಆಗಿದ್ದರೆ ಅದು ಪ್ರೀತಿಯೇ ಅಲ್ಲ. ಅದು ಕೇವಲ ಮಮತೆಯಾಗಿರಬಹುದು, ಹಾಗೂ ಆತ್ಮೀಯ ಮನೋಭಾವನೆಯಾಗಿರಬಹುದು, ಆದರೆ ಅದರಲ್ಲಿ ನಿಜವಾದ ಪ್ರೀತಿಯ ಸ್ವಭಾವವು ಇರುವುದಿಲ್ಲ.

ದೇವರಿಗಾಗಿ ಎಂದಾದರೂ ಏನನ್ನಾದರೂ ಮಾಡುವ ಪರವಶತೆಗೆ ನಾನು ಒಳಗಾಗಿರುವೆನೋ ? ಅದು ನನ್ನ ಕರ್ತವ್ಯ ಎಂಬ ಕಾರಣದಿಂದ ಅಲ್ಲ, ಅದೊಂದು ಉಪಯುಕ್ತತೆ ಎಂಬುವ ಕಾರಣಕ್ಕಾಗಿಯೂ ಅಲ್ಲ, ಆತನನ್ನು ನಾನು ಹೃದಯಪೂರ್ವಕವಾಗಿ ಪ್ರೀತಿಸುತ್ತಿರುವ ಸತ್ಯವನ್ನು ಮೀರಿದ ಮತ್ತಿನ್ನೇನೋ ಒಂದು ಅದರಲ್ಲಿದೆ ಎಂಬುವ ಕಾರಣಕ್ಕಾಗಿಯೂ ಅಲ್ಲವಲ್ಲವೇ? ದೇವರಿಗೆ ಮೆಚ್ಚುವಂಥ ಬಹುಬೆಲೆಯುಳ್ಳವು ಗಳನ್ನು ನಾನು ತರಬಲ್ಲೆನೆಂಬುದನ್ನು ನಾನೆಂದಾದರೂ ಗ್ರಹಿಸಿರುವೆನೋ ? ಅಥವಾ ನಾನು ದೇವರಿಗಾಗಿ ಕೈಗೆತ್ತಿಕೊಂಡು ಮಾಡುತ್ತಿರಬೇಕಾದ ಬಹಳಷ್ಟು ಕಾರ್ಯಗಳು ನನ್ನ ಮುಂದಿರುವಾಗ, ತಕ್ಷಣ ಅವುಗಳಲ್ಲಿ ತೊಡಗದೆ, ದೇವರು ಮಾಡಿದ ವಿಮೋಚನಾ ಕಾರ್ಯದ ಮಹತ್ವದ ಬಗ್ಗೆ ಭಾವುಕತೆಯ ಕನಸು ಕಾಣುತ್ತಾ ಇರುವೆನೋ ? ಬೃಹತ್ ಪ್ರಮಾಣದ ಅತ್ಯದ್ಭುತವಾದದ್ದೆಂದೂ ದೈವೀಕವಾದದ್ದೆಂದು ಪರಿಗಣಿಸಲ್ಪಡುವ ಕಾರ್ಯಗಳನ್ನೆಸಗುವುದರ ಬಗ್ಗೆ ಹೇಳುತ್ತಾ ಇಲ್ಲ, ಆದರೆ ತುಂಬಾ ಸರಳವಾಗಿರುವ ಮಾನವ ಸಂಗತಿಗಳು, ಅಂದರೆ ಯಾವ ಸಂಗತಿಗಳು ದೇವರಿಗಾಗಿ ನಾನು ಏನನ್ನಾದರೂ ಮಾಡಲು ನನ್ನನ್ನು ನಾನು ಸಮರ್ಪಿಸಿ ಕೊಂಡಿರುವುದಕ್ಕೆ ಸಾಕ್ಷಿಕೊಡುತ್ತಿವೆಯೋ? ಅಂಥಾ ಸಂಗತಿಗಳನ್ನು ಮಾಡುತ್ತಿರುವೆನೋ ? ಪ್ರೀತಿಯಿಂದ ಪರವಶಳಾದ ಬೆಥಾನ್ಯದ ಮರಿಯಳು ಮಾಡಿದಂಥ ಸರಳ ಸಂಗತಿಯು, ಯೇಸು ಸ್ವಾಮಿಯ ಹೃದಯ ದಲ್ಲಿ ಎಂಥಾ ಸಂವೇದನೆಯನ್ನುಂಟು ಮಾಡಿತೋ ಅಂಥಾದ್ದೊಂದನ್ನು ನಾನೆಂದಾದರೂ ಮಾಡಿರುವೆನೇ ? ''ಈಕೆ ನನಗೆ ಒಳ್ಳೆಯ ಕಾರ್ಯವನ್ನು ಮಾಡಿದ್ದಾಳೆ.''

ಎಷ್ಟರಮಟ್ಟಿಗೆ ನಾವು ಪ್ರಾಮಾಣಿಕವಾಗಿ ಆತನನ್ನು ಪ್ರೀತಿಸುತ್ತಿರುವೆವು ಎಂಬುದನ್ನು ತೋರಿಸುವ ನಮ್ಮ ಶರಣಾಗತಿಯ ಗುರುತಿಗಾಗಿ ನಾವೇನಾದರೂ ಅಲ್ಪ ಸಮರ್ಪಣೆಗಳನ್ನಾದರೂ ದೇವರಿಗೆ ಸಲ್ಲಿಸ ಬಹುದೋ ಎಂಬುದನ್ನು ದೇವರು ಗಮನಿಸುತ್ತಿರಬಹುದೇ ಎನ್ನುವ ಸಮಯಗಳಿದ್ದರೂ ಇರಬಹುದು. ವೈಯಕ್ತಿಕ ಪರಿಶುದ್ಧತೆಗಿಂತಲೂ ದೇವರಿಗೆ ನಮ್ಮನ್ನು ಒಪ್ಪಿಸಿಕೊಡುವುದು ಹೆಚ್ಚು ಬೆಲೆಯುಳ್ಳದ್ದು. ವ್ಯಕ್ತಿಗತ ಪರಿಶುದ್ಧತೆಯು ನಾವೆಷ್ಟು ಬೆಳ್ಳಗಿರುವೆವು ಎಂಬುದರ ಕಡೆಗೆ ನಮ್ಮ ಕಣ್ಣುಗಳನ್ನು ಕೇಂದ್ರಿಕರಿಸುತ್ತದೆ; ನಾವು ಹೇಗೆ ನಡೆಯುತ್ತೇವೆ, ಹೇಗೆ ನುಡಿಯುತ್ತೇವೆ ಮತ್ತು ಹೇಗೆ ದಿಟ್ಟಿಸುತ್ತೇವೆ ಮತ್ತು ದೇವರನ್ನೆಲ್ಲಿ ಮನ ನೋಯಿಸಿಬಿಡುತ್ತೇವೆ ಎಂಬ ಭಯ - ಇವುಗಳತ್ತ ನಾವು ಹೆಚ್ಚಾದ ಗಮನವನ್ನು ಕೊಡುತ್ತೇವೆ. ಆದರೆ ನಾವು ಒಮ್ಮೆ ದೇವರಿಗೆ ಶರಣಾಗತರಾದರೆ ನಿಜವಾದ ಪ್ರೀತಿಯು ಇವೆಲ್ಲವುಗಳನ್ನು ತೊಡೆದು ಹಾಕುತ್ತದೆ. ''ಪೂರ್ಣ ಪ್ರೀತಿಯು ಹೆದರಿಕೆಯನ್ನು ಹೊರಪಡಿಸಿಬಿಡುತ್ತದೆ'' (1 ಯೋಹಾನ 4:18) ದೇವರಿಗೆ ನಾನೇನಾದರೂ ಉಪಯೋಗವಾಗ ಬಲ್ಲೆನೇ? ಎಂದು ಭಾವಿಸಿ ಕೊಳ್ಳುವುದನ್ನು ನಾವು ಬಿಟ್ಟು ಬಿಟ್ಟು 'ನಿಜವಾಗಿಯೂ ನಾನು ಉಪಯೋಗಕ್ಕೆ ಬಾರದವನು' ಎಂಬ ಸತ್ಯವನ್ನು ಮನಗಾಣಬೇಕು. ನೀನು ಉಪಯೋಗಾರ್ಹನೋ ಅಲ್ಲವೋ ಎಂಬುದು ಪ್ರಶ್ನೆಯಲ್ಲ, ಆದರೆ ದೇವರಿಗೆ ನಾನೆಷ್ಟು ಬೆಲೆಯುಳ್ಳವನು ಎಂಬುದೇ ಮುಖ್ಯ. ದೇವರಿಗೆ ನಾವು ಸಂಪೂರ್ಣವಾಗಿ ಶರಣಾಗತರಾಗಿ ನಮ್ಮನ್ನು ಆತನಿಗೆ ಒಪ್ಪಿಸಿಕೊಟ್ಟರೆ ದೇವರು ನಮ್ಮ ಮೂಲಕ ತನ್ನ ಕಾರ್ಯಗಳನ್ನು ಸದಾಕಾಲ ನೆರವೇರಿಸುತ್ತಾನೆ.

# ಆತ್ಮೀಕ ಭದ್ರ, ಹಿಡಿತದ ಶಿಕ್ಷಣ

**''ಬಿಡಿರಿ, ನಾನೇ ದೇವರು'' - (ಕೀರ್ತನೆ 46:10)**

ಛಲವು ಸ್ಥೈರಣೆಗಿಂತಲೂ ಹೆಚ್ಚಿನದು, ನಾವು ಯಾವುದನ್ನು ನೋಡ ಬಯಸುತ್ತೇವೆಯೋ ಅದು ಖಂಡಿತವಾಗಿ ಸಂಭವಿಸುವುದೆನ್ನುವ ಖಚಿತತೆಯಿಂದ ಕಾದಿರುವುದೇ ಸ್ಥೈರಣೆ. ನಾನೆಲ್ಲಿ ಆಳಕ್ಕೆ ಬಿದ್ದು ಹೋಗುವೆನೋ ಎಂಬುವ ಭೀತಿಯ ಮನೋ ದೌರ್ಬಲ್ಯದಿಂದ ಬೇರಾವ ಪ್ರಯತ್ನ ಮಾಡದೆ ಭದ್ರವಾದ ಹಿಡಿತದಿಂದ ಯಾವುದಕ್ಕಾದರೂ ಜೋತುಬಿದ್ದಿರುವಿಕೆಯೇ ಛಲ. ತನ್ನ ಆರಾಧ್ಯವೀರನು ಜಯಿಸಲ್ಪಡುವನು (ಸೋಲಿಸಲ್ಪಡು ವನು) ಎಂಬುದನ್ನು ನಂಬಲು ನಿರಾಕರಿಸುವ ಮನುಷ್ಯನ ಮಹಾ ಪ್ರಯತ್ನವೇ ಛಲದ ಹಿಡಿತ (Tenacity). ಯೇಸುಕ್ರಿಸ್ತನ ಶಿಷ್ಯರಾದ ನಮಗಿರುವ ದೊಡ್ಡ ಭಯ - ನಾವು ಶಾಪಗ್ರಸ್ತರೂ ತಿರಸ್ಕರಿಸಲ್ಪಟ್ಟವರೂ ಆಗುವೆವೆಂಬುವ ಭಯವಲ್ಲ - ನಮಗಿರುವ ಮಹಾಭಯವೆಂದರೆ ಯೇಸುಕ್ರಿಸ್ತನು ಹೇಗೂ ಸೋಲಿಸ ಲ್ಪಡುವನು ಎಂಬುವ ಭಯ. ಆತನು ದೃಢವಾಗಿ ಪ್ರತಿಪಾದಿಸಿದ ಸಂಗತಿಗಳು - ಪ್ರೀತಿ ಮತ್ತು ನ್ಯಾಯ, ಮನುಷ್ಯರಲ್ಲಿ ಕ್ಷಮೆ ಮತ್ತು ದಯೆ, ಇವುಗಳು ಕೊನೆಗೂ ಜಯಗಳಿಸಲಾರವು ಎಂಬುವ ಭಯ, ಆತನು ಯಾವ ತತ್ವಗಳಿಗಾಗಿ ನಿಂತಿದ್ದನೋ ಅವೆಲ್ಲವೂ ಸಾಧಿಸಲಾಗದ ಸಂಗತಿಗಳಾಗಿಯೇ ಉಳಿದು ಬಿಡುವವೋ ಎನ್ನುವ ಭಯ; ಯೇಸುಕ್ರಿಸ್ತನನ್ನು ಕೊಲ್ಲುವುದೇ ಫರಿಸಾಯರ ಸಂಕಲ್ಪನೆಎಂಬುದನ್ನು ನಾವು ಯೋಚಿಸಿ ದಾಗಲೆಲ್ಲಾ ಈ ಭಯವೇ ನಮ್ಮನ್ನು ಆವರಿಸುತ್ತದೆ. ಇಂಥಾ ಭಯದಿಂದ ನಾವು ಕೂಡಿರುವಾಗಲೇ ಆತ್ಮೀಕ ಸ್ಥೈರಣೆಗಾಗಿ ಕರೆಯು ಬರುತ್ತದೆ - ಏನೂ ಮಾಡಲಾರದೆ, ಕೇವಲ ಜೋತು ಬಿದ್ದು ಕೊಂಡಿರುವುದಕ್ಕಲ್ಲ ; - ದೇವರೆಂದಿಗೂ ಸೋಲಿಸಲ್ಪಡುವುದಿಲ್ಲವೆಂಬ ಖಚಿತತೆಯಿಂದ ವಿವೇಚನಾ ಪೂರ್ವಕವಾಗಿ ದೇವರ ಕಾರ್ಯಗಳಲ್ಲಿ ತೊಡಗಲು ಕರೆಯು ಬಂದಿರುತ್ತದೆ.

ಸದ್ಯದಲ್ಲಿ ನಮ್ಮೆಲ್ಲಾ ನಿರೀಕ್ಷೆಗಳು ಆಶಾಭಂಗವಾಗಿದ್ದರೆ, ಆ ನಿರೀಕ್ಷೆಗಳು ಶುದ್ಧೀಕರಿಸಲ್ಪಡುತ್ತಿರುವುದೇ ಅದಕ್ಕೆ ಕಾರಣ. ಮನುಷ್ಯ ಜ್ಞಾನದ ಪ್ರತಿಯೊಂದು ನಿರೀಕ್ಷೆ ಮತ್ತು ಕನಸುಗಳು ಅವು ಶುದ್ಧವಾದವುಗಳೂ ದೈವ ಪ್ರೇರಣೆಯಿಂದಾದವುಗಳೂ ಆಗಿದ್ದರೆ ಅವು ನಿಶ್ಚಯವಾಗಿ ನೆರವೇರುತ್ತವೆ. ದೇವರಿಗಾಗಿ ಕಾದಿರುವುದೇ ಜೀವಿತದ ದೊಡ್ಡ ಪ್ರಯಾಸಗಳಲ್ಲಿ (ಅದೂ ಒಂದು) ಅದೊಂದಾಗಿದೆ. ''ನೀನು ನನ್ನ ಸಹನ ವಾಕ್ಯವನ್ನು ಕಾಪಾಡಿದ್ದರಿಂದ ನಿನ್ನನ್ನು ತಪ್ಪಿಸಿ ಕಾಪಾಡುವೆನು'' (ಪ್ರಕಟನೆ 3:10) ಆದ್ದರಿಂದ ಆತ್ಮೀಕವಾಗಿಯೂ ಸಹನೆಯನ್ನು ಕಾಯ್ದುಕೊಳ್ಳುತ್ತಾ ಇರಬೇಕು.

# ಸೇವೆ ಮಾಡುವ ಸ್ಥಿರ ಸಂಕಲ್ಪ

**''ಮನುಷ್ಯ ಕುಮಾರನು ಸೇವೆ ಮಾಡಿಸಿಕೊಳ್ಳುವದಕ್ಕೆ ಬರಲಿಲ್ಲ ಸೇವೆ ಮಾಡುವದಕ್ಕೂ ..... ಬಂದನು'' - (ಮತ್ತಾಯ 20:28)**

''ನಾನು ನಿಮ್ಮಲ್ಲಿ ಸೇವೆ ಮಾಡುವವನಂತೆ ಇದ್ದೇನೆ'' (ಲೂಕ - 22:2) ಎಂಬ ಸ್ವಾಮಿಯ ಹೇಳಿಕೆ ಮತ್ತು ''ಯೇಸುವಿನ ನಿಮಿತ್ತ ನಿಮ್ಮ ದಾಸರೆಂತಲೂ'' (2 ಕೊರಿಂಥ 4:5) ಎಂದು ನುಡಿದಿರುವ ಪೌಲನ ಉದ್ದೇಶ, ಇವು ಸೇವೆಯ ವಿಷಯದಲ್ಲಿ ಯೇಸು ಸ್ವಾಮಿಯ ಕಲ್ಪನೆಯಂತೆಯೇ ಇವೆ. ಸುವಾರ್ತಾ ಸೇವೆಗೆ ಕರೆಯಲ್ಪಟ್ಟ ವ್ಯಕ್ತಿಯು ಇತರರಿಗಿಂತ ಭಿನ್ನನಾಗಿರಬೇಕೆಂಬ ಭಾವನೆ ನಮ್ಮಲ್ಲಿ ಕೆಲವರಿಗಿದೆ. ಆದರೆ ಯೇಸುಕ್ರಿಸ್ತನ ದೃಷ್ಟಿಯಲ್ಲಿ, ಕರೆಯಲ್ಪಟ್ಟವನು ಎಂದರೆ, ಅವನು ಇತರರ ಪಾದಗಳಿಗೆ ಕೇವಲ ಕಾಲ್ಹೊರಸು (Door Mat) ಆಗಿರಬೇಕು; ಅವನು ಅವರಿಗೆ ಆತ್ಮೀಕ ವಿಷಯಗಳಲ್ಲಿ ಮಾರ್ಗದರ್ಶಕ ನಾಗಿರಬೇಕೇ ಹೊರತು, ಎಂದಿಗೂ ಅವರಿಗಿಂತ ಶ್ರೇಷ್ಠನಾಗಿರುವುದಕ್ಕಾಗಿ ಅಲ್ಲ. ''ಯಾವ ತರದ ಸ್ಥಿತಿಯಲ್ಲಿ ರುವವನಾದರೂ ಅದರ ಗುಟ್ಟು ನನಗೆ ತಿಳಿದದೆ'' (ಫಿಲಿಪ್ಪಿ 4:12). ಕ್ರಿಸ್ತನ ಸೇವೆಯ ವಿಷಯದಲ್ಲಿ ಪೌಲನು ಸಂಪೂರ್ಣವಾಗಿ ಕ್ಷೀಣಗೊಂಡು ತಾನು ನಾಶವಾಗಿಹೋಗುವವರೆಗೂ ನಿಮಗೋಸ್ಕರ ತನ್ನ ಜೀವಿತವನ್ನು ಧಾರೆಯೆರೆಯುವೆನೆಂದೂ, ನೀವು ತನ್ನನ್ನು ಹೊಗಳಿದರೂ, ತೆಗಳಿದರೂ ಅದು ತನ್ನಲ್ಲಿ ವ್ಯತ್ಯಾಸ ವನ್ನುಂಟು ಮಾಡುವುದಿಲ್ಲವೆಂದೂ, ಯೇಸುಕ್ರಿಸ್ತನನ್ನು ಅರಿಯದ ಮಾನವನು ಧರೆಯ ಮೇಲೆ ಇರುವವರೆಗೆ, ಅವನು, ಯೇಸುಕ್ರಿಸ್ತನನ್ನು ಅರಿಯುವಂತೆ ಮಾಡುವುದಕ್ಕಾಗಿ ತಾನು ಅವನಿಗೆ ಋಣಸ್ಥನಾಗಿ ಅಂಥವನ ಸೇವೆಯನ್ನು ಮಾಡುವೆನು ಎಂದೂ ಪೌಲನು ಹೇಳುತ್ತಿದ್ದಾನೆ. ಪೌಲನ ಪ್ರಧಾನ ಪ್ರೇರಣೆಯು ಮಾನವ ರನ್ನು ಪ್ರೀತಿಸುವದಕ್ಕಾಗಿ ಆದುದಲ್ಲ, ಯೇಸುಕ್ರಿಸ್ತನನ್ನು ಪ್ರೀತಿಸುವದಕ್ಕೇ. ಮನುಜಕುಲದ ಹಿತಕ್ಕಾಗಿ ನಮ್ಮನ್ನು ಸಮರ್ಪಿಸಿಕೊಂಡರೆ ಬಹು ಬೇಗನೇ ನಾವು ಜಜ್ಜಲ್ಪಡುತ್ತೇವೆ ಮತ್ತು ಹೃದಯ ಛಿದ್ರತೆಗೊಳ ಗಾಗುತ್ತೇವೆ. ಎಷ್ಟೇ ಪ್ರೀತಿ ತೋರಿಸಿದರೂ ಹೆಚ್ಚು ಕೃತಜ್ಞ ಹೀನತೆಯನ್ನು ವ್ಯಕ್ತಪಡಿಸುವ ಮನುಷ್ಯರನ್ನು ಅನೇಕ ವೇಳೆ ನಾವು ಸಂಧಿಸುತ್ತೇವೆ. ಆದರೆ ನಮ್ಮ ಘನೋದ್ದೇಶಗಳು ದೇವರನ್ನು ಪ್ರೀತಿಸುವುದಕ್ಕೆ ಮಾತ್ರವೇ ಆಗಿರುವುದರಿಂದ, ಜೊತೆ ಮಾನವರಿಗೆ ನಾವು ಮಾಡುವ ಸೇವೆಯನ್ನು ಎಂಥಾ ಕೃತಜ್ಞಹೀನತೆಗಳೂ ಅಡ್ಡಿ ಪಡಿಸಲಾರವು.

ಯೇಸುಕ್ರಿಸ್ತನು ಅತ್ಯಂತ ಕೃತಘ್ನನಾದ ತನ್ನನ್ನು ಹೇಗೆ ನಿಭಾಯಿಸಿ ಪ್ರೀತಿಸಿದ ನೆಂಬುದರ ಪೂರ್ಣ ಅರಿವೇ ಪೌಲನು ತಾನು ಇತರರಿಗೆ ಸಲ್ಲಿಸಲಿರುವ ಸೇವೆಯ ಸಂಕಲ್ಪದ ಗುಟ್ಟಾಗಿತ್ತು. ''ದೂಷಕನೂ, ಹಿಂಸಕನೂ, ಬಲಾತ್ಕಾರಿಯೂ ಆಗಿದ್ದ ನನ್ನನ್ನು'' (1ತಿಮೋ 1:13) ಜನರು ಹೇಗೆ ಬೇಕಾದರೂ ತನ್ನನ್ನು ನಡೆಸಿಕೊಳ್ಳಲಿ, ಆದರೂ ತಾನು ಎಂಥಾ ಮತ್ಸರ, ಹೀನಾಯವಾದ ಕಟುದ್ದೇಶ ಗಳಿಂದ ಯೇಸುಕ್ರಿಸ್ತನನ್ನು ಹಿಂಸಿಸಿದ್ದನೋ ಅಷ್ಟು ಹಿಂಸಾತ್ಮಕ ರೀತಿಯಲ್ಲಿ ಜನರು ತನ್ನನ್ನು ನಡೆಸಿಕೊಳ್ಳಲಾರರು ಎಂದು ಪೌಲನು ಹೇಳುತ್ತಿದ್ದಾನೆ. ನಮ್ಮ ಅಧಮತೆಯ, ಸ್ವಾರ್ಥತೆಯ, ಅಯೋಗ್ಯತೆಯ ಅತಿರೇಕದಲ್ಲಿ ನಾವು ಮುಳುಗಿರು ವಾಗಲೂ ಯೇಸುಕ್ರಿಸ್ತನು ನಮಗೆ ಮಾಡಿದ ಸೇವೆಯನ್ನು ನಾವು ಒಮ್ಮೆ ಗ್ರಹಿಸಿದರೆ, ಜನರು ನಮ್ಮ ವಿರುದ್ಧ ಏನು ಮಾಡಿದರೂ ಅದು ದೇವರ ಸೇವೆ ಮಾಡುವ ನನ್ನ ಸಂಕಲ್ಪವನ್ನು ಎಂದಿಗೂ ನಾಶಪಡಿಸುವುದಿಲ್ಲ.

# ತ್ಯಾಗದಲ್ಲಿರುವ ಆನಂದ

**''ನಿಮ್ಮ ಆತ್ಮ ಸಂರಕ್ಷಣೆ ಗೋಸ್ಕರ ಅತಿ ಸಂತೋಷದಿಂದ ವೆಚ್ಚಮಾಡುತ್ತೇನೆ. ನನ್ನನ್ನೇ ವೆಚ್ಚ ಮಾಡಿಕೊಳ್ಳುತ್ತೇನೆ'' - (2 ಕೊರಿಂಥ 12:15)**

ಒಮ್ಮೆ ಪವಿತ್ರಾತ್ಮನ ಮುಖಾಂತರ ದೇವರ ಪ್ರೀತಿರಸವು ನಮ್ಮ ಹೃದಯಗಳಲ್ಲಿ ಧಾರಾಳವಾಗಿ ಚೆಲ್ಲಲ್ಪಟ್ಟಾಗ, ನಾವು ಆಲೋಚನಾಪೂರ್ವಕವಾಗಿ, ಇತರರಲ್ಲಿ ಯೇಸುಕ್ರಿಸ್ತನಿಗಿರುವ ಆಸಕ್ತಿಗಳನ್ನು, ಉದ್ದೇಶ ಗಳನ್ನೂ, ಎಚ್ಚರಿಕೆಯಿಂದ ಗಮನಿಸಿ ಅವುಗಳೊಂದಿಗೆ ನಮ್ಮನ್ನು ಗುರುತಿಸಿಕೊಳ್ಳಲು ಆರಂಭಿಸುತ್ತೇವೆ. (ರೋಮಾ 5:5) ಯೇಸುಕ್ರಿಸ್ತನು ಎಲ್ಲಾ ವರ್ಗದ ಜನರಲ್ಲಿಯೂ ಆಸಕ್ತಿ ಹೊಂದಿರುತ್ತಾನೆ. ಕ್ರೈಸ್ತಕಾರ್ಯ ಚಟುವಟಿಕೆಗಳಲ್ಲಿ ನಮ್ಮದೇ ಆದ ಒಲವು ಆಕರ್ಷಣೆಗಳ ಮುಖಾಂತರ ಮಾರ್ಗದರ್ಶನ ಪಡೆಯುವ ಹಕ್ಕು ನಮಗೆ ಇಲ್ಲವೇ ಇಲ್ಲ; ಇದೇ ಯೇಸುಕ್ರಿಸ್ತನೊಂದಿಗೆ ನಮಗಿರುವ ಸಂಬಂಧಗಳ ದೊಡ್ಡ ಪರೀಕ್ಷೆ. ಪ್ರಾಣವನ್ನೇ ಸ್ನೇಹಿತನಿಗಾಗಿ (ಯೇಸುಕ್ರಿಸ್ತನಿಗಾಗಿ) ಆಹುತಿಕೊಡುವುದೇ - ಪ್ರಾಣವನ್ನು ಎಸೆದು ಹೊರಗೆ ಬಿಸಾಡು ವದಲ್ಲ - ಮಹದಾನಂದವನ್ನು ಕೊಡುತ್ತದೆ. (ಯೆಹಾ 15:13) ಯೇಸುಕ್ರಿಸ್ತನಿಗೆ ಇತರರಲ್ಲಿರುವ ಆಸಕ್ತಿಗಳಿ ಗಾಗಿಯೂ, ಆತನಿಗಾಗಿಯೂ ಬಹು ಎಚ್ಚರಿಕೆಯಿಂದ ಪ್ರಾಣಾಹುತಿಯನ್ನ ಸಗಬೇಕೇ ವಿನಃ ಯಾವುದೋ ಒಂದು ಕಾರಣಕ್ಕಾಗಿ ಅಲ್ಲ. ಮಾನವರನ್ನು ಕ್ರಿಸ್ತನಿಗಾಗಿ ಸಂಪಾದಿಸಿಕೊಳ್ಳುವ ಒಂದೇ ಒಂದು ಉದ್ದೇಶದಿಂದ ಪೌಲನು ತನ್ನನ್ನು ವ್ಯಯ ಮಾಡಿಕೊಂಡನು. ಪೌಲನು ಯಾವಾಗಲೂ ಜನರನ್ನು ತನ್ನ ಸ್ವಾಮಿಯಾದ ಕ್ರಿಸ್ತನ ಕಡೆಗೆ ಸೆಳೆಯುತ್ತಿದ್ದನೇ, ಹೊರತು ತನ್ನ ಕಡೆಗೆ ಸೆಳೆಯುತ್ತಿರಲಿಲ್ಲ. ''ಯಾವ ವಿಧದಲ್ಲಿಯಾದರೂ ಕೆಲವರನ್ನು ರಕ್ಷಿಸಬೇಕೆಂದು ಯಾರ್ಯಾರಿಗೆ ಎಂಥೆಂಥವ ನಾಗಬೇಕೊ ಅಂಥಂಥವನಾಗಿದ್ದೇನೆ''. (1 ಕೊರಿಂಥ 9:22).

ದೇವರೊಂದಿಗೆ ತನಗಿರುವ ಪರಿಶುದ್ಧ ಜೀವಿತವನ್ನು ತಾನೊಬ್ಬನೇ ಮೊದಲು ಅಭಿವೃದ್ಧಿಪಡಿ ಸಿಕೊಳ್ಳಬೇಕಾಗಿದೆ ಎಂದು ಹೇಳುವ ವ್ಯಕ್ತಿಯು, ಇತರರ ಉಪಯೋಗಕ್ಕೆ ಯೋಗ್ಯನಾಗಿರುವುದಿಲ್ಲ. ಅವನು ತನ್ನನ್ನು ತಾನು ಎತ್ತರದ ಪೀಠದಲ್ಲಿ ಕುಳ್ಳಿರಿಸಿಕೊಂಡು, ಸಮಾಜದ ಜನರೆಲ್ಲರಿಂದ ತನ್ನನ್ನು ಬೇರ್ಪಡಿಸಿ ಕೊಂಡಿರುವನು. ಪೌಲನಾದರೋ ಶುದ್ಧ ವ್ಯಕ್ತಿಯಾಗಿದ್ದನು; ಪೌಲನು ಎಲ್ಲಿಗೆಹೋದರೂ ಯೇಸುಕ್ರಿಸ್ತನು ತನಗೋಸ್ಕರ ಅವನ ಜೀವವನ್ನು ಕಾಯುತ್ತಿದ್ದನು. ನಮ್ಮಲ್ಲಿ ಅನೇಕರು ತಮ್ಮದೇ ಆದ ಗುರಿಗಳನ್ನೇ ಸಾಧಿಸಿ ಕೊಳ್ಳಲು ಆಸಕ್ತರಾಗಿರುವುದರಿಂದ ಯೇಸು ಕ್ರಿಸ್ತನು ಅವರಲ್ಲಿ ತನ್ನ ಪರವಾಗಿ ಏನೂ ಸಾಧಿಸುವುದಿಲ್ಲ. ನಾವು ಸಂಪೂರ್ಣವಾಗಿ ಆತನಿಗೋಸ್ಕರ ನಮ್ಮನ್ನು ಪರಿತ್ಯಜಿಸಿಕೊಂಡರೆ, ಆಗ ನಮ್ಮ ಸ್ವಂತ ಆಸಕ್ತಿಯುಳ್ಳ ಸೇವಾ ಗುರಿಗಳೇನೂ ನಮಗಿರುವುದಿಲ್ಲ. ಇತರರ ಪಾದಗಳಿಗೆ ಕಾಲ್ಲೊರಸು ಆಗಿರುವದೇನೆಂಬುದನ್ನು ಅರಿತಿದ್ದೇನೆಂದು ಪೌಲನು ಹೇಳಿದನು. ಯಾಕೆಂದರೆ, ಅವನ ಜೀವಿತದ ಪ್ರಧಾನ ಪ್ರೇರಣೆಯು ಯೇಸುಕ್ರಿಸ್ತ ನಲ್ಲಿ ನಿಷ್ಠೆಯಿಂದಿರುವುದಕ್ಕಾಗಿಯೇ ಇದ್ದಿತು. ನಾವಾದರೋ ಆತ್ಮೀಕ ಸ್ವಾತಂತ್ರದ ಬುದ್ಧಿ ವಿಕಲ್ಪತೆ ಯನ್ನುಂಟು ಮಾಡುವ ಸಂಗತಿಗಳಿಗೆ ನಿಷ್ಠೆಯುಳ್ಳವರಾಗಿರುತ್ತೇವೆಯೇ ಹೊರತು ಯೇಸು ಕ್ರಿಸ್ತನಿಗಾಗಿ ನಿಷ್ಠೆಯಿಂದ ಇರುವುದಿಲ್ಲ. ಇದು ಪೌಲನ ಉದ್ದೇಶವಲ್ಲ. ''ನನ್ನ ಸಹೋದರರಿಗೋಸ್ಕರ ನಾನೇ ಸಾಧ್ಯವಾದರೆ ಕ್ರಿಸ್ತನನ್ನು ಅಗಲಿ ಶಾಪಗ್ರಸ್ತನಾಗುವದಕ್ಕೆ ಒಪ್ಪಿಕೊಂಡೇನು'' (ರೋಮಾಯ 9:3) ಇದು ಗೊತ್ತು ಗುರಿಯಿಲ್ಲದ್ದು ಮತ್ತು ಅಳತೆಗೆಟ್ಟಿದ್ದು ಹೌದೇ ? ಪ್ರೇಮಾನುರಾಗಭರಿತನಾದವನ ಅಂಥ ಹೇಳಿಕೆಯು ಅತಿಶಯೋಕ್ತಿಯಲ್ಲ. ಪೌಲನು ಯೇಸುಕ್ರಿಸ್ತನಲ್ಲಿ ಅಷ್ಟು ಪ್ರೀತಿಯುಳ್ಳವನಾಗಿದ್ದನು.

# ಸೇವೆಯಲ್ಲಿ ದೀನತೆ

**''ನಾನು ನಿಮ್ಮನ್ನು ಹೆಚ್ಚಾಗಿ ಪ್ರೀತಿಸಿದರೆ ನೀವು ನನ್ನನ್ನು ಕಡಿಮೆಯಾಗಿ ಪ್ರೀತಿಸುತ್ತೀರೋ ?''**
**– (2 ಕೊರಿಂಥ 12:15)**

ಸ್ವಾಭಾವಿಕ ಪ್ರೀತಿಯು ಏನಾದರೋಂದು ಪ್ರತಿಫಲವನ್ನು ಬಯಸುತ್ತದೆ; ಆದರೆ ಪೌಲನ ಅಭಿಪ್ರಾಯವನ್ನು ಇಲ್ಲಿ ನೋಡಿರಿ. ನೀವೂ ನನ್ನನ್ನು ಪ್ರೀತಿಸುವಿರೋ ಅಥವಾ ಇಲ್ಲವೋ ಎಂಬುದು ನನಗೆ ಮುಖ್ಯವಲ್ಲ; ''ನಿಮ್ಮನ್ನು ದೇವರ ಕಡೆಗೆ ತಿರುಗಿಸಿ ಆತನ ಅನೋನ್ಯತೆಯಲ್ಲಿ ನಿಮ್ಮನ್ನು ಸೇರ ಮಾಡುವುದಕ್ಕಾಗಿ ನಾನು ಸಂಪೂರ್ಣವಾಗಿ ಗತಿಹೀನನಾಗಲು ಇಚ್ಚಿಸುತ್ತೇನೆ. ನಿಮಗೋಸ್ಕರ ಕಡುಬಡವ ನಾಗಲೂ ನಾನು ಸಿದ್ದ. ಕರ್ತನಾದ ಯೇಸುಕ್ರಿಸ್ತನ ಕೃಪೆಯು ನಿಮಗೆ ಗೊತ್ತಾಗಿದೆಯಲ್ಲಾ! ಆತನು ಐಶ್ವರ್ಯವಂತನಾಗಿದ್ದು ನಿಮಗೋಸ್ಕರ ಬಡವನಾದನು'' (2 ಕೊರಿ 8:9) ಪೌಲನ ಸೇವಾಧರ್ಮವೂ ಯೇಸುಕ್ರಿಸ್ತನ ಕಲ್ಪನೆಯಂತೆಯೇ ಇದೆ. ಸೇವೆಗಾಗಿ ತಾನು ಎಷ್ಟು ಹೆಚ್ಚಿನ ಬೆಲೆ ತೆರಬೇಕಾಗುತ್ತದೆ ನ್ನುವುದರ ಬಗ್ಗೆ ಆತನಿಗೆ ಗಮನವೇ ಇಲ್ಲ, ಅದನ್ನು ಸಂತೋಷವಾಗಿ ತೆರಬಲ್ಲನು ಮತ್ತು ಶ್ರಮೆಯನ್ನು ಅನುಭವಿಸಬಲ್ಲನು, ಪೌಲನಿಗೆ ಅದು ಅತ್ಯಾನಂದವನ್ನು ಕೊಡುವ ಸಂಗತಿಯಾಗಿದೆ.

ದೇವರ ಸೇವಕನ ಬಗ್ಗೆ ಕ್ರೈಸ್ತಧರ್ಮ ಸೂತ್ರಗಳಲ್ಲಿರುವ ಉದ್ದೇಶವು ಯೇಸುಕ್ರಿಸ್ತನ ಉದ್ದೇಶವಲ್ಲ. ಆತನ ಕಲ್ಪನೆಯಾದರೋ ನಾವು ಇತರರಿಗೆ ಆಳುಗಳಾಗಿರುವುದೇ ನಿಜವಾದ ದೇವಸೇವೆ. ಯೇಸುಕ್ರಿಸ್ತನು ಸಮಾಜವಾದಿಗಳಿಗಿಂತಲೂ ಹೆಚ್ಚಿನ ಸಮಾಜವಾದಿಯಾಗಿರುವನು. ಆತನು ಹೇಳುವಂತೆ, ''ತನ್ನ ರಾಜ್ಯದಲ್ಲಿ ಅತಿ ಹೆಚ್ಚಿನವನು ಬೇರೆ ಎಲ್ಲಾ ಜನರ ಆಳಾಗಿ ಇರುವನು''. (ಮತ್ತಾಯ 23:11 ನೋಡಿರಿ) ದೇವರ ಸೇವಕನ ಒಂದು ನಿಜವಾದ ಪರೀಕ್ಷೆಯೆಂದರೆ ದೇವರ ಸುವಾರ್ತೆ ಸಾರುವುದಲ್ಲ–ಅದು ಶಿಷ್ಯರ ಪಾದಗಳನ್ನು ತೊಳೆಯುವಂಥದ್ದು – ಮಾನವನ ಗಣನೆಯಲ್ಲಿ ಅತೀ ಅಲ್ಪವಾದ, ಲೆಕ್ಕಕ್ಕೆ ಬಾರದಷ್ಟು ಗಣನಾಹೀನ ಕೆಳಮಟ್ಟದ ಕಾರ್ಯಗಳನ್ನು ಮಾಡುವಂಥಾದ್ದು – ಅಂಥಾ ಸೇವೆಯೇ ದೇವರ ದೃಷ್ಟಿಯಲ್ಲಿ ಬಹು ಗಣನೀಯವೆನಿಸುವುದು. ಬೇರೆಯವರ ಜೀವಿತದಲ್ಲಿ ದೇವರಿಗಿರುವ ಆಸಕ್ತಿಗಳಿಗಾಗಿ ತನ್ನನ್ನು ತಾನು ವ್ಯಯಮಾಡಿಕೊಂಡು ಗತಿಹೀನನಾಗುವುದೇ ಪೌಲನ ಪರಮಾನಂದವಾಗಿತ್ತು ಮತ್ತು ಅದಕ್ಕಾಗಿ ಎಂಥಾ ಬೆಲೆಯನ್ನಾದರೂ ತೆರಲು ಆತನು ಲೆಕ್ಕಿಸುತ್ತಿರಲಿಲ್ಲ. ನಾವಾದರೋ 'ದೇವರ ಸೇವೆಯನ್ನು ಕೈಕೊಳ್ಳುವ ಮೊದಲು ನಮಗೆ ಅವಶ್ಯವೆನಿಸುವ ಆರ್ಥಿಕ ಮತ್ತು ವೈಯಕ್ತಿಕ ಅಗತ್ಯಗಳ ವಿಷಯದಲ್ಲಿ ಚಿಂತನೆ ಮಾಡುತ್ತೇವೆ. ದೇವರು ಹೋಗಬೇಕೆಂದು ಹೇಳಿರುವ ಆ ಸ್ಥಳಕ್ಕೆ ನಾನು ಹೋದಾಗ ನನ್ನ ಗತಿ ಏನು ? ಎಷ್ಟು ಸಂಬಳ ಕೊಡಬಹುದು? ಆ ಸ್ಥಳದಲ್ಲಿರುವ ವಾತಾವರಣ ಹೇಗಿರಬಹುದು? ನನ್ನನ್ನು ಅಲ್ಲಿ ನೋಡಿಕೊಳ್ಳು ವವರು ಯಾರು? ಇದೆಲ್ಲವನ್ನು ನಾನು ಯೋಚಿಸಬಾರದೇ?' ಷರತ್ತುಗಳಿಂದ ಮಾತ್ರ ದೇವರನ್ನು ಸೇವಿಸ ಬಲ್ಲೆವೆಂಬುದನ್ನು ಇದು ಸೂಚಿಸುತ್ತದೆ. ಪೌಲನಿಗೆ ಯಾವ ಷರತ್ತುಗಳೂ ಇರಲಿಲ್ಲ. ಹೊಸ ಒಡಂಬಡಿಕೆಯ ಸುವಾರ್ತಾ ಸೇವಕರ ಬಗ್ಗೆ ಯೇಸುಕ್ರಿಸ್ತನಿಗಿದ್ದ ಅಭಿಪ್ರಾಯವನ್ನೇ ಪೌಲನು ತನ್ನ ಜೀವಿತದಲ್ಲಿ ಪ್ರತಿಪಾದಿಸುತ್ತಿ ರುವನು, ಕೇವಲ ಸುವಾರ್ತೆಯನ್ನು ಸಾರಿಹೇಳುವವರ ವಿಷಯವಾಗಿ ಅಲ್ಲ. ಆದರೆ ಯೇಸುಕ್ರಿಸ್ತನ ಕರಗಳಲ್ಲಿ ಇತರರಿಗಾಗಿ ಮುರಿಯಲ್ಪಟ್ಟ ರೊಟ್ಟಿಯಾಗಿಯೂ ಸುರಿಯಲ್ಪಟ್ಟ ದ್ರಾಕ್ಷಾರಸ ವಾಗಿಯೂ ಆಗುವ ದೇವರ ಸೇವಕನ ಬಗ್ಗೆ ಪೌಲನು ಇಲ್ಲಿ ಒತ್ತಿ ಹೇಳುತ್ತಿದ್ದಾನೆ.

# ಯೇಸುಕ್ರಿಸ್ತನ ಬಗ್ಗೆ ಕೆಳಮಟ್ಟದ ಸಂದೇಹಗಳು

**''ಅಯ್ಯಾ ಸೇದುವದಕ್ಕೆ ನಿನ್ನಲ್ಲಿ ಏನೂ ಇಲ್ಲ'' - (ಯೋಹಾ 4:11)**

''ದೇವರ ವಾಕ್ಯಗಳಲ್ಲಿರುವ ಅದ್ಭುತ ಸತ್ಯಗಳಿಂದ ನಾನು ಬಹಳವಾಗಿ ಪ್ರಭಾವಿತ ನಾಗಿರುವೆನು; ಆದರೆ ಆ ಸತ್ಯಗಳನ್ನು ದೈನಂದಿನ ಜೀವಿತದಲ್ಲಿ ವಿವರವಾಗಿ ನಿರೂಪಿಸಬೇಕೆಂದು ದೇವರು ನನ್ನಿಂದ ಬಯಸ ಬಾರದು''. ಯೇಸುಕ್ರಿಸ್ತನ ಗುಣ ಸಾಮರ್ಥ್ಯಗಳ ಆಧಾರದ ಮೇಲೆ ಆತನನ್ನು ನಾವು ಎದುರಿಸಿದಾಗಲೆಲ್ಲಾ ನಮ್ಮ ಮನೋ ಪ್ರವೃತ್ತಿಯು, ನಮ್ಮದೇ ಆದ ಧಾರ್ಮಿಕ ಶ್ರೇಷ್ಠತೆಯನ್ನು ಪ್ರತಿಬಿಂಬಿಸುತ್ತದೆ. ''ಸ್ವಾಮೀ ನಿನ್ನ ಆದರ್ಶಗಳು, ಅಮೂಲ್ಯವಾದವಗಳೂ ಅವು ಉನ್ನತೋನ್ನತವೂ ಆಗಿವೆ. ಮತ್ತು ಅವು ನಮ್ಮ ಮೇಲೆ ಸಾಕಷ್ಟು ಪ್ರಭಾವವನ್ನು ಬೀರುತ್ತವೆ ನಿಜ. ನೀನು ಹೇಳುವಂಥವುಗಳನ್ನು ನಮ್ಮ ವಾಸ್ತವಿಕ, ದೈನಂದಿನ ಜೀವನ ದಲ್ಲಿ ಕೈಕೊಂಡು ನಡೆದು, ಜೀವಿಸುವುದಕ್ಕಾಗುವುದಿಲ್ಲ'' ಎಂದು ನಾವು ಒಂದಲ್ಲ ಒಂದು ಸನ್ನಿವೇಶದಲ್ಲಿ ಅಥವಾ ಜೀವಿತದ ಒಂದಲ್ಲ ಒಂದು ರಂಗದಲ್ಲಿ ಯೇಸುಕ್ರಿಸ್ತನ ಬಗ್ಗೆ ಯೋಚಿಸುತ್ತೇವೆ. ಯೇಸುಕ್ರಿಸ್ತನ ವಿಷಯದ ನಡುವಳಿಕೆಗಳನ್ನು ಪ್ರಸ್ತಾಪಿಸುತ್ತಿರುವಾಗ ಯಾರಾದರೂ ''ಅದು ಸರಿ ಆ ಸಮಯದಲ್ಲಿ ಬದುಕಲು ಅಗತ್ಯವಿರುವ ಹಣವನ್ನು ನೀನು ಎಲ್ಲಿಂದ ಪಡೆದುಕೊಳ್ಳುವಿ? ನಿನ್ನ ಪರಾಂಬರಿಕೆಯನ್ನು ನೀನು ಹೇಗೆ ನಿಭಾಯಿಸುವೇ?'' ಎಂಬ ಮನಮುಟ್ಟುವ ಪ್ರಶ್ನೆಗಳನ್ನು ನಿನಗೆ ಕೇಳಿದಾಗ ನೀನು ಪಲ್ಲಟಗೊಂಡರೆ, ಆಗ ಯೇಸುಕ್ರಿಸ್ತನ ವಿಷಯದಲ್ಲಿ ಇಂಥ ಕೆಳಮಟ್ಟದ ಸಂದೇಹಗಳು ಮೂಡುತ್ತವೆ. ಇಲ್ಲವೇ ನಮ್ಮ ಪರಿಸ್ಥಿತಿ ಗಳನ್ನು ನಿಭಾಯಿಸುವುದು ಆತನಿಗೆ ತುಂಬಾ ಶ್ರಮದಾಯಕವೆಂದೂ ನಾವೇ ಯೇಸುಕ್ರಿಸ್ತನಿಗೆ ಹೇಳಿ ದಾಗಲೂ ಇಂಥ ಲಘುವಾದ ಶಂಕೆಗಳು, ಯಾರ ಪ್ರಚೋದನೆಯೂ ಇಲ್ಲದೆ ನಮ್ಮೊಳಗಿನಿಂದಲೇ ಮೂಡಿ ಬರುತ್ತದೆ. ''ಯೇಸುಕ್ರಿಸ್ತನನ್ನು ನಂಬು'' ನಿನ್ನ ಅಗತ್ಯಗಳೆಲ್ಲವನ್ನೂ ಪೂರೈಸಬಲ್ಲನೆಂದು ನಂಬು ಎಂದು ಹೇಳುವುದು ಒಳ್ಳೆಯದು, ಆದರೆ ಮನುಷ್ಯನು ಬದುಕಲೇಬೇಕು, ಬದುಕಲು ಅಗತ್ಯವಾದವುಗಳನ್ನು ಒದಗಿಸಲು ಯೇಸುಕ್ರಿಸ್ತನಲ್ಲಿ ಸೇದುವುದಕ್ಕೆ ಏನೂ ಇಲ್ಲ; ಕಣ್ಣಿಗೆ ಕಾಣುವ ಯಾವ ಸಾಧನಗಳೂ ಆತನ ಬಳಿ ಇಲ್ಲ. ಇಂಥಾ ಪರಿಸ್ಥಿತಿಗಳಲ್ಲಿ 'ಯೇಸುಕ್ರಿಸ್ತನ ವಿಷಯವಾಗಿ ನನ್ನಲ್ಲಿ ಯಾವುದೇ ರೀತಿಯ ಲಘುಶಂಕೆಗಳು ಇರುವುದಿಲ್ಲ, ಒಂದು ವೇಳೆ ಕೆಳಮಟ್ಟದ ಸಂದೇಹಗಳು ಇರುವುದಾದರೆ, ಅವು ಕೇವಲ ನನ್ನಲ್ಲಿ ಮತ್ತು ನನ್ನ ವಿಷಯದಲ್ಲಿ ಮಾತ್ರ' ಎಂದು ಹೇಳಿಕೊಳ್ಳುವ ನಿನ್ನ ಸಾತ್ವಿಕ ವಂಚನೆಯ ಬಗ್ಗೆ ಎಚ್ಚರದಿಂದಿರು. ವಾಸ್ತವವಾಗಿ ನಮ್ಮ ಬಗ್ಗೆ ನಮಗೆ ಕೆಳಮಟ್ಟದ ಸಂದೇಹಗಳು ಇರುವುದೇ ಇಲ್ಲ; ಯಾಕೆಂದರೆ ನಾವು ಯಾವುದನ್ನು ಸಾಧಿಸ ಬಲ್ಲೆವು ಮತ್ತು ಯಾವುದನ್ನು ನಾವು ಖಂಡಿತವಾಗಿಯೂ ಸಾಧಿಸಲಾರೆವು ಎಂಬುದು ನಮಗೆ ತಿಳಿದೇ ಇರುತ್ತದೆ. ಆದರೆ ಯೇಸುಕ್ರಿಸ್ತನ ಬಗ್ಗೆ ಕೆಳಮಟ್ಟದ ಸಂದೇಹಗಳು ಇದ್ದೇಇರುತ್ತವೆ. ನಾವು ಮಾಡಲಾರದವು ಗಳನ್ನು ಯೇಸುಕ್ರಿಸ್ತನು ಮಾಡಬಲ್ಲನು ಎಂಬುವ ಚಿಂತನೆಯೇ ನಮ್ಮ ಆತ್ಮಗೌರವವನ್ನು ಘಾಸಿ ಗೊಳಿಸುತ್ತದೆ.

ಯೇಸುಕ್ರಿಸ್ತನು ಹೇಳಿದವುಗಳಲ್ಲಿ ಯಾವುದನ್ನು ಮಾಡಲು ನನಗೆ ಸಾಧ್ಯವಿಲ್ಲವೆಂದು ನಾನು ಭಾವಿಸಿರುವೆನೋ ಅವುಗಳನ್ನು ಆತನು ತಾನೇ ಹೇಗೆ ಮಾಡಬಲ್ಲನೆಂದು ನನ್ನ ಮನದಾಳವನ್ನು ಜಾಲಾಡಿ ವಿವೇಚನೆ ಮಾಡುತ್ತಿರುವಾಗಲೇ, ಯೇಸುಕ್ರಿಸ್ತನ ವಿಷಯದಲ್ಲಿ ಕೆಳಮಟ್ಟದ ಸಂದೇಹಗಳು ಮೂಡಿಬರುತ್ತವೆ. ವಾಸ್ತವ ವೆಂದರೆ ನನ್ನ ಕೀಳರಿಮೆಯ ಆಳದಿಂದಲೇ ಇಂಥಾ ಶಂಕೆ, ಸಂದೇಹಗಳು ಪುಟಿದೇಳುತ್ತವೆ. ಒಂದೊಮ್ಮೆ ನಾನೇ ನನ್ನ ಆಂತರ್ಯದಲ್ಲಿರುವ ಕೆಳಮಟ್ಟದ ಸಂದೇಹಗಳನ್ನು ಪತ್ತೆಹಚ್ಚಿ, ಅವುಗಳನ್ನು ಬೆಳಕಿಗೆ ತಂದು 'ಸ್ವಾಮಿ ನಿನ್ನ ವಿಷಯದಲ್ಲಿ ನೀಚ ಸಂಶಯಗಳು ನನ್ನಲ್ಲಿಯೇ ಇವೆ. ನನ್ನ ಆಲೋಚನೆಗೆ ನಿಲುಕದ ನಿನ್ನ ದೈವಿಕ ವಿವೇಚನೆಯನ್ನು ನಾನು ನಂಬಲಿಲ್ಲ, ನನ್ನ ಸೀಮಿತ ಗ್ರಹಿಕೆಗೆ ಮೀರಿದ ನಿನ್ನ ಅಪರಿಮಿತ ಸಾಮರ್ಥ್ಯವನ್ನು ನಾನು ಗ್ರಹಿಸಲಿಲ್ಲ ಮತ್ತು ನಂಬಲೇ ಇಲ್ಲವೆಂದು ತಪ್ಪೊಪ್ಪಿಕೊಳ್ಳುತ್ತೇನೆ'' ಎಂದು ತಪ್ಪೊಪ್ಪಿ ಕೊಳ್ಳಬೇಕು.

# ಯೇಸುಸ್ವಾಮಿಯ ಸೇವಾಕಾರ್ಯವನ್ನು ನಿಸ್ಸಾರಗೊಳಿಸುವಿಕೆ

**''ಆ ಜೀವಕರವಾದ ನೀರು ನಿನಗೆ ಎಲ್ಲಿಂದ ಬಂತು ?'' - (ಯೋಹಾನ 4:11)**

''ಬಾವಿ ಆಳವಾಗಿದೆ'' (ಯೋಹಾನ - 4:11) ಸಮಾರ್ಯದ ಸ್ತ್ರೀಯು ತಿಳಿದುದ್ದಕ್ಕಿಂತಲೂ ಬಾವಿಯು ಬಹು ಹೆಚ್ಚು ಆಳವಾಗಿದೆ. ಮಾನವ ಸ್ವಭಾವದ ಆಳ, ಮಾನವ ಜೀವಿತದ ಆಳಗಳನ್ನು ಯೋಚಿಸಿರಿ ಮತ್ತು ನಿಮ್ಮಲ್ಲಿರುವ ಬಾವಿಗಳ ಆಳವನ್ನು ಕುರಿತು ಯೋಚಿಸಿರಿ. ಅಷ್ಟು ಆಳವಾಗಿರುವ ಬಾವಿಗಳಿಂದ ಕೂಡಿದ ನಿನ್ನ ಜೀವಿತದಲ್ಲಿ ಕಾರ್ಯಸಾಧಿಸಲು ಯೇಸುಕ್ರಿಸ್ತನಿಗಾಗುವುದಿಲ್ಲವೆಂದು, ಆತನ ಸೇವಾಕಾರ್ಯವನ್ನು ಮಿತಗೊಳಿಸಿ ಅದನ್ನು ದುರ್ಬಲಗೊಳುಸುತ್ತಿರುವಿಯೋ? ಸಂಕಟಗಳಿಂದ ಕೂಡಿದ, ಪಾಸಿಗೊಂಡ ಆಳವಾದಬಾವಿಯು ನಿನ್ನಲ್ಲಿದೆ ಯೆಂದೆಣಿಸೋಣ; ಆಗ ಯೇಸುಸ್ವಾಮಿಯು ಬಂದು ''ನಿಮ್ಮ ಹೃದಯವು ಕಳವಳಗೊಳ್ಳದೆ ಇರಲಿ'' (ಯೋಹಾನ - 14:1) ಎಂದು ಹೇಳಿದರೆ ''ಆದರೆ ಸ್ವಾಮಿ ಈ ಬಾವಿಯು ತುಂಬಾ ಆಳವಾಗಿದೆ. ಇಷ್ಟು ಆಳದೊಳಗಿಂದ ನೆಮ್ಮದಿ ತೃಪ್ತಿಗಳನ್ನು ಮೇಲಕ್ಕೆಳೆದು ತರಲು ನಿನಗಾಗುವುದಿಲ್ಲ'' ಎಂದು ಭುಜಹಾರಿಸಿ ಹೇಳುವಿ; ಯೇಸುಸ್ವಾಮಿಯವರು ಮನುಷ್ಯ ಸ್ವಭಾವದ ಆಳದಿಂದ ಏನನ್ನೂ ಮೇಲಕ್ಕೆಳೆದು ತರುವುದಿಲ್ಲ. ಆತನು ನೆಮ್ಮದಿ ತೃಪ್ತಿಗಳನ್ನು ಮೇಲಿನಿಂದ ಕೆಳಕ್ಕೆ ಎಳೆದು ತರುವನು. ಹಿಂದೆ ನಮ್ಮ ಜೀವಿತದಲ್ಲಿ ಆತನು ಕಾರ್ಯಸಾಧಿಸಲು ನಾವು ಆತನಿಗೆ ಮಿತಿಗೊಳಿಸಿದ ಅವಕಾಶವಿತ್ತಿದ್ದೆವೆನ್ನುವುದನ್ನು ನೆನಸಿಕೊಂಡು, ಈಗಲೂ ಸಹಾ ಇಸ್ರಾಯೇಲರ ಸದಮಲ ಸ್ವಾಮಿಯ ಕಾರ್ಯವನ್ನು ಇತಿಮಿತಿಯಲ್ಲಿರಿಸಿಬಿಡುತ್ತೇವೆ ಮತ್ತು ''ಇಂಥಿಂಥಾ ಕಾರ್ಯ ಗಳನ್ನು ದೇವರು ಮಾಡುವನೆಂದು ನಾವು ಅಪೇಕ್ಷಿಸುವುದಿಲ್ಲವೆಂದು'' ನಾವು ಹೇಳುತ್ತೇವೆ. ಯಾವ ಸಂಗತಿಯು ಸಕಲತ್ರಾಣಕ್ಕೆ ಬಹು ಭಾರವಾಗಿದೆಯೋ ಅದೇ ಸಂಗತಿಯನ್ನು , ಆತನು ಮಾಡುವನೆಂದು ಯೇಸುಸ್ವಾಮಿಯ ಶಿಷ್ಯರಾದ ನಾವು ನಂಬಲೇಬೇಕು. ಆತನು ಸರ್ವಶಕ್ತನು ಎಂಬುದನ್ನು ನಾವು ಮರೆತಕ್ಷಣವೇ, ಆತನ ಸುವಾರ್ತಾ ಸೇವೆಯನ್ನು ನಿಸ್ಸಾರಗೊಳಿಸುತ್ತೇವೆ; ಶಕ್ತಿಯುಡುಗಿಹೋಗುವುದು ನನ್ನಲ್ಲಿಯೇ - ಆತನಲ್ಲಿ ಅಲ್ಲ. ಆತನು ನೆಮ್ಮದಿಕೊಡುವಾತನು ಇಲ್ಲವೆ ಸಹಾನುಭೂತಿ ಯುಳ್ಳವನು ಎಂಬ ಕಾರಣದಿಂದ ಯೇಸುಕ್ರಿಸ್ತನ ಬಳಿಗೆ ಬರುತ್ತೇವೆ, ಆದರೆ ಆತನು ಸರ್ವಶಕ್ತನು ಎಂಬ ಕಾರಣ ದಿಂದ ಆತನ ಬಳಿಗೆ ಬರುವುದಿಲ್ಲ.

ಸತ್ವಹೀನ ಕ್ರೈಸ್ತತ್ವದ ಮಾದರಿಗಳಾಗಿ ನಮ್ಮಲ್ಲಿ ಕೆಲವರಿರುತ್ತಿರುವುದರ ಕಾರಣವೆಂದರೆ, ಸರ್ವಶಕ್ತನಾದ ಯೇಸುಸ್ವಾಮಿಯು ಅವರ ಪಾಲಿಗೆ ಇಲ್ಲ. ಅಂದರೆ ಅವರು ಯೇಸುಕ್ರಿಸ್ತನ ಸರ್ವ ಶಕ್ತತೆಯಲ್ಲಿ ನಂಬಿಕೆ ಇಲ್ಲದವರು. ಕ್ರಿಸ್ತೀಯ ವೈಶಿಷ್ಠಗಳನ್ನು ಮತ್ತು ಅನುಭವಗಳನ್ನು ನಾವು ಹೊಂದಿರುವುದು ನಿಜವಾದರೂ ಯೇಸುಕ್ರಿಸ್ತನಿಗಾಗಿ ನಾವು ಸಂಪೂರ್ಣವಾದ ಪರಿತ್ಯಾಗಮಾಡಿ ಆತನಿಗೆ ಒಪ್ಪಿಸಿಕೊಟ್ಟವರಲ್ಲ. ನಾವು ಕಷ್ಟಕರವಾದ ಜಟಿಲ ಸನ್ನಿ ವೇಶದಲ್ಲಿ ಸಿಕ್ಕಿ ಬಿದ್ದಾಗಲೇ ಆತನು ನಿಜವಾಗಿಯೂ ನಮಗಾಗಿ ಏನೂ ಮಾಡಲಾರನು ಎಂದು ನಾವೇ ಹೇಳುತ್ತಾ ಆತನ ಸುವಾರ್ತಾ ಕಾರ್ಯವನ್ನು ದುರ್ಬಲಗೊಳಿಸುತ್ತೇವೆ. ನಾವೇ ಬಾವಿಯ ಆಳಕ್ಕಿಳಿಯುವ ಶ್ರಮವಹಿಸಿ ನೀರನ್ನು ಮೇಲಕ್ಕೆ ತರಲು ಯತ್ನಿಸುತ್ತೇವೆ. ''ಅದನ್ನು ಮಾಡಲಿಕ್ಕಾಗುವುದೇ ಇಲ್ಲ'' ಎಂದು ಹೇಳಿ ಹಿಂದಕ್ಕೆ ಕುಸಿದು ಬಿದ್ದು , ಬೇರೇನೂ ಮಾಡದೆ ನೆಮ್ಮದಿ ಹೊಂದುವುದರ ಬಗ್ಗೆ ಎಚ್ಚರವಿರಲಿ; ಯೇಸುಸ್ವಾಮಿ ಯನ್ನು ದೃಷ್ಟಿಸಿದರೆ ಅದನ್ನು ಮಾಡಲು ಸಾಧ್ಯವೆನ್ನುವುದು ನಿನಗೆ ಗೊತ್ತಿದೆ. ಅಪರಿಪೂರ್ಣತ್ವವೆನ್ನುವ ನಿನ್ನ ಬಾವಿಯು ಆಳವಾಗಿದೆ. ಆದದರಿಂದ ನೀನು ಯೇಸುಕ್ರಿಸ್ತನೆಡೆಗೆ ದೃಷ್ಟಿ ಹರಿಸುವ ಪ್ರಯಾಸವನ್ನು ಮಾಡು.

# ಈಗ ನಂಬುತ್ತೀರೋ ?

**‘‘....... ಇದರಿಂದ .......... ನಂಬುತ್ತೇವೆ ಅಂದದ್ದಕ್ಕೆ ಯೇಸು ಈಗ ನಂಬುತ್ತೀರೋ’’**
**– (ಯೋಹಾನ –16:3)**

‘ಈಗ ನಾವು ನಂಬುತ್ತೇವೆ’ ಎಂದು ಶಿಷ್ಯರು ಹೇಳಿದಾಗ, ಯೇಸುಸ್ವಾಮಿಯು ಉತ್ತರವಾಗಿ ಅವರಿಗೆ ಹೇಳಿದನು – ‘‘ಈಗ ನಂಬುತ್ತೀರೋ ? ನೀವು ಚದರಿಹೋಗಿ ನನ್ನನ್ನು ಒಂಟಿಗನಾಗಿ ಬಿಡುವ ಕಾಲ ಬರುವದು’’. (ಯೋಹಾನ 16:31–32) ಸೇವೆಯ ಕರ್ತವ್ಯ ಪ್ರಜ್ಞೆಯಿಂದಲೂ, ತಮ್ಮ ಸ್ವಂತ ವಿವೇಚನೆಯಿಂದ ಹುಟ್ಟಿದ ಸೇವೆಯ ಅಗತ್ಯತೆಯ ಕಾರಣದಿಂದಲೂ ಅನೇಕ ಕ್ರೈಸ್ತ ಸುವಾರ್ತ ಸೇವಕರು ಯೇಸುಕ್ರಿಸ್ತನನ್ನು ಒಂಟಿಗನಾಗಿ ಬಿಟ್ಟು ಹೊರಟು ಹೋಗಿದ್ದಾರೆ. ಇದಕ್ಕೆ ಕಾರಣವೆಂದರೆ ಪುನರುಥ್ಥಾನವಾದ ಯೇಸುಕ್ರಿಸ್ತನ ಜೀವಿತವು ಅವರಲ್ಲಿ ಇಲ್ಲದಿರುವುದರಿಂದ. ಸ್ವಂತ ಧಾರ್ಮಿಕ ಗ್ರಹಿಕೆಯನ್ನು ಆಧಾರ ಮಾಡಿಕೊಂಡು, ಅವರ ಆತ್ಮವು ದೇವರ ಐಕ್ಯತೆಯಿಂದ ಹೊರ ಸರಿದು ಹೋಗಿದೆ. ಈ ಸರಿಯುವಿಕೆಯಲ್ಲಿ ಪಾಪವೇನೂ ಇಲ್ಲ; ಹಾಗೂ ಅದಕ್ಕೆ ಯಾವ ಶಿಕ್ಷೆಯನ್ನು ನಿಗದಿ ಪಡಿಸಿಲ್ಲ; ಆದರೆ ಯೇಸುಕ್ರಿಸ್ತನನ್ನು ಅರಿಯಲು ಸ್ವತಃ ಅಷ್ಟೇಕೆ ಅಡ್ಡ ಪಡಿಸಿದೆನು ಎಂಬುದನ್ನು ಆತ್ಮವು ಗ್ರಹಿಸಿಕೊಂಡಾಗ ಮತ್ತು ಅದರಿಂದ ಎಂಥಾ ಕಂಗೆಡುವಿಕೆ ದುಃಖ ಸಂಕಟಗಳು ತನಗುಂಟಾಗಿವೆ ಎಂಬುದನ್ನು ಅರಿತಾಗ, ಆತ್ಮವು ಲಜ್ಜೆಯಿಂದ, ಪಾಪ ಪರಿತಾಪದಿಂದ, ಹಿಂತಿರುಗಿ ಬರಬೇಕಾಗುತ್ತದೆ.

ಯೇಸುಕ್ರಿಸ್ತನ ಪುನರುತ್ಥಾನದ ಜೀವಿತದ ಬಗ್ಗೆ ಈಗ ತಿಳಿದಿರುವುದಕ್ಕಿಂತಲೂ ಹೆಚ್ಚು ಗಾಢ ವಾಗಿ ತಿಳಿಯುವ ಅವಶ್ಯಕತೆ ನಮಗಿದೆ. ಅಲ್ಲದೇ ನಮ್ಮ ಜೀವಿತದ ಪ್ರತಿಯೊಂದು ಸಂಗತಿಯನ್ನು ಎಡೆ ಬಿಡದೆ ಆತನ ಗಮನಕ್ಕೆ ತರುವ ರೂಢಿಯನ್ನು ಬೆಳೆಸಿಕೊಳ್ಳುವ ಅಗತ್ಯತೆ ನಮಗಿದೆ; ಇದನ್ನು ಸಾಧನೆ ಮಾಡಿಕೊಳ್ಳುವುದರ ಬದಲು ಸಾಮಾನ್ಯತಿಳುವಳಿಕೆಯಂತೆ ನಿರ್ಣಯಗಳನ್ನು ನಾವೇ ಮಾಡಿ ಅವುಗಳನ್ನೇ ‘‘ಆಶೀರ್ವದಿಸು’’ ಎಂದು ದೇವರನ್ನು ಕೇಳುತ್ತೇವೆ. ಆದರೆ ದೇವರು ಅದನ್ನು ಮಾಡುವುದಿಲ್ಲ. (ಹಾಗೆ ಆಶೀರ್ವದಿಸುವುದಿಲ್ಲ) ಹಾಗೆ ಮಾಡುವುದು ದೇವರ ವ್ಯಾಪ್ತಿಯಲ್ಲಿ ಇಲ್ಲ; ಅದು ವಾಸ್ತವದಿಂದ ಕತ್ತರಿಸಲ್ಪಟ್ಟು ತೆಗೆದು ಹಾಕಲ್ಪಟ್ಟಿದೆ. ನಮ್ಮ ಕರ್ತವ್ಯ ಪ್ರಜ್ಞೆಯಿಂದ ಒಂದು ಕಾರ್ಯವನ್ನು ನಾವು ನಿರ್ವಹಿಸಿದರೆ ಅದು ಯೇಸುಕ್ರಿಸ್ತನೊಡನೆ ಸ್ಪರ್ಧಿಸುವ ಪ್ರಮಾಣ ಮಟ್ಟವನ್ನು (ಸ್ಟ್ಯಾಂಡರ್ಡ್) ಆತನ ಮುಂದಿಟ್ಟಂತೆ ಆಗುವುದು. ಆಗ ನಾವು ಉತ್ಕೃಷ್ಟ ವ್ಯಕ್ತಿಯಾಗಿ ಆ ವಿಷಯದಲ್ಲಿ, ಹೀಗೆ ಮಾಡಬೇಕು, ಹಾಗೆ ಮಾಡಬೇಕು ಎಂದು ಹೇಳಲು ಪ್ರಾರಂಭಿಸುತ್ತೇವೆ. ಪುನರುಥ್ಥಾನವಾದ ಯೇಸುಕ್ರಿಸ್ತನ ಜೀವಿತವನ್ನು ಹೃದಯ ಸಿಂಹಾಸನದ ಮೇಲಿರಿಸುವ ಬದಲು, ನಮ್ಮ ಕರ್ತವ್ಯ ಪ್ರಜ್ಞೆಯನ್ನು ಅಲ್ಲಿ ಆಸೀನಗೊಳಿಸುತ್ತೇವೆ. ಆತ್ಮಸಾಕ್ಷಿಯ ಬೆಳಕಿನಲ್ಲಿ ನಡೆಯಿರಿ, ಕರ್ತವ್ಯ ಪ್ರಜ್ಞೆಯ ಬೆಳಕಿನಲ್ಲಿ ನಡೆಯಿರಿ ಎಂದು ನಮಗೆ ಹೇಳಿರುವುದಿಲ್ಲ. ‘‘ಆತನು ಬೆಳಕಿನಲ್ಲಿ ರುವಂತೆಯೇ ನಾವೂ ಬೆಳಕಿನಲ್ಲಿ ನಡೆಯಬೇಕೆಂದು’’ (ಯೋಹಾನ–1:7) ನಮಗೆ ತಿಳಿಸಲ್ಪಟ್ಟಿದೆ. ಕರ್ತವ್ಯ ಪ್ರಜ್ಞೆ ಯಿಂದ ನಾವು ಏನಾದರೂ ಕಾರ್ಯ ಮಾಡಿದರೆ ಅದನ್ನು ನಮ್ಮ ತರ್ಕದಿಂದ ಬೆಂಬಲಿಸುತ್ತೇವೆ; ಆದರೆ ಯೇಸುಕ್ರಿಸ್ತನಿಗೆ ವಿಧೇಯರಾಗಿ ಅದರಂತೆ ಮಾಡಿದ ಕಾರ್ಯಕ್ಕೆ ಯಾವುದೇ ತರ್ಕ ಅಸಾಧ್ಯ ವಾಗುತ್ತದೆ. ತರ್ಕಸಾಧ್ಯವಿಲ್ಲದ ಕಾರ್ಯಕ್ಕಾಗಿಯೇ ದೇವರ ಸೇವಕನು ಹಾಸ್ಯಾಸ್ಪದ ವ್ಯಕ್ತಿಯೆನಿಸಿ ಕೊಳ್ಳುವನು.

# ಯೇಸುಸ್ವಾಮಿಯು ನಿನಗೇನು ಮಾಡಬೇಕೆಂದು ನೀನು ಅಪೇಕ್ಷಿಸುವಿ?

**''ನನಗೆ ಕಣ್ಣು ಬರುವಂತೆ ಮಾಡಬೇಕು, ಸ್ವಾಮೀ'' - (ಲೂಕ 18:41)**

ನಿನ್ನ ಜೀವಿತದಲ್ಲಿ ನಿನ್ನನ್ನು ಕಳವಳ ಪಡಿಸುವ ಸಂಗತಿ-ಯಾವ ಸಂಗತಿಯು ನಿನ್ನನ್ನು ಕಳವಳಕ್ಕೀಡು ಮಾಡಿರುವುದಲ್ಲದೆ ಇತರರಿಗೆ ನೀನೊಬ್ಬ ಕಳವಳಕಾರಿ ವ್ಯಕ್ತಿ ಯಾಗುವಂತೆ ಮಾಡಿಬಿಟ್ಟಿದೆಯೋ ಅದು ಯಾವುದು? ಯಾವ ಸಂಗತಿಯನ್ನು ನೀನು ನಿರ್ವಹಿಸಿ ಪೂರೈಸಲಾರೆಯೋ ಅದೇಸಂಗತಿ ನಿನ್ನನ್ನು ಆತಂಕಕ್ಕೀಡು ಮಾಡಿ ಕಾತರಿಕೆಗೆ ಒಳಪಡಿಸುತ್ತದೆ. ಮುಂದೆ ಹೋಗುತ್ತಿದ್ದವರು ''ಸುಮ್ಮನಿರು'' ಎಂದು ಅವನನ್ನು ಗದರಿಸಲು, ಅವನು ಮತ್ತಷ್ಟು ಕೂಗಿಕೊಂಡನು (ಲೂಕ 18:39). ಕಳವಳ ಅಥವಾ ಕಾತರ ಗೊಂಡಿರುವ ನೀನು ಯೇಸು ಸ್ವಾಮಿಯನ್ನು ಮುಖಾ ಮುಖಿಯಾಗಿ ಸಂಧಿಸುವವರೆಗೆ, ಅದಕ್ಕಾಗಿ ಈ ರೀತಿ ಪಟ್ಟು ಹಿಡಿದು ಕೂಗಬೇಕು. ಸಾಮಾನ್ಯ ತಿಳುವಳಿಕೆ, ವಿವೇಚನೆಗಳನ್ನು ದೈವೀಕರಿಸಬೇಡ. ನಂಬಲ ಸಾಧ್ಯ ವಾದ ಸಂಗತಿಗಳು ನಮ್ಮನ್ನು ಎದುರಿಸುತ್ತಿರುವಾಗ, ಯೇಸುಕ್ರಿಸ್ತನು ತಾನು ನಮಗೆ ಏನು ಮಾಡಬೇಕೆಂದು ಅಪೇಕ್ಷಿಸುವಿರೆಂದು ಕೇಳಿದರೆ, ಸಾಮಾನ್ಯಜ್ಞಾನ, ವಿವೇಚನೆ ಮತ್ತು ಕಾತರತೆಯಲ್ಲಿರುವ ನಾವು - 'ಆತನು ಸಾಮಾನ್ಯ ರೀತಿಯಲ್ಲಿ ಅದನ್ನು ಮಾಡದೆ ಅಲೌಕಿಕ ರೀತಿಯಲ್ಲಿ ಮಾಡುವನು' ಎಂಬುದನ್ನು ಮರೆಯ ಬಾರದು.

ಯೇಸು ಕ್ರಿಸ್ತನು ನಮಗೇನು ಮಾಡಬೇಕೆಂಬುದನ್ನು ನಾವೇ ಊಹಿಸಿ, ಆತನು ಮಾಡಬಹು ದಾದನ್ನು ನಾವೇ ಮಿತಿಗೊಳಿಸಿ, ಅಷ್ಟಕ್ಕೆ ಮಾತ್ರ ಆತನಿಗೆ ಅನುವು ಮಾಡಿಕೊಟ್ಟಿದ್ದ ಕಳೆದು ಹೋದ ಹಿಂದಿನ ಸಂಗತಿಗಳನ್ನು ಸ್ಮರಿಸಿಕೊಳ್ಳೋಣ. ''ಓ! ನಾನು ಅನುತ್ತೀರ್ಣನಾದದ್ದು ಅಲ್ಲಿಯೇ, ಅಲ್ಲಿಯೇ ಅಸಫಲ ನಾದದ್ದು, ಹೌದು ! ಅಲ್ಲಿಯೇ ನಾನು ಫೇಲ್ ಆಗುವುದು ಎಂದು ಹೇಳುತ್ತೇವೆ. ಆ ಕಾರಣದಿಂದ ನಮಗೇನು ಬೇಕಾಗಿದೆಯೋ ಅದನ್ನೇ ನಾವು ಪಡೆಯಲು ದೇವರನ್ನು ಕೇಳುವುದಿಲ್ಲ. ''ಇಂಥಾ ಸಾಧಾರಣ ವಾದ ಕಾರ್ಯವನ್ನು ಮಾಡು ಎಂದು ದೇವರನ್ನು ಕೇಳುವುದು ನಿಜವಾಗಿಯೂ ಹಾಸ್ಯಾಸ್ಪದ'' ಎಂದು ನಾವು ಹೇಳುತ್ತೇವೆ. ಆ ಕಾರ್ಯವು ಅಸಾಧ್ಯಕಾರ್ಯವೇ ಆಗಿದ್ದ ಪಕ್ಷದಲ್ಲಿ ಅದನ್ನೇ ನಾವು ದೇವರಿಂದ ಕೇಳಿ ಕೊಳ್ಳಲೇಬೇಕು. ಅದು ಅಸಾಧ್ಯವಾದುದಲ್ಲವಾದರೆ ಅದೇನೂ ನಿಜವಾದ ತೊಂದರೆ ಯಲ್ಲ. ಅಗಾಧವಾದ ಅಸಾಧ್ಯಕಾರ್ಯಗಳನ್ನು ದೇವರು ಮಾಡುತ್ತಾನೆ. ಹುಟ್ಟು ಕುರುಡನು ದೃಷ್ಟಿ ಹೊಂದಿದನು, ಅಸಾಧ್ಯ ವಾದುದನ್ನು ಯೇಸು ಸ್ವಾಮಿಯು ಇಲ್ಲಿ ಮಾಡಿರುತ್ತಾನೆ. ನಿನ್ನ ಮುಂದಿರುವ ಅಸಾಧ್ಯ ಸಂಗತಿಯೆಂದರೆ, ಹಿಂದಿನ ನಿನ್ನ ಹಳೇ ಜೀವಿತದ ಒಂದಿಷ್ಟೂ ಕುರುಹು ಇಲ್ಲದ ಹೊಸ ಜೀವಿತದ ಮೂಲಕ ಯೇಸು ಕ್ರಿಸ್ತನೊಂದಿಗೆ ಗುರುತಿಸಿಕೊಳ್ಳಬೇಕಾಗಿದೆ. ಅದೇನೋ ಅಸಾಧ್ಯ ಸಂಗತಿ ನಿಜ; ಆದರೆ ನೀನು ಯೇಸು ಕ್ರಿಸ್ತನನ್ನು ಬೇಡಿಕೊಂಡರೆ ನಿನಗಾಗಿ ಆತನು ಅದನ್ನು ಮಾಡುವನು. ಆದರೆ ಹಾಗೆ ಕೇಳಿಕೊಳ್ಳುವ ಮೊದಲು ಯೇಸುಕ್ರಿಸ್ತನು ಸರ್ವಶಕ್ತನೆಂದು ಹೃದಯಾಂತರಾಳದಿಂದ ನಂಬುವ ವಿಶ್ವಾಸದ ನೆಲೆಗೆ ನೀನು ಬರಬೇಕು. ಯೇಸುಕ್ರಿಸ್ತನು ಹೇಳಿದವುಗಳನ್ನು ನಂಬುವುದೇ ನಿಜ ವಿಶ್ವಾಸ. ಆತನು ಹೇಳಿರುವುದನ್ನು ಗಮನಿಸುವುದರ ಮೂಲಕ ನಾವು ಆತನನ್ನು ನಂಬುವುದಿಲ್ಲ.' ಆದರೆ ನಾವು ಯೇಸುಕ್ರಿಸ್ತನನ್ನೇ ದೃಷ್ಟಿಸಿದರೆ ಅಸಾಧ್ಯವಾದ ಕಾರ್ಯಗಳನ್ನು ಉಸಿರಾಟದಷ್ಟೇ ಸಹಜವಾಗಿ ನಮ್ಮ ಜೀವನದಲ್ಲಿ ಆತನು ನೆರವೇರಿಸುತ್ತಾನೆ. ನಮ್ಮ ಹೃದಯದ ನಿರಂಕುಶ ಮೂರ್ಖತನದಿಂದ ನಮಗೆ ವೇದನೆ ಯಾತನೆಗಳು ಬಂದೆರಗುತ್ತವೆ. ಸಾಮಾನ್ಯ ಜ್ಞಾನವು ದೈವೀಕರಣಗೊಂಡಿರುವುದರಿಂದ ನಾವು ಯೇಸು ಕ್ರಿಸ್ತನನ್ನು ನಂಬುವುದಿಲ್ಲ. ದೋಣಿಯನ್ನು ಕಟ್ಟಿ ಭದ್ರಗೊಳಿಸಿರುವ ಸಾಗರದ ತೀರದಿಂದ ನಾವು ಬಿಡುಗಡೆ ಮಾಡಿಕೊಳ್ಳುವುದೇ ಇಲ್ಲ; ಅದರ ಬದಲಿಗೆ ದುಃಖ ದುಮ್ಮಾನಗಳನ್ನೇ ಆರಿಸಿಕೊಂಡು ದಡಕ್ಕೆ ಬಂಧಿಸಲ್ಪಟ್ಟ ದೋಣಿಯಂತೆ ಜೀವಿತದಲ್ಲಿ ಮುಂದೆಸಾಗದೆ ಅಲ್ಲಿಯೇ ತೇಲಾಡುತ್ತೇವೆ.

# ನೇರವಾದ ಪ್ರಶ್ನೆ

**''ನನ್ನ ಮೇಲೆ ಮಮತೆ ಇಟ್ಟಿದ್ದೀಯೋ'' - (ಯೋಹಾನ-21:17)**

ಎಲ್ಲರೂ ನಿನ್ನ ವಿಷಯದಲ್ಲಿ ದಿಗಿಲು ಪಟ್ಟು ಹಿಂಜರಿದರೂ ನಾನು ಎಂದಿಗೂ ಹಿಂಜರಿಯುವುದಿಲ್ಲವೆಂದು (ಮತ್ತಾ 26:35 ಹಾಗೂ 33, 34 ವಚನ ನೋಡಿರಿ) ಕೆಲ ದಿನಗಳ ಹಿಂದೆಯಷ್ಟೇ ಯೇಸುಕ್ರಿಸ್ತನಿಗೆ ಸವಾಲನ್ನೊಡ್ಡಿದ್ದ ಪೇತ್ರನು ಈಗ ಸ್ವಾಮಿಯವರ ಪ್ರಶ್ನೆಗೆ ಪ್ರತಿಯಾಗಿ ಏನನ್ನೂ ಘೋಷಿಸಿ ಹೇಳುತ್ತಿಲ್ಲ. ವೈಯಕ್ತಿಕತೆಯು ತನ್ನ ಭಾವನೆಯನ್ನು ಪ್ರತಿಪಾದಿಸುತ್ತದೆ ಹಾಗೂ ಘೋಷಣೆಗಳನ್ನು ಮಾಡುತ್ತದೆ. ಯೇಸು ಸ್ವಾಮಿಯ ಈ ಪ್ರಶ್ನೆಯುಂಟು ಮಾಡುವ ನೋವು, ನಮ್ಮ ವ್ಯಕ್ತಿತ್ವದ ಆಂತರ್ಯದಲ್ಲಿ, ಆತನ ಮೇಲೆ ನಮಗಿರುವ ಪ್ರೀತಿಯನ್ನು ಪತ್ತೆ ಹಚ್ಚುತ್ತದೆ. ಸಹಜ ಸ್ವಭಾವದ ಒಬ್ಬ ವ್ಯಕ್ತಿಯು, ಸಜ್ಜನನೊಬ್ಬನನ್ನು ಪ್ರೀತಿಸುವಂತೆಯೇ ಪೇತ್ರನು ಯೇಸುಸ್ವಾಮಿಯನ್ನು ಪ್ರೀತಿಸುತ್ತಿದ್ದನು. ಅದು ಸಹಜ ಮನೋಧರ್ಮದ ಪ್ರೇಮವೇ ಆಗಿತ್ತು; ಅದು ನಮ್ಮ ಸಹಜ ವೈಯಕ್ತಿಕತೆಯ ಆಳದವರೆಗೆ ಇಳಿಯಬಹುದಾದರೂ, ಒಬ್ಬ ವ್ಯಕ್ತಿಯ ಆತ್ಮದ ಅಂತರಾಳದವರೆಗೆ ತೂರಿ ಹೋಗಲಾರದು. ನಿಜವಾದ ಪ್ರೀತಿಯು ತನ್ನಷ್ಟಕ್ಕೆ ತಾನು ಘೋಷಣೆಗಳ ಮೂಲಕ ಏನನ್ನೂ ಪ್ರಕಟಿಸುವುದಿಲ್ಲ. ಯೇಸುಸ್ವಾಮಿಯು ಹೇಳಿರುವನು – ''ಯಾವನು ಮನುಷ್ಯರ ಮುಂದೆ ತಾನು ಯೇಸುವಿನನವನೆಂದು ಒಪ್ಪಿಕೊಳ್ಳುವನೋ ........'' (ಲೂಕ 12:8) ಅಂದರೆ ಆತನ ಪ್ರೀತಿಯನ್ನು ಕೇವಲ ಶಬ್ದಗಳಲ್ಲಿ ಪ್ರಕಟಿಸುವುದು ಮಾತ್ರವಲ್ಲದೆ, ಒಬ್ಬನು ತನ್ನ ಪ್ರತಿಯೊಂದು ಕಾರ್ಯನಡವಳಿಕೆಗಳಿಂದ ಆತನ ಪ್ರೀತಿಯನ್ನು ಪ್ರಕಟ ಪಡಿಸಬೇಕು. ''ಆಗ ........ ಮನುಷ್ಯ ಕುಮಾರನು ಸಹ ಅವನನ್ನು ದೇವದೂತರ ಮುಂದೆ ತನ್ನವನೆಂದು ಒಪ್ಪಿಕೊಳ್ಳುವನು.'' (ಲೂಕ 12:8).

ನಮ್ಮ ಬಗ್ಗೆ ನಮಗಿರುವ ಪ್ರತಿಯೊಂದು ಕಪಟತೆಗಳು ನೇರವಾಗಿ ನಮ್ಮನ್ನು ಘಾಸಿಗೊಳಿಸದಿದ್ದರೆ ದೇವರ ವಾಕ್ಯಕ್ಕೆ ನಮ್ಮ ಜೀವಿತದಲ್ಲಿ ಯಾವ ಮಾರ್ಗವೂ ಇರಲಾರದು. ದೇವರ ವಾಕ್ಯವು ಉಂಟು ಮಾಡುವಂಥ ನೋವನ್ನು ಯಾವ ಪಾಪವೂ ಉಂಟುಮಾಡುವುದಿಲ್ಲ, ಪಾಪವು ನೋವಿನ ಭಾವನೆಯನ್ನು ಕುಂಠಿತಗೊಳಿಸುತ್ತದೆ. ಯೇಸುಕ್ರಿಸ್ತನ ಪ್ರಶ್ನೆಯು ಅಂಥಾ ಭಾವನೆಯನ್ನು ಹೆಚ್ಚು ಉತ್ಕಟಗೊಳಿಸುತ್ತದೆ, ಅದು ಎಷ್ಟರ ಮಟ್ಟಿಗೆಂದರೆ, ನಾವು ಕಲ್ಪಿಸಿಕೊಳ್ಳಬಹುದಾದ ಅತೀ ಗಹನವಾದ ನೋವಿಗಿಂತಲೂ ಹೆಚ್ಚಾದ ನೋವನ್ನು ನಮ್ಮಲ್ಲಿ ಉಂಟುಮಾಡುವಷ್ಟು. ನಮ್ಮ ಹೃದಯದ ಕಪಟ ಯೋಚನೆಗಳನ್ನು , ಉದ್ದೇಶಗಳನ್ನು, ಇನ್ನಿಲ್ಲದಂತೆ ಮಾಡುವ ಹಾಗೆ ಯೇಸು ಸ್ವಾಮಿಯವರ ವಾಕ್ಯಗಳು ಪ್ರಾಣ ಆತ್ಮಗಳನ್ನು ವಿಭಾಗಿಸುವಷ್ಟರ ಮಟ್ಟಿಗೂ ತೋರಿಹೋಗುತ್ತವೆ. ಲೌಕಿಕ ಜೀವಿತ ಮಟ್ಟದಲ್ಲಿ ಮಾತ್ರವಲ್ಲದೆ ಆತ್ಮೀಕ ಜೀವಿತದ ಅಂತರಾಳದಲ್ಲಿ ಬಹಳ ಹೆಚ್ಚಿನ ನೋವಿನ ಅನುಭವವಾಗುತ್ತದೆ. (ಇಬ್ರಿ 4:12) ಯೇಸು ಸ್ವಾಮಿಯವರ ಪ್ರಶ್ನೆಗಳಲ್ಲಿ ಭಾವಾತ್ಮಕವಾದದ್ದೇನೂ ಇರಲು ಸಾಧ್ಯವಿಲ್ಲ; ಸ್ವಾಮಿ ಯವರು ನೇರವಾಗಿ ನಿನ್ನನ್ನು ಪ್ರಶ್ನಿಸುತ್ತಿರುವಾಗ, ಯೋಚಿಸಿ, ಯೋಚಿಸಿ ಹಿತಕರ ಸಂಗತಿಗಳನ್ನು ಆತನಿಗೆ ಉತ್ತರವಾಗಿ ಹೇಳಲು ನಿನ್ನಿಂದಾಗುವುದಿಲ್ಲ, ಯಾಕೆಂದರೆ ನಿನ್ನಲ್ಲುಂಟಾಗುವ ವೇದನೆ ವಿಪರೀತವಾಗಿರುತ್ತದೆ. ಆತನ ಚಿತ್ತಕ್ಕೆ ಸಲ್ಲದ ಹಿತಾಸಕ್ತಿಗಳಿಂದ ತುಂಬಿದ ನಮ್ಮ ಜೀವಿತದ ಕ್ಷೇತ್ರಗಳಲ್ಲಿ, ಯೇಸುಕ್ರಿಸ್ತನ ನುಡಿಗಳು ಕುಟುಕಿ ಚುಚ್ಚಿ ಉಂಟುಮಾಡುವ ವಿಪರೀತವಾದ ನೋವು ಅದು. ಯೇಸುಸ್ವಾಮಿಯ ವಾಕ್ಯವು ತನ್ನ ಮಗುವಿಗೆ ನುಡಿಯಲ್ಪಟ್ಟಾಗ ಉಂಟಾಗುವ ನೋವಿನ ವಿಷಯದಲ್ಲಿ ತಪ್ಪು ಅಭಿಪ್ರಾಯವಿರಲು ಸಾಧ್ಯವೇ ಇಲ್ಲ. ಪ್ರಾಮುಖ್ಯವಾದ ಉದ್ದೇಶವನ್ನು ತನ್ನ ಮಕ್ಕಳಿಗೆ ತಿಳಿಯಪಡಿಸುವುದಕ್ಕಾಗಿಯೇ ಆತನು ಇಂಥ ನೋವನ್ನುಂಟು ಮಾಡುತ್ತಾನೆ.

# ಸ್ವಾಮಿಯವರುಂಟು ಮಾಡುವ ದುಃಖಾನುಭವ ನಿನಗಾಗಿದೆಯೋ?

**''ಆತನು ಮೂರನೇ ಸಾರಿ ....... ನನ್ನ ಮೇಲೆ ಮಮತೆ ಇಟ್ಟಿದ್ದೀಯೋ ಎಂದು ಕೇಳಿದನು''**
**- (ಯೋಹಾನ-21:17)**

ನಿನ್ನ ಜೀವಿತದಲ್ಲಿ ಎಲ್ಲಾ ಸೂಕ್ಷ್ಮಭಾವನೆಗಳನ್ನು ಅರಿಯುವ ನಿನ್ನ ಗ್ರಹಿಕೆ ನೆಲೆಗೊಂಡಿದೆಯೋ ಅಲ್ಲಿ, ಯೇಸುಸ್ವಾಮಿ ಯವರುಂಟು ಮಾಡಿದ ನೋವನ್ನು ನೀನು ಅನುಭವಿಸಿರುವಿಯೋ? ಆ ಸ್ಥಳದಲ್ಲಿ ಸೈತಾನನೆಂದಿಗೂ ನೋವುಂಟು ಮಾಡುವುದಿಲ್ಲ , ಪಾಪವೇ ಆಗಲೀ ಇಲ್ಲವೆ ಮಾನವ ವಾತ್ಸಲ್ಯಗಳಾಗಲೀ, ಅಲ್ಲಿ ವ್ಯಥೆಯನ್ನುಂಟು ಮಾಡುವುದಿಲ್ಲ. ದೇವರ ವಾಕ್ಯದ ವಿನಃ ಬೇರೇನೂ ಆ ಸ್ಥಳದವರೆಗೂ ಸಾಗಿ ಹೋಗಲಾರವು. ''ಮೂರನೇಯ ಸಾರಿ ಆತನು ನನ್ನ ಮೇಲೆ ಮಮತೆ ಇಟ್ಟಿದ್ದೀಯೋ? ಎಂದು ತನ್ನನ್ನು ಕೇಳಿದ್ದಕ್ಕೆ ಪೇತ್ರನು ದುಃಖಪಟ್ಟು'' (ಯೋಹಾನ 21:17) ತನ್ನ ವ್ಯಕ್ತಿಗತ ಜೀವಿತದ ಮುಖ್ಯ ಕ್ಷೇತ್ರದಲ್ಲಿ ತಾನು ಯೇಸುಸ್ವಾಮಿಯವರಿಗೆ ನಿಜವಾಗಿಯೂ ನಿಷ್ಠೆಯುಳ್ಳವನಾಗಿದ್ದಿರುವ ಸತ್ಯತೆಗೆ ಅವನು ಎಚ್ಚತ್ತು ಕೊಳ್ಳುತ್ತಾ ಇದ್ದನು, ಅಲ್ಲದೆ ಯೇಸುಕ್ರಿಸ್ತನ ಸಹನಭರಿತ ಆ ಪ್ರಶ್ನೆಗಳ ಅರ್ಥವೇನೆಂಬುದನ್ನು ಅರಿಯಲಾರಂಭಿಸಿದನು. ಭ್ರಮೆಯ ಅತ್ಯಲ್ಪ ಎಳೆಯಾದರೂ ಪೇತ್ರನ ಮನಸ್ಸಿನಲ್ಲಿ ಉಳಿದಿರಲಿಲ್ಲ , ಹಾಗೂ ತಿರುಗೊಂದಾವರ್ತಿ ಅವನೆಂದಿಗೂ ಭ್ರಮಿತನಾಗುವುದಿಲ್ಲ. ಆವೇಶದ ಹೇಳಿಕೆ ಗಳಿಗೆ ಈಗ ಅಲ್ಲಿ ಅವಕಾಶವಿಲ್ಲ, ಉತ್ಸಾಹಭರಿತ ಇಲ್ಲವೇ ಭಾವತಿರೇಕಗಳಿಗೆ ಅಲ್ಲಿ ಸ್ಥಳವಿಲ್ಲ. ಅದು ಪೇತ್ರನಿಗೆ ತಾನೆಷ್ಟಾಗಿ ಸ್ವಾಮಿಯವರನ್ನು ಪ್ರೀತಿಸಿದ್ದನೆಂಬುದನ್ನು ಅರಿಯುವ ಒಂದು ಪ್ರಕಟಣೆಯಾಗಿದ್ದಿತು; ನಿಬ್ಬೆರಗಾಗಿ ಆತನು ಹೇಳಿದನು, ''ಸ್ವಾಮಿ ನೀನು ಎಲ್ಲಾ ಬಲ್ಲೆ; ನಿನ್ನ ಮೇಲೆ ನಾನು ಮಮತೆ ಇಟ್ಟಿದ್ದೇನೆಂದು ನಿನಗೆ ತಿಳಿದಿದೆ'' (ಯೋಹಾನ 21-17). ಯೇಸುವನ್ನು ತಾನೆಷ್ಟಾಗಿ ಪ್ರೀತಿಸಿದ್ದನೆಂಬುದನ್ನು ಅರಿಯ ಲಾರಂಭಿಸಿದನು ಮತ್ತು ಅದನ್ನು ಸ್ಥಿರಪಡಿಸಲು ''ಅದನ್ನು ನೋಡು, ಇದನ್ನಾದರೂ ನೋಡು'' ಎಂದು ಆತನು ಹೇಳಲಿಲ್ಲ. ಆಗಸದಾಚೆಯಾಗಲೀ, ಭೂಮಿಯ ಮೇಲಾಗಲೀ ಅದರ ಕೆಳಗಾಗಲೀ ಯೇಸು ವನ್ನಲ್ಲದೆ ತಾನು ಇನ್ನಾರನ್ನೂ ಅಷ್ಟರಮಟ್ಟಿಗೆ ಪ್ರೀತಿಸಲಾರೆನೆಂಬುದನ್ನು ತನ್ನಷ್ಟಕ್ಕೆ ತಾನೇ ಪೇತ್ರನು ಗ್ರಹಿಸಿಕೊಳ್ಳ ಲಾರಂಭಿಸಿದನು. ಆದರೆ ಅಂತರಂಗದ ಒಳಹೊಕ್ಕು ಶೋಧಿಸುವ ಮತ್ತು ನೋಯಿಸುವ ಯೇಸುವಿನ ಪ್ರಶ್ನೆಗಳು ಅಂತರ್ಯವನ್ನು ಚುಚ್ಚುವವರೆಗೆ ಅದು ಅವನಿಗೆ ತಿಳಿಯದೇ ಹೋಯಿತು. ಯೇಸುಕ್ರಿಸ್ತನ ಪ್ರಶ್ನೆಗಳು ಯಾವಾಗಲೂ ನಿಜವಾದ 'ನನ್ನನ್ನು' ನನಗೆ ಬಯಲು ಪಡಿಸುತ್ತವೆ.

ಪೇತ್ರನ ವಿಷಯದಲ್ಲಿ ತೋರಿಬಂದ ಯೇಸುಕ್ರಿಸ್ತನ ತಾಳ್ಮೆಯ ನೇರತ್ವ ಮತ್ತು ನೈಪುಣ್ಯತೆ ಅದೆಷ್ಟು ಆಗಾಧ !! ನಮ್ಮ ಸ್ವಾಮಿಯು ಸೂಕ್ತ ಸಮಯ ಬರುವವರೆಗೂ ಪ್ರಶ್ನೆಗಳನ್ನು ಕೇಳುವುದಿಲ್ಲ. ವಿರಳವಾಗಿ, ಬಹುಶಃ ಒಂದೇ ಒಂದು ಸಾರಿ ಮೂಲೆಯೊಂದಕ್ಕೆ ನಮ್ಮನ್ನು ಬರಮಾಡಿಕೊಂಡು, ದಾರಿ ತಪ್ಪದ ಪ್ರಶ್ನೆಗಳ ಮೂಲಕ ನಮ್ಮನ್ನು ಘಾಯಪಡಿಸುತ್ತಾನೆ. ಸಕಲ ಶ್ರದ್ಧಾ ಘೋಷಣೆಗಳಿಗೂ ಮಿಗಿಲಾಗಿ ನಾವು ಆತನನ್ನು ಗಾಢವಾಗಿ ಪ್ರೀತಿಸುತ್ತಿರುವೆ ವೆಂಬುದನ್ನು ನಾವು ಅಲ್ಲಿ ಕಂಡುಕೊಳ್ಳುತ್ತೇವೆ.

# ಪರಿಹಾರವಿಲ್ಲದ ನಿಯೋಜನೆ

**''ನನ್ನ ಕುರಿಗಳನ್ನು ಮೇಯಿಸು'' (ಯೋಹಾನ-21:17)**

ಇದೇ ಪ್ರೀತಿ ಮಾಡುವಿಕೆ, ದೇವರ ಪ್ರೀತಿಯು ಸೃಷ್ಟಿಸಲ್ಪಟ್ಟಂಥಾದಲ್ಲ , ಅದು ದೇವರ ಸಹಜ ಸ್ವಭಾವ. ನಾವು ಪರಿಶುದ್ಧಾತ್ಮನನ್ನು ಹೊಂದಿದಾಗ ಆತನು ನಮ್ಮನ್ನು ದೇವರೊಂದಿಗೆ ಒಂದು ಗೂಡಿಸಿ, ಆತನ ಪ್ರೀತಿಯು ನಮ್ಮಲ್ಲಿ ಅಭಿವ್ಯಕ್ತವಾಗುವಂತೆ ಮಾಡುತ್ತಾನೆ. ನಮ್ಮೊಳಗೆ ವಾಸಿಸುವ ಪರಿಶುದ್ಧಾತ್ಮನ ಮೂಲಕ ನಮ್ಮ ಆತ್ಮವು ದೇವರೊಂದಿಗೆ ಒಂದು ಮಾಡಲ್ಪಡುವುದೇ ಕೊನೆಯಲ್ಲ ; ಯೇಸುಕ್ರಿಸ್ತನು ತಂದೆಯೊಂದಿಗೆ ಒಂದಾಗಿರುವಂತೆ ನಮ್ಮನ್ನು ಸಹಾ ದೇವರಲ್ಲಿ ಒಂದು ಮಾಡುವುದೇ ದೇವರಾತ್ಮನ ಅಂತಿಮ ಗುರಿಯಾಗಿದೆ. ತಂದೆಯೊಡನೆ ಯೇಸುಕ್ರಿಸ್ತನ ಒಂದಾಗುವಿಕೆಯು ಎಂಥಾದ್ದಾಗಿತ್ತು ? ಅದೆಂಥಾ ಒಂದಾಗಿರುವಿಕೆ ಯೆಂದರೆ, ನಮಗೋಸ್ಕರ ತನ್ನನ್ನು ತಾನು ವ್ಯಯಮಾಡಿ ಕೊಳ್ಳುವಂತೆ ತಂದೆಯು ಆತನನ್ನು ಈ ಲೋಕ ದೊಳಗೆ ಕಳುಹಿಸಿಬಿಟ್ಟನು. ''ತಂದೆಯು ನನ್ನನ್ನು ಕಳುಹಿಸಿಕೊಟ್ಟ ಹಾಗೆಯೇ ನಾನೂ ನಿಮ್ಮನ್ನು ಕಳುಹಿಸಿ ಕೊಡುತ್ತೇನೆ'' (ಯೋಹಾನ 20:21) ಎಂದೆನ್ನುತ್ತಾನೆ ನಮ್ಮ ಸ್ವಾಮಿಯು.

ತಾನು ನಿಜವಾಗಿಯೂ ಯೇಸುಕ್ರಿಸ್ತನನ್ನು ಗಾಢವಾಗಿ ಪ್ರೀತಿಸುತ್ತಿರುವ ಸತ್ಯವನ್ನು, ನೋವುಂಟು ಮಾಡುವ ಆತನ ಪ್ರಶ್ನೆಯು ಪ್ರಕಟಪಡಿಸಿದ್ದನ್ನು ಪೇತ್ರನು ಈಗ ಅರಿತಿದ್ದನು; ಆಗ ಮುಖ್ಯ ಉದ್ದೇಶವು ಮುಂದಿಡಲ್ಪಟ್ಟಿತು - ''ಅದನ್ನು ಸುರಿದು ವೆಚ್ಚ ಮಾಡಿಬಿಡು, ನನ್ನನ್ನು ನೀನು ಎಷ್ಟರ ಮಟ್ಟಿಗೆ ಪ್ರೀತಿ ಮಾಡುತ್ತಿರುವೆ ಎನ್ನುವುದನ್ನು ಪ್ರಮಾಣಿಸಬೇಡ. ನಿನಗುಂಟಾಗಿದ್ದ ಅಮೋಘದರ್ಶನವನ್ನು ತೋರ್ಪಡಿಸಿ ಕೊಳ್ಳಬೇಡ, ಆದರೆ ''ನನ್ನ ಕುರಿಗಳನ್ನು ಮೇಯಿಸು''. ಅಸಮಾನ್ಯವೂ ವಿಲಕ್ಷಣವೂ ಆದ ಕೆಲವು ಕುರಿಗಳು ಯೇಸುಕ್ರಿಸ್ತನ ಬಳಿ ಇವೆ, ಕೆಸರು ಮಾಡಿಕೊಂಡು ಹೊಲಸಾದವುಗಳಿವೆ, ಕೆಲವು ಎಡವಟ್ಟಿದ್ದು, ಹರಿ ಹಾಯುತ್ತಿವೆ, ಕೆಲವಂತೂ ದಾರಿತಪ್ಪಿಸಿಕೊಂಡು ಹೋಗಿಬಿಟ್ಟಿವೆ ! ಆದರೂ ಇಂಥಾ ಕಾರಣಗಳಿಂದ ದೇವರ ಪ್ರೀತಿಯು ಜಿಗುಪ್ಸೆಗೊಳಗಾಗುವುದು ಅಸಾಧ್ಯ. ನನ್ನ ಪ್ರೀತಿಯು ನನ್ನಲ್ಲಿರುವ ದೇವರ ಆತ್ಮನಿಂದ ಚಿಮ್ಮಿ ಹೊರಗೆ ಹರಿಯುತ್ತಿರುವುದಾದರೇ, ನನ್ನ ಪ್ರೀತಿಯೂ ಸಹಾ ಜಿಗುಪ್ಸೆಗೊಳ್ಳುವುದಿಲ್ಲ ಮತ್ತು ಬೇಸರಗೊಳ್ಳುವುದಿಲ್ಲ. ವೈಯಕ್ತಿಕ ಸಹಜ ಸ್ವಭಾವದಿಂದ ನಾವು ಮಾಡಿದ ತಾರತಮ್ಯ ಭೇದಗಳಿಗೆ ದೇವರ ಪ್ರೀತಿಯು ಗಮನ ಕೊಡುವುದಿಲ್ಲ. ನಾನು ಯೇಸುಸ್ವಾಮಿಯನ್ನು ಪ್ರೀತಿಸುವುದಾದರೆ, ನನ್ನ ಸಹಜ ಸ್ವಭಾವದ ರಾಗಭಾವನೆಗಳಿಂದ ಮಾರ್ಗದರ್ಶನ ಪಡೆಯಲು ನನಗೆ ಅವಕಾಶವಿಲ್ಲವೇ ಇಲ್ಲ. ನಾನು ಕುರಿಗಳನ್ನು ಮೇಯಿಸಬೇಕಾಗಿದೆ. ಈ ನಿಯೋಜನೆಯಿಂದ ಪಾರಾಗುವ ಪರಿಹಾರ ನನಗೆ ಇಲ್ಲ , ಇದಕ್ಕೆ ನೆರವೂ ಇಲ್ಲ , ಬಿಡುಗಡೆಯೂ ಇಲ್ಲ. ಮಾನವ ಸ್ವಭಾವದ ಅನುಕಂಪನದ ದಾರಿಯಲ್ಲಿ ಕಾರ್ಯವೆಸಗುತ್ತಾ ದೇವರ ಪ್ರೀತಿಯನ್ನು ಖೋಟಾ ನಟನೆಯಾಗಿಸುವುದರ ಬಗ್ಗೆ ಎಚ್ಚರವಿರಬೇಕು, ಯಾಕೆಂದರೆ ಅದು ದೇವರ ಪ್ರೀತಿಯನ್ನು ದೂಷಣೆ ಮಾಡುವುದರಲ್ಲಿ ಕೊನೆಗೊಳ್ಳುತ್ತದೆ.

# ನನ್ನ ವಿಷಯದಲ್ಲಿ ಇದು ನಿಜವಿರಬಹುದು.

**''ಆದರೆ ಪ್ರಾಣವನ್ನು ಉಳಿಸಿಕೊಳ್ಳುವದೇ ವಿಶೇಷವೆಂದು ನಾನು ಎಣಿಸುವದಿಲ್ಲ'' (ಅ.ಕೃ. 20:24)**

ದೇವರ ದರ್ಶನವಿಲ್ಲದೆ, ಸೇವೆ ಮಾಡುವುದು ಸುಲಭ, ದೇವರ ಕರೆಯುವಿಕೆ ಇಲ್ಲದೆ ಸೇವೆ ಮಾಡುವುದು ಇನ್ನೂ ಸುಲಭ, ಯಾಕೆಂದರೆ ಆಗ ದೇವರು ನಿನ್ನಿಂದ ಏನು ಬಯಸುವನೆಂಬುದರ ಬಗ್ಗೆ ನೀನು ಆತಂಕ ಪಡಬೇಕಾಗಿಲ್ಲ. ಕ್ರಿಸ್ತೀಯ ಭಾವನೆಗಳು ಮರೆಮಾಡಿದ ನಿನ್ನ ಸಾಮಾನ್ಯ ಜ್ಞಾನವೇ ನಿನ್ನ ಮಾರ್ಗದರ್ಶಿಯಾಗಿರುತ್ತದೆ. ದೇವರ ಕರೆಯನ್ನು ನೀನೆಂದೂ ಅರಿಯದಿದ್ದರೆ, ನೀನು ಇನ್ನೂ ಎಷ್ಟೋ ಹೆಚ್ಚಾಗಿ ಏಳ್ಗೆ ಹೊಂದಿದವನೂ, ಯಶಸ್ವಿಯೂ ಆಗಿರುವುದಲ್ಲದೆ ಹೆಚ್ಚು ಬಿಡುವಿರುವ ಹೃದಯವುಳ್ಳವನೂ ಆಗಿರುವಿ; ಆದರೆ ಒಮ್ಮೆ ಯೇಸು ಸ್ವಾಮಿಯಿಂದ ಒಂದು ನಿಯೋಜನೆಯನ್ನು ನೀನು ಸ್ವೀಕರಿಸಿದ್ದಾದರೆ, ದೇವರೇನು ಬಯಸುತ್ತಿರುವನೆಂಬುದರ ಸ್ಮರಣೆಯು ಚೂಪಾದ ತಿವಿಗೋಲಿನಂತೆ ತೂರಿ ಬರುತ್ತದೆ; ಇನ್ನು ಮುಂದೆ ನಿನ್ನ ವ್ಯವಹಾರಿಕ ಜ್ಞಾನದ ಆಧಾರದ ಮೇಲೆ ಆತನಿಗಾಗಿ ಸೇವೆ ಮಾಡಲು ನಿನಗಾಗುವುದಿಲ್ಲ.

ನನ್ನ ಜೀವಿತದಲ್ಲಿ ಯಾವುದನ್ನು ನಾನು ನಿಜವಾಗಿಯೂ ಬೆಲೆಯುಳ್ಳದೆಂದು ತಿಳಿದಿರುವೆನು? ನಾನು ಯೇಸುಕ್ರಿಸ್ತನಿಂದ ಬಿಗಿಯಾಗಿ ಹಿಡಿಯಲ್ಪಟ್ಟಿರದಿದ್ದರೆ, ಈಗ ನಾನು ಮಾಡುತ್ತಿರುವ ಸೇವೆಯನ್ನೇ ಬೆಲೆಯುಳ್ಳದ್ದೆಂದೂ, ದೇವರಿಗಾಗಿ ನಾನು ಕೊಟ್ಟಸಮಯವೇ ಬೆಲೆಯುಳ್ಳದ್ದೆಂದೂ, ಮತ್ತು ನನ್ನ ಜೀವಿತವೇ ನನಗೆ ಬಹು ಬೆಲೆಯುಳ್ಳದ್ದೆಂದೂ ಎಣಿಸುತ್ತೇನೆ. ಆದರೆ ಪೌಲನು ತಾನು ಹೊಂದಿದ ಸೇವೆಯನ್ನು ಪೂರ್ಣಗೊಳಿಸಲು ಮಗ್ನವಾಗಿರುವ ಜೀವಿತವೇ, ತನಗೆ ಬಹು ಬೆಲೆಯುಳ್ಳದೆಂದು ಹೇಳುತ್ತಿರುವನು. ಆತನು ಬೇರೆ ಯಾವ ಕಾರ್ಯಕ್ಕಾಗಿಯೂ ತನ್ನ ಶಕ್ತಿಯನ್ನು ಉಪಯೋಗಿಸಲು ನಿರಾಕರಿಸಿದನು. ತನ್ನ ವ್ಯಕ್ತಿತ್ವವನ್ನು , ತನ್ನ ಕ್ಷೇಮವನ್ನು ಪರಿಗಣಿಸಿಕೊಳ್ಳಬೇಕೆಂದು ಪೌಲನನ್ನು ಕೇಳಿಕೊಂಡಾಗ ಆತನಿಗಾದ ಉದಾತ್ತ ಮುಜುಗರವನ್ನು ಮೇಲಿನ ವಾಕ್ಯಗಳು ತಿಳಿಯಪಡಿಸುತ್ತವೆ. ತಾನು ಹೊಂದಿಕೊಂಡಂಥಾ ಸೇವೆಯನ್ನು ತೃಪ್ತಿಕರವಾಗಿ ಮಾಡಿ ಮುಗಿಸುವುದೊಂದನ್ನು ಬಿಟ್ಟು ಬೇರೆಲ್ಲಾ ವಿಧದ ಪರಿಗಣನೆಗಳಿಗೆ ಆತನು ಉದಾಸೀನ ನಾಗಿದ್ದನು. ಸಾಧಿಸಬಲ್ಲ ಕಾರ್ಯವು, ದೇವರಿಗಾಗಿ ತನ್ನದೆಲ್ಲವನೂ ಕಳೆದುಕೊಳ್ಳುವುದರ ವಿರುದ್ಧ ಸ್ಪರ್ಧಿಸುತ್ತದೆ. ಯಾಕೆಂದರೆ ಮಾಡಿ ತೋರಿಸುವಂಥಾ ಕೆಲಸವು ಒಂದು ತರ್ಕದ ಮೇಲೆ ಆಧಾರಗೊಂಡಿದೆ. 'ಇಲ್ಲಿ ನೀನು ಬಹು ಪ್ರಯೋಜನಕಾರಿ ಎನ್ನುವುದನ್ನು ನೆನೆಸಿಕೋ; ಇಲ್ಲವೆ ಆ ವಿಧದ ನಿರ್ದಿಷ್ಟ ಕಾರ್ಯದೊಳಗೆ ನೀನಿರುವುದೆಷ್ಟು ಮಹತ್ವದ ಉಪಯುಕ್ತತೆ', ಇಂಥಾ ಒಂದು ಮನೋಭಾವನೆಯು ನಾವು ಹೋಗಬೇಕಾಗಿರುವಲ್ಲಿಗೆ ನಮ್ಮನ್ನು ನಡೆಸಲು ಅದು ಕ್ರಿಸ್ತನನ್ನು ನಮ್ಮ ಮಾರ್ಗದರ್ಶಕ ನನ್ನಾಗಿರಿಸುವುದಿಲ್ಲ. ಅದರ ಬದಲಿಗೆ, ನಾವು ಎಲ್ಲಿ ತುಂಬಾ ಉಪಯುಕ್ತರಿರುವೆಂಬ ನಮ್ಮ ನಿರ್ಣಯವೇ, ನಮ್ಮ ಮಾರ್ಗ ದರ್ಶಕನ ಸ್ಥಾನದಲ್ಲಿರುತ್ತದೆ. ನೀನೆಷ್ಟರ ಮಟ್ಟಿಗೆ ಉಪಯುಕ್ತನೆನ್ನುವುದನ್ನು ಪರಿಗಣಿಸಬೇಡ. ಆದರೆ ನೀನು ನಿನ್ನವನಾಗದೆ ಎಂದೆಂದಿಗೂ ಆತನವನೇ ಆಗಿರುವೆಯೆಂಬುದನ್ನು ಯಾವಾಗಲೂ ಪರಿಗಣಿಸಬೇಕು.

# ನಿಜವಾಗಿಯೂ ಅವರು ಸ್ವಾಮಿಯವರೋ ?

**''ಸುವಾರ್ತೆಯನ್ನು ಆಸಕ್ತಿಯಿಂದ ಪ್ರಕಟಿಸಬೇಕೆಂಬುದಾಗಿ ಕರ್ತನಾದ ಯೇಸುವಿನಿಂದ ಹೊಂದಿರುವ ಸೇವೆಯೆಂಬ ಓಟವನ್ನು ಕಡೆಗಾಣಿಸುವುದೊಂದೇ ನನ್ನ ಅಪೇಕ್ಷೆ'' (ಅ.ಕೃ. 20:24)**

ಯಾವ ಉದ್ದೇಶಾರ್ಥ ನಾನು ಸೃಷ್ಟಿಸಲ್ಪಟ್ಟಿರುವೆನೋ ಮತ್ತು ಹೊಸದಾಗಿ ಹುಟ್ಟಿಬಂದಿರುವೆನೋ ಆ ಉದ್ದೇಶದ ಪೂರ್ಣ ಈಡೇರಿಕೆಯಿಂದುಂಟಾಗುವ ಆನಂದವೇ ನಿಜವಾದ ಆನಂದ, ಆದರದು ನಾನು ಆಸಕ್ತಿ ಹೊಂದಿರುವ ಕೆಲಸವನ್ನು ನಾನೇ ಯಶಸ್ವಿಯಾಗಿ ಮಾಡಿ ಮುಗಿಸುವುದರಿಂದುಂಟಾಗುವುದಲ್ಲ. ಯೇಸುಸ್ವಾಮಿಯ ಆನಂದವು ತನ್ನನ್ನು ಕಳುಹಿಸಿಕೊಟ್ಟ ತನ್ನ ತಂದೆಯ ಚಿತ್ತವನ್ನು ನೆರವೇರಿಸುವುದರಲ್ಲಿ ಅಡಗಿತ್ತು. ''ತಂದೆ ನನ್ನನ್ನು ಕಳುಹಿಸಿಕೊಟ್ಟ ಹಾಗೆಯೇ ನಾನು ನಿಮ್ಮನು ಕಳುಹಿಸಿ ಕೊಡುತ್ತೇನೆ''. ಎಂದು ಹೇಳುತ್ತಾನೆ. (ಯೋಹಾನ 20:21) ಸೇವೆಯೊಂದನ್ನು ನಾನು ಸ್ವಾಮಿಯವರಿಂದ ಪಡೆದಿರುವೆನೋ? ಹಾಗಿದ್ದರೆ ಅದಕ್ಕೆ ನಾನು ನಿಷ್ಠೆಯುಳ್ಳವನಾಗಿರಬೇಕು, ಆ ಸೇವೆಯನ್ನು ನೆರವೇರಿಸುವುದಕ್ಕಾಗಿ ಮಾತ್ರವೇ ನನ್ನ ಜೀವವು ಬೆಲೆಯುಳ್ಳದ್ದೆಂದು ಪರಿಗಣಿಸಬೇಕು. ನೀನೇನು ಮಾಡಬೇಕೆಂದು ಆತನು ನಿನ್ನನ್ನು ಕಳುಹಿಸಿ ಕೊಟ್ಟಿದ್ದನೋ ಅದನ್ನು ನೀನು ಮಾಡಿ ಮುಗಿಸಿದಾಗ ''ಭಲಾ ! ನಂಬಿಗಸ್ತನಾದ ಒಳ್ಳೆ ಆಳು ನೀನು'' (ಮತ್ತಾ 25:21) ಎಂದು ಯೇಸುಕ್ರಿಸ್ತನು ಹೇಳುವುದನ್ನು ಕೇಳಿಸಿಕೊಂಡಾಗ ನಿನ್ನಲ್ಲುಂಟಾಗುವ ಸಂತೃಪ್ತಿಯನ್ನು ಕುರಿತು ಯೋಚಿಸು ! ನಾವೆಲ್ಲರೂ ನಮ್ಮ ಜೀವಿತದಲ್ಲಿ ನಮ್ಮದೇ ಆದ ಲೌಕಿಕ ನೆಲೆಗಳನ್ನು ಕಂಡುಕೊಳ್ಳಬೇಕು, ಮತ್ತು ನಮ್ಮ ಸೇವೆಯನ್ನು ಯೇಸುಕ್ರಿಸ್ತನಿಂದ ಹೊಂದಿಕೊಂಡಿರುವಾಗ, ಆತ್ಮೀಕವಾಗಿಯೂ ನಮ್ಮದೇ ಆದ ನೆಲೆಯನ್ನು ಕಂಡುಕೊಳ್ಳುತ್ತೇವೆ. ಇದನ್ನು ಕಂಡುಕೊಳ್ಳುವುದಕ್ಕೋಸ್ಕರ ನಾವು ಯೇಸುಕ್ರಿಸ್ತನ ಬಾಂಧವ್ಯದಲ್ಲಿ ರಬೇಕಾಗುತ್ತದೆ. ಯೇಸುಕ್ರಿಸ್ತನನ್ನು ಸ್ವಂತ ರಕ್ಷಕನೆಂದು ತಿಳಿಯುವುದಕ್ಕಿಂತಲೂ ಹೆಚ್ಚಾಗಿ ಆತನನ್ನು ವ್ಯಕ್ತಿಗತವಾಗಿ ಅರಿತು ಕೊಳ್ಳಬೇಕು. ''ಅವನು ನನ್ನ ಹೆಸರಿನ ನಿಮಿತ್ತ ಎಷ್ಟು ಹಿಂಸೆ ಅನುಭವಿಸಬೇಕೆಂಬದನ್ನು ನಾನೇ ಅವನಿಗೆ ತೋರಿಸುವೆನು'' (ಅ.ಕೃ. 9:16)

''ನನ್ನ ಮೇಲೆ ಪ್ರೀತಿ ಇಟ್ಟಿದ್ದೀಯೋ ?'' ಹಾಗಿದ್ದರೆ ''ನನ್ನ ಕುರಿಗಳನ್ನು ಮೇಯಿಸು''. ನೀನು ಆಯ್ದುಕೊಳ್ಳಬಹುದಾದ ಸೇವೆ ಅಲ್ಲಿ ಇಲ್ಲವೇ ಇಲ್ಲ. ನಮ್ಮ ಸ್ವಾಮಿಯು ನಮಗೆ ನಿಯೋಜಿಸಿದ ಸೇವೆಗೆ ಸಂಪೂರ್ಣವಾಗಿ ನಿಷ್ಠಾವಂತನಾಗಿರುವುದು ಮಾತ್ರವೇ ಅಲ್ಲಿದೆ; ಹೌದು, ನೀನು ದೇವರೊಂದಿಗೆ ನಿಕಟ ಸಂಪರ್ಕದಲ್ಲಿದ್ದಾಗ ನೀನು ವಿವೇಚನಾ ಪೂರ್ವಕವಾಗಿ ಗ್ರಹಿಸಿರುವುಂಥದಕ್ಕೆ ನೀನು ನಿಷ್ಠಾವಂತನಾಗಿರ ಬೇಕು. ನೀನು ಸೇವೆಯನ್ನು ಯೇಸುಸ್ವಾಮಿಯವರಿಂದ ಹೊಂದಿರುವೆ ಯಾದರೆ, ಸೇವೆಯ ಕರೆಯು ವಿಕೆಯ ಅವಶ್ಯ ಕತೆ ಅಲ್ಲಿ ಇಲ್ಲ. ಅವಶ್ಯಕತೆಯಿರುವುದು ಸೇವೆಯ ಅವಕಾಶಗಳು. ನೀನು ದೇವರೊಂದಿಗೆ ನಿಕಟವಾದ ಸಂಪರ್ಕದಲ್ಲಿದ್ದಾಗ ನೀನು ಹೊಂದಿದ ಸೇವೆಗೆ ನಿಷ್ಠಾವಂತನಾಗಿರುವುದಕ್ಕಾಗಿಯೇ ನಿನಗೆ ಕರೆಯಾಗಿರುತ್ತದೆ. ಸುಸಂಘಟಿತ ಕಾರ್ಯಚರಣೆಯ ಸೇವೆಯೊಂದು ನಿನಗಾಗಿ ಗುರುತಿಸಲ್ಪಟ್ಟಿದೆ ಎಂಬುದು ಕರೆಯುವಿಕೆಯ ಅರ್ಥವಲ್ಲ, ಆದರೆ ಬೇರೆ ಬೇರೆ ರೀತಿಯಲ್ಲಿ ಸೇವೆ ಮಾಡಬಹುದೆನ್ನುವ ಕೇಳಿಕೆ, ಹೇಳಿಕೆ ಗಳನ್ನು ನೀನು ಅಲಕ್ಷಿಸಬೇಕೆನ್ನುವುದೇ ಇದರ ಅರ್ಥ.

# ಮುಂದಿನ ಹೆಜ್ಜೆ ಇಡುವುದು

**''ನಾವು ಸಂಕಟಗಳಲ್ಲಿಯೂ ಕೊರತೆಗಳಲ್ಲಿಯೂ ಇಕ್ಕಟ್ಟುಗಳಲ್ಲಿಯೂ .... ಬಹು ತಾಳ್ಮೆಯನ್ನು ತೋರಿಸುತ್ತೇವೆ.'' - (2 ಕೊರಿ 6:4-5)**

ಎಲ್ಲಿ ದರ್ಶನವಿಲ್ಲವೋ ಮತ್ತು ಎಲ್ಲಿ ಪ್ರೇಕ್ಷಕರಿಲ್ಲವೋ, ಎಲ್ಲಿ ಯಾರೂ ನಿನ್ನನ್ನು ಗಮನಿಸುವುದಿಲ್ಲವೋ, ಮತ್ತು ಪ್ರೋತ್ಸಾಹಿಸುವುದಿಲ್ಲವೋ, ಎಲ್ಲಿ ನಿನ್ನ ಉಲ್ಲಾಸ ಕುಗ್ಗಿಹೋಗಿದೆಯೋ ಅಲ್ಲಿ ಮುಂದಿನ ಹೆಜ್ಜೆ ಊರಬೇಕಾದರೆ ಸರ್ವಶಕ್ತನ ಕೃಪೆಯು ಬೇಕಾಗುತ್ತದೆ. - ದೇವರ ಶ್ರದ್ಧೆಯಲ್ಲಿ, ವಾಕ್ಯದ ವ್ಯಾಸಂಗ ಅಧ್ಯಯನಗಳಲ್ಲಿ, ನಿನ್ನ ದೈನಂದಿನ ಜೀವನ ಕ್ರಮಗಳಲ್ಲಿ, ನಿನ್ನ ಸೇವಾವೃತ್ತಿಯಲ್ಲಿ, ಅಡುಗೆ ಮನೆಯಲ್ಲಿ ಮುಂದಡಿ ಇಡಲು ದೇವರ ವಾಕ್ಯವನ್ನು ಬೋಧಿಸಲು ಬೇಕಾಗುವ ದೇವರ ಕೃಪೆಗಿಂತಲೂ, ಹೆಚ್ಚಾದ ದೈವ ಕೃಪೆಯೂ,ಇನ್ನೂ ಹೆಚ್ಚಾಗಿ ಆತನನ್ನು ಅರಿತು ಕೊಳ್ಳುವ ಪ್ರಜ್ಞಾಪೂರ್ವಕ ತಿಳುವಳಿಕೆಯೂ, ಅಗತ್ಯ ವಾಗಿರುತ್ತದೆ.

ನರಾವತಾರದ ಸತ್ವವನ್ನು ತನ್ನ ಶರೀರದ ಅನುಭವದೊಳಗಡೆಗೆ ತಂದುಕೊಂಡು, ಯಥಾಸ್ಥಿತಿಯಲ್ಲಿ, ಬೆರಳೆಣಿಸುವಷ್ಟು ಸುಲಭವಾಗಿ ಅದನ್ನು ಸಾಧಿಸಲಾಗುವಂತೆ ಪ್ರತಿಯೊಬ್ಬ ಕ್ರೈಸ್ತನೂ ಆ ತತ್ವದಲ್ಲಿ ಪಾಲುಹೊಂದಬೇಕು. ಎಲ್ಲಿ ದರ್ಶನವಿರುವುದಿಲ್ಲವೋ, ಯಾವಾಗ ಪ್ರೋತ್ಸಾಹವಿರುವುದಿಲ್ಲವೋ, ಎಲ್ಲಿ ಸುಧಾರಿಕೆ ಇರುವುದಿಲ್ಲವೋ ಮತ್ತು ಯಾವಾಗ ಕೇವಲ ಕ್ಷುಲ್ಲಕ ಕಾರ್ಯಗಳಿಂದ ತುಂಬಿದ ಸಾಧಾರಣ ಜೀವಿತವು ಅಲ್ಲಿರುತ್ತದೋ, ಆಗ ನಾವು ಆಸಕ್ತಿಗಳನ್ನು ಕಳೆದುಕೊಂಡು ಕುಸಿದು ಬೀಳುತ್ತೇವೆ. ಆದಾಗ್ಯೂ ಮಾಡುವ ಸೇವೆಯು ಅಲ್ಲಿ ಕಾಣಬರದಿದ್ದರೂ, ಯಾರೂ ಗಮನಿಸದೆ ಹೋದರೂ ದೇವರ ಮುಂದೆಯೂ ಮನುಷ್ಯರ ಮುಂದೆಯೂ ಕಾಲ ಕ್ರಮೇಣದಲ್ಲಿ ನೀನು ಹೀಗೆ ಸಾಧಿಸಿದ ಏಕ ನಿಷ್ಠ ಸಾಧನೆಯು ಸಾಕ್ಷಿಯಾಗಿ ನಿಲ್ಲುತ್ತದೆ. ಇದನ್ನು ಸಾಧಿಸುವಾಗ ಜೀವಿತವು ಜಜ್ಜಿ ಪುಡಿಪುಡಿಯಾಗದಿರಲು ಇರುವ ಒಂದೇ ಮಾರ್ಗವೆಂದರೆ ಮಾನವನು ದೇವರನ್ನೇ ಸದಾ ದೃಷ್ಟಿಸುತ್ತಾ ಜೀವಿಸಬೇಕು. ಪುನರುತ್ಥಾನ ಹೊಂದಿದ ಯೇಸುಕ್ರಿಸ್ತನನ್ನು ಕಾಣಲು ನಿನ್ನ ಆತ್ಮದ ಕಣ್ಣುಗಳು ಸದಾ ತೆರೆದು ಕೊಂಡಿರುವಂತೆ ದೇವರನ್ನು ಬೇಡಿಕೋ ! ಆಗ ಶ್ರಮಭರಿತ ಸೇವಾಕಾರ್ಯವು ನಿನ್ನನ್ನು ನಿಸ್ಸತ್ವಗೊಳಿಸ ಲಾರದು. ಜೀವಿತದ ಸಣ್ಣತನಗಳನ್ನು ಮತ್ತು ಕ್ಷುದ್ರ ವಿಷಯಗಳನ್ನು ನಿನ್ನ ಮನಸ್ಸಿನಿಂದ ಸತತವಾಗಿ ದೂರವಿಡು. ಸೇವೆಯಲ್ಲಿ ಮಾಡಬೇಕಾದ ಕೆಲವು ಕಾರ್ಯಗಳನ್ನು - ಅವು ನಿನ್ನ ಘನತೆಗೆ ತಕ್ಕುದಾದವುಗಳಲ್ಲವೆಂದಾಗಲೀ, ನಿನ್ನಂಥವನಿಗೆ ಅಲ್ಪ ಗಣನೀಯವೆಂದಾಗಲೀ ಭಾವಿಸಬಾರದು ಮತ್ತು ಯೋಹಾನನು ಬರೆದ ಸುವಾರ್ತೆಯ 13ನೇ ಅಧ್ಯಾಯದ ಚಿಂತನೆ ಮಾಡುತ್ತಾ ಇರಬೇಕು.

# ಅತಿಶಯ ಆನಂದದ ಮೂಲ

**''ಆದರೆ ನಮ್ಮನ್ನು ಪ್ರೀತಿಸಿದಾತನ ಮೂಲಕವಾಗಿ ನಾವು ಈ ಎಲ್ಲಾ ವಿಷಯಗಳಲ್ಲಿ ಪೂರ್ಣ ಜಯಶಾಲಿಗಳಾಗುತ್ತೇವೆ'' - (ರೋಮಾ 8:37)**

ದೇವರ ಪ್ರೀತಿ ಮತ್ತು ದೇವರಭಕ್ತ, ಇವರನ್ನು ಬೇರ್ಪಡಿಸಬಹುದಾದಂಥ, ಇವರ ನಡುವೆ ಬೆಣೆ ಸಿಕ್ಕಿಸಬಹುದಾದಂಥ ವಿಷಯಗಳನ್ನು ಶ್ರೀ ಪೌಲನು ಈ ವಾಕ್ಯಭಾಗದಲ್ಲಿ ಪ್ರಸ್ತಾಪಿಸಿರುವನು; ಆದರೆ ಗಮನಾರ್ಹ ವಿಷಯವೆಂದರೆ ಹೀಗೆ ಮಾಡುವಂಥವುಗಳು ಅಸ್ಥಿತ್ವದಲ್ಲಿ ಇಲ್ಲವೇ ಇಲ್ಲ. ಬೇರ್ಪಡಿಸಬಹುದೆನ್ನುವ ಸಂಗತಿಗಳು ಬರಬಹುದು ಮತ್ತು ಬರುತ್ತವೆ ಕೂಡ. ಇವು ನಮ್ಮ ಆತ್ಮೀಕ ಶ್ರದ್ಧೆಯ ಪ್ರತಿಪಾದನಾ ಸಮಯದಲ್ಲಿ, ನಮ್ಮ ಆತ್ಮಕ್ಕೂ ದೇವರಿಗೂ ನಡುವೆ ಪ್ರವೇಶಿಸಿ, ನಮ್ಮ ಸ್ವಾಭಾವಿಕ ಜೀವಿತವನ್ನು ದೇವರಿಂದ ಬೇರ್ಪಡಿಸುತ್ತವೆ. ಆದಾಗ್ಯೂ ಅವುಗಳಲ್ಲಿ ಯಾವುದೂ ಆತ್ಮೀಕ ಮಟ್ಟದಲ್ಲಿ ಭಕ್ತನ ಆತ್ಮಕ್ಕೂ ಮತ್ತು ದೇವರ ಪ್ರೀತಿಯ ನಡುವೆ ಬೆಣೆಯನ್ನು ಸಿಕ್ಕಿಸಲಾರವು. ಕಲ್ವಾರಿ ಶಿಲುಬೆಯ ಮೇಲೆ ತೋರಿ ಬಂದ, ಎಲ್ಲಾ ಅರ್ಹತೆಗಳನ್ನು ಮೀರಿದ, ಅಳೆಯಲಸಾಧ್ಯವಾದ ದೇವರ ಪ್ರೀತಿಯು ಅಂದರೆ ಯಾವ ಪ್ರೀತಿಗೆ ನಾವು ಯೋಗ್ಯರಲ್ಲವೋ, ಆ ಪ್ರೀತಿಯ ಅಮೋಘ ನಿದರ್ಶನವೇ ಕ್ರೈಸ್ತ ವಿಶ್ವಾಸಕ್ಕೆ ಆಧಾರ ಶಿಲೆಯಾಗಿದೆ, ಆದ್ದರಿಂದ ಶ್ರೀ ಪೌಲನು ಹೇಳುವನು, ಈ ಕಾರಣದಿಂದಲೇ ''ನಾವು ಈ ಎಲ್ಲಾ ವಿಷಯಗಳಲ್ಲಿ ಪೂರ್ಣ ಜಯಶಾಲಿಗಳು''. ಯಾವ ಸಂಗತಿಗಳು ನಮ್ಮನ್ನು ಪರಾಜಿತ ಗೊಳಿಸುವಂತೆ ಕಾಣಬರುತ್ತಿದ್ದವೋ, ಅವುಗಳನ್ನೇ ಜಯಿಸಿದ, ಆನಂದ ತುಂಬಿದ, ಶ್ರೇಷ್ಠ ಜಯಶಾಲಿಗಳು ನಾವಾಗಿದ್ದೇವೆ.

ಸಾಮಾನ್ಯ ಈಜುಗಾರನನ್ನು ಆತಂಕಕ್ಕೀಡುಮಾಡುವ ನೊರೆತುಂಬಿದ ತೆರೆಗಳು ಅವುಗಳಲ್ಲಿ, ಸರಳವಾಗಿ ಸಾಗಿ ಹೋಗುವ ಕಡಲಲೆ ಸವಾರನಿಗೆ, ಅದೇ ತೆರೆ ನೊರೆಯು ಅಧಿಕ ಆನಂದವನ್ನುಂಟು ಮಾಡುತ್ತದೆ. ಇದನ್ನೇ ನಾವು, ನಮಗೆ ಆತಂಕವನ್ನೊಡ್ಡುವ ಸನ್ನಿವೇಶ ಗಳಿಗೆ ಅನ್ವಯ ಮಾಡಬೇಕು. ಸಂಕಟಗಳು, ಆತಂಕಗಳು, ಹಿಂಸೆಗಳು ಮತ್ತು ಯಾವ ಸಂಗತಿಗಳನ್ನು ಎದುರಿಸಲು ನಾವು ಹಿಂಜರಿ ಯುತ್ತೇವೆಯೋ ಅದೇ ಸಂಗತಿಗಳು ನಮ್ಮೊಳಗೆ ಮಹದಾನಂದವನ್ನುಂಟು ಮಾಡುತ್ತವೆ; ನಾವು ಎದುರಿಸಿ ಹೋರಾಡಬೇಕಾಗಿರುವ ಸಂಗತಿಗಳು ಅವು ಅಲ್ಲ. ನಾವು ಈ ಎಲ್ಲಾ ವಿಷಯಗಳಲ್ಲಿ - ಇವುಗಳ ಹೊರತಾಗಿ ಅಲ್ಲ - ಈ ವಿಷಯಗಳಲ್ಲಿದ್ದುಕೊಂಡೇ ನಮ್ಮನ್ನು ಪ್ರೀತಿಸಿದಾತನ ಮೂಲಕ ಪೂರ್ಣ ಜಯಶಾಲಿಗಳಾಗು ತ್ತೇವೆ. ಕಷ್ಟಸಂಕಟಗಳಿಲ್ಲದಿದ್ದರೆ ಭಕ್ತನಾದವನು ಅತ್ಯಾನಂದವನ್ನನು ಭವಿಸುವುದಿಲ್ಲ. ಕಷ್ಟಸಂಕಟಗಳೇ ಅವನಲ್ಲಿ ಮಹದಾನಂದವನ್ನುಂಟು ಮಾಡುವವು. ''ನಮಗಾಗುವ ಎಲ್ಲಾ ಸಂಕಟಗಳಲ್ಲಿ ಅತ್ಯಧಿಕವಾದ ಸಂತೋಷದಿಂದ ತುಂಬಿದ್ದೇನೆ'' ಎಂದು ಭಕ್ತನಾದ ಪೌಲನು ಹೇಳಿದ್ದಾನೆ. (2 ಕೊರಿ 7:4)

ನಿರ್ಭೀತ ಕಾಂತಿಯು ಅಂದರೆ ಯಾವ ಕಾಂತಿಯು ಮಹದಾನಂದದ ಫಲವಾಗಿದೆಯೋ ಅದು ಗತಿಸಿ ಹೋಗುವಂಥವುಗಳ ಆಧಾರಗೊಂಡಿರುವುದಿಲ್ಲ, ಅದು, ಮಾರ್ಪಡಿಸಲಾಗದಂಥ ದೇವರ ಪ್ರೀತಿ ಯಲ್ಲಿ ನೆಲೆಗೊಂಡಿದೆ. ನಮ್ಮ ಜೀವಿತದ ಅನುಭವಗಳು ಎಷ್ಟೇ ಭಯಂಕರವಾದವು ಗಳಾಗಿರಲಿ, ಅವು ಎಷ್ಟೇ ತಲೆ ಚಿಟ್ಟು ಹಿಡಿಸುವಂಥವುಗಳೇ ಆಗಿರಲಿ, ಕ್ರಿಸ್ತನಲ್ಲಿ ತೋರಿ ಬಂದ ದೇವರ ಪ್ರೀತಿಯನ್ನು ಸ್ಪರ್ಶಿಸಲು ಅವುಗಳಿಗೆ ತ್ರಾಣವೇ ಇಲ್ಲ.

# ತ್ಯಾಗಮಯ ಜೀವಿತ

**''ಕ್ರಿಸ್ತನೊಂದಿಗೆ ಶಿಲುಬೆಗೆ ಹಾಕಿಸಿ ಕೊಂಡವನಾಗಿದ್ದೇನೆ'' - (ಗಲಾತ್ಯ 2:20)**

ಪಾಪವನ್ನು ತ್ಯಜಿಸುವ ಇಚ್ಛೆಯೊಂದೇ ಅಲ್ಲದೆ, ಜೀವಿತವನ್ನೂ, ವಸ್ತುಗಳನ್ನೂ ದೃಷ್ಟಿಸುವ ಸಮಗ್ರ ರೀತಿಯನ್ನು ತ್ಯಜಿಸಲು ಇಚ್ಛಿಸುವ ತನಕ ಯೇಸುಕ್ರಿಸ್ತನೊಂದಿಗೆ ಒಂದಾಗಿರುವುದು ಯಾರಿಗೂ ಸಾಧ್ಯವೇ ಇಲ್ಲ. ದೇವರ ಆತ್ಮನ ಮೂಲಕ ಮೇಲಣಿನಿಂದ ಒಬ್ಬನು ಹೊಸದಾಗಿ ಹುಟ್ಟುವುದು ಎಂದರೆ ಹೊಸದಾದ ದ್ದೊಂದನ್ನು ಭದ್ರವಾಗಿ ಹಿಡಿದುಕೊಳ್ಳುವ ಮೊದಲು ಈವರೆಗೂ ಭದ್ರವಾಗಿ ಹಿಡಿದಿಟ್ಟುಕೊಂಡಂಥ ಹಳೆಯದೆಲ್ಲವನ್ನು ತೊರೆದುಬಿಡಬೇಕು. ಅಂಥಾ ಸಾಧನೆಯ ಪ್ರಥಮ ಹಂತವಾಗಿ ಎಲ್ಲಾ ವಿಧದ ಡಾಂಬಿಕತೆಯನ್ನು ತ್ಯಜಿಸಬೇಕು. ಯೇಸು ಸ್ವಾಮಿಯವರು ತನಗೆ ಒಪ್ಪಿಸಿ ಕೊಡೆಂದು ಬಯಸುವುದು ನಮ್ಮ ಸಜ್ಜನಿಕೆಯನ್ನಲ್ಲ , ನಮ್ಮ ಪ್ರಾಮಾಣಿಕತೆಯನ್ನಲ್ಲ , ಸತ್ಕಾರ್ಯ ವನ್ನೆಸಗುವ ನಮ್ಮ ಸಾಹಸತನವನ್ನಲ್ಲ, ಆತನು ಬಯಸುವುದು ನಮ್ಮಲ್ಲಿ ಭದ್ರವಾಗಿ ನೆಲೆಯೂರಿರುವ ನೈಜ ಪಾಪವನ್ನು ಮಾತ್ರ, ಮತ್ತು ಅದನ್ನು ಮಾತ್ರವೇ ಆತನು ಸ್ವೀಕರಿಸುತ್ತಾನೆ. ಪಾಪಕ್ಕೆ ಬದಲಾಗಿ ಆತನು ನಮಗೇನನ್ನು ದಯಪಾಲಿಸುವನು? - ಸತ್ವ ಸಂಪನ್ನವಾದ ನೈತಿಕತೆಯನ್ನು ದಯಪಾಲಿಸು ವನು. ಆದರೆ ನಾವು ಏನೋ ಘನವುಳ್ಳವ ರಾಗಿರುವೆವೆಂಬ ಡಾಂಬಿಕತೆಯನ್ನು ಹಾಗೂ ದೇವರು ಪರಿಗಣಿಸುವಂಥಾ ಯೋಗ್ಯತೆಯುಳ್ಳವರೆಂಬ ತೋರಿಕೆಯನ್ನೂ ನಾವು ಮೊದಲು ತ್ಯಜಿಸಬೇಕು.

ಒಮ್ಮೆ ಇದನ್ನು ಮಾಡಿದ ನಂತರವೇ ಇನ್ನೂ ಏನನ್ನಾದರೂ ತ್ಯಜಿಸಬೇಕಾಗಿದ್ದರೆ ಅದನ್ನು ದೇವರಾತ್ಮನು ತಿಳಿಯಪಡಿಸುವನು. ಈ ಪ್ರಕ್ರಿಯೆಯ ಪ್ರತಿ ಹಂತದಲ್ಲಿಯೂ, ನನ್ನ ಸ್ವಯಂ ಮೇಲೆ ನನಗಿರುವ ನ್ಯಾಯವಾದ ಹಕ್ಕುಗಳ ಪ್ರತಿಪಾದನೆಯನ್ನು ತ್ಯಜಿಸುತ್ತಿರಬೇಕು. ನನ್ನ ಸ್ವಾಮಿತ್ವವಿರುವ ನನ್ನದೆಲ್ಲವುಗಳ ಮೇಲೆ, ನನ್ನ ಅನುಭೋಗಗಳ ಮೇಲೆ, ನನ್ನ ಅನುರಾಗ, ನನ್ನ ಅನುಕಂಪ, ನನ್ನ ರಾಗ ಪ್ರೇಮಗಳ ಮೇಲೆ ನನಗಿರುವ ಒಡೆತನದ ಹಿಡಿತವನ್ನು ಪರಿತ್ಯಜಿಸಲು ಮತ್ತು ಯೇಸು ಕ್ರಿಸ್ತನ ಮರಣ ದೊಂದಿಗೆ ಗುರುತಿಸಿಕೊಳ್ಳಲು ನಾನು ಸಿದ್ಧನಿರುವೆನೋ?

ಇಂಥಾ ಪರಿತ್ಯಜನದ ಮುನ್ನ ತೀಕ್ಷ್ಣವೇದನೆಯ ಭ್ರಮನಿರಸನಕ್ಕೆ ನಾವು ಒಳಗಾಗುತ್ತೇವೆ. ದೇವರು ದೃಷ್ಠಿಸುವ ರೀತಿಯಲ್ಲಿ ಒಬ್ಬ ವ್ಯಕ್ತಿಯು ತನ್ನನ್ನು ದೃಷ್ಠಿಸಿಕೊಳ್ಳುವುದಾದರೆ, ಅವನನ್ನು ದಿಗ್ಭ್ರಮೆಗೊಳಿಸು ವಂಥಾದ್ದು ಅವನ ಶರೀರ ಸಂಬಂಧವಾದ ಅಸಹ್ಯಕರ ಪಾಪವಲ್ಲ. ಅದು ಯೇಸುಕ್ರಿಸ್ತನನ್ನು ಸದಾ ವಿರೋಧಿಸುವ ಅತ್ಯಂತ ಕೆಟ್ಟದಾದ ಅವನ ಹೃದಯದ ಅಹಂ ಸ್ವಭಾವವೇ. ಯೇಸು ಕ್ರಿಸ್ತನ ಬೆಳಕಿನಲ್ಲಿ ತನ್ನನ್ನು ತಾನು ದೃಷ್ಠಿಸಿ ಕೊಂಡಾಗ ಲಜ್ಜೆ , ಭೀತಿಯ ನಡುಕ, ಹತಾಶೆಯನ್ನುಂಟು ಮಾಡುವ ಪಾಪ ಪ್ರಜ್ಞೆಯು ಅವನ ಹೃದಯಕ್ಕೆ ನಾಟುತ್ತದೆ.

ಇಂಥಾ ಪರಿತ್ಯಜನದ ಪ್ರಶ್ನೆಯನ್ನು ನೀನು ಮುಖಾಮುಖಿಯಾಗಿಯಾಗಿ ಎದುರಿಸ ಬೇಕೆಂದಿದ್ದರೆ, ಬಿಕ್ಕಟ್ಟುಗಳಲ್ಲಿ ಸಾಗಿ ಹೋಗಲು ನಿರ್ಧರಿಸು. ನಿನ್ನ ಸರ್ವವನ್ನು ತ್ಯಜಿಸಿ ಆತನಿಗೊಪ್ಪಿಸಿ ಬಿಡು, ಆಗ ದೇವರು ತಾನು ನಿನ್ನಿಂದ ಏನು ಬಯಸುವನೋ ಅದಕ್ಕಾಗಿ ನಿನ್ನನ್ನು ಪೂರ್ಣ ಯೋಗ್ಯ ನನ್ನಾಗಿ ಮಾಡುತ್ತಾನೆ.

# ದೂರ ಸರಿಯುವಿಯೋ ಅಥವಾ ಯೇಸುವಿನ ಜೊತೆಯಾಗಿ ನಡೆಯುವಿಯೋ?

**''ನೀವು ಸಹ ಹೋಗಬೇಕೆಂದಿದ್ದೀರಾ'' – (ಯೋಹಾನ 6:67)**

ಇದೊಂದು ಮರ್ಮಭೇದಕ ಪ್ರಶ್ನೆ. ನಮ್ಮ ಸ್ವಾಮಿಯ ವಾಕ್ಯಗಳು, ಆತನು ಬಹು ಯಥಾರ್ಥ ವಾಗಿ ನುಡಿದಾಗ ನಮ್ಮ ಹೃದಯದಾಳಕ್ಕೆ ಇಳಿದುಬಿಡುತ್ತವೆ. ಯೇಸು ಸ್ವಾಮಿಯು ಯಾರೆಂಬುದನ್ನು ನಾವು ಬಲ್ಲೆವು, ಆದಾಗ್ಯೂ ''ನೀವು ಸಹ ಹೋಗಬೇಕೆಂದಿದ್ದೀರಾ?'' ಎಂದು ಆತನು ನುಡಿಯುತ್ತಿದ್ದಾನೆ. ನಾವು ಮಾತ್ರ ಆತನಿಗಾಗಿ ಎಲ್ಲಾ ಸಮಯದಲ್ಲಿಯೂ ಸಾಹಸ ಮಾಡುವ ಮನೋಭಾವವನ್ನು ಬೆಳೆಸಿಕೊಳ್ಳಬೇಕು.

''ಅಂದಿನಿಂದ ಆತನ ಶಿಷ್ಯರಲ್ಲಿ ಅನೇಕರು ಹಿಂಜರಿದು ಆತನ ಕೂಡ ಸಂಚಾರ ಮಾಡುವದನ್ನು ಬಿಟ್ಟರು'' (ಯೋಹಾನ 6:66) ಅವರು ಯೇಸುಸ್ವಾಮಿಯ ಜೊತೆಯಲ್ಲಿ ನಡೆದಾಡುವುದನ್ನು ಬಿಟ್ಟರು, ಅವರೇನೋ ಪಾಪವೆಸಗುವ ಕಡೆಗೆ ಹೊರಟು ಹೋಗಲಿಲ್ಲ ನಿಜ, ಆದರೆ ಯೇಸುಸ್ವಾಮಿಯಿಂದ ಹಿಂದಕ್ಕೆ ಸರಿದು ಹೋಗಿಬಿಟ್ಟರು. ಯೇಸುಕ್ರಿಸ್ತನ ಸೇವೆಗಾಗಿ ಅನೇಕರು ತಮ್ಮ ಜೀವಿತವನ್ನು ವ್ಯಯಿಸುತ್ತಿರುವವರಾದರೂ ಅವರು ಆತನ ಜೊತೆಯಾಗಿ, ಸೇವೆ ಮಾಡಲು ಸಂಚಾರ ಮಾಡುತ್ತಿಲ್ಲ. ಯೇಸುಕ್ರಿಸ್ತನೊಂದಿಗೆ ನಾವು ಒಂದಾಗಿರಬೇಕೆನ್ನುವ ಒಂದೇ ವಿಷಯವನ್ನು ದೇವರು ಯಾವಾಗಲೂ ದೃಢಪಡಿಸಿ ಕೊಳ್ಳುತ್ತಿರುವನು. ನಮ್ಮ ಶುದ್ಧೀಕರಣದ ನಂತರ ಆತ್ಮೀಯ ಜೀವನದ ಶಿಕ್ಷಣವು ಇದೇ ಮಾರ್ಗದಲ್ಲಿರುತ್ತದೆ. ದೇವರು ತಾನೇನು ಬಯಸುತ್ತಿರುವನೆಂಬುದರ ಬಗ್ಗೆ ಸ್ಪಷ್ಟವಾದ ಒತ್ತಾಯ ಪಡಿಸುವ ಗ್ರಹಿಕೆಯನ್ನು ನಿನಗೆ ಕೊಟ್ಟಾಗ, ನೀನು ಒಂದು ನಿರ್ದಿಷ್ಟ ಸೂತ್ರವನ್ನನು ಸರಿಸಿ ಅದರಂತೆ ಯೇಸು ಕ್ರಿಸ್ತನ ಅನ್ಯೋನ್ಯತೆಯಲ್ಲಿರಲು ಪ್ರಯತ್ನಿಸಬೇಡ, ಆದರೆ ಯೇಸುಕ್ರಿಸ್ತನ ಮೇಲೆ ಆಧಾರ ಗೊಂಡಿರುವ ಸ್ವಾಭಾವಿಕ ಸಹಜ ಜೀವಿತವನ್ನು ನೀನು ಜೀವಿಸಬೇಕು. ದೇವರ ಮಾರ್ಗವಲ್ಲದ ಬೇರೊಂದು ಮಾರ್ಗದಲ್ಲಿ ದೇವರೊಡನೆ ಜೀವಿಸಬಹುದೆಂದು ಎಂದಿಗೂ ಪ್ರಯತ್ನಿಸಕೂಡದು, ದೇವರ ಮಾರ್ಗವೆಂದರೇ ಆತನಲ್ಲಿ ಪರಿಪೂರ್ಣವಾದ ಶ್ರದ್ಧೆಯಿಡುವುದೇ. ನನಗೇನೂ ತಿಳಿಯುತ್ತಿಲ್ಲವೆನ್ನುವುದು ಖಂಡಿತವಾಗಿ ನನಗೆ ತಿಳಿದಿದೆ ಎಂಬ ಅರಿವೇ ಯೇಸುಕ್ರಿಸ್ತನೊಡನೆ ಸಹ ಸಂಚಾರ ಮಾಡುವ ಮರ್ಮ.

ತನಗೂ ಮತ್ತು ಲೋಕಕ್ಕೂ ರಕ್ಷಣೆಯನ್ನೊದಗಿಸುವವನೊಬ್ಬನನ್ನು ಪೇತ್ರನು ಯೇಸುಕ್ರಿಸ್ತನಲ್ಲಿ ಕಂಡುಕೊಂಡನು. ನಮ್ಮ ಸ್ವಾಮಿಯು ನಾವು ಆತನ ಜೊತೆಯಲ್ಲಿ ನೊಗವನ್ನು ಹೊರುವ ಸಂಗಾತಿಗಳಾಗ ಬೇಕೆಂದು ಬಯಸುತ್ತಾನೆ.

70ನೇ ವಚನದಲ್ಲಿ ಪೇತ್ರನ ಗ್ರಹಿಕೆಯ ಕೊರತೆಯನ್ನು ನೀಗಿಸಲು, ತನ್ನೊಡನೆ ಪೇತ್ರನು ಸಹ ಸಂಚಾರಿಯಾಗಿರಲು ಆರಿಸಲ್ಪಟ್ಟವನೆಂಬುದನ್ನು ಪ್ರೀತಿಯಿಂದ ಅವನಿಗೆ ತಿಳಿಸುತ್ತಿದ್ದಾನೆ. ''ನೀವೂ ಹೋಗ ಬೇಕೆಂದಿದ್ದೀರಾ?'' ಈ ಪ್ರಶ್ನೆಗೆ ನಾವೇ ಉತ್ತರ ಕೊಡಬೇಕು. ಬೇರೆ ಯಾರೂ ಅಲ್ಲ.

# ಆತನ ಸಂದೇಶದ ದೃಷ್ಟಾಂತವಾಗಿರು

**''ದೇವರ ವಾಕ್ಯವನ್ನು ಸಾರು'' - (2 ತಿಮೋಥಿ 4:2)**

ದೇವರ ಸಾಧನಗಳಾಗಿರಲೆಂದೇ ನಾವು ರಕ್ಷಿಸಲ್ಪಟ್ಟವರಲ್ಲ. ದೇವರ ಪುತ್ರರೂ, ಪುತ್ರಿಯರೂ ಆಗಿರಲೆಂದು ರಕ್ಷಿಸಲ್ಪಟ್ಟಿರುತ್ತೇವೆ. ದೇವರ ಸುವಾರ್ತಾ ಮಾಧ್ಯಮಗಳಾಗಿರಲಿಕ್ಕಾಗಿ ನಾವು ಪರಿವರ್ತಿಸಲ್ಪಟ್ಟಿಲ್ಲ, ದೈವ ಸಂದೇಶಕರಾಗಿರುವುದಕ್ಕಾಗಿ ಪರಿವರ್ತಿಸಲ್ಪಟ್ಟಿದ್ದೇವೆ. ದೈವ ಸಂದೇಶವನ್ನು ಸಾರುವುದೇ ನಮ್ಮ ಅಸ್ತಿತ್ವದ ಭಾಗವಾಗಿರಬೇಕು. ದೇವಕುಮಾರನು ತಾನೇ ತನ್ನ ಸಂದೇಶವಾಗಿದ್ದನು, ''ನಾನು ನಿಮಗೆ ಹೇಳಿರುವ ಮಾತುಗಳೇ ಆತ್ಮವಾಗಿಯೂ ಜೀವವಾಗಿಯೂ ಅವೆ'' (ಯೋಹಾನ 6:63) ಆತನ ಶಿಷ್ಯರಾಗಿರುವ ನಮಗೆ, ನಾವು ಕೊಡುವ ಸಂದೇಶವೇ ನಮ್ಮ ಜೀವಿತದ ಪವಿತ್ರ ಸಂಸ್ಕಾರವಾಗಿರುತ್ತದೆ. ರಕ್ಷಣೆ ಹೊಂದದಿರುವ ಸಹಜ ವ್ಯಕ್ತಿಯೊಬ್ಬನು ಸುವಾರ್ತಾ ಸೇವೆಯನ್ನು ಎಷ್ಟು ಬೇಕಾದರೂ ಮಾಡುತ್ತಾನೆ. ಆದರೆ ಅವನ ಜೀವಿತವು ಅವನ ಸಂದೇಶದ ಸಾರೂಪ್ಯವಾಗುವ ಮೊದಲು, ಪಾಪ ಪ್ರಜ್ಞೆಯಿಂದ ಅವನ ಹೃದಯವು ಮುರಿಯಲ್ಪಡಬೇಕು, ಪರಿಶುದ್ಧಾತ್ಮ ನಿಂದ ಪವಿತ್ರಾತ್ಮ ಸ್ನಾನವಾಗಬೇಕು ಮತ್ತು ದೇವರ ಉದ್ದೇಶಾರ್ಥ ಅವನು ನಲುಗಿ ನುಜ್ಜಾಗಬೇಕು.

ಸಾಕ್ಷಿಕೊಡುವುದು ಮತ್ತು ಸುವಾರ್ತೆ ಬೋಧಿಸುವುದು – ಇವೆರಡರ ಮಧ್ಯೆ ವ್ಯತ್ಯಾಸವಿದೆ. ಬೋಧಕನಾದವನು ದೇವರ ಕರೆಯುವಿಕೆಯನ್ನು ಅರಿತುಕೊಂಡವನೂ ತನ್ನ ಸರ್ವಶಕ್ತಿಯನ್ನು ಪ್ರಯೋಗಿಸಿ ದೇವರ ಸತ್ಯವನ್ನು ಘೋಷಿಸಲು ದೃಢನಿಶ್ಚಯ ಮಾಡಿದವನೂ ಆಗಿರಬೇಕು. ಪಂಚಾಶತ್ತಮದ ನಂತರ ಯೇಸುಸ್ವಾಮಿಯು ತನ್ನ ಶಿಷ್ಯರನ್ನು ರೂಪಿಸಿದಂತೆ ನಮ್ಮನ್ನು ಸಹಾ ಜೀವಿತದ ಬಗ್ಗೆ ನಮಗಿರುವ ಆಶೆ ಆದರ್ಶಗಳ ಗಡಿಯಾಚೆಗೆ ಕರೆದೊಯ್ದು ನಮ್ಮನ್ನು ಜಜ್ಜಿ ತನ್ನ ಉದ್ದೇಶಾರ್ಥವಾಗಿ ರೂಪಿಸುತ್ತಾನೆ. ಪಂಚಾಶತ್ತಮವು ಆತನ ಶಿಷ್ಯರಿಗೆ ಏನೂ ಬೋಧಿಸಲಿಲ್ಲ ; ಆದರೆ ಅವರು ಏನನ್ನು ಬೋಧಿಸಿದರೋ ಅದರಂತೆ ಅವರನ್ನು ಸಾಕಾರ ಮೂರ್ತಿಗಳನ್ನಾಗಿ ಮಾರ್ಪಡಿಸಿತು. ''ನೀವು ನನಗೆ ಸಾಕ್ಷಿಗಳಾಗಿರ ಬೇಕು''.

ನೀನು ಬೋಧಿಸುವಾಗ, ಪೂರ್ಣ ಸ್ವತಂತ್ರವಾಗಿ ಕಾರ್ಯವೆಸಗಲು ದೇವರಿಗೆ ಅನುವು ಮಾಡಿಕೊಡು. ದೇವರ ಸಂದೇಶವು ಪರರನ್ನು ಮುಕ್ತಿಗೊಳಿಸುವ ಮುಂಚೆ, ವಿಮೋಚನೆಯು ನಿನ್ನೊಳಗೆ ನಿಜವಾಗಿಯೂ ಮುಕ್ತವಾಗಿರಲಿ; ನೀನು ಬೋಧಿಸಬೇಕಾದ ವಿಷಯ ಸಂಗ್ರಹಣೆಯನ್ನು ಬಹು ಎಚ್ಚರಿಕೆಯಿಂದ ಮಾಡು, ಅನಂತರ ದಹಿಸುವ ಜ್ವಾಲೆಯಂತೆ ತನ್ನ ಮಹಿಮೆಗಾಗಿ ಬೋಧಿಸಲು ನಿನ್ನ ನುಡಿಗಳನ್ನು ದೇವರಿಗೆ ಬಿಟ್ಟುಕೊಡು.

# ದಿವ್ಯದರ್ಶನಕ್ಕೆ ವಿಧೇಯನಾಗುವಿಕೆ

**''ಪರಲೋಕದಿಂದ ನನಗೆ ಉಂಟಾದ ಆ ದರ್ಶನಕ್ಕೆ ನಾನು ಅವಿಧೇಯನಾಗದೆ...'' - (ಅ.ಕೃ. 26:19)**

ದಿವ್ಯ ದರ್ಶನವನ್ನು ನಾವು ನಿರರ್ಥಕಗೊಳಿಸಿ ಅದನ್ನು ಕಳೆದುಕೊಂಡರೆ, ಅದಕ್ಕೆ ನಾವೇ ಹೊಣೆಗಾರರು. ನಮ್ಮ ಆತ್ಮೀಕ ಜೀವಿತದಲ್ಲಿ ಉಂಟಾಗುವ ಸೋರಿಕೆಯಿಂದಲೇ ನಾವು ದಿವ್ಯ ದರ್ಶನವನ್ನು ಕಳೆದುಕೊಳ್ಳುತ್ತೇವೆ. ದೇವರಲ್ಲಿರುವ ನಮ್ಮ ನಂಬಿಕೆಯನ್ನು ನಮ್ಮ ದೈನಂದಿನ ವಿಷಯಕ್ಕೆ ಅನ್ವಯಿಸದೇ ಹೋದರೆ, ದೇವರು ಅನುಗ್ರಹಿಸಿದ ದಿವ್ಯ ದರ್ಶನವು, ನಮ್ಮ ಜೀವಿತದಲ್ಲಿ ನಿರರ್ಥಕವಾಗಿ ಕಳೆದು ಕಣ್ಮರೆಯಾಗಿ ಬಿಡುತ್ತದೆ. ಪರಲೋಕದ ಈ ದಿವ್ಯ ದರ್ಶನಕ್ಕೆ ವಿಧೇಯರಾಗುವ ಒಂದೇ ಮಾರ್ಗವೆಂದರೆ, ನಮ್ಮ ಸರ್ವಸ್ವವನ್ನೂ ಮತ್ತು ನಾವೆಂಬುದೆಲ್ಲವನ್ನೂ ಆತನ ಮಹಿಮೋನ್ನತಿಗಾಗಿ ಸಮರ್ಪಿಸಿಬಿಡಬೇಕು, ಇದನ್ನು ಸಾಧಿಸಬೇಕಾದರೆ, ಎಡೆಬಿಡದೆ, ದೃಢ ನಿಶ್ಚಯದಿಂದ ಆ ದಿವ್ಯ ದರ್ಶನವನ್ನು ಪದೇ ಪದೇ ಸ್ಮರಿಸುತ್ತಿರಬೇಕು. ಇದರ ಪರೀಕ್ಷೆಯೆಂದರೆ ಪ್ರತಿ ನಿಮಿಷದ ಅರವತ್ತು ಕ್ಷಣಗಳೂ, ಪ್ರತಿ ಘಂಟೆಯ ಅರವತ್ತು ನಿಮಿಷಗಳಲ್ಲಿಯೂ ಸ್ಮರಿಸುತ್ತಿರಬೇಕು, ಕೇವಲ ನಿನ್ನ ಪ್ರಾರ್ಥನಾ ಸಮಯದಲ್ಲಿ ಮಾತ್ರವಲ್ಲ, ಭಕ್ತಿ ಸಂಜೀವನ ಕೂಟಗಳಲ್ಲಿ ಮಾತ್ರವಲ್ಲ, ಸದಾಕಾಲ ಈ ಸಾಧನೆಯನ್ನು ಮಾಡುತ್ತಿರಬೇಕು.

''ತಡವಾದರೂ ಅದಕ್ಕೆ ಕಾದಿರು'' (ಹಬಕ್ಕೂಕ 2:3) ನಮ್ಮ ಸ್ವಶಕ್ತಿಯಿಂದ, ನಮ್ಮ ಸ್ವಪ್ರಯತ್ನ ಗಳಿಂದ, ದಿವ್ಯ ದರ್ಶನವನ್ನು ನಾವು ನೆರವೇರಿಸಲಾರೆವು, ಅದು ತನ್ನಷ್ಟಕ್ಕೆ ತಾನೇ ನೆರವೇರುವ ತನಕ ಅದರ ದಿವ್ಯ ಪ್ರೇರಣೆಯಲ್ಲಿ ನಾವು ಜೀವಿಸಬೇಕು. ನಾವು ತುಂಬಾ ವ್ಯಾವಹಾರಿಕರಾಗಿರುವುದರಿಂದ ದಿವ್ಯ ದರ್ಶನವನ್ನು ಮರೆತು ಬಿಡುತ್ತೇವೆ. ಪ್ರಾರಂಭದ ಪ್ರಥಮದಲ್ಲಿ ನಾವು ದಿವ್ಯದರ್ಶನವನ್ನು ನೋಡಿದರೂ ಅದರ ಸಿದ್ಧಿಗಾಗಿ ಕಾದಿರಲಿಲ್ಲ ; ವ್ಯಾವಹಾರಿಕ ಬದುಕು ಬವಣೆಗಳತ್ತ ಧಾವಿಸಿದೆವು, ಆ ದಿವ್ಯದರ್ಶನವು ನೆರವೇರಿದಾಗ ನಮ್ಮ ಕಣ್ಣುಗಳು ಅದನ್ನು ಕಾಣಲಿಲ್ಲ. ತಡ ಮಾಡುತ್ತಿರುವ ದಿವ್ಯ ದರ್ಶನಕ್ಕಾಗಿ ಕಾದಿರುವುದೇ ದೇವರಲ್ಲಿ ನಮಗಿರುವ ಶ್ರದ್ಧೆಗೆ ಸವಾಲಾಗಿದೆ. ನಮ್ಮ ಆತ್ಮದ ಕಲ್ಯಾಣವು ನಾಶವಾಗುವಷ್ಟರ ಮಟ್ಟಿಗೆ ನಾವು ಲೌಕಿಕ ಜೀವನದಲ್ಲಿ ಮಗ್ನರಾಗಿರುವುದರಿಂದ ದಿವ್ಯ ದರ್ಶನದ ನೆರವೇರಿಕೆಗಳನ್ನು ಕಳೆದುಕೊಳ್ಳುತ್ತೇವೆ.

ದೇವರಿಂದ ಬಂದೆರಗುವ ಚಂಡ ಮಾರುತಗಳನ್ನು ಎಚ್ಚರದಿಂದ ಗಮನಿಸಿರಿ. ಚಂಡಮಾರುತ ಗಳಲ್ಲಿರುವ ಸುಳಿಗಾಳಿಗಳಲ್ಲಿಯೇ ದೇವರು ತನ್ನ ಭಕ್ತರನ್ನು ಬಿತ್ತುವನು. ನೀನೊಂದು ಬರಿದಾದ ಬೀಜ ಕೋಶವೆಂದು ತೋರಿಸಲು ಉಪಕ್ರಮಿಸುತ್ತಿರುವಿಯೋ ? ನಿನಗಾದ ದಿವ್ಯ ದರ್ಶನದ ಪ್ರೇರಣಾ ಬೆಳಕಿನಲ್ಲಿ ಜೀವಿಸುತ್ತಿರುವಿಯೋ ಇಲ್ಲವೋ ಎಂಬುದರ ಮೇಲೆ ಅದು ಆಧಾರಗೊಂಡಿದೆ. ದೇವರು ನಿನ್ನನ್ನು ಬಿರುಗಾಳಿ ಯಲ್ಲಿ ಚೆಲ್ಲಿ ಹೊರಗೆಸೆದು ಬಿಡಲಿ; ಆದರೆ ಆತನು ಹಾಗೆ ಮಾಡುವ ಮುಂಚೆ ನೀನಾಗಿ ಹೊರಟು ಹೋಗಲೆತ್ನಿಸಬೇಡ. ಬೀಜವನ್ನು ಬಿತ್ತುವುದಕ್ಕೆ ನಿನ್ನದೇ ಆದ ಸ್ವಂತ ಸ್ಥಳವನ್ನು ನೀನೇ ಆರಿಸಿಕೊಂಡರೆ ಅಲ್ಲಿ ನೀನು ಮೊಳಕೆಯೊಡೆಯದೆ, ಕೇವಲ ಬಂಜೆ ಬೀಜಕೋಶವೆಂದು ರುಜುವಾತು ಪಡಿಸಿಬಿಡುತ್ತಿ. ದೇವರು ತನಗಿಷ್ಟ ಬಂದ ಸ್ಥಳದಲ್ಲಿ , ತನಗಿಷ್ಟವಾದ ಋತುಮಾನಗಳಲ್ಲಿ ನಿನ್ನನ್ನು ಬಿತ್ತಿದರೆ, ನೀನು ಮೊಳಕೆಯೊಡೆದು, ಬೆಳೆದು, ಬಹುಫಲವನ್ನು ನೀಡುವೆ (ಯೋಹಾನ 15:8)

ದೈವ ದರ್ಶನದ ಬೆಳಕಿನಲ್ಲಿ ಹೆಜ್ಜೆ ಇಟ್ಟು ಮುಂದೆ ಸಾಗುವ ಅಭ್ಯಾಸಗೈವದೇ ಅತ್ಯಂತ ಅವಶ್ಯ ವಾದದ್ದು. ''ಆತನು ಬೆಳಕಿನಲ್ಲಿರುವಂತೆಯೇ ನಾವೂ ಬೆಳಕಿನಲ್ಲಿ ನಡೆದರೆ'' (ಯೋಹಾನ 1:7).

# ಸಂಪೂರ್ಣ ಶರಣಾಗತಿ

**''ಪೇತ್ರನು ಆತನಿಗೆ - ಇಗೋ ನಾವು ಎಲ್ಲಾ ಬಿಟ್ಟುಬಿಟ್ಟು ನಿನ್ನನ್ನು ಹಿಂಬಾಲಿಸಿದ್ದೇವೆ'' -(ಮಾರ್ಕ 10:28)**

ಯೇಸುಸ್ವಾಮಿಯು ಖಂಡಿತವಾದ ಪ್ರತ್ಯುತ್ತರವನ್ನೀಯುತ್ತಿದ್ದಾನೆ. ಎಲ್ಲಾ ತ್ಯಾಗಗಳು, ಅವು ಕೇವಲ ತನಗಾಗಿ ಮಾತ್ರವೇ ಹೊರತು ಇಂಥಾ ತ್ಯಾಗದಿಂದ ಶಿಷ್ಯರಿಗೇನು ದೊರೆಯುತ್ತದೆಂಬುದಕ್ಕಾಗಿ ಅಲ್ಲ . ''ಯಾವನು ನನ್ನ ನಿಮಿತ್ತವೂ ಸುವಾರ್ತೆಯ ನಿಮಿತ್ತವೂ ........ಬಿಟ್ಟು ಬಿಟ್ಟಿರುವನೋ'' (ಮಾರ್ಕ 10:29) ವ್ಯವಹಾರಿಕ ಮನೋದೃಷ್ಟಿಯಿಂದ ಮಾಡುವ ತ್ಯಾಗದ ಬಗ್ಗೆ ಎಚ್ಚರದಿಂದಿರ್ರಿ. 'ನಾನು ಪಾಪದಿಂದ ಬಿಡುಗಡೆ ಹೊಂದಬೇಕಾಗಿರುವುದರಿಂದ ನನ್ನನ್ನು ದೇವರಿಗೆ ತ್ಯಾಗ ಪೂರ್ವಕವಾಗಿ ಸಮರ್ಪಿಸಿಕೊಳ್ಳುವೆನು ಮತ್ತು ''ನಾನು ಪರಿಶುದ್ಧನಾಗಬೇಕಾಗಿರುವುದರಿಂದ ನನ್ನನ್ನು ಸಮರ್ಪಿಸಿಕೊಳ್ಳುವೆನು'' ಅವೆಲ್ಲವೂ ದೇವರೊಂದಿಗೆ ಯೋಗ್ಯವಾಗಿರುವುದರಿಂದುಂಟಾಗುವ ಫಲಗಳು, ಆದರೆ ಅಂಥಾ ಮನೋಭಾವವು ಕ್ರೈಸ್ತತ್ವದ ನಿಜ ಸ್ವಭಾವಕ್ಕೆ ತಕ್ಕುದಾದುದಲ್ಲ. ತ್ಯಾಗವು ಬೇರೆಯಾವುದೋ ಒಂದು ಕಾರಣಕ್ಕಾಗಿ ಅಲ್ಲವೇ ಅಲ್ಲ. ನಾವೆಷ್ಟರ ಮಟ್ಟಿಗೆ ವ್ಯವಹಾರ ಭಾವವುಳ್ಳವರಾಗಿರುವೆವೆಂದರೆ, ನಾವು ದೇವರಿಂದ ಏನನ್ನಾದರೂ ಪಡೆಯಲು ಆತನ ಬಳಿಗೆ ಹೋಗುತ್ತೇವೆಯಲ್ಲದೆ ಆತನನ್ನು ಪಡೆಯವುದಕ್ಕಲ್ಲ. ನಾವು ಹೀಗೆ ಹೇಳಬಹುದು ''ಬೇಡ ದೇವರೇ, ಬೇಡ ಸ್ವಾಮೀ, ನೀನು ನನಗೆ ಬೇಡ, ನಾನು ನಾನೇ ಆಗಿರುವುದೇ ನನಗೆ ಬೇಕಾಗಿದೆ; ನಾನು ಶುದ್ಧನಾಗಿರುವುದು ಬೇಕಾಗಿದೆ, ನಿನ್ನ ಮತ್ತು ಪವಿತ್ರಾತ್ಮನಿಂದ ನಾನು ತುಂಬಿಸಲ್ಪಡುವುದೂ ನನಗೆ ಬೇಕಾಗಿದೆ. ನಿನ್ನ ಪ್ರದರ್ಶನಾಲಯದಲ್ಲಿ ಆಕರ್ಷಣೀಯವಾಗಿ ಪ್ರದರ್ಶಿಸಲ್ಪಡುವುದು ನನಗೆ ಬೇಕಾಗಿದೆ. ಆ ಮೂಲಕ ದೇವರು ಏನೆಲ್ಲವನ್ನೂ ನನಗೆ ಮಾಡಿದ್ದಾನೆ ನೋಡಿರಿ ಎಂದು ನಾನು ಹೇಳಬಹುದು ಎಂಬುದನ್ನು ಮಾತ್ರ ನಾನು ಬಯಸುತ್ತೇನೆ ''. ದೇವರಿಂದ ಬಹಳಷ್ಟನ್ನು ಪ್ರತಿಫಲವಾಗಿ ಹೊಂದಿಕೊಳ್ಳುವ ಆಶೆಯಿಂದ ಅಲ್ಪಸ್ವಲ್ಪವನ್ನು ನಾವು ತ್ಯಜಿಸುವುದರಲ್ಲಿ ಪರಿಶುದ್ಧತೆಯಾಗಲೀ ಪವಿತ್ರಾತ್ಮನ ಸ್ಫೂರ್ತಿ ಯಾಗಲೀ ಅಂಥಾ ತ್ಯಾಗದಲ್ಲಿ ಇರುವುದಿಲ್ಲ. ಅದು ಕೀಳಾದ ದುಃಖಕರವಾದ ವ್ಯಾಪಾರ ಮನೋಭಾವದ ಸ್ವ-ಆಸಕ್ತಿಯಾಗಿದೆ. ನಾವು ಸ್ವರ್ಗವನ್ನು ಸಂಪಾದಿಸುತ್ತೇವೆ, ಪಾಪವಿಮೋಚನೆಯನ್ನೂ ಹೊಂದುತ್ತೇವೆ, ದೈವ ಉಪಯೋ ಗಾರ್ಥಿಯಾಗುವುದು ಮುಂತಾದವುಗಳು ನೀನೆಸಗುವ ನಿಜವಾದ ತ್ಯಾಗದಲ್ಲಿ ಎಂದಿಗೂ ಗಣನೆಗೆಬಾರವು. ಯೇಸುಕ್ರಿಸ್ತನಿಗಾಗಿ ನಿನ್ನ ಏಕಮಾತ್ರ ವೈಯಕ್ತಿಕವಾದ ಪ್ರಥಮ ಆಯ್ಕೆ ಮಾಡುವುದೇ ಯಥಾರ್ಥವಾದ ಪರಿತ್ಯಾಗವೆನಿಸುತ್ತದೆ.

ನಮ್ಮ ಲೌಕಿಕ ಜೀವನದ, ನಮ್ಮ ಸ್ವಾಭಾವಿಕ ಸಂಬಂಧಗಳಲ್ಲಿ ಸಂಪೂರ್ಣವಾಗಿ ನಾವು ಮಗ್ನರಾಗಿರುವಾಗ ಯೇಸುಕ್ರಿಸ್ತನೆಲ್ಲಿರುವನು? ನಮ್ಮಲ್ಲಿ ಅನೇಕರು ಆತನನ್ನು ತೊರೆದು ಬಿಟ್ಟು - ''ಹೌದು, ನನ್ನ ಸ್ವಾಮೀ, ನಿನ್ನ ಕರೆಯನ್ನು ಕೇಳಿಸಿಕೊಂಡಿರುವೆನು. ಆದರೆ ನೀನು ಕರೆದ ದಾರಿಯಲ್ಲಿ ನಾನು ಬರಲಾರೆ, ಯಾಕೆಂದರೆ ನನ್ನ ತಾಯಿಗೆ ನನ್ನ ಅಗತ್ಯವಿದೆ. ನನ್ನನ್ನಾಧಾರ ಮಾಡಿಕೊಂಡಿರುವ ನನ್ನ ಪತ್ನಿ, ನನ್ನ ಸ್ವಆಸಕ್ತಿಗಳು, ಸ್ವಾಮೀ ಇನ್ನು ಮುಂದಕ್ಕೆ ನಾನು ಸಾಗಲಾರೆ'', ಹಾಗಿದ್ದರೆ ಯೇಸುಸ್ವಾಮಿಯು ಹೇಳುವನು - ನೀನು ನನ್ನ ಶಿಷ್ಯನಾಗಲಾರೆ'' - (ಲೂಕ 14.26-33).

ನಮ್ಮ ಸ್ವಾಭಾವಿಕ ಶ್ರದ್ಧೆಗಳ ಕುತ್ತಿಗೆಯ ಮೇಲೆ, ನಮ್ಮ ಶ್ರದ್ಧಾ ಶಕ್ತಿಗಳನ್ನು ಮೀರಿ ಮುಂದೆ ಸಾಗುವುದೇ ನಿಜವಾದ ಪರಿತ್ಯಾಗದ ಪರೀಕ್ಷೆ. ನೀನು ಅವೆಲ್ಲವುಗಳನ್ನು ಮೀರಿ ಮುಂದೆ ಸಾಗಬೇಕು. ನಿನ್ನ ಪರಿತ್ಯಾಗದಿಂದ ಗಾಯಗೊಂಡವರನ್ನು ದೇವರ ಸ್ವಂತ ತ್ಯಾಗವು ಆವರಿಸಿಕೊಳ್ಳುತ್ತದೆ. ದೇವರಿಗಾಗಿ ತ್ಯಾಗ ಮಾಡಿಕೊಳ್ಳುವುದರಲ್ಲಿ ಹಿಂದೆ ಬೀಳಬೇಡ. ನಮ್ಮಲ್ಲಿ ಅನೇಕರು ದಿವ್ಯ ದರ್ಶನಗಳಲ್ಲಿ ಮಾತ್ರ ಪರಿತ್ಯಾಗವೇನೆಂಬುದನ್ನು ಬಲ್ಲವರಾಗಿದ್ದಾರಷ್ಟೆ ! ಅವರೆಂದೂ ಅದನ್ನು ಅನುಭವಿಸಿಲ್ಲ.

# ದೇವರ ಮಹಾತ್ಯಾಗ

**''ದೇವರು ಲೋಕದ ಮೇಲೆ ಎಷ್ಟೋ ಪ್ರೀತಿಯನ್ನಿಟ್ಟು ತನ್ನ ಒಬ್ಬನೇ ಮಗನನ್ನು ಕೊಟ್ಟನು'' - (ಯೋಹಾನ 3:16)**

ರಕ್ಷಣೆಯೆಂಬುದು ಕೇವಲ ಪಾಪದಿಂದ ವಿಮೋಚಿಸಲ್ಪಡುವುದಲ್ಲ, ಪರಿಶುದ್ಧತೆಯ ವೈಯಕ್ತಿಕ ಅನುಭವವೂ ಅಲ್ಲ; ದೇವರಿಂದುಂಟಾಗುವ ಈ ರಕ್ಷಣಾ ಕಾರ್ಯವು ನನ್ನ ಮೇಲೆ ನನಗಿರುವ ನ್ಯಾಯವಾದ ಹಕ್ಕುಗಳಿಂದ ನನ್ನನ್ನು ಬಿಡುಗಡೆಮಾಡಿ, ''ಬರಿದಾದ ನನ್ನನ್ನು ತನ್ನೊಂದಿಗೆ ಸಂಪೂರ್ಣವಾಗಿ ಐಕ್ಯ ಮಾಡಿಕೊಳ್ಳುತ್ತದೆ. ಪರೀಕ್ಷಾತ್ಮಕವಾದ ನನ್ನ ಬುದ್ಧಿಗೆ ರಕ್ಷಣೆಯೆಂಬುದು ನನ್ನನ್ನು ಪಾಪದಿಂದ ಬಿಡುಗಡೆ ಮಾಡಿ, ವೈಯಕ್ತಿಕ ಪರಿಶುದ್ಧತೆಯನ್ನು ಪಡೆದುಕೊಳ್ಳುವ ದಾರಿಯಂತೆ ತೋರುತ್ತದೆ. ಆದರೆ ರಕ್ಷಣೆಯು ಅದಕ್ಕಿಂತಲೂ ಬಹು ಅಮೋಘವಾದದ್ದು, ರಕ್ಷಣೆಯೆಂದರೆ ದೇವರ ಆತ್ಮನು ನನ್ನನ್ನು ದೇವರ ಸ್ವಂತ ವ್ಯಕ್ತಿತ್ವ ದೊಳಗಡೆಗೆ ಐಕ್ಯತೆಗೊಳಿಸುತ್ತಾನೆ, ಆಗ ನನಗಿಂತಲೂ ಬಹು ಹಿರಿದಾದ ಅನಂತತೆಯ ಒಡನಾಟದಲ್ಲಿ , ರೋಮಾಂಚನಗೊಂಡು ಪುಳಕಿತನಾಗುವೆನು. ದೇವರಿಗೆ ಸಂಪೂರ್ಣವಾಗಿ ಸಮರ್ಪಿಸಿ ಕೊಂಡಿರುವ ತ್ಯಾಗದಲ್ಲಿ ನಾನು ಬಂಧಿಸಲ್ಪಟ್ಟಿರುತ್ತೇನೆ.

ನಾವು ಪರಿಶುದ್ಧತೆಯನ್ನು, ರಕ್ಷಣೆಯನ್ನೂ ಬೋಧಿಸಲು ಕರೆಯಲ್ಪಟ್ಟಿರುವೆವೆಂದು ಹೇಳಿದರೆ ನಮ್ಮ ಪಕ್ಕದಲ್ಲಿಯೇ ಬೀಸುತ್ತಿರುವ ಸುಳಿಗಾಳಿಗೆ ಸಿಕ್ಕಿಬೀಳುತ್ತೇವೆ. ಯೇಸುಕ್ರಿಸ್ತನನ್ನು ಪ್ರಸಿದ್ಧಿ ಪಡಿಸಿ ಸಾರಲು ನಾವು ಕರೆಯಲ್ಪಟ್ಟಿದ್ದೇವೆ. ಆತನು ನಮ್ಮನ್ನು ಪಾಪದಿಂದ ವಿಮೋಚಿಸುವುದೂ ನಮ್ಮನ್ನು ಶುದ್ಧಿ ಮಾಡುವ ವಾಸ್ತವಿಕತೆಯೂ, ದೇವರು ಮಾಡಿರುವ ಅತ್ಯಂತಾಶ್ಚರ್ಯಕರವಾದ ಮಹಾತ್ಯಾಗದ ಫಲವಾಗಿದೆ.

ತ್ಯಾಗವು ತಾನು ಮಾಡಿರುವ ತ್ಯಾಗದ ಸ್ವಂತ ಪ್ರಯಾಸವನ್ನೆಂದಿಗೂ ನಮ್ಮ ಜಾಗೃತ ಪ್ರಜ್ಞೆಯ ಅರಿವಿಗೆ ತರುವುದಿಲ್ಲ. - ಯಾಕೆಂದರೆ ನಮ್ಮ ಸಮಗ್ರ ಜೀವಿತವು ಮೇಲಕ್ಕೆತ್ತಲ್ಪಟ್ಟು , ನಾವು ಯಾರಿಗಾಗಿ ತ್ಯಾಗ ಮಾಡುವೆವೋ, ಆ ಅನಂತನಲ್ಲಿ ನಮ್ಮನ್ನು ಒಂದಾಗಿಸಿ ಬಿಡುತ್ತದೆ. ಈ ಮಹಾತ್ಯಾಗದ ಬಗ್ಗೆ ನಿನಗೇನೂ ತಿಳಿದಿರದಿದ್ದರೆ ಅದರ ಬಗ್ಗೆ ಮಾತನಾಡುವಾಗ ಎಚ್ಚರದಿಂದಿರಬೇಕು. ಯೋಹಾನ 3:16 ರಲ್ಲಿ ಹೇಳಿರುವುದನ್ನು ನೀನು ಸಂಪೂರ್ಣವಾಗಿ, ಗ್ರಹಿಸುವವರೆಗೆ ಈ ಮಹಾತ್ಯಾಗವು ನಿನಗರ್ಥವಾಗುವುದೇ ಇಲ್ಲ. ದೇವರು ತಾನೇ ಸಂಪೂರ್ಣವಾಗಿ ತನ್ನನ್ನೇ ನಮಗಾಗಿ ಅರ್ಪಿಸಿಕೊಂಡಿರುತ್ತಾನೆ. ನಾವೆಸಗುವ ತ್ಯಾಗದಲ್ಲಿ ದೇವರು ಹೇಗೆ ತನ್ನನ್ನು ತಾನು ನಮಗೆ ಅರ್ಪಿಸಿಕೊಟ್ಟನೋ, ಹಾಗೆಯೇ ನಾವೂ, ಆತನಿಗೆ ನಮ್ಮನ್ನು ತ್ಯಾಗ ಪೂರ್ವಕವಾಗಿ ಒಪ್ಪಿಸಿಕೊಡಬೇಕು. ಇದರಲ್ಲಿ ಯಾವುದೇ ಲೆಕ್ಕಾಚಾರ ಸಲ್ಲದು. ಇಂಥಾ ತ್ಯಾಗದಿಂದುಂಟಾಗುವ ಪರಿಣಾಮಗಳೆಂದಿಗೂ ನಮ್ಮ ದೃಷ್ಟಿಗೆ ಗೋಚರಿಸಲಾರವು. ಯಾಕೆಂದರೆ ನಮ್ಮ ಜೀವಿತವು ಮೇಲಕ್ಕೆತ್ತಲ್ಪಟ್ಟು ಆತನಲ್ಲಿ ಲೀನವಾಗಿ ಹೋಗಿರುತ್ತದೆ.

# ವಿಧೇಯತೆ

**''ನೀವು ಯಾವನಿಗೆ ದಾಸರಂತೆ ವಿಧೇಯರಾಗುತ್ತೇವೆಂದು'' - (ರೋಮಾ 6:16)**

ನನ್ನನ್ನಾಳುವ ಶಕ್ತಿಯಾವುದೆಂದು ನಾನು ಪರೀಕ್ಷೆ ಮಾಡಿಕೊಳ್ಳುವ ಮೊದಲು ಅಂಥಾ ಆಳ್ವಿಕೆಗೆ ಒಳಗಾಗಿರುವುದಕ್ಕಾಗಿ ನಾನೇ ಹೊಣೆಗಾರನೆಂಬುವ ಅಪ್ರಿಯ ಸತ್ಯವನ್ನು ನಾನು ಅರಿಯಬೇಕು. ಯಾಕೆಂದರೆ ಅಂಥ ಶಕ್ತಿಗೆ ನಾನಾಗಿಯೇ ನನ್ನನ್ನು ಒಳಪಡಿಸಿ ಕೊಂಡಿದ್ದೇನೆ. ನನಗೆ ನಾನೇ ದಾಸನಾಗಿದ್ದರೆ ಅದಕ್ಕೆ ಕಾರಣ ಹಿಂದೆ ಎಂದೋ ಒಂದು ಸಮಯದಲ್ಲಿ , ಯಾವುದೋ ಒಂದು ಸನ್ನಿವೇಶದಲ್ಲಿ , ನನ್ನನ್ನು ನಾನೇ ನನಗೆ ಒಳಪಡಿಸಿ ಬಿಟ್ಟಿರುತ್ತೇನೆ, ಮತ್ತು ಅದಕ್ಕಾಗಿ ನನ್ನನ್ನೇ ದೂಷಿಸಬೇಕು. ಅದೇ ರೀತಿಯಲ್ಲಿ , ಒಂದು ವೇಳೆ ನಾನು ದೇವರಿಗೆ ವಿಧೇಯನಾಗಿದ್ದುದ್ದೇಯಾದರೇ, ನನ್ನ ಜೀವಿತದ ಎಲ್ಲಿಯೋ ಒಂದು ಹಂತದಲ್ಲಿ ದೇವರಿಗೆ ನನ್ನನ್ನು ಒಳಪಡಿಸಿಕೊಂಡಿರುತ್ತೇನೆ ಮತ್ತು ದೇವರಿಗೆ ದಾಸನಾಗಿ ಬಿಟ್ಟಿರುತ್ತೇನೆ.

ಒಂದು ಚಿಕ್ಕಮಗುವು ಪ್ರಾರಂಭದಲ್ಲಿಯೇ ಸ್ವಾರ್ಥಪರತೆಗೆ ಒಳಗಾಗಿದ್ದರೆ, ಮುಂದೆ ಆ ಮಗುವು ಬೆಳೆದು ದೊಡ್ಡವನಾದಾಗ ಭೂಮಿಯ ಮೇಲೆ ಅತ್ಯಂತ ದಬ್ಬಾಳಿಕೆಯ ನಿರಂಕುಶ ಸ್ವಾರ್ಥಪರತೆಗೆ ಅವನು ಗುಲಾಮನಾಗಿರುವುದನ್ನು ನೀನು ಕಾಣಬಹುದು. ಹೀಗೆ ಒಳಪಡುವುದರಿಂದ ಹುಟ್ಟಿದ ಸ್ವಭಾವ ವನ್ನು ನಾಶ ಮಾಡಬಲ್ಲ , ಇಲ್ಲವೇ ಛೇದಿಸ ಬಲ್ಲ ಶಕ್ತಿಯು ಯಾವ ಮಾನವನಲ್ಲೂ ಇಲ್ಲ. ಉದಾಹರಣೆ ಗಾಗಿ ಇಂದ್ರೀಯ ತೃಷ್ಣೆ (ತೃಷ್ಣೆ ಎಂದರೆ ಈಗಿಂದೀಗಲೇ ಅದು ಬೇಕು, ಎನ್ನುವ ತೀವ್ರಾಸಕ್ತಿ - ಅದು ಶಾರೀರಿಕ ತೃಷ್ಣೆಯಾಗಿರಬಹುದು, ಮಾನಸಿಕ ತೃಷ್ಣೆಯಾಗಿರಬಹುದು) ಅಂಥಾ ಭೋಗದ ತೀವ್ರಾಸಕ್ತಿಯ ಸ್ವಭಾವ ಗಳಲ್ಲಿ ಯಾವುದಾದರೂ ಒಂದಕ್ಕೆ ನೀನು ಕ್ಷಣಕಾಲ ಒಳಪಟ್ಟಿದ್ದೇಯಾದರೇ - ಹಾಗೆ ಸಂಯಮ ರಹಿತ ನಾಗಿ ಒಳಪಟ್ಟಿದ್ದಕ್ಕೆ, ನಿನ್ನನ್ನು ನೀನು ಹಗೆ ಮಾಡಿಕೊಂಡಿರಬಹುದಾದರೂ - ನೀನು ಮಾತ್ರ ಯಾವ ತೃಷ್ಣೆಗೆ ಒಳಪಡಿಸಿ ಕೊಂಡಿರುವೆಯೋ ಅದಕ್ಕೆ ನೀನು ಜೀತದಾಳಾಗಿಬಿಟ್ಟಿರುವೆ. ಅದರಿಂದ ನಿನ್ನನ್ನು ಬಿಡುಗಡೆ ಮಾಡಿಸಲು ಯಾವ ಮಾನವ ಶಕ್ತಿಗೂ ಸಾಧ್ಯವಿಲ್ಲ, ಆದರೆ ಪಾಪ ವಿಮೋಚನಾ ಕಾರ್ಯಕ್ಕೆ ಮಾತ್ರ ಅಂಥಾ ಶಕ್ತಿಯಿದೆ, ಯಾವ ಶಕ್ತಿಯು ನಿನ್ನನ್ನು ಜೀತದಾಳನ್ನಾಗಿ ಮಾಡಿ, ನಿನ್ನನ್ನು ಆಳುತ್ತಿದೆಯೋ ಅಂಥಾ ಶಕ್ತಿಯನ್ನು ಮುರಿದು ಛಿದ್ರಗೊಳಿಸುವ ಶಕ್ತಿಗೆ, ಅಂದರೆ ಯೇಸುಕ್ರಿಸ್ತನಿಗೆ, ಬಹು ನಮ್ರತೆಯಿಂದ ಸಂಪೂರ್ಣ ವಿನೀತ ನಾಗಿ ನಿನ್ನನ್ನು ಒಳಪಡಿಸಿಕೊಳ್ಳಬೇಕು. ಆಗಲೇ ಅಂಥಾ ''ಮನ ಮುರಿದವರನ್ನು ಬಿಡಿಸಿ ಕಳುಹಿಸುವದಕ್ಕೂ ...... ಶುಭ ವರ್ತಮಾನವನ್ನು ಸಾರುವುದಕ್ಕೂ ಅಭಿಷೇಕಿಸಿದನು'' ಎಂದು ಯೇಸುಕ್ರಿಸ್ತನ ವಿಷಯವಾಗಿ ಲೂಕ 4:18, ಯೇಶಾ 61:1 ರಲ್ಲಿ ನೋಡುತ್ತೇವೆ.

''ಓಹ್, ಅದೇನು ಮಹಾ! ನನಗಿಷ್ಟಬಂದಾಗ ಆ ಚಟವನ್ನು ನಾನೇ ಬಿಟ್ಟು ಕೊಂಡುವೆನು'' ಎಂದೆನ್ನುವ ಹಾಸ್ಯಾಸ್ಪದವಾದ ಅಲ್ಪಮಟ್ಟದ ಹೇಳಿಕೆಗಳನ್ನು ಹೇಳಬಹುದು. ಅದು ನಿನಗೆ ಸಾಧ್ಯವಿಲ್ಲ , ಆ ಚಟವು ನಿನ್ನನ್ನು ಬಲವಾಗಿ ಸಂಪೂರ್ಣವಾಗಿ ಆಳುತ್ತದೆ, ಯಾಕೆಂದರೆ ಆ ಚಟಕ್ಕೆ ನೀನಾಗಿಯೇ ನಿನ್ನನ್ನು ಒಳಪಡಿಸಿಕೊಂಡಿರುವುದರಿಂದಲೇ. ''ದೇವರು ನಿನ್ನ ಎಲ್ಲಾ ಸಂಕೋಲೆಗಳನ್ನು ಕಡಿದು ಹಾಕುವನು'' ಎಂದು ಸರಳವಾಗಿ ನೀನು ರಾಗ ಹಾಡುತ್ತಿರಬಹುದು, ಆದರೆ ಅದೇ ಸಮಯದಲ್ಲಿ ನಿನಗೆ ನೀನೇ ದಾಸ ನಾಗಿರುವ ಕ್ಷುದ್ರ ಜೀವಿತವನ್ನು ನೀನು ಬಾಳುತ್ತಲೇ ಇರುವಿ. ಯೇಸುಕ್ರಿಸ್ತನಿಗೆ ಒಳಪಡುವುದರಿಂದ ಮಾನವ ಜೀವಿತದಲ್ಲಿ ಅವರ ದಾಸತ್ವವು, ಅದು ಎಂಥಾ ರೂಪದಲ್ಲಿಯಾದರೂ ಇರಲಿ, ಆತನು ಆ ದಾಸತ್ವವನ್ನು ಮುರಿದು ಬಿಡುಗಡೆ ಮಾಡುತ್ತಾನೆ.

# ಭಯಭ್ರಾಂತಿಯ ಶಿಕ್ಷಣ

**''ಆತನ ಹಿಂದೆ ಬರುವವರು ಭಯ ಪಡುವವರಾದರು'' - (ಮಾರ್ಕ 10:32)**

ಯೇಸುಕ್ರಿಸ್ತನ ಸಹವಾಸದಲ್ಲಿರುವ ನಮ್ಮ ಜೀವಿತದ ಆರಂಭದಲ್ಲಿ ಆತನ ಬಗ್ಗೆ ನಮಗೆ ಏನೆಲ್ಲಾ ತಿಳಿದುಕೊಳ್ಳಬಹುದಾಗಿದ್ದಿತೋ, ಅದೆಲ್ಲವು ತಿಳಿದಿದೆಯೆನ್ನುವ ಭರವಸೆ ನಮಗಿತ್ತು, ನಮ್ಮ ಸೊತ್ತನೆಲ್ಲಾ ಮಾರಿ ಬಡವರಿಗೆ ಹಂಚಿ ಆತನ ಚೇತನಾ ಭರಿತ ಅನನ್ಯ ಪ್ರೀತಿಯೊಳಗೆ ಜಿಗಿದು ಆತನನ್ನು ಹಿಂಬಾಲಿಸಿದ ಅಪೂರ್ವ ಆನಂದವು ಅಂದು ನಮ್ಮದಾಗಿತ್ತು, ಆದರೆ ಇಂದು ಆ ಭರವಸೆಗಳನ್ನು ನಾವೇ ಪೂರ್ಣವಾಗಿ ನೆಚ್ಚುವಂತಿಲ್ಲ. ಯೇಸುಸ್ವಾಮಿಯು ನಮ್ಮ ಮುಂದೆ ಮುಂದೆ ನಡೆದು ಸಾಗುತ್ತಿರುವನು ಮತ್ತು ಆತನು ಇಂದು ವಿಚಿತ್ರವಾಗಿ ಕಾಣಿಸುತ್ತಿದ್ದಾನೆ. ''ಯೇಸು ಅವರ ಮುಂದೆ ಮುಂದೆ ಹೋಗುತ್ತಿದ್ದನು. ಅವರು ನೋಡಿ ಬೆರಗಾದರು''

ಯೆರೂಸಲೇಮಿಗೆ ಅಭಿಮುಖನಾಗಿ ತೆರಳುತ್ತಿರುವ ಯೇಸು ಸ್ವಾಮಿಯ ವ್ಯಕ್ತಿತ್ವವು ಮತ್ತು ಆತನ ಮುಖದಲ್ಲಿ ಎದ್ದು ಕಾಣುತ್ತಿರುವ ಅಸಮಾನ್ಯ ವೈಶಿಷ್ಠತೆಯು, ತನ್ನ ಶಿಷ್ಯರ ಹೃದಯಾಂತರಾಳವನ್ನು ಭೀತಿಯಿಂದ ತಲ್ಲಣಗೊಳಿಸಿ, ನಡುಕವನ್ನುಂಟುಮಾಡಿ, ಅವರ ಆತ್ಮೀಕ ಜೀವನವನ್ನೆಲ್ಲಾ ಏದುಸಿರು ಬಿಡುವಂತೆ ಮಾಡುತ್ತದೆ. ಕಿಡಿಕಾರುವ ಕಿಡಿಗಲ್ಲಿನಂತೆ (ಚಕಮುಕಿ ಕಲ್ಲಿನಂತೆ) ಅಪರೂಪದ ಮುಖಭಾವ ವನ್ನು ಹೊಂದಿರುವ ಈ ವ್ಯಕ್ತಿಯು ಮಹಾ ದೃಢ ನಿರ್ಧಾರದಿಂದ ನನಗಿಂತಲೂ ಮುಂದೆ ಸಾಗಿ ಹೋಗುತ್ತಾ ಇರುವುದು ಭೀತಿಯುಂಟು ಮಾಡುತ್ತಿದೆ. ಇನ್ನು ಮೇಲೆ ಆತನು ಸಂತೈಸುವಾತನೂ ಜೊತೆಗಾರನೂ ಆದ ಕಾಮ್ರೇಡ್ ಆಗಿ ಉಳಿದೇ ಇಲ್ಲ, ಯಾವುದೋ ಒಂದು ವಿಷಯವನ್ನು ಮುಂದಿಟ್ಟುಕೊಂಡು ಆತನು ಮುಂದವರಿಯುತ್ತಿರುವನು, ಆತನು ಹೋಗುತ್ತಿರುವದೆಲ್ಲಿಗೆ ಎಂಬುದರ ಎಳ್ಳಷ್ಟು ಸೂಚನೆ ನನಗಿಲ್ಲ. ಆತನ ಗಮ್ಯವು ಸೋಜಿಗವೆನಿಸು ವಷ್ಟು ದೂರದಲ್ಲಿದೆ.

ಯೇಸುಕ್ರಿಸ್ತನು, ಮಾನವನ ಪ್ರತಿಯೊಂದು ಪಾಪವನ್ನು ಮತ್ತು ಮಾನವನು ಅನುಭವಿಸಬಹು ದಾದ ಪ್ರತಿಯೊಂದು ದುಃಖವನ್ನು, ಬುಡಮಟ್ಟ ಶೋಧಿಸಿ ಅದನ್ನು ಸಂಪೂರ್ಣವಾಗಿ ಗ್ರಹಿಸ ಬೇಕಾಗಿತ್ತು. ಆತನ ಆ ಗುರಿಯೇ ಇಂದು ಆತನನ್ನು ಅಷ್ಟು ವಿಚಿತ್ರ ವಿಲಕ್ಷಣತೆಗಳಿಂದಿರುವಂತೆ ಮಾಡಿದೆ. ಇದೇ ದೃಷ್ಟಿಕೋನದಲ್ಲಿ ನಾವು ಆತನನ್ನು ದಿಟ್ಟಿಸಿದರೆ ಆತನನ್ನು ನಾವು ಅರಿಯಲಾರೆವು. ಆತನ ಜೀವಿತದ ಗುಣ ಲಕ್ಷಣಗಳನ್ನು ನಾವು ಗುರುತಿಸಲಾರೆವು, ಇನ್ನು ಮುಂದೆ ಆತನನ್ನು ಹೇಗೆ ಹಿಂಬಾಲಿಸಬೇಕೆನ್ನುವುದೂ ಈಗ ನಮಗೆ ತಿಳಿಯುತ್ತಿಲ್ಲ. ಈಗಲಾತನು ನಮ್ಮ ಮುಂದೆ ವಿಚಿತ್ರ ವಿಲಕ್ಷಣ ನಾಯಕನಾಗಿರುವನು. ಆತನೊಡನೆ ನಮ್ಮ ಸಾಂಗತ್ಯವು ಮತ್ತು ಸಹವಾಸ ಈಗ ಇಲ್ಲ.

ಭಯಭ್ರಾಂತಿಯ ಶಿಕ್ಷಣವು ಶಿಷ್ಯನ ಜೀವಿತದಲ್ಲಿ ಅತ್ಯಗತ್ಯವಾಗಿದೆ. ಇಂಥ ಶಿಕ್ಷಣದಿಂದ ತಪ್ಪಿ ಹೋಗುವ ಅಪಾಯವೆಲ್ಲಿದೆಯೆಂದರೆ ನಾವು ಯೇಸುಸ್ವಾಮಿಯವರಿಗೆ ವಿಧೇಯರಾಗಿದ್ದ ಹಿಂದಿನ ದಿನ ಗಳನ್ನು ಜ್ಞಾಪಿಸಿ ಕೊಳ್ಳುತ್ತಾ, ಹಿಂದೆ ನಾವು ಮಾಡಿದ ತ್ಯಾಗಗಳನ್ನು ಸ್ಮರಿಸುತ್ತಾ ಅವುಗಳನ್ನೇ ಆಧಾರವಾಗಿಟ್ಟು ಕೊಂಡು ಈಗ ದೇವರಲ್ಲಿ ಆಸಕ್ತಿಯುಳ್ಳವರಾಗಿರಲು ವ್ಯರ್ಥ ಪ್ರಯತ್ನಗಳನ್ನು ಮಾಡುತ್ತಾ ಇರುವದು. (ಯೇಶಾಯ 50:10-11 ನೊಡಿರಿ), ಮತ್ತು ದೇವರಲ್ಲಿ ಆಸಕ್ತಿಯನ್ನು ಹೊಂದುವ ಸಲುವಾಗಿ ನಾವೇ ಹಚ್ಚಿದ ಬೆಂಕಿ ಕೊಳ್ಳಿಗಳ ಬೆಳಕಿನಲ್ಲಿಯೇ ನಡೆಯುವುದು. ಭಯ ಭ್ರಾಂತಿಯ ಕಾರ್ಗತ್ತಲು ಉಂಟಾದಾಗ ಅದು ಕಳೆಯುವವರೆಗೂ ಸಹಿಸಿ ಕೊಂಡಿರಬೇಕು, ಯಾಕೆಂದರೆ ಆ ಮೂಲಕವೇ ಯೇಸು ಕ್ರಿಸ್ತನನ್ನು ನಿಜವಾಗಿಯೂ ಹಿಂಬಾಲಿಸುವ ಶಕ್ತಿಯೊದಗುತ್ತದೆ. ಆ ಹಿಂಬಾಲಿಸುವಿಕೆಯು ವರ್ಣಿಸಲಸಾಧ್ಯವಾದ ಅಭೂತಾನಂದವನ್ನು ನಿನ್ನಲ್ಲಿ ಉಂಟು ಮಾಡುತ್ತದೆ.

# ಒಡೆಯನು ತೀರ್ಪುಕೊಡುವನು

**''ಕ್ರಿಸ್ತನ ನ್ಯಾಯಾಸನದ ಮುಂದೆ ಯಥಾಸ್ಥಿತಿಯಲ್ಲಿ ಕಾಣಿಸಿಕೊಳ್ಳಬೇಕು'' - (2 ಕೊರಿಂಥ 5:10)**

ಅಪೋಸ್ತಲನಾದ ಪೌಲನು ಹೇಳುತ್ತಿರುವುದು – ಬೋಧಕರಾಗಲೀ ಬೇರೆ ಜನರೇ ಆಗಲೀ, ಎಲ್ಲರೂ ''ಕ್ರಿಸ್ತನ ನ್ಯಾಯಾಸನದ ಮುಂದೆ ಯಥಾ ಸ್ಥಿತಿಯಲ್ಲಿ ಕಾಣಿಸಿ ಕೊಳ್ಳಬೇಕು.'' ಆದರೆ ಇಲ್ಲಿಯೇ ಈ ಜೀವಿತ ಕಾಲದಲ್ಲಿಯೇ ಯೇಸುಕ್ರಿಸ್ತನ ಪರಿಶುದ್ಧ ಬೆಳಕಿನಲ್ಲಿ ಪರೀಕ್ಷಿಸಿಕೊಂಡು ಬದುಕಿದ್ದಾದರೆ, ದೇವರು ನಿನ್ನಲ್ಲಿ ಮಾಡಿರುವ ಕಾರ್ಯದ ಫಲವಾಗಿ ಅಂತಿಮ ನ್ಯಾಯ ನಿರ್ಣಯ ದಿನವು ನಿನ್ನಲ್ಲಿ ಆನಂದವನ್ನೇ ಉಂಟು ಮಾಡುತ್ತದೆ. ಕ್ರಿಸ್ತನ ನ್ಯಾಯಾಸನವನ್ನು ನಿನ್ನ ಕಣ್ಣು ಮುಂದೆಯೇ ಇರಿಸಿಕೊಂಡಿರು. ಮತ್ತು ನೀನು ಅರಿತಿರುವ ಯೇಸುಕ್ರಿಸ್ತನ ಪರಿಶುದ್ಧ ಬೆಳಕಿನಲ್ಲಿ ಬಾಳನ್ನು ಸಾಗಿಸಬೇಕು. ನೀನೊಬ್ಬ ಉತ್ತಮ ದೇವಭಕ್ತನಾಗಿದ್ದರೂ, ಬೇರೊಬ್ಬನ ಬಗ್ಗೆ ನೀನು ತಾಳುತ್ತಿರುವ ತಪ್ಪಾದ ಮನೋಭಾವದ ಕಾರಣದಿಂದ ನಿನ್ನಲ್ಲಿ ದುರಾತ್ಮವು ಪ್ರವೇಶಿಸಿ ನೆಲೆಗೊಳ್ಳುತ್ತದೆ. ಹಾಗೆ ಆ ಬೇರೊಬ್ಬನ ವಿಷಯದಲ್ಲಿ ನೀನು ಮಾಡುವ ಒಂದೇ ಒಂದು ತೀರ್ಪು ಸಹಾ, ನಿನ್ನೊಳಗೆ ನರಕವನ್ನೇ ನಿರ್ಮಿಸುತ್ತದೆ. ತಪ್ಪಾದ ಆ ಮನೋಭಾವವನ್ನು ಕೂಡಲೇ ಹೊರಗೆಳೆದು ತಂದು ಕ್ರಿಸ್ತನ ಬೆಳಕಿನಲ್ಲಿ ಹರಡಿ, 'ನನ್ನ ದೇವರೇ ನಾನು ಇಲ್ಲಿಯೇ ತಪ್ಪಿತಸ್ಥನೂ ದೋಷಿಯೂ ಆಗಿರುವೆನು' ಎಂದು ಹೇಳು. ಹಾಗೆ ನೀನು ಮಾಡದಿದ್ದರೆ ಕಾಠಿಣ್ಯವು ನಿನ್ನ ಹೃದಯಗೊಳಗೆ ಬಂದು ಸೇರುತ್ತದೆ. ಪಾಪವು ವಿಧಿಸುವ ದಂಡ–ನಿನ್ನನ್ನು ಪಾಪದಲ್ಲಿ ನೆಲೆಯೂರಿಸಿ ಸ್ಥಿರ ಪಡಿಸುತ್ತದೆ. ಅದರ ಫಲವನ್ನು ಪೂರ್ಣವಾಗಿ ನಿನಗೆ ಹಿಂತಿರುಗಿಸಿ ನಿನ್ನನ್ನು ಬಲಿ ತೆಗೆದುಕೊಳ್ಳುತ್ತದೆ. ನೀನು ಮಾಡುತ್ತಿರುವ ಕೆಲವು ಕಾರ್ಯಗಳನ್ನು ನೀನು ಮಾಡದಿರುವಂತೆ, ನಿನ್ನ ಪ್ರಯತ್ನಗಳಾಗಲೀ, ಪ್ರಾರ್ಥನೆಗಳಾಗಲೀ ನಿನ್ನನ್ನು ಬಲ ಪಡಿಸಲಾರವು, ಪಾಪವು ವಿಧಿಸುವ ದಂಡವೆಂದರೆ – ಕ್ರಮೇಣವಾಗಿ ಮಾಡಬಾರದ ವುಗಳನ್ನು ಮಾಡುತ್ತಾ, ಅವುಗಳೊಡನೆ ಹೊಂದಾಣಿಕೆಯನ್ನು ಮಾಡಿಕೊಂಡು ಬಿಡುವಿ ಮತ್ತು ಅವುಗಳನ್ನು ಪಾಪವೆಂದು ನೀನು ತಿಳಿಯುವುದೇ ಇಲ್ಲ. ಹೀಗೆ ನಿನ್ನಲ್ಲಿ ಅಂತರ್ಗತವಾದ ಪಾಪ ವನ್ನು ಮತ್ತು ಪಾಪ ಫಲದ ಪರಿಣಾಮಗಳನ್ನು, ಪರಿಶುದ್ಧಾತ್ಮನ ಒಳ ಪ್ರವೇಶದಿಂದಲ್ಲದೇ ಬೇರಾವ ಶಕ್ತಿಗೂ ಅವುಗಳನ್ನು ತಡೆಹಿಡಿಯಲು ಇಲ್ಲವೇ ಪರಿವರ್ತಿಸಲು ಸಾಧ್ಯವಿಲ್ಲ.

''ಆತನು ಬೆಳಕಿನಲ್ಲಿರುವಂತೆಯೇ ನಾವು ಬೆಳಕಿನಲ್ಲಿ ನಡೆದರೆ '' (1 ಯೊಹಾ 1:7). ನಮ್ಮಲ್ಲಿ ಕೆಲವರಿಗೆ ಬೆಳಕಿನಲ್ಲಿ ನಡೆಯುವುದೆಂದರೇ, ಇನ್ನೊಬ್ಬರು ಹೇಗೆ ನಡೆದು ಕೊಳ್ಳಬೇಕೆಂದು ನಾವೇ ನಿಗದಿ ಪಡಿಸಿದ ಪ್ರಮಾಣ ಮಟ್ಟದಲ್ಲಿಯೇ ನಾವು ನಡೆಯುವುದೇ 'ಬೆಳಕಿನಲ್ಲಿ ನಡೆಯುವುದೆಂದು' ತಿಳಿದಿರುತ್ತಾರೆ. ಎಚ್ಚರವಿರಲಿ, ಈ ಕಾಲದ ಅತ್ಯಂತ ಮರಣಕರವಾದ ಪರಿಸಾಯ ಧರ್ಮ – ಅದು ಡಾಂಬಿಕತೆ ಅಲ್ಲ, ಆದರದು ಪ್ರಜ್ಞಾ ಹೀನವಾದ ಅವಾಸ್ತವಿಕತೆಯಿಂದ ತುಂಬಿದ ಜೀವನ.

# ಸೇವಕನ ಪ್ರಥಮ ಗುರಿ

**''ಕರ್ತನಿಗೆ ಮೆಚ್ಚುವವರಾಗಿರ ಬೇಕೆಂಬದೇ ನಮ್ಮ ಗುರಿಯಾಗಿದೆ'' - (2 ಕೊರಿಂಥ 5:9)**

''ಅದೇ ನಮ್ಮ ಗುರಿಯಾಗಿದೆ'' ಪ್ರಧಾನ ಮಹದಾಕಾಂಕ್ಷೆಯನ್ನು ಸದಾಕಾಲ ನಮ್ಮೆದುರಿಗಿಟ್ಟು ಕೊಂಡು ಸಾಧಿಸುವುದು ಬಹು ಪ್ರಯಾಸಕರವಾದದ್ದು. ಅಂದರೆ ಈ ಶ್ರೇಷ್ಠವಾದ ಗುರಿಯನ್ನು ಉನ್ನತ ಆದರ್ಶವೆಂದು ತಿಳಿದು ವರ್ಷವಿಡೀ ಅದನ್ನು ಭದ್ರವಾಗಿ ಹಿಡಿದಿಟ್ಟುಕೊಳ್ಳಬೇಕು, ಆದರದು ಯೇಸು ವಿಗಾಗಿ ಆತ್ಮಗಳನ್ನು ಗೆಲ್ಲುವ, ಇಲ್ಲವೆ ಸಭೆಗಳನ್ನು ಸ್ಥಾಪಿಸುವ ಅಥವಾ ಭಕ್ತಿ ಸಂಜೀವನವನ್ನುಂಟು ಮಾಡುವ, ಮಹದಾಶೆಯಿಂದ ಕೂಡಿರದೆ, ಕೇವಲ ಆತನಿಗೆ ಮೆಚ್ಚುವವರಾಗಿರಬೇಕಂಬ ಒಂದೇ ಮಹತ್ವಾಕಾಂಕ್ಷೆಯನ್ನು ಪ್ರಥಮ ವಾಗಿರಿಸಿಕೊಂಡಿರಬೇಕು. ಈ ದಿಸೆಯಲ್ಲಿ ಸಾಗುವಾಗ ಆತ್ಮೀಕ ಅನುಭವದ ಕೊರತೆಯು ನಮ್ಮನ್ನು ವೈಫಲ್ಯದೆಡೆಗೆ ಕೊಂಡೊಯ್ಯುವುದಿಲ್ಲ ಆದರೆ ಈ ಆದರ್ಶದ ಯೋಗ್ಯರೀತಿಯ ನೆರವೇರಿಕೆಗೆ ಅಗತ್ಯವಾದ ಪರಿಶ್ರಮ ಮತ್ತು ಏಕಾಗ್ರತೆಯ ಕೊರತೆಯೇ ವಿಫಲತೆಯೆಡೆಗೆ ನಮ್ಮನ್ನು ನಡಿಸುತ್ತದೆ. ದೇವರ ಮುಂದೆ ವಾರಕ್ಕೊಮ್ಮೆಯಾದರೂ ನಿನ್ನ ಪರಿಸ್ಥಿತಿಗಳ ಪರಿಶೋಧನೆ ಮಾಡಿ, ದೇವರು ಬಯಸಿದ ಮಟ್ಟದಲ್ಲಿ ನಿನ್ನ ಜೀವಿತವನ್ನಿರಿಸಿ ಕೊಂಡಿರುವಿಯೋ ಇಲ್ಲವೋ ಎಂಬುದನ್ನು ಗಮನಿಸಬೇಕು. ಪೌಲನು ಒಬ್ಬ ಸಂಗೀತಕಾರ ನಂತಿದ್ದು ತನ್ನ ಗುರುವಿನ ಮೆಚ್ಚುಗೆಯ ದೃಷ್ಟಿಯನ್ನು ಗುರುತಿಸಬಲ್ಲನೇ ಹೊರತು, ಅವನು ಶ್ರೋತೃಗಳ ಚಪ್ಪಾಳೆಯ ಮೆಚ್ಚಗೆಗೆ ಲಕ್ಷ್ಯಗೊಡುವುದಿಲ್ಲ.

ಕರ್ತನಿಗೆ ಮೆಚ್ಚುವವರಾಗಿರಬೇಕೆಂಬ, ಪ್ರಧಾನ ಕಾಂಕ್ಷೆಯಿಂದ ಅತ್ಯಲ್ಪ ಮಟ್ಟದಲ್ಲಿ ಸಹಾ ಪಲ್ಲಟ ಗೊಂಡ ಎಲ್ಲಾ ಆಕಾಂಕ್ಷೆಗಳು ನಾವು ದೈವ ಭ್ರಷ್ಟರಾಗುವುದರಲ್ಲಿ ಅಂತ್ಯಗೊಳ್ಳುತ್ತವೆ. ಈ ಮಹಾತ್ವಾಕಾಂಕ್ಷೆಯು ನಿನ್ನನ್ನೆಲ್ಲಿ ಕರೆದೊಯ್ಯುತ್ತಿದೆ ಎಂಬುದನ್ನು ವಿವೇಚಿಸಿದರೆ, ಆಗ ಯೇಸುಕ್ರಿಸ್ತ ನೆಡೆಗೆ ಮುಖಮಾಡಿ ಕೊಂಡು ಜೀವಿಸುವುದು ಯಾಕೆ ಅಷ್ಟು ಅಗತ್ಯವೆಂಬುದನ್ನು ನೀನೇ ಕಾಣುವಿ. ಪೌಲನು ಹೇಳಿರುವನು ''ನಾನೇ ಅಯೋಗ್ಯನೆನಿಸಿ ಕೊಂಡೇನೋ ಎಂಬ ಭಯದಿಂದ ನನ್ನ ಮೈಯನ್ನು ಜಜ್ಜಿ ಸ್ವಾಧೀನ ಪಡಿಸಿ ಕೊಳ್ಳುತ್ತೇನೆ.'' (1ನೇ ಕೊರಿಂಥ 9:27)

ಸಕಲವನ್ನು ಪ್ರಧಾನ ಮಹದಾಕಾಂಕ್ಷೆಗೆ ಸಂಬಂಧಿಸಿರುವಂತೆ ನಿರೂಪಿಸುವ ನೈಪುಣ್ಯತೆಯನ್ನು ಸಂಪಾದಿಸಿಕೊಳ್ಳಬೇಕು ಮತ್ತು ಈ ಸಂಪಾದಿಸುವಿಕೆಗೆ ವಿರಾಮವನ್ನೀಯದೆ ಸದಾ ಸಾಧಿಸಬೇಕು. ಏಕಾಂತತೆಯಲ್ಲಿ ನಾನು ಏನಾಗಿರುವೆನೊ ಸಾರ್ವಜನಿಕವಾಗಿಯೂ ಅದೇ ಯೋಗ್ಯತೆಯುಳ್ಳವ ನಾಗಿರಬೇಕು. ನಿನ್ನ ಮಹದಾಕಾಂಕ್ಷೆಯು ಆತನನ್ನು ಮೆಚ್ಚಿಸುವುದಕ್ಕೂ ಆತನಿಗೆ ಯೋಗ್ಯನಾಗಿ ಕಾಣುವಂತೆಯೂ ಮಾಡುತ್ತಿದೆಯೋ ಅಥವಾ ಅದೆಷ್ಟು ಘನತೆಯುಳ್ಳದ್ದಾಗಿದ್ದರೂ ಅಲ್ಪವೆನಿಸುವ ಮಟ್ಟಿಗೆ ಕಡಿಮೆಯುಳ್ಳದ್ದಾಗಿಯೋ ?

# ಇಷ್ಟರ ಮಟ್ಟಿಗೆ ಎಚ್ಚರಗೊಳ್ಳಬಲ್ಲೆನೋ ?

**''ದೇವರ ಭಯದಿಂದ ಕೂಡಿದವರಾಗಿ ಪವಿತ್ರತ್ವವನ್ನು ಸಿದ್ಧಿಗೆ ತರುವುದಕ್ಕೆ'' - (2 ಕೊರಿಂಥ 7:1)**

''ಈ ವಾಗ್ದಾನಗಳು ನಮಗಿರುವುದರಿಂದ .....''. ದೇವರ ವಾಗ್ದಾನಗಳು ನನ್ನ ಜೀವಿತದಲ್ಲಿ ನೆರವೇರಲೆಂದು ಕೋರಿಕೊಳ್ಳುತ್ತೇನೆ ಮತ್ತು ಹಾಗೆ ಮಾಡುವುದು ಸರಿಯಾದದ್ದೇ ಹೌದು, ಆದರೆ ಇದು ಕೇವಲ ಮಾನವೀಯ ದೃಷ್ಟಿಯ ಬಯಕೆ. ಇದನ್ನೇ ದೈವೀಕ ದೃಷ್ಠಿಯಲ್ಲಿ ವಿವೇಚಿಸಿದರೆ, ಈ ವಾಗ್ದಾನಗಳ ಮೂಲಕ ದೇವರು ನಮ್ಮಿಂದ ಬಯಸುತ್ತಿರುವದೇನೆಂಬುದನ್ನು ಗುರುತಿಸುತ್ತೇವೆ. ಉದಾಹರಣಾರ್ಥವಾಗಿ ''ಪವಿತ್ರಾತ್ಮನಿಗೆ ನಿಮ್ಮ ದೇಹವು ಗರ್ಭಗುಡಿಯಾಗಿ ದೆಂಬುದು ನಿಮಗೆ ತಿಳಿಯದೋ ?'' (1ಕೊರಿಂಥ 6:19) ನನ್ನ ದೇಹವು ಪವಿತ್ರಾತ್ಮನಿಗೆ ಆಲಯವಾಗಿರುವದೆಂಬುದನ್ನು ನಾನು ಅರಿತಿರುವೆನೋ ಇಲ್ಲವೇ ದೇವರು ಚೆಲ್ಲುವ ಬೆಳಕನ್ನು ಸಹಿಸಲಾರದ ರೂಢಿಯೊಂದು ನನ್ನ ದೇಹದಲ್ಲಿರುವುದೋ? ಪವಿತ್ರಾತ್ಮನಿಂದ ಶುದ್ಧೀಕರಣವನ್ನು ಹೊಂದಿದಾಗ ದೇವಕುಮಾರನು ನನ್ನಲ್ಲಿ ರೂಪುಗೊಂಡನು ಮತ್ತು ''ನನ್ನನ್ನು ಪಾಪದಿಂದ ಬೇರ್ಪಡಿಸಿ ಕ್ರಿಸ್ತನ ಸಾರೂಪ್ಯ ಹೊಂದುವಂತೆ ತನ್ನ ದೃಷ್ಟಿಯಲ್ಲಿ ಪರಿಶುದ್ಧನನ್ನಾಗಿ ಮಾಡಿರು ವನು.'' (ಗಲಾತ್ಯ 4:19) ಹಾಗಿದ್ದರೆ, ಆತನಿಗೆ ವಿಧೇಯನಾಗುವುದರ ಮೂಲಕ ನನ್ನ ಸ್ವಾಭಾವಿಕ ಜೀವಿತ ವನ್ನು ಆತ್ಮೀಕ ಜೀವಿತವನ್ನಾಗಿ ನಾನು ರೂಪಾಂತರಗೊಳಿಸಬೇಕಾಗಿದೆ. ನಮ್ಮ ಜೀವನದ ಅತೀ ಚಿಕ್ಕಪುಟ್ಟ ವಿಷಯಗಳು ಮೊದಲುಗೊಂಡು ಎಲ್ಲವನ್ನು ದೇವರು ನಿರ್ದೇಶಿಸುತ್ತಾನೆ. ಅಂಥಾ ಜೀವಿತದ ಮಾರ್ಗದಲ್ಲಿ ನೀನು ಸಾಗುತ್ತಿರುವಾಗ ದೇವರು ಪಾಪಾಪರಾಧದ ಪ್ರಜ್ಞೆಯನ್ನು ನಿನ್ನಲ್ಲಿ ಹುಟ್ಟಿಸಿದರೆ ''ನೀನು ಮನುಷ್ಯರ ಆಲೋಚನೆಯನ್ನು ವಿಚಾರಿಸದೆ'' (ಗಲಾತ್ಯ 1:16) ತಕ್ಷಣವೇ ನಿನ್ನನ್ನು ನೀನು ಶುದ್ಧೀಕರಿಸಿಕೊಳ್ಳಬೇಕು. ಹೀಗೆ ನಿನ್ನ ದೈನಂದಿನ ಜೀವನ ಕ್ರಮದಲ್ಲಿ ನಿನ್ನನ್ನು ಸದಾ ಶುದ್ದಿಸಿಕೊಳ್ಳುತ್ತಲೇ ಇರಬೇಕು.

ಶರೀರಾತ್ಮಗಳೆರಡೂ ದೇವರ ಸ್ವಭಾವದಲ್ಲಿ ಸಾಮರಸ್ಯ ಹೊಂದುವ ತನಕ ನನ್ನ ಶರೀರದಲ್ಲಿಯೂ ನನ್ನ ಆತ್ಮದಲ್ಲಿಯೂ ಎಲ್ಲಾ ವಿಧದ ಕೊಳಕುತನವಳಿದು ಹೋಗುವಂತೆ ಶುದ್ಧೀಕರಿಸಿಕೊಳ್ಳಬೇಕು. ನನ್ನ ಆತ್ಮದ ಮನೋಭಾವವು ನನ್ನೊಳಗಿರುವ ದೇವಕುಮಾರನ ಜೀವಿತದಲ್ಲಿ ಪೂರ್ಣ ಹೊಂದಾಣಿಕೆ ಗೊಂಡಿದೆಯೋ ಅಥವಾ ನನ್ನ ಬುದ್ಧಿವಂತಿಕೆಯಿಂದ ಅದಕ್ಕೆದುರಾಗಿ ದಂಗೆ ಎದ್ದು ಉದ್ದಟತನದಲ್ಲಿರುವುದೋ? ಯೇಸು ಕ್ರಿಸ್ತನು ತನ್ನ ಮೇಲೆ ತನಗಿರುವ ಸ್ವಂತ ಅಧಿಕಾರದಿಂದ ಏನನ್ನು ಹೇಳದೆ, ತನ್ನ ತಂದೆಗೆ ನಿರಂತರವಾಗಿ ತನ್ನ ಆತ್ಮವನ್ನು ಒಪ್ಪಿಸಿಕೊಡುವ ನಿಟ್ಟಿನಲ್ಲಿ ತನ್ನ ಅಂತರಂಗದ ಜಾಗೃತಿಯನ್ನು ಕಾಪಾಡಿಕೊಂಡಿದ್ದನು. ಅಂಥಾ ಮನಸ್ಸು ನನ್ನಲ್ಲಿಯೂ ಇದೆಯೋ ? ದೇವರ ಆತ್ಮದೊಂದಿಗೆ ನನ್ನ ಆತ್ಮವನ್ನು ಹೊಂದಾಣಿಕೆ ಮಾಡಿಕೊಳ್ಳುವ ಹೊಣೆಗಾರಿಕೆ ನನಗಿದೆ ಮತ್ತು ಬೇರಾವುದೇ ವಿಷಯಕ್ಕೆ ಗಮನ ಕೊಡದೆ ದೇವರ ಚಿತ್ತಕ್ಕೆ ಪೂರ್ಣ ಮೀಸಲಾಗಿರಿಸಿಕೊಂಡು ತಾನು ವಾಸಿಸುವಂಥಾ ಸ್ಥಾನಕ್ಕೆ ಯೇಸುಸ್ವಾಮಿಯು ಕ್ರಮೇಣವಾಗಿ ನನ್ನನ್ನು ಮೇಲಕ್ಕೆತ್ತುವನು. ದೇವರ ಭಯದಿಂದ ಕೂಡಿದವನಾಗಿ ಈ ಮಾದರಿಯ ಪರಿಶುದ್ಧತೆಯನ್ನು ಹೊಂದಲು ನಾನು ಪೂರ್ಣ ಸಿದ್ಧತೆ ಮಾಡಿಕೊಳ್ಳುತ್ತಿರುವನೋ ? ದೈನಂದಿನ ನನ್ನ ಜೀವಿತವನ್ನು ಗಮನಿಸಿದ ಬೇರೆ ಜನರು ದೇವರನ್ನು ಇನ್ನೂ ಹೆಚ್ಚು ಹೆಚ್ಚಾಗಿ ಅರಿತುಕೊಳ್ಳಲು ಆರಂಬಿಸಿರುವರೋ ?

ದೇವರ ವಿಷಯದಲ್ಲಿ ಜಾಗೃತಿಯನ್ನೂ , ಗಂಭೀರತೆಯನ್ನು ಕಾದುಕೋ, ಉಳಿದುದೆಲ್ಲವನ್ನು ಅವುಗಳಷ್ಟಕ್ಕೆ ಅವು ಇರಲು, ಉಲ್ಲಾಸದಿಂದ ಬಿಟ್ಟುಕೊಡು. ಅಕ್ಷರಶಃ ದೇವರನ್ನು ಪ್ರಪ್ರಥಮವಾಗಿರಿಸಿಕೋ.

# ಅಬ್ರಹಾಮನ ನಂಬಿಕೆಯ ಜೀವಿತ

**''ತಾನು ಹೋಗಬೇಕಾದ ಸ್ಥಳವು ಯಾವದೆಂದು ತಿಳಿಯದೆ ಹೊರಟನು'' - (ಇಬ್ರಿ 11:8)**

ದೇವರೊಂದಿಗೆ ಒಬ್ಬ ವ್ಯಕ್ತಿಯ ಸಂಬಂಧವು ಎಷ್ಟರ ಮಟ್ಟಿಗೆ ಅನ್ಯೋನ್ಯವಾಗಿರಬಹುದೆಂಬುದನ್ನು , ಆ ವ್ಯಕ್ತಿಯ ಜೀವಿತದಲ್ಲಾಗುವ 'ಅಗಲಿಕೆಯಲ್ಲಿ' ಕಂಡುಬಂದಿರುವುದನ್ನು ನಾವು ಹಳೇ ಒಡಂಬಡಿಕೆಯಲ್ಲಿ ನೋಡುತ್ತೇವೆ. ಅಬ್ರಹಾಮನು, ತನ್ನ ಸ್ವದೇಶದಿಂದ, ತನ್ನ ಕುಟುಂಬದಿಂದ ಬಂಧು-ಬಳಗದಿಂದ ಅಗಲಿಸಲ್ಪಡುವ ಒಂದು ಘಟನೆಯು ಅವನ ಜೀವಿತದಲ್ಲಿ ತೋರಿ ಬಂದಿದೆ. ಈ ದಿನಮಾನಗಳಲ್ಲಿ ಬೇರ್ಪಡುವಿಕೆ ಅಥವಾ ಅಗಲಿಕೆ ಎಂದರೆ, ದೇವರೊಂದಿಗೆ ಸಂಬಂಧವನ್ನು ಹೊಂದಿರದ ನಮ್ಮ ಪ್ರಿಯರನೇಕರು, ತಮ್ಮ ಜೀವಿತವನ್ನು, ವಸ್ತುಗಳನ್ನು ದೃಷ್ಟಿಸುವ ರೀತಿಯಲ್ಲಿ ನಾವು ದೃಷ್ಟಿಸದಿರುವುದರಿಂದ, ನಾವು ಅವರಿಂದ ಅಗಲಿಹೋಗಬೇಕು ಎಂಬುದೇ ಹೆಚ್ಚಾಗಿ ಅದೊಂದು ಬೌದ್ಧಿಕ ಹಾಗೂ ಮಾನಸಿಕ ಅಗಲಿಕೆಯಾಗಿರುತ್ತದೆಯಾದರೂ, ಅಂಥ ವ್ಯಕ್ತಿಗಳಿಂದ ಶಾರೀರಿಕವಾಗಿ ಸಾಮಾಜಿಕವಾಗಿ ಬೇರ್ಪಡಿಸಿಕೊಳ್ಳಬೇಕೆಂಬುದಲ್ಲ. ಇದನ್ನು ಯೇಸು ಸ್ವಾಮಿಯವರು ಲೂಕ 14:26 ರಲ್ಲಿ ಪ್ರಸ್ತಾಪಿಸಿರುವರು.

ತಾನೆಲ್ಲಿಗೆ ನಡೆಸಲ್ಪಡುತ್ತಿರುವೆನೆಂಬುದನ್ನು ನಂಬಿಕೆಯು ತಿಳಿದಿರುವುದಿಲ್ಲ. ಆದರೆ ಅದು ತನ್ನನ್ನು ಮುನ್ನಡೆಸುತ್ತಿರುವಾತನನ್ನು ಅರಿತಿರುತ್ತದೆ, ಮತ್ತು ಆತನನ್ನು ಪ್ರೀತಿಸುತ್ತಿರುತ್ತದೆ. ನಿಜವಾದ ನಂಬಿಕೆಯ ಜೀವಿತವೆಂದರೆ ಇದೇ, ಅದು ಬೌದ್ಧಿಕ ತಿಳುವಳಿಕೆಯ ಮತ್ತು ವಿವೇಚಿಸುವ ಜೀವಿತವಲ್ಲ ಆದರೆ ಅದು ತನ್ನನ್ನು 'ಮುಂದೆ ಹೊರಡು' ಎಂದು ನುಡಿದಾತನನ್ನು ಅರಿತಿರುವ ಜೀವಿತವಾಗಿದೆ. ಆ ವ್ಯಕ್ತಿಯ ಬಗ್ಗೆ ತಿಳುವಳಿಕೆ ಹೊಂದಿರುವುದೇ ನಂಬಿಕೆಯ ಮೂಲಾಧಾರ. ಇಂಥಾ ತಿಳುವಳಿಕೆ ಇಲ್ಲದಿದ್ದರೂ ದೇವರು ಮಾತ್ರ ನಮ್ಮನ್ನು ಖಂಡಿತವಾಗಿಯೂ ಯಶಸ್ವಿನೆಡೆಗೆ ನಡೆಸುವನೆಂಬ ಭಾವನೆ ಹೊಂದಿರುವುದೇ ನಮಗಿರುವ ದೊಡ್ಡ ಕಂಟಕ.

ದೇವರು ಮೆಚ್ಚುವ ಸಚ್ಚಾರಿತ್ರ್ಯವನ್ನು ಸಾಧಿಸಿ ಪಡೆಕೊಳ್ಳುವುದೇ ನಂಬಿಕೆಯ ಜೀವಿತದ ಅಂತಿಮ ಹಂತ. ಈ ಪ್ರಕ್ರಿಯೆಯಲ್ಲಿ ಸನಿಹಕ್ಕೆ ಬಂದು ದೂರ ಸರಿದು ಹೋಗುವ ಸಚ್ಚಾರಿತ್ರ್ಯದ ಅನೇಕ ರೂಪಾಂತರಗಳು ಇದ್ದೇ ಇರುತ್ತವೆ; ದೇವರನ್ನು ಬೇಡಿಕೊಂಡಾಗ, ದೇವರ ಆಶೀರ್ವಾದಗಳು ನಮ್ಮನ್ನು ಕವಿದು ಮುಚ್ಚಿರುವ ಭಾವನೆಯುಂಟಾಗುತ್ತದೆ ಮತ್ತು ತಾತ್ಕಾಲಿಕವಾಗಿ ಆ ಸಮಯದಲ್ಲಿ ಪರಿವರ್ತನೆಗೊಂಡಿರುತ್ತೇವೆ. ಆನಂತರ ನಮ್ಮ ದೈನಂದಿನ ಬದುಕು ಬಾಳಿನ ದಾರಿಗಳಿಗೆ ನಾವು ಹಿಂದಿರುಗಿದಾಗ, ಹಿಂದೆ ಆದ ಮಹಿಮಾ ಭಾವನೆಗಳು ಕ್ರಮೇಣವಾಗಿ ಮಾಯವಾಗುತ್ತವೆ. ರೆಕ್ಕೆಗಳನ್ನು ಚಾಚಿ ಎತ್ತರಕ್ಕೆ ಹಾರಿ ಬೆಟ್ಟಗಳ ತುದಿಯಲ್ಲಿ ಬಾಳಬಯಸುವ ಜೀವಿತವು ನಂಬಿಕೆಯ ಜೀವಿತವಲ್ಲ, ದೈನಂದಿನ ಜೀವಿತದಲ್ಲಿ ದೇವರ ಮೆಚ್ಚಿಕೆಯ ಸುಸಂಗತ ಬದುಕನ್ನು ಬಾಳ ಬೇಕಾಗಿದೆ. ಅಂಥಾ ಜೀವಿತವೇ ''ನಡೆದು ಬಳಲದ ಜೀವಿತ'' (ಯೆಶಾ 40:31). ಇಲ್ಲಿ ಶುದ್ಧೀಕರಣದ ಪ್ರಶ್ನೆಯಿಲ್ಲ ; ಶುದ್ಧಿಕರಣವನ್ನು ದಾಟಿ ಇನ್ನೂ ಮುಂದಕ್ಕೆ ಸಾಗಿರುವಂಥಾದೊಂದಿದೆ, ಅದು ನಂಬಿಕೆ - ಯಾವ ನಂಬಿಕೆಯು ಪರೀಕ್ಷಿಸಲ್ಪಟ್ಟದ್ದು, ಪ್ರಮಾಣೀಕರಿಸಲ್ಪಟ್ಟದ್ದೂ ಮತ್ತು ಎಲ್ಲಾ ಪರೀಕ್ಷೆಗಳಲ್ಲಿ ಜಯಶಾಲಿಯಾದದ್ದೂ ಆಗಿದೆಯೋ ಅಂಥಾ ನಂಬಿಕೆಯೇ ಅದು. ಅಬ್ರಹಾಮನು ಶುದ್ಧೀಕರಣಗೊಳಿಸಲ್ಪಟ್ಟ ವ್ಯಕ್ತಿಯಾಗಿರಲಿಲ್ಲ, ಆದರೆ ಆತನು ನಂಬಿಕೆಯ ಜೀವಿತದ ಮಾದರಿ ಆಗಿದ್ದಾನೆ. ಪರೀಕ್ಷಿಸಲ್ಪಟ್ಟು ಜಯ ಹೊಂದಿದ ಆತನ ನಂಬಿಕೆಯು, ನಿಜದೇವರಲ್ಲಿ ಆಧಾರಗೊಂಡಿತ್ತು. ''ಅಬ್ರಹಾಮನು ದೇವರನ್ನು ನಂಬಿದನು'' (ರೊಮಾ 4:3).

# ದೇವರ ಸಂಗಡ ಗೆಳೆತನ

**‘‘ನಾನು ಮಾಡಬೇಕೆಂದಿರುವ ಕಾರ್ಯವನ್ನು ಅಬ್ರಹಾಮನಿಗೆ ಮರೆಮಾಡುವದು ಸರಿಯೋ’’ - (ಆ.ಕಾ. 18:17)**

ದೇವರ ಮಿತ್ರತ್ವದ ಮಹದಾನಂದಗಳು: ಪ್ರಾರ್ಥನೆಯಲ್ಲಿ ತಲ್ಲೀನರಾಗಿರುವಾಗ ಆಗಾಗ ಉಂಟಾಗುವ ದೈವ ಪ್ರಸನ್ನತೆಯ ಆನಂದದ ಅನುಭವಗಳಿಗೆ ಹೋಲಿಸಿ ನೋಡಿದರೆ, ಆದಿಕಾಂಡ 18ನೇ ಅಧ್ಯಾಯದಲ್ಲಿ ದೇವರೊಂದಿಗಿನ ನಿಜ ಮೈತ್ರಿಯ ಮಹದಾನಂದಗಳನ್ನು ನಾವು ಅರಿಯುತ್ತೇವೆ. ಈ ಮಿತ್ರತ್ವದಲ್ಲಿ ದೇವರೊಂದಿಗೆ ಎಷ್ಟು ನಿಕಟ ಆತ್ಮೀಯತೆಯಲ್ಲಿರುವೆಯೆಂದರೆ, ನಿನ್ನ ಜೀವಿತದಲ್ಲಿ ಆತನ ‘ಚಿತ್ತವೇನೆಂಬುದನ್ನು ತಿಳಿಸು’ ಎಂದು ದೇವರನ್ನು ನೀನು ಕೇಳುವ ಅಗತ್ಯವೇ ಅಲ್ಲಿ ಇರುವುದಿಲ್ಲ , ಅಂದರೆ ನಂಬಿಕೆಯ ಶಿಕ್ಷಣದಲ್ಲಿ ನೀನು ಕೊನೆಯ ಹಂತಕ್ಕೆ ಬಂದಿರುವಿ. ದೇವರೊಂದಿಗೆ ನೀನು ಯೋಗ್ಯ ಬಾಂಧವ್ಯ ದಲ್ಲಿರುವಾಗ ನಿನ್ನ ಜೀವಿತವು ಸರ್ವಸ್ವತಂತ್ರವಾದ, ಬಿಡುಗಡೆ ಹೊಂದಿದ, ಆನಂದಮಯ ಜೀವಿತವಾಗಿರು ವುದಲ್ಲದೆ, ನೀನೇ ದೇವರ ಚಿತ್ತವಾಗಿರುವೆ. ದೇವರು ತಡೆಯದ ಹೊರತು ನಿನ್ನ ಜೀವಿತದಲ್ಲಿ ನೀನು ತೆಗೆದು ಕೊಳ್ಳುವ ನಿರ್ಧಾರಗಳೆಲ್ಲವೂ ದೇವರ ಚಿತ್ತವೇ ಆಗಿರುತ್ತವೆ. ತಪ್ಪು ನಿರ್ಧಾರಗಳನ್ನು ನೀನು ಮಾಡಿದರೆ ಅದನ್ನು ದೇವರು ಅಡ್ಡಿಪಡಿಸುವನೆಂಬ ತಿಳುವಳಿಕೆ ನಿನಗಿರುವುದರಿಂದ, ನೀನು ತೆಗೆದುಕೊಳ್ಳುವ ನಿರ್ಧಾರ ಗಳೆಲ್ಲವೂ ದೇವರೊಂದಿಗಿರುವ ನಿನ್ನ ಆನಂದಕರ ಸ್ನೇಹದ ಬೆಳಕಿನಲ್ಲಿಯೇ ನಿರ್ಧರಿಸಲ್ಪಟ್ಟಿರುತ್ತವೆ. ಒಂದೊಮ್ಮೆ ದೇವರು ತಡೆಯೊಡ್ಡಿದಾಗ ವಿವೇಚನೆಗೆ ಆಸ್ಪದ ಕೊಡದೆ, ಕೂಡಲೇ ಅಷ್ಟಕ್ಕೇ ಅದನ್ನು ನಿಲ್ಲಿಸಿಬಿಡು.

ದೇವರೊಂದಿಗಿನ ಮಿತ್ರತ್ವದ ತೊಡಕುಗಳು: ಪ್ರಾರ್ಥಿಸುತ್ತಲೇ ಇದ್ದ ಅಬ್ರಹಾಮನು ಪ್ರಾರ್ಥಿಸುವುದನ್ನೇಕೆ ನಿಲ್ಲಿಸಿದನು ? ತನ್ನ ಇಷ್ಟಾರ್ಥಗಳು ಈಡೇರುವ ತನಕ ಧೈರ್ಯದಿಂದ ದೇವರ ಮುಂದೆ ಪ್ರಾರ್ಥಿಸುವಷ್ಟರಮಟ್ಟಿಗೆ ತಾನು ಆತನ ಅನ್ಯೋನ್ಯತೆಯಲ್ಲಿಲ್ಲವೆಂಬುದು ತಿಳಿದು ಪ್ರಾರ್ಥಿಸು ವುದನ್ನು ಅಲ್ಲಿಗೇ ಒಂದು ಹಂತದಲ್ಲಿ ನಿಲ್ಲಿಸಿ ಬಿಟ್ಟನು. ದೇವರೊಂದಿಗಿರುವ ತನ್ನ ಸಂಬಂಧಗಳಲ್ಲಿ ಇನ್ನೂ ಏನೋ ಬೇಕೆನ್ನಿಸುತ್ತಿತ್ತು. ನಾವು ಸಹಾ ಪ್ರಾರ್ಥಿಸುವುದನ್ನು ನಿಲ್ಲಿಸಿಬಿಟ್ಟು ‘‘ನನಗೆ ಅರ್ಥವಾಗುತ್ತಿಲ್ಲ.ನಾನು ಪ್ರಾರ್ಥಿಸುತ್ತಿರುವುದು ದೇವರ ಚಿತ್ತದಂತಿಲ್ಲವೇನೋ’’ ಎಂದು ಹೇಳಿದರೆ, ಪ್ರಾರ್ಥನಾ ಮಾರ್ಗದಲ್ಲಿ ನೀನು ಸಾಗಬೇಕಾದ ಇನ್ನೂ ಒಂದು ಹಂತವಿರುವುದು ನಿಜವೆನಿಸುವುದು. ಯೇಸುಕ್ರಿಸ್ತನು ಹೇಗೆ ದೇವರೊಂದಿಗೆ ಒಂದಾಗಿದ್ದನೋ ಹಾಗಿರುವ ಹಂತಕ್ಕೆ ನಾವಿನ್ನೂ ತಲುಪಿಲ್ಲವೆನ್ನುವುದು ಸ್ಪಷ್ಟ ; ಆದರೆ ಯೇಸುಕ್ರಿಸ್ತನು ನಮ್ಮಿಂದ ಬಯಸುವುದೇನೆಂದರೆ ‘‘..... ನಾವು ಒಂದಾಗಿರುವ ಪ್ರಕಾರ ಅವರೂ ಒಂದಾಗಿರಬೇಕು’’. (ಯೋಹಾ 17:22) ಇತ್ತೀಚೆಗೆ ನೀನು ಮಾಡಿದ ಪ್ರಾರ್ಥನೆಯಲ್ಲಿ ನಿನ್ನ ಇಷ್ಟಾರ್ಥ ಸಿದ್ದಿಗೆ ನಿಷ್ಠನಾಗಿದ್ದೆಯೋ ಅಥವಾ ದೇವರಿಗೋ? ನಿನಗಾಗಿ ಕೆಲವು ಆತ್ಮೀಕ ವರಗಳನ್ನು ಪಡೆಯಲೆಂದೋ ಅಥವಾ ದೇವರನ್ನೇ ಹೊಂದಲೆಂದೋ ? ಆದರೆ ನೆನಪಿರಲಿ ‘‘ನೀವು ನಿಮ್ಮ ತಂದೆಯನ್ನು ಬೇಡಿಕೊಳ್ಳುವದಕ್ಕಿಂತ ಮುಂಚೆಯೆ ನಿಮಗೇನೇನು ಅಗತ್ಯವೆಂಬುದು ಆತನಿಗೆ ತಿಳಿದದೆ’’ (ಮತ್ತಾ 6:8). ನಾವು ಇನ್ನೂ ಹೆಚ್ಚು ಹೆಚ್ಚಾಗಿ ದೇವರನ್ನು ಅರಿತುಕೊಂಡು ಇನ್ನೂ ಹೆಚ್ಚಾದ ಆತ್ಮೀಯತೆಯನ್ನು ಆತನಲ್ಲಿ ಹೊಂದಿ ಕೊಳ್ಳುವುದೇ ಪ್ರಾರ್ಥನೆಯ ಮುಖ್ಯ ಉದ್ದೇಶ. ಆಗ ಮಾತ್ರ ‘‘ನೀನು ಯೆಹೋವನಲ್ಲಿ ಸಂತೋಷಿಸುವಿ ಮತ್ತು ಆತನು ನಿನ್ನ ಇಷ್ಟಾರ್ಥಗಳನ್ನು ನೆರವೇರಿಸುವನು’’. (ಕೀರ್ತ 37:4) ದೇವರನ್ನು ಪರಿಪೂರ್ಣವಾಗಿ ಅರಿತುಕೊಳ್ಳ ಲೋಸುಗವೇ ಸದಾ ಪ್ರಾರ್ಥಿಸುತ್ತಿರಬೇಕು.

# ಆತನೊಂದಿಗೆ ಗುರುತಿಸಿಕೊಂಡಿರುವಿಯೋ ಇಲ್ಲವೇ ಕೇವಲ ಆಸಕ್ತಿ ಮಾತ್ರವೋ

**''ಕ್ರಿಸ್ತನೊಂದಿಗೆ ಶಿಲುಬೆಗೆ ಹಾಕಿಸಿ ಕೊಂಡವನಾಗಿದ್ದೇನೆ'' - (ಗಲಾತ್ಯ 2:20)**

ತಪ್ಪಿಸಿ ಕೊಳ್ಳಲಸಾಧ್ಯವಾದ ಆತ್ಮೀಕ ಅಗತ್ಯತೆ, ಅಂದರೆ ಪಾಪಸ್ವಭಾವದ ಮರಣ ಶಾಸನಕ್ಕೆ ಸಹಿ ಹಾಕಬೇಕಾದ ಅಗತ್ಯತೆಯು ನಮ್ಮಲ್ಲಿ ಪ್ರತಿಯೊಬ್ಬರಿಗೂ ಇದೆ. ಪಾಪಸ್ವಭಾವವೆಂದರೆ ನನ್ನ ಮೇಲೆ ನನಗಿರುವ ನನ್ನದೇ ಆದ ಹಕ್ಕಿನ ಪ್ರತಿಪಾದನೆ; ಇದರ ವಿರುದ್ಧ ನೈತಿಕ ತೀರ್ಪನ್ನು ನೀಡಲು ನನ್ನ ಭಾವಾವೇಶದ ಎಣಿಕೆಗಳನ್ನು ಮತ್ತು ಬೌದ್ಧೀಕ ನಂಬಿಕೆಗಳನ್ನು ಒಟ್ಟುಗೂಡಿಸಿಕೊಳ್ಳಬೇಕು. ಆ ಸ್ವಭಾವದ ಬಗ್ಗೆ ಪೌಲನು, ಹೇಳುತ್ತಿರುವದು ''ನಾನು ಕ್ರಿಸ್ತನೊಂದಿಗೆ ಶಿಲುಬೆಗೆ ಹಾಕಿಸಿಕೊಂಡವನಾಗಿದ್ದೇನೆ'' ಆದರೆ ಪೌಲನು, 'ನಾನು ಯೇಸುಕ್ರಿಸ್ತನ ಅನುಕರಣೆ ಮಾಡಲು ಧೃಡ ನಿರ್ಧಾರ ಕೈಗೊಂಡಿರುವೆನು, ಇಲ್ಲವೇ ಆತನನ್ನು ಹಿಂಬಾಲಿಸಲು ಹೆಣಗುವೆನು' ಎಂದು ಹೇಳಲಿಲ್ಲ. ''ಆತನೊಂದಿಗೆ ಆತನ ಮರಣದಲ್ಲಿ ನನ್ನನ್ನು ಗುರುತಿಸಿ ಕೊಂಡಿರುತ್ತೇನೆ'' ಎಂದು ಮಾತ್ರ ಪೌಲನು ಹೇಳಿದನು. ಅಂಥಾ ಒಂದು ನೈತಿಕ ತೀರ್ಮಾನವನ್ನು ನಾನು ಮಾಡಿ, ಅದರಂತೆ ಕಾರ್ಯವೆಸಗಿದರೆ, ಆಗ ಶಿಲುಬೆಯ ಮೇಲೆ ಕ್ರಿಸ್ತನು ನನಗಾಗಿ ಏನು ಮಾಡಿದನೋ ಅದು ನನ್ನಲ್ಲಿ ಫಲ ಕೊಡುತ್ತದೆ. ಬಂಧನವಿಲ್ಲದ ಬದ್ಧತೆಯಿಂದ ನನ್ನನ್ನು ನಾನು ದೇವರಿಗೊಪ್ಪಿಸಿ ಕೊಡುವುದಾದರೆ ಯೇಸುಕ್ರಿಸ್ತನಲ್ಲಿರುವ ಪರಿಶುದ್ಧತೆಯಲ್ಲಿ ಪವಿತ್ರಾತ್ಮನು ನನಗೆ ಪಾಲು ಕೊಡುವ ಅವಕಾಶವಿರುತ್ತದೆ.

''ಇನ್ನು ಜೀವಿಸುವವನು ನಾನಲ್ಲ'' ....... ಅಲ್ಲಿ ವೈಯಕ್ತಿಕತೆ ಉಳಿದು ಕೊಂಡಿದೆಯಾದರೂ ಅದರ ಮುಖ್ಯ ಪ್ರೇರಕವಾಗಿರುವ 'ಆಳುವ ಸ್ವಭಾವವು' ಮಾತ್ರ ಅಮೂಲಾಗ್ರವಾಗಿ ಮಾರ್ಪಡಿಸಲ್ಪಟ್ಟಿರುತ್ತದೆ. ಅದೇ ನರ ಶರೀರವು ಉಳಿದು ಕೊಂಡಿರುತ್ತದೆ; ಆದರೆ ಅದರ ಮೇಲಿದ್ದ ಸೈತಾನನ ಹಕ್ಕು ನಾಶವಾಗಿರುತ್ತದೆ.

''ಈಗ ನನ್ನ ಶರೀರದಲ್ಲಿ ನಾನು ಜೀವಿಸುವುದು'' ಹೇಗೆಂದರೆ (ಗಲಾತ್ಯ 2:20) ಅದು ನಾನು ಬದುಕಲು ಬಯಸಿದ ಜೀವಿತವಲ್ಲ, ಬಾಳಲೆಂದು ಪ್ರಾರ್ಥಿಸಿದ ಜೀವಿತವೂ ಅಲ್ಲ. ಯಾವ ಜೀವಿತವನ್ನು ಮನುಷ್ಯರು ಅನುಕರಣೀಯವಾಗಿ ಹೊರಗೆ ಕಾಣಬಹುದಾಗಿದೆಯೋ ಅಂಥ ಜೀವಿತವನ್ನು ಈ ನಶ್ವರ ಶರೀರದಲ್ಲಿ ಜೀವಿಸಿ ಬದುಕಬೇಕು. ''ನಾನು ಜೀವಿಸುವುದು ಹೇಗೆಂದರೆ ದೇವಕುಮಾರನ ಮೇಲಣ ನಂಬಿಕೆಯಲ್ಲಿಯೇ''. ಆ ನಂಬಿಕೆಯು ದೇವರ ಕುಮಾರನಿಂದ ನನಗೆ ದಯಪಾಲಿಸಲ್ಪಟ್ಟ ನಂಬಿಕೆ; ಇನ್ನು ಮೇಲೆ ಅದು ನಂಬಿಕೆಯೊಳಗೆ ನಂಬಿಕೆಯಿಡುವಂಥಾದಲ್ಲ. ಅದು ಎಲ್ಲಾ ಪ್ರಜ್ಞಾಪೂರ್ವಕ ಮಿತಿಗಳನ್ನು ನೆಗೆದು ದಾಟಿದ ನಂಬಿಕೆ, ಅದು ದೇವಕುಮಾರನ ನಂಬಿಕೆಯ ತದ್ರೂಪದ ನಂಬಿಕೆಯಾಗಿರುತ್ತದೆ ಅಂಥಾ ನಂಬಿಕೆಯು ದೇವ ಕುಮಾರನಿಂದ ಮಾತ್ರ ನಮಗೆ ಕೊಡಲ್ಪಡುತ್ತದೆ.

# ಕುದಿಯುತ್ತಿರುವ ಹೃದಯ

**''ನಮ್ಮ ಹೃದಯವು ನಮ್ಮಲ್ಲಿ ಕುದಿಯಿತಲ್ಲವೇ'' – (ಲೂಕ 24:32)**

ಕುದಿಯುವ ಹೃದಯದ ಮರ್ಮವನ್ನರಿಯುವ ಅಗತ್ಯತೆ ನಮಗಿದೆ. ಇದಕ್ಕಿದ್ದಂತೆ ಯೇಸು ಸ್ವಾಮಿಯು ನಮಗೆ ಕಾಣಿಸಿಕೊಳ್ಳುತ್ತಾನೆ, ಆಗ ನಮ್ಮಲ್ಲಿ ಅಗ್ನಿ ಜ್ವಾಲೆಗಳು ಹೊತ್ತಿಸಲ್ಪಡುತ್ತವೆ. ಅದ್ಭುತ ದರ್ಶನಗಳು ನಮಗುಂಟಾಗುತ್ತವೆ, ಅಂಥಾ ಸಮಯದಲ್ಲಿಯೇ ನಾವು, ಎಂಥಾ ಸಂಗತಿಗಳ ಮೂಲಕವೂ ತೂರಿಹೋಗಬಲ್ಲ, ಕುದಿಯುವ ಹೃದಯದ ರಹಸ್ಯವನ್ನು ನಾವು ಕಾಪಾಡಿಕೊಳ್ಳದಿದ್ದರೆ, ಒಂದು ಸಾಮಾನ್ಯ ದಿನದಂದು, ಅದು ನೀರಸವಾದ ಮಂಕು ಕವಿಯಲ್ಪಟ್ಟ ಒಂದು ದಿನ, ಅದು ದೈನಂದಿನ ಜೀವನದ ಒಂದು ದಿನ, ಸಾಮಾನ್ಯ ಜನರ ಸಾಮಾನ್ಯ ದಿನಚರಿಯ ಒಂದು ದಿನವೆನ್ನಿ, ಅಂಥಾ ದಿನವೇ ಉರಿಯುವ ಹೃದಯವನ್ನು ಅದು ನಂದಿಸಿಯೇ ಬಿಡುತ್ತದೆ.

ಕ್ರೈಸ್ತರಾದ ನಮಗೆ ಬಂದೊದಗುವ ಬಹುತೇಕ ವಿಪತ್ತುಗಳಿಗೆ ನಮ್ಮ ಪಾಪವು ಕಾರಣವಲ್ಲ, ನಾವು ನಮ್ಮ ಸ್ವಂತ ಸ್ವಭಾವದ ವಿಧಿ ನಿಯಮಗಳ ಬಗ್ಗೆ ತಿಳುವಳಿಕೆ ಇಲ್ಲದವರಾಗಿರುವುದೇ ಅದಕ್ಕೆ ಕಾರಣ. ಉದಾಹರಣಾರ್ಥವಾಗಿ ನಮ್ಮ ಜೀವನದಲ್ಲಿ ಒಂದು ನಿರ್ದಿಷ್ಟ ಬಾವೊದ್ವೇಗವನ್ನು ತನ್ನದೇ ಆದ ಗತಿಯಲ್ಲಿ ಸಾಗಲು ಅನುವು ಮಾಡಿಕೊಡಬಹುದೊ, ಇಲ್ಲವೋ ಎಂದು ತೀರ್ಮಾನಿಸುವ ಒಂದು ಪರೀಕ್ಷೆ (Test) ಯೆಂದರೆ, ಆ ಭಾವಾವೇಶದಿಂದಾಗುವ ಅಂತಿಮ ಫಲವೇನಾಗಿರಬಹುದೆಂದು ಕಂಡುಕೊಳ್ಳುವುದು; ಅದನ್ನು ವಿವೇಚಿಸಿ ಪೂರ್ಣವಾದ, ವಿವರವಾದ, ತಾರ್ಕಿಕ ವಿಶ್ಲೇಶಣೆಗೊಳಪಡಿಸ ಬೇಕು; ಒಂದು ವೇಳೆ ಅಂಥಾ ಭಾವಾವೇಶದ ಅಂತಿಮ ಫಲವು ದೇವರು ಖಂಡಿಸಬಹುದಾದಂಥಾ ದ್ದಾಗಿದ್ದರೆ, ಅದಕ್ಕೆ ನಿನ್ನ ಜೀವನದಲ್ಲಿ ಯಾವ ರೀತಿಯಲ್ಲಿಯೂ ಆಸ್ಪದ ಕೊಡಬಾರದು. ಆದರೆ ಅಂಥಾ ಭಾವಾವೇಶವು ಪವಿತ್ರಾತ್ಮನಿಂದ ಪ್ರಚೋದಿಸಲ್ಪಟ್ಟದ್ದಾಗಿದೆ ಎಂದು ತಿಳಿದೂ ನಿನ್ನ ಜೀವನದ ಸೂಕ್ತ ವಿಷಯಗಳಲ್ಲಿ ಅದೇ ಭಾವಾವೇಶವು ಸಾಗಿ ಹೋಗಲು ನೀನು ಆಸ್ಪದ ಕೊಡದಿದ್ದರೆ, ಆಗ, ಅದು ನಿನಗಾಗಿ ದೇವರು ಉದ್ದೇಶಿಸಿದ ಹಂತಕ್ಕಿಂತಲೂ ಕೆಳಮಟ್ಟದಲ್ಲಿ ತನ್ನ ಪ್ರತಿಕ್ರಿಯೆಯನ್ನು ಪ್ರಕಟ ಪಡಿಸುತ್ತದೆ. ಭಾವಾತಿರೇಕದ ವ್ಯಕ್ತಿಗಳು ರೂಪುಗೊಳ್ಳುವುದು ಇಂಥಾ ಸ್ಥಿತಿಗಳಲ್ಲಿಯೇ. ಅಂಥಾ ಭಾವಾವೇಶವು ಅದಕ್ಕೆ ತಕ್ಕ ಮಟ್ಟದಲ್ಲಿ ಕೆಲಸ ಮಾಡದಿದ್ದರೆ, ಆಗ ಭಾವಾವೇಶವು ಎಷ್ಟು ಅಧಿ ಕಗೊಳ್ಳುವುದೋ ಅಷ್ಟೇ ಆಳವಾಗಿ ನಿನ್ನ ಜೀವನದಲ್ಲಿ ಭ್ರಷ್ಟತೆಯುಂಟಾಗುವುದು. ದೇವರಾತ್ಮನು ನಿನ್ನನ್ನು ಪ್ರಬೋದಿಸಿ ಪ್ರೇರೇಪಿಸಿದಾಗ ಪರಿಸ್ಥಿತಿಗಳೇನೇ ಸಂಭವಿಸಲಿ, ನೀನು ಮಾತ್ರ ಅನಿವಾರ್ಯ ವಾದ ಅನೇಕ ನಿರ್ಧಾರಗಳನ್ನು ಕೈಕೊಳ್ಳಲೇಬೇಕು. ಯೇಸು ಕ್ರಿಸ್ತನು ಪ್ರಕಾಶದಿಂದ ರೂಪಾಂತರ ಹೊಂದಿದ ಆ ಬೆಟ್ಟದ ಮೇಲೆಯೇ ನಾವು ಉಳಿದಿರಲಿಕ್ಕಾಗು ವುದಿಲ್ಲ; ಅಲ್ಲಿ ನಾವು ಪಡೆದುಕೊಂಡ ದಿವ್ಯ ಪ್ರಭಾವಕ್ಕೆ ವಿಧೇಯರಾಗಿ ಆ ಬೆಟ್ಟದಿಂದ ಕೆಳಗಿಳಿದು, ಆ ದಿವ್ಯ ಪ್ರಭಾವವನ್ನು ದೈನಂದಿನ ಜೀವಿತದ ಕಣಿವೆಗಳಲ್ಲಿ ಕಾರ್ಯ ರೂಪಕ್ಕೆ ತರಬೇಕು. ದೇವರು ನಮಗೆ ದಿವ್ಯ ದರ್ಶನವನ್ನಿತ್ತಾಗ ತೆರಬೇಕಾದ ಬೆಲೆ ಎಷ್ಟಾದರೂ ಇರಲಿ, ಆ ದರ್ಶನದ ಅಂಶಗಳು ನಮ್ಮ ಜೀವಿತದಲ್ಲಿ ಕಾರ್ಯಾಚರಣೆ ಯಾಗಬೇಕು.

# ನಾನು ವಿಷಯಲಂಪಟ ಚಿತ್ತವುಳ್ಳವನೋ ?

**''ನಿಮ್ಮ ನಿಮ್ಮೊಳಗೆ ಹೊಟ್ಟೆ ಕಿಚ್ಚು ಜಗಳಗಳಿರುವಲ್ಲಿ ನೀವು ಶರೀರಾಧೀನ ಸ್ವಭಾವವುಳ್ಳವರಾಗಿದ್ದು ಕೇವಲ ನರ ಪ್ರಾಣಿಗಳಂತೆ ನಡೆಯುತ್ತೀರಲ್ಲವೆ'' - (1ಕೊರಿಂಥ 3:3)**

ಪ್ರಾಕೃತ ಮನುಷ್ಯನಿಗೆ ವಿಷಯಲಂಪಟತ್ವವನ್ನು ಕುರಿತು ಕಿಂಚಿತ್ತಾದರೂ ತಿಳಿದಿರುವುದಿಲ್ಲ. ಮೇಲಣದಿಂದ ಹೊಸದಾಗಿ ಹುಟ್ಟಿದಾಗ ಪ್ರವೇಶಿಸಿದ ಆತ್ಮನಿಗೆ ವಿರುದ್ಧವಾಗಿ ದೇಹದಾಶೆಗಳು ಹೋರಾಡುತ್ತವೆ. ಆತ್ಮದಾಶೆಗಳು ದೇಹದಾಶೆಗಳ ವಿರುದ್ಧ ಹೋರಾಡುತ್ತವೆ. ಆಗಲೇ ವಿಷಯಲಂಪಟತೆಯು ಉತ್ಪತ್ತಿಯಾಗುತ್ತದೆ. ಶ್ರೀ ಪೌಲನು ಹೇಳಿದಂತೆ ''ಪವಿತ್ರಾತ್ಮನನ್ನು ಅನುಸರಿಸಿ ನಡಕೊಳ್ಳಿರಿ, ಆಗ ನೀವು ಶರೀರ ಭಾವದ ಅಭಿಲಾಷೆಗಳನ್ನು ಎಷ್ಟು ಮಾತ್ರಕ್ಕೂ ನೆರವೇರಿಸುವುದಿಲ್ಲ'' (ಗಲಾ 5:16) ಇದರ ಸಾಧನೆ ಯಾದಾಗ ವಿಷಯಲಂಪಟತೆಯು ಅಳಿದು ಹೋಗುತ್ತದೆ.

ಜಗಳಗಂಟನೂ, ಚಿಕ್ಕಪುಟ್ಟ ವಿಷಯಗಳಲ್ಲಿಯೂ ಕಳವಳಗೊಳ್ಳುವವನೂ ಆಗಿರುವೆಯೊ? ಕ್ರೈಸ್ತನಾದವನೆಂದಿಗೂ ಹಾಗಿರಬಾರದು, ಆದರೆ ಪೌಲನು ಹೇಳುತ್ತಿದ್ದಾನೆ, ಕ್ರೈಸ್ತರಾದವರಲ್ಲಿಯೂ ಕೆಲವರು ಹಾಗಿರುವವರಿರುವರು ಎಂದು. ಹೀಗಾಗುವದನ್ನು ಆತನು ವಿಷಯಲಂಪಟತೆಗೆ ಸಂಬಂಧಿಸುತ್ತಿರುವನು. ಸತ್ಯವೇದದ ಸತ್ಯವೊಂದು ನಿನ್ನನ್ನು ತಕ್ಷಣವೇ ಸಿಡಿಮಿಡಿಗೊಳ್ಳುವಂತೆ ಮಾಡುವುದೋ ? ಹಾಗಿದ್ದರೆ ನೀನಿನ್ನೂ ವಿಷಯ ಲಂಪಟನಾಗಿಯೇ ಇರುತ್ತಿರುವಿ, ಶುದ್ಧೀಕರಣದ ಕಾರ್ಯವು ನಿನ್ನಲ್ಲಿ ಕಾರ್ಯಗತವಾಗಿದ್ದರೆ, ಅಂಥಾ ಸ್ವಭಾವದ ಸುಳಿವೂ ಅಲ್ಲಿರಲಾರದು.

ದೇವರ ಆತ್ಮನು ತಪ್ಪಾಗಿರುವುದೊಂದನ್ನು ನಿನ್ನಲ್ಲಿ ಪತ್ತೆ ಮಾಡಿದಾಗ ಆ ತಪ್ಪನ್ನು ಸರಿಪಡಿಸಿ ಕೊಳ್ಳೆಂದು ದೇವರು ನಿನ್ನನ್ನು ಕೇಳುವುದಿಲ್ಲ. ಆದರೆ, ಅಂಥಾ ತಪ್ಪನ್ನು ಬಯಲು ಮಾಡಿದ ಬೆಳಕನ್ನು ಅಂಗೀಕರಿಸು ಎಂದು ದೇವರು ಹೇಳುತ್ತಾನೆ. ಅದನ್ನು ನೀನು ಸ್ವೀಕರಿಸಿದರೆ, ಆಗ ದೇವರೇ ಆ ತಪ್ಪನ್ನು ಸರಿಪಡಿಸುತ್ತಾನೆ. ಬೆಳಕಿನಲ್ಲಿರುವ ಮಗುವು ತತ್‌ಕ್ಷಣವೇ ತಪ್ಪೊಪ್ಪಿಕೊಂಡು ದೇವರ ಮುಂದೆ ಬೆತ್ತಲೆಯಾಗಿ ನಿಂತು ಬಿಡುತ್ತದೆ; ಕತ್ತಲೆಯಲ್ಲಿರುವ ಮಗುವಾದರೋ ಹೀಗೆ ಹೇಳುವನು - (ತಪ್ಪನ್ನು ಕುರಿತು) ''ಅದನ್ನು ನಾನು ಬೇರೊಂದು ವಿಧವಾಗಿ ವಿವರಿಸುವೆನು'' ಬೆಳಕು ಒಮ್ಮೆ ನಿನ್ನಲ್ಲಿ ಪ್ರವೇಶಿಸಿ, ಮಾಡಿದ ತಪ್ಪಿನ ಬಗ್ಗೆ ನಿನಗೆ ಪಾಪ ಪ್ರಜ್ಞೆಯುಂಟು ಮಾಡಿದಾಗ, ನೀನು ಬೆಳಕಿನ ಮಗುವಾಗಿ, ಪಾಪವನ್ನು ಒಪ್ಪಿಕೊಂಡು ಅರಿಕೆಮಾಡು, ಆಗ ದೇವರೇ ಆ ಪಾಪವನ್ನು ನಿಭಾಯಿಸಿ ನಿರ್ವಹಿಸುವನು, ಆದರೆ ನೀನು ಅದನ್ನು ಸಮರ್ಥಿಸಿಕೊಂಡಿದ್ದಾದರೆ, ನೀನು ಕತ್ತಲೆಯಲ್ಲಿರುವ ಮಗುವೆಂದು ನೀನೇ ರುಜುವಾತುಪಡಿಸುವೆ.

ವಿಷಯಲಂಪಟತ್ವವು ಅಳಿದು ಹೋಗಿದೆ ಎಂಬುದಕ್ಕೆ ಪುರಾವೆ ಏನಿದೆ ? ನಿನ್ನನ್ನು ನೀನೇ ಮೋಸ ಗೊಳಿಸಿಕೊಳ್ಳಬೇಡ; ವಿಷಯಲಂಪಟತ್ವವು ನಿನ್ನಿಂದ ತೊಲಗಿಹೋದಾಗ, ಅದು ನಿನಗೆ ಖಂಡಿತವಾಗಿಯೂ ಗೊತ್ತಾಗುತ್ತದೆ. ಅದು ನೀನು ಊಹಿಸಬಲ್ಲ ಸತ್ಯ ಸಂಗತಿ. ಕೃಪೆಯ ಅದ್ಭುತವನ್ನು ರುಜುವಾತು ಮಾಡಲು ಅನೇಕ ಸುಸಂಧರ್ಭಗಳನ್ನು ದೇವರು ನಿನಗುಂಟು ಮಾಡುವನು ಮತ್ತು ಅದರ ಸತ್ಯಾನುಭವವೇ ಪುರಾವೆಯ ನಿಜ ಪರೀಕ್ಷೆ. 'ಇದು ಮೊದಲೇ ಆಗಿದ್ದರೆ, ನಾನು ಅಸಮಾಧಾನ ಪ್ರವೃತ್ತಿಯ ಆತ್ಮ ಉಳ್ಳವನಾಗಿರುತ್ತಿದ್ದೆನು' ಎಂದು ಈಗ ಹೇಳುತ್ತಿರುವಿ. ದೇವರು ನಿನ್ನೊಳಗೆ ಏನು ಸಾಧಿಸಿರುವನೋ ಅದರಿಂದಾಗಿ, ಭೂಮಿಯ ಮೇಲೆ ಜೀವಿಸುವ ಅದ್ಭುತ ವ್ಯಕ್ತಿ ನೀನಾಗುವುದನ್ನು ನೀನು ನಿಲ್ಲಿಸಲಾರೆ.

# ಆತನ ಉದ್ದೇಶಕ್ಕಾಗಿ ಕಡಿಮೆ ಮಾಡಿಕೊಳ್ಳುವುದು

**''ಆತನು ವೃದ್ಧಿಯಾಗಬೇಕು; ನಾನು ಕಡಿಮೆಯಾಗಬೇಕು'' - (ಯೋಹಾ 3:30)**

ಒಬ್ಬ ವ್ಯಕ್ತಿಯ ಜೀವಿತದಲ್ಲಿ ನೀನು ಅತ್ಯಗತ್ಯವೆನಿಸಿದ್ದರೆ, ನೀನು ದೇವರ ಚಿತ್ತಕ್ಕೆ ಹೊರಗಾದ ವ್ಯಕ್ತಿಯಾಗಿರುವಿ. ದೇವರ ಸೇವಕನಾಗಿ ನಿನಗಿರುವ ಹೊಣೆಗಾರಿಕೆಯೆಂದರೆ ನೀನು ಮದಲಿಂಗನ ಗೆಳೆಯನಾಗಿರಬೇಕು. (3:29) ಒಬ್ಬ ವ್ಯಕ್ತಿಯು ಯೇಸು ಕ್ರಿಸ್ತನ ಘೋಷಣೆಗಳನ್ನು ನಿಕಟವಾಗಿ ಗ್ರಹಿಸುತ್ತಿರುವನೆಂಬುದು ನಿನ್ನ ಗಮನಕ್ಕೆ ಬಂದಿದ್ದರೆ, ಆ ವ್ಯಕ್ತಿಯ ವಿಷಯದಲ್ಲಿ ನಿನ್ನ ಪ್ರಭಾವವು ಸರಿಯಾದ ದಿಕ್ಕಿನಲ್ಲಿ ಸಾಗುತ್ತಿರುವುದನ್ನು ನೀನು ತಿಳಿದುಕೊಳ್ಳುವೆ; ಆ ವ್ಯಕ್ತಿಯು ಅಂಥಾ ಗ್ರಹಿಕೆಯಲ್ಲಿರುವಾಗ ಉಂಟಾಗುವ ಕಷ್ಟ ತೊಂದರೆ ಯಾತನೆಗಳ ನಡುವೆ ಅವನು ನರಳುತ್ತಿರುವನೆಂದು ನಿನ್ನರಿವಿಗೆ ಮೂಡಿದಾಗ ತಡೆಯಲು ನಿನ್ನ ಕೈಗಳನ್ನು ಅಡ್ಡಚಾಚುವ ಬದಲು ಅವನನ್ನು ಯೇಸುಕ್ರಿಸ್ತನಿಂದ ದೂರವಿರಿಸುವ ಯಾವ ಶಕ್ತಿಯೂ ಭೂಮಿಯಲ್ಲಾಗಲೀ ನರಕದಲ್ಲಿಯಾಗಲೀ ಇಲ್ಲವೇ ಇಲ್ಲವೆಂದು ತೋರುವ ತನಕ, ಅವನ ನರಳುವಿಕೆಯು ಇನ್ನು ಹತ್ತು ಪಟ್ಟು ಬೇಕಾದರೆ ಹೆಚ್ಚಾಗಲೀ ಎಂದು ಪ್ರಾರ್ಥಿಸು; ಆದರೆ ಅವನ ಕಷ್ಟ ತೊಂದರೆಗಳನ್ನು ತಡೆಯಲು ಪ್ರಯತ್ನಿಸಬೇಡ. ಮೇಲಿಂದ ಮೇಲೆ ನಾವು ಮಧ್ಯ ಪ್ರವೇಶಿಸಿ, ಅವನಿಗೆ ನಾವು ಅನನುಭವಿ ಅಶ್ರಯದಾತರಾಗುತ್ತೇವೆ ಮತ್ತು ನಾವು ದೇವರ ಚಿತ್ತಕ್ಕೆ ತಡೆಯೊಡ್ಡಿ ಹೀಗೆ ಹೇಳುತ್ತೇವೆ. 'ಆ ವ್ಯಕ್ತಿಯು ಅಷ್ಟೊಂದು ಶ್ರಮೆಯನ್ನನುಭವಿಸುವದೇನೂ ಬೇಕಾಗಿಲ್ಲ'. ನಾವು ಮದಲಿಂಗನ ಗೆಳೆಯರೆಂದು ಸಮರ್ಪಿಸಿಕೊಳ್ಳುವದರ ಬದಲು ದೇವರಚಿತ್ತಾನುಸಾರ ಸಾಗುವ ಮಾರ್ಗದ ನಡುವೆ, ನಮ್ಮ ಸಹಾನುಭೂತಿಯನ್ನು ತೋರಿಸುತ್ತೇವೆ, ಒಂದು ದಿನ ಆ ವ್ಯಕ್ತಿ ನಿನ್ನನ್ನು ಕುರಿತು - ''ಅವನೊಬ್ಬ ಕಳ್ಳ, ಯೇಸುವಿನೆಡೆಗಿದ್ದ ನನ್ನ ಎಲ್ಲಾ ಮಮತೆಗಳನ್ನು ಕದ್ದುಕೊಂಡಿದ್ದಾನೆ. ಆದುದರಿಂದಲೇ ನಾನು ಯೇಸು ಕ್ರಿಸ್ತನಲ್ಲಿ ನೆಟ್ಟಿದ್ದ ನೋಟವನ್ನು ಕಳೆದುಕೊಂಡಿರುವೆನು'' ಎಂದು ಹೇಳುತ್ತಾನೆ.

ತಪ್ಪಾದ ವಿಷಯಗಳಲ್ಲಿ ಇನ್ನೊಬ್ಬನೊಡನೆ ಸೇರಿಕೊಂಡು ಆನಂದ ಪಡುವದರ ಬಗ್ಗೆ ಎಚ್ಚರವಿರಲಿ. ಆದರೆ ಸದ್ವಿಚಾರಗಳಲ್ಲಿ ಖಂಡಿತವಾಗಿಯೂ ಆನಂದಿಸಿರಿ. ''ಮದಲಿಂಗನ ಗೆಳೆಯನು ಮದ ಲಿಂಗನ ಧ್ವನಿಗೆ ಸಂತೋಷಪಡುತ್ತಾನಲ್ಲವೇ? ಇದರಂತೆ ನನಗಿರುವ ಸಂತೋಷ, ಈಗ ಅದು ನೆರವೇರಿತು. ಆತನು ವೃದ್ಧಿಯಾಗಬೇಕು ನಾನು ಕಡಿಮೆ ಯಾಗಬೇಕು''. (ಯೋಹಾನ 3:29-30) ಇದನ್ನು ಯೋಹಾನನು ಬಹು ಸಂತೋಷದಿಂದ - ದುಃಖದಿಂದಲ್ಲ - 'ಕೊನೆಗೂ ಅವನು ಮದಲಿಂಗ ನನ್ನು ಕಾಣಬೇಕು ! ಇದೇ ನನ್ನ ಸಂತೋಷ'ವೆಂದು ಹೇಳುತ್ತಿದ್ದಾನೆ. ಹೀಗೆ ದೇವ ಸೇವಕನೊಬ್ಬನು ಕಡೆಗಣಿಸಲ್ಪಟ್ಟು, ಬದಿಗೆ ಸರಿಸಲ್ಪಟ್ಟು, ಪೂರ್ಣವಾಗಿ ಅವನ ಮುಖ ಕಾಣೆಯಾಗುವುದು ಮತ್ತು ಇನ್ನು ಮುಂದೆ ಯಾರೂ ಎಂದಿಗೂ ಅವನ ಬಗ್ಗೆ ಯೋಚಿಸುವುದೇ ಇಲ್ಲ.

ಇನ್ನೊಬ್ಬನ ಜೀವಿತದಲ್ಲಿ ಮದಲಿಂಗನ ಧ್ವನಿ ಕೇಳಿ ಬರುವವರೆಗೂ ನೀನು ಮೈಯಲ್ಲಾ ಕಿವಿಯಿಟ್ಟು ಗಮನವಿಟ್ಟು ಆಲಿಸುತ್ತಿರಬೇಕು. ಅದೆಂಥಾ ಸಂಕಟವಿರಲಿ, ಇಲ್ಲವೇ ಯಾವುದೇ ವಿನಾಶವಿರಲಿ, ಅವುಗಳಕಡೆ ನಿನ್ನ ಚಿತ್ತವನ್ನೆಂದಿಗೂ ಹರಿಯಲು ಬಿಡಬೇಡ, ಅದೆಂಥಾ ಅಸ್ವಸ್ಥತೆಯುಂಟಾಗಲಿ, ಅದೆಷ್ಟೇ ಅಸ್ತವ್ಯಸ್ತತೆಯುಂಟಾಗಲಿ, ಆತನ ಧ್ವನಿಯನ್ನಾಲಿಸಿದ ದೈವ ಸಂಭ್ರಮದಲ್ಲಿಯೇ ಸಂತೋಷಪಡು. ಯೇಸು ಕ್ರಿಸ್ತನು ಒಂದು ಜೀವವನ್ನು ರಕ್ಷಿಸುವ ಮುನ್ನ ಅದನ್ನು ಛಿದ್ರ ಛಿದ್ರ ಮಾಡುತ್ತಿರುವುದನ್ನು ನೀನು ಅನೇಕ ವೇಳೆ ಕಾಣಬಹುದು. (ಮತ್ತಾಯ 10:34 ನೋಡಿರಿ)

# ಸರಿಯಾದ ಸಂಬಂಧವನ್ನು ಕಾಪಾಡಿಕೊಳ್ಳುವುದು

**''ಮದಲಿಂಗನ ಗೆಳೆಯನು'' - (ಯೋಹಾನ 3:29)**

ಸುಗುಣ ಶುದ್ಧತೆಗಳು ತಮ್ಮೆಡೆಗೆ ಪರರ ಗಮನವನ್ನು ಎಂದಿಗೂ ಆಕರ್ಷಿಸ ಬಾರದು, ಅವು ಕೇವಲ ಯೇಸುಕ್ರಿಸ್ತನೆಡೆಗೆ ಗಮನವನ್ನಾಕರ್ಷಿಸುವ ಅಯಸ್ಕಾಂತಗಳಾಗಿರ ಬೇಕು. ನನ್ನ ಪರಿಶುದ್ಧತೆಯು ಯೇಸುಕ್ರಿಸ್ತನೆಡೆಗೆ ಆತ್ಮಗಳನ್ನು ಸೆಳೆಯುತ್ತಿಲ್ಲವಾದರೆ, ಅದು ಯೋಗ್ಯಮಾದರಿಯ ಪರಿಶುದ್ಧತೆಯಲ್ಲ ಮತ್ತು ಅಂಥಾ ಶುದ್ಧತೆಯು ಹದಗೆಟ್ಟ ಭಾವೋದ್ವೇಗಗಳನ್ನುಂಟು ಮಾಡುವ ಪ್ರಭಾವವುಳ್ಳದ್ದಾಗಿರುತ್ತದಲ್ಲದೆ, ಆತ್ಮಗಳನ್ನು ದಾರಿತಪ್ಪಿಸಿ ದೊಡ್ಡ ಸುಳಿಯೊಳಗೆ ದಬ್ಬಿ ಬಿಡುತ್ತದೆ. ಸೊಗಸಾದ ಭಕ್ತನೊಬ್ಬನು ಯೇಸುಕ್ರಿಸ್ತನು ಏನೆಲ್ಲವನ್ನು ತನಗೆ ಅನುಗ್ರಹಿಸಿರುವನೋ ಅವುಗಳನ್ನು ಮಾತ್ರ ಪ್ರದರ್ಶನ ಮಾಡಿ ಯೇಸುಕ್ರಿಸ್ತನನ್ನು ಮಾತ್ರ ಪರಿಚಯಿಸದಿದ್ದರೆ, ಪರರನ್ನು ಕ್ರಿಸ್ತನೆಡೆಗೆ ನಡೆಸುವ ಮಾರ್ಗದಲ್ಲಿ ಅವನೇ ಕಂಟಕನಾಗಿರುವನು; ''ಓ ಆತನೆಂಥಾ ಸುಗುಣ ಸಜ್ಜನ ವ್ಯಕ್ತಿ'' ಎನ್ನುವ ವ್ಯಕ್ತಿಗತ ಪ್ರಭಾವವನ್ನುಂಟು ಮಾಡಿಕೊಳ್ಳುತ್ತಾನೆ. ಅದು ಮದಲಿಂಗನ ನಿಜವಾದ ಸ್ನೇಹಿತ ನಾದವನು ಇರತಕ್ಕ ರೀತಿಯಲ್ಲ. ಆಗ ನಾನೇ ಸದಾ ವೃದ್ಧಿಯಾಗುತ್ತಿರುವೆನು – ಮದಲಿಂಗನಲ್ಲ.

ಮದಲಿಂಗನ ಜೊತೆ ಮಿತ್ರತ್ವವನ್ನು ನಿಷ್ಠೆಯನ್ನು ಪಾಲಿಸಿಕೊಂಡಿರ ಬೇಕಾದರೆ ಬೇರಾವ ವಿಷಯಗಳಿಗಿಂತಲೂ ಹೆಚ್ಚಾಗಿ ಆತನೊಂದಿಗೆ ನೈತಿಕ ಹಾಗುಬಲವಾದ ಬಾಂಧವ್ಯ ವನ್ನು, ವಿಧೇಯತೆಯನ್ನೂ ಸಹಾ ಹೊಂದಿರುವಂತೆ ನಾವು ಎಚ್ಚರ ವಹಿಸಬೇಕು, ಕೆಲವು ವೇಳೆ ವಿಧೇಯರಾಗಿರಬೇಕಾದದ್ದೇನೂ ಅಲ್ಲಿರುವುದಿಲ್ಲ, ಅಲ್ಲಿ ನಾವು ಮಾಡಬೇಕಾಗಿರುವುದು, ಕೇವಲ ಯೇಸುಕ್ರಿಸ್ತನ ಪ್ರಬಲವಾದ ಸಂಪರ್ಕವನ್ನು ಕಾಪಾಡಿಕೊಳ್ಳಬೇಕು ಮತ್ತು ಬೇರಾವ ವಿಷಯವು ನಡುವೆ ಪ್ರವೇಶಿಸಿದಂತೆ ನೋಡಿಕೊಳ್ಳಬೇಕು. ಯಾವಾಗಲಾದರೂ ಒಮ್ಮೆ ವಿಧೇಯರಾಗಬೇಕಾಗುತ್ತದೆ. ವಿಷಮ ಪರಿಸ್ಥಿತಿಗಳು ಉಂಟಾದಾಗ, ಅವುಗಳಲ್ಲಿ ದೇವರ ಚಿತ್ತವೇನಿರಬಹುದೆಂದು ನಾವು ಕಂಡುಕೊಳ್ಳಬೇಕು, ಆದರೆ ಜೀವಿತದ ಬಹು ಭಾಗವು ಪ್ರಜ್ಞಾ ಪೂರ್ವಕ ವಿಧೇಯತೆಯಾಗಿರುವದಿಲ್ಲ, ಅದು ಕ್ರಿಸ್ತನೊಡನೆ ಹೊಂದಿರುವ ಬಾಂಧವ್ಯದ ಪರಿಪಾಲನೆ ಮಾತ್ರವೇ ಆಗಿರುತ್ತದೆ. ಅದೇ ಮದಲಿಂಗನ ಗೆಳೆಯನಾಗಿರುವ ಬಾಂಧವ್ಯ. ಕ್ರಿಸ್ತೀಯ ಸೇವಾಕಾರ್ಯವು ಕೆಲವೊಮ್ಮೆ ಒಬ್ಬ ವ್ಯಕ್ತಿಯ ದೃಷ್ಟಿಗಮನವನ್ನು ಯೇಸುಕ್ರಿಸ್ತನಿಂದ ಬೇರೆ ಕಡೆಗೆ ತಿರುಗಿಸುವ ನಿಜ ಸಾಧನವಾಗಿರಬಹುದು. ಮದಲಿಂಗನ ಶಿಷ್ಯರಾಗಿರುವುದರ ಬದಲು, ಇತರರ ಪಾಲಿಗೆ ನಾವು ಅನನುಭವಿ ಅಶ್ರಯದಾತರಾಗಿರುತ್ತೇವೆ ಹಾಗೂ ಆತನ ಶಸ್ತ್ರಾಸ್ತ್ರಗಳನ್ನೇ ಉಪಯೋಗಿಸುತ್ತಾ, ಆತನಿಗೆ ವಿರುದ್ಧವಾಗಿ ನಾವು ಕಾರ್ಯವೆಸಗುತ್ತಿರಬಹುದು.

# ವೈಯಕ್ತಿಕ ಶುದ್ಧತೆಯ ಮುಖಾಂತರ ದರ್ಶನ

**''ನಿರ್ಮಲ ಚಿತ್ತರು ಧನ್ಯರು ಅವರು ದೇವರನ್ನು ನೋಡುವರು''- (ಮತ್ತಾಯ 5:8)**

ಪರಿಶುದ್ಧತೆಯು ಮುಗ್ಧತೆಯಲ್ಲ. ಅದು ಎಷ್ಟೋ ಪಾಲು ಹೆಚ್ಚಿನದು. ದೇವರೊಂದಿಗೆ ಸತತವಾಗಿರುವ ಆತ್ಮೀಕ ಸಮರಸದ ಫಲವೇ ಪರಿಶುದ್ಧತೆ; ನಾವು ಶುದ್ಧತೆಯಲ್ಲಿ ಬೆಳೆಯುತ್ತಿರಬೇಕು, ಹೆಚ್ಚುತ್ತಿರಬೇಕು. ದೇವರೊಂದಿಗಿನ ನಮ್ಮ ಜೀವಿತವು ಸರಿಯಾಗಿಯೇ ಇರಬಹುದು, ನಮ್ಮ ಆಂತರಿಕ ಪರಿಶುದ್ಧತೆಯು ಕಳಂಕರಹಿತವಾಗಿರಬಹುದು, ಆದರೂ ಆಗಾಗ್ಗೆ ನಮ್ಮ ಬಾಹ್ಯ ಜೀವನದ ಮಿರುಗುವಿಕೆಯು ಮಂಕಾಗಿ ಮಲಿನವಾಗುತ್ತಿರುತ್ತದೆ. ಈ ಸಾಧ್ಯತೆಯಿಂದ ನಮ್ಮನ್ನು ತಪ್ಪಿಸಲು ದೇವರು ಯಾವುದೇ ರಕ್ಷಾ ಕವಚದಿಂದ ನಮ್ಮನ್ನು ಮುಚ್ಚುವದಿಲ್ಲ. ಅದು ಆತನ ಇಚ್ಛೆಯೂ ಅಲ್ಲ. ಯಾಕೆಂದರೆ ಈ ರೀತಿಯ ಪ್ರಕ್ರಿಯೆಯು ನಮ್ಮ ವೈಯಕ್ತಿಕ ಶುದ್ಧತೆಯ ಮುಖಾಂತರ ಆತ್ಮೀಕ ದರ್ಶನವನ್ನು ಕಾಪಾಡಿಕೊಳ್ಳುವ ಅವಶ್ಯಕತೆಯನ್ನು ಗ್ರಹಿಸುವಂತೆ ಮಾಡುತ್ತದೆ. ದೇವರೊಂದಿಗಿರುವ ನಮ್ಮ ಆತ್ಮೀಕ ಜೀವಿತದ ಮಿರುಗುವಿಕೆಯು, ಅಲ್ಪ ಮಟ್ಟದಲ್ಲಿಯಾದರೂ ಏರುಪೇರಾಗಿದ್ದರೆ, ನಿನ್ನ ಸಕಲ ಆಸಕ್ತಿಯ ವಿಷಯಗಳೆಲ್ಲವನ್ನೂ ಬದಿಗೊತ್ತಿ, ಮೊದಲು ಮಲಿನ ಮಂಕುಗಳನ್ನು ಅಳಿಸಿ, ಶುದ್ಧೀಕರಿಸಿ, ಪುನಃ ಕಾಂತಿ ತುಂಬಿಕೊಳ್ಳುವಂತೆ ಮಾಡಲೇಬೇಕು. ದಿವ್ಯ ದರ್ಶನವು ನಿನ್ನ ಗುಣ ಸ್ವಭಾವಗಳ ಮೇಲೆ ಆಧಾರಗೊಂಡಿದೆ ಎಂಬುದು ನಿನ್ನ ಜ್ಞಾಪಕದಲ್ಲಿರಲಿ. ''ನಿರ್ಮಲ ಚಿತ್ತರು ಧನ್ಯರು ಅವರು ದೇವರನ್ನು ನೋಡುವರು'' (ಮತ್ತಾಯ 5:8).

ದೇವರು ತನ್ನ ಮಹಾ ಕೃಪೆಯಿಂದ ನಮ್ಮನ್ನು ಪರಿಶುದ್ಧರನ್ನಾಗಿ ಮಾಡುತ್ತಾನೆ; ಆದರೂ ನಾವು ಜಾಗ್ರತೆಯಿಂದ ಗಮನಿಸಬೇಕಾಗಿರುವುದೊಂದಿದೆ, ಅದೇನಂದರೆ ನಮ್ಮ ಶಾರೀರಿಕ ಬದುಕಿನ ಮೂಲಕ ನಾವು ಬೇರೆಯವರ ಸಹವಾಸಕ್ಕೆ ಮತ್ತು ಬೇರೆಯವರ ದೃಷ್ಟಿಕೋನಗಳ ಸಂಪರ್ಕಕ್ಕೆ ಬರುವುದರಿಂದ ನಮ್ಮ ಬದುಕು ಮಲಿನಗೊಳ್ಳುವ ಸಾದ್ಯತೆ ಇದೆ. ಒಳಾಂಗಣದ ಗರ್ಭಗುಡಿಯನ್ನು ಶುದ್ಧವಾಗಿರಿಸಿಕೊಂಡು ದೇವರೊಂದಿಗೆ ಸಾಮರಸ್ಯ ದಿಂದಿರುವುದಷ್ಟೆಯಲ್ಲದೆ ದೇಗುಲದ ಹೊರಾಂಗಣಗಳನ್ನು ದೇವರು ತನ್ನ ಕೃಪೆಯಿಂದ ದಯಪಾಲಿಸಿದ ಪರಿಶುದ್ಧತೆಯಲ್ಲಿ, ಸಂಪೂರ್ಣವಾದ ಸಾಮರಸ್ಯದಲ್ಲಿರುವಂತೆ, ಕಾಪಾಡಿಕೊಳ್ಳಬೇಕು. ದೇಗುಲದ ಹೊರಾಂಗಣದಲ್ಲಿ ಮಾಲಿನ್ಯ ಉಂಟಾದ ಕೂಡಲೇ ಆತ್ಮಿಕ ಗ್ರಹಿಕೆಯು ಅಸ್ಪಷ್ಟವಾಗಿ ಬಿಡುತ್ತದೆ. ಒಡೆಯನಾದ ಯೇಸುಕ್ರಿಸ್ತನೊಡನೆ ನಮ್ಮ ವೈಯಕ್ತಿಕ ಸಂಪರ್ಕವನ್ನು ಉಳಿಸಿಕೊಂಡಿರಲು ಮುಂದಾಗುವುದಾದರೆ, ಅದರ ಪರಿಣಾಮವಾಗಿ ನಾವು ಕೆಲವೊಂದು ವಿಷಯಗಳನ್ನು ಕೈಗೆತ್ತಿಕೊಳ್ಳುವುದನ್ನೂ, ಕೆಲವೊಂದು ಆಲೋಚನೆಗಳನ್ನೂ ತೃಣೀಕರಿಸಿ ಬಿಟ್ಟುಕೊಡುವುದನ್ನೂ, ಮಾಡಬೇಕಾಗುತ್ತದೆ. ನ್ಯಾಯ ಪೂರ್ಣವಾದವುಗಳನ್ನು ಸಹಾ ಮುಟ್ಟಲು ಉಪೇಕ್ಷಿಸಬೇಕಾಗುತ್ತದೆ.

ಇತರರೊಂದಿಗೆ ಇರುವ ಸಂಬಂಧಗಳಲ್ಲಿ ಕಳಂಕ ರಹಿತ ವೈಯಕ್ತಿಕ ಶುದ್ಧತೆಯನ್ನು ಕಾಪಾಡಿಕೊಳ್ಳುವ ನಿಜ ಮಾರ್ಗವೆಂದರೆ – ಆ ವ್ಯಕ್ತಿ, ಆ ಪುರುಷ, ಆ ಸ್ತ್ರೀ ಅವರು ಯೇಸುಕ್ರಿಸ್ತನಲ್ಲಿ ಪರಿಪೂರ್ಣರಾಗಿದ್ದಾರೆ; ಆ ಗೆಳೆಯ, ಆ ಬಂಧುವು ಯೇಸುಕ್ರಿಸ್ತನಲ್ಲಿ ಪರಿಪೂರ್ಣರು; ಎಂದು ನಿನ್ನಷ್ಟಕ್ಕೆ ನೀನೇ ಹೇಳಿಕೊಳ್ಳುತ್ತಲೇ ಇರಬೇಕು. ಹಾಗೆ ಮಾಡುವುದು ಒಂದು ಸಾಧನೆ.

# ವೈಯಕ್ತಿಕ ನಡವಳಿಕೆಯಿಂದುಂಟಾಗುವ ದರ್ಶನ

**''ಇಲ್ಲಿಗೆ ಏರಿ ಬಾ, ಮುಂದೆ ಆಗಬೇಕಾದವುಗಳನ್ನು ನಿನಗೆ ತೋರಿಸುವೆನು'' - (ಪ್ರಕಟನೆ 4:1)**

ಉದಾತ್ತವಾದ ಮೂಡ್ ಅಂದರೆ ಬಾವಾವೇಶವು, ಉದಾತ್ತವಾದ ವ್ಯಕ್ತಿಗತಗುಣ ನಡತೆಯಿಂದ ಮಾತ್ರ ಹೊರಹೊಮ್ಮುತ್ತದೆ. ನೀನು ಅರಿತಿರುವ ಉನ್ನತ ಜೀವಿತವನ್ನು ನಿನ್ನ ಬಾಹ್ಯ ಜೀವಿತದಲ್ಲಿ ಜೀವಿಸುತ್ತಿದ್ದರೆ, ''ಗೆಳೆಯನೇ ಇನ್ನೂ ಎತ್ತರಕ್ಕೆ ಏರಿ ಹೋಗು'' ಎಂದು ದೇವರು ಸತತವಾಗಿ ಹೇಳುತ್ತಾನೆ. ಆಮಿಷೆಗಳ, ಶೋಧನೆಯ ಸ್ವರ್ಣಸೂತ್ರವೆಂದರೆ ''ಇನ್ನೂ ಮೇಲಕ್ಕೆ'' ಎಂಬುದೇ. ಇನ್ನಷ್ಟು ಎತ್ತರ ವನ್ನು ನೀನು ತಲುಪಿದಾಗ ಅಲ್ಲಿ ಬೇರೆ ವಿಧದ ಶೋಧನೆಗಳನ್ನು ಮತ್ತು ವಿಶಿಷ್ಟ ಗಣಸ್ವಭಾವಗಳನ್ನು ನೀನು ಅಲ್ಲಿ ಎದುರಿಸುವಿ. ಶೋಧನೆಗಳಲ್ಲಿ ನಿನ್ನನ್ನು ''ಎತ್ತರಕ್ಕೆ ಏರಿ ಹೋಗು'' ಎಂಬ ತಂತ್ರವನ್ನು ಸೈತಾನನು ಸಹಾ ಬಳಸುತ್ತಾನೆ. ದೇವರು ಸಹಾ ಅತ್ಮೀಕ ವಲಯದಲ್ಲಿ 'ಎತ್ತರಕ್ಕೆ ಬಾ' ಎಂಬ ಸೂತ್ರವನ್ನೇ ಉಪಯೋಗಿ ಸುತ್ತಾನೆ. ಆದರೆ ಇವೆರಡರ ಫಲವು ಭಿನ್ನವಾಗಿರುತ್ತದೆ. ಒಂದು ನಿರ್ದಿಷ್ಟ ಉನ್ನತಿಗೆ ಸೈತಾನನು ನಿನ್ನನ್ನು ಎತ್ತಿದಾಗ, 'ಪರಿಶುದ್ಧತೆ ಎಂಬುದನ್ನು ಸಹಿಸುವುದಕ್ಕಾಗಲೀ, ಸಾಧಿಸುವುದಕ್ಕಾಗಲೀ ರಕ್ತ ಮಾಂಸದ ಈ ಶರೀರಕ್ಕೆ ಮೀರಿದ ಸಂಗತಿ' ಎನ್ನುವ ಕಲ್ಪನೆಗೆ ನೀನು ಕಟ್ಟುಬೀಳುವಂತೆ ಸೈತಾನನು ಮಾಡುತ್ತಾನೆ. ಆಗ ನಿನ್ನ ಜೀವಿತವು ಎತ್ತರವಾದ ಚೂಪುಗೋಪುರದ ಮೇಲೆ ಮಾಡುವ ಆತ್ಮೀಕ ಡೊಂಬರಾಟದ ಪ್ರದರ್ಶನ ದಂತಿರುತ್ತದೆ. ಆ ತುದಿಗೆ ನೀನು ಜೋತು ಬಿದ್ದಿರುವೆ ಮತ್ತು ಸಮತೋಲನವನ್ನು ಕಾಪಾಡಲೆತ್ನಿಸುತ್ತಾ ಮುಂದಕ್ಕೆ ಸಾಗಲು ಸಾಹಸ ಮಾಡದೆ ಅಲ್ಲಿಯೇ ಜೋತಾಡುತ್ತಾ ಇದ್ದು ಬಿಡುವೆ. ಆದರೆ ದೇವರು ಅದೇ ಸೂತ್ರದಂತೆ ತನ್ನ ಕೃಪಾಕನಿಕರಗಳಿಂದ ನಿನ್ನನ್ನು ಉನ್ನತ ಸ್ಥಾನಗಳಿಗೆ ಏರಿಸಿದಾಗ ಜೋತು ಬೀಳಲು ಶಿಖರದ ತುದಿಯನ್ನು ಹುಡುಕಿಕೊಳ್ಳುವ ಬದಲು ನೀನು ಸರಳವಾಗಿ ನಡೆದಾಡಲು ಸಾದ್ಯವಿರುವ ಸಮಮಟ್ಟದ ಪ್ರಸ್ಥ ಭೂಮಿಯನ್ನು ಅಲ್ಲಿ ಕಾಣುವಿ.

ಆತ್ಮೀಕ ಚರಿತ್ರೆಯಲ್ಲಿ ಕಳೆದ ವರ್ಷದ ಒಂದು ವಾರವನ್ನು, ಇದೇ ವರ್ಷದ ಅದೇ ವಾರದೊಂದಿಗೆ ಹೋಲಿಸಿ ನೋಡು; ಆಗ ದೇವರು ನಿನ್ನನ್ನೆಷ್ಟು ಮೇಲಕ್ಕೆ ಏರಿಸಿರುವ ನೆಂಬುದನ್ನು ಗಮನಿಸು. ನಾವೆಲ್ಲರೂ ಅದೇ ಉನ್ನತ ಮಟ್ಟದಲ್ಲಿ ಇದ್ದುಕೊಂಡು ದೃಷ್ಟಿಸಲೆಂದೇ ಅಲ್ಲಿಗೆ ಬರಮಾಡಲ್ಪಟ್ಟಿರುವೆವು. ಒಂದು ಸತ್ಯಾಂಶದ ಮಟ್ಟಕ್ಕೆ ತಕ್ಕಂತೆ ಕೂಡಲೇ ಜೀವಿಸಲು ಸಾಧ್ಯವಾಗದಂಥ ಸಂಗತಿಯನ್ನು ದೇವರು ನಿನಗೆ ತೋರಿಸಲು ಅನುವು ಮಾಡಿಕೊಡಬೇಡ; ಪ್ರತಿಯೊಂದನ್ನೂ ನೀನು ಏರಿಸಲ್ಪಟ್ಟಿರುವ ಮಟ್ಟಕ್ಕೆ ತಕ್ಕಹಾಗೆ ಚಿಂತನೆ ಮಾಡಿ, ಜೀವಿಸಬೇಕು.

ನೀನು ಹಿಂಜರಿದು ಹೋಗಲಿಲ್ಲವೆನ್ನುವ ಸತ್ಯತೆಯನ್ನಾಧರಿಸಿ ನಿನ್ನ ಮೇಲಿರುವ ಕೃಪೆಯ ಬೆಳವಣಿಗೆಯ ಬೆಲೆ ಕಟ್ಟಬೇಡ, ಆದರೆ ಆತ್ಮೀಕವಾಗಿ ನೀನೆಲ್ಲಿರುವೆ ಎಂಬುದನ್ನರಿತ, ನಿನ್ನ ಅಂತರಂಗದ ಒಳನೋಟದ ಮೇಲೆ ಆ ಬೆಲೆಯು ಆಧರಿಸಿರುವುದು. ''ಇನ್ನೂ ಮೇಲಕ್ಕೆ ಏರಿ ಬಾ'' ಎಂದು ದೇವರು ಹೇಳುವುದನ್ನು ನೀನು ಕೇಳಿಸಿಕೊಂಡಿರುವೆ. ಅದು ವ್ಯಕ್ತಿಗತವಾಗಿ ಬಾಹ್ಯರಂಗದಲ್ಲಿ ಅಲ್ಲ. ಆದರೆ ಅದು ನಿನ್ನ ಅಂತರಂಗದ ಒಳನೋಟಕ್ಕೆ ಹೇಳಿರುವ ಮಾತು.

ನಾನು ಮಾಡಬೇಕೆಂದಿರುವ ಕಾರ್ಯವನ್ನು ಅಬ್ರಹಾಮನಿಗೆ ಮರೆಮಾಡುವದು ಸರಿಯೋ? (ಆದಿಕಾಂಡ 3:17) ದೇವರು ತಾನು ಮಾಡಬೇಕೆಂದಿರುವುದನ್ನು ಕೆಲವೊಮ್ಮೆ ನಮಗೆ ಮರೆ ಮಾಡಬೇಕಾ ಗುವುದು. ಆತನು ತಾನು ಮಾಡಬೇಕೆಂದಿರುವುದನ್ನು ಬಯಲು ಪಡಿಸುವ ಉನ್ನತ ಸ್ಥಳಕ್ಕೆ ಏರಿ ಹೋಗುವಂತೆ ಮಾಡುವ ನಮ್ಮ ವ್ಯಕ್ತಿಗತ ಗುಣನಡತೆಗಳು ಆ ಮಟ್ಟಕ್ಕೆ ಬೆಳೆಯುವವರೆಗೂ ಅದನ್ನು ಮರೆ ಮಾಡಿರುತ್ತಾನೆ.

# ಏನಾದರೂ ತಪ್ಪು ಗ್ರಹಿಕೆ ಉಂಟೆ ?

**''ತಿರಿಗಿ ಯೂದಾಯಕ್ಕೆ ಹೋಗೋಣ'' ಎಂದು ಹೇಳಿದನು, ಶಿಷ್ಯರು ''ತಿರಿಗಿ ಅಲ್ಲಿಗೇ ಹೋಗುತ್ತೀಯಾ ?'' ಅನ್ನಲು ......... - (ಯೋಹಾನ 11:7-8)**

ಯೇಸುಕ್ರಿಸ್ತನು ಹೇಳುತ್ತಿರುವುದೇನೆಂಬುದು ನಮಗೆ ಅರ್ಥವಾಗದೇ ಇರಬಹುದು. ಆದರೆ ಯೇಸುಕ್ರಿಸ್ತನು ಏನು ಹೇಳಿರುವನೋ, ಅದರ ಕಾರಣದಿಂದಾಗಿ ಆತನು ಹೇಳಿದ್ದರಲ್ಲಿ ತಪ್ಪಾಗಿದೆ ಎಂದು ನಾವು ಹೇಳುವುದು ತುಂಬಾ ಅಪಾಯಕಾರಿ. ದೇವರ ಒಂದು ನಿರ್ದೇಶನಾ ವಾಕ್ಯಕ್ಕೆ ನಾನು ವಿಧೇಯನಾದರೆ ಅದು ಯೇಸುಕ್ರಿಸ್ತನಿಗೆ ಅಗೌರವವನ್ನು ತರುತ್ತದೆ ಎಂದು ಯೋಚಿಸುವುದು ಎಂದಿಗೂ ಸರಿಯಲ್ಲ. ಆತನಿಗೆ ಅಗೌರವವನ್ನು ತರುವ ಒಂದೇ ಒಂದು ವಿಷಯ, ಅದು ಆತನಿಗೆ ವಿಧೇಯರಾಗದೇ ಇರುವದು. ನಾನೇನು ಮಾಡಬೇಕೆಂದು ಆತನು ನೇರವಾಗಿ ನನ್ನನ್ನು ಒತ್ತಾಯ ಪಡಿಸುತ್ತಿರುವನೋ ಅಲ್ಲಿ ಕ್ರಿಯಾಶೀಲನಾಗುವುದರ ಬದಲು ಆತನ ಗೌರವದ ವಿಷಯವಾದ ನನ್ನ ಮನೋ ಕಲ್ಪನೆಯನ್ನು ಮೊದಲು ಅಲ್ಲಿರಿಸುವುದು ಸರಿಯಲ್ಲ. ಆತನಿಗಾಗುವ ಬಹಿರಂಗ ಅವಮಾನವನ್ನು ತಪ್ಪಿಸಬೇಕೆಂಬ ನಿಜವಾದ ಆಸಕ್ತಿಯಿಂದ, ಅಂಥಾ ವಿಚಾರ ಕಲ್ಪನೆಯುಂಟಾಗಿದ್ದರೂ, ಅದು ಸರಿಯಲ್ಲ, ಒಂದು ಪ್ರಸ್ತಾಪವು ದೇವರಿಂದಲೇ ಬಂದಿದೆ ಎಂದು ನಾನು ಅರಿತಿದ್ದರೆ ಅದಕ್ಕೆ ಆ ಪ್ರಸ್ತಾಪದಲ್ಲಡಿಗಿರುವ ಆಗ್ರಹ ಪೂರ್ವಕ ಒತ್ತಾಯವೇ ಕಾರಣ. ಅದರ ಸಾಧಕ ಭಾದಕಗಳನ್ನು ತೂಗಿ ನೋಡಬಯಸಿದರೆ, ಆಗ ಸಂಶಯ ಮತ್ತು ವಾಗ್ವಾದಗಳು ಒಳ ತೂರಿಕೊಳ್ಳುತ್ತವೆ, ದೇವರದಲ್ಲದವುಗಳನ್ನು ಒಳಕ್ಕೆ ತಂದುಕೊಳ್ಳುತ್ತೇವೆ ಮತ್ತು ಆ ಪ್ರಸ್ತಾಪವು ಸರಿಯಾದುದಲ್ಲವೆಂಬ ಅಂತ್ಯ ತೀರ್ಮಾನಕ್ಕೆ ಬಂದು ಬಿಡುತ್ತೇವೆ. ನಮ್ಮಲ್ಲಿ ಆನೇಕರು ಯೇಸುಕ್ರಿಸ್ತನ ಬಗ್ಗೆ ತಮ್ಮದೇ ಆದ ಕಲ್ಪನಾ ಭಾವನೆ ಗಳಿಗೆ ಸ್ವಾಮಿ ನಿಷ್ಠರಾಗಿರುವರು, ಆದರೆ ನಮ್ಮಲ್ಲಿ ಎಷ್ಟು ಜನರು ಆತನಿಗೆ ವ್ಯಕ್ತಿಗತವಾಗಿ ನಿಷ್ಠೆಯುಳ್ಳ ವರಾಗಿರುವರು ? 'ಯೇಸುವಿಗೆ ನಾವು ಸ್ವಾಮಿ ನಿಷ್ಠರು' ಎಂಬುದರ ಅರ್ಥ - ಆತನು ಹೇಳಿದಾಗ, ಏನೊಂದೂ ಕಣ್ಣಿಗೆ ಕಾಣದಿರುವ ಸ್ಥಳಕ್ಕೆ ಧಾವಿಸಿ ಹೊರಟು ಹೋಗುವುದೇ ನಿಜವಾದ ಸ್ವಾಮಿ ನಿಷ್ಠೆ - (ಮತ್ತಾಯ 4:29); ನನ್ನ ಭಾವನೆಗಳಿಗೆ ನಾನು ನಿಷ್ಠೆಯುಳ್ಳವನಾಗಿರುವದರ ಅರ್ಥ, ಮೊದಲು ನನ್ನ ಬುದ್ಧಿವಂತಿಕೆಯಿಂದ ಎಲ್ಲವನ್ನೂ ವಿವೇಚಿಸಿ ಗ್ರಹಿಸಿಕೊಂಡು, ನಾನು ಹೊರಡಬೇಕಾದ ಸ್ಥಳವನ್ನು, ಮಾರ್ಗವನ್ನು, ಮುಕ್ತ ಗ್ರಹಿಕೆಯಲ್ಲಿ ರಿಸಿಕೊಂಡಿರುತ್ತೇನೆ. ನಂಬಿಕೆಯು ಬೌದ್ಧಿಕವಾದ ಅರ್ಥ ಗ್ರಹಿಕೆಯಲ್ಲ; ನಂಬಿಕೆಯು ತನ್ನ ಮುಂದಿರುವ ಮಾರ್ಗವೇನೆಂಬುದನ್ನು ತಿಳಿಯದಿದ್ದರೂ ಒಬ್ಬ ವ್ಯಕ್ತಿಗೆ ವಿವೇಚನಾ ಪೂರ್ವಕವಾಗಿ ಬದ್ಧವಾಗಿರುತ್ತದೆ.

ಯೇಸುಕ್ರಿಸ್ತನಲ್ಲಿ ನಂಬಿಕೆಯನ್ನಿಟ್ಟು ಕೂಡಲೇ ಕ್ರಿಯಾಶೀಲ ನಾಗಲು ಮುಂದಡಿ ಇಡಬೇಕೋ ಅಥವಾ ಆತನೇನು ಹೇಳಿರುವನೋ ಅದನ್ನು ನಮ್ಮಷ್ಟಕ್ಕೆ ನಾವೇ ಯಾವ ರೀತಿಯಲ್ಲಿ ಮಾಡಬಹುದೆಂದು ಸ್ಪಷ್ಟವಾಗಿ ತೋರಿಬರುವ ತನಕ ಕಾದಿರಬೇಕೋ ಎಂಬುವ ವಾದವಿವಾದಗಳಲ್ಲಿ ನೀನು ಸಿಲುಕಿಕೊಂಡಿ ರುವೆಯೋ? ಅಪಾಯಗಳನ್ನು ಲೆಕ್ಕಿಸದೇ ಆನಂದದಿಂದ ಆತನಿಗೆ ಕೂಡಲೇ ವಿಧೇಯನಾಗು. ಆತನು ಏನೋ ಒಂದನ್ನು ಹೇಳಿದಾಗ ನೀನು ವಾದ ಮಾಡಲು ಆರಂಭಿಸುವೆ; ಯಾಕೆಂದರೆ ಯಾವುದು ಆತನಿಗೆ ಘನತೆ ಗೌರವವೋ, ಅಂಥಾ ಗೌರವವಲ್ಲದ ಬೇರೊಂದರ ಪರಿಕಲ್ಪನೆ ನಿನಗಿರುವುದರಿಂದಲೇ ನೀನು ಹಾಗೆ ಮಾಡುವಿ. ನೀನು ಯೇಸುವಿಗೆ ಸ್ವಾಮಿನಿಷ್ಠೆಯುಳ್ಳವನಾಗಿರುವೆಯೋ ಅಥವಾ ಆತನ ಬಗ್ಗೆ ನಿನಗಿರುವ ನಿನ್ನ ಮನೋಭಾವನೆಗೆ ಸ್ವಾಮಿ ನಿಷ್ಠೆಯಿಂದಿರುವಿಯೋ? ಅಥವಾ ಆತನಿಂದ ಎಂದೂ ತಿಳಿಸಲ್ಪಡದಿರುವ ನಿನ್ನದೇ ಆದ ಪರಿಕಲ್ಪನೆಗಳೊಂದಿಗೆ ಒಪ್ಪಂದ ಮಾಡಿಕೊಳ್ಳಲು ಪ್ರಯತ್ನಿಸುತ್ತಿರುವೆಯೋ? ''ಆತನು ನಿಮಗೆ ಏನು ಹೇಳುವನೊ ಅದನ್ನು ಮಾಡಿರಿ'' (ಯೋಹಾನ 2:5)

# ಸ್ವಾಮಿಯವರ ಆಕಸ್ಮಿಕ ಭೇಟಿ

**''ನೀವು ಸಹ ಸಿದ್ಧವಾಗಿರ್ರಿ'' - (ಲೂಕ 12:40)**

ಒಂದು ತಿರುವಿನಲ್ಲಿ , ಅಥವಾ ಪ್ರತಿಯೊಂದು ತಿರುವಿನಲ್ಲಿಯೂ ಆಕಸ್ಮಿಕ ಭೇಟಿನೀಡುವ ಯೇಸುಕ್ರಿಸ್ತನನ್ನು ಮುಖಾಮುಖಿಯಾಗಿ ಸಂಧಿಸಲು ಸದಾ ಸಿದ್ಧತೆಯಿಂದಿರುವುದೇ ಕ್ರೈಸ್ತ ಸೇವಕನ ಮುಖ್ಯ ಅಗತ್ಯತೆಯಾಗಿದೆ. ನಮ್ಮ ಅನುಭವವು ಏನೇ ಆಗಿದ್ದರೂ ಇದು ಸುಲಭವಲ್ಲ. ಇಂಥಾ ಸಿದ್ಧತೆಯ ಹೋರಾಟವು, ಅದು ಪಾಪದ ವಿರುದ್ಧವಲ್ಲ, ಸಂಕಷ್ಟಗಳ ವಿರುದ್ಧವೂ ಅಲ್ಲ ಅಥವಾ ಸನ್ನಿವೇಶಗಳ ವಿರುದ್ಧವೂ ಅಲ್ಲ , ಯಾವುದೋ ದಿಕ್ಕಿನಲ್ಲಿಯೋ, ಪ್ರತಿ ತಿರುವಿನಲ್ಲಿಯೋ ಯೇಸುಕ್ರಿಸ್ತನನ್ನು ಮುಖಾಮುಖಿ ಯಾಗಿ ಸಂಧಿಸಲು ಸಿದ್ಧವಿರಲಾರದಷ್ಟರ ಮಟ್ಟಿಗೆ ಆತನ ಸೇವೆಯಲ್ಲಿ ಮಗ್ನವಾಗಿರುವಿಕೆಯ ವಿರುದ್ಧವೇ ಈ ಹೋರಾಟ. ನಮ್ಮ ನಂಬಿಕೆಗಳನ್ನೆದುರಿಸುವುದಲ್ಲ, ಇಲ್ಲವೆ ಸೂತ್ರ ಧರ್ಮಗಳನ್ನೆದುರಿಸುವ ಅಥವಾ ಕ್ರಿಸ್ತನ ಸೇವೆಗೆ ನಾವು ಯೋಗ್ಯರೋ ಅಲ್ಲವೋ ಎಂಬ ಪ್ರಶ್ನೆಯನ್ನೆದು ರಿಸುವುದಲ್ಲ, ಆತನನ್ನು ಎದುರಿಸುವುದೇ ಮುಖ್ಯ ಅವಶ್ಯಕತೆಯಾಗಿದೆ.

ನಾವು ನಿರೀಕ್ಷಿಸುವ ಸ್ಥಿತಿಗತಿ, ಸ್ಥಳಗಳಲ್ಲಿ ಆತನು ಆಗಮಿಸುವುದು ವಿರಳವೇ; ನಾವು ಎಂದೂ ನಿರೀಕ್ಷಿಸದ ಸಮಯ, ಸನ್ನಿವೇಶ, ಸ್ಥಳಗಳಲ್ಲೇ ಆತನು ಕಾಣಿಸಿಕೊಳ್ಳುತ್ತಾನೆ; ಅನೇಕ ವೇಳೆ ತರ್ಕ ಯೋಗ್ಯವಲ್ಲದ ಸನ್ನಿವೇಶಗಳಲ್ಲಿಯೇ ನಮಗೆದುರಾಗುತ್ತಾನೆ. ಆತನ ಪ್ರಾಮಾಣಿಕ ಸೇವಕನಾಗಿರಲು ಸಾಗಬೇಕಾಗಿರುವ ಒಂದೇ ದಾರಿಯೆಂದರೆ - ಒಡೆಯನ ಆಕಸ್ಮಿಕ ಬೇಟಿಗಾಗಿ ಸದಾ ಸಿದ್ಧತೆಯಿಂದಿ ರುವುದು; ನೀನು ಮಗ್ನನಾಗಿರುವ ಆತನ ಸೇವೆಯು ಮುಖ್ಯವಲ್ಲ. ಪ್ರತಿಯೊಂದು ದಿಕ್ಕುದೆಶೆಗಳ ತಿರುವಿನಲ್ಲಿ, ಯೇಸುಕ್ರಿಸ್ತನನ್ನು ನಿರೀಕ್ಷಿಸುವ ಅತಿಶಯವಾದ ಆತ್ಮೀಕ ವಾಸ್ತವವೇ ಮುಖ್ಯವಾಗಿದೆ. ಇಂಥಾ ಸಿದ್ಧತೆಯ ಜೀವಿತವು ಶಿಶುವಿನಲ್ಲಿರುವಂಥ ಮುಗ್ಧ ಚಕಿತ ಸ್ವಭಾವವನ್ನು ಹೊಂದಿರಬೇಕೆಂದು ಆತನು ಬಯಸುತ್ತಾನೆ. ಯೇಸುಕ್ರಿಸ್ತನನ್ನು ಮುಖಾ ಮುಖಿಯಾಗಿ ಕಾಣಲು ನಾವು ಸಿದ್ಧರಾಗುತ್ತಿದ್ದರೆ, ಧಾರ್ಮಿಕರಾಗಿರುವುದನ್ನು ಮೊದಲು ನಿಲ್ಲಿಸಬೇಕು. (ಧರ್ಮವನ್ನು ಉಚ್ಚ ಸಂಸ್ಕೃತಿಯನ್ನಾಗಿ ಬಳಸಿ ಕೊಳ್ಳುವುದನ್ನು ನಿಲ್ಲಿಸಬೇಕು) ನಾವು ಆತ್ಮೀಕವಾಗಿ ನಿಜಸ್ಥ ರಾಗಿರಬೇಕು.

ನೀನು ಜೀವಿಸುತ್ತಿರುವ ಪ್ರಸ್ತುತ ಕಾಲದ ಧರ್ಮದ ಕರೆಯುವಿಕೆಯನ್ನು ದೂರಸರಿಸಿ, ಯೇಸುವಿನ ಮೇಲೆ ದೃಷ್ಟಿ ಇಟ್ಟು ಆತನೇನನ್ನು ನಿನ್ನಿಂದ ಬಯಸುವನೋ, ಅದನ್ನೇ ನೀನು ಮಾಡುತ್ತಾ ಆತನ ಜೀವನ ಮಾದರಿಯನ್ನು ಕುರಿತು ಚಿಂತನೆ ಮಾಡಿದರೆ, ಪ್ರಯೋಜನಕ್ಕೆ ಬಾರದ ಕನಸುಗಾರನೆಂದು ನೀನು ಕರೆಯಲ್ಪಡುವುದು ನಿಜವಿರಬಹುದು; ಆದರೆ ದೈನಂದಿನ ಕಾರ್ಯಭಾರಗಳಲ್ಲಿ, ಅದರ ಒತ್ತಡಗಳಲ್ಲಿ ಮಗ್ನರಾಗಿದ್ದಾಗ, ಯೇಸುಕ್ರಿಸ್ತನು ಹಠಾತ್ತಾಗಿ ಕಾಣಿಸಿಕೊಂಡರೆ ಆಗ ಆತನನ್ನು ಮುಖಾ ಮುಖಿಯಾಗಿ ಕಾಣಲು ನೀನೊಬ್ಬನೇ ಸಿದ್ಧವಾಗಿರುವಿ ಎಂಬುದೇ ನಿಜಸತ್ಯ. ಯಾರಲ್ಲಿಯೂ ಭರವಸೆಯಿಡಬೇಡ; ಈ ಧರೆಯ ಮೇಲೆ ನಡೆದಾಡಿದ ಶ್ರೇಷ್ಠ ಸಂತನಲ್ಲಿಯೂ ಭರವಸೆಯಿಡಬೇಡ, ಆ ಸಂತನು ಒಂದು ವೇಳೆ ಯೇಸುಕ್ರಿಸ್ತನನ್ನು ಕಾಣುವ ನಿನ್ನ ದೃಷ್ಟಿಯನ್ನು ಅಡ್ಡಿ ಪಡಿಸಿದರೆ ಅವನನ್ನು ಸಹಾ ಸಹಾ ಉಪೇಕ್ಷಿಸಿ ಅವನ ಸಹವಾಸವನ್ನು ತ್ಯಜಿಸಬೇಕು.

# ದೇವರ ಬಗ್ಗೆ ಪರಿಶುದ್ಧತೆಯೋ ಅಥವಾ ಕಠಿಣತೆಯೋ?

**''ಕರ್ತನು ......... ಉದ್ಧಾರಕನಾದ ಯಾವ ಪುರುಷನೂ ಇಲ್ಲವೆಂದು'' - (ಯೆಶಾಯ 59:16)**

ನಮ್ಮಲ್ಲನೇಕರು ಪ್ರಾರ್ಥನೆ ಮಾಡುವುದನ್ನು ನಿಲ್ಲಿಸಿ ಬಿಟ್ಟು ದೇವರ ಬಗ್ಗೆ ಕಠಿಣ ಹೃದಯವುಳ್ಳವರಾಗಲು ಕಾರಣವೆಂದರೆ ಪ್ರಾರ್ಥನೆಯಲ್ಲಿ ನಮಗೆ ಕೇವಲ ಬಾವೋದ್ವೇಗದ ಆಸಕ್ತಿ ಮಾತ್ರ ಇರುವುದರಿಂದಲೇ. ನಾವು ಪ್ರಾರ್ಥನೆ ಮಾಡುತ್ತಿದ್ದೇವೆಂಬ ಹೇಳಿಕೆಯು, ಕೇಳಲು ಚೆನ್ನಾಗಿರುತ್ತದೆ; ಪ್ರಾರ್ಥನೆಯು ಪ್ರಯೋಜನಕರವಾದದ್ದೆಂದು ತಿಳಿಸುವ ಪುಸ್ತಕಗಳನ್ನು ಓದುತ್ತೇವೆ. ನಾವು ಪ್ರಾರ್ಥಿಸುತ್ತಿರುವಾಗ ನಮ್ಮ ಮನಸ್ಸು ಶಾಂತವಾಗಿರುತ್ತದೆ, ಮತ್ತು ಆತ್ಮನು ಉನ್ನತ ಮಟ್ಟಕ್ಕೇರುತ್ತಿರುವಂತೆ ಅನುಭವವಾಗುತ್ತದೆ ಎಂದೆಲ್ಲಾ ಹೇಳಬಹುದು. ಆದರೆ ಪ್ರವಾದಿಯಾದ ಯೆಶಾಯನು ಒತ್ತುಕೊಟ್ಟು ಹೇಳುತ್ತಿರುವನು - ಪ್ರಾರ್ಥನೆಗಳ ವಿಷಯವಾಗಿರುವ ಅಂಥಾ ಯೋಚನೆಗಳಿಗೆ ದೇವರು ಅಚ್ಚರಿಪಡುತ್ತಾನೆ.

ದೈವಾರಾಧನೆಯೂ ಮತ್ತು ಪರಾರ್ಥ ಪ್ರಾರ್ಥನೆಗಳು ಜೊತೆಯಾಗಿಯೇ ಇರಬೇಕು. ಒಂದನ್ನು ಬಿಟ್ಟು ಇನ್ನೊಂದು ಮಾತ್ರ ಇರಲು ಅಸಾಧ್ಯ. ಪರಾರ್ಥ ಪ್ರಾರ್ಥನೆ ಎಂದರೆ ನಾವು ಯಾರ ಸಲುವಾಗಿ ಪ್ರಾರ್ಥಿಸುತ್ತಿರುವೆವೋ ಅವರ ಬಗ್ಗೆ ಯೇಸುಕ್ರಿಸ್ತನಲ್ಲಿದ್ದಂಥ ಮನಸ್ಸನ್ನು ನಾವು ಹೊಂದುವಂತೆ ನಮ್ಮ ಮನಸ್ಸುಗಳನ್ನು ಚುರುಕುಗೊಳಿಸುವುದಾಗಿದೆ. ಅನೇಕ ವೇಳೆ ದೇವರನ್ನು ಆರಾಧಿಸುವ ಬದಲು, ಫಲಪ್ರದ ಪ್ರಾರ್ಥನೆ ಹೇಗಿರಬೇಕೆಂಬ ವಾಕ್ಯ ಜೋಡಣೆಗಳ ಬಡ ಬಡಿಕೆಯಲ್ಲಿ ತೊಡಗಿರುತ್ತೇವೆ. ದೇವರನ್ನು ಪ್ರಾರ್ಥನಾ ಪೂರ್ವಕವಾಗಿ ಆರಾಧಿಸುತ್ತಿರುವೆವೋ ಇಲ್ಲವೇ ದೇವರೊಂದಿಗೆ ಚರ್ಚೆಗಿಳಿದಿರುವೆವೋ? ''ದೇವರೇ ನೀನು ಇದನ್ನು ಮಾಡುವೆ ಎಂಬುದನ್ನು ನಾನು ಕಾಣೆ''. ಇದು ನಾವು ದೇವರನ್ನು ಆರಾಧಿಸುತ್ತಿಲ್ಲವೆಂಬುದರ ಖಚಿತ ಸೂಚನೆಯಾಗಿದೆ. ದೇವರನ್ನು ಕಾಣುವ ದೃಷ್ಟಿ ಮರೆಯಾದಾಗಲೇ ನಾವು ಕಾಠಿಣ್ಯರು ಮತ್ತು ಮತಾಂಧರೂ ಆಗುತ್ತೇವೆ. ನಮ್ಮ ಬೇಡಿಕೆಗಳನ್ನು ದೇವರ ಸಿಂಹಾಸನದೆಡೆಗೆ ತೂರಿ ಎಸೆದು ಬಿಡುತ್ತೇವೆ ಮತ್ತು ಆ ಪ್ರಾರ್ಥನೆಗಳಲ್ಲಿ ದೇವರಿಂದ ನಾವು ಏನು ಇಚ್ಛಿಸಿರುವೆವೋ ಅದನ್ನು ಮಾಡಬೇಕೆಂದು ದೇವರಿಗೆ ಕಟ್ಟಾದ ಅಪ್ಪಣೆಗಳನ್ನು ಕೊಡುತ್ತೇವೆ. ನಾವು ದೇವರನ್ನು ಪಾರ್ಥನಾ ಪೂರ್ವಕವಾಗಿ ಆರಾಧಿಸುವುದಿಲ್ಲ ಮತ್ತು ಪ್ರಾರ್ಥನಾ ವಿಷಯಗಳಲ್ಲಿ ಯೇಸುಕ್ರಿಸ್ತನಲ್ಲಿದ್ದಂಥಾ ಮನಸ್ಸನ್ನು ಹೊಂದಿಕೊಳ್ಳಲು ಪ್ರಯತ್ನಿಸುವುದಿಲ್ಲ. ನಾವು ದೇವರ ಕಡೆಗೆ ಕಾಠಿಣ್ಯವುಳ್ಳವರಾಗಿದ್ದರೆ, ಇತರ ಜನರೊಂದಿಗೂ ಕಠಿಣ ಹೃದಯವುಳ್ಳವರಾಗಿರುತ್ತೇವೆ.

ದೇವರನ್ನು ಹಿಡಿದು ಕೊಳ್ಳುವಂಥಾ ದೈವರಾಧನೆಯನ್ನು ಸಲ್ಲಿಸಲು ನಮ್ಮನ್ನು ನಾವು ಎಚ್ಚರಪಡಿಸಿಕೊಳ್ಳುತ್ತಿರುವೆವೋ? ನಾವು ಯಾರ ಪರವಾಗಿ ಪ್ರಾರ್ಥಿಸುತ್ತಿರುವೆವೋ ಅವರ ಪರವಾಗಿರುವ ಯೇಸುಕ್ರಿಸ್ತನ ಮನಸ್ಸನ್ನು ಹೊಂದಿಕೊಳ್ಳುವ ಹಾಗೆ ದೇವರನ್ನು ಆರಾಧಿಸುತ್ತಿರುವೆವೋ ?

''ಪರರಿಗಾಗಿ ಸರಿಯಾಗಿ ಪ್ರಾರ್ಥಿಸುವವರೊಬ್ಬರೂ ಇಲ್ಲ.'' ಹಾಗೆ ಮಾಡಬಲ್ಲ ವ್ಯಕ್ತಿ ನೀನೇ ಆಗಿರು, ಪ್ರಾರ್ಥನಾ ಪೂರ್ವಕವಾದ ದೈವಾರಾಧನೆ ಮಾಡುವವನು ನೀನೇ ಆಗಿರು, ದೇವರೊಂದಿಗೆ ಪರಿಶುದ್ಧವಾದ ಸಂಬಂಧಗಳಲ್ಲಿರುವವನು ನೀನೇ ಆಗಿರು. ಪರಾರ್ಥ ಪ್ರಾರ್ಥನೆಯ ನಿಜ ಕಾಯಕದಲ್ಲಿ ತೊಡಗು ಮತ್ತು ಅದು ಒಂದು ಪ್ರಮುಖ ಕಾಯಕವೆಂಬ ಅರಿವು ನಿನಗಿರಲಿ, ಆ ಕಾಯಕವು ನಿನ್ನೆಲ್ಲಾ ಶಕ್ತಿ ಸಾಮರ್ಥ್ಯಗಳನ್ನು ಬಳಸಿಕೊಳ್ಳುವುದು. ಆದರೂ ಆ ಕಾಯಕದಲ್ಲಿ ಯಾವುದೇ ಉರುಲುಗಳಿಲ್ಲ. ಸುವಾರ್ತೆ ಸಾರುವುದರಲ್ಲಿ ಉರಲು ಇದೆ. ಆದರೆ ಪರಾರ್ಥಪ್ರಾರ್ಥನೆಗಳಲ್ಲಿ ಅಂಥದ್ದೇನೂ ಇಲ್ಲವೇ ಇಲ್ಲ.

# ಒಳಪಡುವಿಕೆಯೋ ಅಥವಾ ಡಾಂಭಿಕತೆಯೋ?

**''ಯಾವನಾದರೂ ತನ್ನ ಸಹೋದರನು ಮರಣಕರವಲ್ಲದ ಪಾಪಮಾಡುವದನ್ನು ಕಂಡರೆ, ಅವನುದೇವರನ್ನು ಬೇಡಿಕೊಳ್ಳಲಿ, ಆಗ ದೇವರು ಮರಣಕರವಲ್ಲದ ಪಾಪ ಮಾಡುವವರಿಗೆ ಜೀವವನ್ನು ದಯಪಾಲಿಸುವನು'' - (1 ಯೋಹಾ 5:16)**

ದೇವರ ಆತ್ಮನು ನಮ್ಮೊಳಗೆ ಕಾರ್ಯವೆಸಗುವ ಮಾರ್ಗಗಳ ಬಗ್ಗೆ ನಾವು ಜಾಗರೂಕತೆಯಿಂದಿರದಿದ್ದರೆ, ನಾವು ಆಧ್ಯಾತ್ಮಿಕ ಆಷಾಡ ಭೂತಿಗಳಾಗಿ ಬಿಡುತ್ತೇವೆ. ಬೇರೆಯವರು ಆಧ್ಯಾತ್ಮಿಕವಾಗಿ ಸೋಲುತ್ತಿರುವುದೆಲ್ಲಿ ಎಂಬುದನ್ನು ನಾವು ಕಾಣುತ್ತೇವೆ, ಆಗ ಅವರ ಬಗ್ಗೆ ನಮ್ಮದೇ ಆದ ತೀರ್ಮಾನಗಳನ್ನು ಮಾಡುತ್ತೇವೆ, ಅವರ ಪರವಾಗಿ ದೇವರಲ್ಲಿ ಪ್ರಾರ್ಥನೆಗಳನ್ನು ಸಲ್ಲಿಸುವ ಬದಲು ಆ ತೀರ್ಮಾನಗಳನ್ನು , ಅವರ ಬಗ್ಗೆ ಅಣಕವಾಡುವ ಮತ್ತು ಖಂಡಿಸುವ ವಿಮರ್ಷೆಗಳನ್ನಾಗಿ ಪರಿವರ್ತಿಸುತ್ತೇವೆ. ಹೀಗೆ ಇತರರ ಬಗ್ಗೆ ತಿಳಿದು ಬಂದಸತ್ಯಗಳು ನಮ್ಮ ಬುದ್ಧಿತೀಕ್ಷ್ಣತೆಗಳ ಮೂಲಕ ಗ್ರಹಿಸಿಕೊಂಡವುಗಳಲ್ಲ, ಆದರೆ ದೇವರಾತ್ಮನು ನಮ್ಮೊಳಗೆ ತೂರಿ ಪ್ರವೇಶಿಸುವುದರ ಮೂಲಕ ಗ್ರಹಿಸಲ್ಪಟ್ಟಿವೆ, ದೇವರು ನಮಗೆ ದಯಪಾಲಿಸಿದ ಗ್ರಹಣ ಶಕ್ತಿಯ ಮೂಲದ ಬಗ್ಗೆ ಅರಿವಿಲ್ಲದವರಾಗಿ, ನಾವು ಕೇವಲ ವಿಮರ್ಶಾ ಕೇಂದ್ರಗಳಾಗಿ ಬಿಡುತ್ತೇವಲ್ಲದೆ, ದೇವರು ಹೇಳಿರುವುದನ್ನು ಮೊದಲು ಮರೆತು ಬಿಡುತ್ತೇವೆ. ''ಅವನು ದೇವರನ್ನು ಬೇಡಿಕೊಳ್ಳಲಿ ಆಗ ದೇವರು ಮರಣಕರವಲ್ಲದ ಪಾಪ ಮಾಡುವವರಿಗೆ ಜೀವವನ್ನು ದಯಪಾಲಿಸುವನು'' ಎಚ್ಚರವಹಿಸು, ಇಲ್ಲದಿದ್ದರೆ, ನೀನು ದೇವರನ್ನು ಆರಾಧಿಸುವುದಕ್ಕಿಂತ ಮೊದಲೇ ಇತರರನ್ನು ಸರಿಪಡಿಸಲೆತ್ನಿಸುತ್ತಾ, ನಿನ್ನೆಲ್ಲಾ ಸಮಯವನ್ನು ಹರಣಮಾಡಿಕೊಂಡು ಕೇವಲ ಆಷಾಡ ಭೂತಿ ತನವನ್ನು ನೀನು ಪ್ರದರ್ಶಿಸುತ್ತಾ ಇರುವಿ.

ಆತನ ಸಂತರೂ, ಸೇವಕರೂ ಆಗಿರುವ ನಮ್ಮ ಮೇಲೆ ದೇವರು ಹೊರಿಸುವ ಬಹು ಸೂಕ್ಷ್ಮ ಭಾರಗಳಲ್ಲಿ, ಇತರರ ವಿಷಯವಾಗಿ ನಾವು ವಿವೇಚನಾಪೂರ್ವಕವಾಗಿ ವಿಮರ್ಷೆ ಮಾಡುವ ಭಾರವೂ ಒಂದಾಗಿದೆ. ಇತರರ ವಿಷಯದಲ್ಲಿ ಅಂಥ ತಿಳುವಳಿಕೆಯನ್ನು ದೇವರು ನಮಗೆ ನೀಡುವುದರಿಂದ, ನಾವು ಆತನ ಸನ್ನಿಧಿಯಲ್ಲಿ ಅವರ ಭಾರವನ್ನು ಹೊತ್ತುಕೊಂಡು, ಅವರ ಪರವಾಗಿ ಯೇಸುಕ್ರಿಸ್ತನಿಗಿದ್ದ ಮನಸ್ಸನ್ನು ನಾವು ಹೊಂದಿಕೊಂಡು ಪ್ರಾರ್ಥಿಸುವವರಾಗಬೇಕು. (ಫಿಲಿ 2:5 ನೋಡಿರಿ) ಹೀಗೆ ಹೊಣೆಗಾರಿಕೆಯುಳ್ಳ ಪರಾರ್ಥಪ್ರಾರ್ಥನೆಗಳಲ್ಲಿ ನಾವು ತೊಡಗಿದಾಗ ದೇವರು ನಮಗೆ ಹೇಳುವುದೇನೆಂದರೆ ''ಮರಣಕರ ವಲ್ಲದ ಪಾಪ ಮಾಡುವವರಿಗೆ ಜೀವವನ್ನು ದಯಪಾಲಿಸುವೆನು''. ಇಲ್ಲಿ ದೇವರನ್ನು ನಾವು ನಮ್ಮ ಆಂತರ್ಯದ ಸಂಪರ್ಕಕ್ಕೆ ತಂದುಕೊಳ್ಳಲು ಸಾಧ್ಯವಾಯಿತು ಎಂಬ ಗ್ರಹಿಕೆ ಮುಖ್ಯವಲ್ಲ ಆದರೆ ನಾವು ಯಾರಿಗಾಗಿ ಪ್ರಾರ್ಥಿಸುತ್ತಿರುವೆವೋ ಅವರ ವಿಷಯದಲ್ಲಿ ದೇವರು ತನ್ನ ಮನಸ್ಸನ್ನು ನಮಗೆ ಅನುಗ್ರಹ ಮಾಡುವ ಯೋಗ್ಯತೆಯನ್ನು ನಾವು ಹೊಂದುತ್ತಿರುವ ವಾಸ್ತವಕ್ಕೆ ಎಚ್ಚರಗೊಳ್ಳುತ್ತಿರುವುದೇ ಮುಖ್ಯ.

ಇತರರಿಗೋಸ್ಕರ ಯೇಸುಕ್ರಿಸ್ತನಲ್ಲಿದ್ದ ಆತ್ಮವೇದನೆಯನ್ನು ದೇವರು ನಮ್ಮಲ್ಲಿಯೂ ಕಾಣುತ್ತಿರುವನೋ? ನಾವು ಯಾರ ಪರವಾಗಿ ಪ್ರಾರ್ಥನೆಗಳನ್ನು ದೇವರಿಗೆ ಸಲ್ಲಿಸುತ್ತಿರುವೆವೋ ಅವರ ಬಗ್ಗೆ ಯೇಸುಕ್ರಿಸ್ತನಿಗಿದ್ದ ಮನೋಭಾವನೆಯನ್ನು ನಾವೂ ಹೊಂದುವಷ್ಟರ ಮಟ್ಟಿಗೆ ಆತನೊಂದಿಗೆ ನಾವು ಅಷ್ಟು ಗಾಢವಾಗಿ ಗುರುತಿಸಿಕೊಂಡ ಹೊರತು, ಆತನು ತನ್ನ ಅಂತಃ ಕರಣವನ್ನು ನಮ್ಮಲ್ಲಿ ಕಾಣಲಾರನು. ನಾವು ಯಥಾರ್ಥವಾದ, ಪರಾರ್ಥ ಪ್ರಾರ್ಥನೆಗಳನ್ನು ಸಲ್ಲಿಸುವವರೆಂದು ಯೇಸುಕ್ರಿಸ್ತನು ಸಮ್ಮತಿಸುವಂತೆ ಹೃದಯ ಪೂರ್ವಕವಾಗಿ ಪರರಿಗಾಗಿ ಪ್ರಾರ್ಥನೆಗಳನ್ನು ಸಲ್ಲಿಸಲು ಕಲಿತುಕೊಳ್ಳೋಣ.

# ಇತರರ ಬಗ್ಗೆ ಹೃದಯವಂತಿಕೆಯೋ ಅಥವಾ ಹೃದಯ ಶೂನ್ಯತೆಯೋ?

**''ಕ್ರಿಸ್ತಯೇಸು .......... ನಮಗೋಸ್ಕರ ಬೇಡುವವನಾಗಿದ್ದಾನೆ........ ಆತ್ಮನು ....... ದೇವಜನರಿಗೋಸ್ಕರ ಬೇಡಿಕೊಳ್ಳುವನು'' - (ರೋಮಾಯ 8:34, 27)**

ಯೇಸುಕ್ರಿಸ್ತನು ''ಅವರಿಗೋಸ್ಕರ ವಿಜ್ಞಾಪನೆ ಮಾಡುವದಕ್ಕೆ ಯಾವಾಗಲೂ ಬದುಕುವವ ನಾಗಿದ್ದಾನೆ'' ಮತ್ತು ''ಪವಿತ್ರಾತ್ಮನು ದೇವ ಜನರಿಗೋಸ್ಕರ ಬೇಡಿಕೊಳ್ಳುವನು'' (ಇಬ್ರಿಯ 7:25). ಪರಾರ್ಥಪ್ರಾರ್ಥನಾರ್ಥಿಗಳಾಗಲು ಇದಕ್ಕಿಂತಲೂ ಹೆಚ್ಚಿನ ಸಮರ್ಥನೆಗಳು ನಮಗೆ ಅಗತ್ಯವೋ? ಪವಿತ್ರಾತ್ಮನಿಂದ ಬೋಧಿತರಾದ ದೇವರ ಮಕ್ಕಳಾದ ನಾವು ನಮ್ಮ ಸಹಮಾನವರ ಪರವಾಗಿ ಪರಾರ್ಥ ಪ್ರಾರ್ಥನೆಗಳನ್ನು ಸಲ್ಲಿಸುವಂತೆ ಅವರೊಂದಿಗೆ ನಾವು ಅಂಥ ಬಾಂಧವ್ಯದಲ್ಲಿ ಬದುಕುತ್ತಿರುವೆವೋ ? ನಮ್ಮನ್ನಾವರಿಸಿರುವ ಸನ್ನಿವೇಶಗಳಲ್ಲಿಯೇ ಪರಾರ್ಥ ಪ್ರಾರ್ಥನೆಯ ಕಾರ್ಯಾರಂಭವಾಗಲಿ. ನಮ್ಮ ಸಂಸಾರ, ನಮ್ಮ ವ್ಯವಹಾರ, ನಮ್ಮ ರಾಷ್ಟ್ರ - ನಮ್ಮನ್ನೂ ಪರರನ್ನೂ ಕಾಡುತ್ತಿರುವ ಸಮಸ್ಯೆಗಳು - ಇವು ನಮ್ಮನ್ನು ಜಜ್ಜುತ್ತಿವೆಯೋ? ನಮ್ಮನ್ನು ದೇವರ ಸನ್ನಿಧಿಯಿಂದ ದೂರಮಾಡಿ, ಆತನನ್ನು ಆರಾಧಿಸಲು ಸಮಯವೇ ಇಲ್ಲದಿರುವಷ್ಟರ ಮಟ್ಟಿಗೆ ಇವು ನಮ್ಮನ್ನಾವರಿಸಿಕೊಂಡು ಪೀಡಿಸಿ ಹಿಂಸಿಸುತ್ತಿವೆಯೋ? ಇವುಗಳಿಂದಾಗಿ ದೇವರ ಸನ್ನಿಧಿಯಿಂದ ಹೊರಗೆ ತಳ್ಳಲ್ಪಟ್ಟು, ದೇವರನ್ನು ಆರಾಧಿಸಲೂ ಸಮಯವಿಲ್ಲ ದಾಗಿದೆಯೋ? ಹಾಗಿದ್ದರೆ ಇವುಗಳಿಗೆ 'ಸಾಕಿನ್ನು' ಎಂದು ನಿಲ್ಲಿಸೋಣ ಮತ್ತು ಇತರ ರೊಂದಿಗೆ ನಮಗಿರುವ ಸಂಬಂಧಗಳನ್ನು ಕಾಪಾಡಿಕೊಳ್ಳುವಂತೆ ದೇವರಲ್ಲಿ ಜೀವವುಳ್ಳ ಬಾಂಧವ್ಯವನ್ನು ಹೊಂದಿ ಕೊಂಡು ಅದರ ಮೂಲಕ ಪರಾರ್ಥಪ್ರಾರ್ಥನಾ ಮಾರ್ಗದಲ್ಲಿ ನಾವು ಮುಂದರಿದರೆ, ಆಗ ಅಲ್ಲಿ ದೇವರು ಮಹತ್ಕಾರ್ಯಗಳನ್ನು ನಡೆಸುತ್ತಾನೆ.

ದೇವರ ಚಿತ್ತವನ್ನು ನೆರವೇರಿಸಲು ನಿನಗಿರುವ ಆಸಕ್ತಿಯಿಂದಾಗಿ ದೇವರನ್ನೇ ಕಡೆಗಣಿ ಸುವುದರ ಬಗ್ಗೆ ಎಚ್ಚರದಿಂದಿರು. ಸಾವಿರದ ಒಂದು ಚಟುವಟಿಕೆಗಳಲ್ಲಿ ನಾವು ದೇವರಿಗಿಂತ ಮುಂದೆ ಓಡುತ್ತೇವೆ. ಇದರಿಂದ ಜನರ ಮತ್ತು ಅವರ ಸಂಕಟಗಳ ಭಾರ ನಮ್ಮ ಮೇಲೆ ಎಷ್ಟಾಗಿರುತ್ತದೆಂದರೆ ನಾವು ದೇವರನ್ನೇ ಆರಾಧಿಸುವುದಿಲ್ಲ. ಪರರಿಗಾಗಿ ಪ್ರಾರ್ಥಿಸುವುದಿಲ್ಲ. ದೇವರನ್ನು ಆರಾಧಿಸುವ ಮನಃಸ್ಥಿತಿಯಲ್ಲಿ ನಾವಿರದಿದ್ದಾಗ ಇಂಥಾ ಭಾರ ಮತ್ತು ಅದರ ಒತ್ತಡಗಳು ಒಮ್ಮೆ ನಮ್ಮ ಮೇಲೆ ಬಂದರೆ, ಅದು ದೇವರ ಬಗ್ಗೆ ಕಾಠಿಣ್ಯವನ್ನಷ್ಟೇ ಅಲ್ಲದೆ ನಮ್ಮ ಆತ್ಮದಲ್ಲಿ ಜಿಗುಪ್ಸೆಯನ್ನುಂಟು ಮಾಡುತ್ತದೆ. ನಮಗೆ ಯಾರ ಬಗ್ಗೆ ಒಲವಿಲ್ಲವೋ ಅವರನ್ನೇ ದೇವರು ನಮ್ಮ ಒಡನಾಟದೊಳಗೆ ಪದೇ ಪದೇ ಕರೆತರುವನು. ದೇವರ ಆರಾಧನೆಯನ್ನು ಮಾಡುವವರು ನಾವಲ್ಲದಿದ್ದರೆ, ಅಂಥಾ ಸಮಯದಲ್ಲಿ ಯಾರಾದರೂ ಸಹಜವಾಗಿ ಮಾಡುವಂತೆ ನಾವು ಸಹಾ ಹೃದಯ ಶೂನ್ಯರಾಗಿ ಅವರನ್ನು ನಡೆಸಿಕೊಂಡು ಈಟಿಯಿಂದ ಚುಚ್ಚಿ ತಿವಿಯುವಂಥಾ ದೇವರ ವಾಕ್ಯವನ್ನು ಅವರಿಗೆ ಹೇಳುತ್ತೇವೆ ಅಥವಾ ಮರಳು ಗೊಳಿಸುವ ದೈವ ಸಂದೇಶವನ್ನು ನೀಡಿ ಹೊರಟು ಹೋಗುತ್ತೇವೆ. ಹೃದಯದ ಶೂನ್ಯನಾದ ಕ್ರೈಸ್ತನು ದೇವರ ಮರುಗುವಿಕೆಗೆ ಕಾರಣನಾಗಿರುತ್ತಾನೆ. ಯೇಸುಸ್ವಾಮಿಯ ಮತ್ತು ಪವಿತ್ರಾತ್ಮನ ಮಾದರಿಯ ಪರಾರ್ಥ ಪ್ರಾರ್ಥನೆಗಳಲ್ಲಿ ನಾವಿರುವೆವೋ? ಪರೀಕ್ಷಿಸಿಕೊಳ್ಳೋಣ.

# ಅತಿಶಯವಾದ ಮಹಿಮೆ

**''ಕರ್ತನಾದ ಯೇಸು ನಿನಗೆ ಕಣ್ಣು ಕಾಣುವಂತೆಯೂ ...... ನನ್ನನ್ನು ನಿನ್ನ ಬಳಿಗೆ ಕಳುಹಿಸಿದ್ದಾನೆ''**
**- (ಅ.ಕೃ - 9:17)**

ಶ್ರೀ ಪೌಲನು ದೃಷ್ಟಿಯನ್ನು ಪಡೆದುಕೊಂಡಾಗ, ಯೇಸುಕ್ರಿಸ್ತನನ್ನು ವ್ಯಕ್ತಿಶಃ (ವ್ಯಕ್ತಿಗತ ವಾಗಿ) ಅರಿಯುವ ಆತ್ಮೀಕ ಒಳದೃಷ್ಟಿಯನ್ನು ಪಡೆದನು ಮತ್ತು ಅನಂತರದ ಆತನ ಬದುಕು ಮತ್ತು ಬೋಧನೆಗಳಲ್ಲಿ ಯೇಸುಕ್ರಿಸ್ತನ ಹೊರತು ಬೇರೇನೂ ಇರಲೇ ಇಲ್ಲ - ''ನಾನು ಶಿಲುಬೆಗೆ ಹಾಕಲ್ಪಟ್ಟವನಾದ ಯೇಸುಕ್ರಿಸ್ತನನ್ನೇ ಹೊರತು ಬೇರೆಯಾವದನ್ನೂ ತಿಳಿಯದವನಾಗಿ ನಿಮ್ಮಲ್ಲಿ ಇರುವೆನೆಂದು ತೀರ್ಮಾನಿಸಿಕೊಂಡೆನು'' (1ಕೊರಿಂಥ - 2:2) ಯೇಸುಕ್ರಿಸ್ತನ ಮುಖವಲ್ಲದೆ ಬೇರೆಯಾವ ಆಕರ್ಷಣೆಗಳೂ ಪೌಲನ ಮನಸ್ಸು ಮತ್ತು ಆತ್ಮಗಳನ್ನು ಮತ್ತೊಮ್ಮೆ ಹಿಡಿದಿಡಲು ಅವನು ಬಿಡಲಿಲ್ಲ.

ನಮಗೆ ಪ್ರಕಟಿಸಲ್ಪಟ್ಟ ಯೇಸುಕ್ರಿಸ್ತನ ವಿಷಯವಾಗಿ ತೋರಿ ಬಂದ ದರ್ಶನದ ಗುಣ ನಡತೆಯ ಮಟ್ಟಕ್ಕಿಂತ ಅಲ್ಪವೂ ಕಡಿಮೆಯಾಗದಂತೆ ನಮ್ಮ ನಡತೆಗಳನ್ನು ಕಾಪಾಡಿಕೊಳ್ಳಲು ಕಲಿಯಬೇಕು.

ಯೇಸುಕ್ರಿಸ್ತನನ್ನು ಸಂಪೂರ್ಣವಾಗಿ ಅರಿತು, ಅದನ್ನು ತನ್ನ ಜೀವಿತದಲ್ಲಿ ಸದಾ ಪ್ರತಿಪಾದಿಸಿಸುತ್ತಾ, ಇತರರಿಗೂ ದೇವರ ಉದ್ದೇಶಗಳನ್ನು ಅರ್ಥೈಸಿ ತಿಳಿಸುವುದೇ ಆತ್ಮೀಕ ವ್ಯಕ್ತಿಯಲ್ಲಿರುವ ಗುಣಲಕ್ಷಣಗಳು. ಅವನ ಜೀವಿತದ ಏಕ ನಿಷ್ಠ ಹಂಬಲಿಕೆ - ಅದು ಯೇಸುಕ್ರಿಸ್ತನೇ. ಇಂಥಾ ಮಿಡಿತವಿರುವ ವ್ಯಕ್ತಿಯನ್ನು ನೀನು ಕಂಡಾಗ ಆ ಮನುಷ್ಯನು ದೇವರ ಪ್ರೀತಿಪಾತ್ರನೆಂದು ನಿನಗನ್ನಿಸುತ್ತದೆ. (ಅ.ಕೃ. 13:22 ನೋಡಿರಿ)

ಯೇಸುಕ್ರಿಸ್ತನಲ್ಲಿಟ್ಟಿರುವ ನಿನ್ನ ಅಂತಃದೃಷ್ಟಿಯನ್ನು ಪಲ್ಲಟಗೊಳಿಸುವಂಥವುಗಳಿಗೆಂದಿಗೂ ಅವಕಾಶವನ್ನೀಯಬೇಡ. ನೀನು ಆತ್ಮೀಕ ವ್ಯಕ್ತಿ ಹೌದೋ, ಅಲ್ಲವೋ ಎನ್ನುವುದಕ್ಕೆ ಅದೇ ಪರೀಕ್ಷೆ (Test). ನೀನು ಆತ್ಮೀಕ ವ್ಯಕ್ತಿಯಲ್ಲವೆಂಬುದರ ಅರ್ಥ, ಬೇರೆಲ್ಲಾ ವಿಷಯಗಳೂ ನಿನಗೆ ಹೆಚ್ಚು ಆಕರ್ಷಣೀಯ ವಾಗಿರುತ್ತವೆ. ನನ್ನ ಕಣ್ಣು ಯೇಸುವನ್ನೇ ದೃಷ್ಟಿಸುತ್ತಿದ್ದರಿಂದ ಸುತ್ತಲಿದ್ದವುಗಳ ಮೇಲೆ ಎನ್ ದೃಷ್ಟಿ ಶೂನ್ಯವಾಯಿತು. ಶಿಲ್ಬೆಪಟ್ಟವನನ್ನು ದಿಟ್ಟಿಸುತ್ತಾ ಎನ್ ಆತ್ಮದೃಷ್ಠಿ ಅಷ್ಟಾಗಿ ಆತನಲ್ಲಿ ಬಂಧಿಸಲ್ಪಟ್ಟಿತು.

# ನೀನಾದರೂ ತಿಳಿದಿದ್ದರೆ

**''ನೀನಾದರೂ ಸಮಾಧಾನಕ್ಕೆ ಬೇಕಾದದ್ದನ್ನು ಇದೇ ದಿನದಲ್ಲಿ ತಿಳಿದುಕೊಂಡರೆ ಎಷ್ಟೋ ಒಳ್ಳೇದು. ಆದರೆ ಈಗ ಅದು ನಿನ್ನ ಕಣ್ಣಿಗೆ ಮರೆಯಾಗಿದೆ'' - (ಲೂಕ - 19:42)**

ಜಯಘೋಷಗಳೊಡನೆ ಯೇಸುಕ್ರಿಸ್ತನು ಯೆರೂಸಲೇಮನ್ನು ಪ್ರವೇಶಿಸಿದ್ದಾನೆ, ಪಟ್ಟಣವು ಬುಡಸಮೇತ ಕದಲಿ ಅಲ್ಲಕಲ್ಲೋಲವಾಗಿದೆ; ಆದರೆ ಅಲ್ಲಿ ಅಪರಿಚಿತ ಅನ್ಯ ದೇವರೊಬ್ಬನಿದ್ದಾನೆ- ಪರಿಸಾಯ ಪ್ರತಿಷ್ಠೆ ; ಈ ದೇವರು ಧಾರ್ಮಿಕನೂ, ಪ್ರಾಮಾಣಿಕನೂ ಆಗಿರಬಹುದೆಂಬಂತೆ ಕಾಣಿಸುತ್ತದೆ, ಆದರೆ ಯೇಸುಸ್ವಾಮಿಯು ಅವನನ್ನು ಸುಣ್ಣ ಹಚ್ಚಿದ ಸಮಾಧಿಗಳಿಗೆ ಹೋಲಿಸಿರುವನು. ''ಹೊರಗೆ ಹಿಮದಂತೆ ಬೆಳ್ಳಗೆ; ಒಳಗೆ ಮೃತ ವ್ಯಕ್ತಿಯ ಮೂಳೆ ಮತ್ತು ಹೊಲಸು'' (ಮತ್ತಾಯ 23:27 ನೋಡಿರಿ)

'ನನ್ನ ದಿನದಲ್ಲಿ' ಕ್ರಿಸ್ತನ ಶಾಂತಿಯನ್ನು ನನ್ನ ಕಣ್ಣಿಗೆ ಯಾವುದು ಮರೆಮಾಡಿದೆ? ನನಗೂ ಒಬ್ಬ ವಿಲಕ್ಷಣ ದೇವರಿರುವನೋ - ಜಿಗುಪ್ಸೆಗೊಳಿಸುವ ಕುರೂಪಿಯಲ್ಲ, ಬಹುಶಃ ನನ್ನನ್ನಾಳುವ ವಿಕೃತ ಸ್ವಭಾವವೇ ಆ ದೇವರೋ ? ಒಂದಕ್ಕಿಂತ ಹೆಚ್ಚು ಸಲ ದೇವರು ನನ್ನನ್ನು ಈ ವಿಲಕ್ಷಣ ದೈವಕ್ಕೆ ಮುಖಾಮುಖಿ ಯಾಗುವಂತೆ ಮಾಡಿದ್ದಾನೆ. ಅದನ್ನು ನಾನು ತೊರೆದು ಬಿಡಲೇಬೇಕೆಂದು ನನಗೆ ತಿಳಿಯುತ್ತಿತ್ತಾದರೂ ನಾನು ತೊರೆಯಲಿಲ್ಲ. ಆಗಲೇನೋ ಕೂದಲೆಳೆಯಷ್ಟರಲ್ಲಿ ಈ ಕಿರಿಕಿರಿಯಿಂದ ಪಾರಾಗಿರುವುದು ನಿಜವಾದರೂ, ನಾನಿನ್ನೂ ಆ ವಿಕೃತ ದೈವದ ಅಧೀನದಲ್ಲಿಯೇ ಇರುತ್ತಿರುವೆನೆಂಬುದನ್ನು ಬಲ್ಲೆನು. ನನ್ನ ಶಾಂತಿಗೆ ಬೇಕಾದವುಗಳನ್ನು ಕಂಡೂ ಕಾಣದಂತಿರುವೆನು. ಗಾಬರಿಗೊಳ್ಳುವ ವಿಷಯವೆಂದರೆ, ದೇವರ ಆತ್ಮನಿಗೆ ಅಡೆತಡೆಯಿಲ್ಲದ ಮಾರ್ಗವಿರುವ ಸ್ಥಳದಲ್ಲಿಯೇ ನಾವಿರಬೇಕಾಗಿದ್ದಿತು, ಆದರೆ ದೇವರ ದೃಷ್ಟಿಯಲ್ಲಿ ಇನ್ನಷ್ಟು ದೋಷಿಗಳಾಗಿ ಕಾಣುವಂಥವುಗಳನ್ನೇ ಮಾಡುತ್ತಿದ್ದೇವೆ.

''ನೀನಾದರೂ ತಿಳಿದಿದ್ದರೆ .......'' ಯೇಸುಕ್ರಿಸ್ತನ ಕಣ್ಣೀರಿನಿಂದ ತುಂಬಿದ ದೇವರ ನುಡಿಗಳು, ನೇರವಾಗಿ ನಿನ್ನ ಹೃದಯವನ್ನೇ ಸ್ಪರ್ಶಿಸುವವು. ಈ ವಾಕ್ಯಗಳು ನಮ್ಮ ದೋಷಗಳ ಬಗ್ಗೆ ದಂಡನೆಯ ಹೊಣೆಗಾರಿಕೆಗೆ ಒತ್ತುಕೊಡುತ್ತಿವೆ; ನಮ್ಮ ಪಾಪಗಳ ನಿಮಿತ್ತ ಯಾವುದನ್ನು ನೋಡಲು ನಿರಾಕರಿಸುತ್ತೇವೆಯೋ ಅಥವಾ ನೋಡಲಾಗುವುದಿಲ್ಲವೋ, ಅದಕ್ಕಾಗಿ ದೇವರು ನಮ್ಮನ್ನು ಹೊಣೆಗಾರರನ್ನಾಗಿ ಮಾಡುತ್ತಾನೆ. ''ಆದರೆ ಈಗ ಅದು ನಿನ್ನ ಕಣ್ಣಿಗೆ ಮರೆಯಾಗಿದೆ'' - ಅದಕ್ಕೆ ಕಾರಣ ನಿನ್ನ ಸ್ವಭಾವವು ದೇವರ ವಶವರ್ತಿಯಾಗಲೇ ಇಲ್ಲ. ಆದ್ದರಿಂದಲೇ ಗಣಿಸಲಸಾಧ್ಯವಾದ ವ್ಯಥೆ ತುಂಬಿದ ಮಾತು - ''ಆಗಿದ್ದರೆ !''. ದೇವರು ತಾನು ಮುಚ್ಚಿ ಬಾಗಿಲನ್ನು ಮತ್ತೊಮ್ಮೆ ತೆರೆಯುವುದಿಲ್ಲ. ಬೇರೆ ಬಾಗಿಲುಗಳನ್ನು ತೆರೆದಿಡುವನು. ಆದರೆ ದೇವರು ತೆರೆದಿಟ್ಟ ಬಾಗಿಲುಗಳನ್ನು ನಾವೇ ಮುಚ್ಚಿಬಿಟ್ಟಿದ್ದನ್ನು ಮತ್ತು ಅವುಗಳನ್ನು ಮುಚ್ಚುವ ಹಾಗೂ ಭಾವನೆಗಳನ್ನು ಕಲುಷಿತಗೊಳಿಸುವ ಅವಶ್ಯಕತೆಯೂ ಇರಲಿಲ್ಲವೆಂಬುದನ್ನು ಆತನು ನಮಗೆ ಜ್ಞಾಪಿಸುತ್ತಾನೆ. ಗತವನ್ನು ಮರಳಿ ನಿನ್ನ ಸ್ಮರಣೆಗೆ ದೇವರು ಬರಮಾಡಿದಾಗ ಭಯ ಪಡಬೇಡ. ಸ್ಮರಣೆಯು ತನ್ನ ದಾರಿಯಲ್ಲಿ ಸಾಗಲಿ. ದುಃಖ, ದಂಡನೆ ಮತ್ತು ತೆಗಳುವಿಕೆಯು ದೇವರಿಂದ ಬಂದಿವೆ. ''ಆಗಿದ್ದರೆ'' ಎಂಬುದನ್ನು, ನಿನ್ನ, ಭವಿಷ್ಯತ್ತಿನ ಸುಂದರ ಸಂಸ್ಕೃತಿಯನ್ನಾಗಿ ದೇವರು ಮಾರ್ಪಡಿಸುತ್ತಾನೆ.

# ನಿರಂತರವಾದ ಭಕ್ತಿಯ ಮಾರ್ಗ

**''ನಿಮ್ಮಲ್ಲಿ ಒಬ್ಬೊಬ್ಬನೂ ........ ಚದುರಿ ಹೋಗುವ ......... ಕಾಲ ..... ಈಗ ಬಂದಿದೆ''**
**- (ಯೋಹಾನ - 16:32)**

ಯೇಸು ಸ್ವಾಮಿಯು ತನ್ನ ಶಿಷ್ಯರನ್ನು ಇಲ್ಲಿ ತೆಗಳುತ್ತಾ ಇಲ್ಲ. ಅವರ ನಂಬಿಕೆಯು ನಿಜವಾದದ್ದೇ; ಆದರೆ ಅದು ಗೊಂದಲಗೊಂಡಿದೆ; ಜೀವಿತದ ಸತ್ಯಸಂಗತಿಗಳಲ್ಲಿ ಅದು ಕಾರ್ಯವೆಸಗುತ್ತಿಲ್ಲ. ಶಿಷ್ಯರು ತಮ್ಮ ಸ್ವಂತ ವಿಷಯಾಸಕ್ತಿಗಳಲ್ಲಿ ಚದುರಿ ಹೋಗಿದ್ದಾರೆ, ಮತ್ತು ಯೇಸುಕ್ರಿಸ್ತನಲ್ಲೆಂದೂ ಇರದಿದ್ದ ಆಸಕ್ತಿಗಳಿಗೆ ಅವರು ಸಜೀವದಿಂದಿದ್ದಾರೆ. ಶುದ್ಧೀಕರಣದ ಮೂಲಕ ದೇವರೊಂದಿಗೆ ಯಥಾಪೂರ್ಣ ಬಾಂಧವ್ಯವನ್ನು ನಾವು ಹೊಂದಿದನಂತರ, ದೈನಂದಿನ ವಾಸ್ತವ ಸ್ಥಿತಿಗತಿಗಳಲ್ಲಿ ನಮ್ಮ ನಂಬಿಕೆಯು ಕಾರ್ಯಸಾಧಕವಾಗಿ ರಲೇಬೇಕು. ನಾವು ಚದುರಿಸಲ್ಪಡುತ್ತೇವೆ - ದೇವರ ಸೇವೆಗಾಗಿ ಅಲ್ಲ - ದೈವಾಶೀರ್ವಾದಗಳ ಆಂತರಿಕ ಮೃತ್ಯು ಎಂದರೇನೆಂಬುದನ್ನು ತಿಳುಕೊಳ್ಳುವಂತೆ ನಮ್ಮ ಪೊಳ್ಳು ಜೀವಿತದೊಳಗೆ ಚದುರಿಸಲ್ಪಟ್ಟು ಅಲ್ಲಿ ಅಂತರಂಗದ ವಿನಾಶವನ್ನು ಕಾಣುತ್ತೇವೆ. ಇದಕ್ಕಾಗಿ ನಾವು ಸಿದ್ಧರಿರುವೆವೋ ? ಇದನ್ನು ನಾವು ಆಯ್ಕೆಮಾಡಿಕೊಂಡಿದ್ದೇವೆ ಎಂಬುದಲ್ಲ, ಇಂಥಾ ಸಂದಿಗ್ಧತೆಯೊಳಗೆ ನಾವು ಸಿಲುಕಿಬೀಳುವಂತೆ ದೇವರೇ ನಮ್ಮ ಸನ್ನಿವೇಶಗಳನ್ನು ನಿರ್ವಹಿಸುತ್ತಾನೆ. ಇಂಥಾ ಸಂಧಿಗ್ಧತೆಯ ಅನುಭವಗಳಲ್ಲಿ ಸಾಗಿ ನಾವು ಪಾರಾಗುವವರೆಗೂ, ನಂಬಿಕೆಯು ನಮ್ಮ ಭಾವನೆ ಹಾಗೂ ಆಶೀರ್ವಾದಗಳ ಆಸರೆ ಪಡೆದಿರುತ್ತದೆ. ನಾವು ಒಮ್ಮೆ ಅಲ್ಲಿಗೆ ಬಂದನಂತರ ದೇವರು, ಎಂಥಾ ಸ್ಥಿತಿಗಳಲ್ಲಿ ನಮ್ಮನ್ನಿರಿಸಲಿ ಇಲ್ಲವೇ ಆಂತರಿಕ ವಿನಾಶದನುಭವವೇ ಆಗಿರಲಿ, ಅದು ಮುಖ್ಯ ವಾಗಿರದೆ, ಎಲ್ಲವೂ ಉತ್ತಮ ಸ್ಥಿತಿಯಲ್ಲಿವೆ ಎಂದು ದೇವರನ್ನು ಕೊಂಡಾಡ ಬಲ್ಲೆವು. ಜೀವಿತದ ವಾಸ್ತವಗಳಲ್ಲಿ ಕಾರ್ಯವೆಸಗುವ ನಂಬಿಕೆ ಇದೇ.

''ನನ್ನನ್ನು ಒಂಟಿಗನನ್ನಾಗಿ ಬಿಡುವ .......'' : ನಾವಿರುವ ಸನ್ನಿವೇಶಗಳಲ್ಲಿ ದೇವರನ್ನು ಕಾಣುತ್ತಿಲ್ಲವೆಂಬ ಕಾರಣದಿಂದ ನಮಗಿರುವ ದೇವರ ಪರಿಪಾಲನೆಯನ್ನು ಚಲ್ಲಾಪಿಲ್ಲಿ ಗೊಳಿಸಿ, ಯೇಸುಕ್ರಿಸ್ತನನ್ನು ಒಬ್ಬೊಂಟಿಗನಾಗಿರಲು ಬಿಟ್ಟುಕೊಟ್ಟು ನಾವು ದೂರ ಸರಿದಿದ್ದೇವೆವೋ? ಪರಾತ್ಪರನ ಚಿತ್ತಾನುಸಾರವೇ ಕತ್ತಲೆಯು ನಮ್ಮನ್ನಾವರಿಸುತ್ತದೆ. ದೇವರು ತನ್ನ ಇಚ್ಛೆಯಂತೆ ಏನು ಬೇಕಾದರೂ ನಮಗೆ ಮಾಡಲಿ ಎಂದು ಆತನಿಗೆ ನಾವು ಆಸ್ಪದ ಕೊಡ ಬಲ್ಲೆವೋ? ಆತನು ಅನುಗ್ರಹಿಸಿದ ಪ್ರಜ್ಞಾಪೂರ್ವಕ ಆಶೀರ್ವಾದಗಳಿಂದ ಬೇರ್ಪಡಲು ಸಿದ್ಧರಿರುವೆವೋ? ಯೇಸುಕ್ರಿಸ್ತನು ನಮ್ಮನ್ನಾಳುವ ಒಡೆಯನಾಗುವ ತನಕ, ನಮ್ಮ ಸ್ವಂತ ಧ್ಯೇಯಗಳ ಸಾಧನೆಯೇ ನಮಗಿರುತ್ತವೆ; ನಮ್ಮ ನಂಬಿಕೆಯು ನಿಜವಾದದ್ದೇ ಆದರೆ, ಅದಿನ್ನೂ ಸ್ಥಿರಗೊಂಡಿಲ್ಲ. ದೇವರೆಂದಿಗೂ ಅವಸರದಲ್ಲಿಲ್ಲ; ನಾವು ಕಾದಿರುವುದಾದರೆ, ನಮಗಿರುವ ಆಸಕ್ತಿಗಳೆಲ್ಲವೂ ದೇವರ ಆಶೀರ್ವಾದಗಳಲ್ಲಿಯೇ ಹೊರತು ಸ್ವತಃ ದೇವರಲ್ಲಿ ಅಲ್ಲವೆಂಬುದನ್ನು ಆತನು ತೋರಿಸುವುದನ್ನು ಕಾಣುತ್ತೇವೆ. ದೈವಾಶೀರ್ವಾದಗಳ ಪ್ರಜ್ಞೆಯು ನಮಗೆ ಬೇಕೇಬೇಕು. ನಿಜ, ಆದರೆ ನಮಗೆ ಬೇಕಾಗಿರುವುದು ಆತ್ಮೀಕ ದಿಟ್ಟತನ. ''ಧೈರ್ಯವಾಗಿರಿ, ನಾನು ಲೋಕವನ್ನು ಜಯಿಸಿದ್ದೇನೆ'' (ಯೋಹಾ 16:33)

# ಆತನ ದಾರುಣವೇದನೆ ಮತ್ತು ನಮ್ಮ ಪ್ರವೇಶದ ಅವಕಾಶ

**''ಅನಂತರ ಯೇಸು ತನ್ನಶಿಷ್ಯರ ಸಂಗಡ ಗೆತ್ಸೇಮನೆ ಎಂಬ ತೋಟಕ್ಕೆ'' ಬಂದು ಅವರಿಗೆ ''... ನೀವು ಇಲ್ಲೇ ಇದ್ದು ನನ್ನ ಸಂಗಡ ಎಚ್ಚರವಾಗಿರ್ರಿ'' ಎಂದು ಹೇಳಿ ..... - (ಮತ್ತಾಯ - 26: 36-38)**

ಗೆತ್ಸೇಮನೆಯ ದಾರುಣವೇದನೆಯ ಆಳವನ್ನೆಂದಿಗೂ ಅಳೆಯಲಾರೆವಾದರೂ, ಕಡೇ ಪಕ್ಷ ನಾವು ಅದನ್ನು ತಪ್ಪಾದ ಅರ್ಥದಲ್ಲಿ ಗ್ರಹಿಸಬಾರದು. ಪಾಪವನ್ನು ಮುಖಾಮುಖಿಯಾಗಿ ಎದುರಿಸುತ್ತಿರುವ, ದೇವರು ಮತ್ತು ಮಾನವನು, ಏಕವಾಗಿರುವಾತನ ದಾರುಣವೇದನೆಯೇ ಅದು. ನಮ್ಮ ವೈಯಕ್ತಿಕ ಅನುಭವ ಗಳ ಮೂಲಕ ಗೆತ್ಸೇಮನೆಯ ನರಳಾಟದ ಬಗ್ಗೆ ಏನೂ ತಿಳಿಯಲಾಗುವುದಿಲ್ಲ. ಗತ್ಸೇಮನೆ ಮತ್ತು ಕಲ್ವರಿಗಳು ಯಾವುದೋ ಒಂದು ವಿಶೇಷತೆಯನ್ನು ಸಮರ್ಥಿಸುತ್ತಿದೆ. ಅವು ನಮ್ಮ ಜೀವಿತಕ್ಕೆ ಮುಖ್ಯ ದ್ವಾರಗಳಾಗಿವೆ.

ಗೆತ್ಸೇಮನೆಯಲ್ಲಿ ಯೇಸುಸ್ವಾಮಿಯು ಕಳವಳಗೊಂಡದ್ದು , ತನ್ನ ಶಿಲುಬೆಯ ಮರಣಕ್ಕಾಗಿ ಅಲ್ಲ. ಅಂಥಾ ಮರಣಹೊಂದುವ ಉದ್ದೇಶಕ್ಕಾಗಿಯೇ ತಾನು ಈ ಲೋಕಕ್ಕೆ ಬಂದಿರುವನೆಂದು ನಿರ್ಣಾಯಕವಾಗಿ ಆತನು ಹೇಳುತ್ತಲೇ ಇದ್ದನು. ಆತನು ತನ್ನ ಶ್ರಮೆ ಮರಣಗಳನ್ನೆಲ್ಲಾ ತಾನು ಮನುಷ್ಯಕುಮಾರನಾಗಿ ಸಾಧಿ ಸಬಹುದೇ ಎನ್ನುವ ಕಳವಳಕ್ಕೊಳಗಾಗಿದ್ದನು. ದೇವಕುಮಾರನಾಗಿ ಆತನು ಈ ಮಹಾಯಜ್ಞವನ್ನು ಸಾಗಿಸಿ ಬಿಡುತ್ತಿದ್ದನು ಮತ್ತು ಸೈತಾನನು ಅಲ್ಲಿ ಆತನನ್ನು ಮುಟ್ಟುವಂತಿರಲಿಲ್ಲ. ಗೆತ್ಸೇಮನೆಯಲ್ಲಿ ಯೇಸುಸ್ವಾಮಿಯ ಮೇಲೆ ಮಾಡುತ್ತಿರುವ ಸೈತಾನನ ದಾಳಿಯ ಉದ್ದೇಶವು, ಆತನು ಮನುಷ್ಯ ಕುಮಾರನಾಗಿ ಸ್ವಇಚ್ಛೆಯಿಂದ ತನಗೆ ತಾನೇ ಆಗಿರುವ ಪ್ರತ್ಯೇಕ ವ್ಯಕ್ತಿಯಾಗಿ ನಮಗಾಗಿ ಶ್ರಮೆಮರಣಗಳ ಯಜ್ಞವನ್ನು ಮುಗಿಸಲೆಂಬುದೇ. ಹಾಗಾಗುವದೆಂದರೆ ಯೇಸುಕ್ರಿಸ್ತನು ಲೋಕದ ರಕ್ಷಕನಾಗುವುದೇ ಇಲ್ಲ; ಆತನೊಬ್ಬ ಮಹಾಪುರುಷ ನಾಗುತ್ತಿದ್ದನಷ್ಟೆ ! (ಇಬ್ರಿಯ 9:11-15 ನೋಡಿರಿ) ಈ ಮೊದಲು ಅಡವಿಯಲ್ಲಿ ಯೇಸುಸ್ವಾಮಿಯವರು ಎದುರಿಸಿದ ಶೋಧನೆಗಳ ವಿವರವನ್ನು ಗಮನಿಸಿರಿ; ''ಸೈತಾನನು ಸಕಲ ವಿಧವಾದ ಶೋಧನೆಯನ್ನು ಮುಗಿಸಿ ಸ್ವಲ್ಪಕಾಲ ಆತನನ್ನು ಬಿಟ್ಟು ಹೊರಟುಹೋದನು'' (ಲೂಕ 4:13) ಈಗ ಗೆತ್ಸೇಮನೆಯಲ್ಲಿ ಮತ್ತೊಮ್ಮೆ ಯೇಸು ಸ್ವಾಮಿಯನ್ನು ಪೀಡಿಸಲು ಬಂದಿದ್ದಾನೆ. ಆದರೆ ಇನ್ನೆಂದಿಗೂ ತಲೆ ಎತ್ತದಂತೆ ತುಳಿಯಲ್ಪಟ್ಟಿದ್ದಾನೆ. ಅಡವಿಯಲ್ಲಿ ದೇವ ಕುಮಾರನೆಂಬುದಾಗಿ ಆಕ್ರಮಣ ಮಾಡಿದ ಸೈತಾನನು ಗೆತ್ಸೇಮನೆಯಲ್ಲಿ ಮನುಷ್ಯ ಕುಮಾರನೆಂಬುದಾಗಿ ಆತನ ಮೇಲೆ  ಕೊನೆಯದಾದ ಆಕ್ರಮಣವನ್ನು ಎಸಗಿದ್ದನು.

ಗೆತ್ಸೇಮನೆಯಲ್ಲಾದ ಯಾತನೆಯು, ತಾನು ಲೋಕದ ರಕ್ಷಕನೆಂಬ ದೈವ ನಿರ್ಣಯವನ್ನು ಪೂರ್ಣಗೊಳಿಸುತ್ತಿರುವ ದೇವಕುಮಾರನ ದಾರುಣ ವೇದನೆಯಾಗಿದೆ. ಮರೆಮಾಡಿದ ತೆರೆಯನ್ನು ಎಳೆದು ಪಕ್ಕಕ್ಕೆ ಸರಿಸಿರುವುದು, ಅದು ನಮ್ಮನ್ನು ದೇವರ ಮಕ್ಕಳನ್ನಾಗಿ ಮಾಡಲು ಏನೆಲ್ಲಾ, ಎಷ್ಟೆಲ್ಲಾ ಬೆಲೆತೆರ ಬೇಕಾಗುತ್ತದೆಂಬುದನ್ನು  ಬಯಲು ಗೊಳಿಸುವುದಕ್ಕಾಗಿಯೇ. ಪಾಪಿಗಳಾದ ನಮ್ಮ ರಕ್ಷಣೆಯು ಸುಲಭವೂ, ಸರಳವೂ ಆಗಿರುವುದಕ್ಕೆ ಈ ದಾರುಣ ವೇದನೆಯೇ ಆಧಾರ. ಯೇಸುಕ್ರಿಸ್ತನ ಶಿಲುಬೆಯೇ ಮನುಷ್ಯ ಕುಮಾರನ ವಿಜಯೋತ್ಸವದ ಸಾಧನೆ. ಯೇಸುಕ್ರಿಸ್ತನ ಶಿಲುಬೆಯು ನಮ್ಮ ಸ್ವಾಮಿಯವರ  ವಿಜಯಾನಂದದ ಗುರುತು ಮಾತ್ರವೇ ಅಲ್ಲ, ಆದು ಆತನು ಮಾನವ ಜನಾಂಗವನ್ನು ರಕ್ಷಿಸಿದ  ವಿಜಯ ಸಾಧನೆಯ ಗುರುತೂ ಆಗಿದೆ. ಮನುಷ್ಯ ಕುಮಾರನು ಅಷ್ಟುಯಾತನೆ, ಹಿಂಸೆಯ, ಮೂಲಕ ಸಾಗಿ ವಿಜಯಶಾಲಿಯಾದುದ ರಿಂದಲೇ, ಇಂದು ಮನುಷ್ಯರಲ್ಲಿ ಪ್ರತಿಯೊಬ್ಬನೂ ದೇವರ ಸನ್ನಿಧಿಯನ್ನು ಸುಲಭವಾಗಿ ಪ್ರವೇಶಿಸು ವಂತಾಗಿದೆ.

# ದೇವರು ಮತ್ತು ಪಾಪದ ಸಂಘರ್ಷಣೆ

**''ಆತನು ನಮ್ಮ ಪಾಪಗಳನ್ನು ತಾನೇ ತನ್ನ ದೇಹದಲ್ಲಿ ಹೊತ್ತುಕೊಂಡು ಮರಣದ ಕಂಬವನ್ನು ಏರಿದನು ''**
**- (2 ಪೇತ್ರ -2:24)**

ದೇವರು ಪಾಪಕ್ಕೆ ನೀಡಿದ ನ್ಯಾಯತೀರ್ಪಿನ ಪ್ರಕಟಣೆಯೇ ಯೇಸುಕ್ರಿಸ್ತನ ಶಿಲುಬೆ. ಯೇಸುಕ್ರಿಸ್ತನ ಶಿಲುಬೆಯು ಹುತಾತ್ಮತೆಯ ಸಂಕೇತ ಎಂಬ ಭಾವನೆಯನ್ನೆಂದಿಗೂ ಸಹಿಸಬೇಡ. ಶಿಲುಬೆಯು ಪಾತಾಳದ ಬುಡಪಾಯಗಳನ್ನು ಕದಲಿಸಿ ನಡುಗಿಸಿದ ಅತ್ಯಮೋಘ ವಿಜಯಸಾದನೆಯಾಗಿದೆ. ಯೇಸು ಕ್ರಿಸ್ತನು ಶಿಲುಬೆಯ ಮೇಲೆ ಸಾಧಿಸಿದುದರ ಸತ್ಯತೆಗಿಂತಲೂ ಹೆಚ್ಚಿನದಾದುದು ಈ ಕಾಲದಲ್ಲಿ ಇಲ್ಲವೇ ಅನಂತ ಕಾಲದಲ್ಲಿಯಾಗಲಿ ಇಲ್ಲವೇ ಇಲ್ಲ, ಇಡೀ ಮಾನವ ಕುಲವನ್ನೇ, ಅದು ಬಿದ್ದು ಹೋದ ರಭಸದ ವೇಗದಷ್ಟೇ ಪ್ರತಿವೇಗದಿಂದ ಹಿಂತಿರುಗಿಬಂದು ದೇವರ ಬಾಂಧವ್ಯದಲ್ಲಿ ಸೇರಿಕೊಳ್ಳುವಂತೆ ಆತನು ಮಾಡಿದ್ದಾನೆ. ಆತನು ಪಾಪವಿಮೋಚನೆಯನ್ನು ಮಾನವನ ಬದುಕು ಬಾಳುವಿಕೆಯ ತಳಹದಿಯಾಗಿ ಮಾಡಿದನು; ಅಂದರೆ ಪ್ರತಿಯೊಬ್ಬ ಮಾನವನೂ ದೇವರ ಅನ್ಯೋನ್ಯತೆಯಲ್ಲಿ ಸೇರುವ ಮಾರ್ಗವನ್ನು ಸಿದ್ಧಪಡಿಸಿದ್ದಾನೆ.

ಶಿಲುಬೆಯು ಯೇಸುವಿಗಾದ ಒಂದು ಸಂಭವವಲ್ಲ; ಆತನು ಮರಣ ಹೊಂದಲೆಂದೇ ಬಂದನು ಮತ್ತು ಶಿಲುಬೆಯು ಆತನ ಪೂರ್ವಸಂಕಲ್ಪದ ಉದ್ದೇಶವಾಗಿತ್ತು. ''ಜಗದುತ್ಪತ್ತಿಗೆ ಮೊದಲೇ ಕೊಯ್ಯಲ್ಪಟ್ಟ ಕುರಿಯಾದಾತನು'' (ಪ್ರಕಟನೆ 13:8) ಶಿಲುಬೆ ಯಿಲ್ಲದೆ, ಕ್ರಿಸ್ತನ ಮಾನವ ರೂಪಧಾರಣೆಯು ಕೇವಲ ಅರ್ಥಹೀನವಾಗಿದೆ. ''ದೇವರು ಶರೀರಧಾರಿಯಾಗಿ ಪ್ರತ್ಯಕ್ಷನಾದನು'' (1 ತಿಮೊ. 3:16) ಎಂಬುದನ್ನು ''ದೇವರು ಆತನನ್ನು ನಮಗೋಸ್ಕರ ಪಾಪಸ್ವರೂಪಿಯಾಗ ಮಾಡಿದನು'' (2ಕೊರಿ-5:21) ಎಂಬುದರಿಂದ ಬೇರ್ಪಡಿಸುವ ಬಗ್ಗೆ ಎಚ್ಚರವಿರಬೇಕು. ಅದು ಅವಿಭಾಜ್ಯವಾದುದು. ಕ್ರಿಸ್ತನ ನರಾವತಾರವು ಪಾಪ ವಿಮೋಚನೆಯ ಉದ್ದೇಶಕ್ಕಾಗಿ ಉಂಟಾದದ್ದು; ದೇವರು ನರನಾಗಿ ಬಂದಿರುವುದು ಪಾಪವನ್ನು ದೂರ ಮಾಡುವುದಕ್ಕಾಗಿಯೇ ಹೊರತು ಸ್ವಯಂಸಾಕ್ಷಾತ್ಕರಣದ ಉದ್ದೇಶಕ್ಕಾಗಿ ಅಲ್ಲ. ಕಾಲ ಮತ್ತು ಅನಂತಕಾಲದಲ್ಲಿ ಘಟಿಸಿದ ಮುಖ್ಯ ಸಂಭವಿಸುವಿಕೆಯೇ ಈ ಶಿಲುಬೆ; ಕಾಲ ಮತ್ತು ಅನಂತತೆಗಳ ನಿಗೂಢತೆಯ ಉತ್ತರವೇ ಶಿಲುಬೆ.

ಶಿಲುಬೆಯು ಮನುಷ್ಯನ ಶಿಲುಬೆಯಲ್ಲ, ಅದು ದೇವರ ಶಿಲುಬೆ, ದೇವರ ಶಿಲುಬೆಯನ್ನು ಮಾನವನ ಅನುಭವಗಳ ಮೂಲಕ ಗ್ರಹಿಸಲಾಗದು. ಶಿಲುಬೆಯು ದೇವರ ಸ್ವಭಾವದ ಪ್ರದರ್ಶನವಾಗಿದೆ; ಅದೊಂದು ಮಹಾದ್ವಾರ ಮತ್ತು ಆ ದ್ವಾರದ ಮೂಲಕ ಮಾನವ ಜನಾಂಗದ ಪ್ರತಿಯೊಬ್ಬನೂ ದೇವರ ಅನ್ಯೋನ್ಯತೆಯಲ್ಲಿ ಪ್ರವೇಶಿಸಬಹುದಾಗಿದೆ. ನಾವು ಶಿಲುಬೆಯ ಬಳಿ ಬಂದಾಗ ನಾವು ಅದರ ಮೂಲಕ ಸಾಗಿ ಮುಂದೆ ಹೋಗುವುದಿಲ್ಲ. ದೇವರೊಂದಿಗೆ ಒಂದಾಗಿರುವ ಜೀವಿತದೊಳಗೆ ಪ್ರವೇಶಿಸಿ ಅದರಲ್ಲಿಯೇ ನೆಲೆಗೊಳ್ಳುತ್ತೇವೆ. ರಕ್ಷಣಾ ಕಾರ್ಯದ ಅಂತರ್ಯವೇ ಯೇಸುಕ್ರಿಸ್ತನ ಶಿಲುಬೆ; ಅಷ್ಟು ಸರಳವಾಗಿ, ಸುಲಭವಾಗಿ ನಾವು ರಕ್ಷಣೆಯನ್ನು ಹೊಂದುತ್ತೇವೆ, ಯಾಕೆಂದರೆ ದೇವರು ಅದಕ್ಕಾಗಿ ಅಪಾರ ಬೆಲೆತೆತ್ತಿದ್ದಾನೆ. ದೇವರು ಮತ್ತು ಪಾಪಿಯಾದ ಮನುಷ್ಯನು ಒಬ್ಬರನ್ನೊಬ್ಬರು ತಾಕಿ ಐಕ್ಯಗೊಂಡ ಮಹಾಘರ್ಷಣೆಯ ಸ್ಥಳವೇ ಆ ಶಿಲುಬೆ ಮತ್ತು ಅಲ್ಲಿಯೇ ಆಗಲೇ, ಜೀವಮಾರ್ಗವು ತೆರೆಯಲ್ಪಟ್ಟಿತು. ಆದರೆ ಆ ಮಹಾ ಘರ್ಷಣೆ ನಡೆದದ್ದು - ಅದು ದೇವರ ಹೃದಯದ ಮೇಲೆ; ಆ ಘರ್ಷಣೆಯಿಂದುಂಟಾದ ನೋವುಗಳೆಲ್ಲ ವನ್ನೂ ದೇವರ ಹೃದಯವು ಸಹಿಸಿಕೊಂಡಿತು.

# ಸ್ಪಷ್ಟವಾಗಿ ನಮಗೆ ಹೇಳಲಿಲ್ಲವೇಕೇ ?

**''ನೀನು ಕಂಡಿರುವುದನ್ನು ಮನುಷ್ಯಕುಮಾರನು ಸತ್ತು ಜೀವಿತನಾಗಿ ಎದ್ದು ಬರುವತನಕ ಯಾರಿಗೂ ತಿಳಿಸಬಾರದೆಂದು ಖಂಡಿತವಾಗಿ ಹೇಳಿದನು'' - (ಮಾರ್ಕ - 9:9)**

ಶಿಷ್ಯರಿಗೆ ಆಜ್ಞಾಪಿಸಿದಂತೆಯೇ, ಮನುಷ್ಯಕುಮಾರನು ನಿನ್ನಲ್ಲಿ ಹುಟ್ಟಿ ಬರುವ ತನಕ, ನೀನು ಕಂಡುಕೇಳಿರುವವುಗಳನ್ನು ಯಾರಿಗೂ ತಿಳಿಸಬಾರದು - ಐತಿಹಾಸಿಕ ಯೇಸುಕ್ರಿಸ್ತನು ಬೋಧಿಸಿದವುಗಳನ್ನು, ಅವುಗಳ ನಿಜಾರ್ಥದಲ್ಲಿ ನೀನು ಗ್ರಹಿಸುವಂತೆ ಮಾಡುವ, ಪುನರುತ್ಥಾನ ಹೊಂದಿದ ಯೇಸುಕ್ರಿಸ್ತನ ಜೀವವು ನಿನ್ನನ್ನು ಆಳುವತನಕ - ನೀನು ಸಹಾ ಯಾರಿಗೂ ತಿಳಿಸಬಾರದು. ಅಂತರಂಗದಲ್ಲಿ ನೀನು ಬೆಳೆದು ಅಭಿವೃದ್ಧಿಗೊಂಡು ಯೋಗ್ಯಸ್ಥಿತಿಯನ್ನು ತಲುಪಿದಾಗ ಯೇಸುಕ್ರಿಸ್ತನು ನುಡಿದ ವಾಕ್ಯಗಳು ಬಹುಸ್ಪಷ್ಟವಾಗಿ ನಿನಗೆ ಅರಿವಾಗುತ್ತವೆ ಮತ್ತು ಇದೇ ವಾಕ್ಯಗಳು ಇದಕ್ಕೆ ಮುಂಚೆಯೇ ಯಾಕೆ ನಿನಗೆ ಗ್ರಹಿಕೆಯಾಗಲಿಲ್ಲ ವೆಂಬುದರ ಕಾರಣವನ್ನು ನೀನು ಈಗ ತಿಳಿದು ಅಚ್ಚರಿಗೊಳ್ಳುವಿ. ನಿಜವೆಂದರೆ, ಮೊದಲೇ ಇವುಗಳನ್ನು ನೀನು ಯಾಕೆ ಗ್ರಹಿಸಲಿಲ್ಲವೆಂದರೆ, ಅವುಗಳನ್ನು ಹೊರುವ ಸ್ವಭಾವವನ್ನು ನೀನಿನ್ನು ಬೆಳೆಸಿ ಕೊಂಡಿರಲಿಲ್ಲ.

ನಮ್ಮ ಸ್ವಾಮಿಯು, ಶಿಷ್ಯರಿಂದ ಅವುಗಳನ್ನು ಮರೆಮಾಚಿ ಬಚ್ಚಿಡಲಿಲ್ಲ. ನಮ್ಮ ಆತ್ಮೀಕ ಜೀವನವು ಯೋಗ್ಯಸ್ಥಿತಿಯನ್ನು ಮುಟ್ಟುವತನಕ, ಅವು ನಮಗೆ ಹೊರಲಾರದ ಭಾರವಾಗಿರುತ್ತವೆ. ''ನಾನು ನಿಮಗೆ ಹೇಳಬೇಕಾದದ್ದು ಇನ್ನೂ ಬಹಳ ಉಂಟು'' ಅದರ ನಿರ್ದಿಷ್ಟ ವಾಕ್ಯಾರ್ಥದ ಭಾರವನ್ನು ಹೊರಬೇಕಾದರೆ ಯೇಸುಕ್ರಿಸ್ತನ ಪುನರುತ್ಥಾನದ ಜೀವಿತದೊಂದಿಗೆ ನಮ್ಮ ಜೀವಿತವು ಒಂದಾಗಿರಬೇಕು. ಆತನ ಪುನರುತ್ಥಾನದ ಜೀವಿತವನ್ನು ನಮಗೆ ನೀಡಿರುವುದರ ಬಗ್ಗೆ ನಮಗೆ ಏನಾದರೂ ತಿಳಿದಿದೆಯೋ ? ಅದನ್ನು ಹೊಂದಿರುವುದರ ಗುರುತೆಂದರೆ ಆತನ ವಾಕ್ಯಗಳನ್ನು ಅರ್ಥೈಸಿ ವ್ಯಾಖ್ಯಾನಿಸಲು ಈಗ ಸಾಧ್ಯವಾಗುತ್ತಿದೆ. ಆತನ ಆತ್ಮವನ್ನು ನಾವು ಹೊಂದಿರದಿದ್ದರೆ, ದೇವರು ನಮಗೆ ಏನೊಂದನ್ನು ತಿಳಿಯಪಡಿಸುವುದಿಲ್ಲ. ಈ ವಿಷಯಗಳಲ್ಲಿ ನಾವು ತೋರುವ ಮೊಂಡುತನದ ಧೃಢಾಭಿಪ್ರಾಯವು ದೇವರು ಏನನ್ನಾದರೂ ನಮಗೆ ತಿಳಿಯಪಡಿಸುವಾಗ ಅದನ್ನು ಬಲವಾಗಿ ಅಡ್ಡಪಡಿಸುತ್ತದೆ. ಒಂದು ವೇದೋಪದೇಶದ ತತ್ವವನ್ನು ಸರಿಯೆಂದು ನಾವು ಮನೋನಿರ್ಣಯ ಮಾಡಿಕೊಂಡಿದ್ದರೆ, ಆ ತತ್ವದ ದಾರಿಯಲ್ಲಿ ಇನ್ನು ಮೇಲೆ ದೇವರ ಬೆಳಕು ಬೆಳಗಲಾರದು, ಮತ್ತು ಆ ಬೆಳಕನ್ನು ನಾವು ಪಡೆಯುವುದಿಲ್ಲ. ಆತನ ಪುನರುತ್ಥಾನದ ಜೀವಿತವು ನಮ್ಮೊಳಗೆ ಪ್ರವೇಶಿಸಿದ ಕೂಡಲೇ ಮಂದಬುದ್ಧಿಯ ಮೊಂಡುತನವು ಕೊನೆಗಾಣುತ್ತದೆ.

''ಯಾರಿಗೂ ತಿಳಿಸಬಾರದು'' ಪರ್ವತದ ಮೇಲೆ ತಾವುಕಂಡ ರೂಪಾಂತರದ ದೃಷ್ಯವನ್ನು ತಿಳಿಸಬಾರದೆಂದು ಹೇಳಿದರೂ, ಅನೇಕರು ತಿಳಿಸಿಯೇ ತಿಳಿಸುತ್ತಿರುವರು. ಅವರಿಗೆ ಅಲ್ಲಿ ದಿವ್ಯ ದರ್ಶನವಾಗಿತ್ತು ಮತ್ತು ಅದಕ್ಕೆ ಸಾಕ್ಷಿ ಹೇಳುತ್ತಿರುವರು; ಆದರೆ ಅವರ ಜೀವನವು ಆ ದರ್ಶನಕ್ಕೆ ಸದೃಶ್ಯವಾಗಿ ಇರುತ್ತಿಲ್ಲ. ಮನುಷ್ಯಕುಮಾರನು ಅವರಲ್ಲಿ ಇನ್ನೂ ಪುನರುತ್ಥಾನವಾಗಿಲ್ಲ. ನನ್ನಲ್ಲಿ ಮತ್ತು ನಿನ್ನಲ್ಲಿ ಪುನರುತ್ಥಾನನಾದ ಯೇಸುಕ್ರಿಸ್ತನು ರೂಪುಗೊಳ್ಳಲು ಇನ್ನೆಷ್ಟು ಕಾಲ ಬೇಕೋ ಏನೋ ?

# ದೈವಸಂಕಲ್ಪಿತದಂತೆ ಆತನ ಪುನರುತ್ಥಾನ

**''ಕ್ರಿಸ್ತನು ಇಂಥ ಶ್ರಮೆಗಳನ್ನು ಅನುಭವಿಸಿ ತನ್ನ ಮಹಾಪದವಿಗೆ ಸೇರುವುದು ಅಗತ್ಯವಾಗಿತ್ತಲ್ಲವೇ ? '' - (ಲೂಕ 24:26)**

ನಮ್ಮ ಸ್ವಾಮಿಯ ಶಿಲುಬೆಯೇ, ಆತನ ಜೀವಿತವನ್ನು ನಾವು ಪಡೆಯುವ ದ್ವಾರವಾಗಿದೆ. ಆತನ ಪುನರುತ್ಥಾನವೆಂದರೆ ಆತನು ತನ್ನ ಜೀವಿತವನ್ನು ನಮಗೆ ನೀಡುವ ಸಾಮರ್ಥ್ಯವುಳ್ಳವನಾಗಿದ್ದಾನೆ. ನಾನು ಮೇಲಿನಿಂದ ಹೊಸದಾಗಿ ಹುಟ್ಟಿದಾಗ ಪುನರುತ್ಥಾನವಾದ ಸ್ವಾಮಿಯಿಂದ, ಆತನ ಜೀವಿತವನ್ನು ಪಡೆದುಕೊಳ್ಳುತ್ತೇನೆ.

ಯೇಸುಸ್ವಾಮಿಯ ಪುನರುತ್ಥಾನದ ಸಂಕಲ್ಪವು ''ಬಹುಮಂದಿ ಪುತ್ರರನ್ನು ಪ್ರಭಾವಕ್ಕೆ ಸೇರಿಸು''ತ್ತದೆ. (ಇಬ್ರಿಯ. 2:10) ಆತನ ದೈವ ಸಂಕಲ್ಪದ ನೆರವೇರಿಕೆಯು, ನಮ್ಮನ್ನು ದೇವರ ಕುಮಾರರನ್ನಾಗಿ ಮತ್ತು ಕುಮಾರ್ತೆಯರನ್ನಾಗಿ ಮಾಡುವ ಅಧಿಕಾರವನ್ನು ಆತನಿಗೆ ಕೊಡುತ್ತದೆ. ದೇವರಕುಮಾರನು ದೇವರೊಂದಿಗೆ ಹೊಂದಿದ್ದಂಥಾ ನಿಕಟಬಾಂಧವ್ಯದಲ್ಲಿ ನಾವೆಂದಿಗೂ ಇರಲೇ ಇಲ್ಲ; ಆದರೆ ದೇವರ ಮಗನೇ ಪುತ್ರತ್ವದ ಬಾಂಧವ್ಯದಲ್ಲಿ ನಮ್ಮನ್ನು ಸೇರಮಾಡಿದ್ದಾನೆ. ಯೇಸುಸ್ವಾಮಿಯು ಸತ್ತು ಜೀವಿತನಾಗಿ ಎದ್ದು ಬಂದಾಗ, ಆತನು ಸಂಪೂರ್ಣವಾದ ಹೊಸಜೀವಿತದಲ್ಲಿ ಪುನರುತ್ಥಾನವಾದನು. ಇಂಥಾ ಜೀವಿತವನ್ನು ಆತನು ಭೂಮಿಯ ಮೇಲೆ, ತನ್ನ ದೈವಾವತಾರದ ಮೊದಲು ಜೀವಿಸಿರಲಿಲ್ಲ. ಹಿಂದೆಂದೂ ಇರಲಾರದಂಥ ನವಜೀವಿತದಲ್ಲಿ ಆತನು ಪುನರುತ್ಥಾನಗೊಂಡನು. ಆದ್ದರಿಂದ ನಾವು ಕೂಡ ಆತನ ಪುನರುತ್ಥಾನದ ಜೀವಿತದೊಳಗೆ ಜೀವದಿಂದೆದ್ದು ಬಂದಿರುತ್ತೇವೆ - ಹಳೆಯ ಜೀವಿತದೊಳಗೆ ಅಲ್ಲ. ಆತನಿಗಿರುವ ಮಹಿಮಾಶರೀರದಂಥ ಶರೀರವನ್ನು ನಾವು ಸಹ ಒಂದು ದಿನ ಪಡೆಯುತ್ತೇವೆ; ಆದರೆ ಈಗಲೇ, ಈ ಶರೀರದಲ್ಲಿರುವಾಗಲೇ ಪುನರುತ್ಥಾನದ ನಿಜ ಪ್ರಭಾವ ಮತ್ತು ಶಕ್ತಿಯನ್ನು ಅರಿತುಕೊಂಡು ನಾವು ''ಹೊಸಬರಾಗಿ ನಡಕೊಳ್ಳಬೇಕು'' (ರೋಮಾ-6:4). ''ಆತನ ಪುನರುತ್ಥಾನದಲ್ಲಿರುವ ಶಕ್ತಿಯನ್ನು ........ ತಿಳುಕೊಂಡು ಆತನಿಗೆ ಸರೂಪನಾಗಿರುವುದೇ ನನ್ನ ಕುತೂಹಲವಾಗಿದೆ'' (ಫಿಲಿಪ್ಪಿ - 3:10).

ಯೇಸು ಕ್ರಿಸ್ತನು ಪ್ರಾರ್ಥಿಸಿದನು ''ಅವರೆಲ್ಲರಿಗೆ ಅವನು ನಿತ್ಯ ಜೀವವನ್ನು ಕೊಡಬೇಕೆಂದು ಅವನಿಗೆ ಎಲ್ಲಾ ಮನುಷ್ಯರ ಮೇಲೆ ಅಧಿಕಾರವನ್ನು ಕೊಟ್ಟಿರುವೆಯಲ್ಲಾ (ಯೋಹಾ - 17:2) ಮಾನವನ ಇಹಲೋಕದ ಜೀವಿತದಲ್ಲಿ, ಇಲ್ಲಿಯೇ ನಿತ್ಯ ಜೀವವನ್ನು ಹುಟ್ಟಿಸಿ, ಆ ಜೀವಿತದಲ್ಲಿ ಬಾಳುವಂತೆ ಮಾಡುವ ಅನುಭವ ಸ್ಥಾಪಿತ ಹೆಸರೇ ''ಪವಿತ್ರಾತ್ಮ''. ಯಾರ ಮೂಲಕ ದೈವ ಶಕ್ತಿಯು ಹೊರಡುತ್ತದೋ ಮತ್ತು ಯಾರು ಶಿಲುಬೆಯ ಮೇಲೆ ನಡೆದ ಪ್ರಾಯಶ್ಚಿತ್ತ ಯಜ್ಞವನ್ನು ನಮ್ಮ ಅನುಭವಕ್ಕೆ ತರುವನೋ, ಆ ದೈವವೇ ''ಪವಿತ್ರಾತ್ಮ''. ನಾವು ದೇವರಿಗೆ ವಿಧೇಯರಾದರೆ, ಪರಿಶುದ್ಧಾತ್ಮನು ನಮ್ಮೊಳಗೆ ಯೇಸುಸ್ವಾಮಿಯ ಸ್ವಭಾವವನ್ನೆ ಹುಟ್ಟಿಸುತ್ತಾನೆಂಬ ಮಹಿಮಾಭರಿತ, ಘನಗಂಭೀರ ಸತ್ಯಕ್ಕಾಗಿ ದೇವರಿಗೆ ಕೃತಜ್ಞತೆಗಳನ್ನರ್ಪಿಸಬೇಕು.

# ನೀನು ಆತನನ್ನು ಕಂಡಿರುವಿಯೋ ?

**''ಆತನು ಅವರಿಗೆ ರೂಪಾಂತರದಿಂದ ಕಾಣಿಸಿಕೊಂಡನು '' - (ಮಾರ್ಕ - 16:12)**

ರಕ್ಷಿಸಲ್ಪಡುವುದೂ, ಯೇಸುಸ್ವಾಮಿಯನ್ನು ನೋಡುತ್ತಿರುವುದೂ ಸಮಾನವಾದ ಒಂದೇ ವಿಷಯವಲ್ಲ. ಯೇಸುಸ್ವಾಮಿಯನ್ನು ಎಂದೂ ಕಾಣದವರು ಸಹಾ ದೇವರ ಕೃಪೆಯಲ್ಲಿ ಪಾಲುಹೊಂದಿರುತ್ತಾರೆ. ಒಮ್ಮೆ ನೀನು ಯೇಸು ಸ್ವಾಮಿಯನ್ನು ನೋಡಿದ್ದಾದರೆ ಮೊದಲಿನಂತೆ ನೀನಿರುವುದಿಲ್ಲ. ಇದುವರೆಗೆ ನಿನಗೆ ಹಿತವೆನಿಸಿದ ವಿಷಯಗಳು ಇನ್ನು ಮೇಲೆ ನಿನ್ನನ್ನು ರಂಜಿಸಲಾರವು.

ಯೇಸುಕ್ರಿಸ್ತನು ಹೇಗಿರುವನೆಂದು ನೀನು ದೃಷ್ಟಿಸುವುದಕ್ಕೂ ಮತ್ತು ಆತನು ನಿನಗೇನು ಮಾಡಿದ್ದಾನೋ ಅವುಗಳಿಗೂ ಮಧ್ಯೆ ಇರುವ ಬೇಧವನ್ನು ಯಾವಾಗಲೂ ಗುರುತಿಸುತ್ತಿರಬೇಕು. ಆತನು ನಿನಗೆ ಮಾಡಿದವುಗಳನ್ನು ಮಾತ್ರ ನೀನರಿತಿರುವೆಯಾದರೆ, ನಿನ್ನ ದೇವರೇನೂ ಅಷ್ಟು ಹಿರಿದಾದವನಲ್ಲ. ಯೇಸುಸ್ವಾಮಿಯು ವಾಸ್ತವವಾಗಿ ಹೇಗೆ ಇರುವನೋ ಹಾಗೆಯೇ ಕಂಡುಬರುವ ದಿವ್ಯ ದರ್ಶನವು ನಿನಗಾಗಿದ್ದರೆ, ಅನುಭವಗಳೇನೇ ಬಂದು ಹೋಗಲಿ, ನೀನು ಮಾತ್ರ ಅದೃಷ್ಯವಾಗಿರುವಾತನನ್ನು ದೃಷ್ಟಿಸುತ್ತಿರುವಿ. ಹುಟ್ಟು ಕುರುಡನಾದ ಆ ವ್ಯಕ್ತಿಗೆ ಯೇಸುಕ್ರಿಸ್ತನು ಕಾಣಿಸಿಕೊಂಡು ತಾನ್ಯಾರೆಂದು ಅವನಿಗೆ ಪ್ರಕಟಿಸಿಕೊಳ್ಳುವತನಕ, ತನಗೆ ದೃಷ್ಟಿನೀಡಿದವರು ಯಾರೆಂದು ಅವನಿಗೆ ತಿಳಿದಿರಲಿಲ್ಲ. ಯೇಸು ಸ್ವಾಮಿಯು ಯಾರಿಗಾದರೂ, ಏನಾದರೂ ಮಾಡಿದ್ದರೆ ಅವರಿಗೆ ಖಂಡಿತವಾಗಿ ಕಾಣಿಸಿ ಕೊಳ್ಳುತ್ತಾನೆ; ಆದರೆ ಆತನು ಯಾವಾಗ ನಮಗೆ ಕಾಣಿಸಿಕೊಳ್ಳಬೇಕೆಂದು ನಾವು ಆತನಿಗೆ ಅಪ್ಪಣೆ ಕೊಡಲಾಗದು. ಇದ್ದಕ್ಕಿದ್ದಂತೆಯೇ ಯಾವುದಾದರೊಂದು ತಿರುವಿನಲ್ಲಿ ಆತನು ನಮ್ಮ ಕಣ್ಣಿಗೆ ಗೋಚರಿಸುತ್ತಾನೆ. ''ಈಗ ನನ್ನ ಕಣ್ಣುಗಳು ಆತನನ್ನು ಕಾಣುತ್ತವೆ.'' (ಯೋಹಾ 9:25ನೋಡಿರಿ).

ಯೇಸುಸ್ವಾಮಿಯು ನಿನಗೂ ಮತ್ತು ನಿನ್ನ ಗೆಳೆಯನಿಗೂ ವೈಯಕ್ತಿಕವಾಗಿ ಕಾಣಿಸಿ ಕೊಳ್ಳಬೇಕು; ನಿನ್ನ ಕಣ್ಣುಗಳಿಂದ ಬೇರೆಯವರು ಸ್ವಾಮಿಯನ್ನು ನೋಡಲಿಕ್ಕಾಗದು. ಒಬ್ಬನು ಆತನನ್ನು ಕಣ್ಣಿನಿಂದ ನೋಡಿ ಮತ್ತು ಇನ್ನೊಬ್ಬನು ನೋಡದೆ ಹೋದರೆ ಅಲ್ಲಿ ಭೇದ ಉಂಟಾಗುತ್ತದೆ. ಆತನನ್ನು ನೋಡುವಂಥಾ ಸ್ಥಿತಿಗೆ ನಿನ್ನ ಗೆಳೆಯನನ್ನು ನೀನು ಬರಮಾಡಲಾರೆ, ಅದನ್ನು ದೇವರು ಮಾಡಬೇಕು. ನೀನು ಯೇಸುಸ್ವಾಮಿಯನ್ನು ಕಂಡಿರುವಿಯೋ? ಹಾಗಿದ್ದರೆ ಇತರರು ಕೂಡ ಆತನನ್ನು ಕಾಣಬೇಕೆಂದು ನೀನು ಇಷ್ಟಪಡುವೆ ತಾನೇ? ''ಅವರು ಹೋಗಿ ಉಳಿದವರಿಗೆ ತಿಳಿಸಿದರು. ಆದರೆ ಅವರನ್ನೂ ನಂಬಲಿಲ್ಲ'' (ಮಾರ್ಕ - 16:13) ಅವರು ನಂಬದೇ ಹೋದರೂ, ನೀನು ಮಾತ್ರ ಸ್ವಾಮಿಯನ್ನು ನೋಡಿರುವುದಾಗಿ ಹೇಳಲೇಬೇಕು.

# ಸಂಪೂರ್ಣ ಹಾಗೂ ಪರಿಣಾಮಕಾರಿಯಾಗಿ ಪಾಪದ ಬಗ್ಗೆ ನಿರ್ಣಯ

**''ಪಾಪಾಧೀನ ಸ್ವಭಾವವು ನಾಶವಾಗಿ ನಾವು ಇನ್ನೂ ಪಾಪದವಶದಲ್ಲಿರದಂತೆ ನಮ್ಮ ಪೂರ್ವಸ್ವಭಾವವು ಕ್ರಿಸ್ತನ ಕೂಡ ಶಿಲುಬೆಗೆ ಹಾಕಲ್ಪಟ್ಟತೆಂದು ತಿಳಿದಿದ್ದೇವೆ'' - (ರೋಮಾ - 6:6)**

ಸಹ ಶಿಲುಬೆಯ ಮರಣ : ಪಾಪದ ಬಗ್ಗೆ ನಾನು ಇಂಥಾ ನಿರ್ಣಯವನ್ನು ಕೈಕೊಂಡಿರುವೆನೋ? ನನ್ನೊಳಗಿರುವ ಪಾಪಗಳನ್ನು ಈಗಲೇ ಕೊಂದು ಹೊರಗೆ ಹಾಕುತ್ತೇನೆ. ಪಾಪದ ಬಗ್ಗೆ ಅಂಥ ಒಂದು ನೈತಿಕ ನಿರ್ಣಯವನ್ನು ತಲುಪಲು ಬಹು ಕಾಲಬೇಕು, ಆದರೆ ಲೋಕದ ಪಾಪ ನಿವಾರಣಾರ್ಥ ವಾಗಿ ಹೇಗೆ ಯೇಸುಕ್ರಿಸ್ತನು ಶಿಲುಬೆಯ ಮೇಲೆ ಮರಣಹೊಂದಿದನೋ ಹಾಗೆಯೇ ನನ್ನ ಜೀವಿತದಲ್ಲಿಯೂ ನನ್ನೊಳಗಿರುವ ಪಾಪದ ಮರಣವಾಗಬೇಕೆಂದು ನಾನು ನಿರ್ಣಯ ಮಾಡಿದ ಸಮಯವೇ, ನನ್ನ ಜೀವಿತದ ಮಹತ್ವದ ಕಾಲವಾಗಿರುತ್ತದೆ, ಪಾಪವನ್ನು ತಡೆಹಿಡಿಯುವದಲ್ಲ, ಅದನ್ನು ಹತ್ತಿಕ್ಕುವುದಲ್ಲ, ಅದಕ್ಕೆ ಪ್ರತಿದಾಳಿಯನ್ನೊಡ್ಡುವುದಲ್ಲ, ಅದನ್ನು ಶಿಲುಬೆಗೆ ಹಾಕಿ ಕೊಲ್ಲಬೇಕು. ಯಾರನ್ನಾದರೂ ಇಂಥ ನಿರ್ಣಯಕ್ಕೆ ಬರುವಂತೆ ಯಾರುಬೇಕಾದರೂ ಮಾಡಲಾಗುವುದಿಲ್ಲ. ನಾವೇನೋ ಇದಕ್ಕೆ ಮನಃಪೂರ್ತಿ ಒಪ್ಪಿರಬಹುದು ಮತ್ತು ಧಾರ್ಮಿಕ ವಾಗಿ ನಮಗೆ ಮನವರಿಕೆಯಾಗಿರಬಹುದು, ಆದರೆ ವಸ್ತುಶಃ ನಾವು ಮಾಡಬೇಕಾದ ದ್ದೇನೆಂದರೆ, ಪೌಲನು ಒತ್ತಾಯ ಪಡಿಸುತ್ತಿರುವ ದಾರಿಯಲ್ಲಿ ನಾವು ನಿರ್ಣಯ ಕೈಕೊಳ್ಳಬೇಕು.

ನಿನ್ನ ಹೊಯ್ದಾಡುವಿಕೆಯನ್ನು ಸೆಳೆದುಹಾಕಿ, ದೇವರೊಂದಿಗೆ ಏಕಾಂತವಾಗಿ ಚಿಂತನೆ ಮಾಡಿ, ಈ ಪಾಪದ ಬಗ್ಗೆ ಒಂದು ನೈತಿಕ ದೃಢನಿರ್ಧಾರಕ್ಕೆ ಬಂದು ಹೀಗೆ ಹೇಳು - ''ಸ್ವಾಮಿ ನನ್ನಲ್ಲಿರುವ ಪಾಪವು ಸತ್ತು ನಾಶವಾಗಿರುವುದನ್ನು ನಾನರಿಯುವ ತನಕ ನಿನ್ನ ಮರಣದಲ್ಲಿ ನನ್ನನ್ನು ಸದೃಶನನ್ನಾಗಿ ಮಾಡಿಕೋ''. ನಿನ್ನಲ್ಲಿರುವ ಪಾಪವು ಸಾಯಿಸಲ್ಪಡಬೇಕು ಎಂಬ ನೈತಿಕ ನಿರ್ಧಾರವನ್ನು ನೀನು ಮಾಡಬೇಕು.

ಪೌಲನ ಪಾಲಿಗೆ ಅದು ಭವಿಷ್ಯದಲ್ಲಾಗುವ ದೈವ ನಿರೀಕ್ಷೆಯಾಗಿರಲಿಲ್ಲ. ಅದು ಅವನ ಜೀವಿತದ ಮೂಲಭೂತ ಖಚಿತ ಅನುಭವ. ನನ್ನೊಳಗಿರುವ ಪಾಪಸ್ವಭಾವವೆಂಥಾದ್ದೆಂದು ನನಗೆ ತಿಳಿಯುವವರೆಗೆ, ದೇವರಾತ್ಮನು ನನ್ನೊಳಗೆ ಪರಿಶೋಧನೆ ನಡೆಸಲು ನಾನು ಸಿದ್ಧನಿರುವೆನೋ ? - ಯಾವ ಸ್ವಭಾವವು, ನನ್ನೊಳಗಿರುವ ದೇವರ ಆತ್ಮನಿಗೆ ವಿರುದ್ಧ ತೀವ್ರಾಸಕ್ತಿಯುಳ್ಳದ್ದಾಗಿದೆಯೋ ಅದನ್ನು ? ಹಾಗಿದ್ದರೆ ಪಾಪ ಸ್ವಭಾವಕ್ಕೆ ದೇವರು ಮಾಡಿದ ನ್ಯಾಯತೀರ್ಪಿಗೆ - ಅಂದರೆ ಆ ಪಾಪ ಸ್ವಭಾವವು ಯೇಸುಕ್ರಿಸ್ತನ ಮರಣದೊಂದಿಗೆ ಗುರುತಿಸಲ್ಪಡುವಂತೆ ಸಮ್ಮತಿಸುವೆಯಷ್ಟೆ ? ಇಂಥಾ ಮೂಲಭೂತ ಕಠಿಣ ಸಂಕಲ್ಪದ ಸಮಸ್ಯೆಯನ್ನು ಮೊದಲು ದೇವರೆದುರಿನಲ್ಲಿ ನಿರ್ಣಯಿಸದೆ ಹೋದರೆ, ''ಪಾಪದ ಪಾಲಿಗೆ ಸತ್ತವನು'' ಎಂದು ನನ್ನನ್ನು ನಾನು ಗುರುತಿಸಿ ಕೊಳ್ಳುವುದಿಲ್ಲ. (ರೋಮಾ - 6:11)

ನನ್ನ ರಕ್ತ ಮಾಂಸಗಳಲ್ಲಿ ಯೇಸುಕ್ರಿಸ್ತನ ಜೀವವೊಂದೇ ಇರುವಂತೆ ಆತನೊಂದಿಗೆ ಸಹ ಮರಣಹೊಂದುವ ಮಹಿಮಾ ಸೌಭಾಗ್ಯದಲ್ಲಿ ಸೇರಿರುವೆನೋ? ''ಕ್ರಿಸ್ತನೊಂದಿಗೆ ಶಿಲುಬೆಗೆ ಹಾಕಿಸಿ ಕೊಂಡವನಾಗಿದ್ದೇನೆ. ಇನ್ನು ಜೀವಿಸುವವನು ನಾನಲ್ಲ. ಕ್ರಿಸ್ತನು ನನ್ನಲ್ಲಿ ಜೀವಿಸುತ್ತಾನೆ'' (ಗಲಾತ್ಯ 2:20).

# ಫಲೋತ್ಪಾದಕ ದೈವತ್ವ

**''ನಾವು ಆತನ ಮರಣಕ್ಕೆ ಸದೃಶವಾದ ಮರಣವನ್ನು ಹೊಂದಿ ಆತನಲ್ಲಿ ಐಕ್ಯವಾಗಿದ್ದರೆ, ಆತನ ಪುನರುತ್ಥಾನಕ್ಕೆ ಸದೃಶವಾದ ಪುನರುತ್ಥಾನವನ್ನೂ ಹೊಂದಿ ಆತನಲ್ಲಿ ಐಕ್ಯವಾಗುವೆವು'' - (ರೋಮಾ - 6:5)**

ಸಹ ಪುನರುತ್ಥಾನ : ನಾನು ಯೇಸುಕ್ರಿಸ್ತನ ಜೊತೆಯಲ್ಲಿ ಶಿಲುಬೆಗೆ ಹಾಕಿಸಿಕೊಂಡಿರುವೆನೆಂಬುದರ ಸಾಕ್ಷಿ – ಈಗ ನಾನು ಯೇಸುಕ್ರಿಸ್ತನ ಸದೃಶ್ಯನಾಗಿದ್ದೇನೆ. ನನ್ನೊಳಗೆ ಆಗಮಿಸಿರುವ ಯೇಸು ಸ್ವಾಮಿಯ ಆತ್ಮವು ನನ್ನ ವೈಯಕ್ತಿಕ ಜೀವನವನ್ನು ದೇವರಿಗಾಗಿ ಮರುಹೊಂದಾಣಿಕೆ ಮಾಡುತ್ತದೆ. ಯೇಸು ಸ್ವಾಮಿಯ ಪುನರುತ್ಥಾನವು ದೈವ ಜೀವಿತವನ್ನು ನನಗೆ ನೀಡುವ ಪರಮಾಧಿಕಾರವನ್ನು ಆತನಿಗೆ ಕೊಟ್ಟಿರುತ್ತದೆ ಮತ್ತು ನನ್ನ ಜೀವಿತದ ಅನುಭವಗಳು ಆತನ ಜೀವಿತದ ಆಧಾರದ ಮೇಲೆಯೇ ರಚಿಸಲ್ಪಡಬೇಕು. ಜೀವದಿಂದೆದ್ದ ಯೇಸುಕ್ರಿಸ್ತನ ಜೀವಿತವನ್ನು ಇಲ್ಲಿಯೇ ಈ ಜೀವಿತದಲ್ಲಿಯೇ ನಾನು ಹೊಂದಬಲ್ಲೆನು ಮತ್ತು ಅದು ತನ್ನ ಪರಿಶುದ್ಧತೆಯ ಮೂಲಕ ತನ್ನಷ್ಟಕ್ಕೆ ತಾನೇ ನನ್ನಲ್ಲಿ ಪ್ರಕಟಗೊಳ್ಳುತ್ತದೆ.

ಪೌಲನ ಬರವಣಿಗೆಗಳಲ್ಲೆಲ್ಲಾ ಕಂಡುಬರುವ ಮುಖ್ಯ ಪ್ರಸ್ತಾಪದ ಪ್ರಕಾರ, ಯೇಸು ಕ್ರಿಸ್ತನ ಮರಣದೊಂದಿಗೆ ಗುರುತಿಸಿಕೊಳ್ಳುವ ನೈತಿಕ ದೃಢನಿರ್ಧಾರವನ್ನು ನಾನು ಮಾಡಿದ ನಂತರ, ಪುನರುತ್ಥಾನವಾದ ಯೇಸುಕ್ರಿಸ್ತನ ಜೀವವು ನನ್ನ ನರಸ್ವಭಾವದ ಪ್ರತಿಯೊಂದು ಭಾಗಕ್ಕೂ ಒಳನುಗ್ಗಿಬಿಡುತ್ತದೆ. ನಶ್ವರವಾದ ಈ ಶರೀರದಲ್ಲಿಯೇ ದೇವಕುಮಾರನ ಜೀವವು ಜೀವಿಸುವಂತೆ ಸರ್ವಶಕ್ತನಾದ ದೇವರು ಮಾಡುತ್ತಾನೆ. ನಿನ್ನೊಳಗೆ ಪ್ರವೇಶಿಸಿದ ಪರಿಶುದ್ಧಾತ್ಮನನ್ನು ನಿನ್ನ ಶರೀರದ ಕೋಣೆಯೊಂದರಲ್ಲಿ ಕೇವಲ ಅತಿಥಿಯಂತೆ ಇರಿಸಲಾಗದು, ಆತನು ದೇಹದಾದ್ಯಂತ, ಪ್ರತಿಯೊಂದು ಭಾಗಕ್ಕೂ ಆಕ್ರಮಣವೆಸಗುವನು. ನನ್ನಲ್ಲಿರುವ ''ಪೂರ್ವಸ್ವಭಾವದ ಮನುಷ್ಯನು'' (ಅನುವಂಶಿಕ ಪಾಪ) ಯೇಸುಸ್ವಾಮಿಯ ಮರಣದಲ್ಲಿ ಸದೃಶನಾಗಬೇಕೆಂಬ ನಿರ್ಣಯವನ್ನೊಮ್ಮೆ ನಾನು ತೆಗೆದುಕೊಂಡ ಕೂಡಲೇ ಪವಿತ್ರಾತ್ಮನು ರಭಸದಿಂದ ಒಳನುಗ್ಗುವನು ಮತ್ತು ನನ್ನನ್ನೂ, ನನ್ನೊಳಗಿರುವ ನನ್ನ ಸರ್ವಸ್ವವನ್ನು ತನ್ನ ಅಧೀನಕ್ಕೆ ತೆಗೆದುಕೊಳ್ಳುತ್ತಾನೆ, ಆಗ ನಾನು ಮಾಡಬೇಕಾದದ್ದಿಷ್ಟೇ, ಆತನ ಬೆಳಕಿನಲ್ಲಿ ನಡೆಯಬೇಕು, ಆತನು ಪ್ರಕಟಿಸುವುದೆಲ್ಲಕ್ಕೂ ವಿಧೇಯನಾಗಬೇಕು. ಪಾಪದ ಬಗ್ಗೆ ಅಂಥ ನೈತಿಕ ನಿರ್ಣಯವನ್ನು ಮಾಡಿದಾಗ ''ಪಾಪದ ಪಾಲಿಗೆ ಸತ್ತವನೆಂದು'' ಎಣಿಸಿಕೊಳ್ಳುವುದು ಬಹುಸುಲಭವಾಗಿರುತ್ತದೆ. ಯಾಕೆಂದರೆ, ಯೇಸುಕ್ರಿಸ್ತನ ಜೀವವು ಸದಾ ನನ್ನೊಳಗಿರುವುದನ್ನು ನಾನು ಕಾಣುತ್ತಿರುತ್ತೇನೆ. ಮಾನವ ಜನಾಂಗವು ಹೇಗೆ ಒಂದೇ ವಿಧವಾಗಿದೆಯೋ ಹಾಗೆಯೇ ಒಂದೇ ವಿಧವಾದ ಪರಿಶುದ್ಧತೆ ಇರುತ್ತದೆ, ಅದು ಯೇಸುಸ್ವಾಮಿಯ ಪರಿಶುದ್ಧತೆಯೇ ! ಈ ಪರಿಶುದ್ಧತೆಯನ್ನೇ ನನಗೆ ಬಹುಮಾನವಾಗಿ ನೀಡಲಾಗಿದೆ. ದೇವರು ತನ್ನ ಕುಮಾರನ ಪರಿಶುದ್ಧತೆಯನ್ನೇ ನನ್ನೊಳಗೆ ಇರಿಸುವನು. ಆಗ ನಾನು ಹೊಸದಾದ ಆತ್ಮೀಕ ಜೀವನ ಕ್ರಮಕ್ಕೆ ಒಳಪಟ್ಟಿರುತ್ತೇನೆ.

# ಸಂಪೂರ್ಣವಾದ ಮತ್ತು ಪರಿಣಾಮಕಾರಿಯಾದ ಪ್ರಭುತ್ವ

**''ಮರಣವು ಇನ್ನು ಆತನನ್ನು ಆಳುವುದಿಲ್ಲವೆಂದು ನಮಗೆ ತಿಳಿದದೆ, ಆತನು ಸತ್ತದ್ದು ಒಂದೇ ಸಾರಿ, ಅದು ಪಾಪದ ಪಾಲಿಗೆ, ಆತನು ಜೀವಿಸುವುದು ದೇವರಿಗಾಗಿಯೇ. ಅದೇ ಪ್ರಕಾರ ನೀವು ಸಹ ನಿಮ್ಮನ್ನು ಕ್ರಿಸ್ತಯೇಸುವಿನ ಐಕ್ಯದಿಂದ ಪಾಪದ ಪಾಲಿಗೆ ಸತ್ತವರೂ, ದೇವರಿಗಾಗಿ ಜೀವಿಸುವವರೂ ಎಂದು ಎಣಿಸಿಕೊಳ್ಳಿರಿ -'' - (ರೋಮಾ - 6:9-11)**

ಸಹನಿತ್ಯ ಜೀವನ : ಯೇಸುಕ್ರಿಸ್ತನು ಲೌಕಿಕ ಜೀವಿತ ರಂಗದಲ್ಲಿ ಪ್ರದರ್ಶಿಸಿದ ಜೀವಿತವೇ ನಿತ್ಯ ಜೀವನ, ಅದೊಂದು ಪ್ರತಿರೂಪದ ಜೀವಿತವಲ್ಲ. ದೇವರಾತ್ಮನಿಂದ ನಾವು ಹೊಸದಾಗಿ ಹುಟ್ಟಿದಾಗ ಆ ಜೀವಿತವೇ ನಮ್ಮ ಶರೀರದಲ್ಲಿ ಸಾಕ್ಷಾತ್ಕಾರಗೊಳ್ಳುತ್ತದೆ. ನಿತ್ಯ ಜೀವವು ದೇವರಿಂದ ಕೊಡಲ್ಪಡುವ ಒಂದು ಬಹುಮಾನವಲ್ಲ. ಅದು ದೇವರ ಅನುಗ್ರಹ. ಒಮ್ಮೆ ನಾವು ಪಾಪದ ವಿಷಯದಲ್ಲಿ ನೈತಿಕ ನಿರ್ಧಾರವನ್ನು ಮಾಡಿದ ನಂತರ, ಯೇಸುಸ್ವಾಮಿಯಲ್ಲಿ ವ್ಯಕ್ತಗೊಂಡಂಥ ಬಲ ಸಾಮರ್ಥ್ಯಗಳು, ದೇವರ ಮಹಾಕೃಪೆ ಯಿಂದ ನಮ್ಮೊಳಗೂ ವ್ಯಕ್ತಗೊಳ್ಳುತ್ತವೆ.

''ಪವಿತ್ರಾತ್ಮನು ನಿಮ್ಮ ಮೇಲೆ ಬರಲು ನೀವು ಬಲವನ್ನು ಹೊಂದಿ'' (ಅ.ಕೃ. - 1:8) ಬಲವು ಪವಿತ್ರಾತ್ಮನಿಂದ ಕೊಡಲ್ಪಡುವ ಒಂದು ವರವಲ್ಲ, ಬಲವೆಂದರೆ ಪವಿತ್ರಾತ್ಮನು ನೀಡುವ ಏನೋ ಒಂದು ಅಲ್ಲ, ಪವಿತ್ರಾತ್ಮನೇ ಬಲವು ಆಗಿದ್ದಾನೆ. ಯೇಸು ಸ್ವಾಮಿಯೊಡನೆ ಗುರುತಿಸಿಕೊಳ್ಳುವ ನಿರ್ಧಾರವನ್ನು ನಾವು ಮಾಡಿದರೆ, ಆತನ ಶಿಲುಬೆಯ ನಿಮಿತ್ತ ಯೇಸುಸ್ವಾಮಿಯಲ್ಲಿದ್ದ ಜೀವಿತವು ನಮ್ಮದೇ ಆಗುತ್ತದೆ. ದೇವರಿಗೆ ನಾವು ಸಮರ್ಪಕ ರಾಗಿರುವಂತೆ ಕಾಣುವುದು ತುಂಬಾ ಕಷ್ಟಕರವಾಗಿದ್ದರೆ, ಅದಕ್ಕೆ ಕಾರಣ, ನಾವು ಪಾಪದ ಬಗ್ಗೆ ಖಚಿತವಾದ ನೈತಿಕ ನಿರ್ಧಾರವನ್ನು ತೆಗೆದುಕೊಳ್ಳಲು ನಿರಾಕರಿಸಿರುತ್ತೇವೆ. ನಿರ್ಣಾಯಕವಾಗಿ ಇದನ್ನು ನಾವು ನಿರ್ಧರಿಸಿದ ಕೂಡಲೇ ದೇವರ ಸಂಪೂರ್ಣ ಜೀವಿತವು ನಮ್ಮೊಳಗೆ ಪ್ರವೇಶಿಸುತ್ತದೆ. ನಮ್ಮ ಜೀವಿತಕ್ಕೆ ಬೇಕಾದುದೆಲ್ಲವನ್ನು ಕೊನೆಮೊದಲಿಲ್ಲದ ಮಟ್ಟಿಗೆ ಪೂರೈಸಲು ಯೇಸುಸ್ವಾಮಿಯು ಬಂದಿರುತ್ತಾನೆ. ''ದೇವರ ಸಂಪೂರ್ಣತೆಯ ಮಟ್ಟಿಗೂ ಪರಿಪೂರ್ಣರಾಗುವ ಹಾಗೆ'' (ಎಫೆ-3:19) ನಿತ್ಯಜೀವಕ್ಕೂ ಕಾಲಕ್ಕೂ ಏನೇನೂ ಸಂಬಂಧವಿಲ್ಲ. ಕಾಲವು ಯೇಸು ಸ್ವಾಮಿಯು ಈ ನೆಲದ ಮೇಲೆ ಬದುಕಿದ ಜೀವಿತ. ಅಂಥಾ ಜೀವಿತಕ್ಕಿರುವ ಒಂದೇ ಒಂದು ಮೂಲ - ಅದು ಪ್ರಭುವಾದ ಯೇಸುಕ್ರಿಸ್ತನೇ.

ಒಮ್ಮೆ ತನ್ನನ್ನು, ತನ್ನದೆಲ್ಲವನ್ನು 'ಹೋಗಲಿ' ಎಂದು ಬಿಟ್ಟುಕೊಡಲು ಸಿದ್ಧನಾದರೆ, ಅತ್ಯಂತ ಬಲ ಹೀನನಾದ ದೇವಭಕ್ತನೂ ಸಹಾ, ದೇವಕುಮಾರನ ದೈವತ್ವದ ಶಕ್ತಿಯನ್ನು ಅನುಭವಿಸಬಲ್ಲನು, ಆದರೆ ನಮ್ಮ ಸ್ವಸಾಮರ್ಥ್ಯದ ಮೇಲೆ ಆಧಾರಗೊಂಡು, ದಾರದೆಳೆಯಷ್ಟಾದರೂ ಅದಕ್ಕೆ ಜೋತು ಬೀಳುವ ಪ್ರಯತ್ನವನ್ನು ಮಾಡಿದರೆ, ನಮ್ಮೊಳಗಿರುವ ಯೇಸುಸ್ವಾಮಿಯ ಜೀವಿತವನ್ನು ಅದು ಮಸುಕುಗೊಳಿಸುತ್ತದೆ. ನಮ್ಮದೆಲ್ಲವನ್ನು ಹೋಗಲು ಬಿಟ್ಟು ಬಿಡಬೇಕು. ಸಾವಧಾನವಾಗಿ ಮತ್ತು ಖಂಡಿತವಾಗಿ ದೇವರ ಸಂಪೂರ್ಣತೆಯಿಂದ ಕೂಡಿದ ಮಹಾಜೀವಿತವು ನನ್ನ ಜೀವಿತದ ಸಕಲಭಾಗಗಳಲ್ಲಿ ಆಕ್ರಮಣ ಮಾಡಿ ವ್ಯಾಪಿಸಿಕೊಳ್ಳುತ್ತದೆ ಮತ್ತು ನಮ್ಮನ್ನು ನೋಡಿದವರು ನಾವು ಯೇಸುಸ್ವಾಮಿಯೊಂದಿಗೆ ಇದ್ದವರು ಎಂಬ ಅರಿವನ್ನು ಪಡೆಯುತ್ತಾರೆ.

# ಅಂಥಾ ಪರಿಸ್ಥಿತಿಗಳಲ್ಲಿ ಮಾಡುವುದೇನು ?

**''ನಿನ್ನ ಚಿಂತಾಭಾರವನ್ನು ಯೆಹೋವನ ಮೇಲೆ ಹಾಕು'' - (ಕೀರ್ತ - 55:22)**

ಯೋಗ್ಯವಾದವುಗಳ ಭಾರ ಹೊರುವಿಕೆ ಮತ್ತು ತಪ್ಪಾದವುಗಳ ಭಾರ ಹೊರುವಿಕೆಯ ನಡುವಿರುವ ಬೇಧವನ್ನು ಕಾಣಬೇಕು. ನಾವೆಂದಿಗೂ ಪಾಪದ ಭಾರವನ್ನು, ಸಂಶಯದ ಹೊರೆಯನ್ನು ಹೊರಲೇಕೂಡದು. ಆದರೂ, ದೇವರು ನಮ್ಮ ಮೇಲೆ ಇರಿಸಿದ ಹೊರೆಗಳೂ ಇವೆ, ಆ ಹೊರೆಗಳನ್ನು ನಮ್ಮ ಮೇಲಿನಿಂದ ತೆಗೆದುಹಾಕುವ ಉದ್ದೇಶ ಆತನಿಗಿಲ್ಲ, ಆದರೆ ಅವುಗಳನ್ನು ನಾವು ಹಿಂತಿರುಗಿಸಿ ಆತನ ಮೇಲೆಯೇ ಹೊರಳಿಸಬೇಕೆಂದು ಆತನು ಬಯಸಿದ್ದಾನೆ. ''ಯೆಹೋವನು ಕೊಟ್ಟಿರುವುದನ್ನು ಆತನ ಮೇಲೆ ಹಾಕು'' ದೇವರ ಪರವಾಗಿ ಸೇವೆ ಮಾಡುವ ಕಾರ್ಯವನ್ನು ಕೈಗೆತ್ತಿಕೊಂಡು ಆತನ ಸಾಮಿಪ್ಯದಿಂದ ಹೊರಗುಳಿದುಬಿಟ್ಟರೇ, ಕೈಕೊಂಡ ಕಾರ್ಯದ ಹೊಣೆಗಾರಿಕೆಯ ಅರಿವು, ನಮ್ಮನ್ನು ಮಿತಿ ಮೀರಿ ಜಜ್ಜುತ್ತದೆ. ಆದರೆ ದೇವರು ನಮ್ಮ ಮೇಲೆ ಇರಿಸಿದ ಹೊರೆಗಳನ್ನು ಹಿಂತಿರುಗಿಸಿ ಆತನ ಮೇಲೆ ಹಾಕಿದರೆ, ತನ್ನ ವಿಷಯವಾದ ಅರಿವನ್ನು ಅಂದರೆ ನಮ್ಮೊಂದಿಗೆ ತಾನೇ ಜೊತೆಯಾಗಿರುವ ಅರಿವನ್ನು ಉಂಟು ಮಾಡಿ ನಮ್ಮ ಹೊಣೆಗಾರಿಕೆಯ ಬಗ್ಗೆ ನಮಗಿರುವ ಮಿತಿಮೀರಿದ ಪ್ರಜ್ಞೆಯನ್ನು ತೆಗೆದು ಹಾಕುತ್ತಾನೆ.

ಅನೇಕ ಕಾರ್ಯಕರ್ತರು ಹಿರಿದಾದ ಧೈರ್ಯದಿಂದ ಮತ್ತು ಉತ್ತಮ ಪ್ರೇರಣೆಗಳಿಂದ ದೇವರ ಸೇವೆಗೆ ಹೊರಟುಹೋಗಿದ್ದಾರೆ. ಆದರೆ ಅವರು ಯೇಸು ಕ್ರಿಸ್ತನೊಂದಿಗೆ ನಿಕಟವಾದ ಅನ್ಯೋನ್ಯತೆಯನ್ನು ಹೊಂದಿರದಿದ್ದುದರಿಂದ, ಅನತಿಕಾಲ ದಲ್ಲಿಯೇ ಅವರು ಜಜ್ಜಲ್ಪಟ್ಟರು. ತಮ್ಮ ಮೇಲಿರುವ ಭಾರವನ್ನು ಏನು ಮಾಡಬೇಕೆಂದು ಅವರಿಗೆ ತೋಚುವುದಿಲ್ಲವಾದ್ದರಿಂದ, ಅದು ಅವರಿಗೆ ದಣಿವನ್ನುಂಟು ಮಾಡುತ್ತದೆ, ಆಗ ಜನರೆನ್ನುತ್ತಾರೆ ''ಎಂಥಹ ಉತ್ಸಾಹದ ಆರಂಭ ! ಅದೆಷ್ಟು ಶೋಚನೀಯ ಅಂತ್ಯ !''

''ನಿನ್ನ ಚಿಂತಾಭಾರವನ್ನು ಪ್ರಭುವಿನ ಮೇಲೆ ಹೊರಳಿಸಿಬಿಡು'' ಈವರೆಗೂ ಹೊತ್ತುಕೊಂಡೇ ಇದ್ದೀಯಲ್ಲವೇ; ವಿವೇಚನಾ ಪೂರ್ವಕವಾಗಿ ನೊಗದ ಒಂದು ತುದಿಯನ್ನು ಆತನ ಭುಜದ ಮೇಲಿರಿಸು ''ಆಡಳಿತವು ಅವನ ಬಾಹುವಿನ ಮೇಲಿರುವುದು'' (ಯೆಶಾಯ 9:6)'' ನಿನ್ನ ಮೇಲೆ ಆತನು ಹಾಕಿದ ಹೊರೆಯನ್ನು ಹಿಂತಿರುಗಿಸಿ ಆತನ ಮೇಲೆ ಹೊರಳಿಸಿಬಿಡು, ಅದನ್ನು ತೆಗೆದು ಪಕ್ಕಕ್ಕೆ ಎಸೆಯಬೇಡ. ಅವೆಲ್ಲವುಗಳನ್ನು ಆತನ ಮೇಲಿರಿಸು ಮತ್ತು ನೀನ್ನನ್ನೂ ಅವುಗಳ ಜೊತೆ ಸೇರಿಸಿಬಿಡು. ಗೆಳೆತನ ಮತ್ತು ಜೊತೆಯಾಗಿರುವಿಕೆಯ ಅರಿವಿನಿಂದ ನಿನ್ನ ಭಾರಗಳು ಹಗುರಾಗಿ ಬಿಡುತ್ತವೆ. ಇಂಥಾ ಭಾರಗಳಿಂದ ನಿನ್ನನ್ನು ನೀನು ಎಂದಿಗೂ ದೂರವಿರಿಸಿಕೊಳ್ಳಬೇಡ.

# ದೈವ ಪ್ರೇರಿತ ಅಜೇಯತೆ

**''ನನ್ನ ನೊಗವನ್ನು ನಿಮ್ಮ ಮೇಲೆ ತೆಗೆದುಕೊಂಡು ನನ್ನಲ್ಲಿ ಕಲಿತುಕೊಳ್ಳಿರಿ.'' - (ಮತ್ತಾಯ - 11:29)**

''ಕರ್ತನು ತಾನು ಪ್ರೀತಿಸುವವನನ್ನೇ ಶಿಕ್ಷಿಸುತ್ತಾನೆ'' (ಇಬ್ರಿಯ 12:6) ನಮ್ಮ ದೂರುವಿಕೆ ಅದೆಷ್ಟು ಅಲ್ಪತನದ್ದಾಗಿದೆ? ನಮ್ಮ ಸ್ವಾಮಿಯು ತನ್ನೊಂದಿಗೆ ನಾವು ಅನ್ಯೋನ್ಯತೆಯಲ್ಲಿರಬೇಕಾದಂಥ ಸ್ಥಳಕ್ಕೆ ನಮ್ಮನ್ನು ಬರಮಾಡಲಾರಂಭಿಸಿದ್ದಾನೆ, ನಾವಾದರೋ ಮುಲುಗುತ್ತಾ ಹೇಳುತ್ತೇವೆ. - ''ಓ ಸ್ವಾಮಿ, ಇತರರು ಇರುವಂತೆ ಇರಲು ನನ್ನನ್ನು ಬಿಡು!''. ನನ್ನ ಬದಿಗೆ ಬಂದು ತನ್ನ ನೊಗದ ಒಂದು ತುದಿಯನ್ನು ಹೊತ್ತುಕೊಳ್ಳಿರಿ, ಎಂದು ಯೇಸು ಸ್ವಾಮಿಯು ನಮ್ಮನ್ನು ಕೇಳುತ್ತಿದ್ದಾನೆ. 'ನನ್ನ ನೊಗವು ಮೃದುವಾಗಿದೆ. ನನ್ನ ಜೊತೆ ಬದಿಗೆ ಬಾ, ನಾವು ಜೊತೆಯಾಗಿ ನೊಗವನ್ನು ಹೊತ್ತು ಹೊರೆಯನ್ನು ಎಳೆದು ಬಿಡುವಾ' ''ನನ್ನ ಮೊಗವು ಮೃದುವಾದದ್ದು; ನನ್ನ ಹೊರೆಯು ಹೌರವಾದದ್ದು'' (ಮತ್ತಾ 11:30) ಈ ರೀತಿಯಾಗಿ ಯೇಸುಸ್ವಾಮಿಯೊಂದಿಗೆ ನಿನ್ನನ್ನು ಗುರುತಿಸಿ ಕೊಂಡಿರುವಿಯೋ? ಹಾಗಿದ್ದರೆ ನಿನ್ನ ಮೇಲೆ ದೇವರ ಹಸ್ತದ ಹೊರೆಯ ಅರಿವಾದಾಗ, ಕೃತಜ್ಞತೆಯಿಂದ ಆತನನ್ನು ನೀನು ವಂದಿಸಬೇಕು.

''.......ನಿರ್ಬಲನಿಗೆ ಬಹುಬಲವನ್ನು ದಯಪಾಲಿಸುತ್ತಾನೆ'' (ಯೆಶಾ - 40:29) ದೇವರು ಭಾವತನ್ಮಯತೆ ಯೊಳಗಿಂದ ನಮ್ಮನ್ನು ಹೊರಬರಮಾಡುವನು, ಆಗ ನಮ್ಮ ದೂರುವಿಕೆಯು ಆತನ ಪ್ರಶಂಶಾಗೀತವಾಗಿ ಮಾರ್ಪಡುತ್ತದೆ. ದೇವರ ಪರಮಶಕ್ತಿಯನ್ನು ಅರಿತುಕೊಳ್ಳುವ ಒಂದೇ ಮಾರ್ಗವೆಂದರೆ ಯೇಸುಕ್ರಿಸ್ತನ ನೊಗವನ್ನು ನಮ್ಮ ಮೇಲೆ ಹೊತ್ತುಕೊಳ್ಳಬೇಕು ಮತ್ತು ಆತನನ್ನು ಅರಿತುಕೊಳ್ಳಬೇಕು.

''...... ಯೆಹೋವನ ಆನಂದವೇ ನಿಮ್ಮ ಆಶ್ರಯವಾಗಿದೆ'' - (ನೆಹೆಮೀಯ - 8:10) ದೇವಭಕ್ತರು ತಮ್ಮ ಆನಂದವನ್ನು ಎಲ್ಲಿಂದ ಪಡೆಯುತ್ತಿರುವರು ? ಕೆಲವು ದೇವಭಕ್ತರ ವಿಷಯವಾಗಿ ಸರಿಯಾದ ಅರಿವು ನಮಗಿರದಿದ್ದಾಗ - ''ಓಹ್ ! ಅವರಿಗೆ ಹೊರಲು ಚಿಂತಾಭಾರಗಳು ಇಲ್ಲ'' ಎಂದು ನಾವು ಹೇಳಬಹುದು. ಕಣ್ಣುಗಳ ಮೇಲಿರುವ ಪರದೆಯನ್ನು ಎತ್ತಿ ನೋಡು; ಅವರಲ್ಲಿರುವ ದೇವರ ಆನಂದ, ದೇವರ ಬೆಳಕು, ಆತನ ಶಾಂತಿ ಹಾಗೂ ಇವುಗಳ ಜೊತೆಗೆ ಅವರ ಮೇಲಿರುವ ಚಿಂತಾಭಾರವನ್ನೂ ಖಂಡಿತವಾಗಿಯೂ ನೀನು ಕಾಣುವೆ. ದೇವರು ಹೊರಿಸುವ ಹೊರೆಯು ದ್ರಾಕ್ಷೆಯನ್ನು ಹಿಚುಕುತ್ತದೆ ನಮ್ಮ ಜೀವಿತವನ್ನು ಹಿಚುಕುತ್ತದೆ ಮತ್ತು ದ್ರಾಕ್ಷಾರಸವು ಹೊರಬರುತ್ತದೆ. ನಮ್ಮಲ್ಲಿ ಅನೇಕರು ಕೇವಲ ದ್ರಾಕ್ಷಾರಸವನ್ನು ಮಾತ್ರ ನೋಡುತ್ತಾರೆ. ಅಲ್ಲಿದ್ದ ಹೊರೆಯನ್ನು ಅವರು ನೋಡುವುದಿಲ್ಲ. ಮಾನವನ ಆತ್ಮದಲ್ಲಿ ನೆಲೆಸಿರುವ ದೇವರ ಆತ್ಮವನ್ನು ಜಯಿಸುವಂಥ ಶಕ್ತಿಯು ಭೂಮಿಯ ಮೇಲಾಗಲೀ, ಪಾತಾಳದಲ್ಲಿಯಾಗಲೀ ಇಲ್ಲವೇ ಇಲ್ಲ. ಅದು ಅಂತರಂಗದ ಅಜೇಯತೆಯನ್ನು ಸೃಷ್ಟಿಸುತ್ತದೆ. ಕುಯ್ ಗುಡುವಿಕೆ ನಿನ್ನಲ್ಲಿ ಇದ್ದರೆ ಮೊದಲು ಅದನ್ನು ನಿಷ್ಕರುಣೆಯಿಂದ ಒದ್ದೋಡಿಸಿಬಿಡು. ದೈವ ಸಾಮರ್ಥ್ಯದಲ್ಲಿ ಬಲಹೀನನಾಗಿರುವುದು ಶಿಕ್ಷಾರ್ಹ ಅಪರಾಧ.

# ಚಿತ್ತೈಕಾಗ್ರತೆಯಲ್ಲಿ ಭ್ರಷ್ಟತೆ

**''ಇಸ್ರಾಯೇಲ್ ಪ್ರಾಂತದಲ್ಲಿದ್ದ ಪೂಜಾಸ್ಥಳಗಳು ತೆಗೆದುಹಾಕಲ್ಪಡದಿದ್ದರೂ ಆತನು ತನ್ನ ಜೀವಮಾನದಲ್ಲೆಲ್ಲಾ ಯಥಾರ್ಥಚಿತ್ತನಾಗಿ ನಡೆದುಕೊಂಡನು'' - (2 ಪೂರ್ವ ವೃತ್ತಾ - 15:17)**

ರಾಜನಾದ ಆಸನು ತನ್ನ ಬಹಿರಂಗ ಜೀವಿತದಲ್ಲಿ ದೇವರಿಗೆ ಸಲ್ಲಿಸಬೇಕಾದ ವಿಧೇಯತೆಯಲ್ಲಿ ಅಪರಿಪೂರ್ಣನಾಗಿದ್ದನು. ತನ್ನ ಜೀವಿತದಲ್ಲಿ ಯಾವುದು ಪ್ರಾಮುಖ್ಯವೆಂದು ತಾನು ತಿಳಿದಿದ್ದನೋ, ಅಂಥಾ ಜೀವಿತರಂಗಗಳಲ್ಲಿ ಆತನು ಸರಿಯಾಗಿಯೇ ಇದ್ದನಾದರೂ ಪರಿಪೂರ್ಣನಾಗಿರಲಿಲ್ಲ. ''ಓಹ್! ಅದೊಂದು ಅಲ್ಪವಿಷಯ, ಅಷ್ಟಾಗಿಯೋಚಿಸಬೇಕಿಲ್ಲ'' ಎಂದು ಹೇಳುವ ಆ ಒಂದು ವಿಷಯದ ಬಗ್ಗೆ ನೀನು ಎಚ್ಚರದಿಂದಿರಬೇಕು. ನಿನಗೆ ಅಷ್ಟೇನೂ ಮುಖ್ಯವಲ್ಲದ ಆ ವಿಷಯವು ದೇವರಿಗೆ ಪ್ರಾಮುಖ್ಯವಾದ ದೊಡ್ಡ ವಿಷಯವಾಗಿರಬಹುದು. ದೇವರ ಶಿಶುವಾಗಿರುವವನಿಗೆ ಯಾವ ವಿಷಯವೂ ಲಘುವಾದವುಗಳಲ್ಲ. ದೇವರು ಒಂದು ವಿಷಯವನ್ನು ನಮಗೆ ಕಲಿಸಿಕೊಡುವುದನ್ನು ನಾವೆಷ್ಟು ಕಾಲದವರೆಗೆ ತಡೆಹಿಡಿದಿದ್ದೇವೆ ? ಆತನೆಂದೂ ತಾಳ್ಮೆಯನ್ನು ಕಳೆದುಕೊಳ್ಳುವುದಿಲ್ಲ. ''ನಾನು ದೇವರೊಡನೆ ಸರಿಯಾಗಿ, ಸಮರ್ಪಕ ವಾಗಿದ್ದೇನೆಂದು ನನಗೆ ತಿಳಿದಿದೆ'' ಎಂದು ನೀನು ಹೇಳಿದಾಗ್ಯೂ ಪೂಜಾಸ್ಥಳಗಳು ಇನ್ನೂ ನಿನ್ನಲ್ಲಿ ಇದ್ದೇ ಇವೆ. ನೀನು ದೇವರಿಗೆ ವಿಧೇಯನಾಗದಿರುವ ಸಂಗತಿಗಳು ನಿನ್ನಲ್ಲಿ ಇನ್ನೂ ಉಳಿದಿವೆ, ನಿನ್ನ ಜೀವಿತದಲ್ಲಿ ಯಾವುದೋ ಒಂದು ವಿಷಯವು ಸಮರ್ಪಕವಾಗಿಲ್ಲವೆಂಬ ಸಂಶಯವನ್ನು ದೇವರು ನಿನ್ನ ಪ್ರಜ್ಞೆಗೆ ತಂದಾಗ ಅದು ಸಮರ್ಪಕವಾಗಿದೆ ಎಂದು ಆತನ ಮುಂದೆ ಪ್ರತಿಭಟಿಸುವಿಯೋ ? ಒಂದು ಸಂಗತಿಯ ಬಗ್ಗೆ ದೇವರು ಸಂಶಯವನ್ನು ಹುಟ್ಟಿಸಿದ ಕೂಡಲೇ ಆ ಸಂಗತಿಯನ್ನು ಅಷ್ಟಕ್ಕೆ ನಿಲ್ಲಿಸಿಬಿಡು. ನಮ್ಮ ಜೀವಿತದಲ್ಲಿ ಯಾವ ವಿಷಯವೂ ದೇವರಿಗೆ ಯಃಕಶ್ಚಿತ್ ಮತ್ತು ಅಲ್ಪವೆಂದೆನಿಸುವುದಿಲ್ಲ.

ನಿನ್ನ ಶಾರೀರಿಕ ಮತ್ತು ನಿನ್ನ ಬೌದ್ಧಿಕ ಜೀವಿತಕ್ಕೆ, ಸಂಬಂಧಿಸಿದ ಕೆಲವು ವಿಷಯಗಳಿಗೆ ನೀನು ಗಮನವನ್ನೇ ಕೊಡುತ್ತಿಲ್ಲವೋ? ಮುಖ್ಯವಾದ ಸಂಗತಿಗಳಲ್ಲಿ ನೀನು ದೇವರಿಗೆ ಸಮರ್ಪಕವಾಗಿ ರುವೆಯಾದರೂ, ನೀನೊಬ್ಬ ಎಚ್ಚರಗೇಡಿಯೂ ಆಗಿರುವುದರಿಂದ ನಿನ್ನ ಚಿತ್ತೈಕಾಗ್ರತೆಯಲ್ಲಿ ದೃಢತೆಯು ಸಡಿಲಗೊಂಡು ಭ್ರಷ್ಟತೆಯುಂಟಾಗಿದೆ. ನಿನ್ನ ಹೃದಯದ ಬಡಿತದಲ್ಲಿ ಬಿಡುವು ಪಡೆಯುವುದು ಹೇಗೆ ಸಾಧ್ಯವಿಲ್ಲವೋ, ನೀನು ನೀತಿವಂತನಾಗಿಯೇ ಉಳಿದಿರುತ್ತಾ, ನೈತಿಕತೆಯಲ್ಲಿ ಬಿಡುವು ಪಡೆಯುವುದು ಅಸಾಧ್ಯ; ಹಾಗೆಯೇ ಆತ್ಮೀಕ ವ್ಯಕ್ತಿಯಾಗಿರುತ್ತಾ ಆತ್ಮೀಕತೆಯಲ್ಲಿ ಬಿಡುವನ್ನು ಪಡೆಯಲಾಗದು. ನೀನು ಸಂಪೂರ್ಣವಾಗಿ ಸತತವಾಗಿ, ಯಾವಾಗಲೂ ತನ್ನವನ್ನೇ ಆಗಿರಬೇಕೆಂದು ದೇವರು ಬಯಸುತ್ತಾನೆ. ಇದರ ಅರ್ಥ, ಅದಕ್ಕೆ ಯೋಗ್ಯನಾಗಿರುವ ಹಾಗೆ ನೀನು ಸದಾ ಎಚ್ಚರವಾಗಿರಬೇಕು. ಇದನ್ನು ಸಾಧಿಸಲು ಅಪಾರ ಸಮಯ ಬೇಕಾಗುತ್ತದೆ. ಆದರೂ ಕೆಲವರು ಅನೇಕ ಬೆಟ್ಟಗಳ ತುದಿಗೆ ಹತ್ತಿ ಇಳಿಯುವದು ಎರಡೇ ನಿಮಿಷಗಳಲ್ಲಿ ಆಗಬೇಕೆಂದು ಬಯಸುವವರೂ ನಮ್ಮಲ್ಲಿ ಇದ್ದಾರೆ. ಅವರು ಎಲ್ಲವನ್ನು ಕೇವಲ ಅಲ್ಪವಾದುವುಗಳು ಹಾಗೂ ಅತೀ ಸುಲಭವೆಂದು ಎಣಿಸುತ್ತಾರೆ.

# ಬೆಟ್ಟದಿಂದ ನೀನು ಕೆಳಗಿಳಿದು ಬರಬಲ್ಲೆಯೋ ?

**''ನಿಮಗೆ ಬೆಳಕು ಇರುವಾಗಲೇ ಬೆಳಕನ್ನು ನಂಬಿರಿ'' - (ಯೋಹಾ - 12:36)**

ನಾವು ಅತ್ಯುತ್ತಮತೆಗಿಂತಲೂ ಉತ್ತಮರಾಗಿದ್ದೇವೆಂದು ಭಾವಿಸುವ ಕ್ಷಣಗಳು ನಮಗೆ ಇದ್ದೇ ಇರುತ್ತವೆ. ಆಗ ನಾವು ಹೀಗೆ ಹೇಳುತ್ತೇವೆ. -''ಇಂಥಾ ಸ್ಥಿತಿಯು ಯಾವಾಗಲೂ ನನಗಿದ್ದರೆ ಎಂಥಾ ಕಾರ್ಯಗಳಿಗಾಗಲೀ ನಾನು ಸಮರ್ಥನಿರುವೆನೆಂದು ಭಾವಿಸುತ್ತೇನೆ.'' ಆದರೆ ಅದಕ್ಕಾಗಿ ನಾವಿರುವುದಿಲ್ಲ. ಆ ಕ್ಷಣಗಳಾದರೋ, ಸೂಕ್ಷ್ಮವಾದ ಒಳನೋಟದ ಕ್ಷಣಗಳಾಗಿರುತ್ತವೆ ಮತ್ತು ಒಳನೋಟದನುಗುಣವಾಗಿ ಜೀವಿಸಲು ನಮಗೆ ಇಚ್ಛೆಯಿಲ್ಲದಿದ್ದರೂ ಅದನ್ನು ನಾವು ಬದುಕಲೇಬೇಕು. ನಮ್ಮಲ್ಲಿ ಅನೇಕರಿಗೆ ಬೆಟ್ಟದ ಮೇಲೆ ಇದ್ದಂಥ ಅತ್ಯುತ್ತಮ ಕ್ಷಣಗಳು ಇಲ್ಲದಿದ್ದರೆ, ದೈನಂದಿನ ವ್ಯವಹಾರಿಕ ಜೀವಿತವನ್ನು ಜೀವಿಸಲು ಸಹಾ ಅವರು ಯೋಗ್ಯರಾಗಿರುವುದಿಲ್ಲ. ನಾವು ಬೆಟ್ಟದ ಮೇಲಿದ್ದಾಗ, ಉತ್ತಮ ಗಳಿಗೆಯಲ್ಲಿ ನಮಗೆ ಪ್ರಕಟಿಸಲ್ಪಟ್ಟಿರುವದನ್ನು , ನಮ್ಮ ದೈನಂದಿನ ಜೀವನದಲ್ಲಿ, ಅದೇ ಗುಣಮಟ್ಟದಲ್ಲಿ (ಸ್ಟಾಂಡರ್ಡಿನಲ್ಲಿ) ನಾವು ಜೀವಿಸಬೇಕು.

ನೀನು ಬೆಟ್ಟದ ಮೇಲೆ ಇದ್ದಾಗ ಆ ಶ್ರೇಷ್ಠಗಳಿಗೆಯಲ್ಲಿ ನಿನ್ನನ್ನು ಬೆದಕಿ ಕಲುಕಿದ ಜಾಗೃತಿ ಯನ್ನೆಂದಿಗೂ ಆವಿಯಾಗಿ ಹೋಗಲು ಬಿಡಬೇಡ. ಬೆಂಕಿಗೂಡಿನ ಮೇಲೆ ನಿನ್ನ ಬೌದ್ಧಿಕ ಪಾದಗಳನ್ನು ಇರಿಸಿ ಬೆಚ್ಚಗೆ ಕಾಯಿಸಿಕೊಳ್ಳುತ್ತ ಹಾಯಾಗಿ ''ಹೀಗೆಯೇ ಇರುವುದು ಅದೆಂಥಾ ಅಮೋಘ ಮನಃಸ್ಥಿತಿ!'' ಎಂದು ಹೇಳುವ ಬದಲು ಕೂಡಲೇ ಕಾರ್ಯಪ್ರಯುಕ್ತನಾಗು, ಏನಾದರೂ ಮಾಡು; ಏನೂ ಮಾಡಬಾರದೆನ್ನುವ ಕಾರಣಕ್ಕಾಗಿಯಾದರೂ ಕಾರ್ಯೋನ್ಮುಖನಾಗು. ಪ್ರಾರ್ಥನಾಕೂಟದಲ್ಲಿ ನೀನು ಮಾಡಬೇಕಾಗಿರುವುದನ್ನು ದೇವರು ತೋರಿಸಿದರೆ, ''ನಾನು ಮಾಡುತ್ತೇನೆ.'' ಎಂದು ಹೇಳದೆ, ಮಾಡಲು ಮೊದಲು ಕೈಹಾಕು. ನೀನೇ ನಿನ್ನ ಕುತ್ತಿಗೆ ಪಟ್ಟಿಯನ್ನು ಹಿಡಿದು ನಿನ್ನ ಶಾರೀರಿಕ ಜಡತ್ವವನ್ನು ಝಾಡಿಸಿಬಿಡು; ಬೆಟ್ಟದ ಮೇಲೆ ಅನುಭವಿಸಿದಂಥಾ ಶ್ರೇಷ್ಠಕಾಲಕ್ಕಾಗಿರಬೇಕಾದ ಹಾತೊರೆಯುವಿಕೆಯಲ್ಲಿ ನಾವು ಸದಾ ಆಲಸ್ಯ ತೋರಿಸುತ್ತೇವೆ. ಪರ್ವತದ ಮೇಲೆ ಕಾರ್ಯವನ್ನೆಸಗುವ ಸಮಯದ ಬಗ್ಗೆ ನಾವು ಮಾತಾಡುತ್ತೇವೆ. ಪರ್ವತದ ಮೇಲೆ ನಾವೇನು ಕಂಡಿರುತ್ತೇವೆಯೋ ಅದನ್ನು ನಿರುತ್ಸಾಹದ ದಿನದಲ್ಲಿಯೂ ಸಹಾ (ಯಾವಾಗಲೂ) ಭೂಮಿಯ ಮೇಲೆ ಬದುಕಲು ನಾವು ಕಲಿಯಬೇಕು.

ಒಮ್ಮೆ ನಿನ್ನನ್ನು ಅಡ್ಡಿಪಡಿಸಲಾಗಿದೆ ಮತ್ತು ಗಲಿಬಿಲಿಗೊಳಗಾಗಿದ್ದೆನು ಎನ್ನುವ ಕುಂಟುನೆಪವನ್ನೊಡ್ಡಿ ಕುಗ್ಗಬೇಡ. ಮತ್ತೊಮ್ಮೆ ಅದನ್ನು ಮಾಡಲು ಪರಿಶ್ರಮಿಸು. ಹಾಗೆ ಕಾರ್ಯೋನ್ಮುಖನಾಗಿ ನೀನು ಮುಂದೆ ಸಾಗುತ್ತಿರುವಾಗ ನೀನು ದಾಟಿ ಬಂದ ಸೇತುವೆಗಳನ್ನು ನಿನ್ನ ಬೆನ್ನಿನ ಹಿಂದೆ ಸುಟ್ಟುಬಿಡು ಮತ್ತು ನಿನ್ನ ಸ್ವಂತ ಕಾರ್ಯಗಳ ಮೂಲಕ ದೇವರಿಗೆ ಬದ್ಧನಾಗು, ನಿನ್ನ ನಿರ್ಧಾರಗಳನ್ನು ಮರು ನಿರ್ಧರಿಸಬೇಡ, ಆದರೆ ಪರ್ವತದ ತುದಿಯಲ್ಲಿ ನೀವು ನೋಡಿದ ಮತ್ತು ಕಲಿತಿದ್ದರ ಬೆಳಕಿನಲ್ಲಿ ನಿಮ್ಮ ನಿರ್ಧಾರಗಳನ್ನು ತೆಗೆದು ಕೊಳ್ಳಬೇಕು.

# ಆದದ್ದಾಗಲಿ ........!

**''ಸ್ವಾಮಿಯವರೆಂದು ಸೀಮೋನ ಪೇತ್ರನು ಕೇಳಿ........ ಒಲ್ಲಿಯನ್ನು ಸುತ್ತಿಕೊಂಡು ಸಮುದ್ರದಲ್ಲಿ ದುಮುಕಿದನು'' - (ಯೋಹಾ - 21:7)**

ನಿನ್ನ ಜೀವಿತದಲ್ಲಿ ಎಂದಾದರೂ ಬಿಕ್ಕಟ್ಟು ಉಂಟಾಗಿದೆಯೋ ? ಯಾವ ಬಿಕ್ಕಟ್ಟಿನಲ್ಲಿ ನೀನು ವಿವೇಚನಾಪೂರ್ವಕವಾಗಿ ನಿರ್ಣಾಯಕವಾಗಿ ಹಾಗೂ ಏನೊಂದನ್ನೂ ಲೆಕ್ಕಿಸದೆ, ನಿನ್ನದೆಲ್ಲವನ್ನೂ ತ್ಯಜಿಸಿರುವಿಯೋ? ಇದು ಆತ್ಮ ಸಂಕಲ್ಪದ ಬಿಕ್ಕಟ್ಟು ! ಬಾಹ್ಯ ಜೀವಿತದಲ್ಲಿ ಇಂಥಾ ಸ್ಥಿತಿಗೆ ಅನೇಕ ಬಾರಿ ತಲುಪಿದ್ದುಂಟು, ಆದರೂ ಅವು ಯಾವ ಲೆಕ್ಕಕ್ಕೂ ಬಾರದವುಗಳು. ಸಂಪೂರ್ಣವಾಗಿ ಶರಣಾಗ ಬೇಕಾಗಿರುವ ಆಳವಾದ ಬಿಕ್ಕಟ್ಟು ಅಂತರಂಗದಲ್ಲಿ ಉಂಟಾಗುತ್ತದೆ - ಬಹಿರಂಗ ಜೀವಿತದಲ್ಲಿ ಅಲ್ಲ. ಬಾಹ್ಯ ಜೀವನದಲ್ಲಿ ಬಾಹ್ಯ ಸಂಗತಿಗಳನ್ನು ಮಾತ್ರ ತ್ಯಜಿಸುತ್ತಿರುವುದು, ನಿಜವಾಗಿಯೂ ನೀನು ಅವುಗಳ ಬಂಧನದಲ್ಲಿರುತ್ತಿರುವುದನ್ನು ಸೂಚಿಸುತ್ತಿರಬಹುದು.

ವಿವೇಚನಾ ಪೂರ್ವಕವಾಗಿ ನಿನ್ನ ಆತ್ಮವನ್ನು ಯೇಸುಕ್ರಿಸ್ತನಿಗೆ ಒಪ್ಪಿಸಿಕೊಟ್ಟಿರುವಿಯೋ? ಇದು ಆತ್ಮದಲ್ಲಾಗುವ ನಡವಳಿಕೆ, ಅದೊಂದು ಭಾವೋದ್ವೇಗವಲ್ಲ. ಭಾವೋದ್ವೇಗವು ನಡವಳಿಕೆಯ ಫಲವಾದ ತಪ್ಪಿತಸ್ಥ ಮನೋಭಾವನೆ ಮಾತ್ರ. ಭಾವಾವೇಶಕ್ಕೆ ನೀನು ಮೊದಲು ಅವಕಾಶವನ್ನಿತ್ತರೆ ಯೇಸುಕ್ರಿಸ್ತನಿಗೆ ಶರಣಾಗುವ ಆತ್ಮ ಸಂಕಲ್ಪದ ನಡವಳಿಕೆಯನ್ನು ನೀನೆಂದೂ ಪೂರೈಸಲಾರೆ. ಆತ್ಮದ ನಡವಳಿಕೆ ಹೇಗಿರಬೇಕೆಂದು ದೇವರನ್ನೆಂದಿಗೂ ಕೇಳಬೇಡ, ಆದರೆ ನೀನೇನು ಕಾಣುತ್ತಿರುವಿಯೋ ಅದಕ್ಕಾಗಿ ನಿನ್ನಾತ್ಮವನ್ನು ಸಂಪೂರ್ಣವಾಗಿ ಸಮರ್ಪಿಸಲು ನಿಶ್ಚಯ ಮಾಡು. ಅದು ನಿನ್ನ ಅಂತರ್ಯದ ಆಳವಾದ ಸ್ಥಳವೇ ಆಗಿರಲಿ ಇಲ್ಲವೇ ಆಳವಿಲ್ಲದ ಸ್ಥಳವೇ ಆಗಿರಲಿ, ಸಮುದ್ರದ ತೆರೆಗಳ ಮೇಲೆ ಯೇಸುಕ್ರಿಸ್ತನ ಸ್ವರವನ್ನು ನೀನು ಕೇಳಿಸಿಕೊಂಡಿರುವಿಯಾದರೆ, ನಿನ್ನ ಪಾಪ ಪ್ರಜ್ಞೆ, ನಿಶ್ಚಿತಾಭಿಪ್ರಾಯ ಗಳು, ನಿನ್ನ ಹೊಂದಾಣಿಕೆಗಳು, ನಿನ್ನ ನಂಬಿಕೆಗಳು, ದೃಢತೆಗಳೆಲ್ಲಾ ಗಾಳಿಗೆ ಬಡಕೊಂಡು ಹೋಗಲಿ, ಏನೇ ಆಗಲಿ, ನೀನು ಮಾತ್ರ ಆತನೊಂದಿಗಿರುವ ನಿನ್ನ ಸಂಬಂಧ ವನ್ನು ಉಳಿಸಿಕೊಳ್ಳಬೇಕಾಗುತ್ತದೆ.

# ಸನ್ನದ್ಧ

**''ದೇವರು .... ಕರೆದನು. ಅದಕ್ಕವನು - ಇಗೋ, ಇದ್ದೇನೆ'' ಅಂದನು - (ವಿಮೋ. ಕಾಂಡ-3:4)**

ದೇವರು ಮಾತಾಡುವಾಗ ನಮ್ಮಲ್ಲಿ ಅನೇಕರು ಮಂಜುಮುಸುಕಿನಲ್ಲಿರುವವರಂತೆ ಆತನಿಗೆ ಉತ್ತರವನ್ನು ಕೊಡುವುದಿಲ್ಲ. ಇಲ್ಲಿ ಮೋಶೆಯ ಉತ್ತರವು, ತಾನು ಎಲ್ಲಿದ್ದನೆಂಬುದನ್ನು ಮತ್ತು ಸನ್ನದ್ಧತೆಯನ್ನೂ ಪ್ರಕಟಪಡಿಸುತ್ತದೆ. ಸನ್ನದ್ಧನಾಗಿರುವುದೆಂದರೆ ದೇವರೊಂದಿಗೆ ಯೋಗ್ಯವಾದ ಸಂಬಂಧ ಹೊಂದಿರುವುದು ಮತ್ತು ಸದ್ಯದಲ್ಲಿ ನಾವೆಲ್ಲಿರುವೆವು ಎಂಬುದರ ತಿಳುವಳಿಕೆಯಲ್ಲಿರು ವುದಾಗಿದೆ. ನಾವು ಎಲ್ಲಿಗೆ ಹೋಗ ಬಯಸುತ್ತಿರುವೆವೆಂಬುದನ್ನು ದೇವರಿಗೆ ಹೇಳುವುದರಲ್ಲಿಯೇ ನಾವು ನಿರತರಾಗಿರುತ್ತೇವೆ. ದೇವರಿಗಾಗಿ, ಆತನ ಕಾರ್ಯಕ್ಕಾಗಿ, ಸದಾ ಸನ್ನದ್ಧರಾಗಿರುವ ಪುರುಷನಾಗಲಿ, ಸ್ತ್ರೀಯಾಗಲಿ ದೇವರ ಕರೆಬಂದಾಗ ಅವರೇ ಬಹುಮಾನವನ್ನು ಗೆದ್ದುಕೊಂಡು ಹೋಗುತ್ತಾರೆ. ನಾವಾದರೋ ದೊಡ್ಡದೊಂದು ಸುಸಂಧಿಗಾಗಿ, ಕೋಲಾಹಲವನ್ನುಂಟು ಮಾಡುವ ಒಂದು ಸಂಗತಿ ಗಾಗಿ ಕಾದಿರುತ್ತೇವೆ ಮತ್ತು ಅಂಥಾದ್ದು ಒದಗಿದಾಗ ನಾವು ತಕ್ಷಣವೇ ಕೂಗಿಹೇಳುತ್ತೇವೆ, ''ಇಗೋ ಇದ್ದೇನೆ''. ಒಂದು ಮಹತ್ವದ ಕಾರ್ಯವನ್ನು ಯೇಸುಕ್ರಿಸ್ತನು ಮಾಡಲಿರುವನೆಂಬ ಭಾವನೆ ಯುಂಟಾದಾಗ, ನಾವು ಅಲ್ಲಿ ಇದ್ದೇ ಇರುತ್ತೇವೆ, ಆದರೆ ಒಂದು ಅಸ್ಪಷ್ಟವಾದ ಕೆಲಸಗಳಿಗೆ ಕರೆ ಬಂದರೆ ನಾವು ಅಲ್ಲಿ ಸಿದ್ಧರಾಗಿರುವುದಿಲ್ಲ.ಅದು ನಮಗೆ ಬೇಡವಾಗಿದೆ.

ದೇವರಿಗಾಗಿ ಸನ್ನದ್ಧರಾಗಿದ್ದೇವೆಂಬುದರ ಅರ್ಥ ಯಾವುದೇ ಭೇದವನ್ನೆಣಿಸದೆ, ಅತ್ಯಂತ ಕಿರಿದಾದ ಇಲ್ಲವೆ ಅತ್ಯಂತ ಹಿರಿದಾದ ಕೆಲಸವನ್ನು ಸಮಚಿತ್ತದಿಂದ ಮಾಡಲು ಸದಾ ಸಿದ್ಧತೆ ಯಲ್ಲಿರುತ್ತೇವೆ. ನಾವೇನು ಮಾಡಬೇಕೆನ್ನುವುದನ್ನು ಆಯ್ಕೆ ಮಾಡಿಕೊಳ್ಳುವ ಅವಕಾಶ ನಮಗಿಲ್ಲವೇ ಇಲ್ಲ. ದೇವರ ಯೋಜನೆಗಳು ಏನಿರುವವೋ ಅಲ್ಲಿ ನಾವು ಸನ್ನದ್ಧರಾಗಿಯೇ ಇರುತ್ತೇವೆ. ನಮ್ಮ ಮುಂದೆ ಒಂದು ಕಾರ್ಯವು ಸೂಚಿತಗೊಂಡಾಗ ನಮ್ಮ ಸ್ವಾಮಿಯು ತಂದೆಯ ಸ್ವರವನ್ನು ಕೇಳಿಸಿಕೊಂಡ ಹಾಗೆ ನಾವೂ ದೇವರ ಧ್ವನಿಯನ್ನು ಕೇಳಿಸಿಕೊಳ್ಳುತ್ತೇವೆ ಮತ್ತು ಆತನ ಮೇಲಿರುವ ಪ್ರೀತಿಯ ಕಾರಣದಿಂದ ಸಕಲ ರೀತಿಯಿಂದ ಕಾರ್ಯಕ್ಕಾಗಿ ಸಿದ್ಧರಾಗುತ್ತೇವೆ. ತಂದೆಯಾದ ದೇವರು ಯೇಸು ಕ್ರಿಸ್ತನೊಂದಿಗೆ ಯಾವ ರೀತಿಯಲ್ಲಿದ್ದನೋ ಅದೇ ರೀತಿಯಲ್ಲಿ ನಮ್ಮೊಂದಿಗೆ ಯೇಸುಸ್ವಾಮಿಯು ನಮ್ಮ ಕಾರ್ಯದಲ್ಲಿರಲು ಬಯಸುತ್ತಾನೆ. ಆತನು ತನಗಿಷ್ಟಬಂದ ಸ್ಥಳಗಳಲ್ಲಿ ನಮ್ಮನ್ನಿರಿಸುತ್ತಾನೆ, ಅದು ಆಹ್ಲಾದಕರ ಕೆಲಸ ವಾಗಿರಬಹುದು, ಇಲ್ಲವೇ ಕ್ಷುದ್ರಕೆಲಸವಾಗಿರಬಹುದು. ಯಾಕೆಂದರೆ ಅಲ್ಲಿ ಯೇಸು ಕ್ರಿಸ್ತ ನೊಡನೆ ನಮ್ಮ ಒಂದಾಗಿರುವಿಕೆಯು, ತಂದೆಯ ಮತ್ತು ಯೇಸುಕ್ರಿಸ್ತನ ಒಂದಾಗುವಿಕೆಯಂತೆ ಇರುತ್ತದೆ ''ನಾವು ಒಂದಾಗಿರುವಂತೆ ಅವರು ಒಂದಾಗಿರಬೇಕು.'' (ಯೋಹಾನ 17:22).

ಇದ್ದಕ್ಕಿದ್ದಂತೆ ಒದಗುವ ದೇವರ ಅಚ್ಚರಿಯ ಸಂದರ್ಶನಕ್ಕಾಗಿ ಸದಾಸಿದ್ಧನಾಗಿರು. ಸನ್ನದ್ಧತೆ ಯಲ್ಲಿರುವ ವ್ಯಕ್ತಿಯು ಸಿದ್ಧನಾಗುವ ಅಗತ್ಯವಿರುವುದಿಲ್ಲ. ದೇವರು ಕರೆದಾಗ ಸಿದ್ಧನಾಗಲು ಪ್ರಯತ್ನಿಸುತ್ತಾ ಕಾಲಹರಣವಾಗುವದನ್ನು ಯೋಚಿಸು. ಸನ್ನದ್ಧತೆಯಲ್ಲಿರುವವನನ್ನು ಏನೆಲ್ಲವೂ ಆವರಿಸಿಕೊಳ್ಳುತ್ತದೆ ಎಂಬುದಕ್ಕೆ ಉರಿಯುವ ಪೊದೆಯೇ ಸಾಕ್ಷಿಯಾಗಿದೆ. ದೇವರ ಪ್ರಸನ್ನತೆಯಿಂದ ಅದು ಉರಿಯುತ್ತಿರುತ್ತದೆ.

# ಕಡಿಮೆ ಸಂಭವನೀಯ ಶೋಧನೆಯ ಬಗ್ಗೆ ಎಚ್ಚರ

**''ಅವನು ಅಬ್ಷಾಲೋಮನ ಪಕ್ಷವನ್ನು ಹಿಡಿಯದಿದ್ದರೂ ಅದೋನಿಯನ ಪಕ್ಷವನ್ನು ಹಿಡಿದಿದ್ದನು''**
**- (1 ಅರಸು - 2:28)**

ಯೋವಾಬನು ದಾವೀದನಿಗೆ ಸಂಪೂರ್ಣ ನಿಷ್ಠೆಯುಳ್ಳವನೂ, ಪ್ರಾಮಾಣಿಕನಾಗಿದ್ದು ಕೊಂಡು, ಅತ್ಯಾಕರ್ಷಣೆಯುಳ್ಳವನೂ, ಮಹತ್ವಾಕಾಂಕ್ಷಿಯೂ ಆದ ಅಬ್ಷಾಲೋಮನ ಪಕ್ಷವನ್ನು ಹಿಡಿಯದ ಮೂಲಕ ತನ್ನ ಜೀವನದ ದೊಡ್ಡ ಪರೀಕ್ಷೆಯನ್ನು ಅವನು ಯಶಸ್ವಿಯಾಗಿ ಎದುರಿಸಿದ್ದನು. ಆದರೂ ಜೀವಿತದ ಕೊನೆಯಲ್ಲಿ ಅವನು, ಪಾಪಿಯೂ ಚಪಲನೂ ಆದ, ಅದೋನಿಯನ ಪಕ್ಷವನ್ನು ಹಿಡಿದನು. ಒಬ್ಬ ವ್ಯಕ್ತಿಯು ಎಲ್ಲಿಗೆ ಹಿಂತಿರುಗಿ ಹೊರಟು ಹೋಗಿರುವನೋ, ಅಲ್ಲಿಗೆ ಬೇರೆ ಯಾರಾದರೂ ಸಹ ಖಂಡಿತವಾಗಿಯೂ ಹಿಂತಿರುಗಿ ಹೋಗಬಹುದು (1 ಕೊರಿಂಥ 10:13 ನೋಡಿರಿ) ಎಂಬ ಸತ್ಯತೆಯ ಬಗ್ಗೆ ಸದಾ ಎಚ್ಚರದಿಂದಿರಬೇಕು. ನೀನು ಅತಿದೊಡ್ಡ ಬಿಕ್ಕಟ್ಟಿನಲ್ಲಿ ಯಶಸ್ವಿಯಾಗಿ ದಾಟಿ ಬಂದಿರುವೆ ನಿಜ, ಆದರೆ ಅತಿ ಕ್ಷುದ್ರ ಬಿಕ್ಕಟ್ಟುಗಳ ಬಗ್ಗೆ ಹೆಚ್ಚು ಎಚ್ಚರ ದಿಂದಿರಬೇಕು. ಜೀವಿತದ ಯಾವ ಕ್ಷೇತ್ರಗಳಲ್ಲಿ ಇನ್ನು ಮೇಲೆ ಬಿಕ್ಕಟ್ಟುಗಳು ಅಸಂಭವನೀಯ ವೆಂದು ಅವುಗಳನ್ನು ಹಿಂದಕ್ಕೆ ಸರಿಸಿ ಬಿಟ್ಟಿರುವಿಯೋ ಅಂಥ ಕ್ಷೇತ್ರಗಳನ್ನು ಎಚ್ಚರಿಕೆಯಿಂದ ಗಣನೆಗೆ ತೆಗೆದುಕೋ, ಅಲ್ಲಿಯೇ ನೀನು ಎಡವಿ ಬೀಳಬಹುದು.

''ಅಂಥಾ ದೊಡ್ಡ ಬಿಕ್ಕಟ್ಟನ್ನು ದಾಟಿ ಬಂದಿರುವ ನನಗೆ ಮತ್ತೊಮ್ಮೆ ಬಿಕ್ಕಟ್ಟು ಸಂಭವಿಸುವುದು ಅಸಂಭವ, ಆದ್ದರಿಂದ ಈಗ ನಾನು ಲೌಕಿಕ ಜೀವನದ ಕಡೆ ಗಮನ ವೀಯುತ್ತೇನೆ'' ಎಂದು ನೀನು ಹೇಳಿಯೇ ಹೇಳುವಿ. ಶೋಧನೆಯು ಎಲ್ಲಿ, ಯಾವಾಗ ಬರುವುದೆಂದು ಭವಿಷ್ಯ ನುಡಿಯಬೇಡ; ಅಸಂಭವವೆಂದು ತಿಳಿದ ಅಲ್ಪ ಸಂಗತಿಗಳೇ, ನಾಶನಗಳಾಗಿರುತ್ತವೆ. ಅತ್ಯಂತ ದೊಡ್ಡದಾದ ಆತ್ಮೀಕ ಬಿಕ್ಕಟ್ಟಿನ ನಡವಳಿಕೆ ಮುಗಿದ ಮೇಲೆ, ಮುಂದಿನ ಜೀವಿತದಲ್ಲಿ ಅವು ಅಸಂಭವವೆಂದು ನಿವೃತ್ತಿ ಮಾಡಲ್ಪಟ್ಟ ಕ್ಷೇತ್ರಗಳೇ ಮುಂದೆ ತುಂಬಾ ಪರಿಣಾಮ ಬೀರಲಾರಂಭಿಸುತ್ತವೆ. ಅವು ಶಕ್ತಿಭರಿತ ವಾಗಿಲ್ಲದೇ ಇರಬಹುದು; ಆದರೆ ಅವು ಅಲ್ಲಿವೆ. ನೀನು ಎಚ್ಚರ ವಹಿಸದಿದ್ದರೆ ಅವು ನಿನ್ನನ್ನೂ ನಿನ್ನ ಜೀವಿತವನ್ನೂ, ಟ್ರಿಪ್ ಮಾಡಿಬಿಡುತ್ತವೆ. ನೀನೇನೋ ಅತಿ ದೊಡ್ಡದಾದ ತೀವ್ರವಾದ ಬಿಕ್ಕಟ್ಟಿನಲ್ಲಿ ದೇವರಿಗೆ ನಂಬಿಗಸ್ತನಾಗಿಯೇ ಇದ್ದೀಯಲ್ಲವೇ – ಈಗ ಜೀವಿತದ ಗುಪ್ತಯೋಚನೆಗಳ ಬಗ್ಗೆ ಎಚ್ಚರ ದಿಂದಿರಬೇಕು. ಅಂತಃಮುಖಿಯಾಗಿ ರೋಗಗ್ರಸ್ಥತೆಯಿಂದ ಅಂತರಂಗ ವಿಮರ್ಷಣೆ ಮಾಡಿಕೊಳ್ಳ ಬೇಡ, ಭೀತಿಯಿಂದ ಎದುರು ನೋಡಲೂ ಬೇಡ, ಆದರೆ ಎಚ್ಚರದಿಂದಿರಬೇಕು. ದೇವರ ಮುಂದೆ ನಿನ್ನ ಜ್ಞಾಪಕ ಶಕ್ತಿಯನ್ನು ಪ್ರಕಾಶಮಾನವಾಗಿಟ್ಟುಕೋ, ಅರಕ್ಷಿತ ಶಕ್ತಿಯು ಎರಡುಪಟ್ಟು ಬಲಹೀನ ವಾದದ್ದು, ಯಾಕೆಂದರೆ ಅಲ್ಲಿಯೇ ಅಸಂಭವನೀಯವೆಂದೆಣಿಸಿ ಹಿಂದಕ್ಕೆ ಸರಿಸಲ್ಪಟ್ಟ ಕ್ಷೇತ್ರಗಳೇ ನಮ್ಮನ್ನು ಬುಡ ಕಡಿದು ಉರುಳಿಸುತ್ತವೆ. ಸತ್ಯವೇದದ ಗಣ್ಯವ್ಯಕ್ತಿಗಳು ಅಸಾಧ್ಯವೆಂದೆಣಿಸಿದ ಅಸಂಭವದ ವಿಷಯ ಗಳಲ್ಲಿ ಉರುಳಿಬಿದ್ದು ಹೋಗಿದ್ದಾರೆ – ಬಲಹೀನವಾದ ಸಂಭವನೀಯ ವಿಷಯ ಗಳಲ್ಲಿ ಅಲ್ಲ. ''ದೇವರು ನಿಮ್ಮನ್ನು ತನ್ನ ಬಲದಿಂದ ಕಾಯುತ್ತಾನೆ'' (1ಪೇತ್ರ–1:5) – ಅದೊಂದೇ ನಮ್ಮ ಸಂರಕ್ಷತೆ.

# ಸಂತನು ದೇವರನ್ನು ನಿಂದಿಸಬಹುದೋ ?

**''ನಿಶ್ಚಯವಾಗಿ ದೇವರ ವಾಗ್ದಾನಗಳು ಎಷ್ಟಿದ್ದರೂ ಕ್ರಿಸ್ತನಲ್ಲೇ ದೃಢವಾಗುತ್ತವೆ''**
**ನಾವು ಆಮೆನ್ ಎಂದು ಹೇಳುತ್ತೇವೆ - (2 ಕೊರಿ - 1:20)**

ಮತ್ತಾಯನು ಬರೆದ ಸುವಾರ್ತೆಯ 25ನೇ ಅಧ್ಯಾಯದಲ್ಲಿ ಯೇಸುಸ್ವಾಮಿಯು ತಲಾಂತುಗಳನ್ನು ಕುರಿತು ಹೇಳಿದ ಸಾಮ್ಯವು ನಮ್ಮ ಯೋಗ್ಯತೆಗಳ ಬಗ್ಗೆ ತಪ್ಪು ಅಭಿಪ್ರಾಯ ತಳೆಯುವ ಸಾಧ್ಯತೆಯ ಬಗ್ಗೆ ಎಚ್ಚರನೀಡುತ್ತದೆ. ಈ ಸಾಮ್ಯವು ನಮಗಿರುವ ಸ್ವಾಭಾವಿಕ ವರಗಳಿಗೆ ಸಂಬಂಧಿಸಿರುವುದಿಲ್ಲ, ಅದು ಪಂಚಾಶತ್ತಮದ ವರವಾದ ಪವಿತ್ರಾತ್ಮನ ಕುರಿತಾಗಿದೆ. ನಮ್ಮ ಆತ್ಮೀಕ ಸಾಮರ್ಥ್ಯವನ್ನು ಶೈಕ್ಷಣಿಕವಾಗಿ, ಬೌದ್ಧಿಕವಾಗಿ, ನಾವು ಅಳೆಯಲೇಬಾರದು. ಆತ್ಮೀಕ ಸಂಗತಿಗಳಲ್ಲಿ ನಮಗಿರುವ ಸಾಮರ್ಥ್ಯವನ್ನು ದೇವರ ವಾಗ್ದಾನಾನುಸಾರ ಪ್ರಮಾಣಿಸಬೇಕು. ದೇವರು ಇಚ್ಛೈಸಿರುವದಕ್ಕಿಂತಲೂ ಕಡಿಮೆ ಪ್ರಮಾಣದಲ್ಲಿ ನಾವು ಸಾಮರ್ಥ್ಯ ಹೊಂದಿದ್ದರೆ, ಅನತಿ ಕಾಲದಲ್ಲಿಯೇ ಆ ಸೇವಕನು ತನ್ನ ದಣಿಯನ್ನು ನಿಂದಿಸಿದ ಪ್ರಕಾರ, ನಾವೂ ದೇವರನ್ನು ನಿಂದಿಸುತ್ತೇವೆ. (ಸಾಮ್ಯವನ್ನು ಓದಿರಿ) ''ನೀನು ನನಗೆ ಅನುಗ್ರಹಿಸಿದ ಸಾಮರ್ಥ್ಯಕ್ಕಿಂತ ಹೆಚ್ಚಿನದನ್ನು ಮಾಡು ಎಂದು ಬಯಸುತ್ತಿರುವಿ, ನನಗೆ ಮೀರಿದಂತವುಗಳನ್ನು ನನ್ನಿಂದ ಅಪೇಕ್ಷಿಸುತ್ತೀ, ನೀನು ನನ್ನನ್ನಿರಿಸಿದಂಥಾ ಸ್ಥಾನದಲ್ಲಿ, ನಾನು ನಿನಗೆ ನಂಬಿಗಸ್ತನಾಗಿರಲಾರೆ'' ಹೆಚ್ಚಿನದನ್ನು ಅಪೇಕ್ಷಿಸುವುದು ಸರ್ವಶಕ್ತನಾದ ದೇವರ ಆತ್ಮನ ಪ್ರಶ್ನೆಯಾಗಿದ್ದರೆ 'ನಾನು ಮಾಡಲಾರೆ' ಎಂದು ನೀನೆಂದಿಗೂ ಹೇಳಬೇಡ. ಸೀಮಿತವಾದ ಸಹಜ ಸ್ವಭಾವದ ಸಾಮರ್ಥ್ಯವನ್ನು ಒಳಗೆ ತರಲೇಬಾರದು, ನಾವು ಪವಿತ್ರಾತ್ಮನನ್ನು ಸ್ವೀಕರಿಸಿದ್ದರೆ, ಪವಿತ್ರಾತ್ಮನ ಕಾರ್ಯಗಳು ನಮ್ಮ ಜೀವಿತದಲ್ಲಿ ವ್ಯಕ್ತವಾಗುವುದನ್ನು ದೇವರು ಅಪೇಕ್ಷಿಸುತ್ತಾನೆ.

ಆ ಸೇವಕನಾದರೋ ತಾನು ಮಾಡಿದ್ದೆಲ್ಲವೂ ಸರಿಯೆಂದು ಸಮರ್ಥಿಸಿಕೊಂಡನು, ಮತ್ತು ತನ್ನ ದಣಿಯನ್ನು ಪ್ರತಿಯೊಂದು ಅಂಶದಲ್ಲಿ ಖಂಡಿಸಿದನು. ''ನೀನು ನನಗೆ ಕೊಟ್ಟಿರುವುದರ ಅಳತೆಗೆ ಮೀರಿ ಬಹು ಹೆಚ್ಚಾಗಿರುವುದನ್ನು ನನ್ನಿಂದ ಅಪೇಕ್ಷಿಸುತ್ತಿರುವಿ''. ''ನೀವು ಮೊದಲು ದೇವರ ರಾಜ್ಯಕ್ಕಾಗಿಯೂ, ನೀತಿಗಾಗಿಯೂ ತವಕಪಡಿರಿ, ಇವುಗಳ ಕೂಡ ಅವೆಲ್ಲವೂ ನಿಮಗೆ ದೊರೆಯುವವು'' ಎಂದು ದೇವರು ನಮಗೆ ವಾಗ್ದಾನ ಮಾಡಿದ್ದರೂ, ನಾವು ಚಿಂತಿಸುವುದರ ಮೂಲಕ ದೇವರನ್ನು ನಿಂದಿಸುತ್ತಿರುವೆವೋ? ಚಿಂತಿಸುವುದೆಂದರೆ ಅದು ನೇರವಾಗಿ ಆ ಸೇವಕನು ಹೇಳಿರುವುದೇ ನಮ್ಮಲ್ಲಿಯೂ ಧ್ವನಿತವಾಗುವುದು – ''ಅಸಾಧ್ಯವಾದುದದನ್ನು ಬಯಸುವ ನೀನು ನನ್ನನ್ನು ನಡುನೀರಿನಲ್ಲಿ ಕೈಬಿಡುವವನು ಎಂದು ನನಗೆ ಗೊತ್ತುಂಟು''. ಸ್ವಭಾವದಿಂದ ಸೋಮಾರಿಯಾದ ವ್ಯಕ್ತಿಯು ಯಾವಾಗಲೂ ಅಸಮಾಧಾನದಿಂದ ರೇಗಿಕೊಂಡು ಹೀಗೆ ಹೇಳುತ್ತಾನೆ. ''ಒಂದಾದರೂ ಒಳ್ಳೆಯ ಅವಕಾಶವು ನನಗೊದಗಲಿಲ್ಲ''. ಆತ್ಮೀಕ ವಾಗಿಯೂ ಸಹ ಸೋಮಾರಿಯಾದವನು ದೇವರೊಂದಿಗೆ ಅಸಮಾಧಾನದಿಂದಿದ್ದು ಸಿಡಿಮಿಡಿಗೊಳ್ಳುತ್ತಾನೆ. ಸೋಮಾರಿಗಳು ಯಾವಾಗೂ ಸ್ವೇಚ್ಛಾ ರೀತಿಯಲ್ಲಿ ಇತರರ ಮೇಲೆ ಸದಾ ಹೌಹಾರಿ ಬೀಳುತ್ತಾರೆ.

ಆತ್ಮೀಕ ವಿಷಯಗಳಲ್ಲಿ ನಮ್ಮ ಯೋಗ್ಯತೆ ಮತ್ತು ಸಾಮರ್ಥ್ಯಗಳನ್ನು ದೇವರ ವಾಗ್ದಾನಕ್ಕನುಸಾರವಾಗಿ ಮಾತ್ರವೇ ಅಳೆಯಲ್ಪಡುತ್ತವೆಂಬುದನ್ನು ಎಂದಿಗೂ ಮರೆಯ ಬಾರದು. ತನ್ನ ವಾಗ್ದಾನಗಳನ್ನು ನಮ್ಮಲ್ಲಿ ನೆರವೇರಿಸಲು ದೇವರು ಶಕ್ತನಾಗಿರುವನೋ ಅಥವಾ ಇಲ್ಲವೋ? ಇದರ ಉತ್ತರವು ನಾವು ಪವಿತ್ರಾತ್ಮನನ್ನು ಹೊಂದಿರುವುದರ ಮೇಲೆ ಆಧಾರ ಗೊಂಡಿದೆ.

# ಈಗಲಾದರೂ ಪ್ರಭುವನ್ನು ನೋಯಿಸಬೇಡ

**''ಫಿಲಿಪ್ಪನೇ, ನಾನು ಇಷ್ಟು ದಿವಸ ನಿಮ್ಮ ಸಂಗಡ ಇದ್ದರೂ ನೀನು ಇನ್ನೂ ನನ್ನನ್ನು ಅರಿತುಕೊಳ್ಳಲಿಲ್ಲವೇ ?'' - (ಯೋಹಾ - 14:9)**

ನಮ್ಮ ಸ್ವಾಮಿಯು ನಮ್ಮ ವಿಷಯದಲ್ಲಿ ಪದೇ ಪದೇ ನಿಬ್ಬೆರಗಾಗಿರಲೇಬೇಕು. ನಾವೆಂಥಾ ಸರಳತೆ ಇಲ್ಲದವರೆಂಬುದಕ್ಕಾಗಿ ಆತನು ಬೆರಗಾಗಿರಬೇಕು. ನಮ್ಮ ಸ್ವಂತ ಅಭಿಪ್ರಾಯಗಳೇ ನಮ್ಮನ್ನು ಹೆಡ್ಡರನ್ನಾಗಿ ಮಾಡುತ್ತವೆ; ನಾವು ಮುಗ್ಧರಾಗಿದ್ದಾಗ, ನಾವೆಂದಿಗೂ ಹೆಡ್ಡರಾಗುವುದಿಲ್ಲ, ಸದಾ ಸೂಕ್ಷ್ಮವಾಗಿ ವಿವೇಚನೆ ಮಾಡುತ್ತೇವೆ. ಫಿಲಿಪ್ಪನು ಮುಂದಾಗಬಹುದಾದ ಒಂದು ಅತ್ಯಮೋಘ ರಹಸ್ಯದ ಪ್ರಕಟಿಸುವಿಕೆಯನ್ನು ನಿರೀಕ್ಷಿಸಿದ್ದನು. ಆದರೆ ತನಗೆ ಪರಿಚಯವಿರುವವರೊಬ್ಬನಲ್ಲಿಯಲ್ಲ. ಮುಂದಾಗಬಹುದಾದವುಗಳಲ್ಲಿ ದೇವರ ರಹಸ್ಯವಿರುವುದಿಲ್ಲ - ಅದು ಈಗಲೇ, ಸದ್ಯದಲ್ಲಿಯೇ ಜಲಪ್ರಳಯದಂಥಾ ಘಟನೆವೊಂದರಲ್ಲಿ ಅದನ್ನು ನಾವು ನೋಡ ಬಯಸುತ್ತೇವೆ. ಯೇಸುಸ್ವಾಮಿಗೆ ವಿಧೇಯತೆ ತೋರಲು ಒಲ್ಲದವರು ನಾವಲ್ಲ, ಆದರೂ ನಾವು ಕೇಳುವ ಪ್ರಶ್ನೆಗಳ ಮೂಲಕ ಆತನನ್ನು ನೋಯಿಸುವ ಸಂಭವವಿರುತ್ತದೆ. ''ಸ್ವಾಮೀ ನಮಗೆ ತಂದೆಯನ್ನು ತೋರಿಸು'' (ಯೋಹಾ 14:8) ಆತನ ನೇರವಾದ ಪ್ರತ್ಯುತ್ತರ - ''ಅಗೋ ಇಲ್ಲಿಯೇ ಇದ್ದಾನೆ. ಕಾಣುವುದಿಲ್ಲವೇ ? ಯಾವಾಗಲೂ ಇಲ್ಲಿಯೇ, ಬೇರೆಲ್ಲಿಯೂ ಇಲ್ಲ.''. ದೇವರು ತನ್ನ ಮಕ್ಕಳಲ್ಲಿ ಮೈದೋರುವುದನ್ನು ಕಾಣಲಿಚ್ಛಿಸುತ್ತೇವೆ: ದೇವರು ಅವರಲ್ಲಿ ತಾನೇ ಸಾಕ್ಷಾತ್ಕಾರಗೊಳ್ಳುತ್ತಾನೆ, ಈ ಸಾಕ್ಷಾತ್ಕಾರವನ್ನು ಇತರರು ಕಾಣುತ್ತಾರೆ. ಆದರೆ ದೇವರ ಮಕ್ಕಳಿಗೆ ಅದು ತಿಳಿದಿರುವುದಿಲ್ಲ. ನಮ್ಮೊಳಗೆ ದೇವರು ಏನು ಮಾಡುತ್ತಿರುವನೆಂಬ ಅರಿವು ನಮಗಿರಬೇಕೆಂದು ಬಯಸುತ್ತೇವೆ, ಸ್ವಪ್ರಜ್ಞೆಯ ಅರಿವಿನಲ್ಲಿರುತ್ತಾ ಸ್ವಸ್ಥ ಬುದ್ಧಿಯಿಂದಿರಲಾಗದು. ಪ್ರಜ್ಞಾನುಭವಗಳೇ ಆತನನ್ನರಿಯುವ ದಾರಿಯ ಅಡೆತಡೆಗಳೆಂದು ತಿಳಿದೂ, ಅನುಭವಗಳನ್ನೇ ದಯಪಾಲಿಸೆಂದು ದೇವರನ್ನು ಕೇಳುವುದರ ಮೂಲಕ ನಾವು ಯೇಸುಸ್ವಾಮಿಯನ್ನು ಗಾಯ ಪಡಿಸುತ್ತೇವೆ ನಾವು ಕೇಳುವ ಪ್ರಶ್ನೆಗಳೇ ಸ್ವಾಮಿಯವರನ್ನು ನೋಯಿಸುತ್ತವೆ, ಯಾಕೆಂದರೆ ಅವು ದೇವರ ಮಕ್ಕಳು ಕೇಳುವಂಥಾ ಪ್ರಶ್ನೆಗಳಲ್ಲ.

''ನಿಮ್ಮ ಹೃದಯವು ಕಳವಳಗೊಳ್ಳದೆ ಇರಲಿ'' (ಯೆಹಾ 14:1, 27) ಹಾಗಿದ್ದರೆ ನನ್ನ ಹೃದಯವನ್ನು ಕಳವಳಕ್ಕೊಳಪಡಿಸಿ ಸ್ವಾಮಿಯನ್ನು ನಾನು ಘಾಸಿಗೊಳಿಸುತ್ತಿರುವೆನೋ? ಯೇಸುಸ್ವಾಮಿಯ ಗುಣ ಸ್ವಭಾವವನ್ನು ನಾನು ನಂಬಿದ್ದರೆ, ಆ ನಂಬಿಕೆಗೆ ತಕ್ಕ ಹಾಗೆ ಬಾಳುತ್ತಿರುವೆನೋ? ನನ್ನ ಹೃದಯವನ್ನು ಕಲುಕುವಂಥಾ ವಿಷಯಕ್ಕೆ ದಾರಿ ಮಾಡಿ ಕೊಡುತ್ತಿರುವೆನೋ? ರೋಗಿಷ್ಠ ಪ್ರಶ್ನೆಗಳು ನನ್ನ ಹೃದಯ ದೊಳಗೆ ಪ್ರವೇಶಿಸುತ್ತಿವೆಯೋ? ಬರುವಂಥವುಗಳೆಲ್ಲವೂ ದೇವರಿಂದಲೇ ಬರುತ್ತಿವೆ ಎಂದು ಅರಿಯುವಷ್ಟು ನಿಕಟ ಸಂಬಂಧವನ್ನು ನಾನು ಆತನಲ್ಲಿ ಹೊಂದಿರಬೇಕು. ''ಸದ್ಯದಲ್ಲಿ'' ದೇವರು ನಮ್ಮನ್ನು ನಡಿಸುವುದಿಲ್ಲ, ಅದು ಯಾವಾಗಲೂ ಈಗಲೇ. ಈಗಲೇ, ನಮಗೆ ದಾರಿ ತೋರಿಸುವನು. ಈಗಲೇ ಇಲ್ಲಿಯೇ, ಸ್ವಾಮಿಯವರಿರುವುದನ್ನು ಗ್ರಹಿಸು; ತಕ್ಷಣವೇ ನಿನಗೆ ಬಿಡುಗಡೆಯಾಗುತ್ತದೆ.

# ಕಳೆಗುಂದದ ಬೆಳಕು

**''ನಾವೆಲ್ಲರೂ ಮುಸುಕುತೆಗೆದಿರುವ ಮುಖದಿಂದ ಕರ್ತನ ಪ್ರಭಾವವನ್ನು ........ ದೃಷ್ಟಿಸುವವರಾಗಿದ್ದೇವೆ.'' - (2 ಕೊರಿ - 3:18)**

ದೇವರ ಸೇವಕನು ಎಷ್ಟರಮಟ್ಟಿಗೆ ಏಕಾಂಗಿಯಾಗಿರಬೇಕೆಂದರೆ, ಏಕಾಂಗಿ ಎಂದು ತಾನು ಅರಿಯದಿರುವಷ್ಟರ ಮಟ್ಟಿಗೆ. ಕ್ರಿಸ್ತೀಯ ಜೀವಿತದ ಪ್ರಥಮ ಹಂತಗಳಲ್ಲಿ ನಿರಾಶೆಗಳುಂಟಾಗುತ್ತವೆ, ನಮಗೆ ಬೆಳಕುಗಳಾಗಿದ್ದಂಥ ಜನರು ಕ್ರಮೇಣ ಮಂಕಾಗಿ ಹೋಗಿಬಿಡುವರು. ಈವರೆಗೆ ನಮ್ಮೊಂದಿಗಿದ್ದವರು ಇನ್ನು ಮುಂದೆ ಇರುವುದಿಲ್ಲ , ಇಂಥಾ ಸ್ಥಿತಿಗೆ ನಾವೆಷ್ಟರ ಮಟ್ಟಿಗೆ ಹೊಂದಿಕೊಂಡಿರಬೇಕೆಂದರೆ, ನಾವು ಏಕಾಂಗಿಯಾಗಿರುವೆ ವೆಂಬುದನ್ನು ನಾವು ಅರಿಯದಿರುವಷ್ಟರ ಮಟ್ಟಿಗೆ - ''ಎಲ್ಲರೂ ನನ್ನನ್ನು ಕೈ ಬಿಟ್ಟರು .... ಆದರೆ ಕರ್ತನು ನನ್ನ ಬಳಿಯಲ್ಲಿ ನಿಂತು ನನ್ನನ್ನು ಬಲಪಡಿಸಿ'' (2 ತಿಮೋ 4:16-17) ಹೀಗೆ ನಮ್ಮ ವಿಶ್ವಾಸವನ್ನು ಬೆಳೆಸಿಕೊಳ್ಳಬೇಕು. ಮಂಕಾಗಿರುವ ಬೆಳಕುಗಳನ್ನಾಧರಿಸಿಯಲ್ಲ - ಎಂದಿಗೂ ಕಳೆಗುಂದದ ಬೆಳಕನ್ನಾಧರಿಸಿಕೊಂಡೇ ವಿಶ್ವಾಸ ವೃದ್ಧಿಮಾಡಿಕೊಳ್ಳಬೇಕು. ಮಹಾ ಪುರುಷರು ನಮ್ಮನ್ನಗಲಿ ಹೋದಾಗ ವ್ಯಸನಪಡುತ್ತೇವೆ. ಅವರು ಹಾಗೆ ಹೋಗಲೇ ಬೇಕಾದವರು ಎಂಬುವುದನ್ನು ನಾವು ಅರಿಯುವ ತನಕ ದುಃಖಿಸುತ್ತೇವೆ, ಆಗ ನಮಗೆ ಉಳಿದಿರುವುದೊಂದೇ - ನಮ್ಮಷ್ಟಕ್ಕೆ ನಾವೇ ದೇವರ ಮುಖವನ್ನು ದೃಷ್ಟಿಸುವುದು.

ನಿನ್ನ ವಿಷಯದಲ್ಲಿ ಮತ್ತು ನೀನು ಬೋಧಿಸಬೇಕಾಗಿರುವ ಸಿದ್ಧಾಂತದ ವಿಷಯದಲ್ಲಿ ದೃಢನಿರ್ಧಾರದಿಂದ ದೇವರ ಮುಖವನ್ನು ನೋಡುವ ನಿನ್ನ ದೃಷ್ಟಿಯನ್ನು ಬೇರೆ ಕಡೆಗೆ ಹೊರಳಿಸು ವಂಥವುಗಳಿಗೆ ನೀನು ಆಸ್ಪದವೀಯಬಾರದು. ನೀನು ವಾಕ್ಯವನ್ನು ಬೋಧಿಸುವ ಪ್ರತಿಸಮಯದಲ್ಲಿಯೂ, ನೀನು ಬೋಧಿಸುವ ಸಂದೇಶದ ವಿಷಯವಾಗಿ ದೇವರನ್ನು ಮೊದಲು ದೃಷ್ಟಿಸಿದರೆ ದೇವರ ಮಹಿಮೆಯು, ನಿನ್ನನ್ನು ಮತ್ತು ನೀನು ಕೊಡುವ ಸಂದೇಶವನ್ನು ತುಂಬಿಕೊಳ್ಳುತ್ತದೆ. ಕ್ರೈಸ್ತ ಸುವಾರ್ತಾ ಸೇವಕನು ಎಡೆಬಿಡದೆ ದೇವರನ್ನು ದೃಷ್ಟಿಸಿದ ನಂತರವೇ ಇತರರಿಗೆ ಸುವಾರ್ತೆಯನ್ನು ನುಡಿಯಲು ತೊಡಗುತ್ತಾನೆ. ಕ್ರಿಸ್ತನ ಸೇವೆಯ ಗುಣಲಕ್ಷಣವೆಂದರೆ, ಅರಿವಿರದ ದೈವ ಮಹಿಮೆಯು, ಸಾರುವ ಸೇವಕನಲ್ಲಿ ನೆಲೆಗೊಂಡಿರುತ್ತದೆ. ಮೋಶೆಯ ಮುಖವು ಪ್ರಕಾಶಮಾನವಾಗಿತ್ತು. ಆದರೆ ಆ ಸಂಗತಿ ಅವನಿಗೆ ತಿಳಿಯಲಿಲ್ಲ. (ವಿ.ಕಾ. 34:29)

ನಮ್ಮ ಸಂಶಯಗಳನ್ನು ಮರೆಯಿಸುವುದಕ್ಕೂ ದೇವರೊಂದಿಗಿರುವ ನಮ್ಮ ಜೀವಿತದಲ್ಲಿ ನಮಗುಂಟಾದ ಸ್ವರ್ಗೀಯ ಆನಂದವನ್ನು ಪ್ರದರ್ಶಿಸುವುದಕ್ಕೂ ನಾವು ಕರೆಯಲ್ಪಟ್ಟಿಲ್ಲ. ದೇವರೊಂದಿಗೆ ಎಲ್ಲಾ ಕಾಲದಲ್ಲೂ ಸಮರಸದಿಂದ ಹೊಂದಿಕೊಂಡಿರುವುದೇ ದೇವರ ಸೇವಕನ ಜೀವಿತದ ರಹಸ್ಯವಾಗಿದೆ.

# ಸೇವೆಯನ್ನು ಪೂಜಿಸುವುದು

**''ನಾವು ದೇವರಜೊತೆ ಕೆಲಸದವರು'' - (1 ಕೊರಿ - 3:9)**

ದೇವರ ಮೇಲೆ ನೀನಿಟ್ಟಿರುವ ಏಕಾಗ್ರತೆಯಿಂದ ನುಣುಚಿಕೊಳ್ಳುವಂತೆ ಮಾಡುವ ದೇವಸೇವೆಯ ಬಗ್ಗೆ ಎಚ್ಚರದಿಂದಿರಬೇಕು. ಕ್ರಿಸ್ತನ ಸೇವೆಯಲ್ಲಿರುವ ಬಹಳಷ್ಟು ಸೇವಕರು ತಮ್ಮ ಸೇವಾಕಾರ್ಯವನ್ನೇ ಪೂಜಿಸುತ್ತಿರುವರು. ದೇವರ ಸೇವಕನಲ್ಲಿರಬೇಕಾದ ಒಂದು ಮುಖ್ಯವಾದ ಕಾಳಜಿ ಎಂದರೆ ಅದು ಆತನಲ್ಲಿ ಇಟ್ಟಿರುವ ಏಕಾಗ್ರತೆ, ಅರ್ಥಾಥ್ ಜೀವಿತದ ಉಳಿದೆಲ್ಲಾ ಮೇರೆಗಳು - ಅವು ಭೌತಿಕ, ನೈತಿಕ ಮತ್ತು ಆತ್ಮೀಕ ಮೇರೆಗಳೆಲ್ಲವೂ ಮಗುವಿನ ಸ್ವಾತಂತ್ರ್ಯತೆಯಂತೆ ಸ್ವಚ್ಛಂದವಾಗಿರಬೇಕು. ಮಗುವೆಂದರೆ ದೇವರನ್ನು ಆರಾಧಿಸುವ ಮಗು - ಸ್ವೇಚ್ಛಾ ಪ್ರವೃತ್ತಿಯ ಮಗುವಲ್ಲ. ದೇವರಲ್ಲಿಟ್ಟಿರಬೇಕಾದ ಗಂಭೀರವಾದ, ಪ್ರಬಲವಾದ, ಗಮನ ಭರಿತ ಏಕಾಗ್ರತೆಯಿಲ್ಲದಿರುವ ದೇವಸೇವಕನಿಗೆ ತನ್ನ ಸೇವಾ ಕಾರ್ಯವು ಮಿತಿಮೀರಿದ ಭಾರವಾಗಿ ಪರಿಣಮಿಸುತ್ತದೆ; ಅವನು ತನ್ನ ಇತಿಮಿತಿಗಳಿಗೆ ಗುಲಾಮನಾಗಿ ರುತ್ತಾನೆ. ತನ್ನ ಶರೀರದ ಮೇಲಾಗಲೀ, ಬುದ್ಧಿ ಮತ್ತು ಆತ್ಮದ ಮೇಲಾಗಲೀ ಅವನಿಗೆ ಸ್ವಾತಂತ್ರ್ಯ ವಿಲ್ಲವಾದ್ದರಿಂದ ಅವನು ದಣಿದು ಜಜ್ಜಲ್ಪಡುವನು. ಅಲ್ಲಿ ಸ್ವಾತಂತ್ರ್ಯವಿಲ್ಲ, ಜೀವಿತದಲ್ಲಿ ಆನಂದವಿಲ್ಲ ; ನರಮಂಡಲವೂ, ಮನೋಮಂಡಲವೂ, ಹೃದಯವೂ ಜಜ್ಜಿ ಪುಡಿಯಾಗುವಷ್ಟು ಭಾರ ಹೊತ್ತಿರುವುದರಿಂದ ದೇವರ ಆಶೀರ್ವಾದಗಳು ಅಲ್ಲಿ ನೆಲೆಗೊಳ್ಳಲು ಆಸ್ಪದವಿರುವುದಿಲ್ಲ. ಇದರ ಇನ್ನೊಂದು ಮುಖವು ಅಷ್ಟೇ ನಿಜವಾಗಿದೆ ; ಒಮ್ಮೆ ದೇವರಲ್ಲಿ ಏಕಾಗ್ರತೆ ಯುಳ್ಳವನಾದರೆ ಜೀವಿತದ ಎಲ್ಲಾ ರಂಗಗಳು ಸಂಪೂರ್ಣವಾಗಿ ಇತಿಮಿತಿಗಳಿಂದ ಮುಕ್ತಿಗೊಂಡು, ಅವೆಲ್ಲವೂ ದೇವರೊಬ್ಬನ ಪ್ರಭಾವ ದಲ್ಲಿರುತ್ತವೆ. ನಿನ್ನ ಸೇವಾ ಕಾರ್ಯದ ಹೊಣೆಗಾರಿಕೆ ನಿನ್ನ ಮೇಲೆ ಇರುವುದಿಲ್ಲ. ನಿನಗಿರುವ ಒಂದೇ ಒಂದು ಹೊಣೆಗಾರಿಕೆ-ಅದು ದೇವರೊಡನೆ ನಿರಂತರ ಸಂಪರ್ಕದಲ್ಲಿರುತ್ತಾ ಜೀವನವನ್ನು ಸಾಗಿಸಬೇಕೆಂಬುದೇ. ದೇವರೊಂದಿಗೆ ಜೊತೆಯಾಗಿ ಸಹಕರಿಸಿ ಬಾಳುತ್ತಿರುವ ನಿನ್ನ ಬದುಕಿಗೆ, ಅಡ್ಡಿಯನ್ನುಂಟು ಮಾಡುವ ದೊಂದಕ್ಕೂ ಆಸ್ಪದ ಕೊಡಬಾರದು. ಶುದ್ಧೀಕರಣದ ನಂತರ ಒದಗುವ ಸ್ವಾತಂತ್ರ್ಯವು ಮಗುವಿನ ಮುಕ್ತ ಜೀವಿತ ದಂತಿರುತ್ತದೆ. ಜೀವಿತವನ್ನು ನೆಲಕ್ಕೆ ಕೆಡವಿ ಒತ್ತಿಹಿಡಿಯುತ್ತಿದ್ದ ಸಂಗತಿಗಳು ಇನ್ನಿಲ್ಲವಾಗಿರುತ್ತವೆ. ಆದರೆ ನೀನು ಎಚ್ಚರದಿಂದ ಸ್ಮರಿಸುತ್ತಿರಬೇಕಾದ ಒಂದು ಸಂಗತಿ- ನೀನು ಬಿಡುಗಡೆಗೊಂಡು ಮುಕ್ತ ನಾಗಿರುವುದು, ಒಂದೇ ಒಂದು ಕಾರಣಕ್ಕಾಗಿ - ''ನಿನ್ನ ಜೊತೆ ಕೆಲಸದವನಿಗೆ'' ನೀನು ಸಂಪೂರ್ಣ ವಾಗಿ ನಿಷ್ಠೆಯುಳ್ಳವ ನಾಗಿರಬೇಕು.

ದೇವರು ನಮ್ಮನ್ನೆಲ್ಲಿರಿಸಬೇಕು ಎಂದು ಪರಾಮರ್ಶಿಸುವ ಹಕ್ಕು ನಮಗೆ ಇಲ್ಲ , ಅಥವಾ ದೇವರು ನಮಗಾಗಿ ಏನು ಸಿದ್ಧಪಡಿಸುತ್ತಿರುವನೆಂಬ ಪೂರ್ವಭಾವಿ ಕಲ್ಪನೆಗಳನ್ನು ಹೊಂದುವ ಹಕ್ಕು ಇಲ್ಲ. ದೇವರು ಎಲ್ಲವನ್ನು ನಿರ್ವಹಿಸಿ ನಡೆಸುವನು; ಆತನು ನಮ್ಮನ್ನೆಲ್ಲಿಯೇ ಇರಿಸಲಿ, ನಾವು ಮಾತ್ರ ಆತನಿಗೆ ನಮ್ಮ ಪೂರ್ಣ ಹೃದಯದ ನಿಷ್ಠೆಯಿಂದ, ಆತನು ನಿಗದಿಪಡಿಸಿದ ಕೆಲಸಕ್ಕೆ ನಮ್ಮನ್ನು ಒಪ್ಪಿಸಿಕೊಡುವ ಗುರಿ ನಮ್ಮದಿರಬೇಕು. ನಿನ್ನ ಕೈಗೆ ಸಿಕ್ಕಿದ ಕೆಲಸಗಳನ್ನೆಲ್ಲಾ ''ನಿನ್ನ ಪೂರ್ಣ ಶಕ್ತಿಯಿಂದ ಮಾಡು'' (ಪ್ರಸಂಗಿ 9:10)

# ಆತ್ಮೀಕ ಯಶಸ್ಸಿನ ಬಯಕೆಯ ವಿರುದ್ಧ ಮುನ್ನೆಚ್ಚರಿಕೆ

**''ಆದರೂ ದೆವ್ವಗಳು ನಮಗೆ ಅಧೀನವಾಗಿವೆ ಎಂದು ಸಂತೋಷ ಪಡದೆ'' - (ಲೂಕ 10:20)**

ಕ್ರೈಸ್ತ ಸೇವಕರಾದ ನಮಗೆ ಲೌಕಿಕತೆಯು, ಉರುಲು ಅಲ್ಲ. ಪಾಪವು ಉರುಲು ಅಲ್ಲ, ಆತ್ಮೀಕ ಸ್ವೇಚ್ಛಾಚಾರವೇ ಉರುಲಾಗಿರುತ್ತದೆ, ಹೇಗೆಂದರೆ ನಾವೀಗ ಬದುಕುತ್ತಿರುವ ಧಾರ್ಮಿಕ ಮಾದರಿ ಮತ್ತು ಅದರ ವಿನ್ಯಾಸದ ಚಿತ್ರವನ್ನು ಬಳಸಿಕೊಂಡ ಸೇವೆಯ ಆತ್ಮೀಕ ಯಶಸ್ಸಿನ ಮೇಲೆ ದೃಷ್ಟಿಯನ್ನಿಡುವುದೇ ಆ ಉರುಲು. ದೇವರು ಒಪ್ಪಿಗೆ ನೀಡಿರು ವಂಥವುಗಳನ್ನು ಬಿಟ್ಟು ಬೇರೆ ಯಾವುದನ್ನು ಓಲೈಸಬೇಡ ''ಪಾಳೆಯದ ಆಚೆ ಆತನ ಬಳಿಗೆ ಹೊರಟು ಹೋಗಲು'' ಆಸಕ್ತಿಯುಳ್ಳವರಾಗಿರೋಣ (ಇಬ್ರಿ 13:13). ಯಶಸ್ವೀ ಸೇವೆಯಲ್ಲಿ ಹರ್ಷಗೊಳ್ಳಬಾರದೆಂದು ಯೇಸುಸ್ವಾಮಿಯು ಶಿಷ್ಯರಿಗೆ ಹೇಳಿದನು. (ಲೂಕ 10:20) ಆದರೂ ಈ ಒಂದು ಸಂಗತಿಯಲ್ಲಿಯೇ ಬಹಳಷ್ಟು ಜನ ದೇವ ಸೇವಕರು ಹರ್ಷ ಪಡುತ್ತಿರುವಂತಿದೆ. ವ್ಯವಹಾರಿಕೆಯ ದೃಷ್ಟಿ ನಮಗಿದೆ - ಅನೇಕ ಆತ್ಮಗಳೂ ರಕ್ಷಿಸಲ್ಪಟ್ಟಿವೆ, ಶುದ್ಧೀಕರಿಸಲ್ಪಟ್ಟಿವೆ; ಇದು ತುಂಬಾ ತೃಪ್ತಿಕರವಾದುದು; ದೇವರಿಗೆ ಸ್ತೋತ್ರ (ವ್ಯವಹಾರ ತೃಪ್ತಿ). ಆತ್ಮಗಳನ್ನು, ನಾವು ರಕ್ಷಿಸುವುದಲ್ಲ, ನಾವು ಅವರನ್ನು ಕ್ರಿಸ್ತನ ಶಿಷ್ಯರನ್ನಾಗಿ ಮಾಡಬೇಕು. ರಕ್ಷಣೆ ಮತ್ತು ಶುದ್ಧೀಕರಣಗಳು, ಪರಾತ್ಪರ ದೇವರ ಮಹಾ ಕೃಪಾ ಕಾರ್ಯಗಳಷ್ಟೇ; ಹೀಗೆ ದೇವರು ತನ್ನ ಮಹಾ ಕೃಪೆಯಿಂದ ಹಾಕಿದ ತಳಹದಿಯ ಮೇಲೆ ನಮ್ಮ ಸೇವಾಕಾರ್ಯವು ಆರಂಭವಾಗುತ್ತದೆ. ಆತನ ಶಿಷ್ಯರಾದ ನಾವು ಮಾಡುವ ಕೆಲಸ - ಇತರರನ್ನು, ಅವರು ಸಂಪೂರ್ಣವಾಗಿ ದೇವರಿಗೆ ಅಧೀನರಾಗುವ ತನಕ ಶಿಷ್ಯರನ್ನಾಗಿ ಮಾಡುತ್ತಿರುವದೇ. ದೇವರ ಆತ್ಮನಿಂದ ಕೇವಲ ಎಚ್ಚರಗೊಂಡ ನೂರು ಆತ್ಮಗಳಿಗಿಂತಲೂ ದೇವರಿಗೆ ಪೂರ್ಣ ನಿಷ್ಠೆಯುಳ್ಳ ಕೇವಲ ಒಂದೇ ಒಂದು ಆತ್ಮವು ಆತನಿಗೆ ಹೆಚ್ಚು ಬೆಲೆಯುಳ್ಳದ್ದಾಗಿದೆ. ದೇವ ಸೇವಕರಾದ ನಾವು, ಆತ್ಮೀಕವಾಗಿ ಹೇಗೆ ಸಮರ್ಪಕವಾಗಿ ಇರುವೆವೋ ಹಾಗೆಯೇ ಅದನ್ನು ಇತರರಲ್ಲಿ ಹುಟ್ಟಿಸಬೇಕು, ದೇವ ಸೇವಕರಾದ ನಮಗೆ ಅದೇ ದೇವರ ಸಾಕ್ಷಿಯಾಗಿರುತ್ತದೆ. ದೇವರು ತನ್ನ ಕೃಪೆ ಯಿಂದ ನಮ್ಮ ಜೀವಿತಗಳನ್ನು ಆತ್ಮೀಕವಾಗಿ ಒಂದು ಮಟ್ಟಕ್ಕೆ ಬರಮಾಡಿರುತ್ತಾನೆ, ಅದೇ ಪ್ರಮಾಣದ ಜೀವಿತವನ್ನು ಇತರರಲ್ಲಿ ಹುಟ್ಟಿಸುವ ಹೊಣೆಗಾರಿಕೆಯು ನಮ್ಮ ಮೇಲಿದೆ.

''ನಿಮ್ಮ ಜೀವವು ಕ್ರಿಸ್ತನೊಂದಿಗೆ ದೇವರಲ್ಲಿ ಮರೆಯಾಗಿಟ್ಟದೆ'' (ಕೊಲೊ - 3:3) ಇಂಥಾ ಜೀವಿತವನ್ನು ದೇವ ಸೇವಕನು ಜೀವಂತಗೊಳಿಸದಿದ್ದರೆ, ಅವನು ಕಿರಿಕಿರಿಯನ್ನುಂಟು ಮಾಡುವ ಒಬ್ಬ ಸರ್ವಾಧಿಕಾರಿಯಾಗಿ ಬಿಡುವನೇ ಹೊರತು ಕ್ರಿಯಾಶೀಲತೆಯಿಂದ ತುಂಬಿದ ಸೇವಕನಾಗಿರಲಾರನು. ನಮ್ಮಲ್ಲಿ ಅನೇಕರು ಸರ್ವಾಧಿಕಾರಿಗಳೇ ಆಗಿರುವೆವು ಮತ್ತು ಪ್ರಾರ್ಥನಾ ಕೂಟಗಳಲ್ಲಿಯೂ ಜನರಿಗೆ ನಾವು ಆಜ್ಞಾಪನೆಗಳನ್ನು ನೀಡುತ್ತೇವೆ. ಆ ರೀತಿಯಲ್ಲಿ ಯೇಸುಕ್ರಿಸ್ತನು ಆಜ್ಞಾಪಿಸಿದ್ದೇ ಇಲ್ಲ. ನಮ್ಮ ಸ್ವಾಮಿಯು ಶಿಷ್ಯತ್ವದ ಬಗ್ಗೆ ಮಾತನಾಡಿದಾಗಲ್ಲೆಲ್ಲಾ ಅದಕ್ಕೆ ಮುನ್ನುಡಿಯಾಗಿ 'ರೆ'ಯನ್ನು ಬಳಸಿದ್ದಾನೆ. ''ನೀನು ಮಾಡಲೇಬೇಕು'' ಎಂದು ಒತ್ತಾಯ ಪೂರ್ವಕವಾಗಿ ಆಜ್ಞಾಪಿಸಿಲ್ಲ. ಶಿಷ್ಯತ್ವವು ಆಯ್ಕೆಯ ಸೌಲಭ್ಯವನ್ನು ಹೊಂದಿರುತ್ತದೆ.

# ಎಲ್ಲಾ ಕಾಲದಲ್ಲಿಯೂ ಆಸಕ್ತನಾಗಿರು

**''ಅನುಕೂಲವಾದ ಕಾಲದಲ್ಲಿಯೂ ಅನುಕೂಲವಿಲ್ಲದ ಕಾಲದಲ್ಲಿಯೂ ........ ಆಸಕ್ತನಾಗಿರು'' - (2ತಿಮೋ 4:2)**

ನಮ್ಮಲ್ಲಿ ಅನೇಕರು ''ಅನುಕೂಲವಿಲ್ಲದ ಕಾಲ'' ಗಳಲ್ಲೇ ಆಸಕ್ತರಾಗಿರುವ ರೋಗಿಷ್ಠ ಪ್ರವೃತ್ತಿಯುಳ್ಳವರಾಗಿದ್ದಾರೆ. ಇಲ್ಲಿ ಕಾಲವು ಸಮಯವನ್ನು ಕುರಿತಾಗಿಲ್ಲ. ಅದು ನಮ್ಮನ್ನು ಕುರಿತಾಗಿದೆ. ''ಅನುಕೂಲವಾದ ಕಾಲ ದಲ್ಲಿಯೂ ಅನುಕೂಲವಿಲ್ಲದ ಕಾಲದಲ್ಲಿಯೂ ಆಸಕ್ತನಾಗಿರು'' ಎಂದರೆ ನಾವು ಅದನ್ನು ಇಚ್ಛೈಸುತ್ತೇವೆಯೋ ಅಥವಾ ಇಲ್ಲವೋ ಎಂಬುದು ಮುಖ್ಯವಲ್ಲ. ಒಂದು ವೇಳೆ ನಾವು ಯಾವುದನ್ನು ಮಾಡುವ ಒಲವಿನಿಂದಿರುವೆವೋ ಅದನ್ನೇ ಮಾಡುವವರಾಗಿದ್ದರೆ, ನಾವು ಎಂದೆಂದಿಗೂ ಏನನ್ನೂ ಮಾಡುವುದೇ ಇಲ್ಲ. ಅಧ್ಯಾತ್ಮಿಕ ಕ್ಷೇತ್ರಗಳಲ್ಲಿ ಈ ಸೇವಾ ಉದ್ಯೋಗಕ್ಕೆ ಅನರ್ಹರಾದವರು ಇದ್ದಾರೆ, ಇವರು ಆತ್ಮೀಕವಾಗಿ ಸತ್ವಹೀನ ಜನರು; ಇವರಿಗೆ ಒಂದು ಅಲೌಕಿಕವಾದ ಪ್ರೇರಣೆಯಾಗದ ಹೊರತು, ಏನಾದರೂ ಮಾಡಲು ನಿರಾಕರಿಸುತ್ತಾರೆ. ನಾವು ದೇವರೊಂದಿಗೆ ಅನ್ಯೋನ್ಯತೆಯಲ್ಲಿ ದ್ದೇವೆಂಬುದರ ಸಾಕ್ಷಿ, ಏನೆಂದರೆ, ನಮಗೆ ಪ್ರೇರಣೆಯಾಗಲೀ, ಆಗದೇ ಇರಲಿ, ಕೈಲಾದದ್ದನ್ನು ಮಾಡುತ್ತೇವೆ.

ಕ್ರೈಸ್ತ ಸೇವಕನ ಮುಂದಿರುವ ಭಯಂಕರವಾದ ಕಂಟಕಗಳಲ್ಲಿ ತನಗೊದಗಿದ ಅಪೂರ್ವ ಕ್ಷಣಗಳನ್ನು ಪೂಜಾರ್ಹವಾಗಿಸಿಕೊಳ್ಳುವುದು ಒಂದು ದೊಡ್ಡ ಕಂಟಕವಾಗಿದೆ. ಪ್ರೇರಣೆ ಮತ್ತು ಅಂತಃ ನೋಟದ ಸಮಯವನ್ನು ದೇವರ ಆತ್ಮನು ನಿನಗೆ ಅನುಗ್ರಹಿಸಿದಾಗ ನೀನು ಹೇಳುವೆ - ''ಅಪೂರ್ವ ಪ್ರೇರಣೆ ನನಗುಂಟಾಗಿದೆ ಮತ್ತು ಇನ್ನು ಮುಂದೆ ಹೀಗೆಯೇ ದೇವರಿಗಾಗಿ ಇರುವೆನು'' ಇಲ್ಲ. ನಿನಗಾಗುವುದಿಲ್ಲ, ಅಂಥಾ ಪ್ರೇರಣೆಯು ಕೇವಲ ದೇವರ ಕೊಡುಗೆಯಾಗಿವೆ, ಆದ್ದರಿಂದ ನೀನು ಹೀಗಾಗದಂತೆ ದೇವರೇ ಎಚ್ಚರ ವಹಿಸುತ್ತಾನೆ. ನಿನಗಿಷ್ಟ ಬಂದಾಗ ನಿನ್ನಷ್ಟಕ್ಕೆ ನೀನೇ ಅವುಗಳನ್ನು ಉಪಯೋಗಿಸಲು ಆರಿಸಿಕೊಳ್ಳಲಾಗದು. ಇಂಥ ಅಪೂರ್ವ ಕ್ಷಣಗಳಲ್ಲಿಯೇ ನಾನು ಶ್ರೇಷ್ಠತಮ ಸಾಮರ್ಥ್ಯ ಉಳ್ಳವನಾಗಿರುವನೆಂದು ನೀನು ಹೇಳುತ್ತೀಯಾದರೆ, ನೀನು ದೇವರಿಗೆ ಸಹಿಸಲಾರದ ಭಾರವಾಗಿಬಿಡುವೆ. ದೇವರು ನಿರಂತರವಾಗಿ ನಿನ್ನನ್ನು ಪ್ರೇರೇಪಿಸುತ್ತಿರದಿದ್ದರೆ ನೀನು ಏನೂ ಮಾಡುವುದೇ ಇಲ್ಲ. ಅಪೂರ್ವಕ್ಷಣಗಳು ಪೂಜಾರ್ಹವಲ್ಲ ವೆಂಬುದನ್ನು ಮತ್ತು ನಿನ್ನ ಸನಿಹದಲ್ಲಿರುವ ಕೆಲಸವನ್ನು ನಿಷ್ಠೆಯಿಂದ ಮಾಡುವುದನ್ನು ಎಲ್ಲಿಯವರೆಗೆ ಕಲಿತುಕೊಳ್ಳುವುದಿಲ್ಲವೋ ಅಲ್ಲಿಯ ತನಕ ದೇವರೆಂದೂ ನಿನ್ನ ಬಳಿಗೆ ಬರುವುದಿಲ್ಲ. ನಿನ್ನ ಜೀವಿತದಲ್ಲಿ ಮರೆಯಾಗಿ ಬಿಡುವನು.

# ಉನ್ನತಾರೋಹಣ

**''ನಿನಗೆ ಪ್ರಿಯನಾಗಿರುವ ಒಬ್ಬನೇ ಮಗನಾದ ಇಸಾಕನನ್ನು ತೆಗೆದುಕೊಂಡು ....... ನಾನು ಹೇಳುವ ಒಂದು ಬೆಟ್ಟದ ಮೇಲೆ ಸರ್ವಾಂಗ ಹೋಮವಾಗಿ ಅರ್ಪಿಸಬೇಕು'' - (ಆ.ಕಾಂ. - 22:2)**

ದೇವರ ಚಿತ್ತವನ್ನು ಮನುಷ್ಯನುಹೇಗೆ ವ್ಯಾಖ್ಯಾನಿಸುವನೆಂದು ಅವನ ಗುಣ ಸ್ವಾಭಾವವು ನಿರ್ಧರಿಸುತ್ತದೆ. (ಕೀರ್ತನೆ - 18:25-26) ಅಬ್ರಹಾಮನು ದೇವರ ಆಜ್ಞೆಯನ್ನು ವ್ಯಾಖ್ಯಾನಿಸಿದ ರೀತಿ - 'ತಾನು ತನ್ನ ಒಬ್ಬನೇ ಮಗನನ್ನು ಕೊಲ್ಲಬೇಕು ಮತ್ತು ನೋವಿನಿಂದ ಕೂಡಿದ ಇಂಥಾ ಉಗ್ರಪರೀಕ್ಷೆಯ ಪದ್ಧತಿಯೊಂದನ್ನು ತನ್ನ ತರುವಾಯದ ಜನಾಂಗದವರಿಗೆ, ರೂಢಿಯಾಗಿ ಬಿಟ್ಟುಕೊಡಬೇಕು'. ದೇವರು ಬೇರಾವ ರೀತಿಯಿಂದಲೂ ಅಬ್ರಹಾಮನ ನಂಬಿಕೆಯನ್ನು ಶುದ್ಧೀಕರಿಸಲಿಲ್ಲ. ದೇವರು ಹೇಳಿದವುಗಳಿಗೆ ನಾವು ಯಥಾರ್ಥ ನಂಬಿಕೆಯಿಂದ ವಿಧೇಯರಾದರೆ, ಆಗ ದೇವರು ತನ್ನನ್ನು ತಪ್ಪಾಗಿ ವ್ಯಾಖ್ಯಾನಿಸುವ ಪದ್ಧತಿಗಳಿಂದ ತಾನೇ ನಮ್ಮನ್ನು ಬಿಡುಗಡೆ ಮಾಡುತ್ತಾನೆ. ಹಾಗೆ ತೊಲಗಿಸಬೇಕಾಗಿರುವ ಅನೇಕ ಕುರುಡು ನಂಬಿಕೆಗಳುಂಟು. ಉದಾ- ತನ್ನ ಮಗುವನ್ನು ಅತಿಯಾಗಿ ಪ್ರೀತಿಸುತ್ತಿರುವುದರಿಂದ ದೇವರು ಆ ಮಗುವನ್ನು ತಾಯಿಯಿಂದ ತೊಲಗಿಸಿಬಿಡುವನು - ಹೌದೇ ? ಇದು ದೆವ್ವವು ನುಡಿದ ಮಿಥ್ಯ ! ಮತ್ತು ಅದು ದೇವರ ಸ್ವಭಾವವನ್ನು ಅಣಕಿಸಿದಂತೆ. ನಮ್ಮ ಉನ್ನತಿಯನ್ನು ಮತ್ತು ದೇವರ ವಿಷಯದ ತಪ್ಪು ಪದ್ಧತಿಗಳ ತೊಲಗಿಸುವಿಕೆಯನ್ನು ಸೈತಾನನು ಅಡ್ಡಿಪಡಿಸುವದಾದರೆ, ಖಂಡಿತವಾಗಿ ಹಾಗೆ ಮಾಡಿಯೇ ಮಾಡುವನು. ಆದರೆ ನಾವು ದೇವರಿಗೆ ನಂಬಿಗಸ್ಥರಾಗಿದ್ದರೆ ದೇವರು ನಮ್ಮನ್ನು ಉಗ್ರಪರೀಕ್ಷೆಯಲ್ಲಿ ನಡೆಸಿ, ತನ್ನ ಬಗ್ಗೆ ಇನ್ನೂ ಹೆಚ್ಚಾದ ಅರಿವು ನಮಗುಂಟಾಗುವಂತೆ ಮಾಡಿ ನಮ್ಮನ್ನು ಹೊರತರುತ್ತಾನೆ.

ದೇವರಲ್ಲಿ ಅಬ್ರಹಾಮನಿಗಿದ್ದ ನಂಬಿಕೆಯ ಮುಖ್ಯಾಂಶವೆಂದರೆ, ಆತನು ದೇವರಿಗಾಗಿ ಏನು ಬೇಕಾದರೂ ಮಾಡಲು ಸಿದ್ಧನಿದ್ದನು. ತಾನು ನಂಬಿದ ನಂಬಿಕೆಯ ವಿರುದ್ಧಗಳಿದ್ದರೂ ಅದನ್ನು ಪರಿಗಣಿಸದೆ, ದೇವರಿಗೆ ವಿಧೇಯನಾಗುವುದಕ್ಕೆ ಬದುಕಿದ್ದನು. ಅಬ್ರಹಾಮನು ತನ್ನ ಶ್ರದ್ಧಾನಂಬಿಕೆಗಳ ಭಕ್ತನಾಗಿರಲಿಲ್ಲ, ಇದ್ದಿದ್ದರೆ ಅವನು ಇಸಾಕನನ್ನು ಕಡಿದು ಕೊಲ್ಲಿಯೇ ಬಿಡುತ್ತಿದ್ದನು ಮತ್ತು ಅಲ್ಲಿ ಕೇಳಿಸಿಬಂದಂಥ ದೇವದೂತನ ಸ್ವರವನ್ನು ದೆವ್ವದ ಧ್ವನಿ ಎಂದು ಹೇಳಿ ಬಿಡುತ್ತಿದ್ದನು. ಹಾಗೆ ಮಾಡುವುದು ಧರ್ಮಾಂಧತೆಯ ಪ್ರವೃತ್ತಿಯಾಗಿದೆ. ನೀನು ದೇವರಿಗೆ ನಂಬಿಗಸ್ತ ನಾಗಿದ್ದರೆ, ದೇವರು ತನ್ನನ್ನು ವ್ಯಕ್ತಪಡಿಸುವ ಅಂತರಂಗದ ಜ್ಞಾನ ಸ್ಥಳಕ್ಕೆ, ಎಲ್ಲಾ ಅಡೆತಡೆಗಳ ಮಧ್ಯದಲ್ಲಿಯೂ ನೇರವಾಗಿ ನಿನ್ನನ್ನು ಕರೆದೊಯ್ಯುವನು; ಆದರೆ, ನಿನ್ನ ಸಾಂಪ್ರದಾಯಕ ನಂಬಿಕೆಗಳನ್ನು ಮತ್ತು ನಿನ್ನ ನಿಶ್ಚಿತಾಭಿಪ್ರಾಯಗಳನ್ನು ತೊರೆದು ಬಿಡಬೇಕಾಗುವ ಅಂಶವು ಅಲ್ಲಿರುತ್ತದೆ. ನನ್ನನ್ನು ಪರೀಕ್ಷಿಸು ಎಂದು ದೇವರನ್ನು ಕೇಳಿಕೊಳ್ಳಬೇಡ. ಪೇತ್ರನಂತೆ ಎಂದೂ ಘೋಷಿಸಬೇಡಾ ''ಸ್ವಾಮಿ, ನಿನ್ನ ಸಂಗಡ ಸೆರೆಮನೆಗೆ ಹೋಗುವುದಕ್ಕೂ, ಸಾಯುವುದಕ್ಕೂ ಸಿದ್ಧನಿದ್ದೇನೆ''. ಅಬ್ರಹಾಮನು ಅಂಥ ಘೋಷಣೆಯನ್ನು ಮಾಡಲಿಲ್ಲ, ಆತನು ದೇವರಿಗೆ ನಂಬಿಗಸ್ಥನಾಗಿದ್ದನು ಮತ್ತು ದೇವರು ಆತನ ನಂಬಿಕೆಯನ್ನು ಶುದ್ಧೀಕರಿಸಿದನು.

# ನಿನಗೇನು ಬೇಕಾಗಿದೆ ?

**''ಮಹಾಪದವಿಯನ್ನು ನಿರೀಕ್ಷಿಸಿಕೊಳ್ಳುತ್ತಿಯೋ ? '' (ಯೆರೆ - 45:5)**

ನೀನು ಸಹಾ ಮಹಾಪದವಿಯನ್ನು ನಿರೀಕ್ಷಿಸಿಕೊಳ್ಳುತ್ತಿರುವಿಯೋ? ಮಹಾನ್ ವ್ಯಕ್ತಿ ಯಾಗುವು ದನ್ನು ನಿರೀಕ್ಷಿಸದೆ, ನಿನಗಾಗಿ ಮಹತ್ವವಾದವುಗಳನ್ನು ದೇವರಿಂದ ನಿರೀಕ್ಷಿಸುತ್ತಿರುವಿಯೋ ? ಆತನಿಂದ ವರಗಳನ್ನು ಪಡೆಯುವುದಕ್ಕಿಂತಲೂ ಆತನೊಂದಿಗೆ ಇನ್ನೂ ಹತ್ತಿರದ ನಿಕಟ ಸಂಬಂಧವನ್ನು ನೀನು ಪಡೆಯಬೇಕೆಂದು ಮತ್ತು ನೀನು ಆತನನ್ನು ಅರಿತುಕೊಳ್ಳಬೇಕೆಂದು ದೇವರು ಬಯಸುತ್ತಾನೆ. ದೊಡ್ಡ ವಿಷಯವು ಆಕಸ್ಮಿಕವಾದದ್ದು, ಅದು ಬರುತ್ತದೆ ಮತ್ತು ಹೋಗುತ್ತದೆ. ಆದರೆ ಆಕಸ್ಮಿಕ ವಾದವುಗಳನ್ನು ದೇವರೆಂದಿಗೂ ಕೊಡುವುದಿಲ್ಲ. ದೇವರು ಬೇಡ, ಆತನ ಕೊಡುಗೆಗಳು ಬೇಕು ಎನ್ನುವ ಇಚ್ಛೆಯನ್ನು ತೊರೆದು ಬಿಟ್ಟರೆ, ದೇವರ ಅನ್ಯೋನ್ಯತೆಯನ್ನು ಪಡಕೊಳ್ಳುವಷ್ಟು ಸುಲಭವಾದದ್ದು ಬೇರೆ ಇಲ್ಲವೇ ಇಲ್ಲ. ನಿನಗೆ ಬೇಕಾಗಿದವುಗಳನ್ನು ಕೇಳಿಕೊಳ್ಳುವುದಷ್ಟಕ್ಕೆ ಮಾತ್ರ ದೇವರ ಅನ್ಯೋನ್ಯತೆಯಲ್ಲಿ ನೀನು ಸಾಗಿಬಂದಿದ್ದರೆ, ಆತನಿಗೆ ಶರಣಾಗತನಾಗುವ ವಿಷಯದಲ್ಲಿ ಒಂದು ಎಳೆಯಷ್ಟಾದರೂ ಸಮರ್ಪಣ ಭಾವದಿಂದ ದೇವರ ಸನಿಹಕ್ಕೆ ನೀನು ಬಂದಿರುವುದೇ ಇಲ್ಲ. ನಿನ್ನದೇ ಆದ ದೃಷ್ಟಿಕೋನ ದಿಂದ ನೀನು ಕ್ರೈಸ್ತನಾಗಿರುವೆ. ''ಪವಿತ್ರಾತ್ಮವರಕ್ಕಾಗಿ ದೇವರನ್ನು ಬೇಡಿಕೊಂಡೆನು. ಆದರೆ ಆತನು ನಾನು ನಿರೀಕ್ಷಿಸಿದ ಶಾಂತಿಸಮಾಧಾನಗಳನ್ನು ಕೊಡಲಿಲ್ಲ'' ಎಂದು ನೀನು ಹೇಳುವೆ. ಆಗ ದೇವರು ಕೂಡಲೇ ಅದರ ಕಾರಣದ ಮೇಲೆ ತನ್ನ ಬೆರಳಿಟ್ಟು ಸೂಚಿಸುವನು. 'ನೀನು ಕರ್ತನನ್ನು ನಿರೀಕ್ಷಿಸುತ್ತಿಲ್ಲ. ನಿನಗಾಗಿ ಬೇರೆ ಏನನ್ನೋ ನಿರೀಕ್ಷಿಸುತ್ತಿರುವೆ.' ಸ್ವಾಮಿಯವರು ಹೇಳಿದ್ದು ''ಬೇಡಿಕೊಳ್ಳಿರಿ, ನಿಮಗೆ ದೊರೆಯುವುದು' (ಮತ್ತಾ 7:7) ನಿನಗೇನು ಬೇಕಾಗಿದೆಯೋ ಅದನ್ನು ದೇವರಿಂದ ಬೇಡಿಕೋ. ಯೋಗ್ಯವಾದದ್ದನ್ನು ನೀನು ಬೇಡಿಕೊಳ್ಳದಿದ್ದರೆ, ಬೇಡಿಕೊಳ್ಳಲು ನಿನಗಾಗುವುದಿಲ್ಲ. 'ನೀನು ದೇವರ ಸನಿಹಕ್ಕೆ ಸೆಳೆಯಲ್ಪಟ್ಟಾಗ ನಿನಗಾಗಿ ನೀನು ಬೇಡಿಕೊಳ್ಳುವುದನ್ನು ನಿಲ್ಲಿಸಿಬಿಡುವೆ. 'ನೀವು ನಿಮ್ಮ ತಂದೆಯನ್ನು ಬೇಡಿಕೊಳ್ಳುವುದಕ್ಕಿಂತ ಮುಂಚೆಯೇ ನಿಮಗೆ ಏನೇನು ಅಗತ್ಯವೆಂಬುದು ಆತನಿಗೆ ತಿಳಿದದೆ'. (ಮತ್ತಾ 6:8) ಹಾಗಾದರೆ ಯಾಕೆ ಬೇಡಿಕೊಳ್ಳಬೇಕು? - ಆತನನ್ನು ಹೆಚ್ಚಾಗಿ ಅರಿತುಕೊಳ್ಳಲು ಬೇಡಿಕೊಳ್ಳಬೇಕು.

ನಿನಗೋಸ್ಕರ ಮಹತ್ವವಾದವುಗಳನ್ನು ನಿರೀಕ್ಷಿಸಿಕೊಂಡಿರುವಿಯೋ? ''ಓ ಪ್ರಭುವೇ, ಪರಿಶುದ್ಧಾತ್ಮನ ಸ್ನಾನ ದೀಕ್ಷೆಯನ್ನು ನನಗೆ ಮಾಡಿಸು''. ದೇವರು ಇದನ್ನು ಮಾಡದಿದ್ದರೆ ಅದಕ್ಕೆ ಕಾರಣ, ನೀನಿನ್ನೂ ಆತನಿಗಾಗಿ ಅಗತ್ಯವಿರುವ ಸಮರ್ಪಣಾಭಾವದಿಂದ ಶರಣಾಗಿರುವುದಿಲ್ಲ, ನೀನು ತ್ಯಜಿಸಲಾರದ ಯಾವುದೋ ಒಂದು ಇನ್ನೂ ನಿನ್ನಲ್ಲಿದೆ. ನಿನಗೇನು ಬೇಕಾಗಿದೆ ಎಂದು ನಿನ್ನನ್ನು ನೀನು ಪ್ರಶ್ನಿಸಿಕೊಂಡಿರುವಿಯೋ? ಮತ್ತು ಅದು ಯಾಕೆ ನಿನಗೆ ಬೇಕು ಎಂದು ಪ್ರಶ್ನಿಸಿಕೊಳ್ಳಲು ಸಿದ್ಧ ನಿರುವಿಯೋ ? ದೇವರು ಅಂತಿಮವಾದ ಪರಿಪೂರ್ಣತೆಗಾಗಿ ತಕ್ಷಣದ ಪೂರ್ಣತೆಯನ್ನು ಅಲಕ್ಷಿ ಸುತ್ತಾನೆ. ಈಗಾಗಲೇ ಆಶೀರ್ವದಿಸಲ್ಪಟ್ಟವನೂ, ಸಂತೋಷಪಡುವವನೂ ನೀನಾಗಿರುವಂತೆ ಮಾಡಲು ಆತನಿಗೆ ಆಸಕ್ತಿ ಇಲ್ಲ. ನಿನ್ನನ್ನು ಪರಿಪೂರ್ಣತೆಗೊಯ್ಯುವುದಕ್ಕಾಗಿ ಸದಾ ಕಾಲವೂ ಆತನು ಕಾರ್ಯನಿರತ ನಾಗಿದ್ದಾನೆ. ''ನಾವು ಒಂದಾಗಿರುವ ಪ್ರಕಾರ ಅವರೂ ಒಂದಾಗಿರಬೇಕೆಂದು'' (ಯೋಹಾ-17:22).

# ನಿನಗೇನು ದೊರೆಯುತ್ತದೆ ?

**''ನೀನು ಎಲ್ಲಿಗೆ ಹೋದರೂ ಪ್ರಾಣವೊಂದನ್ನೇ ಬಾಚಿಕೊಂಡು ಹೋಗುವುದಕ್ಕೆ ನಿನಗೆ ಅವಕಾಶ ಕೊಡುವೆನು'' - (ಯೆರೆ - 45:5)**

ದೇವರನ್ನು ನಂಬಿದವರು ಕಾಪಾಡಿಕೊಳ್ಳಬೇಕಾಗಿರುವ ಅಚಲವಾದ ರಹಸ್ಯವಿದು. - ''ನಿನಗೆ ನಿನ್ನ ಪ್ರಾಣವನ್ನು ಕೊಡುವೆನು'' ತನ್ನ ಪ್ರಾಣಕ್ಕಿಂತಲೂ ಹೆಚ್ಚಿನದೇನು ತಾನೇ ಮಾನವನಿಗೆ ಬೇಕು ? ಅದೊಂದೇ ಅತ್ಯವಶ್ಯಕವಾದದ್ದು. ''ಪ್ರಾಣವೊಂದನ್ನೇ ಬಾಚಿಕೊಂಡು ಹೋಗು'' ಇದರ ಅರ್ಥ - ನೀನೆಲ್ಲಿಗೆ ಹೋದರೂ, ನೀನು ಪಾತಾಳಕ್ಕೆ ಹೋದರೂ, ನೀನು ನಿನ್ನ ಪ್ರಾಣದೊಂದಿಗೆ ಹೊರಬರುವಿ ಮತ್ತು ಯಾವುದೂ ಅದಕ್ಕೆ ಹಾನಿಯುಂಟು ಮಾಡಲಾರದು. ನಮ್ಮಲ್ಲಿ ಅನೇಕರು ವಿಷಯ ಪ್ರದರ್ಶನ ಮಾಡುವುದರಲ್ಲಿ ಸಮಸಮವಾಗಿ ಸಿಕ್ಕಿಕೊಂಡಿರುವರು. ತಮ್ಮ ಆಸ್ತಿ ಪಾಸ್ತಿಗಳ ಪ್ರದರ್ಶನದ ದಾರಿಯಲ್ಲಿ ಅಲ್ಲ. - ದೇವರ ಆಶೀರ್ವಾದಗಳ ಪ್ರದರ್ಶನಗಳಲ್ಲಿ ತೊಡಗಿರುವರು. ಇಂಥವುಗಳೆಲ್ಲವೂ ಹೋಗಬೇಕು. ಆದರೆ ಎಂದೆಂದಿಗೂ ಹೋಗಲಾರದ ವೈಭವದಿಂದ ಕೂಡಿರುವುದೊಂದಿದೆ. -''ಕ್ರಿಸ್ತನೊಂದಿಗೆ ದೇವರಲ್ಲಿ ಮರೆಯಾಗಿಟ್ಟಿರುವ ಜೀವವು'' ಅದು ಎಂದಿಗೂ ಹೊರಟು ಹೋಗುವುದಿಲ್ಲ.

ದೇವರು ತನ್ನ ಅನ್ಯೋನ್ಯತೆಯಲ್ಲಿ ನಿನ್ನನ್ನು ಇರಿಸಿಕೊಳ್ಳಲಾಗುವಂತೆ, ಮಹತ್ವದ ಸಂಗತಿಗಳ ಬಗ್ಗೆ ಇನ್ನು ಮೇಲೆ ಯಾವ ಗಮನವನ್ನು ಕೊಡದಿರಲು ನೀನು ಸಿದ್ಧನಿರುವಿಯೋ ? ಸಕಲವನ್ನೂ ತ್ಯಜಿಸಿ ನಿನ್ನನ್ನು ಸಂಪೂರ್ಣವಾಗಿ ದೇವರಿಗೆ ಸಮರ್ಪಿಸಿಕೊಳ್ಳಲು ಸಿದ್ಧವಿರುವಿಯೋ ? ''ಅದು ಸರಿ. ಆದರೆ ಇದರ ವಿಷಯವೇನು'' ಎಂದು ಪ್ರಶ್ನಿಸಲು ನಿರಾಕರಿಸುವುದೇ, ನಿಜಶರಣಾಗತಿಯ ಪರೀಕ್ಷೆ. ನಿನ್ನ ಸ್ವಂತ ಅಭಿಪ್ರಾಯ ಮತ್ತು ಊಹೆಗಳ ಬಗ್ಗೆ ಎಚ್ಚರದಿಂದಿರಬೇಕು. ''ಇದನ್ನು ಕುರಿತು ಏನು?'' ಎಂದು ಪ್ರಶ್ನೆ ಮಾಡಲು ನೀನು ಅವಕಾಶವಿತ್ತಿರುವುದರ ಅರ್ಥ-, ನೀನು ದೇವರಿಗಿನ್ನೂ ಶರಣಾಗತನಾಗಿಲ್ಲ ಮತ್ತು ದೇವರಲ್ಲಿ ನಿನಗೆ ನಂಬಿಕೆಯಿಲ್ಲ. ಕೂಡಲೇ ನಿನ್ನನ್ನು ಸಮರ್ಪಿಸಿಕೊಂಡು ಮೊದಲು ಶರಣಾಗಿ ಬಿಡಬೇಕು. ದೇವರು ಮುಂದೇನು ಮಾಡುವ ನೆಂಬುದರ ಬಗ್ಗೆ ಮೊದಲೇ ಯೋಚಿಸಬೇಡ. ಶರಣಾಗತಿಯ ಉದ್ದೇಶ- ಪ್ರಶ್ನೆ ಕೇಳುವ ಸೌಲಭ್ಯವನ್ನು ತಿರಸ್ಕರಿಸುವುದು. ನೀನು ಸಂಪೂರ್ಣವಾಗಿ ದೇವರಿಗೆ ನಿನ್ನನ್ನು ಸಮರ್ಪಿಸಿಕೊಂಡಾಗ, ಕೂಡಲೇ ಆತನು ಹೇಳುತ್ತಾನೆ. ''ನಿನ್ನ ಪ್ರಾಣವನ್ನು ಬಾಚಿಕೊಂಡು ಹೋಗುವದಕ್ಕೆ ಅವಕಾಶ ಕೊಡುವೆನು'' ಜನರು ತಮ್ಮ ಜೀವಿತದಲ್ಲಿ ಯಾಕೆ ಬಳಲಿ ಹೋಗಿರುವರೆಂದರೆ ದೇವರು ಅವರಿಗೇನನ್ನೂ ಕೊಟ್ಟಿರುವುದಿಲ್ಲ. ತಮ್ಮ ಪ್ರಾಣವನ್ನು ಬಾಚಿಕೊಂಡು ಹೋಗಲು ಅವಕಾಶವನ್ನು ಅವರಿಗೆ ಕೊಟ್ಟಿರುವುದಿಲ್ಲ. ಅಂಥಾ ಸ್ಥಿತಿಯಿಂದ ಅವರು ಹೊರಬರುವ ಒಂದೇ ದಾರಿ- ತಮ್ಮನ್ನು ದೇವರಿಗೆ ಸಮರ್ಪಿಸಿಕೊಳ್ಳಬೇಕು. ನೀನು ಶರಣಾಗತನಾದರೆ, ಆಗ ಭೂಮಿಯ ಮೇಲೆ ನೀನೊಬ್ಬ ಆಶ್ಚರ್ಯ ಚಕಿತನೂ, ಸಂತೋಷ ಭರಿತನೂ ಆದ ಜೀವಿಯಾಗಿರುವೆ. ದೇವರು ಸಂಪೂರ್ಣವಾಗಿ (ನಿನ್ನನ್ನು) ಪಡೆದಿರುತ್ತಾನೆ ಮತ್ತು ಆತನು ನಿನ್ನ ಪ್ರಾಣವನ್ನು ನಿನಗೆ ದಯಪಾಲಿಸಿರುತ್ತಾನೆ. ಅಂಥ ಜೀವಿತದಲ್ಲಿ ನೀನಿಲ್ಲವಾದರೆ ನಿನ್ನ ಅವಿಧೇಯತೆಯೋ ಇಲ್ಲವೇ ಸರಳವಾದ ಜೀವಿತದ ನಿರಾಕರಣೆಯೋ - ಎರಡಲ್ಲೊಂದು ಅದಕ್ಕೆ ಕಾರಣವಾಗಿರುತ್ತದೆ.

# ಅನಿಶ್ಚಿತೆಯಲ್ಲಿಯೂ ದೈವಕೃಪೆ

**''ಮುಂದೆ ನಾವು ಏನಾಗುವೆವೋ ಅದು ಇನ್ನು ಪ್ರತ್ಯಕ್ಷವಾಗಲಿಲ್ಲ'' - (1 ಯೋಹಾ - 3:2)**

ನಾವು ಗಣಿತಶಾಸ್ತ್ರದಂತೆ ಲೆಕ್ಕಾಚಾರ ಮಾಡುವ ಸ್ವಾಭಾವಿಕ ಪ್ರವೃತ್ತಿಯುಳ್ಳವರಾಗಿ ರುವುದರಿಂದ, ಖಚಿತವಲ್ಲದ್ದನ್ನು ಕೆಟ್ಟದ್ದು ಎಂದೇ ಪರಿಗಣಿಸುತ್ತೇವೆ. ಲೆಕ್ಕಾಚಾರದಂತೆ ಯಾವುದೋ ಒಂದು ಕೊನೆಯನ್ನು ಮುಟ್ಟಲೇ ಬೇಕೆಂದು ಊಹಿಸುತ್ತೇವೆ, ಆದರೆ ಆತ್ಮೀಕ ಜೀವನದ ಸ್ವಭಾವವು ಹಾಗಿರುವುದಿಲ್ಲ, ಅನಿಶ್ಚಿತತೆ ಯಲ್ಲಿರುವಾಗಲೂ ನಾವು ನಿಶ್ಚಿತರಾಗಿಯೇ ಇರುತ್ತೇವೆ. ಅದರಿಂದಲೇ ನಾವೆಲ್ಲಿಯೂ ನಮ್ಮ ಗೂಡುಗಳನ್ನು ಕಟ್ಟಿಕೊಳ್ಳುವುದಿಲ್ಲ. ಸಾಮಾನ್ಯ ಜ್ಞಾನವು ಹೀಗೆ ಹೇಳುತ್ತದೆ. ''ಅದು ಸರಿ ಒಂದು ವೇಳೆ ನಾನೇ ಅಂಥ ಪರಿಸ್ಥಿತಿಯಲ್ಲಿದ್ದದ್ದೇ ಆದರೆ ......?''. ನಾವೆಂದೂ ಇರದಿದ್ದ ಸ್ಥಿತಿಗಳನ್ನು ನಾವು ಊಹಿಸಿಕೊಳ್ಳ ಲಾಗುವುದಿಲ್ಲ.

ನಿಶ್ಚಿತತೆಯು, ಪ್ರಪಂಚಜ್ಞಾನದ ಬದುಕಿನ ಚಿಹ್ನೆಯಾಗಿದೆ. ಕೃಪಾಭರಿತ ಅನಿಶ್ಚಿತತೆಯು ಆತ್ಮೀಕ ಜೀವಿತದ ಚಿಹ್ನೆಯಾಗಿದೆ. ದೇವರ ಬಗ್ಗೆ ಖಚಿತವಾಗಿದ್ದರೆ ನಮ್ಮ ಜೀವಿತದ ಎಲ್ಲಾ ಆಗು ಹೋಗುವಿಕೆಯಲ್ಲಿ ನಾವು ಅನಿಶ್ಚಿತರಾಗಿರುತ್ತೇವೆ ಮತ್ತು ನಮ್ಮ ಮುಂದಿರುವ ದಿನವು ಏನು ಬರ ಮಾಡುತ್ತದೆಂಬುದು ನಮಗೆ ತಿಳಿದಿಲ್ಲ. ಕೆಲವರು ಸಾಮಾನ್ಯವಾಗಿ ನಿಟ್ಟುಸಿರಿನ ವ್ಯಥೆಯಿಂದ ಈ ರೀತಿ ಹೇಳುತ್ತಾರೆ (ತಮಗಿರುವ ಅನಿಶ್ಚಿತತೆಗಾಗಿ) ಆದರೆ ಉಸಿರುಗಟ್ಟುವಂಥಾ ನಿರೀಕ್ಷೆಯ ವ್ಯಕ್ತಪಡಿಸುವ ಇದಾಗಿರಬೇಕಾಗಿತ್ತು. ಮುಂದಿನ ಹೆಜ್ಜೆಯ ಬಗ್ಗೆ ನಾವು ಅಸ್ಪಷ್ಟವಾಗಿದ್ದೇವೆಯಾದರೂ ದೇವರ ವಿಷಯದಲ್ಲಿ ಪೂರ್ಣ ಸ್ಪಷ್ಟರಾಗಿದ್ದೇವೆ. ಎಷ್ಟು ಬೇಗ ನಾವು ದೇವರಿಗೆ ಒಪ್ಪಿಸಿಕೊಡುತ್ತೇವೆಯೋ ಮತ್ತು ನಮ್ಮ ಸನಿಹ ದಲ್ಲಿರುವ ಕೆಲಸವನ್ನು ನಿಷ್ಠೆಯಿಂದ ಮಾಡುತ್ತೇವೆಯೋ, ಹಾಗೆಯೇ ದೇವರು ನಮ್ಮ ಜೀವಿತವನ್ನು ಆಶ್ಚರ್ಯಗಳಿಂದ ತುಂಬಿಸಿ ಬಿಡುತ್ತಾನೆ. ನಾವು ಯಾವಾಗ ಒಂದು ಸೂತ್ರದ ಪ್ರತಿಪಾದಕ ರಾಗುತ್ತೇವೆಯೋ ಆಗ ನಮ್ಮೊಳಗೆ ಏನೋ ಒಂದು ಮರಣ ಹೊಂದುತ್ತದೆ; ಆತನ ಬಗ್ಗೆ ನಮಗಿರುವ ನಂಬಿಕೆಯನ್ನೇ ನಾವು ನಂಬುತ್ತೇವೆ. ದೇವರನ್ನು ನಂಬುವ ರೀತಿ ಅದಲ್ಲ. ಯೇಸುಕ್ರಿಸ್ತನು ಹೇಳಿದ್ದು ''ನೀವು ತಿರುಗಿಕೊಂಡು ಚಿಕ್ಕ ಮಕ್ಕಳಂತೆ ಆಗದೆ ಹೋದರೆ'' (ಮತ್ತಾಯ 18:3) ಆತ್ಮೀಕ ಜೀವನವು-ಅದು ಚಿಕ್ಕಮಗುವಿನಂತೆ ಸಂಶಯ ರಹಿತ ಜೀವಿತವಾಗಿರುತ್ತದೆ. ಮುಂದಿನ ಹೆಜ್ಜೆಯ ಬಗ್ಗೆ ನಾವು ಅನಿಶ್ಚಿತರಾಗಿದ್ದರೂ, ದೇವರ ಬಗ್ಗೆ ನಿಶ್ಚಿತರಾಗಿದ್ದೇವೆ. ನಾವು ನಮ್ಮ ನಂಬಿಕೆಗಳ ಬಗ್ಗೆ ಮಾತ್ರವೇ ನಿಶ್ಚಿತವಾಗಿದ್ದರೆ ನಾವು ಗಂಭೀರರಾಗಿಬಿಡುವೆವು, ಕಠೋರರಾಗುವೆವು, ಸ್ವನೀತಿ ಪರರಾಗುವೆವು, ರಂದ್ರಾನ್ವೇಷಿ ಗಳಾಗಿ ಬಿಡುವೆವು. ನಮ್ಮ ನಂಬಿಕೆಗಳು ಸರಿಯಾದವುಗಳು ಮತ್ತು ಪರಿಪೂರ್ಣ ವಾದವುಗಳೆಂಬ ಭಾವನೆಯಲ್ಲಿ ನಮ್ಮನ್ನು ನಾವೇ ಮಿತಿಗೊಳಪಡಿಸಿ ಕೊಳ್ಳುವೆವು. ಆದರೆ ನಾವು ದೇವರೊಂದಿಗೆ ಅನ್ಯೋನ್ಯತೆಯಲ್ಲಿದ್ದರೆ, ಆಗ ನಮ್ಮ ಜೀವಿತವು ಆನಂದಮಯವಾದ ಅನಿಶ್ಚಿತೆಯಿಂದ ಕೂಡಿರುತ್ತದೆ ಮತ್ತು ನಿರೀಕ್ಷೆಗಳಿಂದ ತುಂಬಿ ತುಳುಕುವಂಥಾದ್ದೂ ಆಗಿರುತ್ತದೆ.

''ನನ್ನನ್ನು ನಂಬಿರಿ'' ಎಂದು ಸ್ವಾಮಿಯವರು ಹೇಳಿದರು. ಆದರೆ ''ನನ್ನಲ್ಲಿನ ಕೆಲವು ನಿರ್ದಿಷ್ಟ ಸಂಗತಿಗಳನ್ನು ಮಾತ್ರ ನಂಬಿರಿ'' ಎಂದು ಆತನು ಹೇಳಲಿಲ್ಲ. ಎಲ್ಲವನ್ನೂ ಆತನಿಗೊಪ್ಪಿಸಿ ಬಿಡಬೇಕು. ಆಗ ಆತನು ಹೇಗೆ ನಮ್ಮೊಳಗೆ ಪ್ರವೇಶಿಸುವನೆಂಬುದೇ ಒಂದು ಮಹಿಮೆಯುಳ್ಳದ್ದು. ಆದರೆ ಆತನು ಬಂದೇ ಬರುವನು. ಆತನಿಗೆ ನಿಷ್ಠೆಯಿಂದ ಇರಬೇಕು ಅಷ್ಟೇ.

# ಸ್ವಪ್ರೇರಿತ ಪ್ರೇಮ

**''ಪ್ರೀತಿ ಬಹು ತಾಳ್ಮೆಯುಳ್ಳದ್ದು ........ ಪ್ರೀತಿಯು ಎಂದಿಗೂ ಬಿದ್ದು ಹೋಗುವುದಿಲ್ಲ''**
**- (1 ಕೊರಿ - 13:4-8)**

ಪ್ರೀತಿಯು ಪೂರ್ವಾಲೋಚಿತವಾದದ್ದಲ್ಲ. ಅದು ಸ್ವಪ್ರೇರಿತವಾದುದು. ಅದು ಅಸಾಧಾರಣ ರೀತಿಯಲ್ಲಿ ಸ್ಫೋಟಗೊಳ್ಳುತ್ತದೆ. ಪೌಲನು ತಿಳಿಸುವ ಪ್ರೀತಿಯ ವಿಧಗಳಲ್ಲಿ ಕರಾರುವಕ್ಕಾದ ಲೆಕ್ಕಾಚಾರಗಳೇನೂ ಇಲ್ಲ. ನಮ್ಮ ಆಲೋಚನೆಗಳ, ನಮ್ಮ ಕ್ರಿಯೆಗಳ, ಪೂರ್ವ ಚಿಂತನೆ ಮಾಡಿ, 'ಈಗ ನಾನು ಕೆಟ್ಟ ವಿಷಯವನ್ನು ಯೋಚಿಸುವುದಿಲ್ಲ. ಯೇಸುಕ್ರಿಸ್ತನು ಹೇಳಿದ ಎಲ್ಲಾ ಸಂಗತಿಗಳನ್ನು ಈಗ ನಾನು ನಂಬುತ್ತೇನೆ'' ಎಂದು ನೀನು ಹೇಳುವಂತಿಲ್ಲ. ಸ್ವಪ್ರೇರಣೆ ಪ್ರೀತಿಯ ಗುಣಲಕ್ಷಣವಾಗಿದೆ. ಯೇಸುಕ್ರಿಸ್ತನ ಬೋಧನೆಗಳನ್ನು ನಮ್ಮ ಮುಂದೆ ಹರಡಿ ಅದೇ ಪ್ರೀತಿಯ ಸ್ಟ್ಯಾಂಡರ್ಡು ಎಂದು ಅವು ಹೇಳುವುದಿಲ್ಲ. ಆದರೆ ಆತನ ಆತ್ಮವು ನಮ್ಮೊಳಗೆ ದಾರಿಯನ್ನು ಕಂಡುಕೊಂಡಾಗ ನಮಗೆ ಅರಿವಿರದೆ, ಆತನ ಸ್ಟ್ಯಾಂಡರ್ಡನಲ್ಲಿ ನಾವು ಜೀವಿಸುತ್ತೇವೆ ನಾವು ಹಿಂತಿರುಗಿ ನೋಡಿದಾಗ ಒಂದು ನಿರ್ದಿಷ್ಟ ಭಾವೋದ್ವೇಗದ ಬಗ್ಗೆ ನಾವೆಷ್ಟು ಆಸಕ್ತರಾಗಿದ್ದೇವೆಂಬುದು ನಮ್ಮನ್ನು ನಿಜವಾಗಿಯೂ ಚಕಿತಗೊಳಿಸುತ್ತದೆ, ಅದೇ ಅದರಲ್ಲಿರುವ ಸ್ವಪ್ರೇರಿತ ನಿಜಪ್ರೇಮದ ಸಾಕ್ಷಿಯಾಗಿದೆ. ನಮ್ಮಲ್ಲಿರುವ ದೇವರ ಜೀವಿತಕ್ಕಾಗಿ ನಾವು ಮಾಡುವಂಥವುಗಳ ಸ್ವರೂಪವು ಪ್ರೀತಿಯ ರೂಪವು, ಅದರ ಕಾರ್ಯಸಾಧನೆಯ ನಂತರವೇ ಅಂದರೆ ಅದು ಗತಿಸಿದ ನಂತರವೇ ನಮಗರಿವಾಗುತ್ತದೆ.

ಪ್ರೀತಿಯ ಬುಗ್ಗೆಗಳಿರುವುದು ದೇವರಲ್ಲಿ - ನಮ್ಮಲ್ಲಿ ಇಲ್ಲ. ಸಹಜವಾಗಿಯೇ, ನಮ್ಮ ಹೃದಯದಲ್ಲಿ ದೇವರ ಪ್ರೀತಿಯನ್ನು ಕಾಣಲೆಳೆಸುವುದು ನಿಜವಾಗಿಯೂ ಹಾಸ್ಯಾಸ್ಪದ. ಪರಿಶುದ್ಧಾತ್ಮನು ದೇವರ ಪ್ರೀತಿಯನ್ನು ನಮ್ಮ ಹೃದಯಗಳಲ್ಲಿ ಚೆಲ್ಲಿ ಹರಡಿದಾಗ ಮಾತ್ರವೇ ಪ್ರೀತಿ ನಮ್ಮ ಹೃದಯಗಳಲ್ಲಿ ತುಂಬಿರುತ್ತದೆ.

ನಾವು ದೇವರನ್ನು ಎಷ್ಟಾಗಿ ಪ್ರೀತಿಸುತ್ತೇವೆಂಬುದನ್ನು ಸಿದ್ದಮಾಡಿ ತೋರಿಸಲು ಪ್ರಯತ್ನಿಸುವುದೇ ನಾವು ದೇವರನ್ನು ಪ್ರೀತಿಸುತ್ತಲೇ ಇಲ್ಲವೆಂಬುದರ ನಿಜ ಸಂಕೇತವಾಗಿದೆ. ಸಂಪೂರ್ಣ ಸ್ವಪ್ರೇರಿತವಾದ ಪ್ರೀತಿಯೇ ದೇವರಲ್ಲಿ ನಮಗಿರುವ ಪ್ರೀತಿಗೆ ಸಾಕ್ಷಿಯಾಗಿದೆ. ಆ ಪ್ರೀತಿಯು ಸಹಜವಾಗಿ ಉದ್ಭವಿಸುವುದು. ನಾನು ಹಿಂತಿರುಗಿ ನೋಡಿದಾಗ ಕೆಲವು ಕಾರ್ಯಗಳನ್ನು ನಾವು ಮಾಡಿದ್ದೇಕೆ ಎಂದು ವಿವರಿಸಲಾಗದು; ನಮ್ಮೊಳಗಿರುವ ಆತನ ಸ್ವಪ್ರೇರಿತ ಸಹಜ ಪ್ರೇಮಕ್ಕನುಸಾರವಾಗಿ ಅವುಗಳನ್ನು ಮಾಡಿಬಿಟ್ಟಿರುತ್ತೇವೆ. ದೇವರ ಜೀವಿತವು ಹೀಗೆ ಸ್ವಪ್ರೇರಿತವಾಗಿ ಅವಿಷ್ಕರಣಗೊಳ್ಳುತ್ತದೆ. ಯಾಕೆಂದರೆ ಪ್ರೇಮ ಬುಗ್ಗೆಗಳು ಪವಿತ್ರಾತ್ಮನಲ್ಲಿವೆ.

# ಭಾವಾವೇಶಬೇಡ - ವಿವೇಚನೆಬೇಕು

**''ನಾವು ನೋಡುವವರಾಗಿ ನಡೆಯದೆ ನಂಬುವವರಾಗಿಯೇ ನಡೆಯುತ್ತೇವೆ.''   - (2 ಕೊರಿ-5:7)**

ನಮಗೋಸ್ಕರ ದೇವರಿಗಿರುವ ಕಾಳಜಿಯ ಬಗ್ಗೆಸ್ವಲ್ಪ ಕಾಲದವರೆಗೆ ನಾವು ಪೂರ್ಣ ಪ್ರಜ್ಞೆ ಯಿಂದಿರುತ್ತೇವೆ. ಆದರೆ ದೇವರು ತನ್ನ ಕಾರ್ಯ ಕ್ಷೇತ್ರಗಳಲ್ಲಿ ನಮ್ಮನ್ನು ಉಪಯೋಗಿಸಲು ಆರಂಭಿಸಿದಾಗ ಆ ಪ್ರಜ್ಞೆಯನ್ನು ಅಲಕ್ಷಿಸಿ ನಾವು ಕರುಣಾಜನಕ ಮುಖಭಾವವುಳ್ಳವರಾಗಿ ಆ ಕಾರ್ಯಕ್ಷೇತ್ರದಲ್ಲಿ ಸಂಭವಿಸ ಬಹುದಾದ ಹಿಂಸೆ ಮತ್ತು ಪ್ರಯಾಸಗಳನ್ನೇ ಚರ್ಚಿಸುತ್ತೇವೆ. ದೇವರು, ನಮ್ಮನ್ನಿರಿಸಿದ ಕಾರ್ಯಕ್ಷೇತ್ರಗಳಲ್ಲಿ ನಾವು ಅನಗತ್ಯರಂತೆ, ಯಾರೊಬ್ಬರ ಗಮನಕ್ಕೂ ಬಾರದ ರೀತಿಯಲ್ಲಿ ಮರೆಯಲ್ಲಿರುತ್ತಾ ಆ ಕಾರ್ಯವನ್ನು ನಿರ್ವಹಿಸುವಂತೆ, ಆತನು ಅಂಥಾ ಸಮಯದುದ್ದಕ್ಕೂ ಯತ್ನಿಸುತ್ತಿರುತ್ತಾನೆ. ಅವಕಾಶವಿರುವುದಾದರೇ, ಆತ್ಮೀಕವಾಗಿ ತೆರೆಮರೆಯಲ್ಲಿರಲು ಯಾರೂ ಬಯಸುವು ದಿಲ್ಲ ; ದೇವರು ಆಕಾಶವನ್ನೇ ಮುಚ್ಚಿ ಮುದ್ರಿಸಿದರೆ, ಕೆಲಸ ಸಾಧಿಸಲು ನಮಗೆ ಸಾಧ್ಯವಾಗುವುದೇ ? ಆದರೂ ನಮ್ಮಲ್ಲಿ ಅನೇಕರು, ತಮ್ಮ ಸುತ್ತು ಮುತ್ತಲು ದೇವಭಕ್ತರೆನಿಸಿಕೊಂಡವರ ಒಡನಾಟವಿರುವ, ತಮ್ಮ ಸುತ್ತಲೂ ಸ್ವರ್ಣವೃತ್ತಗಳು ಹೊಳೆಯುತ್ತಿ ರುವ ಮತ್ತು ತಮ್ಮೊಳಗಿಂದ ಸ್ಫೂರ್ತಿಚೇತನಗಳು ಉಕ್ಕಿಹರಿದು ಮಿನುಗುತ್ತಿರುವ ಸಂತರು ತಾವಾಗಬೇಕೆಂದು ಬಯಸುತ್ತಿದ್ದಾರೆ. ಆದರೆ ಈ ರೀತಿಯ ದೋಷಯುಕ್ತ ತವಕದಿಂದಿರುವ ವ್ಯಕ್ತಿಯು ಒಳ್ಳೇಯವನಲ್ಲ, ಅವನೊಬ್ಬ ಅಸಹಜ ವ್ಯಕ್ತಿ, ದೈನಂದಿನ ಜೀವನ ಸಾಗಿಸಲು ಅಯೋಗ್ಯನಾದ ವ್ಯಕ್ತಿ; ಒಟ್ಟಾರೆ ಹೇಳುವು ದಾದರೆ ಅವನು ದೇವರ ಹೋಲಿಕೆಗೆ ಸಲ್ಲದ ವ್ಯಕ್ತಿಯಾಗಿರುತ್ತಾನೆ. ಮನುಷ್ಯ ನಾಗಿಯೋ, ಮಹಿಳೆ ಯಾಗಿಯೋ, ನಾವು ಈ  ಲೋಕದಲ್ಲಿದ್ದೇವೆ - ಅಪಕ್ವ ದೇವದೂತರಾಗಿ ಅಲ್ಲ. ಈ ಲೋಕದ ಕಾರ್ಯ ಗಳನ್ನು ನಿರ್ವಹಿಸುವವರಾಗಿಯೂ ಮತ್ತು ಆ ನಿರ್ವಹಣೆಯಲ್ಲಿ ಬಂದೊದಗುವ ಸಂಕ್ಷೋಬೆಗಳನ್ನು ಅನಂತ ಶಕ್ತಿಯಿಂದ ಎದುರಿಸುವವರಾಗಿಯೂ ನಾವು ಈ ಲೋಕದಲ್ಲಿದ್ದೇವೆ. ಯಾಕೆಂದರೆ ನಾವು ಮೇಲಿನಿಂದ ಈ ಲೋಕದೊಳಗೆ ಹುಟ್ಟಿ ಬಂದವರು.

ಸ್ಫೂರ್ತಿದಾಯಕ ಅಪರೂಪದ ಕ್ಷಣಗಳನ್ನು ಜೀವಿತದಲ್ಲಿ ಪುನಃ ಮಂಡಿಸಲು ನಾವು ಪ್ರಯತ್ನಿಸಿದರೆ, ನಮಗೆ ದೇವರು ಬೇಕಾಗಿಲ್ಲವೆನ್ನುವುದರ ಸಂಕೇತವೇ ಅದು. ದೇವರು ನಮ್ಮ ಬಳಿ ಬಂದಿದ್ದರೂ, ನಮ್ಮೊಡನೆ ಮಾತನಾಡಿದರೂ ನಾವಿನ್ನೂ, ಅಂಥ ಶ್ರದ್ಧೆಯಿಂದ ನಂಬಿದ ಆ ಅಪರೂಪದ ಕ್ಷಣ ಗಳನ್ನು ಪೋಷಿಸುತ್ತಾ ಮತ್ತು ಅಂಥಾ ಸ್ಫೂರ್ತಿದಾಯಕ ಕ್ಷಣಗಳನ್ನು ತಿರುಗೊಂದಾವರ್ತಿ ನಮಗೊದಗಿಸೆಂದು ದೇವರನ್ನು ಕಾಡುತ್ತೇವೆ; ದೇವರಾದರೋ ತನ್ನಲ್ಲಿ ನಿಜವಿಶ್ವಾಸವಿಟ್ಟು, ನಾವು ಮುಂದೆ ಸಾಗಬೇಕೆಂದು ಬಯಸುತ್ತಾನೆ. ನಮ್ಮಲ್ಲಿ ಎಷ್ಟು ಜನರು ತಾವು ಇದ್ದ ಸ್ಥಿತಿಯಲ್ಲಿಯೇ  ತಮ್ಮನ್ನು ಬದಿಗಿಟ್ಟು ಹೀಗೆ ಹೇಳುತ್ತಿರುವೆವು-''ದೇವರು ನನಗೆ ಪ್ರತ್ಯಕ್ಷನಾಗದ ಹೊರತು ಮುಂದೇನೂ ಮಾಡಲಾರೆನು,'' ಆತನೆಂದಿಗೂ ಹಾಗೆ ಮಾಡುವುದಿಲ್ಲ; ಯಾವ ದೈವ ಪ್ರೇರಣೆಯೂ ಇಲ್ಲದೆ, ಯಾವುದೇ ಹಠಾತ್ತಾದ ದೈವ ಸ್ಪರ್ಶವಿಲ್ಲದೆ ನಾವು ಎದ್ದು ನಿಲ್ಲಲೇಬೇಕು. ಆಗ ಅನೀರಿಕ್ಷಿತ ಬೆರಗು ಬಂದೆರಗುವುದು. ''ಹೌದೇ! ಈ ಎಲ್ಲಾ ಸಮಯದಲ್ಲಿ  ಆತನು ಅಲ್ಲಿಯೇ ಇದ್ದನಲ್ಲವೇ! ಅದು ನನಗೆ ತಿಳಿಯಲಿಲ್ಲವೇಕೆ !'' ದೈವ ಪ್ರೇರಣೆಯ ಅಪರೂಪದ ಕ್ಷಣಗಳಿಗಾಗಿ ಬದುಕ ಬೇಡ. ಅವು ಅನಿರೀಕ್ಷಿತವಾಗಿ ಬಂದೆರಗುವ ವಿಸ್ಮಯಗಳು. ದೈವೀಕ ಪ್ರೇರಣೆಗಳ ಬೆನ್ನಟ್ಟಿ ಸಾಗುವ ಅಪಾಯದಲ್ಲಿ ನಾವಿಲ್ಲವೆಂದು ದೇವರು ತಿಳಿದಾಗಲೇ ಅಂಥ ವಿಸ್ಮಯ ಸ್ಪರ್ಶಗಳನ್ನು ನಮಗೆ ಅನುಗ್ರಹಿಸುತ್ತಾನೆ. ನಮಗಾದ ದೈವೀಕ ಪ್ರೇರಣೆಯ ಅಪರೂಪದ ಕ್ಷಣಗಳನ್ನು ನಾವು ಎಂದಿಗೂ ಒಂದು ಸ್ಟ್ಯಾಂಡರ್ಡ ಆಗಿ ಮಾಡಿಕೊಳ್ಳಬಾರದು. ನಮ್ಮ ಕಾಯಕವೇ ನಮ್ಮ ಸ್ಟ್ಯಾಂಡರ್ಡ್ (ಮಟ್ಟ)

# ಸಹನೆಯಿಂದ ದರ್ಶನಕ್ಕಾಗಿ ಕಾದಿರು

**''ತಡವಾದರೂ ಅದಕ್ಕೆ ಕಾದಿರು'' -(ಹಬಕ್ಕೂಕ - 2:3)**

ಸಹನೆ ಎಂದರೆ ಉದಾಸೀನತೆಯಲ್ಲ; ಸಹನೆಯು ಎಲ್ಲಾ ಬಗೆಯ ಆಕ್ರಮಣಗಳನ್ನು ಎದುರಿಸಬಲ್ಲ ಘಟ್ಟಿ ಬಂಡೆಗಲ್ಲಿನ ಭಾವನೆಯನ್ನುಂಟು ಮಾಡುತ್ತದೆ. ದೇವರಿಂದುಂಟಾದ ದರ್ಶನವೇ ಸಹನೆಗೆ ಆಧಾರಶಕ್ತಿ. ಅದು ನೈತೀಕ ಪ್ರೇರಣೆಯನ್ನು ನೀಡುತ್ತದೆ. ಮೋಶೆಯು ಎಲ್ಲವನ್ನೂ ಸಹಿಸಿದನು, ಅವನ ಸಹನೆಗೆ ಅವನಿಗಿದ್ದ ಬಾಧ್ಯತೆ - ದೇವರ ಕಾರ್ಯಾರ್ಥವಾದ ಕರ್ತವ್ಯಪ್ರಜ್ಞೆಯ ಆದರ್ಶಗಳು ಕಾರಣವಲ್ಲ, ಆದರೆ ಅವನು ದೇವರ ದರ್ಶನವನ್ನು ಹೊಂದಿದ್ದರಿಂದ. ''ಅವನು ಅದೃಶ್ಯನಾಗಿರುವವನನ್ನು'' ದೃಷ್ಟಿಸುವನೋ ಎಂಬಂತೆ ದೃಢಚಿತ್ತನಾಗಿದ್ದನು. (ಇಬ್ರಿ 11:27) ದೇವರು ಅನುಗ್ರಹಿಸಿದ ದರ್ಶನ ಹೊಂದಿದ ಮನುಷ್ಯನು, ಒಂದು ಕಾರ್ಯದ ಕಾರಣ ಕ್ಕಾಗಲೀ, ಇಲ್ಲವೇ ಒಂದು ನಿರ್ದಿಷ್ಟ ವಿಷಯಕ್ಕಾಗಲೀ ನಿಷ್ಠೆಯಿಂದ ಇರುವುದಿಲ್ಲ; ಅವನು ದೇವರಿಗೆ ಮಾತ್ರ ನಿಷ್ಠೆಯಿಂದಿರುವನು. ದರ್ಶನವು ಯಾವಾಗ ದೇವರಿಂದ ಉಂಟಾಯಿತೆಂಬುದು ನಿನಗೆ ತಿಳಿದಿದೆ, ಯಾಕೆಂದರೆ ಆ ದರ್ಶನದ ಮೂಲಕ ಪ್ರೇರಣೆಯೂ ಚೈತನ್ಯವೂ ನಿನಗೊದಗಿಬಂದಿರುತ್ತವೆ, ಆ ಪ್ರೇರಣೆಯು ಶ್ರೇಷ್ಠವಾಗಿದ್ದು ನಿನಗೆ ಶಕ್ತಿದಾಕವಾಗಿರುತ್ತದೆ ಯಾಕೆಂದರೆ ಅದು ದೇವರಿಂದಲೆ ಬಲಪಡೆದಿರುತ್ತದೆ. ದೇವರು ತನ್ನ ಕಡೆಯಿಂದ ಯಾವ ಮಾತು, ಶಬ್ದವೂ, ಇಲ್ಲದಿರುವ ಶೋಧನಾಕಾಲವನ್ನು, ದಟ್ಟಡವಿಯಲ್ಲಿ ತನ್ನ ಮಗನಿಗೆ ಕೊಟ್ಟಂತೆಯೇ, ಆತ್ಮೀಕ ವಿಷಯದಲ್ಲಿ ಅಂಥಾ ಕಾಲವನ್ನು ನಿನಗೆ ಕೊಟ್ಟಾಗ ಅದನ್ನು ಸಹಿಸಬೇಕು. ಅಗತ್ಯವಿರುವ ಸಹನಾಶಕ್ತಿಯು ಅಲ್ಲಿಯೇ ನಿನಗೊದಗಿ ಬಂದಿರುತ್ತದೆ. ಯಾಕೆಂದರೆ ಅಲ್ಲಿ ದೇವರನ್ನು ನೀನು ನೋಡುವೆ.

''ತಡವಾದರೂ ಅದಕ್ಕೆ ಕಾದಿರು'' ನಾವು ದೇವರ ದರ್ಶನವನ್ನು ಹೊಂದಿರುವುದಕ್ಕೆ ಸಾಕ್ಷಿ ಎಂದರೆ ನಾವು ಗ್ರಹಿಸಿರುವುದಕ್ಕಿಂತಲೂ ಹೆಚ್ಚಿನವುಗಳಿಗಾಗಿ ಆಸಕ್ತಿಯುಳ್ಳವರಾಗಿರುತ್ತೇವೆ. ಆತ್ಮೀಯ ವಿಷಯ ಗಳಲ್ಲಿ ಅಲ್ಪಸಂತೃಪ್ತರಾಗಿರುವುದು ಒಳ್ಳೇಯದಲ್ಲ. ''ಯಹೋವನ ಮಹೋಪಕಾರಗಳಿಗೆ ಬದಲೇನು ಮಾಡಲಿ?'' ಕೀರ್ತನಾಕಾರನು ಹೇಳುತ್ತಾನೆ, ''ರಕ್ಷಣಾ ಪಾತ್ರೆಯನ್ನು ತೆಗೆದುಕೊಂಡು'' (ಕೀರ್ತನೆ 116:12-13). ನಾವಾದರೋ ನಮ್ಮಲ್ಲಿಯೇ ಸಂತೃಪ್ತಿ ಪಡೆಯುವುದು ಉಚಿತ ವೆಂದೆಣಿಸುತ್ತೇವೆ. ''ಈಗ ಅದು ನನಗೆ ಸಿಕ್ಕಿದೆ, ಅದನ್ನು ಹೊಂದಿದ್ದೇನೆ, ನಾನೀಗ ಸಂಪೂರ್ಣವಾಗಿ ಪರಿಶುದ್ಧನಾಗಿದ್ದೇನೆ, ನಾನೀಗ ಎಲ್ಲವನ್ನೂ ಸಹಿಸಬಲ್ಲೆ'' ಎಂಬುವ ಆತ್ಮೀಕ ನೆಮ್ಮದಿಯನ್ನು ನಮ್ಮಷ್ಟಕ್ಕೆ ನಾವೇ ಹೊಂದಿದರೆ, ಕೂಡಲೇ ನಾವು ವಿನಾಶದ ದಾರಿಯಲ್ಲಿರುವೆವು; ನಾವು ಗ್ರಾಹಿಸಿದವು ಗಳಿಗಿಂತಲೂ ಹೆಚ್ಚಿನವುಗಳಿಗಾಗಿ ಆಸಕ್ತಿ ಇರಲೇಬೇಕು. ''ಇಷ್ಟರೊಳಗೆ ನಾನು ಬಿರುದನ್ನು ಪಡಕೊಂಡು ಸಿದ್ದಿಗೆ ಬಂದವನೆಂದು ಹೇಳುವುದಿಲ್ಲ. ...... ಅದಕ್ಕೊಸ್ಕರ ಓಡುತ್ತಾ ಇದ್ದೇನೆ'' (ಫಿಲಿಪ್ಪಿ-3-12) ನಾವು ಯಾವುದನ್ನು ಅನುಭವಿಸಿ ಅರಿತಿರುವೆವೋ ಅವು ಮಾತ್ರ ನಮಗಿದ್ದರೆ, ನಮ್ಮ ಬಳಿ ಏನೂ ಇಲ್ಲ. ದೇವರ ಕೃಪಾದರ್ಶನದ ಪ್ರೇರನೆ ಇದ್ದರೆ, ನಾವು ನಮ್ಮ ಅನುಭವಕ್ಕಿಂತಲೂ ಹೆಚ್ಚಿನದನ್ನು ಹೊಂದಿದ್ದೇವೆ. ಆತ್ಮೀಕ ನೆಮ್ಮದಿ ಯುಂಟು ಮಾಡುವ ಅಪಾಯದ ಬಗ್ಗೆ ಎಚ್ಚರದಿಂದಿರಬೇಕು.

# ಸಜೀವ ಪರಾರ್ಥ ಪ್ರಾರ್ಥನೆ

**''ಸಕಲ ವಿಧವಾದ ಪ್ರಾರ್ಥನೆಯಿಂದಲೂ, ವಿಜ್ಞಾಪನೆಯಿಂದಲೂ ದೇವರನ್ನು ಪ್ರಾರ್ಥಿಸಿರಿ''**
**-(ಎಫೆಸ-6:18)**

ಇತರರಿಗಾಗಿ ನಾವು ಸಲ್ಲಿಸುವ ಪ್ರಾರ್ಥನೆ (ಪರಾರ್ಥ ಪ್ರಾರ್ಥನೆ)ಗಳಲ್ಲಿ ನಾವು ಮುಂದೆ ಸಾಗುತ್ತಿರುವಾಗ, ದೇವರಲ್ಲಿಟ್ಟಿರುವ ನಮ್ಮ ವಿಧೇಯತ್ವವು, ನಾವು ಯೋಚಿಸಿ ರುವುದಕ್ಕಿಂತಲೂ ಹೆಚ್ಚಾದ ಬೆಲೆಯನ್ನು ಜನರು ತೆರುವಂತೆ ಮಾಡುವುದನ್ನು ನಾವು ಕಾಣುತ್ತೇವೆ. ಅಂಥಾ ಸಮಯದಲ್ಲಿರುವ ಅಪಾಯವೆಂದರೆ ನಮ್ಮ ಪ್ರಾರ್ಥನೆಗಳಿಗೆ ಉತ್ತರವಾಗಿ, ದೇವರು ಅವರಿದ್ದ ಹಂತದಿಂದ ಸಂಪೂರ್ಣವಾಗಿ ಬೇರೊಂದು ಹಂತಕ್ಕೆ ಕ್ರಮೇಣವಾಗಿ ಮೇಲಕ್ಕೆ ಎತ್ತುತ್ತಿರುವಾಗ, ನಾವು ಅವರ ಬಗ್ಗೆ ಸಹಾನುಭೂತಿ ಯುಳ್ಳವರಾಗಿ ಅನುಕಂಪದಿಂದ ಪ್ರಾರ್ಥಿಸಲು ಮುಂದಾಗುತ್ತೇವೆ. ಇತರರ ಬಗ್ಗೆ ದೇವರಿಗಿರುವ ಆಸಕ್ತಿಯನ್ನು ಗುರುತಿಸಲು ನಾವು ಹಿಂಜರಿದು, ಅದರ ಬದಲು ನಮ್ಮ ಸಹಾನುಭೂತಿಯನ್ನು ಅವರಿಗೆ ತೋರಿಸಲು ನಾವು ಮುಂದಾದರೆ, ದೇವರೊಂದಿಗೆ ನಮಗಿದ್ದ ಅತ್ಯಮೂಲ್ಯ ಸಾಮಿಪ್ಯವು ಅಗಲಿ ಹೋಗುವುದು; ಅವರಿಗಾಗಿ ದೇವರು ಕಾರ್ಯ ಮಾಡುತ್ತಿರುವ ಮಾರ್ಗ ಮಧ್ಯದಲ್ಲಿ ಅಡ್ಡನಿಂತು ನಾವೂ ಅವರಿಗೆ ಸಹಾನುಭೂತಿ, ಕಳಕಳಿಯನ್ನು ತೋರಿಸುತ್ತೇವೆ. ಆದರೆ ಹೀಗೆ ಮಾಡುವುದು ಉದ್ದೇಶ ಪೂರ್ವಕವಾದ ದೈವನಿಂದನೆಯಾಗಿದೆ.

ದೇವರನ್ನು ನಾವು ಪೂರ್ಣವಾಗಿ ಅರಿತುಕೊಳ್ಳದೆ, ಆತನಲ್ಲಿ ನಂಬಿಕೆಯುಳ್ಳವರಾಗಿರದಿದ್ದರೆ ಇತರರಿಗಾಗಿ ನಾವು ಕಳಕಳಿಯಿಂದ ಬಲವಾಗಿ ಪ್ರಾರ್ಥನೆ ಮಾಡುತ್ತೇವೆಂಬುದು ಅಸಾಧ್ಯ ನಮ್ಮದೇ ಆದ ವ್ಯಕ್ತಿಗತ ಅನುಕಂಪ, ವ್ಯಕ್ತಿಗತ ಪೂರ್ವಗ್ರಹ ಪಕ್ಷಪಾತಗಳೇ ಪರಾರ್ಥ ಪ್ರಾರ್ಥನೆಗಳಿಗೆ ನಮಗೆ ಅತ್ಯಗತ್ಯ ವಾಗಿರುವ ದೇವರ ಸಂಬಂಧವನ್ನು ಹಾಳು ಮಾಡುತ್ತವೆ. ದೇವರೊಂದಿಗೆ ಗುರುತಿಸಿಕೊಳ್ಳುವಿಕೆಯೇ ಪರಾರ್ಥ ಪ್ರಾರ್ಥನೆಯ ಕೀಲಿಕೈಯಾಗಿದೆ ಮತ್ತು ಪರಾರ್ಥ ಪ್ರಾರ್ಥನೆಗಳಲ್ಲಿ ದೇವರೊಂದಿಗೆ ಗುರುತಿಸಲ್ಪ ಡುವಿಕೆಯನ್ನು ನಾವೇನಾದರೂ ನಿಲ್ಲಿಸಿಬಿಟ್ಟಿದ್ದದೇ ಅದಕ್ಕೆ ಕಾರಣ ಇತರರ ಬಗ್ಗೆ ನಮಗಿರುವ ಅನುಕಂಪವೇ ಹೊರತು, ಅವರ ಪಾಪಗಳಲ್ಲ. ಪ್ರಾರ್ಥನೆಗಳಲ್ಲಿ ನಮ್ಮ ಮತ್ತು ದೇವರ ನಡುವೆ ಇರುವ ಸಾಮೀಪ್ಯದಲ್ಲಿ ಪಾಪವು ತಲೆ ಹಾಕುವ ಸಂಭವವಿಲ್ಲ , ಆದರೆ ಸಹಾನುಭೂತಿಯು ಖಂಡಿತವಾಗಿಯೂ ತಲೆ ತೂರಿಸುತ್ತದೆ. ನಮ್ಮ ಬಗ್ಗೆ ನಮಗಿರುವ ಸ್ವಾನುಕಂಪನ ಅಥವಾ ಪರರ ಬಗ್ಗೆ ನಮ್ಮ ಅನುಕಂಪಗಳು, ಈ ಸಂಬಂಧದ ಮಧ್ಯದಲ್ಲಿ ಸೇರಿಕೊಂಡು ನಾವು ಹೀಗೆ ಹೇಳುವಂತೆ ಮಾಡುತ್ತವೆ. ''ಅದು ಹಾಗಾಗಲು ನಾನು ಬಿಡುವುದೇ ಇಲ್ಲ'', ಒಡನೆಯೇ ಅಮೂಲ್ಯವಾದ ದೇವರ ಸಂಪರ್ಕದಿಂದ ನಾವು ಹೊರಗುಳಿಯುತ್ತೇವೆ.

ಬಲವಾದ ಪರಾರ್ಥ ಪ್ರಾರ್ಥನೆಗಳು ನಿನ್ನ ಸ್ವಂತ ''ದುಃಖ ತುಂಬಿದ ಪ್ರಿಯ ಆತ್ಮಕ್ಕಾಗಿ'' ಸಮಯವಾಗಲೀ, ಪ್ರಾರ್ಥಿಸುವ ಒಲವಾಗಲೀ ಇಲ್ಲದಂತೆ ಮಾಡುತ್ತವೆ. ನಿನ್ನ ಸ್ವಚಿಂತನೆಗಳನ್ನು ದೇವರಿಗೆ ನಿವೇದಿಸುವ ಯೋಚನೆಯನ್ನು ಹೊರಗಿಡಲು ನೀನೇನೂ ಮಾಡಬೇಕಾಗಿಲ್ಲ ; ಯಾಕೆಂದರೆ ಹೊರಗಿಡಲು ಅವು ಅಲ್ಲಿ ಇಲ್ಲವೇ ಇಲ್ಲ ; ಇತರರ ಜೀವಿತಗಳಲ್ಲಿ, ದೇವರಿಗಿರುವ ಹಿತಾಸಕ್ತಿಗಳಲ್ಲಿ ನಿನ್ನನ್ನು ನೀನು ಸಂಪೂರ್ಣವಾಗಿಯೂ, ಸಮಗ್ರವಾಗಿಯೂ ಗುರುತಿಸಿಕೊಂಡಿರಬೇಕು. ಆದರೆ ಇತರರ ಬಗ್ಗೆ ನಿಮಗಿರುವ ತಿಳುವಳಿಕೆಯು ಪರಾರ್ಥ ಪ್ರಾರ್ಥನೆಗೆ ದೇವರ ಕರೆಯಾಗಿದೆಯೇ ಹೊರತು, ಪರರಲ್ಲಿ ಲೋಪ ದೋಷಗಳನ್ನು ಹುಡುಕುವದಕ್ಕಲ್ಲ.

# ಪ್ರತಿನಿಧಿಸಲ್ಪಟ್ಟ ಪರಾರ್ಥ ಪ್ರಾರ್ಥನೆ

**''ಹೀಗಿರುವಲ್ಲಿ ಸಹೋದರರೆ ....... ಆತನ ರಕ್ತದ ಮೂಲಕ ...... ದೇವರ ಸಮಕ್ಷಮವನ್ನು ಪ್ರವೇಶಿಸುವುದಕ್ಕೆ ನಮಗೆ ಧೈರ್ಯವುಂಟಾಯಿತು'' -(ಇಬ್ರಿಯ - 10:19-20)**

ಪರರ ಬಗ್ಗೆ ನಮಗಿರುವ ವ್ಯಕ್ತಿಗತ ಅನುಕಂಪವನ್ನು ದೇವರ ಸನ್ನಿಧಿಯಲ್ಲಿ ಪ್ರಸ್ತುತಪಡಿಸಿ, ಅವರಿಗಾಗಿ ನಾವೇನನ್ನು ಬೇಡಿಕೊಳ್ಳುತ್ತೇವೆಯೋ ಅದನ್ನು ದಯಪಾಲಿಸೆಂದು ಒತ್ತಾಯ ಪಡಿಸುವುದೇ ಪರಾರ್ಥ ಪ್ರಾರ್ಥನೆ ಎಂಬುವ ಕಲ್ಪನೆಯ ಬಗ್ಗೆ ಎಚ್ಚರದಿಂದಿರಬೇಕು. ಯೇಸುಸ್ವಾಮಿಯು ನಮ್ಮ ಪಾಪದೊಂದಿಗೆ ತನ್ನನ್ನು ಗುರುತಿಸಿಕೊಂಡು ನಮ್ಮ ಪರವಾಗಿ ತಾನು ಪ್ರತಿನಿಧಿಸಿದ ಒಂದೇ ಕಾರಣದಿಂದ ನಾವು ದೇವರ ಬಳಿಗೆ ಬರುತ್ತೇವೆ. ಆತನ ರಕ್ತದ ಮೂಲಕ ''ದೇವರ ಸಮಕ್ಷಮವನ್ನು ಪ್ರವೇಶಿಸುವದಕ್ಕೆ ನಮಗೆ ಧೈರ್ಯವುಂಟಾಯಿತು''.

ಆತ್ಮೀಕ ಹಠಮಾರಿತನವು ಪರಾರ್ಥ ಪ್ರಾರ್ಥನೆಗೆ ಬಹು ಬಲವಾದ ಅಡೆತಡೆಯಾಗಿದೆ, ಯಾಕೆಂದರೆ ನಮ್ಮಲ್ಲಿ ಮತ್ತು ಇತರರಲ್ಲಿರುವ ಸಂಗತಿಗಳ ಬಗ್ಗೆ ನಮಗಿರುವ ಅನುಕಂಪಭರಿತ ತಿಳುವಳಿಕೆಯ ಮೇಲೆ ಅದು ಆಧಾರಗೊಂಡಿರುವುದರಿಂದ, ಅಂಥಾ ಕೆಲವು ಸಂಗತಿಗಳಿಗಾಗಿ ಪ್ರಾಯಶ್ಚಿತ್ತವು ಅಗತ್ಯ ವಿಲ್ಲವೆಂಬ ಭಾವನೆಯು ನಮ್ಮೊಳಗೆ ಮೂಡಿಬರುತ್ತದೆ. ಪ್ರತಿಯೊಬ್ಬರಲ್ಲಿಯೂ ಉತ್ತಮವೂ, ಸುಗುಣವೂ ಆಗಿರುವ ಕೆಲವು ಸಂಗತಿಗಳಿರುವುವೆಂದೂ ಮತ್ತು ಅವು ಪ್ರಾಯಶ್ಚಿತ್ತದ ತಳಹದಿಯ ಮೇಲೆ ಆಧಾರಗೊಳ್ಳಬೇಕಾಗಿಲ್ಲವೆಂಬ ಭಾವನೆ ನಮಗುಂಟಾಗುತ್ತದೆ. ಇಂಥಾ ಯೋಚನೆಗಳಿಂದ ಹುಟ್ಟುವ ಜಡತೆ, ನಿರಾಸಕ್ತಿಯ ಪ್ರಭಾವದಲ್ಲಿರುವಾಗ ಪರಾರ್ಥ ಪ್ರಾರ್ಥನೆಗಳನ್ನು ಮಾಡಲು ನಮಗಾಗುವುದಿಲ್ಲ. ಇತರರಲ್ಲಿ ದೇವರಿಗಿರುವ ಹಿತಾಸಕ್ತಿಗಳೊಂದಿಗೆ ನಮ್ಮನ್ನು ನಾವು ಗುರುತಿಸಿಕೊಳ್ಳ ದಿರುವುದರಿಂದ ನಾವು ಆತನಲ್ಲಿ ಅಸಮಾಧಾನಗೊಳ್ಳುತ್ತೇವೆ; ನಮ್ಮದೇ ಆದ ಸ್ವಂತ ಕಲ್ಪನೆಗಳ ಆಧಾರದ ಮೇಲೆ ಪರಾರ್ಥ ಪ್ರಾರ್ಥನೆಯನ್ನು ಸಲ್ಲಿಸಲು ನಾವು ಸದಾ ಸಿದ್ಧರಿರುತ್ತೇವೆ ಮತ್ತು ಪರಾರ್ಥ ಪ್ರಾರ್ಥನೆಯು ನಮ್ಮ ಸ್ವಾಭಾವಿಕ ಸಹಾನುಭೂತಿಯನ್ನು ವೈಭವೀಕರಣಗೊಳಿಸುತ್ತದೆ. ಯೇಸುಕ್ರಿಸ್ತನು ಪಾಪದೊಂದಿಗೆ ತನ್ನನ್ನು ಗುರುತಿಸಿ ಕೊಂಡಿರುವುದರಿಂದ ನಮ್ಮ ಸ್ವಾಭಾವಿಕ ಸಹಾನುಭೂತಿಗಳೆಲ್ಲಾ ಅಮೂಲಾಗ್ರಹವಾಗಿ ಬದಲಾಯಿಸ ಲ್ಪಟ್ಟಿರುತ್ತವೆ ಎಂಬುದನ್ನು ನಾವು ತಿಳಿಯಬೇಕು. ಪ್ರತಿನಿಧಿಯ ಪರಾರ್ಥ ಪ್ರಾರ್ಥನೆಯ ಅರ್ಥ ಪರರಿಗಾಗಿ ನಮಗಿರುವ ಸ್ವಾಭಾವಿಕ ಸಹಾನುಭೂತಿಗಳ ಸ್ಥಳದಲ್ಲಿ, ಅವರ ಬಗ್ಗೆ ದೇವರಿಗಿರುವ ಹಿತಾಸಕ್ತಿಗಳನ್ನು ಪೂರ್ಣ ವಿವೇಚನೆಯಿಂದ ಪ್ರತಿಯಾಗಿಡಬೇಕು.

ನಾನೊಬ್ಬ ಹಠಮಾರಿಯೋ ಅಥವಾ ಪ್ರತಿಯಾಗಿಡಲ್ಪಟ್ಟವನೋ? ದೇವರಿಗೆ ನಾನೊಬ್ಬ ಅಚ್ಚು ಮೆಚ್ಚಿನವನೋ ಅಥವಾ ದೇವರೊಂದಿಗಿರುವ ಸಂಬಂಧದಲ್ಲಿ ಪರಿಪೂರ್ಣನೋ? ಅಥವಾ ಅಧ್ಯಾತ್ಮಿಕನೋ? ಸ್ವಮಾರ್ಗಾವಲಂಬಿಯಾಗಲು ನಿರ್ಧರಿಸಿರುವವನೋ? ಇಲ್ಲವೇ ದೇವರೊಂದಿಗೆ ಗುರುತಿಸಿಕೊಳ್ಳಲು ನಿಶ್ಚಯಿಸಿ ರುವವನೋ?

# ಸುವಾರ್ತೆಯ ಅಗಾಧತೆ ಮತ್ತು ನ್ಯಾಯತೀರ್ಪು

## ''ನ್ಯಾಯ ವಿಚಾರಣೆಯ ಸಮಯ ಬಂದದೆ ಆ ವಿಚಾರಣೆಯು ದೇವರ ಮನೆಯಲ್ಲಿಯೇ ಪ್ರಾರಂಭವಾಯಿತಲ್ಲಾ'' - (1 ಪೇತ್ರ 4:17)

ಪಾಪವಿಮೋಚನೆಯು ದೇವರ ಒಂದು ಅಮೋಘ ಚಿಂತನೆ, ಅದು ಮನುಷ್ಯನ ಕಲ್ಪನೆಯಲ್ಲ, ಎಂಬುದನ್ನು ಕ್ರೈಸ್ತ ಸೇವಕನೆಂದೂ ಮರೆಯಬಾರದು; ಆದ ಕಾರಣ ಅದು ಮನುಷ್ಯನ ಗ್ರಹಿಕೆಗೆ ನಿಲುಕಲಾರದಷ್ಟು ಅಳತೆಮೀರಿದ ಅಗಾಧವಾಗಿದೆ. ಮಾನವನ ರಕ್ಷಣೆಯು ದೇವರ ಒಂದು ಹಿರಿದಾದ ಚಿಂತನೆ ಅದೊಂದು ಅನುಭವವಲ್ಲ. ಅನುಭವವು ನಮ್ಮ ಪ್ರಜ್ಞಾಜೀವನದಲ್ಲಿ ನಮ್ಮ ಗ್ರಹಿಕೆಗೆ ಮೀರಿದ ರಕ್ಷಣಾಕಾರ್ಯದ ಅರಿವನ್ನು ಮೂಡಿಸುವ ಒಂದು ದ್ವಾರ. ಅನುಭವ ವನ್ನೆಂದಿಗೂ ಬೋಧಿಸಬೇಡ, ರಕ್ಷಣಾನುಭವದ ಹಿಂದಿರುವ ದೇವರ ಉದಾತ್ತ ಚಿಂತನೆಯನ್ನು ಬೋಧಿಸಬೇಕು. ನಾವು ಬೋಧಿಸುವಾಗ ಮಾನವನು ನರಕದಿಂದ ಹೇಗೆ ರಕ್ಷಿಸಲ್ಪಡುವನು, ಅವನು ಹೇಗೆ ಶುದ್ಧನಾಗಿಯೂ ನೀತಿವಂತನಾಗಿಯೂ ಮಾಡಲ್ಪಡು ವನು ಎಂದು ಘೋಷಿಸದೆ, ದೇವರ ಬಗ್ಗೆ ಶುಭಸಮಾಚಾರವನ್ನು - ವಿವರಿಸಲಸಾಧ್ಯವಾದ ಆತನ ಪ್ರೀತಿಯನ್ನು ನಮ್ಮ ಬೋಧನೆಯ ಮೂಲಕ ಮಾನವರಿಗೆ ತಲುಪಿಸಬೇಕು.

ಯೇಸುಕ್ರಿಸ್ತನ ಬೋಧನೆಗಳಲ್ಲಿ ನ್ಯಾಯತೀರ್ಪಿನ ಅಂಶವನ್ನು ಸದಾ ಪ್ರತಿಪಾದಿಸಲಾಗಿದೆ, - ಅದು ದೇವರ ಪ್ರೀತಿಯ ಸಂಕೇತವಾಗಿದೆ. ದೇವರ ಬಳಿಗೆ ಬರಲು ಕಠಿಣವೆಂಬುವವರಿಗೆ ಸಹಾನುಭೂತಿ ಯನ್ನು ತೋರಬಾರದು; ಅವರ ಸ್ಥಿತಿಗಾಗಿ ದೇವರನ್ನು ದೂಷಿಸಲೂಬಾರದು. ಆ ಕಾಠಿಣ್ಯದ ಕಾರಣ ವನ್ನು ಹುಡುಕುವುದು ನಮ್ಮ ಕೆಲಸವಲ್ಲ, ಆದರೆ ಆ ಕಾಠಿಣ್ಯಕ್ಕೆ ಕಾರಣವಾದ ತಪ್ಪು ಎಲ್ಲಿದೆ ಎಂಬುದನ್ನು ದೇವರ ಆತ್ಮನು ಅವರಿಗೆ ತಿಳಿಸುವಂತಾಗಲು ದೇವರ ಸತ್ಯಾರ್ಥಗಳನ್ನು ಅವರಿಗೆ ಪ್ರತಿಪಾದಿಸ ಬೇಕು. ಪ್ರತಿಯೊಬ್ಬನೂ ತಾನು ನ್ಯಾಯತೀರ್ಪಿಗೆ ಅರ್ಹನು ಎನ್ನುವ ನಿರ್ಧಾರಕ್ಕೆ ಬರುವಂತೆ ಮಾಡುವುದೇ ನಿನ್ನ ಬೋಧನೆಯ ಪ್ರಾಮಾಣಿಕ ಪರೀಕ್ಷೆ. ಸತ್ಯಾರ್ಥವುಳ್ಳ ಬೋಧನೆಯ ಮೂಲಕ ದೇವರ ಆತ್ಮನು ಪ್ರತಿಯೊಬ್ಬನನ್ನೂ, ತನ್ನನ್ನು ತಾನು ಪರಿಶೀಲಿಸಿಕೊಳ್ಳುವಂತೆ ಮಾಡುತ್ತಾನೆ.

ಯೇಸುಸ್ವಾಮಿಯು ನಮಗೆ ಆಜ್ಞೆಯನ್ನು ನೀಡಿ, ಅದನ್ನು ನೆರವೇರಿಸಲು ಬಲವನ್ನು ಒದಗಿಸದೇ ಹೋದರೆ, ಆಗ ಆತನು ಸುಳ್ಳುಗಾರನೆಂದೆನಿಸುವನು; ನಾವು ನಮ್ಮ ಬಲಹೀನತೆಯನ್ನೇ ನಮ್ಮ ವಿಧೇಯತೆಗೆ ಅಡ್ಡಗೋಡೆಯನ್ನಾಗಿ - ವಿಧೇಯನಾಗುವುದನ್ನು ತಪ್ಪಿಸಿಕೊಳ್ಳುವ ನೆಪವಾಗಿ ಮಾಡಿಕೊಂಡರೆ, ಅದರ ಅರ್ಥ- ದೇವರು ನಮಗೆ ಆಜ್ಞೆ ಕೊಡುವಾಗ ಯಾವುದೋ ಒಂದು ಸಂಗತಿ ಯನ್ನು ತನ್ನ ಎಣಿಕೆಯಲ್ಲಿ ತೆಗೆದುಕೊಂಡಿಲ್ಲವೆಂದು ಆತನಿಗೆ ತಿಳಿಸಿ ಹೇಳಿದಂತೆ ಆಗುತ್ತದೆ. ಹೀಗೆ ನಮ್ಮನ್ನು ನಾವು ಸ್ವಾವಲಂಬಿಗಳನ್ನಾಗಿ ಮಾಡಿಕೊಳ್ಳುವ ಎಲ್ಲಾ ವಿಷಯಗಳನ್ನು, ದೇವರ ಶಕ್ತಿಯಿಂದ ನಾಶ ಪಡಿಸಬೇಕು. ನಮ್ಮ ಸಂಪೂರ್ಣ ಸತ್ವಹೀನತೆ ಮತ್ತು ದೇವರ ಮೇಲೆ ನಮಗಿರುವ ಅವಲಂಬನೆ ಗಳನ್ನು ನಾವು ಗುರುತಿಸಿದ ಕ್ಷಣಗಳೇ ದೇವರ ಆತ್ಮನಿಗೆ ತನ್ನ ಶಕ್ತಿ ಪ್ರಭಾವಗಳನ್ನು ನಮ್ಮಲ್ಲಿ ಅಭಿವ್ಯಕ್ತ ಮಾಡುವ, ಸುಸಂದರ್ಭಗಳನ್ನು ಒದಗಿಸುತ್ತವೆ.

# ಯೇಸುವಿನ ಗುಣಮಟ್ಟ ಮತ್ತು ಬಿಡುಗಡೆ

**''ಕ್ರಿಸ್ತನು ನಮ್ಮನ್ನು ಸ್ವತಂತ್ರದಲ್ಲಿರಿಸಬೇಕೆಂದು ನಮಗೆ ಬಿಡುಗಡೆ ಮಾಡಿದನು. ಅದರಲ್ಲಿ ಸ್ಥಿರವಾಗಿ ನಿಲ್ಲಿರಿ'' - (ಗಲಾತ್ಯ 5:1)**

ನಿಜವಾದ ಅಧ್ಯಾತ್ಮಿಕ ವ್ಯಕ್ತಿಯು ನಿಮ್ಮೆಡೆಗೆ ಬಂದು, ''ನೀವು ಇದನ್ನು ನಂಬಿರಿ ಅಥವಾ ಅದನ್ನು ನಂಬಿರಿ'' ಎಂದು ಒತ್ತಾಯ ಪಡಿಸುವುದಿಲ್ಲ; ಆದರೆ ಯೇಸುಸ್ವಾಮಿಯ ಜೀವಿತದ ಮಟ್ಟಕ್ಕೆ ನಿಮ್ಮ ಜೀವಿತವನ್ನು ಸರಿಪಡಿಸಿಕೊಳ್ಳಬೇಕೆಂದು ಅವನು ಒತ್ತಾಯಪಡಿಸುತ್ತಾನೆ. ನಾವು ಸತ್ಯವೇದವನ್ನು ನಂಬಬೇಕೆಂದೂ ಕೇಳಲ್ಪಟ್ಟಿಲ್ಲ, ಆದರೆ ಸತ್ಯವೇದವು ಯಾರನ್ನು ಪ್ರಕಟಪಡಿಸುತ್ತಿದೆಯೋ ಆತನನ್ನು ನಂಬಬೇಕೆಂದು ಕೇಳಲ್ಪಟ್ಟಿರುವೆವು. (ಯೋಹಾ 5:39-40 ನೋಡಿರಿ) ಇತರರ ಆತ್ಮ ಸಾಕ್ಷಿಯ ಸ್ವಾತಂತ್ರ್ಯವನ್ನು ಪ್ರತಿಪಾದಿಸಲು ಕರೆಯಲ್ಪಟ್ಟಿರುವೆವಲ್ಲದೆ ಅವರ ಅಭಿಪ್ರಾಯ ದೃಷ್ಟಿಕೋನಗಳ ಸ್ವಾತಂತ್ರ್ಯವನ್ನಲ್ಲ. ಯೇಸುಕ್ರಿಸ್ತನು ದಯಪಾಲಿಸಿದ ಸ್ವಾತಂತ್ರ್ಯದಲ್ಲಿ, ಮುಕ್ತತೆಯಲ್ಲಿ, ನಾವು ಸ್ವಚ್ಛಂದರಾಗಿ ಜೀವಿಸಿದರೆ, ಅದನ್ನು ಗಮನಿಸಿದ ಇತರರನ್ನೂ ಈ ಸ್ವಾತಂತ್ರ್ಯದೊಳಕ್ಕೆ ತರಬಹುದು. ಸ್ವಾತಂತ್ರವೆಂದರೆ ನಮ್ಮ ಜೀವಿತದಲ್ಲಿ ಯೇಸುಕ್ರಿಸ್ತನ ಆಳ್ವಿಕೆ ಮತ್ತು ಆತನ ನಿಯಂತ್ರಣವನ್ನು ಅರಿತುಕೊಳ್ಳುವಿಕೆ.

ನೀವು ನಿಮ್ಮ ಜೀವನವನ್ನು ಯೇಸುಕ್ರಿಸ್ತನ ಭೂ ಲೋಕ ಜೀವಿತದ ಸ್ಟ್ಯಾಂಡರ್ಡಗಳಿಗೆ (ಮಟ್ಟಕ್ಕೆ) ತಕ್ಕ ರೀತಿಯಲ್ಲಿರುವಂತೆ ಕಾಪಾಡಿಕೊಳ್ಳಿರಿ. ಆತನ ನೋಗಕ್ಕೆ ಮಾತ್ರ ಕೊರಳೊಡ್ಡಿರಿ, ಬೇರೊಂದು ನೊಗವು ಅದೆಷ್ಟೇ ಆಕರ್ಷಣೀಯವಾಗಿದ್ದರೂ ಅದಕ್ಕೆ ಕೊರಳೊಡ್ಡ ಬೇಡಿರಿ. ಯೇಸುಕ್ರಿಸ್ತನು ಹೊರಿಸುವ ನೊಗವನ್ನಲ್ಲದೆ ಬೇರೆ ನೊಗವನ್ನು ಇತರರ ಕೊರಳಿಗೆ ಹೇರುವ ವಿಷಯದಲ್ಲಿ ತುಂಬಾ ಎಚ್ಚರದಿಂದಿರ್ರಿ. ಪ್ರತಿಯೊಬ್ಬರೂ ನಾವು ಮಾಡುವುದನ್ನು ಅನುಕರಣೀಯಂಬಂತೆ ದೃಷ್ಟಿಸದಿದ್ದರೆ, ಅವರೆಲ್ಲರೂ ತಪ್ಪಿತಸ್ಥರೆಂದು ನಾವು ಯೋಚಿಸುವ ಮನೋಭಾವದಿಂದ ನಮ್ಮನ್ನು ತಪ್ಪಿಸಲು ದೇವರಿಗೆ ತುಂಬಾ ಸಮಯ ಬೇಕಾಗುತ್ತದೆ. ಅದು ದೇವರ ದೃಷ್ಠಿಕೋನವಲ್ಲ. ಅಲ್ಲಿರುವುದು ಒಂದೇ ಒಂದು ಏಕಮಾತ್ರ ಸ್ವಾತಂತ್ರ್ಯ - ಯಾವುದು ಯಥಾರ್ಥವು, ಸರಿಯಾದದ್ದು ಆಗಿದೆಯೋ ಅದನ್ನು ಕೈಕೊಳ್ಳುವಂತೆ, ನಮ್ಮನ್ನು ಬಲಪಡಿಸಲು, ನಮ್ಮ ಅಂತರ್ಯದಲ್ಲಿ ಕಾರ್ಯವೆಸಗುವ ಯೇಸುವಿನ ಮುಕ್ತ ಸ್ವಾತಂತ್ರ್ಯ.

ಇತರರ ವಿಷಯದಲ್ಲಿ ನೀವು ಬೇಗನೇ ಅಸಹನೆಗೆ ಒಳಗಾಗ ಬೇಡಿರಿ. ದೇವರು ನಿಮ್ಮನ್ನು ಯಾವ ರೀತಿಯಾಗಿ ಸಹನೆ ಸೌಮ್ಯತೆಯಿಂದ ನಡೆಸಿಕೊಂಡನೆಂಬುದನ್ನು ನೆನಸಿಕೊಳ್ಳಿರಿ ಮತ್ತು ದೈವ ಸತ್ಯವನ್ನು ಹಗುರಗೊಳಿಸಬೇಡಿರಿ. ದೇವರ ಸತ್ಯಾರ್ಥಗಳು ತಮ್ಮ ದಾರಿಯಲ್ಲಿಯೇ ಸಾಗಲು ಬಿಡಿರಿ, ಅದಕ್ಕಾಗಿ ಕ್ಷಮೆ ಯಾಚಿಸಬೇಡಿರಿ. ''ನೀವು ಹೊರಟುಹೋಗಿ ಶಿಷ್ಯರನ್ನಾಗಿ ಮಾಡಿರಿ'' (ಮತ್ತಾಯ 28:19) ಎಂದು ಯೇಸುಸ್ವಾಮಿಯವರು ಹೇಳಿದ್ದಾರೆ, ಆದರೆ ಅವರನ್ನು ''ನಿನ್ನ ಅಭಿಪ್ರಾಯ ವಿಚಾರಗಳಿಗೆ ಶಿಷ್ಯರನ್ನಾಗಿ ಮಾಡಿರಿ'' ಎಂದು ಹೇಳಿರುವುದಿಲ್ಲ.

# ನಿತ್ಯಜೀವಿತದ ಬೆಳವಣಿಗೆ

**''ನಿಮ್ಮಲ್ಲಿ ಯಾವನಾದರೂ ಒಂದು ಬುರುಜನ್ನು ಕಟ್ಟಿಸಬೇಕೆಂದು ಯೋಚಿಸಿದರೆ .... ಅದಕ್ಕೆ ಎಷ್ಟು ಖರ್ಚು ಹಿಡಿದೀತು? ಅದನ್ನು ತೀರಿಸುವುದಕ್ಕೆ ಸಾಕಾಗುವಷ್ಟು ಹಣ ನನ್ನಲ್ಲಿ ಉಂಟೋ ಎಂದು ಲೆಕ್ಕ ಮಾಡುವುದಿಲ್ಲವೇ ?'' - (ಲೂಕ 14:28)**

ನಾವು ಲೆಕ್ಕಿಸುವ ಬೆಲೆಯ ಬಗ್ಗೆ ಇಲ್ಲಿ ಸ್ವಾಮಿಯವರು ಉಲ್ಲೇಖಿಸುತ್ತಿಲ್ಲ. ತಾನು ಲೆಕ್ಕಿಸಿದವುಗಳ ಬೆಲೆಯನ್ನು ಮಾತ್ರ ಇಲ್ಲಿ ಉಲ್ಲೇಖಿಸುತ್ತಿರುವನು. ನಜರೇತಿನಲ್ಲಿ ಕಳೆದ ಮೂವತ್ತು ವರ್ಷಗಳ ಬೆಲೆ, ನಂತರ ಆ ಮೂರು ವರ್ಷಗಳ ಲೋಕ ಪ್ರಿಯತೆ, ಹಗರಣಗಳ ಮತ್ತು ದ್ವೇಷದ ಬೆಲೆ, ಗತ್ಸೇಮನೆಯ ಅಗಾಧ ಯಾತನೆಯ ಬೆಲೆ ಮತ್ತು ಕಲ್ವಾರಿಯಲ್ಲಿ ತನ್ನ ಮೇಲೆರಗಿದ ಆಕ್ರಮಣ-ಯಾವ ಮುಖ್ಯಾಂಶದ ಮೇಲೆ ಕಾಲವೂ, ಅನಂತಕಾಲವೂ ಸುತ್ತುತ್ತಲ್ಲಿದೆಯೋ, ಅದರ ಬೆಲೆ; ಈ ಎಲ್ಲಾ ಬೆಲೆಗಳನ್ನು ಯೇಸುಕ್ರಿಸ್ತನು ಲೆಕ್ಕಿಸಿರುವನು. ಕೊನೆಗೆ ಆತನನ್ನು ನೋಡಿದವರು. ''ಈ ಮನುಷ್ಯನು ಕಟ್ಟುವದಕ್ಕಂತೂ ತೊಡಗಿದನು. ಕೆಲಸ ಪೂರೈಸ ಲಾರದೆ ಹೋದನು''. (ಲೂಕ-14:30) ಎಂದು ಯೇಸು ಕ್ರಿಸ್ತನ ವಿಷಯದಲ್ಲಿ ಹಾಸ್ಯ ಮಾಡಿ ಯಾರೂ ಹೇಳುವುದಿಲ್ಲ.

ನಮ್ಮ ಪ್ರಭುವಾದ ಯೇಸುಸ್ವಾಮಿಯು ತನ್ನ ಶಿಷ್ಯತ್ವಕ್ಕಾಗಿ ವಿಧಿಸಿದ ಷರತ್ತುಗಳನ್ನು ಮೇಲಿನ ಅಧ್ಯಾಯದ 26, 27 ಮತ್ತು 33 ನೇ ವಚನಗಳಲ್ಲಿ ನೋಡಬಹುದು. ಅವುಗಳ ಅರ್ಥವೆಂದರೆ ಯಾವ ಸ್ತ್ರೀ ಪುರುಷರನ್ನು ಶಾಶ್ವತವಾದ ತನ್ನ ಬೃಹತ್ ಕಟ್ಟಡದ ನಿರ್ಮಾಣಕಾರ್ಯದಲ್ಲಿ ತೊಡಗಿಸಿ ಕೊಳ್ಳಲಿರುವನೋ ಅವರಲ್ಲಿ ಅಗತ್ಯವಿದ್ದುದೆಲ್ಲವನ್ನೂ ಆತನು ಮಾಡಿಮುಗಿಸಿದ್ದಾನೆ. ''ಯಾವನಾದರೂ ತನ್ನ ಶಿಲುಬೆಯನ್ನು ಹೊತ್ತುಕೊಂಡು ನನ್ನ ಹಿಂದೆ ಬರದ ಹೊರತು ಅವನು ನನ್ನ ಶಿಷ್ಯನಾಗಿರಲಾರನು'' (ಲೂಕ 14:26) ಇಲ್ಲಿ ಸ್ವಾಮಿಯವರು ಸೂಚಿಸುತ್ತಿರುವುದು - ಯಾವ ಸ್ತ್ರೀ ಮತ್ತು ಪುರುಷ ರನ್ನು ತನ್ನ ಕಟ್ಟಡದ ಕಾರ್ಯದಲ್ಲಿ ಉಪಯೋಗಿಸಿಕೊಳ್ಳುವನೋ ಅವರು ಈ ಲೋಕದ, ತಮ್ಮ ಅತ್ಯಂತ ಆತ್ಮೀಯ ಬಾಂಧವ್ಯಕ್ಕಿಂತಲೂ ಹೆಚ್ಚಾಗಿ ತನ್ನನ್ನು ವ್ಯಕ್ತಿಗತವಾಗಿಯೂ, ಗಾಢಾನುರಾಗದಿಂದಲೂ ನಿಷ್ಠೆಯಿಂದಲೂ, ಪ್ರೀತಿಸುವವರಾಗಿರಬೇಕು ಎಂಬುದೇ. ಷರತ್ತುಗಳು ತುಂಬಾ ಕಟ್ಟುನಿಟ್ಟಾಗಿವೆ; ಆದರೂ ಅವು ಮಹಿಮಾಮಯವಾಗಿದೆ.

ನಾವು ಕಟ್ಟುವುದೆಲ್ಲವೂ ದೇವರಿಂದ ಪರೀಕ್ಷಿಸಲ್ಪಡುತ್ತದೆ. ಯೇಸುಕ್ರಿಸ್ತನ ತಳಪಾಯದ ಮೇಲೆ ನಮ್ಮ ಸ್ವಂತ ಉದ್ದಿಮೆಯನ್ನು ನಾವು ಕಟ್ಟಿಕೊಂಡಿರುವುದನ್ನು ದೇವರ ಪರಿಶೀಲನಾ ಸಮಯ ದಲ್ಲಿ ಉರಿಯುವ ಬೆಂಕಿಯು, ಪತ್ತೆಹಚ್ಚುವುದೋ? (1ಕೊರಿಂಥ 10:15 ನೋಡಿರಿ) ವಿಸ್ಮಯಗೊಳಿಸು ವಂಥಾ ಬೃಹತ್ ಉದ್ಯಮಗಳ ಕಾಲವಿದು. ಇದೇ ಕಾಲದಲ್ಲಿ ದೇವರಿಗಾಗಿ ಕಾರ್ಯನಿರ್ವಹಿಸಲು ಆಸಕ್ತಿಯಿಂದ ನಾವು ಸ್ಪರ್ಧಿಸಿ ಶ್ರಮಿಸುತ್ತೇವೆ. ಎಚ್ಚರವಿರಲಿ, ಅಲ್ಲಿಯೇ ಅಡಗಿದೆ ಉರುಲಿನಕೊಂಡಿ. ನಿಜವೆಂದರೆ, ನಾವೆಂದೂ ದೇವರಿಗಾಗಿ ಕೆಲಸ ಮಾಡಲಾರೆವು. ಯೇಸುಕ್ರಿಸ್ತನು ತನ್ನ ಉದ್ಯಮಕ್ಕಾಗಿ, ತನ್ನ ಕಟ್ಟಡದ ಯೋಜನೆಗಾಗಿ ತಾನಾಗಿ ನಮ್ಮನ್ನು ನಿಯಮಿಸಿ ಕೊಳ್ಳುತ್ತಾನೆ; ಆದರೆ ಆತನು ಯಾರನ್ನು ಎಲ್ಲಿ ನಿಯೋಜಿಸುವನೆಂದು ಕೇಳುವ ಹಕ್ಕು ಯಾರಿಗೂ ಇರುವುದಿಲ್ಲ.

# ನಂಬಿಕೆಯ ಸಹನ ಶೀಲತೆ

**''ನೀನು ನನ್ನ ಸಹನ ವಾಕ್ಯವನ್ನು ಕಾಪಾಡಿದ್ದರಿಂದ ....... '' - (ಪ್ರಕ -3:10)**

ಸಹನ ಶೀಲತೆಯು ಪರಿಶ್ರಮಕ್ಕಿಂತ ಹೆಚ್ಚಿನದು. ಭಕ್ತನ ಜೀವಿತವು ಬಿಲ್ಲುಗಾರನ ಕೈಯಲ್ಲಿರುವ ಬಿಲ್ಲುಬಾಣಗಳಂತೆ ದೇವರ ಕೈಯಲ್ಲಿರುತ್ತದೆ. ಭಕ್ತನು ದೃಷ್ಟಿಸಲಾಗದ ಯಾವುದೋ ಒಂದಕ್ಕೆ ದೇವರು ಗುರಿ ಇಟ್ಟಿರುವನು ಮತ್ತು ಅದಕ್ಕಾಗಿ ಬಾಣವನ್ನು ಹೂಡಿ, ಬಿಲ್ಲನ್ನು ಬೊಗ್ಗಿಸಿ, ದಾರವನ್ನು ಹಿಗ್ಗಿ ಎಳೆಯುತ್ತಾ ಬಿಲ್ಲಿನ ಮೇಲೆ ಒತ್ತಡ ಹೇರುವನು. ಅದರಿಂದ ಭಕ್ತನು ಆಗಾಗ್ಯೆ ''ಇನ್ನು ಸಹಿಸುವುದು ನನ್ನಿಂದಾಗದು'' ಎಂದು ಹೇಳುತ್ತಾನೆ. ಆಗ ದೇವರು ಅವನ ಮೊರೆಗೆ ಲಕ್ಷಗೊಡುವುದಿಲ್ಲ, ತನ್ನ ಉದ್ದೇಶವು ತನ್ನ ದೃಷ್ಟಿಯಲ್ಲಿರುವ ತನಕ ಬಿಲ್ಲು ದಾರಗಳನ್ನು ಹಿಗ್ಗಿ, ಹಿಗ್ಗಿಸಿ ಬಾಣವನ್ನು ತಾನು ಹೇರಿದ ಗುರಿಯತ್ತ ಹಾರಿಸಿಬಿಡುವನು. ದೇವರ ಕೈಗಳಲ್ಲಿರುವಾಗ ನೀನು ದೃಢ ವಿಶ್ವಾಸದಲ್ಲಿರಬೇಕು. ಸದ್ಯದಲ್ಲಿ ಏನನ್ನಾದರೂ ಸಹಿಸಿಕೊಳ್ಳುವ ಅಗತ್ಯತೆ ನಿನಗುಂಟಾಗಿದೆಯೋ ? ಹಾಗಿದ್ದರೆ ಯೇಸುಕ್ರಿಸ್ತನಲ್ಲಿ ನಿನ್ನ ಬಾಂಧವ್ಯವನ್ನು ದೃಢ ನಂಬಿಕೆಯಲ್ಲಿ ನೆಲೆಗೊಳಿಸಿ ಅದನ್ನು ಕಾಯ್ದುಕೊಂಡಿರು, ''ಆತನು ನನ್ನನ್ನು ಕೊಲ್ಲುವನು ಅದಕ್ಕಾಗಿ ಕಾದಿರುತ್ತೇನೆ''- (ಯೋಬ-13:15).

ನಂಬಿಕೆ ಎಂದರೆ ಕರುಣಾಜನಕ ಬಾವೋದ್ವೇಗವಲ್ಲ. ನಂಬಿಕೆಯು ದೇವರು ಪರಿಶುದ್ಧ ಪ್ರೀತಿಸ್ವರೂಪನು ಎಂಬ ಸತ್ಯದ ಮೇಲೆ ರಚಿಸಲ್ಪಟ್ಟಿರುವ ಸತ್ವಶಾಲಿ ಚೈತನ್ಯಭರಿತ ಆತ್ಮ ವಿಶ್ವಾಸವಾಗಿದೆ. ಸದ್ಯದಲ್ಲಿ ಆತನನ್ನು ನೀನು ಕಾಣುತ್ತಿಲ್ಲವಾದರೂ, ಆತನು ಏನು ಮಾಡುತ್ತಿರುವನೆಂಬುದನ್ನು ನೀನು ಗ್ರಹಿಸಲಾರೆಯಾದರೂ, ನೀನು ಆತನನ್ನು ಬಲ್ಲೆ, ದೇವರು ಪವಿತ್ರ ಪ್ರೇಮ ಸ್ವರೂಪಿ ಎಂಬ ನಿತ್ಯ ಸತ್ಯದ ಮೇಲೆ ನಿನ್ನನ್ನು ನೀನು ನೆಲೆಗೊಳಿಸಿಕೊಳ್ಳುವ ಮನಸ್ಥಿತಿಯು ನಿನಗಿರದಿದ್ದರೆ, ಭಗ್ನ ನೌಕೆಯಂತೆ ನಿನ್ನ ಜೀವಿತವು ದುರಂತಕ್ಕೊಳಗಾಗುವುದು. ನಂಬಿಕೆಯೇ ನಿನ್ನ ಜೀವಿತದಲ್ಲಿ ಅತಿ ದೊಡ್ಡ ಪ್ರಯತ್ನ ವಾಗಿದೆ. ಅಂದರೆ ಯಾವ ಪರಿಣಾಮವನ್ನು ಲೆಕ್ಕಿಸದೆ, ಕೇವಲ ದೇವರ ಮೇಲೆ ನೀನಿಟ್ಟಿರುವ ದೃಢ ವಿಶ್ವಾಸದಿಂದ ಯಾವ ಎಚ್ಚರಿಕೆಗಳನ್ನು ಗಮನಿಸದೆ ಮುಂದಕ್ಕೆ ಹಾರುವುದೇ.

ದೇವರು ನಮ್ಮನ್ನು ರಕ್ಷಿಸಲು ತಾನು ಮಾಡಬೇಕಾದುದೆಲ್ಲವನ್ನು ಯೇಸುಕ್ರಿಸ್ತನಲ್ಲಿ ಮಾಡಿ ಮುಗಿಸಿದ್ದಾನೆ, ನಾವೂ ಸಹ ನಮ್ಮದೆಲ್ಲವನ್ನು ತ್ಯಜಿಸಿ ಆತನಲ್ಲಿ ನಂಬಿಕೆ ಇಡುವ ಪ್ರಯತ್ನ ಮಾಡಬೇಕೆಂದು ಆತನು ನಮ್ಮಿಂದ ಬಯಸುತ್ತಾನೆ. ಅಂಥಾ ವಿಶ್ವಾಸವಿನ್ನೂ ಕಾರ್ಯಗತವಾಗದ ಕೆಲವು ಕ್ಷೇತ್ರಗಳು ನಮ್ಮ ಜೀವಿತದಲ್ಲಿವೆ. ದೇವರಿಂದ ಸ್ಪರ್ಷಗೊಳ್ಳದಿರುವ ಕೆಲವು ಕ್ಷೇತ್ರಗಳಿವೆ, ಇಂಥಾ ಕ್ಷೇತ್ರಗಳು ಯೇಸುಕ್ರಿಸ್ತನ ಜೀವಿತದಲ್ಲಿ ಇರಲೇ ಇಲ್ಲ. ನಮ್ಮಲ್ಲಿಯೂ ಸಹ ಇರಲೇಬಾರದು. ''ಯೇಸುಕ್ರಿಸ್ತನನ್ನು ತಿಳಿಯುವುದೇ ನಿತ್ಯ ಜೀವನ'' (ಯೋಹಾನ 17:3). ಎದುರಿಸಲೇಬೇಕಾದ ಪರಿಸ್ಥಿತಿಯನ್ನು ನಿಶ್ಚಂಚಲರಾಗಿ ಎದುರಿಸುವುದೇ ನಿತ್ಯ ಜೀವನದ ಅರ್ಥ. ಇಂಥಾ ದೃಷ್ಟಿಭಾವವು ನಮಗಿದ್ದರೆ, ನಮ್ಮ ಜೀವಿತವು ಭವ್ಯವೂ ರಮಣೀಯವೂ ಆಗಿರುತ್ತದೆ ಮತ್ತು ಎಲ್ಲಾ ಕಾಲದಲ್ಲೂ ಆಶ್ಚರ್ಯಕರವಾದವುಗಳು ಕಾಣುವ ಸುಸಂಧಿಯಿಂದ ಕೂಡಿರುತ್ತದೆ. ದೇವರು ನಮ್ಮನ್ನು ಶಕ್ತಿಯ ಕೇಂದ್ರಕ್ಕೆ ಬರುವಂತೆ ಶಿಕ್ಷಣವನ್ನು ನೀಡುತ್ತಿದ್ದಾನೆ.

# ನಿಲುಕಲಾಗದ ನಿಲುಕು

**''ದೇವ ದರ್ಶಕರಿಲ್ಲದಿರುವಲ್ಲಿ ಜನರು ಅಂಕೆ ಮೀರುವರು'' - (ಜ್ಞಾನೋಕ್ತಿ-29:18)**

ಆದರ್ಶ ಮತ್ತು ದರ್ಶನಗಳ ನಡುವೆ ವ್ಯತ್ಯಾಸವಿದೆ. ಆದರ್ಶಕ್ಕೆ ನೈತಿಕ ಪ್ರೇರಣೆ ಇರುವುದಿಲ್ಲ; ದರ್ಶನಕ್ಕೆ ಅದು ಇರುತ್ತದೆ. ಆದರ್ಶಗಳಿಗೆ ಶರಣಾದ ಜನರು ಏನನ್ನಾದರೂ ಸಾಧಿಸುವುದು ಬಹು ಅಪರೂಪ. ದೈವತ್ವದ ಬಗ್ಗೆ ತನಗಿರುವ ಪರಿಕಲ್ಪನೆಯನ್ನು, ತಾನು ಮಾಡಬೇಕಾದ ಕೆಲಸವನ್ನು ಉದ್ದೇಶ ಪೂರ್ವಕವಾಗಿ ನಿರ್ಲಕ್ಷಿಸಿರುವುದು ನ್ಯಾಯ ಸಮ್ಮತವೆಂದು ಸಮರ್ಥಿಸಿಕೊಳ್ಳಲು ಉಪಯೋಗಿಸಿ ಕೊಳ್ಳಬಹುದಾಗಿದೆ. ದೇವರು, ನ್ಯಾಯಾಧಿಪತಿಯಾದ ದೇವರೂ, ಕರುಣಾಳು ದೇವರು ಆಗಿರುವುದರಿಂದ ಪ್ರತಿಯೊಂದು ಸಂಗತಿಯೂ ಸರಿಯಾಗಿಯೇ ನೆರವೇರುತ್ತದೆ ಎಂದೇ ಯೋನನು ತನ್ನ ಅವಿಧೇಯತೆಯನ್ನು ಸಮರ್ಥಿಸಿಕೊಂಡನು. ''ನೀನು ದಯೆಯೂ ಕನಿಕರವೂ ಧೀರ್ಘಶಾಂತಿಯೂ, ಮಹಾ ಕೃಪೆಯೂ ಉಳ್ಳದೇವರು'' (ಯೋನ 4:2). ದೇವರ ವಿಷಯವಾಗಿ ಸರಿಯಾದ ಪರಿಕಲ್ಪನೆಯು ನನಗಿರಬಹುದು ಮತ್ತು ಆ ಪರಿಕಲ್ಪನೆಯ ನಿಮಿತ್ತದಿಂದಲೇ ನಾನು ಮಾಡಬೇಕಾದ ಕಾಯಕವನ್ನು ಮಾಡದಿರಬಹುದು, ಆದರೆ ಎಲ್ಲಿ ದಿವ್ಯ ದರ್ಶನವಿದೆಯೋ ಅಲ್ಲಿ ನೇರ ನಡವಳಿಕೆಯ ಜೀವಿತವಿದೆ; ಯಾಕೆಂದರೆ ಆ ದರ್ಶನವು ಆ ಜೀವಿತಕ್ಕೆ ನೈತಿಕ ಉತ್ತೇಜನವನ್ನು ನೀಡುತ್ತದೆ. ನಮ್ಮ ಆದರ್ಶಗಳೇ ನಾವು ವಿನಾಶದೆಡೆಗೆ ಸಾಗುವಂತೆ ನಮ್ಮನ್ನು ತಳ್ಳಬಹುದು. ನಿನ್ನ ಆತ್ಮೀಕ ಸ್ಥಿತಿಯನ್ನೆಲ್ಲಾ ಪರಿಶೀಲಿಸಿ ನೋಡಿಕೋ ಮತ್ತು ಅಲ್ಲಿ ಕೇವಲ ಆದರ್ಶಗಳು ಮಾತ್ರ ಇವೆಯೋ ಅಥವಾ ದಿವ್ಯದರ್ಶನಗಳು ಸಹಾ ಇವೆಯೊ ಎಂಬುದನ್ನು ಲೆಕ್ಕಿಸು.

''ಆಹಾ ಮಾನವನ ಸಾಮರ್ಥ್ಯ ಅವನ ಅರಿವಿಗಿಂತ ಹೆಚ್ಚಿನದಿರಬೇಕು. ಇಲ್ಲವೇ ಸ್ವರ್ಗವೇತಕ್ಕೆ ಅಲ್ಲಿದೇ?''

ಎಲ್ಲಿ ದೇವ ದರ್ಶನವಿಲ್ಲವೋ ....... ? ಒಮ್ಮೆ ನಾವುದೇವರನ್ನು ದಿಟ್ಟಿಸುವ ದೃಷ್ಟಿಯನ್ನು ಕಳೆದುಕೊಂಡಾಗ ನಾವು ದುಡುಕಲಾರಂಭಿಸುತ್ತೇವೆ. ಅಂದರೆ ಕೆಲವೊಂದು ಪರಿಣಾಮಗಳನ್ನು ಲೆಕ್ಕಿಸುವುದಿಲ್ಲ. ತಪ್ಪಾದುವುಗಳೆಂದು ನಮಗೆ ಗೊತ್ತಿರುವ ಕೆಲವು ನಡುವಳಿಕೆಗಳ ಬಗ್ಗೆ ಕೆಲವು ಹದ್ದುಬದ್ದುಗಳನ್ನು ಕಳಚಿಬಿಡುತ್ತೇವೆ. ಪ್ರಾರ್ಥಿಸುವದನ್ನು ತ್ಯಜಿಸುತ್ತೇವೆ ಮತ್ತು ಜೀವಿತದ ಚಿಕ್ಕಪುಟ್ಟಸಂಗತಿಗಳಲ್ಲಿರುವ ದೈವ ದರ್ಶನಗಳನ್ನು ಕಡೆಗೆಣಿಸಿ ಕಿತ್ತೆಸೆಯುತ್ತೇವೆ. ನಮ್ಮ ಸ್ವಯಂ ಪ್ರೇರಣೆಯಂತೆ ಕೆಲಸ ಮಾಡಲು ಪ್ರಾರಂಭಿಸುತ್ತೇವೆ. ದೇವರು ಮಧ್ಯ ಪ್ರವೇಶಿಸಬೇಕೆಂಬುದನ್ನು ನಿರೀಕ್ಷಿಸುವ ಬದಲು, ನಮ್ಮ ಹಸ್ತಗಳಲ್ಲಿರುವದನ್ನೇ ನಾವು ತಿನ್ನುತ್ತಾ, ನಮ್ಮ ಸ್ವಯಂ ಪ್ರೇರಣೆಯಂತೆ ಕಾರ್ಯಗಳನ್ನೆಸಗಿದರೆ, ಆಗ ನಾವು ಕೆಳಕ್ಕೆ ಬೀಳುವ ದಾರಿಯಲ್ಲಿರುತ್ತೇವೆ ಮತ್ತು ದೈವದರ್ಶನವನ್ನು ಕಳೆದುಕೊಂಡಿರುತ್ತೇವೆ. ಸದ್ಯದ ನಮ್ಮ ವರ್ತನೆಗಳು ನಾವು ಕಾಣುತ್ತಿರುವ ದೇವರ ದರ್ಶನಗಳಿಂದ ಹೊರಹೊಮ್ಮಿದವುಗಳಾಗಿವೆಯೇ ? ಹಿಂದೆಂದೂ ಮಾಡಲಾರ ದಂತವುಗಳಿಗಿಂತಲೂ ಮಹತ್ವವಾದವುಗಳನ್ನು ದೇವರು ಮಾಡಬೇಕೆಂದು ನಾವು ನಿರೀಕ್ಷಿಸುತ್ತಿರುವೆವೋ? ನಮ್ಮ ಆತ್ಮೀಕ ನೋಟದಲ್ಲಿ ನಾವೀನ್ಯತೆ ಹಾಗೂ ಚೈತನ್ಯ ತುಂಬಿಕೊಂಡಿರುವುದೋ?

# ಮೊದಲ ಹೆಜ್ಜೆಯನ್ನು ಇಡಿರಿ

**''ನಿಮಗಿರುವ ನಂಬಿಕೆಗೆ ಸದ್ಗುಣವನ್ನು ........ ಕೂಡಿಸಿರಿ'' - (2 ಪೇತ್ರ - 1:4)**

''ಕೂಡಿಸಿರಿ'' ಎಂದರೆ ನಾವು ಮಾಡಬೇಕಾದ್ದು ಏನೋ ಇದೆ ಎಂದು ಅರ್ಥ. ದೇವರು ಮಾಡುವುದನ್ನು ಮಾಡಲು ನಮಗಾಗುವುದಿಲ್ಲ ಹಾಗೂ ನಾವು ಮಾಡಬೇಕಾದುದನ್ನು ದೇವರು ಮಾಡುವುದಿಲ್ಲ ವೆಂಬುದನ್ನು ಮರೆತು ಬಿಡುವ ಅಪಾಯವಿದ್ದೇ ಇರುತ್ತದೆ. ನಮ್ಮನ್ನು ನಾವು ಪಾಪದಿಂದ ರಕ್ಷಿಸಿಕೊಳ್ಳಲಾರೆವು ಮತ್ತು ನಮ್ಮನ್ನು ನಾವು ಶುದ್ಧೀಕರಿಸಿಕೊಳ್ಳಲಾರೆವು, ಅದನ್ನು ದೇವರು ಮಾಡುತ್ತಾನೆ; ಆದರೆ ದೇವರು ಒಳ್ಳೆಯ ಅಭ್ಯಾಸಗಳನ್ನು ಮತ್ತು ರೂಢಿಗಳನ್ನು ನಮಗೆ ಕಲಿಸಿ ಕೊಡುವುದಿಲ್ಲ, ಸಚ್ಚಾರಿತ್ರ್ಯವನ್ನು ದಯಪಾಲಿಸುವುದಿಲ್ಲ ಮತ್ತು ಯೋಗ್ಯವಾದ ಮಾರ್ಗದಲ್ಲಿ ನಾವು ನಡೆಯುವಂತೆ ಮಾಡುವುದಿಲ್ಲ. ಅವೆಲ್ಲವುಗಳನ್ನು ನಮ್ಮಷ್ಟಕ್ಕೆ ನಾವೇ ಸಾಧಿಸಿಕೊಳ್ಳಬೇಕಾಗಿದೆ, ದೇವರು ನಮ್ಮೊಳಗೆ ಮಾಡಿದ ರಕ್ಷಣಾ ಕಾರ್ಯವನ್ನು ನಾವು ಸಾಧಿಸಿಕೊಳ್ಳಬೇಕು (ಫಿಲಿ 2:12). ''ಕೂಡಿಸಿರಿ'' ಎಂದರೆ ಜೀವನದಲ್ಲಿ ಆ ರಕ್ಷಣಾ ಕಾರ್ಯದ ಫಲಗಳನ್ನು ಸಾಧಿಸುವ ಅಭ್ಯಾಸದಲ್ಲಿ, ತೊಡಗಿರಿ ಎಂದು ಅರ್ಥ. ಪ್ರಾರಂಭದ ಹಂತಗಳಲ್ಲಿ ಇದು ಕಷ್ಟಕರವಾಗಿ ತೋರುವುದು. ಈ ದಿಶೆಯಲ್ಲಿ ಮೊದಲ ಹೆಜ್ಜೆಯನ್ನು ಇಡುವುದೇ ಸಾಧನೆಯ ಪ್ರಾರಂಭ, ಹಾಗೆ ಆ ದಾರಿಯಲ್ಲಿ ಹೆಜ್ಜೆಗಳನ್ನಿಡುತ್ತಾ ಮುಂದೆ ಸಾಗಲು ನಿನಗೆ ನೀನೇ ನಿರ್ದೇಶನವನ್ನೀಯುವಿಕೆಯೂ ಸಹಾ ಆಗಿದೆ.

ನೀನು ಸಾಗಬೇಕಾದ ಮಾರ್ಗವು ನಿನಗೆ ಸ್ಪಷ್ಟವಾಗಿ ತಿಳಿದಿದ್ದರೂ ಮಾರ್ಗದರ್ಶನ್ನರಸುವ ನಿನ್ನ ಪ್ರವೃತ್ತಿಯ ಬಗ್ಗೆ ಎಚ್ಚರದಿಂದಿರಬೇಕು. ಮೊದಲ ಹೆಜ್ಜೆಯನ್ನಿಡಲು ಮುಂದಾಗು, ಯುಕ್ತಾಯುಕ್ತತೆಯ ಅನಿಶ್ಚಿಯತೆಯನ್ನು ನಿಲ್ಲಿಸು ಮತ್ತು ಪ್ರಥಮ ಹೆಜ್ಜೆಯನ್ನು ಊರಿಬಿಡು. ದೇವರು ನಿನ್ನೊಂದಿಗೆ ಮಾತನಾಡುವಾಗ ದೃಢ ಮನಸ್ಸಿನಿಂದ ಗಮನವಿಟ್ಟು ಕೇಳಿಸಿಕೊಳ್ಳಬೇಕು ಮತ್ತು ಕೂಡಲೇ ನಂಬಿಕೆಯಿಂದ ಆತನು ಹೇಳಿದ್ದನ್ನು ಸಾಧಿಸಲು ಕಾರ್ಯೋನ್ಮುಖನಾಗಬೇಕು, ನಿನ್ನ ನಿರ್ಧಾರಗಳನ್ನು ಮರುಪರಿಶೀಲನೆ ಮಾಡಲೇಬಾರದು. ದೇವರು ನಿನಗೆ ಏನಾದರೂ ಮಾಡಲು ಹೇಳಿದಾಗ ನೀನು ಹಿಂದೆ ಮುಂದೆ ನೋಡಿದರೆ ನೀನು ಎಚ್ಚರಗೇಡಿಯಾಗುವುದಲ್ಲದೆ ನೀನು ನೆಲೆ ನಿಂತ ಕೃಪೆಯನ್ನು ಕಂಟಕಕ್ಕೆ ಗುರಿಮಾಡಿ ಬಿಡುವೆ. ಮೊದಲ ಹೆಜ್ಜೆಯನ್ನಿಡಲು ಮುಂದಾಗು, ನಿನ್ನಷ್ಟಕ್ಕೆ ನೀನೇ ಸಾಧಿಸಲುಪಕ್ರಮಿಸು; ಆತ್ಮ ಸ್ಥೈರ್ಯ ದಿಂದ ಅಡಿಯನ್ನೆತ್ತಿ ಮೊದಲ ಹೆಜ್ಜೆಯನ್ನು ಊರು, ಹಿಂತಿರುಗಿ ಹೋಗಲು ಅಸಾಧ್ಯವಾಗಿರುವ ಮೊದಲ ಹೆಜ್ಜೆಯನ್ನಿಟ್ಟು ಮುಂದೆಸಾಗು. ನೀನು ದಾಟಿಬಂದ ಸೇತುವೆಗಳನ್ನು ನಿನ್ನ ಬೆನ್ನಹಿಂದೆ ಅಗ್ನಿಗೆ ಆಹುತಿ ಮಾಡಿಬಿಡು. ''ಆ ಪತ್ರವನ್ನು ಕೂಡಲೇ ಬರೆದುಮುಗಿಸುವೆನು; ಆ ಸಾಲವನ್ನು ನಾನು ಹಿಂತಿರುಗಿಸಿಯೇ ಬಿಡುವೆನು'' ಈ ಸಂಗತಿಗಳನ್ನು ಅನಿವಾರ್ಯವಾಗಿ ಮಾಡಿಬಿಡಬೇಕು. ದೇವರು ಹೇಳುವುದನ್ನೆಲ್ಲಾ ಕಿವಿಗೊಟ್ಟು ಆಲಿಸುವ ಅಭ್ಯಾಸವನ್ನು ಬೆಳಸಿಕೊಳ್ಳಬೇಕು.

ಪ್ರತಿಯೊಂದು ವಿಷಯದಲ್ಲಿಯೂ ದೇವರು ಹೇಳಿರುವುದನ್ನೆಲ್ಲಾ ಕಂಡುಕೊಳ್ಳುವ ರೂಢಿಯನ್ನು ಬೆಳೆಸಿಕೊಂಡು ಅದಕ್ಕೆ ವಿಧೇಯರಾಗಬೇಕು. ಸಂಕಷ್ಟಗಳುಂಟಾದಾಗ ಸಹಜ ಪ್ರೇರೇಪಣೆಯಿಂದಲೇ ದೇವರ ಕಡೆಗೆ ತಿರುಗುತ್ತೇವೆ. ಆಗ ಇಂಥಾ ರೂಢಿಯು ನಮ್ಮಲ್ಲಿ ಪೂರ್ಣವಾಗಿ ರೂಪುಹೊಂದಿದೆ ಎಂದು ನಮಗೆ ತಿಳಿಯುತ್ತದೆ. ನಾವಿರುವ ಸ್ಥಳದಲ್ಲಿಯೇ ಮೊದಲ ಹೆಜ್ಜೆಯನ್ನೂರಬೇಕು – ನಾವು ಇರದಿರುವ ಸ್ಥಳದಲ್ಲಿ ಅಲ್ಲ.

# ಒಬ್ಬರನ್ನೊಬ್ಬರು ಪ್ರೀತಿಸಿರಿ

**''ಸಹೋದರ ಸ್ನೇಹಕ್ಕೆ ಪ್ರೀತಿಯನ್ನು ಕೂಡಿಸಿರಿ'' - (2 ಪೇತ್ರ - 1:7)**

ಪ್ರೀತಿ ಎಂಬುದು, ನಮ್ಮಲ್ಲಿ ಅನೇಕರಿಗೆ ಇನ್ನೂ ಅಸ್ಪಷ್ಟವಾಗಿಯೇ ಇದೆ. ಪ್ರೀತಿಯನ್ನು ಕುರಿತು ಮಾತನಾಡುವಾಗ ಪ್ರೀತಿಯೆಂದರೇನೆಂಬುದು ನಮಗೆ ತಿಳಿದಿರುವು ದಿಲ್ಲ. ಒಬ್ಬನನ್ನೇ - ಬೇರೆ ಯಾರನ್ನೂ ಅಲ್ಲದೆ - ಒಬ್ಬನನ್ನೇ ಸರ್ವಶ್ರೇಷ್ಠನೆಂದಾಗಿ ಆರಿಸಿಕೊಳ್ಳುವುದೇ ಪ್ರೀತಿ ಮತ್ತು ಅಂಥ ಆಯ್ಕೆಯು ತನಗಾಗಿ ಮಾತ್ರ ಎಂದು ಯೇಸುಕ್ರಿಸ್ತನು ಕೇಳುತ್ತಾನೆ. (ಲೂಕ 14:26 ನೋಡಿರಿ) ''ಪರಿಶುದ್ಧಾತ್ಮನ ಮೂಲಕ ದೇವರ ಪ್ರೀತಿಯು ಧಾರಾಳವಾಗಿ ನಮ್ಮ ಹೃದಯಗಳಲ್ಲಿ ಚಲ್ಲಲ್ಪಟ್ಟಾಗ,'' (ರೊಮಾ 5:5 ನೋಡಿರಿ) ಆಗ ನಾವು ಪೇತ್ರನು, 2 ಪೇತ್ರ 1ನೇ ವಚನದಲ್ಲಿ ಹೇಳಿರುವ ಸಂಗತಿಗಳನ್ನು ನಮ್ಮ ಜೀವಿತದಲ್ಲಿ ಅನುಷ್ಠಾನಕ್ಕೆ ತರಬೇಕು.

ದೇವರು ಮಾಡುವ ಪ್ರಥಮ ಕಾರ್ಯವೆಂದರೆ, ನನ್ನಲ್ಲಿರುವ ನಟನೆ ಮತ್ತು ಕಪಟ ಧಾರ್ಮಿಕತೆಯ ಸೋಗನ್ನು ಹೊಡೆದುರುಳಿಸಿ ಬಿಡುವುದು. ದೇವರು ನನ್ನನ್ನು ಪ್ರೀತಿಸುತ್ತಿ ರುವುದು ನಾನು ಪ್ರೀತಿಗೆ ಯೋಗ್ಯನೆಂಬ ಕಾರಣಕ್ಕಾಗಿ ಅಲ್ಲ, ಪ್ರೀತಿ ಮಾಡುವುದೇ ಆತನ ಸಹಜ ಸ್ವಭಾವ. ಆದುದರಿಂದ - ''ಈಗ ಅದೇ ಪ್ರೀತಿಯನ್ನು ನೀನು ಇತರರಿಗೂ ತೋರಿಸು ಎಂದು ದೇವರು ಹೇಳುತ್ತಿರುವನು. ನಾನು ನಿಮ್ಮನ್ನು ಪ್ರೀತಿಸಿದ ಮೇರೆಗೆ ನೀವೂ ಒಬ್ಬರನ್ನೊಬ್ಬರು ಪ್ರೀತಿಸಬೇಕೆಂಬದೇ ನಾನು ಕೊಡುವ ಆಜ್ಞೆ ಯಾಗಿದೆ'' (ಯೋಹಾನ 15:12) . ''ನೀನು ಗೌರವಿಸಲಾರದ ಅನೇಕರನ್ನು ನಾನು ನಿನ್ನ ಬಳಿಗೆ ಕರೆ ತರುತ್ತೇನೆ. ನಾನು ಹೇಗೆ ನನ್ನ ಪ್ರೀತಿಯನ್ನು ನಿನಗೆ ತೋರಿಸಿರುವೆನೋ ಹಾಗೆಯೇ ನಿನ್ನ ಪ್ರೀತಿಯನ್ನು ಅವರಿಗೆ ತೋರಿಸಬೇಕು''. ಆದರೆ ನೆನಪಿರಲಿ ತುದಿಗಾಲಮೇಲೆ ಅದನ್ನು ಮುಟ್ಟಲಾಗದು, ಅಂದರೆ ದಿನಬೆಳಗಾಗು ವಷ್ಟರಲ್ಲಿ ಇದನ್ನು ಸಾಧಿಸಲು ಸಾಧ್ಯವಾಗುವುದಿಲ್ಲ. ಸತತವಾದ ಪ್ರಯತ್ನವೇಬೇಕು. ನಮ್ಮಲ್ಲನೇಕರು ಇದನ್ನು ಪ್ರಯತ್ನಿಸಿದರಾದರೂ ಬೇಗನೇ ದಣಿದು ಹೋಗಿದ್ದಾರೆ.

''ಯಾವನಾದರೂ ನಾಶವಾಗುವುದರಲ್ಲಿ ಆತನು ಇಷ್ಟಪಡದೆ ...... ನಮ್ಮ ವಿಷಯದಲ್ಲಿ ದೀರ್ಘಶಾಂತಿಯುಳ್ಳವ ನಾಗಿದ್ದಾನೆ.'' (2 ಪೇತ್ರ 3:9) ನನ್ನ ಅಂತರಂಗವನ್ನು ಪರಿಶೋಧಿಸಿ ದೇವರು ನನ್ನಲ್ಲಿ ಏನೇನು ಮಾಡಿರುವನೆಂದು ಅರಿಯುವಾ. ನನ್ನ ಎಲ್ಲಾ ಪಾಪವನ್ನು, ನನ್ನ ಕ್ಷುದ್ರತೆಯನ್ನು, ನನ್ನ ಸ್ವಾರ್ಥತೆಯನ್ನು ಮತ್ತು ನನ್ನ ದುಷ್ಟತನವನ್ನು, ಕಡೆಗೆಣಿಸಿ, ದೇವರು ನನ್ನನ್ನು ಅನಂತವಾಗಿ (ನಿರಂತರವಾಗಿ) ಪ್ರೀತಿಸಿದ್ದಾನೆನ್ನುವ ಪ್ರಜ್ಞೆಯೇ ನಾನು ಸಹಾ ಇತರರನ್ನು ಅದೇ ರೀತಿಯಲ್ಲಿ ಪ್ರೀತಿಸುವಂತೆ ಪ್ರೇರೇಪಿಸಿ ಈ ಲೋಕದೊಳಗೆ ನನ್ನನ್ನು ಕಳುಹಿಸಿಕೊಡುತ್ತದೆ. ನನ್ನ ಮೇಲಿರುವ ದೇವರ ಪ್ರೀತಿಯು ಎಂದಿಗೂ ತೀರಿ ಹೋಗುವಂಥಾದಲ್ಲ ಮತ್ತು ದೇವರ ಪ್ರೀತಿಯ ಆಧಾರ ಬಂಡೆಯ ಮೇಲೆ ನಾನು ನೆಲೆಗೊಂಡು ಇತರರನ್ನು ಪ್ರೀತಿಸಲೇಬೇಕು. ನಾನು ಅಸಮಾಧಾನಗೊಂಡ ತಕ್ಷಣವೇ ದೈವಕೃಪಾ ಬೆಳವಣಿಗೆಯು ನಿಂತು ಹೋಗುತ್ತದೆ. 'ವಿಲಕ್ಷಣಗಳಿಂದ ಕೂಡಿದ ವಿಪರೀತ ವ್ಯಕ್ತಿಯೊಡನೆ ಬಾಳಬೇಕಾಗಿರುವುದರಿಂದ ನಾನು ಅಸಮಾಧಾನ ಗೊಳ್ಳುತ್ತೇನೆ.' ಆದರೆ ಯೋಚಿಸು; ದೇವರಿಗೆ ನಾನೆಷ್ಟು ಅಹಿತನೂ, ಬಹಿಷ್ಕೃತನೂ, ಆಗಿದ್ದೆನಲ್ಲವೇ ! ಯೇಸು ಸ್ವಾಮಿಯೊಂದಿಗೆ ನಿಕಟವಾಗಿ ಗುರುತಿಸಲ್ಪಟ್ಟು ಆತನ ಪ್ರೀತಿಯ ಮಧುರ ಜೀವಧಾರೆಗಳು ಸದಾ ನನ್ನೊಳಗಿಂದ ಹರಿಯುವಂತಾಗಲು ನಾನು ಸಿದ್ಧನಿರುವೆನೋ? ಸಹಜ ಪ್ರೇಮವಾಗಲೀ ದೈವೀಕ ಪ್ರೀತಿ ಯಾಗಲೀ ನಿರಂತರ ಸಾಧನೆಯಿಂದ ಮಾತ್ರ ನಮ್ಮಲ್ಲಿ ಉಳಿಯುತ್ತದೆ. ಪ್ರೀತಿಯು ಸ್ವಪ್ರೇರಿತವಾದದ್ದು, ಇದನ್ನು ಶಿಸ್ತು ಸದಾಚಾರಗಳಿಂದ ಪೋಷಿಸಿ ಸಂರಕ್ಷಿಸಬೇಕು.

# ರೂಢಿಗಳೇ ಇಲ್ಲದಿರುವ ಅಭ್ಯಾಸ

**''ಇವು ನಮ್ಮಲ್ಲಿದ್ದು ಹೆಚ್ಚುತ್ತಾ ಬಂದರೆ ನಮ್ಮ ಕರ್ತನಾದ ಯೇಸುಕ್ರಿಸ್ತನ ಸಂಬಂಧವಾದ ಪರಿಜ್ಞಾನವನ್ನು ಹೊಂದುವ ವಿಷಯದಲ್ಲಿ ನಿಮ್ಮನ್ನು ಆಲಸ್ಯಗಾರರೂ, ನಿಷ್ಫಲರೂ ಆಗದಂತೆ ಮಾಡುತ್ತವೆ.''-(2ಪೇತ್ರ-1:8)**

ಪ್ರಾರಂಭದಲ್ಲಿ ನಾವು ಒಂದು ರೂಢಿಯನ್ನು ಬೆಳಸಿಕೊಳ್ಳಲಾರಂಭಿಸಿದರೆ ಅದರ ಬಗ್ಗೆ ಪ್ರಜ್ಞೆಯುಳ್ಳವರಾಗುತ್ತೇವೆ. ಕೆಲವೊಂದು ವೇಳೆಯಲ್ಲಿ ನಾವು ಸಜ್ಜನರೂ ತಾಳ್ಮೆಯುಳ್ಳವರೂ, ದೈವೀ ಗುಣಗಳುಳ್ಳವರೂ ಆಗುತ್ತಿರುವೆವೆಂಬ ಪ್ರಜ್ಞೆ, ನಮ್ಮೊಳಗೆ ಉದ್ಭವಿಸುತ್ತದೆ. ಇಂಥಾ ಪ್ರಜ್ಞೆಯು, ಆತ್ಮೀಕ ಬೆಳವಣಿಗೆಯಾಗುತ್ತಿದ್ದಂತೆಯೇ, ಗತಿಸಿಹೋಗುವ ಒಂದು ಹಂತ ಮಾತ್ರ. ಆ ಹಂತದಲ್ಲಿಯೇ ನಾವು ನಿಂತು ಬಿಟ್ಟರೆ, ಆಧ್ಯಾತ್ಮಿಕ ಅಹಂಕಾರಿಗಳಾಗುತ್ತೇವೆ. ದೈವಿಕ ರೂಢಿಗಳನ್ನು ನಾವು ಎಷ್ಟರ ಮಟ್ಟಿಗೆ ಅನುಸ್ಠಾನಗೊಳಿಸಬೇಕೆಂದರೆ, ಅವು ನಮ್ಮ ಜಾಗೃತ ಪ್ರಜ್ಞೆಯ ಅರಿವಿಗೇ ಬರದಿರುವಷ್ಟು ಹಾಸು ಹೊಕ್ಕಾಗುವಂತೆ ಮಾಡಿ, ಅವು ನಮ್ಮ ಜೀವಿತದಲ್ಲಿ ಸ್ವಪ್ರೇರಿತವಾಗಿ ಕಂಡುಬರುವಂತೆ ಅವುಗಳನ್ನು ನಮ್ಮ ಸ್ವಾಮಿಯ ಜೀವಿತದಲ್ಲಿ ಮುಳುಗಿಸಿ ಬಿಡುವುದೇ ಯೋಗ್ಯವಾಗಿದೆ. ಕೆಲವು ಗುಣಗಳನ್ನು ನಾವಿನ್ನೂ ನಮ್ಮ ಜೀವಿತಕ್ಕೆ ಕೂಡಿಸಬೇಕಾಗಿರು ವುದರಿಂದ ನಮ್ಮ ಆತ್ಮೀಕ ಜೀವಿತವು ಸತತವಾಗಿ, ನಮ್ಮನ್ನು ನಾವು ಆತ್ಮಾವಲೋಕನ ಮಾಡಿಕೊಳ್ಳುವಂತೆ ಮಾಡುತ್ತದೆ. ಒಟ್ಟಾರೆ ಅಂತಿಮವಾಗಿ ದೇವರೊಡನಿರ ಬೇಕಾದ ನಮ್ಮ ಸಂಬಂಧವು ತುಂಬಾ ಯಥಾರ್ಥತೆಯಿಂದ ಕೂಡಿರಬೇಕು.

ನಿನ್ನ ದೇವರೂ ಸಹಾ ನಿನ್ನ ಕ್ರೈಸ್ತ ಬಾಳುವೆಯ ಪುಟ್ಟರೂಢಿಯಾಗಿರಬಹುದು, ಸೂಕ್ತ ಸಮಯ ದಲ್ಲಿ ಪ್ರಾರ್ಥಿಸುವುದು ಇಲ್ಲವೇ ನಿಗದಿತ ಸಮಯದಲ್ಲಿ ಸತ್ಯವೇದವನ್ನೋದುವುದು ಒಂದು ರೂಢಿಯಾಗಿರ ಬಹುದು. ರೂಢಿಗಳು ಏನನ್ನು ಸೂಚಿಸುವವೋ ಅವುಗಳನ್ನು ಬದಗಿಟ್ಟು, ರೂಢಿಗಳನ್ನೇ ಆರಾಧಿಸ ಲಾರಂಬಿಸಿದರೆ, ದೇವರು ಅಂಥಾ ಸಮಯಗಳನ್ನು ಅಸ್ತವ್ಯಸ್ಥಗೊಳಿಸುತ್ತಾನೆ. ''ಈಗ ನಾನು ಪ್ರಾರ್ಥನೆ ಗಳಲ್ಲಿರುವೆನು, ಈಗ ಅದು ಸಾಧ್ಯವಿಲ್ಲ. ಈ ಸಮಯವು ನಾನು ದೇವರೊಂದಿಗೆ ಕಳೆಯುವ ಕಾಲವಾಗಿದೆ'' - ಇಲ್ಲ, ಅದು ನಿನ್ನ ರೂಢಿಗಳೊಂದಿಗೆ ಕಳೆಯುವ ಸಮಯ; ನಿನಗೊಂದು ಗುಣ ಸ್ವಭಾವದ ಕೊರತೆಯಿದೆ, ಲೋಪವೆಲ್ಲಿದೆ ಎಂಬುದನ್ನು ಗುರುತಿಸು, ಅನಂತರ ಆ ಗುಣಸ್ವಭಾವವನ್ನು ರೂಢಿಸಿಕೊಂಡು ನಿನ್ನ ಜೀವಿತಕ್ಕೆ ಅದನ್ನು 'ಕೂಡಿಸು'ವ ಸುಸಂಧಿಗಾಗಿ ಕಾಯುತ್ತಾ ಇರಬೇಕು.

ಪ್ರೀತಿ ಎಂದರೆ ಅಲ್ಲಿ ಯಾವುದೇ ರೂಢಿಯು ವಿಶಿಷ್ಟವಾಗಿ ಕಂಗೊಳಿಸುವುದಿಲ್ಲ. ರೂಢಿ ಗಳನ್ನು ನಿನಗರಿವಿಲ್ಲದೆ, ನೀನೇ ಅವುಗಳನ್ನು ನಿನ್ನ ಜೀವಿತದಲ್ಲಿ ವ್ಯಕ್ತಪಡಿಸುತ್ತಿರುವಷ್ಟರ ಮಟ್ಟಿಗೆ ನಿನ್ನ ಜೀವಿತದಲ್ಲಿ ಅವು ಹಾಸುಹೊಕ್ಕಗಿಬಿಟ್ಟಿವೆ. ಜೀವಿತದ ಪರಿಶುದ್ಧತೆಯ ಬಗ್ಗೆ ನೀನು ಪ್ರಜ್ಞಾಪೂರ್ವಕವಾಗಿ ಎಚ್ಚರದಿಂದಿದ್ದರೆ ನೀನು ಊಹಿಸಿದ ಕೆಲವು ಕಾರ್ಯಗಳನ್ನು, ಕೈಕೊಳ್ಳಲಾಗದಂತೆ ನಿನ್ನ ಮೇಲೆ ನೀನು, ಕೆಲವು ಪರಿಮಿತಿಗಳನ್ನು - ಯಾವ ಪರಿಮಿತಿಗಳನ್ನು ದೇವರು ಹೇರಿರುವುದಿಲ್ಲವೊ, ಅವುಗಳನ್ನು ಹೇರಿ ಕೊಳ್ಳುವೆ. ಕೆಲವು ಸಂಬಂಧಗಳ ವಿಷಯದಲ್ಲಿ ನೀನು ಯಥಾರ್ಥತೆಯಿಂದಿರಲಾರದೆ ದೂರವಿರ ಬೇಕಾಗುತ್ತದೆ; ಹಾಗಿದ್ದರೆ, ನಿನ್ನ ಜೀವಿತಕ್ಕೆ ಇನ್ನೂ ಏನನ್ನೋ ಕೂಡಿಸ ಬೇಕಾಗಿದೆ. ಒಂದೇ ಒಂದು ಅಲೌಕಿಕ ಜೀವನ, ಅದು ಯೇಸುಸ್ವಾಮಿಯು ಜೀವಿಸಿದ ಜೀವಿತ; ಆತನು ಎಲ್ಲಿದ್ದರೂ ದೇವರೊಂದಿಗೆ ಯಥಾರ್ಥತೆಯಿಂದ ಇದ್ದನು. ದೇವರೊಡನೆ ನಾವು ಯಥಾರ್ಥರು, ನಿರಾಂತಕರೂ, ಆಗದೇ ಇರುವಂಥ ಕ್ಷೇತ್ರಗಳು ನಮ್ಮಲ್ಲಿ ಇವೆಯೋ?

# ಒಳ್ಳೆಯ ಮನಃಸಾಕ್ಷಿಯ ರೂಢಿ

**'' ದೇವರ ವಿಷಯದಲ್ಲಿಯೂ ಮನುಷ್ಯರ ವಿಷಯದಲ್ಲಿಯೂ ನಾನು ನಿರ್ದೋಷಿ'' - (ಅ.ಕೃ. 24:16)**

ನಮ್ಮಲ್ಲಿರುವ ದೇವರ ಮಗನ ಜೀವಿತಕ್ಕಾಗಿಯೇ, ದೇವರು ಆಜ್ಞಾವಿಧಿಗಳನ್ನು ನಮಗೆ ದಯಪಾಲಿಸಿರುತ್ತಾನೆ ಮತ್ತು ಈ ಕಾರಣದಿಂದಲೇ ಅವುಗಳು ದೈವಕುಮಾರನು ರೂಪುಗೊಂಡಿ ರುವ ನಮ್ಮ ಮಾನವ ಸ್ವಭಾವಕ್ಕೆ ಈ ವಿಧಿನಿಯಮಗಳು ಕಠಿಣವಾಗಿ ಕಾಣುತ್ತವೆಯಾದರೂ ಅವುಗಳಿಗೆ ವಿಧೇಯ ರಾಗಲು ನಾವು ಆರಂಭಿಸಿದ ಕೂಡಲೇ ಆವು ಸರಳವಾಗಿ ಬಿಡುತ್ತವೆ.

ಮನಃಸಾಕ್ಷಿ, ಅದು ನಮ್ಮೊಳಗಿರುವ ಸಾಮರ್ಥ್ಯ, ನಾನು ಯಾವುದನ್ನು ಪರಮ ಶ್ರೇಷ್ಠವೆಂದು ತಿಳಿದಿರುವೆನೋ ಅದಕ್ಕೆ, ತನ್ನಷ್ಟಕ್ಕೆ ತಾನೇ ಹೊಂದಿಕೊಳ್ಳುತ್ತದೆ ಮತ್ತು ನಾನು ತಿಳಿದಿರುವ ಆ ಮಹಾಶ್ರೇಷ್ಠವು ನಾನೇನು ಮಾಡಬೇಕೆಂದು ಬಯಸುತ್ತದೆಯೋ ಅದನ್ನು ಮಾಡಲು ಮನಸ್ಸಾ ಕ್ಷಿಯು ನನಗೆ ತಿಳಿಸುತ್ತದೆ. ಅದು ನನ್ನ ಆತ್ಮದ ಕಣ್ಣು ಆಗಿದೆ, ಅದು ದೇವರ ಕಡೆಗೆ, ಇಲ್ಲವೇ ತಾನು ಯಾವುದನ್ನು ಉನ್ನತವೂ ಎಂದು ತಿಳಿದಿದೆಯೋ, ಅದರ ಕಡೆಗೆ ದೃಷ್ಟಿಸುತ್ತದೆ, ಆದುದರಿಂದ ಆತ್ಮ ಸಾಕ್ಷಿಯು ವಿವಿಧ ಜನರಲ್ಲಿ ವಿವಿಧ ಬಗೆಯಾಗಿ ಗುರುತಿಸಲ್ಪಡುವುದು. ದೇವರನ್ನು ನಾನು ಸಾವಧಾನವಾಗಿ, ದೃಢವಾಗಿ ಮುಖಾಮುಖಿ ಯಾಗಿ ದೃಷ್ಟಿಸುವ ರೂಢಿಯಲ್ಲಿದ್ದರೆ, ಆಗ ನನ್ನ ಮನಃ ಸಾಕ್ಷಿಯು ದೈವನಿಯಮಗಳನ್ನು ನನ್ನ ಮುಂದಿರಿಸಿ, ನಾನೇನು ಮಾಡಬೇಕೆಂಬುದನ್ನು ನನಗೆ ಸೂಚಿಸುತ್ತದೆ. ಆದರೆ ಇಲ್ಲಿರುವ ಮುಖ್ಯಾಂಶ ವೆಂದರೆ, ಅಂಥಾ ಸೂಚನೆಗಳಿಗೆ ನಾನು ವಿಧೇಯನಾಗುವೆನೋ ? ಅಪರಾಧವಿಲ್ಲದ ಬಾಳುವೆಯನ್ನು ನಾನು ಬಾಳಬೇಕಾದರೆ, ನನ್ನ ಆತ್ಮ ಸಾಕ್ಷಿಯನ್ನು ಬಹು ಸೂಕ್ಷ್ಮ ಸಂವೇದಿಯಾಗಿರಿಸಿಕೊಳ್ಳುವ ಪ್ರಯತ್ನವನ್ನು ನಾನು ಮಾಡಬೇಕು. ನನ್ನೊಳಗಿರುವ ದೇವಕುಮಾರ ನೊಡನೆ ಸಂಪೂರ್ಣ ಸಹಭಾಗಿತ್ವ ಮತ್ತು ಸಂವೇದನೆಯಿಂದ ನಾನು ಜೀವಿಸಬೇಕು. ಆಗ ಪ್ರತಿಯೊಂದು ಸಮಯ ಸಂದರ್ಭಗಳಲ್ಲಿ ನನ್ನ ಆತ್ಮಶಕ್ತಿಯು ನವ ಚೈತನ್ಯವನ್ನು ಪಡೆದು ಕೊಳ್ಳುತ್ತದೆ ಮತ್ತು ''ದೇವರ ಚಿತ್ತಕ್ಕನುಸಾರವಾದದ್ದು ಅಂದರೆ ಉತ್ತಮವಾದದ್ದೂ, ಮೆಚ್ಚಿಕೆಯಾದದ್ದೂ ದೋಷವಿಲ್ಲದ್ದೂ ಯಾವುದೆಂದು ವಿವೇಚಿಸಿ ತಿಳುಕೊಳ್ಳುವಿರಿ''. (ರೋಮಾ 12:2) ಎಂಬುದನ್ನು ಕೂಡಲೇ ನಾನು ಮನಗಾಣುತ್ತೇನೆ.

ಎಳ್ಳಷ್ಟಾದರೂ ಸಂದೇಹವಿರದಂತೆ ದೇವರು ಪ್ರತಿಯೊಂದು ಸಂಗತಿಗಳನ್ನು ತಿಳಿಸಿಕೊಡುತ್ತಾನೆ. ನಾನೇನು ಮಾಡಬೇಕೆಂಬುದನ್ನು ನಾನು ಗ್ರಹಿಸುವಂತೆ ಪವಿತ್ರಾತ್ಮನ ಲಘುವಾದ, ಧ್ವನಿಯನ್ನು ಕೇಳಿಸಿ ಕೊಳ್ಳುವಷ್ಟು ನನ್ನ ಕಿವಿಗಳು ಸೂಕ್ಷ್ಮವಾಗಿಯೋ? ''ದೇವರ ಪವಿತ್ರಾತ್ಮನನ್ನು ದುಃಖಪಡಿಸಬೇಡಿರಿ'' (ಎಫೆಸ.-4:20) ಸಿಡಿಲಿನಂಥಾ ಶಬ್ದದಿಂದ ಮಾತಾಡುವುದಿಲ್ಲ; ಆತನ ದ್ವನಿಯು ಎಷ್ಟು ಮೃದುವಾಗಿದೆ ಎಂದರೆ ಅದನ್ನು ಬಹು ಸುಲಭವಾಗಿ ನಾವು ಉಪೇಕ್ಷಿಸಬಹುದಾಗಿದೆ. ನಮ್ಮ ಆತ್ಮ ಸಾಕ್ಷಿಯನ್ನು ಸೂಕ್ಷ್ಮ ಸಂವೇದಿಯಾಗಿರಿಸಿಕೊಳ್ಳುವ ಏಕೈಕ ಮಾರ್ಗವೆಂದರೆ, ನಮ್ಮ ಅಂತರಂಗವನ್ನು ದೇವರಿಗಾಗಿ ಸದಾ ತೆರೆದಿಡುವ ಅಭ್ಯಾಸವನ್ನು ರೂಢಿಸಿಕೊಳ್ಳಬೇಕು. ವಾದವಿವಾದವು ಆರಂಭವಾದ ತಕ್ಷಣವೇ ಅದನ್ನು ನಿಲ್ಲಿಸಿ ಬಿಡು. ''ನಾನೇಕೆ ಇದನ್ನು ಮಾಡಬಾರದು?'' - ನೀನು ತಪ್ಪಾದ ಮಾರ್ಗದಲ್ಲಿರುವಿ; ಆತ್ಮ ಸಾಕ್ಷಿಯು ನುಡಿಯುತ್ತಿರುವಾಗ ಅಲ್ಲಿ ವಾದವಿವಾದಗಳು ಅಸಾಧ್ಯ. ದೇವರೊಂದಿಗೆ ನಿನ್ನ ಆತ್ಮಸಾಕ್ಷಿಯು ಅಸ್ಪಷ್ಟವಾದ ಒಂದು ಸಂಗತಿಗೆ ಅನುವು ಮಾಡಿಕೊಟ್ಟರೇ ಅದರಿಂದಾಗುವ ವಿನಾಶಕ್ಕೆ, ನೀನೇ ಹೊಣೆ. ಅದನ್ನು ಕೂಡಲೇ ನಿಲ್ಲಿಸಿಬಿಡು. ಯಾವುದೇ ಸಂದರ್ಭದಲ್ಲಿ, ಏನಾದರೂ ಇರಲಿ, ಬಿಡಲಿ, ನಿನ್ನ ಆತ್ಮ ಸಾಕ್ಷಿಯು ಸ್ಪಷ್ಟವಾಗಿರು ವಂತೆ ಕಾಯ್ದುಕೊ.

# ಹಿತವೆನಿಸದವುಗಳಲ್ಲಿ ಸುಖಿಸುವ ರೂಢಿ

**''ಯೇಸುವಿನ ಜೀವವು ನಮ್ಮ ಮರ್ತ್ಯಶರೀರದಲ್ಲಿ ಉಂಟೆಂದು ತೋರಿ ಬರುವುದಕ್ಕಾಗಿ''**
**- (2ಕೊರಿಂಥ - 4:11)**

ದೇವರ ಕೃಪೆಯು ನನ್ನಲ್ಲಿ ಏನು ಮಾಡಿದೆ ಎಂಬುದನ್ನು ಎತ್ತಿ ತೋರಿಸುವ ರೂಢಿಗಳನ್ನು, ನಾವು ಬೆಳಸಿಕೊಳ್ಳಬೇಕು. ನಾವು ನರಕದಿಂದ ರಕ್ಷಿಸಲ್ಪಟ್ಟಿರುವೆವು ಎಂಬುದು ಪ್ರಶ್ನೆಯಲ್ಲ; ದೇವರ ಮಗನ ಜೀವಿತ 'ವನ್ನು ನಮ್ಮ ಮರ್ತ್ಯಶರೀರಗಳಲ್ಲಿ ಕಂಡುಬರುವುದಕ್ಕಾಗಿ ರಕ್ಷಿಸಲ್ಪಟ್ಟಿದ್ದೇವೆ. ನಮ್ಮ ಮರ್ತ್ಯಶರೀರಗಳಲ್ಲಿ ದೇವರ ಮಗನ ಜೀವಿತವು ಕಾಣಬರುತ್ತಿದೆಯೋ ಇಲ್ಲವೋ ಎಂಬುದನ್ನು, ನಮಗೆ ಅಪ್ರಿಯ ವಾದ, ಸಂಗತಿಗಳೇ ಹೊರಗೆತ್ತಿ ತೋರಿಸುತ್ತವೆ. ನನ್ನ ಜೀವಿತವು ದೇವರ ಮಗನ ಜೀವಿತದ ಮಧುರ ಸ್ವಭಾವವನ್ನು ಎತ್ತಿತೋರಿಸುತ್ತಿದೆಯೋ ಅಥವಾ ಆತನಿಲ್ಲದ ನನ್ನ ಜೀವನವು, 'ನನ್ನ ಸ್ವಯಂ'ದ ಕೆರಳುವಿಕೆಯನ್ನು ಪ್ರಕಟ ಪಡಿಸುತ್ತಿರುವುದೋ? ನನಗೆ ಅಪ್ರಿಯವಾದ ಸಂಗತಿಗಳಲ್ಲಿಯೂ ನಾನು ಸುಖಿಸುವಂತೆ ನನ್ನನ್ನು ಸಮರ್ಥ ಗೊಳಿಸಬಲ್ಲ ಒಂದೇ ಒಂದು ವಿಷಯವೆಂದರೆ ದೇವರ ಮಗನ ಜೀವಿತವು ನನ್ನಲ್ಲಿ ಕಾಣುವಂತೆ ಅನುವು ಮಾಡಿಕೊಡುವ ನನ್ನ ತೀವ್ರಾಸಕ್ತಿಯೇ. ಒಂದು ವಿಷಯವು ಅದು ನನಗೆ ಎಷ್ಟೇ ಅಪ್ರಿಯವಾಗಿರಲಿ - ''ಹೇ ಪ್ರಭುವೆ, ಈ ಒಂದು ವಿಷಯದಲ್ಲಿ ನಾನು ನಿನಗೆ ನಿನ್ನ ಚಿತ್ತಾನುಸಾರ ವಿಧೇಯನಾಗುವುದರಲ್ಲಿ ನಾನು ಆನಂದಿಸುತ್ತೇನೆ'' ಎಂದು ನಾನು ಹೇಳಬೇಕು, ಕೂಡಲೇ ದೇವರ ಮಗನು ನನ್ನ ಜೀವಿತದಲ್ಲಿ ರಭಸದಿಂದ ನುಗ್ಗಿ ಬಂದು, ನನ್ನ ಜೀವಿತದ ಕೇಂದ್ರಕ್ಕೆ ಧಾವಿಸುವನು, ಆಗ ನನ್ನ ಜೀವಿತದಲ್ಲಿ ಆತನನ್ನು ಮಹಿಮೆ ಪಡಿಸುವಂಥವುಗಳು ಕಂಡುಬರುತ್ತದೆ.

ಈ ವಿಷಯದಲ್ಲಿ ತರ್ಕಗಳಿರಬಾರದು. ಬೆಳಕಿಗೆ ವಿಧೇಯನಾದ ಕ್ಷಣದಲ್ಲಿಯೇ ದೇವ ಕುಮಾರನು, ನಿನ್ನ ಪ್ರತಿಕೂಲ ಪರಿಸ್ಥಿತಿಗಳಲ್ಲಿ ನಿನ್ನ ಮೂಲಕ ಬೆಳಗುತ್ತಾನೆ. ಆದರೆ ನೀನು ಇದನ್ನು ತರ್ಕಿಸುವು ದಾದರೆ, ಬೆಳಕನ್ನು ಕೊಟ್ಟ ದೇವರ ಆತ್ಮನನ್ನು ದುಃಖ ಪಡಿಸುವಿ (ಎಫೆ 4:30) ದೇವರ ಮಗನ ಜೀವಿತವು ನಿನ್ನಲ್ಲಿ ಬೆಳಗಲು ಯೋಗ್ಯವಾಗಿರುವಂತೆ ನಿನ್ನ ಜೀವಿತವನ್ನು ಕಾಪಾಡಿಕೊಳ್ಳಬೇಕು. ಆದರೆ ನೀನು ಸ್ವಾನುಕಂಪನಕ್ಕೆ ಅನುವು ಮಾಡಿಕೊಟ್ಟಿರುವೆಯಾದರೆ, ದೇವರ ಮಗನ ಜೀವಿತವು ನಿನ್ನಲ್ಲಿ ಬೆಳಗಲು ನೀನಿನ್ನೂ ಸದೃಢನಾಗಿರುವುದಿಲ್ಲ. ನಮಗೊದಗುವ ಸಮಯ ಸಂದರ್ಭಗಳೇ ನಮ್ಮ ಜೀವಿತದಲ್ಲಿ ದೇವರ ಮಗನೆಷ್ಟು ಅದ್ಭುತ ಪರಿಪೂರ್ಣನೂ, ಅಸಾಧಾರಣ ಪರಿಶುದ್ಧನೂ, ಎಂಬುದನ್ನು ತೋರ್ಪಡಿಸುತ್ತವೆ. ದೇವರಕುಮಾರನು ನಮ್ಮಲ್ಲಿ ರೂಪುಗೊಳ್ಳುವ ಹೊಸ ಮಾರ್ಗದ ಅನ್ವೇಷಣೆಯು, ಚೈತನ್ಯಭರಿತ ಸಡಗರದ ಹೃದಯಕಂಪನವನ್ನುಂಟು ಮಾಡುತ್ತದೆ. ಅಪ್ರಿಯ ವಾದವುಗಳನ್ನೂ, ಹಿತವಲ್ಲದವುಗಳನ್ನೂ ನಾವೇ ಆಯ್ಕೆ ಮಾಡಿಕೊಳ್ಳುವುದು ಒಂದು ಸಂಗತಿಯಾದರೇ, ನಮ್ಮ ಜೀವಿತದಲ್ಲಿ ಪರಾತ್ಪರನಾದ ದೇವರೇ ನಿಭಾಯಿಸುತ್ತಿರುವ ಅಪ್ರಿಯ ವಿಷಯಗಳಲ್ಲಿ ನಾವು ಸೇರಿಕೊಳ್ಳುವುದು ಮತ್ತೊಂದು ಸಂಗತಿಯಾಗಿದೆ. ದೇವರು ನಿನ್ನನ್ನು ಅಪ್ರಿಯವಾದವುಗಳಲ್ಲಿ, ಸದ್ಯಕ್ಕೆ ಇರಿಸಿರುವನಾದರೆ, ಆತನು ''ನಿಮ್ಮ ಪ್ರತಿಯೊಂದು ಕೊರತೆಯನ್ನು ನೀಗಿಸುವನು'' (ಫಿಲಿಪ್ಪಿ - 4:19)

ದೇವರ ಮಗನ ಜೀವಿತವು ನಿನ್ನಲ್ಲಿ ಪ್ರಕಟಗೊಳ್ಳುವಂತೆ ನಿನ್ನ ಆತ್ಮವನ್ನು ಸದೃಢವಾಗಿಟ್ಟುಕೋ. ಸ್ಮೃತಿಗಳ ಸ್ಮರಣೆಯಲ್ಲಿ ಜೀವಿಸಬೇಡ; ದೇವರ ವಾಕ್ಯವು ಯಾವಾಗಲೂ ನಿನ್ನಲ್ಲಿ ಜೀವಿಸುತ್ತಾ ಕಾರ್ಯ ಸಾಧಕವಾಗಿರಲಿ.

# ಸಮಯ ಸಂದರ್ಭಗಳನ್ನೆದುರಿಸುವ ಅಭ್ಯಾಸ

**''ಆತನಿಂದ ಕರಿಸಿಕೊಂಡವರು ನಿರೀಕ್ಷಿಸುವ ..........'' - (ಎಫೆ - 1:18)**

ನೀನು ಯಾವ ಉದ್ದೇಶಕ್ಕಾಗಿ ರಕ್ಷಿಸಲ್ಪಟ್ಟಿರುವೆ ಎಂಬುದನ್ನು ನೆನಪಿನಲ್ಲಿಟ್ಟುಕೋ. ''ನೀನು ರಕ್ಷಿಸಲ್ಪಟ್ಟಿರುವುದು ದೇವರ ಮಗನನ್ನು ನಿನ್ನ ನಶ್ವರ ಶರೀರದಲ್ಲಿ ಪ್ರಕಟ ಗೊಳಿಸುವ ಸಲುವಾಗಿ ಮಾತ್ರ'' (2 ಕೊರಿಂಥ 4:10 ನೋಡಿರಿ) ದೇವರ ಮಗುವೆಂದು ನೀನು ಆಯ್ಕೆ ಹೊಂದಿರುವುದರಿಂದ ದೇವರು ನಿನಗೆ ಅನುಗ್ರಹಿಸಿದವು ಗಳೆಲ್ಲವನ್ನು ಪಡೆದು ಕೊಳ್ಳುವಂತೆ ನಿನ್ನ ಸರ್ವ ಸಾಮರ್ಥ್ಯಗಳನ್ನು ಮಣಿಸಬೇಕು. ಹಾಗೆ ಮಾಡುತ್ತಿರುವಾಗ ಬರುವ ಎಲ್ಲಾ ಸನ್ನಿವೇಶಗಳನ್ನೆದುರಿಸಲು ಸರ್ವ ಸನ್ನದ್ಧನಾಗಿರಬೇಕು.

ನಿನ್ನ ರಕ್ಷಣೆಗಾಗಿ ಏನಾದರೂ ಮಾಡಲು ನಿನಗಾಗದು, ಆದರೆ ಆ ರಕ್ಷಣೆಯನ್ನು ನಿನ್ನ ಜೀವಿತ ದಲ್ಲಿ ವ್ಯಕ್ತಪಡಿಸಲು ಏನಾದರೂ ಮಾಡಲು ನಿನಗೆ ಸಾಧ್ಯವಿದೆ. ಅಂದರೆ ದೇವರು ನಿನ್ನೊಳಗೆ ಕಾರ್ಯವೆಸಗಿ ರುವುದನ್ನು ನಿನ್ನ ಜೀವಿತದಲ್ಲಿ ಸಾಧಿಸಬೇಕು. ನಿನ್ನ ನಾಲಿಗೆಯು, ನಿನ್ನ ಬುದ್ಧಿಯೂ ನಿನ್ನ ನರಮಂಡಲವೂ ಈ ದೈವಕಾರ್ಯದ ಅಭಿವ್ಯಕ್ತನೆಯಲ್ಲಿ ತೊಡಗಿರುವವೋ? ಹಿಂದಿನಂತೆ ದಾರಿತಪ್ಪಿ ಕೆಟ್ಟು ಹೋದ ಮಗನಂತೆ, ನಿನಗೆ ಸರಿತೋಚಿದ ಮಾರ್ಗದಲ್ಲಿಯೇ ನೀನು ನಡೆಯುತ್ತಿದ್ದರೆ, ದೇವರು ನಿನ್ನನ್ನು ರಕ್ಷಿಸಿ, ಶುದ್ಧೀಕರಿಸಿ ದ್ದಾನೆಂದು ಹೇಳುವುದು ದೊಡ್ಡ ಸುಳ್ಳಿನ ಕಂತೆಯಾಗುತ್ತದೆ.

ದೇವರು ಪ್ರಧಾನ ಇಂಜಿನಿಯರ್ (Engineer) ಆಗಿದ್ದಾನೆ, ಆತನು ಅನೇಕ ಕಷ್ಟ ಸಂಕಟ ಗಳನ್ನು ನಿನ್ನ ಮೇಲೆ ಬರುವಂತೆ ಮಾಡಿ, ನೀನು ಅವುಗಳನ್ನು ಯೋಗ್ಯ ರೀತಿಯಲ್ಲಿ ನೆಗೆದು ಹಾರುವಿಯೋ ಎಂಬುದನ್ನು ಗಮನಿಸುತ್ತಾನೆ. ''ನನ್ನ ದೇವರ ಸಹಾಯದಿಂದ ಪ್ರಕಾರ ಹಾರುವೆನು'' (ಕೀರ್ತ. 18:29) ದೇವರು, ತನ್ನ ಮಗನ, ಮಗಳ ಅಗತ್ಯತೆಗಳನ್ನು ಅವರಿಗೆ ದೊರಕದಿರುವಂತೆ ಅಡ್ಡಿಮಾಡುವುದಿಲ್ಲ. ಪೇತ್ರನು ಹೇಳುವಂತೆ, ''ಪ್ರಿಯರೇ ನೀವು ಪರಿಶೋಧನೆಗಾಗಿ ಪುಟಕ್ಕೆ ಹಾಕಲ್ಪಟ್ಟದ್ದಕ್ಕೆ ಆಶ್ಚರ್ಯಪಡಬೇಡಿರಿ. ವಿಪರೀತವಾದ ಸಂಗತಿ ಸಂಭವಿಸಿತೆಂದು ಯೋಚಿಸ ಬೇಡಿರಿ'' (1ಪೇತ್ರ 4:12) ಸಮಯ ಪ್ರಸಂಗಕ್ಕೆ ತಕ್ಕ ಹಾಗೆ ಎದ್ದು ನಿಂತುಕೋ, ಆ ಕಾರ್ಯಸಾಧನೆಯಲ್ಲಿ ಮುನ್ನುಗ್ಗು. ನಿನ್ನ ಶರೀರದಲ್ಲಿ, ದೇವರು ಪ್ರಕಟ ಗೊಳ್ಳುವ ಅವಕಾಶವೊದಗುವ ತನಕ, ನಿನಗುಂಟಾಗಿರುವ ಪರಿಸ್ಥಿತಿಯು ನಿನ್ನನ್ನೆಷ್ಟು ಹಿಂಸೆಗೊಳಪಡಿಸಿದರೂ ಅದೇನೂ ಮುಖ್ಯವಲ್ಲ.

ನಮ್ಮಲ್ಲಿ ನಾವು ಗೋಗರೆಯುತ್ತಾ ಇರುವುದನ್ನು ಇನ್ನು ಮುಂದೆ ದೇವರು ಕಾಣದಿರಲಿ. ಅದರ ಬದಲು ಆತನು ನಮ್ಮ ಮೇಲೆ ಬರಮಾಡುವ ಸಂಕಷ್ಟಗಳು ಏನೇ ಇರಲಿ, ಅವನ್ನು ಎದುರಿಸಲು ಅವಶ್ಯ ವಿರುವ ಆತ್ಮೀಕ ಕೆಚ್ಚು , ದೇಹ ವ್ಯಾಯಾಮ ಪಟುತ್ವಗಳನ್ನು ದೇವರು ನಮ್ಮಲ್ಲಿ ಕಾಣಲಿ. ನಮ್ಮ ನಶ್ವರ ಶರೀರ ಗಳಲ್ಲಿ ದೇವರು ಅಭಿವ್ಯಕ್ತಗೊಳ್ಳುವಂತೆ ನಾವು ನಿರಂತರ ಸಾಧನೆಯಲ್ಲಿ ತೊಡಗಿರಬೇಕು. ಸಾಧಕರನ್ನು ಪ್ರದರ್ಶಿಸುವ ವಸ್ತುಸಂಗ್ರಹಾಲಯಗಳನ್ನು ದೇವರು ಹೊಂದಿರುವುದಿಲ್ಲ. ದೇವರ ಮಗನು ನಮ್ಮ ಬಾಹ್ಯ ಜೀವನದಲ್ಲೂ ಅಭಿವ್ಯಕ್ತಗೊಳ್ಳುವುದೇ ನಮ್ಮ ಜೀವಿತದ ಯಥೋಚಿತ ಗುರಿಯಾಗಿದೆ. ನಾವು ಇಲ್ಲಿರುವುದು ದೇವರು ನಮ್ಮಲ್ಲಿ ಏನೇನು ಸಾಧಿಸಬೇಕೆಂದು ಬಯಸಿರುವನೋ ಅದನ್ನು ಮತ್ತು ಆತನ ಪವಿತ್ರ ಚಿತ್ತವು ನಮ್ಮಲ್ಲಿ ನೆರವೇರುವಂತೆಯೂ ಸಂಪೂರ್ಣವಾಗಿ ನಮ್ಮನ್ನು ಆತನಿಗೆ ಸಮರ್ಪಿಸಿಕೊಳ್ಳಲು ನಾವಿಲ್ಲಿದ್ದೇವೆ. ಇದನ್ನು ನಾವು ಗ್ರಹಿಸಿದರೆ, ಆಗ ಆತನು ನಮ್ಮನ್ನು ಮುರಿಯಲ್ಪಟ್ಟ ರೊಟ್ಟಿಯಾಗಿಯೂ ಸುರಿಸಲ್ಪಟ್ಟ ದ್ರಾಕ್ಷಾರಸವಾಗಿಯೂ ಪರಿವರ್ತನೆಮಾಡಿ ಬೇರೆಯವರನ್ನು ಪೋಷಿಸಲು ಅವುಗಳನ್ನು ಅವರಿಗೆ ಉಣ ಬಡಿಸುತ್ತಾನೆ. (ನಮ್ಮನ್ನೇ ಉಣಬಡಿಸುತ್ತಾನೆ)

# ದೇವರು ನೀಡಿದ ಸೌಭಾಗ್ಯವನ್ನು ಗುರುತಿಸುವ ಅಭ್ಯಾಸ

**''ದೈವ ಸ್ವಭಾವದಲ್ಲಿ ಪಾಲನ್ನು ಹೊಂದುವವರಾಗಬೇಕೆಂಬ.........'' - (2ಪೇತ್ರ-1:4)**

ದೇವರ ವಾಗ್ದಾನಗಳ ಮೂಲಕ ನಾವು ದೈವ ಸ್ವಭಾವದಲ್ಲಿ ಪಾಲು ಹೊಂದಿದ್ದೇವೆ; ಹಾಗಿದ್ದಮೇಲೆ ಈ ದೇವ ಸ್ವಭಾವವನ್ನು ಬಹುಜಾಣ್ಮೆಯಿಂದ ನಮ್ಮ ಮಾನವ ಸ್ವಭಾವದಲ್ಲಿ ರೂಢಿಯಾಗಿ ಬಳಸಿಕೊಳ್ಳಬೇಕು. ಮೊದಲನೇದಾಗಿ, ದೇವರು ನಮಗಾಗಿ ಇಟ್ಟಿರುವ ಅವಕಾಶಗಳನ್ನು, ಸಂಪತ್ತುಗಳನ್ನೂ ಅರಿತುಕೊಳ್ಳುವ ರೂಢಿಯನ್ನು ಬೆಳೆಸಿಕೊಳ್ಳಬೇಕು. 'ಓಹ್!' ಅದಕ್ಕೆ ನಾನು ಸಮರ್ಥನಲ್ಲ'' ಎಂದು ನಾವು ಹೇಳಿದರೆ ಆ ವಾಕ್ಯದಲ್ಲಿ ಬಹು ಕೆಟ್ಟ ಅಸತ್ಯವನ್ನು ತುರುಕಿಸಿರುತ್ತೇವೆ. ದೈನಂದಿನ ಸಾಮಾನ್ಯ ಕ್ಷೇತ್ರ ಗಳಲ್ಲಿ, ಹಣ ಕಾಸನ್ನು ಕುರಿತು ಹತೋಟಿ ತಪ್ಪಿ ಮಾತನಾಡುವುದು ಕೆಟ್ಟ ಅಭಿರುಚಿ; ಇದು ನಮ್ಮ ಆತ್ಮೀಕ ವಲಯ ಗಳಲ್ಲಿಯೂ ನಿಜವಿದೆ, ಆದರೂ ಪರಲೋಕದ ನಮ್ಮ ತಂದೆಯು ನನ್ನಲ್ಲಿ ಒಂದು ಕಾಸೂ ಇಲ್ಲದಂತೆ ತುಂಬಾ ಕೊರತೆಗೆ ಒಳಪಡಿಸಿರುವನೋ ಎಂಬಂತೆ ಮಾತನಾಡುತ್ತೇವೆ. ಹೀಗೆಲ್ಲಾ ಹೇಳುವುದು ನಿಜವಾದ ವಿನಯ ಶೀಲತೆಯೆಂದು ನಾವು ಯೋಚಿಸಿ, ದಿನದ ಅಂತ್ಯದಲ್ಲಿ ''ಓಹ್ ಹೇಗೂ ಅದನ್ನು ಈಗಲೇ ದಾಟಿಬಿಟ್ಟಿರು ವೆನು; ಆದರೆ ಅದೊಂದು ವಿಪರೀತವಾದ ತೊಂದರೆದಾಯಕ ತೊಡಕೇ ಆಗಿತ್ತು'' ಎಂದು ನಾವು ಹೇಳುತ್ತೇವೆ. ಆದರೆ ಸರ್ವಶಕ್ತನಾದ ದೇವರೇ ಯೇಸುಕ್ರಿಸ್ತನಲ್ಲಿ ನಮಗಿದ್ದಾನೆ. ನಾವು ಆತನಿಗೆ ವಿಧೇಯ ರಾದರೆ, ನಮಗೆ ಬೇಕಾಗಿರುವಂಥದ್ದೆಲ್ಲವನ್ನು ಒದಗಿಸಲು ಆತನು ಸಮುದ್ರ ದಡದಲ್ಲಿರುವ ಎಲ್ಲಾ ಉಸುಗನ್ನಲ್ಲದೆ, ಕೊನೆಯದಾದ ಒಂದೇ ಒಂದು ಉಸುಕಿನ ಕಣಕ್ಕೂ, ಅನಂತ ದೂರದಲ್ಲಿರುವ ನಕ್ಷತ್ರಕ್ಕೂ ಸಹ ಆತನು ಆಜ್ಞೆವಿಧಿಸುವನು. ಇದು ನಿಜವಿರಲಾಗಿ ಬಾಹ್ಯ ಪ್ರಸಂಗಗಳು ಅತೀ ಕಠೋರವಾಗಿದ್ದರೆ ಅವು ನಮಗೇನು ತಾನೇ ಮಾಡಬಲ್ಲವು? ಅಲ್ಲದೆ ಅವು ಯಾಕೆ ತಾನೆ ಹಾಗೆ ಇರಬಾರದು! ನಾವು ಸ್ವಾನುಕಂಪನದ ಭಾವನೆ ಯುಳ್ಳವರಾಗಿದ್ದರೆ, ದುರ್ದೆಶೆ, ದುಃಖಗಳನ್ನು ವೈಭವೀ ಕರಿಸಿದರೆ, ದೇವರು ನಮಗೆ ದಯಪಾಲಿಸಿರುವ ಸೌಭಾಗ್ಯಗಳನ್ನು ನಮ್ಮ ಜೀವಿತ ದೊಳಗಿಂದ ನಾವೇ ಹೊರದೂಡುವುದಲ್ಲದೆ, ಇತರರೂ ಆ ಸೌಭಾಗ್ಯದೊಳಗೆ ಸೇರದಂತೆ ಅಡ್ಡಿಯುಂಟು ಮಾಡುತ್ತೇವೆ. ಸ್ವಾನುಕಂಪವೆಂಬ ಪಾಪಕ್ಕಿಂತಲೂ ಬಹುಹೀನಕರವಾದ ಪಾಪ ಬೇರೊಂದಿಲ್ಲ. ಅದು ದೇವರನ್ನು ನಮ್ಮಿಂದ ದೂರ ಸರಿಸುವು ದಲ್ಲದೆ, ದೇವರ ಸಿಂಹಾಸನದ ಮೇಲೆ ನಮ್ಮ ಸ್ವಹಿತಾಸಕ್ತಿಗಳನ್ನು ಕೂಡಿಸಿ, ಅವುಗಳನ್ನು ಅಲ್ಲಿ ಸ್ಥಾಪಿಸುವಂತೆ ಮಾಡುತ್ತದೆ. ಅದು, ನಾವು ಬಾಯಿ ತೆರೆದು, ಹತೋಟಿಯಿಲ್ಲದ ಗುಣ ಗುಟ್ಟುವಿಕೆಯನ್ನು ಉಗುಳುವಂತೆ ಮಾಡುತ್ತದೆ, ಆಗ ನಮ್ಮ ಜೀವಿತವು 'ಸ್ಪಂಜು' ನಂತೆ ಆಗುತ್ತದೆ. ಕೇವಲ ಹೀರಿಕೊಳ್ಳುತ್ತದೆ, ಕೊಡುವುದಿಲ್ಲ, ಎಂದೂ ತೃಪ್ತಿಗೊಳ್ಳುವುದಿಲ್ಲವಾದ್ದರಿಂದ ಅಲ್ಲಿ ಪ್ರೇಮಪೂರಿತ ಜೀವಿತವಿಲ್ಲ.

ದೇವರು ನಮ್ಮ ಬಗ್ಗೆ ಸಂತೃಪ್ತ ಭಾವನೆ ತಳೆಯಲಾರಂಬಿಸಿದಾಗ ನಮ್ಮ ಜೀವಾಧಾರದ ಪರಿಶುದ್ಧ ಜೀವ ಜಲಗಳೆಲ್ಲವೂ ಆತನಲ್ಲಿ ಮಾತ್ರವೇ ಇವೆ ಎಂಬುದನ್ನು ನಾವರಿಯುವ ತನಕ, ನಮ್ಮಲ್ಲಿರುವ ಕಾಲ್ಪನಿಕ ಸಂಪತ್ತಿನ ಗೀಳನ್ನು ಮೊದಲು ತೆಗೆದುಹಾಕುವನು. ಕೀರ್ತನಾಕಾರನು ಹೇಳಿರುವುದನ್ನು ಗಮನಿಸಿರಿ ''ನನ್ನ ಜೀವ ಜಲದ ಒರತೆಗಳೆಲ್ಲಾ ನಿನ್ನಲ್ಲಿಯೇ ಅವೆ'' (ಕಿರ್ತನೆ 87:7) ದೇವರ ಮಹಿಮೆ, ಆತನ ಸಾಮರ್ಥ್ಯ, ಆತನ ಕೃಪೆಗಳು ನಮ್ಮಲ್ಲಿ ಕಾಣದೇ ಹೋದರೆ, ಅದಕ್ಕಾಗಿ ದೇವರು ನಮ್ಮನ್ನೇ ಹೊಣೆಗಾರರನ್ನಾಗಿ ಮಾಡುವನು. ''ದೇವರು ಸಕಲವಿಧವಾದ ದಾನಗಳನ್ನು ನಿಮಗೆ ಧಾರಾಳವಾಗಿ ಅನುಗ್ರಹಿಸುವುದಕ್ಕೆ ಶಕ್ತನಾಗಿದ್ದರಿಂದ'' (2ಕೊರಿಂಥ 9:8) ನಿಮಗೊದಗಿರುವ ದೇವರ ಕೃಪೆ ಯನ್ನು ಧಾರಾಳವಾಗಿ ಇತರರ ಮೇಲೆ ಸುರಿಸಿರಿ. ಆದರೆ ಹೀರಿ ಹಿಡಿದಿಟ್ಟುಕೊಳ್ಳುವ ಸ್ಪಂಜು ಆಗಬೇಡಿರಿ.

# ಆತನ ದಿವಾರೋಹಣ ಮತ್ತು ನಮ್ಮ ಐಕ್ಯತೆ

**''ಆಶೀರ್ವದಿಸುತ್ತಿರುವಾಗ ಆತನು ಅವರನ್ನು ಬಿಟ್ಟು ಪರಲೋಕಕ್ಕೆ ಒಯ್ಯಲ್ಪಟ್ಟನು'' (ಲೂಕ-24:51)**

ಯೇಸುಸ್ವಾಮಿಯವರು ರೂಪಾಂತರಗೊಂಡ ನಂತರ ಅವರ ಜೀವನದ ಘಟನೆಗಳಿಗೆ ಸದೃಶ್ಯವಾದ ಅನುಭವಗಳ ಅರಿವು ನಮಗೆ ಇಲ್ಲ. ಆ ನಂತರದ ಅವರ ಜೀವಿತವು ಪೂರ್ಣವಾಗಿ ಪರಾರ್ಥಕವಾಗಿತ್ತು. ರೂಪಾಂತರ ಹೊಂದುವ ಕಾಲದವರೆಗೆ ಆತನು ಪರಿಪೂರ್ಣವಾದ ಸಹಜ ಮಾನವ ಜೀವಿತವನ್ನು ಪ್ರದರ್ಶಿಸಿದ್ದನು. ರೂಪಾಂತರದ ನಂತರದ ಘಟನೆಗಳು ಗೆತ್ಸೇಮನೆ, ಶಿಲುಬೆ, ಪುನರುತ್ಥಾನ ಇವೆಲ್ಲವೂ ನಮಗೆ ತೀರಾ ಅಪರಿಚಿತವಾದವುಗಳು. ಯೇಸುಕಿಸ್ತನ ಶಿಲುಬೆಯೇ, ಮಾನವ ಜನಾಂಗದ ಪ್ರತಿಯೊಬ್ಬನೂ ದೈವೀಕ ಜೀವನದೊಳಗೆ ಪ್ರವೇಶಿಸುವ ಮಹಾದ್ವಾರವಾಗಿದೆ. ಯೇಸುಕ್ರಿಸ್ತನು ತನ್ನ ಪುನರುತ್ಥಾನದ ಫಲವಾಗಿ ಎಂಥಾ ಮನುಷ್ಯನಿಗಾದರೂ ನಿತ್ಯ ಜೀವನವನ್ನು ಕೊಡುವ ಅಧಿಕಾರವನ್ನು ಹೊಂದಿದ್ದಾನೆ. ತನ್ನ ದಿವಾರೋಹಣದ ಮೂಲಕ ಯೇಸುಕ್ರಿಸ್ತನು ಪರಲೋಕ ದೊಳಗೆ ಪ್ರವೇಶ ಮಾಡುತ್ತಾನೆ ಮತ್ತು ಮಾನವ ಜನಾಂಗಕ್ಕಾಗಿ ಪರಲೋಕದ ಬಾಗಿಲನ್ನು ತೆರೆದಿಡುತ್ತಾನೆ.

ಆತನ ಸ್ವರ್ಗಾರೋಹಣವಾದ ಪರ್ವತದ ಮೇಲೆ ಆತನ ರೂಪಾಂತರವು ಸಂಪೂರ್ಣ ಗೊಂಡಿತು. ಯೇಸುಸ್ವಾಮಿಯೇನಾದರೂ, ತಾನು ರೂಪಾಂತರದ ಹೊಂದಿದ ಬೆಟ್ಟದಿಂದಲೇ ಸ್ವರ್ಗಾ ರೋಹಣ ಮಾಡಿಬಿಟ್ಟಿದ್ದರೆ ಆತನು ಏಕಾಂಗಿಯಾಗಿ ಹೋಗಿ ಬಿಡಬಹುದಿತ್ತು; ಆಗಲಾತನು ನಮಗೆ ಪುಣ್ಯರೂಪಿಯಾಗಿ ಮಾತ್ರ ಉಳಿದು ಬಿಡುತ್ತಿದ್ದನು, ಅಷ್ಟೆ ! ಆದರೆ ಆತನು ಆ ರೂಪಾಂತರದ ಮಹಿಮಾ ವೈಭವಕ್ಕೆ ಬೆನ್ನು ತೋರಿಸಿ ಪತನಗೊಂಡ ಪತಿತಮಾನವರೊಡನೆ ತನ್ನನ್ನು ಗುರುತಿಸಿ ಕೊಂಡನು. ಅವರಲ್ಲಿ ಒಂದಾಗಿರಲು ಆ ಬೆಟ್ಟದಿಂದ ಕೆಳಗಿಳಿದು ಪಾಪದ ಕಣಿವೆಗೆ ಬಂದನು. ಮಾನವ ಜನಾಂಗದ ರಕ್ಷಕನಾದನು.

ಯೇಸುಕ್ರಿಸ್ತನ ಸ್ವರ್ಗಾರೋಹಣೆಯೇ ರೂಪಾಂತರದ ಪರಿಪೂರ್ಣತೆ. ಈ ಆರೋಹಣ ದಿಂದಲೇ ಯೇಸುಸ್ವಾಮಿಯು ತನ್ನ ಮೊದಲಿನ ಮಹಿಮೆಗೆ ಹಿಂತಿರುಗಿ ಹೋದನು. ಆತನು ಕೇವಲ ದೇವರ ಮಗನಾಗಿ ಹಿಂತಿರುಗಿ ಹೋಗಲಿಲ್ಲ; ಆತನು ಮನುಷ್ಯ ಕುಮಾರನಾಗಿಯೂ ಹಾಗೂ ದೇವರ ಕುಮಾರನಾಗಿಯೂ ಹಿಂತಿರುಗಿ ಅಲ್ಲಿಗೆ ಹೋಗಿದ್ದಾನೆ. ಮನುಷ್ಯ ಕುಮಾರನ ಆರೋಹಣದ ಫಲವಾಗಿ ಪ್ರತಿಯೊಬ್ಬ ಮನುಷ್ಯನೂ ನೇರವಾಗಿ ದೇವರ ಸಿಂಹಾಸನದವರೆಗೆ ಪ್ರವೇಶಿಸುವ ಸ್ವಾತಂತ್ರ್ಯವು ಈಗ ಒದಗಿಬಂತು. ಮನುಷ್ಯ ಕುಮಾರನಾಗಿ ಯೇಸುಕ್ರಿಸ್ತನು ವಿವೇಕಪೂರ್ವಕವಾಗಿಯೇ ಸರ್ವಶಕ್ತತೆ ಯನ್ನು, ಸರ್ವವ್ಯಾಪಿತ್ವವನ್ನು ಮತ್ತು ಸರ್ವಜ್ಞತೆಯನ್ನು ತನ್ನೊಳಗೆ ಸೀಮಿತಗೊಳಿಸಿಕೊಂಡ್ಡಿದ್ದನು. ಈಗಲಾದರೋ ಅವೆಲ್ಲವೂ ಅದರ ಸಂಪೂರ್ಣತೆಯಲ್ಲಿ ಆತನ ನಿರಂಕುಶಾಧಿಕಾರಕ್ಕೆ ಒಳಪಟ್ಟಿವೆ. ಮನುಷ್ಯಕುಮಾರನಾಗಿ ಯೇಸುಕ್ರಿಸ್ತನು ದೇವರ ಸನ್ನಿಧಿಯಲ್ಲಿ ಸರ್ವಾಧಿಕಾರವನ್ನು ಹೊಂದಿದ್ದಾನೆ. ದಿವಾರೋಹಣವಾದ ದಿನದಿಂದ ಇಂದಿನವರೆಗೆ ಆತನು ರಾಜಾಧಿರಾಜನೂ, ಪ್ರಭುಗಳಲ್ಲಿ ಮಹಾ ಪ್ರಭುವೂ ಆಗಿದ್ದಾನೆ.

# ವಿವೇಚನಾಬದ್ಧ ಸರಳ ಜೀವನ

**''ಆಕಾಶದಲ್ಲಿ ಹಾರಾಡುವ ಹಕ್ಕಿಗಳನ್ನು ನೋಡಿರಿ ....... ಅಡವಿಯ ಹೂಗಳು ಬೆಳೆಯುವ ರೀತಿಯನ್ನು ಯೋಚಿಸಿ ತಿಳಿಯಿರಿ'' - (ಮತ್ತಾಯ - 6:26-28)**

ಅಡವಿಯಲ್ಲಿ ಹೂಗಳು ಬೆಳೆಯುವ ರೀತಿಯನ್ನು ಯೋಚಿಸಿ ತಿಳಿಯಿರಿ. ಸಹಜವಾಗಿ, ನೈಸರ್ಗಿಕವಾಗಿಯೇ, ಅವು ಅಲ್ಲಿವೆ ! ಸಮುದ್ರದ ದಡದಲ್ಲಿ ನಿಂತು ಅಗಾಧ ಜಲರಾಶಿಯನ್ನು ಯೋಚಿಸಿರಿ, ಹಾಗೆಯೇ ಗಾಳಿಯನ್ನು ಗಮನಿಸಿರಿ, ಸೂರ್ಯ, ಚಂದ್ರ, ನಕ್ಷತ್ರಗಳನ್ನು ವೀಕ್ಷಿಸಿರಿ. ಅವುಗಳೆಲ್ಲವೂ ಅಲ್ಲಿಯೇ ಇವೆ. ಪ್ರಜ್ಞಾಪೂರ್ವಕವಾಗಿ ಅಲ್ಲ, ನಿತ್ಯನೈಸರ್ಗಿಕವಾಗಿ ತಮ್ಮ ವಾಸ್ತವಿಕೆಯಲ್ಲಿ ಅವು ಇವೆ. ಆದರೂ ಅವು ನಮಗೋಸ್ಕರ ಎಂಥಾ ಸೇವಾಚರಣೆಯನ್ನು ಪ್ರಚುರಪಡಿಸುತ್ತಿವೆ. ನಮ್ಮ ಮೇಲೆ ಆಗಾಧ ಪ್ರಭಾವ ಬೀರುತ್ತಿವೆ. ದೇವರಿಗೆ ಏಕನಿಷ್ಠೆಯುಳ್ಳವರಾಗಿರಬೇಕೆಂದೂ ಆತನಿಗೆ ಯೋಗ್ಯಾರಾಗಿರಬೇಕೆಂದೂ ನಾವು ಪ್ರಜ್ಞಾ ಪೂರ್ವಕವಾಗಿ ಹೆಣಗಾಡಿದಾಗಲೇ ನಮ್ಮ ಮೂಲಕ ಪ್ರಭಾವ ಬೀರಬೇಕೆಂದಿರುವ ದೇವರ ಅನೇಕ ಸಂಕಲ್ಪಗಳನ್ನು ನಾವೇ ನಾಶಪಡಿಸಿರುತ್ತೇವೆ. ಆತ್ಮೀಕವಾಗಿ ಅಭಿವೃದ್ಧಿ ಹೊಂದಲು ಒಂದೇ ಒಂದು ಮಾರ್ಗವಿದೆ, ಅದು ದೇವರ ಮೇಲೆ ಕೇಂದ್ರಿಕೃತಗೊಂಡ ಏಕಾಗ್ರತೆಯಿಂದ ಮಾತ್ರವೇ ಎಂದು ಯೇಸು ಸ್ವಾಮಿಯು ಹೇಳಿದ್ದಾನೆ. ''ಇತರರಿಗಾಗಿ ನೀನೆಷ್ಟು ಉಪಯೋಗಾರ್ಥನೂ ಸೇವಾರ್ಥನೂ ಆಗಿರುವೆ ನೆಂಬುದರ ಬಗ್ಗೆ ತಲೆ ಕೆಡಿಸಿಕೊಳ್ಳಬೇಡ, ನನ್ನ ಮೇಲೆ ಪೂರ್ಣ ವಿಶ್ವಾಸವನ್ನಿಡು.'' ಜೀವಜಲದ ಉಗಮದ ಮೇಲೆ ನಿನ್ನ ಗಮನವನ್ನು ಕೇಂದ್ರೀಕರಿಸು. ''ನನ್ನನ್ನು ನಂಬಿದವನ ಹೊಟ್ಟೆಯೊಳಗಿಂದ ............... ಜೀವಕರವಾದ ನೀರಿನ ಹೊಳೆಗಳು ಹರಿಯುವವು'' (ಯೋಹಾನ 7:38) ನಮ್ಮ ಲೌಕೀಕ ಜ್ಞಾನ ವಿವೇಚನೆಗಳ ಮೂಲಕ ನಮ್ಮ ಸ್ವಾಭಾವಿಕ ಜೀವಿತದ ಜೀವಬುಗ್ಗೆಯನ್ನು ನಾವು ಕಂಡುಕೊಳ್ಳಲಾರೆವು. ನಮ್ಮ ಆತ್ಮೀಕ ಜೀವನದ ಬೆಳವಣಿಗೆಯು ಆತ್ಮೀಕ ಜೀವಿತವನ್ನು ಗಮನಿಸುವುದರ ಮೇಲೆ ಆಧಾರ ಗೊಂಡಿರುವುದಿಲ್ಲ, ಪರಲೋಕದ ತಂದೆಯಲ್ಲಿ ಏಕಾಗ್ರತೆಯಿಂದಿರುವುದರಿಂದಲೇ ಆ ಬೆಳವಣಿಗೆ ಯುಂಟಾಗುವುದೆಂದು ಯೇಸುಕ್ರಿಸ್ತನು ಬೋಧಿಸಿದ್ದಾನೆ. ನಾವಿರುವ ಸಮಯ ಸನ್ನಿವೇಶಗಳೆಲ್ಲವೂ ಪರಲೋಕದ ನಮ್ಮ ತಂದೆಗೆ ತಿಳಿದೇ ಇದೆ, ಅವುಗಳತ್ತ ನಮ್ಮ ಗಮನವನ್ನು ಹರಿಸದೆ, ತಂದೆಯಾದ ದೇವರಲ್ಲಿ ನಮ್ಮ ಏಕಾಗ್ರತೆಯನ್ನಿರಿಸಿದರೆ, ನಾವೂ ಸಹಾ ಅಡವಿಯ ಹೂವಿನ ಹಾಗೆ ಆತ್ಮೀಕ ವಿಷಯಗಳಲ್ಲಿ ಬೆಳೆಯುತ್ತೇವೆ.

ತುಂಬಾ ಆಸಕ್ತಿಯಿಂದ ಮಾತನಾಡುತ್ತಾ ನಮ್ಮನ್ನು ಒತ್ತಾಯ ಪೂರ್ವಕವಾಗಿ ಹಿಡಿದಿಟ್ಟು ಕೊಳ್ಳುವಂಥವರು, ನಮ್ಮ ಮೇಲೆ ವಿಶೇಷ ಪ್ರಭಾವ ಬೀರುವುದಿಲ್ಲ, ಯಾರು ಆಕಾಶದ ನಕ್ಷತ್ರಗಳಂತೆ, ಅಡವಿಯ ಹೂವಿನಂತೆ (ನೀರಜೆ) ಜೀವಿಸುತ್ತಿರುವವರೇ ವಿಶಿಷ್ಟ ಪ್ರಭಾವವನ್ನು ಫಲಪ್ರದವಾಗಿ ನಮ್ಮ ಮೇಲೆ ಬೀರುತ್ತಾರೆ - ಅವರು ಎಲ್ಲಿರುವರೋ ಅಲ್ಲಿಯೇ, ಯಾವುದೇ ಕೃತಕತೆ ಇಲ್ಲದೆ, ಸರಳ ನೈಜತೆಯಲ್ಲಿ ಇರುತ್ತಾರೆ. ಅವರ ಪ್ರಭಾವವೇ ನಮ್ಮ ಜೀವನವನ್ನು ಸರಳವೂ ಮಧುರವೂ, ವಾಸ್ತವವೂ ಆಗುವಂತೆ ರೂಪಿಸುತ್ತದೆ.

ನೀನು ದೇವರ ಉಪಯೋಗಾರ್ಥವಾಗಬೇಕೆಂದಿದ್ದರೇ, ಮೊದಲು ಯೇಸು ಕ್ರಿಸ್ತನಲ್ಲಿ ಯೋಗ್ಯ ಬಾಂಧವ್ಯವನ್ನು ಹೊಂದಬೇಕು, ಆಗಲಾತನು ನೀನು ಬದುಕುವ ಪ್ರತಿಕ್ಷಣವನ್ನು ನಿನ್ನ ಪ್ರಜ್ಞೆಗರಿವಿರದ ರೀತಿಯಲ್ಲಿ ಉಪಯೋಗಿಸಿ ಕೊಳ್ಳುವನು. ನಿನಗರಿವಿಲ್ಲದೆ ನಿನ್ನ ಜೀವಿತವು ಇತರರ ಮೇಲೆ ಆತ್ಮೀಕ ಪ್ರಭಾವವನ್ನು ಬೀರುತ್ತದೆ.

# ವಿನಾಶದ ಅವಶೇಷದಿಂದ ಮೇಲೆದ್ದು ನಿಲ್ಲುವೆ

**''ಕ್ರಿಸ್ತನ ಪ್ರೀತಿಯಿಂದ ನಮ್ಮನ್ನು ಅಗಲಿಸುವವರು ಯಾರು?'' - (ರೋಮಾ-8:35)**

ದೇವರು ಮನುಷ್ಯನನ್ನು ಸಂಕಷ್ಟಗಳಿಂದ ಅಬಾಧಿತನನ್ನಾಗಿ ಮಾಡುವುದಿಲ್ಲ; ಆದರೆ ಆತನು ಹೇಳುವುದು, ''ಇಕ್ಕಟ್ಟಿನಲ್ಲಿ ಹತ್ತಿರವಿದ್ದು ಅವನನ್ನು ತಪ್ಪಿಸಿ ಘನಪಡಿಸುವೆನು'' (ಕೀರ್ತನೆ 91:15) ಮನುಷ್ಯನ ಪ್ರಾಣಹಿಂಡುವ ತೀವ್ರವಾದ ನಿಜ ಸಂಕಷ್ಟವು ಎಂಥಾದ್ದೇ ಆಗಿದ್ದರೂ ಅದು ಮಹತ್ವವಲ್ಲ, ಆ ಸಂಕಟಗಳಲ್ಲಿ ಒಂದಾದರೂ, ದೇವರೊಂದಿಗಿರುವ ಬಾಂಧವ್ಯದಿಂದ ಅವನನ್ನು ಅಗಲಿಸಲಾರದು, ಯಾಕೆಂದರೆ ''ನಾವು ಎಲ್ಲಾ ವಿಷಯಗಳಲ್ಲಿ ಜಯಶಾಲಿಗಳಾಗುತ್ತೇವೆ'' (ರೋಮಾ 8:37). ಇಲ್ಲಿ ಶ್ರೀ ಪೌಲನು ಊಹಾಪೋಹದ, ಭ್ರಮೆಯ ವಿಷಯಗಳನ್ನು ಕುರಿತು ಹೇಳುತ್ತಿಲ್ಲ, ಗಂಭೀರವಾದ ಸತ್ಯ ಸಂಗತಿ ಗಳನ್ನು ಹೇಳುತ್ತಿರುವನು; ಇಂಥಾ ಸಂಗತಿಗಳ ನಡುವೆಯೇ ನಾವು ಶ್ರೇಷ್ಠ ಜಯಶಾಲಿ ಗಳಾಗಿದ್ದೇವೆಂದೂ, ಇದು ನಮ್ಮ ಜಾಣ್ಮೆಯ ನೈಪುಣ್ಯತೆಯಿಂದ ಅಲ್ಲವೆಂದು, ನಮ್ಮ ಎದೆಗಾರಿಕೆಯಿಂದ ಅಲ್ಲವೆಂದೂ, ಬೇರೆ ಇನ್ಯಾವುದರಿಂದಲೂ ಅಲ್ಲವೆಂದೂ, ಇವುಗಳಲ್ಲಿ ಒಂದಾದರೂ, ಯೇಸು ಕ್ರಿಸ್ತನಲ್ಲಿ ದೇವರೊಂದಿಗಿರುವ ನಮ್ಮ ಸಂಬಂಧವನ್ನು ಕದಲಿಸಲಾರವೆಂಬ ಸತ್ಯವೇ ಹೊರತು ಬೇರೆನೂ ಅಲ್ಲವೆಂದೇ ಪೌಲನು ಪ್ರತಿಪಾದಿಸುತ್ತಿದ್ದಾನೆ. ಸರಿಯಾಗಿಯೋ ಅಥವಾ ತಪ್ಪಾಗಿಯೋ, ನಾವಿರುವ ಸ್ಥಿತಿಗತಿಗಳಲ್ಲಿ ನಾವೆಲ್ಲಿರಬೇಕೋ ಅಲ್ಲಿಯೇ ಇದ್ದೇವೆ. ಯಾವ ಸಂದರ್ಭಗಳಲ್ಲಿ ತಾನು ಇರಬಾರದೆಂದು ಬಯಸಿದ್ದನೋ, ಅಂಥಾ ಸಂದರ್ಭಗಳು ಇರಲೇ ಇಲ್ಲವೆಂದು ಹೇಳಿಕೊಳ್ಳುವ ಕ್ರೈಸ್ತ ಸಹೋದರನಿಗಾಗಿ ನಾನು ಮರಗುತ್ತೇನೆ.

''ಕಷ್ಟವೋ.....'' ಕಷ್ಟವೆನ್ನುವುದು ಒಂದು ಉದಾತ್ತವಾದ ಸ್ವಾಗತಾರ್ಹ ವಿಷಯವಲ್ಲ: ಕಷ್ಟ ವೆನ್ನುವುದು, ಹೇಗೆ ಇರಬೇಕೋ ಹಾಗೆಯೇ ಇರಲಿ - ಅದು ನಮ್ಮನ್ನು ನಿಸ್ಸಾರಗೊಳಿಸುವಂಥಾ ದ್ದಾಗಿಯೋ, ಅದು ತುಂಬಾ ಹಿನಾಯಕರವಾದದ್ದಾಗಿಯೋ, ಇನ್ನೂ ಹೇಗೆ ಬೇಕಾದರೂ ಇರಲಿ, ದೇವರ ಪ್ರೀತಿಯಿಂದ ನಮ್ಮನ್ನು ಅಗಲಿಸಲು, ಅದಕ್ಕೆ ಸಾಧ್ಯವಾಗುವುದಿಲ್ಲ. ''ಪ್ರಪಂಚದ ಚಿಂತೆಗಳು'' ಹೊಣೆಗಾರಿಕೆಗಳೂ, ಕಷ್ಟಸಂಕಟಗಳೂ ಮುಂತಾದವುಗಳು, ದೇವರು ನಿನ್ನನ್ನು ಪ್ರೀತಿಸುತ್ತಿರುವನೆಂಬ ಸತ್ಯದಿಂದ ನಿನ್ನನ್ನು ದೂರಸರಿಸುವುದಕ್ಕೆಂದೂ ಇಂಬು (ಅವಕಾಶ) ಕೊಡಬೇಡ.

''ಹಿಂಸೆಯೋ ......'' ನಮ್ಮ ಸಂದರ್ಭಗಳು, ಘಟನೆಗಳು, ನನ್ನ ಸುತ್ತಮುತ್ತಲಿರುವ ಪ್ರತಿಯೊಂದೂ, 'ದೇವರ ಪ್ರೀತಿಯು - ಅದೊಂದು ದೊಡ್ಡ ಸುಳ್ಳು' ಎಂದು ಪ್ರಸಿದ್ಧಿಪಡಿಸುತ್ತಿರುವಾಗಲೂ, ಎಲ್ಲಿಯೂ ನ್ಯಾಯವೆಂಬುದು ಇಲ್ಲವೇ ಇಲ್ಲವೆಂದು ಪ್ರಕಟಗೊಳ್ಳುತ್ತಿರುವಾಗಲೂ ದೇವರ ಪ್ರೀತಿಯು ನನ್ನನ್ನು ಹಿಡಿದಿಟ್ಟುಕೊಂಡಿದೆಯೋ ?

''ಅನ್ನವಿಲ್ಲದಿರುವುದೋ .......'': ನಾವು ಹಸಿದು ಕಂಗೆಟ್ಟಾಗಲೂ, ನಾವು ದೇವರ ಪ್ರೀತಿಯನ್ನು ನಂಬುತ್ತಾ, ಇವೆಲ್ಲವುಗಳಲ್ಲಿ ನಾವು ಪೂರ್ಣ ಜಯಶಾಲಿ ಗಳಾಗಿರುವೆವೋ ?

ಯೇಸುಕ್ರಿಸ್ತನು ಮೋಸಗಾರನಾಗಿರಬೇಕು ಅಥವಾ ಆತನಿಂದ ಪೌಲನು ಮತಿಗೆಟ್ಟು ಭ್ರಮಿತನಾಗಿರಬೇಕು. ದೇವರ ಸ್ವಭಾವಕ್ಕೆ ಪ್ರತಿಯೊಂದು ವಿರುದ್ಧವಾಗಿ ರುವಾಗಲೂ ದೇವರ ಪ್ರೀತಿಯನ್ನೇ ಆತುಕೊಂಡಿರುವ ಮನುಷ್ಯನ ಜೀವಿತದಲ್ಲಿ ಅದ್ಭುತವಾದ, ಅಸಾಧಾರಣವಾದದ್ದು ಏನೋ ಸಂಭವಿಸಿರ ಬೇಕು. ಇಂಥಾ ಎಲ್ಲಾ ವಿಷಯಗಳಲ್ಲಿ ತರ್ಕಶಕ್ತಿಯು ಸ್ಥಬ್ಧ ವಾಗಿರುತ್ತದೆ. ಆದರೆ ಒಂದು ವಿಷಯ ಮಾತ್ರ ಇದಕ್ಕೆ ಹೊಣೆಯಾಗಿರುತ್ತದೆ. ಅದು - ''ಯೇಸುಕ್ರಿಸ್ತನಲ್ಲಿ ತೋರಿಬಂದ ದೇವರ ಪ್ರೀತಿ''. ಆದ್ದರಿಂದಲೇ ಪ್ರತಿ ಸಲವೂ ನಾವು ವಿನಾಶದ ಅವಶೇಷಗಳಿಂದ ಮೇಲೆದ್ದು ನಿಲ್ಲುತ್ತೇವೆ.

**ಮೇ - 20**

# ನಮ್ಮ ಆತ್ಮವನ್ನು ಸ್ವಾಧೀನ ಮಾಡಿಕೊಳ್ಳುವುದು

**''ನಿಮ್ಮ ಸೈರಣೆಯಿಂದ ನಿಮ್ಮ ಪ್ರಾಣಗಳನ್ನು ಪಡಕೊಳ್ಳುವಿರಿ'' - (ಲೂಕ - 21:19)**

ಒಬ್ಬ ವ್ಯಕ್ತಿಯು ಹೊಸದಾಗಿ ಹುಟ್ಟಿದಾಗ, ಮೊದಲಿದ್ದಂತೆ, ತನ್ನ ಯೋಚನೆಗಳಲ್ಲಿ ವಿವೇಚನೆ ಮತ್ತು ಬಲವುಳ್ಳವನೂ ಆಗಿರಲಾರದ ಸಮಯವಿರುತ್ತದೆ. ಯೇಸುಕ್ರಿಸ್ತನಲ್ಲಿದ್ದಂಥಾ ಮನಸ್ಸನ್ನು ಹೊಂದಿಕೊಳ್ಳುವುದರಿಂದುಂಟಾಗುವ ಹೊಸ ಜೀವಿತದ ಭಾವವನ್ನು ನಾವು ವ್ಯಕ್ತಪಡಿಸಬೇಕು. ''ಸೈರಣೆಯಿಂದ ನಿಮ್ಮ ಪ್ರಾಣಗಳನ್ನು ಸಂಪಾದಿಸಿಕೊಳ್ಳಿರಿ''. ದೇವರು ನಮಗೆ ದಯಪಾಲಿಸಿದ ಹೊಸ ಜೀವನಕ್ಕನುಗುಣವಾಗಿ ಆತ್ಮದ ಬೆಳವಣಿಗೆಯಲ್ಲಿ ತೊಡಗುವುದರ ಬದಲು ಕ್ರೈಸ್ತಬಾಳುವೆಯ ಹೊಸ್ತಿಲ ಮೇಲೆಯೇ ಇದ್ದು ಬಿಡಲು ನಮ್ಮಲ್ಲಿ ಅನೇಕರು ಇಚ್ಚೈಸುತ್ತಾರೆ. ಅಂದರೆ ಹಳೆಯದಕ್ಕೆ ಹಿಂದಿರುಗಲಾರರು, ಮತ್ತು ಹೊಸ ಬಾಳ್ವೆಯಲ್ಲಿ ಮುಂದಡಿ ಇಡಲಾರರು. ದೇವರು ಹೇಗೆ ನಮ್ಮನ್ನು ಸೃಷ್ಟಿಸಿ ರೂಪಿಸಿದನೆಂಬುವುದರ ಬಗ್ಗೆ ನಮಗಿರುವ ಅಜ್ಞಾನವೇ ಈ ರೀತಿಯ ವಿಫಲತೆಗೆ, ಅನಿರ್ದಿಷ್ಟತೆಗೆ ಕಾರಣವಾಗಿದೆ. ನಾವಾದರೋ ನಮ್ಮ ಶಿಸ್ತು ಬದ್ಧತೆ ಇಲ್ಲದ, ಅನಿಯಂತ್ರಿತ ಸ್ವಭಾವವೇ ಇದಕ್ಕೆ ಹೊಣೆ ಎಂಬದನ್ನು ಕಾಣುವಬದಲು, ಎಲ್ಲವನ್ನೂ ಸೈತಾನನ ಮೇಲೆ ಹೊರಿಸಿ ತೆಪ್ಪಗೆ ಇದ್ದು ಬಿಡುತ್ತೇವೆ. ಆದರೆ ಸತ್ಯವೇನೆಂಬುದಕ್ಕೆ ನಾವು ಎಚ್ಚರಗೊಂಡಾಗ ನಮ್ಮ ಸ್ಥಿತಿ ಹೇಗಿರಬಹುದೆಂದು ವಿಚಾರಿಸಿ ನೋಡಿರಿ !

ನಾವು ಪ್ರಾರ್ಥಿಸಬಾರದ ಕೆಲವು ಸಂಗತಿಗಳಿವೆ. - ವಿಶೇಷವಾಗಿ ನಮ್ಮ ಭಾವೋದ್ವೇಗದ ಬಗ್ಗೆ (ಮೂಡ್‌ಬಗ್ಗೆ), ಇಂಥಾ ಭಾವಸ್ಥಿತಿಗಳು ಕೇವಲ ಪ್ರಾರ್ಥನೆಯ ಮೂಲಕ ತೊಲಗುವುದಿಲ್ಲ, ಅವುಗಳನ್ನು ಒದ್ದು ಓಡಿಸಬೇಕಾಗುತ್ತದೆ, ಈ 'ಮೂಡ್'ಗಳು ನಮ್ಮ ಶಾರೀರಿಕ ಸ್ಥಿತಿಗಳಿಂದಾಗಿ ಹುಟ್ಟಿ ಬರುತ್ತವೆಯೇ ಹೊರತು, ನಮ್ಮ ಆಂತರ್ಯದಿಂದಲ್ಲ. ದೈಹಿಕ ಪರಿಸ್ಥಿತಿಗಳಿಂದ ಉದ್ಭವಿಸುವ ಮಗ್ನತೆಗೆ ಕಿವಿಗೊಡದಹಾಗೆ, ಎಡಬಿಡದೆ ಪ್ರಯತ್ನಗಳನ್ನು ಮಾಡುತ್ತಿರಬೇಕು. ಒಂದೇ ಒಂದು ಕ್ಷಣದ ಮಟ್ಟಿಗಾದರೂ ಅವುಗಳಿಗೆ ಒಳಗಾಗಬಾರದು, ವಿಚಾರಿಸಬಾರದು; ಕುತ್ತಿಗೆಯ ಪಟ್ಟಿಯನ್ನು ಹಿಡಿದು ಅಲ್ಲಾಡಿಸಿ ರೂಢಿಸುವಂತೆ, ಭಾವ ಮಗ್ನತೆಗಳನ್ನು ನಮ್ಮ ದೇಹದಿಂದ ತೊನದಾಡಿಸಿ (ಹೊರಕ್ಕೆಸೆದು) ಅವುಗಳಿಂದ ಮುಕ್ತರಾಗಬೇಕು. ಹಾಗೆಲ್ಲಾ ಮಾಡಿದ ನಂತರವೇ, ಯಾವುದನ್ನು ಮಾಡಲು ಅಸಾಧ್ಯವೆಂದು ನಾವು ತಿಳಿದಿದ್ದೆವೋ ಅದನ್ನು ನಿಜವಾಗಿಯೂ ನಾವು ಮಾಡಬಲ್ಲೆವು ಎಂದು ನಮಗೆ ತಿಳಿಯುತ್ತದೆ. ಆದರೆ ನಮ್ಮಲ್ಲಿ ಅನೇಕರಿಗೆ ತಟ್ಟಿರುವ ಶಾಪವೆಂದರೆ ''ನಾವು ಹಾಗೆ ಮಾಡುವುದಿಲ್ಲ''. ಕ್ರಿಸ್ತೀಯ ಜೀವಿತವೆಂದರೆ, ಈ ಶರೀರದಲ್ಲಿ ಬದುಕುವ ಆತ್ಮೀಕ ಕೆಚ್ಚೆದೆಯ ಹಾಗೂ ದೃಢನಿರ್ಧಾರದ ಜೀವನವಾಗಿದೆ.

# ದೇವರ ''ವಿವೇಚನಾರಾಹಿತ್ಯ''ದಲ್ಲಿ ನಂಬಿಕೆ

**''ನೀವು ಮೊದಲು ದೇವರ ರಾಜ್ಯಕ್ಕಾಗಿಯೂ, ನೀತಿಗಾಗಿಯೂ ತವಕಪಡಿರಿ, ಇವುಗಳ ಕೂಡ ಅವೆಲ್ಲವೂ ನಿಮಗೆ ದೊರಕುವವು'' - (ಮತ್ತಾಯ - 6:33)**

ಯೇಸುಕ್ರಿಸ್ತನ ಈ ವಾಕ್ಯಗಳ ಕಡೆಗೆ ಗಮನವಿತ್ತ ತಕ್ಷಣ ನಮಗೆದ್ದು ಕಾಣುವುದೇನೆಂದರೆ ಮಾನವನ ಕಿವಿಗಳೆಂದೂ ಕೇಳದಂತಹ ಕ್ರಾಂತಿಕಾರಿ ವಾಕ್ಯಗಳಿವು ಎಂದು. ''ಮೊದಲು ದೇವರ ರಾಜ್ಯಕ್ಕಾಗಿ ತವಕ ಪಡಿರಿ'' ಇದಕ್ಕೆ ತದ್ವಿರುದ್ಧವಾಗಿ ನಾವು ವಾದ ಮಾಡುತ್ತೇವೆ, ನಮ್ಮಲ್ಲಿರುವ ಘನವೆತ್ತಿದ ಅಧ್ಯಾತ್ಮಿಗಳ ವಾದವೂ ಇದೇ - ನಾನು ಜೀವಿಸಬೇಕು; ನಾನು ಬಹಳಷ್ಟು ಹಣವನ್ನು ಗಳಿಸಬೇಕು; ನನಗೆ ಬಟ್ಟೆ ಬರೆ ಬೇಕು; ನನಗೆ ಆಹಾರ ಬೇಕು. ನಮ್ಮ ಜೀವಿತದ ದೊಡ್ಡ ಆಸಕ್ತಿಯು ದೇವರ ರಾಜ್ಯದ ವಿಷಯವಲ್ಲ, ಈ ಲೋಕದಲ್ಲಿ ಬಾಳಿ ಬದುಕಲು ಸಮರ್ಥರಾಗುವುದು ಹೇಗೆ ಎಂಬುದೇ. ಆದರೆ ಯೇಸುಸ್ವಾಮಿಯು ಈ ಆಸಕ್ತಿಯನ್ನು ತಿರುಗು ಮುರುಗು ಮಾಡಿದ್ದಾನೆ: ಮೊದಲು ದೇವರಲ್ಲಿ ಯೋಗ್ಯವಾದ ಸಂಬಂಧವನ್ನು ನೀನು ಹೊಂದಿಕೊಳ್ಳಬೇಕು; ಅದೇ ನಿನ್ನ ಜೀವಿತದ ಮಹತ್ವದ ಕಾಳಜಿಯೆಂದು ಅದನ್ನು ಕಾಪಾಡಿ ಕೊಳ್ಳಬೇಕು; ನಿನ್ನ ಚಿಂತಾಕಾಳಜಿಯನ್ನು ಬೇರೆಯಾವುದರ ಮೇಲೆ ಇರಿಸಬಾರದು.

'ನಿಮ್ಮ ಪ್ರಾಣಧಾರಣೆಗೆ ...... ಚಿಂತೆ ಮಾಡಬೇಡಿರಿ': ಯೇಸು ಕ್ರಿಸ್ತನ ದೃಷ್ಟಿಯಲ್ಲಿ ಹೀಗೆ ನಾವು ಜೀವನಾಧಾರಗಳ ಬಗ್ಗೆ ತವಕ ಪಡುವುದು ಪೂರ್ಣವಾಗಿ ವಿಚಾರ ಶೂನ್ಯ ವಿಷಯ. ಯಾವುದರ ಬಗ್ಗೆಯೂ ಚಿಂತಿಸದೆ ಇರುವ ಮನುಷ್ಯನು 'ಧನ್ಯನು' ಎಂದು ಯೇಸುಸ್ವಾಮಿಯು ಹೇಳಲಿಲ್ಲ ಅಂಥಾ ಮನುಷ್ಯನು ಮಹಾ ಮೂರ್ಖನೇ ಸರಿ. ಶಿಷ್ಯನಾದವನು ತನ್ನ ಜೀವಿತದಲ್ಲಿ ದೇವರೊಂದಿಗಿರುವ ತನ್ನ ಸಂಬಂಧಗಳನ್ನು ಮೊದಲು ಪ್ರಮುಖವಾಗಿರಿಸಿಕೊಳ್ಳಬೇಕು. ಇದಕ್ಕೆ ಹೋಲಿಸಿದಾಗ ಬೇರೆಲ್ಲಾ ವಿಷಯಗಳ ಬಗ್ಗೆ ಎಚ್ಚರಿಕೆಯುಳ್ಳ ತವಕ ರಹಿತತೆ ಯಿಂದಿರಬೇಕು. ಏನು ಊಟ ಮಾಡಬೇಕು. ಏನು ಕುಡಿಯಬೇಕು ಎಂಬ ವಿಚಾರಗಳು ನಿನ್ನ ಜೀವನವನ್ನಾಳುವ ಮುಖ್ಯ ಅಂಶಗಳಾಗಿರಬಾರದು, ನೀನು ದೇವರಲ್ಲಿ ಏಕಾಗ್ರತೆಯಿಂದ ನೆಲೆಗೊಳ್ಳಬೇಕೆನ್ನುವುದೇ ಮುಖ್ಯವೆಂದು ಸ್ವಾಮಿಯು ಹೇಳುತ್ತಿದ್ದಾನೆ. ಕೆಲವರು ತಾವು ಏನೂ ಊಟ ಮಾಡಬೇಕು, ಏನು ಕುಡಿಯಬೇಕು ಎಂಬುದರ ಬಗ್ಗೆ ಪೂರ್ಣ ಉಪೇಕ್ಷೆಯಿಂದಿರುತ್ತಾರೆ, ಅದರಿಂದ ಅವರು ಕೇವಲ ವ್ಯಥೆಗೊಳಗಾಗುತ್ತಾರೆ; ಅವರು ಉಡುಗೆ ತೊಡಿಗೆಗಳ ಬಗ್ಗೆ ತಾತ್ಸಾರದಿಂದಿರುತ್ತಾರೆ, ಯಾವ ರೂಪದಲ್ಲಿ ಅವರು ಸಮಾಜದಲ್ಲಿ ಕಂಡು ಬರಬಾರದೋ ಅಂತಹ ವೇಷಗಳನ್ನು ಧರಿಸಿ ಜನರ ಮಧ್ಯದಲ್ಲಿ ಕಾಣಿಸಿಕೊಳ್ಳುತ್ತಾರೆ; ತಮ್ಮ ದೈನಂದಿನ ಜೀವನದ ಬಗ್ಗೆ ಅಲಕ್ಷ್ಯ, ತಾತ್ಸಾರಗಳಿಂದಿರುತ್ತಾರೆ; ಅದಕ್ಕಾಗಿ ದೇವರು ಅವರನ್ನು ಖಂಡಿತವಾಗಿಯೂ ಹೊಣೆಗಾರರನ್ನಾಗಿ ಮಾಡುತ್ತಾನೆ. ಯೇಸುಸ್ವಾಮಿ ಹೇಳುವುದೇ ನೆಂದರೆ - ದೇವರೊಂದಿಗೆ ನಿನ್ನ ಸಂಬಂಧಗಳು ನಿನ್ನ ಜೀವಿತದ ಪ್ರಥಮ ಗುರಿಯಾಗಿರಬೇಕು ಹಾಗೂ ಉಳಿದೆಲ್ಲಾ ವಿಷಯಗಳು ಎರಡನೇದಾಗಿರಲೇಬೇಕು ಎಂದು. ಕ್ರಿಸ್ತೀಯ ಜೀವಿತದ ಕಡು ಕಠಿಣವಾದ ಶಿಕ್ಷಣಗಳಲ್ಲೊಂದಾದ ಮುಖ್ಯ ವಿಷಯವೆಂದರೆ - ಯೇಸುಕ್ರಿಸ್ತನ ಬೋಧನೆಗಳನ್ನು ನಮ್ಮ ದೈನಂದಿನ ಜೀವಿತದಲ್ಲಿ ಅನ್ವಯಗೊಳಿಸುವಂತೆ ಪರಿಶುದ್ಧಾತ್ಮನಿಗೆ ನಾವು ಅನುವು ಮಾಡಿಕೊಡಬೇಕು.

# ನಮ್ಮ ಕಷ್ಟಗಳ ವಿವರಣೆ

**''ಅವರೆಲ್ಲರೂ ಒಂದಾಗಿರಬೇಕೆಂತಲೂ ....... ತಂದೆಯೇ, ನೀನು ನನ್ನಲ್ಲಿಯೂ ನಾನು ನಿನ್ನಲ್ಲಿಯೂ ಇರುವ ಪ್ರಕಾರ ಅವರು ನಮ್ಮಲ್ಲಿ ಇರಬೇಕೆಂದು'' – (ಯೋಹಾನ – 17:21)**

ಆತ್ಮೀಕ ಜೀವಿತದಲ್ಲಿ ಒಂಟಿಗನಾಗಿ ನೀನು ಸಾಗುತ್ತಿರುವಾಗ ಪ್ರತ್ಯೇಕಿಸಲ್ಪಟ್ಟ ಒಂಟಿತನದಲ್ಲಿ ನೀನಿರುತ್ತಿರುವೆಯಾದರೆ, ಯೋಹಾನ 17ನೇ ಅಧ್ಯಾಯವನ್ನು ಓದು. ಅಂಥಾ ಸ್ಥಿತಿಯಲ್ಲಿ ಯಾಕೆ ನೀನಿರುವಿ ಎಂಬುದನ್ನು ಅದು ನಿನಗೆ ಸ್ಪಷ್ಟ ಪಡಿಸುವುದು. ತಾನು ತನ್ನ ತಂದೆಯೊಂದಿಗೆ ಇರುವ ಪ್ರಕಾರ ನೀವೂ ತಂದೆಯಲ್ಲಿರಬೇಕೆಂದು ಯೇಸುಸ್ವಾಮಿಯು ಪ್ರಾರ್ಥಿಸಿದ್ದಾನೆ. ದೇವರು ಈ ಪ್ರಾರ್ಥನೆಗೆ ಉತ್ತರ ದಯಪಾಲಿಸಲು ನೀನು ನೆರವಾಗುತ್ತಿರುವೆಯೋ, ಇಲ್ಲವೇ ಬೇರೊಂದು ಗುರಿ ನಿನ್ನ ಜೀವಿತ ದಲ್ಲಿದೆಯೋ? ಈಗ ನೀನು ಯೇಸುವಿನ ಶಿಷ್ಯನಾಗಿರುವುದರಿಂದ ಮೊದಲಿನ ಹಾಗೆ ಸ್ವೇಚ್ಛೆಯಿಂದಿರಲು ಆಗುವುದಿಲ್ಲ.

ನಮ್ಮ ಪ್ರಾರ್ಥನೆಗಳಿಗೆ ಸದುತ್ತರವನ್ನು ನೀಡುವುದು ದೇವರ ಉದ್ದೇಶವಲ್ಲ. ಆದರೆ ಪ್ರಾರ್ಥನೆಗಳ ಮೂಲಕ ದೇವರ ಚಿತ್ತವನ್ನು ನಾವು ಅರಿತುಕೊಳ್ಳುತ್ತೇವೆ. ಇದನ್ನು ಯೋಹಾನ 17ರಲ್ಲಿ ವಿಷಧೀಕರಿಸ ಲಾಗಿದೆ. ದೇವರು ಉತ್ತರ ನೀಡುವ ಪ್ರಾರ್ಥನೆಯೊಂದಿದೆ, ಅದು ಯೇಸುಕ್ರಿಸ್ತನು ಮಾಡಿದ ಪ್ರಾರ್ಥನೆ – ''ನಾವು ಒಂದಾಗಿರುವ ಪ್ರಕಾರ ಅವರೂ ಒಂದಾಗಿರಬೇಕೆಂದು.......'' (ಯೋಹಾನ 17:22). ಅಷ್ಟರ ಮಟ್ಟಿಗೆ ನಾವು ಯೇಸುಕ್ರಿಸ್ತನಿಗೆ ನಿಕಟವಾಗಿರುವೆವೋ ?

ನಮ್ಮ ಯೋಜನೆಗಳ ಬಗ್ಗೆ ದೇವರಿಗೆ ಆಸ್ಥೆಯಿಲ್ಲ. ಇದು ನಿನ್ನಲ್ಲಿ ಗೊಂದಲವೆಬ್ಬಿಸಿದೆಯೋ ವಿಯೋಗ ವೇದನೆಯನ್ನನುಭವಿಸಲು ಸಿದ್ಧನಿರುವೆಯೋ? ಎಂದು ದೇವರು ಹೇಳುವುದಿಲ್ಲ. ತನ್ನ ಉದ್ದೇಶಾರ್ಥ ಇವನ್ನು ನಮಗೆ ಬರಮಾಡುತ್ತಾನೆ. ನಮಗುಂಟಾಗಿರುವ ಈ ದೆಶೆಗಳು ನಮ್ಮನ್ನು ಇನ್ನಷ್ಟು ಮೃದುವಾದವರನ್ನಾಗಿ, ಉತ್ತಮರನ್ನಾಗಿ, ಉದಾತ್ತಭರಿತರನ್ನಾಗಿ ರೂಪಿಸುವವು ಇಲ್ಲವೇ ಇನ್ನಷ್ಟು ಕುತರ್ಕಿಗಳೂ, ಇತರರಲ್ಲಿ ತಪ್ಪು ಕಂಡುಹಿಡಿಯುವವರೂ, ಸ್ವೇಚ್ಛಾವಲಂಬಿಗಳೂ ಆಗುವಂತೆ ಮಾಡುತ್ತವೆ. ಆ ಸ್ಥಿತಿ ದೆಶೆಗಳು ನಮ್ಮನ್ನು ಪಿಶಾಚಿಗಳನ್ನಾಗಿ ಮಾಡುವವು ಇಲ್ಲವೇ ಸಂತರನ್ನಾಗಿ ಸುವವು; ಅದೆಲ್ಲಾ ದೇವರೊಂದಿಗಿರುವ ನಮ್ಮ ಸಂಬಂಧದ ಮೇಲೆ ಆಧಾರಗೊಂಡಿದೆ. ''ನಿನ್ನ ಚಿತ್ತವೇ ನೆರವೇರಲಿ'' ಎಂದು ನಾವು ಹೇಳಿದರೆ, ಯೋಹಾನ 17 ರಲ್ಲಿರುವಂತೆ ಪರಲೋಕದ ತಂದೆಯು ತನ್ನ ದೈವ ಜ್ಞಾನಾನುಸಾರವಾಗಿ ಕಾರ್ಯವೆಸಗು ತ್ತಿರುವುದರ ಅರಿವಿರುವ ಸ್ವಾಂತನವನ್ನು ಹೊಂದುತ್ತೇವೆ. ದೇವರು ಸಾಧಿಸುತ್ತಿರುವುದೇನೆಂಬುದನ್ನು ನಾವು ಅರಿತಾಗ ನಾವು ನೀಚರೂ ಹಾಗೂ ಸಿನಿಕರೂ ಆಗುವುದಿಲ್ಲ. ನಮಗಾಗಿ ಸ್ವಲ್ಪ ಕಡಿಮೆ ಮಟ್ಟದವುಗಳಿಗಾಗಿ ಪ್ರಾರ್ಥಿಸುವುದಕ್ಕಿಂತಲೂ, ತಾನು ತನ್ನ ತಂದೆಯೊಂದಿಗೆ ಒಂದಾಗಿರುವ ನಾವೂ ತನ್ನಲ್ಲಿಯೇ ಒಂದಾಗ ಬೇಕೆಂದು, ನಮ್ಮನ್ನು ತನ್ನ ಸರಿಸಮಾನ ಮಟ್ಟಕ್ಕೆ ಎತ್ತುವುದಕ್ಕಾಗಿಯೂ ಯೇಸುಸ್ವಾಮಿಯು ಪ್ರಾರ್ಥಿಸಿದನು. ನಮ್ಮಲ್ಲಿ ಅನೇಕರು ಈ ಸ್ಥಿತಿಯಿಂದ ಬಹುದೂರ ಉಳಿದಿದ್ದೇವೆ, ಆದಾಗ್ಯೂ ನಾವು ಆತನೊಂದಿಗೆ ಒಂದಾಗುವ ತನಕ ಆತನು ನಮ್ಮನ್ನು ಒಂಟಿಗರನ್ನಾಗಿ ಬಿಡುವುದೇ ಇಲ್ಲ, ಯಾಕೆಂದರೆ ನಾವು ಹಾಗೆಯೇ ಆಗಲೇಬೇಕೆಂದು ಯೇಸು ಸ್ವಾಮಿಯು ಪ್ರಾರ್ಥಿಸಿದ್ದಾನೆ.

# (ಲೌಕಿಕ) ಜಾಗೃತಿಯ ವಿಶ್ವಾಸರಾಹಿತ್ವ

**''ನಮ್ಮ ಪ್ರಾಣಧಾರಣೆಗೆ ಏನು ಊಟ ಮಾಡಬೇಕು, ಏನು ಕುಡಿಯಬೇಕು, ನಮ್ಮ ದೇಹ ರಕ್ಷಣೆಗೆ ಏನು ಹೊದ್ದುಕೊಳ್ಳಬೇಕು ಎಂದು ಚಿಂತೆ ಮಾಡಬೇಡಿರಿ'' - (ಮತ್ತಾಯ 6:25)**

ಶಿಷ್ಯನ ಬದುಕಿನಲ್ಲಿರುವ ಸಾಮಾನ್ಯ ಜ್ಞಾನದ ಕಾತುರತೆಗಳೆಲ್ಲಾ ಅವಿಶ್ವಾಸದ ಸ್ವರೂಪವೆಂದು ಯೇಸುಸ್ವಾಮಿಯು ಇಲ್ಲಿ ಹೇಳುತ್ತಿದ್ದಾನೆ. ನಾವು ದೇವರ ಆತ್ಮವನ್ನು ಪಡೆದಿರುವವರಾಗಿದ್ದರೆ, ಈ ವಿಷಯದ ಸಂಬಂಧವಾಗಿ ನೀನು ಸಿದ್ಧಪಡಿಸಿಕೊಂಡಿರುವ ನಿನ್ನ ರಜಾಕಾಲದ ಯೋಜನೆಗಳಲ್ಲಿ ಅಥವಾ ನೀನು ಓದಬೇಕೆಂದಿರುವ ಹೊಸ ಪುಸ್ತಕಗಳಲ್ಲಿ ದೇವರಿಗೆಲ್ಲಿಯೂ ಸ್ಥಳವಿಲ್ಲವೇ, ಎಂದು ದೇವರ ಆತ್ಮನು ಒತ್ತಾಯ ಮಾಡುತ್ತಾನೆ. ''ಪ್ರಪ್ರಥಮವಾಗಿ ಆತನು ಮಾತ್ರವೇ'' ಎಂದು ಪರಿಗಣಿಸುವ ಸ್ಥಿತಿಯನ್ನು ನಾವು ಮುಟ್ಟುವ ತನಕ ಆತನು ನಮ್ಮನ್ನು ಅದುಮುತ್ತಲೇ ಇರುವನು. ನಾವೇನಾದರೂ ಬೇರೆ ವಿಷಯಗಳನ್ನು ಪ್ರಥಮವಾಗಿರಿಸಿಕೊಂಡರೆ, ನಮ್ಮ ಜೀವಿತವು ಗೊಂದಲಮಯವಾಗುತ್ತದೆ.

''ಚಿಂತೆ ಮಾಡಬೇಡಿರಿ'' ಭವಿಷ್ಯಾಲೋಚನೆಯ ಒತ್ತಡವನ್ನು ನಿಮ್ಮ ಮೇಲೆ ತಂದುಕೊಳ್ಳಬೇಡಿರಿ. ಚಿಂತೆ ಮಾಡುವುದು ಕೇವಲ ತಪ್ಪು ಮಾತ್ರವಲ್ಲದೆ ಖಂಡಿತವಾಗಿಯೂ ಅದು ಅವಿಶ್ವಾಸತೆ. ನಮ್ಮ ದೈನಂದಿನ ಜೀವಿತದ ಬದುಕನ್ನು ಆತನು ಸಲಹಿ ಸಂರಕ್ಷಿಸುವನೆಂದು ನಾವು ನಂಬದಿರುವುದೇ ನಾವು ಚಿಂತಿಸುವುದಕ್ಕೆ ಕಾರಣವಾಗಿದೆ, ಅದಲ್ಲದೆ ಬೇರೆ ಯಾವದೂ ನಮ್ಮನ್ನು ಚಿಂತೆಗೀಡುಮಾಡುವುದಿಲ್ಲ.

ಆತನೇ ನಮಗೆ ತಿಳಿಯಪಡಿಸಿದ ಈ ವಾಕ್ಯಗಳನ್ನು, ಉಸಿರುಗಟ್ಟುವಂತೆ ಅದುಮುತ್ತಿರುವ ಯೇಸುವಿನ ಈ ಹೇಳಿಕೆಯನ್ನು ಎಂದಾದರೂ ಗಮನಿಸಿರುವಿಯೋ ? ಅಥವಾ ಹಾಗೆ ಮಾಡುತ್ತಿರುವುದು ಸೈತಾನನೋ ? ಉಹೂಂ ! ಅಲ್ಲ, ಈ ಲೋಕದ ನಮ್ಮ ಪ್ರಾಣಧಾರಣೆಗಳ ಚಿಂತೆಯೇ ನಮ್ಮನ್ನು ಹಾಗೆ ಮಾಡುತ್ತದೆ. ಜೀವಿತದ ಅಲ್ಪ ಸಂಗತಿಗಳೇ ನಮ್ಮನ್ನು ಚಿಂತಿಸುವಂತೆ ಮಾಡುತ್ತವೆ. ನಾನು ಯಾವುದನ್ನು ಕಣ್ಣಾರೆ ಕಾಣಲಾರೆನೋ, ಅಲ್ಲಿ ನಾನದನ್ನು ನಂಬುವುದೇ ಇಲ್ಲ. ಹೌದು, ಅಲ್ಲಿಂದಲೇ ನನ್ನ ಅವಿಶ್ವಾಸ ಅಂದರೆ ವಿಶ್ವಾಸ ಭ್ರಷ್ಟತೆ ಆರಂಭವಾಗುತ್ತದೆ. ದೇವರ ಆತ್ಮನಿಗೆ ವಿಧೇಯತೆಯಿಂದಿರುವುದೇ ಈ ವಿಶ್ವಾಸ ಭ್ರಷ್ಟತೆಯ ಪರಿಹಾರಕ್ಕಿರುವ ದಾರಿ.

ತನ್ನ ಶಿಷ್ಯರಿಗೆ ಯೇಸುವಿನ ಮಹತ್ವದ ನುಡಿ ''ಮಾಡಬೇಡಿರಿ'' ಅಂದರೆ ಚಿಂತೆ ಮಾಡಬೇಡಿರಿ.

# ಆಶಾಭಂಗದ ಆನಂದ

**''ನಾನು ಆತನನ್ನು ಕಂಡಾಗ ಸತ್ತವನ ಹಾಗೆ ಆತನ ಪಾದಗಳ ಮುಂದೆ ಬಿದ್ದೆನು'' - (ಪ್ರಕಟಣೆ 1:17)**

ಅಪೋಸ್ತಲನಾದ ಯೋಹಾನನಂತೆ ಬಹು ಹತ್ತಿರದ ಪರಿಚಯದಿಂದ ನೀನೂ ಯೇಸುಕ್ರಿಸ್ತನನ್ನು ಬಲ್ಲವನಾಗಿರಬಹುದು, ಆತನು ನಿನಗೆ ಪರಿಚಯ ವಿರದ ಸ್ವರೂಪದಲ್ಲಿ ನಿನ್ನೆದುರಿಗೆ ಬಂದಾಗ ನೀನು ಮಾಡುವಂಥದ್ದು ಒಂದೇ ಒಂದು: ಸತ್ತವನ ಹಾಗೆ ಆತನ ಪಾದಗಳ ಮುಂದೆ ಅಡ್ಡ ಬೀಳುವಿಕೆ ಮಾತ್ರ. ದೇವರು ತನ್ನ ಘನಗಂಭೀರ ರೂಪದಲ್ಲಿಯೇ ಅಲ್ಲದೆ ಬೇರೆ ಇನ್ಯಾವುದೇ ರೂಪದಲ್ಲಿ ತನ್ನನ್ನು ಪ್ರಕಟಿಸಿ ಕೊಳ್ಳಲಾಗದೇ ಇರುವ ಸಮಯಗಳುಂಟು ಹಾಗೂ ಅಂಥಾ ವಿಸ್ಮಯ ಭರಿತ ದರ್ಶನವೇ ಎದೆಯೊಡಿಯುವಂಥಾ ಅಪಾರವಾದ ಆನಂದದ ಕಡೆಗೆ ನಿನ್ನನ್ನು ಬರಮಾಡುತ್ತದೆ; ಸತ್ತವನ ಹಾಗೆ ಬಿದ್ದಿರುವ ನಿನ್ನನ್ನೆಂದಾದರೂ ಮೇಲೆತ್ತುವುದಾದರೆ, ಅದು ದೇವರ ಹಸ್ತ ಮಾತ್ರವೇ.

''ಆತನು ತನ್ನ ಬಲಗೈಯನ್ನು ನನ್ನ ಮೇಲಿಟ್ಟು .....'' (1:17). ಭಯ ಗೌರವ ಭರಿತ ಆ ಘನ ಗಂಭೀರತೆಯಲ್ಲಿಯೂ ನಿನಗೆ ಸ್ಪರ್ಶಾನುಭವವಾಗುತ್ತದೆ ಮತ್ತು ಅದು ಯೇಸುಕ್ರಿಸ್ತನ ಬಲಗೈ ಎಂದು ನಿನಗೆ ತಿಳಿಯುತ್ತದೆ. ಆ ಬಲಗೈ-ಆದು ನಿನ್ನನ್ನು ಹದ್ದು ಬದ್ದಿನಲ್ಲಿಡುವ ಕೈ ಅಲ್ಲ ಇಲ್ಲವೇ ನಿನ್ನನ್ನು ತಿದ್ದಿ ತೀಡುವ ಕೈ ಅಲ್ಲ ಅಥವಾ ನಿನ್ನನ್ನು ಶಿಕ್ಷಿಸುವ ಕೈಯೂ ಅಲ್ಲ, ಅದು ನಿತ್ಯ ನಿರಂತರನಾದ ತಂದೆಯಾದ ದೇವರ ಬಲಗೈ. ಆತನ ಹಸ್ತವು ನಿನ್ನ ಮೇಲೆ ಇಡಲ್ಪಟ್ಟ ತಕ್ಷಣವೇ, ವರ್ಣಿಸಲಶಕ್ಯವಾದ ನೆಮ್ಮದಿ ಮತ್ತು ಶಾಂತಿಯ ಅನುಭೋಗ ನಿನಗಾಗುತ್ತದೆ. ''ಸದಾ ದೇವರ ಹಸ್ತವೇ ನಿಮಗೆ ಆಧಾರ'' (ಧ.ಕಾ. 33:27) - ಆಸರೆ ಯುಳ್ಳ ನೆಮ್ಮದಿಯ ಸರ್ವ ಸಾಮರ್ಥ್ಯದ ಅನುಭೋಗ ! ಒಮ್ಮೆ ಆತನ ಸ್ಪರ್ಶಾನುಭವವಾದರೆ ಸಾಕು, ತಿರುಗಿ ನಿನ್ನನ್ನು ಭಯದಲ್ಲಿ ಬೀಳಿಸುವಂಥಾದ್ದೊಂದೂ ಇರುವುದಿಲ್ಲ. ಯೇಸುಕ್ರಿಸ್ತನು ತನ್ನ ಮಹಿಮೋನ್ನತ ಪ್ರಭಾವದಿಂದಿರುವಾಗಲೇ ನಿಕೃಷ್ಟ ಅನುಚರನಾದ ಶಿಷ್ಯನ ಬಳಿಗೆ ಬಂದು ಹೇಳುವನು, 'ಹೆದರಬೇಡ ' (1:17) ಆತನ ಅಮೋಘ ಪ್ರೀತಿ ಅವರ್ಣನೀಯವಾದುದು. ಹೀಗೆ ನಾನು ಆತನನ್ನು ಬಲ್ಲೆನೋ ?

ಎದೆಯೊಡೆಯುವ ಕೆಲವು ವಿಷಯಗಳನ್ನು ಗಮನಿಸಿರಿ. ಕೆಲವು ಎದೆಯೊಡೆಯುವಿಕೆಯಲ್ಲಿ ಮಹದಾನಂದಗಳಿರುವುದಿಲ್ಲ, ಅದರಲ್ಲಿ ಯಾವದೇ ಕೊನೆ ಮುಟ್ಟಲಾಗದ ಸ್ಥಿತಿ. ಆಶಾದಾಯಕ ವಾದದ್ದೇನನ್ನೂ ನಿರೀಕ್ಷಿಸುವಂತಿಲ್ಲ, ಆದರೆ ಎದೆಒಡೆಯೋಣದಿಂದ ಮಹದಾನಂದವು ನನಗೆ ಬಂದೊದಗುವುದು ಯಾವಾಗಲೆಂದರೆ ''ನನ್ನಲ್ಲಿ ಅಂದರೆ ನನ್ನ ಶರೀರಾಧೀನ ಸ್ವಭಾವದಲ್ಲಿ ಒಳ್ಳೇದೇನೂ ವಾಸವಾಗಿಲ್ಲವೆಂದು ನನಗೆ ತಿಳಿದದೆ'' (ರೋಮಾ 7:18) ಎಂಬುದನ್ನು ನಾನು ತಿಳಿದಾಗಲೇ. ದೇವರು ತಾನೇ ನನ್ನಲ್ಲಿ ರೂಪುಗೊಳ್ಳುವುದರಿಂದ ಆತನಿಗೆ ಸಾಷ್ಟಾಂಗವಾಗಿ ಕೆಳಕ್ಕೆ ಬೀಳುವ ಏನೋ ಒಂದು ನನ್ನಲ್ಲಿದೆ ಎಂಬ ಅರಿವು ನನಗಾದಾಗ, ಎದೆ ಬಿರಿದ ಮಹದಾನಂದವು ನನ್ನೊಳಗುಂಟಾಗುತ್ತದೆ. ಹಾಗೆ ನೆಲಕಚ್ಚಿದವನ್ನನ್ನೇ ನಾದಾದರೂ ಎಬ್ಬಿಸಬೇಕೆಂದರೆ ಅದು ದೇವರ ಹಸ್ತ ಮಾತ್ರವೇ. ಸಾಧ್ಯವಾಗಬಹುದಾದವುಗಳ ಅಂತ್ಯದ ವರೆಗೂ ನಾನು ಸಾಗದ ಹೊರತು ನನಗಾಗಿ ದೇವರೇನನ್ನೂ ಮಾಡಲಾರನು.

# ಉತ್ತಮವೋ ಅಥವಾ ಅತ್ಯುತ್ತಮವೋ?

**''ನೀನು ಎಡಗಡೆಗೆ ಹೋದರೆ ನಾನು ಬಲಗಡೆಗೆ ಹೋಗುವೆನು. ನೀನು ಬಲಗಡೆಗೆ ಹೋದರೆ ನಾನು ಎಡಗಡೆಗೆ ಹೋಗುವೆನು'' - (ಆದಿಕಾಂಡ 13:9)**

ದೇವರಲ್ಲಿ ವಿಶ್ವಾಸವಿಟ್ಟು ಜೀವಿಸಲು ನೀನು ಆರಂಭಿಸಿದ ಕೂಡಲೇ ಮನಮೋಹಕ ಭೋಗಪ್ರೀಯ ಹಾಗೂ ಸುಖಲೋಲುಪಗಳ ಪ್ರಾಧಾನ್ಯತೆಯ ವಿಸ್ತಾರದೃಶ್ಯಗಳು ನಿನ್ನ ಕಣ್ಣೆದುರಿಗೆ ವಿಶಾಲವಾಗಿ ಹರಡಿಕೊಳ್ಳುತ್ತವೆ ಹಾಗೂ ಆ ದೃಶ್ಯಾವಳಿಯೆಲ್ಲವೂ ನ್ಯಾಯವಾದ ಹಕ್ಕಿನಿಂದ ನಿನ್ನವುಗಳೇ ಹೌದು; ಆದರೆ ದೇವರಲ್ಲಿ ವಿಶ್ವಾಸವಿಟ್ಟು ಬದುಕುತ್ತಿರುವ ನೀನು ಅಂಥಾ ಹಕ್ಕುಗಳನ್ನು ತ್ಯಜಿಸಿ ಬಿಟ್ಟು ಕೊಡುವಂಥ, ನಿನ್ನ ಹಕ್ಕನ್ನು ನೀನು ಚಲಾಯಿಸುವೆ ಮತ್ತು ದೇವರೇ ನಿನಗಾಗಿ ಆಯ್ಕೆಗಳನ್ನು ಮಾಡಲೆಂದು ಆತನಿಗೆ ಬಿಟ್ಟುಕೊಡುವೆ. ದೇವರಲ್ಲಿ ಭರವಸೆಯಿಟ್ಟು ನೀನು ಜೀವಿಸದೇ ಇರುವಾಗ, ಕೆಲವೊಮ್ಮೆ ದೇವರು, ನಿನ್ನ ಸ್ವಂತ ಹಿತರಕ್ಷಣೆ, ಪರೋಭಿವೃದ್ಧಿ ಎಲ್ಲಿ ಸೂಕ್ತವೆಂದು ನೀನು ಪರಿಗಣಿಸಿದ, ನೀನೇ ಆಯ್ಕೆಗಳನ್ನು ಮಾಡುವ ಸ್ಥಳಕ್ಕೆ ನಿನ್ನನ್ನು ಬರಮಾಡುತ್ತಾನೆ. ನೀನು ದೇವರಲ್ಲಿಟ್ಟ ಭರವಸೆ ಯಿಂದ, ಬದುಕನ್ನು ಬಾಳಿದ್ದೇ ಯಾದರೆ, ಆಯ್ಕೆ ಮಾಡುವ ನಿನ್ನ ಹಕ್ಕನ್ನು ನೀನು ಆನಂದದಿಂದ ತ್ಯಜಿಸಿ, ಆಯ್ಕೆ ಮಾಡುವುದನ್ನು ದೇವರಿಗೆ ಬಿಟ್ಟುಕೊಡುವಿ. ನಿನ್ನ ಈ ನಿಷ್ಠೆಯ ಮೂಲಕವೇ ನೀನು ದೇವರ ಸ್ವರವನ್ನು ಆಲಿಸಿ, ಅದಕ್ಕೆ ವಿಧೇಯನಾಗುವುದರಿಂದ ನಿನ್ನ ಸ್ವಾಭಾವಿಕತೆಯು ಅಧ್ಯಾತ್ಮಿಕತೆ ಯಾಗಿ ಪರಿವರ್ತನೆ ಹೊಂದುತ್ತದೆ.

ನಿನ್ನ ಬದುಕಿಗೆ ನಿನ್ನ ಹಕ್ಕುಗಳೇ ಮಾರ್ಗದರ್ಶಿಗಳಾದಾಗ, ಅವೇ ನಿನ್ನ ಆತ್ಮೀಕ ಒಳನೋಟವನ್ನು ಮಂಕಾಗಿಸುತ್ತವೆ. ದೈವ ನಂಬಿಕೆಯಲ್ಲಿ ಬದುಕುತ್ತಿರುವ ಬಾಳಿನ ಮಹಾಶತ್ರು, ಪಾಪವು ಅಲ್ಲ, ಆದರೆ ಅತ್ಯುತ್ತಮವಲ್ಲದ ಉತ್ತಮ ಆಯ್ಕೆಗಳೇ ಆ ಶತೃಗಳು. ಉತ್ತಮವಾದದ್ದೇ ಅತ್ಯುತ್ತಯಮದ ವೈರಿ. ಅಬ್ರಹಾಮನ ಪ್ರಾಪಂಚಿಕ ಜೀವಿತದಲ್ಲಿ ಅತ್ಯಂತ ಸೂಕ್ಷ್ಮ ವಿವೇಚನೆಯೆಂದು ಕಂಡು ಬರುವ ವಿಷಯವೆಂದರೆ, ಅಂದು ಅಬ್ರಹಾಮನೇ ಆರಿಸಿ ಆಯ್ಕೆ ಮಾಡಬೇಕಾತ್ತು; ಅದು ಆತನ ನ್ಯಾಯವಾದ ಹಕ್ಕು, ಆದರೆ ಆತನು ಹಾಗೆ ಮಾಡದೆ ತನ್ನ ಹಕ್ಕನ್ನು ವರ್ಜಿಸಿದನು. ಲೋಕಯುಕ್ತವಾದ ಸೂಕ್ತ ಆಯ್ಕೆಯನ್ನು ಅವನು ಮಾಡದಿದ್ದುದರಿಂದ ಆತನ ಸುತ್ತಲಿದ್ದವರೆಲ್ಲರೂ ಅವನೊಬ್ಬ ಮೂರ್ಖನೆಂಬುದಾಗಿ ಪರಿಗಣಿಸಬಹುದು. ನಮ್ಮಲ್ಲಿ ಅನೇಕರು ಆತ್ಮೀಕ ಮಾರ್ಗವನ್ನು ಅನುಸರಿಸುವುದೇ ಇಲ್ಲ. ಯಾಕೆಂದರೆ ನಮಗಾಗಿ ದೇವರು ಏನು ಬೇಕಾದರೂ ಆಯ್ಕೆ ಮಾಡಲಿ ಎಂದು ಆತನಲ್ಲಿ ಭರವಸೆವಿಡುವುದರ ಬದಲು ನಾವೇ, ನಮಗೆ ಯಾವುದು ಸೂಕ್ತವಾದದ್ದು ಮತ್ತು ಉತ್ತಮ ವೆನಿಸಿದ್ದನ್ನು ಆಯ್ಕೆ ಮಾಡಲು ಬಯಸುತ್ತೇವೆ. ದೇವರನ್ನು ದೃಷ್ಟಿಸುವ ಆದರ್ಶ ಮಟ್ಟದ ಜೀವಿತವನ್ನು ಬಾಳಲು ನಾವು ಕಲಿತುಕೊಳ್ಳಬೇಕು. ಅಬ್ರಹಾಮನಿಗೆ ಹೇಳಿದಂತೆ ದೇವರು ನಮಗೂ ಹೇಳುತ್ತಾನೆ ''ನನಗೆ ನಡಕೊಂಡು ದೋಷವಿಲ್ಲದವನಾಗು'' (ಆ.ಕಾ.17:1)

# ಯೇಸುವು ಕಲಿಸಿಕೊಟ್ಟ ಪ್ರಾರ್ಥನೆಯ ಚಿಂತನೆ

**''ಎಡೆಬಿಡದೆ ಪ್ರಾರ್ಥನೆ ಮಾಡಿರಿ'' - (1ಥೆಸ 5:17)**

ನಾವು ನಮ್ಮ ಬೌದ್ಧಿಕ ಪರಿಕಲ್ಪನೆಯಂತೆ ಪ್ರಾರ್ಥನೆಯನ್ನು ಸರಿಯಾಗಿಯೋ, ತಪ್ಪಾಗಿಯೋ ಚಿಂತನೆ ಮಾಡುತ್ತೇವೆ. ಶ್ವಾಸಕೋಶದಲ್ಲಿರುವ ಉಸಿರಿನಂತೆ ಹೃದಯದ ರಕ್ತದಂತೆಯೇ ಪ್ರಾರ್ಥನೆ, ಎಂದು ಭಾವಿಸುವುದಾದರೆ ನಾವು ಸರಿಯಾದ ಚಿಂತನೆ ಮಾಡಿರುವೆವು. ಹೃದಯದಿಂದ ರಕ್ತವು ಸತತವಾಗಿ ಹರಿಯುತ್ತಿರುವುದು ಮತ್ತು ಶ್ವಾಸೋಚ್ಛಾರವು ಎಡೆಬಿಡದೆ ಸಾಗಿರುವುದು, ಅವುಗಳ ಬಗ್ಗೆ ನಾವು ಪ್ರಜ್ಞಾಗಮನ ದಿಂದಿರುವುದಿಲ್ಲ, ಆದರೆ ಅವು ನಿರಂತರವಾಗಿ ನಡೆಯುತ್ತಿರುತ್ತವೆ. ನಾವು ದೇವರಲ್ಲಿ ಪರಿಪೂರ್ಣವಾಗಿ ಒಂದಾಗಿರುವಂತೆ ಯೇಸುಕ್ರಿಸ್ತನು ಸಹಾ ಕಾರ್ಯನಿರ್ವಹಿಸುತ್ತಿರುವುದರ ಪ್ರಜ್ಞೆಯು ಅನೇಕ ವೇಳೆ ನಮಗಿರುವುದಿಲ್ಲ, ಆದರೆ ಆತನಿಗೆ ನಾವು ವಿಧೇಯ ರಾಗುವುದಾದರೆ ಆತನ ಇರುವಿಕೆಯ ಬಗ್ಗೆ ಪ್ರಜ್ಞೆ ಹೊಂದಿರುತ್ತೇವೆ. ಪ್ರಾರ್ಥನೆಯು ಒಂದು ಕಸರತ್ತು ಅಲ್ಲ; ಅದು ಭಕ್ತನ ಜೀವಿತದ ಜೀವಾಳವಾಗಿದೆ. ನಿನ್ನ ಪ್ರಾರ್ಥನೆಯನ್ನು ನಿಲ್ಲಿಸಲು ಅಡ್ಡಿಪಡಿಸುವಂಥ ವುಗಳೆಲ್ಲವುಗಳ ಬಗ್ಗೆ ಎಚ್ಚರದಿಂದಿರ ಬೇಕು.

'ಎಡೆಬಿಡದೆ ಪ್ರಾರ್ಥಿಸಿರಿ' ನಿನ್ನ ಹೃದಯಾಂತರಾಳದಲ್ಲಿ ಚಿಕ್ಕ ಮಗುವಿನಂತೆ ಮಾಡುವ ಪ್ರಾರ್ಥನೆಗಳನ್ನು ಸದಾ ದೇವರಿಗೆ ನಿವೇದಿಸುವ ಅಭ್ಯಾಸದಲ್ಲಿ ನಿರತನಾಗಿರಬೇಕು. ಉತ್ತರ ಪಡೆಯಲಾಗದಿರುವ ಪ್ರಾರ್ಥನೆಗಳನ್ನು ಯೇಸುಸ್ವಾಮಿಯು ಪ್ರಸ್ತಾಪಿಸಿಲ್ಲ; ಪ್ರಾರ್ಥನೆಗಳೆಲ್ಲವೂ ಉತ್ತರಿಸಲ್ಪಟ್ಟೇ ಪಡುವವೆಂಬ ಅಮಿತ ನಿಶ್ಚಿತತೆಯಲ್ಲಿ ಆತನಿದ್ದನು. ದೇವರ ಆತ್ಮನ ಮೂಲಕ ನಾವು ಸಹಾ ಪ್ರಾರ್ಥನೆಗಳ ಬಗ್ಗೆ ಯೇಸು ಸ್ವಾಮಿಯಂತೆ ಬಣ್ಣಿಸಲಾಗದ ನಿಶ್ಚಿತತೆಯಲ್ಲಿರುವೆವೋ ? ಇಲ್ಲವೇ, ದೇವರು ಪ್ರಾರ್ಥನೆಯನ್ನು ಉತ್ತರಿಸಲಾರನೆಂದು ತೋರಿದ ಸಮಯಗಳನ್ನೇ ಯೋಚಿಸುತ್ತಿರುವೆವೋ ? ''ಬೇಡಿಕೊಳ್ಳುವ ಪ್ರತಿಯೊಬ್ಬನು ಹೊಂದುವನು'' (ಮತ್ತಾಯ 7:8) ಎಂಬುದಾಗಿ ಯೇಸು ಸ್ವಾಮಿಯು ಹೇಳಿದ್ದರೂ ನಾವು ''ಆದರೆ ........ ಆದರೂ'' ಎನ್ನುತ್ತೇವೆ. ನಾವು ಬಯಸಿದ ವಲಯ ವ್ಯಾಪ್ತಿಯಲ್ಲಿ ಪ್ರಾರ್ಥನೆಗೆ ಉತ್ತರವು ತತ್‌ಕ್ಷಣವೇ ಅನುಭವ ವಾಗದಿದ್ದರೂ ದೇವರು ಮಾತ್ರ ಅತ್ಯುತ್ತಮ ರೀತಿಯಲ್ಲಿ ಉತ್ತರವೀಯುವನು, ಕೆಲವೊಂದು ಬಾರಿ ಅಲ್ಲ ಪ್ರತಿಸಲವೂ ! ಆದಾಗ್ಯೂ ನಮ್ಮ ಪ್ರಾರ್ಥನೆಗೆ ದೇವರು ಉತ್ತರ ಕೊಡಬೇಕೆಂದು ಕಾದಿರುವೆವೋ ?

ಯೇಸುಸ್ವಾಮಿಯು ಹೇಳಿದವುಗಳಲ್ಲಿರುವ ಸತ್ವವನ್ನು ಹಗುರಗೊಳಿಸಿ, ಅವುಗಳನ್ನು ನಮ್ಮ ಲೌಕಿಕ ಜ್ಞಾನಕ್ಕನುಸಾರವಾಗಿ ಅರ್ಥೈಸುವುದೇ ನಾವೆಸಗುವ ದೊಡ್ಡ ಪ್ರಮಾದ. ಹಾಗೆ ಅವುಗಳು ಕೇವಲ ಲೌಕಿಕ ಜ್ಞಾನಮಯವಾಗಿದ್ದರೆ, ಪ್ರಾರ್ಥನೆಯ ಬಗ್ಗೆ ಯೇಸುಸ್ವಾಮಿಯು ನುಡಿಯುತ್ತಿರುವುದು ಸರ್ವಥಾ ಉಚಿತವಲ್ಲ. ಯೇಸುಸ್ವಾಮಿಯು ಪ್ರಾರ್ಥನೆಯ ವಿಷಯದಲ್ಲಿ ಹೇಳುತ್ತಿರುವ ಸಂಗತಿಗಳು ಅಲೌಕಿಕ ದಿವ್ಯ ಜ್ಞಾನದ ಪ್ರಕಟಿಸುವಿಕೆಯಾಗಿದೆ.

# ಆತನನ್ನು ತಿಳಿಯುವ ಬದುಕು

**''ದೇವರು ಮೇಲಣ ಲೋಕದಿಂದ ನಿಮಗೆ ಶಕ್ತಿಯನ್ನು ಹೊದಿಸುವ ತನಕ ಈ ಪಟ್ಟಣದಲ್ಲೇ ಕಾದುಕೊಂಡಿರಿ'' - (ಲೂಕ 24:49)**

ಪಂಚಾಶತ್ತಮ ದಿನದವರೆಗೂ ಶಿಷ್ಯರು ಕಾದುಕೊಂಡಿರಬೇಕಾದದ್ದು ಅವರ ಸ್ವಯಂ ಸಿದ್ಧತೆಗಾಗಿ ಮಾತ್ರವಲ್ಲ; ಸ್ವಾಮಿಯವರು ಐತಿಹಾಸಿಕವಾಗಿ ಮಹಿಮೆ ಹೊಂದುವ ತನಕ ಅವರು ಕಾಯಬೇಕಾಗಿತ್ತು. ಆತನು ಮಹಿಮೆ ಪಡಿಸಲ್ಪಟ್ಟ ತಕ್ಷಣ ಏನು ಸಂಭವಿಸಿತು ? ''ಆತನು ದೇವರ ಬಲಗೈಯಿಂದ ಉನ್ನತ ಸ್ಥಾನಕ್ಕೆ ಏರಿಸಲ್ಪಟ್ಟು, ವಾಗ್ದಾನವಾಗಿದ್ದ ಪವಿತ್ರಾತ್ಮವರವನ್ನು ತಂದೆಯಿಂದ ಹೊಂದಿ ನೀವು ನೋಡಿ ಕೇಳುವುದನ್ನು ಸುರಿಸಿದ್ದಾನೆ'' (ಅ.ಕೃ. 2:33) ಆದರೆ ಯೋಹಾನನು 7:39 ರಲ್ಲಿ ವಿಷದ ಪಡಿಸುತ್ತಿರುವ ವಿಷಯವು ''ಆತನು ಇನ್ನೂ ಮಹಿಮೆಯ ಪದವಿಯನ್ನು ಹೊಂದದೇ ಇದ್ದ ಕಾರಣ ಪವಿತ್ರಾತ್ಮ ವರವು ಇನ್ನೂ ಬಂದಿರಲಿಲ್ಲ'' - ಈ ವಾಕ್ಯವು ನಮಗೆ ಅನ್ವಯವಾಗುವುದಿಲ್ಲ; ಪವಿತ್ರಾತ್ಮವು ಕೊಡಲ್ಪಟ್ಟೇ ಇದೆ. ಸ್ವಾಮಿಯವರು ಮಹಿಮೆ ಪಟ್ಟಿದ್ದಾರೆ. ನಾವು ಕಾಯುತ್ತಾ ಇರುವುದು ದೇವರ ಆತ್ಮನ ಅನುಗ್ರಹಕ್ಕಾಗಿ ಅಲ್ಲ, ನಾವು ಕಾಯುತ್ತಿರುವುದು ಅದನ್ನು ಹೊಂದುವ ನಮ್ಮ ಯೋಗ್ಯತೆಗಾಗಿ.

ಪಂಚಾಶತ್ತಮಕಿಂತ ಮುಂಚಿನಿಂದಲೂ ದೇವರ ಆತ್ಮನ ಪ್ರಭಾವ, ಮತ್ತು ಶಕ್ತಿಯೂ ಕ್ರಿಯಾತ್ಮಕವಾಗಿದ್ದವು. ಆದರೆ ಆ ಆತ್ಮವು ಇಲ್ಲಿ ನಮ್ಮ ಮಧ್ಯದಲ್ಲಿರಲಿಲ್ಲ. ದಿವಾರೋಹಣದಲ್ಲಿ ನಮ್ಮ ಸ್ವಾಮಿಯು ಮಹಿಮೆ ಹೊಂದಿದ ಕೂಡಲೇ ಪವಿತ್ರಾತ್ಮನು ಈ ಲೋಕದೊಳಗೆ ಆಗಮಿಸಿದನು, ಅಂದಿನಿಂದ ಆತನು ಇಲ್ಲಿಯೇ ನಿರಂತರವಾಗಿ ಅಸ್ತಿತ್ವದಲ್ಲಿದ್ದಾನೆ. ಆತನು ಈ ಲೋಕದಲ್ಲಿರುವ ವಾಸ್ತವವನ್ನು ನಾವು ಸ್ವೀಕರಿಸಬೇಕು. ದೇವರಾತ್ಮನನ್ನು ಸ್ವಾಗತಿಸಿ, ಸ್ವೀಕರಿಸುವ ಮನೋಭಾವವನ್ನು ಭಕ್ತನಾದವನು ಸತತವಾಗಿ ಕಾಪಾಡಿಕೊಂಡಿರಬೇಕಾಗುತ್ತದೆ. ಪವಿತ್ರಾತ್ಮನನ್ನು ನಾವು ಹೊಂದಿದಾಗ ದಿವಾರೋಹಣವಾಗಿರುವ ಯೇಸುಸ್ವಾಮಿಯಿಂದ ಜೀವಂತ, ಚೈತನ್ಯಭರಿತ ಜೀವಿತವನ್ನು ನಾವು ಪಡೆಯುತ್ತೇವೆ.

ಮನುಷ್ಯನನ್ನು ಪರಿವರ್ತನೆ ಮಾಡುವುದು ಪವಿತ್ರಾತ್ಮನ ಸ್ನಾನವಲ್ಲ, ಮಹಿಮಾ ಪದವಿಗೇರಿದ ಯೇಸುಕ್ರಿಸ್ತನ ಪರಮಶಕ್ತಿಯು, ಪವಿತ್ರಾತ್ಮನ ಮೂಲಕ ಮನುಷ್ಯರ ಜೀವನದೊಳಗೆ ಬಂದು ಸೇರಿ, ಅವರನ್ನು ಪರಿವರ್ತನೆ ಗೊಳಿಸುತ್ತದೆ. ಹೊಸ ಒಡಂಬಡಿಕೆಯು ಎಂದೆಂದೂ ಬೇರ್ಪಡಿಸದ ಸತ್ಯಾಂಶಗಳನ್ನು ನಾವೇ ಅನೇಕ ವೇಳೆ ವಿಚ್ಛೇಧಿಸುತ್ತೇವೆ. ಪವಿತ್ರಾತ್ಮನ ಸ್ನಾನ ದೀಕ್ಷೆಯು ಯೇಸುಸ್ವಾಮಿಯ ಹೊರತಾದ ಒಂದು ಅನುಭವ ಅಲ್ಲವೇ ಅಲ್ಲ; ಅದು ಮಹಿಮಾ ಪದವಿಗೆ ಏರಿ ಹೋದ ಕ್ರಿಸ್ತನ ಸಾಕ್ಷಿಯಾಗಿದೆ. ಪವಿತ್ರಾತ್ಮನ ದೀಕ್ಷಾ ಸ್ನಾನವು ಕಾಲವನ್ನೂ ಇಲ್ಲವೇ ಅನಂತ ಕಾಲವನ್ನೂ ಕುರಿತು ನೀನು ಚಿಂತನೆ ಮಾಡುವಂತೆ ಪ್ರೇರೇಪಿಸುವುದಿಲ್ಲ. ಅದೊಂದು ಅಮೋಘವಾದ, ಮಹಿಮಾ ಭರಿತ ''ಈಗಲೇ''!. ''ಯೇಸುಕ್ರಿಸ್ತನನ್ನು ತಿಳಿಯುವುದೇ ನಿತ್ಯ ಜೀವವು'' (ಯೋಹಾನ 17:3) ಈಗಲೇ ಆತನನ್ನು ತಿಳಿಯಲು ಆರಂಭಿಸು. ಅದನ್ನೆಂದೂ ಕೊನೆಗಾಣಿಸಬೇಡ.

# ಪ್ರಶ್ನಿಸಲ್ಪಡದ ಪ್ರಕಟಣೆಗಳು

**''ಆ ದಿನದಲ್ಲಿ ನೀವು ನನಗೆ ಯಾವ ಪ್ರಶ್ನೆಯನ್ನೂ ಮಾಡುವುದಿಲ್ಲ'' - (ಯೋಹಾನ 16:23)**

ಯಾವಾಗ ''ಆದಿನ'' ? ದಿವಾರೋಹಣ ಮಾಡಿದ ಸ್ವಾಮಿಯು ನಿನ್ನನ್ನು ತಂದೆಯೊಂದಿಗೆ ಒಂದು ಮಾಡುವ ದಿನವೇ ಆ ದಿನ ! ಆ ದಿನದಂದು ಯೇಸುಸ್ವಾಮಿಯು ತನ್ನ ತಂದೆಯಲ್ಲಿ ಒಂದಾಗಿರುವಂತೆ ನೀನು ಸಹಾ ಆತನಲ್ಲಿ ಒಂದಾಗಿರುವೆ ಮತ್ತು ''ಆ ದಿನದಲ್ಲಿ'' ಸ್ವಾಮಿಹೇಳುವನು ''ನನಗೆ'' ನೀವೂ ಯಾವ ಪ್ರಶ್ನೆಯನ್ನೂ ಮಾಡುವುದಿಲ್ಲ''. ಪುನರುತ್ಥಾನವಾದ ಯೇಸುಕ್ರಿಸ್ತನ ಜೀವವು ನಿನ್ನಲ್ಲಿ ಆವಿಷ್ಕಾರಗೊಳ್ಳುವ ತನಕ, ಅದನ್ನು ಮತ್ತು ಇದನ್ನು ಕೇಳಬೇಕೆಂದು ಬಯಸುವಿ; ಅದಾದ ಸ್ವಲ್ಪ ಸಮಯದ ನಂತರ ನಿನ್ನೆಲ್ಲಾ ಪ್ರಶ್ನೆಗಳು ಇಲ್ಲವಾಗಿರುವುದನ್ನು ಕಾಣುವಿ, ಪ್ರಶ್ನೆ ಕೇಳುವುದಕ್ಕೆ ಏನಾದರೂ ಇನ್ನೂ ಉಳಿದಿದೆಯೆಂದು ನಿನಗನ್ನಿಸುತ್ತಿಲ್ಲ. ಪುನರುತ್ಥಾನವಾದ ಯೇಸುಕ್ರಿಸ್ತನ ಜೀವಿತದ ಮೇಲೆ ಪೂರ್ಣವಾಗಿ ಆತುಕೊಂಡಿರುವ ಸ್ಥಿತಿಯೊಳಗೆ ನೀನು ಸೇರಿರುವೆ. ಆ ಜೀವಿತವೇ ದೇವರ ಉದ್ದೇಶಗಳ ಸಾಮೀಪ್ಯಕ್ಕೆ ನಿನ್ನನ್ನು ಕರೆತಂದು ಸೇರಿಸುತ್ತದೆ. ಅಂಥಾ ಜೀವಿತವನ್ನು ನೀನು ಬಾಳುತ್ತಿರುವೆಯೋ ? ಇಲ್ಲವಾಗಿದ್ದರೆ, ಅದನ್ನೇಕೆ ನೀನಿನ್ನೂ ಮಾಡಲಿಲ್ಲ ?

ನಿನ್ನ ಗ್ರಹಿಕೆಗೆ ನಿಲುಕಲಾರದ, ನಿನ್ನ ಅರಿವಿಗೆ ಮಂಕಾಗಿರುವ ಅನೇಕ ವಿಷಯಗಳಿರಬಹುದು, ಆದರೆ ಅವು ದೇವರ ಮತ್ತು ನಿನ್ನ ಹೃದಯಗಳ ಮಧ್ಯೆ ಪ್ರವೇಶಿಸುವುದಿಲ್ಲ. ''ಆ ದಿನದಲ್ಲಿ ನೀವು ನನಗೆ ಯಾವ ಪ್ರಶ್ನೆಯನ್ನೂ ಮಾಡುವುದಿಲ್ಲ'' ನೀನು ಹಾಗೆ ಮಾಡುವ ಆಗತ್ಯವೂ ಇಲ್ಲ, ದೇವರು ತನ್ನ ಚಿತ್ತಾನುಸಾರ ಅವೆಲ್ಲಾ ವಿಷಯಗಳನ್ನು ಹೊರತರುವನೆಂಬ ದೃಢ ನಿಶ್ಚಯವು ನಿನಗುಂಟು. ಯೋಹಾನ 14:1 ರಲ್ಲಿ ದ್ದಂತೆ ''ನಿಮ್ಮ ಹೃದಯವು ಕಳವಳಗೊಳ್ಳದೇ ಇರಲಿ'' ಇದೇ ನಿನ್ನ ನಿಜವಾದ ಮನಃ ಸ್ಥಿತಿಯಾಗಿದೆ. ಕೇಳುವುದಕ್ಕೆ ಇನ್ಯಾವ ಪ್ರಶ್ನೆಗಳೂ ಇಲ್ಲವೇ ಇಲ್ಲ. ಏನಾದರೂ ಒಂದು ವಿಷಯವು ನಿನಗೆ ರಹಸ್ಯವೆಂದೆನಿಸಿದರೆ, ಅದು ನಿನ್ನ ಮತ್ತು ದೇವರ ನಡುವೆ ಪ್ರವೇಶಿಸುವುದಾದರೆ, ಅದರ ವಿವರಣೆಯನ್ನೆಂದಿಗೂ ನಿನ್ನ ಬುದ್ಧಿ ಶಕ್ತಿಯಿಂದ ವಿಚಾರಿಸಬೇಡ, ಅದನ್ನು ನಿನ್ನ ಸ್ವಭಾವದಲ್ಲಿ ಹುಡುಕಿ ವಿಚಾರಿಸು; ತಪ್ಪು ಇರುವುದು ಅಲ್ಲಿಯೇ ಎಂದು ಬೇಗನೆ ನೀನರಿಯುವಿ. ಯೇಸುಕ್ರಿಸ್ತನಿಗೆ ಅಧೀನವಾಗಿರಲು ನಿನ್ನ ಸ್ವಭಾವವು ಒಮ್ಮೆ ಬಯಸಿದರೆ, ನಿನ್ನ ಗ್ರಹಿಕೆಯು ಪರಿಪೂರ್ಣವಾಗಿ ಸ್ಫುಟವಾಗಿರುತ್ತದೆ, ಆಗ ತಂದೆ ಮತ್ತು ಆತನ ಮಗನ ನಡುವೆ ಅಂತರವೇನೂ ಇಲ್ಲದಿರುವ ಸ್ಥಿತಿಯೊಳಗೆ ನೀನು ಬಂದು ಸೇರುವಿ, ಯಾಕೆಂದರೆ ಯೇಸು ಸ್ವಾಮಿಯು ತಂದೆಯಲ್ಲಿ ನಿನ್ನನ್ನು ಒಂದು ಮಾಡಿರುತ್ತಾನೆ ಮತ್ತು ''ಆ ದಿನದಲ್ಲಿ ನೀವು ನನಗೆ ಯಾವ ಪ್ರಶ್ನೆಯನ್ನೂ ಮಾಡುವುದಿಲ್ಲ.''

# ಗಲಿಬಿಲಿಗೊಳ್ಳದ ಬಾಂಧವ್ಯ

**''ಆ ದಿನದಲ್ಲಿ ನನ್ನ ಹೆಸರಿನ ಮೇಲೆ ಬೇಡಿಕೊಳ್ಳುವಿರಿ ......... ತಂದೆಯು ತಾನೇ ನಿಮ್ಮ ಮೇಲೆ ಮಮತೆ ಇಡುತ್ತಾನಲ್ಲವೇ'' - (ಯೋಹಾನ 16:26 ಮತ್ತು 27)**

''ಆ ದಿನದಲ್ಲಿ ನನ್ನ ಹೆಸರಿನ ಮೇಲೆ ಬೇಡಿಕೊಳ್ಳಿವಿರಿ'' ಹಾಗೆಂದರೆ ನನ್ನ ಸ್ವಭಾವದಲ್ಲಿರುತ್ತಾ ಬೇಡಿಕೊಳ್ಳುವಿರಿ. ''ನೀವು ನನ್ನ ಹೆಸರನ್ನು ಮಾಂತ್ರಿಕ ಶಬ್ಧದಂತೆ ಉಪಯೋಗಿಸುವಿರಿ'' ಎಂದಲ್ಲ, ಅದು ನೀವು ನನ್ನ ಸಂಗಡ ಎಷ್ಟು ನಿಕಟವಾಗಿರು ವಿರೆಂದರೆ ನೀವು ನನ್ನಲ್ಲಿ ಪೂರ್ಣವಾಗಿ ಒಂದಾಗಿ ಬಿಟ್ಟಿರುತ್ತೀರಿ. 'ಆ ದಿನ' ಅದು ಮುಂದಿನ ಜೀವನದ ದಿನವಲ್ಲ, ಅದು ಇಂದೇ, ಇಲ್ಲಿಯೇ, ಇದೇ ಜೀವಿತಕ್ಕಾಗಿಯೇ, 'ಆ ದಿನ'. ''ತಂದೆಯು ತಾನೇ ನಿಮ್ಮ ಮೇಲೆ ಮಮತೆ ಯನ್ನಿಡುತ್ತಾನೆ'' - ಐಕ್ಯತೆಯೂ ಅಥವಾ ಒಂದಾಗಿರುವಿಕೆಯೂ ಅಲ್ಲಿ ಪರಿಪೂರ್ಣವೂ ಸ್ವತಂತ್ರವೂ ಆಗಿದೆ. ಜೀವಿತವು ಗಲಿಬಿಲಿ, ಗೊಂದಲಗಳಿಲ್ಲದೆ ಇರಬೇಕೆಂದು ಯೇಸುವಿನ ಉದ್ದೇಶವಲ್ಲ. ಆದರೆ ಯೇಸುಸ್ವಾಮಿಯು ತಂದೆಯ ಹೃದಯವನ್ನು, ಅಂತರಂಗವನ್ನೂ (ಅವುಗಳಿರುವ ರೀತಿಯಲ್ಲಿಯೇ) ಅರಿತವನಾದ್ದರಿಂದ ಪವಿತ್ರಾತ್ಮ ಸ್ನಾನದ ಮುಖಾಂತರ ನಮ್ಮನು ಉನ್ನತ ಸ್ಥಾನಗಳಿಗೆ ಏರಿಸಿ, ಅಲ್ಲಿ ನಮಗೆ ದೇವರ ಸಮಾಧಾನದ ಸಂದೇಶಗಳನ್ನು ತಿಳಿಯ ಪಡಿಸುತ್ತಾನೆ.

''ನೀವು ತಂದೆಯನ್ನು ಏನಾದರೂ ಬೇಡಿಕೊಂಡರೆ ನನ್ನ ಹೆಸರಿನ ಮೇಲೆ'' ....... ''ಆ ದಿನದಲ್ಲಿ''. ದೇವರ ಮತ್ತು ಭಕ್ತನ ನಡುವೆ ನಿರಾತಂಕ ನಿಶ್ಚಲ ಬಾಂಧವ್ಯವಿರುವ ದಿನವೇ ''ಆದಿನ''. ಯೇಸುಸ್ವಾಮಿಯು ತನ್ನ ತಂದೆಯ ಬಳಿಯಲ್ಲಿ ನಿಷ್ಕಳಂಕನಾಗಿರುವಂತೆಯೇ, ಪವಿತ್ರಾತ್ಮ ಸ್ನಾನದ ಫಲದಿಂದ ನಾವು ಸಹಾ ನಿಷ್ಕಳಂಕರಾಗಿಸಲ್ಪಟ್ಟುದ್ದರಿಂದ ತಂದೆಯ ಆ ಬಾಂಧವ್ಯಕ್ಕೆ ಏರಿಸಲ್ಪಡುತ್ತೇವೆ - ''ನಾವು ಒಂದಾಗಿರುವ ಪ್ರಕಾರ ಅವರೂ ಒಂದಾಗಿರ ಬೇಕೆಂದು'' (ಯೋಹಾನ 17:22)

''ಅದನ್ನು ಆತನು ನಿಮಗೆ ಕೊಡುವನು'' (ಯೋಹಾನ 16:23) ದೇವರು ನಮ್ಮ ಪ್ರಾರ್ಥನೆ ಗಳಿಗೆ ಮನ್ನಣೆಯನ್ನನು ಗ್ರಹಿಸುವನೆಂದು ಯೇಸುಸ್ವಾಮಿಯು ಹೇಳುತ್ತಿದ್ದಾನೆ. ಎಂಥಾ ಸವಾಲಿನ ಸಂಕೇತವಿದು ! ಪುನರುತ್ಥಾನ ಮತ್ತು ದಿವಾರೋಹಣವೆಸಗಿದ ಯೇಸುವಿನ ಸಾಮರ್ಥ್ಯದಿಂದ, ಕಳುಹಿಸಲ್ಪಟ್ಟ ಪವಿತ್ರಾತ್ಮನ ಮೂಲಕ ನಾವು ಕೂಡ ತಂದೆಯೊಡನಿರುವ ಅಂಥಾ ಬಾಂಧವ್ಯಕ್ಕೆ ಎತ್ತಲ್ಪಟ್ಟು, ಯೇಸು ಸ್ವಾಮಿಯು ಹಾಗೆ ನಮ್ಮ ಸರ್ವ ಸ್ವತಂತ್ರ ಬಯಕೆಯಂತೆ ದೇವರ ಚಿತ್ತದೊಂದಿಗೆ ನಾವು ಒಂದಾಗಿರಲು ಸಾಧ್ಯವಾಗುತ್ತದೆ. ಅಂಥಾ ಒಂದು ಅದ್ಬುತ ಸ್ಥಿತಿಯಲ್ಲಿ, ಯಾವ ಸ್ಥಿತಿಯಲ್ಲಿ ಯೇಸುಸ್ವಾಮಿಯು ನಮ್ಮನ್ನು ಇರಿಸಿರುವನೋ ಅಲ್ಲಿ, ಯೇಸುಸ್ವಾಮಿಯು ಹೆಸರಿನ ಮೇಲೆ, ಆತನ ಸ್ವಭಾವದಲ್ಲಿರುತ್ತಾ ಅಂದರೆ ಯಾವ ಸ್ವಭಾವವು ಪವಿತ್ರಾತ್ಮನಿಂದ ನಮಗೆ ದಾನವಾಗಿ ಕೊಡಲ್ಪಟ್ಟಿರುವುದೋ ಆ ಸ್ವಭಾವದಲ್ಲಿರುತ್ತಾ ದೇವರನ್ನು ಪ್ರಾರ್ಥಿಸಲು ನಾವು ಶಕ್ತರಾಗುತ್ತೇವೆ, ಮತ್ತು ಸ್ವಾಮಿಯು ನುಡಿದಂತೆ ''ನೀವು ತಂದೆಯನ್ನು ನನ್ನ ಹೆಸರಿನ ಮೇಲೆ ಏನಾದರೂ ಬೇಡಿಕೊಂಡರೆ, ಅದನ್ನು ಆತನು ನಿಮಗೆ ಕೊಡುವನು'' ಯೇಸುಕ್ರಿಸ್ತನು ತಾನೇ ನೀಡಿದ ಈ ಹೇಳಿಕೆಗಳು ಆತನ ಅಧಿ ೀಶ್ವರ ಸ್ವರೂಪವನ್ನು ಸ್ಥಿರ ಪಡಿಸುತ್ತಿವೆ.

# ''ಹೌದು ....... ಆದರೆ.....!''

**''ಸ್ವಾಮಿ, ನಿನ್ನನ್ನು ಹಿಂಬಾಲಿಸುತ್ತೇನೆ; ಆದರೆ ........'' - (ಲೂಕ 9:61)**

ನಿನ್ನ ಲೌಕಿಕ ಜ್ಞಾನಕ್ಕೆ ಬಹು ದೊಡ್ಡ ಸವಾಲಾಗಿರುವ ಏನಾದರೂ ಒಂದು ಕಾರ್ಯವನ್ನು ನಿರ್ವಹಿಸಲು ದೇವರು ನಿನಗೆ ಹೇಳಿದಾಗ ನೀನೇನು ಮಾಡುವಿ ? ಹಿಂದಕ್ಕೆ ಸರಿದು ಬಿಡುವಿಯೋ ? ನೀವು ದೈಹಿಕವಾಗಿ ಏನನ್ನಾದರೂ ಮಾಡುವ ಅಭ್ಯಾಸವಿದ್ದರೆ, ನೀವು ಧೃಡ ನಿರ್ಧಾರದ ಮೂಲಕ ಆ ಅಭ್ಯಾಸವನ್ನು ಮುರಿಯುವವರೆಗೆ ನೀವು ಪರೀಕ್ಷೆಗೆ ಒಳಗಾದಾಗೆಲ್ಲಾ ನೀವು ಅದನ್ನೇ ಮಾಡುತ್ತಿರುವಿರಿ. ಆತ್ಮೀಕ ಕ್ಷೇತ್ರದಲ್ಲಿಯೂ ಇದೇ ಸತ್ಯ. ಯೇಸುಕ್ರಿಸ್ತನು ಬಯಸಿದವುಗಳಿಗೆ ಪದೇ ಪದೇ ಎಚ್ಚರಗೊಂಡು ಎದ್ದು ಕುಳಿತುಕೊಳ್ಳುವಿ, ಆದರೆ ಪ್ರತಿಸಲವೂ ಸವಾಲನ್ನೆದುರಿಸುವ ಸ್ಥಿತಿ ಬಂದಾಗ ಹಿಂತಿರುಗಿ ದೂರ ಸರಿದು ಬಿಡುವಿ, ಈ ಪ್ರವೃತ್ತಿಯನ್ನು ದೃಡ ನಿರ್ಧಾರದಿಂದ ತೊರೆದು ಬಿಡುವವರೆಗೂ ಹೀಗೆಯೇ ಆಗುತ್ತದೆ. ''ಹೌದು, ಹೌದು ಆದರೆ ....... ಈ ವಿಷಯದಲ್ಲಿ ನಾನೇನಾದರೂ ದೇವರಿಗೆ ವಿಧೇಯನಾದರೆ, ಅವುಗಳ ಗತಿ ....?'' 'ದೇವರು ನನ್ನ ಲೌಕಿಕ ಜ್ಞಾನವನ್ನು ಉಪಯೋಗಿಸಲು ಅವಕಾಶವಿತ್ತುದ್ದಾದರೆ, ನಾನು ಆತನಿಗೆ ವಿಧೇಯನಾಗುತ್ತೇನೆ; ಹಾಗಿದ್ದಾಗ್ಯೂ 'ಕಡುಕತ್ತಲಲ್ಲಿ ಮುಂದಡಿಯಿಟ್ಟು ಸಾಗು' ಎಂದು ಆತನು ನನಗೆ ಹೇಳಬಾರದು.' ಸ್ವಾಭಾವಿಕ ಮನುಷ್ಯನಲ್ಲಿ ಎದ್ದು ಕಾಣುವ ಸ್ಪರ್ಧಾತ್ಮಕವಾದ, ಪರಿಣಾಮ ಲೆಕ್ಕಿಸದ ಧೈರ್ಯವನ್ನು ಪ್ರದರ್ಶಿಸುವಂತೆ ತನ್ನನ್ನು ನಂಬಿದವನನ್ನು ಯೇಸುಕ್ರಿಸ್ತನು ಒತ್ತಾಯ ಮಾಡುತ್ತಾನೆ. ಪ್ರತಿಫಲಾರ್ಹ ವಾದದ್ದೇನನ್ನಾದರೂ ಮಾಡಲು ಯಾವನಾದರೂ ಮುಂದೆಬಂದು, ತಾನೇ ನೆಗೆದು ಹಾರಬೇಕಾದರೆ, ತನ್ನದೆಲ್ಲವನ್ನು ಅಪಾಯಕ್ಕೀಡು ಮಾಡಿಕೊಳ್ಳುವ ಸಮಯಗಳಿದ್ದೇ ಇರುತ್ತವೆ. ಹಾಗೆಯೇ ಆತ್ಮೀಕ ಕ್ಷೇತ್ರದಲ್ಲಿಯೂ ನಿನ್ನ ವಿವೇಚನಾ ಬುದ್ಧಿಯಿಂದ ಭದ್ರಪಡಿಸಿ ಕೊಂಡಿರುವುದೆಲ್ಲವನ್ನು ಅಪಾಯಕ್ಕೊಡ್ಡಿ ಯೇಸುಕ್ರಿಸ್ತನು ಹೇಳಿದವುಗಳೊಳಗೆ ಸೇರಲು ನೆಗೆದು ಧಾವಿಸಬೇಕೆಂದು ಆತನು ಒತ್ತಾಯ ಮಾಡುವನು ಮತ್ತು ನೀನು ಹಾಗೆ ಮಾಡಿದ ಕೂಡಲೇ, ನಿನ್ನ ಲೌಕಿಕ ಬುದ್ಧಿಯು ನಿನ್ನಲ್ಲೆಷ್ಟು ಭದ್ರವಾಗಿತ್ತೋ ಹಾಗೆಯೇ ಯೇಸುವು ಹೇಳಿದ್ದೆಲ್ಲವೂ ನಿನ್ನಲ್ಲಿ ಭದ್ರವಾಗಿರುವುದನ್ನು ನೀನು ಕಂಡುಕೊಳ್ಳುವಿ. ಲೌಕಿಕ ಜ್ಞಾನದ ನ್ಯಾಯಸ್ಥಾನದಲ್ಲಿ, ಯೇಸುಕ್ರಿಸ್ತನ ಹೇಳಿಕೆಗಳು ಹುಚ್ಚುಹುಚ್ಚಾಗಿ ಕಂಡುಬರುತ್ತವೆ; ಆದರೆ ಅವುಗಳನ್ನು ವಿಶ್ವಾಸದ ನ್ಯಾಯ ಸ್ಥಾನಕ್ಕೆ ಬರಮಾಡು; ಆಗ ಅಲ್ಲಿ ವಿಸ್ಮಯ ಭರಿತಾತ್ಮನಾಗಿ ನೀನು ಆ ಎಲ್ಲಾ ಹೇಳಿಕೆಗಳು ದೇವರ ವಾಕ್ಯಗಳೆಂದು ಕಂಡುಕೊಳ್ಳುವಿ. ದೇವರಲ್ಲಿ ಸಂಪೂರ್ಣ ನಂಬಿಕೆಯನ್ನಿಡು. ನೀನು ಸಾಹಸವೆಸಗುವಂಥ ಸನ್ನಿವೇಶದೊಳಗೆ ದೇವರು ನಿನ್ನನ್ನು ಬರಮಾಡಿದರೆ, ಅದನ್ನು ಸ್ವೀಕರಿಸು. ಇಕ್ಕಟ್ಟು ಪರಿಸ್ಥಿತಿಗಳಲ್ಲಿ ದೇವರನ್ನೆಂದೂ ಅರಿತಿರದವರಂತೆ ನಾವು ನಡೆದುಕೊಳ್ಳುತ್ತೇವೆ. ದೊಡ್ಡದಾದ ಗುಂಪಿನಲ್ಲಿ ಒಬ್ಬನೇ ಒಬ್ಬನು ದೇವರ ಗುಣ ಸ್ವರೂಪಗಳಲ್ಲಿ ತನ್ನ ನಂಬಿಕೆಯನ್ನು ನೆಚ್ಚಿಕೊಂಡು ಧೈರ್ಯ ತೋರುವನು – ಅವನು ನೀನೇ.

# ಮೊದಲು ದೇವರು

**''ಮೊದಲು ದೇವರಲ್ಲಿ ವಿಶ್ವಾಸವನ್ನಿಡು''**
**''ಆತನು ಪ್ರತಿ ಮನುಷ್ಯನ ಆಂತರ್ಯವನ್ನು ತಿಳಿದವನಾದ ಕಾರಣ ........**
**ಆತನಿಗೆ ಸಾಕ್ಷಿ ಕೊಡಬೇಕಾದ ಅವಶ್ಯವಿರಲಿಲ್ಲ'' - (ಯೋಹಾನ 2:24,25)**

ನಮ್ಮ ಸ್ವಾಮಿಯು ಯಾವ ಮನುಷ್ಯನಲ್ಲಿಯೂ ವಿಶ್ವಾಸವಿಟ್ಟಿರಲಿಲ್ಲ. ಆದರೂ ಆತನು ಮನುಷ್ಯರಲ್ಲಿ ಸಂಶಯವುಳ್ಳವನಾಗಿರಲಿಲ್ಲ, ಯಾರ ವಿಷಯದಲ್ಲಿಯೂ ಕಹಿಭಾವನೆಯುಳ್ಳವನಾಗಿರಲಿಲ್ಲ, ಯಾವ ಮನುಷ್ಯನ ಬಗ್ಗೆ ಎಂದೂ ಹತಾಶೆಗೊಂಡಿಲಿಲ್ಲ, ಯಾಕೆಂದರೆ ಆತನು ಪ್ರಥಮವಾಗಿ ದೇವರಲ್ಲಿ ಭರವಸೆ ಇಟ್ಟಿದ್ದನು ; ದೇವರ ಕೃಪೆಯು ಮಾನವರಲ್ಲೇನು ಮಾಡಲಿದೆ ಎಂಬ ವಿಷಯದಲ್ಲಿ ದೇವರ ಮೇಲೆ ಸಂಪೂರ್ಣ ಭರವಸೆಯುಳ್ಳವನಾಗಿದ್ದನು. ಒಂದು ವೇಳೆ ನಾನು ಮನುಷ್ಯರಲ್ಲಿ ಪ್ರಥಮಥಾ ವಿಶ್ವಾಸವನ್ನಿಟ್ಟು ಕೊಂಡಿದ್ದರೇ, ಪ್ರತಿಯೊಬ್ಬರನ್ನು ಹತಾಶೆಗೊಳಿಸುವುದಲ್ಲಿ ಕೊನೆಗೊಳ್ಳುತ್ತೇನೆ ಮತ್ತು ಕಹಿ ಪ್ರವೃತ್ತಿಯವನಾಗಿ ಬಿಡುತ್ತೇನೆ. ಮನುಷ್ಯನೆಂದೂ ಇರಲಾರದ ರೀತಿಯಲ್ಲಿ ಅವನು ಇರಬೇಕೆಂದು, ಅಂದರೆ ಸಂಪೂರ್ಣವಾಗಿ ಒಳ್ಳೆಯವನಾಗಿರಬೇಕೆಂದು - ನಾನು ಪಟ್ಟು ಹಿಡಿದಿರುವುದೇ ನಾನು ಹೀಗಾಗಲು ಕಾರಣ. ನಿನ್ನ ಮೇಲಾಗಲೀ, ಇತರರಲ್ಲಾಗಲೀ ದೇವರ ಅಪಾರ ಕೃಪೆಯ ಹೊರತು ಬೇರೆ ಯಾವುದರಲ್ಲಿಯೂ ವಿಶ್ವಾಸವಿಡಬೇಡ.

''ದೇವರ ಅಗತ್ಯಗಳೇ ಮೊದಲು'' : ಇಗೋ, ದೇವರೇ ನಿನ್ನ ಚಿತ್ತವನ್ನು ನೆರವೇರಿಸುವುದಕ್ಕೆ ಬಂದಿದ್ದೇನೆ'' (ಇಬ್ರಿ 10:7)

ಮನುಷ್ಯನಿಗೆ ಅಗತ್ಯವೆಂದುಕಾಣುವಂಥಾದ್ದಕ್ಕೆ ಅವನು ವಿಧೇಯನಾಗುತ್ತಾನೆ; ನಮ್ಮ ಸ್ವಾಮಿಯ ವಿಧೇಯತೆಯು ತನ್ನ ತಂದೆಯ ಚಿತ್ತವನ್ನು ನೆರವೇರಿಸುವುದಾಗಿತ್ತು. ಈಗಿನ ದಿನದ ಕಾತುರದ ಕೂಗು - ''ಸುವಾರ್ತಾ ಸೇವೆಯ ಸ್ವಲ್ಪ ಕೆಲಸವನ್ನು ಮಾಡಲು ನಮಗೆ ಕೊಡಿರಿ, ವಿಧರ್ಮಿಗಳು ದೇವರನ್ನರಿಯದೆ ಸಾಯುತ್ತಿರುವರು, ನಾವು ಹೋಗಿ ಆತನ ವಿಷಯವಾಗಿ ತಿಳಿಸಬೇಕು''. ವೈಯಕ್ತಿಕವಾಗಿ ದೇವರ ಅಗತ್ಯಗಳು ಮೊದಲು ನೆರವೇರುವಂತೆ ನೋಡಿಕೊಳ್ಳಬೇಕು. ''ನಿಮಗೆ ಶಕ್ತಿಯನ್ನು ಹೊದಿಸುವ ತನಕ ....... ಕಾದು ಕೊಂಡಿರ್ರಿ. (ಲೂಕ 24:49) ಕ್ರಿಸ್ತೀಯ ತರಬೇತಿಯ ಉದ್ದೇಶ - ನಮ್ಮನ್ನು ದೇವರ ಅಗತ್ಯತೆಗಳಿಗೆ ನೇರವಾಗಿ ಸಂಬಂಧಿಸುವಂತೆ ಮತ್ತು ದೇವರ ಚಿತ್ತವನ್ನರಿಯುವಂತೆ ಮಾಡುವುದು. ದೇವರ ಅಗತ್ಯತೆಗಳು ನಮ್ಮಲ್ಲಿ ನೆರವೇರಿದ ನಂತರವೇ ಬೇರೊಂದು ಸ್ಥಳದಲ್ಲಿ ಆತನ ಅಗತ್ಯತೆಗಳನ್ನು ನೆರವೇರಿಸಲು ಮಾರ್ಗಗಳನ್ನು ದೇವರು ತೆರೆದಿಡುತ್ತಾನೆ.

''ಮೊದಲು ದೇವರಲ್ಲಿ ವಿಶ್ವಾಸವನ್ನಿಡು'' : ಯಾವನಾದರೂ ನನ್ನ ಹೆಸರಿನಲ್ಲಿ ಇಂಥ ಒಂದು ಚಿಕ್ಕ ಮಗುವನ್ನು ಸೇರಿಸಿಕೊಂಡರೆ, ನನ್ನನ್ನು ಸೇರಿಸಿಕೊಂಡ ಹಾಗಾಯಿತು'' (ಮತ್ತಾಯ 18:5) ದೇವರ ವಿಶ್ವಾಸವೆಂದರೆ ತನ್ನನ್ನು ಶಿಶುವಾಗಿ ಮಾಡಿಕೊಂಡು ನನಗೆ ಲಭಿಸುವನು. ಆಗ ನನ್ನ ವೈಯಕ್ತಿಕ ಜೀವಿತವು ಆತನಿಗೆ 'ಬೆತ್ಲೆಹೇಮ್' ಆಗಿರಬೇಕೆಂದು ನನ್ನಿಂದ ಆತನು ಬಯಸುವನು. ನನ್ನೊಳಗೆ ವಾಸಿಸುತ್ತಿರುವ ದೇವರ ಮಗನ ಜೀವವು ನನ್ನ ಸ್ವಾಭಾವಿಕ ಜೀವನವನ್ನು ಕ್ರಮೇಣವಾಗಿ ಪರಿವರ್ತನೆಗೊಳಪಡಿಸಲು ಅನುವು ಮಾಡಿಕೊಡುತ್ತಿರುವೆನೋ? ತನ್ನ ಮಗನು ನಶ್ವರವಾದ ನನ್ನ ಶರೀರದಲ್ಲಿ ರೂಪುಗೊಳ್ಳಬೇಕೆಂಬುದೇ ದೇವರ ಅಂತಿಮ ಉದ್ದೇಶವಾಗಿದೆ.

# ಬೆಚ್ಚಿ ಬೀಳಿಸುವ ಪ್ರಶ್ನೆ (ಹೌಹಾರಿಸುವ ಪ್ರಶ್ನೆ)

**''ನರಪುತ್ರನೇ, ಈ ಎಲುಬುಗಳಿಗೆ ಜೀವವು ಬರಬಹುದೋ'' - (ಯೆಹೆಜ್ಕೆ 37:3)**

ಆ ಪಾಪಿಯು ಸಂತನಾಗಬಲ್ಲನೇ ? ತಿರುಚಿದ ಆ ಜೀವನ ಸರಿಯಾಗಬಲ್ಲದೋ ? ಅಲ್ಲಿ ಒಂದೇ ಒಂದು ಸಮರ್ಪಕ ಉತ್ತರವಿದೆ ''ಕರ್ತನೇ, ನೀನು ಮಾತ್ರ ಅದನ್ನು ಬಲ್ಲೆ. ಅದು ನನಗೆ ತಿಳಿಯದು'' (ಯೆಹೆಜ್ಕೆ 37:3). ಧಾರ್ಮಿಕ ಸಹಜ ವಿವೇಚನೆಯಿಂದ ಈ ಸತ್ಯವನ್ನು ತುಳಿದುಹಾಕಿ ಹೇಳಬೇಡ ''ಹೌದು, ಹೌದು, ಒಂದಿಷ್ಟು ಸತ್ಯವೇದ ಪಠಣದಿಂದಲೂ ಕೊಂಚ ಭಕ್ತಿ ಮತ್ತು ಪ್ರಾರ್ಥನೆ ಗಳಿಂದಲೂ ಅದನ್ನು ಯಾವ ರೀತಿಯಲ್ಲಿ ಸಾಧಿಸಬಹುದೆಂದು ನಾನು ಮನಗಂಡಿರುವೆನು'' ಎಂದು.

ದೇವರಲ್ಲಿ ವಿಶ್ವಾಸವಿಡುವುದಕ್ಕಿಂತಲೂ ದೇವರ ಸಲುವಾಗಿ ಏನಾದರೂ ಮಾಡುವುದು ಬಹು ಸುಲಭ; ಅಂಥಾ ಚಟುವಟಿಕೆಯಲ್ಲಿರುವ ದಿಗಿಲುಗಳನ್ನೇ ದೈವ ಪ್ರೇರಣೆ ಎಂದು ತಪ್ಪಾಗಿ ಗ್ರಹಿಸುತ್ತೇವೆ. ಅದರಿಂದ ದೇವರ ಸಂಗಡ ಕೆಲವೇ ಸಹಕಾರ್ಯ ಕರ್ತರಿದ್ದಾರೆ. ಆತನ ಪರವಾಗಿ ಯಾದರೋ ಅನೇಕ ಸಹಕಾರ್ಯಕರ್ತರಿದ್ದಾರೆ. ದೇವರಲ್ಲಿ ನಂಬಿಕೆಯನ್ನಿಡುವುದಕ್ಕಿಂತಲೂ ದೇವರ ಪರವಾಗಿ ನಾವು ಆತನ ಸೇವೆಯನ್ನು ಮಾಡುತ್ತೇವೆ. ನಾನು ಮಾಡಲಾಗದ್ದನ್ನು ನನ್ನೊಳಗೆ ದೇವರು ಮಾಡುವನು ಎಂಬುದನ್ನು ನಾನು ನಂಬಿದ್ದೇನೆಯೋ? ದೇವರು ನನಗಾಗಿ ಏನೆಲ್ಲವನ್ನೂ ಮಾಡಿದ್ದಾನೆಂಬುದನ್ನು ಅರಿತುಕೊಳ್ಳದ ಮಟ್ಟದಲಿ ಇತರರ ಬಗ್ಗೆ ನಾನು ನಿರಾಶೆ ಹೊಂದಿದ್ದೇನೆ. ನಾನು ಕಾಣುವ ಯಾರೊಬ್ಬನಲ್ಲಿಯೂ, ನಾನು ಹತಾಶೆಗೊಳ್ಳದಂತೆ ಮಾಡುವ ದೇವರ ಸಾಮರ್ಥ್ಯದ ಅದ್ಭುತ ಗ್ರಹಿಕೆಯನ್ನುಂಟು ಮಾಡುವ, ವ್ಯಕ್ತಿಗತ ಅನುಭವವೇನಾದರೂ ನನಗೆ ಉಂಟಾಗಿದೆಯೋ ? ನನ್ನೊಳಗೆ ಕೊಂಚವಾದರೂ ಆತ್ಮೀಕ ಕಾರ್ಯಸಾಧನೆ ಯಾಗಿದೆಯೋ ? ನನ್ನ ಜೀವಿತದಲ್ಲಿರುವ ಅವಿಚಾರಯುಕ್ತ ಚಟುವಟಿಕೆಗಳ ಪ್ರಮಾಣವು ನನ್ನ ವೈಯಕ್ತಿಕವಾದ ಆತ್ಮೀಕ ಅನುಭವದ ಕೊರತೆಯ ಪ್ರಮಾಣದಷ್ಟೇ ಇರುತ್ತದೆ.

''ನನ್ನ ಜನರೇ, ನೋಡಿರಿ, ನಾನು ನಿಮ್ಮ ಗೋರಿಗಳನ್ನು ತೆಗೆಯುತ್ತೇನೆ'' (ಯೆಹೆಜ್ಕೆ - 13:12) ದೇವರಿಂದ ಬೇರ್ಪಟ್ಟ ಮನುಷ್ಯ ಸ್ವಭಾವವು, ಹೇಗಿರುತ್ತದೆಂಬುದನ್ನು ನಿನಗೆ ತೋರಿಸಲು ದೇವರು ಇಚ್ಛಿಸಿದಾಗ, ಆತನು ಅದನ್ನು ನಿನ್ನೊಳಗೆ, ನಿನಗೇ, ತೋರ್ಪಡಿಸುತ್ತಾನೆ. ದೇವರ ಕೃಪೆಗೆ ಹೊರತಾದ ನೀನು, ಏನಾಗಿರಬಹುದೆನ್ನುವ ಒಂದು ದರ್ಶನವನ್ನು ದೇವರಾತ್ಮನು ನಿನಗೆ ಎಂದಾದರೂ ಅನುಗ್ರಹಿಸಿದ್ದರೆ (ದೇವರ ಆತ್ಮನು ನಿನ್ನಲ್ಲಿ ಕಾರ್ಯನಿರತವಾಗಿರುವ ಸಮಯದಲ್ಲಿಯೇ ಆ ಕಾರ್ಯವನ್ನು ಮಾಡುವನು) ಆಗ ನೀನೆಂಥಾ ಅಪರಾಧಿ ಎಂದೆನಿಸಬಹುದೋ ಅದರ ಅರ್ಧ ದಷ್ಟಾದರೂ ಅಪರಾಧಿಯಾದವನು ನಿಜವಾಗಿಯೂ ಈ ಲೋಕದಲ್ಲಿ ಇಲ್ಲದಿರುವ ಸಾಧ್ಯತೆಯನ್ನು ನೀನು ತಿಳಿದು ಕೊಳ್ಳುವಿ. ನನ್ನ ಗೋರಿಯು ದೇವರಿಂದ ತೆರೆಯಲ್ಪಟ್ಟಿದೆ ಮತ್ತು ''ನನ್ನಲ್ಲಿ ಅಂದರೆ ನನ್ನ ಶರೀರಾಧೀನ ಸ್ವಭಾವದಲ್ಲಿ ಒಳ್ಳೇದೇನೂ ವಾಸವಾಗಿಲ್ಲವೆಂಬುದು ನನಗೆ ತಿಳಿದದೆ'' (ರೋಮಾ 7:18). ದೇವರಾತ್ಮನು ತನ್ನ ಕೃಪೆ ಇಲ್ಲದ ಮನುಷ್ಯ ಸ್ವಭಾವವು ಹೇಗಿರುತ್ತದೆಂಬುದನ್ನು ಸತತವಾಗಿ ತನ್ನ ಮಕ್ಕಳಿಗೆ ಬಯಲು ಪಡಿಸುತ್ತಿರುತ್ತಾನೆ.

# ಯಾವ ಗೀಳು ನಿನ್ನನ್ನು ಹಿಡಿದಿದೆ ?

**''ಯಾವನು ಯೆಹೋವನಲ್ಲಿ ಭಯಭಕ್ತಿಯುಳ್ಳವನೋ..... ?'' – (ಕೀರ್ತನೆ 25:12)**

ಯಾವ ಗೀಳು ನಿನ್ನನ್ನು ಹಿಡಿದದೆ ? ಇಲ್ಲ, ಯಾವ ಗೀಳೂ ನನ್ನನ್ನು ಹಿಡಿದಿಲ್ಲವೆಂದು ನೀನು ಹೇಳಿದರೂ, ನಾವೆಲ್ಲರೂ ಒಂದಲ್ಲ ಒಂದು ಗೀಳಿನಿಂದ ಹಿಡಿಯಲ್ಪಟ್ಟಿರುತ್ತೇವೆ. ಸಾಧಾರಣವಾಗಿ ನಮ್ಮ ಗೀಳು ನಮ್ಮನ್ನು ಹಿಡಿದಿರುತ್ತದೆ, ಇಲ್ಲವೇ ನಾವು ಕ್ರೈಸ್ತರಾಗಿದ್ದರೇ ಕ್ರಿಸ್ತೀಯ ಜೀವಿತದ ನಮ್ಮ ಅನುಭವಗಳೇ ಗೀಳುಗಳಾಗಿ ನಮ್ಮನ್ನು ಹಿಡಿದಿರುತ್ತವೆ.ನಾವು ದೇವರ ಗೀಳು ಹತ್ತಿದವರಾಗಿರಬೇಕೆಂದು ಕೀರ್ತನಾಕಾರನು ಹೇಳಿರುತ್ತಾನೆ. ಕ್ರಿಸ್ತೀಯ ಜೀವಿತದ ಪ್ರಜ್ಞೆ ಎಂದರೆ – ಸದಾ ದೇವರ ವಿಷಯದ ಯೋಚನೆಗಳಿಂದ ತುಂಬಿರುವದಲ್ಲ – ದೇವರೇ ಜೀವಿತದ ಪ್ರಜ್ಞೆಯಾಗಿರಬೇಕು. ನಮ್ಮ ಸಂಪೂರ್ಣ ಬದುಕಿನಲ್ಲಿ – ಅಂತರಂಗದಲ್ಲಿಯೂ, ಬಹಿರಂಗದಲ್ಲಿಯೂ ದೇವರ ಪ್ರಸನ್ನತೆಯ ಗೀಳು ತುಂಬಿರಬೇಕು. ಒಂದು ಮಗುವು ಪ್ರಜ್ಞಾ ಪೂರ್ವಕವಾಗಿ ತಾಯಿಯನ್ನು ಯೋಚಿಸದಿದ್ದರೂ, ಆ ಮಗುವಿನ ಪ್ರಜ್ಞೆಯು ಎಷ್ಟರ ಮಟ್ಟಿಗೆ ತಾಯಿಯ ಗೀಳಿನಲ್ಲಿ ಲೀನವಾಗಿದೆಯೆಂದರೆ, ಏನಾದರೂ ಬಿಕ್ಕಟ್ಟು ಎದುರಾದಾಗ ಅದು ಪ್ರಜ್ಞಾ ರಹಿತವಾಗಿ ಆತುಕೊಳ್ಳುವ ಸಂಬಂಧವು ತಾಯಿಯೇ. ಅದೇ ರೀತಿಯಲ್ಲಿ ನಾವು ''ಆತನಲ್ಲಿಯೇ ಜೀವಿಸುತ್ತೇವೆ. ಚಲಿಸುತ್ತೇವೆ, ಇರುತ್ತೇವೆ'' (ಅ.ಕೃ. 17:28) ಪ್ರತಿಯೊಂದನ್ನು ದೇವರಿಗೆ ಸಂಬಂಧಿ ಸಿರುವಂತೆ ದೃಷ್ಟಿಸಬೇಕು. ಯಾಕೆಂದರೆ ನಮ್ಮಲ್ಲಿ ನೆಲೆಗೊಂಡಿರುವ ದೇವರ ಪ್ರಜ್ಞೆಯೇ ನಮ್ಮ ಜೀವಿತವನ್ನು ಸದಾ ಮುನ್ನಡೆಸುತ್ತದೆ.

ನಾವು ದೇವರ ಗೀಳು ಹಿಡಿದವರಾಗಿದ್ದರೆ, ಮನೋ ಕಾಳಜಿ, ಸಂಕಷ್ಟ ಮತ್ತು ಆತುರತೆಗಳು ನಮ್ಮೊಳಗೆ ನುಸುಳುವುದಿಲ್ಲ. ''ಚಿಂತೆ ಮಾಡುವ ಪಾಪ''ದ ಬಗ್ಗೆ ಯೇಸು ಸ್ವಾಮಿಯು ಯಾಕೆ ಹೆಚ್ಚು ಒತ್ತು ನೀಡಿದರೆಂಬುದನ್ನು ನಾವು ಅರ್ಥ ಮಾಡಿಕೊಳ್ಳುತ್ತೇವೆ. ದೇವರೇ ನಮ್ಮನ್ನಾವರಿಸಿರುವಾಗ, ಪೂರ್ಣ ಅಪನಂಬಿಕೆಯಲ್ಲಿರುವ ಸಾಹಸವನ್ನು ಹೇಗೆ ತಾನೇ ನಾವು ಮಾಡಬಲ್ಲೆವು ? ದೇವರ ಗೀಳು ನಮ್ಮನ್ನು ಬೆನ್ನಟ್ಟಿ ಹಿಡಿದಿದ್ದರೆ, ಅದೇ ಗೀಳು ನಮ್ಮ ಮೇಲೆರಗುವ ವೈರಿಗಳ ಎಲ್ಲಾ ದಾಳಿಗಳನ್ನು ಹಿಮ್ಮೆಟ್ಟಿಸುವ ದೊಡ್ಡ ಅಡ್ಡಗೋಡೆಯಾಗಿರುತ್ತದೆ.

''ಅವನ ಆತ್ಮವು ಶಾಂತಿಯಲ್ಲಿ ನೆಲೆಗೊಂಡಿರುವುದು'' (ಕೀರ್ತ 25:13). ನಮ್ಮ ಜೀವವು ಕ್ರಿಸ್ತನೊಂದಿಗೆ ದೇವರಲ್ಲಿ ಮರೆಯಾಗಿದ್ದರೆ, ನಮ್ಮ ಕಷ್ಟನಷ್ಟಗಳಲ್ಲಿ, ನಮ್ಮ ಅಪನಂಬಿಕೆ, ತಪ್ಪು ಗ್ರಹಿಕೆಗಳಲ್ಲಿ, ನಿಂದನೆಗಳಲ್ಲಿ ನಾವು ನಿಶ್ಚಿಂತರಾಗಿರುವಂತೆ ದೇವರು ಮಾಡುತ್ತಾನೆ ಮತ್ತು ಮನಶ್ಶಾಂತಿಯನ್ನು ಕೊಡುತ್ತಾನೆ. ನಾವು ದೇವರ ಒಡನಾಟದಲ್ಲಿ ನೆಲೆಗೊಂಡಿರುವ ಇಂಥಾ ಅದ್ಭುತ ಸತ್ಯಾರ್ಥ ಪ್ರಕಟನೆಯ ಅಪಹರಣಕ್ಕೆ ನಾವೇ ಆಸ್ಪದ ಕೊಡುತ್ತೇವೆ. ಆದರೆ ನೆನಪಿರಲಿ ''ದೇವರೇ ನಮ್ಮ ಆಶ್ರಯ ದುರ್ಗವಾಗಿದ್ದಾನೆ'' (ಕೀರ್ತ 46:1) ಈ ಆಶ್ರಯ ದುರ್ಗವನ್ನು ಸೀಳಿಕೊಂಡು ಯಾವುದೂ ಒಳಗೆ ಪ್ರವೇಶಿಸಲಾರದು.

# ಪ್ರಭುವಿನ ರಹಸ್ಯ

**''ಯಾವನು ದೇವರಲ್ಲಿ ಭಯಭಕ್ತಿಯುಳ್ಳವನೋ ....... ಅವರಿಗೆ ಆಪ್ತಮಿತ್ರನಂತಿರುವನು''**
**- (ಕೀರ್ತನೆ - 25:12-14)**

ಗೆಳೆಯನ ಲಕ್ಷಣವೇನು ? ತನ್ನ ಗುಪ್ತ ದುಃಖಗಳನ್ನು ನಿನಗೆ ತಿಳಿಸುವುದೇ ? - ಅಲ್ಲ ; ಅವನು ತನ್ನ ರಹಸ್ಯ ಆನಂದಗಳನ್ನು ನಿನಗೆ ಹೇಳುತ್ತಾನೆ. ತಮ್ಮ ರಹಸ್ಯ ದುಃಖಗಳನ್ನು ಅನೇಕರು ಹೇಳುತ್ತಾರೆ, ಆದರೆ ಆಪ್ತ ಮಿತ್ರತ್ವದ ಅಂತಿಮ ಲಕ್ಷಣ - ರಹಸ್ಯ ಆನಂದಗಳನ್ನು ಹಂಚಿಕೊಳ್ಳುವುದು. ತನ್ನ ಆನಂದಗಳನ್ನು ನಿಮಗೆ ಹೇಳಲು ಎಂದಾದರೂ ದೇವರಿಗೆ ಅನುವು ಮಾಡಿಕೊಟ್ಟಿರುವೆವೊ? ಆತನು ನಮ್ಮೊಂದಿಗೆ ಮಾತನಾಡಲು ಆಸ್ಪದವೇ ಇರದಂತೆ ಎಡೆಬಿಡದೆ ನಮ್ಮ ರಹಸ್ಯಗಳನ್ನೇ ದೇವರಿಗೆ ಹೇಳುತ್ತಿರುವೆವೋ? ನಮ್ಮ ಕ್ರಿಸ್ತೀಯ ಜೀವಿತದ ಪ್ರಾರಂಭದಲ್ಲಿ ಕೇವಲ ನಮ್ಮ ಬೇಡಿಕೆಗಳನ್ನೇ ಆತನ ಮುಂದೊಡ್ಡಿದ್ದೇವೆ, ಆದರೆ ನಾವು ಕಂಡುಕೊಂಡದ್ದು - ದೇವರು ತನ್ನ ಉದ್ದೇಶಗಳ ಬಗ್ಗೆ ನಾವು ತಿಳುವಳಿಕೆ ಪಡೆಯುವಂತೆ ತನ್ನೊಡನೆ ನಮ್ಮ ಬಾಂಧವ್ಯವಿರಬೇಕೆಂದು ಬಯಸುತ್ತಿರುವುದನ್ನು. ''ನಿನ್ನ ಚಿತ್ತವೇ ನೆರವೇರಲಿ'' (ಮತ್ತಾಯ 6:10) ಎಂಬುವ ಯೇಸುಕ್ರಿಸ್ತನ ಪ್ರಾರ್ಥನೆಯ ಉದ್ದೇಶದಂತೆ ದೇವರ ರಹಸ್ಯಗಳನ್ನು ತಿಳಿಯಲು ಸಾಧ್ಯವಾಗುವಷ್ಟು ಆತ್ಮೀಯತೆಯಲ್ಲಿ ನಾವು ಸೇರಿರುವೆವೋ? ದೇವರು ನಮಗೆ ಅತ್ಯಮೂಲ್ಯನೂ, ಪ್ರಿಯನೂ ಆಗಿರುವುದು - ಆತನು ನಮಗೆ ಮಾಡುವ ದೊಡ್ಡ ದೊಡ್ಡ ಆಶೀರ್ವಾದಗಳಿಂದ ಅಲ್ಲ, ಚಿಕ್ಕಪುಟ್ಟ ವಿಷಯಗಳಲ್ಲಿಯೇ, ಅವುಗಳೇ ನಾವು ಆತನೊಂದಿಗೆ ಹೊಂದಿರುವ ಸಂಬಂಧವನ್ನು ಮತ್ತು ನಮ್ಮೊಂದಿಗಿರುವ ಅಮೋಘವಾದ ಆಪ್ತತೆಯನ್ನು ತಿಳಿಯಪಡಿಸುತ್ತವೆ. ನಮ್ಮ ವೈಯಕ್ತಿಕ ಜೀವನದ ಸಕಲ ವಿವರಗಳನ್ನು ಆತನು ಬಲ್ಲನು.

''ಅವನಿಗೆ ಉಚಿತ ಮಾರ್ಗವನ್ನು ಆತನು ಬೋಧಿಸುವನು'' (ಕೀರ್ತನೆ 25:12) ಪ್ರಥಮದಲ್ಲಿ ದೇವರಿಂದ ಮಾರ್ಗದರ್ಶನ ಪಡೆಯುವ ಅರಿವನ್ನು ನಾವು ಬಯಸಿದೆವು. ಅನಂತರ ಮುಂದೆ ಸಾಗುತ್ತಾ ನಾವು ದೇವರ ಪ್ರಜ್ಞೆಯಲ್ಲಿ ಎಷ್ಟು ಹೆಚ್ಚಾಗಿ ಜೀವಿಸಿದ್ದೇವೆಂದರೆ ಆತನ ಚಿತ್ತವೇನೆಂದು ಕೇಳುವ ಅಗತ್ಯವೂ ನಮಗಿರಲಿಲ್ಲ. ಯಾಕೆಂದರೆ ಬೇರೊಂದು ಮಾರ್ಗವನ್ನು ಆಯ್ಕೆ ಮಾಡಿಕೊಳ್ಳುವ ಯೋಚನೆಯೂ ನಮಗೆ ಹೊಳೆಯುವುದಿಲ್ಲ. ನಾವು ರಕ್ಷಿಸಲ್ಪಟ್ಟು ಶುದ್ಧೀಕರಣ ಗೊಂಡಿದ್ದರೆ, ದೇವರು ನಮ್ಮ ಸಾಧಾರಣ ಆಯ್ಕೆಗಳಲ್ಲಿಯೂ - ಅದು ಎಷ್ಟೇ ಚಿಕ್ಕದಾಗಿರಲಿ, ಆತನು ಮಾರ್ಗದರ್ಶನ ಮಾಡುತ್ತಾನೆ. ದೇವರಿಗೆ ಬೇಡವಾಗಿರುವುದನ್ನು ನಾವು ಆಯ್ಕೆ ಮಾಡಿದರೆ ಅದನ್ನು ತಡೆಹಿಡಿಯುತ್ತಾನೆ. ನಾವದಕ್ಕೆ ಲಕ್ಷ್ಯ ಕೊಡಬೇಕು. ಸಂಶಯವೇನಾದರೂ ಉಂಟಾದರೆ ತಕ್ಷಣವೇ ನಿಲ್ಲಿಸಿಬಿಡಬೇಕು. ಅದರ ಯುಕ್ತಾಯುಕ್ತತೆಯ ಬಗ್ಗೆ ವಿವೇಚನೆ ಮಾಡಿ 'ನಾನೇಕೆ ಅದನ್ನು ಮಾಡಬಾರದು' ಎಂದು ಹೇಳಬಾರದು. ನಮ್ಮ ಆಯ್ಕೆಗಳಲ್ಲಿ ದೇವರು ಖಂಡಿತವಾಗಿಯೂ ನಿರ್ದೇಶನವನ್ನೀಯುತ್ತಾನೆ ಮತ್ತು ನಮ್ಮ ಲೌಕಿಕ ಹಾಗೂ ವ್ಯವಹಾರ ಜ್ಞಾನದ ವಿಷಯಗಳಲ್ಲಿ ಮಾರ್ಗದರ್ಶನ ವೀಯುತ್ತಾನೆ. 'ಪ್ರಭುವೇ ಈಗ ನಿನ್ನ ಚಿತ್ತವೇನು?' ಎಂದು ಸತತವಾಗಿ ಕೇಳುತ್ತಾ ದೇವರ ಆತ್ಮನಿಗೆ ಇನ್ನೆಂದಿಗೂ ಅಡ್ಡಿಮಾಡುವುದಿಲ್ಲ.

# ಎಂದಿಗೂ ಕೈಬಿಡದ ದೇವರು

**''ನಾನು ನಿನ್ನನ್ನು ಎಂದಿಗೂ ಕೈಬಿಡುವದಿಲ್ಲ, ಎಂದಿಗೂ ತೊರೆಯುವದಿಲ್ಲ'' - (ಇಬ್ರಿಯ - 13:5)**

ನನ್ನ ಆಲೋಚನೆಯು ಯಾವ ಮಾರ್ಗದಲ್ಲಿ ಸಾಗುತ್ತಿದೆ? ದೇವರು ಏನು ಹೇಳುತ್ತಿರುವನೋ ಅದರ ಕಡೆಗೋ ಇಲ್ಲವೇ ನನ್ನ ಭಯಗಳ ಕಡೆಗೋ ? ದೇವರು ಹೇಳಿರುವುದನ್ನು ಕೇವಲ ಪುನರುಚ್ಚರಿಸುತ್ತಿದ್ದೇವೆಯೋ, ಅಥವಾ ದೇವರು ಹೇಳುವುದನ್ನು ನಿಜವಾಗಿಯೂ ಆಲಿಸಿದ ನಂತರ ದೇವರು ಹೇಳಿರುವುದನ್ನು ಹೇಳದೆ, ಬೇರೇನನ್ನೋ ಹೇಳಲು ಅಭ್ಯಾಸಿಸುತ್ತಿರುವೇನೋ ? ''ನಾನು ನಿನ್ನನ್ನು ಎಂದಿಗೂ ಕೈಬಿಡುವುದಿಲ್ಲ ಎಂದಿಗೂ ತೊರೆಯುವುದಿಲ್ಲವೆಂದು ದೇವರು ಹೇಳಿದ್ದಾನೆ'' ಆದುದರಿಂದ ಕರ್ತನು ನನ್ನ ಸಹಾಯಕನು ಭಯಪಡೆನು, ಮನುಷ್ಯನು ನನಗೆ ಏನು ಮಾಡಾನು ? ಎಂದು ನಾವು ಧೈರ್ಯವಾಗಿ ಹೇಳಬಲ್ಲೆವು'' (ಇಬ್ರಿ 13:5)

ನಿನ್ನನ್ನು ಎಂದಿಗೂ ಕೈಬಿಡುವುದಿಲ್ಲ. ಪಾಪಗಳ ಕಾರಣಕ್ಕಾಗಿ ಅಲ್ಲ , ನನ್ನ ಸ್ವಾರ್ಥತೆ, ಹಠಮಾರಿತನ, ನನ್ನ ಚಪಲ ಸ್ವಭಾವದ ಕಾರಣಕ್ಕಾಗಿಯೂ ಅಲ್ಲ. ''ನಾನೆಂದಿಗೂ ಕೈಬಿಡುವುದಿಲ್ಲ'' ಎಂದು ದೇವರು ನನಗೆ ಹೇಳುವಂತೆ ನಿಜವಾಗಿಯೂ ಆತನಿಗೆ ಆಸ್ಪದ ಕೊಟ್ಟಿರುವೆನೋ ? ಹಾಗೆಂದು ದೇವರು ನುಡಿದ ವಾಗ್ದಾನವನ್ನು ನಾನು ಈವರೆಗೂ ಕೇಳಿಸಿಕೊಂಡಿರುವುದು ನಿಜವಾದರೆ ದೇವರು ಹಾಗೆ ಹೇಳುವುದನ್ನು ಮತ್ತೊಮ್ಮೆ ಕೇಳಿಸಿಕೊಳ್ಳಲು ಬಯಸುತ್ತೇನೆ.

''ನಿನ್ನನ್ನು ಎಂದಿಗೂ ತೊರೆದು ಬಿಡುವುದಿಲ್ಲ'' ....... ದೇವರು ನನ್ನನ್ನು ತೊರೆದುಬಿಡುವನು ಎಂದು ಕೆಲವೊಮ್ಮೆ ನಾನು ಯೋಚಿಸುವಂತೆ ಮಾಡುವುದು ನನಗೊದಗಿದ ಜೀವಿತದ ಸಂಕಷ್ಟಗಳಲ್ಲ ಆದರೆ ಜೀವಿತದ ದಾಸತ್ವವೇ ಹಾಗೆ ಯೋಚಿಸುವಂತೆ ಮಾಡುತ್ತದೆ. ಜಯಿಸಲಾಗದ ಗುಡ್ಡದಂಥಾ ಸಂಕಷ್ಟಗಳು ಅಲ್ಲಿ ಇಲ್ಲ. ಯಾವ ದರ್ಶನವೂ ಅಲ್ಲಿ ಇಲ್ಲ , ಸೌಂದರ್ಯ ಭರಿತ ಮತ್ತು ವಿಸ್ಮಯಕಾರಕವಾದುವುಗಳೇನೂ ಅಲ್ಲಿ ಇಲ್ಲ , ಸರಳ ಸಹಜವಾಗಿ ಸಾಗುವ ಸಾಮಾನ್ಯ ದಿನವೊಂದು ಮಾತ್ರ ಅಲ್ಲಿ ಇದೆ. ಅಂಥಲ್ಲಿಯೇ, ಇಂಥಾ ವಾಗ್ದಾನಗಳನ್ನು ಉಚ್ಚರಿಸುತ್ತಿರುವ ದೇವರ ಸ್ವರವನ್ನು ನಾನು ಆಲಿಸುತ್ತಿರುವೆನೋ ?

ದೇವರು ಏನೋ ಒಂದು ಉದ್ದಾಮ ಘನಂದಾರಿ ಕಾರ್ಯ ಮಾಡುವನೆಂದೂ, ಮತ್ತು ಭವಿಷ್ಯದಲ್ಲಿ ನಮ್ಮಿಂದ ಒಂದು ಅಸಾಮಾನ್ಯವಾದ ಕಾರ್ಯಮಾಡಿಸಲು ನಮ್ಮನ್ನು ಸಿದ್ಧಪಡಿಸುತ್ತಿರುವನೆಂಬ ಭಾವನೆಯೂ ನಮಗಿರುತ್ತದೆ. ಆದರೆ ದೇವರ ಕೃಪೆಯಲ್ಲಿ ಮುಂದೆ ಮುಂದೆ ಸಾಗುವಾಗ ದೇವರು ಈಗಲೇ, ಇಲ್ಲಿಯೇ, ನಾವಿರುವ ಸಾಮಾನ್ಯ ದಿನದಲ್ಲಿಯೇ, ತನ್ನನ್ನು ತಾನು ಮಹಿಮೆ ಪಡಿಸಿಕೊಳ್ಳುತ್ತಿರುವುದನ್ನು ನಾವು ಕಾಣುತ್ತೇವೆ. ದೇವರು ಹೇಳಿದ ಈ ವಾಗ್ದಾನವು ನಮ್ಮ ಬೆನ್ನಿಗೆ ಇದ್ದರೆ, ಅತ್ಯಂತ ವೈಶಿಷ್ಟಮಯ ಸಾಮರ್ಥ್ಯವು ನಮಗೆ ಬಂದೊದಗುತ್ತದೆ ಮತ್ತು ಜೀವಿತದ ಸಾಮಾನ್ಯ ದಿನಗಳಲ್ಲಿ, ಸಾಮಾನ್ಯ ಬದುಕಿನಲ್ಲಿ, ದೇವರನ್ನು ಮಹಿಮೆ ಪಡಿಸುವ ಗೀತವನ್ನು ಹಾಡಲು ನಾವು ಕಲಿಯುತ್ತೇವೆ.

# ದೇವರು ಹೀಗೆ ಹೇಳುತ್ತಾನೆ

**''ದೇವರು ತಾನೇ ಹೇಳಿದ್ದಾನೆ ಆದದರಿಂದ ......... ನಾವು ಧೈರ್ಯವಾಗಿ ಹೇಳಬಲ್ಲೆವು''**
**- (ಇಬ್ರಿಯ - 13:6)**

ನನ್ನ ಹೇಳಿಕೆಗಳೆಲ್ಲವೂ ದೇವರ ಹೇಳಿಕೆಗಳ ಮೇಲೆ ರಚಿಸಲ್ಪಟ್ಟಿವೆ. ದೇವರು ಹೇಳಿದ್ದಾನೆ ''ಎಂದಿಗೂ ನಿನ್ನನ್ನು ಕೈಬಿಡುವುದಿಲ್ಲ'' ಆದ್ದರಿಂದ ನಾನು ಧೈರ್ಯದಿಂದ ಹೇಳುತ್ತೇನೆ. ''ದೇವರು, ನನ್ನ ಸಹಾಯಕನು ಭಯಪಡೆನು'' (ಇಬ್ರಿಯ 13:5) ನಾನು ಭಯಗಳ ಸುಳಿಗೆ ಬೀಳುವುದಿಲ್ಲವೆಂದೂ ಮತ್ತು ಹೆದರಿಕೆಗೆ ಒಳಗಾಗುವುದೇ ಇಲ್ಲವೆಂದು ಇದರರ್ಥವಲ್ಲ ; ಅಂಥಾ ಸಮಯದಲ್ಲಿ ದೇವರು ಹೇಳಿದ ಭರವಸೆಯ ಮಾತನ್ನು ನೆನಪಿಗೆ ತಂದುಕೊಳ್ಳುವೆನು. ತಂದೆಯು ಬಯಸಿದ ಪ್ರಮಾಣಮಿತಿ (Standard) ಯನ್ನು ಮುಟ್ಟಲು ಹುರಿದುಂಬಿಸಲ್ಪಟ್ಟ ಚಿಕ್ಕ ಮಗುವಿನಂತೆ ಬಹು ಧೈರ್ಯದಿಂದಿರುವೆನು. ದಿಗಿಲು ಗೊಂದಲಗಳು ತಮ್ಮೊಳಗೆ ಪ್ರವೇಶಿಸಿದಾಗ ಅನೇಕರು, ದೇವರ ಹೇಳಿಕೆಗಳ ಅರ್ಥವನ್ನು ನೆನಪಿಗೆ ತಂದುಕೊಳ್ಳದೆ, ತಮ್ಮ ನಂಬಿಕೆಯಲ್ಲಿ ಎಡವಿ ಬೀಳುತ್ತಾರೆ. ಆತ್ಮೀಕವಾಗಿ ದೀರ್ಘವಾದ ಉಸಿರೆಳೆಯು ವುದನ್ನು ಅವರು ಮರತೇ ಬಿಡುವರು. ದಿಗ್ಭ್ರಾಂತಿಯನ್ನು ನಮ್ಮಿಂದ ಹೊರಹಾಕುವ ಒಂದೇ ಮಾರ್ಗವೆಂದರೆ, ದೇವರು ಹೇಳಿದ್ದನ್ನು ನಾವು ಕಿವಿಗೊಟ್ಟು ಆಲಿಸಬೇಕು.

ಯಾತಕ್ಕಾಗಿ ನೀನು ಭಯಪಡುತ್ತಿರುವೆ ? ಅದರ ವಿಷಯದಲ್ಲಿ ನೀನಂತೂ ಹೇಡಿಯಲ್ಲ - ಅದನ್ನು ನೀನೇ ಎದುರಿಸಬೇಕಾಗಿದೆ, ಆದರೂ ಏನೋ ಒಂದು ಹೆದರಿಕೆಯ ಭಾವನೆ ಅಲ್ಲಿದೆ. ನಿನ್ನ ಸಹಾಯಕ್ಕೆ ಯಾರೂ ಅಲ್ಲಿರದಿದ್ದರೆ, ಬೇರೇನೂ ಅಲ್ಲಿರದಿದ್ದರೆ, ನೀನು ಹೇಳು ''ಆದರೇನು'' ಈ ಕ್ಷಣದಲ್ಲಿ ಪ್ರಸಕ್ತ ಸನ್ನಿವೇಶದಲ್ಲಿಯೂ'' ಕರ್ತನು ನನ್ನ ಸಹಾಯಕನು ಭಯಪಡೆನು'' (ಇಬ್ರಿಯ 13:6) ದೇವರು ಹೇಳುವುದನ್ನು ಆಲಿಸಿದ ನಂತರವೇ ನೀನು ಹೇಳಲು ಕಲಿಯುತ್ತಿರುವಿಯೋ, ಇಲ್ಲವೇ ಹೇಳುವುದನ್ನು ಹೇಳಿಬಿಟ್ಟು ಅನಂತರ ನೀನು ಹೇಳಿದ್ದನ್ನು ದೇವರ ವಾಕ್ಯಗಳಲ್ಲಿ ತುರುಕಲು ಪ್ರಯತ್ನಿಸುತ್ತಿರುವಿಯೋ? ತಂದೆಯು ಹಾಗೆ ಹೇಳಿದ್ದನ್ನು ಭದ್ರವಾಗಿ ಹಿಡಿದುಕೊಂಡು ನಂತರ ಬಲವಾದ ಧೈರ್ಯದಿಂದ ಹೀಗೆ ಹೇಳು - ''ನಾನು ಭಯಪಡೆನು''. ನಿನ್ನ ಮಾರ್ಗದಲ್ಲಿ ಅಡರಿಸಿರುವ ಯಾವುದೇ ಕೇಡು ಮತ್ತು ವಿಪತ್ತುಗಳು ನಿನಗೆ ಮುಖ್ಯವಲ್ಲ , ತಂದೆಯು ಹೇಳಿದ್ದಾನೆ. ''ನಿನ್ನನ್ನು ಎಂದಿಗೂ ಕೈ ಬಿಡುವುದಿಲ್ಲ''

ದೇವರ ಹೇಳಿಕೆಗಳ ಮತ್ತು ನನ್ನ ಹೇಳಿಕೆಗಳ ನಡುವೆ ಮೂಗು ತೂರಿಸುವು ದೊಂದಿದೆ. - 'ಅದೃಡ ಮನಸ್ಕತೆ'. ಸಂಕಷ್ಟಗಳನ್ನೆದುರಿಸುವಾಗ ನಾವೆಷ್ಟು ಬಲಗುಂದಿರುವೆ ವೆಂಬುದನ್ನು ನಾವು ಗಮನಿಸಲೆತ್ನಿಸಿದಾಗ ಅವೇ ಸಂಕಷ್ಟಗಳು ಬೃಹದಾಕಾರವಾಗಿ ಬೆಳೆದು ನಿಲ್ಲುತ್ತವೆ. ಹಾಗೂ ಅವುಗಳ ಮುಂದೆ ನಾವು ಮಿಡಿತೆಗಳಂತಾಗಿ ಬಿಡುತ್ತೇವೆ. ಆಗ ದೇವರೂ ನಮಗೆ ಅಸ್ಥಿತ್ವ ರಹಿತನಾಗಿ ಬಿಡುವನು; ದೇವರು ಹೇಳಿರುವುದನ್ನು ಸ್ಮರಿಸು - ''ನಿನ್ನನ್ನು ಎಂದಿಗೂ ಕೈಬಿಡೆನು''. ದೇವರ ತಾರಕ ಸ್ವರವನ್ನು ಕೇಳಿದ ಮೇಲೆ ನಾವೂ ಹಾಡಲು ಕಲಿತಿರುವೆವೋ ? ಸದಾಕಾಲ ನಾವು ಧೈರ್ಯದಿಂದಿರುತ್ತಾ ಹೀಗೆ ಹೇಳಬಲ್ಲೆವೋ, ''ದೇವರು ನನ್ನ ಸಹಾಯಕನು'', ಅಥವಾ - ಭೀತಿಗೆ ಆಹುತಿ ಯಾಗುವೆವೋ?

# ನಿನ್ನೊಳಗೆ ದೇವರು ಸಾಧಿಸಿರುವುದನ್ನು ಬಾಹ್ಯಜೀವಿತದಲ್ಲಿ ಸಾಧಿಸು

**''ನಿಮ್ಮ, ನಿಮ್ಮ ರಕ್ಷಣೆಯನ್ನು ಸಾಧಿಸಿಕೊಳ್ಳಿರಿ'' - (ಫಿಲಿಪ್ಪಿ -2 : 12-13)**

ನಿಮ್ಮ ಚಿತ್ತವು ದೇವರ ಚಿತ್ತಕ್ಕೆ ಸಮರ್ಪಕವಾಗಿರುತ್ತದೆ ಎಂದು ನೀನು ಒಪ್ಪಿರುವಿ. ಆದರೆ ನೀನು ಮಾಡಲೇ ಬೇಕಾದುದ್ದೇನೆಂಬುದನ್ನು ನೀನು ತಿಳಿದಿದ್ದರೂ ಅದನ್ನು ಮಾಡದಿರುವಂತೆ ನಿನ್ನನ್ನು ಬಲಹೀನ ಗೊಳಿಸುವ ಬೇರೊಂದು ಸ್ವಭಾವವು ನಿನ್ನ ಶರೀರದಲ್ಲಿ ಉಂಟು. ಆರಂಭದಲ್ಲಿ ಯೇಸು ಕ್ರಿಸ್ತನು ನಮ್ಮ ಮನಸ್ಸಾಕ್ಷಿಯ ಸಂಪರ್ಕದೊಳಗೆ ಬಂದಾಗ, ನಮ್ಮ ಮನಸಾಕ್ಷಿಯು ಮಾಡುವ ಮೊದಲ ಕೆಲಸವೆಂದರೆ, ಅದು ನಮ್ಮ ಸಂಕಲ್ಪಶಕ್ತಿಯನ್ನು, ಅಂದರೆ ನಮ್ಮ ಚಿತ್ತಶಕ್ತಿಯನ್ನು ಬಡಿದೆಬ್ಬಿಸುತ್ತದೆ, ಹಾಗು ನಮ್ಮ ಚಿತ್ತವು ದೇವರ ಚಿತ್ತವನ್ನು ಸದಾ ಹೊಂದಿಕೊಂಡು ಸಮರಸದಲ್ಲಿರುವಂತೆ ಮಾಡುತ್ತದೆ. ಆದಾಗ್ಯೂ ನೀನು ಹೇಳುವೆ ''ದೇವರ ಚಿತ್ತದೊಡನೆ ನನ್ನ ಚಿತ್ತವು ಸಮರ್ಪಕವಾಗಿದೆಯೋ ಇಲ್ಲವೋ? ಎಂಬುದು ನನಗೆ ತಿಳಿಯುತ್ತಿಲ್ಲ''. ನೀನು ಕಣ್ಣೆತ್ತಿ ಯೇಸುವನ್ನು ದೃಷ್ಟಿಸು, ಆಗ ನಿನ್ನ ಅಂತರಾತ್ಮವೂ ನಿನ್ನ ಚಿತ್ತಾಭಿಲಾಷೆಯೂ ಸಮರ್ಪಕ ವಾಗಿರುವುದನ್ನು ಮನಗಾಣುವಿ ; ಇದನ್ನು ನಾನು ಒಪ್ಪುವುದೇ ಇಲ್ಲ ಎಂದು ನೀನು ಹೇಳುವಂತೆ, ಮಾಡುವು ದೊಂದೇನೋ ನಿನ್ನಲ್ಲದೆ; ಅದು ನಿನ್ನ ಚಿತ್ತಕ್ಕಿಂತಲೂ ಕಡಿಮೆ ಆಳವಾದದ್ದು , ಕಡಿಮೆ ಪರಿಣಾಮಕಾರಿ ಯಾದದ್ದೂ ಆಗಿರುತ್ತದೆ. ಅದೇ ನಿನ್ನಲ್ಲಿರುವ ದುರಾಗ್ರಹತೆ ಮತ್ತು ಹಠಮಾರಿತನ; ಇವು ದೇವರ ಚಿತ್ತದೊಂದಿಗೆಂದೂ ಹೊಂದಿಕೊಳ್ಳಲಾರವು. ವಿಶಿಷ್ಟವಾದುದೊಂದು ಮನುಷ್ಯನಲ್ಲಿದೆ, ಅದು ಅವನ ಚಿತ್ತ ಶಕ್ತಿ. ದೇವರು ಸೃಷ್ಟಿಸಿದ ಮಾನವನಲ್ಲಿ ಚಿತ್ತಶಕ್ತಿಯೇ ಅವನ ಮೂಲ ತತ್ವವಾಗಿದೆ; ಪಾಪವಾದರೋ ಮನುಷ್ಯ ನೊಳಗೆ ಪ್ರವೇಶಿಸಿದ ವಕ್ರ ಸ್ವಭಾವವಾಗಿದೆ. ಆತ್ಮೀಕವಾಗಿ ಹೊಸದಾಗಿ ಹುಟ್ಟಿದ ಮನುಷ್ಯನೊಬ್ಬ ನಲ್ಲಿರುವ ಇಚ್ಛಾಶಕ್ತಿಯ ಮೂಲವು ಸರ್ವಶಕ್ತನಾದ ದೇವರೇ ಆಗಿರುತ್ತಾನೆ. ''ದೇವರೇ ತನ್ನ ಸುಚಿತ್ತವನ್ನು ನೆರವೇರಿಸ ಬೇಕೆಂದು ನಮ್ಮಲ್ಲಿ ಉದ್ದೇಶವನ್ನು ಪ್ರಯತ್ನವನ್ನೂ ಉಂಟು ಮಾಡುವವ ನಾಗಿದ್ದಾನೆ''. ದೇವರು ನಿನ್ನೊಳಗೆ ಮಾಡುತ್ತಿರುವುದನ್ನು ನೀನು ಏಕಾಗ್ರತೆಯಿಂದಲೂ ಬಹು ಜಾಗರೂಕತೆಯಿಂದಲೂ ನಿನ್ನ ಜೀವಿತದಲ್ಲಿ ಸಾಧನೆ ಮಾಡಲೇಬೇಕು. ನಿನ್ನ ಸ್ವಂತ ರಕ್ಷಣೆಗಾಗಿ ನೀನು ಶ್ರಮೆ ಪಡದೆ ಯೇಸು ಸ್ವಾಮಿಯು ಮಾಡಿದ ಸಂಪೂರ್ಣವಾದ ಪಾಪ ವಿಮೋಚನೆಯಲ್ಲಿ ನೀನಿಟ್ಟಿರುವ ಅಚಲ ನಂಬಿಕೆಯನ್ನೇ ಆಧಾರ ಮಾಡಿಕೊಂಡು, ದೇವರು ನಿನ್ನೊಳಗೆ ಸಾಧಿಸಿರುವುದನ್ನು ನಿನ್ನ ಜೀವಿತದಲ್ಲಿ ಕೆಲಸ ಮಾಡಿ ಸಾಧಿಸಬೇಕು. ಇದನ್ನು ನೀನು ಮಾಡುತ್ತಿರುವಾಗ ದೇವರ ಚಿತ್ತಕ್ಕೆ ವಿರುದ್ಧವಾದ ಚಿತ್ತವೊಂದನ್ನು ಒಳಗೆ ಸೇರಿಸಿಕೊಳ್ಳಲಾಗದು; ಯಾಕೆಂದರೆ ದೇವರ ಚಿತ್ತವೇ ನಿನ್ನ ಚಿತ್ತವಾಗಿರುತ್ತದೆ, ನಿನ್ನ ಸಹಜ ಆಯ್ಕೆಗಳೆಲ್ಲಾ ದೇವರ ಚಿತ್ತಾನುಸಾರ ವಾಗಿರುತ್ತವೆ ಮತ್ತು ಜೀವನವು ಶ್ವಾಸೋಚ್ಛಾರದಷ್ಟು ಬಹು ಸರಳವಾಗಿರುತ್ತದೆ. ದೇವರು ನಿನ್ನ ಇಚ್ಛಾಶಕ್ತಿಯ ಮೂಲನಾಗಿ ರುವುದರಿಂದ, ಆತನ ಚಿತ್ತವನ್ನು ನಿನ್ನ ಜೀವಿತದಲ್ಲಿ ಸಾಧಿಸಲು ನೀನು ಶಕ್ತನಾಗಿರುವಿ. ಮೊಂಡುತನವು ಅಜ್ಞಾನದ ಅಡ್ಡಗೋಡೆಯಾಗಿದೆಯಲ್ಲದೆ, ಅದು ಜ್ಞಾನೋದಯವನ್ನು ನಿರಾಕರಿಸಿ ಅಡ್ಡಿಯುಂಟು ಮಾಡುತ್ತದೆ. ಅದನ್ನು ಸಿಡಿಮದ್ದಿನಿಂದ ಸ್ಫೋಟಗೊಳಿಸುವುದೊಂದನ್ನೇ ನಾವು ಮಾಡಬೇಕು. ಸಿಡಿಮದ್ದು ಎಂದರೆ ಪವಿತ್ರಾತ್ಮನಿಗೆ ವಿಧೇಯರಾಗಿರುವಿಕೆ.

ಸರ್ವಶಕ್ತನಾದ ದೇವರೇ ನಮ್ಮ ಸಂಕಲ್ಪಶಕ್ತಿಯ ಉಗಮವಾಗಿರುವನೆಂದು ನಾವು ನಂಬು ವೆವೋ? ತನ್ನ ಸಂಕಲ್ಪದಂತೆ ನಾನು ನಡೆಯುವುದೊಂದನ್ನೇ ದೇವರು ನನ್ನಿಂದ ನಿರೀಕ್ಷಿಸುತ್ತಾನೆ, ಮಾತ್ರವಲ್ಲದೆ ಆದನ್ನು ಸಾಧಿಸಲು ಆತನು ನನ್ನೊಳಗೆ ನೆಲೆಗೊಂಡಿರುತ್ತಾನೆ.

# ಶಕ್ತಿಯ ಮೂಲ

**''ನೀವು ನನ್ನ ಹೆಸರಿನಲ್ಲಿ ಏನೇನು ಬೇಡಿಕೊಳ್ಳುವಿರೋ ಅದನ್ನು ನೆರವೇರಿಸುವೆನು''**
**- (ಯೋಹಾನ - 14:13)**

ಪರಾರ್ಥ ಪ್ರಾರ್ಥನೆಯೆಂಬ ಆಂತರ್ಯದ ಸೇವಾಕಾರ್ಯವನ್ನು ಪೂರ್ತಿಗೊಳಿಸುತ್ತಿರುವೆನೋ? ನಿಜವಾದ ಪರಾರ್ಥ ಪ್ರಾರ್ಥನೆಗಳಲ್ಲಿ ಮೋಸಗೊಳಿಸುವ ಉರುಲು ಅಥವಾ ಅಹಂಕಾರದ ಅಪಾಯವಿರುವುದಿಲ್ಲ, ಅದು ಗುಪ್ತಸೇವಾ ಕಾರ್ಯರೂಪದಲ್ಲಿ ದೇವರನ್ನು ಮಹಿಮೆಪಡಿಸುವ ಫಲಗಳನ್ನು ತರುತ್ತದೆ. ನನ್ನ ಆತ್ಮೀಕ ಜೀವಿತವು ವ್ಯರ್ಥವಾಗಲು ಆಸ್ಪದ ನೀಡುತ್ತಿರುವೆನೋ? ಅಥವಾ ಆ ಜೀವಿತವನ್ನು ಯೇಸುಕ್ರಿಸ್ತನ ಪ್ರಾಯಶ್ಚಿತ್ತ ಯಜ್ಞವೆಂಬ ಮುಖ್ಯಾಂಶವನ್ನು ಏಕಾಗ್ರತೆಯಿಂದ ಗಮನಿಸುವಂತೆ ಮಾಡುತ್ತಿರುವೆನೋ? ನನ್ನ ಜೀವಿತದ ಪ್ರತಿಯೊಂದು ಆಸಕ್ತಿ ಅಭಿರುಚಿಗಳಲ್ಲಿ ಯೇಸುಕ್ರಿಸ್ತನು ಪ್ರಾಧಾನ್ಯತೆ ಹೊಂದಿರುವನೋ? ನನ್ನ ಜೀವನದಲ್ಲಿ ಬಹಳ ಪ್ರಭಾವ ಬೀರುವ ಅತ್ಯಂತ ಪ್ರಾಮುಖ್ಯ ವಿಷಯ, ಅದು ಯೇಸುಕ್ರಿಸ್ತನು ಮಾಡಿದ ಪ್ರಾಯಶ್ಚಿತ್ತ ಯಜ್ಞವೇ ಆಗಿದ್ದರೆ, ನನ್ನ ಜೀವಿತದ ಪ್ರತಿ ಯೊಂದು ಹಂತವೂ ಆತನಿಗಾಗಿ ಫಲಪ್ರದವಾಗಿರುತ್ತದೆ.

ಶಕ್ತಿ ಸಾಮರ್ಥ್ಯದ ಕೇಂದ್ರವು ಯಾವುದೆಂಬುದನ್ನು ಧ್ಯಾನಿಸಲು ನಾನು ಸಮಯವಿರಿಸಿಕೊಳ್ಳಬೇಕು. ಈ ವಿಷಯದಲ್ಲಿ ಏಕಾಗ್ರತೆಯಿಂದಿರಲು, ಪ್ರತಿ ಅರವತ್ತು ನಿಮಿಷಗಳಲ್ಲಿ ಒಂದು ನಿಮಿಷವನ್ನಾದರೂ ತೆಗೆದಿಟ್ಟಿರುವೆನೋ? ''ನೀವು ನನ್ನಲ್ಲಿ ನೆಲೆಗೊಂಡಿದ್ದರೆ'' ಈ ಒಂದು ನೆಲೆಯಿಂದ ಧ್ಯಾನ ಮತ್ತು ಕಾರ್ಯ ಸಾಧನೆಯಲ್ಲಿ ಮುಂದೆ ಸಾಗುತ್ತಿರುವಾಗ ''ಏನು ಬೇಕಾದರೂ ಬೇಡಿಕೊಳ್ಳಿರಿ. ಅದು ನಿಮಗೆ ದೊರೆಯುವುದು'' (ಯೋಹಾನ 15:7) ನಾನು ಆತನಲ್ಲಿ ನೆಲೆಗೊಂಡಿರುವೆನೋ? ಹಾಗೆ ನೆಲೆಗೊಳ್ಳಲು ಸಮಯ ವಿರಿಸಿಕೊಂಡಿರುವೆನೋ? ನನ್ನ ಜೀವಿತದಲ್ಲಿ ಶಕ್ತಿಯ ಮುಖ್ಯ ಅಂಶ ಯಾವುದು? ಕಾರ್ಯಸಾಧನೆಗಳೋ, ಸೇವೆಯೋ, ಪರಾರ್ಥ ತ್ಯಾಗವೋ ಅಥವಾ ದೇವರಿಗಾಗಿ ಕಾರ್ಯವೆಸಗುವ ಪ್ರಯಾಸವೋ? ನನ್ನ ಜೀವಿತದಲ್ಲಿ ಮಹಾಶಕ್ತಿಯನ್ನು ಪ್ರಯೋಗಿಸುವಂಥಾದ್ದು ಒಂದೇ ವಿಷಯ – ಅದು ಸ್ವಾಮಿಯ ಪ್ರಾಯಶ್ಚಿತ್ತ ಯಜ್ಞ. ನಮ್ಮನ್ನು ಉತ್ತಮವಾಗಿ ರೂಪಿಸುತ್ತಿರುವ ವಿಷಯವನ್ನು ಕುರಿತು ಹೆಚ್ಚು ಸಮಯವನ್ನು ಕಳೆಯುವುದಲ್ಲ; ನಮ್ಮ ಮೇಲೆ ಹೆಚ್ಚಾದ ಶಕ್ತಿ ಪ್ರಭಾವಗಳನ್ನು ಬೀರುವ ವಿಷಯವೇ ಮುಖ್ಯವಾದದ್ದು. ನಮ್ಮನ್ನು ಸೀಮಿತಗೊಳಿಸಿಕೊಳ್ಳಲು ಮತ್ತು ನಮ್ಮ ಅಕ್ಕರೆಗಳನ್ನೆಲ್ಲಾ ಈ ಮುಖ್ಯಾಂಶದ ಮೇಲೆ ಕೇಂದ್ರೀಕರಿಸಲು ನಿರ್ಧರಿಸಬೇಕು. ''ನೀವು ನನ್ನ ಹೆಸರಿನಲ್ಲಿ ನನ್ನನ್ನು ಏನಾದರೂ ಬೇಡಿಕೊಂಡರೆ ಅದನ್ನು ನೆರವೇರಿಸುವನು'' ಯೇಸುವಿನಲ್ಲಿ ನೆಲೆಗೊಂಡಿರುವ ಶಿಷ್ಯನೇ ದೇವರ ಚಿತ್ತವಾಗಿದ್ದಾನೆ. ಕಣ್ಣಿಗೆ ಕಾಣಿಸುವ ಅವನ ಮುಕ್ತ ಆಯ್ಕೆಗಳೆಲ್ಲಾ ದೇವರ ಆದೇಶಗಳೇ ಆಗಿರುತ್ತವೆ. ಇದೊಂದು ಮರ್ಮವೆನಿಸುವುದೇ? ತಾರ್ಕಿಕವಾಗಿ ಹಾಸ್ಯಾಸ್ಪದವೂ ಆಗಿದೆಯೊ? ಹೌದು, ಆದರೆ ದೇವ ಭಕ್ತನಿಗೆ ಇದು ಮಹಿಮಾಭರಿತ ಮಹಾ ಸತ್ಯವಾಗಿರುತ್ತದೆ.

# ಮುಂದೇನು ?

ಬೇರೆಯವರಿಂದ ಹೆಚ್ಚು ತಿಳುಕೊಳ್ಳಲು ನಿರ್ಧರಿಸು.

**''... ನೀವು ಇದನ್ನು ತಿಳುಕೊಂಡು ಇದರಂತೆ ಮಾಡಿದರೆ ನೀವು ಧನ್ಯರು''-(ಯೋಹಾನ-13:17)**

ಬಂದರಿನಲ್ಲಿ ನಿನ್ನನ್ನು ಹಿಡಿದಿಟ್ಟಿರುವ ಲಂಗರಿನ ಸರಪಳಿಗಳನ್ನು ನೀನು ಕತ್ತರಿಸದೆ ಇದ್ದರೆ, ದೇವರು ಬಿರುಗಾಳಿಯನ್ನು ಬರಮಾಡಿ ಆ ಸರಪಳಿಗಳನ್ನು ಕತ್ತರಿಸಿ ನಿನ್ನನ್ನು ಹೊರತಂದು ಸಾಗರ ದೊಳಗೆ ಕಳುಹಿಸುತ್ತಾನೆ. ದೇವರನ್ನು ಆತುಕೊಂಡು, ಆತನ ಉದ್ದೇಶವಾಗಿರುವ ಉಬ್ಬಿಬರುವ ಸಮುದ್ರದ ತೆರೆಗಳ ಮೇಲೆ ತೇಲಿ ಸಾಗುವಂತೆ ನಿನ್ನ ಬಾಳದೋಣಿಯನ್ನು ಹಾಯಿಸಿಬಿಡು. ಆಗ ನಿನ್ನ ಕಣ್ಣುಗಳು ತೆರೆಯಲ್ಪಡುತ್ತವೆ. ನೀನು ಯೇಸುಸ್ವಾಮಿಯನ್ನು ನಂಬಿದ್ದರೆ ಬಂದರಿನಲ್ಲಿ, ಮರಳು ದಿಣ್ಣೆಗಳ ನಡುವಿರುವ ಶಾಂತವಾದ ನೀರಿನಲ್ಲಿ ಆನಂದ ಭರಿತ ಜೀವನವನ್ನು ಕಳೆಯಲು ನಿನ್ನೆಲ್ಲಾ ಸಮಯವು ವ್ಯಯ ವಾಗುತ್ತಿದ್ದರೂ, ನೀನು ಮಾತ್ರ ಮುಂದೆ ಸಾಗದಂತೆ ಲಂಗರಿನ ಸರಪಳಿಗಳಿಂದ ಸದಾ ಹಿಡಿಯಲ್ಪಟ್ಟಿರಬೇಕಾಗಿಲ್ಲ. ಬಂದರಿನಿಂದ ಕೂಡಲೇ ಹೊರಬಂದು ದೇವರ ಆಳವಾದ ಜಲರಾಶಿಗಳ ಮೇಲೆ ಸಂಚರಿಸುತ್ತಾ ನಿನ್ನಷ್ಟಕ್ಕೆ ನೀನೇ ವಿಷಯಗಳನ್ನು ತಿಳಿಯಲು ಆರಂಭಿಸು, ಆತ್ಮೀಕ ಸತ್ಯಾರ್ಥಗಳ ವಿವೇಕವನ್ನು ಹೊಂದಲು ಪ್ರಾರಂಭಿಸಬೇಕು. ಅಂದರೆ ದೇವರ ಬಗ್ಗೆ ತಿಳಿದುಕೊಲ್ಲಲು ಸದಾ ಪ್ರಯತ್ನಿಸುತ್ತಿರಬೇಕು.

ಮಾಡಲೇ ಬೇಕಾಗಿರುವುದೇನೆಂಬುದು ನಿನಗೆ ತಿಳಿದಿದ್ದರೆ, ಕೂಡಲೇ ಅದನ್ನು ಮಾಡಿಬಿಡು, ತಕ್ಷಣವೇ ಇನ್ನೂ ಹೆಚ್ಚಿನದನ್ನು ಅರಿಯುವಿ. ಆತ್ಮೀಕ ಜಡತ್ವವು ಯಾವಾಗ ನಿನ್ನಲ್ಲಿ ಉಂಟಾಯಿ ತೆಂಬುದನ್ನು ಕಾಣುವಿ. ನೀನು ಪರೀಕ್ಷಿಸಿಕೋ, ಆಗ ನಿನ್ನ ಸ್ಮೃತಿಯು ಬಹುದೂರ ಹಿಂದಕ್ಕೆ ಸಾಗಿ, ಒಂದು ಮುಖ್ಯಾಂಶಕ್ಕೆ ಬಂದು ನಿಲ್ಲುವುದನ್ನು ಕಾಣುವಿ. ಅಲ್ಲಿ ನೀನು ಮಾಡಲೇಬೇಕಾದದ್ದೇನು ಎಂಬುದು ನಿನಗೆ ತಿಳಿದಿದ್ದರೂ, ಅದನ್ನು ನೀನು ಮಾಡಲೇ ಇಲ್ಲ. ಯಾಕೆಂದರೆ ಮಾಡಬೇಕೆನ್ನುವ ಕರೆ ಇರಲಿಲ್ಲ ವೆಂದು ಅಂದು ನಿನಗನ್ನಿಸಿತ್ತು, ಆದರೆ ಇಂದು ನಿನಗೆ ಗ್ರಹಿಸುವ ಶಕ್ತಿಯಾಗಲೀ, ವಿವೇಚನಾ ಶಕ್ತಿ ಯಾಗಲಿ ಇಲ್ಲವೇ ಇಲ್ಲ; ಬಿಕ್ಕಟ್ಟುಗಳ ಸಮಯದಲ್ಲಿ ಆತ್ಮೀಕವಾಗಿ ಸ್ವಸ್ಥಚಿತ್ತನಾಗಿರುವ ಬದಲು ಆತ್ಮೀಕವಾಗಿ ಗೊಂದಲಕ್ಕೊಳಗಾಗುವಿರಿ. ಅರಿಯುವದನ್ನು ನಿರಾಕರಿಸುವುದು ಯಾವಾಗಲೂ ಅಪಾಯಕಾರಿ.

ನಿನ್ನ ಕೃತ್ರಿಮ ವಿಧೇಯತ್ವವು ಒಂದು ಬಗೆಯ ಮನೋಸ್ಥಿತಿಯಾಗಿರುವದಲ್ಲದೆ, ಆಗ ನೀನು ಮಾಡುವ ಸ್ವಂತ ತ್ಯಾಗಗಳ ಅವಕಾಶಗಳನ್ನು ನಿನ್ನಷ್ಟಕ್ಕೆ ನೀನೇ ಸೃಷ್ಟಿಸಲು ಶ್ರಮ ವಹಿಸುವಿ; ನಿನ್ನ ಅತ್ಯುತ್ಸಾಹವನ್ನೇ ವಿವೇಕವೆಂದು ತಪ್ಪಾಗಿ ಗ್ರಹಿಸುವಿ. ದೈವ ವಿಧಿಗಳನ್ನು ನೆರವೇರಿಸುವುದಕ್ಕಿಂತಲೂ ಸಜೀವ ಯಜ್ಞವಾಗಿ, ಸಮರ್ಪಿಸಿಕೊಳ್ಳುವುದು ಸುಲಭ. (ರೋಮಾ 12:1-2) ಸ್ವಂತ ತ್ಯಾಗಗಳ ದೊಡ್ಡ ಕಾರ್ಯಗಳನ್ನು ನಡೆಸುವು ದಕ್ಕಿಂತಲೂ ವಿವೇಕ ಪೂರ್ವಕವಾಗಿ ದೇವರ ಉದ್ದೇಶಗಳನ್ನು ನಿನ್ನ ಜೀವನದಲ್ಲಿ ನೆರವೇರಿಸುವುದೇ ಶ್ರೇಷ್ಠ ಆಯ್ಕೆಯಾಗಿದೆ. ''ಯಜ್ಞವನ್ನರ್ಪಿಸುವುದಕ್ಕಿಂತ ಮಾತು ಕೇಳುವುದೇ ಉತ್ತಮ. (1 ಸಮು 15:22) ಹಿಂದೆ ನೀನೇನೂ ಆಗಿರದಿದ್ದವನು ನೀನಾಗಬೇಕೆಂದು ದೇವರು ಬಯಸುತ್ತಿರುವಾಗ, ನೀನು ಹಿಂದೆ ಏನಾಗಿದ್ದೆಯೋ ಅದೇ ಸ್ಥಿತಿಗೆ ಮರಳಿ ಹಾರಿಹೋಗುವ ಯೋಚನೆಯ ಬಗ್ಗೆ ಎಚ್ಚರದಿಂದಿರು. ''ಆತನ ಚಿತ್ತದಂತೆ ನಡೆಯುವುದಕ್ಕೆ ಯಾರಿಗೆ ಮನಸ್ಸಿದೆಯೋ ಅವರಿಗೆ ...... ಗೊತ್ತಾಗುವುದು. (ಯೋಹಾನ - 7:17).

# ನಂತರದ ಉತ್ತಮ ಕಾರ್ಯವೆಸಗುವುದು

**ಹೊಂದಿರದಿದ್ದರೆ ಬೇಡು. ''ಬೇಡಿಕೊಳ್ಳುವ ಪ್ರತಿಯೊಬ್ಬನು ಹೊಂದುವನು'' - (ಲೂಕ 11:10)**

ಬೇಡಿಕೊಳ್ಳುವುದಕ್ಕಿಂತಲೂ ಹೆಚ್ಚು ಕಷ್ಟಕರವಾದದ್ದು ಬೇರೇನೂ ಇಲ್ಲ. ನಾವು ಬಯಸುತ್ತೇವೆ ಮತ್ತು ಹಂಬಲಿಸುತ್ತೇವೆ, ಯಾಚಿಸುತ್ತೇವೆ ಹಾಗೂ ಕಷ್ಟಪಡುತ್ತೇವೆ; ಆದರೆ ನಮ್ಮ ಅಂತಿಮ ಮಿತಿ ಮೀರಿದಾಗ ಮಾತ್ರವೇ ನಾವು ಬೇಡಿಕೊಳ್ಳುತ್ತೇವೆ. ಆಧ್ಯಾತ್ಮಿಕ ಅಸತ್ಯತೆಯ ಪ್ರಜ್ಞೆಯೇ ನಾವು ಬೇಡುವಂತೆ ಮಾಡುತ್ತದೆ. ನೈತಿಕವಾಗಿ ಕಡುಬಡತನದಲ್ಲಿರುತ್ತಾ ಎಂದಾದರೂ ಬೇಡಿರುವಿಯೋ''? ''ಯಾರಿಗಾದರೂ ಜ್ಞಾನ ಕಡಿಮೆಯಾಗಿದ್ದರೆ ಅವನು ಕೇಳಿಕೊಳ್ಳಲಿ'' (ಯಾಕೋ 1:5) ಆದರೆ ಬೇಡಿಕೊಳ್ಳುವ ಮೊದಲು ನಿನಗೆ ಜ್ಞಾನದ ಕೊರತೆಯುಂಟು ಎಂಬುದನ್ನು ಖಚಿತಪಡಿಸಿಕೋ. ನಿನಗಿಷ್ಟ ಬಂದಾಗ ವಾಸ್ತವದ ವಿರುದ್ಧ ನಿನ್ನಷ್ಟಕ್ಕೆ ನೀನು ಎದ್ದು ನಿಲ್ಲಲಾಗದು. ಆಧ್ಯಾತ್ಮಿಕ ಸತ್ಯತೆಯಲ್ಲಿ ನೀನಿರದಿದ್ದರೆ, ನೀನು ಮಾಡುವ ಉತ್ತಮ ಕೆಲಸವೆಂದರೆ, ಯೇಸುಕ್ರಿಸ್ತನ ವಾಕ್ಯಗಳನುಸಾರ ಪವಿತ್ರಾತ್ಮನ ದಾನಕ್ಕಾಗಿ, ದೇವರನ್ನು ಬೇಡಿಕೊಳ್ಳಬೇಕು. ಯೇಸುಕ್ರಿಸ್ತನು ನಿನಗಾಗಿ ಮಾಡಿದ್ದೆಲ್ಲವೂ ನಿನ್ನೊಳಗೆ ನಿಜವಾಗುವಂತೆ ಮಾಡುವಾತನು ಈ ಪರಿಶುದ್ಧಾತ್ಮನೇ (ಲೂಕ 11:13 ನೋಡಿರಿ).

''ಬೇಡಿಕೊಳ್ಳುವ ಪ್ರತಿಯೊಬ್ಬನೂ ಹೊಂದುವನು'' ನೀನು ಬೇಡಿಕೊಳ್ಳದಿದ್ದರೆ ನೀನೇನೂ ಹೊಂದುವುದಿಲ್ಲವೆಂಬುದು ಇದರ ಅರ್ಥವಲ್ಲ; ಬೇಡಿಕೊಳ್ಳಲೇ ಬೇಕೆಂಬ ಅಂತಿಮ ಮಿತಿಯನ್ನು ತಲುಪದ ವಿನಃ, ದೇವರಿಂದ ನೀನೇನನ್ನೂ ಹೊಂದಲಾರೆ. ಪಡೆದುಕೊಳ್ಳುವುದೆಂದರೆ - ನೀನು ದೇವರ ಮಗುವೆಂಬ ಸಂಬಂಧದೊಳಗೆ ಸೇರಿಕೊಂಡಿರುವಿ. ಜ್ಞಾನದ ಮೂಲಕ, ನೈತಿಕ ಶ್ಲಾಘನೆಯ ಮತ್ತು ಆತ್ಮೀಕ ಅರಿವಿನ ಮೂಲಕ, ಇವೆಲ್ಲವುಗಳೂ ದೇವರಿಂದ ಅನುಗ್ರಹಿಸಲ್ಪಟ್ಟಿವೆ ಎಂಬುದನ್ನು ನೀನು ಮನಗಾಣುವಿ.

''ಯಾವನಿಗಾದರೂ ಜ್ಞಾನ ಕಡಿಮೆಯಾಗಿದ್ದರೆ......'' ನೀನು ಜ್ಞಾನದ ಕೊರತೆಯಲ್ಲಿರುವೆ ಯೆಂದು ನೀನು ತಿಳಿದಿದ್ದರೆ, ಅದಕ್ಕೆ ಕಾರಣ ನೀನೀಗ ಆತ್ಮೀಕ ವಾಸ್ತವದೊಳಗಡೆ ಬಂದಿರುವೆ; ಸಕಾರಣಗಳ ವಿಮರ್ಷೆ ಮಾಡುವ ಕಣ್‌ಕಪ್ಪುಗಳನ್ನು (ಕುದುರೆಯ ಕಣ್ಣುಗಳಿಗೆ ಹಾಕುವ ಕಾಪು) ಪುನಃ ಹಾಕಿಕೊಳ್ಳಬೇಡ. ಜನರು ನಿನಗೆ ಹೇಳುತ್ತಾರೆ ''ನಮಗೆ ಸುಲಭವಾಗಿರುವ ಸುವಾರ್ತೆಯನ್ನು ಬೋಧಿಸು: ನಾವು ಪರಿಶುದ್ಧರಾಗಬೇಕೆಂದು ಮಾತ್ರ ನಮಗೆ ಹೇಳಬೇಡ, ಯಾಕೆಂದರೆ ಅದು ಕಡುಬಡತನದ ಪ್ರಜ್ಞೆಯನ್ನು ನಮ್ಮಲ್ಲಿ ಹುಟ್ಟಿಸುತ್ತದೆ ಮತ್ತು ನಾವು ಅಂಥಾ ಕಡುಬಡತನದ ಭಾವನೆಯು ಅಷ್ಟೇನೂ ಒಳ್ಳೆಯದಲ್ಲ''. ''ಕೇಳಿಕೊಳ್ಳಿರಿ'' ಎಂದರೆ (ಭಿಕ್ಷೆ ) ಬೇಡುವುದು. ಕೆಲವರು ತಮ್ಮ ಬಡತನದಲ್ಲಿ ಆಸಕ್ತಿ ತೋರಿಸಲು ಒಲ್ಲದವರಾಗಿರುತ್ತಾರೆ. ನಮ್ಮಲ್ಲಿ ಕೆಲವರು ಆತ್ಮೀಕವಾಗಿ ಅವರಂತೆಯೇ ಇರುತ್ತಾರೆ. ಅಂತಿಮ ಫಲಾಪೇಕ್ಷೆಯ ದೃಷ್ಟಿಯಿಂದ ಅದನ್ನು ದಯಪಾಲಿಸೆಂದು ದೇವರನ್ನು ಬೇಡಿಕೊಂಡರೆ ಅದನ್ನೆಂದಿಗೂ ಹೊಂದುವದಿಲ್ಲ; ಯಾಕೆಂದರೆ ನಾವು ದುರಾಶೆಯಿಂದ ಕೇಳುತ್ತೇವೆಯೇ ಹೊರತು, ಬಡತನದ ಪ್ರಜ್ಞೆ ಯಿಂದಲ್ಲ, ಒಬ್ಬ ಭಿಕಾರಿಯು ತನ್ನ ಕಡುಬಡತನದ ಪರಿಸ್ಥಿತಿಯ ನೋವಿನಿಂದ ಬೇಡುತ್ತಾನೆ. ಬೇರೆ ಯಾವ ಕಾರಣದಿಂದ ಅಲ್ಲ, ಬಿಕ್ಷೆ ಬೇಡಲು ಅವನು ನಾಚುವುದಿಲ್ಲ. ''ಆತ್ಮದಲ್ಲಿ ಬಡವರಾಗಿರುವವರು ಧನ್ಯರು'' (ಮತ್ತಾ 5:3)

# ಮುಂದೆ ಮಾಡುವ ಉತ್ತಮ ಕೆಲಸ ಯಾವುದು?

**ನಿಮಗೆ ಸಿಕ್ಕಿರದಿದ್ದರೆ ಹುಡುಕಿರಿ. ''ಹುಡುಕಿರಿ, ನಿಮಗೆ ಸಿಕ್ಕುವದು'' - (ಲೂಕ - 11:9)**

''ನೀವು ಬೇಡಿದರೂ...ದುರಭಿಪ್ರಾಯ ಪಟ್ಟು ಬೇಡಿಕೊಳ್ಳುವದರಿಂದ ನಿಮಗೆ ದೊರೆಯು ವದಿಲ್ಲ''-(ಯಾಕೋಬ-4:3) ನೀವು ದೇವರಿಂದ ಬೇಡಿಕೊಳ್ಳುವ ಬದಲು ಈ ಜೀವಿತದಿಂದ ಏನನ್ನಾದರೂ ಬಯಸಿ ದುರಭಿಪ್ರಾಯದಿಂದ ಅದನ್ನು ಬೇಡಿಕೊಳ್ಳುವಿರಿ, ನಿಮ್ಮ ಆತ್ಮ ತೃಪ್ತಿಯ ಆಶೆಯಿಂದ ಬೇಡಿ ಕೊಳ್ಳುತ್ತೀರಿ. ನೀವು ಎಷ್ಟು ಹೆಚ್ಚಾಗಿ ಆತ್ಮ ತೃಪ್ತಿಯನ್ನು ಮಾಡಿಕೊಳ್ಳುವಿರೋ ಅಷ್ಟೇ ಅಲ್ಪವಾಗಿ ದೇವರನ್ನು ಹುಡುಕುವಿರಿ. ''ಹುಡುಕಿರಿ ನಿಮಗೆ ಸಿಕ್ಕುವದು'' ಕಾರ್ಯೋನ್ಮುಖರಾಗಿರಿ - ಹುಡುಕುವ ದೊಂದಕ್ಕೇ ನಿಮ್ಮ ಆಸಕ್ತಿಗಳನ್ನು ಸಂಕುಚಿತಗೊಳಿಸಿರಿ; ನಿನ್ನ ಪೂರ್ಣ ಹೃದಯದಿಂದ ದೇವರನ್ನೆಂದಾದರೂ ಹುಡುಕಿರುವಿಯೋ? ಅಥವಾ ಒಂದು ಅನುಭವವು ಉಂಟು ಮಾಡಿದ ಅಂದರೆ ಭಾವೋದ್ವೇಗವು ಉಂಟು ಮಾಡಿದ ನೋವಿನ ದೆಸೆಯಿಂದ, ಬಲವಿಲ್ಲದ ಕೂಗನ್ನು ಮಾತ್ರ ಕೂಗಿರುವಿಯೋ? ಹುಡುಕು, ಏಕಾಗ್ರತೆಯಿಂದ ಹುಡುಕು, ಆಗ ಮಾತ್ರ ಅದು ಸಿಕ್ಕುವುದು.

''ಎಲ್ಲೈ ಬಾಯಾರಿದ ಸಕಲ ಜನರೇ, ನೀರಿನ ಬಳಿಗೆ ಬನ್ನಿರಿ''-(ಯೆಶಾಯ 55:1) ನಿನಗೆ ಬಾಯಾರಿಕೆ ಉಂಟೋ? ನಿನ್ನ ಅನುಭವಗಳಿಂದ ನೀನು ಅಷ್ಟೊಂದು ಸ್ವಸಂತುಷ್ಟನಾಗಿರುವೆಯಾದರೆ ದೇವರಿಂದ ಹೆಚ್ಚಿನದೇನೂ ನಿನಗೆ ಬೇಕಾಗಿಲ್ಲವೇ? ಅನುಭವವೆನ್ನುವುದು ಗುರಿಯತ್ತ ತೆರಳುವುದರ ಪ್ರವೇಶ ದ್ವಾರ ಮಾತ್ರ; ಅದೇ ಅಂತಿಮ ಗುರಿಯಲ್ಲ. ನಿನ್ನ ಅನುಭವದ ಆಧಾರದ ಮೇಲೆ ನಿನ್ನ ನಂಬಿಕೆಯನ್ನು ರಚಿಸಿ ಕೊಳ್ಳಬೇಡ, ಹಾಗೆ ಮಾಡಿದ ಕೂಡಲೇ ಇತರರಲ್ಲಿ ಹುಳುಕು ಹುಡುಕುವ, ಘಂಟಾನಾದವು, ನಿನ್ನ ಜೀವಿತದಲ್ಲಿ ಕೇಳಿ ಬರುತ್ತದೆ. ಆದರೆ ನೆನಪಿರಲಿ, ನಿನ್ನ ಅನುಭವಗಳಿಂದ ನಿನಗೆ ಸಿಕ್ಕುವುದನ್ನು ಇತರರಿಗೆ ಹಂಚಿಕೊಡಲು ನಿನಗೆ ಸಾಧ್ಯವಿಲ್ಲವೆಂಬುದನ್ನು ಸದಾ ನೆನೆಯುತ್ತಿರಬೇಕು. ಅಷ್ಟು ಮಾತ್ರವಲ್ಲದೆ ನಿನ್ನ ಅನುಭವಗಳಿಂದ ನೀನೇನು ಕಂಡುಕೊಂಡಿರುವಿಯೋ ಅದನ್ನು ಇತರರಿಗೆ ಕೊಡಲಾರೆ, ಆದರೆ ಅವರು ಅದನ್ನು ಪಡೆಯಲಾಶಿಸು ವುದರಿಂದ ಮನೋಖಿನ್ನತೆಗೆ ಅವರು ಒಳಗಾಗಬಹುದು. 'ತಟ್ಟಿರಿ, ನಿಮಗೆ ತೆರೆಯುವುದು' (ಲೂಕ-11:10) ''ದೇವರ ಸಮೀಪಕ್ಕೆ ಬನ್ನಿರಿ'' (ಯಾಕೋಬ 4:18) ಬಾಗಿಲು ಮುಚ್ಚಿಕೊಂಡಿದೆ 'ತಟ್ಟಿರಿ', ತಟ್ಟುತ್ತಾ, ತಟ್ಟುತ್ತಾ ಹೃದಯದ ಬಡಿತ ಹೆಚ್ಚಿ ನರಳುವಿಕೆಯುಂಟಾದರೆ, ''ನಿಮ್ಮ ಕೈಗಳನ್ನು ಶುಚಿ ಮಾಡಿ ಕೊಳ್ಳಿರಿ'' (ಯಾಕೋ 4:8) ಇನ್ನೂ ಹೆಚ್ಚಿನ ಶಬ್ದವಾಗುವಂತೆ ಬಾಗಿಲನ್ನು ತಟ್ಟಿರಿ, ಆಗ ನೀವೆಷ್ಟು ಕೊಳಕಾಗಿರುವಿರೆಂಬುದನ್ನು ಕಾಣಲಾರಂಭಿಸುವಿರಿ. ''ನಿಮ್ಮ ಹೃದಯಗಳನ್ನು ನಿರ್ಮಲ ಮಾಡಿಕೊಳ್ಳಿರಿ'' (ಯಾಕೋ 4:8) ಇದು ತುಂಬಾ ನೇರವಾದದ್ದೂ ವೈಯಕ್ತಿಕ ವಾದದ್ದು ಆಗಿದ್ದರೂ, ನೀನು ಹತಾಶೆಯಿಂದ ಇನ್ನಷ್ಟೂ ಪೂರ್ಣ ಆಸಕ್ತನಾಗುವಿ ಮತ್ತು ಏನುಬೇಕಾದರೂ ಮಾಡಲು ಸಿದ್ಧನಾಗುವಿ. ''ದುಃಖಿಸಿರಿ'' (ಯಾಕೋ 4:9) ನಿನ್ನ ಅಂತರಂಗದ ಜೀವಿತದ ಸ್ಥಿತಿಗಾಗಿ ದೇವರ ಮುಂದೆ ದುಃಖಿಸಿರು ವೆಯೋ ? ಆಗ ಒಂದು ಎಳೆಯಷ್ಟಾದರೂ ಸ್ವಾನುಕಂಪವು ಅಲ್ಲಿ ಉಳಿದಿರುವುದಿಲ್ಲ. ಆದರೆ ನೀನು ಎಂಥವನಾಗಿ ರುವೆಯೋ ಅಂಥವನೇ ಆಗಿರುವುದನ್ನು ಕಂಡುಕೊಂಡ ವಿಸ್ಮಯ ಭರಿತ ಹೃದಯ ವಿದ್ರಾವಕ ಕಡುದುಃಖದಲ್ಲಿ ನೀನಿರುವೆ. ''ನಿಮ್ಮನ್ನು ತಗ್ಗಿಸಿಕೊಳ್ಳಿರಿ'' (ಯಾಕೋ 4:10) ದೇವರ ಬಾಗಿಲನ್ನು ತಟ್ಟುವುದು ಎಂದರೆ, ಅದು ನಮ್ಮನ್ನು ತಗ್ಗಿಸಿಕೊಂಡು ದೀನನ್ನಾಗಿಸಿಕೊಳ್ಳುವ ವಿಷಯ. ಶಿಲುಬೆಗೆ ಹಾಕಲ್ಪಟ್ಟ ಕಳ್ಳನ ಜೊತೆಯಲ್ಲಿ ಆ ಬಾಗಿಲನ್ನು ತಟ್ಟಬೇಕು. ''ತಟ್ಟುವವನಿಗೆ ತೆರೆಯಲ್ಪಡುವುದು'' (ಲೂಕ 11:10)

# ಅಲ್ಲಿಗೆ ಹೋಗುವುದು

ಪಾಪ ಮತ್ತು ದುಃಖ ಎಲ್ಲಿ ಕೊನೆಗಾಣುತ್ತದೋ ಅಲ್ಲಿ ಸ್ತುತಿಘೋಷದ ಆರಂಭವಾಗುವುದು.

**''ನೀವೆಲ್ಲರೂ ನನ್ನ ಬಳಿಗೆ ಬನ್ನಿರಿ'' - (ಯಾಕೋಬ - 4:3)**

ಅಲ್ಲಿಗೆ ಹೋಗಲು ನಾನು ನಿಜವಾಗಿಯೂ ಬಯಸುತ್ತಿರುವೆನೋ? ಈಗ ನಾನು ಅಲ್ಲಿಗೆ ಹೋಗಬಲ್ಲೆ. ನಮ್ಮ ಜೀವಿತದಲ್ಲಿ ಮುಖ್ಯವೆನಿಸಿದ ಪ್ರಶ್ನೆಗಳು ಈಗ ಗಣನೀಯವಾಗಿ ಕಡಿಮೆಯಾಗಿವೆ ಮತ್ತು ''ನನ್ನ ಬಳಿಗೆ ಬನ್ನಿರಿ''- ಈ ವಾಕ್ಯದ ಮೂಲಕ ಎಲ್ಲಾ ಪ್ರಶ್ನೆಗಳೂ ಉತ್ತರಿಸಲ್ಪಟ್ಟಿವೆ! ಅದನ್ನು ಮಾಡು, ಇದನ್ನು ಮಾಡಬೇಡ' - ಎಂಬುದಲ್ಲ. ಆದರೆ 'ನನ್ನ ಬಳಿಗೆ ಬನ್ನಿರಿ'! ನಾನು ಯೇಸುವಿನ ಬಳಿಗೆ ಬಂದರೆ ನನ್ನ ನಿಜಜೀವಿತವು ನನ್ನ ನಿಜವಾದ ಆಶೆ ಆಕಾಂಕ್ಷೆಗಳಂತೆಯೇ ಆಗಿಬಿಡುತ್ತದೆ. ನಾನು ಪಾಪ ಮಾಡುವುದನ್ನು ಕೊನೆಗಾಣಿಸುತ್ತೇನೆ ಮತ್ತು ನಿಜವಾಗಿಯೂ ದೈವಗೀತೆಯು ನನ್ನೊಳಗೆ ಶೃತಿಗೊಂಡಿರು ವುದನ್ನು ಕಾಣುತ್ತೇನೆ.

ಯೇಸುವಿನ ಬಳಿಗೆ ಎಂದಾದರೂ ಬಂದಿರುವಿಯೋ? ಹಾಗೆ ಬರಲಾರದಂತಿರುವ ಹೃದಯದ ಮೊಂಡುತನವನ್ನು ಗಮನಿಸು. ಒಂದು ಚಿಕ್ಕಮಗುವು ಸರಳವಾಗಿ ಮಾಡುವಂಥಾ 'ಬಳಿಗೆ ಬರುವಿಕೆ'ಯನ್ನು ನಾವು ಮಾಡುವುದಿಲ್ಲ. ''ನನ್ನ ಬಳಿಗೆ ಬನ್ನಿರಿ'' ಎನ್ನುವ ಬರುವಿಕೆಯನ್ನು ಕೈಕೊಳ್ಳದೆ ಬೇರೆಲ್ಲವನ್ನೂ ನಾವು ಮಾಡುತ್ತೇವೆ. ಪಾಪ ಮಾಡುವುದನ್ನು ಕೊನೆಗಾಣಿಸಿದ ನಿಜ ಅನುಭವವು ನಿನಗೆ ಬೇಕಾಗಿದ್ದರೆ, ನೀನು ಯೇಸುವಿನ ಬಳಿಗೆ ಬರಬೇಕು.

ಯೇಸುಕ್ರಿಸ್ತನು ತನ್ನನ್ನು ಒರೆಗಲ್ಲಾಗಿ ಮಾಡಿಕೊಂಡಿರುತ್ತಾನೆ. 'ಬನ್ನಿರಿ' ಎಂಬ ಪದವನ್ನು ಆತನು ಹೇಗೆ ಬಳಸಿದ್ದಾನೆಂಬುದನ್ನು ಗಮನಿಸಿರಿ. ಜೀವಿತದಲ್ಲಿ ನಾವೆಂದೂ ಬಯಸದಿರುವಂಥ ಕ್ಷಣಗಳಲ್ಲಿ ಕೇಳಿ ಬರುವ ಯೇಸುವಿನ ಈ ಪಿಸುಗುಟ್ಟುವಿಕೆ - ''ನನ್ನ ಬಳಿಗೆ ಬನ್ನಿರಿ''; ತಕ್ಷಣವೇ 'ಬಳಿಗೆ' ಸೆಳೆಯಲ್ಪಡುವಿರಿ. ಯೇಸುಸ್ವಾಮಿಯೊಂದಿಗೆ ಉಂಟಾಗುವ ವ್ಯಕ್ತಿಗತ ಸಂಪರ್ಕವು ಎಲ್ಲವನ್ನು ಮಾರ್ಪಡಿಸುತ್ತದೆ. ಆತನ ಬಳಿಗೆ ಬಂದು ಆತನು ಹೇಳುವಂಥವುಗಳಿಗೆ ನಿಮ್ಮನ್ನು ಒಪ್ಪಿಸಿಕೊಡುವಷ್ಟು ಅಮಾಯಕರಾಗಿಬಿಡಿರಿ. ಆತನ ಬಳಿಗೆ ಬರುವ ನಮ್ಮ ಮನೋಭಾವನೆಯೆಂದರೆ, ನಮ್ಮ ಇಚ್ಛಾ ಶಕ್ತಿಯು, ದೃಢನಿಶ್ಚಯದಿಂದ ತನ್ನದೆಲ್ಲವನ್ನು ತ್ಯಜಿಸಿಕೊಂಡು ವಿವೇಚನಾ ಪೂರ್ವಕವಾಗಿ ಆತನಿಗೆ ಒಪ್ಪಿಸಿಕೊಳ್ಳುವುದೇ ಆಗಿದೆ.

''ನಾನು ನಿಮಗೆ ವಿಶ್ರಾಂತಿ ಕೊಡುವೆನು'' ಮತ್ತು 'ಸದಾ ಕಾಲಕ್ಕೂ ನಾನು ನಿಮ್ಮೊಂದಿಗೆ ಇದ್ದು, ನಿಮ್ಮನ್ನು ಕಾಪಾಡುತ್ತೇನೆ' ಎಂದು ಆತನು ಹೇಳುತ್ತಿದ್ದಾನೆ. ಅಂದರೆ ನಿಮ್ಮನ್ನು ಹಾಸಿಗೆಯ ಮೇಲೆ ಮಲಗಿಸುತ್ತೇನೆ, ನಿಮ್ಮ ಕೈಹಿಡಿದು ಜೋಗುಳ ಹಾಡನ್ನು ಹಾಡುತ್ತೇನೆ ಎಂದಲ್ಲ; ಆದರೆ ನಾನು ನಿಮ್ಮನ್ನು ಜಾಗೃತಗೊಳಿಸಿ ಹಾಸಿಗೆಯಿಂದ ಎಬ್ಬಿಸಿ ಹೊರತರುವೆನು, ದಣಿವು ಬೇಸರಿಕೆಗಳಿಂದ ಹೊರಬರ ಮಾಡುವೆನು, ನೀವು ಬದುಕಿದ್ದರೂ ಅರ್ಧ ಸತ್ತವರಂತಿರುವ ಸ್ಥಿತಿಯಿಂದ ಹೊರತರುವೆನು, ನಿನ್ನೊಳಗೆ ಜೀವಾತ್ಮವನ್ನು ತುಂಬಿ ಜೀವಕಳೆ ಹೊಂದುವಂತೆ ಮಾಡುವೆನು, ಜೀವಭರಿತ ಚಟುವಟಿಕೆಯುಳ್ಳ ಸದೃಢ ನನ್ನಾಗಿ ಮಾಡುವೆನು ಎಂದು ಆತನು ಹೇಳುತ್ತಿದ್ದಾನೆ. ನಾವಾದರೋ ಬಲಹೀನರಾಗಿ ''ಶ್ರಮೆಯನ್ನನು ಭವಿಸುವುದೇ ದೇವರ ಚಿತ್ತವೆಂದು'' ಶ್ರಮೆಯ ಬಗ್ಗೆ ಮಾತ ನಾಡುತ್ತೇವೆ. ಆ ಶ್ರಮೆಯ ವಿಷಯದಲ್ಲಿ ದೇವರ ಪುತ್ರನ ಮಹಿಮಾಭರಿತ ಜೀವಶಕ್ತಿ ಮತ್ತು ಆತನ ಸತ್ವಶಾಲಿತ್ವ ಎಲ್ಲಿ ಹೋಯಿತು?

# ಅಲ್ಲಿಗೆ ಹೋಗುವುದು

ಸ್ವಹಿತಾಸಕ್ತಿ ಎಲ್ಲಿ ನಿದ್ರೆ ಹೋಗುವುದೋ, ಅಲ್ಲಿ ನಿಜಾಸಕ್ತಿ ಎಚ್ಚರಗೊಳ್ಳುವುದು

**''ಗುರುವೇ ನೀನು ಇಳುಕೊಂಡಿರುವದು ಎಲ್ಲಿ ? ........ ಬಂದು ನೋಡಿರಿ'' - (ಯೋಹಾನ 1:38-39)**

''ಆ ದಿವಸ ಆತನ ಸಂಗಡ ಇದ್ದರು''; ನಮ್ಮಲ್ಲಿ ಕೆಲವರು ಮಾಡುವುದೆಲ್ಲಾ ಹಾಗೆಯೇ. ಆತನೊಡನೆ ಸ್ವಲ್ಪ ಸಮಯ ಮಾತ್ರ ವಾಸಿಸುತ್ತೇವೆ. ನಂತರ ನಮ್ಮ ಜೀವಿತದ ವಾಸ್ತವಕ್ಕೆ ಎಚ್ಚರಗೊಳ್ಳುತ್ತೇವೆ, ಸ್ವಹಿತಾಸಕ್ತಿಗಳು ಉದಯಿಸುತ್ತವೆ. ಆತನೊಡನೆ ವಾಸ್ತವ್ಯ ಹೂಡುವಿಕೆಯು ಹೊರಟು ಹೋಗಿರುತ್ತದೆ. ನೆನಪಿರಲಿ; ಯೇಸುಕ್ರಿಸ್ತನ ಸಂಗಡ ನಾವು ಇರದಂತೆ ಮಾಡುವ ಯಾವ ಸ್ಥಿತಿಯೂ ನಮ್ಮ ಜೀವಿತದಲ್ಲಿ ಇರುವುದಿಲ್ಲ.

''ನೀನು ಯೋಹಾನನ ಮಗನಾದ ಸೀಮೋನನು. ಇನ್ನು ಮೇಲೆ ಕೇಫನೆನಿಸಿಕೊಳ್ಳುವಿ'' (ಯೋಹಾ 1:42) ನಮ್ಮ ಬದುಕಿನಲ್ಲಿ ನಮ್ಮಲ್ಲಿರುವ ಅಹಂಕಾರ, ಸ್ವಸಂತುಷ್ಟಿ ಮತ್ತು ಸ್ವಹಿತಾಸಕ್ತಿಗಳನ್ನು, ದೇವರು ಸಂಪೂರ್ಣವಾಗಿ ಅಳಿಸಿಹಾಕಿ, ಆ ಸ್ಥಳದಲ್ಲಿ ಹೊಸ ಹೆಸರನ್ನು ಬರೆಯುತ್ತಾನೆ. ನಮ್ಮಲ್ಲಿ ಕೆಲವರು ತಮ್ಮ ಜೀವಿತದ ಹಲವು ಕ್ಷೇತ್ರಗಳಲ್ಲಿ ಅಲ್ಲಲ್ಲಿ ಮಾತ್ರ ಹೊಸ ಹೆಸರನ್ನು ಹೊಂದಿರುತ್ತೇವೆ ಮತ್ತು ಆಯಾ ಕ್ಷೇತ್ರಗಳಲ್ಲಿ ನಾವು ಸಮರ್ಪಕವಾಗಿ ಕಾಣಬರುತ್ತೇವೆ. ಆತ್ಮೀಕವಾಗಿ ಉನ್ನತ ಸ್ಥಿತಿಯಲ್ಲಿ ನಾವಿರುವಾಗ ನಮ್ಮನ್ನು 'ಉಚ್ಚ ಮಟ್ಟದ ದೇವಭಕ್ತರು' ಎಂದು ನೀವು ಭಾವಿಸಬಹುದು. ಆದರೆ ಆ ಮೂಡ್‌ನಲ್ಲಿ ನಾವಿರದಿದ್ದ ಸಮಯದಲ್ಲಿ ದಯಮಾಡಿ ನೀವು ನಮ್ಮ ಕಡೆಗೆ ದೃಷ್ಟಿಹಾಯಿಸುವ ಸಾಹಸ ಮಾಡಬೇಡಿರಿ. ನಿಜವಾದ ಶಿಷ್ಯನ ಮೇಲೆ ಸಂಪೂರ್ಣವಾಗಿ ಹೊಸ ಹೆಸರನ್ನು ಬರೆದಿರುತ್ತದೆ. ಸ್ವಹಿತಾಸಕ್ತಿ, ಅಹಂಕಾರ, ಸ್ವ ಸಂತೃಪ್ತಿಗಳು ಪೂರ್ಣವಾಗಿ ಅವನಲ್ಲಿ ಅಳಿಸಿಹೋಗಿವೆ.

ಸ್ವಯಂನ್ನು ದೈವತ್ವಕ್ಕೇರಿಸಿಕೊಳ್ಳುವದೇ ಅಹಂಕಾರ. ಈ ದಿನ ಗಳಲ್ಲಿಯೂ ನಮ್ಮಲ್ಲಿ ಕೆಲವರು ಆ ಫರಿಸಾಯನಂತೆ ಮಾಡದೆ, ಆ ಸುಂಕದವನಂತೆ - (ಲೂಕ 18:9-14) ನುಡಿಯುತ್ತಾರೆ, ''ಓ, ನಾನು ಪಾಪಿ, ನಾನು ಸಂತನಲ್ಲವೇ ಅಲ್ಲ'' ಹೀಗೆ ಹೇಳುವುದು ಮಾನವನ ಪ್ರತಿಷ್ಠೆಗೆ ಅದು ದೀನತೆಯೆಂದು ಸಮ್ಮತ ವಾದರೂ, ಅದು ಕಪಟ ದೀನತೆ, ಅದು ದೇವರ ವಿರುದ್ಧ ಮಾಡಿದ ಪ್ರಜ್ಞಾಶೂನ್ಯ ದೂಷಣೆ. ಅಕ್ಷರಶಃ ಇದರ ಅರ್ಥ-ನಿನ್ನನ್ನು ದೈವ ಭಕ್ತನಾಗಿ ಮಾಡಬಲ್ಲ ದೇವರನ್ನು ನೀನು ಧಿಕ್ಕರಿಸುತ್ತಿರುವೆ. ''ನಾನು ತುಂಬಾ ಬಲಹೀನನೂ, ನಿರೀಕ್ಷೆ ಇಲ್ಲದವನೂ, ಯೇಸುಕ್ರಿಸ್ತನು ಶಿಲುಬೆಯ ಮೇಲೆ ಮಾಡಿದ ಪ್ರಾಯಶ್ಚಿತ್ತದ ಹೊರಗೆ ಉಳಿದುಕೊಂಡವನೂ ಆಗಿದ್ದೇನೆ'' ಎಂದು ಕಪಟ ದೈನ್ಯತೆಯಿಂದ ಹೇಳಿಕೊಳ್ಳುವುದರ ಮೂಲಕ ಮನುಷ್ಯರ ಮುಂದೆ ನಾವು ತೋರುವ ದೀನತೆಯು, ಅದು ದೇವರ ಮುಂದೆ ನಾವು ಮಾಡುವ ಪ್ರಜ್ಞಾರಹಿತ ದೇವದೂಷಣೆ. ನೀನೇಕೆ ಸಂತನಾಗಿಲ್ಲ? ಒಂದೋ, ನೀನು ಸಂತನಾಗಲು ನಿನಗೆ ಬೇಡವಾಗಿದೆ, ಅಥವಾ ದೇವರು ನಿನ್ನನ್ನು ಸಂತನನ್ನಾಗಿ ಮಾಡಶಕ್ತನು ಎಂದು ನೀನು ನಂಬುತ್ತಿಲ್ಲ. ''ದೇವರು ನಿನ್ನನ್ನು ರಕ್ಷಿಸಬೇಕು ಮತ್ತು ನೇರವಾಗಿ ಸ್ವರ್ಗಕ್ಕೆ ಕರೆದೊಯ್ಯಬೇಕು, ಅದು ಬಹು ಉತ್ತಮ'' ಎಂದು ನೀನು ಹೇಳುವುದು ಸರಿಯೇ; ದೇವರು ಮಾಡುವುದೂ ಅದನ್ನೇ; ''ನಾವಿಬ್ಬರೂ ಅವನ ಬಳಿಗೆ ಬಂದು ಅವನ ಬಳಿಯಲ್ಲಿ ಬಿಡಾರವನ್ನು ಮಾಡಿಕೊಳ್ಳುವೆವು'' (ಯೋಹಾ-14:23) ನಿನ್ನ ಜೀವಿತದಲ್ಲಿ ಯಾವ ಷರತ್ತುಗಳನ್ನೂ ಇಟ್ಟುಕೊಳ್ಳಬೇಡ, ಸರ್ವಸ್ವವೂ ಯೇಸುವೇ ಆಗಿರಲಿ. ಆತನು, ತಾನಿರುವಲ್ಲಿಗೆ ನಿನ್ನನ್ನು ಕರೆದೊಯ್ಯುತ್ತಾನೆ. ಒಂದು ದಿವಸದ ಮಟ್ಟಿಗಲ್ಲ - ನಿರಂತರವಾಗಿ ಆತನ ಸಂಗಡ ಇರುವುದಕ್ಕೋಸ್ಕರ ಅಲ್ಲಿಗೆ ಕರೆದೊಯ್ಯುತ್ತಾನೆ.

# ಅಲ್ಲಿಗೆ ಹೋಗುವುದು

ಆಯ್ಕೆ ಮಾಡುವ ಆಕರ್ಷಣೆಗಳು ಎಲ್ಲಿ ಗತಿಸಿ ಹೋಗುವವೋ ಅಲ್ಲಿ ಅವರು
ಶುದ್ಧೀಕರಿಸಲ್ಪಟ್ಟ ತಮ್ಮ ಜೀವಿತಗಳನ್ನು ಸಮರ್ಪಣೆ ಮಾಡುವರು.

**''ನನ್ನ ಹಿಂದೆ ಬನ್ನಿರಿ'' - (ಮಾರ್ಕ 1:17)**

ಯೇಸುವಿನೆಡೆಗೆ ಬರಲು ಅಡ್ಡವಾಗಿರುವ ದೊಡ್ಡ ತಡೆ ಎಂದರೆ, ಅದು ಮಾನವನ ವ್ಯಕ್ತಿಗತ ಮನೋಧರ್ಮದ ನೆಪವೇ. ಯೇಸುವಿನೆಡೆಗೆ ಸಾಗುವಾಗ ನಮ್ಮ ಮನೋಧರ್ಮದ ಸ್ವಾಭಾವಿಕ ಆಕರ್ಷಣೆಗಳ ಅಡ್ಡಗೋಡೆಗಳನ್ನು ನಾವೇ ರಚಿಸುತ್ತೇವೆ. ಯೇಸುವಿನ ಬಳಿಗೆ ಬಂದಾಗ ಮೊದಲು ನಮಗೆ ತಿಳಿದು ಬರುವಂಥಾದ್ದು, ಆತನು ನಮ್ಮ ಸಹಜ ಆಕರ್ಷಣೆಗಳಿಗೆ ಎಷ್ಟು ಮಾತ್ರವೂ ಗಮನ ಕೊಡುವು ದಿಲ್ಲವೆಂದು. ಆತನ ಸನಿಹಕ್ಕೆ ಬಂದಾಗ ಆತನಿಗೆ ನಮ್ಮಲ್ಲಿರುವ ವರಗಳನ್ನು ಆತನಿಗೋಸ್ಕರ ಮೀಸಲಿಡ ಬೇಕಾಗುತ್ತದೆಯೋ ಏನೋ ಎಂಬ ಭಾವನೆ ನಮ್ಮಲ್ಲಿರುತ್ತದೆ. ನಿನ್ನದಲ್ಲದ್ದನ್ನು ನೀನು ದೇವರಿಗೆ ಮೀಸಲಿಡಲು ಪ್ರತಿಷ್ಠಿಸಲು ನಿನಗಾಗುವುದಿಲ್ಲ. ದೇವರಿಗೆ ನೀನು ಮೀಸಲಿಟ್ಟು ಪ್ರತಿಷ್ಠಿಸು ವಂಥಾದ್ದು ಒಂದೇ ಒಂದು ಇದೆ - ಅದು ನಿನ್ನ ಮೇಲೆ ನಿನಗಿರುವ ಸ್ವಾಮಿತ್ವ (ರೋಮಾ 12:1); ನಿನ್ನ ಮೇಲೆ ನಿನಗಿರುವ ಸ್ವಾಮಿತ್ವವನ್ನು ನೀನು ದೇವರಿಗೆ ಕೊಟ್ಟಾಗ, ದೇವರು ನಿನ್ನಲ್ಲಿ ಪವಿತ್ರ ಪ್ರಯೋಗವನ್ನು ಕೈಕೊಳ್ಳುವನು, ದೇವರು ಕೈಕೊಳ್ಳುವ ಪ್ರಯೋಗವು ಖಂಡಿತವಾಗಿ ಯಶಸ್ವಿ ಯಾಗುತ್ತದೆ. ಭಕ್ತನ ಒಂದು ವಿಶಿಷ್ಟ ಲಕ್ಷಣವೆಂದರೆ, ಯೇಸುಕ್ರಿಸ್ತನಿಗೆ ಸಂಪೂರ್ಣವಾಗಿ ಶರಣಾಗಿರು ವುದರಿಂದ ಪುಟಿಯುವ ನೇರತ್ವ ಅವನಲ್ಲಿ ಕಂಡುಬರುತ್ತದೆ. ಭಕ್ತನ ಜೀವಿತದಲ್ಲಿ ಇಂಥಾ ನೀರಿನ ಬಾವಿಯಿಂದ ಪವಿತ್ರವಾದ ಮೂಲ ಜೀವಿತವು ಹರಿಯುತ್ತಿರುತ್ತದೆ. ದೇವರ ಆತ್ಮವು ನೀರಿನ ಊಟೆಯಂತೆ, ಪರಿಶುಭ್ರವಾಗಿಯೂ, ನಿರಂತರವಾಗಿ, ಅವನ ಬದುಕಿನಲ್ಲಿ ಹರಿಯುತ್ತಿರುತ್ತದೆ. ತನ್ನ ಸಮಯ ಸಂದರ್ಭಗಳನ್ನು ನಿರ್ವಹಿಸುತ್ತಿರುವಾತನು ದೇವರೇ ಎಂದು ಭಕ್ತನು ಅರಿತಿರುವು ದರಿಂದ, ಅಲ್ಲಿ ಗೋಳಿನ ಗೋಗರತೆ ಇರುವುದಿಲ್ಲವಾದರೂ, ಪರಿಣಾಮಗಳನ್ನು ಲೆಕ್ಕಿಸದೆ, ಕ್ರಿಸ್ತನಿಗೆ ಶರಣಾಗುವು ದೊಂದು ಮಾತ್ರ ಅಲ್ಲಿರುತ್ತದೆ. ನಿನ್ನ ಅನುಭವಗಳನ್ನು ಆಧಾರ ಮಾಡಿಕೊಂಡು ಯಾವ ದೊಂದು ಸೂತ್ರವನ್ನಾಗಲೀ ತತ್ವವನ್ನಾಗಲೀ ರೂಪಿಸಬೇಡ, ಆತನು ನಿನ್ನಲ್ಲಿ ಇರುವಂತೆಯೇ ಇತರರಲ್ಲೂ ಸೃಜನ ಶೀಲನಾಗಿಯೇ ಇರಲಿ ಬಿಡು.

ಯೇಸು ಕ್ರಿಸ್ತನಿಗಾಗಿ ನಿನ್ನ ಸ್ವಂತಿಕೆಯನ್ನು ತ್ಯಜಿಸಿ ಶರಣಾಗತನಾಗಿ ಆತನು ''ಬಾ'' ಎಂದು ಕರೆದಾಗ ನೀನು ಹೊರಟು ಬಂದರೆ, ಆಗಲಾತನು ನಿನ್ನ ಮುಖಾಂತರ ಇತರರಿಗೆ ''ಬಾ'' ಎಂದು ಹೇಳುವುದನ್ನು ಮುಂದರಿಸುತ್ತಾನೆ. ಯೇಸುಕ್ರಿಸ್ತನ ''ಬಾ'' ಎಂಬ ಶಬ್ದವನ್ನು ನಿನ್ನ ಬದುಕಿನಲ್ಲಿ ಪ್ರತಿಧ್ವನಿಸುತ್ತಾ ಲೋಕದೊಳಗೆ ಹೋಗಿಬಿಡುವಿ. ತನ್ನದೆಲ್ಲವನ್ನೂ ತ್ಯಜಿಸಿ ಯೇಸುವಿನ ಬಳಿಗೆ ಬಂದ ಪ್ರತಿಯೊಂದು ಆತ್ಮದಲ್ಲಿಯೂ ಇದೇ ಫಲವಿರುತ್ತದೆ. ಯೇಸುವಿನ ಬಳಿಗೆ ನಾನು ಬಂದಿರುವೆನೋ ? ಈಗಲೇ ನಾನು ಬರಬಲ್ಲೆನೋ ?

# ನೀನು ಮುಂದೆ ಸಾಗು

ನಿರ್ಧಾರ ಕೈಕೊಳ್ಳುವ ವಿಷಯ

**''ನನ್ನಲ್ಲಿ ನೆಲೆಗೊಂಡಿರು'' - (ಯೋಹಾನ 15:4)**

ಶಿಲುಬೆಯ ಮೇಲೆ ಆದ ಪ್ರಾಯಶ್ಚಿತ್ತ ಯಜ್ಞದ ಮೂಲಕ ಯೇಸು ಕ್ರಿಸ್ತನ ಆತ್ಮವು ನನ್ನಲ್ಲಿ ಇರಿಸಲ್ಪಟ್ಟಿದೆ. ಹಾಗಿದ್ದರೆ ಆತನ ಸದೃಶ್ಯವಾದ ರೀತಿಯಲ್ಲಿ ಯೋಚಿಸಲು ನಾನು ಬಹು ತಾಳ್ಮೆಯಿಂದ ಸಾಧನೆ ಮಾಡಬೇಕು. ಯೇಸು ಸ್ವಾಮಿಯಂತೆ ಆಲೋಚಿಸುವ ಹಾಗೆ ದೇವರು ಮಾಡುವುದಿಲ್ಲ. ಅದನ್ನು ನಾನೇ ಮಾಡ ಬೇಕಾಗಿದೆ, ''ಎಲ್ಲಾ ಯೋಚನೆಗಳನ್ನು ಕ್ರಿಸ್ತನಿಗೆ ವಿಧೇಯವಾಗುವಂತೆ ಸೆರೆಹಿಡಿದು'' ತರುವುದನ್ನು ನಾನೇ ಮಾಡಬೇಕು. ''ನನ್ನಲ್ಲಿ ನೆಲೆಗೊಂಡಿರು'' (2 ಕೊರಿ 10:5) ಬೌದ್ಧಿಕ ವಿಷಯಗಳಲ್ಲಿ, ಹಣಕಾಸುಗಳ ವಿಷಯದಲ್ಲಿ ಮನುಷ್ಯ ಜೀವಿತದ ಪ್ರತಿಯೊಂದು ವಿಷಯದಲ್ಲಿ - ಮಾನವ ಜೀವಿತವನ್ನು ಅದು ಇರುವಹಾಗೆಯೇ ರೂಪಿಸುವ ಪ್ರತಿಯೊಂದು ವಿಷಯದಲ್ಲಿಯೂ ನಾವು ಆತನಲ್ಲಿ ನೆಲೆಗೊಂಡಿರ ಬೇಕು. ಅಂಥಾ ಜೀವಿತ ಅನ್ಯೋನ್ಯತೆಗೆನೀಟಾದ ನಿಗದಿತ ಕ್ಷೇತ್ರಕ್ಕಷ್ಟೇ ಮೀಸಲಾದ ಜೀವಿತವಾಗಿರುವುದಿಲ್ಲ.

ದೇವರು ಮಾಡುವ ಕಾರ್ಯಗಳು, ಆತನೊಂದಿಗಿರುವ ನನ್ನ ಅನ್ಯೋನ್ಯತೆಗೆ ಅಡ್ಡಿಯುಂಟು ಮಾಡುತ್ತವೆ ಎಂದು ಹೇಳುತ್ತಾ ನನ್ನ ಪ್ರಸ್ತುತ ಸನ್ನಿವೇಶ ಗಳಲ್ಲಿ ದೇವರು ಏನೂ ಮಾಡದಂತೆ, ಆತನನ್ನು ಪ್ರತಿಬಂಧಿಸುತ್ತಿರುವೆನೋ? ಹಾಗಿದ್ದರೆ ಅದು ಕೇವಲ ಉದ್ಧಟತನ. ನನ್ನ ಸನ್ನಿವೇಶಗಳು ಏನಾದರೂ, ಹೇಗಾದರೂ ಇರಲಿ, ಅದು ಮುಖ್ಯವಲ್ಲ. ಒಂದು ಪ್ರಾರ್ಥನಾ ಕೂಟದಲ್ಲಿ ನಾನು ಹೇಗೆ ನೆಲೆಗೊಂಡಿರ ಬಲ್ಲೆನೋ ಹಾಗೆಯೇ, ಎಲ್ಲಾ ಸನ್ನಿವೇಶದಲ್ಲಿ ಅಷ್ಟೇ ಯಥಾರ್ಥವಾಗಿ ದೇವರಲ್ಲಿ ನೆಲೆಯಾಗಿರಬಲ್ಲೆನು ಎನ್ನುವ ಭರವಸೆ ನನಗುಂಟು. ಆ ಸಂದರ್ಭಗಳನ್ನು, ನನ್ನ ಸ್ವಂತ ಅನುಕೂಲಕ್ಕೆ ತಕ್ಕಂತೆ ನಾನು ಬದಲಾಯಿಸಿ ವ್ಯವಸ್ಥೆಗೊಳಿಸಬಾರದು. ಯೇಸುಕ್ರಿಸ್ತನೊಂದಿಗಿರುವ ನನ್ನ ನೆಲೆಗೊಳ್ಳುವಿಕೆಯು, ದೋಷ ರಹಿತವೂ ಪರಿಶುದ್ಧವೂ ಆಗಿದೆ. ಯೇಸುಕ್ರಿಸ್ತನನ್ನು, ದೇವರು ಎಲ್ಲಿ ಇರಿಸುತ್ತಿದ್ದನೋ ಅಲ್ಲಿ ಆತನು ನೆಮ್ಮದಿ ಯಿಂದ ಇದ್ದನು. ತನ್ನ ಸಮಯ ಸಂದರ್ಭಗಳನ್ನು ಆತನು ಎಂದೂ ಆಯ್ಕೆ ಮಾಡಿರಲಿಲ್ಲ. ತನಗಾಗಿ ದೇವರು ಮಾಡುತ್ತಿರುವ ನಿರ್ವಹಣೆಗಳಿಗೆ ಆತನು ವಿನಮ್ರನಾಗಿ ಶರಣಾಗುತ್ತಿದ್ದನು. ಯೇಸು ಕ್ರಿಸ್ತನ ಜೀವಿತದಲ್ಲಿದ್ದ ಇಂಥಾ ಅಚ್ಚರಿಯ ನೆಮ್ಮದಿ, ವಿಶ್ರಾಂತಿಯನ್ನು ಕುರಿತು ಯೋಚಿಸಿರಿ! ನಾವಾದರೋ, ಸದಾ ದೇವರನ್ನು ನಮ್ಮ ಭಾವಾವೇಶಗಳಿಂದ ಪ್ರಚೋದಿಸುತ್ತಲೇ ಇರುತ್ತೇವೆ. ದೇವರಲ್ಲಿ ನೆಲೆ ಗೊಂಡಿದ್ದಂಥಾ ಕ್ರಿಸ್ತನ ಜೀವಿತದ ಗಾಢ ನೆಮ್ಮದಿಯು ನಮ್ಮಲ್ಲಿ ಇಲ್ಲವೇ ಇಲ್ಲ. ''ನಮ್ಮ ಜೀವವು ಕ್ರಿಸ್ತ ನೊಂದಿಗೆ ದೇವರಲ್ಲಿ ಮರೆಯಾಗಿಟ್ಟಿದೆ'' (ಕೊಲೊಸ್ಸೆ 3:3) ಇದು ನಮ್ಮ ಜೀವಿತದಲ್ಲಿ ಇಲ್ಲ.

ಕ್ರಿಸ್ತನಲ್ಲಿ ನಮ್ಮನ್ನು ನೆಲೆಗೊಳ್ಳದಂತೆ ಮಾಡುವ ವಿಷಯಗಳನ್ನು ಯೋಚಿಸಿರಿ. ''ಆಗಲಿ ಸ್ವಾಮಿ, ಈ ಕೆಲಸವನ್ನು ನಾನೀಗಲೇ ಮಾಡಬೇಕಾಗಿದೆ, ಈ ಕೆಲಸವೊಮ್ಮೆ ಮುಗಿದ ಮೇಲೆ ನಾನು ನಿನ್ನಲ್ಲಿ ನೆಲೆ ಗೊಳ್ಳುತ್ತೇನೆ, ಈ ವಾರವು ಒಮ್ಮೆ ಮುಗಿದು ಹೋಗಲಿ, ನಂತರ ಪ್ರಭುವೇ ನಾನು ಬಂದು ನೆಲೆಗೊಳ್ಳುವೆ'' ಹೀಗೆ ಹೇಳುತ್ತಲೇ ಇರುತ್ತೇವೆ. ಮೊದಲು ನೀನು ಮುಂದೆ ಸಾಗು, ಕೂಡಲೇ ಕ್ರಿಸ್ತನಲ್ಲಿ ನೆಲೆಗೊಳ್ಳಲು ಮೊದಲು ಕ್ರಿಯಾಶೀಲನಾಗು. ಪ್ರಜ್ಞಾರಹಿತನಾಗಿ ಆತನಲ್ಲಿ ನೆಲೆಗೊಂಡಿರುವುದೇ ನಿನ್ನ ಜೀವಿತದ ನಿಯಮ ವಾಗುವ ತನಕ ಸತತವಾಗಿ ಪ್ರಥಮ ಹಂತಗಳಲ್ಲಿ ಸಾಧನೆ ಮಾಡಬೇಕು. ನಿನ್ನ ಜೀವಿತ ದಲ್ಲಿ ದೇವರು ನಿನ್ನನ್ನು ಎಲ್ಲಿಯೇ ಇರಿಸಲಿ, ನೀನೆಲ್ಲಿಯೇ ಇರಲಿ, ಯೇಸುವಿನಲ್ಲಿ ನೆಲೆಗೊಳ್ಳಲು ಮೊದಲು ತೀರ್ಮಾನಿಸ ಬೇಕು.

# ನೀನು ಮುಂದಕ್ಕೆ ಸಾಗು

ಮನವೊಪ್ಪದ ದುಡಿತದ ವಿಷಯದಲ್ಲಿ

**'ಕಾರಣದಿಂದಲೇ ....... ಕೂಡಿಸಿರಿ'' - (2 ಪೇತ್ರ 1:5-8)**

''ನೀವು ದೈವ ಸ್ವಭಾವದಲ್ಲಿ ಪಾಲನ್ನು ಹೊಂದಿರುವಿರಿ'' ಪೇತ್ರನು ಹೇಳಿದ್ದಾನೆ. (2 ಪೇತ್ರ 1:4) ''ಈಗ ನೀವು ಪೂರ್ಣಾಸಕ್ತಿಯುಳ್ಳವರಾಗಿರ ಬೇಕು''. (2 ಪೇತ್ರ 1:5) ಆದ ಕಾರಣ ವಿವೇಚನೆಯಿಂದ, ಏಕಾಗ್ರತೆಗಳಿಂದ ಪೂರ್ಣ ಗಮನದಿಂದ ಉತ್ತಮ ಹವ್ಯಾಸಗಳನ್ನು ರೂಢಿಸಿಕೊಳ್ಳಬೇಕು. 'ಕೂಡಿಸಿರಿ' ಎಂಬದರ ಅರ್ಥ ಎಲ್ಲಾ ಗುಣ ನಡತೆ ಗಳನ್ನು (ಕೂಡಿಸಿರಿ) ಎಂಬುದೇ. ಒಬ್ಬ ವ್ಯಕ್ತಿಯು ಲೌಕಿಕವಾಗಿ ಯಾಗಲೀ, ಅಲೌಕಿಕವಾಗಿಯಾಗಲೀ ಗುಣನಡತೆಯನ್ನು ಪಡೆದು ಹುಟ್ಟಿ ಬರುವುದಿಲ್ಲ. ಅವುಗಳನ್ನು ನಾವೇ ಬೆಳೆಸಿಕೊಳ್ಳಬೇಕು. ಹವ್ಯಾಸಗಳೊಂದಿಗೆ ನಾವು ಜನಿಸಿಲ್ಲ ; ದೇವರು ನಮ್ಮೊಳಗೆ ಇಟ್ಟಿರುವ ಹೊಸ ಜೀವಿತದ ಆಧಾರದ ಮೇಲೆ ನಮ್ಮ ಹವ್ಯಾಸಗಳನ್ನು ರೂಢಿಸಿಕೊಳ್ಳಬೇಕು. ಸಚ್ಚಾರಿತ್ರರೂ, ಪ್ರಕಾಶಮಾನ ವುಳ್ಳವರೂ ಆಗಿ ಮಾದರಿಗಳಂತೆ ಮಿನುಗುವ ಸಲುವಾಗಿ ನಾವು ಇಲ್ಲಿ ಇರುವುದಿಲ್ಲ. ದೇವರ ಅತಿಶಯ ವಾದ ಕೃಪೆಯನ್ನು ನಮ್ಮ ದೈನಂದಿನ ಜೀವನದಲ್ಲಿ ಸಹಜವಾಗಿ ಪ್ರದರ್ಶಿಸುವ ಸಾಮಾನ್ಯರಾಗಿರುವು ದಕ್ಕಾಗಿಯೇ ನಾವು ಇಲ್ಲಿ ಇದ್ದೇವೆ. ಮನವೊಪ್ಪದ ದಾಸತ್ವವೇ ನಮ್ಮ ಚಾರಿತ್ರ್ಯವನ್ನು ಪರೀಕ್ಷಿಸುವ ಒರೆಗಲ್ಲು. ಆತ್ಮೀಕ ಜೀವನದಲ್ಲಿ ಎದುರಾಗುವ ದೊಡ್ಡ ಅಡಚಣೆ ಎಂದರೆ ಜನ ಗುರುತಿಸುವ ಬೃಹತ್ ಕಾರ್ಯಗಳನ್ನೆಸಗಲು ನಾವು ಮೊದಲು ಮುಂದಾಗುವುದು, ಆದರೆ ಯೇಸುಸ್ವಾಮಿಯು ''ಕೈ ಪಾವುಡವನ್ನು ತಕ್ಕೊಂಡು ನಡುವಿಗೆ ಕಟ್ಟಿಕೊಂಡನು ....... ಶಿಷ್ಯರ ಕಾಲುಗಳನ್ನು ತೊಳೆಯುವುದಕ್ಕೂ ...... ಒರಸುವದಕ್ಕೂ ಪ್ರಾರಂಭಿಸಿದನು'' (ಯೋಹಾ 13:3-5).

ದೈನಂದಿನ ಸಾಮಾನ್ಯ ಬದುಕಿನ ಚಟುವಟಿಕೆಗಳಿಂದ ತುಂಬಿದ, ಬೇರೇನೂ ಇಲ್ಲದಿರುವ ಹಾಗೂ ಬೆಳಕಿನ ಝಳಝಳಿಸುವಿಕೆಯಾಗಲೀ, ರೋಮಾಂಚನ ಸಮಯಗಳಾಗಲೀ ಇಲ್ಲದಿರುವ ಕಾಲವು ನಮ್ಮ ಜೀವಿತದಲ್ಲಿದ್ದೇ ಇರುತ್ತದೆ. ಅದ್ಭುತ ಪ್ರೇರಣೆಗಳ ಸಮಯಾಂತರಗಳ ನಡುವೆಯೂ ನಾವು ಯಥಾ ರೀತಿ ಬಾಳಿ ಬದುಕುವಂತೆ ನಮ್ಮನ್ನು ಕಾಪಾಡುವ ದೇವರ ಮಾರ್ಗವೆಂದರೆ, ನಮ್ಮ ಬದುಕಿನ ದೈನಂದಿನ ಸಾಮಾನ್ಯ ಚಟುವಟಿಕೆಗಳೇ ಆಗಿವೆ. ದೇವರು ನಿನಗೆ ಎಲ್ಲಾ ಕಾಲಗಳಲ್ಲಿಯೂ ರೋಮಾಂಚಕ ಕ್ಷಣಗಳನ್ನು ಕೊಡುವನೆಂದು ನಿರೀಕ್ಷಿಸಬೇಡ. ಆದರೆ ಮನವೊಪ್ಪದ ಬೇಸರದ ದುಡಿತದ ಕ್ಷೇತ್ರದಲ್ಲಿಯೇ, ದೇವರ ಬಲವನ್ನಾಧರಿಸಿಕೊಂಡು ಬದುಕಲು ಕಲಿಯಬೇಕು. ಪೇತ್ರನು ಹೇಳಿದವುಗಳನ್ನು ''ಕೂಡಿಸುವುದು'' ನಮಗೆ ಕಷ್ಟಕರವಾಗಿರುತ್ತದೆ. ದೇವರು ಸುಖ ಶಾಂತಿಯ ಹೂವಿನ ಸುಪ್ಪತ್ತಿಗೆಯ ಮೇಲೆ ನಮ್ಮನ್ನಿರಿಸಿ ಸ್ವರ್ಗಕ್ಕೆ ನಮ್ಮನ್ನೊಯ್ಯುವನೆಂದು ನಾವು ನಿರೀಕ್ಷಿಸಬಾರದು ಎಂದು ನಾವು ಹೇಳುತ್ತೇವೆಯಾದರೂ, ಅದು ಹಾಗೆಯೇ ಆಗುತ್ತದೆಂದು ನಟನೆ ಮಾಡುತ್ತೇವೆ. ನನ್ನ ಜೀವನದ ಅತೀ ಪುಟ್ಟ ವಿಷಯದಲ್ಲಿಯೂ ನಾನು ದೇವರ ಚಿತ್ತಕ್ಕೆ ವಿಧೇಯನಾಗುವುದಾದರೆ, ದೇವರ ಕೃಪೆಯ ಸರ್ವಶಕ್ತಿತ್ವವು ಒದಗಿ ಬರುತ್ತಿರುವುದನ್ನು ನಾನು ಗ್ರಹಿಸುತ್ತೇನೆ. ಕಾರ್ಯಕಾರಣಕ್ಕಾಗಿ ಮಾತ್ರವೇ ನನ್ನ ಕರ್ತವ್ಯವನ್ನು ಮಾಡದೆ ದೇವರೇ ನನ್ನ ಎಲ್ಲಾ ಸನ್ನಿವೇಶಗಳನ್ನು ನಿರ್ವಹಿಸುತ್ತಿರುವಾತನು ಎಂದು ನಾನು ನಂಬಿ, ನನ್ನ ಕರ್ತವ್ಯವನ್ನು ಮಾಡುತ್ತೇನೆ. ಅಂಥಾ ವಿಧೇಯತೆಯ ಸಂದರ್ಭದಲ್ಲಿಯೇ ಕ್ರಿಸ್ತನು ಮಾಡಿದ ಪ್ರಾಯಶ್ಚಿತ್ತ ಯಜ್ಞದ ಮೂಲಕ ದೇವರ ಸರ್ವಶ್ರೇಷ್ಠ ಕೃಪೆಯು ನನ್ನದಾಗಿ ಬಿಡುತ್ತದೆ.

# ನೀನು ನಿನ್ನ ಪ್ರಾಣವನ್ನು ಕೊಡಬಲ್ಲೆಯೋ?

**''ಪ್ರಾಣವನ್ನೇ ಸ್ನೇಹಿತರಿಗೋಸ್ಕರ ಕೊಡುವ ಪ್ರೀತಿಗಿಂತ ಹೆಚ್ಚಿನ ಪ್ರೀತಿಯು ಯಾವದೂ ಇಲ್ಲ...... ನಿಮ್ಮನ್ನು ಸ್ನೇಹಿತರೆಂದು ಹೇಳಿದ್ದೇನೆ'' - (ಯೋಹಾನ : 15:13-15)**

ತನಗಾಗಿ ನಾನು ಸಾಯಬೇಕೆಂದು ಯೇಸುಕ್ರಿಸ್ತನು ನನಗೆ ಹೇಳುವುದಿಲ್ಲ ; ಆದರೆ ನನ್ನ ಪ್ರಾಣವನ್ನು ಆತನಿಗಾಗಿ ಕೊಡಬೇಕು ಎಂದು ಹೇಳುತ್ತಾನೆ. ಪೇತ್ರನು ಹೇಳಿದನು ''ನಿನಗಾಗಿ ನನ್ನ ಪ್ರಾಣವನ್ನಾದರೂ ಕೊಟ್ಟೇನು'' - (ಯೋಹಾ 13:37) ತಾನು ಹೇಳುತ್ತಿರುವುದರ ಅರ್ಥವೇನೆಂಬುದನ್ನು ಪೇತ್ರನು ತಿಳಿದಿದ್ದನು; ಅವನ ಕಲಿತನದ ಭಾವನೆ ಅದ್ಭುತವಾದದ್ದು; ಪೇತ್ರನು ಮಾಡಿದಂಥಾ ಘೋಷಣೆಯನ್ನು ಮಾಡಲು ನಾವು ಅಸಮರ್ಥರಾಗಿದ್ದರೆ ಅದು ತುಂಬಾ ಕೆಟ್ಟ ವಿಷಯ; ನನ್ನ ಕರ್ತವ್ಯ ಪ್ರಜ್ಞೆಯ ಅರಿವಾಗುವುದು ನನ್ನ ಕಲಿತನದ ಪ್ರಜ್ಞೆಯಿಂದಲೇ. ''ನನಗಾಗಿ ಪ್ರಾಣ ಕೊಡುವಿಯೋ?'' (ಯೋಹಾನ 13:38) ಹೀಗೆ ಯೇಸುಸ್ವಾಮಿಯುಎಂದಾದರೂ ನಿನ್ನನ್ನು ಕೇಳಿರುವನೇ? ಪರಮೋತ್ತಮನ ಪರಮ ಕರೆಯ ನಿಮಿತ್ತ ನೀನು ದಿನಂಪ್ರತಿ ಜೀವಿತಾರ್ಪಣೆ ಮಾಡುವುದಕ್ಕಿಂತಲೂ, ಸತ್ತು ಹೋಗುವುದೇ ಸುಲಭ. ಶ್ರೇಷ್ಠಮಟ್ಟದ ಪ್ರಜ್ವಲಿಸುವ ಕ್ಷಣಗಳಿಗಾಗಿ ನಾವು ರೂಪಿಸಲ್ಪಟ್ಟಿಲ್ಲ. ನಾವು ಅವುಗಳ ಬೆಳಕಿನಲ್ಲಿ ಸಾಮಾನ್ಯ ಜೀವಿತವನ್ನು ಸಾಗಿಸಲು ರೂಪಿಸಲ್ಪಟ್ಟಿದ್ದೇವೆ. ಯೇಸುಕ್ರಿಸ್ತನ ಜೀವಿತದಲ್ಲಿ ಒಂದೇ ಒಂದು ಪ್ರಕಾಶಮಯವಾದ ಕಾಲವಿತ್ತು, ಅದು ಪರ್ವತದ ಮೇಲೆ ಆತನು ದಿವ್ಯರೂಪವನ್ನು ಧರಿಸಿದಾಗ ಮಾತ್ರ. ಆ ಕ್ಷಣದ ನಂತರ ಆತನು ಎರಡನೇ ಬಾರಿಗೆ ತನ್ನ ಆ ಮಹಿಮೆಯನ್ನು ಬರಿದುಮಾಡಿಕೊಂಡು ಪಾಪಮಯ ಧರೆಯೊಳಗೆ ಇಳಿದುಬಂದನು. ಮೂವತ್ಮೂರು ವರ್ಷಗಳ ಕಾಲ, ತನ್ನ ತಂದೆಯ ಚಿತ್ತವನ್ನು ನೆರವೇರಿಸಲು ಯೇಸು ಸ್ವಾಮಿಯು ತನ್ನ ಜೀವಿತವನ್ನು ಧಾರೆಯೆರೆದನು. ಯೋಹಾನನು ಹೇಳುತ್ತಾನೆ - ''ನಾವು ಸಹ ನಮ್ಮ ಸಹೋದರರಿಗೋಸ್ಕರ ನಮ್ಮ ಪ್ರಾಣಗಳನ್ನು ಕೊಡುವ ಹಂಗಿನಲ್ಲಿದ್ದೇವೆ''. (1ಯೋಹಾ 3:16) ಆದರೆ ಹಾಗೆ ಮಾಡುವುದು ಮಾನವ ಸ್ವಭಾವಕ್ಕೆ ವಿರುದ್ಧವಾಗಿದೆ.

ನಾನು ಒಂದು ವೇಳೆ ಯೇಸುವಿನ ಗೆಳೆಯನಾಗಿದ್ದರೆ, ವಿವೇಕ ಪೂರ್ವಕವಾಗಿ ಎಚ್ಚರಿಕೆಯಿಂದ ಆತನಿಗಾಗಿ ಪ್ರಾಣವನ್ನು ಕೊಡುತ್ತೇನೆ. ಅದೇನೋ ಬಹು ಕಠಿಣವಾದದ್ದು; ಅದು ಅಷ್ಟು ಕಠಿಣವಾಗಿ ರುವುದಕ್ಕಾಗಿ ದೇವರಿಗೆ ಸ್ತೋತ್ರ ಮಾಡಿರಿ. ನಮಗೆ ರಕ್ಷಣೆಯೇನೋ ಸುಲಭ; ಯಾಕೆಂದರೆ ದೇವರು ಅದಕ್ಕಾಗಿ ಅಗಾಧ ಬೆಲೆ ತೆತ್ತಿದ್ದಾನೆ. ಆದರೆ ಆ ರಕ್ಷಣೆಯು ನನ್ನ ಜೀವಿತದಲ್ಲಿ ಸಾಧನೆಗೊಂಡು ಪ್ರಕಟಗೊಳ್ಳುವುದು ಬಹು ಕಷ್ಟದ ವಿಷಯ. ದೇವರು ಮನುಷ್ಯನನ್ನು ರಕ್ಷಿಸುತ್ತಾನೆ ಮತ್ತು ಅವನೊಳಗೆ ಪವಿತ್ರಾತ್ಮನನ್ನು ತುಂಬುತ್ತಾನೆ. ಅನಂತರ ಒತ್ತುಕೊಟ್ಟು ಹೇಳುವನು ''ನಿಮ್ಮ ನಿಮ್ಮ ಜೀವಿತದಲ್ಲಿ ಅದನ್ನು ಸಾಧಿಸಿರಿ. ನಿಮ್ಮನ್ನಾವರಿಸಿರುವ, ನಿಮ್ಮ ಸುತ್ತಲಿರುವ ವಿಷಯಗಳು ನಿಮ್ಮನ್ನು ನನಗೆ ವಿಶ್ವಾಸ ದ್ರೋಹಿ ಗಳನ್ನಾಗಿ ಮಾಡುವಂಥವುಗಳಾಗಿದ್ದರೂ, ನೀವು ಮಾತ್ರ ನನಗೆ ನಂಬಿಗಸ್ತನಾಗಿರಿ. ''ನಾನು ನಿಮ್ಮನ್ನು ಸ್ನೇಹಿತರೆಂದು ಹೇಳಿದ್ದೇನೆ'', ನೀನು ಗೆಳೆಯನಿಗಾಗಿ ನಂಬಿಗಸ್ಥನಾಗಿರು. ನಿನ್ನ ದೈಹಿಕ ಬದುಕಿನಲ್ಲಿ ಆತನ ಗೌರವವು ಪಣಕ್ಕಿಡಲ್ಪಟ್ಟಿದೆ ಎಂಬುದನ್ನು ನೆನಪಿನಲ್ಲಿಡು.'' ಕ್ರಿಸ್ತನು ನಮ್ಮಿಂದ ಬಯಸುವುದು ಇದನ್ನೇ.

# ಇತರರನಯ್ನು ವಿಮರ್ಶಿಸದಿರುವ ಸ್ವಭಾವ

**''ತೀರ್ಪು ಮಾಡಬೇಡಿರಿ, ಹಾಗೆ ನಿಮಗೂ ತೀರ್ಪಾಗುವದಿಲ್ಲ''**

**- (ಮತ್ತಾಯ : 7:1)**

ತೀರ್ಪು ಮಾಡುವುದನ್ನು ಕುರಿತು ಯೇಸುಸ್ವಾಮಿಯವರು ಹೇಳುತ್ತಾರೆ, ''ಮಾಡಬೇಡ''. ಸಾಧಾರಣ ಕ್ರೈಸ್ತನು ಬಹು ಸೂಕ್ಷ್ಮವಾದ ವಿಮರ್ಶೆ ಮಾಡುವ ವ್ಯಕ್ತಿಯಾಗಿರುತ್ತಾನೆ. ವಿಮರ್ಶಿಸುವುದು ಮಾನವನಲ್ಲಿರುವ ಒಂದು ಸಹಜ ಚಟುವಟಿಕೆ; ಆದರೆ ಆತ್ಮೀಕ ವಲಯದಲ್ಲಿ ವಿಮರ್ಶೆಗಳಿಂದ ಏನೂ ಸಾಧಿಸಲಾಗದು. ವಿಮರ್ಶೆಯ ಪರಿಣಾಮವು ವಿಮರ್ಶಿಸಲ್ಪಟ್ಟ ವ್ಯಕ್ತಿಯ ಶಕ್ತಿಯನ್ನು ವಿಭಜಿಸುತ್ತದೆ. ಪವಿತ್ರಾತ್ಮನೊಬ್ಬನೇ ವಿಮರ್ಶೆಗೈಯುವ ಸೂಕ್ತ ಸ್ಥಾನದಲ್ಲಿದ್ದಾನೆ. ಆತನು ಮಾತ್ರವೇ ನಮ್ಮ ಮನನೋಯಿಸದೆ ಗಾಯಗೊಳಿಸದೆ, ವಿಭಜಿಸದೆ, ನಮ್ಮ ತಪ್ಪುಗಳನ್ನು ನಮಗೆ ವಿಮರ್ಶಾತ್ಮಕವಾಗಿ ತೋರಿಸಿ ಕೊಡುತ್ತಾನೆ. ನೀನು ವಿಮರ್ಶಾತ್ಮಕ ಮನೋಭಾವನೆಯಲ್ಲಿದ್ದಾಗ ದೇವರೊಂದಿಗೆ ಅನ್ಯೋನ್ಯತೆಯಲ್ಲಿರುವುದು ಅಸಾಧ್ಯ. ಅಂಥಾ ಸ್ಥಿತಿಯು ನಿನ್ನನ್ನು ಕಠಿಣನನ್ನಾಗಿಸುತ್ತದೆ, ನಿನ್ನನ್ನು ಛಲಗಾರನನ್ನಾಗಿಸುವುದು ಮತ್ತು ನಿನ್ನನ್ನು 'ಕ್ರೂರಿ'ಯನ್ನಾಗಿ ಮಾಡುವುದು ಮಾತ್ರವಲ್ಲದೆ, ಇತರರಿಗಿಂತಲೂ ನೀನೊಬ್ಬ ಶ್ರೇಷ್ಠ ವ್ಯಕ್ತಿ ಎನ್ನುವ ಮುಖಸ್ತುತಿಯ ಮೂಲಕ ನಿನ್ನನ್ನು ಕೃತ್ರಿಮನನ್ನಾಗಿಸುತ್ತದೆ. ಯೇಸುಕ್ರಿಸ್ತನು ತನಗೆ ಶಿಷ್ಯನಾಗಿರುವವನು ವಿಮರ್ಶಾರಹಿತ ಮನೋಭಾವನೆಯನ್ನು ಬೆಳೆಸಿಕೊಳ್ಳಬೇಕೆಂದು ಹೇಳುತ್ತಾನೆ ಹಾಗಾಗಲು ಒಮ್ಮೆಂದೊಮ್ಮೆಗೆ ಸಾಧ್ಯವಾಗುವುದಿಲ್ಲ. ನಿನ್ನನ್ನು ಶ್ರೇಷ್ಠ ವ್ಯಕ್ತಿಯ ಸ್ಥಾನದಲ್ಲಿರಿಸುವ ಎಲ್ಲಾ ವಿಷಯಗಳ ಬಗ್ಗೆ ಎಚ್ಚರ ದಿಂದಿರಬೇಕು.

ಯೇಸುಸ್ವಾಮಿಯ ಸೂಕ್ಷ್ಮವಾದ ದೃಷ್ಟಿಯಿಂದ ದೂರವಿರಲು ನಿನಗಾಗುವುದಿಲ್ಲ. ನಾನು ನಿನ್ನ ಕಣ್ಣುಗಳಲ್ಲಿ ರವೆಯನ್ನು ಕಾಣುತ್ತಿರುವೆನಾದರೆ ಅದರ ಅರ್ಥ ನನ್ನ ಕಣ್ಣಿಲ್ಲಿ ದೊಡ್ಡದೊಂದು ತೊಲೆ ಇದೆ. ನಿನ್ನಲ್ಲಿ ನಾನು ಕಾಣುವ ಪ್ರತಿಯೊಂದು ತಪ್ಪು, ನನ್ನ ಜೀವಿತದಲ್ಲಿಯೂ ನೆಲೆಸಿರುವುದನ್ನು ದೇವರು ಗುರುತಿಸುವನು. (ರೋಮಾ 2:17 ನೋಡಿರಿ) ನಾನು ತೀರ್ಪು ಮಾಡಿದ ಪ್ರತಿ ಸಮಯದಲ್ಲಿಯೂ ನನ್ನನ್ನು ತಪ್ಪಿತಸ್ಥನೆಂಬ ಖಂಡನೆಯನ್ನು ನಾನು ಮಾಡಿಕೊಂಡಿರುತ್ತೇನೆ. ಬೇರೆಯವರನ್ನು ಅಳೆಯಲು ನಿನ್ನಲ್ಲಿರುವ ಮಾನ ದಂಡವನ್ನು ನಿಷೇಧಿಸಿಬಿಡು. ಪ್ರತಿಯೊಬ್ಬ ವ್ಯಕ್ತಿಯ ಬಗ್ಗೆ ನಮಗೆ ತಿಳಿದಿರುವುದಕ್ಕಿಂತಲೂ ನಮಗೇನೂ ತಿಳಿಯದ ದೊಡ್ಡ ಸತ್ಯವೊಂದು ಆ ವ್ಯಕ್ತಿಯಲ್ಲಿ ಇರುತ್ತದೆ. ಆತ್ಮೀಕವಾಗಿ ಶುದ್ಧಿ ಮಾಡಬಲ್ಲ ಚಿಮ್ಮುವ ಕಾರಂಜಿಯಿಂದ ದೇವರು ನಮ್ಮನ್ನು ಶುದ್ಧಿ ಮಾಡುತ್ತಾನೆ. ಅನಂತರ ನಮ್ಮಲ್ಲಿ ಗರ್ವವು ಉಳಿದಿರುವ ಸಾಧ್ಯತೆ ಇಲ್ಲ. ದೇವರ ಕೃಪೆಯ ಹೊರತಾಗಿ ನನ್ನಲ್ಲಿ ಏನೆಲ್ಲಾ ಇದೆ ಎಂಬುದನ್ನು ವಿವೇಚಿಸಿ ಗುರುತಿಸಿದ ನಂತರ, ನಾನು ಜಿಗುಪ್ಸೆ ಪಡಬಹುದಾದಂಥ ಯಾವ ವ್ಯಕ್ತಿಯನ್ನು ನಾನು ಸಂಧಿಸಿಯೇ ಇಲ್ಲ. ಜಿಗುಪ್ಸೆಪಡಲು ಬೇಕಾದಷ್ಟು ನನ್ನಲ್ಲಿಯೆ ಇವೆಯಲ್ಲವೆ?

# ಯೇಸುವನ್ನು ಗುರುತಿಸುವ ಮಾರ್ಗದಲ್ಲಿ ಮುಂದೆಸಾಗು

**''ಆಗ ಪೇತ್ರನು ಯೇಸುವಿನ ಬಳಿಗೆ ಹೋಗುವದಕ್ಕೆ ದೋಣಿಯಿಂದ ಇಳಿದು ನೀರಿನ ಮೇಲೆ ನಡೆದನು. ಆದರೆ ಗಾಳಿಯನ್ನು ನೋಡಿ ಭಯಪಟ್ಟು'' - (ಮತ್ತಾಯ : 14:29-30)**

ನಿಜವಾಗಿಯೂ ಗಾಳಿಯು ಅಬ್ಬರಿಸುತ್ತಿತ್ತು, ನೀರಿನ ಅಲೆಗಳು ನಿಜವಾಗಿಯೂ ಬಹು ಎತ್ತರವಾಗಿದ್ದವು; ಪೇತ್ರನು ಮೊದಲು ಅವುಗಳನ್ನು ನೋಡಲಿಲ್ಲ. ಗಮನಿಸಲೂ ಇಲ್ಲ, ಅವನು ತನ್ನ ಸ್ವಾಮಿಯನ್ನು ಮಾತ್ರ ದೃಷ್ಟಿಸಿ ಗಮನಿಸಿದ್ದನು. ಅವನು ಯೇಸುವನ್ನು ಗಮನಿಸುತ್ತಾ ಬೇರೆ ಏನನ್ನೂ ಗಮನಿಸದೇ ದೋಣಿಯಿಂದ ಇಳಿದು ಸಮುದ್ರದ ಮೇಲೆ ನಡೆದನು. ಅನಂತರ ತನ್ನ ಸುತ್ತಲೂ ಇರುವ, ವಾಸ್ತವಿಕ ಸಂಗತಿಗಳನ್ನು, ಸನ್ನಿವೇಶಗಳನ್ನು ಅಬ್ಬರಿಸುವ ಸಮುದ್ರವನ್ನು ದೃಷ್ಟಿಸಲಾರಂಭಿಸಿದನು; ಕೂಡಲೇ ನೀರಿನಾಳಕ್ಕೆ ಮುಳುಗಿದನು. ನಮ್ಮ ಸ್ವಾಮಿಯವರು ಅವನನ್ನು ನೀರಿನ ಅಲೆಗಳ ಅಡಿದಾಳದಲ್ಲಿ ಅಥವಾ ಅಬ್ಬರಿಸುವ ತೆರೆಗಳ ಮೇಲೆ ನಡೆಯುವಂತೆ ಸಮರ್ಥನನ್ನಾಗಿ ಯಾಕೆ ಮಾಡಲಿಲ್ಲ ? ಯೇಸುಸ್ವಾಮಿಯ ಮೇಲೆ ದೃಷ್ಟಿಯಿಡಲಾಗದವನಿಗೆ ಇವೆರಡನ್ನು ಕೈಕೊಳ್ಳಲು ಆತನು ಸಾಮರ್ಥ್ಯವನ್ನು ಕೊಡಲಾರನು.

ಕೆಲವು ವಿಷಯಗಳಲ್ಲಿ ದೇವರನ್ನು ದೃಷ್ಟಿಸುತ್ತಾ ಸರಿಯಾದ ಮಾರ್ಗದಲ್ಲಿ ಹೆಜ್ಜೆ ಇಟ್ಟು ಮುಂದೆಸಾಗುತ್ತೇವೆ. ನಂತರ ಸ್ವಪರಿಶೀಲನೆಯು ನಮ್ಮೊಳಗೆ ಪ್ರವೇಶಿಸುವುದು. ಆಗ ನಾವು ಅದರ ಆಳಕ್ಕೆ ಬೀಳುತ್ತೇವೆ. ನೀನು ಪ್ರಭುವನ್ನೇ ದೃಷ್ಟಿಸುತ್ತಾ ಮುಂದೆ ಮುಂದೆ ಸಾಗುತ್ತಿರುವಾಗ, ಆತನು ನಿನ್ನ ಎಲ್ಲಾ ಪರಿಸ್ಥಿತಿಗಳನ್ನು ಹೇಗೆ ನಿಭಾಯಿಸಿ ನಿರ್ವಹಿಸುತ್ತಿರುವನೋ ಎಂಬ ವಿಷಯದೊಳಗೆ ನಿನ್ನ ತಲೆಯನ್ನು ತೂರಿಸಬೇಕಾಗಿಲ್ಲ. ನಿನ್ನನ್ನು ಆವರಿಸಿಕೊಂಡಿರುವ ಸಂಗತಿಗಳು ವಾಸ್ತವವಾದವುಗಳೇ; ಅವು ಅಲ್ಲಿಯೇ ಇವೆ. ಅವುಗಳನ್ನು ನೀನು ದೃಷ್ಟಿಸಿದ ಕೂಡಲೇ, ಚಿತ್ತಸ್ವಾಸ್ಥ್ಯವನ್ನು ಕಳೆದುಕೊಳ್ಳುವಿ, ಹಾಗೂ ಇನ್ನು ಮೇಲೆ ನೀನು ಸ್ವಾಮಿಯವರನ್ನು ಅದೇ ಪ್ರಕಾರ ದೃಷ್ಟಿಸಲಾರೆ. ಆಗ ದೈವ ಖಂಡನೆಯು ನಿನಗೆ ಎದುರಾಗುವುದು. ''ಯಾಕೆ ಸಂದೇಹಪಟ್ಟಿ'' (ಮತ್ತಾಯ 14:31) ನಿನ್ನ ಸುತ್ತಲಿರುವ ವಾಸ್ತವಿಕ ಸಂಗತಿಗಳು ಹೇಗೆ ಇರಲಿ, ನೀನು ಮಾತ್ರ ಯೇಸುಸ್ವಾಮಿಯನ್ನು ದೃಷ್ಟಿಸುತ್ತಲೇ ಇರಬೇಕು. ಆತನನ್ನು ಆತುಕೊಂಡಿರಬೇಕು.

ದೇವರು ಮಾತನಾಡಿದ ನಂತರ, ಒಂದೇ ಒಂದು ಕ್ಷಣ ಅದನ್ನು ಚರ್ಚೆ ಮಾಡಿದರೆ, ನಿನ್ನ ಪಾಲಿಗೆ ಎಲ್ಲವೂ ಮುಗಿದಂತೆಯೇ. 'ನಿಜವಾಗಿಯೂ' ದೇವರು ನನ್ನೊಡನೆ ಮಾತನಾಡಿದನೇ ಎಂದು ಹೇಳಲು ಪಕ್ರಮಿಸಬೇಡ. ಅದರ ಬದಲು ಯಾವ ಆಲೋಚನೆಯೂ ಇಲ್ಲದೆ, ಜೀವನವನ್ನು ಅಪಾಯಕ್ಕೊಡ್ಡಿದರೂ ಚಿಂತೆಯಿಲ್ಲ, ಅವೆಲ್ಲವುಗಳನ್ನು ಆತನೆಡೆಗೆ ಎಸೆದುಬಿಡು. ಆತನ ಧ್ವನಿಯು ಯಾವಾಗ ಕೇಳಿ ಬರುವುದೋ ನಿನಗೆ ತಿಳಿಯದು, ಕಲ್ಪಿಸಿಕೊಳ್ಳಬಹುದಾದ ಅತ್ಯಂತ ಮೃದುತ್ವದಲ್ಲಿ ಆತನ ಅರಿವು ಉಂಟಾದರೆ, ಯಾವ ಯೋಚನೆಯನ್ನು ಮಾಡದೆ ಎಲ್ಲವನ್ನೂ ಆತನಿಗೆ ಸಮರ್ಪಿಸಿಕೊಳ್ಳಬೇಕು. ತ್ಯಜಿಸುವಿಕೆಯಲ್ಲಿಯೇ ನಾವು ಆತನನ್ನು ಗುರುತಿಸುತ್ತೇವೆ. ಅಂಥ ಎಚ್ಚರಗೇಡಿತನದಲ್ಲಿಯೇ ಆತನ ಧ್ವನಿಯನ್ನು ಅಂದರೆ ಆತನ ಸ್ವರವನ್ನು ಹೆಚ್ಚು ಸ್ಪಷ್ಟವಾಗಿ ಕೇಳಿಸಿಕೊಳ್ಳುತ್ತೇವೆ.

# ಅನನ್ಯ ಅನುರಾಗದ ನಿಷ್ಠೆಯುಳ್ಳ ಸೇವೆ

**''ನನ್ನ ಮೇಲೆ ಪ್ರೀತಿ ಇಟ್ಟಿದ್ದೀಯೋ ....... ನನ್ನ ಕುರಿಗಳನ್ನು ಮೇಯಿಸು'' - (ಯೋಹಾನ : 21:16)**

''ನಿನ್ನ ವಿಚಾರಧಾರೆಯಂತೆ ಇತರರನ್ನು ಅಧ್ಯಾತ್ಮಿಕ ಪರಿವರ್ತನೆಗೆ ಒಳಪಡಿಸು'' ಎಂದು ಯೇಸು ಸ್ವಾಮಿಯು ಹೇಳಲಿಲ್ಲ. ''ನನ್ನ ಕುರಿಗಳನ್ನು ಮೇಯಿಸು'' ಎಂದರೆ ನನ್ನ ವಿಷಯದ ತಿಳಿವಳಿಕೆಯಲ್ಲಿ ಅವರನ್ನು ಬಲಪಡಿಸು, ಎಂದಷ್ಟೇ ಆತನು ಹೇಳಿದನು. ನಾವು ಮಾಡುತ್ತಿರುವ ಕಾರ್ಯಗಳೇ ಆತನ ಚಿತ್ತದಂತಿರುವ ಕ್ರಿಸ್ತೀಯ ಸೇವೆ ಎಂದು ಎಣಿಸಿ ಕೊಂಡಿರುತ್ತೇವೆ; ಆತನ ಸಲುವಾಗಿ ನಾವೇನು ಮಾಡುತ್ತೇವೆ ಎಂಬುದಲ್ಲ - ಆದರೆ ಆತನಿಗೋಸ್ಕರ ನಾವು ಏನಾಗಿದ್ದೇವೆ ಎಂಬುದೇ ನಿಜವಾದ ಸೇವೆ ಎಂದು ಯೇಸು ಸ್ವಾಮಿಯು ಕರೆ ನೀಡಿರುತ್ತಾನೆ. ಯೇಸುಕ್ರಿಸ್ತನಲ್ಲಿಟ್ಟಿರುವ ಭಕ್ತಿ ನಿಷ್ಠೆಯೇ ಆತನ ಶಿಷ್ಯತ್ವಕ್ಕೆ ಆಧಾರ ಹೊರತು, ಒಂದು ಸೂತ್ರಕ್ಕೆ, ಒಂದು ನಂಬಿಕೆಗೆ, ಭದ್ರವಾಗಿ ಅಂಟಿಕೊಂಡಿರುವುದರಿಂದ ಅಲ್ಲ. ''ಯಾವನಾದರೂ ನನ್ನ ಬಳಿಗೆ ಬಂದು ... ಹಾಗೆ ಮಾಡದಿದ್ದರೆ ಅವನು ನನ್ನ ಶಿಷ್ಯನಾಗಿರಲಾರನು''. (ಲೂಕ 14:26) ಇಲ್ಲಿ ಯಾವ ವಾದವಿವಾದವಿಲ್ಲ, ಅಥವಾ ಬಲಾತ್ಕಾರವೂ ಇಲ್ಲ. ಆದರೆ ಯಥಾರ್ಥವಾಗಿ - 'ನೀನು ನನ್ನ ಶಿಷ್ಯನಾಗ ಬೇಕೆಂದಿದ್ದರೆ, ನೀನು ಕೇವಲ ನನಗೊಬ್ಬನಿಗೆ ಮಾತ್ರ ನಿನ್ನ ಸಕಲ ನಿಷ್ಠೆಯಿಂದ ಇರಬೇಕು' ಅಷ್ಟೇ. ದೇವರ ಆತ್ಮನಿಂದ ಸ್ಪರ್ಶಿಸಲ್ಪಟ್ಟ ಮನುಷ್ಯನು ಕೂಡಲೇ ಹೇಳುತ್ತಾನೆ. ''ಯೇಸುಕ್ರಿಸ್ತನು ಯಾರು? ಎಂಬುದನ್ನು ಈಗ ಕಾಣುತ್ತಿದ್ದೇನೆ'' ಅದೇ ಅವನ ನಿಷ್ಠೆಯ ಮೂಲ.

ಈಗಿನ ದಿನ ಮಾನಗಳಲ್ಲಿ , ನಾವು ವ್ಯಕ್ತಿಗತ ಶ್ರದ್ಧೆಗಳಿಗೆ ಪ್ರತಿಯಾಗಿ ಧಾರ್ಮಿಕ ಶ್ರದ್ಧೆಯ ಸಿದ್ಧಾಂತವನ್ನು ಇರಿಸಿದ್ದೇವೆ. ಆದ ಕಾರಣ ನಮ್ಮಲ್ಲಿ ಅನೇಕರು ಯೇಸುಕ್ರಿಸ್ತನ ಕಾರ್ಯಕಾರಣ ಫಲಗಳಲ್ಲಿ ನಿಷ್ಠೆಯಿಂದಿದ್ದಾರೆ ಮತ್ತು ಕೆಲವೇ ಕೆಲವರು ಯೇಸುಕ್ರಿಸ್ತನಲ್ಲಿ ವ್ಯಕ್ತಿಗತ ನಿಷ್ಠೆಯುಳ್ಳವರಾಗಿದ್ದಾರೆ. ಯೇಸು ಸ್ವಾಮಿಗೆ ನಿಷ್ಠೆಯಿಂದಿರಲು ಜನರು ಬಯಸುತ್ತಿಲ್ಲ. ಆದರೆ ಆತನು ಪ್ರಾರಂಭಿಸಿದ ಕಾರಣಕ್ಕೆ ನಿಷ್ಠೆಯುಳ್ಳವ ರಾಗಿರಲು ಜನರು ಇಚ್ಛಿಸುತ್ತಿದ್ದಾರೆ. ಯೇಸುಕ್ರಿಸ್ತನನ್ನು ಕೇವಲ ತಮ್ಮ 'ಕಾಮ್ರೇಡ್' ಆಗಿ ಮಾತ್ರವೇ ಹೊರತು, ಬೇರೆ ಯಾವ ರೀತಿಯಲ್ಲಿಯೂ ಆತನನ್ನು ಪರಿಗಣಿಸಲಿಚ್ಛಿಸದ, ಇಂದಿನ ಸುಶಿಕ್ಷಿತ ಜನಾಂಗ ದವರಿಗೆ ಈ ಯೇಸುಕ್ರಿಸ್ತನು ಸಕಲ ವಿಧದ ಕಿರಿಕಿರಿಯನ್ನುಂಟು ಮಾಡುವ ಮೂಲವಾಗಿದ್ದಾನೆ. ಯೇಸು ಸ್ವಾಮಿಯ ವಿಧೇಯತೆಯು, ಮೊದಲು ತನ್ನತಂದೆಯ ಚಿತ್ತವನ್ನು ನೆರವೇರಿಸುವುದಾಗಿತ್ತೇ ಹೊರತು ಮನುಷ್ಯರ ಅಗತ್ಯಗಳನ್ನು ಪೂರೈಸುವದಕ್ಕಲ್ಲ - ಮಾನವ ಜನಾಂಗದ ರಕ್ಷಣೆ, ಅದು ಆತನು ತನ್ನ ತಂದೆಗೆ ವಿಧೇಯನಾಗಿದ್ದುದರ ಸಹಜ ಪ್ರತಿಫಲ. ನಾನು ಮಾನವರ ಕಾರ್ಯಕಾರಣಗಳಿಗೆ ಮಾತ್ರ ನಿಷ್ಠೆಯುಳ್ಳವ ನಾದರೆ, ಬೇಗನೇ ಬಳಲಿ ನಿಸ್ಸಾರವಾಗಿ, ಈವರೆಗೂ ಆತನಲ್ಲಿಟ್ಟಿದ ನನ್ನ ನಿಷ್ಠಾ ಪ್ರೀತಿಯು ತಡವರಿಸುವ ಹಂತಕ್ಕೆ ಬಂದು ಬಿಡುತ್ತೇನೆ. ನಾನು ಯೇಸುಕ್ರಿಸ್ತನನ್ನು ವೈಯಕ್ತಿಕವಾಗಿಯೂ, ಅನನ್ಯ ಅನುರಾಗದಿಂದಲೂ ಪ್ರೀತಿಸಿದರೆ, ಜನರು ನನ್ನನ್ನು 'ಕಾಲ್ಹೊರಸು' ಅಂದರೆ 'ಡೊರ್ ಮ್ಯಾಟ'ನ್ನಾಗಿ ಉಪಯೋಗಿಸಿಕೊಂಡರೂ ಸಹಾ ಮಾನವರ ಸೇವೆಯನ್ನು ನಾನು ಸಂತೋಷದಿಂದ ಮಾಡಬಲ್ಲೆನು. ಆತನ ಶಿಷ್ಯನ ಜೀವಿತದ ರಹಸ್ಯವೆಂದರೆ - ಅವನು ಯೇಸುಕ್ರಿಸ್ತನಲ್ಲಿಟ್ಟಿರುವ ನಿಷ್ಠಾ ಭಕ್ತಿ ಮತ್ತು ಆ ಜೀವಿತದ ಗುಣಲಕ್ಷಣವೆಂದರೆ - ಸೇವೆ ಮಾಡುತ್ತಿದ್ದರೂ, ಯಾರ ಗಮನಕ್ಕೂ ಬಾರದಿರುವ ಅನಾಮಿಕತೆ ; ಅದು ಗೋಧಿಯ ಕಾಳಿನಂತೆ ನೆಲಕ್ಕೆ ಬಿದ್ದು ಸತ್ತು ಹೋಗುವಂಥಾದ್ದು; ಸಕಾಲದಲ್ಲಿ ಮೊಳಕೆಯೊಡೆದು ಮೇಲಕ್ಕೇಳುತ್ತದೆ, ಇಡೀ ಪ್ರದೇಶವನ್ನೇ ಮಾರ್ಪಡಿಸಿ ಸೌಂದರ್ಯಗೊಳಿಸುತ್ತದೆ (ಯೋಹಾನ 12:24)

# ಇನ್ನಾದರೂ 'ಬಳಿಕ'ದ ಬಳಿಗೆ ಬಂದಿರುವೆಯೋ ?

**''ಯೋಬನು ತನ್ನ ಸ್ನೇಹಿತರಿಗೋಸ್ಕರ ಪ್ರಾರ್ಥಿಸಿದ ಬಳಿಕ, ಯೆಹೋವನು ಅವನ ದುಃಸ್ಥಿತಿಯನ್ನು ಹೋಗಲಾಡಿಸಿದನು'' - (ಯೋಬ : 42:10)**

ಶೋಕ ಪೂರಿತವಾದ, ಸ್ವಾರ್ಥಪರತೆಯಿಂದ ಕೂಡಿದ, ರೋಗಗ್ರಸ್ಥ ಮನೋಭಾವದ ಪ್ರಾರ್ಥನೆಯನ್ನು ಮತ್ತು ದೇವರ ದೃಷ್ಟಿಯಲ್ಲಿ ಯೋಗ್ಯನಾಗಿ ಕಾಣಿಸಿ ಕೊಳ್ಳಬೇಕೆಂಬ ಸ್ವಹಿತದಾಶೆಯ ದೃಢಪ್ರಯತ್ನಗಳನ್ನು ನಾವು ಹೊಸ ಒಡಂಬಡಿಕೆಯಲ್ಲಿ ಕಾಣುವುದಿಲ್ಲ. ದೇವರಿಗೆ ಯೋಗ್ಯನಾಗಿ ಕಾಣಿಸಿಕೊಳ್ಳುವ ನನ್ನ ಪ್ರಯತ್ನವೇ ಯೇಸುಕ್ರಿಸ್ತನು ಶಿಲುಬೆಯ ಮೇಲೆ ಮಾಡಿದ ಪ್ರಾಯಶ್ಚಿತ್ತ ಯಜ್ಞದ ವಿರುದ್ಧ, ಬಂಡೇಳುವ ಸೂಚನೆಯಾಗಿದೆ. ''ಪ್ರಭುವೇ, ನನ್ನ ಪ್ರಾರ್ಥನೆಗೆ ನೀನು ಉತ್ತರ ಕೊಟ್ಟರೆ ನನ್ನ ಹೃದಯವನ್ನು ನಾನು ಶುದ್ಧೀಕರಿಸಿಕೊಳ್ಳುವೆನು; ನೀನು ಸಹಾಯ ಮಾಡುವಿಯಾದರೆ ನಿನ್ನೆದುರಿಗೆ ಸನ್ಮಾರ್ಗದಲ್ಲಿ ನಾನು ನಡೆಯುವೆನು''. ದೇವರ ದೃಷ್ಟಿಗೆ ಯೋಗ್ಯನಾಗುವಂತೆ ನನ್ನನ್ನು ಸರಿಪಡಿಸಿ ಕೊಳ್ಳಲಾಗದು, ನನ್ನ ಜೀವನವನ್ನು ಪರಿಪೂರ್ಣತೆಯ ಬದುಕನ್ನಾಗಿ ಮಾಡಲೂ ನನಗಾಗದು; ಆದರೆ ಯೇಸುಕ್ರಿಸ್ತನು ಶಿಲುಬೆಯ ಮೇಲೆ ಮಾಡಿದ ಪ್ರಾಯಶ್ಚಿತ್ತ ಯಜ್ಞವನ್ನು, ನನಗೆ ಕೊಡಮಾಡಿದ ಅಮೂಲ್ಯ ವರವೆಂದು ನಾನು ಒಪ್ಪಿ ಅದನ್ನು ಸ್ವೀಕರಿಸಿದಾಗಲೇ, ದೇವರಿಗೆ ನಾನು ಯೋಗ್ಯನಾಗಿ, ಯಥಾರ್ಥತೆ ಯಿಂದಿರಲು, ಸಾಧ್ಯವಾಗುತ್ತದೆ. ಅದನ್ನು ಸ್ವೀಕರಿಸುವಷ್ಟು ದೀನನು ನಾನಾಗಿದ್ದೇನೆಯೋ? ಹಾಗಾಗ ಬೇಕಾದರೆ ನನ್ನ ಮೇಲೆ ನನಗಿರುವ ನ್ಯಾಯವಾದ ನನ್ನ ಹಕ್ಕುಗಳನ್ನು ತ್ಯಜಿಸಿ ನನ್ನ ಸ್ವಪ್ರಯತ್ನಗಳನ್ನೆಲ್ಲಾ ಕೊನೆಗಾಣಿಸಿ ಪೂರ್ಣ ಏಕಾಂಗಿಯಾಗಿ, ಆತನ ಕೈಗಳಿಗೆ ಒಪ್ಪಿಸಿ ಕೊಡಬೇಕು. ನಂತರ ಯಾಜಕನಂತೆ ಯಾಜಕ ಪರಾರ್ಥ ಪ್ರಾರ್ಥನೆಗಳಲ್ಲಿ ನನ್ನ ಜೀವಿತವನ್ನು ಸುರಿದುಬಿಡಲಾರಂಭಿಸಬೇಕು. ಪ್ರಾಯಶ್ಚಿತ್ತ ಯಜ್ಞದಲ್ಲಿ ಅಪನಂಬಿಕೆಯಿರುವುದರಿಂದ ಬಹಳ ವೈವಿಧ್ಯಮಯ ಪ್ರಾರ್ಥನೆಗಳು ಹುಟ್ಟುತ್ತವೆ. ಯೇಸು ಸ್ವಾಮಿಯು ಈಗ ತಾನೇ ನಮ್ಮನ್ನು ರಕ್ಷಿಸಲು ಆರಂಭ ಮಾಡುತ್ತಿಲ್ಲ , ಆಗಲೇ ಆತನು ನಮ್ಮನ್ನು ರಕ್ಷಿಸಿಬಿಟ್ಟಿರುವನು. ಅದು ಮುಗಿದು ಹೋದ ಸಂಗತಿ. 'ಈಗ ಅದನ್ನು ಮಾಡು' ಎಂದು ಬೇಡಿಕೊಳ್ಳುವುದು ಆತನನ್ನು ಅವಮಾನಗೊಳಿಸಿದಂತೆಯೇ.

ಯೇಸುಸ್ವಾಮಿಯು ಮಾಡಿದ ವಾಗ್ದಾನದಂತೆ 'ನೂರುಪಟ್ಟು' ಹೆಚ್ಚಿಗೆ ನೀನು ಪಡೆದಿರ ದಿದ್ದರೆ, ದೇವರ ವಾಕ್ಯದ ಗೂಡಾರ್ಥವು ನಿನಗಿನ್ನೂ ತಿಳಿಯದಿದ್ದರೆ, ಆಗ ನಿನ್ನ ಗೆಳೆಯರಿಗಾಗಿ ಪ್ರಾರ್ಥಿಸಲು ಪ್ರಾರಂಭಿಸಬೇಕು. ಅಂತರಂಗ ಜೀವಿತದ ಪ್ರಾರ್ಥನಾ ಸೇವೆಯಲ್ಲಿ ಪ್ರವೇಶಿಸಬೇಕು. ''ಯೋಬನು ತನ್ನ ಸ್ನೇಹಿತರಿಗೋಸ್ಕರ ಪ್ರಾರ್ಥಿಸಿದ ಬಳಿಕ, ಯಹೋವನು ಅವನ ದುಃಸ್ಥಿತಿಯನ್ನು ಹೋಗಲಾಡಿಸಿದನು''. ರಕ್ಷಣೆ ಹೊಂದಿದ, ಆತ್ಮಭರಿತ, ನಿನ್ನ ಜೀವಿತದ ಮುಖ್ಯ ಕಾರ್ಯವಾದ ಪರಾರ್ಥ ಪ್ರಾರ್ಥನೆಗಳಲ್ಲಿ ನೀನು ತೊಡಗಬೇಕು. ಎಂಥಾ ಸನ್ನಿವೇಶಗಳಲ್ಲಿಯಾದರೂ ದೇವರು ನಿನ್ನನ್ನು ಇರಿಸಿರಲಿ, ಕೂಡಲೇ ಪ್ರಾರ್ಥಿಸು, ನಿನ್ನ ಜೀವಿತದಲ್ಲಿ ನೆರವೇರಿದಂತೆ, ಇತರರ ಜೀವಿತದಲ್ಲಿಯೂ ಆತನು ಮಾಡಿದ ಪ್ರಾಯಶ್ಚಿತ್ತವು ಸಾಕ್ಷಾತ್ಕಾರವಾಗಲಿ ಎಂದು ಪ್ರಾರ್ಥಿಸು. ನಿನ್ನ ಗೆಳೆಯರಿಗಾಗಿ ಈಗಲೇ ಪ್ರಾರ್ಥಿಸು, ಸದ್ಯದಲ್ಲಿ ಯಾರು ನಿನ್ನ ಸಂಪರ್ಕದಲ್ಲಿರುವರೋ ಅವರಿಗಾಗಿಯೂ ಈ ಕೂಡಲೇ ಪ್ರಾರ್ಥಿಸಬೇಕು.

# ಅಂತರಂಗ ಜೀವಿತದ ಸೇವೆ

**‘‘ನೀವಾದರೋ ....... ರಾಜವಂಶಸ್ಥರಾದ ಯಾಜಕರು’’ - (1 ಪೇತ್ರ 2:9)**

ಯಾವ ಹಕ್ಕುಗಳಿಂದ, ಎಂಥಾ ಅಧಿಕಾರದಿಂದ ನಾವು ರಾಜವಂಶಸ್ಥರಾದ ಯಾಜಕ ರಾಗಿದ್ದೇವೆ? - ದೋಷ ಪರಿಹಾರ ಯಜ್ಞದ ಹಕ್ಕಿನಿಂದಲೇ ಆಗಿದ್ದೇವೆ. ಇಂಥಾ ಹಕ್ಕು, ಇಂಥಾ ಅಧಿಕಾರ ಹೊಂದಿರುವ ನಾವು ಉದ್ದೇಶಪೂರ್ವಕವಾಗಿ ನಮ್ಮನ್ನೇ ಉಪೇಕ್ಷಿಸಿಕೊಂಡು ವೈಯಕ್ತಿಕವಾಗಿ ಯಾಜಕನ ಪ್ರಾರ್ಥನೆಯನ್ನು ಮಾಡಲು ಹಾರಿ ಮುನ್ನುಗ್ಗುತ್ತಿರುವೆವೋ? ನಾವು ಏನಾಗಿರಬೇಕಾಗಿದ್ದಿತೋ ಅದೇ ಆಗಿರುವೆವೋ, ಇಲ್ಲವೋ? ಎಂಬುದನ್ನರಿಯಲು ನಮ್ಮ ಅಂತರಂಗವನ್ನು ನಿರಂತರವಾಗಿ ಅಗೆದು ಅನ್ವೇಷಣೆ ಮಾಡಿದರೇ ನಮ್ಮಲ್ಲಿ ಸ್ವಯಂ ಹಿತಾಸಕ್ತಿ ಮತ್ತು ರೋಗಗ್ರಸ್ತ ಕ್ರೈಸ್ತತ್ವವು ಉತ್ಪಾದನೆ ಯಾಗುವುದೇ ಹೊರತು, ಆರೋಗ್ಯವಂತ, ಸದೃಢವಾದ ಯಥಾರ್ಥಜೀವಿತದ ದೇವರ ಮಗು ನಾನಾಗುವುದಿಲ್ಲ. ದೇವರೊಂದಿಗೆ ಯೋಗ್ಯ ಸಂಬಂಧವನ್ನು ಹೊಂದಿರುತ್ತಾ ದಂತಪಂಕ್ತಿಗೆ ಜೋತು ಬಿದ್ದು (ಮೇಲೆಯೂ ಇಲ್ಲ ಕೆಳಗೂ ಇಲ್ಲದ ಬಲಹೀನ ಹಿಡಿತ) ಹೇಳುತ್ತೇವೆ. ‘‘ಆಹಾ! ಎಂಥಹ ಅದ್ಭುತ ವಿಜಯವನ್ನು ಸಾಧಿಸಿರುವೆನು!’’ ಈ ಹೇಳಿಕೆಯಲ್ಲಿ, ಪಾಪವಿಮೋಚನೆಯ ಅದ್ಭುತ ಕಾರ್ಯವನ್ನು ಸೂಚಿಸುವಂತ ಹುದೇನೂ ಇಲ್ಲ. ಪಾಪವಿಮೋಚನಾ ಕಾರ್ಯವು ಸಂಪೂರ್ಣವಾಗಿ ಮುಗಿದಿದೆ ಎನ್ನುವ ದೃಢ ನಂಬಿಕೆಯಿಂದ ಯಾವ ಯೋಚನೆಯನ್ನು ಮಾಡದೆ, ದುಡುಕುವವನಂತೆ ಪ್ರಾರ್ಥನಾ ಕಾರ್ಯಕ್ಕೆ ಕೈ ಹಾಕು; ಅಲ್ಲಿ ನಿನ್ನ ಸ್ವಂತ ವಿಷಯಗಳ ಬಗ್ಗೆ ಚಿಂತೆಯನ್ನಾಗಲೀ, ಕಾಳಜಿಯನ್ನಾಗಲೀ ಮಾಡಬೇಡ. ಆದರೆ ಯೇಸುಕ್ರಿಸ್ತನು ಹೇಳಿರುವುದನ್ನು ಮಾಡಲು ಮುಂದಾಗು - ‘‘ಮಧ್ಯರಾತ್ರಿಯಲ್ಲಿ ನಿನ್ನ ಬಳಿಗೆ ಬರುವ ಗೆಳೆಯನಿಗಾಗಿ ಪ್ರಾರ್ಥಿಸು, ದೇವರ ಭಕ್ತರಿಗಾಗಿ, ಮಾನವರೆಲ್ಲರಿಗಾಗಿ ಪ್ರಾರ್ಥಿಸು’’ ಯೇಸುಕ್ರಿಸ್ತನಲ್ಲಿ ಮಾತ್ರ ನಾನು ಪರಿಪೂರ್ಣನಾಗಿರುವೆನು ಎಂಬುವ ಗ್ರಹಿಕೆಯಲ್ಲಿ ಪ್ರಾರ್ಥಿಸಬೇಕು. ಆದರೆ ‘‘ಓ ಪ್ರಭುವೇ, ನನ್ನ ಪೂರ್ಣ ಶಕ್ತಿಯಿಂದ ಇದನ್ನು ಮಾಡಿರುವೆನು. ದಯಮಾಡಿ ನನ್ನ ಪ್ರಾರ್ಥನೆಯನ್ನು ಆಲಿಸು’’ ಎಂಬುದಾಗಿ ಪ್ರಾರ್ಥಿಸುವುದಲ್ಲ.

ಯಾವಾಗಲೂ ಸ್ವಚಿಂತನೆ ಮಾಡುವ ಅನಾರೋಗ್ಯಕರ ಅಭ್ಯಾಸದಿಂದ ನಮ್ಮನ್ನು ಮುಕ್ತ ಗೊಳಿಸಲು ದೇವರಿಗೆ ಇನ್ನೆಷ್ಟು ಸಮಯಬೇಕೋ, ಏನೋ? ನಾವು ಎಂಥವರು ಎಂದು ದೇವರು ಏನು ಹೇಳಿದರೂ, ಅದೇನೂ ಆಶ್ಚರ್ಯವೆನಿಸದ ಮಟ್ಟಿಗೆ ನಮ್ಮ ಬಗ್ಗೆ ನಾವು ಸಾಯುವಷ್ಟು ರೋಸಿ ಕೊಳ್ಳಬೇಕು. ನಮ್ಮ ಅಂತರ್ಯದಲ್ಲಿರುವ ಅಲ್ಪತನದ ಆಳಕ್ಕೆ ನಾವು ತಲುಪಲಾರೆವು. ನಮಗೆ ಸರಿ ತೋರಿಬರುವ ಸ್ಥಾನ ಒಂದೇ ಒಂದು, ಅದು ಯೇಸುಸ್ವಾಮಿಯಲ್ಲಿ ಮಾತ್ರ. ನಾವು ಅಲ್ಲಿಗೆ ಸೇರಿದಾಗ ನಮ್ಮ ಯೋಗ್ಯತೆ ಎಷ್ಟಿದೆಯೋ ಅಷ್ಟನ್ನೂ ಅಂತರಂಗ ಜೀವಿತದ ಸೇವೆಗೆ ಸುರಿದುಬಿಡಬೇಕು.

# ಬದಲಾಗದ ನ್ಯಾಯತೀರ್ಪಿನ ವಿಧಿ

**''ನೀವು ಮಾಡುವ ತೀರ್ಪಿಗೆ ಸರಿಯಾಗಿ ನಿಮಗೂ ತೀರ್ಪಾಗುವದು. ನೀವು ಅಳೆಯುವ ಅಳತೆಯಿಂದಲೇ ನಿಮಗೂ ಅಳೆಯುವರು'' - (ಮತ್ತಾಯ - 7:2)**

ಈ ಹೇಳಿಕೆಯು ಗೊತ್ತುಗುರಿಯಿಲ್ಲದ ಒಂದು ಊಹೆಯಲ್ಲ. ಅದು ದೇವರ ನಿರಂತರ ನಿಯಮ. ನೀನು ಯಾವ ತೀರ್ಪನ್ನಾದರೂ ಕೊಡು; ಸರಿಯಾಗಿ ಅದೇ ತೀರ್ಪನ್ನು ಪ್ರತಿಯಾಗಿ ನಿನಗೆ ಕೊಡಲಾಗುತ್ತದೆ. ಪ್ರತಿಕಾರ ಮತ್ತು ಮುಯ್ಯಿಗೆ ಮುಯ್ಯಿತೀರಿಸುವಿಕೆ ಯಲ್ಲಿ ವ್ಯತ್ಯಾಸವಿದೆ. ಮುಯ್ಯಿಗೆ ಮುಯ್ಯಿಕೊಡುವುದೇ ಲೌಕಿಕ ಜೀವಿತದ ಸೂತ್ರವೆಂದು ಯೇಸುಸ್ವಾಮಿಯು ಹೇಳುವನು. ''ನೀನು ಅಳೆಯುವ ಅಳತೆಯಿಂದಲೇ ನಿಮಗೂ ಅಳೆಯುವರು'' ಇತರರಲ್ಲಿ ತಪ್ಪು ದೋಷಗಳನ್ನು ಹುಡುಕು ವುದರಲ್ಲಿ ನೀನು ಚತುರನಾಗಿದ್ದರೆ, ಅದಕ್ಕೆ ತಕ್ಕ ಹಾಗೆ ನಿನ್ನನ್ನೂ ಇತರರು ಅಳೆಯುವರೆಂಬುದನ್ನು ನೆನಪಿನಲ್ಲಿಟ್ಟುಕೋ. ಜೀವಿತವು ನೀನುಕೊಟ್ಟ ನಾಣ್ಯವನ್ನೇ ನಿನಗೆ ಹಿಂದಿರುಗಿಸುತ್ತದೆ. ''ಶಾಸನವು ದೈವಸನ್ನಿಯಿಂದ ಭೂ ತಳದ ವರೆಗೆ ಕಾರ್ಯರೂಪದಲ್ಲಿದೆ'' (ಕೀರ್ತ 18:25-26). ರೋಮಾ 2ನೇ ಅಧ್ಯಾಯದಲ್ಲಿ ಅದು ಇನ್ನೂ ಸ್ಪಷ್ಟವಾಗಿದೆ. ಮತ್ತೊಬ್ಬರಲ್ಲಿ ದೋಷವೆಣಿಸಿ ಟೀಕಿಸುವ ವಿಷಯದಲ್ಲಿ ನಾವೂ ಅದೇ ದೋಷಕ್ಕೆ ಒಳಗಾಗಿರುತ್ತೇವೆ. ದೇವರು, ಘಟಿಸಿದ ಕೃತ್ಯವನ್ನು ದಿಟ್ಟಿಸುವನು ಮಾತ್ರ ವಲ್ಲದೆ ಅದನ್ನು ಕಾರ್ಯಗತಗೊಳಿಸಬಲ್ಲ ಸಾಧ್ಯತೆಗಳನ್ನೂ ದೃಷ್ಟಿಸುತ್ತಾನೆ. ಮೊಟ್ಟ ಮೊದಲನೇದಾಗಿ ಸತ್ಯವೇದದ ಹೇಳಿಕೆಗಳನ್ನು ನಾವು ನಂಬುವುದಿಲ್ಲ; ಹೇಗೆಂದರೆ ''ಮತ್ತೊಬ್ಬರಲ್ಲಿ ದೋಷವೆಣಿಸುವು ದರಿಂದ ನಿನ್ನನ್ನು ನೀನೇ ದೋಷಿ ಎಂದು ತೀರ್ಪು ಮಾಡಿಕೊಂಡ ಹಾಗಾಯಿತು.'' - ಇದನ್ನು ನಾವು ನಂಬುತ್ತೇವೆಯೋ? ಇತರರಲ್ಲಿ ಕಪಟಾಚಾರ, ಕುಯುಕ್ತಿ ಮತ್ತು ಅಸತ್ಯಗಳನ್ನು ನಾವು ಕಾಣಲು ಕಾರಣವೇನೆಂದರೆ ಅವೆಲ್ಲವೂ ನಮ್ಮ ಹೃದಯದಲ್ಲಿ ತುಂಬಿರುತ್ತವೆ.

ದೇವ ಭಕ್ತನಲ್ಲಿರುವ ಹಿರಿದಾದ ಗುಣವೆಂದರೆ ಅದು ಅವನಲ್ಲಿರುವ ವಿನಮ್ರತೆ - ಹೌದು, ದೇವರ ಕೃಪೆಯು ನನಗಿಲ್ಲದೆ ಹೋಗಿದ್ದರೆ, ಅವುಗಳಷ್ಟೇ ಅಲ್ಲದೆ ಬೇರೆ ದುಷ್ಟತನಗಳೂ, ಕೆಟ್ಟವುಗಳೂ ನನ್ನಲ್ಲಿ ಮೈದೋರುತ್ತಿದ್ದವು! ಆದ್ದರಿಂದ ಇತರರಿಗೆ ತೀರ್ಪು ಮಾಡುವ ಹಕ್ಕು ನನಗೆ ಇಲ್ಲ. ''ತೀರ್ಪು ಮಾಡಬೇಡಿರಿ ಹಾಗೆಯೇ ನಿಮಗೂ ತೀರ್ಪಾಗುವುದಿಲ್ಲ'' (ಮತ್ತಾ 7:1) ಎಂದು ಸ್ವಾಮಿಯು ಹೇಳಿದ್ದಾನೆ, ಒಂದು ವೇಳೆ ನೀವು ತೀರ್ಪು ಮಾಡಿದ್ದೆಯಾದರೆ, ಸರಿಯಾಗಿ ಹಾಗೆಯೇ ನಿಮಗೂ ಪ್ರತಿ ತೀರ್ಪಾಗುತ್ತದೆ. ದೇವರ ಸನ್ನಿಧಿಯಲ್ಲಿ ನಿಂತುಕೊಂಡು ''ನನ್ನ ದೇವರೇ ನನ್ನ ಜೊತೆ ಮಾನವರಿಗೆ ನಾನು ಹೇಗೆ ತೀರ್ಪುಮಾಡಿದ್ದೇನೆಯೋ ಹಾಗೆಯೇ ನನಗೂ ನೀನು ತೀರ್ಪು ಮಾಡಬೇಕು'' ಎಂದು ಹೇಳುವ ಧೈರ್ಯ ನಮ್ಮಲ್ಲಿ ಯಾರಿಗೆ ಇದೆ? ನಮ್ಮ ಜೊತೆ ಮಾನವರನ್ನು ಪಾಪಿಗಳು ಎಂದು ತೀರ್ಪು ಇತ್ತಿದ್ದೇವೆ, ಆದರೆ ದೇವರು ಸಹ ಹಾಗೆಯೇ ತೀರ್ಪು ಮಾಡಿದ್ದರೆ, ಇಷ್ಟರೊಳಗೆ ನಾವೆಲ್ಲರೂ ನರಕದಲ್ಲಿ ಇರುತ್ತಿದ್ದೆವು. ಯೇಸುಕ್ರಿಸ್ತನು ಶಿಲುಬೆಯ ಮೇಲೆ ಮಾಡಿದ ಅತ್ಯಮೋಘವಾದ ದೋಷ ಪರಿಹಾರಕ ಪ್ರಾಯಶ್ಚಿತ್ತ ಯಜ್ಞದ ಮುಖಾಂತರವೇ ದೇವರು ನಮಗೆ ತೀರ್ಪು ಮಾಡುತ್ತಾನೆ.

# ವ್ಯಾಧಿಪೀಡನೆಯ ತಿಳುವಳಿಕೆ

**''ಸಂಕಷ್ಟಕ್ಕೊಳಗಾದವನು ವ್ಯಾಧಿಪೀಡಿತನು'' – (ಯೆಶಾಯ 53:3)**

ನಮ್ಮ ಸ್ವಾಮಿಯವರು ಒಳಪಟ್ಟಂಥಾ ವ್ಯಾದಿಪೀಡನೆಯ ಸಂಪರ್ಕದೊಳಗೆ ನಾವು ಎಂದೂ ಸೇರಿರುವುದಿಲ್ಲ. ಪೀಡನೆಗಳನ್ನು ನಾವು ಸಹಿಸುತ್ತೇವೆ, ಅವುಗಳನ್ನು ನಿಭಾಯಿಸುತ್ತೇವೆ ಆದರೆ ಅವುಗಳ ಆಪ್ತತೆಯಲ್ಲಿ ನಾವು ಸೇರುವುದಿಲ್ಲ. ಜೀವನದ ಪ್ರಾರಂಭದಲ್ಲಿ ಪಾಪದ ವಾಸ್ತವದೊಡನೆ ಸಂಧಿ ಮಾಡಿಕೊಳ್ಳುವುದಿಲ್ಲ, ಆದರೆ ಬೌದ್ಧಿಕ ವಿವೇಚನೆ ಯಡಿಯಲ್ಲಿ ನಮ್ಮ ಜೀವಿತವನ್ನು ವಿಚಾರಿಸಿ, ಮನುಷ್ಯರೇ ತಮ್ಮ ಸಹಜ ಸ್ವಭಾವಗಳನ್ನು ನಿಯಂತ್ರಿಸಿ, ತಮ್ಮನ್ನು ತಾವು ತಿದ್ದಿ ತರಬೇತಿ ಮಾಡಿಕೊಳ್ಳುವುದರ ಮೂಲಕ ಕ್ರಮೇಣವಾಗಿ ದೈವ ಜೀವಿತವು ವಿಕಸಿಸುವಂಥಾ ಜೀವನ ಕ್ರಮವನ್ನು ನಾವು ಕೈಕೊಳ್ಳಬಹುದೆಂದು ಹೇಳುತ್ತೇವೆ. ಹಾಗೆಯೇ ನಾವು ಮುಂದುವರಿದಾಗ ನಾವು ಪರಿಗಣಿಸದೇ ಇರುವ ಬೇರೆ ಯಾವುದೋ ಒಂದರ ಉಪಸ್ಥಿತಿಯನ್ನು ಅಲ್ಲಿ ನಾವು ಕಾಣುತ್ತೇವೆ. – ಅದೇ ಪಾಪ; ಅದು ನಮ್ಮ ಬೌದ್ಧಿಕ ವಿವೇಚನೆ, ಗಣನೆಗಳನ್ನೆಲ್ಲಾ ತಲೆಕೆಳಗೆ ಮಾಡಿಬಿಡುತ್ತದೆ. ಪಾಪವು ನಾವು ಮುಂಗಾಣಲಾಗದ ತರ್ಕಿಸಲಾಗದ, ಹತೋಟಿಹೀನ, ವಿಚಾರ ಶೂನ್ಯವಾದ ನಮ್ಮ ಬೌದ್ಧಿಕ ವಿವೇಚನೆಯನ್ನು ತನ್ನ ತಳಹದಿಯನ್ನಾಗಿಸಿ ಕೊಂಡಿರುತ್ತದೆ.

ಪಾಪವು ನಮ್ಮ ಜೀವಿತದ ವಾಸ್ತವಿಕತೆ. ಅದೊಂದು ಸತ್ಯ, ಅದೊಂದು ನ್ಯೂನ್ಯತೆ ಅಲ್ಲವೆಂಬುದನ್ನು ನಾವು ಗುರುತಿಸಬೇಕು; ಅಪರಾಧವನ್ನೆಸಗುತ್ತಾ ದೇವರ ವಿರುದ್ಧವೆದ್ದ ದಂಗೆಯೇ ಈ ಪಾಪ. ನಮ್ಮ ಜೀವಿತದಲ್ಲಿ ದೇವರಾಗಲೀ ಅಥವಾ ಪಾಪವಾಗಲೀ ಸಾಯಲೇಬೇಕು. ಹೊಸ ಒಡಂಬಡಿಕೆಯು ನಮ್ಮನ್ನು ಕೆಳಕ್ಕೆಳೆದು ಇದೊಂದೇ ವಿವಾದಾಂಶದ ಘಟ್ಟಕ್ಕೆ ತಂದು ನಿಲ್ಲಿಸುತ್ತದೆ. ಪಾಪವು ನಮ್ಮನ್ನು ಆಳುವದಾದರೆ, ನಮ್ಮಲ್ಲಿ ದೈವೀ ಜೀವಿತವು ಕೊಲ್ಲಲ್ಪಡುತ್ತದೆ. ದೇವರು ನನ್ನ ಜೀವಿತನ್ನಾಳಿದರೆ ಪಾಪವು ಕೊಲ್ಲಲ್ಪಡುತ್ತದೆ. ಇದನ್ನು ಬಿಟ್ಟರೆ ಸಾಧ್ಯವಿರುವ ಬೇರೆ ಅಂತಿಮ ನಿರ್ಣಯವು ಇಲ್ಲವೇ ಇಲ್ಲ. ಪಾಪದ ಪರಮಾವಧಿ ಎಂದರೆ ಅದು ಯೇಸುಕ್ರಿಸ್ತನನ್ನೇ ಶಿಲುಬೆಗೇರಿಸಿತು. ಭೂಮಿಯಲ್ಲಿ ಆಗಿಹೋದ ದೇವರ ಇತಿಹಾಸದಲ್ಲಿ ಯಾವುದು ಸತ್ಯವೋ, ಅದೇ ನಿನ್ನ ಮತ್ತು ನನ್ನ ಜೀವನ ಚರಿತ್ರೆಯಲ್ಲಿಯೂ ಪರಮ ಸತ್ಯವಾಗಿದೆ. ನಮ್ಮ ಮನೋ ದೃಷ್ಟಿಯಲ್ಲಿ ಪಾಪದ ವಾಸ್ತವವನ್ನರಿತು ಅದರ ಸ್ವರೂಪ, ಅದರ ಅಸ್ತಿತ್ವದ ಸತ್ಯವನ್ನು ತಿಳಿಯಬೇಕು. ಯೇಸುಕ್ರಿಸ್ತನು ಈ ಲೋಕದೊಳಗೆ ಯಾಕೆ ಬಂದನೆಂಬುದಕ್ಕೆ ಅದೊಂದೇ ವಿವರಣೆ ಎಂಬು ದನ್ನರಿಯಬೇಕು. ಆತನ ಜೀವಿತದಲ್ಲಿ ಆತನಿಗುಂಟಾದ ಸಂಕಷ್ಟ ದುಃಖಪೀಡನೆಗಳಿಗೆ ಅದೊಂದೇ ವಿವರಣೆ.

# ಪಾಪದ ವಾಸ್ತವವನ್ನು ಒಪ್ಪಿಕೊಳ್ಳುವುದು

**''ಇದು ನಿಮ್ಮಕಾಲ, ಇದು ಅಂಧಕಾರದ ದೊರೆತನ'' - (ಲೂಕ - 22:53)**

ಪಾಪದ ಅನಿವಾರ್ಯತೆಯೊಂದಿಗೆ ನಮ್ಮನ್ನು ಗುರುತಿಸಿಕೊಳ್ಳದಿದ್ದರೆ, ಪಾಪವನ್ನು ಪ್ರತ್ಯೇಕ ವಾಗಿ ಗುರುತಿಸದೆ ಹೋದರೆ, ಅದನ್ನು ನಿಭಾಯಿಸದೆ ಹೋದರೆ, ಅದು ನಮ್ಮ ಬದುಕಿನಲ್ಲಿ ಎಲ್ಲಾ ವಿಧದ ಆಪತ್ತು ವಿಪತ್ತುಗಳನ್ನು ಉಂಟು ಮಾಡುತ್ತದೆ. ನೀನೇನೋ ಮಾನವ ಸ್ವಭಾವದ ಉದಾತ್ತತೆ, ಶ್ರೇಷ್ಠತೆಯನ್ನು, ಕುರಿತು ಮಾತನಾಡಬಹುದು, ಆದರೆ ಅದೇ ಮಾನವ ಸ್ವಭಾವದಲ್ಲಿ ಏನೋ ಒಂದು ಇದೆ, ಅದು ನಿನ್ನೆಲ್ಲಾ ಆದರ್ಶ, ಶ್ರೇಷ್ಠತೆಯ, ಮುಖದೆದುರಿಗೆ ಅಪಹಾಸ್ಯ ಮಾಡುತ್ತಿರುತ್ತದೆ. ದುರ್ಗುಣ ಮತ್ತು ಸ್ವಾರ್ಥಾನ್ವೇಷಕತೆ, ಮಾನವರಲ್ಲಿರುವ ಮುಚ್ಚುಮರೆಯಿಲ್ಲದ ಮತ್ಸರ ಮತ್ತು ಅಪಚಾರಗಳ ಇರುವಿಕೆಯ ಅನಿವಾರ್ಯತೆಯನ್ನು ಒಪ್ಪಲು ನೀನು ನಿರಾಕರಿಸಿದ್ದರೆ, ಅವುಗಳು ನಿನ್ನ ಜೀವಿತದಲ್ಲಿ ಬಂದೆರಗಿದಾಗ, ಅವುಗಳ ವಾಸ್ತವವನ್ನು ಒಪ್ಪುವುದರ ಬದಲು, ಅವುಗಳೊಂದಿಗೆ ನೀನು ರಾಜಿ ಮಾಡಿಕೊಂಡು, ''ಅವುಗಳ ವಿರುದ್ಧ ಹೋರಾಡುವುದರಿಂದ ಏನೂ ಪ್ರಯೋಜನ ವಿಲ್ಲ'' ಎಂದು ಹೇಳುವಿ-ಇಂಥಾ ಕಾಲ ಮತ್ತು ಅಂಧಕಾರದ ದೊರೆತನವು ನಿಮ್ಮ ಜೀವನದಲ್ಲಿ ಇದ್ದೇ ಇರುತ್ತದೆ ಎಂಬುದನ್ನು ಗಣನೆಗೆ ತೆಗೆದುಕೊಂಡಿರುವಿಯೋ? ಇಲ್ಲವೇ ನೀನೇ ನಿನ್ನಲ್ಲಿರುವದೆಲ್ಲವನ್ನೂ ಗಣನೆಗೆ ತೆಗೆದುಕೊಳ್ಳುವಾಗ, ಅಲ್ಲಿ ಪಾಪದ ಅನಿವಾರ್ಯತೆಯನ್ನು ತಪ್ಪಿಸಿಕೊಂಡು ಹೋಗಿದೆಯೋ? ನಿನ್ನ ಶಾರೀರಿಕ ಬಾಂಧವ್ಯಗಳಲ್ಲಿ ಮತ್ತು ಸ್ನೇಹ ಸಂಬಂಧಗಳಲ್ಲಿ ಪಾಪದ ವಾಸ್ತವವನ್ನು ನಿನಾಗಿಯೇ ಅದರ ಇರುವಿಕೆಯನ್ನು ಗ್ರಹಿಸಿಕೊಂಡಿ ರುವಿಯೋ ? ಇಲ್ಲದೇ ಹೋದರೆ ಮುಂದಿನ ತಿರುವಿ ನಲ್ಲಿಯೇ ಅದು ನಿನ್ನನ್ನು ಬೆನ್ನಟ್ಟಿ ಹಿಡಿದುಕೊಳ್ಳುತ್ತದೆ. ಪಾಪದ ಅನಿವಾರ್ಯತೆಯನ್ನು ನೀನೇ ಒಪ್ಪಿ ಸಮಾಧಾನ ಪಡಿಸಿ ಕೊಂಡಿದ್ದಾದರೆ, ಅದರಿಂದಾಗುವ ಅಪಾಯವನ್ನು ತತ್‌ಕ್ಷಣವೇ ಗ್ರಹಿಸುವುದಲ್ಲದೆ ''ಪಾಪವೆಂದ ರೇನು'' ಎಂಬುದನ್ನು ಮನಗಾಣುವಿ. ಪಾಪದ ಮನ್ನಣೆಯು, ಸ್ನೇಹದ ಆಧಾರಗಳನ್ನು ನಾಶಪಡಿಸು ವುದಿಲ್ಲ; ಮಾನವ ಜೀವಿತವು ಕೇವಲ ದುಃಖಮಯ ಎಂಬ ಸತ್ಯಕ್ಕೆ ಪಾಪವು ಪರಸ್ಪರ ದಾಕ್ಷಿಣ್ಯವನ್ನು ಸ್ಥಾಪಿಸುತ್ತದೆ. ಪಾಪದ ವಾಸ್ತವಕ್ಕೆ ಮನ್ನಣೆ ನೀಡಿರದಿದ್ದ ಜೀವಿತ ಹಾಗೂ ಅಂಥಾ ಯೋಜನೆಗಳ ಬಗ್ಗೆ ಎಚ್ಚರದಿಂದಿರಬೇಕು.

ಯೇಸುಸ್ವಾಮಿಯು ಮನುಷ್ಯನ ಸ್ವಭಾವದಲ್ಲೆಂದಿಗೂ ನಂಬಿಕೆ ಇಟ್ಟಿರಲಿಲ್ಲ. ಆದರೂ ಆತನು ಮಾನವ ದ್ವೇಷಿಯಾಗಿರಲಿಲ್ಲ. ಅವರ ಬಗ್ಗೆ ಸಂಶಯಗ್ರಸ್ತನೂ ಆಗಿರಲೇ ಇಲ್ಲ. ಯಾಕೆಂದರೆ ಮನುಷ್ಯರ ಸ್ವಭಾವಕ್ಕೆ ತಾನೇನು ಮಾಡಬಹುದೆಂಬುದನ್ನು ಆತನು ಸಂಪೂರ್ಣವಾಗಿ ನಂಬಿದ್ದನು. ನಿಷ್ಕಳಂಕರಾಗಿರುವ ಸ್ತ್ರೀ, ಪುರುಷರು ಮಾತ್ರ ಪಾಪದ ಪ್ರಹಾರದಿಂದ ರಕ್ಷಿಸಲ್ಪಟ್ಟಿರುವರಲ್ಲದೆ, ಮುಗ್ಧರೆನಿಸಿಕೊಂಡ ಸ್ತ್ರೀ, ಪುರುಷರಲ್ಲ. ಮುಗ್ಧ ಪುರುಷ ಅಥವಾ ಮುಗ್ಧ ಸ್ತ್ರೀಯೊಡನೆ ನೀನೆಂದಿಗೂ ಸುರಕ್ಷಿತವಾಗಿರುವುದಿಲ್ಲ. ಪುರುಷ ಮತ್ತು ಸ್ತ್ರೀ ಇವರು ಮುಗ್ಧರಾಗಿರುವುದು ಸಲ್ಲದು. ಆದರೆ ಅವರು ನಿಷ್ಕಳಂಕರೂ ಸಚ್ಚಾರಿತ್ರರೂ ಆಗಿರಬೇಕೆಂದು ದೇವರು ಒತ್ತಾಯ ಮಾಡುತ್ತಾನೆ. ಮುಗ್ಧತೆಯು ಚಿಕ್ಕ ಮಗುವಿನ ಗುಣಲಕ್ಷಣ. ಪಾಪದ ಅನಿವಾರ್ಯತೆಯನ್ನು ಗುರುತಿಸದೇ ಇರುವುದು ನಿಂದನಾರ್ಹ ವಾದದ್ದು.

**ಜೂನ್ - 25**

# ದುಃಖಾಗ್ನಿಯಲ್ಲಿ ಸ್ವಾತ್ಮದ ಸ್ವೀಕರಿಸುವಿಕೆ

**''ನಾನೇನು ಹೇಳಲಿ ? ತಂದೆಯೇ, ಈ ಕಾಲದೊಳಗಿಂದ ನನ್ನನ್ನು ತಪ್ಪಿಸು, ಆದರೆ ಇದಕ್ಕಾಗಿಯೇ ಈ ಕಾಲ ಸೇರಿದೆನು. ತಂದೆಯೇ ನಿನ್ನ ಹೆಸರನ್ನು ಮಹಿಮೆ ಪಡಿಸಿಕೋ'' - (ಯೋಹಾನ - 12:27)**

ಭಕ್ತನಾಗಿರುವ ನನಗೆ, ದುಃಖಸಂಕಟಗಳನ್ನು ತಡೆಗಟ್ಟೆಂದು ದೇವರನ್ನು ಬೇಡಿ ಕೊಳ್ಳುವ ಪ್ರವೃತ್ತಿ ನನಗಿರಬಾರದು. ನಾನು ಹೇಗೆ ಇರಬೇಕೆಂದು ದೇವರು ನನ್ನನ್ನು ಸೃಷ್ಟಿಸಿರುವನೋ - ಪ್ರತಿಯೊಂದು ದುಃಖಾಗ್ನಿಯಲ್ಲಿ ನಾನಿರುವಾಗಲೂ - ಅದೇ ಸೃಷ್ಠಿರೀತಿಯಲ್ಲಿಯೇ ನಾನಿರಲಾಗುವಂತೆ ಕಾಪಾಡೆಂದು ದೇವರನ್ನು ಬೇಡಿಕೊಳ್ಳಬೇಕು. ಪರಮದುಃಖಾಗ್ನಿಯಲ್ಲಿರುವಾಗ ಯೇಸುಸ್ವಾಮಿಯು ತಾನು ಯಾವ ಉದ್ದೇಶದಿಂದ ನರಾವತಾರವನ್ನು ತಾಳಿದ್ದನೋ ಅದನ್ನೇ ಪಡೆದುಕೊಂಡನು. ಆತನು ರಕ್ಷಿಸಲ್ಪಟ್ಟಿರುವುದು ನಿಜ; ಆದರೆ ಆ ಕಾಲದಿಂದ ಅಲ್ಲ - ಆ ಕಾಲದೊಳಗಿಂದ ರಕ್ಷಿಸಲ್ಪಟ್ಟನು.

ದುಃಖವು ಇರಲೇಬಾರದೆಂದೇನೋ ನಾವು ಹೇಳುತ್ತೇವೆ, ಆದರೆ ದುಃಖವು ಅಲ್ಲಿ ಇದ್ದೇ ಇದೆ ಮತ್ತು ಅದರ ಅಗ್ನಿ ಜ್ವಾಲೆಯೊಳಗಿನಿಂದಲೇ ನಮ್ಮನ್ನು ನಾವು ಪಡೆದುಕೊಳ್ಳಬೇಕು. ದುಃಖದಿಂದ ನುಣುಚಿ ಕೊಳ್ಳಲು ನಾವು ಯತ್ನಿಸಿದರೆ, ದುಃಖದೊಂದಿಗೆ ನಮ್ಮನ್ನು ಎಣಿಸಿಕೊಳ್ಳುವ ನಡವಳಿಕೆಯನ್ನು ನಿರಾಕರಿಸಿದರೆ - ನಾವು ನಿಜವಾಗಿಯೂ ಮೂರ್ಖರು; ದುಃಖವು ನಮ್ಮ ಜೀವನದಲ್ಲಿರುವ ಹಿರಿದಾದ ಕಟು ಸತ್ಯ; ದುಃಖವು ಇರಲೇಬಾರದೆಂದು ಹೇಳುವುದರಿಂದೇನೂ ಪ್ರಯೋಜನವಿಲ್ಲ, ಪಾಪ, ದುಃಖ ನರಳಾಟ ಇವು ಇಲ್ಲಿ ಇದ್ದೇ ಇವೆ. ಇವುಗಳಿಗೆ ಈ ಲೋಕದಲ್ಲಿರಲು ಅವಕಾಶ ನೀಡಿರುವಿಕೆಯಲ್ಲಿ ದೇವರು ತಪ್ಪೆಸಗಿದ್ದಾನೆ ಎಂದು ನಾವು ಹೇಳುವುದಲ್ಲ.

ದುಃಖವು ನಮ್ಮಲ್ಲಿರುವ ಆಳವಿಲ್ಲದಿರುವಿಕೆಯನ್ನು ಬಹುತೇಕ ದಹಿಸಿ ಬಿಡುತ್ತದೆ. ಹಾಗೆಂದ ಮಾತ್ರಕ್ಕೆ ದುಃಖವು ಸಕಲ ಸಂಬಂಧ, ಸಂದರ್ಭಗಳಲ್ಲಿ, ಯಾವಾಗಲೂ ಮನುಷ್ಯನನ್ನು ಉತ್ತಮನನ್ನಾಗಿ ಮಾಡುತ್ತದೆ ಎಂದು ಹೇಳಲಾಗದು. ಸಂಕಷ್ಟವು ನನ್ನ 'ಸ್ವಯಂ' ಅನ್ನು ನನಗೆ ಕೊಡುತ್ತದೆ, ಇಲ್ಲವೇ ನನ್ನನ್ನು ನಾಶಪಡಿಸುತ್ತದೆ. ನಿನ್ನನ್ನು ನೀನು, ನಿನ್ನ ಗೆಲವು ಯಶಸ್ಸುಗಳಲ್ಲಿ ಪಡೆಯಲಾರಿ, ಆಗ ನಿನ್ನ ತಲೆಕೆಟ್ಟಿರುತ್ತದೆ ಮತ್ತು ಅದೊಂದು ತಿಳುವಳಿಕೆ ಇಲ್ಲದ ತಲೆಯಾಗಿರುತ್ತದೆ, ಏಕರೀತಿಯ ಜೀವನ ಕ್ರಮದಲ್ಲಿಯೂ ನಿನ್ನ ಸ್ವಯಂ ಅನ್ನು ನೀನು ಪಡೆಯಲಾರಿ; ಅಲ್ಲಿ ನೀನು ಸದಾ ಗುಣಗುತ್ತಲೇ ಇರುವಿ. ನಿನ್ನನ್ನು ನೀನು ಅರಿತುಕೊಳ್ಳುವ ಮಾರ್ಗ-ಅದು ದುಃಖದ ಅಗ್ನಿ ಜ್ವಾಲೆಗಳಲ್ಲಿಯೇ, ಇದು ಹೀಗೆಯೇ ಯಾಕೆ? ಎಂಬುವುದು ಬೇರೆ ವಿಚಾರ, ಆದರೆ ಅದು ನಮ್ಮ ಸುವಾರ್ತೆಗಳಲ್ಲಿ ಮತ್ತು ಮಾನವನ ಅನುಭವ ದಲ್ಲಿಯೂ ಅಷ್ಟೇ ನಿಜವಾಗಿದೆ. ಯಾವ ಪುರುಷನು ದುಃಖಾಗ್ನಿಯಲ್ಲಿ ಸಾಗಿ ಬಂದು ತನ್ನನ್ನು ತಾನು ಪಡೆದು ಕೊಂಡಿರುವನೋ ಅಂಥವನನ್ನು ನೀನು ಖಂಡಿತವಾಗಿ ಗುರುತಿಸಬಲ್ಲೆ, ನಿನ್ನ ದುಃಖದ ಸಮಯದಲ್ಲಿ ಅಂಥವನ ಬಳಿಗೆ ನೀನು ಹೋದರೆ, ಆತನಲ್ಲಿ ನಿನಗಾಗಿ ಬಹಳ ಬಿಡುವಿರುತ್ತದೆಂಬುದನ್ನು ನಿಶ್ಚಯವಾಗಿ ನೀನು ತಿಳಿದಿರುವೆ. ಯಾವ ಮನುಷ್ಯನು ದುಃಖಾಗ್ನಿ ಜ್ವಾಲೆಗಳ ನಡುವೆ ಹಾಯ್ದು ಬಂದಿರುವು ದಿಲ್ಲವೋ, ಅಂಥವನು ದುರಂಹಕಾರಿಯಾಗಿರಲೇಬೇಕು ಮತ್ತು ನಿನಗಾಗಿ ಅವನಲ್ಲಿ ಸಮಯವಿಲ್ಲ. ದುಃಖಾಗ್ನಿಯಲ್ಲಿ ಸಾಗಿಬಂದು, ನಿನ್ನ ಸ್ವಯಂ ಅನ್ನು ನೀನು ಪಡೆದುಕೊಂಡಿದ್ದರೆ, ದೇವರು ನಿನ್ನನ್ನು ಪರರ ಪೋಷಣೆಗಾಗಿ ನೀನಿರುವಂತೆ ಮಾಡುತ್ತಾನೆ.

# ದೈವಕೃಪೆಯ ಮೇಲೆ ''ಈಗಲೇ'' ಆತುಕೊಳ್ಳುವಿಕೆ

**''ದೇವರ ಕೃಪೆಯನ್ನು ವ್ಯರ್ಥಮಾಡಿಕೊಳ್ಳಬೇಡಿರೆಂದು ಎಚ್ಚರಿಸುತ್ತೇವೆ'' - (2 ಕೊರಿಂಥ - 6:1)**

ನಿನ್ನೆಯ ದಿನದ ಪಡೆದ ಕೃಪೆಯು ಈ ದಿನಕ್ಕೆ ಸರಿ ಬೀಳುವುದಿಲ್ಲ, ಕೃಪೆಯು - ಅದು ತುಂಬಿ ಹರಿಯುವ ದೇವರ ಅನುಗ್ರಹ; ನಿನಗೆ ಬೇಕಾದಾಗ ಬೇಕಾದಷ್ಟನ್ನು ಸೆಳೆದುಕೊಳ್ಳಲು ಅದು ಸದಾ ಅಲ್ಲಿಯೇ ಇದೆ ಎಂಬುದನ್ನು ನೀನು ನೆಚ್ಚಿಕೊಂಡಿರಬೇಕು. ''.....ಸಂಕಟಗಳಲ್ಲಿಯೂ, ಕೊರತೆಗಳಲ್ಲಿಯೂ ಇಕ್ಕಟ್ಟುಗಳಲ್ಲಿಯೂ....... ತಾಳ್ಮೆಯನ್ನು ತೋರಿಸುತ್ತೇವೆ'' (2 ಕೊರಿ 6:4) ಅಲ್ಲಿಯೇ ನಿನ್ನ ಸಹನೆಗೆ ಸವಾಲು ಎದುರಾಗುತ್ತದೆ. ಅಲ್ಲಿ ದೇವರ ಕೃಪೆಯನ್ನು ಆತುಕೊಳ್ಳುವಿಕೆಯಲ್ಲಿ ನ್ಯೂನ್ಯತೆಯುಂಟಾಗಿದೆಯೋ? ಅಥವಾ ಹೀಗೇನಾದರೂ ಹೇಳುತ್ತಿರುವಿಯೋ? ''ಓ, ಹೌದು, ಇದೊಂದು ಸಾರಿ ಅದನ್ನು ಗಣನೆಗೆ ತೆಗೆದುಕೊಳ್ಳುವುದಿಲ್ಲ''. ನೀನು ದೇವರನ್ನು ಪ್ರಾರ್ಥಿಸುವ ಅಥವಾ ಆತನ ಸಹಾಯವನ್ನು ಯಾಚಿಸುವ ಪ್ರಶ್ನೆ ಇದಲ್ಲ. ದೇವರ ಕೃಪೆಯನ್ನು ಈಗಿಂದೀಗಲೇ ಸೆಳೆದುಕೊಳ್ಳಬೇಕು. ದೇವರ ಸೇವೆಯನ್ನು ಮಾಡಲು ಪ್ರಾರ್ಥನೆಯು ನನ್ನನ್ನು ಸಿದ್ಧಪಡಿಸುವುದೆನ್ನುವ ಒಲವು ನನ್ನಲ್ಲಿದೆ. ಆದರೆ ಹಾಗೆಂದು ಸತ್ಯವೇದಲ್ಲೆಲ್ಲಿಯೂ ಇಲ್ಲ. ಪ್ರಾರ್ಥನೆಯು ದೇವರ ಕೃಪೆಯನ್ನು ಸೆಳೆದುಕೊಳ್ಳುವ ಒಂದು ಪರಿಪಾಠ. ''ಇದರಿಂದ ಪಾರಾಗುವವರೆಗೂ ಇದನ್ನು ಸಹಿಸಿ ತಾಳುವೆನು. ಆಮೇಲೆ ಪ್ರಾರ್ಥಿಸುವೆನು'' ಎಂದು ಹೇಳದೆ ಈಗಲೇ ಪ್ರಾರ್ಥಿಸು - ಈಗಲೇ (Now).

ಅಗತ್ಯವಿರುವ ಕ್ಷಣದಲ್ಲಿಯೇ ದೇವರ ಕೃಪೆಯನ್ನು ಸೆಳೆದುಕೊಳ್ಳಬೇಕು. ಪ್ರಾರ್ಥನೆಯು ಅತ್ಯಂತ ಕಾರ್ಯ ಸಾಧ್ಯವಾದ ಸಹಜ ಕ್ರಿಯೆ. ಅದು ದೇವರಲ್ಲಿ ನೀನಿಟ್ಟಿರುವ ನಿಷ್ಠೆಯ ಆತ್ಮ ಪರೀಕ್ಷಣವಲ್ಲ , ಅದು ದೇವರ ಕೃಪೆಯನ್ನು ಸೆಳೆದುಕೊಳ್ಳುವ ಅಂತಿಮ ಸಾಧನ. ನಾವು ಪ್ರಾರ್ಥನೆಯ ಮೂಲಕ ದೇವರ ಕೃಪೆಯನ್ನು ಸೆಳೆದುಕೊಳ್ಳುವು ದನ್ನರಿಯಲು ತುಂಬಾ ತಡ ಮಾಡುತ್ತೇವೆ.

''ಪೆಟ್ಟುಗಳಲ್ಲಿಯೂ, ಸೆರೆಮನೆಯಲ್ಲಿಯೂ ಕಲಹಗಳಲ್ಲಿಯೂ, ಕಷ್ಟವಾದ ಕೆಲಸಗಳಲ್ಲಿಯೂ ........'' (2 ಕೊರಿಂಥ 6:5) ಈ ಎಲ್ಲಾ ವಿಷಯಗಳಲ್ಲಿಯೂ ದೇವರ ಕೃಪೆಯನ್ನು ಸೆಳೆದು ಕೊಳ್ಳುತ್ತಿರುವುದು ನಿನ್ನ ಜೀವಿತದಲ್ಲಿ ಪ್ರಕಟಗೊಂಡಾಗ, ಅದು ನಿನಗೂ ಮತ್ತು ಪರರಿಗೂ ಅಚ್ಚರಿ ಯನ್ನುಂಟು ಮಾಡುತ್ತದೆ. ಪ್ರಸ್ತುತ ಅಲ್ಲ, ಈಗಿಂದೀಗಲೇ ದೇವರ ಕೃಪೆಯನ್ನು ಸೆಳೆದುಕೋ. ಅಧ್ಯಾತ್ಮಿಕ ಶಬ್ದಕೋಶದಲ್ಲಿ ಪ್ರಾಮುಖ್ಯವಾದ ಒಂದು ಶಬ್ದ - 'ಈಗಲೇ'. ಸಮಯ ಸಂದರ್ಭಗಳು ತಮಗಿಷ್ಟಬಂದಂತೆ ಎಂಥಾ ಸ್ಥಿತಿಯೊಳಗಾದರೂ ನಿನ್ನನ್ನು ತಳ್ಳಲಿ; ನೀನಾದರೋ, ಊಹಿಸಬಲ್ಲ ಎಂಥಾ ಪರಿಸ್ಥಿತಿಗಳಲ್ಲೂ ದೇವರ ಕೃಪೆಯನ್ನು ಸೆಳೆದು ಕೊಳ್ಳುತ್ತಲೇ ಇರಬೇಕು. ದೇವರ ಕೃಪೆಯನ್ನು ನೀನು ಸೆಳೆದುಕೊಂಡಿರುವ ಒಂದು ದೊಡ್ಡ ಸಾಕ್ಷಿಯೆಂದರೆ - ಇತರರ ಮುಂದೆ ನಿನ್ನ ತೇಜೋವಧೆಯಾದಾಗ, ದೇವರ ಕೃಪೆಯ ವಿನಃ ಬೇರಾವ ಪ್ರತಿಕ್ರಿಯೆಯು ಅಂತರಿಕವಾಗಿಯಾದರೂ, ಶಾರೀರಿಕವಾಗಿಯಾದರೂ ಎಳ್ಳಷ್ಟೂ ನಿನ್ನಲ್ಲಿ ತೋರಿ ಬರುವುದಿಲ್ಲ.

''ನಮ್ಮಲ್ಲಿ ಏನೂ ಇಲ್ಲ'' ಹೌದು; ಯಾವುದನ್ನೂ ಕಾಯ್ದಿರಿಸಿ ಕೊಳ್ಳಬೇಡ. ನಿನ್ನಲ್ಲಿರುವ ಶ್ರೇಷ್ಠವಾದುದನ್ನು ಹೊರಗೆ ಸುರಿದು ಬಿಡು. ಸದಾ ಬಡವನಾಗಿರು, ದೇವರು ಕೊಡುವ ಸಂಪತ್ತಿನ ಬಗ್ಗೆ, ಹೆಚ್ಚು ಜಾಗರೂಕನೂ, ವ್ಯವಹಾರ ಚತುರನೂ ಆಗಿರಬೇಡ ''ಏನೂ ಇಲ್ಲದವರಾಗಿದ್ದರೂ ಎಲ್ಲಾ ಇದ್ದವರೂ ಆಗಿದ್ದೇವೆ'' - (2 ಕೊರಿ - 6:10) ಇದೇ ಬಡತನದ ಜಯಘೋಷ.

# ದೇವರು ಮಾಡಿದ ಉದ್ಧಾರದ ಮೇಲೆ ನೆರಳು

**''ನಿನ್ನನ್ನುದ್ಧರಿಸಲು ನಾನೇ ನಿನ್ನೊಂದಿಗಿರುವೆನು'' – (ಯೆರೆ 1:8)**

''ನಿನ್ನನ್ನುದ್ಧರಿಸಲು ನಾನೇ ನಿನ್ನೊಂದಿಗಿರುವೆನು'' ಎಂದು ದೇವರು ಯೆರೆಮೀಯ ನಿಗೆ ವಾಗ್ದಾನ ಮಾಡಿದನು. ''ಅದರ ಬಾಯೊಳಗಿಂದ ನಿನ್ನ ಪ್ರಾಣವನ್ನು ಸೆಳೆದುಕೊಂಡು ಹೋಗುವಿ'' (ಯೆರೆ 39:18) ಇದಷ್ಟೇ ದೇವರು ತನ್ನ ಮಕ್ಕಳಿಗೆ ಮಾಡುವ ವಾಗ್ದಾನ. ದೇವರು ನಮ್ಮನ್ನು ಎಲ್ಲಿಗಾದರೂ ಕಳುಹಿಸಿ ಕೊಟ್ಟಾಗಲೆಲ್ಲಾ, ಆತನು ನಮ್ಮ ಪ್ರಾಣವನ್ನು ಕಾಯುತ್ತಿರುತ್ತಾನೆ. ನಮ್ಮ ಸ್ವಂತ ಆಸ್ತಿ ಐಶ್ವರ್ಯಗಳೆಲ್ಲಾ ಉದಾಸೀನದ ವಿಷಯಗಳು, ಅವುಗಳ ಬಗ್ಗೆ ಸಡಿಲ ಧೋರಣೆಯುಳ್ಳವ ರಾಗಿರಬೇಕು; ನಾವು ಹಾಗಿರದಿದ್ದರೆ, ಅಲ್ಲಿ ಗಾಬರಿ, ಎದೆಬಿರಿಯುವಿಕೆ ಮತ್ತು ದಾರುಣ ವ್ಯಥೆ ಗಳಿರುತ್ತವೆ. ಅಂಥವರಾಗಿರುವುದೇ ನಮ್ಮ ಆಂತರ್ಯದಲ್ಲಿ ಮತ್ತು ನೆರಳಿನಂತೆ ನಮ್ಮನ್ನಾವರಿಸಿರುವ ದೇವರ ರಕ್ಷಣೆಯಲ್ಲಿ ನಾವು ನೆಲೆಗೊಂಡಿರುವ ನಮ್ಮ ನಂಬಿಕೆಗೆ ಸಾಕ್ಷಿ.

ಯೇಸುಕ್ರಿಸ್ತನ ಸಂದೇಶ ವಾಹಕರಾಗಿರುವನಾವು, ನಮಗೋಸ್ಕರ, ನಮ್ಮ ಸ್ವಂತ ಸಂಗತಿ ಗಳಿಗೋಸ್ಕರ, ಸೆಟೆದು ನಿಲ್ಲಲ್ಲಿಕ್ಕೆ ಸಮಯವಿರುವುದಿಲ್ಲವೆಂಬುದೇ ಪರ್ವತ ಪ್ರಸಂಗದ ತಿರುಳು. ಅಂತೆಯೇ ಯೇಸುಸ್ವಾಮಿಯು ಹೇಳುವದು, ''ನಿಮ್ಮನ್ನು ನ್ಯಾಯವಾಗಿ ನಡಸಿಕೊಳ್ಳವರೋ ಇಲ್ಲವೋ ಎಂಬುದನ್ನು ಕುರಿತು ಆತಂಕಪಡಬೇಡಿರಿ'' ನ್ಯಾಯಕ್ಕಾಗಿ ಕಾದಿರುವುದೆಂದರೆ, ಕ್ರಿಸ್ತ ಶ್ರದ್ಧೆಯಿಂದ ಓರೆಯಾಗುವ ಸಂಕೇತವಾಗಿದೆ. ಈ ಲೋಕದಲ್ಲಿರುವಾಗ ನ್ಯಾಯವನ್ನೆದುರು ನೋಡಬೇಡ; ಆದರೆ ನ್ಯಾಯವನ್ನಾಚರಿಸು ವುದನ್ನು ನೀನು ನಿಲ್ಲಿಸಬೇಡ. ನಾವು ನ್ಯಾಯಕ್ಕಾಗಿ ಎದುರು ನೋಡುತ್ತಿರುವೆವಾದರೆ ನಾವು ಗುಣಗುಟ್ಟ ಲಾರಂಭಿಸುವುದಲ್ಲದೆ, ಸ್ವಾನುಕಂಪನದ ಅತೃಪ್ತಿಯನ್ನು ತೃಪ್ತಿಗೊಳಿಸುವಲ್ಲಿ ನಿರತರಾಗಿ, ''ನನ್ನನ್ನು ಯಾಕೆ ಈ ರೀತಿ ನಡೆಸಿಕೊಳ್ಳುತ್ತಿರುವರು?'' ಎಂದು ಪ್ರಶ್ನಿಸುತ್ತೇವೆ. ನಾವು ಯೇಸುಕ್ರಿಸ್ತನಲ್ಲಿ ಶ್ರದ್ಧಾಭರಿತರಾಗಿದ್ದರೆ, ನಮಗೊದಗುವ ಪರಿಸ್ಥಿತಿಗಳಲ್ಲಿ ಅವು ನ್ಯಾಯವಾದವುಗಳೋ, ಅನ್ಯಾಯ ವಾದ ವುಗಳೋ, ಅವು ನಮಗೇನು ಸಂಬಂಧವಿಲ್ಲದವಾಗಿರುತ್ತವೆ. ಯೇಸು ಸ್ವಾಮಿಯು ಹೇಳುವುದು ''ನಾನು ನಿಮಗೆ ಬೋಧಿಸಿದವುಗಳನ್ನು ದೃಢವಾಗಿ ಕೈಕೊಂಡು ನಡೆಯಿರಿ ಮತ್ತು ನಾನೇ ನಿಮ್ಮನ್ನು ಕಾಯುತ್ತಿರುವೆನು; ನಿಮ್ಮಷ್ಟಕ್ಕೇ ನೀವೇ ಕಾಯ್ದುಕೊಳ್ಳುವವರಾಗಿದ್ದರೆ, ನನ್ನ ರಕ್ಷಣೆಯಾಶ್ರಯದಿಂದ ನಿಮ್ಮನ್ನು ನೀವೇ ತೊಲಗಿಸಿಕೊಳ್ಳುವಿರಿ'' ಇಂಥಾ ಪ್ರಸಂಗ ಉಂಟಾದಾಗಲೇ, ಆಸ್ತಿಕ ಭಕ್ತನು, ನಾಸ್ತಿಕನಾಗಿ ಬಿಡುತ್ತಾನೆ; ದೇವರನ್ನು ನಾವು ನಂಬುವುದಿಲ್ಲ, ನಮ್ಮ ಸಾಮಾನ್ಯ ಜ್ಞಾನ, ವಿವೇಚನೆಯನ್ನು ಘನತೆಗೇರಿಸಿ ಅದಕ್ಕೆ ದೇವರ ಹೆಸರಿನ ಪಟ್ಟಿ ಹಚ್ಚುತ್ತೇವೆ. ದೇವರನ್ನು ಪೂರ್ಣ ಹೃದಯದಿಂದ ನಂಬುವುದರ ಬದಲು, ನಮ್ಮ ಸ್ವಂತ ವಿವೇಚನೆಯನ್ನು ಆತುಕೊಳ್ಳುತ್ತೇವೆ.

# ದೇವರಿಂದ ಹಿಡಿಯಲ್ಪಡುವಿಕೆ

**''ನಾನು ಯಾವದನ್ನು ಹೊಂದುವದಕ್ಕಾಗಿ ಕ್ರಿಸ್ತಯೇಸು ನನ್ನನ್ನು ಹಿಡಿದುಕೊಂಡನೋ ಅದನ್ನು ಹಿಡಿದುಕೊಳ್ಳುವದಕ್ಕೋಸ್ಕರ ಓಡುತ್ತಾ ಇದ್ದೇನೆ'' - (ಫಿಲಿಪ್ಪಿ 3:12)**

ನಿನ್ನಷ್ಟಕ್ಕೆ ನೀನೇ, ದೇವ ಸೇವಕನಾಗುವ ಆಯ್ಕೆಯನ್ನೆಂದಿಗೂ ಮಾಡಬೇಡ. ಆದರೆ ದೇವರು ತನ್ನ ಕರೆಯನ್ನು ನಿನಗಿತ್ತಾಗ ಬಲಗಡೆಗಾದರೂ, ಎಡಗಡೆಗಾದರೂ ತಿರುಗಿದರೆ ನಿನ್ನಗತಿಯೇನಾಗುತ್ತದೆ ! ನಮ್ಮನ್ನು ಆತನ ಸೇವೆಗಾಗಿ ನಾವೇ ಆಯ್ಕೆ ಮಾಡಿಕೊಂಡಿರುವ ಕಾರಣಕ್ಕಾಗಿ ನಾವು ಇಲ್ಲಿ ಸೇರಿ ಬಂದಿರುವುದಿಲ್ಲ; ದೇವರು ನಮ್ಮನ್ನು ಹಿಡಿದಿಟ್ಟಿರುವುದರಿಂದ ನಾವು ಇಲ್ಲಿದ್ದೇವೆ. ''ಓಹ್, ಅದು ಸರಿಯೇ, ಆದರೆ ಈ ಕಾರ್ಯಕ್ಕೆ ನಾನು ಅರ್ಹನಲ್ಲ'' ಎಂಬ ವಿಚಾರ ಇಲ್ಲಿ ಇಲ್ಲವೇ ಇಲ್ಲ. ನೀನೇನು ಬೋಧಿಸಬೇಕಾಗಿದೆಯೋ ಅದು ದೇವರಿಂದ ನಿರ್ಧರಿಸಲ್ಪಡುತ್ತದೆ, ನಿನ್ನ ಸ್ವಂತ ಸ್ವಾಭಾವಿಕ ಒಲವಿನಂತೆ ಅದಿರುವುದಿಲ್ಲ. ನಿನ್ನ ಆತ್ಮವನ್ನು ದೈವ ಸಂಬಂಧದಲ್ಲಿ ಅಚಲವಾಗಿರಿಸು ಮತ್ತು ದೇವರ ಸಾಕ್ಷಿಯಾಗಿರಲು ಮಾತ್ರವೇ ಅಲ್ಲ, ಸುವಾರ್ತೆಯನ್ನು ಬೋಧಿಸಲೂ ನೀನು ಕರೆಯಲ್ಪಟ್ಟಿರುವೆ ಎಂಬುದನ್ನು ನೆನಪಿನಲ್ಲಿಟ್ಟುಕೋ. ಕ್ರೈಸ್ತನಾದ ಪ್ರತಿಯೊಬ್ಬನೂ ಸಾಕ್ಷಿಹೇಳಬೇಕು, ಆದರೆ ಆತನ ವಾಕ್ಯವನ್ನು ಬೋಧಿಸುವ ಕರೆ ಬಂದಾಗ, ತೀವ್ರ ಯಾತನೆಯನ್ನುಂಟು ಮಾಡುವ ಆತನ ಕರಗಳು ನಿನ್ನನ್ನು ಹಿಡಿದಿರಬೇಕು. ಆ ಒಂದೇ ಕಾರಣಕ್ಕಾಗಿ ನಿನ್ನ ಜೀವಿತವು ದೇವರ ಹಿಡಿತದಲ್ಲಿದೆ. ನಮ್ಮಲ್ಲಿ ಎಷ್ಟು ಜನರು ಹಾಗೆ ದೇವರ ಅಂಥಾ ಕರಗಳಿಂದ ಹಿಡಿಯಲ್ಪಟ್ಟಿರುವೆವು ?

ದೇವರ ವಾಕ್ಯಗಳನ್ನೆಂದಿಗೂ ಹಗುರಗೊಳಿಸಬೇಡ, ಅವುಗಳ ಸಾರಗುಂದದಂತೆ, ನಿರ್ದಾಕ್ಷಿಣ್ಯತೆಯಿಂದ ಬೋಧಿಸಬೇಕು. ದೇವರ ವಾಕ್ಯಗಳಿಗೆ ನೀನು ಅಳುಕಿಲ್ಲದ ನಿಷ್ಠೆಯಿಂದಿರಬೇಕು. ಆದರೆ ನಿನ್ನ ಜೊತೆಯವರೊಂದಿಗೆ ವೈಯಕ್ತಿಕವಾಗಿ ನಡೆದುಕೊಳ್ಳಬೇಕಾದಾಗ, ನೀನು ಯಾರು ಎಂಬುದನ್ನು ನೆನೆಸಿಕೋ - ಪರಲೋಕದಿಂದ ಸೃಷ್ಟಿಸಲ್ಪಟ್ಟ ವಿಶೇಷ ವ್ಯಕ್ತಿಯು ನೀನಲ್ಲ, ಆದರೆ ದೇವರ ಕೃಪೆಯಿಂದ ರಕ್ಷಿಸಲ್ಪಟ್ಟವನು (ಎಂಬುದನ್ನು). ''ನಾನಂತೂ ಹಿಡಿದುಕೊಂಡವನೆಂದು ನನ್ನನ್ನು ಈ ವರೆಗೂ ಎಣಿಸಿಕೊಳ್ಳುವುದಿಲ್ಲ ಆದರೆ ಒಂದು ......... ಹಿಡಿಯುವುದಕ್ಕೆ ಎದೆಬೊಗ್ಗಿದವನಾಗಿ ........ ಗುರಿಮಾಡಿಕೊಂಡು ಓಡುತ್ತಾ ಇದ್ದೇನೆ''. (ಫಿಲಿಪ್ಪಿ 3:13-14).

# ಕಟ್ಟುನಿಟ್ಟಾದ ಶಿಕ್ಷಣ

**''ನಿನ್ನ ಬಲಗೈ ನಿನ್ನನ್ನು ಪಾಪದಲ್ಲಿ ಸಿಕ್ಕಿಸುವದಾದರೆ ಅದನ್ನು ಕಡಿದು ಬಿಸಾಟು ಬಿಡು; ನಿನ್ನ ದೇಹವೆಲ್ಲಾ ನರಕದಲ್ಲಿ ಬೀಳುವುದಕ್ಕಿಂತ ಅವಯವಗಳಲ್ಲಿ ಒಂದು ಹೋಗುವದು ನಿನಗೆ ಹಿತವಲ್ಲವೇ ? ''**

**- (ಮತ್ತಾಯ 5:30)**

ಪ್ರತಿಯೊಬ್ಬನು ತನ್ನ ಬಲಗೈಯನ್ನು ಕಡಿದು ಬಿಸಾಡಬೇಕು ಎಂದು ಯೇಸು ಸ್ವಾಮಿಯು ಹೇಳಲಿಲ್ಲ. ಆತನು ಹೇಳಿದ್ದು, ''ನೀನು ನನ್ನೊಟ್ಟಿಗೆ ಸಾಗುತ್ತಿರುವಾಗ ನಿನ್ನ ಬಲಗೈ ನಿನ್ನನ್ನು ಪಾಪದಲ್ಲಿ ಸಿಕ್ಕಿಸುವುದಾದರೆ ಅದನ್ನು ಕಡಿದು ಬಿಸಾಟು ಬಿಡು''. ಮಾಡ ಬಹುದಾದ, ಪರಿಪೂರ್ಣವಾಗಿರುವ, ನ್ಯಾಯವಾದ, ಅನೇಕ ಸಂಗತಿಗಳಿವೆ. ಆದರೆ ನೀನು ದೇವರಲ್ಲಿ ಏಕಾಗ್ರತೆಯಿಂದಿರಬೇಕಾಗಿರುವ ಮಾರ್ಗದಲ್ಲಿ ಅವು ಅಡ್ಡಿ ಮಾಡುವಂತಿದ್ದರೆ ಅವುಗಳನ್ನು ನೀನು ಕೈಕೊಳ್ಳುವಂತಿಲ್ಲ. ನಿನ್ನ ಬಲಗೈ ನಿನ್ನಲ್ಲಿರುವ ಶ್ರೇಷ್ಠವಾದ ಅಂಗಗಳ ಲ್ಲೊಂದಾಗಿದೆ, ನೀನು ಆತನ ಆದೇಶಗಳನ್ನು ಕೈಕೊಂಡು ನಡೆಯುತ್ತಿರುವಾಗ ಆ ಕೈ ಅಡ್ಡಿಮಾಡಿದರೆ ಅದನ್ನು ಕಡಿದುಬಿಸಾಟು. ಈ ಶಿಕ್ಷಣ ವಿಧಾನವು ಮಾನವಕುಲಕ್ಕೆರಗಿದ ಪ್ರಹಾರಗಳಲ್ಲಿ ಬಹು ಕಠಿಣವಾದದ್ದು.

ದೇವರು ಒಬ್ಬ ಮನುಷ್ಯನನ್ನು ಹೊಸದಾಗಿ ಹುಟ್ಟಿಸುವುದರ ಮುಖಾಂತರ ಅವನನ್ನು ಮಾರ್ಪಡಿಸಿ, ಆತ್ಮೀಕ ಪುನರ್ಜನ್ಮದ ಮೂಲಕ ಅವನಿಗೆ ನೂತನ ಜೀವಿತವನ್ನು ಕೊಟ್ಟಾಗ, ಆ ಜೀವಿತವು ಅಂಗಾಂಗ ದುರ್ಬಲತೆಯ ಗುಣಲಕ್ಷಣಗಳಲ್ಲಿ (ಆತ್ಮೀಕವಾಗಿ) ಆರಂಭವಾಗುತ್ತದೆ. ನೀನು ಮಾಡಲು ಸಾಹಸವೆಸಗದಿರುವ ನೂರಾ ಒಂದು ವಿಷಯಗಳಿವೆ. ಆ ವಿಷಯಗಳು ನಿನ್ನ ದೃಷ್ಟಿಯಲ್ಲಿಯೂ, ಈ ಲೋಕದಲ್ಲಿ ನಿನ್ನನ್ನು ಬಲ್ಲವರ ದೃಷ್ಟಿಯಲ್ಲಿಯೂ, ಬಲಗೈ, ಬಲಕಣ್ಣುಗಳಾಗಿರುವವು, ಅಂದರೆ ನಿನಗೊಬ್ಬನಿಗೆ ಪಾಪವೆಂದು ತೋರಿದ ವಿಷಯಗಳು ಮಾತ್ರವಲ್ಲದೆ ನಿನ್ನನ್ನು ಬಲ್ಲವರೂ ಅದು ಪಾಪವೆಂದು ಗುರುತಿಸುವ ವಿಷಯಗಳು; ಅವುಗಳನ್ನೆಸಗುವುದರಲ್ಲಿ ತಪ್ಪು ಏನಿದೆ ? (ಮಾಡಬಾರದೆಂದು ಹೇಳುವ ನೀನು) ನೀನೆಂಥಾ ಅವಿವೇಕಿ ಎಂದು ಆತ್ಮೀಕ ವ್ಯಕ್ತಿಯಲ್ಲದವನು ಹೇಳುತ್ತಾನೆ. ಪ್ರಾರಂಭದಲ್ಲಿ ಅಂಗಾಂಗ ದುರ್ಬಲತೆಯಿಂದ ಜೀವಿಸದೇ ಮುಂದೆ ಸಾಗಿದ ಕ್ರಿಸ್ತ ಭಕ್ತನು ಈವರೆಗೆ ಎಲ್ಲಿಯೂ ಜೀವಿಸಿಯೇ ಇಲ್ಲ. ಮನುಷ್ಯರ ದೃಷ್ಟಿಯಲ್ಲಿ ಪ್ರೀತಿಪಾತ್ರನಾಗಿ ಕಾಣಿಸಿಕೊಳ್ಳುವ ಬದಲು, ಹೆಳವನಾಗಿ ದೇವರ ಪ್ರೀತಿ ಪಾತ್ರನಾಗಿ, ಅಂಗಾಂಗ ದುರ್ಬಲತೆಯ ಜೀವಿತವನ್ನು ಸಾಗಿಸುವುದು ಎಷ್ಟೋ ಮೇಲು. ಬೇರೆಯವರೆಲ್ಲರಿಗೂ ಸಂಪೂರ್ಣವಾಗಿ ಸರಿಕಾಣುವ, ಆದರೆ ನಿನಗೆ ಸರಿಹೊಂದದ ಅನೇಕ ಘನ ಕಾರ್ಯಗಳನ್ನು ನೀನು ಮಾಡದಂತೆ ತನ್ನ ಆತ್ಮನ ಮೂಲಕ ಯೇಸುಕ್ರಿಸ್ತನು ನಿನ್ನನ್ನು ನಿರ್ಬಂಧಿಸುತ್ತಾನೆ. ನಿನಗಾದ ಈ ನಿರ್ಬಂಧಗಳನ್ನು ಬೇರೊಬ್ಬನನ್ನು ಟೀಕಿಸಲು ಉಪಯೋಗಿಸಬೇಡ.

ದುರ್ಬಲತೆಯ ಜೀವಿತದಿಂದಲೇ ಬದುಕು ಪ್ರಾರಂಭವಾಗಬೇಕು. ಯೇಸು ಸ್ವಾಮಿಯು 48ನೇ ವಚನದಲ್ಲಿ ಆ ಜೀವಿತದ ಪರಿಪೂರ್ಣ ಆಡಂಬರ, ಅಲಂಕಾರದ, ಚಿತ್ರವನ್ನು ಕೊಟ್ಟಿರುತ್ತಾನೆ. ''ಪರಲೋಕದಲ್ಲಿರುವ ನಿಮ್ಮ ತಂದೆಯು ಯಾವದೋಷವೂ ಇಲ್ಲದಿರುವವನಾಗಿರುವಂತೆ ನೀವೂ ದೋಷವಿಲ್ಲದವರಾಗಿರ್ರಿ''.

# ಬೇಗನೇ ಅದನ್ನು ಮಾಡು

**''ಅವನ ಕೂಡ ಬೇಗ ಸಮಾಧಾನ ಮಾಡಿಕೋ'' - (ಮತ್ತಾಯ 5:25)**

ಈ ವಾಕ್ಯಗಳಲ್ಲಿ ಯೇಸುಕ್ರಿಸ್ತನು ಬಹುಮುಖ್ಯವಾದ ತತ್ವವನ್ನು ಪ್ರತಿಪಾದಿಸುತ್ತಿದ್ದಾನೆ - ನೀನು ಮಾಡಲೇ ಬೇಕಾಗಿರುವುದನ್ನು ಮಾಡು. ಈಗಲೇ, ಬೇಗನೇ ಮಾಡು; ಕೂಡಲೇ ನೀನು ಮಾಡದೆ ಹೋದರೆ ಅನಿವಾರ್ಯವಾದ ಅಥವಾ ತಪ್ಪಿಸಿಕೊಳ್ಳಲಾರದ ಪ್ರಕ್ರಿಯೆಯು ಪ್ರಾರಂಭ ವಾಗುವುದು, ಆಗ ನೀನು ವೇದನೆ, ಸಂಕಷ್ಟ ತುಂಬಿದವನಾಗಿ ಕೊನೆಯ ಕಾಸು ಮುಟ್ಟಿಸಲೇಬೇಕು. ದೇವರ ವಿಧಿನಿಯಮಗಳೆಂದೂ ಬದಲಾಯಿಸಲಾರದಂಥವುಗಳು; ಅವುಗಳಿಂದ ತಪ್ಪಿಸಿಕೊಳ್ಳಲಾಗದು. ಹೀಗೆ ಯೇಸುಕ್ರಿಸ್ತನ ಬೋಧನೆಗಳು ನೇರವಾಗಿ ನಮ್ಮ ಹೃದಯಾಂತರಾಳಕ್ಕೆ ನಾಟುತ್ತವೆ.

ನನ್ನ ವಿರೋಧಿಯ ಕಡೆಯಿಂದ, ಅವನು ನನ್ನ ಹಕ್ಕುಗಳನ್ನು ನನಗೆ ಕೊಡುವಂತೆ ನಾನು ನೋಡಿಕೊಳ್ಳುವುದು ಸ್ವಾಭಾವಿಕವಾದದ್ದೇ. ಆದರೆ ಯೇಸುಸ್ವಾಮಿಯವರು ಹೇಳುವಂತೆ - ನಾನು ನನ್ನ ವಿರೋಧಿಗೆ ಯಾವುದರ ಋಣಿಯಾಗಿರುವೆನೋ ಅದನ್ನು ಅವನಿಗೆ ಸಲ್ಲಿಸುವದೇ ತಪ್ಪಿಸಿಕೊಳ್ಳಲಾಗದ ನಿಯಮಬದ್ಧವೂ ಆದ, ಪ್ರಾಮುಖ್ಯ ವಿಷಯ. ನಮ್ಮ ಸ್ವಾಮಿಯ ದೃಷ್ಟಿಕೋನದಲ್ಲಿ ನಾನು ವಂಚಿಸಲ್ಪಟ್ಟಿರು ವೆನೋ, ಇಲ್ಲವೋ ಅದು ಮುಖ್ಯವಲ್ಲ; ಮುಖ್ಯವಾದುದೆಂದರೆ ನಾನು ಪರರನ್ನು ವಂಚಿಸಬಾರದು; ನಾನು ನನ್ನ ಹಕ್ಕುಗಳ ಪ್ರತಿಪಾದನೆಗೆ ಒತ್ತಾಯ ಮಾಡುತ್ತಿರುವೆನೋ ? ಅಥವಾ ಯೇಸುಕ್ರಿಸ್ತನ ದೃಷ್ಟಿಕೋನದಂತೆ ಋಣಿಯಾಗಿರುವುದನ್ನು ನಾನು ಸಲ್ಲಿಸುತ್ತಿರುವೆನೋ ?

ಮಾಡುವುದನ್ನು ಬೇಗನೇ ಮಾಡಿಬಿಡು. 'ಈಗಲೇ' ನಿನ್ನನ್ನು ನಿನ್ನ ನ್ಯಾಯತೀರ್ಪಿಗೆ ಒಳ ಪಡಿಸಿಕೋ. ನೈತಿಕ ಮತ್ತು ಆತ್ಮೀಕ ವಿಷಯಗಳಲ್ಲಿ ತತ್‌ಕ್ಷಣವೇ ಅದನ್ನು ಮಾಡಿ ಬಿಡಬೇಕು. ಮಾಡದೇ ಹೋದರೆ ವಿಚಾರ ಮಾಡಲಸಾಧ್ಯವಾದ ಕಾರ್ಯಾಚರಣೆಯು ಕಾರ್ಯೋನ್ಮುಖವಾಗುತ್ತದೆ. ದೇವರು ತನ್ನ ಮಗುವನ್ನು ನಿಷ್ಕಳಂಕನೂ, ಪರಿಶುಭ್ರನೂ, ಹಿಮದಂತೆ ಬಿಳುಪಾಗಿರುವನೂ ಆಗುವಂತೆ ಮಾಡಲು, ಆತನು ಧೃಡವಾಗಿ ನಿಶ್ಚಯಿಸಿದ್ದಾನೆ, ಆತನ ಬೋಧನೆಯ ಯಾವುದಾದರೊಂದು ವಿಷಯಾಂಶಕ್ಕೆ ನಾವು ಅವಿಧೇಯರಾಗಿರುವವರೆಗೂ, ದೇವರ ಆತ್ಮನು ನಮ್ಮನ್ನು ವಿಧೇಯರಾಗಿರುವಂತೆ ಮಾಡುವ ಯಾವುದೇ ಪ್ರಕ್ರಿಯೆಯನ್ನು ದೇವರು ತಡೆ ಹಿಡಿಯುವುದಿಲ್ಲ. ನಾವು ಮಾಡುತ್ತಿರುವುದು ಸರಿಯಾಗಿಯೇ ಇದೆಯೆಂದು ನಾವು ಒತ್ತಾಯಿಸುವುದು, ಬಹುಮಟ್ಟಿಗೆ ನಾವು ಯಾವುದೋ ಒಂದು ವಿಷಯದಲ್ಲಿ ಎಲ್ಲೋ ಅವಿಧೇಯತೆಯಿಂದಿರುವ ಅಂಶವನ್ನು ಸದಾ ಬಿಂಬಿಸುವ ಸೂಚನೆಯಾಗಿದೆ.

''ಅವನ ಕೂಡ ಬೇಗನೇ ಸಂಧಾನ ಮಾಡಿಕೋ'' ನಿನ್ನ ಒಂದು ಸಂಬಂಧದ ವಿಷಯವಾಗಿ, ಸಂಧಿಕಾಲವನ್ನು ನೀನು ದಾಟುತ್ತಿರುವಾಗ, ಇದ್ದಕ್ಕಿದ್ದಂತೆಯೇ ಒಂದು ಸೂಕ್ಷ್ಮ ಘಟ್ಟದಲ್ಲಿ ಆ ಸಂಬಂಧದ ಕುರಿತು ನಿನ್ನ ಹೃದಯದಲ್ಲೆಲ್ಲೋ ಕೋಪವಡಗಿದೆ ಎಂದು ನಿನಗೆ ಕಂಡು ಬಂದರೆ, ಬೇಗನೇ ಅದನ್ನು ಒಪ್ಪಿಕೊಂಡು ನಿವೇದಿಸು. ಕೂಡಲೇ ಅದನ್ನು ಸರಿಪಡಿಸಿ ದೇವರ ಸನ್ನಿಧಿಯಲ್ಲಿರಿಸು ಮತ್ತು ಅದರೊಂದಿಗೆ ಸಮಾಧಾನ ಹೊಂದಿಕೊಳ್ಳಲು ಹೊರಟು ಹೋಗ ಬೇಕು, ಬೇಗನೇ ಅದನ್ನು ಮಾಡು.

# ಗತ್ಯಂತರವಿಲ್ಲದ ದಂಡನೆ

**''ನೀನು ಒಂದು ಕಾಸನ್ನಾದರೂ ನಿಲ್ಲಿಸಿಕೊಳ್ಳದೆ ಎಲ್ಲ ಸಲ್ಲಿಸುವ ತನಕ ಅಲ್ಲಿಂದ ಬರುವುದೇ ಇಲ್ಲ ಎಂದು ನಿನಗೆ ಸತ್ಯವಾಗಿ ಹೇಳುತ್ತೇನೆ.'' - (ಮತ್ತಾ 5:26)**

''ಒಂದು ಮೂಲೆಯಲ್ಲಿ ಸ್ವಲ್ಪ ನರಕವಿರುವ ಸ್ವರ್ಗವೆಂಬುದು ಇಲ್ಲವೇ ಇಲ್ಲ'' ನಿನ್ನನ್ನು ನಿರ್ಮಲನೂ ಪರಿಶುದ್ಧನೂ ಮತ್ತು ಯೋಗ್ಯನೂ ಆಗುವಂತೆ ಮಾಡಲು ದೇವರು ನಿಶ್ಚಯಿಸಿದ್ದಾನೆ; ಪವಿತ್ರಾತ್ಮನ ಸೂಕ್ಷ್ಮ ಪರಿಶೋಧನೆಯಿಂದ ಕ್ಷಣ ಮಾತ್ರವಾದರೂ ನೀನು ತಪ್ಪಿಸಿಕೊಳ್ಳಲು ಆತನು ಬಿಡುವುದಿಲ್ಲ. ನೀನು ಅಪರಾಧಿಯೆಂದು ಆತನು ತೀರ್ಮಾನಿಸಿದ ತಕ್ಷಣವೇ ನ್ಯಾಯತೀರ್ಪಿಗೆ ಗುರಿಯಾಗ ಬೇಕೆಂದು ದೇವರು ನಿನ್ನನ್ನು ಒತ್ತಾಯ ಪಡಿಸಿದನು; ಆದರೆ ನೀನು ಅದಕ್ಕೆ ಒಳಗಾಗಲಿಲ್ಲ, ಆಗ ಗತ್ಯಂತರ ವಿಲ್ಲದ ಕಾರ್ಯಾಚರಣೆಯು ಪ್ರಾರಂಭವಾಯಿತು ಮತ್ತು ನೀನೀಗ ಕಾರಾಗೃಹ ದಲ್ಲಿರುವಿ; ಒಂದು ಕಾಸನ್ನಾದರೂ ನಿಲ್ಲಿಸಿಕೊಳ್ಳದೆ ಎಲ್ಲಾ ಸಲ್ಲಿಸಿದ ನಂತರವೇ ನೀನು ಕಾರಾಗೃಹದಿಂದ ಹೊರಗೆ ಬರುವಿ. (5: 25-26) ''ಕರುಣಾಮಯನೂ ಪರಮಪ್ರೀತಿಯೂ ಉಳ್ಳದೇವರು ಈತನೋ?'' ಎಂದು ಈಗ ನೀನೆನ್ನುತ್ತಿರುವೆ; ಆದರೆ ಇದನ್ನೇ ದೇವರ ದೃಷ್ಟಿಯಿಂದ ನೋಡುವು ದಾದರೆ, ಇದು ಪ್ರೀತಿಯ ಘನವಾದ ಸೇವೆ. ನೀನು ನಿರ್ಮಲನೂ, ನಿರ್ದೋಷಿಯೂ, ನಿಷ್ಕಳಂಕನೂ ಆಗಿ ಸೆರೆಮನೆಯಿಂದ ಹೊರಗೆ ಬರುವಂತೆ ದೇವರು ಮಾಡುತ್ತಾನೆ. ಆದರೆ ಈವರೆಗೆ ನೀನು ತೋರುತ್ತಿದ್ದ ನಿನ್ನ ಸ್ವಭಾವವನ್ನು - ನಿನ್ನ ಮೇಲೆ ನಿನಗಿರುವ ಹಕ್ಕು, ಅಧಿಕಾರಗಳನ್ನು ಪ್ರದರ್ಶಿಸುವ ಆ ಸ್ವಭಾವವನ್ನು, ನೀನು ಗುರುತಿಸ ಬೇಕೆಂದು ದೇವರು ಬಯಸುತ್ತಾನೆ. ಈ ನಿನ್ನ ಸ್ವಭಾವವನ್ನು ದೇವರು ಬದಲಾವಣೆ ಮಾಡಲೆಂದು ನೀನು ಇಚ್ಛೈಸಿದ ಕ್ಷಣವೇ ಪುನಃ ಸೃಷ್ಟಿಸುವ ಆತನ ಶಕ್ತಿಗಳು ಕಾರ್ಯಾರಂಭಗೊಳ್ಳುತ್ತವೆ. ದೇವರ ಪರಮೋದ್ದೇಶ ವನ್ನು - ಮೊದಲು ನಿನ್ನನ್ನು ತನ್ನೊಂದಿಗೆ ಅನ್ಯೋನ್ಯತೆಯಲ್ಲಿ ಸೇರಿಸಿ, ಆ ನಂತರ ನಿನ್ನ ಜೊತೆಯವರೊಂದಿಗೆ ನೀನು ಅಂಥಾ ಅನ್ಯೋನ್ಯತೆಯಲ್ಲಿರ ಬೇಕಾಗಿರುವ ಉದ್ದೇಶವನ್ನು - ನೀನು ಗ್ರಹಿಸಿದ ಕೂಡಲೇ ನೀನು ಯೋಗ್ಯ ಮಾರ್ಗ ವನ್ನು ಹಿಡಿಯುವಂತೆ ತನ್ನ ಸೃಷ್ಟಿಯೆಲ್ಲವನ್ನೂ ಅದರ ಕೊನೆಯಂಚಿನವರೆಗೂ ಅದು ನಿನಗೆ ಸಹಾಯ ಮಾಡುವಂತೆ ಅದಕ್ಕೆ ಒತ್ತುಕೊಡುತ್ತಾನೆ. ಈಗಲೇ ತೀರ್ಮಾನ ಮಾಡು - 'ಹೌದು ಪ್ರಭುವೇ ಆ ಪತ್ರವನ್ನು ಈ ರಾತ್ರಿಯೇ ಬರೆಯುತ್ತೇನೆ. ಮತ್ತು ಆ ವ್ಯಕ್ತಿಯೊಡನೆ ಈಗಲೇ ಸಮಾಧಾನ ಮಾಡಿಕೊಳ್ಳುತ್ತೇನೆ.'

ಯೇಸುಕ್ರಿಸ್ತನ ಈ ಸಂದೇಶಗಳು ನಿನ್ನ ಹೃದಯಕ್ಕಾಗಿಯೂ ನಿನ್ನ ಮನೋ ಪ್ರಜ್ಞೆಗಾಗಿಯೂ ಇರುತ್ತವೆ, ಬೌದ್ಧಿಕ ವಿಶ್ಲೇಷಣೆ ಮಾಡುವ ನಿನ್ನ ತಲೆಗಾಗಿ ಅಲ್ಲ. ಯೇಸುಕ್ರಿಸ್ತನು ಪರ್ವತದ ಮೇಲೆ ಮಾಡಿದ ಪ್ರಸಂಗವನ್ನು ನಿನ್ನ ತಲೆಯ ಮೂಲಕ ಬೌದ್ಧಿಕ ವಿಶ್ಲೇಷಣೆಯ ಮೂಲಕ ವಾದಿಸಿದರೆ, ಅದು ನಿನ್ನ ಹೃದಯದಾಳಕ್ಕೆ ತೂರಲಾರದಷ್ಟು ಮೊಂಡಾಗಿ ಬಿಡುತ್ತದೆ.

ನಾನೇಕೆ ''ದೇವರೊಂದಿಗೆ ಆತ್ಮೀಯತೆಯಲ್ಲಿ ಮುಂದೆ ಸಾಗುತ್ತಿಲ್ಲ''ವೆಂದು ನೀನು ಯೋಚಿಸುವೆಯಾದರೆ, ದೇವರ ದೃಷ್ಟಿಗನುಸಾರವಾಗಿ ನಿನ್ನ ಸಾಲಗಳನ್ನು ನೀನು ತೀರಿಸುತ್ತಿರುವಿಯೋ? ಮಾಡಬೇಕೆಂದಿ ರುವುದನ್ನು ಈಗಲೇ ಮಾಡಿಬಿಡು, ಪ್ರತಿಯೊಂದು ನೈತಿಕ ಕರೆಯುವಿಕೆಗೆ ''ಮಾಡಲೇ ಬೇಕು'' ಎಂಬ ಒತ್ತಾಯದ ಹಿನ್ನೆಲೆ ಇರುತ್ತದೆ.

# ಶಿಷ್ಯತ್ವಕ್ಕೆ ಷರತ್ತುಗಳು

**''ಯಾವನಾದರೂ ನನ್ನ ಬಳಿಗೆ ಬಂದು ......... ಹಗೆ ಮಾಡದಿದ್ದರೆ ಅವನು ನನ್ನ ಶಿಷ್ಯನಾಗಿರಲಾರನು'' - (ಲೂಕ - 14:26)**

ನಮ್ಮ ಜೀವಿತದ ನಿಕಟ ಬಾಂಧವ್ಯಗಳು ಯೇಸುಕ್ರಿಸ್ತನ ಖಡಾಖಂಡಿತವಾದ ಹೇಳಿಕೆಗಳೊಂದಿಗೆ ಘರ್ಷಿಸುತ್ತಿರುವಾಗ, ಕೂಡಲೇ ವಿಧೇಯತೆಯನ್ನು ತನಗೆ ತೋರಿಸಬೇಕೆಂದು ಆತನು ಹೇಳುತ್ತಿದ್ದಾನೆ. ಶಿಷ್ಯತ್ವದ ಅರ್ಥ-ವೈಯಕ್ತಿಕವೂ, ಉತ್ಕಟವೂ ಆದ ಭಕ್ತಿಯನ್ನು ಒಬ್ಬನೇ ವ್ಯಕ್ತಿಗೆ ತೋರಿಸಬೇಕು, - ಅದು ಪ್ರಭುವಾದ ಯೇಸುಕ್ರಿಸ್ತನಿಗೆ. ಒಬ್ಬ ವ್ಯಕ್ತಿಗೆ ಭಕ್ತಿ ನಿಷ್ಠನಾಗಿರುವುದಕ್ಕೂ, ಮತ್ತು ಕೇವಲ ತತ್ವಗಳಿಗೆ ಇಲ್ಲವೇ ಕಾರಣಗಳಿಗೆ ನಿಷ್ಠನಾಗಿರುವದಕ್ಕೂ ತುಂಬಾ ವ್ಯತ್ಯಾಸವಿದೆ. ನಮ್ಮ ಸ್ವಾಮಿಯು ಒಂದು ಕಾರಣವನ್ನು ಘೋಷಣೆ ಮಾಡಲಿಲ್ಲ; ತನಗೇ ವೈಯಕ್ತಿಕ ಭಕ್ತಿ ನಿಷ್ಠೆ ತೋರಬೇಕೆಂದು ಘೋಷಿಸಿದನು. ಆತನಿಗೆ ಶಿಷ್ಯನಾಗಿರುವುದೆಂದರೆ ಆತನ ಮೇಲಿರುವ ಪ್ರೀತಿಯ ನಿಮಿತ್ತ ಆತನಿಗೆ ಜೀತದಾಳಾಗಿರಬೇಕು. ಕ್ರೈಸ್ತರೆನಿಸಿಕೊಳ್ಳುವ ನಮ್ಮಲ್ಲಿ ಅನೇಕರು ವಾಸ್ತವದಲ್ಲಿ ಯೇಸು ಕ್ರಿಸ್ತನಿಗೆ ಭಕ್ತಿನಿಷ್ಠರಾಗಿರುವುದಿಲ್ಲ. ಯೇಸುಕ್ರಿಸ್ತನ ಪ್ರೀತಿಯನ್ನು ಪವಿತ್ರಾತ್ಮನು ಅನುಗ್ರಹಿಸದ ವಿನಃ ಧರೆಯ ಮೇಲೆ ಜೀವಿಸುವ ಯಾವ ವ್ಯಕ್ತಿಯಲ್ಲಿಯೂ, ಇಂಥಾ ಉತ್ಕಟ ಭಾವದ ಪ್ರೀತಿ ಇರುವುದಿಲ್ಲ. ಯೇಸುಕ್ರಿಸ್ತನನ್ನು ನಾವು ಪ್ರಶಂಶಿಸುತ್ತಿರಬಹುದು, ಆತನಿಗೆ ಗೌರವ ತೋರುತ್ತಿರಬಹುದು ಮತ್ತು ಆತನಿಗೆ ಮಾನ್ಯತೆಯನ್ನು ನೀಡುತ್ತಿರಬಹುದು ಆದರೆ ಆತನನ್ನು ನಮ್ಮಷ್ಟಕ್ಕೆ ನಾವೇ ಪ್ರೀತಿಸಲಾರೆವು, ಯೇಸುಕ್ರಿಸ್ತನನ್ನು ಪ್ರೀತಿಸುವ ಒಬ್ಬನೇ ಪ್ರೇಮಿ, ಆತನು ಪರಿಶುದ್ಧಾತ್ಮನೇ. ''ದೇವರ ಪ್ರೀತಿಯನ್ನು ಆತನು ನಮ್ಮ ಹೃದಯಗಳಲ್ಲಿ ಹರಡಿ ಚೆಲ್ಲುತ್ತಾನೆ.'' (ರೋಮಾ5:5) ಯೇಸುಕ್ರಿಸ್ತನನ್ನು ನಿನ್ನ ಮೂಲಕ ಮಹಿಮೆ ಪಡಿಸುವ ಅವಕಾಶವೊದಗಿದಾಗಲೆಲ್ಲಾ ಪವಿತ್ರಾತ್ಮನು ನಿನ್ನ ಹೃದಯವನ್ನು, ನಿನ್ನ ನರ ಮಂಡಲವನ್ನೂ ನಿನ್ನ ಸಂಪೂರ್ಣ ವ್ಯಕ್ತಿತ್ವವನ್ನೂ ತನ್ನ ವಶಕ್ಕೆ ತೆಗೆದುಕೊಂಡು ಅದನ್ನು ಯೇಸುಕ್ರಿಸ್ತನ ಶ್ರದ್ಧೆಯಲ್ಲಿ ಪ್ರಜ್ವಲಿಸುತ್ತಾ ಪ್ರಕಾಶಮಾನವಾಗಿರುವಂತೆ ಮಾಡುತ್ತಾನೆ.

'ಕ್ರಿಸ್ತೀಯ ಜೀವಿತವು'-ನೈತಿಕವಾಗಿ ಸ್ವಯಂ ಪ್ರೇರಿತ ಸೃಜನ ಶೀಲತೆಯಿಂದ ಕೂಡಿರುತ್ತದೆ. ಆದ ಕಾರಣ, ಶಿಷ್ಯರಾದವರು ಸಹಾ ಯೇಸುಕ್ರಿಸ್ತನ ಮೇಲೆ ಹೊರಿಸಿದಂಥ 'ಅಸಮಂಜಸ' ವ್ಯಕ್ತಿಯೆಂಬ ಆರೋಪದಿಂದ ಹೊರಗಾದವರಲ್ಲ. ಆದರೆ ಯೇಸುಕ್ರಿಸ್ತನು ದೇವರೊಂದಿಗೆ ಯಾವಾಗಲೂ ಸುಸಂಗತ ನಾಗಿಯೇ ಇದ್ದನು, ಕ್ರೈಸ್ತನಾದವನು ಸಹ ತನ್ನೊಳಗಿರುವ ದೇವರ ಮಗನೊಂದಿಗೆ ಸುಸಂಗತ ನಾಗಿರಬೇಕೇ ಹೊರತು ಕಠಿಣ ನಿಯಮಗಳಿಗೆ ಅಥವಾ ಸೂತ್ರಗಳಿಗೆ ಅಲ್ಲ. ಮಾನವರು ಸ್ವಂತ ಸೂತ್ರಗಳಿಗೆ ಭಕ್ತಿಪೂರ್ವಕವಾಗಿ ತಮ್ಮನ್ನು ಅರ್ಪಿಸಿ ಕೊಳ್ಳುವರು. ಆದುದರಿಂದ ಅವರು ಯೇಸು ಕ್ರಿಸ್ತನಿಗೆ ನಿಷ್ಠೆಯುಳ್ಳವರಾಗುವ ಮೊದಲು ದೇವರು ಅವರ ಪೂರ್ವಗ್ರಹಗಳನ್ನು ಸ್ಫೋಟಿಸಿ ನುಚ್ಚುನೂರು ಮಾಡಬೇಕಾಗುತ್ತದೆ.

# ವ್ಯಕ್ತಿಗತ ಪಾಪದ ಸಾಂದ್ರೀಕರಣ

**''ಅಯ್ಯೋ, ನನ್ನ ಗತಿಯನ್ನು ಏನು ಹೇಳಲಿ ! ನಾಶವಾದೆನಲ್ಲಾ; ನಾನು ಹೊಲಸು ತುಟಿಯವನು''**
**- (ಯೆಶಾಯ - 6:5)**

ನಾನು ದೇವರ ಸಮ್ಮುಖಕ್ಕೆ ಬಂದಾಗ, 'ನಾನು ಪಾಪಿ' ಎಂಬುದನ್ನರಿಯದೆ ಅಸ್ಪಷ್ಟ ಭಾವನೆಯಲ್ಲಿರುತ್ತೇನೆ. ನನ್ನ ಜೀವಿತದ ನಿರ್ದಿಷ್ಟ ಪ್ರದೇಶದ ಕಡೆಗೆ ನನ್ನ ಗಮನವು ಸೆಳೆಯಲ್ಪಟ್ಟಾಗ, ಅಲ್ಲಿ ಪಾಪವು ಸಾಂದ್ರೀಕರಣಗೊಂಡು ನೆಲೆಸಿರುವುದನ್ನು ನಾನು ಗ್ರಹಿಸುತ್ತೇನೆ. ಅಂಥಾ ಸಂದರ್ಭದಲ್ಲಿ ಒಬ್ಬ ವ್ಯಕ್ತಿಯು ಸುಲಭವಾಗಿ ಹೇಳುವನು - 'ಓ ಹೌದು, ನಾನು ಪಾಪಿ ಎಂಬುದನ್ನು ನಾನು ಬಲ್ಲೆನು' ಆದರೆ ಅದೇ ವ್ಯಕ್ತಿಯು ದೇವರ ಸಮ್ಮುಖದಲ್ಲಿ ಬಂದಾಗ, ಅಂಥ ಉದಾರವಾದ, ಅಸ್ಪಷ್ಟ ಹೇಳಿಕೆಯ ನಿಮಿತ್ತ ನುಣಚಿಕೊಂಡು ಹೋಗಲಾರನು-''ನಾನು ಇಂಥವನು, ಇಲ್ಲವೇ ಅಂಥವನು ಇಲ್ಲವೇ ಬೇರೆ ಏನೋ ಆಗಿರುವೆನು'' ಎಂಬುದರ ಮೇಲೆ ಅಂದರೆ ನಿರ್ದಿಷ್ಟ ಪಾಪದ ಮೇಲೆ ದೋಷಾರೋಪಣೆಯು ಕೇಂದ್ರಿಕೃತವಾಗಿರುತ್ತದೆ. ಒಬ್ಬ ಪುರುಷನಾಗಲೀ, ಸ್ತ್ರೀ ಯಾಗಲೀ ದೇವರ ಸಮ್ಮುಖದಲ್ಲಿರುವರೆಂಬುದಕ್ಕೆ ಇದೇ ಸಾಕ್ಷಿ. ನಮ್ಮ ಜೀವಿತದ ಕೆಲವು ಕ್ಷೇತ್ರಗಳಲ್ಲಿ, ಸಾಂದ್ರೀಕೃತಗೊಂಡ ವ್ಯಕ್ತಿಗತ ಪಾಪಗಳತ್ತ ಗಮನ ಹರಿಸುವುದರಲ್ಲಿ ಅಸ್ಪಷ್ಟತೆಯಿದೆ ಆದರೆ, ಪಾಪದ ಬಗ್ಗೆ ಅಸ್ಪಷ್ಟವಾದ ಪ್ರಜ್ಞೆಯಿಲ್ಲವೇ ಇಲ್ಲ. ಯಾವ ಪಾಪವನ್ನು ಪವಿತ್ರಾತ್ಮನು ನಮ್ಮ ಪ್ರಜ್ಞೆಗೆ ತರುವನೋ, ಅಂಥಾ ಪಾಪದ ಬಗ್ಗೆ ದೇವರು ನಮ್ಮ ಮೇಲೆ ದೋಷಾರೋಪಣೆ ಮಾಡಲು ಪ್ರಾರಂಭಿಸುತ್ತಾನೆ; ಆ ಒಂದು ವಿಷಯಾಂಶದಲ್ಲಿ ನಾವು ದೋಷಾರೋಪಣೆಯನ್ನು ಒಪ್ಪಿ ಕೊಂಡು ದೇವರಿಗೆ ವಿಧೇಯರಾದರೆ, ಆಗ ಆತನು ನಮ್ಮೊಳಗೆ ಮರೆಯಾಗಿರುವ ಸಾಂದ್ರೀಕೃತ ಗೊಂಡ ಮಹಾಪಾಪದ ಸ್ವಭಾವವನ್ನರಿಯುವಂತೆ ನಮ್ಮನ್ನು ನಡೆಸುತ್ತಾನೆ. ಪ್ರಜ್ಞಾಪೂರ್ವಕವಾಗಿ ಆತನ ದಿವ್ಯ ಪ್ರಸನ್ನತೆಯ ಬಗ್ಗೆ ನಮಗೆ ಅರಿವಿದ್ದಾಗ ದೇವರು ನಮ್ಮನ್ನು ನಡಿಸಿಕೊಳ್ಳುವ ರೀತಿಯೇ ಇದು.

ಸಾಂದ್ರೀಕೃತ ಪಾಪದ ಕಡೆಗೆ ಗಮನವೀಯುವ ಅನುಭವವು, ಮಹಾಭಕ್ತನ ಇಲ್ಲವೇ ಅಲ್ಪ ಭಕ್ತನ ಜೀವನದಲ್ಲಿ ನಿಜವಿರುವಂತೆ, ಮಹಾಪಾಪಿಯ ಇಲ್ಲವೇ ಅಲ್ಪ ಪಾಪಿಯ ಜೀವಿತ ದಲ್ಲಿಯೂ ನಿಜವಿರುತ್ತದೆ. ಇಂಥಾ ಅನುಭವ ದರ್ಶನದ ಏಣಿಯ ಪ್ರಥಮ ಮೆಟ್ಟಿಲ ಮೇಲೆ ನಿಂತ ವ್ಯಕ್ತಿಯು ಹೇಳಬಹುದು - ''ನಾನು ಎಲ್ಲಿ ತಪ್ಪಿದೆನೋ ನನಗೆ ಗೊತ್ತಿಲ್ಲ''; ಆದರೆ ಖಚಿತವಾಗಿ ಅದು ಯಾವ ವಿಷಯದಲ್ಲಿ, ಯಾವ ಕ್ಷೇತ್ರದಲ್ಲಿ ಎಂಬುದನ್ನು ಪರಿಶುದ್ಧಾತ್ಮನು ಅವನಿಗೆ ಬೆರಳು ತೋರಿಸಿ ತಿಳಿಸುತ್ತಾನೆ. ಯೆಶಾಯನಿಗಾದ ದೇವರ ಪರಿಶುದ್ಧತೆಯ ದಿವ್ಯ ದರ್ಶನದ ಪರಿಣಾಮ ವೆಂದರೆ, ಅದು 'ನಾನು ಹೊಲಸು ತುಟಿಯವನು' ಎಂಬುವ ಸತ್ಯದ ಕಡೆಗೆ ಗಮನವೀಯುವಂತೆ ಮಾಡಿತು. ''ಇಗೋ, ಇದು ನಿನ್ನ ತುಟಿಗಳಿಗೆ ತಗಲಿತು; ನಿನ್ನ ದೋಷವು ನೀಗಿತು, ನಿನ್ನ ಪಾಪಕ್ಕೆ ಪ್ರಾಯಶ್ಚಿತ್ತವಾಯಿತು''ಅಂದನು (ಯೆಶಾಯ 6-7) ಸಾಂದ್ರೀಕೃತಗೊಂಡ ಪಾಪಕ್ಕೆ ಶುದ್ಧೀಕರಿಸುವ ಅಗ್ನಿಯನ್ನು ತಗುಲಿಸಬೇಕು.

# ದೇವರ ದೊಡ್ಡ ''ಬೇಡ''ಗಳಲ್ಲೊಂದು

**''ಉರಿಗೊಳ್ಳಬೇಡ, ಕೆಡುಕಿಗೆ ಕಾರಣವಾದೀತು'' - (ಕೀರ್ತನೆ - 37:8)**

ಉರಿಗೊಳ್ಳುವಿಕೆ ಎಂದರೆ, ಆತ್ಮೀಕವಾಗಿ, ಮಾನಸಿಕವಾಗಿ ಅಸ್ತವ್ಯಸ್ತಗೊಂಡಿರುವ ಒಂದು ದರಿದ್ರತೆ. ''ಉರಿಗೊಳ್ಳಬೇಡ'' ಎಂದು ಹೇಳುವುದು ಒಂದು ವಿಷಯವಾದರೆ, ಉರಿಗೊಳ್ಳಲು ಸಾಧ್ಯವಾಗದೇ ಇರುವ ಸ್ವಭಾವವನ್ನು ನೀನು ಹೊಂದಿರುವುದು ವಿಶೇಷವಾದ ಮತ್ತೊಂದು ವಿಷಯ. ನನ್ನ ಸ್ವಂತಗೂಡು ಅಸ್ತವ್ಯಸ್ತವಾಗುವ ತನಕ, ಬೇರೆ ಬಹಳಷ್ಟು ಜನರು ಅನುಭವಿಸುತ್ತಿರುವ ಮಾನಸಿಕ ಕ್ಷೋಭೆ, ಯಾತನೆಗಳಿಗೆ ನಾವೂ ಒಳಗಾಗುವ ತನಕ, ''ಯೆಹೋವನ ಸನ್ನಿಧಿಯಲ್ಲಿ ಶಾಂತವಾಗಿ ಆತನಿಗೋಸ್ಕರ ಕಾದಿರು'' (ಕೀರ್ತನೆ 37:7) ಎಂದು ಸಂತೈಸುವ ಮಾತನಾಡುವುದು ಬಹು ಸುಲಭ. ನಮ್ಮಲ್ಲಿಯೇ ಅಸ್ತವ್ಯಸ್ತತೆಯುಂಟಾದ ನಂತರವೂ ಶಾಂತನಾಗಿ ಕಾದಿರಲು ಸಾಧ್ಯವೇ? ಈ ಒಂದು ''ಬೇಡವೆಂಬುದು'' - ಇಂತಹ ಪರಿಸ್ಥಿತಿಗಳಲ್ಲಿ ಕಾರ್ಯ ಮಾಡದಿದ್ದರೆ ಬೇರಿನ್ನೆಲ್ಲೂ ಅದು ಕಾರ್ಯವೆಸಗಲಾರದು. ಈ ಒಂದು ''ಬೇಡ''ವು ನಮ್ಮ ಸಂಕಷ್ಟಗಳಲ್ಲಿಯೂ, ಗೊಂದಲದ ಸ್ಥಿತಿಗತಿಗಳ ಕಾಲದಲ್ಲಿಯೂ ಹಾಗೂ ನಮ್ಮ ಸಮಾಧಾನದ ದಿನಗಳಲ್ಲಿಯೂ ಅದು ಕಾರ್ಯವೆಸಗುತ್ತಿರಬೇಕು, ಇಲ್ಲವಾದರೆ ಅದೆಂದಿಗೂ ಕಾರ್ಯಮಾಡುವುದಿಲ್ಲ. ನಿನ್ನದೊಂದು ನಿರ್ದಿಷ್ಟ ವಿಷಯದೊಳಗೆ ಈ ''ಬೇಡ''ವು ಕಾರ್ಯವೆಸಗದಿದ್ದರೆ, ಬೇರೆಯವರ ವಿಷಯಗಳಲ್ಲಿಯೂ ಸಹಾ ಇದು ಕಾರ್ಯವೆಸಗು ವುದಿಲ್ಲ. ಶಾಂತನಾಗಿ ಆತನಿಗೋಸ್ಕರ ಕಾದುಕೊಂಡಿರುವಿಕೆಯು, ನಮ್ಮ ಬಾಹ್ಯ ಪರಿಸ್ಥಿತಿಗಳನ್ನು ಅವಲಂಬಿಸಿ ರುವುದಿಲ್ಲ. ಅದು ದೇವರೊಂದಿಗಿರುವ ನಿನ್ನ ಸಂಬಂಧವನ್ನು ಮಾತ್ರ ಅವಲಂಭಿಸಿರುತ್ತದೆ.

ಅನಾವಶ್ಯಕವಾಗಿ ಚಿಂತಿಸುವುದು ಪಾಪವೆಸಗುವುದರಲ್ಲಿ ಕೊನೆಗೊಳ್ಳುತ್ತದೆ. 'ಒಂದಿನಿತು ಕಳವಳ, ಒಂದಿಷ್ಟು ಚಿಂತೆಗಳು ನಾವೆಷ್ಟು ಬುದ್ಧಿವಂತರೆಂಬುದನ್ನು ಸೂಚಿಸುತ್ತವೆ' ಎಂದು ನಾವು ಊಹಿಸುತ್ತೇವೆ; ಆದರೆ ವಾಸ್ತವವಾಗಿ ಅದಕ್ಕಿಂತಲೂ ಹೆಚ್ಚಾಗಿ 'ನಾವೆಷ್ಟು ದುಷ್ಟರು' ಎಂಬುದನ್ನು ಅವು ಸೂಚಿಸುತ್ತವೆ. ಸ್ವೇಚ್ಛಾಮಾರ್ಗದಲ್ಲಿ ನಡೆಯುವ ನಮ್ಮ ನಿರ್ಧಾರದಿಂದಲೇ ಈ ಉರಿಗೊಳ್ಳುವಿಕೆ ಹುಟ್ಟಿಕೊಳ್ಳುತ್ತದೆ. ಯೇಸುಸ್ವಾಮಿಯು ಎಂದೂ ಚಿಂತಾಕ್ರಾಂತನಾಗಿರಲಿಲ್ಲ ಹಾಗೂ ಕಳವಳ ಗೊಂಡಿರಲಿಲ್ಲ, ಯಾಕೆಂದರೆ ಆತನು ತನ್ನ ಸ್ವಂತ ಉದ್ದೇಶಗಳನ್ನು ನೆರವೇರಿಸಿ ಕೊಳ್ಳಲು ನಿರ್ಧರಿಸಲಿಲ್ಲ. ಆತನು ದೇವರ ಉದ್ದೇಶಗಳನ್ನು ನೆರವೇರಿಸುವುದಕ್ಕಾಗಿಯೇ ಜೀವಿಸಿದನು. ದೇವರ ಮಗು ನೀನಾಗಿದ್ದರೆ 'ಉರಿಗೊಳ್ಳುವಿಕೆಯು' ಕೇವಲ ದುಷ್ಟತನವಾಗಿದೆ.

ನೀನಿರುವ ಸದ್ಯದ ಪರಿಸ್ಥಿತಿಗಳು ದೇವರಿಗೆ ನೀಗಲಾರದಷ್ಟು ಬೃಹತ್ತಾದವುಗಳೆಂಬ ಭಾವನೆಗೆ ನೀನೇನಾದರೂ ನಿನ್ನ ಮೂರ್ಖ ಆತ್ಮದಲ್ಲಿ ಆಸರೆ ಕೊಟ್ಟಿರುವಿಯೋ? ನಿನ್ನ ಎಲ್ಲಾ ಊಹಾ ಪೋಹಗಳನ್ನು ಒಂದು ಬದಿಗಿಟ್ಟು ''ಸರ್ವಶಕ್ತನ ಆಶ್ರಯದಲ್ಲಿ ಸುರಕ್ಷಿತನಾಗಿರುವನು'' (ಕೀರ್ತನೆ 91:1) ಎಂಬುದನ್ನು ನಂಬಿಕೊಂಡು ಬದುಕುತ್ತಿರಬೇಕು. 'ಆ ಒಂದು ವಿಷಯದಲ್ಲಿ' ನಾನು ಉರಿ ಗೊಳ್ಳುವುದೇ ಇಲ್ಲವೆಂದು ದೇವರಿಗೆ ವಿವೇಚನಾಪೂರ್ವಕವಾಗಿ ಹೇಳಿಬಿಡು. ದೇವರನ್ನು ಹೊರಗಿಟ್ಟು ನಾವು ಮಾಡುವ ಲೆಕ್ಕಾಚಾರಗಳೇ ಉರಿಗೊಳ್ಳುವಿಕೆ ಮತ್ತು ಚಿಂತೆಗಳನ್ನು ಹುಟ್ಟಿಸುತ್ತವೆ.

# ದೇವರನ್ನು ತಪ್ಪಿಸಿ ಲೆಕ್ಕ ಹಾಕಬೇಡ

**''ನಿನ್ನ ಭೂಯಾತ್ರೆಯ ಚಿಂತೆಯನ್ನು ಯಹೋವನಿಗೆ ವಹಿಸಿ ಬಿಟ್ಟು, ಭರವಸದಿಂದಿರು, ಆತನೇ ಅದನ್ನು ಸಾಗಿಸುವನು'' - (ಕೀರ್ತನೆ - 37:5)**

(ದೇವರನ್ನು ಬಿಟ್ಟು ಲೆಕ್ಕ ಹಾಕಬೇಡ)

ದೇವರನ್ನು ಗಣನೆಗೆ ತೆಗೆದುಕೊಳ್ಳದೆ ನಾವು ಮಾಡಿದ ಲೆಕ್ಕಾಚಾರಗಳನ್ನು ಬುಡಮೇಲು ಮಾಡುವ ಅಸಾಧಾರಣವಾದ ಲೆಕ್ಕಾಚಾರವೊಂದು ದೇವರಲ್ಲಿದೆ ಎನಿಸುತ್ತದೆ. ಜೀವನವನ್ನು ಸಾಗಿಸುತ್ತಿರುವಾಗ, ದೇವರು ಆಯ್ಕೆ ಮಾಡದಿರುವ ಸಂದರ್ಭಗಳಲ್ಲಿ ನಾವು ಸಿಕ್ಕಿಹಾಕಿಕೊಳ್ಳುತ್ತೇವೆ, ಆಗ ಇದ್ದಕ್ಕಿದಂತೆಯೇ ತಿಳಿದು ಬರುವುದು; - ನಾವು ದೇವರನ್ನು ಬಿಟ್ಟು ಲೆಕ್ಕಾಚಾರ ಮಾಡಿದ್ದೇವೆಂಬುದು; ನಮ್ಮ ಜೀವಿತದ ಲೆಕ್ಕಾಚಾರದಲ್ಲಿ 'ದೇವರು' ಬಲವಾದ ಜೀವಂತ, ವಾಸ್ತವಾಂಶವೆಂಬುದನ್ನು ನಾವು ಪರಿಗಣಿಸಿರುವುದಿಲ್ಲ. ಚಿಂತಿಸುವ ಸಾಧ್ಯತೆಯಿಂದ ನಮ್ಮನ್ನು ಹೊರಗುಳಿಸುವ ಒಂದೇ ಒಂದು ವಿಷಯವೆಂದರೆ, ನಮ್ಮ ಎಲ್ಲಾ ಲೆಕ್ಕಾಚಾರಗಳಲ್ಲಿ ದೇವರು ಮಹತ್ತಾದವನೂ ಪ್ರಮುಖನೂ ಎಂದು ಲೆಕ್ಕಿಸಬೇಕು.

ನಮ್ಮ ಧಾರ್ಮಿಕ ಜೀವನದಲ್ಲಿ ದೇವರಿಗೆ ಪ್ರಥಮ ಪ್ರಾಶಸ್ತ್ಯ ನೀಡುವುದು ಸಾಂಪ್ರದಾಯಕ ವಾಗಿದೆ, ಆದರೆ ನಮ್ಮ ದೈನಂದಿನ ವ್ಯಾವಹಾರಿಕ ಸಂಗತಿಗಳಲ್ಲಿ ದೇವರಿಗೆ ಪ್ರಥಮ ಪ್ರಾಶಸ್ತ್ಯವನ್ನೀ ಯುವುದು, ಅಪ್ರಾಸಂಗೀಕವೆಂದೇ ನಾವು ಯೋಚಿಸುತ್ತೇವೆ. ದೇವರ ಸನ್ನಿಧಿಗೆ ಬರುವ ಮೊದಲು ಭಾನುವಾರದ ಮೂಡ್ - ದೇವಾಲಯಕ್ಕೆ ಹೋಗಲು ಸಿದ್ಧಮಾಡಿಕೊಳ್ಳುವ ಮತ್ತು ತೋರಿಕೆಯ ಆತ್ಮೀಕ ಭಕ್ತಿ ಭಾವಗಳಿದ್ದರೆ ಸಾಕು ಎಂದು ನಾವು ಊಹಿಸಿದರೆ, ನಾವೆಂದಿಗೂ ಆತನ ಬಳಿಗೆ ಬರುವುದೇ ಇಲ್ಲ. ನಾವಿರುವ ಆ ಯಥಾಸ್ಥಿತಿಯಲ್ಲಿಯೇ ಆತನ ಬಳಿಗೆ ಬರಬೇಕು.

(ದುಷ್ಟತನವನ್ನು ದೃಷ್ಟಿ ಯಲ್ಲಿರಿಸಿಕೊಂಡು ಲೆಕ್ಕ ಹಾಕಬೇಡ)

ಅಂದರೆ ನಮ್ಮ ಜೀವಿತದ ಲೆಕ್ಕಾಚಾರಗಳನ್ನು ಮಾಡುವಾಗ, ಕೆಡುಕನ್ನು ಲೆಕ್ಕಕ್ಕೆ ತರಲೇಕೂಡ ದೆಂಬುದೇ ದೇವರ ಇಚ್ಛೆಯೋ ? ''ಪ್ರೀತಿಯು ........ ಮನಸ್ಸಿನಲ್ಲಿ ಇಟ್ಟುಕೊಳ್ಳುವುದಿಲ್ಲ'' (1 ಕೊರಿಂಥ 13:4-5) ಪಾಪದ ಅಸ್ತಿತ್ವದ ಬಗ್ಗೆ ಪ್ರೀತಿಯು ಅಜ್ಞವಾಗಿಲ್ಲ, ಆದರೆ ಪ್ರೀತಿಯು, ಪಾಪವನ್ನು ಲೆಕ್ಕಾಚಾರದ ಒಂದು ಅಪವರ್ತನವೆಂದು - ಪ್ರಾಮುಖ್ಯವೆಂದು ಗಣನೆಗೆ ತೆಗೆದುಕೊಳ್ಳುವುದಿಲ್ಲ. ದೇವರನ್ನು ಪರಿಗಣಿಸ ದಿದ್ದಾಗ ಮಾತ್ರ ನಾವು ಕೆಡುಕನ್ನು ಪರಿಗಣಿಸುತ್ತೇವೆ. ಅದನ್ನು ದೃಷ್ಟಿಯಲ್ಲಿಟ್ಟುಕೊಂಡು ನಮ್ಮ ಎಲ್ಲಾ ತರ್ಕ, ನಿರೀಕ್ಷಣೆಗಳನ್ನು ಆ ನೆಲೆಯಿಂದಲೇ ಮನನ ಮಾಡುತ್ತೇವೆ.

(ಮುಂದೆ ಬರಬಹುದಾದ ಬಿಕ್ಕಟ್ಟಿನ ದಿನಗಳನ್ನು ದೃಷ್ಟಿಯಲ್ಲಿಟ್ಟು ಕೊಂಡು ಲೆಕ್ಕ ಹಾಕಬೇಡ)

ಯೇಸುಕ್ರಿಸ್ತನಲ್ಲಿ ನೀನು ಭರವಸವುಳ್ಳವನಾಗಿದ್ದರೆ ಮುಂದೆ ಬರುವ ಕಷ್ಟದ ದಿನಗಳಿಗೋಸ್ಕರ ನಿನ್ನನ್ನು ಸಿದ್ಧಪಡಿಸಿಕೊಳ್ಳುವುದಿಲ್ಲ. ಯೇಸುಸ್ವಾಮಿಯು ಹೇಳಿದ್ದು - ''ನಿಮ್ಮ ಹೃದಯವು ಕಳವಳಗೊಳ್ಳದೆ ಇರಲಿ...'' (ಯೋಹಾನ 14:11) ದೇವರು ನಿನ್ನನ್ನು ಕಳವಳಗೊಳ್ಳದೇ ಇರುವಂತೆ ಬಿಡುವುದಿಲ್ಲ. ಅದೊಂದು ಆಜ್ಞೆ ''...ಗೊಳ್ಳದೇ ಇರಲಿ'' (Let not) ಹಾಗೆ ಇರಬೇಕಾದರೆ ನೂರೊಂದು ಸಲ ನಿನ್ನನ್ನು ನೀನು ಎಳೆದಾಡಿಕೊಂಡು ಮೇಲಕ್ಕೇಳಬೇಕು. ಎಷ್ಟರವರೆಗೆಂದರೆ ದೇವರನ್ನು ಮುಂದಿಟ್ಟು ಕೊಳ್ಳವತನಕ ಮತ್ತು ಆತನಿಗೆ ಪ್ರಥಮ ಪ್ರಾಶಸ್ತ್ಯವನ್ನೀಯುವ ರೂಢಿಯು ನಿನ್ನಲ್ಲಿ ಬೆಳೆಯುವ ತನಕ ಮತ್ತು ಆತನನ್ನು ದೃಷ್ಟಿಯಲ್ಲಿಟ್ಟುಕೊಂಡು ಲೆಕ್ಕಾಚಾರ ಮಾಡುವ ತನಕ - ಎಳೆದಾಡಿ ಮೇಲಕ್ಕೇಳಬೇಕು.

# ದರ್ಶನ ಮತ್ತು ಅದರ ವಾಸ್ತವಿಕತೆ

**''ಬೆಂಗಾಡು ಸರೋವರವಾಗುವುದು'' - (ಯೆಶಾಯ - 35:7)**

ಒಂದು ಸಂಗತಿಯು ನಮಗೆ ವಾಸ್ತವವೆನಿಸುವ ಮೊದಲು ಆ ಬಗ್ಗೆ ನಮಗೊಂದು ದರ್ಶನ ವಾಗಿರುತ್ತದೆ. ಅಂಥಾ ದರ್ಶನವು ವಾಸ್ತವವಾದದ್ದಾಗಿದ್ದರೂ ನಮ್ಮ ಜೀವಿತದಲ್ಲಿ ಅದಿನ್ನೂ ವಾಸ್ತವಗೊಂಡಿಲ್ಲ ವೆಂಬುದನ್ನು ನಾವು ಗ್ರಹಿಸಿದಾಗಲೇ, ಸೈತಾನನು ದುಷ್ಟ ಪ್ರಲೋಭನೆಗಳೊಂದಿಗೆ ನಮ್ಮೊಳಗೆ ಸೇರಿ ಕೊಳ್ಳುತ್ತಾನೆ. ಅಗ ದರ್ಶನವನ್ನು ವಾಸ್ತವಗೊಳಿಸಲು ಪ್ರಯತ್ನಿಸುವುದರಿಂದೇನೂ ಪ್ರಯೋಜನ ವಿಲ್ಲವೆಂದು ಹೇಳುತ್ತೇವೆ. ಆ ದರ್ಶನವು ನಮ್ಮ ಜೀವಿತದಲ್ಲಿ ನಿಜವಾಗುವುದರ ಬದಲು ಅವಮಾನದ ಕಣಿವೆಯೇ ನಮಗೆದುರಾಗುತ್ತದೆ.

ಜೀವನ ನಿರ್ಜೀವ ಅದಿರು ಅಲ್ಲ.
ಕತ್ತಲಿ ನಾಳದಿಂದ ಕಬ್ಬಿಣ ಅಗೆಯಲ್ಪಟ್ಟಿದೆ
ವಿನಾಶಕರ ಪೆಟ್ಟುಗಳಿಂದ ಬಡಿಯಲ್ಪಟ್ಟಿದೆ
ಉಪಯೋಗಾರ್ಥ ರೂಪು ಹೊಂದಿದೆ

ದೇವರು ನಮಗೆ ದರ್ಶನವೀಯುತ್ತಾನೆ, ಅನಂತರ ಆ ದರ್ಶನದಂತೆ ರೂಪಿಸಲು ಜಡಿದು ಬಡಿಯುವ ಸಲುವಾಗಿ ಕಣಿವೆಯ ಕೊಳ್ಳದಾಳಕ್ಕೆ ಕರೆದೊಯ್ಯುತ್ತಾನೆ ಮತ್ತು ಈ ಕೊಳ್ಳದಲ್ಲಿಯೇ ನಮ್ಮಲ್ಲಿ ಅನೇಕರು ಮೂರ್ಛೆ ಬೀಳುವರು, ಮತ್ತು ಸೋತು ಹೋಗುವರು. ನಮಗೆ ತಾಳ್ಮೆ ಇದ್ದದ್ದೇಯಾದರೆ, ದೇವರು ದಯಪಾಲಿಸಿದ ಪ್ರತಿಯೊಂದು ದರ್ಶನವೂ ನಮ್ಮ ಜೀವಿತದಲ್ಲಿ ಘಟಿಸಿ ಬಿಡುತ್ತದೆ. ನಮ್ಮನ್ನು ರೂಪಿಸಲು ದೇವರಿಗಿರುವ ಅಗಾಧವಾದ ಬಿಡುವಿನ ಕಾಲವನ್ನು ಕುರಿತು ಯೋಚಿಸು! ಆತನು ಆತುರ ದಲ್ಲಿಲ್ಲವೇ ಇಲ್ಲ . ನಾವಾದರೋ ಯಾವಾಗಲೂ ಹುಚ್ಚೆದ್ದ ಆತುರದ ಗಡಿಬಿಡಿಯಲ್ಲಿರುತ್ತೇವೆ. ನಾವು ಇನ್ನೂ ದರ್ಶನದ ಮಹಿಮಾ ಬೆಳಕಿನಲ್ಲಿ ಇರುವಾಗಲೇ ಕಾರ್ಯವೆಸಗಲು ಮುಂದೆ ಸಾಗುತ್ತೇವೆ, ಆದರೆ ದರ್ಶನವಿನ್ನೂ ನಮ್ಮ ಜೀವಿತದಲ್ಲಿ ನಿಜವೆನಿಸಿರುವುದಿಲ್ಲ; ದರ್ಶನವು ನಮ್ಮಲ್ಲಿ ವಾಸ್ತವಗೊಳ್ಳಲು ನಾವು ಯೋಗ್ಯರೆಂದು ದೇವರು ಭರವಸೆ ಹೊಂದುವ ಸ್ಥಾನವನ್ನು ನಾವು ತಲುಪುವಂತೆ ಆತನು ನಮ್ಮನ್ನು ಕಣಿವೆ ಯೊಳಗೆ ಕರೆದೊಯ್ದು, ಬೆಂಕಿ ಮತ್ತು ಪ್ರವಾಹಗಳಲ್ಲಿ ನುಗ್ಗಿಸುತ್ತಾನೆ; ಅಲ್ಲಿ ನಮ್ಮನ್ನು ಜಡಿದು ಬಡಿದು ದರ್ಶನಕ್ಕೆ ತಕ್ಕುದಾದ ರೂಪಕ್ಕೆ ಪರಿವರ್ತಿಸುತ್ತಾನೆ. ನಾವು ದರ್ಶನವನ್ನು ಹೊಂದಿದಂದಿನಿಂದಲೂ, ಆದರ್ಶ ರೂಪವನ್ನು ನಾವು ಪಡೆಯುವಂತೆ, ದೇವರು ಕಾರ್ಯೋನ್ಮುಖ ನಾಗಿರುವನು, ಆದರೆ ನಾವಾದರೋ ರೂಪಿಸುವ ಆತನ ಕರಗಳಿಂದ ಪದೇ ಪದೇ ತಪ್ಪಿಸಿಕೊಂಡುಹೋಗಿ, ನಮ್ಮದೇ ಆದ ರೂಪವನ್ನು ಹೊಂದಲು ನಮ್ಮಷ್ಟಕ್ಕೆ ನಾವೇ ಜಡಿದು, ಬಡಿದುಕೊಳ್ಳಲು ಪ್ರಯತ್ನಿಸುತ್ತೇವೆ.

ದರ್ಶನವು ಗಾಳಿಗೋಪುರವಲ್ಲ, ಅದು, ನೀನೇನಾಗಿರಬೇಕೆಂದು ದೇವರು ಬಯಸುವ ದರ್ಶನ ವಾಗಿದೆ. ಆತನು ಕುಂಬಾರನಂತೆ, ಚಕ್ರದ ಮೇಲೆ ನಿನ್ನನಿರಿಸಿ ಹೇಗಾದರೂ ತಿರುಗಿಸಲಿ, ಆಗ ನೀನು ನೀನೇ ಮತ್ತು ದೇವರು ದೇವರೇ ಎಂಬುದೆಷ್ಟು ಸತ್ಯವೋ, ಅಷ್ಟೇ ಸತ್ಯವಾಗಿ ಆ ದರ್ಶನದಂಥಾ ಸತ್ಯರೂಪಕ್ಕೆ ನೀನು ಮಾರ್ಪಡುವಿ. ಆದರೆ ಇಂಥಾ ಕಾರ್ಯಗತಿಯ ಸಮಯದಲ್ಲಿ ಎದೆಗುಂದಬೇಡ. ಎಂದಾದರೂ ದೇವರಿಂದ ದರ್ಶನವು ನಿನಗಾಗಿದ್ದರೆ, - ನಿನಗಿಷ್ಟ ಬಂದಂತೆ ನೀನಾಗಿರಲು ಕೆಳಹಂತದಲ್ಲಿ ನೀನು ಪ್ರಯತ್ನಿಸಬಹುದು, - ಆದರೆ ಹಾಗೆ ಮಾಡಲು ದೇವರು ನಿನ್ನನ್ನು ಬಿಡುವುದೇ ಇಲ್ಲ.

# ಉದಾತ್ತ ಪ್ರಯತ್ನಗಳೆಲ್ಲವೂ ಕಷ್ಟದಾಯಕವಾಗಿರುತ್ತವೆ

**''ಇಕ್ಕಟ್ಟಾದ ಬಾಗಿಲಿನಿಂದ ಒಳಕ್ಕೆ ಹೋಗಿರಿ....... ಬಾಗಿಲು ಇಕ್ಕಟ್ಟು ದಾರಿ ಬಿಕ್ಕಟ್ಟು''**
**- (ಮತ್ತಾಯ - 7:3-14)**

ನಾವು ಯೇಸುಕ್ರಿಸ್ತನ ಶಿಷ್ಯರಾಗಿ ಬಾಳಬೇಕೆಂದಿದ್ದರೆ, ಉದಾತ್ತವೂ, ಆದರ್ಶನೀಯವೂ ಆದ ಎಲ್ಲಾ ವಿಷಯಗಳು ಕಠಿಣವೆಂಬುದನ್ನು ನೆನಪಿಡಬೇಕು. ಕ್ರಿಸ್ತೀಯ ಜೀವಿತವು ಆನಂದಕರ ಕಷ್ಟತಮವಾಗಿದೆ, ಈ ಕಷ್ಟವು ನಮ್ಮನ್ನು ಮೂರ್ಛೆಗೊಳಿಸುವುದಿಲ್ಲ ಮತ್ತು ನಮ್ಮ ಶಕ್ತಿಯನ್ನು ಕುಂದಿಸುವುದಿಲ್ಲ, ಆದರದು ನಾವು ಜಯಶಾಲಿಗಳಾಗುವಂತೆ ಹುರುಪನ್ನೀಯುತ್ತದೆ. ನನ್ನ ಆದ್ಯಂತ ವೆಲ್ಲವೂ ಆತನ ಪರಮೋನ್ನತತೆಗಾಗಿಯೇ ಎಂಬಂತೆ ನಮ್ಮನ್ನು ಮಾರ್ಪಡಿಸಿರುವ ಯೇಸುಕ್ರಿಸ್ತನ ಅಮೋಘವಾದ ರಕ್ಷಣಾ ಕಾರ್ಯಕ್ಕಾಗಿ ಆತನನ್ನು ಶ್ಲಾಘಿಸುತ್ತಿರುವೆವೋ ?

ಯೇಸುಕ್ರಿಸ್ತನ ಪ್ರಾಯಶ್ಚಿತ್ತ ಯಜ್ಞದ ಮೂಲಕ ದೇವರು ತನ್ನ ಅಪಾರ ಕೃಪೆಯಿಂದ ಮಾನವ ನನ್ನು ರಕ್ಷಿಸುತ್ತಾನೆ. ''ದೇವರೇ, ತನ್ನ ಸುಚಿತ್ತವನ್ನು ನೆರವೇರಿಸಬೇಕೆಂದು ನಮ್ಮಲ್ಲಿ ಉದ್ದೇಶ ವನ್ನೂ, ಪ್ರಯತ್ನವನ್ನೂ ಉಂಟುಮಾಡುವವನಾಗಿದ್ದಾನೆ'' (ಫಿಲಿಪ್ಪಿ 2:13); ಆದರೆ ನಾವು ಹೆಚ್ಚಾದ ಮನೋಭೀತಿಯಿಂದ ನಡಗುವವರಾಗಿ ನಮ್ಮ ರಕ್ಷಣೆಯನ್ನು, ನಮ್ಮ ದೈನಂದಿನ ಜೀವನದಲ್ಲಿ ನೈಜವಾಗಿ ಸಾಧಿಸಬೇಕು (ಫಿಲಿಪ್ಪಿ 2:12 ನೋಡಿರಿ) ಆತನು ಆಜ್ಞಾಪಿಸಿರುವುದನ್ನು, ಆತನು ಮಾಡಿದ ವಿಮೋಚನಾ ಕಾರ್ಯದ ತಳಹದಿಯ ಮೇಲೆ ಒಮ್ಮೆ ಸಾಧಿಸಲಾರಂಭಿಸಿದರೆ, ಆತನ ಆಜ್ಞೆಗಳನ್ನು ನಾವು ಪಾಲಿಸಬಲ್ಲೆವೆಂದು ನಮಗೆ ತಿಳಿಯುತ್ತದೆ. ಒಂದು ವೇಳೆ ನಾವು ವಿಫಲರಾದರೆ, ಅದಕ್ಕೆ ಕಾರಣ, ಅದನ್ನು ಯೋಗ್ಯ ರೀತಿಯಲ್ಲಿ ಸಾಧನೆ ಮಾಡಿ ರುವುದಿಲ್ಲ. ದೇವರು ನಮ್ಮಲ್ಲಿ ಇರಿಸಿರುವುದನ್ನು ನಾವು ಯೋಗ್ಯ ರೀತಿಯಲ್ಲಿ ಸಾಧನೆ ಮಾಡಿರುವೆವೋ ಇಲ್ಲವೋ ಎಂಬುದನ್ನು ಬಿಕ್ಕಟ್ಟುಗಳು ಬಯಲು ಪಡಿಸುತ್ತದೆ. ದೇವರ ಆತ್ಮಕ್ಕೆ ನಾವು ವಿಧೇಯರಾದರೆ ದೇವರು ತನ್ನ ಆತ್ಮನ ಮೂಲಕ ನಮ್ಮೊಳಗೆ ಇರಿಸಿರುವುದನ್ನು ನಮ್ಮ ಬಾಹ್ಯ ಜೀವನದಲ್ಲಿ ಸಾಧಿಸಿದರೆ, ನಿಜವಾದ ಬಿಕ್ಕಟ್ಟು ಉಂಟಾದಾಗ ದೇವರ ಕೃಪೆಯೂ ಮತ್ತು ನಮ್ಮ ಸ್ವಭಾವವೂ ಜೊತೆ ಜೊತೆಯಾಗಿ ಅದನ್ನು ಎದುರಿಸುತ್ತಿರುವುದನ್ನು ನಾವು ಕಾಣುತ್ತೇವೆ.

ಕಠಿಣವಾದ ಕಾರ್ಯಗಳನ್ನು ನಾವು ಕೈಗೆತ್ತಿಕೊಳ್ಳುವಂತೆ ದೇವರು ಮಾಡಿರುವುದಕ್ಕಾಗಿ ಆತನಿಗೆ ನಾವು ಕೃತಜ್ಞರಾಗಿರೋಣ ! ಆತನು ಮಾಡಿದ ರಕ್ಷಣಾ ಕಾರ್ಯವು ಬಹು ಸಂತಸದ ಸಂಗತಿ, ಆದರೆ ಅದು ವೀರಾವೇಶದ ಮತ್ತು ಪರಿಶುದ್ಧತೆಯ ಸಂಗತಿಯೂ ಹೌದು. ನಾವೆಷ್ಟು ಅರ್ಹರೆಂಬುದನ್ನು ಅದು ಪರೀಕ್ಷೆಗೊಡ್ಡು ತ್ತದೆ. ಯೇಸುಕಿಸ್ತನು ''ಬಹುಮಂದಿ ಪುತ್ರರನ್ನು ಪ್ರಭಾವಕ್ಕೆ ಸೇರಿಸು''ತ್ತಿದ್ದಾನೆ (ಇಬ್ರಿ 2:10), ಪುತ್ರತ್ವದ ಅವಶ್ಯಕತೆಗಳಿಂದ ದೇವರು ನಮ್ಮನ್ನು ತಪ್ಪಿಸುವುದಿಲ್ಲ. ದೇವರ ಕೃಪೆಯು ನಮ್ಮನ್ನು ಅತಿ ಮುದ್ದು ಮಾಡಿ ಹಾಳಾದ ಮಕ್ಕಳಂತಾಗಲು ಬಿಡದೆ, ಎಲ್ಲಾ ಸ್ತ್ರೀ ಪುರುಷರನ್ನೂ ಕ್ರಿಸ್ತನ ಕುಟುಂಬದ ಸಾರೂಪ್ಯಕ್ಕೆ ರೂಪಿಸುತ್ತದೆ. ನಮ್ಮ ದೈನಂದಿನ ಜೀವನದಲ್ಲಿ ಯೇಸುಸ್ವಾಮಿಯ ಶಿಷ್ಯರಾಗಿ ಉದಾತ್ತ ಜೀವಿತವನ್ನು ಬಾಳಲು ಅಗಾಧ ಶಿಸ್ತು ಬೇಕಾಗುತ್ತದೆ, ಆದರೂ ಉದಾತ್ತರಾಗಿರಲು ನಾವು ಪ್ರಯತ್ನ ಮಾಡುವುದು ಅಷ್ಟೇ ಅತ್ಯಗತ್ಯವಾಗಿದೆ.

# ನಿಷ್ಠನಾಗಿರುವ ಇಚ್ಛೆ

**''ಯಾರನ್ನು ಸೇವಿಸಬೇಕೆಂದಿದ್ದೀರಿ? ಈ ಹೊತ್ತೇ ಆರಿಸಿಕೊಳ್ಳಿರಿ'' - (ಯೆಹೋಶುವ 24:5)**

ಸಂಪೂರ್ಣನಾದ ವ್ಯಕ್ತಿಯ ಕ್ರಿಯೆಗಳಲ್ಲಿ ಅವನ ಸಂಕಲ್ಪಶಕ್ತಿಯು ಸಾಕಾರ ಗೊಂಡಿರುತ್ತದೆ. ನಾನು ನನ್ನ ಸಂಕಲ್ಪ ಶಕ್ತಿಯನ್ನು ಬಿಟ್ಟುಕೊಡುವುದಿಲ್ಲ-ಅದನ್ನು ಕ್ರಿಯಾತ್ಮಕವಾಗಿ ನಾನು ಉಪಯೋಗಿಸಬೇಕು. ದೇವರಿಗೆ ವಿಧೇಯನಾಗಿರಲು, ದೇವರ ಆತ್ಮವನ್ನು ಹೊಂದಲು ಇಚ್ಛೈಸಬೇಕು. ದೇವರು ನಮಗೆ ಸತ್ಯದ ದರ್ಶನವಿತ್ತಾಗ, ಆತನೇನು ಮಾಡುತ್ತಾನೆಂಬುದು ಪ್ರಶ್ನೆಯಲ್ಲ, ಆದರೆ ನಾವೇನು ಮಾಡಲಿಚ್ಛಿಸುತ್ತೇವೆ ಎನ್ನುವುದೇ ಪ್ರಶ್ನೆ. ದೇವರು ಕೆಲವು ದೊಡ್ಡ ಯೋಜನೆಗಳನ್ನು ನಮ್ಮ ಮುಂದಿರಿಸುತ್ತಿದ್ದಾನೆ, ಆಗ ನಾವು ಮಾಡಬಹುದಾದ ಉತ್ತಮ ಕಾರ್ಯವೆಂದರೆ, ಇದಕ್ಕೂ ಮೊದಲು ದೇವರು ನಿನ್ನನ್ನು ಸ್ಪರ್ಶಮಾಡಿದಾಗ ನೀನೇನು ಮಾಡಿದೆ ಎಂಬುದನ್ನು ಜ್ಞಾಪಿಸಿಕೊಳ್ಳಬೇಕು - ನೀನು ರಕ್ಷಣೆ ಹೊಂದಿದ ಸಮಯವನ್ನು ಸ್ಮರಿಸಬೇಕು, ಯೇಸುಕ್ರಿಸ್ತನ ಪ್ರಥಮ ದರ್ಶನವು ನಿನಗುಂಟಾದ ಸಮಯವನ್ನು, ಇಲ್ಲವೇ ಯಾವುದೋ ಒಂದು ಸತ್ಯದ ಗ್ರಹಿಕೆಯು ನಿನಗುಂಟಾದ ಸಮಯವನ್ನು ನೆನಸಿಕೊಳ್ಳಬೇಕು. ದೇವರಿಗೆ ನಿಷ್ಠೆಯುಳ್ಳವನಾಗಿ ಆತನಿಗೆ ಒಳಪಡುವುದು ಅಂದು ನಿನಗೆ ಸುಲಭವಾಗಿತ್ತು; ಈಗಲೂ ದೇವರ ಆತ್ಮನು ಹೊಸ ಯೋಜನೆಗಳನ್ನು ನಿನ್ನ ಮುಂದಿಟ್ಟಾಗ, ಕೂಡಲೇ ಅಂಥಾ ಸಮಯಗಳನ್ನು ಸ್ಮರಿಸಬೇಕು.

''ಯಾರನ್ನು ಸೇವಿಸಬೇಕೆನ್ನುವುದನ್ನು ಈ ಹೊತ್ತೇ ಆರಿಸಿಕೊಳ್ಳಿರಿ'' ಇದು ನೀನು ಆಯ್ಕೆ ಮಾಡುವ ಒಂದು ವಿವೇಕಯುಕ್ತ, ಲೆಕ್ಕಾಚಾರ. ಅಷ್ಟು ಸುಲಭವಾಗಿ ನೀನಾಗಿಯೇ ಅದರೊಳಗೆ ಜಾರಿಕೊಂಡು ಹೋಗುವ ಸಂಗತಿ ಇದು ಅಲ್ಲ ; ಇದನ್ನು ನೀನು ನಿರ್ಧರಿಸುವ ತನಕ ನಿನ್ನ ಜೀವಿತದ ಉಳಿದೆಲ್ಲಾ ವಿಷಯಗಳೂ ತಡೆ ಹಿಡಿಯಲ್ಪಟ್ಟಿವೆ. ನಿನ್ನ ಮುಂದಿರುವ ಯೋಜನೆಯ ಪ್ರಸ್ತಾಪವು ಅದು ನಿನ್ನ ಮತ್ತು ದೇವರ ನಡುವೆ ಮಾತ್ರವಿದೆ; ಈ ಪ್ರಸ್ತಾಪದಲ್ಲಿ ''ಮನುಷ್ಯರ ಆಲೋಚನೆಯನ್ನು ವಿಚಾರಿಸಬೇಡ'' (ಗಲಾತ್ಯ 1:16) ಪ್ರತಿಯೊಂದು ಹೊಸ ಹೊಸ ಪ್ರಸ್ತಾಪನೆಗಳು ಬಂದಾಗಲೆಲ್ಲಾ ಜನರು ಹೆಚ್ಚು ಹೆಚ್ಚಾಗಿ ಆ ಪ್ರಸ್ತಾಪನೆಗಳಿಂದ ಹೊರಗೇ ಇರುತ್ತಾ ಪ್ರತ್ಯೇಕಿಸಿಕೊಳ್ಳುವರು, ಅಂಥಾ ಪರಿಸ್ಥಿತಿ ಗಳಲ್ಲಿಯೇ ನಿನಗೆ ಬಳಲಿಕೆಯುಂಟಾಗುವುದು. ತನ್ನ ಭಕ್ತರು ಕೊಡುವ ಅಭಿಪ್ರಾಯಗಳು ನಿನಗೆ ಪ್ರಾಮುಖ್ಯವಾಗಿಯೂ ಯೋಗ್ಯವಾಗಿಯೂ ಕಾಣುವಂತೆ ದೇವರು ಮಾಡುತ್ತಾನೆ; ಆದಾಗ್ಯೂ ನೀನು ತೆಗೆದುಕೊಳ್ಳಬೇಕಾಗಿರುವ ಮುಂದಿನ ಕ್ರಮವನ್ನು ಅವರು ಅರಿತಿರುವುದು ಸ್ವಲ್ಪ ಮಾತ್ರವೇ ಎಂಬ ಅಭಿಪ್ರಾಯದಿಂದ ನೀನು ಕ್ರಮೇಣ ದೂರಸರಿದು ಬಿಡುವೆ. ದೇವರು ನಿನ್ನನ್ನೆಲ್ಲಿಗೆ ಕೊಂಡೊಯ್ಯುತ್ತಿರುವನೋ ಅದನ್ನು ತಿಳುಕೊಳ್ಳುವದು ನಿನ್ನ ಕೆಲಸವಲ್ಲ. ತನ್ನನ್ನು ತಾನೇ ನಿನಗೆ ವಿವರಿಸುವುದಷ್ಟನ್ನೇ ದೇವರು ಮಾಡುತ್ತಾನೆ.

ಸ್ಪಷ್ಟವಾಗಿ ಆತನಿಗೆ ಹೇಳಿಬಿಡು-''ನಾನು ನಿನಗೆ ನಿಷ್ಠೆಯುಳ್ಳವನಾಗಿರುತ್ತೇನೆ'' ಆಕ್ಷಣವೇ ಯೇಸುಕ್ರಿಸ್ತನಿಗೆ ನಿಷ್ಠೆಯಿಂದಿರುವಿಕೆಯನ್ನು ನೀನು ಆಯ್ಕೆ ಮಾಡಿಕೊಂಡಿರುತ್ತೀ, ಮತ್ತು ಅದಕ್ಕೆ ನಿನಗೆ ನೀನೇ ಸಾಕ್ಷಿಯಾಗಿರುವಿ, ''ನೀವು ಯೆಹೋವನ ಸೇವೆಯನ್ನು ಆರಿಸಿಕೊಂಡಿರುವುದಕ್ಕೆ ನೀವೇ ಸಾಕ್ಷಿಗಳು'' (ಯೆಹೋಶುವ 24:22) ಬೇರೆ ಕ್ರೈಸ್ತರ ಆಲೋಚನೆಯನ್ನು ವಿಚಾರಿಸಬೇಡ, ಆದರೆ ಆತನ ಮುಂದೆ ಘೋಷಿಸು-''ನಾನು ನಿನ್ನನ್ನೇ ಸೇವಿಸುತ್ತೇನೆ, ನಾನು ನಿನಗೇ ನಿಷ್ಠೆಯುಳ್ಳವನಾಗಿರುತ್ತೇನೆ'' ನಿಷ್ಠೆಯುಳ್ಳವನಾಗಿರಲು ಸಂಕಲ್ಪಮಾಡು ಮತ್ತು ನಿಷ್ಠಾವಂತರಾಗಿರುವವರಿಗೆ ಮನ್ನಣೆ ತೋರಿಸು.

# ನಿನ್ನನ್ನು ನೀನು ಪರೀಕ್ಷಿಸಿಕೊಳ್ಳಬಲ್ಲೆಯೋ?

**''ನೀವು ಯಹೋವನನ್ನು ಸೇವಿಸಲಾರಿರಿ'' - (ಯೆಹೋಶುವ - 24:19)**

ದೇವರೊಬ್ಬನ ಮೇಲೆ ಹೊರತು ಬೇರೊಬ್ಬರ ಮೇಲೆ ಅಥವಾ ಬೇರೆಯಾವುದೋ ಒಂದರ ಮೇಲೆ ತೃಣಮಾತ್ರದಷ್ಟಾದರೂ ಭರವಸೆಯನ್ನು ಹೊಂದಿರುವೆಯೋ ? ನಿನ್ನಲ್ಲಿರುವ ಒಂದು ಸದ್ಗುಣದ ಮೇಲೆ, ಸಂದರ್ಭಗಳ ಒಂದು ಸೆಟ್‌ಮೇಲೆ ಲವಲೇಶವಾದರೂ ನಿನಗೆ ನೆಚ್ಚಿಕೆಯುಂಟೋ ? ದೇವರು ನಿನ್ನ ಮುಂದಿರಿಸಿರುವ ನೂತನ ಪ್ರಸ್ತಾಪದ ವಿಷಯವಾಗಿ, ಅದು ಹೇಗಾದರೂ ಇರಲಿ, ನೀನು ಮಾತ್ರ ಒಂದಲ್ಲ ಒಂದು ರೀತಿಯಲ್ಲಿ ನಿನ್ನ ಮೇಲೆ ಭರವಸವುಳ್ಳವನಾಗಿರುವೆಯೋ ? ಇದೇ ಆತ್ಮ ಪರಿಶೋಧನೆಯ ಮರ್ಮ. 'ನಾನು ಪರಿಶುದ್ಧ ಜೀವಿತವನ್ನು ಬಾಳಲಾರೆ'; ಎಂದು ನೀನು ಹೇಳುವುದು ನಿಜವಿದೆ; ಆದರೂ ಯೇಸುಕ್ರಿಸ್ತನು ನಿನ್ನನ್ನ ಶುದ್ಧಿಮಾಡಬೇಕು ಎಂಬುದನ್ನು ನೀನು ನಿರ್ಧರಿಸಬಹುದು. ''ನೀವು ದೇವರನ್ನು ಸೇವಿಸಲಾರಿರಿ'' – ಆದರೂ ದೇವರ ಸರ್ವಶಕ್ತಿ ಸಾಮರ್ಥ್ಯವು ನಿನ್ನ ಮೂಲಕ ಕಾರ್ಯ ವೆಸಗುವಂಥಾ ಸ್ಥಾನದಲ್ಲಿ ನಿನ್ನನ್ನು ನೆಲೆಗೊಳಿಸಲು ದೇವರಿಗೆ ನಿನ್ನನ್ನು ನೀನು ಒಪ್ಪಿಸಿ ಕೊಡಬಹುದು. ದೇವರು ತನ್ನ ಅದ್ಭುತ ಜೀವಿತವನ್ನು ನಿನ್ನಲ್ಲಿ ಸಾಕ್ಷಾತ್ಕಾರಗೊಳಿಸಲು ಆತನು ಬಯಸಿದರೆ, ಅದಕ್ಕೆ ಅನುವಾಗುವಂತೆ ಆತನೊಂದಿಗೆ ನೀನು ಯೋಗ್ಯವಾದ ಬಾಂಧವ್ಯದಲ್ಲಿರುವೆಯೋ ?

''ಇಲ್ಲ, ನಾವು ಯೆಹೋವನನ್ನೇ ಸೇವಿಸುವೆವು'' ಅಂದರು. (ಯೆಹೋ 24:21) ಇದು ಯಾರೊಬ್ಬರ ಪ್ರಚೋದನೆಯಿಂದ ಅಲ್ಲ ; ಅದು ಅವರ ವಿವೇಚನಾಯುಕ್ತ ಕಟಿಬದ್ಧತೆ ! ನೀನು ಹೀಗೆ ಹೇಳಬಹುದು ''ಆದರೆ ದೇವರು ಇದಕ್ಕಾಗಿ ನನ್ನನ್ನೆಂದಿಗೂ ಕರೆದಿರಲಾರನು, ಅದಕ್ಕೆ ನಾನು ಬಹಳ ಅಯೋಗ್ಯನಿರುವೆನು, ಅದರೆ ಅದು 'ನಾನೇ' ಎಂಬುದರ ಅರ್ಥವಲ್ಲ. ಅದು ನೀನೇ! ಇಂಥಾ ಅರಿವಿರುವ ನಿನ್ನನ್ನೇ ದೇವರು ಕರೆಯುತ್ತಿದ್ದಾನೆ. – ನೀನೆಷ್ಟು ಅಶಕ್ತನೂ, ನಿತ್ರಾಣನೂ ಆಗಿರುವಿಯೋ ಅದೇ ಆತನಿಗೆ ಉತ್ತಮ. ಒಬ್ಬನು, ತನ್ನಲ್ಲಿರುವುದರ ಮೇಲೆ ಭರವಸವುಳ್ಳವನಾಗಿದ್ದರೆ, ''ನಾನು ದೇವರನ್ನು ಸೇವಿಸುವೆ'' ಎಂಬುವ ಹೇಳಿಕೆಯ ಸನಿಹಕ್ಕೂ ಅವನು ಬರುವವನಲ್ಲ.

'ನಾನು ನಿಜವಾಗಿಯೂ ಇದನ್ನು ನಂಬಬಹುದಾಗಿದ್ದರೆ' ಎಂದು ನಾವು ಹೇಳುತ್ತೇವೆ. ನಾನು ನಿಜವಾಗಿಯೂ ನಂಬುತ್ತೇನೆಯೇ ? ಎಂಬುದೇ ಇಲ್ಲಿರುವ ಮುಖ್ಯಾಂಶ. ಅಪನಂಬಿಕೆಯೆಂಬ ಪಾಪವನ್ನು ಕುರಿತು ಯೇಸುಕ್ರಿಸ್ತನು ಪ್ರಾಮುಖ್ಯತೆ ಕೊಟ್ಟು ಹೇಳಿರುವುದರಲ್ಲಿ ಆಶ್ಚರ್ಯವಿಲ್ಲ. ''ಅವರು ಆತನನ್ನು ನಂಬದೆ ಹೋದುದರಿಂದ, ಆತನು ಅಲ್ಲಿ ಅನೇಕ ಮಹತ್ಕಾರ್ಯಗಳನ್ನು ಮಾಡಲಿಲ್ಲ'' (ಮತ್ತಾಯ 13:58) ದೇವರು ತಾನು ಹೇಳುತ್ತಿರುವುದನ್ನು ಆತನು ಬಲ್ಲನು ಎಂದು ನಾವು ನಂಬಿದ್ದರೆ ನಾವು ಏನಾಗಿ ಇರುತ್ತಿದ್ದೆವು ! ದೇವರು ತಾನು ಏನಾಗಿರುವೆನೆಂದು ಹೇಳುತ್ತಿರುವನೋ, ಅದೆಲ್ಲವೂ ನನ್ನಲ್ಲಿಯೇ ಆಗಲಿ, ಎಂದು ನಮ್ಮನ್ನು ದೇವರಿಗೆ ಸಮರ್ಪಿಸಿಕೊಳ್ಳಲು ನಮಗೆ ಧೈರ್ಯವಿದೆಯೋ ?

# ಅಧ್ಯಾತ್ಮೀಕ ಸೋಂಬೇರಿ (ಜಡವ್ಯಕ್ತಿ)

**''ನಾವು ಪರಸ್ಪರ ಹಿತಚಿಂತಕರಾಗಿದ್ದು ... ಒಬ್ಬರನ್ನೊಬ್ಬರು ಪ್ರೇರೇಪಿಸೋಣ. ಸಭೆಯಾಗಿ ಕೂಡಿ ಕೊಳ್ಳುವುದನ್ನು ... ನಾವು ಬಿಟ್ಟು ಬಿಡದೆ ಒಬ್ಬರನೊಬ್ಬರು ಎಚ್ಚರಿಸೋಣ'' -(ಇಬ್ರಿ.10:24-25)**

ನಾವು ಅಧ್ಯಾತ್ಮಿಕವಾಗಿ ಸೋಮಾರಿಗಳಾಗಿರಲು ಸಮರ್ಥರಿದ್ದೇವೆ; ಯಥಾವತ್ತಾಗಿರುವ, ಒರಟಾಗಿರುವ, ಮುಗ್ಗರಿಸಿ ಏಳುಬೀಳುವ ನಮ್ಮ ಲೌಕಿಕ ಜೀವಿತದೊಂದಿಗೆ ನಮ್ಮ ಆತ್ಮೀಕ ಜೀವನವನ್ನು ಕೂಡಿಸಿ ಬಾಳಲು ನಾವು ಇಚ್ಛೈಸುವುದಿಲ್ಲ , ನಮ್ಮ ಮುಂದಿರುವ ಒಂದೇ ಉದ್ದೇಶ - ಲೌಕಿಕ ಜೀವಿತದಿಂದ ದೂರ ಸರಿದ ಶಾಂತವಾದ ನಿವೃತ್ತ ಬದುಕನ್ನು ಹೊಂದುವುದೇ. ಇಬ್ರಿಯರಿಗೆ ಬರೆದ ಪತ್ರಿಕೆಯ 10ನೇ ಅಧ್ಯಾಯದ ಗಮನಾರ್ಹವಾದ ಅಂಶವೆಂದರೆ-ಸಭೆಯಾಗಿ ಕೂಡಿ ಬರುವುದನ್ನು ಬಿಟ್ಟು ಬಿಡದೆ ಒಬ್ಬರನ್ನೊಬ್ಬರು ಎಚ್ಚರಿಸೋಣ - ಅಂದರೆ ಒಬ್ಬರನ್ನೊಬ್ಬರು ಎಚ್ಚರಿಸುವುದೂ, ಕೂಡಿಬಾಳುವುದೂ ಬಹುಮುಖ್ಯ. ಇವೆರಡಕ್ಕೂ ಅಗತ್ಯವಾಗಿರುವ ಕ್ರಿಯಾಶಕ್ತಿ - ಕ್ರಿಸ್ತನ ಸಾಕ್ಷಾತ್ಕಾರಕ್ಕಾಗಿ ಮುಂದಡಿ ಯಿಡುವ ಕ್ರಿಯಾಶಕ್ತಿ - ಅದು ಆತ್ಮ ಸಾಕ್ಷಾತ್ಕಾರಕ್ಕಾಗಿಯಲ್ಲ. ದೈನಂದಿನ ಜೀವಿತದಿಂದ ದೂರಸರಿದ, ಏಕಾಂತವಾದ, ಆತ್ಮೀಕ ವಿಶ್ರಾಂತಿಯ ಜೀವಿತದಲ್ಲಿ ಬದುಕುವುದು ಯೇಸುಕ್ರಿಸ್ತನು ಕಲಿಸಿಕೊಟ್ಟ ಆತ್ಮೀಕತೆಗೆ ಎದುರಡಿ ಇಡುವಂಥಾದ್ದಾಗಿದೆ.

ನಾವು ಅನ್ಯಾಯದ ವಿರುದ್ಧ, ನೀಚತ್ವದ ವಿರುದ್ಧ, ಕೃತಘ್ನತೆಯ ವಿರುದ್ಧ, ಮನಕ್ಷೋಭೆಯ ವಿರುದ್ಧ, ಸೆಟೆದು ನಿಂತಾಗಲೇ ಆತ್ಮೀಕ ಪರೀಕ್ಷೆ ಗೊಳಗಾಗುತ್ತೇವೆ, ಯಾಕೆಂದರೆ ಅವುಗಳೇ ನಮ್ಮನ್ನು ಆತ್ಮೀಕ ಜಡವ್ಯಕ್ತಿಗಳನ್ನಾಗಿಸುವ ಪ್ರವೃತ್ತಿಯಿಂದ ಕೂಡಿವೆ. ಅಧ್ಯಾತ್ಮಿಕ ವಿಶ್ರಾಂತಿಯ ಜೀವಿತವನ್ನು ಜೀವಿಸಲು ಪ್ರಾರ್ಥನೆಗಳನ್ನೂ ಸತ್ಯವೇದವನ್ನೂ ಬಳಸಿಕೊಳ್ಳುತ್ತೇವೆ. ಶಾಂತಿ ಮತ್ತು ಆನಂದವನ್ನು ಹೊಂದಲು ದೇವರನ್ನೇ ಬಳಸಿಕೊಳ್ಳುತ್ತೇವೆ. ಯೇಸುಕ್ರಿಸ್ತನಿಂದ ಆಹ್ಲಾದವನ್ನು ಪಡೆಯುವುದೊಂದೇ ಹೊರತು ಆತನನ್ನು ಅರಿತುಕೊಳ್ಳುವುದಾಗಲೀ ಮತ್ತು ಕ್ರಿಸ್ತನ ಸಾಕ್ಷಾತ್ಕಾರವಾಗಲಿ ನಮಗೆ ಬೇಡವಾಗಿದೆ. ತಪ್ಪಾದ ಮಾರ್ಗದಲ್ಲಿ ಊರುವ ಪ್ರಥಮ ಹೆಜ್ಜೆಯೇ ಇದು. ಇಂಥಾ ಚಟುವಟಿಕೆಗಳೆಲ್ಲವೂ ಆತ್ಮೀಕ ಜಡತ್ವದ ಪರಿಣಾಮಗಳು; ಆದರೆ ಇವನ್ನೇ ನಾವು ಸಕಾರಣಗಳನ್ನಾಗಿಸಲು ಯತ್ನಿಸುತ್ತೇವೆ.

''ನಿಮ್ಮನ್ನು ಜ್ಞಾಪಕ ಪಡಿಸಿ ಪ್ರೇರಿಸುವುದು ಯುಕ್ತವೆಂದೆಣಿಸಿದ್ದೇನೆ'' (2 ಪೇತ್ರ 1:13) ಹೀಗೆ ಆತ್ಮೀಕ ಕಾರ್ಯತತ್ಪರಿತ ಕೆಲಸಗಳಲ್ಲಿ ತೊಡಗಿರುವ ನಮ್ಮನ್ನು ವಾಸ್ತವಕ್ಕೆ ಎಚ್ಚರಗೊಳಿಸಲು, ದೇವರಿಂದ ಉತ್ತೇಜಿಸಲ್ಪಟ್ಟ, ತುಂಬು ಆತ್ಮೀಕ ಚಟುವಟಿಕೆಯ ವ್ಯಕ್ತಿಯೊಬ್ಬನಿಂದ ನಮ್ಮ ಪಕ್ಕೆಲುಬುಗಳ ಸಂದಿನಲ್ಲಿ ತಿವಿಸಿಕೊಳ್ಳುವುದು ನಿಜಕ್ಕೂ ಮನೋವ್ಯಾಕುಲದ ಸಂಗತಿ. ಕಾರ್ಯ ತತ್ಪರತೆಯಿಂದ ಕೂಡಿದ ಕೆಲಸ ಮತ್ತು ಆತ್ಮೀಕ ಚಟುವಟಿಕೆ ಇವೆರಡೂ ಒಂದೇ ಅಲ್ಲ. ಕಾರ್ಯತತ್ಪರಿತ ಕೆಲಸವು ಆತ್ಮೀಕ ಚಟುವಟಿಕೆಯ ಖೋಟಾ ಮುಖವೂ ಆಗಬಹುದು. ಆತ್ಮೀಕ ಜಡತೆಯಲ್ಲಿರುವ ಅಪಾಯವೆಂದರೆ, ಎಚ್ಚರಗೊಳ್ಳಲು ನಾವು ಇಚ್ಛಿಸದಿರುವುದು; ಆತ್ಮೀಕ ವಿಶ್ರಾಂತಿ ಜೀವನದ ಬಗ್ಗೆ ಕೇಳಿಸಿಕೊಳ್ಳುವುದಷ್ಟೇ ನಮಗೆ ಬೇಕಾಗಿದೆ. ಯೇಸುಕ್ರಿಸ್ತನು ಆತ್ಮೀಕ ವಿಶ್ರಾಂತಿ ಜೀವನವನ್ನು ಉತ್ತೇಜಿಸುವುದಿಲ್ಲ. ''ನನ್ನ ಸಹೋದರರ ಬಳಿಗೆ ಹೋಗಿರಿ'' (ಮತ್ತಾಯ 28:10).

# ಆಧ್ಯಾತ್ಮಿಕವಾಗಿ ಹುರುಪಿನಿಂದಿರುವ ಸಂತ

**''ಆತನನ್ನು ............ ತಿಳುಕೊಂಡು'' - (ಫಿಲಿಪ್ಪಿ-3:10)**

ಭಕ್ತನಾದವನ ಕ್ರಿಯಾಸಕ್ತಿಯು ಸ್ವಆತ್ಮ ಸಾಕ್ಷಾತ್ಕಾರದ ಕಡೆಗಿರದೆ, ಯೇಸುಕ್ರಿಸ್ತನನ್ನು ಅರಿಯುವ ಕಡೆಗೆರಬೇಕು. ಆಧ್ಯಾತ್ಮಿಕವಾಗಿ ಕ್ರಿಯಾಶೀಲನಾದವನು ತಾನಿರುವ ಸನ್ನಿವೇಶಗಳು ಅಸ್ತವ್ಯಸ್ತಗೊಂಡವು ಗಳೆಂದು ನಂಬುವುದೇ ಇಲ್ಲ, ಅಥವಾ ತನ್ನ ಜೀವಿತವನ್ನು ಧರ್ಮಾತೀತ ಅಥವಾ ಧಾರ್ಮಿಕವಾದದ್ದೆಂದು ಯೋಚಿಸುವುದೂ ಇಲ್ಲ ; ತಾನು ಎಸೆಯಲ್ಪಟ್ಟಿರುವ ಸಂದರ್ಭಗಳೊಳ ಗಿರುವಾಗ, ಅವು ಹೇಗಾದರೂ ಇರಲಿ, ಅವು ಯೇಸುಕ್ರಿಸ್ತನ ಬಗ್ಗೆ ತಿಳುವಳಿಕೆ ಪಡೆಯುವ ಮಾರ್ಗ ಗಳಾಗಿವೆ ಎಂದು ಭಕ್ತನು ತಿಳಿಯುತ್ತಾನೆ. ಹಿಂದು ಮುಂದು ನೋಡದೆ ತನ್ನನ್ನು ತಾನು ತ್ಯಜಿಸಿ ಸಮರ್ಪಿಸಿಕೊಂಡಿರುವುದು ಅವನಲ್ಲಿ ಕಂಡುಬರುತ್ತದೆ. ನಮ್ಮ ಜೀವಿತದ ಪ್ರತಿಯೊಂದು ಕ್ಷೇತ್ರದಲ್ಲಿಯೂ ನಾವು ಯೇಸುಕ್ರಿಸ್ತನನ್ನರಿಯುವಂತೆ ಮಾಡಲು ಪರಿಶುದ್ಧಾತ್ಮನು ನಿಶ್ಚಯಿಸಿರುವು ದರಿಂದ ನಾವು ಯೇಸು ಕ್ರಿಸ್ತನನ್ನರಿಯುವ ವರೆಗೂ ಪದೇ ಪದೇ ಅದೇ ವಿಷಯಾಂಶಕ್ಕೆ ಆತನು ನಮ್ಮನ್ನು ಹಿಂದಕ್ಕಟ್ಟುತ್ತಿರುತ್ತಾನೆ. ಆತ್ಮ ಸಾಕ್ಷಾತ್ಕಾರವು ನಮ್ಮ ಕಾರ್ಯಗಳನ್ನೇ ಸಿಂಹಾಸನಕ್ಕೇರಿಸುತ್ತದೆ; ಭಕ್ತನಾದರೋ ತನ್ನ ಕಾರ್ಯಗಳ ಮೂಲಕ ಯೇಸುಕ್ರಿಸ್ತನನ್ನು ಸಿಂಹಾಸನಕ್ಕೇ ರಿಸುತ್ತಾನೆ. ನಾವು ಉಣ್ಣುವುದಾಗಲೀ ಕುಡಿಯುವುದಾಗಲೀ ಇಲ್ಲವೇ ಶಿಷ್ಯರ ಕಾಲುಗಳನ್ನು ತೊಳೆಯುವುದೇ ಆಗಲಿ, ಅದೇನೇ ಇರಲಿ, ಅವುಗಳಲ್ಲಿ ಯೇಸುಕ್ರಿಸ್ತನ ಸಾಕ್ಷಾತ್ಕಾರವನ್ನು ಪಡೆಯಲು ಕರ್ತವ್ಯಶೀಲರಾಗಬೇಕು. ನಮ್ಮ ನಿಜಜೀವಿತದ ಪ್ರತಿಯೊಂದು ಹಂತವೂ ಯೇಸುಕ್ರಿಸ್ತನ ಜೀವಿತದ ಯಥಾವತ್ತಾದ ಪ್ರತಿರೂಪವನ್ನು ಹೊಂದಿರುತ್ತದೆ. ಅತ್ಯಂತ ಕೆಳಮಟ್ಟದ ಕಾರ್ಯವನ್ನೆಸಗುತ್ತಿರುವಾಗಲೂ ಯೇಸು ಸ್ವಾಮಿಯು, ತಂದೆಯಾದ ದೇವರನ್ನು ಸಾಕ್ಷಾತ್ಕಾರ ಮಾಡಿಕೊಂಡಿದ್ದನು. ''ಯೇಸು ತನ್ನ ಕೈಯಲ್ಲಿ ತಂದೆಯು ಎಲ್ಲವನ್ನೂ ಕೊಟ್ಟಿದ್ದಾನೆಂತಲೂ ತಾನು ದೇವರ ಬಳಿಯಿಂದ ಹೊರಟು ಬಂದಿದ್ದು ಮತ್ತೆ ದೇವರ ಬಳಿಗೆ ಹೋಗುತ್ತೇನೆಂತಲೂ ತಿಳುಕೊಂಡವನಾಗಿ ಊಟವನ್ನು ಬಿಟ್ಟು ಎದ್ದು ಕೈ ಪಾವುಡವನ್ನು ತಕ್ಕೊಂಡು ನಡುವಿಗೆ ಕಟ್ಟಿಕೊಂಡನು... ಶಿಷ್ಯರ ಕಾಲುಗಳನ್ನು ತೊಳೆಯುವುದಕ್ಕೂ ನಡುವಿಗೆ ಕಟ್ಟಿಕೊಂಡಿದ್ದ ಕೈಪಾವುಡದಿಂದ ಒರಸುವುದಕ್ಕೂ ಪ್ರಾರಂಭಿಸಿದನು'' (ಯೋಹಾನ 13:2-5).

''ನಾನು ಆತನನ್ನು ತಿಳಿಯುವುದೇ'' ಇದು ಭಕ್ತನ ಗುರಿಯಾಗಿರುತ್ತದೆ. ಈ ದಿನ, ನಾನಿರುವ ಸ್ಥಳದಲ್ಲಿಯೇ ಆತನನ್ನು ಅರಿತಿರುವೆನೋ? ಇಲ್ಲದಿದ್ದರೆ, ಅದೇ ಸ್ಥಳದಲ್ಲಿಯೇ, ಆತನನ್ನು ವಿಫಲ ಗೊಳಿಸುತ್ತಿದ್ದೇನೆಯೋ? ನಾನು ಈ ಲೋಕದಲ್ಲಿ ಇರುವುದು ಯೇಸುಕ್ರಿಸ್ತನನ್ನು ಅರಿತುಕೊಳ್ಳುವು ದಕ್ಕೇ ಹೊರತು ನನ್ನ ಆತ್ಮ ಸಾಕ್ಷಾತ್ಕಾರಕ್ಕಾಗಿ ಅಲ್ಲ. ಅನೇಕ ವೇಳೆ, ಏನನ್ನಾದರೂ ಸಾಧಿಸಬೇಕಾಗಿರುವು ದರಿಂದ ಅದನ್ನು ಮಾಡಲೇ ಬೇಕೆಂಬುದೇ ಕ್ರಿಸ್ತೀಯ ಸೇವೆಯಲ್ಲಿ ಕಾಣುವ ಕಾರ್ಯಪಟುತ್ವವಾಗಿದೆ. ಆತ್ಮೀಕವಾಗಿ ಭಕ್ತನ ಧೋರಣೆಯು ಹಾಗೆಂದಿಗೂ ಇರುವುದಿಲ್ಲ. ತಾನಿರುವ ಪ್ರತಿಯೊಂದು ಸಮಯ ಸಂದರ್ಭಗಳಲ್ಲಿಯೂ ಯೇಸುಕ್ರಿಸ್ತನನ್ನು ಸಾಕ್ಷಾತ್ಕಾರ ಮಾಡಿಕೊಳ್ಳುವುದಷ್ಟೇ ಆತನ ಗುರಿಯಾಗಿರ ಬೇಕು.

# ಅಧ್ಯಾತ್ಮಿಕ ಸಮಾಜ

**''ನಾವೆಲ್ಲರೂ ......... ಕ್ರಿಸ್ತನ ಪರಿಪೂರ್ಣತೆಯೆಂಬ ಪ್ರಮಾಣವನ್ನು ಮುಟ್ಟುವ ತನಕ ............ '' - (ಎಫೆ - 4:13)**

ದೇವರು ಆದಿಯಲ್ಲಿ ಮಾನವನನ್ನು ಉಂಟು ಮಾಡಿದಾಗ, ಅವನ ಮತ್ತು ದೇವರ ನಡುವೆ ಸಂಬಂಧವು ಹೇಗಿರಬೇಕೆಂದು ಆತನು ಯೋಚಿಸಿದ್ದನೋ, ಬಿದ್ದುಹೋದ ಮಾನವ ಸಮಾಜವನ್ನು ಅದೇ ಸ್ಥಿತಿಗೆ ಮರಳಿಸುವುದೇ ಯೇಸುಕ್ರಿಸ್ತನು ಪಾಪವಿಮೋಚನಾ ಕಾರ್ಯದಲ್ಲಿ ಸಾಧಿಸಿಬಿಟ್ಟಿದ್ದಾನೆ. ಅದೇ ಪುನಃ ಸ್ಥಾಪನೆ. ಕ್ರೈಸ್ತ ಸಭೆಯು ತನ್ನ ಸಂಘ ಸಂಸ್ಥೆಗಳ ಅಭಿವೃದ್ಧಿಯನ್ನೇ ಮುಂದಿಟ್ಟುಕೊಂಡಾಗ, ಆ ಸಭೆಯು ಇನ್ನೆಂದಿಗೂ ಅಧ್ಯಾತ್ಮಿಕ ಸಮಾಜವಾಗಿರುವುದಿಲ್ಲ. ಯೇಸುಕ್ರಿಸ್ತನ ಯೋಜನೆಯ ಪ್ರಕಾರ, ಮಾನವ ಜನಾಂಗದ ಪುನಃ ಸ್ಥಾಪನೆ ಎಂದರೆ ಸಾಮೂಹಿಕ ಜೀವಿತದಲ್ಲಿಯೂ ಮತ್ತು ವ್ಯಕ್ತಿಗತ ಜೀವಿತದಲ್ಲಿಯೂ ಆತನನ್ನು ಅರಿತುಕೊಳ್ಳುವಿಕೆ. ತನ್ನ ಸಾಮೂಹಿಕ ವ್ಯಕ್ತಿತ್ವವು ಎಲ್ಲರಿಗೂ ಅರಿವಾಗಲೆಂಬ ಉದ್ದೇಶದಿಂದಲೇ, ಯೇಸುಕ್ರಿಸ್ತನು ಅಪೊಸ್ತಲರನ್ನೂ, ಬೋಧಕರನ್ನೂ ಕಳುಹಿಸಿಕೊಟ್ಟನು. ನಮ್ಮ ಸ್ವಂತದ ಆತ್ಮೀಕ ಜೀವಿತವನ್ನು ಅಭಿವೃದ್ಧಿಗೊಳಿಸುವುದಕ್ಕಾಗಿಯೂ ಅಥವಾ ಶಾಂತವಾದ ಆತ್ಮೀಕ ಜೀವನದ ವಿಶ್ರಾಂತಿ ದಿನಗಳನ್ನು ಆನಂದಿಸಲೂ ನಾವು ಇಲ್ಲಿ ಇರುವುದಿಲ್ಲ. ಸಭೆಯೆಂಬ ಕ್ರಿಸ್ತನ ದೇಹವನ್ನು ಸ್ಥಾಪಿಸಲೋಸುಗ, ಯೇಸು ಕ್ರಿಸ್ತನನ್ನು ಅರಿತುಕೊಳ್ಳಲು ನಾವು ಇಲ್ಲಿ ಇದ್ದೇವೆ.

ನಾನು ಕ್ರಿಸ್ತನ ದೇಹವೆಂಬ ಸಭೆಯನ್ನು ಕಟ್ಟುತ್ತಿರುವೆನೋ ಇಲ್ಲವೆ ನನ್ನ ಸ್ವಂತ ವೈಯಕ್ತಿಕ ಅಭಿವೃದ್ಧಿಯನ್ನು ಮಾತ್ರ ಗಮನಿಸುತ್ತಿರುವೆನೋ ? ಯೇಸುಕ್ರಿಸ್ತನೊಂದಿಗಿರುವ ನನ್ನ ವೈಯಕ್ತಿಕ ಸಂಬಂಧವೇ ನನಗೆ ಅತ್ಯಗತ್ಯವಾಗಿದೆ. ''ಆತನನ್ನು ತಿಳುಕೊಳ್ಳುವ ಹಾಗೆ'' (ಫಿಲಿಪ್ಪಿ 3:10). ನನಗೋಸ್ಕರವಾದ ದೇವರ ಯೋಜನೆಯನ್ನು ಪೂರ್ಣಗೊಳಿಸಬೇಕಾದರೆ, ನಾನು ಆತನಿಗೆ ಸಂಪೂರ್ಣವಾಗಿ ಒಪ್ಪಿಸಿಕೊಡಬೇಕು. ನನ್ನ ಸ್ವಾರ್ಥವಿಷಯ ಸಾಧನೆಗಳನ್ನು ನಾನು ಬಯಸಿದಾಗಲೆಲ್ಲಾ ಈ ಸಂಬಂಧವು ಅಂದಗೆಡುತ್ತದೆ. ನಾನು ಯೇಸುಕ್ರಿಸ್ತನನ್ನು ಅರಿಯಲು ಆಸ್ಥೆ ವಹಿಸದೆ ಆತನು ನನಗೆ ಮಾಡಿದವುಗಳನ್ನು ಮಾತ್ರ ಅರಿತು ಕೊಂಡಿದ್ದೇನೆಂಬುದು ನನಗೆ ಅರಿವಾದಾಗ ಉಂಟಾಗುವ ದೀನಾವಸ್ಥೆಯು ವಿಪರೀತವಾಗಿರುತ್ತದೆ.

ನನ್ನ ಗುರಿ ದೇವರೇ ! ನನಗಿರುವ ಆನಂದವೂ ಅಲ್ಲ, ಶಾಂತಿಯೂ ಅಲ್ಲ, ಆಶೀರ್ವಾದಗಳು ಸಹಾ ಅಲ್ಲ, 'ಆತನೇ ನನ್ನ ದೇವರು' ! ನಾನು ಜೀವಿತವನ್ನು ಈ ಮಟ್ಟದಲ್ಲಿ ಅರಿಯುತ್ತಿರುವೆನೋ ಅಥವಾ ಇದಕ್ಕಿಂತಲೂ ಅಲ್ಪ ಮಟ್ಟದಲ್ಲಿಯೋ ?

# ದಿವ್ಯ ದರ್ಶನದ ಬೆಲೆ

**''ಅರಸನಾದ ಉಜ್ಜೀಯನು ಕಾಲವಾದ ವರುಷದಲ್ಲಿ ಕರ್ತನು ಉನ್ನತೋನ್ನತ ಸಿಂಹಾಸನಾ ರೂಢನಾಗಿರುವುದನ್ನು ಕಂಡೆನು'' - (ಯೆಶಾಯ - 6:1)**

ದೇವರೊಂದಿಗಿರುವ ನಮ್ಮ ವೈಯಕ್ತಿಕ ಆತ್ಮ ಚರಿತ್ರೆಯು ಬಹುತೇಕ ಗತಿಸಿಹೋದ ನಮ್ಮ 'ಹೀರೋ' ನನ್ನು ಕುರಿತಾಗಿರುತ್ತದೆ. ನಮ್ಮ ಗೆಳೆಯನ ಸ್ಥಾನದಲ್ಲಿ ತಾನಿರಬೇಕೆಂದು, ಈಗಿರುವ ಗೆಳೆಯರನ್ನು ಮೇಲಿಂದ ಮೇಲೆ ಆತನು ತೆಗೆದು ಹಾಕುತ್ತಾನೆ. ಅಂಥ ಸ್ಥಿತಿಯಲ್ಲಿ ನಾವು ಮೂರ್ಛೆಗೊಳ್ಳುತ್ತೇವೆ, ವಿಫಲರಾಗುತ್ತೇವೆ, ಮತ್ತು ಧೈರ್ಯಗುಂದುತ್ತೇವೆ. ಆದರೆ ವೈಯಕ್ತಿಕವಾಗಿ ಇದನ್ನು ಗ್ರಹಿಸು : ನನಗೆ ದೇವರೆಂದರೆ ಹೇಗಿರಬೇಕಾಗಿದ್ದಿತೋ ಹಾಗೆಯೇ ನನಗಿದ್ದ ಆತ್ಮೀಯನೊಬ್ಬನು ಗತಿಸಿಹೋದನು. ಆಗ ನಾನು ಎಲ್ಲವನ್ನೂ ನಿರಾಕರಣೆ ಮಾಡಿದೆನೋ ? ಅಸ್ವಸ್ಥನಾದೆನೋ ? ಎದೆಗುಂದಿ ಹೋದೆನೋ ? ಅಥವಾ ಅಲ್ಲಿ ಕರ್ತನನ್ನು ಕಂಡೆನೋ ?

ದೇವರ ವಿಷಯದಲ್ಲುಂಟಾಗುವ ದರ್ಶನವು, ನನ್ನ ಗುಣನಡತೆಯ ಸ್ಥಿತಿಗತಿಗಳನ್ನ ವಲಂಬಿಸಿರುತ್ತದೆ. ನನ್ನ ಗುಣ ಧರ್ಮವು, ಸತ್ಯಾರ್ಥಗಳ ಪ್ರಕಟನೆಗಳನ್ನು ಹೊಂದಲು ನಾನು ಯೋಗ್ಯನೋ ಎಂಬುದನ್ನು ನಿರ್ಧರಿಸುತ್ತದೆ. ''ನಾನು ಸಹಾ ಕರ್ತನನ್ನು ಕಂಡೆನು'' ಎಂದು ನಾನು ಹೇಳುವ ಮುನ್ನ ನನ್ನ ಗುಣ ನಡತೆಯಲ್ಲಿ ದೇವರಿಗೆ ಪೂರಕವಾದದ್ದೇನೋ ಒಂದು ನನ್ನಲ್ಲಿ ಇದ್ದಿರಲೇಬೇಕು. ನಾನು ಹೊಸದಾಗಿ ಹುಟ್ಟಿ ದೇವರ ರಾಜ್ಯವನ್ನು ಕಾಣಲಾರಂಬಿಸುವ ತನಕ, ನನ್ನ ಪೂರ್ವಗ್ರಹಿಕೆಯಂತೆಯೇ ಅದನ್ನು ಕಾಣುತ್ತಿರುವೆನು; ಆದಕಾರಣ ಬಾಹ್ಯ ಸಂಗತಿಗಳ ಶಸ್ತ್ರ ಚಿಕಿತ್ಸೆಯ ಮೂಲಕ ನನ್ನ ಅಂತರಂಗದ ಶುದ್ಧೀಕರಣವು ಅಗತ್ಯವಾಗಿದೆ.

ಬೇರೆಯವರು ಹೇಗೆಯೇ ಇರಲಿ, ಅವರನ್ನು ಲೆಕ್ಕಕ್ಕೆ ಬಾರದವರು ಎಂದು ತಿಳಿದು ದೇವರಿಗೆ ಮುಖಾಮುಖಿಯಾಗುವ ತನಕವೂ ಮೊದಲನೆದಾಗಿ ದೇವರೇ, ಎರಡನೇದಾಗಿಯೂ ದೇವರೇ ಮೂರನೇದಾಗಿಯೂ ದೇವರೇ. ಎಲ್ಲವೂ ದೇವರೇ ಎಂದಿರಬೇಕು. ''ಜಗತ್ತಿನಲ್ಲಿ ನಿನ್ನ ಹೊರತು ಬೇರೆಯಾರೂ ಇಲ್ಲ ನನ್ನ ದೇವರೇ, ನೀನಲ್ಲದೆ ಬೇರೆ ಇಲ್ಲ''.

ದರ್ಶನದ ಬೆಲೆಯನ್ನು ತೆರುತ್ತಲೇ ಇರಬೇಕು. ನಿನಗಾದ ದರ್ಶನದಂತೆ ಜೀವಿಸಲು ನೀನು ಇಚ್ಛೈಸುತ್ತಿರುವುದು ದೇವರ ಗಮನಕ್ಕೆ ಬರಲಿ.

# ಸಂಕಟದ ಪರಿಗಣನೆ (ಎರಡನೇ ಮೈಲು ಹೋಗುವಿಕೆ)

**''ಆದರೆ ನಾವು ನಿಮಗೆ ಹೇಳುವುದೇನೆಂದರೆ-ಕೆಡುಕನನ್ನು ಎದುರಿಸಬೇಡ ಒಬ್ಬನು ನಿನ್ನ ಬಲಗೆನ್ನೆಯ ಮೇಲೆ ಹೊಡೆದರೆ, ಅವನಿಗೆ ಮತ್ತೊಂದು ಕೆನ್ನೆಯನ್ನು ಒಡ್ಡು '' - (ಮತ್ತಾಯ - 5:39)**

ಈ ವಾಕ್ಯವು ಕ್ರೈಸ್ತರಾಗಿರುವವರ ದೀನಾವಸ್ಥೆಯನ್ನು ಬಯಲು ಪಡಿಸುತ್ತದೆ. ಸ್ವಾಭಾವಿಕವಾಗಿ ಒಬ್ಬ ಮನುಷ್ಯನು ಹಿಂತಿರುಗಿ ಪ್ರತಿಯಾಗಿ ಹೊಡೆಯದಿದ್ದರೆ, ಅದರ ಕಾರಣ - ಅವನೊಬ್ಬ ಹೇಡಿ ಇಲ್ಲವೇ ಅಶಕ್ತನೋ ಆಗಿರುತ್ತಾನೆ; ಆದರೆ ಆತ್ಮೀಕ ವಿಷಯಗಳಲ್ಲಿ ಒಬ್ಬನು ಹಿಂತಿರುಗಿ ಪ್ರತಿಯಾಗಿ ಹೊಡೆಯ ದಿದ್ದರೆ, ಅವನಲ್ಲಿ ದೇವರ ಮಗನು ಸಾಕ್ಷಾತ್ಕಾರಗೊಂಡಿರುತ್ತಾನೆ. ನೀನು ಅವಮಾನಕ್ಕೊಳಗಾದಾಗ, ನೀನು ಪ್ರತಿಭಟಿಸದಿರುವುದು ಮಾತ್ರವಲ್ಲದೇ ಆ ಸಂದರ್ಭವನ್ನೇ ದೇವಪುತ್ರನನ್ನು ಪ್ರಕಟಪಡಿಸಲು ಉಪಯೋಗಿಸಿ ಕೊಳ್ಳಬೇಕು. ಯೇಸುಕ್ರಿಸ್ತನ ಸ್ವಭಾವವನ್ನು ಅನುಕರಣೆ ಮಾಡಲು ನಿನಗೆ ಸಾಧ್ಯವಿಲ್ಲ; ಅಂಥಾ ಸ್ವಭಾವವು ನಿನ್ನಲ್ಲಿ ಇದೆ ಅಥವಾ ಅದು ಅಲ್ಲಿ ಇಲ್ಲ. ಒಬ್ಬ ಭಕ್ತನಿಗೆ, ಅವನಿಗಾಗುವ ವೈಯಕ್ತಿಕ ಅವಮಾನವೇ ಯೇಸುಕ್ರಿಸ್ತನ ನಂಬಲಸಾಧ್ಯವಾದ ಮೃದುಮಧುರತ್ವವನ್ನು ಪ್ರಕಟಪಡಿಸುವ ಸುಸಂದರ್ಭವಾಗಿ ಪರಿಣಮಿಸುತ್ತದೆ.

ಪರ್ವತ ಪ್ರಸಂಗದ ಬೋಧನೆಯು, ನೀನು ನಿನ್ನ ಕೆಲಸವನ್ನು ಮಾತ್ರ ಮಾಡು ಎಂದು ಹೇಳುವುದಿಲ್ಲ , ಆದರೆ ನಿನ್ನದಲ್ಲದ ಕೆಲಸವನ್ನು ನೀನು ಮಾಡು ಎಂದು ಹೇಳಿದೆ. ಎರಡನೇ ಮೈಲನ್ನು ನಡೆಯುವುದು ನಿನ್ನ ಕೆಲಸವಲ್ಲ , ಮತ್ತೊಂದು ಕೆನ್ನೆಯನ್ನೊಡುವುದೂ ಅಲ್ಲ , ಆದರೆ ಯೇಸುಸ್ವಾಮಿಯು ಹೇಳುತ್ತಾನೆ – ನಾವು ಆತನ ಶಿಷ್ಯರಾಗಿದ್ದರೆ ಇವುಗಳನ್ನು ನಾವು ಯಾವಾಗಲೂ ಮಾಡುತ್ತಿರಬೇಕು. ''ಓಹ್ ಸರಿಯೇ, ಆದರೆ ಹೆಚ್ಚಿಗೆ ಇನ್ನೇನೂ ಮಾಡಲಾರೆ, ನಾನು ಬಹಳ ತಪ್ಪಾಗಿ ಪ್ರತಿನಿಧಿಸಲ್ಪಟ್ಟಿರುವೆನು ಮತ್ತು ಅಪಾರ್ಥಕ್ಕೊಳಗಾಗಿರುವೆನು,'' ಎಂದು ನುಡಿಯುವ ಆತ್ಮವು ಅಲ್ಲಿರುವುದಿಲ್ಲ. ನನ್ನ ಮೇಲೆ ನನಗಿರುವ ಹಕ್ಕುಗಳನ್ನು ಪ್ರತಿಪಾದಿಸಿದ ಪ್ರತಿಸಲವೂ ನಾನು ಯೇಸುಕ್ರಿಸ್ತನನ್ನು ಗಾಯಪಡಿಸುವೆನು; ಆತನ ಮೇಲೆ ಬಂದೆರಗುವ ಹೊಡೆತಗಳನ್ನು ನಾನು ಪಡೆದುಕೊಂಡರೆ ಮಾತ್ರ ಆತನು ಗಾಯಗೊಳ್ಳುವುದನ್ನು ನಾನು ತಡೆಯುತ್ತೇನೆ. ಇದೇ ''ಕ್ರಿಸ್ತನ ಸಂಕಟಗಳೊಳಗೆ'' ಇನ್ನೂ ಉಳಿದಿದ್ದನ್ನು ಆತನ ದೇಹಕ್ಕೋಸ್ಕರ ನನ್ನ ಶರೀರದಲ್ಲಿ ಅನುಭವಿಸಿ ತೀರುತ್ತೇನೆ. (ಕೊಲೊ 1:24) ಯೇಸುಕ್ರಿಸ್ತನ ಗೌರವವೇ ತನ್ನ ಶರೀರದಲ್ಲಿ ಪಣಕ್ಕಿಡಲ್ಪಟ್ಟಿದೆಯಲ್ಲದೆ, ತನ್ನ ಸ್ವಗೌರವವಲ್ಲವೆಂಬುದನ್ನು ಭಕ್ತನು ತಿಳಿದಿರುತ್ತಾನೆ.

ಇತರರಲ್ಲಿ ನೀತಿಯನ್ನು ಕಾಣಲು ಬಯಸಬೇಡ, ಆದರೆ ನೀನೆಂದಿಗೂ ನೀತಿಯನ್ನು ಬಿಟ್ಟುಕೊಡಬೇಡ. ನಾವು ಯಾವಾಗಲೂ ನ್ಯಾಯವನ್ನು ಕಾಣಲು ಮುಂದಾಗುತ್ತೇವೆ, ಪರ್ವತ ಪ್ರಸಂಗದ ಬೋಧನೆಯು ಹೇಳುವಂತೆ – ನ್ಯಾಯಕ್ಕಾಗಿ ಎಂದೂ ಕಾದಿರಬೇಡ, ಆದರೆ ನೀನು ಮಾತ್ರ ನ್ಯಾಯವನ್ನು ಬಿಟ್ಟುಕೊಡಬೇಡ.

# ನನ್ನ ಆತ್ಮೀಕ ಜೀವಿತದ ಗೌರವ ಮತ್ತು ಕರ್ತವ್ಯ

**''ಗ್ರೀಕರಿಗೂ ಇತರ ಜನಗಳಿಗೂ ಜ್ಞಾನಿಗಳಿಗೂ ಮೂಢರಿಗೂ ತೀರಿಸಬೇಕಾದ ಒಂದು ಋಣ ನನ್ನ ಮೇಲೆ ಅದೆ'' - (ರೋಮಾ - 1:14)**

ಯೇಸುಕ್ರಿಸ್ತನಿಗೆ ಋಣಸ್ಥನಾಗಿರುವೆನು ಎಂಬ ಭಾವನೆಯಿಂದ ಶ್ರೀ ಪೌಲನು ಪರವಶ ಗೊಂಡಿದ್ದಾನೆ, ಇದನ್ನು ಪ್ರಕಟಿಸುವುದಕ್ಕಾಗಿಯೇ ತನ್ನನ್ನು, ಮತ್ತು ತನ್ನ ಜೀವಿತವನ್ನು ವ್ಯಯಮಾಡಿ ಕೊಂಡಿರುತ್ತಾನೆ. ಪೌಲನ ಜೀವಿತದ ಮಹತ್ವದ ಪ್ರೇರಣೆಯು, ಯೇಸುಕ್ರಿಸ್ತನು ತನ್ನ ಆತ್ಮೀಕ ಜೀವಿತಕ್ಕೆ ಸಾಲಿಗನು (ಸಾಲಕೊಟ್ಟವನು) ಎಂಬ ದೃಷ್ಟಿ ಆತನಿಗಿದ್ದುದರಿಂದುಂಟಾಗಿತ್ತು. ಈವರೆಗೂ ಇನ್ನೂ ರಕ್ಷಣೆ ಹೊಂದದ ಆತ್ಮಗಳ ವಿಷಯವಾಗಿ, ಕ್ರಿಸ್ತನಿಗಾಗಿ, ನನ್ನಲ್ಲಿ ಅಂಥ ಋಣ ಭಾದೆಯುಂಟೋ ? ಕ್ರಿಸ್ತನ ಭಕ್ತನಾಗಿರುವ ನನಗೆ ಅಂಥವರ ವಿಷಯದಲ್ಲಿ ಕ್ರಿಸ್ತನಿಗೆ ಋಣಿಯಾಗಿರುವ ಸಾಲವನ್ನು ನಾನೇ ತೀರಿಸುವದರಲ್ಲಿ ನನ್ನ ಆತ್ಮೀಕ ಜೀವಿತದ ಗೌರವಡಗಿದೆ; ನನ್ನ ಜೀವಿತದ ಬೆಲೆಯುಳ್ಳ ಪ್ರತಿಯೊಂದು ಕಣ ತೃಣಗಳಲ್ಲಿಯೂ ಯೇಸು ಕ್ರಿಸ್ತನು ಮಾಡಿದ ಪಾಪ ವಿಮೋಚನಾ ಕಾರ್ಯಕ್ಕಾಗಿ ನಾನು ಋಣಿ ಯಾಗಿರುವೆನು; ಆತನು ಮಾಡಿದ ವಿಮೋಚನಾ ಕಾರ್ಯವನ್ನು ಇತರರ ನಿಜ ಜೀವನದಲ್ಲಿ ಆವಿಷ್ಕರಣಗೊಳ್ಳುವಂತೆ ಮಾಡಲು ಅಂದರೆ ಪ್ರಕಟವಾಗುವಂತೆ ಮಾಡಲು ಆತನು ಶಕ್ತನಾಗುವಂತೆ ನಾನು ಏನನ್ನಾದರೂ ಮಾಡುತ್ತಿರುವೆನೋ ? ಪರಿಶುದ್ಧಾತ್ಮನು ಇಂಥಾ ಋಣಭಾವನೆಯನ್ನು ನನ್ನಲ್ಲಿ ಹುಟ್ಟಿಸಿದಾಗ ಮಾತ್ರ ನಾನು ಏನನ್ನಾದರೂ ಮಾಡಬಲ್ಲೆನು.

ನಾನು ಜನರ ಮಧ್ಯದಲ್ಲಿ ಶ್ರೇಷ್ಠ ವ್ಯಕ್ತಿಯಾಗಿರಬಾರದು, ಆದರೆ ಯೇಸುಸ್ವಾಮಿಯ ಗುಲಾಮ ನಾಗಿರಬೇಕು. ''ನೀವು ನಿಮ್ಮ ಸ್ವಂತ ಸೊತ್ತಲ್ಲ, ನೀವು ಕ್ರಯಕ್ಕೆ ಕೊಳ್ಳಲ್ಪಟ್ಟವರು'' (1 ಕೊರಿಂಥ 6:19-20) ಪೌಲನು ತನ್ನನ್ನು ತಾನು ಯೇಸುಕ್ರಿಸ್ತನಿಗೆ ಮಾರಿಕೊಂಡನು. 'ಯೇಸುಕ್ರಿಸ್ತನ ಸುವಾರ್ತೆಯ ಕಾರಣದಿಂದ ಈ ಧರೆಯ ಮೇಲಿರುವ ಪ್ರತಿಯೊಬ್ಬರಿಗೂ ನಾನು ಸಾಲಗಾರನಾಗಿದ್ದೇನೆ. ಕೇವಲ ಜೀತದಾಳಾಗಲು ಮಾತ್ರ ಸ್ವತಂತ್ರನಾಗಿರುವೆನು,'' ಎಂದು ಪೌಲನು ಪ್ರತಿಪಾದಿಸುತ್ತಿದ್ದಾನೆ; ಈ ಮಟ್ಟದ ಗೌರವ ಸಾಧನೆಯೇ ಕ್ರಿಸ್ತೀಯ ಜೀವಿತದ ಗುಣಲಕ್ಷಣ. ಸ್ವಂತಕ್ಕಾಗಿ ಪ್ರಾರ್ಥಿಸುವುದನ್ನು ಬಿಟ್ಟುಬಿಡು ಮತ್ತು ಯೇಸುಕ್ರಿಸ್ತನ ದಾಸನಾಗಿ ಇತರರಿಗೋಸ್ಕರ ಪ್ರಾರ್ಥಿಸುತ್ತಾ ನಿನ್ನನ್ನು ವ್ಯಯ ಮಾಡಿಕೋ. ಮುರಿಯಲ್ಪಟ್ಟ ರೊಟ್ಟಿಯೂ ಸುರಿಯಲ್ಪಟ್ಟ ದ್ರಾಕ್ಷಾರಸವೂ ಆಗಿರುವುದರ ಮರ್ಮವು ಇದೇ.

# ದೈವ ನಿಯಂತ್ರಣದ ಪರಿಕಲ್ಪನೆ

**''ಪರಲೋಕದಲ್ಲಿರುವ ನಿಮ್ಮ ತಂದೆಯು ತನ್ನನ್ನು ಬೇಡಿಕೊಳ್ಳುವವರಿಗೆ ಎಷ್ಟೋ ಹೆಚ್ಚಾಗಿ ಒಳ್ಳೆಯ ವರಗಳನ್ನು ಕೊಡುವನಲ್ಲವೇ?'' - (ಮತ್ತಾಯ - 7:11)**

ಯೇಸುಕ್ರಿಸ್ತನು ತನ್ನ ಆತ್ಮವನ್ನು ಹೊಂದಿಕೊಂಡವರಿಗೆ ಇಲ್ಲಿ ನೀತಿನಿಬಂಧನೆಗಳನ್ನು ವಿಧಿಸುತ್ತಿದ್ದಾನೆ. ಈ ವಚನದ ಸರಳ ಸಮರ್ಥನೆಯ ಮೂಲಕ ಆತನು ಒತ್ತುಕೊಟ್ಟು ನಮಗೆ ಹೇಳುವುದೇನೆಂದರೆ, - ಪ್ರತಿಯೊಂದರ ಮೇಲೆ, ಪ್ರತಿಯೊಂದು ಆಗು ಹೋಗುಗಳ ಹಿಂದೆ, ದೇವರ ಸಂಪೂರ್ಣ ನಿಯಂತ್ರಣವಿದೆ ಎಂಬ ಯೋಚನೆಯು ನಿನ್ನ ಮನವನ್ನು ತುಂಬಿರಲಿ. ಅಂದರೆ ಶಿಷ್ಯನಾದವನು ದೇವರನ್ನು ಬೇಡಿಕೊಳ್ಳಲೂ ಮತ್ತು ಆತನನ್ನು ಹುಡುಕಲು ಅಗತ್ಯವಾದ ಪರಿಪೂರ್ಣ ನಂಬಿಕೆ ಮತ್ತು ಉತ್ಸಾಹವನ್ನು ಬೆಳೆಸಿಕೊಳ್ಳಬೇಕು.

ದೇವರು ಇದ್ದಾನೆ ಎಂಬ ಯೋಚನೆಯಿಂದ ನಿನ್ನ ಮನಸ್ಸನ್ನು ತುಂಬಿಸಿರಬೇಕು. ಒಮ್ಮೆ ನಿನ್ನ ಮನಸ್ಸು ಇಂಥಾ ಯೋಚನೆಗೆ ನಿಜವಾಗಿಯೂ ಅಂಟಿಕೊಂಡಿದ್ದರೆ ನಿನಗೆ ಸಂಕಷ್ಟವುಂಟಾದಾಗ, ಶ್ವಾಸೋಚ್ಛ್ವಾಸದಷ್ಟೇ ಸಹಜವಾಗಿ ನೀನು ಇದನ್ನು ಜ್ಞಾಪಿಸಿಕೊಳ್ಳುವಿ - ಯಾಕೆ ಕಳವಳ? ''ನನ್ನ ತಂದೆಯು ಇದನ್ನು ತಿಳಿದಿದ್ದಾನೆ!'' ಇದನ್ನು ನೆನೆಸಿಕೊಳ್ಳಲು ನೀನೇನೂ ಶ್ರಮವಹಿಸಬೇಕಿಲ್ಲ. ಇಕ್ಕಟ್ಟುಗಳ ಒತ್ತಡದ ಸಮಯದಲ್ಲಿ ತಾನಾಗಿಯೇ ಇದು ನಿನ್ನ ಮನಸ್ಸಿನಲ್ಲಿ ಮೂಡಿಬರುತ್ತದೆ. ಇದಕ್ಕೂ ಮುಂಚೆ ಇಂಥ ಆಲೋಚನೆಯಲ್ಲಿರದ ನೀನು, ಅಂಥಾ ಪರಿಸ್ಥಿತಿಗಳಲ್ಲಿ, ಆ ವ್ಯಕ್ತಿಯ ಬಳಿಗೆ, ಈ ವ್ಯಕ್ತಿಯ ಬಳಿಗೆ, ಓಡಾಡುತ್ತಿದ್ದೆ. ಆದರೆ ಈಗಲಾದರೋ ದೈವನಿಯಂತ್ರಣದ ಪರಿಕಲ್ಪನೆಯು ನಿನ್ನಲ್ಲಿ ಬಲವಾಗಿ ಬೆಳೆದಿರುವುದರಿಂದ ಅಂಥಾ ಪರಿಸ್ಥಿತಿಗಳಲ್ಲಿ ನೇರವಾಗಿ ದೇವರ ಬಳಿಗೆ ಬರುವೆ. ಯಾರಲ್ಲಿ ತನ್ನ ಆತ್ಮವಿದೆಯೋ ಅಂಥವರಿಗಾಗಿ ಯೇಸುಕ್ರಿಸ್ತನು ನೀತಿ ನಿಬಂಧನೆಗಳನ್ನು ವಿಧಿಸುತ್ತಿದ್ದಾನೆ ಮತ್ತು ಅದು ಕಾರ್ಯವೆಸಗುವ ರೀತಿ ಹೀಗಿದೆ - 'ದೇವರು ನನ್ನ ತಂದೆ, ಆತನು ನನ್ನನ್ನು ಪ್ರೀತಿಸುತ್ತಾನೆ. ಆತನು ನನ್ನನ್ನು ಮರೆತು ಬಿಡುವನೆಂದು ನಾನೆಂದೂ ಯೋಚಿಸುವುದಿಲ್ಲ; ನಾನೇಕೆ ಚಿಂತಿಸಲಿ' ?

ನಿನ್ನನ್ನಾವರಿಸಿರುವ ಕಾರ್ಗತ್ತಲೆಯನ್ನು ದೇವರು ದೂರ ಮಾಡುವುದಿಲ್ಲವೆಂದು ಭಾವಿಸುವ ಕೆಲವು ಸಮಯಗಳು ಇದ್ದೇ ಇರುತ್ತವೆ, ಆದರೆ ಆಗಲೂ ಆತನಲ್ಲಿ ಭರವಸದಿಂದಿರಬೇಕೆಂದು ಯೇಸುಸ್ವಾಮಿಯು ಹೇಳುತ್ತಿದ್ದಾನೆ. ನಿರ್ದಯಿ ಗೆಳೆಯನಂತೆ ದೇವರು ಕಂಡುಬರುವನು; ಆದರೆ ಆತನು ನಿರ್ದಯಿ ಅಲ್ಲ, ಅಸಹಜ ತಂದೆಯಂತೆ ಕಂಡುಬರುವನು; ಆದರೆ ಆತನು ಹಾಗಿಲ್ಲ, ಅನ್ಯಾಯ ಮಾಡುವ ನ್ಯಾಯಾಧೀಶ ನಂತೆ ಕಂಡುಬರುವನು; ಆದರೆ ಆತನು ಹಾಗಿಲ್ಲ. ಎಲ್ಲಾ ಸಂಗತಿಗಳ ಹಿಂದೆ ದೇವರ ಚಿತ್ತವಿದೆ ಎಂಬ ಯೋಚನೆಯು ನಿನ್ನಲ್ಲಿ ದೃಢವಾಗಿರಬೇಕು ಮತ್ತು ವೃದ್ಧಿಸುತ್ತಿರಬೇಕು. ನಮ್ಮ ಜೀವಿತದಲ್ಲಿ, ದೇವರ ಚಿತ್ತವಿಲ್ಲದೇ ಯಾವ ವಿಷಯದಲ್ಲಿಯೂ ಏನೂ ಸಂಭವಿಸದು, ಆದ್ದರಿಂದ ಸಂಪೂರ್ಣವಾದ ವಿಶ್ವಾಸದಿಂದ ದೇವರಲ್ಲಿ ನೆಲೆಗೊಂಡಿರಬೇಕು. ಪ್ರಾರ್ಥನೆ ಎಂದರೆ ಕೇವಲ ಬೇಡಿಕೊಳ್ಳುವುದಲ್ಲ, ಬೇಡಿಕೊಳ್ಳುವಿಕೆಯು ಸಹಜ ಸ್ವಾಭಾವಿಕವೆಂಬುವ ಮನಃಪ್ರವೃತ್ತಿಯನ್ನು ಹುಟ್ಟಿಸುವುದೇ ನಿಜಪ್ರಾರ್ಥನೆ. ''ಬೇಡಿಕೊಳ್ಳಿರಿ, ನಿಮಗೆ ದೊರೆಯುವುದು''.

# ನಂಬಿಕೆಯ ಅದ್ಭುತ

**''ನನ್ನ ಬೋಧನೆಯಲ್ಲಿಯೂ ಪ್ರಸಂಗದಲ್ಲಿಯೂ ಮನವೊಲಿಸುವ ಜ್ಞಾನ ವಾಕ್ಯಗಳನ್ನು ನಾನು ಪ್ರಯೋಗಿಸದೆ'' - (1 ಕೊರಿ - 2:5)**

ಶ್ರೀ ಪೌಲನು ವಿದ್ವಾಂಸನೂ, ಶ್ರೇಷ್ಠ ಮಟ್ಟದ ವಾಗ್ಮಿಯೂ ಆಗಿದ್ದನು; ಆತನು ತೋರಿಕೆಯ ದೈನತೆಯಿಂದ ಮಾತುಗಳನ್ನಾಡುತ್ತಾ ಇಲ್ಲ, ತಾನು ದೇವರ ಸುವಾರ್ತೆಯನ್ನು ಸಾರುವಾಗ, ತನ್ನ ಘನವಾದ ವಾಕ್‌ಶಕ್ತಿಯ ಮೂಲಕ ಜನರನ್ನು ಪ್ರಭಾವಕ್ಕೊಳಪಡಿಸಿದರೆ, ಅದು ದೇವರ ಶಕ್ತಿಯ ಮೇಲೆ ಮುಸುಕನ್ನು ಹಾಕಿದಂತೆಯಾಗುತ್ತದೆ ಎಂದು ಪೌಲನು ಹೇಳಿದನು. ಯೇಸುವಿನಲ್ಲಿ ನಂಬಿಕೆ ಎಂಬ ಅದ್ಭುತವು, ಆತನು ಮಾಡಿದ ಪಾಪ ವಿಮೋಚನಾ ಕಾರ್ಯದ ಸತ್ವವೇ ಹೊರತು - ಪ್ರಭಾವ ವನ್ನುಂಟು ಮಾಡುವ ವಾಕ್ ಶಕ್ತಿಯಲ್ಲ; ಓಲೈಸುವಿಕೆ ಹಾಗೂ ಮನಮೆಚ್ಚಿಸುವುದರಿಂದಲೂ ಅಲ್ಲ, ಯಾವ ಬೆಂಬಲವೂ ಇಲ್ಲದ ದೇವರ ಶಕ್ತಿಯಿಂದಲೇ ಉಂಟಾಗುವುದು. ಪಾಪವಿಮೋಚನಾ ಕಾರ್ಯದ ಸೃಜನಾತ್ಮಕ ಶಕ್ತಿಯು ದೇವರ ಸುವಾರ್ತೆಯನ್ನು ಬೋಧಿಸುವುದರಿಂದ ಲಭಿಸುತ್ತದೆಯೇ ಹೊರತು ಧರ್ಮ ಬೋಧಕನ ವ್ಯಕ್ತಿತ್ವದಿಂದಲ್ಲ. ಸುವಾರ್ತಾ ಬೋಧಕನ ಉಪವಾಸವೆಂದರೆ ಆಹಾರ ತ್ಯಜಿಸುವುದಲ್ಲ, ಅದರ ಬದಲು ನಿರರ್ಗಳ ಪ್ರಸಂಗ ಮಾಡುವದನ್ನು, ವ್ಯಕ್ತಿಗತ ಪ್ರಭಾವವನ್ನೆಸಗುವುದನ್ನು ಮತ್ತು ಮನಮೋಹಕ ಪದ ಪ್ರಯೋಗವನ್ನು ಮಾತ್ರವಲ್ಲದೆ, ದೇವರ ಸುವಾರ್ತೆಯನ್ನು ಯಥಾರ್ಥವಾಗಿ ಸಾರಲು ಅಡ್ಡಿಯಾಗು ವಂಥವುಗಳೆಲ್ಲವನ್ನು ತ್ಯಜಿಸುವುದು. ಧರ್ಮ ಬೋಧಕನು ದೇವರ ಪ್ರತಿನಿಧಿಯಾಗಿರುವನು - ''ದೇವರೇ ನಮ್ಮ ಮೂಲಕ .........'' (2 ಕೊರಿಂಥ 5:20) ಅಂದರೆ ಬೋಧಕನಿರುವುದು ಕೇವಲ ದೇವರ ಸುವಾರ್ತೆಯನ್ನು ಪ್ರಚುರ ಪಡಿಸುವುದಕ್ಕೆ ಹೊರತು ಮಾನವನ ಆದರ್ಶಗಳ ಪ್ರಚಾರಕ್ಕಾಗಿಯಲ್ಲ. ನನ್ನ ಬೋಧನೆಗಳ ಪರಿಣಾಮದಿಂದ ಮಾತ್ರ ಜನರು, ತಾವೇ ಉತ್ತಮರಾಗುವೆವೆಂದು ಬಯಸಿದರೆ, ಅವರೆಂದಿಗೂ ಯೇಸುಕ್ರಿಸ್ತನ ಹತ್ತಿರ ಸುಳಿಯಲಾರರು. ಸುವಾರ್ತೆಯ ಸಾರುವಿಕೆಯಲ್ಲಿ ನನ್ನನ್ನು ಹೊಗಳುವಂಥಾದ್ದೇನಾದರೂ ಇದ್ದರೆ ನಾನೇ ಯೇಸುಕ್ರಿಸ್ತನ ಪರಮದ್ರೋಹಿಯಾಗುವುದರಲ್ಲಿ ಅದು ಅಂತ್ಯಗೊಳ್ಳುವುದು ಮತ್ತು ಪಾಪವಿಮೋಚನಾ ಕಾರ್ಯದ ಸೃಜನಾತ್ಮಕ ಶಕ್ತಿಯ ಕಾರ್ಯ ಸಾಧಿಸು ವಿಕೆಯನ್ನು ನಾನು ಅಡ್ಡಿಪಡಿಸುತ್ತೇನೆ. ''ನಾನು ಭೂಮಿಯಲ್ಲಿಂದ ಮೇಲಕ್ಕೆ ಎತ್ತಲ್ಪಟ್ಟಾಗ ಎಲ್ಲರನ್ನೂ ನನ್ನ ಬಳಿಗೆ ಎಳಕೊಳ್ಳುವೆನು''. (ಯೋಹಾನ 12:32) ಆತನನ್ನೇ ನಾವು ಎತ್ತಿಹಿಡಿಯಬೇಕು.

# ನಂಬುತ್ತಿರುವುದರ ರಹಸ್ಯ

**''ಅವನು- ಕರ್ತನೇ ನೀನಾರು ಎಂದು ಕೇಳಿದ್ದಕ್ಕೆ .........'' - (ಅ.ಕೃ. 9:5)**

ಯೇಸುಕ್ರಿಸ್ತನೆಸಗಿದ ವಿಮೋಚನಾಕಾರ್ಯದ ಅದ್ಭುತದ ಮೂಲಕ ದೃಢ ಸಂಕಲ್ಪದ ಪರಿಸಾಯನಾದ ತಾರ್ಸದ ಸೌಲನು ಕ್ಷಣ ಮಾತ್ರದಲ್ಲಿ ಯೇಸುಕ್ರಿಸ್ತನಿಗೆ ನಿಷ್ಠಾಭರಿತ, ದೀನಭಾವದ ಸೇವಕನಾಗಿ ಮಾರ್ಪಟ್ಟನು.

ವಿವರಿಸಲು ಸಾಧ್ಯವಿರುವ ವಿಷಯಗಳನ್ನು ನಾವು ವಿವರಿಸಿದರೆ ಅದರಲ್ಲಿ ಅದ್ಭುತವಾದದ್ದೂ ಏನೂ ಇಲ್ಲ. ಯಾವುದನ್ನು ವಿವರಿಸಿ ಹೇಳಲು ನಾವು ಶಕ್ತರೋ, ಅದನ್ನು, ಅದರ ಮೇಲಿರುವ ಹಿಡಿತದಿಂದ ಹೇಳುತ್ತೇವೆ ಮತ್ತು ಅದರಿಂದಾಗಿ ನಾವು ಸಹಜವಾಗಿಯೇ ವಿವರಣೆಗಳನ್ನು ಅರಸುತ್ತೇವೆ. ವಿಧೇಯನಾಗುವುದು ಸಹಜ ಸ್ವಭಾವವಲ್ಲ ; ಅಥವಾ ಅವಿಧೇಯ ನಾಗುವುದು ಅನಿವಾರ್ಯವಾದ ಪಾಪವೂ ಅಲ್ಲ. ಆದೇಶವೀಯುವವನ ಅಧಿಕಾರವನ್ನು ಗುರುತಿಸದ ವಿಧೇಯತೆಯಲ್ಲಿ ಯಾವ ನೈತಿಕತೆಯೂ ಇಲ್ಲ ಮತ್ತು ಅದು ನಿಜವಾದ ವಿಧೇಯತೆಯೂ ಅಲ್ಲ. ಈ ಅಧಿಕಾರದ ಗುರುತಿಸುವಿಕೆಯು ಇರದಿದ್ದರೆ, ಆದೇಶವೀಯುವ ವ್ಯಕ್ತಿಯು, ಒಬ್ಬನು ತನಗೆ ವಿಧೇಯನಾಗದೆ ಹೋದರೂ, ಅದು ಅವನಿಗಿರುವ ಸ್ವಾತಂತ್ರ್ಯವೆಂದು ಭಾವಿಸುವ ಸಾಧ್ಯತೆ ಇದೆ. ಒಬ್ಬ ವ್ಯಕ್ತಿಯು ಇನ್ನೊಬ್ಬ ವ್ಯಕ್ತಿಗೆ ''ನೀನು ಮಾಡಲೇಬೇಕು'' ಮತ್ತು ''ಮಾಡಿಯೇ ತೀರಬೇಕು'' ಎಂದು ಹೇಳಿದರೆ ಅವನು ಮನುಷ್ಯನ ಆತ್ಮವನ್ನು ಮುರಿದು, ಅದು ದೇವರಿಗೆ ಸಲ್ಲದಂತೆ ಮಾಡುತ್ತಾನೆ. ಒಬ್ಬನು ತಾನು ತೋರಿಸುವ ವಿಧೇಯತೆಯ ಹಿಂದೆ ಪರಿಶುದ್ಧನಾದ ದೇವರಿರುವುದನ್ನು ಗುರುತಿಸದಿದ್ದರೆ, ವಿಧೇಯತೆಗೆ ಅವನು ಕೇವಲ ದಾಸನಾಗಿರುವನು. ಅನೇಕ ಜನರು ತಮ್ಮ ಧಾರ್ಮಿಕತೆಯನ್ನು ಕಿತ್ತೆಸೆದಾಗ ಮಾತ್ರವೇ ದೇವರ ಬಳಿಗೆ ಬಂದಿರುತ್ತಾರೆ, ಕಾರಣವೆಂದರೆ ಅಲ್ಲಿ ಮಾನವೀಯ ಹೃದಯಕ್ಕೆ ಒಬ್ಬನೇ ಒಬ್ಬ ಯಜಮಾನನಿದ್ದಾನೆ - ಆತನೇ ಯೇಸುಕ್ರಿಸ್ತನು, ಯಾವುದೇ ಧರ್ಮವಲ್ಲ. ನಾನು ಆತನನ್ನು ಕಂಡಾಗ ''ನಾನು ನಿನಗೆ ವಿಧೇಯನಾಗುವುದಿಲ್ಲ'' ಎಂದು ನಾನು ಹೇಳಿದರೆ, ನನ್ನ ಗತಿಯೇನು! ನಾನು ವಿಧೇಯನಾಗಲೇಬೇಕೆಂದು ಆತನೆಂದೂ ಒತ್ತಾಯ ಮಾಡುವುದಿಲ್ಲ, ಆದರೆ ನಾನು ವಿಧೇಯ ನಾಗದಿದ್ದರೆ, ನನ್ನ ಆತ್ಮದಲ್ಲಿರುವ ದೇವಪುತ್ರನ ಮರಣಶಾಸನಕ್ಕೆ ನಾನು ಸಹಿ ಮಾಡಿರುತ್ತೇನೆ. ಯೇಸು ಕ್ರಿಸ್ತನಿಗೆ ಮುಖಾ ಮುಖಿಯಾಗಿ ನಿಂತುಕೊಂಡು ''ನಾನು ವಿಧೇಯ ನಾಗುವುದಿಲ್ಲ'' ಎಂದು ನಾನು ಹೇಳಿದರೆ, ಆತನು ನನ್ನನ್ನು ಒತ್ತಾಯ ಮಾಡುವುದಿಲ್ಲ; ಆದರೆ ಆತನು ಮಾಡಿದ ಪಾಪ ವಿಮೋಚನಾ ಕಾರ್ಯದ ಫಲವಾದ ಪುರ್ನಸೃಷ್ಟಿ ಸಾಮರ್ಥ್ಯತೆಯಿಂದ ನಾನು ಹಿಂದಕ್ಕೆ ಸರಿದು ಬಿಟ್ಟಿರುತ್ತೇನೆ. ನಾನು ಬೆಳಕಿಗೆ ಬರುವುದರಿಂದ ನಾನೆಂಥಾ ಅಸಹ್ಯವನ್ನುಂಟುಮಾಡುವವನೆಂಬುದು ಹೊರಬಿದ್ದರೂ, ಅದು ದೇವರ ಕೃಪೆಗೆ ಉಪೇಕ್ಷೆಯ ವಿಷಯ; ಆದರೆ ನಾನು ಹೊರಬರಲಿಚ್ಛಿಸದೆ ಬೆಳಕನ್ನೇ ತಿರಸ್ಕರಿಸಿದರೆ ನನ್ನ ಗತಿಯೇನು! (ಯೋಹಾನ 3:19-21 ನೋಡಿರಿ)

# ನಂಬಿದವನ ಶರಣಾಗತಿ

**''ನೀವು ನನ್ನನ್ನು ಗುರುವೆಂದೂ, ಕರ್ತನೆಂದೂ ಕರೆಯುತ್ತೀರಿ; ನೀವು ಕರೆಯುವುದು ಸರಿ, ನಾನು ಅಂಥವನೇ ಹೌದು'' - (ಯೋಹಾನ - 13:13)**

ನಮ್ಮ ಮೇಲೆ ತನ್ನ ಪ್ರಭುತ್ವವಿರಬೇಕೆಂದು ಯೇಸು ಸ್ವಾಮಿಯು ಒತ್ತಾಯಿಸು ವುದಿಲ್ಲ ; ''ನೀನು ಮಾಡಬೇಕು'' ಎಂದು ಆದೇಶಿಸುವುದೂ ಇಲ್ಲ. ನಾವು ಪೂರ್ಣ ಸ್ವತಂತ್ರರಾಗಿರಲು ಬಿಡುತ್ತಾನೆ - ಎಷ್ಟರ ಮಟ್ಟಿಗೆ ಸ್ವತಂತ್ರರೆಂದರೆ ನಾವು ಆತನ ಮುಖದ ಮೇಲೆ ಉಗುಳುವಷ್ಟು - ಅಂದು ಜನರು ಹಾಗೆಯೇ ಆತನಿಗೆ ಮಾಡಿದರು; - ನಾವು ಆತನನ್ನು ಶಿಲುಬೆಗೆ ಹಾಕಿಕೊಲ್ಲಬಹು ದಾದಷ್ಟು-ಅದನ್ನೇ ಜನರು ಆತನಿಗೆ ಮಾಡಿದರು; ಆತನಾದರೋ ಪ್ರತಿಯಾಗಿ ಒಂದು ಮಾತನ್ನಾದರೂ ಆಡುವುದಿಲ್ಲ. ಆದರೆ ಆತನು ಮಾಡಿದ ಪಾಪವಿಮೋಚನಾ ಕಾರ್ಯದ ಮೂಲಕ ಆತನ ಜೀವಿತವು ನನ್ನಲ್ಲಿ ಸೃಷ್ಠಿಗೊಂಡರೆ, ನನ್ನ ಮೇಲೆ ಆತನಿಗಿರುವ ಸಂಪೂರ್ಣ ಪ್ರಭುತ್ವವನ್ನು ತತ್‌ಕ್ಷಣವೇ ಗುರುತಿಸುವೆನು. ಅದೊಂದು ನೈತಿಕ ಆಳುವಿಕೆ-''ನೀನು ಪ್ರಭಾವ ಮಾನಬಲಗಳನ್ನು ಹೊಂದುವದಕ್ಕೆ ಯೋಗ್ಯನಾಗಿದ್ದೀ'' (ಪ್ರಕಟಣೆ 4:11) ನನ್ನಲ್ಲಿರುವ ಅಯೋಗ್ಯತೆಯೇ ಯೋಗ್ಯನಾದವನಿಗೆ ಶಿರ ಬಾಗಿಸಲು ತಿರಸ್ಕರಿಸುತ್ತದೆ. ನನಗಿಂತಲೂ ಶುದ್ಧನಾದ ವ್ಯಕ್ತಿಯನ್ನು ನಾನು ಸಂಧಿಸಿದಾಗ, ಅವನಲ್ಲಿರುವ ಯೋಗ್ಯತೆಯನ್ನು ಗುರುತಿಸದೆ, ಅವನ ಮುಖಾಂತರ ನನಗೆ ತಿಳಿಸಲ್ಪಡುವ ನಿರ್ದೇಶನಗಳಿಗೆ ವಿಧೇಯನಾಗದಿರುವದೇ ನನ್ನಲ್ಲಿರುವ ಅಯೋಗ್ಯತೆಯನ್ನು ಬಯಲು ಮಾಡುತ್ತದೆ. ಯೇಸು ಸ್ವಾಮಿಯ ಪ್ರಭುತ್ವದೊಳಗೆ ನಾವು ಬರುವಂತೆ ದೇವರು ನಮಗಿಂತಲೂ ಕೇವಲ ಅಲ್ಪಮಾತ್ರವಷ್ಟೇ ಉತ್ತಮರು-ಬೌದ್ಧಿಕವಾಗಿಯಲ್ಲ-ಪವಿತ್ರರೂ ಆಗಿರುವವರ ಮೂಲಕ ನಮಗೆ ತರಬೇತಿ ನೀಡುತ್ತಾನೆ. ಆನಂತರ ನಮ್ಮ ಜೀವಿತದ ಪೂರ್ಣಪ್ರವೃತ್ತಿಯು ಆತನಿಗೆ ವಿಧೇಯತೆಯನ್ನು ತೋರುತ್ತಿರುತ್ತದೆ.

ಒಂದು ವೇಳೆ ಯೇಸುಕ್ರಿಸ್ತನು ವಿಧೇಯತೆಯನ್ನು ಒತ್ತಾಯಿಸಿದರೆ, ಆತನೊಬ್ಬ ದುಡಿಸುವ ದಣಿಯಾಗಿ ಬಿಡುತ್ತಿದ್ದನು ಮತ್ತು ನಮ್ಮ ಮೇಲಿರುವ ಆತನ ಆಧಿಪತ್ಯವು ಕೊನೆಗಾಣುತ್ತಿತ್ತು. ಆತನೆಂದಿಗೂ ನಮ್ಮ ವಿಧೇಯತೆಯನ್ನು ಒತ್ತಾಯಿಸುವುದಿಲ್ಲ. ನಾವು ನಿಜವಾಗಿಯೂ ಆತನನ್ನು ಕಂಡರೆ, ಕೂಡಲೇ ನಾವಾಗಿಯೇ ಆತನಿಗೆ ವಿಧೇಯರಾಗಿ ಬಿಡುತ್ತೇವೆ. ಆತನೇ ನಮ್ಮ ಸ್ವಾಮಿ, ಬೆಳಗಿನಿಂದ ರಾತ್ರಿಯವರೆಗೂ ನಾವು ಆತನನ್ನು ಆರಾಧಿಸುತ್ತೇವೆ. ವಿಧೇಯತೆಯನ್ನು ನಾನು ಪರಿಗಣಿಸುವ ಮಟ್ಟವೇ ನಾನೆಷ್ಟರ ಮಟ್ಟಿಗೆ ದೇವರ ಕೃಪೆಯಲ್ಲಿ ಬೆಳೆಯುತ್ತಿರುವೆನೆಂಬುದನ್ನು ಬಯಲು ಪಡಿಸುತ್ತದೆ. ಲೌಕಿಕ ಜೀವಿತವೆಂಬ ಜವುಗು ನೆಲದ ರೊಚ್ಚಿನಲ್ಲಿ ಸಿಕ್ಕಿಕೊಳ್ಳುವ ಸಾಧ್ಯತೆಗಳಿಂದ 'ವಿಧೇಯತೆ' ಎಂಬ ಪದವನ್ನು ರಕ್ಷಿಸಬೇಕು ಮತ್ತು ಅದನ್ನು ಉನ್ನತ ಮಟ್ಟದಲ್ಲಿ ದೃಷ್ಠಿಸಬೇಕು. ಸರಿಸಮಾನರಲ್ಲಿ ಮಾತ್ರವೇ ವಿಧೇಯತೆ ಸಾಧ್ಯ. ಅದು ತಂದೆ ಮಗನ ನಡುವಿರುವ ಸಂಬಂಧದಂತೆ - ದಣಿ ಮತ್ತು ಆಳು ಇವರ ನಡುವಿನಂತಲ್ಲ. ''ನಾನೂ ತಂದೆಯೂ ಒಂದಾಗಿದ್ದೇವೆ'' (ಯೋಹಾನ 10:30) ''ಹೀಗೆ ಆತನು ಮಗನಾಗಿದ್ದರೂ ಅನುಭವಿಸಿದ ಬಾಧೆಗಳಿಂದಲೇ ವಿಧೇಯತೆಯನ್ನು ಕಲಿತು ಕೊಂಡನು'' (ಇಬ್ರಿಯ 5:9) ನಮ್ಮ ಪಾಪ ವಿಮೋಚಕನೆಂದೇ ಮಗನು ತಂದೆಯಾದ ದೇವರಿಗೆ ವಿಧೇಯನಾಗಿದ್ದನು. ಯಾಕೆಂದರೆ ಆತನು ಮಗನೇ ಆಗಿದ್ದನು ಮಗನಾಗಬೇಕಾದವನು ಎಂಬು ದಕ್ಕಾಗಿಯಲ್ಲ.

# ದೇವರ ಪ್ರಸನ್ನತೆಯ ಮೇಲೆ ಆಧಾರಗೊಂಡಿರುವಿಕೆ

**''ಯೆಹೋವನನ್ನು ನಿರೀಕ್ಷಿಸುವಖವರೋ ....... ಓಡಿದಣಿಯರು, ನಡೆದುಬಳಲರು -''**
**- (ಯೆಶಾಯ - 40:31)**

ನಡೆದಾಡುವುರದಲ್ಲಿ ರೋಮಾಂಚನೆಗೊಳ್ಳುವಂಥಾದ್ದೇನೂ ಇಲ್ಲ; ನಡೆಯುವುದು ಸ್ಥಿರ ಮನಸ್ಸಿನ ಗುಣಲಕ್ಷಣಗಳ ಪರೀಕ್ಷೆಯಾಗಿದೆ. ''ನಡೆದು ದಣಿಯರು'' ಅದೇ ನಮ್ಮ ಶಕ್ತಿಯ ಅಂತಿಮ ಪರಿಮಿತಿ. ಸತ್ಯ ವೇದದಲ್ಲಿ 'ನಡೆಯುವುದು' ಎನ್ನುವ ಪದವನ್ನು ಗುಣಚಾರಿತ್ರ್ಯವನ್ನು ಸೂಚಿಸಲು ಬಳಸಲಾಗಿದೆ. - ಯೋಹಾನನು ಅಲ್ಲಿ ತಿರುಗಾಡುತ್ತಿರುವ ಯೇಸುವನ್ನು ನೋಡಿ, ''ಅಗೋ ಯಜ್ಞಕ್ಕೆ ದೇವರು ನೇಮಿಸಿದ ಕುರಿ'' ಅಂದನು (ಯೋಹಾನ 1:35-36) ಸತ್ಯವೇದದಲ್ಲಿ ಯಾವ ವಿಷಯವೂ ಅಮೂರ್ತವಾಗಿರು ವುದಿಲ್ಲ. ಇರುವುದೆಲ್ಲವೂ ಸ್ಫುಟವೂ ಸತ್ಯವೂ ಆಗಿದೆ. 'ನೀನು ಆಧ್ಯಾತ್ಮಿಕ ವ್ಯಕ್ತಿಯಾಗಿರು' ಎಂದು ದೇವರು ಹೇಳುವುದಿಲ್ಲ. ಆತನು ಹೇಳುವುದು ''ನನಗೆ ನಡಕೊಂಡು ...'' (ಆದಿಕಾಂಡ 17:1).

ನಾವು ಶಾರೀರಿಕವಾಗಿ, ಭಾವುಕರಾಗಿ, ಅಸ್ವಸ್ಥರಾಗಿರುವಾಗ, ಜೀವಿತದಲ್ಲಿ ರೋಮಾಂಚನ ಗಳನ್ನು ಸದಾಬಯಸುತ್ತೇವೆ. ಆದರೆ ಬಾಹ್ಯರಂಗದ ನಮ್ಮ ಜೀವನದಲ್ಲಿ ಇದು ಪರಿಶುದ್ಧಾತ್ಮನನ್ನು ನಕಲಿ ಮಾಡುವತ್ತ ನಮ್ಮನ್ನು ನಡೆಸುತ್ತದೆ; ಇಂಥಾ ಪ್ರವೃತ್ತಿಯು ನಮ್ಮ ಭಾವುಕ ಜೀವಿತದಲ್ಲಿ ನಮ್ಮನ್ನು ಮಿತಿ ಮೀರಿದ ಮಮತೆಗೆ ನಡೆಸಿ ನಮ್ಮ ನೈತಿಕತೆಯನ್ನು ನಾಶಪಡಿಸುತ್ತದೆ; ಹಾಗೆಯೇ ನಾವು ಆತ್ಮೀಕ ಜೀವನ ರಂಗದಲ್ಲಿ ರೋಮಾಂಚನಗೊಳ್ಳುವಿಕೆಗಾಗಿ ಅಂದರೆ ''ಹದ್ದುಗಳಂತೆ ರೆಕ್ಕೆಗಳನ್ನು ಚಾಚುವಂತೆ'' (ಯೆಶಾಯ 40:31) ಏರಲು ನಾವು ಒತ್ತಾಯಿಸಿದರೆ ಅದು ನಮ್ಮ ಆತ್ಮೀಕ ಜೀವನದ ಸರ್ವನಾಶದಲ್ಲಿ ಅಂತ್ಯಗೊಳ್ಳುವುದು.

ದೇವರ ಪ್ರಸನ್ನತೆಯ ವಾಸ್ತವವು, ಯಾವುದೇ ನಿಶ್ಚಿತ ಸ್ಥಳದ ಮೇಲೆ ಆತು ಕೊಂಡಿರುವುದಿಲ್ಲ , ಕರ್ತನನ್ನು ನಮ್ಮ ಮುಂದಿಟ್ಟುಕೊಂಡು ನಡೆಯುವುದು ನಮ್ಮ ನಿರ್ಣಯವನ್ನು ಅದು ಆತುಕೊಂಡಿರುತ್ತದೆ. ದೇವರ ಇರುವಿಕೆಯ ವಾಸ್ತವದ ಮೇಲೆ ಆಧಾರಗೊಳ್ಳುವಿಕೆಯನ್ನು ಅಲ್ಲಗಳೆದಾಗಲೇ ನಮಗೆ ಸಮಸ್ಯೆ ಗಳುಂಟಾಗುತ್ತವೆ. ಕೀರ್ತನಾಕಾರನ ಅನುಭವವು ಹೀಗಿದೆ. ''ಆದುದರಿಂದ ... ಹೋದರೂ ... ನಮಗೇನೂ ಭಯವಿಲ್ಲ'' (ಕೀರ್ತನೆ 46:2) ದೇವರ ಪ್ರಸನ್ನತೆಯ ವಾಸ್ತವಿಕತೆಯ ಮೇಲೆ ನಾವು ಆಧಾರಗೊಂಡಾಗ ನಮ್ಮ ಜೀವನದಲ್ಲಿಯೂ ಈ ಕೀರ್ತನೆಯ ನುಡಿಗಳು ನಮ್ಮದಾಗುತ್ತವೆ; ದೇವರ ಪ್ರಸನ್ನತೆಯ ಪ್ರಜ್ಞೆಯಲ್ಲ - ದೇವರ ವಾಸ್ತವವೇ ನಮಗೆ ಆಧಾರವಾಗಿರಬೇಕು. ಆಗ ''ಈ ಎಲ್ಲಾ ಸಮಯ ದಲ್ಲಿಯೂ ಆತನು ಅಲ್ಲಿಯೇ ಇದ್ದನು'' ಎಂಬುವ ಘೋಷಣೆ ನಮ್ಮಿಂದ ಹೊರ ಬೀಳುತ್ತದೆ.

ಸಂದಿಗ್ಧ ಕ್ಷಣಗಳಲ್ಲಿ ದೇವರ ಮಾರ್ಗದರ್ಶನವನ್ನು ಬೇಡಿಕೊಳ್ಳುವುದು ಅಗತ್ಯವಾಗಿದೆ ಯಾದರೂ, ಯಾವಾಗಲೂ ಎಲ್ಲಾ ವಿಷಯಗಳಲ್ಲಿಯೂ ''ದೇವರೇ ನನಗಿಲ್ಲಿ ದಾರಿ ತೋರಿಸು, ಅಲ್ಲಿ ಮಾರ್ಗದರ್ಶನ ಮಾಡು'' ಎಂದು ಬೇಡುವುದು ಅನಗತ್ಯವಾಗಿರುತ್ತದೆ. ಹೇಗಿದ್ದರೂ ಆತನು ಅದನ್ನು ಖಂಡಿತವಾಗಿಯೂ ಮಾಡುವನು! ಆದರೆ ನಮ್ಮ ಲೌಕಿಕ ತಿಳುವಳಿಕೆಯ ತೀರ್ಮಾನಗಳು ಆತನ ಚಿತ್ತಕ್ಕನುಗುಣವಾಗಿರದಿದ್ದಾಗ ಅವುಗಳ ಮೂಲಕ ನಮ್ಮನ್ನು ಹೋಗಗೊಡುವವನಾದರೂ ಅವುಗಳನ್ನು ನಿಯಂತ್ರಿಸುತ್ತಾನೆ; ಆಗ ನಾವು ಮೌನರಾಗಿ, ಸ್ಥಬ್ದರಾಗಿರುತ್ತಾ ಆತನ ಪ್ರಸನ್ನತೆಯ ಮಾರ್ಗದರ್ಶನಕ್ಕಾಗಿ ಕಾದಿರಬೇಕು.

# ಪರಲೋಕ ರಾಜ್ಯಕ್ಕೆ ಪ್ರವೇಶದ್ವಾರ

**''ಆತ್ಮದಲ್ಲಿ ಬಡವರಾಗಿರುವವರು ಧನ್ಯರು'' - (ಮತ್ತಾ - 5:3)**

ಯೇಸುಕ್ರಿಸ್ತನನ್ನು ಪ್ರಥಮವಾಗಿ ಬೋಧಕನ ಸ್ಥಾನದಲ್ಲಿರಿಸುವುದರ ವಿಷಯದಲ್ಲಿ ಎಚ್ಚರ ದಿಂದಿರು. ಯೇಸುಕ್ರಿಸ್ತನು ಕೇವಲ ಬೋಧಕನು ಮಾತ್ರವೇ ಆಗಿದ್ದರೆ, ನಾನು ಸಾಧಿಸಲಾರದ ಪ್ರಮಾಣ ಮಟ್ಟವನ್ನು (ಸ್ಟ್ಯಾಂಡರ್ಡ್) ಸ್ಥಾಪಿಸಿ ನನ್ನನ್ನು ಆಶೆ ನಿರಾಶೆ ಗೊಳಪಡಿಸುವುದಷ್ಟನ್ನೇ ಆತನು ಮಾಡುವನು. ನಾನು ಮುಟ್ಟಲು ಸಾಧ್ಯವಿರದಂಥ ಒಂದು ಆದರ್ಶವನ್ನು ನನಗೆ ಪ್ರಸ್ತುತ ಪಡಿಸಿದರೆ ಪ್ರಯೋಜನವೇನು? ಅದರ ತಿಳುವಳಿಕೆಯ ಸುಳಿವೂ ಇರದಿದ್ದರೆ ನಾನು ಮತ್ತಷ್ಟು ಸುಖಿಯಾಗಿ ರುತ್ತೇನೆ. ನಾನೆಂದಿಗೂ ತಲುಪಲಾರದಂಥವುಗಳನ್ನು ನನಗೆ ತಿಳಿಯಪಡಿಸುವುದರಲ್ಲಿ ಔಚಿತ್ಯವೇನಿದೆ ? ಅಂದರೆ ನಿರ್ಮಲ ಚಿತ್ತನಾಗಿರಬೇಕು, (5:8) ನನ್ನ ಕೆಲಸಕ್ಕಿಂತಲೂ ಹೆಚ್ಚಿನದನ್ನು ಮಾಡುವವ ನಾಗಿರಬೇಕು, ದೇವರಿಗೆ ಪರಿಪೂರ್ಣ ನಿಷ್ಠೆಯುಳ್ಳವನೂ ಆಗಿರಬೇಕೆಂಬಂಥವುಗಳು? ನನ್ನನ್ನು ಜಿಗುಪ್ಸೆ ಗೊಳಪಡಿಸುವಷ್ಟು ಗಂಭೀರವಾದ, ನಾನು ನೆರವೇರಿಸಲಾಗದ ಆದರ್ಶವಿದು ಎಂಬುದನ್ನು ಹೊರತು ಪಡಿಸಿ, ಆತನ ಬೋಧನೆಯು ನನಗೇನಾದರೂ ಬೇರೆಯೇ ಅರ್ಥಪೂರ್ಣವಾಗಿರಬೇಕಾದರೆ, ಮೊದಲು ನಾನು ಯೇಸುಕ್ರಿಸ್ತನನ್ನು ರಕ್ಷಕನೆಂದು ತಿಳಿದಿರಬೇಕು; ಆದರೆ ದೇವರಾತ್ಮನ ಮೂಲಕ ನಾನು ಹೊಸದಾಗಿ ಹುಟ್ಟಿದಾಗ, ಯೇಸುಕ್ರಿಸ್ತನು ಕೇವಲ ಬೋಧನೆ ಮಾಡಲು ಮಾತ್ರ ಬರಲಿಲ್ಲ, ನಾನು ಏನಾಗಿರಬೇಕೆಂದು ಆತನು ನನಗೆ ಬೋಧಿಸಿದನೋ ಹಾಗೆಯೇ ನಾನಾಗುವಂತೆ ನನ್ನನ್ನು ರೂಪಿಸಲು ಬಂದವನೆಂಬುದನ್ನು ನಾನು ಅರಿಯುತ್ತೇನೆ. ವಿಮೋಚನೆ ಎಂದರೆ ತನ್ನ ಜೀವಿತವನ್ನು ಆಳುತ್ತಿರುವ ತನ್ನ ಸ್ವಭಾವವನ್ನು ಯೇಸುಕ್ರಿಸ್ತನು ಯಾವ ವ್ಯಕ್ತಿಯೊಳಗಾದರೂ ಇರಿಸಬಲ್ಲನು ಮತ್ತು ದೇವರು ಸ್ಥಾಪಿಸುವ ಎಲ್ಲಾ ಮಟ್ಟಗಳು (ಸ್ಟ್ಯಾಂಡರ್ಡ್) ಈ ಸ್ವಭಾವದ ಮೇಲೆ ನೆಲೆ ನಿಂತಿರುತ್ತವೆ.

ಪರ್ವತ ಪ್ರಸಂಗದಲ್ಲಿರುವ ಬೋಧನೆಗಳು ಸ್ವಾಭಾವಿಕ ವ್ಯಕ್ತಿಯಲ್ಲಿ ಜಿಗುಪ್ಸೆಯನ್ನುಂಟು ಮಾಡುತ್ತವೆ - ಅದು ಹಾಗೆಯೇ ಆಗ ಬೇಕೆಂಬುದೇ ಯೇಸುಸ್ವಾಮಿಯ ಉದ್ದೇಶ. ನಾವು ಎಷ್ಟರವರೆಗೆ ಸ್ವನೀತಿಯುಳ್ಳವರಾಗಿರುತ್ತಾ ಸ್ವಾಮಿಯ ಆ ಬೋಧನೆಯನ್ನು ನಮ್ಮ ಜೀವಿತದಲ್ಲಿ ಸಾಧಿಸಿಯೇ ಸಾಧಿಸು ತ್ತೇವೆ ಎನ್ನುವ ಒಣಹೆಮ್ಮೆಯ ಅಭಿಪ್ರಾಯದಲ್ಲಿರುವಷ್ಟು ಕಾಲ ನಾವು ಹಾಗೆಯೇ ಮುಂದೆ ಸಾಗಲು ದೇವರು ಆಸ್ಪದ ಕೊಡುತ್ತಾನೆ - ಎಲ್ಲಿಯ ವರೆಗೆಂದರೆ, ಹಾಗೆ ಸಾಗುತ್ತಿರುವಾಗ ಅಡ್ಡಿ ಆತಂಕಗಳು ಎದುರಾಗಿ ನಮ್ಮ ಅಜ್ಞಾನವು ಮುರಿದು ಬೀಳುವ ತನಕ. ಆಗ ನಾವು ಆತ್ಮದಲ್ಲಿ ದಿವಾಳಿಯಾಗಿ ದೇವರ ಬಳಿಗೆ ಬರುತ್ತೇವೆ ಮತ್ತು ಆತನಿಂದ ಏನನ್ನಾದರೂ ಪಡಕೊಳ್ಳಲು ನಾವು ಇಚ್ಛಿಸುತ್ತೇವೆ. - ''ಆತ್ಮದಲ್ಲಿ ದಿವಾಳಿಯಾದವರು ಧನ್ಯರು'', ಇದೇ ದೇವರ ರಾಜ್ಯಕ್ಕೆ ಮೂಲಾಧಾರ,-ಆಸ್ತಿ ಪಾಸ್ತಿಗಳ ಒಡೆತನ ವಲ್ಲ; ಯೇಸು ಕ್ರಿಸ್ತನಿಗಾಗಿ ಮಾಡುವ ನಿರ್ಣಯಗಳಲ್ಲ, ಅಲ್ಲಿ ಬೇಕಾಗಿರುವುದು ಸಂಪೂರ್ಣ ನಿಷ್ಪ್ರಯೋಜಕನಾಗಿರುವೆನೆಂಬ ಭಾವನೆ - ''ನಾನು ಅದನ್ನು ಪ್ರಾರಂಭಿಸಲಾರೆ'' ಆಗ ಸ್ವಾಮಿಯವರು ಹೇಳುತ್ತಾರೆ - ''ನೀನು ಧನ್ಯನು'' ಅದೇ ದೇವರ ರಾಜ್ಯಕ್ಕೆ ಮಹಾದ್ವಾರ. ನಾವು ಬಡವರೆಂದು ನಾವು ತಿಳಿದಿರುವಾಗ, ಆ ದ್ವಾರದ ಬಳಿಗೆ ಬರಲು ಹೆಚ್ಚು ಸಮಯ ಬೇಕಾಗುವುದಿಲ್ಲ ! ನಮ್ಮ ಸ್ವಂತ ಬಡತನದ ಜ್ಞಾನವು, ಯೇಸುಕ್ರಿಸ್ತನು ಕಾರ್ಯಸಾಧಿಸುವ ಸರಿಯಾದ ಸ್ಥಳಕ್ಕೆ ನಮ್ಮನ್ನು ಬರಮಾಡುತ್ತದೆ.

# ಶುದ್ಧೀಕರಣ

**''ದೇವರ ಚಿತ್ತವೇನೆಂದರೆ ನೀವು ಶುದ್ಧರಾಗಿರಬೇಕೆಂಬುದೇ'' - (1 ಥೆಸ - 4:3)**

ಸಾವಿನ ಕಡೆ : ಪವಿತ್ರೀಕರಣ ಮಾಡುವಾಗ ದೇವರು ನಮ್ಮ ಮರಣದ ಕಡೆಯಲ್ಲಿಯೂ ಹಾಗೂ ಜೀವದ ಕಡೆಯಲ್ಲಿಯೂ ಕಾರ್ಯನಿರ್ವಹಿಸಬೇಕಾಗಿದೆ. ನಮ್ಮಲ್ಲಿ ಅನೇಕರು ಸಾವಿನ ಸ್ಥಳದಲ್ಲಿ ಬಹಳ ಸಮಯವನ್ನು ಕಳೆಯುತ್ತಾ, ಕಟ್ಟಲ್ಪಟ್ಟ ಸಮಾಧಿಗಳಂತೆ ಜಡಗಟ್ಟಿರುತ್ತೇವೆ. ಪವಿತ್ರೀಕರಣವು ವಾಸ್ತವ ವಾಗುವ ಮೊದಲು ಮಹಾ ಕದನವು ನಡದೇ ತೀರುತ್ತದೆ, ಅದು ಯೇಸುಕ್ರಿಸ್ತನು ಅಪೇಕ್ಷಿಸುವ ವಿಷಯಗಳ ವಿರುದ್ಧ ರೇಗಿಕೊಂಡು ಸೆಣಸುವ ಕದನ. ದೇವರ ಆತ್ಮನು, ಪವಿತ್ರೀಕರಣವೆಂದ ರೇನೆಂಬುದನ್ನು ತಿಳಿಸಲಾರಂಬಿಸಿದ ಕೂಡಲೇ ಹೋರಾಟ ಪ್ರಾರಂಭವಾಗುತ್ತದೆ. ''ಯಾವನಾದರೂ ನನ್ನ ಬಳಿಗೆ ಬಂದು ... ಹಗೆ ಮಾಡದಿದ್ದರೆ ಅವನು ನನ್ನ ಶಿಷ್ಯನಾಗಿರಲಾರನು'' (ಲೂಕ 14:26)

ಪವಿತ್ರೀಕರಣದ ಕಾರ್ಯಗತಿಯಲ್ಲಿ ದೇವರ ಆತ್ಮನು ನನ್ನದೆಲ್ಲವುಗಳಿಂದ ನನ್ನನ್ನು ಕಳಚಿ, ನಾನಲ್ಲದೆ ಬೇರೇನೂ ಇಲ್ಲದಂತೆ ನನ್ನನ್ನು ನಗ್ನಗೊಳಿಸುತ್ತಾನೆ. ಇದೇ ನನ್ನ ಸಾವಿನ ಸ್ಥಳ. ನಾನು 'ನಾನಾಗಿಯೇ', ಮತ್ತೇನು ಇಲ್ಲದವನಾಗಿರಲು ನಾನು ಇಚ್ಛಿಸುವೆನೋ? - ಗೆಳೆಯರು ಇಲ್ಲ, ತಂದೆಯೂ ಇಲ್ಲ, ಸಹೋದರನು ಇಲ್ಲ, ಸ್ವ ಹಿತಗಳಿಲ್ಲ, ಏನೇನೂ ಇಲ್ಲ , ಕೇವಲ ಸಾಯಲು ಸಿದ್ಧನಿರುವೆನೋ? ಪವಿತ್ರಿಕರಣಕ್ಕೆ ಅದೇ ಷರತ್ತು. ''ಸಮಾಧಾನವನ್ನು ಹುಟ್ಟಿಸುವುದಕ್ಕೆ ನಾನು ಬಂದಿಲ್ಲ ಖಡ್ಗವನ್ನು ಹಾಕುವುದಕ್ಕೆ ಬಂದೆನು'' (ಮತ್ತಾಯ 10:34) ಇಲ್ಲಿಯೇ ಕದನವು ಜರುಗುತ್ತದೆ ಮತ್ತು ಇಲ್ಲಿಯೇ ಅನೇಕರು ಮೂರ್ಛೆ ಬೀಳುವರು. ಈ ಮುಖ್ಯಾಂಶದಲ್ಲಿಯೇ ನಾವು ಯೇಸುಕ್ರಿಸ್ತನ ಮರಣದೊಂದಿಗೆ ಗುರುತಿಸಿಕೊಳ್ಳಲು ನಿರಾಕರಿಸುತ್ತೇವೆ. ''ಇದು ಬಹಳ ಕಠಿಣವಾದದ್ದು. ನಾನು ಇದನ್ನು ಮಾಡಬೇಕೆಂದು ಆತನು ಹಾರೈಸುವುದಿಲ್ಲ'' ಎಂದು ನಾವು ಹೇಳುತ್ತೇವೆ; ಆದರೆ ಈ ಅಂಶದ ವಿಷಯದಲ್ಲಿ ನಮ್ಮ ಕರ್ತನು ಬಹಳ ಕಠಿಣನೇ ಆಗಿರುವನು. ಅದನ್ನು ನಾವು ಮಾಡಲೇಬೇಕೆಂದು ಹಾರೈಸುತ್ತಾನೆ.

ನನಗೆ 'ನಾನು ಮಾತ್ರವೇ' ಆಗುವಷ್ಟು ನನ್ನನ್ನು ತಗ್ಗಿಸಿಕೊಳ್ಳಲು ನಾನು ಸಿದ್ಧನಿರುವೆನೋ? ನನ್ನ ಸ್ನೇಹಿತರು ನನ್ನನ್ನು ಕುರಿತು ಏನು ಯೋಚಿಸುವರೋ ಅದರಿಂದ, ನನ್ನಷ್ಟಕ್ಕೆ ನಾನು ಏನಾಗಿದ್ದೇನೆಂದು ಭಾವಿಸಿಕೊಂಡಿರುವೆನೋ ಅದರಿಂದ, ನನ್ನನ್ನು ಕಳಚಿಕೊಂಡು ಕೇವಲ ಶೂನ್ಯ ವಾಗಿರುವ ನನ್ನ ತನವನ್ನು ದೇವರಿಗೊಪ್ಪಿಸಿ ಕೊಡಲು ನಾನು ಸಿದ್ಧನಿರುವೆನೋ? ಹೀಗೆ ನಾನೇ, ನಾನಾದ ತಕ್ಷಣವೇ ದೇವರು ನನ್ನನ್ನು ಸಂಪೂರ್ಣವಾಗಿ ಪವಿತ್ರಮಾಡುವನು ಮತ್ತು ಪ್ರತಿಯೊಂದರಲ್ಲಿಯೂ ದೇವರನ್ನು ಹೊರತು ಪಡಿಸಿದ ನನ್ನ ಎಲ್ಲಾ ತೀವ್ರಾಸಕ್ತಿಗಳಿಂದ ನನ್ನ ಜೀವಿತವು ಮುಕ್ತವಾಗಿಬಿಡುತ್ತದೆ. 'ಕರ್ತನೇ, ಪವಿತ್ರೀಕರಣವೇನೆಂಬುದನ್ನು ದಯವಿಟ್ಟು ನನಗೆ ತಿಳಿಯಪಡಿ'ಸೆಂದು ನಾನು ಪ್ರಾರ್ಥಿಸಿ ದಾಗ ಆತನು ಎಲ್ಲವನ್ನೂ ನನಗೆ ಪ್ರಕಟ ಪಡಿಸುತ್ತಾನೆ. ಅದೇ ನನ್ನನ್ನು ಯೇಸು ಕ್ರಿಸ್ತನಲ್ಲಿ ಐಕ್ಯ ಗೊಳಿಸುತ್ತದೆ. ಪವಿತ್ರೀಕರಣವೆಂದರೆ, ನನ್ನೊಳಗೆ ಏನನ್ನಾದರೂ ಯೇಸುಕ್ರಿಸ್ತನು ಇರಿಸಬಲ್ಲನು ಎಂತಲ್ಲ, ಯೇಸುಕ್ರಿಸ್ತನು ತಾನೇ ನಮ್ಮೊಳಗೆ ಸೇರಿಕೊಳ್ಳು ವುದಾಗಿದೆ.

# ಶುದ್ಧೀಕರಣ

**''ನೀವು ಕ್ರಿಸ್ತಯೇಸುವಿನಲ್ಲಿರುವುದು ಆತನಿಂದಲೇ. ಕ್ರಿಸ್ತಯೇಸು ನಮಗೆ ದೇವರ ಕಡೆಯಿಂದ ... ಶುದ್ಧೀಕರಣ ........ ಕಾರಣನೂ ಆದನು'' – (1 ಕೊರಿಂಥ–1:30)**

ಬದುಕಿನ ಕಡೆ : ಪವಿತ್ರೀಕರಣದ ರಹಸ್ಯವೆಂದರೆ ಯೇಸುಕ್ರಿಸ್ತನ ಪರಿಪೂರ್ಣತೆ ಯನ್ನು ನನಗೆ ನೀಡಲಾಗಿದೆ, ಅದು ಕಾಲಾನುಕ್ರಮದಲ್ಲಿ ನೀಡಿದಂತಹುದು ಅಲ್ಲ, ಯೇಸ್ರುಕಿಸ್ತನು ನನ್ನನ್ನು ಪವಿತ್ರನನ್ನಾಗಿ ಮಾಡಿಕೊಂಡಿರುವನೆಂದು ನಂಬಿಕೆಯಿಂದ ನಾನು ಗ್ರಹಸಿದ ತತ್‌ಕ್ಷಣವೇ ಅದನ್ನು ಪಡೆದಿರುತ್ತೇನೆ. ಯೇಸುಕ್ರಿಸ್ತನ ಪರಿಶುದ್ಧತೆಗಿಂತಲೂ ಅಲ್ಪವಾದರೂ ಕಡಿಮೆಯಾಗದೆ, ಅದು ನನ್ನೊಳಗೆ ಮೈದೋರಿ ನನ್ನ  ಸ್ವಂತದ್ದಾಗದಿದ್ದರೆ ಅದು ಪವಿತ್ರೀಕರಣವಲ್ಲ.

ಪರಿಶುದ್ಧ ಜೀವನದ ಒಂದು ಅಮೋಘ ರಹಸ್ಯ, ಅದು ಯೇಸುಸ್ವಾಮಿಯ ಅನುಕರಣೆ ಯಲ್ಲಿಲ್ಲ, ಆದರೆ ಆತನ ಸಂಪೂರ್ಣತೆಯು ತಾನಾಗಿಯೇ ನನ್ನ  ನರ ಶರೀರದಲ್ಲಿ ಪ್ರಕಟಗೊಳ್ಳಲಿಕ್ಕೋಸ್ಕರ ನನ್ನನ್ನು ಒಪ್ಪಿಸಿಕೊಡುವದರಲ್ಲಿ ಆ ರಹಸ್ಯವಡಗಿದೆ. 'ಕ್ರಿಸ್ತನು ನಿನ್ನಲ್ಲಿದ್ದಾನೆ' ಇದೇ ಪವಿತ್ರೀಕರಣ. ಪವಿತ್ರೀಕರಣದಲ್ಲಿ ಆತನ ಅದ್ಭುತ ಜೀವಿತವನ್ನು ನನಗೆ ನೀಡಲಾಗಿದೆ ಮತ್ತು ನಂಬಿಕೆಯ ಮೂಲಕ ದೇವರ ಕೃಪೆಯ ಶ್ರೇಷ್ಠ ಬಹುಮಾನವಾಗಿ ಅದನ್ನು ನನಗೆ ಕೊಡಲಾಗಿದೆ. ಆತನ ವಾಕ್ಯಗಳಲ್ಲಿ ಅದೆಷ್ಟು ಸತ್ಯವೋ, ಅಷ್ಟೇ ಸತ್ಯವಾಗಿ ದೇವರು ನನ್ನನ್ನು ಪವಿತ್ರೀಕರಿಸಲೆಂದು ನಾನು ಇಚ್ಛೈಸುತ್ತಿದ್ದೇನೆಯೋ ?

ಪವಿತ್ರೀಕರಣವೆಂದರೆ, ಯೇಸುಕ್ರಿಸ್ತನ ಪವಿತ್ರ ಗುಣಗಳ ನೀಡಿಕೆ. ಆತನ ತಾಳ್ಮೆ, ಆತನ ಪ್ರೀತಿ, ಆತನ ಪರಿಶುದ್ಧತೆ, ಆತನ ನಂಬಿಕೆ, ಆತನ ನಿರ್ಮಲತೆ, ಆತನ ದೈವತ್ವ ಇವೆಲ್ಲವುಗಳೂ ಪವಿತ್ರೀಕರಿಸಲ್ಪಟ್ಟ ಜೀವಿತದ ಒಳಗೂ ಹೊರಗೂ ಪ್ರಕಟವಾಗುತ್ತಿರುತ್ತವೆ. ಪವಿತ್ರೀಕರಣವೆಂದರೆ ನಾವು ಪರಿಶುದ್ಧರಾಗುವುದಕ್ಕೆ ಯೇಸುಸ್ವಾಮಿಯಿಂದ ಶಕ್ತಿಯನ್ನು ಸೆಳೆದು ಕೊಳ್ಳುವುದಲ್ಲ ; ಯೇಸುಸ್ವಾಮಿಯಲ್ಲಿ ತೋರಿಬಂದಿರುವ ಪರಮ ಪವಿತ್ರತೆಯನ್ನು ಸೆಳೆದುಕೊಳ್ಳುವುದರ ಮೂಲಕ ಆತನು ನನ್ನೊಳಗೆ ಮೈದೋರುತ್ತಾನೆ. ಪವಿತ್ರೀ ಕರಣವು ಒಂದು ಅನುಗ್ರಹವಾಗಿದೆ, ಅದು ಅನುಕರಣೆಯಲ್ಲ. ಅನುಕರಣೆಯ ವಿಚಾರ ಧಾರೆಯೇ ಬೇರೆ. ಯೇಸುಕ್ರಿಸ್ತನಲ್ಲಿ ಸರ್ವವೂ ಪರಿಪೂರ್ಣವಾಗಿದೆ, ಯೇಸುಕ್ರಿಸ್ತನ ಪರಿಪೂರ್ಣತೆ ಗಳೆಲ್ಲವೂ ನನ್ನ ವಶವಾಗಿರುವುದೇ ಪವಿತ್ರೀಕರಣದ ಮರ್ಮ, ಮತ್ತು ಆ ಮೂಲಕ ನಾನು ನಿಧಾನವಾಗಿ ಮತ್ತು ಖಂಡಿತವಾಗಿ, ವಿವರಿಸಲಸಾಧ್ಯವಾದ ಕ್ರಮ ಭರಿತ, ಭದ್ರವಾದ ಮತ್ತು ಪರಿಶುದ್ಧವಾದ ಬದುಕನ್ನು ಬಾಳಲು ಪ್ರಾರಂಭಿಸುತ್ತೇನೆ. ''ದೇವರು ನಿನ್ನನ್ನು ತನ್ನ ಬಲದಿಂದ ಕಾಯುತ್ತಾನೆ'' (1 ಪೇತ್ರ 1:5) ಅಂದರೆ ತಿರುಗಿ ನಾವು ಅಪವಿತ್ರರಾಗಲು ಆತನು ಬಿಡುವುದಿಲ್ಲ.

# ಆತನ ಸಹಜ ಸ್ವಭಾವ ಮತ್ತು ನಮ್ಮ ಉದ್ಧೇಶಗಳು

**''ನಿಮ್ಮ ನೀತಿಯು ಶಾಸ್ತ್ರಿಗಳ ಮತ್ತು ಪರಿಸಾಯರ ನೀತಿಗಿಂತಲೂ ಹೆಚ್ಚಿನದಾಗಿರದಿದ್ದರೆ, ನೀವು ಪರಲೋಕ ರಾಜ್ಯದಲ್ಲಿ ಸೇರಲಾರಿರಿ'' – (ಮತ್ತಾಯ – 5:20)**

ಶಿಷ್ಯನೊಬ್ಬನು ಉತ್ತಮ ಕಾರ್ಯಗಳನ್ನು ಮಾಡುತ್ತಾನೆಂಬುದೇ ಅವನ ಗುಣ ಲಕ್ಷಣವಲ್ಲ. ಆದರೆ ದೇವರ ಅಲೌಕಿಕವಾದ ಕೃಪೆಯು ಶಿಷ್ಯನನ್ನು ಉತ್ತಮನನ್ನಾಗಿ ಮಾಡಿರುವುದರಿಂದ ಅವನು ಉತ್ತಮವಾದ ಉದ್ದೇಶಗಳುಳ್ಳವನಾಗಿರುತ್ತಾನೆ. ಒಳ್ಳೇದನ್ನು ಮಾಡುವುದಕ್ಕಿಂತ ಮಿಗಿಲಾದ ವಿಷಯವೆಂದರೆ 'ಒಳ್ಳೆಯವನೇ' ಆಗಿರುವುದು. ಶಾಸ್ತ್ರಿಗಳ ಮತ್ತು ಪರಿಸಾಯರ ನೀತಿಗಿಂತಲೂ ಹೆಚ್ಚಿನ ನೀತಿಯ ಅನುವಂಶಿಕತೆಯನ್ನು ಯಾರ್ಯಾರು ಬಯಸುವರೋ ಅವರೊಳಗೆ ಅದನ್ನು ಇರಿಸಲು ಯೇಸು ಕ್ರಿಸ್ತನು ಬಂದನು. ಯೇಸುಸ್ವಾಮಿಯು ಹೇಳುತ್ತಾನೆ. ''ನೀವು ನನ್ನ ಶಿಷ್ಯರಾಗಿರುವುದಾದರೆ'' ಬದುಕುವಿಕೆಯ ಜೀವಿತದಲ್ಲಿ ಮಾತ್ರ ನೀವು ನೀತಿಯುಳ್ಳವರಾಗಿರುವುದಷ್ಟೆಯಲ್ಲದೆ, ನಿಮ್ಮ ಉದ್ದೇಶಗಳಲ್ಲಿ, ನಿಮ್ಮ ಕನಸುಗಳಲ್ಲಿ, ನಿಮ್ಮ ಹೃದಯಾಂತರಾಳದಲ್ಲಿಯೂ, ನೀತಿಯುಳ್ಳವ ರಾಗಿರಬೇಕು. ನೀನೆಷ್ಟರಮಟ್ಟಿಗೆ ನಿನ್ನ ಉದ್ದೇಶಗಳಲ್ಲಿ ನಿರ್ಮಲನಾಗಿರಬೇಕೆಂದರೆ, ಸರ್ವ ಶಕ್ತನಾದ ದೇವರಿಗೆ ನಿನ್ನನ್ನು ಖಂಡಿಸಲು ನಿನ್ನಲ್ಲಿ ಏನೂ ಕಾಣದಿರುವಷ್ಟರ ಮಟ್ಟಿಗೆ ! ದೇವರ ಶಾಶ್ವತವಾದ ಬೆಳಕಿನಲ್ಲಿ ನಿಂತುಕೊಂಡು ದೇವರಿಗೆ ಖಂಡಿಸಲು ಏನೂ ಇಲ್ಲದಿರತಕ್ಕವನು ಯಾರಾದರೂ ಇರಬಹುದೇ ? ದೇವರ ಪುತ್ರನು ಮಾತ್ರವೇ ಹಾಗಿದ್ದಾನೆ; ಆದರೆ ತಾನು ಮಾಡಿದ ಪಾಪ ವಿಮೋಚನಾ ಕಾರ್ಯದ ಮೂಲಕ ಯಾವ ವ್ಯಕ್ತಿಯಲ್ಲಾಗಲೀ, ತನ್ನ ಸಹಜ ಸ್ವಭಾವವನ್ನಿರಿಸಿ ಅವನನ್ನು ಮಲಿನವಿಲ್ಲದ ನಿಷ್ಕಳಂಕ ಚಿಕ್ಕಮಗುವಿನಂತೆ ಮಾಡುತ್ತೇನೆಂದು ಯೇಸುಕ್ರಿಸ್ತನು ಪ್ರತಿಪಾದಿಸುತ್ತಿರುವನು. ನಾನು ನನ್ನೊಳಗೆ ಹೊಸ ಸೃಷ್ಟಿಯಾಗದ ವಿನಃ ದೇವರು ಒತ್ತು ಕೊಟ್ಟು ಕೇಳುವ ಪರಿಶುದ್ಧತೆಯು ನನ್ನಲ್ಲಿ ಅಸಾಧ್ಯವಾಗಿದೆ. ಆದರೆ ಇದನ್ನೇ ಯೇಸುಕ್ರಿಸ್ತನು ತಾನು ಮಾಡಿದ ಪಾಪವಿಮೋಚನೆಯ ಮೂಲಕ ನನ್ನೊಳಗೆ ಸಾಧ್ಯಗೊಳಿಸುತ್ತಾನೆ.

ನಿಬಂಧನೆಗಳಿಗೆ ಒಳಪಡುವುದರ ಮೂಲಕ ಯಾರೂ ತಮ್ಮನ್ನು ತಾವು ಶುದ್ಧರನ್ನಾಗಿ ಮಾಡಿಕೊಳ್ಳರಾರರು. ಯೇಸುಕ್ರಿಸ್ತನು ನಿಯಮ ನಿಬಂಧನೆಗಳನ್ನು ವಿಧಿಸುವುದಿಲ್ಲ; ಆತನ ಬೋಧನೆಗಳು ಸತ್ಯವೂ, ವಾಸ್ತವವೂ ಆಗಿವೆ, ಯಾರೊಳಗೆ ತನ್ನ ಸ್ವಭಾವವನ್ನಿರಿಸುವನೋ ಅವರು ಮಾತ್ರ ಆತನ ಬೋಧನೆಗಳನ್ನು ವಿಮರ್ಶಿಸಬಲ್ಲರು. ಯೇಸುಕ್ರಿಸ್ತನು ಮಾಡಿದ ಅತ್ಯಮೋಘ ರಕ್ಷಣಾ ಕಾರ್ಯವೆಂದರೆ ಆತನು ಅನುವಂಶಿಕತೆಯನ್ನು ಮಾರ್ಪಡಿಸುವನು. ಆತನು ಮಾನವ ಸಹಜ ಪ್ರವೃತ್ತಿಯನ್ನು ಬೇರೆ ಮಾಡುವುದಿಲ್ಲ; ಆದರೆ ಸ್ವಭಾವದ ಮೂಲವನ್ನೇ ಮಾರ್ಪಡಿಸುತ್ತಾನೆ.

# ಈ ರೀತಿಯಾಗಿ ನಾನು ಆಶೀರ್ವದಿಸಲ್ಪಟ್ಟಿರುವೆನೋ ?

## ''ಆತ್ಮದಲ್ಲಿ........ ಧನ್ಯರು'' - (ಮತ್ತಾಯ - 5:3:10)

ಯೇಸುಕ್ರಿಸ್ತನ ಹೇಳಿಕೆಗಳನ್ನು ನಾವು ಮೊದಲು ಓದಿದಾಗ, ಅವು ಅಚ್ಚರಿ ಪಡುವಷ್ಟು ಸರಳವೂ, ಗಾಬರಿಹುಟ್ಟಿಸದಂತವುಗಳೂ ಆಗಿರುತ್ತವೆ ಮತ್ತು ನಮ್ಮ ಸುಪ್ತ ಮನಸ್ಸಿನಾಳದೊಳಗೆ ಅವೀಕ್ಷಿತವಾಗಿ ಇಳಿದು ಮುಳುಗಿ ಹೋಗುತ್ತವೆ. ಉದಾಹರಣೆಗಾಗಿ ''ಧನ್ಯ ವಚನಗಳು'' ಇವು ಪ್ರಾಪಂಚಿಕ ಜ್ಞಾನ ಶೂನ್ಯರಾದ ಅಧ್ಯಾತ್ಮೀಕರಿಗೂ ಮತ್ತು ನಿರುಪಯೋಗಿ ಜನರಿಗೂ ಅವು ಕೇವಲ ಮೃದುವಾದ ಸುಂದರವಾದ ನೀತಿ ಬೋಧೆಗಳಂತೆ ಕಾಣುತ್ತವೆ ಮತ್ತು ನಾವು ಜೀವಿಸುತ್ತಿರುವ ಇಂದಿನ ಕಠಿಣ ಬದುಕಿಗೆ ಅಷ್ಟೇನೂ ಉಪಯೋಗ ವಿಲ್ಲದವುಗಳಂತೆ ಕಂಡುಬರುತ್ತವೆ. ಆದರೂ ಅನತಿಕಾಲದಲ್ಲಿಯೇ ಈ ಧನ್ಯವಚನಗಳು ಪರಿಶುದ್ಧಾತ್ಮನೆಂಬ ಡೈನಾಮೈಟ್ ಸ್ಫೋಟಕವನ್ನೊಳಗೊಂಡಿರುವುದನ್ನು ನಾವು ಕಾಣುತ್ತೇವೆ. ನಮ್ಮ ಜೀವಿತದ ಸನ್ನಿವೇಶಗಳು, ಸ್ಫೋಟನೆಯುಂಟಾಗುವಂತೆ ಮಾಡಿದಾಗ, ಅದೇ ವಚನಗಳು ಸಹಜವಾಗಿಯೇ ಸ್ಫೋಟಗೊಂಡು ಸಿಡಿದು ಬಿಡುತ್ತವೆ. ಧನ್ಯವಚನಗಳಲ್ಲೊಂದನ್ನು ಪವಿತ್ರಾತ್ಮನು ನಮ್ಮ ನೆನಪಿಗೆ ತಂದಾಗ, ನಾವು ಹೇಳುತ್ತೇವೆ – 'ಅಬ್ಬಾ ! ಗಾಬರಿ ಹುಟ್ಟಿಸುವ ಎಂಥಾ ಹೇಳಿಕೆ ಇದು' ! ದೇವರಾತ್ಮನ ಈ ವಾಕ್ಯಕ್ಕೆ ನಾವು ವಿಧೇಯರಾದರೆ ನಾವಿರುವ ಸನ್ನಿವೇಶಗಳಲ್ಲಿ ಸ್ಫೋಟನೆಯುಂಟು ಮಾಡುವ, ನಡುಕ ಹುಟ್ಟಿಸುವಂಥಾ, ಆತ್ಮೀಕ ಕ್ರಾಂತಿಯ ಸಂಪೂರ್ಣ ಬದಲಾವಣೆಯನ್ನು ಅಂಗೀಕರಿಸ ಬೇಕೇ ಅಥವಾ ಬೇಡವೇ ಎಂಬುದನ್ನು ಅಲ್ಲಿಯೇ ನಾವು ನಿರ್ಧರಿಸ ಬೇಕಾಗುತ್ತದೆ. ದೇವರ ಆತ್ಮನು ಕಾರ್ಯ ಸಾಧಿಸುವ ರೀತಿಯೇ ಹೀಗೆ. ಅಕ್ಷರಶಃ ಪರ್ವತ ಪ್ರಸಂಗದ ಬೋಧನೆಗಳನ್ನು ಬಳಸಲು ನಾವು ಹೊಸದಾಗಿ ಹುಟ್ಟುವುದು ಅಗತ್ಯವಿಲ್ಲ. ಪರ್ವತಪ್ರಸಂಗದ ಬೋಧನೆಗಳನ್ನು ಅಕ್ಷರಶಃ ವಿವರಿಸಿ ಹೇಳುತ್ತೇವೆಂದರೆ ಅದೊಂದು ಹುಡುಗಾಟ; ದೇವರ ಆತ್ಮನು, ಯೇಸುಕ್ರಿಸ್ತನ ಹೇಳಿಕೆಗಳನ್ನು ನಮ್ಮ ಸಂದರ್ಭಗಳಿಗೆ ಅನ್ವಯಿಸಿ ಅವುಗಳನ್ನು ವಿವರಿಸಿ ತಿಳಿಸಿದಾಗಲೇ ಭಕ್ತನಿಗೆ ಅವೆಷ್ಟು ಕಠಿಣವೆಂಬುದು ತಿಳಿಯುತ್ತದೆ.

ವಿಷಯಗಳನ್ನು ನಾವು ಸಹಜವಾಗಿ ದೃಷ್ಟಿಸುವ ವಿಧಾನಗಳಿಗೆ ಯೇಸುಕ್ರಿಸ್ತನ ಬೋಧನೆಗಳು ಎಲ್ಲಾ ರೀತಿಯಿಂದಲೂ ಮೀರಿದವುಗಳಾಗಿವೆ ಮತ್ತು ಪ್ರಾರಂಭದ ಹಂತದಲ್ಲಿ ಅವು ನಮ್ಮನ್ನು ದಿಗ್ಭ್ರಮೆಗೊಳಿಸುವಂಥಾ ಮುಜುಗರದೊಂದಿಗೆ ನಮಗೊದಗಿ ಬರುತ್ತವೆ. ನಮ್ಮ ಸನ್ನಿವೇಶಗಳಲ್ಲಿ, ಪವಿತ್ರಾತ್ಮನು ಯೇಸುಕ್ರಿಸ್ತನ ಬೋಧನೆಗಳನ್ನು ಬಳಸುವ ಮಾರ್ಗದಲ್ಲಿಯೇ ನಾವು ನಮ್ಮ ಬದುಕಿನ ನಡವಳಿಕೆ ಮತ್ತು ನುಡಿಗಳನ್ನು ಸಾವಧಾನವಾಗಿ ರೂಪಿಸಿಕೊಳ್ಳಬೇಕು. ಪರ್ವತ ಪ್ರಸಂಗವು ನೀತಿ ನಿಬಂಧನೆಗಳ ಕಂತೆಯಲ್ಲ; ಪವಿತ್ರಾತ್ಮನು ನಮ್ಮೊಳಗೆ ಕಾರ್ಯ ಸಾಧಿಸುತ್ತಿರುವಾಗ, ಇವೇ ನಮ್ಮ ಬಾಳಿನ ಬದುಕುವ ಹೇಳಿಕೆಗಳಾಗಿವೆ.

# ನಿರ್ಮಲತೆಯ ಪರಿಗಣನೆ

**''...... ಮನಸ್ಸಿನೊಳಗಿಂದ ಬರುತ್ತವೆ'' - (ಮತ್ತಾಯ 15:18-20)**

''ಪ್ರಾರಂಭದಲ್ಲಿ ನಮ್ಮ ಅಜ್ಞಾನವನ್ನು ನಂಬಿ ಅದನ್ನೇ ಮುಗ್ಧತೆಯೆಂದು ಕರೆಯುತ್ತೇವೆ. ಆ ಮೇಲೆ ನಮ್ಮ ಮುಗ್ಧತೆಯನ್ನು ನಂಬಿಕೊಂಡು ಅದನ್ನೇ ನಿರ್ಮಲತೆಯೆಂದು ಕರೆಯುತ್ತೇವೆ; ಮತ್ತು ಯೇಸುಕ್ರಿಸ್ತನು ನುಡಿದ ಒರಟೆನಿಸುವ ಈ ಹೇಳಿಕೆಯನ್ನು ನಾವು ಕೇಳಿಸಿಕೊಂಡಾಗ ನಾವು ಕುಗ್ಗಿದವರಾಗಿ ಹೇಳುತ್ತೇವೆ. ''ಈ ಘನ ಗಂಭೀರ ವಿಷಯಗಳನ್ನು ನನ್ನ ಹೃದಯದಲ್ಲಿ ನಾನು ಅರಿಯಲೇ ಇಲ್ಲ''. ನಮ್ಮೊಳಗಿರುವಂಥವುಗಳನ್ನು ಯೇಸುಕ್ರಿಸ್ತನು ಬಯಲು ಪಡಿಸಿದಾಗ, ಅದಕ್ಕೆ ನಾವು ಮುನಿಸಿ ಕೊಳ್ಳುತ್ತೇವೆ. ಮಾನವನ ಹೃದಯಕ್ಕೆ ಯೇಸುಕ್ರಿಸ್ತನು ಪರಮ ಶ್ರೇಷ್ಠ ಯಜಮಾನ ನಾಗಿರಬೇಕು, ಇಲ್ಲವೇ ನಾವು ಗಮನ ಕೊಡದಿರುವಷ್ಟು ಅನರ್ಹನಾಗಿರಬೇಕು. ಹೃದಯಾಂತ ರಾಳಕ್ಕಿಳಿಯುವ ಆತನ ವಾಕ್ಯಗಳನ್ನು ನಂಬಲು ನಾನು ಸಿದ್ಧನಿರುವೆನೋ ಇಲ್ಲವೆ ಅದಕ್ಕಿಂತಲೂ ನನ್ನ ಅಜ್ಞಾನದ ಮುಗ್ಧತೆಯನ್ನು ನಂಬುವೆನೋ? ಪ್ರಜ್ಞಾಪೂರ್ವಕವಾದ ಮುಗ್ಧತೆಯನ್ನು ನಿಜವಾಗಿಯೂ ಪರೀಕ್ಷೆಗೊಳ ಪಡಿಸುವುದಾದರೆ, ಯೇಸುಕ್ರಿಸ್ತನು ನುಡಿದ ವಾಕ್ಯಗಳು ಬಹು ಸತ್ಯವೆಂದು ಗ್ರಹಿಸಬೇಕಾದ, ಭಯ ಭೀತಿ ಭರಿತ ಜಾಗೃತಿಯುಂಟಾಗುವುದಲ್ಲದೆ, ದುಷ್ಟತನ ಮತ್ತು ತಪ್ಪುಗಳು ನನ್ನಲ್ಲಿರುವ ಸಾಧ್ಯತೆಯ ಬಗ್ಗೆ ನಾನು ದಿಗಿಲುಗೊಳ್ಳುತ್ತೇನೆ. ಎಲ್ಲಿಯವರೆಗೆ, ನಾನು ಮುಗ್ಧತೆಯ ಆಶ್ರಯದಲ್ಲಿ ಅಡಗಿರುವೆನೋ, ಅಲ್ಲಿಯವರೆಗೆ ಮೂರ್ಖನ ಸ್ವರ್ಗದಲ್ಲಿರುತ್ತೇನೆ. ನಾನು ದುಷ್ಟನಾಗಿರದಿದ್ದುದಕ್ಕೆ ನನ್ನ ಹೇಡಿತನ, ಮತ್ತು ನನ್ನ ನಾಗರಿಕ ಜೀವನದ ರಕ್ಷಣೆಯ ಭಾವನೆಗಳೇ ಕಾರಣ; ನಾನು ದೇವರ ಮುಂದೆ ನನ್ನದೆಲ್ಲವನ್ನೂ ಕಳಚಿದಾಗ, ನನ್ನಲ್ಲಿ ಯೇಸುಕ್ರಿಸ್ತನು ಮಾಡಿದ ರೋಗ ತಪಾಸಣೆಗಳೆಲ್ಲವೂ ಸತ್ಯ ವೆಂಬುದನ್ನು ಕಾಣುತ್ತೇನೆ.

ನನ್ನನ್ನು ರಕ್ಷಿಸಿ ಕಾಯುವಂಥಾದ್ದು ಒಂದೇ ಒಂದು - ಅದು ಯೇಸುಕ್ರಿಸ್ತನು ಮಾಡಿದ ಪಾಪ ವಿಮೋಚನಾ ಕಾರ್ಯ. ಒಮ್ಮೆ ನನ್ನನ್ನು ನಾನು ಆತನಿಗೆ ಒಪ್ಪಿಸಿ ಕೊಡುವೆನಾದರೆ, ನನ್ನ ಹೃದಯದಲ್ಲಿರುವ ಭೀಕರ ಸಾಧ್ಯತೆಗಳನ್ನು ಇನ್ನೆಂದಿಗೂ ನಾನನುಭವಿಸ ಬೇಕಾಗುವುದಿಲ್ಲ.

ಸಹಜವಾಗಿಯೇ ಪರಿಶುದ್ಧತೆಯನ್ನು ಪಡೆಯುವೆನೆಂದರೆ, ಅದು ಇಳಿದು ಮುಟ್ಟಲಾರ ದಷ್ಟು ತುಂಬಾ ಆಳದಲ್ಲಿದೆ; ಆದರೆ ಪರಿಶುದ್ಧಾತ್ಮನು ನನ್ನೊಳಗೆ ಬಂದಾಗ, ಯಾವ ಆತ್ಮವು ಯೇಸು ಕ್ರಿಸ್ತನ ಜೀವಿತದಲ್ಲಿ ಸಾಕ್ಷಾತ್ಕಾರಗೊಂಡಿತ್ತೋ ಅದೇ ಆತ್ಮವನ್ನು ನನ್ನ ಜೀವಿತದ ಕೇಂದ್ರ ಸ್ಥಾನಕ್ಕೆ ತಂದಿರಿಸುತ್ತಾನೆ. ಅಂದರೆ ಮಲಿನಗೊಳ್ಳದ ನಿರ್ಮಲತೆಯ ಪರಿಶುದ್ಧಾತ್ಮವೇ ಅದು.

# ಅರಿಯುವ ದಾರಿ

**''ಆತನ ಚಿತ್ತದಂತೆ ನಡೆಯುವುದಕ್ಕೆ ಯಾರಿಗೆ ಮನಸ್ಸಿದೆಯೋ, ಅವರಿಗೆ ಈ ಬೋಧನೆಯು ದೇವರಿಂದ ..... ಗೊತ್ತಾಗುವುದು'' - (ಯೋಹಾನ 7:17)**

ಯೇಸುಕ್ರಿಸ್ತನು ಹೇಳಿರುವನು ''ನೀನು ನಿನ್ನ ಕಾಣಿಕೆಯನ್ನು ಯಜ್ಞವೇದಿಯ ಹತ್ತಿರಕ್ಕೆ ತಂದಾಗ ನಿನ್ನ ಸಹೋದರನ ಮನಸ್ಸಿನಲ್ಲಿ ನಿನ್ನ ಮೇಲೆ ಏನೋ ವಿರೋಧವದೆ'' ಎಂಬುದು ನಿನ್ನ ನೆನಪಿಗೆ ಬಂದರೆ, '..... ಬೇರೊಂದು ಮಾತನ್ನು ನನಗೆ ನುಡಿಯದೆ, ಮೊದಲು ನೀನು ಹೊರಟು ಹೋಗಿ ಅದನ್ನು ಸರಿಪಡಿಸು'. ಮನುಷ್ಯನು ವೈಜ್ಞಾನಿಕವಾದ ಜ್ಞಾನವನ್ನು ಪಡೆಯಬೇಕಾದರೆ ಬೌದ್ಧಿಕ ಕುತೂಹಲವೇ ಅವನ ಮಾರ್ಗದರ್ಶಿಯಾಗಿರುತ್ತದೆ; ಆದರೆ ಯೇಸುಕ್ರಿಸ್ತನ ಬೋಧನೆಗಳ ಒಳಾರ್ಥವನ್ನು ವಿಧೇಯತೆಯಿಂದ ಮಾತ್ರವೇ ತಿಳಿದುಕೊಳ್ಳಬಹುದು. ಆತ್ಮೀಕ ಸಂಗತಿಗಳು ನನಗೆ ಕತ್ತಲೆ ಯಲ್ಲಿರುವಂತೆ ಕಾಣುತ್ತಿದ್ದರೆ, ನಾನು ಯಾವುದೋ ಒಂದಕ್ಕೆ ವಿಧೇಯನಾಗುತ್ತಿಲ್ಲವೆಂಬುದು ಸತ್ಯ ಸಂಗತಿ. ಬೌದ್ಧಿಕ ಕತ್ತಲೆಯುಂಟಾಗುವುದು, ನನ್ನ ಮೌಢ್ಯತೆಯಿಂದ; ಆತ್ಮೀಕ ಕತ್ತಲೆ ಯುಂಟಾಗುತ್ತಿದ್ದರೆ ಅದಕ್ಕೆ ಕಾರಣ ನಾನು ಯಾವುದೋ ಒಂದಕ್ಕೆ ವಿಧೇಯ ನಾಗಲು ಇಚ್ಛಿಸುತ್ತಿಲ್ಲ.

ದೇವರ ಒಂದು ವಾಕ್ಯವನ್ನು ಅದರ ವಿಚಾರದಲ್ಲಿ ಕೂಡಲೇ ಪರೀಕ್ಷೆ ನಡೆಸದೆ, ಯಾರೂ ಅಂಗೀಕರಿಸುವುದಿಲ್ಲ. ನಾವು ಮೊದಲು ಆ ನುಡಿಗೆ ಅವಿಧೇಯರಾಗುತ್ತೇವೆ, ನಂತರ ನಾವೇಕೆ ಆತ್ಮೀಕವಾಗಿ ಮುಂದೆ ಸಾಗಲಿಲ್ಲವೆಂದು ಅಚ್ಚರಿಪಡುತ್ತೇವೆ. ನೀನು ''ನಿನ್ನ ಕಾಣಿಕೆಯನ್ನು ಆ ಯಜ್ಞವೇದಿಯ ಮುಂದೆಯೇ ಬಿಟ್ಟು ಹೋಗಿ, ಮೊದಲು ನಿನ್ನ ಸಹೋದರನ ಸಂಗಡ ಒಂದಾಗು'' (ಮತ್ತಾಯ 5:23-34) ನಾವು ಜೀವಿಸುತ್ತಿರುವ ಹಂತದಲ್ಲಿಯೇ ಯೇಸುಕ್ರಿಸ್ತನ ಬೋಧನೆಯು ಧಕ್ಕೆ ಕೊಡುತ್ತದೆ. ಯೇಸು ಕ್ರಿಸ್ತನ ಎದುರಿನಲ್ಲಿ ಒಂದು ಕ್ಷಣವಾದರೂ ಕಪಟ ವೇಷಧಾರಿಗಳಾಗಿ ನಿಲ್ಲಲಾರೆವು. ಅತ್ಯಂತ ಸೂಕ್ಷ್ಮದವರೆಗೂ ಆತನು ನಮಗೆ ತಿಳುವಳಿಕೆ ನೀಡುತ್ತಾನೆ. ದೇವರ ಆತ್ಮನು ನಮ್ಮ ಸ್ವಯಂ ಸಮರ್ಥನೆಯ ಆತ್ಮವನ್ನು ಬಯಲು ಪಡಿಸುತ್ತಾನೆ; ನಾವೆಂದೂ ಯೋಚಿಸದಿದ್ದ ಸಂಗತಿಗಳ ವಿಷಯದಲ್ಲಿ ನಾವು ಸೂಕ್ಷಸಂವೇದಿಗಳಾಗುವಂತೆ ಮಾಡುತ್ತಾನೆ.

ಯೇಸುಕ್ರಿಸ್ತನು ಒಂದು ವಿಷಯವನ್ನು ನಿನ್ನ ಅರಿವಿಗೆ ತಂದಾಗ, ಅದರಿಂದ ನುಣುಚಿ ಗೊಳ್ಳಬೇಡ, ನೀನೇನಾದರೂ ಹಾಗೆ ಮಾಡಿದರೆ ನೀನೊಬ್ಬ ಧಾರ್ಮಿಕ ಕಪಟವೇಷಧಾರಿಯಾಗಿ ಬಿಡುವಿ. ಭುಜಹಾರಿಸಿ ನೀನು ಜಾರಿಸಿಕೊಳ್ಳುತ್ತಿರುವವುಗಳನ್ನು ಗಮನಿಸು. ಆತ್ಮೀಕ ವಿಷಯಗಳಲ್ಲಿ ನೀನೇಕೆ ಮುಂದೆ ಸಾಗುತ್ತಿಲ್ಲವೆಂಬುದು ನಿನಗೇ ತಿಳಿಯುತ್ತದೆ. ''ಮೊದಲು ಹೋಗು'' - ಹಾಗೆ ಮಾಡುವಾಗ 'ಹುಚ್ಚ' ನೆನೆಸಿಕೊಳ್ಳುವ ಭಯದ ಯೋಚನೆಯಿದ್ದರೂ, ದೇವರು ಹೇಳಿದವುಗಳಿಗೆ ಮೊದಲು ವಿಧೇಯನಾಗು.

# ವಿಧೇಯತೆ ನಂತರ (ದೇವರ ಉದ್ದೇಶವೋ? ನನ್ನದೋ?

**'' ಆತನು ತನ್ನ ಶಿಷ್ಯರಿಗೆ ....... ಮುಂದಾಗಿ ಆಚೆ ದಡಕ್ಕೆ ಹೋಗಿರಿ,'' – (ಮಾರ್ಕ 6:45)**

ಯೇಸುಕ್ರಿಸ್ತನು ನಮ್ಮನ್ನು ಬಲಾತ್ಕರಿಸಿದರೆ ನಾವು ಆತನಿಗೆ ವಿಧೇಯರಾಗುತ್ತೇವೆ, ಆತನು ನಮ್ಮನ್ನು ಮಹಾ ಯಶಸ್ಸಿನೆಡೆಗೆ ನಡೆಸುವನು ಎಂದು ನಾವು ಕಲ್ಪಿಸಿ ಕೊಳ್ಳುವುದು ದಿಟವೇ. ನಮ್ಮ ಯಶಸ್ಸಿನ ಕನಸುಗಳೇ, ನಮಗೋಸ್ಕರವಾದ, ದೇವರ ಉದ್ದೇಶಗಳೆಂದು ನಾವೆಂದೂ ಭಾವಿಸಬಾರದು; ಆತನ ಉದ್ದೇಶವು ಇದಕ್ಕೆ ತದ್ವಿರುದ್ಧ ವಾಗಿರಬಹುದು. ಉದ್ದೇಶಿತ ಗುರಿಯೊಂದಕ್ಕೆ ದೇವರು ನಡೆಸುತ್ತಿರುವನೆಂಬ ಭಾವನೆ ನಮಗಿರುತ್ತದೆ; ಆತನು ಹಾಗೆ ಮಾಡುವುದಿಲ್ಲ. ಒಂದು ನಿಶ್ಚಿತ ಗುರಿ ಮುಟ್ಟುವ ಪ್ರಶ್ನೆಯು ಕೇವಲ ಒಂದು ಘಟನೆ ಮಾತ್ರ. ಯಾವುದನ್ನು ನಾವು ಕಾರ್ಯಗತಿ ಎನ್ನುತ್ತೇವೆಯೋ, ಅದನ್ನೇ ದೇವರು ಅಂತಿಮ ಗುರಿ ಎನ್ನುತ್ತಾನೆ.

ದೇವರ ಉದ್ದೇಶದ ಬಗ್ಗೆ ನನ್ನ ಕಲ್ಪನೆ ಏನಾಗಿದೆ ? ನಾನೀಗಲೇ ದೇವರ ಸಾಮರ್ಥ್ಯದ ಮೇಲೆ ಮತ್ತು ಆತನ ಮೇಲೆ ಸಂಪೂರ್ಣವಾಗಿ ಆತುಕೊಂಡಿರಬೇಕೆನ್ನುವುದೇ ಆತನ ಉದ್ದೇಶ. ಸಂಕ್ಷೋಬೆಗಳ ನಡುವೆಯೂ ನಾನು ಶಾಂತನಾಗಿಯೂ, ಕಂಗೆಡದೆಯೂ ಇದ್ದರೆ, ಅದೇ ದೇವರ ಉದ್ದೇಶದ ಅಂತಿಮ ಗುರಿ. ಯಾವುದೋ ಒಂದು ಗುರಿಸಾಧನೆಗಾಗಿ ದೇವರು ಕಾರ್ಯ ಮಾಡುತ್ತಾ ಇಲ್ಲ. ಕಾರ್ಯಗತಿಯೇ ಆತನ ಅಂತಿಮ ಗುರಿ ಅಂದರೆ – ತಲುಪಬೇಕಾದ ಗುರಿಯು ಕಾಣದಿರುವಾಗ ಸಮುದ್ರದ ದಡವೂ ಕಾಣದಿರುವಾಗ ಏರಿಳಿಯುವ ಸಮುದ್ರದ ತೆರೆಗಳ ಮೇಲೆ ನಡೆದು ಬರುತ್ತಿರು ವಾತನನ್ನು ನಾನು ಕಾಣುವುದು. ಅಂದರೆ ತುಮುಲಗಳೇನಿದ್ದರೂ ಸರಿಯೇ ನಾನು ಮಾತ್ರ ಆ ತೆರೆಗಳ ಮೇಲೆ ನಡೆದು ಬರುತ್ತಿರುವಾತನನ್ನು ಕಾಣುತ್ತಿದ್ದೇನೆಂಬ ಸತ್ಯವೇ ದೇವರ ಉದ್ದೇಶದ ಅಂತಿಮಗುರಿ. ಇದು ನಿಜವಾಗಿಯೂ ಕಾರ್ಯಗತಿ, ಗುರಿಯ ಅಂತ್ಯವಲ್ಲ. ಇದೇ ದೇವರನ್ನು ಮಹಿಮೆ ಪಡಿಸುತ್ತದೆ.

ದೇವರು ಪ್ರಸಕ್ತ ಕ್ಷಣಕ್ಕಾಗಿ ತರಬೇತಿ ನೀಡುತ್ತಾನೆ. ''ಸಧ್ಯದಲ್ಲಿ'' ಎಂಬುವದಕ್ಕಲ್ಲ. ಪ್ರಸ್ತುತ ಕ್ಷಣಕ್ಕಾಗಿಯೇ ಆತನ ಉದ್ದೇಶವಿರುತ್ತದೆ, ಭವಿಷ್ಯದ ಯಾವುದೋ ಒಂದಕ್ಕಾಗಿ ಅಲ್ಲ. ವಿಧೇಯತೆಯ ನಂತರ ಏನಾಗುವುದೋ ಅದು ನಮಗೆ ಸಂಬಂಧವಿಲ್ಲ; ವಿಧೇಯತೆಯ ನಂತರ ಮುಂದೇನು ? ಎಂದು ನಾವು ಆಲೋಚಿಸಿದರೆ, ನಾವು ತಪ್ಪು ಮಾಡುತ್ತೇವೆ. ತರಬೇತಿ ಮತ್ತು ಸಿದ್ಧತೆಗಳೆಂದು ಜನರು ಕರೆಯುವುದನ್ನೇ ದೇವರು ಧ್ಯೇಯದ ಅಂತ್ಯವೆಂದು ಕರೆಯುತ್ತಾನೆ.

ನನ್ನ ಜೀವಿತದಲ್ಲಿರುವ ಹದಗೆಟ್ಟ ತೆರೆಗಳ ಮೇಲೆ 'ಈಗಲೇ' ದೇವರು ನಡೆದು ಬರುತ್ತಿರುವುದನ್ನು ನಾನು ಕಾಣುವಂತೆ ನನ್ನನ್ನು ಬಲ ಪಡಿಸುವುದೇ ಆತನ ಅಂತಿಮ ಗುರಿಯಾಗಿದೆ. ನಾವೇನಾದರೂ ಮುಂದಿನದೊಂದನ್ನು ಗುರಿಯಾಗಿರಿಸಿಕೊಂಡರೆ, ಪ್ರಸ್ತುತಕ್ಕೆ ಸಾಕಷ್ಟು ಗಮನ ವನ್ನೀಯುವುದಿಲ್ಲ; ವಿಧೇಯತೆಯೇ ಅಂತಿಮ ಗುರಿ ಎನ್ನುವುದನ್ನು ನಾವು ಗ್ರಹಿಸಿದರೆ, ಮುಂದಿನ ಪ್ರತಿ ಕ್ಷಣವೂ ಬಹು ಬೆಲೆಯುಳ್ಳದ್ದಾಗಿರುತ್ತವೆ.

# ನಿನ್ನನ್ನಾವರಿಸಿದ ಮೇಘಗಳಲ್ಲಿ ಯೇಸುವನ್ನು ಕಾಣುತ್ತಿರುವಿಯೋ?

**''ಇಗೋ, ಮೇಘಗಳೊಂದಿಗೆ ಬರುತ್ತಾನೆ'' – (ಪ್ರಕಟಣೆ 1:7)**

ಸತ್ಯವೇದದಲ್ಲಿ, ಮೇಘಗಳು ಯಾವಾಗಲೂ ದೇವರಿಗೆ ಸಂಬಂಧಿಸಿರುತ್ತವೆ. ಮೋಡಗಳೆಂದರೆ ನಮ್ಮ ವೈಯಕ್ತಿಕ ಜೀವನದ ಒಳಗೂ, ವೈಯಕ್ತಿಕ ಬದುಕಿನ ಹೊರಗೂ, ಬಂದುಹೋಗುವ ದುಃಖ ದುಮ್ಮಾನಗಳು, ಸಂಕಷ್ಟಗಳು ಇಲ್ಲವೇ ದೈವಾನುಗ್ರಹಗಳು ಮಾತ್ರವೇ ಆಗಿರುವುದಲ್ಲದೆ, ಕೆಲವೊಮ್ಮೆ ಅವು ದೇವರ ಅಧಿಪತ್ಯವನ್ನು ಸಂಶಯಿಸುವಂತೆ ಕಾಣುವಂಥವುಗಳೂ ಆಗಿರುತ್ತವೆ. ಆ ಮೋಡಗಳ ಮೂಲಕವೇ ದೇವರ ಆತ್ಮನು, ನಾವು ನಂಬಿಗಸ್ತಿಕೆಯಿಂದ ನಡಕೊಳ್ಳುವುದು ಹೇಗೆಂಬುದನ್ನು ಕಲಿಸಿಕೊಡುತ್ತಾನೆ. ಒಂದು ವೇಳೆ ಮೋಡಗಳೇ ಇರದಿದ್ದರೆ ನಂಬಿಕೆಯೂ ಅಲ್ಲಿರಲಾರದು. ಮೋಡಗಳು ''ತಂದೆಯಾದ ದೇವರ ಪಾದಧೂಳಿಯಲ್ಲದೆ ಬೇರೇನೂ ಅಲ್ಲ'' ಮೋಡಗಳು ''ಆತನ ಹೆಜ್ಜೆಯಿಂದೇಳುವ ಧೂಳು,'' (ನಹೂಮ 1:3) ದೇವರೂ ಅಲ್ಲಿಯೇ ಇದ್ದಾನೆಂಬುದರ ಸಂಕೇತವೇ ಮೋಡಗಳು; ದುಃಖದುಮ್ಮಾನಗಳು, ವಿಯೋಗ ಮತ್ತು ಸಂಕಟಗಳು, ದೇವರ ಸಂಗಡ ಬರುವ ಮೋಡಗಳಾಗಿವೆ ಎಂಬುದೆಂಥಾ ಪ್ರಕಟಣೆ ! ಮೋಡಗಳಿಲ್ಲದೆ ದೇವರು ನಮ್ಮ ಬಳಿಗೆ ಬರುವುದಿಲ್ಲ ಮತ್ತು ಸ್ಪಷ್ಟ ಪ್ರಕಾಶದಲ್ಲೆಂದಿಗೂ ಆತನು ಬರುವುದಿಲ್ಲ.

ಕಷ್ಟದುಃಖಗಳಲ್ಲಿಯೇ ದೇವರು ನಮಗೆ ಬೋಧಿಸಲು ಬಯಸುವನೆಂಬುದು ನಿಜವಲ್ಲ ; ಆತನು ಬರಮಾಡುವ ಪ್ರತಿಯೊಂದು ಮೋಡದ ಮೂಲಕ ನಾವು ಕೆಲವನ್ನು ತ್ಯಜಿಸಿ ಬಿಡುವುದನ್ನು ಕಲಿಸಲು ಆತನು ಬಯಸುವನು. ದೇವರ ಮತ್ತು ನಮ್ಮ ನಡುವಿನ ಸಂಬಂಧವು ತಂದೆ ಮಗುವಿನ ಸಂಬಂಧ ದಂತಾಗುವಂತೆ ನಮ್ಮ ನಂಬಿಕೆಯನ್ನು ಸರಳೀಕೃತ ಗೊಳಿಸುವುದೇ ಆತನ ಉದ್ದೇಶ. ಸಂಬಂಧವೆಂದರೆ ದೇವರ ಮತ್ತು ನನ್ನ ಆತ್ಮದ ಸಂಬಂಧ ಮಾತ್ರವೇ ಆಗಿರಬೇಕು ಮತ್ತು ಬೇರೆ ಜನರು ಕೇವಲ ಛಾಯೆಗಳು ಮಾತ್ರವಾಗಿರಬೇಕು. ಉಳಿದೆಲ್ಲಾ ಜನರು ಛಾಯೆಗಳಾಗುವ ತನಕ, ಮೋಡಗಳು ಮತ್ತು ಕತ್ತಲು ಪದೇ ಪದೇ ನನ್ನವುಗಳಾಗಿಯೇ ಇರುತ್ತವೆ. ದೇವರ ಮತ್ತು ನನ್ನ ನಡುವಿನ ಸಂಬಂಧ ಹಿಂದೆಂದೂ ಇಲ್ಲದಷ್ಟು ಸರಳವಾಗುತ್ತಾ ಇದೆಯೋ?

ದೇವರ ಅಪೂರ್ವ ಅನುಗ್ರಹಗಳ ಮತ್ತು ನಾವು ಆತನ ಬಗ್ಗೆ ಏನು ತಿಳಿದಿರುವೆವೋ ಇವುಗಳ ನಡುವೆ ವಿಚಿತ್ರ ಹೊಂದಾಣಿಕೆ ಇದೆ ಮತ್ತು ದೇವರ ವಿಷಯವಾದ ನಮ್ಮ ಜ್ಞಾನದ ಬೆಳಕಿನಲ್ಲಿ ಜೀವನದ ರಹಸ್ಯಗಳನ್ನು ವಿವರಿಸಲು ನಾವು ಕಲಿಯಬೇಕು. ಅತ್ಯಂತ ನಿರಾಶಾದಾಯಕವಾದ, ಗಾಢವಾಗಿರುವ ಜೀವಿತಸತ್ಯಗಳನ್ನು ದೇವರ ಗುಣಚಾರಿತ್ರ್ಯತೆಗೆ ಭಂಗವನ್ನುಂಟು ಮಾಡದ ರೀತಿಯಲ್ಲಿ, ಮುಖಾಮುಖಿಯಾಗಿ ಎದುರಿಸುವ ತನಕ ನಾವು ದೇವರನ್ನು ಅರಿಯದವರೇ ಆಗಿರುತ್ತೇವೆ.

''ಅವರು ಮೋಡದೊಳಗೆ ಸೇರಿದಾಗ ಹೆದರಿದರು'' (ಲೂಕ 9:34) ಯೇಸುಕ್ರಿಸ್ತನಲ್ಲದೇ ಬೇರೆ ಇನ್ನಾರಾದರೂ ನಿನ್ನ ಮೋಡಗಳಲ್ಲಿರುವರೇ? ಇದ್ದಿದ್ದೇಯಾದರೆ, ನಿನ್ನ ಮೋಡಗಳು ಇನ್ನೂ ಗಾಢ ಕತ್ತಲೆಯುಳ್ಳವುಗಳಾಗುತ್ತವೆ; ಎಷ್ಟರವರೆಗೆಂದರೆ ಯೇಸುಕ್ರಿಸ್ತನ ಹೊರತು ಇನ್ಯಾರೂ ಇಲ್ಲದಿರುವ ಗಮ್ಯಕ್ಕೆ ನೀನು ಸೇರುವ ತನಕ.

# ಭ್ರಮ ನಿರಸನದ ಶಿಕ್ಷಣ

**'' ಆದರೆ ಯೇಸು ಎಲ್ಲರನ್ನೂ ಬಲ್ಲವನಾದ್ದರಿಂದ ಅವರಿಗೆ ವಶವಾಗಲಿಲ್ಲ; ಆತನು ಪ್ರತಿ ಮನುಷ್ಯನ ಅಂತರ್ಯವನ್ನು ತಿಳಿದವನಾದ ಕಾರಣ ....'' - (ಯೋಹಾನ 2:24)**

ಭ್ರಮ ನಿರಸನವೆಂದರೆ, ಇನ್ನು ಮುಂದೆ ನಮ್ಮ ಜೀವಿತದಲ್ಲಿ ತಪ್ಪು ಗ್ರಹಿಕೆಗಳಿಲ್ಲದಿರುವಿಕೆ, ಭ್ರಮಾತ್ಮಕ ಭಾವನೆಗಳಿಲ್ಲದಿರುವಿಕೆ, ಮಿಥ್ಯ ತೀರ್ಪುಗಳಿಲ್ಲದಿರುವಿಕೆ. ಭ್ರಮನಿರಸನದ ಮೂಲಕ ನಾವು ಮೋಸಹೋಗದಿರುವುದೆಂದರೆ, ಮುಂದೆ ನಾವು ಇತರರನ್ನು ವಿಮರ್ಶಿಸುವಾಗ, ನಾವು ನಿಂದನಾಶೀಲರೂ, ಹೆಚ್ಚು ರಂದ್ರಾನ್ವೇಷಕರೂ ಕಠಿಣರೂ ಆಗಬಹುದು. ಆದರೆ ದೇವರಿಂದುಂಟಾದ ಭ್ರಮನಿರಸನವು ಸ್ತ್ರೀ ಪುರುಷರನ್ನು ಅವರು ಹೇಗಿರುವರೋ ಅದೇ ನೈಜತೆಯಲ್ಲಿ ಅವರನ್ನು ಕಾಣುವಂಥಾ ಮಟ್ಟಕ್ಕೆ ನಮ್ಮನ್ನು ಕೊಂಡೊಯ್ಯುವುದಾದರೂ, ಅಲ್ಲಿ ಯಾವ ನಿಂದಾಶೀಲತೆಯೂ, ಕುಟುಕುವಿಕೆ ಮತ್ತು ಕಹಿಯಾದ ಖಂಡನೆಯೂ ಇರುವುದಿಲ್ಲ. ನಮ್ಮ ಜೀವಿತದಲ್ಲುಂಟಾಗುವ ಭೀಕರ ಕೆಡಕುಗಳು, ವ್ಯಥೆ ಮತ್ತು ವೇದನೆಗಳು, ನಾವು ಭ್ರಾಮುಕರಾಗಿರುವ ಅಂಶದಿಂದಲೇ ಪುಟಿದೇಳುತ್ತವೆ. ನಮ್ಮ ವಾಸ್ತವಿಕತೆಯ ವಿಚಾರದಲ್ಲಿ ನಾವು ಒಬ್ಬರಿಗೊಬ್ಬರು ನಿಷ್ಠೆಯುಳ್ಳವರಾಗಿರುವುದಿಲ್ಲ. ಒಬ್ಬರ ಬಗ್ಗೆ ಇನ್ನೊಬ್ಬರಿಗಿರುವ ಭಾವನೆಗಳಿಗೆ ಮಾತ್ರ ನಾವು ನಿಷ್ಠರಾಗಿರುತ್ತೇವೆ. ನಮ್ಮ ಭಾವನೆಯನುಸಾರ, ಪ್ರತಿಯೊಂದೂ ಸಂತೋಷ ಕರವೂ, ಉತ್ತಮವೂ ಆಗಿರುತ್ತದೆ. ಇಲ್ಲವೆ ಅದು ಕೀಳಾದದ್ದು ಹೇಯವಾದ ಹೇಡಿತನದ್ದೂ ಆಗಿರುತ್ತದೆ.

ಭ್ರಮನಿರಸವನ್ನು ತಿರಸ್ಕರಿಸದಿರುವುದೇ ಮಾನವ ಜೀವಿತದಲ್ಲಿ ಅನೇಕ ಸಂಕಟಗಳಿಗೆ ಕಾರಣವಾಗಿದೆ. ಅದು ಕಾರ್ಯವೆಸಗುವ ರೀತಿ ಹೀಗಿದೆ - ದೇವರನ್ನು ನಾವು ಪ್ರೀತಿಸದೇ, ಮನುಷ್ಯ ನನ್ನು ನಾವು ಪ್ರೀತಿಸಿದರೆ, ಆ ವ್ಯಕ್ತಿಯಿಂದ ನಾವು ಪ್ರತಿಯೊಂದು ವಿಷಯದಲ್ಲಿ ಪರಿಪೂರ್ಣತೆಯನ್ನು ಮತ್ತು ಸಚ್ಚಾರಿತ್ರ್ಯವನ್ನು ಬಯಸುತ್ತೇವೆ. ಅದು ಆ ವ್ಯಕ್ತಿಯಲ್ಲಿ ನಮಗೆ ದೊರೆಯದಿದ್ದಾಗ, ನಾವು ಕ್ರೂರಿಗಳೂ ಮತ್ತು ಸ್ವನಿರ್ದೋಷ ಸಾಧಕರೂ ಆಗುತ್ತವೆ. ಮಾನವ ಮಾತ್ರರಾದ ಅವಳು ಇಲ್ಲವೇ ಅವನು, ಕೊಡಲಾಗದದ್ದನ್ನು ನಾವು ಅವರಿಂದ ಕೇಳುತ್ತಿರುವೆವು. ಮಾನವನ ಹೃದಯಾಂತರಾಳದ ನೋವಿನ ಅಗಾಧವನ್ನು ತೃಪ್ತಿಪಡಿಸುವವನು ಒಬ್ಬನೇ ಒಬ್ಬನು - ಆತನೇ ಯೇಸುಕ್ರಿಸ್ತನು. ಮಾನವನ ಪ್ರತಿಯೊಂದು ಸಂಬಂಧಗಳ ವಿಚಾರದಲ್ಲಿ ನಮ್ಮ ಪ್ರಭುವಾದ ಯೇಸುಸ್ವಾಮಿಯು ಅಷ್ಟೇಕೆ ಕಠಿಣರಾಗಿರುವನೆಂದರೇ, ಮಾನವನ ಪ್ರತಿಯೊಂದು ಸಂಬಂಧವು, ಯೇಸುಕ್ರಿಸ್ತನಿಗೆ ನಿಷ್ಠೆಯುಳ್ಳಂಥವುಗಳ ಮೇಲೆ ಆಧಾರ ಗೊಂಡಿರದಿದ್ದರೆ ಅದು ಭೀಕರ ಅನಾಹುತದಲ್ಲಿ ಕೊನೆಗೊಳ್ಳುವುದು. ಯೇಸುಕ್ರಿಸ್ತನು ಮನುಷ್ಯರಲ್ಲಿ ಭರವಸೆ ಇಟ್ಟಿರಲಿಲ್ಲ, ಆದಾಗ್ಯೂ ಮನುಷ್ಯರಲ್ಲಿ ಸಂದೇಹ ಪಡಲಿಲ್ಲ, ಅವರ ಬಗ್ಗೆ ಕಹಿದೋರಣೆಯನ್ನು ತಳೆಯಲೂ ಇಲ್ಲ. ಯೇಸುಕ್ರಿಸ್ತನಿಗೆ ದೇವರಲ್ಲಿದ್ದ ಭರವಸೆ ಮತ್ತು ದೇವರ ಕೃಪೆಯು ಮನುಷ್ಯನಿಗೇನು ಮಾಡಬಲ್ಲದೆಂಬದನ್ನು ಆತನು ಖಚಿತವಾಗಿ ಬಲ್ಲನಾದ್ದರಿಂದ, ಯಾರ ಬಗ್ಗೆಯೂ ಆತನು ಜಿಗುಪ್ಸೆ ಹೊಂದಿರಲಿಲ್ಲ. ನಾವು ಮಾನವರಲ್ಲಿ ಭರವಸೆಯಿಂದಿದ್ದರೆ, ಎಲ್ಲರನ್ನೂ ಜಿಗುಪ್ಸೆಗೊಳಪಡಿಸುವುದರಲ್ಲಿ ಕೊನೆ ಮುಟ್ಟುತ್ತೇವೆ.

# ಪೂರ್ತಿಯಾಗಿ ಆತನವರಾಗುವವರೆಗೆ

**''ಆ ತಾಳ್ಮೆಯು ಸಿದ್ಧಿಗೆ ಬರಲಿ; ಆಗ ನೀವು ಶಿಕ್ಷಿತರೂ ಸರ್ವ ಸುಗುಣವುಳ್ಳವರೂ, ಏನೂ ಕಡಿಮೆ ಇಲ್ಲದವರೂ ಆಗಿರುವಿರಿ'' (ಯಾಕೋಬ 1:4)**

ಸಾಧಾರಣವಾಗಿ ನಮ್ಮಲ್ಲಿ ಅನೇಕರು ಜೀವಿತದ ಮುಖ್ಯ ಕ್ಷೇತ್ರಗಳಲ್ಲಿ ಸರಿಯಾಗಿಯೇ ಇರುತ್ತಾರೆ. ಆದರೂ ನಾವು ಅಜಾಗರೂಕರಾಗಿರುವ ಹಲವು ಕ್ಷೇತ್ರಗಳೂ ನಮ್ಮಲ್ಲಿವೆ. ಇದು ಪಾಪವೆಂದೆನಿಸುವ ಪ್ರಶ್ನೆಯಲ್ಲ; ಆದರೆ ನಮ್ಮ ಭೋಗ ಜೀವಿತದ ಅಳಿದುಳಿದ ಅವಶೇಷಗಳು ನಮ್ಮನ್ನು ಅಜಾಗಕರೂಕರನ್ನಾಗಿ ಮಾಡುವವು. ಅಜಾಗರೂಕತೆಯು ಪವಿತ್ರಾತ್ಮನಿಗೆ ಅವಮಾನ ತರುತ್ತದೆ. ನಾವು ಹೇಗೆಯೇ ಊಟ ಮಾಡುತ್ತಿರಲಿ, ಕುಡಿಯುತ್ತಾ ಇರಲಿ ಇಲ್ಲವೇ ದೇವರನ್ನು ಆರಾಧಿಸುವ ವಿಷಯಗಳೇ ಆಗಿರಲಿ, ನಾವು ಮಾತ್ರ ಅಜಾಗರೂಕರಾಗಿರಬಾರದು.

ದೇವರೊಂದಿಗಿರುವ ನಮ್ಮ ಸಂಬಂಧವನ್ನು ಸರಿಯಾಗಿಟ್ಟಕೊಂಡಿರುವುದಷ್ಟೇಯಲ್ಲದೆ ಆ ಸಂಬಂಧವು ನಮ್ಮ ಬಾಹ್ಯ ಜೀವನದಲ್ಲಿ ಯಥಾರ್ಥವಾಗಿ ಪ್ರಕಟವಾಗಬೇಕು. ಕೊನೆಯಲ್ಲಿ ಒಂದೇ ಒಂದು ವಿಷಯದಲ್ಲಿಯಾದರೂ ತಪ್ಪಿಹೋಗಲು ದೇವರು ಆಸ್ಪದ ಕೊಡುವುದಿಲ್ಲ; ನಮ್ಮ ಜೀವಿತದ ಪ್ರತಿಯೊಂದು ವಿಷಯ ವಿವರಗಳು ಆತನ ಪರಿಶೀಲನೆಯಲ್ಲಿರುತ್ತವೆ. ಲೆಕ್ಕವಿಲ್ಲದಷ್ಟು ಬಾರಿ ಆತನು ಮೇಲಿಂದ ಮೇಲೆ ನಮ್ಮನ್ನು ಅದೇ ಒಂದು ವಿಷಯಾಂಶಕ್ಕೆ, ಅದೇ ಒಂದು ಸ್ಥಳಕ್ಕೆ ಬರ ಮಾಡುವನು. ನಾವು ಪಾಠ ಕಲಿಯುವ ತನಕ ಪದೇ ಪದೇ ನಮ್ಮನ್ನು ಅದೇ ಸ್ಥಳಕ್ಕೆ ಬರ ಮಾಡುವಾಗ ಆತನೆಂದಿಗೂ ಆಯಾಸಗೊಳ್ಳುವುದಿಲ್ಲ, ಯಾಕೆಂದರೆ ಆತನು ಪರಿಷ್ಕೃತ ವಸ್ತುಗಳನ್ನು ಸಿದ್ಧಪಡಿಸುತ್ತಿದ್ದಾನೆ. ಅದು ಅಂತಃ ಪ್ರಚೋದನೆಯ ಪ್ರಶ್ನೆಯಾಗಿದ್ದರೂ ಆಗಿರಬಹುದು. ಏನಿದ್ದರೂ ಪದೇ ಪದೇ ದೇವರು ನಿರಂತರವಾದ ತಾಳ್ಮೆಯಿಂದ ಅದೇ ಒಂದು ನಿಶ್ಚಿತ ವಿಷಯಾಂಶಕ್ಕೆ ನಮ್ಮನ್ನು ಹಿಂದೂಡುತ್ತಾನೆ. ಅದೊಂದು ಮಾನಸಿಕ ಅಲೆದಾಟ ಅಥವಾ ಸರ್ವ ಸ್ವತಂತ್ರ ವೈಯಕ್ತಿಕತೆಯ ವಿಷಯವೇ ಆಗಿರ ಬಹುದು, ನಮ್ಮ ಜೀವಿತದಲ್ಲಿ ಒಳ್ಳೇಯದಲ್ಲದ ಒಂದೇ ಒಂದು ವಿಷಯದ ಬಗ್ಗೆ ತಿಳುವಳಿಕೆ ಮೂಡಿಸಲು ಆತನು ಪದೇ ಪದೇ ಯತ್ನಿಸುತ್ತಿರುತ್ತಾನೆ.

ದೇವರು ಪ್ರಕಟಪಡಿಸಿದ ಪಾಪವಿಮೋಚನಾ ಕಾರ್ಯವಿವರಣೆಯ ಅಪೂರ್ವ ಸಮಯ ವನ್ನು ಈ ಅಧಿವೇಶನದಲ್ಲಿ ಕಳೆದಿರುವೆವು. ನಮ್ಮ ಹೃದಯಗಳು ಆತನಲ್ಲಿ ಪರಿಪೂರ್ಣವಾಗಿವೆ; ಆತನ ಈ ಅದ್ಭುತ ಕಾರ್ಯವು ನಮ್ಮ ಜೀವಿತದ ಮುಖ್ಯ ಕ್ಷೇತ್ರಗಳಲ್ಲಿ ನಾವು ಆತನಿಗೆ ಮೆಚ್ಚಿಗೆಯಾಗೆದ್ದೇ ವೆಂಬುದನ್ನು ತಿಳಿಯಪಡಿಸಿದೆ; ಈಗ, ಯಾಕೋಬನ ಪತ್ರಿಕೆಯ ಮೂಲಕ ''ತಾಳ್ಮೆಯಲ್ಲಿ ನೀವು ಸಿದ್ಧಿಗೆ ಬರಬೇಕು'' ಎಂದು ದೇವರಾತ್ಮನು ತಿಳಿಸುತ್ತಿದ್ದಾನೆ. ಅಜಾಗರೂಕತೆಯ ತುಣುಕುಗಳನ್ನು 'ಸದ್ಯಕ್ಕೆ ಅದು ಇದ್ದರೆ ಇರಲಿಬಿಡು' ಎಂದು ಅಲಕ್ಷ ಮಾಡುವ ಪ್ರವೃತ್ತಿಯನ್ನು ಎಚ್ಚರದಿಂದ ಗಮನಿಸಿರಿ. ಅದೇನೆ ಇರಲಿ ದೇವರು ಮಾತ್ರ ನೀನು ಸಂಪೂರ್ಣವಾಗಿ ಆತನವನಾಗುವವರೆಗೆ ಈ ಎಲ್ಲಾ ಅಜಾಗರೂಕತೆಯ ವಿಷಯಗಳ ಕುರಿತು ನಿರಂತರವಾಗಿ ಒತ್ತಾಯ ಮಾಡುತ್ತಲೇ ಇರುತ್ತಾನೆ.

# ಆತನ ಮಾರ್ಗಗಳ ಬಗ್ಗೆ ಹೆಚ್ಚಿನ ತಿಳುವಳಿಕೆ

**''ಯೇಸು ತನ್ನ ಶಿಷ್ಯರಿಗೆ ಹೇಳಬೇಕಾದದ್ದನ್ನು ಹೇಳಿ ಮುಗಿಸಿದ ಬಳಿಕ ಅಲ್ಲಿಯವರ ಊರುಗಳಲ್ಲಿ ಉಪದೇಶ ಮಾಡುವುದಕ್ಕೂ ಸುವಾರ್ತೆ ಸಾರುವುದಕ್ಕೂ ಅಲ್ಲಿಂದ ಹೊರಟನು'' - (ಮತ್ತಾಯ 11:1)**

**ನಮ್ಮನ್ನು ಹೋಗು ಎಂದು ಹೇಳುವ ಸ್ಥಳಕ್ಕೆ ಆತನು ಬರುವನು:** ದೇವರು ನಿನಗೆ ಅಲ್ಲಿಂದ 'ಹೊರಟು ಹೋಗು' ಎಂದು ಹೇಳಿದರೂ ನೀನು ಹೋಗದೆ ಅಲ್ಲಿಯೇ ನಿಂತು ಬಿಟ್ಟಿರುವಿ, ಯಾಕೆಂದರೆ ನೀನು ನಿನ್ನ ಸ್ವಜನರ ಮೇಲೆ ಅಷ್ಟೊಂದು ಜವಾಬ್ದಾರಿಯುತ ಕಾಳಜಿಯುಳ್ಳವನಾಗಿರುವೆ, ಆಗ ಯೇಸು ಕ್ರಿಸ್ತನು ಸ್ವತಃ ನೇರವಾಗಿ ನಿನ್ನವರಿಗೆ ಬೋಧಿಸುವದನ್ನು ನೀನು ಅವರಿಂದ ಕಸಿದುಬಿಟ್ಟಿರುವಿ. ಎಲ್ಲಾ ಪರಿಣಾಮಗಳನ್ನು ದೇವರಿಗೆ ಬಿಟ್ಟುಕೊಟ್ಟು ನೀನು ಆತನಿಗೆ ವಿಧೇಯನಾಗಿ ಹೋಗಿ ಬಿಟ್ಟಿದ್ದರೆ, ಯೇಸು ಸ್ವಾಮಿಯು ತಾನೇ ನಿನ್ನ ಊರೊಳಗೆ ಹೋಗಿ ಸ್ವತಃ ಬೋಧಿಸುತ್ತಿದ್ದನು; ನೀನು ಎಲ್ಲಿಯವರೆಗೆ ಆತನಿಗೆ ವಿಧೇಯನಾಗುವುದಿಲ್ಲವೋ, ಅಲ್ಲಿಯವರೆಗೆ ನೀನು ಆತನ ಮಾರ್ಗದಲ್ಲಿ ಅಡ್ಡಿಯಾಗಿರುವಿ. ಯೇಸುಕ್ರಿಸ್ತನ ಸಂಗಡ ನೀನು ಎಲ್ಲಿಂದ, ವಾದವೆಬ್ಬಿಸಿ, ನಿನ್ನ ಕರ್ತವ್ಯವೆಂದು ನೀನು ಕರೆಯುತ್ತಿರುವುದನ್ನು ಆತನ ಆಜ್ಞೆಯೊಂದಿಗೆ ಸ್ಪರ್ಧಿಸಲು ಇಳಿಸುತ್ತಿರುವಿ ಎಂಬುದರ ಬಗ್ಗೆ ಎಚ್ಚರದಿಂದಿರಬೇಕು. ''ದೇವರು ನಿನಗೆ ಇಲ್ಲಿಂದ ಹೊರಟು ಹೋಗು ಎಂದು ಹೇಳಿರುವುದು ನಿನಗೆ ತಿಳಿದಿದೆ. ಆದರೆ ನನ್ನ ಕರ್ತವ್ಯವಿರುವುದು ಇಲ್ಲಿಯೇ'' ಎಂದು ನೀನು ಹೇಳಿದರೆ, ಯೇಸುಕ್ರಿಸ್ತನು ತಾನು ಏನು ಹೇಳುವನೋ ಅದರ ಅರ್ಥವನ್ನು ಆತನು ಬಲ್ಲನು ಎಂಬುದನ್ನು ನೀನು ನಂಬುತ್ತಿಲ್ಲ.

**ಎಲ್ಲಿ ನಾವು ಬೋಧಿಸಬಾರದೆಂದು ಹೇಳಿರುವನೋ ಅಲ್ಲಿ ಸ್ವತಃ ತಾನೇ ಬೋಧಿಸುವನು:** ''ಗುರುವೇ ನಾವು ಇಲ್ಲೇ ... ಮೂರು ಪರ್ಣ ಶಾಲೆಗಳನ್ನು ಕಟ್ಟೋಣ'' (ಲೂಕ 9:33) ಇತರರ ಜೀವಿತದಲ್ಲಿ ನಾವು ದೇವರ ಪಾತ್ರವಹಿಸಿ ಅಪ್ರಬುದ್ಧ ದೈವಾಶ್ರಯವನ್ನೊದಗಿಸುವ ಆಟವಾಡು ತ್ತಿರುವೆವೋ? ನಾವು ಇತರರಿಗೆ ಬೋಧಿಸುವಾಗ, ಅವರ ಸನಿಹಕ್ಕೆ ದೇವರು ಸುಳಿಯಲಾಗದಷ್ಟರ ಮಟ್ಟಿಗೆ ನಮ್ಮ ಬೋಧನೆಗಳಲ್ಲಿ ಗದ್ದಲ ತುಂಬಿಸಿರುತ್ತೇವೆಯೋ? ನಾವು ನಮ್ಮ ಬಾಯಿಗಳನ್ನು ಮುಚ್ಚಿಕೊಂಡಿರಬೇಕು ಮತ್ತು ನಮ್ಮ ಆತ್ಮಗಳು ಎಚ್ಚರ ದಿಂದಿರುವಂತೆ ನೋಡಿಕೊಳ್ಳಬೇಕು. ದೇವರು ತನ್ನ ಪುತ್ರನ ವಿಷಯದಲ್ಲಿ ನಮಗೆ ಉಪದೇಶಿಸಲು ಬಯಸುತ್ತಿದ್ದಾನೆ. ಆತನು ನಮ್ಮ ಪ್ರಾರ್ಥನಾ ಸಮಯವನ್ನು ರೂಪಾಂತರದ ಪರ್ವತದ ಸಮಯವನ್ನಾಗಿ ಮಾರ್ಪಡಿಸಲು ಬಯಸುತ್ತಿದ್ದಾನೆ, ಆದರೆ ನಾವು ಆತನಿಗೆ ಆಸ್ಪದ ಕೊಡುವುದಿಲ್ಲ - ದೇವರು ಇಂಥದೇ ಮಾರ್ಗದಲ್ಲಿ ಕೆಲಸ ಮಾಡುವನೆಂಬುದು ನಮಗೆ ಖಚಿತವಾಗಿದ್ದರೆ, ಅಂಥ ಮಾರ್ಗದಲ್ಲಿ ಆತನು ಇನ್ನುಮುಂದೆ ಕಾರ್ಯ ಮಾಡುವುದಿಲ್ಲ.

**ನಾವು ಕಾದುಕೊಂಡಿರಬೇಕೆಂದು ಕಳುಹಿಸಿದಲ್ಲಿಯೇ ಆತನು ಕಾರ್ಯವೆಸಗುವನು :** ''ದೇವರು... ತನಕ ... ಕಾದುಕೊಂಡಿರ್ರಿ'' (ಲೂಕ 24:49) ''ದೇವರನ್ನು ನಿರೀಕ್ಷಿಸಿ ಕೊಂಡಿರ್ರಿ'' (ಕೀರ್ತನೆ 37:34) ಆಗ ಆತನೇ ಕಾರ್ಯ ಸಾಧಿಸುವನು. ಅಂಥಾ ಸಮಯದಲ್ಲಿ ಒಂದು ಇಂಚೂ ಆಸ್ಪದ ನಿನ್ನ ಮುಂದೆ ಕಾಣದಿರುವು ದರಿಂದ ಉಂಟಾಗುವ ಆತ್ಮೀಕ ಸೆಡುವಿನಿಂದ, ನಿನ್ನ ಸ್ಥಿತಿಗಾಗಿ ಚಿಂತಿಸುತ್ತಾ ನಿರೀಕ್ಷಿಸಿಕೊಂಡಿರಬೇಡ! ಶಾಂತತೆಯಿಂದ ದೇವರನ್ನು ನಿರೀಕ್ಷಿಸಲೋಸುಗ ನಮ್ಮ ಸ್ವಂತ ಆತ್ಮೀಕ ಚಿತ್ತೋನ್ಮಾದಗ್ರಸ್ತತೆಯಿಂದ ನಾವು ಸಾಕಷ್ಟು ಬೇರ್ಪಟ್ಟಿರುವೆವೋ? ನಿರೀಕ್ಷಿಸಿಕೊಂಡಿರ್ರಿ ಎಂದರೆ ಕೈಕಟ್ಟಿ ಕೂತುಕೊಳ್ಳುವುದಲ್ಲ, ಆತನು ಹೇಳಿದ್ದನ್ನು ಕಾರ್ಯಗತ ಮಾಡಲು ಕಲಿತುಕೊಳ್ಳುತ್ತಿರಬೇಕು, ಆತನ ಕಾರ್ಯ ವಿಧಾನದ ಹಂತಗಳೇ ಇವು, ಆದರೆ ಅವುಗಳನ್ನು ನಾವು ಗಮನಿಸುವುದು ವಿರಳವೇ.

# ಸಂಕಷ್ಟಗಳ ಸಂದೇಶ

**''ಲೋಕದಲ್ಲಿ ನಿಮಗೆ ಸಂಕಟ ಉಂಟು ಧೈರ್ಯವಾಗಿರಿ ನಾನು ಲೋಕವನ್ನು ಜಯಸಿದ್ದೇನೆ''**
**– (ಯೋಹಾನ – 16:33)**

ಸಂಕಟಗಳಿಂದ ಬಿಡುಗಡೆ ಪಡೆಯುವುದೇ ಕ್ರಿಸ್ತೀಯ ಜೀವಿತವೆಂಬುದೊಂದು ಸಾಮಾನ್ಯ ದೃಷ್ಟಿಕೋನ. ಆದರೆ ಸಂಕಟದೊಳಗಿರುತ್ತಾ ಬಿಡುಗಡೆಯನ್ನು ಪಡೆಯುವುದೇ ಕ್ರಿಸ್ತೀಯ ಜೀವಿತ ವೆಂಬುದು ತೀರಾ ಭಿನ್ನವಾದದ್ದು. ''ಪರಾತ್ಪರನ ಮರೆ ಹೊಕ್ಕಿರುವವನು ಸರ್ವಶಕ್ತನ ಆಶ್ರಯದಲ್ಲಿ ಸುರಕ್ಷಿತ ನಾಗಿರುವನು. ಯಾವ ಕೇಡೂ ನಿನಗೆ ಸಂಭವಿಸಿದು. ಉಪದ್ರವವು ನಿನ್ನ ಗುಡಾರದ ಸಮೀಪಕ್ಕೂ ಬಾರದು'' (ಕೀರ್ತನೆ 91:1–10) – ದೇವರೊಂದಿಗೆ ನಾವು ಐಕ್ಯಗೊಂಡಿರುವ ಸ್ಥಳದ ಸನಿಹಕ್ಕೆ ಯಾವ ಪಿಡುಗೂ ಬರುವುದಿಲ್ಲ.

ದೇವರ ಮಗುವು ನೀನಾಗಿದ್ದರೆ, ನೀನು ಎದುರಿಸಬೇಕಾದ ಸಂಕಷ್ಟಗಳು ಖಂಡಿತವಾಗಿಯೂ ಇರುತ್ತವೆ ಮತ್ತು ಅವು ನಿನ್ನನ್ನು ಸಂಧಿಸಿದಾಗ ಅಚ್ಚರಿಗೊಳ್ಳಬಾರದೆಂದು ಯೇಸುಕ್ರಿಸ್ತನು ಹೇಳುತ್ತಾನೆ. ''ಲೋಕದಲ್ಲಿ ನಿಮಗೆ ಸಂಕಟ ಉಂಟು, ಧೈರ್ಯವಾಗಿರ್ರಿ. ನಾನು ಲೋಕವನ್ನು ಜಯಸಿದ್ದೇನೆ'' ನೀನು ಭಯಪಡುವಂಥಾದ್ದೇನೂ ಇಲ್ಲವೇ ಇಲ್ಲ. ರಕ್ಷಣೆ ಹೊಂದುವ ಮುಂಚೆ ಸಂಕಟಗಳ ಬಗ್ಗೆ ಮಾತನಾಡಲು ಹೀಗಳೆಯುತ್ತಿದ್ದ ಜನರು ತಾವು ಹೊಸದಾಗಿ ಹುಟ್ಟಿದ ಮೇಲೆ, ಭಕ್ತನ ಜೀವಿತವು ಸಂಕಟ ರಹಿತವೆಂದು ತಪ್ಪಾದ ಅಭಿಪ್ರಾಯ ಹೊಂದಿದ್ದರಿಂದ ವಿವಂಚಿತರೂ, ಚಿಂತಾಗ್ರಸ್ತರೂ ಆಗಿದ್ದಾರೆ.

ಜಯಶಾಲಿ ಜೀವಿತವನ್ನು ದೇವರು ನಮಗೆ ಕೊಡುವುದಿಲ್ಲ; ನಾವು ಜಯವನ್ನು ಸಾಧಿಸು ತ್ತಿರುವಂತೆಯೇ ಜೀವವನ್ನು ಕೊಡುತ್ತಾನೆ. ಪ್ರಯಾಸವೇ ಶಕ್ತಿ. ಎಲ್ಲಿ ಪ್ರಯಾಸ ವಿಲ್ಲವೋ ಅಲ್ಲಿ ಶಕ್ತಿಯೂ ಇಲ್ಲ. ಜೀವಿತವನ್ನು , ಜೀವಿತದ ಆನಂದವನ್ನು ಮತ್ತು ಸ್ವತಂತ್ರವನ್ನು ದಯಪಾಲಿಸೆಂದು ನೀನು ದೇವರನ್ನು ಬೇಡಿಕೊಳ್ಳುತ್ತಿರುವಿಯೋ ?. ಅದನ್ನು ಪಡೆಯಲು ಅಗತ್ಯವಾದ ಪ್ರಯಾಸವನ್ನು ನೀನು ಅಂಗೀಕರಿಸದ ಹೊರತು ನೀನು ಬೇಡಿಕೊಳ್ಳುತ್ತಿರುವುದನ್ನು ನಿನಗೆ ಕೊಡುವುದಿಲ್ಲ. ಪ್ರಯಾಸವನ್ನು ನೀನು ಎದುರಿಸಿದ ಕೂಡಲೇ ನಿನಗೆ ಶಕ್ತಿಯು ದೊರೆಯುತ್ತದೆ. ನಿನ್ನ ಸ್ವಂತ ಪುಕ್ಕಲುತನವನ್ನು ಜಯಿಸಿ ಮುಂದಡಿ ಇಡು, ಆಗ ದೇವರು ಜೀವವೃಕ್ಷದ ಫಲವನ್ನು ತಿನ್ನಲು ನಿನಗೆ ಕೊಡುವನು ಮತ್ತು ಅದರಿಂದ ನೀನು ಪೋಷಣೆ ಹೊಂದುವಿ. ನಿನ್ನಷ್ಟಕ್ಕೆ ನೀನು ದೈಹಿಕವಾಗಿ ವ್ಯಯಿಸಿಕೊಂಡರೆ ನೀನು ಬಳಲಿ ಬೆಂಡಾಗಿ ಬಿಡುವೆ; ಆದರೆ ಆತ್ಮೀಕವಾಗಿ ನೀನು ವ್ಯಯ ಮಾಡಿಕೊಂಡರೆ, ಅಧಿಕ ಶಕ್ತಿಯನ್ನು ಪಡೆಯುವೆ. ದೇವರು ನಾಳಿನ ದಿನಕ್ಕಾಗಿ ಇಲ್ಲವೇ ಮುಂದಿನದಿನಗಳಿಗಾಗಿ, ಇಲ್ಲವೇ ಮುಂದಿನ ಘಳಿಗೆಗಾಗಿ ಇಂದೇ ಶಕ್ತಿಯನ್ನು ದಯಪಾಲಿಸು ವುದಿಲ್ಲ, ಆದರೆ ಪ್ರಯಾಸದ ಕ್ಷಣಗಳಲ್ಲಿ ಮಾತ್ರ ಅಗತ್ಯವಿರುವ ಶಕ್ತಿಯನ್ನು ಕೊಡುತ್ತಾನೆ. ಸಂಕಟಗಳನ್ನು ನಮ್ಮ ವ್ಯವಹಾರ ಜ್ಞಾನದಿಂದ ಎದುರಿಸುವ ಪ್ರಲೋಭನೆ ಯಾವಾಗಲೂ ಇದ್ದೇ ಇರುತ್ತದೆ. ಕ್ರಿಸ್ತ ಭಕ್ತನು ಸಂಕಷ್ಟಗಳಿಂದ ಜಜ್ಜಲ್ಪಟ್ಟಂತೆ ತೋರಿದರೂ, ಧೈರ್ಯವಾಗಿರಬಲ್ಲನು ಯಾಕೆಂದರೆ ಅಂಥಾ ಸಮಯದಲ್ಲಿಯೂ ಜಯಗಳಿಸು ವದೆಂದರೆ, ದೇವರ ವಿನಃ ಬೇರೆ ಎಲ್ಲರಿಗೂ ಅದು ಹಾಸ್ಯಾಸ್ಪದವಾದ ಅಸಾಧ್ಯತೆಯಾಗಿರುತ್ತದೆ.

# ದೇವರು ಮಾಡುವ ಮಹಾ ಒತ್ತಾಯ

**''ನೋಡಿರಿ, ನಾವು ಯೆರೂಸಲೇಮಿಗೆ ಹೋಗುತ್ತಾ ಇದ್ದೇವೆ'' (ಲೂಕ - 18:31)**

ಯೆರೂಸಲೆಮ್ ಪಟ್ಟಣವು ಯೇಸುಸ್ವಾಮಿಯ ಜೀವಿತದಲ್ಲಿ, ಆತನು ತನ್ನ ತಂದೆಯ ಚಿತ್ತದ ಪರಕಾಷ್ಠೆಯನ್ನು ಮುಟ್ಟಿದ ಸ್ಥಳವಾಗಿದೆ. ''ಸ್ವಂತ ಚಿತ್ತ ನೆರವೇರಬೇಕೆಂದು ಅಪೇಕ್ಷಿಸದೆ ನನ್ನನ್ನು ಕಳುಹಿಸಿದಾತನ ಚಿತ್ತ ನೆರವೇರಬೇಕೆಂದು ಅಪೇಕ್ಷಿಸುವುದರಿಂದ'' (ಯೋಹಾ 5:30). ಯೇಸು ಸ್ವಾಮಿಯ ಭೂಯಾತ್ರೆಯ ಜೀವಿತ ಕಾಲದಲ್ಲೆಲ್ಲಾ, ಅದೊಂದೇ ಆತನ ಪ್ರಧಾನ ಅಪೇಕ್ಷೆಯಾಗಿತ್ತು ಮತ್ತು ಅದನ್ನು ನೆರವೇರಿಸುವ ಮಾರ್ಗದಲ್ಲಿ ಆತನು ಸಂಧಿಸಿದವುಗಳಲ್ಲಿ ಆನಂದ ಅಥವಾ ದುಃಖ, ಯಶಸ್ಸು ಇಲ್ಲವೆ ಸೋಲು ಇವುಗಳಲ್ಲಿ ಒಂದಾದರೂ, ಆತನ ಉದ್ದೇಶವನ್ನು ಅಡ್ಡಿಪಡಿಸಲಿಲ್ಲ. ''ಯೆರೂಸಲೇಮಿಗೆ ಹೋಗುವುದಕ್ಕೆ ಮನಸ್ಸನ್ನು ದೃಢ ಮಾಡಿಕೊಂಡು'' (ಲೂಕ - 9:51)

ನಾವು ನೆನಪಿನಲ್ಲಿಟ್ಟುಕೊಳ್ಳಬೇಕಾದ ದೊಡ್ಡ ವಿಷಯ - ಅದು, ನಾವು ಯೆರೂಸಲೇಮಿಗೆ ಹೋಗುತ್ತಿರುವುದು ದೇವರ ಚಿತ್ತವನ್ನು ನೆರವೇರಿಸುವುದಕ್ಕೆ ಹೊರತು ನಮ್ಮ ಚಿತ್ತಗಳನ್ನಲ್ಲ. ನಮ್ಮ ಸ್ವಾಭಾವಿಕಜೀವಿತದಲ್ಲಿ ನಮ್ಮ ಕಾಂಕ್ಷೆಗಳು ಸಹಜವಾಗಿಯೇ ನಮ್ಮ ಸ್ವಂತದವುಗಳೇ ಆಗಿರುತ್ತವೆ; ಆದರೆ ಕ್ರಿಸ್ತೀಯ ಜೀವಿತದಲ್ಲಿ ನಮ್ಮದೇ ಆದ ಸ್ವಂತ ಗುರಿಗಳಿರುವುದಿಲ್ಲ. ಈಗಿನ ದಿನಮಾನಗಳಲ್ಲಿ ಯೇಸು ಕ್ರಿಸ್ತನಿಗಾಗಿ ತೀರ್ಮಾನ ಮಾಡುವುದರ ಬಗ್ಗೆ ಬಹಳಷ್ಟನ್ನು ಹೇಳಲಾಗಿದೆ - ಕ್ರೈಸ್ತರಾಗಿರಬೇಕೆಂಬ ನಮ್ಮ ನಿರ್ಣಯ, ಅದಕ್ಕಾಗಿ, ಇದಕ್ಕಾಗಿ ಎಂಬ ನಿರ್ಧಾರಗಳು. ಆದರೆ ಹೊಸ ಒಡಂಬಡಿಕೆಯಲ್ಲಿ ದೇವರು ಮಾಡುವ ನಿರ್ಬಂಧದ ನೋಟ ಹೀಗಿದೆ - ''ನೀವು ನನ್ನನ್ನು ಆರಿಸಿ ತೆಗೆದುಕೊಂಡಿಲ್ಲ ನಾನು ನಿಮ್ಮನ್ನು ಆರಿಸಿ ತೆಗೆದುಕೊಂಡೆನು.'' (ಯೋಹಾ 15:16) ದೇವರ ಉದ್ದೇಶಗಳನ್ನು ಪ್ರಜ್ಞಾಭರಿತ ಒಪ್ಪಿಗೆಯಿಂದ ನಾವು ಕೈಕೊಂಡಿಲ್ಲ - ಅರಿವಿಲ್ಲದೆ ದೇವರ ಉದ್ದೇಶಗಳನ್ನು ಕೈಕೊಂಡಿದ್ದೇವೆ. ದೇವರ ಗುರಿಯ ಪರಿಕಲ್ಪನೆಯೂ ನಮಗಿಲ್ಲ. ಹೀಗೆಯೇ ನಾವು ಮುಂದೆ ಸಾಗಿದಾಗ ಆತನ ಉದ್ದೇಶಗಳು ನಮಗೆ ಇನ್ನಷ್ಟು ಅಸ್ಪಷ್ಟವಾಗುತ್ತವೆ. ದೇವರು ತೊಟ್ಟ ಗುರಿಯು ತಪ್ಪಿಹೋಗಿರುವಂತೆ ನಮಗನ್ನಿಸುತ್ತವೆ, ಯಾಕೆಂದರೆ ದೇವರು ಯಾವುದಕ್ಕೆ ಗುರಿತೊಟ್ಟಿರುವನೋ ಅದು, ಅಲ್ಪದೃಷ್ಟಿಯುಳ್ಳವರಾದ ನಮಗೆ ಗೋಚರಿಸುವುದಿಲ್ಲ. ಕ್ರಿಸ್ತೀಯ ಜೀವಿತದ ಆರಂಭದಲ್ಲಿ ದೇವರ ಉದ್ದೇಶಗಳ ವಿಷಯವಾಗಿ ನಮ್ಮದೇ ಆದ ಸ್ವಂತ ಕಲ್ಪನೆಗಳನ್ನು ಹೊಂದಿರುತ್ತೇವೆ, ''ನಾವು ಅಲ್ಲಿಗೆ ಅಥವಾ ಇಲ್ಲಿಗೆ ಹೋಗಲೇಬೇಕಾಗಿದೆ,'' ''ಈ ವಿಶೇಷ ಕಾರ್ಯಕ್ಕಾಗಿ ದೇವರು ನಮ್ಮನ್ನು ಕರೆದಿರುವನು'' - ಇಂಥಾ ತೀರ್ಮಾನಗಳ ಆಧಾರದ ಮೇಲೆ ನಮಗೆ ಸರಿಕಂಡಂತೆ ನಾವು ಹೊರಟು ಹೋಗಿ ಕಾರ್ಯಗಳನ್ನು ಮಾಡುತ್ತೇವೆ, ಹಾಗಿದ್ದಾಗ್ಯೂ ದೇವರ ಒತ್ತಾಯ ಹೇಗಿದ್ದಿತೋ ಹಾಗೆಯೇ ಉಳಿದಿದೆ. ನಾವು ಮಾಡುವ ಕೆಲಸ ಲೆಕ್ಕಕ್ಕೆ ಇಲ್ಲ. ದೇವರ ಒತ್ತಾಯಕ್ಕೆ ಹೋಲಿಸಿಕೊಂಡರೆ ನಾವು ಮಾಡಿದ್ದೆಲ್ಲವೂ ಕೇವಲ ಹುಲುಹಂದರವಾಗಿದೆ. ''ಆತನು ತನ್ನ ಹನ್ನೆರಡು ಮಂದಿ ಶಿಷ್ಯರನ್ನು ಕರೆದುಕೊಂಡು'' (ಲೂಕ 18:13). ಆತನು ಸದಾಕಾಲ ನಮ್ಮೆಲ್ಲರನ್ನು ತನ್ನ ಜೊತೆಗೆ ಕರೆದುಕೊಂಡು ಹೋಗುತ್ತಾನೆ. ನಾವು ಹೊಂದಿರುವದಕ್ಕಿಂತಲೂ ಹೊಂದಬೇಕಾಗಿರುವುದು, ಬಹಳಷ್ಟಿದೆ.

# ದೇವರ ಧೀರೋದ್ಧಾತ್ತ ಗೆಳೆತನ

**''ಆತನು ತನ್ನ ಹನ್ನೆರಡು ಮಂದಿ ಶಿಷ್ಯರನ್ನು ಕರಕೊಂಡು'' (ಲೂಕ 18:13)**

ದೇವರು ನಮ್ಮ ಮೇಲೆ ಭರವಸೆ ಇಡುವುದದೆಂಥಹ ಧೀರತ್ವ ! ''ಆತನು ನನ್ನನ್ನು ಆರಿಸಿ ತೆಗೆದುಕೊಳ್ಳುವುದರಲ್ಲಿ ಬುದ್ಧಿವಂತನಲ್ಲ. ಯಾಕೆಂದರೆ ನನ್ನೊಳಗೆ ಒಳ್ಳೆಯದೆನ್ನುವುದೊಂದೂ ಇಲ್ಲ , ನನಗೆಯಾವ ಬೆಲೆಯೂ ಇಲ್ಲ'' ಎಂದು ನೀನು ಹೇಳುವೆ. ಈ ಕಾರಣಕ್ಕಾಗಿಯೇ ಆತನು ನಿನ್ನನ್ನು ಆರಿಸಿ ತೆಗೆದು ಕೊಂಡಿದ್ದಾನೆ. ನಿನ್ನೊಳಗೆ ಯೋಗ್ಯವಾದದ್ದೇನಾದರೂ ಇದೆ ಎಂದು ನೀನು ಯೋಚಿಸುತ್ತಿರುವವರೆಗೆ ದೇವರು ನಿನ್ನನ್ನು ಆರಿಸಿಕೊಳ್ಳುವುದಿಲ್ಲ , ಯಾಕೆಂದರೆ ಅಂಥಾ ಚಿಂತನೆಯಲ್ಲಿ ನಿನ್ನ ಸ್ವಂತ ಉದ್ದೇಶಗಳನ್ನು ನೆರವೇರಿಸಿಕೊಳ್ಳುವ ವಾಂಛೆ ಇದ್ದೇ ಇರುತ್ತದೆ; ನಿನ್ನ ಸ್ವಸಂತೃಪ್ತಿಯ ಇಲ್ಲವಾಗುವವರೆಗೆ ನಿನ್ನನ್ನು ಕರೆದೊಯ್ಯಲು ಆತನಿಗೆ ಆಸ್ಪದಕೊಟ್ಟರೆ, ಆಗ ಆತನು, ತನ್ನ ಜೊತೆಯಲ್ಲಿ ಯೆರೂಸಲೇಮಿಗೆ ಹೋಗಲು ನಿನ್ನನ್ನು ಆರಿಸಿಕೊಳ್ಳಬಲ್ಲನು, ಅಂದರೆ ಅದು ನಿನ್ನೊಡನೆ ತಾನು ಚರ್ಚಿಸದಿರುವ ತನ್ನ ಉದ್ದೇಶದ ನೆರವೇರುವಿಕೆಯಾಗಿದೆ.

ಸ್ವಾಭಾವಿಕವಾದ ಶಕ್ತಿ ಸಾಮರ್ಥ್ಯಗಳು ಮನುಷ್ಯನಲ್ಲಿರುವುದರಿಂದ ಅವನೊಬ್ಬ ಒಳ್ಳೆಯ ಕ್ರೈಸ್ತನಾಗಬಲ್ಲನು ಎಂದು ನಾವು ಹೇಳುವುದು ಸಹಜವೇ. ನಮ್ಮಲ್ಲಿ ಲಭ್ಯವಿರುವ ಸಾಧನಗಳ ಮತ್ತು ಯೋಗ್ಯತೆಗಳ ಪ್ರಶ್ನೆ ಇದಲ್ಲ, ಆದರೆ ನಮ್ಮೊಳಗಿರುವ ದರಿದ್ರತನವೇ ಇಲ್ಲಿ ಮುಖ್ಯ; ನಮ್ಮೊಡನೆ ನಾವು ಏನು ತರುತ್ತಿರುವೆವೆಂಬುದಲ್ಲ, ದೇವರು ನಮ್ಮೊಳಗೆ ಏನನ್ನು ಇರಿಸಿರುವನೋ ಅದು ಮುಖ್ಯ; ಸ್ವಾಭಾವಿಕವಾದ ಸದ್ಗುಣಗಳ ಮತ್ತು ಗುಣಚಾರಿತ್ರೆಗಳ, ಸಾಮರ್ಥ್ಯಗಳ, ತಿಳುವಳಿಕೆಯ, ಮತ್ತು ಅನುಭವಗಳ ಪ್ರಶ್ನೆ ಇದಲ್ಲ - ಇವು ಯಾವೂ ಈ ವಿಷಯದಲ್ಲಿ ಪ್ರಯೋಜನಕ್ಕೆ ಬರುವಂಥವುಗಳಲ್ಲ. ಲಭ್ಯವಿರುವ ಒಂದೇ ಒಂದು ಯೋಗ್ಯತೆ - ಅದು ದೇವರ ನಿರ್ಬಂಧದ ಉದ್ದೇಶಕ್ಕಾಗಿ, ನಮ್ಮನ್ನು ಆರಿಸಿ ತೆಗೆದುಕೊಂಡು, ನಮ್ಮನ್ನು ತನ್ನ ಜತೆಗಾರರನ್ನಾಗಿ ಮಾಡಿಕೊಂಡಿರುವನು. (1 ಕೊರಿಂಥ 1:26 -30 ಓದಿರಿ). ದೇವರ ಸಂಗಡವಿರಬೇಕಾದ ಗೆಳೆತನವು, ತಮ್ಮ ಬಡತನವನ್ನು ಬಲ್ಲ ಜನರಿಂದ ಉಂಟಾಗುತ್ತದೆ. ದೇವರಿಗೆ ನಾನು ಉಪಯುಕ್ತನು ಎಂದು ಭಾವಿಸುವ ವ್ಯಕ್ತಿಯೊಂದಿಗೆ ಆತನು ಏನೂ ಸಾಧಿಸುವುದಿಲ್ಲ. ನಮ್ಮ ಸ್ವಂತದವುಗಳ ನಿಮಿತ್ತ ಕ್ರೈಸ್ತರಾಗಿ ನಾವು ಜೀವಿಸುತ್ತಿಲ್ಲ. ದೇವರ ಉದ್ದೇಶಾರ್ಥ ನಾವಿದ್ದೇವೆ, ಮತ್ತು ಆತನ ಉದ್ದೇಶಗಳೆಂದೂ ನಮ್ಮ ಉದ್ದೇಶಗಳಾಗುವುದಿಲ್ಲ. ದೇವರ ಉದ್ದೇಶವೇನಿದೆಯೋ ನಮಗದು ತಿಳಿಯದು, ಅದೇನೇ ಇರಲಿ ಆತನೊಡನಿರುವ ಅನ್ಯೋನ್ಯತೆಯ ಬಾಂಧವ್ಯವನ್ನು ನಾವು ಕಾಪಾಡಿಕೊಳ್ಳಬೇಕು. ದೇವರೊಂದಿಗಿರುವ ಈ ಬಾಂಧವ್ಯವನ್ನು ಅಪಾಯಕ್ಕೀಡು ಮಾಡುವಂಥ ವುಗಳಿಗೆ ನಮ್ಮ ಜೀವಿತದಲ್ಲಿ ಅಸ್ಪದವನ್ನೆಂದೂ ಕೊಡಬಾರದು; ಒಂದು ವೇಳೆ ಆ ಬಾಂಧವ್ಯವು ಘಾಸಿಗೊಂಡಿದ್ದರೆ, ಅದನ್ನು ಸರಿಪಡಿಸಲು ಕೂಡಲೇ ನಿನ್ನ ಸಮಯವನ್ನಿರಿಸಬೇಕು. ಕ್ರೈಸ್ತ ಧರ್ಮದ ಮುಖ್ಯ ವಿಷಯವೆಂದರೆ - ನಾವು ಮಾಡುವ ಕಾರ್ಯಗಳಲ್ಲ, ಅದು ನಾವು ಕಾಪಾಡಿಕೊಂಡಿರುವ ದೇವರ ಸಂಬಂಧ ಮತ್ತು ಅದರಿಂದುಂಟಾದ ಪರಿಸರ. ಅದೊಂದನ್ನೇ ನಾವು ಗಮನಿಸಿ ನೋಡಿಕೊಳ್ಳ ಬೇಕೆಂದು ದೇವರು ಕೇಳುತ್ತಾನೆ. ಆದರೆ ಅದೊಂದೇ ನಿರಂತರವಾಗಿ ನಮ್ಮಲ್ಲಿ ಘಾತಕ್ಕೊಳ ಗಾಗುತ್ತಿರುತ್ತದೆ.

# ದೇವರ ಗಾಬರಿಹುಟ್ಟಿಸುವ ಕರೆ

**''ಮನುಷ್ಯ ಕುಮಾರನ ವಿಷಯದಲ್ಲಿ ಪ್ರವಾದಿಗಳು ಬರೆದದ್ದೆಲ್ಲಾ ಅವರಲ್ಲಿ ನೆರವೇರುವುದು ... ಅವರು ಈ ಸಂಗತಿಗಳಲ್ಲಿ ಒಂದನ್ನಾದರೂ ಗ್ರಹಿಸಲಿಲ್ಲ'' - (ಲೂಕ 18:31,34)**

ಉಪಶಮನವು ಅಸಾಧ್ಯವೆಂದು ತೋರುವ ಮಹಾ ದುರ್ದಶೆಗೊಳಗಾಗಲು ಯೇಸು ಕ್ರಿಸ್ತನನ್ನು ದೇವರು ಕರೆದನು.ಯೇಸುಕ್ರಿಸ್ತನು ತಾನು ಕೊಲ್ಲಲ್ಪಡುವುದನ್ನು ಪ್ರತ್ಯಕ್ಷವಾಗಿ ನೋಡಲು ತನ್ನ ಶಿಷ್ಯರನ್ನು ಕರೆದನು; ಯಾವ ಸ್ಥಳದಲ್ಲಿ ಅವರ ಹೃದಯಗಳು ಛಿದ್ರಗೊಳ್ಳುವವೋ ಅಲ್ಲಿಗೆ ಪ್ರತಿಯೊಬ್ಬ ಶಿಷ್ಯನನ್ನೂ ಆತನು ಕರೆದೊಯ್ದನು. ದೇವರ ದೃಷ್ಟಿಯಲ್ಲಿ ಮಾತ್ರವೇ ಹೊರತು ಬೇರೆಲ್ಲಾ ದೃಷ್ಟಿಕೋನ ದಿಂದಲೂ ಯೇಸುಕ್ರಿಸ್ತನ ಜೀವಿತವು ಪೂರ್ಣ ವಿಫಲವಾಗಿದೆ. ಆದರೆ ಯಾವುದು ಮನುಷ್ಯರ ದೃಷ್ಟಿಯಲ್ಲಿ ಸೋಲೆನಿಸುವುದೋ ಅದು ದೇವರ ದೃಷ್ಟಿಯಲ್ಲಿ ಪ್ರಚಂಡ ವಿಜಯೋತ್ಸವವಾಗಿದೆ, ಯಾಕೆಂದರೆ ದೇವರ ಉದ್ದೇಶ ವೆಂದೂ ಮನುಷ್ಯನ ಉದ್ದೇಶದಂತಿರುವುದಿಲ್ಲ.

ನಮ್ಮ ಜೀವನದಲ್ಲಿಯೂ ಸಹಾ ಗಾಬರಿಗೊಳಿಸುವಂಥ ಕರೆಯುವಿಕೆಯು ದೇವರಿಂದ ಬರುತ್ತದೆ. ದೇವರ ಕರೆಯುವಿಕೆಯು ಸುಸ್ಪಷ್ಟವಾಗಿ ವ್ಯಕ್ತವಾಗುವಂಥಾದಲ್ಲ; ಅದು ಗುಪ್ತಾರ್ಥ ವಾಗಿರುತ್ತದೆ. ದೇವರ ಕರೆಯುವಿಕೆಯು ಸಮುದ್ರದ ಕರೆಯುವಿಕೆಯಂತಿರುವುದು, ಸಮುದ್ರದ ಸ್ವಭಾವವುಳ್ಳವನಲ್ಲದೆ ಬೇರೆಯಾರೂ ಆ ಕರೆಯುವಿಕೆಯನ್ನು ಕೇಳಿಸಿಕೊಳ್ಳಲಾರರು. ದೇವರ ಕರೆಯುವಿಕೆಯು ಏನೆಂಬುದನ್ನು ಖಚಿತವಾಗಿ ಹೇಳಲಾಗದು, ಅದು ತನ್ನ ಉದ್ದೇಶಾರ್ಥವಾಗಿ ತನ್ನ ಸಾಂಗತ್ಯದೊಳಗೆ ಬಂದು ಸೇರಲು ಆ ಕರೆಯುವಿಕೆ ಇರುತ್ತದೆ. ದೇವರು ತನ್ನ ಉದ್ದೇಶವನ್ನು ಚೆನ್ನಾಗಿ ಬಲ್ಲನು ಎಂದು ನಂಬುವುದೇ ನಮ್ಮ ಪರೀಕ್ಷೆ; ಸಂಭವಿಸುವ ಘಟನೆಗಳು ತಮ್ಮಷ್ಟಕ್ಕೆ ತಾವೇ ಆಕಸ್ಮಿಕವಾಗಿ ಸಂಭವಿಸುವುದಿಲ್ಲ, ದೇವರ ಆದೇಶದಂತೆ ಘಟನೆಗಳು ಘಟಿಸುತ್ತವೆ. ದೇವರು ತನ್ನ ಉದ್ದೇಶಾರ್ಥ ಕಾರ್ಯವೆಸಗುತ್ತಿರುತ್ತಾನೆ.

ನಾವು ದೇವರ ಅನ್ಯೋನ್ಯತೆಯಲ್ಲಿದ್ದರೆ ಮತ್ತು ದೇವರು ತನ್ನ ಉದ್ದೇಶಾರ್ಥವಾಗಿ ನಮ್ಮನ್ನು ಆರಿಸಿ ತೆಗೆದುಕೊಳ್ಳುತ್ತಿರುವನೆಂಬುದನ್ನು ನಾವು ಗುರುತಿಸಿದ್ದರೆ, ಆತನ ಉದ್ದೇಶಗಳೇನಿರಬಹು ದೆಂಬುದನ್ನು ಇನ್ನು ಮುಂದೆ ತಿಳಿದುಕೊಳ್ಳುವ ಗೋಜಿಗೆ ನಾವು ಹೋಗುವುದಿಲ್ಲ. ನಾವು ಕ್ರಿಸ್ತೀಯ ಜೀವಿತದಲ್ಲಿ ಮುಂದುವರಿಯುತ್ತಿರುವಂತೆಯೇ ನಮ್ಮ ಜೀವಿತವು ಸರಳ ವಾಗುತ್ತದೆ, ಯಾಕೆಂದರೆ 'ಯಾಕೆ ದೇವರು ಅದಕ್ಕಾಗಲೀ ಇದಕ್ಕಾಗಲೀ ಆಸ್ಪದ ಕೊಟ್ಟನು' ಎಂದು ಹೇಳುವುದನ್ನು ನಾವು ಕಡಿಮೆ ಮಾಡಿರುತ್ತೇವೆ. ನಮ್ಮ ಜೀವಿತದ ಪ್ರತಿಯೊಂದು ಸಂಗತಿಗಳ ಹಿಂದೆ, ದೇವರ ಒತ್ತಾಸೆಯಿರುವುದನ್ನು ಮತ್ತು ಜೀವಿತವನ್ನು ಪರಿಪೂರ್ಣವಾಗಿ ರೂಪಿಸುವ ದೈವತ್ವವಿರುವುದನ್ನು ನಾವು ಕಾಣುತ್ತೇವೆ. ಒಳ್ಳೆ ಕ್ರೈಸ್ತನೆಂದರೆ ಅವನು ದೇವರ ಬುದ್ಧಿ ಕೌಶಲ್ಯ ಮತ್ತು ಆತನ ಜ್ಞಾನದಲ್ಲಿ ಭರವಸವುಳ್ಳವನಾಗಿರ ಬೇಕಲ್ಲದೆ, ತನ್ನ ಸ್ವಂತ ಯೋಗ್ಯತೆಗಳಲ್ಲಿಯಲ್ಲ . ಸ್ವಂತ ಉದ್ದೇಶಗಳನ್ನು ನಾವಿಟ್ಟುಕೊಂಡಿದ್ದರೆ, ಆಗ ಅದು ದೇವರ ಶಿಶುವಿನ ಲಕ್ಷಣವಾದ ಯಥಾರ್ಥತೆಯನ್ನು, ನಿರಾಳತ್ವವನ್ನು ಮತ್ತು ನಿಶ್ಚಿಂತ ಜೀವನ ಧಾಟಿಯನ್ನು ನಾಶಗೊಳಿಸುತ್ತದೆ.

# ಪ್ರಾರ್ಥನೆಯಲ್ಲಿ ಶಿಲುಬೆ

**''ಆ ದಿನದಲ್ಲಿ ನನ್ನ ಹೆಸರಿನ ಮೇಲೆ ಬೇಡಿಕೊಳ್ಳುವಿರಿ'' (ಯೋಹಾನ-16:26)**

ಶಿಲುಬೆಯು, ನಾವು ಅನುಭವಿಸಿ ಜಯಿಸಬೇಕಾಗಿರುವ ಒಂದು ಸಂಗತಿ ಎಂದು ವಿಪರೀತವಾಗಿ ಯೋಚಿಸುತ್ತೇವೆ; ಶಿಲುಬೆಯಲ್ಲಿ ಮುಳುಗಿ, ಒಳಪಡುವ ಉದ್ದೇಶದಿಂದಲೇ ಶಿಲುಬೆಯನ್ನು ಅನುಭವಿಸುತ್ತೇವೆ. ಒಂದೇ ಒಂದು ವಿಷಯಕ್ಕಾಗಿ ಶಿಲುಬೆಯು ನಮಗೆ ಬೆನ್ನಾಸರೆಯಾಗಿದೆ ಅದು - ಪರಿಪೂರ್ಣವಾಗಿ, ಸಮಗ್ರವಾಗಿ, ಶುದ್ಧವಾಗಿ, ಯೇಸುಕ್ರಿಸ್ತನಲ್ಲಿ ಗುರುತಿಸಿಕೊಳ್ಳುವಿಕೆ, ಇಂಥಾ ಗುರುತಿಸಿಕೊಳ್ಳುವಿಕೆಯು ಪ್ರಾರ್ಥನೆಗಿಂತಲೂ ಹೆಚ್ಚಾಗಿ ಪ್ರಾರ್ಥನೆಯಲ್ಲಿ ನಮಗೆ ನಿಜಾನುಭವವಾಗುತ್ತದೆ.

''ನೀವು ನಿಮ್ಮ ತಂದೆಯನ್ನು ಬೇಡಿಕೊಳ್ಳುವುದಕ್ಕಿಂತ ಮುಂಚೆಯೇ ನಿಮಗೆ ಏನೇನು ಅಗತ್ಯವೆಂಬುದು ಆತನಿಗೆ ತಿಳಿದಿದೆ'' (ಮತ್ತಾಯ 6:8) ಹಾಗಿದ್ದರೆ ನಾವು ಯಾಕೆ ಆತನನ್ನು ಬೇಡಿಕೊಳ್ಳಬೇಕು? ದೇವರಿಂದ ಉತ್ತರಗಳನ್ನು ಪಡೆಯುವುದೇ ಪ್ರಾರ್ಥನೆಯ ಉದ್ದೇಶವಲ್ಲ, ಆದರೆ ಆತನೊಂದಿಗೆ ಪರಿಪೂರ್ಣವಾದ ಶುದ್ಧ ಐಕ್ಯತೆಯನ್ನು ಹೊಂದುವುದೇ ಪ್ರಾರ್ಥನೆ. ಉತ್ತರವನ್ನು ಪಡೆಯುವ ಉದ್ದೇಶದಿಂದಷ್ಟೇ ಪ್ರಾರ್ಥಿಸಿದರೆ, ನಾವು ಬೇಗನೇ ದೇವರಲ್ಲಿ ಕಿರಿಕಿರಿಗೊಂಡು ಆತನ ಮೇಲೆ ಮುನಿಸಿಕೊಳ್ಳುತ್ತೇವೆ. ನಾವು ಪ್ರಾರ್ಥಿಸಿದ ಪ್ರತಿಸಲವೂ ಉತ್ತರ ಬಂದೇ ಬರುತ್ತದೆಯಾದರೂ ನಾವು ಆಶಿಸಿದ ರೀತಿಯಲ್ಲಿ ಅದು ಬರುವುದಿಲ್ಲ, ನಮ್ಮ ಪ್ರಾರ್ಥನೆಗಳಲ್ಲಿ ಯೇಸುಕ್ರಿಸ್ತನೊಂದಿಗೆ ಗುರುತಿಸಿಕೊಳ್ಳುವ ನಿರಾಕರಣೆಯೇ ನಮ್ಮ ಆತ್ಮೀಕ ಅಸಮಾಧಾನವನ್ನು ಹೊರಪಡಿಸುತ್ತದೆ. ದೇವರು ನಮ್ಮ ಪ್ರಾರ್ಥನೆಗಳಿಗೆ ಉತ್ತರಿಸುವನು ಎಂಬುದನ್ನು ಪ್ರಮಾಣ ಪಡಿಸಲು ನಾವಿಲ್ಲಿ ಬದುಕುತ್ತಾ ಇಲ್ಲ, ಆತನ ಕೃಪೆಯ ಜೀವಂತ ಸ್ಮಾರಕಗಳಾಗಿರುವುದಕ್ಕೆ ಮಾತ್ರ ಬದುಕಿದ್ದೇವೆ.

''ನಾನು ತಂದೆಯನ್ನು ನಿಮಗೋಸ್ಕರ ಕೇಳಿಕೊಳ್ಳುವೆನೆಂತ ನಿಮಗೆ ಹೇಳುವುದಿಲ್ಲ... ತಂದೆಯು ತಾನೇ ನಿಮ್ಮ ಮೇಲೆ ಮಮತೆ ಇಡುತ್ತಾನಲ್ಲವೇ'' (ಯೋಹಾನ 16:26-27). ನಿನ್ನ ಪ್ರಾರ್ಥನಾ ಜೀವಿತವು ಯೇಸುಕ್ರಿಸ್ತನ ಪ್ರಾರ್ಥನಾಜೀವಿತದ ವಿವರಣೆಯಾಗಿರುತ್ತದೆನ್ನುವಷ್ಟರ ಮಟ್ಟಿಗೆ ದೇವರ ಆತ್ಮೀಯತೆಯಲ್ಲಿ ಸೇರಿರುವಿಯೋ? ಯೇಸುಕ್ರಿಸ್ತನು ಪ್ರತಿನಿಧಿಸಿದ ಜೀವಿತವೇ ನಿನ್ನ ಶಕ್ತಿಭರಿತ ಜೀವಿತವಾಗಿದೆಯೇ? ''ಆ ದಿನದಲ್ಲಿ'' ಯೇಸುಕ್ರಿಸ್ತನಲ್ಲಿ ನಿನ್ನ ಗುರುತಿಸುವಿಕೆಯು ಎಷ್ಟರ ಮಟ್ಟಿಗಿರುತ್ತದೆಂದರೆ, ಅಲ್ಲಿ ಏಳ್ಳಷ್ಟು ತಾರತಮ್ಯವಿರುವುದಿಲ್ಲ.

ಪ್ರಾರ್ಥನೆಯು ಉತ್ತರಿಸಲ್ಪಡುವುದಿಲ್ಲವೇನೋ ಎನ್ನುವಂತಿದ್ದರೆ, ಅದಕ್ಕಾಗಿ ಬೇರೊಬ್ಬರ ಮೇಲೆ ದೋಷಾರೋಪಣೆ ಮಾಡುವ ವಿಷಯದಲ್ಲಿ ಎಚ್ಚರದಿಂದಿರಬೇಕು. ಪ್ರತಿಸಲವೂ ಸೈತಾನ ನೊಡ್ಡುವ ಉರುಲು ಅದೇ. ಒಂದು ಮುಖ್ಯವಾದ ನಿರ್ದೇಶನವನ್ನು ನಿನಗೆ ಮಾತ್ರ ಕೊಡುವುದಕ್ಕಾಗಿಯೇ ಹೊರತು ಬೇರೆಯಾರಿಗೂ ಅಲ್ಲವೆಂಬುದನ್ನು ನೀನು ತಿಳುಕೊಳ್ಳುವುದಕ್ಕಾಗಿಯೇ ಅಂಥಾ ಸಮಯವಿರುತ್ತದೆ.

# ತಂದೆಯ ಮನೆಯಲ್ಲಿ ಪ್ರಾರ್ಥನೆ

**''ನಾನು ನನ್ನ ತಂದೆಯ ಮನೆಯಲ್ಲಿ ಇರಬೇಕಾದದ್ದು ನಿಮಗೆ ತಿಳಿಯಲಿಲ್ಲವೇ'' (ಲೂಕ 2:45)**

ಯೇಸುಸ್ವಾಮಿಯವರ ಬಾಲ್ಯಾವಸ್ಥೆಯು ಪುರುಷತನದ ಬೆಳವಣಿಗೆಗಾಗಿ ಕಾಯುತ್ತಿರುವಂಥ ಅಪ್ರಬುದ್ಧತೆಯಾಗಿರಲಿಲ್ಲ. ಆತನ ಬಾಲ್ಯಾವಸ್ಥೆಯು ಶಾಶ್ವತ ಸತ್ಯವಾಗಿದೆ. ನನ್ನ ಸ್ವಾಮಿಯೂ ನನ್ನ ರಕ್ಷಕನೂ ಆಗಿರುವ ಯೇಸುಕ್ರಿಸ್ತ ನೊಂದಿಗೆ ಗುರುತಿಸಿಕೊಂಡಿರುವುದರಿಂದ ನಾನು ಸಹಾ ಪರಿಶುದ್ಧನೂ, ಮುಗ್ಧನೂ ಆಗಿರುವ ದೇವರ ಶಿಶುವಾಗಿರುವೆನೋ ? ನನ್ನ ಜೀವಿತವು ದೇವರ ಮನೆಯಲ್ಲಿ ವಾಸಿಸುತ್ತಿರುವ ಜೀವಿತವೆಂಬಂತೆ ಅದನ್ನು ನಾನು ಕಾಣುತ್ತಿರುವೆನೋ ? ದೇವರ ಪುತ್ರನು ತನ್ನ ತಂದೆಯ ಮನೆಯಲ್ಲಿ ಜೀವಿಸುವಂತೆಯೇ ನನ್ನೊಳಗೆ ಜೀವಿಸುತ್ತಿರುವನೋ ?

ನಿರಂತರ ಸತ್ಯವೇ ದೇವರು, ಆತನ ಸೃಷ್ಟಿಯ ವ್ಯವಸ್ಥಾ ಕ್ರಮದಲ್ಲಿ ಕ್ಷಣ ಕ್ಷಣವೂ ಇದು ನನಗೆ ತೋರಿಬರುತ್ತಿದೆ. ನಾನು ಸದಾಕಾಲ ಈ ವಾಸ್ತವದ ಸಂಪರ್ಕದಲ್ಲಿ ರುವೆನೋ ಅಥವಾ ನನ್ನ ಜೀವನ ವ್ಯವಸ್ಥೆಯು ತಪ್ಪುದಾರಿ ಹಿಡಿದು ಅಸ್ತವ್ಯಸ್ತಗೊಂಡಾಗ ಮತ್ತು ನನ್ನ ಜೀವನ ಕ್ರಮದಲ್ಲಿ ಗಲಿಬಿಲಿ ಗಳುಂಟಾದಾಗ ಮಾತ್ರ ನಾನು ಪ್ರಾರ್ಥನೆಗಳನ್ನು ಸಲ್ಲಿಸುವೆನೋ? ನನ್ನ ಸ್ವಾಮಿಯೊಂದಿಗೆ ಪವಿತ್ರ ಅನ್ಯೋನ್ಯತೆಯಲ್ಲಿ ನನ್ನನ್ನು ಗುರುತಿಸಿಕೊಳ್ಳುವುದನ್ನು ನಾನು ಕಲಿತುಕೊಳ್ಳಬೇಕು, ಆದರೆ ನಮ್ಮಲ್ಲಿ ಕೆಲವರಿನ್ನೂ ಅದನ್ನು ಕಲಿತುಕೊಳ್ಳಲು ಆರಂಭಿಸಿಲ್ಲ. ''ನಾನು ನನ್ನ ತಂದೆಯ ಮನೆಯಲ್ಲಿ ಇರಬೇಕು''. ಜೀವಿತದ ಪ್ರತಿ ಕ್ಷಣಗಳನ್ನು ನಾನು ನನ್ನ ತಂದೆಯ ಮನೆಯಲ್ಲಿ ಜೀವಿಸಬೇಕು.

ಇದನ್ನು ನಿನ್ನ ವೈಯಕ್ತಿಕ ಸನ್ನಿವೇಶಗಳಿಗೆ ಅನ್ವಯಿಸಲು ಚಿಂತನೆ ಮಾಡು, ಎಡಬಿಡದೆ ದೇವರೊಡನೆ ಮಾತನಾಡುತ್ತಾ (ಪ್ರಾರ್ಥಿಸುತ್ತಾ) ಮತ್ತು ಸರ್ವವೂ ಆತನಿಂದಲೇ ಉಂಟಾಗುತ್ತವೆಂಬು ದನ್ನು ಗ್ರಹಿಸಿ, ಆತನ ಯಥಾರ್ಥ ಮಗುವಾಗಿರುವಷ್ಟರ ಮಟ್ಟಿಗೆ ಯೇಸುಸ್ವಾಮಿಯ ಜೀವಿತದೊಂದಿಗೆ ನಿನ್ನನ್ನು ಗುರುತಿಸಿ ಕೊಂಡಿರುವೆಯೋ ? ನಿನ್ನೊಳಗಿರುವ ದೇವರ ಪುತ್ರನು, ತನ್ನ ತಂದೆಯ ಮನೆಯಲ್ಲಿ ಜೀವಿಸುವಂತೆಯೇ ನಿನ್ನಲ್ಲಿಯೂ ಜೀವಿಸುತ್ತಿರುವನೋ? ಆತನ ಸರ್ವಾನುಗ್ರಹ ಜೀವಿತದ ಕೃಪೆಯು ನಿನ್ನ ಮನೆಯಲ್ಲಿ, ನಿನ್ನ ವ್ಯವಹಾರದಲ್ಲಿ, ನಿನ್ನ ಗೃಹ ಜೀವನದ ಪರಿಸರದಲ್ಲಿ, ಕಾರ್ಯವೆಸಗುತ್ತಲಿದೆಯೋ ? ನೀನೀಗ ಅನುಭವಿಸುತ್ತಿರುವ ಸಂಗತಿಗಳು ಹೀಗೇಕೆ ಎಂದು ಅಚ್ಚರಿ ಪಡುತ್ತಿರುವಿಯೋ ? ಅವುಗಳಲ್ಲಿ ನೀನೇ ಸಾಗಿ ಹೋಗಬೇಕೆಂದಲ್ಲ ; ದೇವರ ಮಗನೊಡನೆ ನೀನು ಬಾಂಧವ್ಯ ಹೊಂದಿರುವುದರಿಂದ, ಆ ಮಗನು ತನ್ನ ತಂದೆಯ ಪರಮ ಚಿತ್ತದಂತೆ ನಿನ್ನ ಜೀವಿತದಲ್ಲಿ ಪ್ರವೇಶಿಸುತ್ತಾನೆ. ಆತನೊಂದಿಗೆ ಸಂಪೂರ್ಣವಾದ ಅನ್ಯೋನ್ಯತೆಯಲ್ಲಿರುತ್ತಾ ನಿನ್ನೊಂದಿಗೆ ಆತನೇ ಸಾಗಿಹೋಗಲು ದಾರಿ ಮಾಡಿಕೊಡಬೇಕು.

ಯೇಸುಕ್ರಿಸ್ತನ ಪ್ರಾರ್ಥನಾ ಜೀವಿತವೇ ನಿನ್ನ ಯಥಾರ್ಥವಾದ ಬಲಭರಿತವಾದ ಜೀವಿತ ವಾಗಿರಬೇಕು. ಆತನು ಈ ಲೋಕದಲ್ಲಿದ್ದಾಗ ಜನರ ನಡುವೆ ಜೀವಿಸಿದ, ಮತ್ತು ಕಾರ್ಯವೆಸಗಿದ ಮಾರ್ಗವೇ, ಆತನು ನಿನ್ನಲ್ಲಿ ಜೀವಿಸುವ ಮತ್ತು ಕಾರ್ಯವೆಸಗುವ ಮಾರ್ಗ ವಾಗಿರಬೇಕು.

# ತಂದೆಯ ಗೌರವಾರ್ಥ ಪ್ರಾರ್ಥನೆ

**''ಆದದರಿಂದ ಹುಟ್ಟುವ ಆ ಪವಿತ್ರ ಶಿಶು ದೇವರ ಮಗನೆನ್ನಿಸಿಕೊಳ್ಳುವುದು '' - (ಲೂಕ 1:35)**

ಒಂದು ವೇಳೆ ದೇವರ ಪುತ್ರನು ನನ್ನ ನರಭಾವದ ಶರೀರದಲ್ಲಿ ಜನಿಸಿದರೆ ಆತನ ಪರಿಶುದ್ಧ ಮುಗ್ಧತೆ, ಸರಳತೆ, ಮತ್ತು ತಂದೆಯೊಡನಿದ್ದ ಐಕ್ಯತೆ, ಇವೆಲ್ಲವೂ ನನ್ನಲ್ಲಿ ಮೈದೋರಲು ಅವಕಾಶವಿದೆಯೇ ? ಕನ್ಯಾಮರಿಯಳಲ್ಲಿ ದೇವರ ಪುತ್ರನ ಐತಿಹಾಸಿಕ ಜನನವು ಈ ಭೂಮಿಯ ಮೇಲೆ ಆದದ್ದು ಎಷ್ಟು ಸತ್ಯವೊ ಭಕ್ತನ ಜೀವಿತದಲ್ಲಿ ಹಾಗೆಯೇ ಆಗುವುದು ಅಷ್ಟೇ ಸತ್ಯವಾಗಿದೆ. ದೇವರೇ ನಡಿಸಿದ ಕೃಪಾಕಾರ್ಯದ ಮೂಲಕ ದೇವರ ಕುಮಾರನು ನನ್ನೊಳಗೆ ಜನಿಸಿದನು; ಆಗ ದೇವರ ಮಗನಾದ ನಾನು, ದೇವರ ಮಗನ ಹಕ್ಕನ್ನೂ ಚಲಾಯಿಸುವೆನು, ಅಂದರೆ ಸದಾಕಾಲ ದೇವರಿಗೆ ಮುಖಾಮುಖಿ ಯಾಗಿರುವ ಹಕ್ಕು. ಇದರಿಂದ ಅಚ್ಚರಿಗೊಂಡ ನಾನು ನನ್ನ ಲೌಕಿಕ ಜೀವಿತಕ್ಕೆ - ''ಈ ನನ್ನ ಆಸಕ್ತಿಯನ್ನು ಯಾಕೆ ಕೆಡಿಸಿ ದಾರಿ ತಪ್ಪಿಸಲು ನೀನು ಬಯಸುತ್ತಿರುವೆ ? ನಾನು ನನ್ನ ತಂದೆಯ ಮನೆಯಲ್ಲಿ ಇರಬೇಕಾದದ್ದು ನಿಮಗೆ ತಿಳಿಯುವುದಿಲ್ಲವೋ?'' (ಲೂಕ 2:49) ಎಂದು ಸತತವಾಗಿ ಹೇಳುತ್ತಿದ್ದೇನೆಯೋ ? ಸಂದರ್ಭ ಗಳೇನೇ ಇರಲಿ ನನ್ನ ಜೀವಿತದಲ್ಲಿ ಜನಿಸಿರುವ, ಪರಿಶುದ್ಧನೂ ಮುಗ್ಧನೂ ಮತ್ತು ನಿತ್ಯನಿರಂತರನೂ ಆದ ಮಗನು, ತಂದೆಯ ಸಂಪರ್ಕ ದಲ್ಲಿರಲೇಬೇಕು.

ಈ ರೀತಿಯಾಗಿ ನನ್ನ ಸ್ವಾಮಿಯೊಡನೆ ಗುರುತಿಸಿಕೊಳ್ಳುವಷ್ಟು ಸರಳ ವ್ಯಕ್ತಿ ನಾನಾಗಿರುವೆನೋ ? ಆತನು ತನ್ನ ಉದ್ದೇಶಾರ್ಥವಾಗಿರುವ ತನ್ನ ಅದ್ಭುತವಾದ ಮಾರ್ಗವನ್ನು ನನ್ನಲ್ಲಿ ಪಡೆದಿರುವನೋ ? ದೇವರ ಪುತ್ರನು ನನ್ನಲ್ಲಿ ಜನಿಸಬೇಕೆಂಬ ದೇವರ ಇಚ್ಛೆಯು ನೆರವೇರಿದೆಯೋ ? (ಗಲಾತ್ಯ 4:19 ನೋಡಿರಿ) ಅಥವಾ ನಾನು ಜೋಕೆಯಿಂದ ಆತನನ್ನು ನನ್ನ ಜೀವಿತದ ಒಂದು ಬದಿಗೆ ಸರಿಸಿಬಿಟ್ಟಿರುವೆನೋ ? ಓಹ್ ಈ ದಿನಗಳಲ್ಲಿ ಕೇಳಿಸುವ ಕೂಗಾಟ, ಬೊಬ್ಬೆಗಳೆಷ್ಟು ! ಪ್ರತಿಯೊಬ್ಬನು ಕೂಗಾಡಿ ಬೊಬ್ಬೆ ಇಡುತ್ತಿರುವುದು - ಯಾತಕ್ಕಾಗಿ? - ದೇವರ ಕುಮಾರನಾದ ಯೇಸುಕ್ರಿಸ್ತನನ್ನು ಕೊಲ್ಲುವುದಕ್ಕಾಗಿ. ಸದ್ಯದಲ್ಲಿ ದೇವರ ಪುತ್ರನಿಗೆ ಈ ಜೀವಿತದಲ್ಲಿ ಸ್ಥಳವಿಲ್ಲ, ತನ್ನ ತಂದೆಯೊಡನೆ ಶಾಂತವಾದ ಅನ್ಯೋನ್ಯತೆಯಲ್ಲಿರಲು ಆತನಿಗೆ ಈ ಇಲ್ಲೆಲ್ಲಿಯೂ ಸ್ಥಳವಿಲ್ಲ.

ದೇವರ ಪುತ್ರನು ನನ್ನೊಳಗೆ, ಪ್ರಾರ್ಥಿಸುತ್ತಾ ಇರುವನೋ ಅಥವಾ ನಾನೇ ಆತನಿಗೆ ಆದೇಶ ಗಳನ್ನೀಯುತ್ತಿರುವೆನೋ ? ಆತನು ಈ ಲೋಕದಲ್ಲಿದ್ದಾಗ ಮಾಡುತ್ತಿದ್ದ ಬೋಧನೆಯನ್ನು ನನ್ನೊಳಗೆ ಈಗಲೂ ಆತನು ಮಾಡುತ್ತಿರುವನೋ ? ನನ್ನೊಳಗಿರುವ ಈ ದೇವಪುತ್ರನು ತನ್ನ ಉದ್ದೇಶಾರ್ಥವಾಗಿ ನನ್ನೊಳಗೆ ಶ್ರಮೆಯನ್ನು ಭವಿಸುತ್ತಿರುವನೋ ? ಪ್ರಬುದ್ಧನಾದ ಸಂತನ ಅಂತರಿಕ ಜೀವನದ ವಿಷಯದಲ್ಲಿ ಒಬ್ಬ ವ್ಯಕ್ತಿಯು ಎಷ್ಟು ಆಳವಾಗಿ ತಿಳಿದುಕೊಳ್ಳುವನೋ ಅಷ್ಟೇ ಹೆಚ್ಚಾಗಿ ಅವನಲ್ಲಿ ದೇವರ ಉದ್ದೇಶ ವೇನೆಂಬುದನ್ನು ಕಂಡುಕೊಳ್ಳುವನು. ''ಕ್ರಿಸ್ತನ ಸಂಕಟಗಳೊಳಗೆ ಇನ್ನೂ ಉಳಿದಿದ್ದನ್ನು ನನ್ನ ಶರೀರದಲ್ಲಿ ಅನುಭವಿಸಿ ತೀರಿಸುತ್ತೇನೆ''. (ಕೊಲಸ್ಯ 1:24) ''ಉಳಿದದ್ದನ್ನು ತೀರಿಸಲು'' ಯಾವಾಗಲೂ ಏನಾದರೂ ಇದ್ದೇ ಇರುತ್ತದೆ.

# ದೇವರು ಆಲಿಸುವ ಪ್ರಾರ್ಥನೆ

**''ತಂದೆಯೇ ನೀನು ನನ್ನ ಪ್ರಾರ್ಥನೆಯನ್ನು ಕೇಳಿದ್ದಕ್ಕೆ ನಿನ್ನನ್ನು ಕೊಂಡಾಡುತ್ತೇನೆ'' - (ಯೋಹಾನ 11:41)**

ದೇವರ ಪುತ್ರನು ಪ್ರಾರ್ಥಿಸುತ್ತಿರುವಾಗ ಆತನಲ್ಲಿರುವುದು ಒಂದೇ ಒಂದು ಪ್ರಜ್ಞೆ, ಅದು ತನ್ನ ತಂದೆಯ ವಿಷಯವಾದ ಪೂರ್ಣ ಪ್ರಜ್ಞೆ ಮಾತ್ರ. ದೇವರು ತನ್ನ ಮಗನ ಪ್ರಾರ್ಥನೆಯನ್ನು ಸದಾ ಕಾಲ ಆಲಿಸುತ್ತಾನೆ. ದೇವರ ಪುತ್ರನು ನನ್ನಲ್ಲಿ ರೂಪುಗೊಂಡಿದ್ದರೆ, ಆಗ ನನ್ನ ಪ್ರಾರ್ಥನೆಯನ್ನು ತಂದೆಯು ಆಲಿಸುವನು. ಆದ್ದರಿಂದ ನನ್ನ ಈ ನಶ್ವರ ಶರೀರದಲ್ಲಿ ದೇವ ಪುತ್ರನು ಅವಿಷ್ಕರಣವಾಗುವ ಹಾಗೆ (ಮೈದೋರುವಂತೆ) ನಾನು ಎಚ್ಚರವಹಿಸಬೇಕು. ''ಪವಿತ್ರಾತ್ಮನಿಗೆ ನಿಮ್ಮ ದೇಹವು ಗರ್ಭಗುಡಿಯಾಗಿದೆ'' (1 ಕೊರಿ-6:19) ನಿನ್ನ ದೇಹವು ದೇವಪುತ್ರನ 'ಬೆತ್ಲೆಹೇಮ್' ಆಗಿದೆ. ದೇವಪುತ್ರನು ನನ್ನೊಳಗೆ ಕಾರ್ಯವೆಸಗುವ ಸುಸಂಧಿಯನ್ನು ಆತನು ಪಡೆದಿರುವನೋ? ದೇವಪುತ್ರನ ನೇರವಾದ ಯಥಾರ್ಥ ತೆಯು, ಐತಿಹಾಸಿಕವಾದ ಈ ಲೋಕಯಾತ್ರೆಯ ಆತನ ಜೀವಿತದಲ್ಲಿ ಕಾರ್ಯವೆಸಗಿದಂತೆ ಈಗಲೂ ನನ್ನೊಳಗೆ ಕಾರ್ಯವೆಸಗುತ್ತಿದೆಯೋ? ಸರ್ವ ಸಾಮಾನ್ಯ ಮನುಷ್ಯರಲ್ಲೊಬ್ಬನಾಗಿರುವ ನನ್ನ ಜೀವಿತ ದಲ್ಲುಂಟಾಗುವ ದೈನಂದಿನ ಆಗುಹೋಗುಗಳನ್ನು ನಾನೆದುರಿಸುತ್ತಿರುವಾಗ ದೇವರ ನಿತ್ಯ ಪುತ್ರನು ತನ್ನ ತಂದೆಗೆ ಈಗಲೂ ನನ್ನೊಳಗೆ ಪ್ರಾರ್ಥನೆಯನ್ನು ಸಲ್ಲಿಸುತ್ತಿರುವನೋ ? ''ಆ ದಿನದಲ್ಲಿ ನೀವು ನನ್ನ ಹೆಸರಿನಲ್ಲಿ ಬೇಡಿಕೊಳ್ಳುವಿರಿ'' (ಯೋಹಾನ 16:8) ಯಾವ ದಿನವದು? ಪವಿತ್ರಾತ್ಮನು ನನ್ನೊಳಗೆ ಬಂದು ನನ್ನನ್ನು ನನ್ನ ಸ್ವಾಮಿಯವರೊಂದಿಗೆ ಬಲವಾಗಿ ಒಂದು ಮಾಡಿದ ದಿನ.

ಪ್ರಭುವಾದ ಯೇಸುಕ್ರಿಸ್ತನು ನಿನ್ನ ಜೀವಿತದಲ್ಲಿ ಸಂಪೂರ್ಣವಾಗಿ ತೃಪ್ತಿಗೊಂಡಿರುವನೋ ಅಥವಾ ನೀನಿನ್ನೂ ಆತ್ಮೀಕ ಬಿಂಕವನ್ನು ಪ್ರದರ್ಶಿಸುತ್ತಿರುವೆಯೋ ? ನಿನ್ನ ಸಾಮಾನ್ಯ ಜ್ಞಾನದ ಮೂಗನ್ನು ತೂರಿಸಿ, ದೇವ ಪುತ್ರನನ್ನು ಒಂದು ಬದಿಗೆ ತಳ್ಳುವಷ್ಟರ ಮಟ್ಟಿಗೆ ಅದನ್ನು ವೈಭವೀಕರಿಸಬೇಡ. ಸಾಮಾನ್ಯ ಜ್ಞಾನವು ಮಾನವನ ಸ್ವಭಾವಕ್ಕೆ ದೇವರು ನೀಡಿದ ಬಹುಮಾನ. ಆದರೆ ಅದು ದೇವ ಕುಮಾರನು ನಿನಗೆ ನೀಡಿದ ಬಳುವಳಿಯಲ್ಲ. ದೇವ ಕುಮಾರನು ದೈವಿಕ ಜ್ಞಾನವನ್ನು ಬಹುಮಾನವಾಗಿ ಕೊಡುತ್ತಾನೆ. ಆದ್ದರಿಂದ ಸಾಮಾನ್ಯ ಜ್ಞಾನವನ್ನೆಂದಿಗೂ ಸಿಂಹಾಸನಕ್ಕೇರಿಸಬಾರದು. ಮಗನು ತಂದೆಯನ್ನು ಹುಡುಕಿಕೊಳ್ಳುತ್ತಾನೆ. ಸಾಮಾನ್ಯ ಜ್ಞಾನವಾದರೋ ಈವರೆಗೂ ತಂದೆಯನ್ನು ಹುಡುಕಿ ಕಂಡುಕೊಂಡಿಲ್ಲ, ಮುಂದೆಯೂ ಸಹ ಕಂಡುಕೊಳ್ಳುವುದೇ ಇಲ್ಲ. ಅಂತರ್ನಿವಾಸಿಯಾದ ದೇವರ ಪುತ್ರನು ನಮ್ಮನ್ನು ರೂಪಾಂತರಗೊಳಿಸದ ವಿನಃ ನಮ್ಮ ಸಾಮಾನ್ಯ ಜ್ಞಾನ ಕೌಶಲ್ಯತೆಗಳು ದೇವರನ್ನೆಂದಿಗೂ ಆರಾಧಿಸಲಾರವು. ಆತನು ನಮ್ಮಲ್ಲಿ ಕಾರ್ಯ ಸಾಧಿಸುವಂತಾಗಲು, ಯೇಸುಕ್ರಿಸ್ತನ ಜೀವಿತವು ನಮ್ಮ ''ನಶ್ವರ ಶರೀರದಲ್ಲಿ ಪ್ರತಿಕ್ಷಣವೂ ಮೈ ದೋರುವಂತೆ ಪರಿಪೂರ್ಣವಾಗಿ ನಾವು ಆತನಿಗೆ ಅಧೀನ ಪಡಿಸಬೇಕು.

# ಭಕ್ತನ ಪರಿಶುದ್ಧ ಶ್ರಮೆ

**''ದೇವರ ಚಿತ್ತಾನುಸಾರ ಬಾಧೆ ಪಡುವವರು ಒಳ್ಳೇದನ್ನು ಮಾಡುವವರಾಗಿದ್ದು ತಮ್ಮ ತಮ್ಮ ಆತ್ಮಗಳನ್ನು ನಂಬಿಗಸ್ತನಾದ ಸೃಷ್ಟಿಕರ್ತನಿಗೆ ಒಪ್ಪಿಸಲಿ'' - (1 ಪೇತ್ರ 4:19)**

ನೀನಾಗಿಯೇ ಸಂಕಟಗಳನ್ನು ಆರಿಸಿ ಕೊಂಡಿದ್ದರೆ ಅಲ್ಲಿ ಏನೋ ದೋಷವಿದೆ ; ದೇವರ ಚಿತ್ತವನ್ನು ನೀನು ಆರಿಸಿಕೊಂಡಾಗ ಅದು ಸಂಕಟವೇ ಆಗಿದ್ದರೂ, ಅದೊಂದು ಬೇರೆ ಸಂಗತಿ. ಸದೃಢನಾದ ಭಕ್ತನೆಂದಿಗೂ ಸಂಕಟಗಳನ್ನು ಆರಿಸಿತೆಗೆದುಕೊಳ್ಳುವುದಿಲ್ಲ; ಅವನು ದೇವರ ಚಿತ್ತವನ್ನು, ಅದು ಸಂಕಟವೇ ಆಗಿರಲಿ ಅಥವಾ ಇಲ್ಲದಿರಲಿ, ಯೇಸುಕ್ರಿಸ್ತನು ಆರಿಸಿಕೊಂಡ ಹಾಗೆಯೇ ಆರಿಸಿಕೊಳ್ಳುವನು. ಮತ್ತೊಬ್ಬ ಶಿಷ್ಯನ ಸಂಕಟದ ಶಿಕ್ಷಣದಲ್ಲಿ ಬೇರೆಯಾವ ಭಕ್ತನೂ ತಲೆ ಹಾಕುವ ಧೈರ್ಯವನ್ನು ಮಾಡುವುದಿಲ್ಲ.

ಯೇಸುಕ್ರಿಸ್ತನ ಹೃದಯವನ್ನು ತೃಪ್ತಿಗೊಳಿಸುವ ಭಕ್ತನು ಉಳಿದ ಭಕ್ತರನ್ನು ದೇವರಿಗಾಗಿ ಬಲಿಷ್ಠರನ್ನಾಗಿಯೂ ಪ್ರಭುದ್ಧರನ್ನಾಗಿಯೂ ಮಾಡುತ್ತಾನೆ. ನಮಗೆ ಒಳ್ಳೇದನ್ನು ಮಾಡುವ ಜನರೆಂದೂ ನಮಗೆ ಸಹಾನುಭೂತಿಯನ್ನು ತೋರಿಸುವವರಲ್ಲ , ಅವರು ಯಾವಾಗಲೂ ನಮಗೆ ತಡೆಯೊಡ್ಡುವವರಾಗಿರುತ್ತಾರೆ. ಯಾಕೆಂದರೆ ಸಹಾನು ಭೂತಿಯು ನಮ್ಮನ್ನು ದುರ್ಬಲ ಗೊಳಿಸುತ್ತದೆ. ರಕ್ಷಕನೊಂದಿಗೆ ಅನ್ಯೋನ್ಯತೆಯಲ್ಲಿರುವ ಭಕ್ತನ ಹೊರತು ಬೇರೆಯವರು ಮತ್ತೊಬ್ಬ ಭಕ್ತನನ್ನು ಅರಿಯಲಾರರು. ನಾವು ಬೇರೊಬ್ಬ ಭಕ್ತನ ಸಹಾನುಭೂತಿಯನ್ನು ಸ್ವೀಕರಿಸಿದರೇ, ನಮ್ಮ ಪ್ರತಿಕ್ರಿಯೆ ಹೀಗಿರುತ್ತದೆ. ''ಸರಿ, ದೇವರು ನನ್ನನ್ನು ಬಹು ಕಠಿಣವಾಗಿ ನಡೆಸಿಕೊಳ್ಳುತ್ತಿರುವನು, ಆದ್ದರಿಂದ ನನ್ನ ಜೀವಿತವು ಶ್ರಮಾಭರಿತವಾಗಿದೆ'' ಈ ಕಾರಣದಿಂದಲೇ ಯೇಸುಸ್ವಾಮಿಯವರು ಹೇಳಿರುವರು 'ಸ್ವಾನುಕಂಪವೇ ಸೈತಾನನು' (ಮತ್ತಾ 16:23 ನೋಡಿರಿ) ದೇವರ ಘನತೆಯ ಬಗ್ಗೆ ಸೂಕ್ಷ್ಮ ಅಂತಃಕರಣವುಳ್ಳವರಾಗಿರಬೇಕು. ದೇವರ ಗುಣ ಚಾರಿತ್ರ್ಯಕ್ಕೆ ಬಹು ಸುಲಭವಾಗಿ ಮಸಿ ಬಳೆಯಬಹುದು, ಯಾಕೆಂದರೆ ಆತನೆಂದಿಗೂ ಪ್ರತ್ಯುತ್ತರಿಸುವುದಿಲ್ಲ, ಮತ್ತು ತನ್ನನ್ನು ಸಮರ್ಥಿಸಿಕೊಳ್ಳುವುದೂ ಇಲ್ಲ. ಯೇಸುಕ್ರಿಸ್ತನು ಈ ಲೋಕದಲ್ಲಿದ್ದಾಗ ಆತನಿಗೆ ಅನುಕಂಪನದ ಅಗತ್ಯತೆ ಇತ್ತು ಎನ್ನುವ ಭಾವನೆಯ ಬಗ್ಗೆ ಎಚ್ಚರದಿಂದಿರಬೇಕು. ಆತನು ಜನರ ಸಹಾನುಭೂತಿಯನ್ನು ತಿರಸ್ಕರಿಸಿದನು, ಯಾಕೆಂದರೆ ತಾನು ಈ ಲೋಕಕ್ಕೆ ಬಂದ ಉದ್ದೇಶವನ್ನು ಲೋಕದ ಜನರು ತಿಳಿದಿಲ್ಲವೆಂದು ಆತನಿಗೆ ತಿಳಿದೇ ಇದ್ದಿತು. (ಮತ್ತಾ 16:13 ನೋಡಿರಿ) ಆತನು ತನ್ನ ತಂದೆಯಿಂದ ಮಾತ್ರ ಸಹಾನುಭೂತಿಯನ್ನು ಪಡಕೊಂಡನು ಮತ್ತು ಪರಲೋಕದ ದೇವದೂತರಿಂದ ಅದನ್ನು ಹೊಂದಿದನು (ಲೂಕ 15:10 ನೋಡಿರಿ)

ಪ್ರಾಪಂಚಿಕ ನ್ಯಾಯಸಮ್ಮತ ದೃಷ್ಟಿಯಲ್ಲಿ ಗಮನಿಸುವುದಾದರೆ ತುಂಬಾ ನಿರರ್ಥಕವಾದ ಸ್ಥಳಗಳಲ್ಲಿ, ದೇವರು ತನ್ನ ಭಕ್ತರನ್ನಿರಿಸಿರುವುದನ್ನು ಕಾಣುತ್ತೇವೆ. ''ದೇವರಿಗೆ ನಾನು ತುಂಬಾ ಉಪಯೋಗಾರ್ಥನಾಗಿರುವುದರಿಂದ, ನಾನು ಇಲ್ಲಿಯೇ ಇರಬೇಕೆಂದು ಆತನೇ ಇಚ್ಛಿಸಿದ್ದಾನೆ'' ಎಂದು ನಾವು ಹೇಳಿಕೊಳ್ಳುತ್ತೇವೆ. ದೇವರನ್ನು ಮಹಿಮೆ ಪಡಿಸುವ ಸ್ಥಳಗಳಲ್ಲಿಯೇ ಆತನು ತನ್ನಭಕ್ತರನ್ನು ಇರಿಸಿರುತ್ತಾನೆ. ಮತ್ತು ಆ ಸ್ಥಳಗಳ ವಿಷಯವಾಗಿ ತೀರ್ಪುಮಾಡುವ ಅರ್ಹತೆ ನಮಗೆ ಇಲ್ಲವೇ ಇಲ್ಲ.

# ಇಂಥಾ ಅನುಭವವಾಗಲೇ ಬೇಕು

**''ಎಲೀಯನು ತನಗೆ ಕಾಣಿಸದೆ ಹೋದ ಮೇಲೆ'' - (2 ಅರಸು 2:12)**

ಎಲೀಯನನ್ನು ದೇವರು ನಿನಗೆ ಕೊಟ್ಟಿರುವಷ್ಟು ಕಾಲದಲ್ಲಿ ಅವನ ಮೇಲೆ ಆತುಕೊಂಡಿರುವುದರಲ್ಲಿ ತಪ್ಪೇನಿಲ್ಲ, ಎಲೀಯನು ಹೋಗಬೇಕಾದ ಸಮಯವು ಬರುತ್ತದೆಂಬುದನ್ನು ನೆನಪಿಡು. ಇನ್ನು ಮೇಲೆ ಅವನು ನಿನ್ನ ಮಾರ್ಗದರ್ಶಕನೂ, ನಿನ್ನ ನಾಯಕನೂ ಆಗಿರುವುದಿಲ್ಲ, ಅವನು ಹಾಗೆ ಇನ್ನೂ ಇರಬೇಕೆನ್ನುವುದು ದೇವರ ಉದ್ದೇಶವೂ ಅಲ್ಲ. ಆಗ ''ಎಲೀಯನಿಲ್ಲದೆ ನಾನು ಹೋಗಲಾರೆ''ನೆಂದು ನೀನು ಹೇಳಿದರೂ ಮುಂದೆ ಮುಂದೆ ಸಾಗಲೇಬೇಕೆಂದು ದೇವರು ಹೇಳುತ್ತಾನೆ.

ಯೊರ್ದನಿನಲ್ಲಿ ಏಕಾಂಗಿಯಾಗಿ :- ಯೊರ್ದನ್ ಒಂದು ರೀತಿಯ ಅಗಲಿಕೆಯ ಸಂಕೇತ, ಅಲ್ಲಿ ಯಾರೊಂದಿಗೂ ನಿನ್ನ ಅನ್ಯೋನ್ಯತೆಯಿಲ್ಲ. ನಿನಗೋಸ್ಕರ ಜವಾಬ್ದಾರಿ ಹೊರುವವರು ಯಾರೂ ಅಲ್ಲಿ ಇಲ್ಲ. ನೀನು ಎಲೀಯನ ಸಂಗಡವಿದ್ದಾಗ ಏನೇನು ಕಲಿತಿದ್ದೆಯೋ ಅದನ್ನು ಪರೀಕ್ಷಿಸುವ ಸಮಯವಿದು. ಹಿಂದೆ ಎಲೀಯನ ಜೊತೆಯಲ್ಲಿ ನೀನು ಪದೇ ಪದೇ ಯೊರ್ದನಿಗೆ ಹೋಗಿರುವಿ, ಈಗಲಾದರೋ ನೀನೊಬ್ಬನೇ ಯೊರ್ದನಿಗೆ ಹೋಗಬೇಕಾಗಿದೆ. ಹೋಗುವುದಿಲ್ಲವೆಂದು ನೀನು ಹೇಳುವುದರಿಂದೇನೂ ಉಪಯೋಗ ವಿಲ್ಲ; ನಿನಗೆ ಇದರ ಅನುಭವವಾಗಿದೆ ಮತ್ತು ನೀನೀಗ ಹೋಗಲೇಬೇಕು. ನೀನು ವಿಶ್ವಾಸವಿಟ್ಟು, ನೀನು ನೆಚ್ಚಿಕೊಂಡಿದ್ದ ದೇವರು ನಿಜವಾಗಿಯೂ ನಿನ್ನ ಭರವಸೆಯ ದೇವರು ಎಂಬುದನ್ನು ನೀನು ಅರಿಯಬೇಕಾದರೆ ನೀನೀಗ ಏಕಾಂಗಿಯಾಗಿ ಯೊರ್ದನಿಗೆ ಹೋಗಬೇಕು.

ಯೆರಿಕೋವಿನಲ್ಲಿ ಏಕಾಂಗಿ :- ಎಲೀಯನು ಮಾಡಿದ ಮಹತ್ಕಾರ್ಯಗಳನ್ನು ನೀನು ನೋಡಿರುವ ಸ್ಥಳವೇ ಯೆರಿಕೋ. ನೀನು ನಿನ್ನ ಯೆರಿಕೋವಿಗೆ ಏಕಾಂಗಿಯಾಗಿ ಬಂದಿರುವೆ, ಆದರೆ ಕಾರ್ಯೋನ್ಮುಖನಾಗಲು ಮತ್ತು ದೇವರಲ್ಲಿ ವಿಶ್ವಾಸವನ್ನಿಡಲು ನೀನೀಗ ನಿರಾಸಕ್ತಿಯಿಂದಿರುವೆಯಲ್ಲದೆ, ನಿನ್ನ ಬದಲಿಗೆ ಬೇರೆಯವರು ಅಲ್ಲಿ ಕ್ರಿಯಾಶೀಲರಾಗಲಿ ಎಂದು ನೀನು ಬಯಸುವಿಯಲ್ಲವೇ ? ಎಲೀಯನಿಂದ ನೀನು ಏನೆಲ್ಲವನ್ನೂ ಕಲಿತುಕೊಂಡಿರುವಿಯೋ ಅದಕ್ಕೆ ನೀನು ಶ್ರದ್ಧೆಯುಳ್ಳವನಾಗಿದ್ದರೆ ದೇವರು ಎಲೀಯನ ಸಂಗಡವಿದ್ದಂತೆ ನಿನ್ನ ಸಂಗಡಲೂ ಇರುವ ಸೂಚನೆಯು ಅಲ್ಲಿ ನಿನಗೆ ದೊರಕುವುದು.

ಬೇತೇಲಿನಲ್ಲಿ ಏಕಾಂಗಿ :- ಬೇತೇಲಿನಲ್ಲಿ ನೀನಿರುವಾಗ ನಿನ್ನ ನಿಪುಣತೆಗಳೆಲ್ಲಾ ಕೊನೆಗೊಂಡು ದೇವರ ಜ್ಞಾನದಾರಂಭವನ್ನು ಕಾಣುವಿ. ನಿನ್ನ ಕೌಶಲ್ಯತೆಗಳೆಲ್ಲಾ ಕೊನೆಗೊಂಡು ದಿಗ್ಭ್ರಮೆಗೊಳಗಾಗುವ ಎಳೆತವಿದ್ದಾಗ, ದಿಗ್ಭ್ರಮೆಗೊಳ್ಳಬೇಡ; ದೇವರಲ್ಲಿ ಶ್ರದ್ಧೆಯಿಂದಿರು, ಆಗಲಾತನು ತನ್ನ ಸತ್ಯವನ್ನು ಎಂಥಾ ರೀತಿಯಲ್ಲಿ ತೋರಿಸುವನೆಂದರೆ, ಅದು ನಿನ್ನ ಜೀವಿತವನ್ನು ಪರಿಶುದ್ಧ ಸಂಸ್ಕಾರವನ್ನಾಗಿ ಮಾಡುತ್ತದೆ. ಎಲೀಯನಿಂದ ಕಲಿತಿರುವುದನ್ನು ನಿಜ ಜೀವನದಲ್ಲಿ ಅಭ್ಯಾಸಿಸು, ಎಲೀಯನ ಕಂಬಳಿಯನ್ನು ಉಪ ಯೋಗಿಸು ಮತ್ತು ಪ್ರಾರ್ಥನೆ ಮಾಡು. ದೇವರಲ್ಲಿ ಭರವಸೆಯಿಡುವ ನಿರ್ಧಾರ ಕೈಗೊಳ್ಳಬೇಕು ಹಾಗೂ ಎಲೀಯನಿಗಾಗಿ ಇನ್ನು ಮುಂದೆ ಕಾಯುತ್ತಾ ಇರಬೇಡ.

# ದೇವರಲ್ಲಿ ನಿಶ್ಚಿಂತೆಯಿಂದಿರಿಸುವ ದೈವಜ್ಞಾನ

**''ಅಲ್ಪ ವಿಶ್ವಾಸಿಗಳೇ, ಯಾಕೆ ಧೈರ್ಯಗೆಡುತ್ತೀರಿ'' - (ಮತ್ತಾ 8:26)**

ನಾವು ಭಯಭೀತರಾದಾಗ ದೇವರನ್ನು ಪ್ರಾರ್ಥಿಸುವುದೊಂದನ್ನಲ್ಲದೆ ಬೇರೇನನ್ನೂ ಮಾಡುವುದಿಲ್ಲ, ಆದರೆ ಯೇಸುಕ್ರಿಸ್ತನ ಹೆಸರನ್ನು ಯಾರು ಹೇಳಿಕೊಳ್ಳುವರೋ ಅವರು ಆತನ ಮೇಲೆ ತಾವಿಟ್ಟಿರುವ ಭರವಸೆಯ ಪ್ರಜ್ಞೆಯುಳ್ಳವರಾಗಿರಬೇಕೆಂದು ನಿರೀಕ್ಷಿಸುವ ಹಕ್ಕು ಆತನಿಗಿದೆ. ತನ್ನ ಮಕ್ಕಳು ತನ್ನಲ್ಲಿ ಎಷ್ಟರ ಮಟ್ಟಿಗೆ ನಂಬಿಗಸ್ಥರಾಗಿರಬೇಕೆಂದು ದೇವರು ನಿರೀಕ್ಷಿಸುತ್ತಾನೆಂದರೆ, ಅವರಿಗೆ ಸಂಭವಿಸುವ ಎಂಥಾ ಸಂಕಷ್ಟಗಳಲ್ಲಿಯೂ ಅವರು ದೇವರಿಗೆ ನಂಬಿಗಸ್ಥರೆಂಬಷ್ಟರ ಮಟ್ಟಿಗೆ. ಒಂದು ಮಟ್ಟದವರೆಗಷ್ಟೇ ನಮ್ಮ ಸಂಕಷ್ಟಗಳಲ್ಲಿ ನಾವು ದೇವರಲ್ಲಿ ಭರವಸೆಯಿಂದಿರುತ್ತೇವೆ, ಆನಂತರ ದೇವರನ್ನು ಅರಿಯದವರಂತೆ ದಿಕ್ಕು ತಪ್ಪಿದ ಪ್ರಾಥಮಿಕ ಪ್ರಾರ್ಥನೆಗಳನ್ನು ಹಿಂದಿನಂತೆ ಮಾಡಲು ಪ್ರಾರಂಭಿಸುತ್ತೇವೆ. ನಮ್ಮ ಜಾಣತನ, ನಿಪುಣತೆಗಳು, ಅಂತ್ಯಗೊಂಡಾಗ ಪ್ರಪಂಚವನ್ನಾಳುವ ದೇವರ ಅಧಿಪತ್ಯದಲ್ಲಿಯೂ, ಆತನಲ್ಲಿಯೂ ನಮಗೆ ಎಳ್ಳಷ್ಟು ನಂಬಿಕೆಯಿಲ್ಲದವರಂತೆ ಕಂಗೆಟ್ಟು ವರ್ತಿಸುತ್ತೇವೆ. ಆತನು ದೀರ್ಘ ನಿದ್ರೆಯಲ್ಲಿರುವಂತೆ ನಮಗೆ ಭಾಸವಾಗುತ್ತದೆ. ಬೃಹದಾಕಾರದ, ಸೀಳಿಕೊಂಡುಬರುವ ಸಮುದ್ರದ ತೆರೆಗಳಲ್ಲದೆ ಬೇರೇನನ್ನೂ ನಾವು ಕಾಣುತ್ತಿರುವುದಿಲ್ಲ; ತೆರೆಗಳ ಮೇಲೆ ನಡೆಯುತ್ತಿರುವಾತನನ್ನು ಕಾಣುವುದಿಲ್ಲ.

''ಎಲೈ ಅಲ್ಪ ವಿಶ್ವಾಸಿಗಳೇ!'' ಕ್ರಿಸ್ತನಲ್ಲಿ ನಂಬಿಕೆಯನ್ನು ಪ್ರದರ್ಶಿಸಬಲ್ಲ ಸುಸಂಧಿಯನ್ನು ''ಮತ್ತೊಮ್ಮೆ ಕಳೆದು''ಕೊಂಡ ಅರಿವು ಶಿಷ್ಯರಿಗುಂಟಾದಾಗ, ಅದೆಂಥ ಭಯಂಕರ ಯಾತನೆಯು ಅವರ ಹೃದಯವನ್ನು ಸೀಳಿರಬಹುದು !! ನಮಗೊದಗಿದ ಸಂಕಷ್ಟಗಳಲ್ಲಿ ನಮಗೆ ಮುಂದೇನು ಕಾದಿದೆಯೋ ಎಂಬ ಚಿಂತೆಯಿಲ್ಲದೆ ಯೇಸುಕ್ರಿಸ್ತನಲ್ಲಿ ಸಂಪೂರ್ಣ ಭರವಸೆ ಯನ್ನಿಟ್ಟಿದ್ದರೆ, ಅದು ಆತನ ಹೃದಯದಲ್ಲಿ ಪರಮಾನಂದವನ್ನುಂಟು ಮಾಡಬಹುದಿತ್ತು, ಎನ್ನುವ ಅರಿವು ದಿಢೀರನೇ ನಮಗೆ ಮೂಡಿದಾಗ, ಎಂಥಾ ಹೃದಯಯಾತನೆಯನ್ನು ನಾವು ಅನುಭವಿಸುತ್ತೇವೆ!! ನಾವು ಸಹಾ ''ಸುಸಂಧಿಯನ್ನು ಕಳೆದು ಕೊಂಡೆವಲ್ಲವೇ'' ಎಂಬ  ಲಜ್ಜಾಭರಿತ ಕೂಗು ನಮ್ಮೊಳಗಿಂದ ಹೊರಡುವುದಲ್ಲವೇ ?

ನಮ್ಮ ಜೀವಿತದಲ್ಲಿಯೂ ಬಿರುಗಾಳಿಯಿಲ್ಲದ ಸಂಕಷ್ಟಗಳಿಲ್ಲದ ಹಂತಗಳು ಇರುತ್ತವೆ. ಆಗ ಮಾನವನು ಮಾಡಬಹುದಾದ ಉತ್ತಮವಾದವುಗಳನ್ನು ನಾವು ಮಾಡುತ್ತೇವೆ. ಯಾವಾಗ  ಸಂಕಷ್ಟಗಳು ಉದ್ಭವಿಸುವವೋ ಆಗಲೇ ನಾವು ನಿಜವಾಗಿ ಯಾರನ್ನು ಆತುಕೊಂಡಿದ್ದೇವೆಂಬುದು ಹೊರಬೀಳುವುದು. ನಾವು ದೇವರನ್ನು ಕೊಂಡಾಡುತ್ತಾ ಆತನಲ್ಲಿ ಭರವಸೆವುಳ್ಳವರಾಗುವುದನ್ನು ಯಾವಾಗಲೂ ಅಭ್ಯಾಸಿಸುತ್ತಾ ಇದ್ದರೆ, ನಾವು ಸಂಕಷ್ಟಗಳಲ್ಲಿ ಮುರಿದುಬೀಳುವ ಮಟ್ಟದವರೆಗೆ ಹೋಗುವೆವಾದರೂ ನಮ್ಮ ನಂಬಿಕೆಯು ಮುರಿದು ಬೀಳಲಾರದೆಂಬುದು ಪ್ರಕಟಗೊಳ್ಳುತ್ತದೆ.

ಶುದ್ಧೀಕರಣದ ಬಗ್ಗೆ ಬಹಳಷ್ಟು ಮಾತಾಡಿದ್ದೇವೆ. ಅದರಿಂದಾಗುವದಾದರೂ ಏನು? ದೇವರಲ್ಲಿ ನಾವು ಪೂರ್ಣಭರವಸೆ, ಶಾಂತಿಯಲ್ಲಿರುವುದನ್ನು ಈ ಶುದ್ಧೀಕರಣವು ನಮ್ಮ ಜೀವಿತದಲ್ಲಿ ಸಾಧಿಸಬೇಕು ಅಂದರೆ ನಾವು ದೇವರಲ್ಲಿ ಒಂದಾಗಿರಬೇಕು, ಆ ಒಂದಾಗಿರುವಿಕೆಯು ಆತನ ದೃಷ್ಟಿಯಲ್ಲಿ ನಾವು ದೋಷರಹಿತರಾಗಿ ಕಾಣುವುದು ಮಾತ್ರವಲ್ಲದೆ ನಾವು ಆತನಿಗೆ ಆನಂದವನ್ನು ಉಂಟು ಮಾಡುವವ ರಾಗಿರುವಂತೆ ಮಾಡುತ್ತದೆ.

# ಪವಿತ್ರಾತ್ಮನನ್ನು ನಂದಿಸಬೇಡಿರಿ

**''ಪವಿತ್ರಾತ್ಮನನ್ನು ನಂದಿಸಬೇಡಿರಿ'' - (1ಥೆಸ 5:19)**

ಪವಿತ್ರಾತ್ಮನ ಸ್ವರವು ಮಂದಮಾರುತದಂತೆ ಮೃದುವಾಗಿರುತ್ತದೆ, ಎಷ್ಟು ಮೃದುವೆಂದರೆ, ನೀನು ದೇವರ ಪರಿಪೂರ್ಣ ಅನ್ಯೋನ್ಯತೆಯಲ್ಲಿ ಬದುಕುತ್ತಿರದಿದ್ದರೆ ನೀನದನ್ನು ಕೇಳಿಸಿಕೊಳ್ಳುವುದಿಲ್ಲ. ಆತನ ಸ್ವರಕ್ಕೆ ಸ್ಪಂದಿಸದೆ ನೀನು ಪವಿತ್ರಾತ್ಮನನ್ನು ನಂದಿಸಿಬಿಡುವೆ. ಆಗ ನಿನ್ನ ವ್ಯಕ್ತಿಗತ ಆತ್ಮೀಕ ಜೀವನವು ತುಂಬಾ ಏರು ಪೇರಾಗಿ ಬಿಡುತ್ತದೆ. ಆತನ ಅಡೆತಡೆಗಳು ಮೆಲುದನಿಯಲ್ಲಿ ಸುಳಿದು ಬರುತ್ತವೆ, ಎಂಥಾ ಮೆಲು ದನಿಯೆಂದರೆ, ಅದು ದೇವರ ಭಕ್ತನ ಹೊರತು ಬೇರಿನ್ಯಾರು ಗಮನಿಸದಷ್ಟು ದೃಢವಾದ ಮಂದ ಮಾರುತದಂತಿರುವ ದನಿಯಾಗಿರುತ್ತದೆ. (1ಅರಸು 19:12).

ನೀನು ವ್ಯಕ್ತಿಗತ ಸಾಕ್ಷಿನುಡಿಯುವಾಗ ಮರಳಿಹಿಂದಕ್ಕೆ ಹೋಗಿ 'ಅನೇಕ ವರ್ಷಗಳ ಹಿಂದೊಮ್ಮೆ ನಾನು ರಕ್ಷಿಸಲ್ಪಟ್ಟವನು' ಎಂದು ಕೂಗಿ ಹೇಳುವುದರ ಬಗ್ಗೆ ಎಚ್ಚರದಿಂದಿರು. ನೀನು ಬೆಳಕಿನಲ್ಲಿ ನಡೆಯುತ್ತಿ ರುವುದಾದರೆ ಮರಳಿ ಹಿಂದಕ್ಕೆ ಹೋಗುವಂತಿಲ್ಲ, ನೇಗಿಲ ಮೇಲೆ ಕೈಯನ್ನು ನೀನಿಟ್ಟು, ಬೆಳಕಿನಲ್ಲಿ ನಡೆಯುತ್ತಾ ಇರುವಾಗ ''ಹಿಂದಕ್ಕೆ ನೋಡುವುದು'' ಅಸಾಧ್ಯ; ಯಾಕೆಂದರೆ ಹಿಂದೆ ನಡೆದು ಹೋದದ್ದು ಈಗ ದೇವರೊಂದಿಗೆ ಏಕಗೊಂಡು ಆಶ್ಚರ್ಯಕರವಾದ ಆತನ ಅನ್ಯೋನ್ಯತೆಯಲ್ಲಿ ಸೇರಿಬಿಟ್ಟಿದೆ. (ಲೂಕ 9:62) (1 ಯೋಹಾ 1:6:7ನೋಡಿರಿ) ಅಂದರೆ ದೇವರ ಅಚ್ಚರಿಯ ಅನ್ಯೋನ್ಯತೆಯಲ್ಲಿ ಗತಕಾಲವು ಪ್ರಸಕ್ತ ವರ್ತಮಾನದಲ್ಲಿ ಸಮ್ಮಿಳಿತಗೊಂಡಿರುತ್ತದೆ. ನೀನು ಬೆಳಕಿನಿಂದ ಹೊರಗೆ ನಡೆದರೆ ನೀನು ಭಾವುಕ ಕ್ರೈಸ್ತನಾಗುವೆ ಹಾಗೂ ಗತಕಾಲದ ಸ್ಮರಣೆಗಳಲ್ಲಿಯೇ ಬದುಕುತ್ತಿರುವಿ. ಆಗ ನೀನು ನುಡಿಯುವ ಸಾಕ್ಷಿಯು ಕಠಿಣವೂ, ಲೋಹನಾದವುಳ್ಳದ್ದು ಅಂದರೆ ಕೇವಲ ಘಣಘಣಿಸು ವಂಥಾದ್ದು ಆಗಿರುತ್ತದೆ. ಹಿಂದೆ ಬೆಳಕಿನಲ್ಲಿ ನಡೆದಾಗ ಘಟಿಸಿರುವ ನಿನ್ನ ಅನುಭವಗಳನ್ನು ಈಗ ತಿರುಗಿ ನೆನೆಸಿಕೊಂಡು, ಪ್ರಸ್ತುತದ ಬೆಳಕಿನಲ್ಲಿ ನಡೆಯಲು ನೀನು ತೋರುತ್ತಿರುವ ನಿರಾಕರಣೆಯನ್ನು ಸಮರ್ಥಿಸಿಕೊಳ್ಳಲು, ತೇಪೆ ಹಚ್ಚುವ ನಿನ್ನ ಪ್ರಯತ್ನದ ಬಗ್ಗೆ ಎಚ್ಚರದಿಂದಿರಬೇಕು.

ದೇವರು ನಿನ್ನನ್ನು ಸಂಕಟಕ್ಕೊಳಪಡಿಸಿರುವೆನೆಂದೂ ಮತ್ತು ಆ ಸಂಕಟವನ್ನು ಸಂಪೂರ್ಣವಾಗಿ ಯಲ್ಲದಿದ್ದರೂ ಬಹುಮಟ್ಟಿಗೆ ನೀನು ಅನುಭವಿಸಿರುವೆಯೆಂದು ಭಾವಿಸೋಣ; ಆಗ ದೇವರು ಅದೇ ಸಂಟಕವನ್ನು ತಿರುಗಿ ನಿನಗುಂಟು ಮಾಡುವನು. ಆದರೆ ಸದ್ಯದ ಸಂಕಟವು ಮೊದಲಿನ ಸಂಕಟದಷ್ಟು ತೀಕ್ಷ್ಣ ವಾಗಿರುವುದಿಲ್ಲ. ಆಗ, ಅಲ್ಲಿ ದೇವರ ಬಗ್ಗೆ ಅಲ್ಪಮಿತಿಯ ವಿವೇಚನೆಯೂ ಮತ್ತು ಇದಕ್ಕೂ ಮುಂಚೆಯೇ ಅನುಭವಿಸಲು ವಿಧೇಯನಾಗಲಿಲ್ಲವಲ್ಲಾ ಎಂಬ ದೀನ ಭಾವವೂ ಹೆಚ್ಚಾಗುತ್ತದೆ; ಹೀಗೆ ನೀನು ದೇವರಾತ್ಮನನ್ನು ನಂದಿಸುತ್ತಾ ಮುಂದರಿದರೆ, ಅದೇ ಸಂಕಟಗಳು ಪುನರಾವರ್ತನೆ ಯಾಗದಿರುವ ಸಮಯ ಬರುತ್ತದೆ ಮತ್ತು ಖಂಡಿತವಾಗಿಯೂ ಪವಿತ್ರಾತ್ಮನನ್ನು ನಿನ್ನೊಳಗೆ ಆಗಲೇ ನಂದಿಸಿಯೇ ಬಿಟ್ಟಿರುವೆ. ಆದರೆ ನೀನು ಸಂಕಟಗಳಲ್ಲಿ ಸಾಗುತ್ತಾ ಇದ್ದರೆ ಅಲ್ಲಿ ದೇವರಿಗೆ ಕೊಂಡಾಟ ಉಂಟಾಗುತ್ತದೆ. ಯಾವಾಗಲೂ ದೇವರ ಪಕ್ಕೆಯನ್ನು ತಿವಿಯುವ ಸಂಗತಿಯ ಬಗ್ಗೆ ಸಹಾನುಭೂತಿಯುಳ್ಳವನಾಗಿರ ಬೇಡ. ನಿನ್ನೊಳಗಿಂದ ಹೊರಗೆ ಹೋಗಲೇ ಬೇಕಾಗಿರುವ ಆ ಸಂಗತಿಯನ್ನು ಅದು ಹೊರಹೋಗುವಂತೆ ದೇವರು ನಿನ್ನ ಅಂತರಂಗವನ್ನು ಘಾಯಗೊಳಿಸುತ್ತಲೇ ಇರುತ್ತಾನೆ.

# ಕರ್ತನು ಕೊಡುವ ಶಿಕ್ಷಣ

**''ಕರ್ತನ ಶಿಕ್ಷೆಯನ್ನು ತಾತ್ಸಾರ ಮಾಡಬೇಡ ಆತನು ನಿನ್ನನ್ನು ಗದರಿಸುವಾಗ ಬೇಸರಗೊಳ್ಳಬೇಡ'' - (ಇಬ್ರಿ 12:5)**

ಪವಿತ್ರಾತ್ಮನನ್ನು ನಂದಿಸುವುದು ಸುಲಭ; ಕರ್ತನ ಶಿಕ್ಷೆಯನ್ನು ತಾತ್ಸಾರ ಮಾಡುವ ಮೂಲಕ ಪವಿತ್ರಾತ್ಮನನ್ನು ನಂದಿಸುತ್ತೇವೆ, ಆತನು ಗದರಿಸಿದಾಗ ಬೇಸರಗೊಳ್ಳುವ ಮೂಲಕ ಅದನ್ನು ನಂದಿಸುತ್ತೇವೆ. ಪವಿತ್ರೀಕರಣದ ಮಹಾಕಾರ್ಯದ ಮೂಲಕ ನಾವು ಪಾಪದಿಂದ ಪ್ರತ್ಯೇಕಿಸಲ್ಪಟ್ಟು ಪರಿಶುದ್ಧರಾಗಿ ಮಾಡಲ್ಪಟ್ಟ ನಮ್ಮ ಅನುಭವವು ಗಣನಾರ್ಹವೆನಿಸದೆ ಇದ್ದರೆ, ದೇವರ ವಾಸ್ತವವನ್ನು, ಅದೊಂದು ಬೇರೆ ಏನೋ ಎಂಬ ತಪ್ಪು ಗ್ರಹಿಕೆಗೆ ನಮಗಾಗುತ್ತದೆ. ಛಾಯೆಯನ್ನೇ ಸತ್ಯವೆಂದು ತಪ್ಪಾಗಿ ತಿಳಿಯುತ್ತೇವೆ. ದೇವರ ಆತ್ಮನು ಎಚ್ಚರಿಕೆಯ ಪ್ರಜ್ಞೆಯನ್ನು ನೀಡಿದರೆ ಅಥವಾ ಬಿಗಿಹಿಡಿದರೆ ತಪ್ಪುಗ್ರಹಿಕೆಗೊಳಗಾಗಿ, ನಾವು ನಮ್ಮ ತಪ್ಪು ಗ್ರಹಿಕೆಯನ್ನು ವಿರೋಧಿಸಿದಾಗ 'ಓ ಹಾಗೆ ಹೇಳುತ್ತಿರುವುದು ಸೈತಾನನೇ !' ಎಂದು ಹೇಳುವುದೇ ನಿಜ.

ಪವಿತ್ರಾತ್ಮನನ್ನೆಂದಿಗೂ ನಂದಿಸಬೇಡ; ಆತನು ನಿನ್ನನ್ನು ಗದರಿಸುವಾಗ ಬೇಸರಗೊಳ್ಳಬೇಡ. ''ಇನ್ನೆಂದಿಗೂ ಈ ವಿಷಯದಲ್ಲಿ ಕಣ್ಮುಚ್ಚಿಕೊಂಡಿರಬೇಡ; ನೀನು ಎಲ್ಲಿರುವೆಯೆಂದು ನೀನು ತಿಳಿದಿರುವಿಯೋ, ಅಲ್ಲಿ ನೀನಿರುತ್ತಿಲ್ಲ! ಈ ವರೆಗೂ ಇದನ್ನು ನಿನಗೆ ತಿಳಿಯಪಡಿಸಲು ಆಗಲಿಲ್ಲ. ಆದರೆ ಈಗ ತಿಳಿಯಪಡಿಸುತ್ತಿರುವೆನು'' ಎಂದು ದೇವರ ಆತ್ಮನು ನಿನಗೆ ಹೇಳಿದರೆ ಆತನನ್ನು ತಾತ್ಸಾರ ಮಾಡಬೇಡ, ಈ ರೀತಿಯಲ್ಲಿ ದೇವರು ನಿನ್ನನ್ನು ಶಿಕ್ಷಿಸಿ ಬುದ್ಧಿ ಕಲಿಸುತ್ತಿದ್ದರೆ, ಆತನಿಗೆ ಆತನ ದಾರಿಯನ್ನು ಸರಳ ಮಾಡಿಕೊಡಬೇಕು, ಆತನು ನಿನ್ನನ್ನು ದೇವರಿಗೆ ಸಮರ್ಪಕನನ್ನಾಗಿ ಮಾಡಲು ಆಸ್ಪದ ಕೊಡಬೇಕು.

''ಆತನು ನಿನ್ನನ್ನು ಗದರಿಸಿದಾಗ ಬೇಸರಗೊಳ್ಳಬೇಡ'' ಆಗ ದೇವರ ಬಗ್ಗೆ ನಾವು ಮುನಿಸುಗೊಂಡು ಹೇಳುತ್ತೇವೆ - ''ಅದು ಸರಿಯೇ, ನಾನೇನು ಮಾಡಲಿ, ನಾನಂತೂ ಪ್ರಾರ್ಥನೆ ಮಾಡಿರುತ್ತೇನೆ, ಆದರೆ ಅದರಂತೆ ಸಂಗತಿಗಳು ನಡೆಯಲಿಲ್ಲ. ಆದುದರಿಂದ ಈಗ ಅವೆಲ್ಲವನ್ನು ಬಿಟ್ಟು ಕೊಡುತ್ತೇನೆ''; ಯೋಚಿಸಿರಿ, ನಮ್ಮ ಜೀವಿತದ ಬೇರೆ ಕ್ಷೇತ್ರಗಳಲ್ಲಿ ಇದೇ ರೀತಿ ನಾವು ಮಾತನಾಡಿದರೆ ಏನಾಗಬಹುದಿತ್ತು !!

ದೇವರು ತನ್ನ ಶಕ್ತಿಯಿಂದ ನನ್ನನ್ನು ಬಿಗಿಯಾಗಿ ಹಿಡಿದಿಟ್ಟು ತನಗೆ ಸರಿಕಂಡ ಕಾರ್ಯವನ್ನು ನನ್ನಲ್ಲಿ ಮಾಡುವುದಾದರೆ ಅದಕ್ಕೆ ನಾನು ಸಿದ್ಧನಿರುವೆನೋ ? ಪವಿತ್ರೀಕರಣವು, ದೇವರು ನನಗೇನು ಮಾಡಬೇಕೆಂದು ನಾನು ಬಯಸಿದ ಉದ್ದೇಶವಲ್ಲ; ದೇವರು ನನಗೇನು ಮಾಡಬೇಕೆಂದು ಆತನ ಉದ್ದೇಶವಿತ್ತೋ ಅದರ ನೆರವೇರುವಿಕೆಯೇ ಈ ಪವಿತ್ರೀಕರಣ. ಏನೇ ಬೆಲೆ ತೆತ್ತಾಗಲೀ ಆತನು ನನ್ನನ್ನು ಪೂರ್ತಿಯಾಗಿ ಪವಿತ್ರಗೊಳಿಸಲು ನನ್ನ ಮನೋದೃಷ್ಟಿಯನ್ನು ಮತ್ತು ನನ್ನ ಆತ್ಮವನ್ನು ತನ್ನ ಹಿಡಿತಕ್ಕೆ ತೆಗೆದುಕೊಳ್ಳಬೇಕಾಗಿದೆ. (1 ಥೆಸ 5:23 ರಲ್ಲಿ ನೋಡಿರಿ)

# ಹೊಸದಾಗಿ ಹುಟ್ಟುವಿಕೆಯ ಚಿಹ್ನೆಗಳು

**''ನೀನು ಹೊಸದಾಗಿ ಹುಟ್ಟಬೇಕು'' - (ಯೋಹಾ - 3:7)**

ಮನುಷ್ಯನು ಮುದುಕನಾದ ಮೇಲೆ ತಿರುಗಿ ಹುಟ್ಟುವುದು ಹೇಗೆ ? (ಯೋಹಾ 3:4) ಈ ಪ್ರಶ್ನೆಗೆ ಉತ್ತರವಾಗಿ - ಸಾಯುವಷ್ಟು ಮುದುಕನಾದಾಗ - ಅವನ ಹರಕು ಮುರುಕು ಹಕ್ಕುಗಳಿಗೆ, ಅವನ ಸದ್ಗುಣಗಳಿಗೆ ಸತ್ತಾಗ, ಅವನ ಮತಧರ್ಮಕ್ಕೆ ಮರಣಿಸಿದಾಗ - ಇಂಥಾ ಪ್ರತಿಯೊಂದಕ್ಕೂ ಸತ್ತು ಹೋದಾಗ ಮತ್ತು ಇದುವರೆಗೂ ಇಲ್ಲದಿದ್ದ ಜೀವಿತವನ್ನು ಹೊಸದಾಗಿ ಅಂಗೀಕರಿಸಲಿಚ್ಛಿಸಿದಾಗಲೇ, ಪ್ರಜ್ಞಾರಹಿತ ಪರಿಶುದ್ಧತೆಯಲ್ಲಿ, ಪ್ರಜ್ಞಾಪೂರಿತ ಪಶ್ಚಾತ್ತಾಪದಲ್ಲಿ ಹೊಸ ಜೀವಿತವು ತನ್ನಷ್ಟಕ್ಕೆ ತಾನೇ ಸಾಕಾರಗೊಳ್ಳುತ್ತದೆ.

''ಯಾರ್ಯಾರು ಆತನನ್ನು ಅಂಗೀಕರಿಸಿದರೋ'' (ಯೋಹಾ 1:12) ಯೇಸುಕ್ರಿಸ್ತನ ವಿಷಯ ದಲ್ಲಿ ನನ್ನ ತಿಳುವಳಿಕೆಯು ನನಗಿರುವ ಆಂತರ್ಯದ ಆತ್ಮೀಕ ದೃಷ್ಟಿಗೋಚರದಿಂದಲೋ ಅಥವಾ ಇತರರಿಂದ ಕೇಳಿ ಕಲಿತುಕೊಂಡಿದ್ದರಿಂದ ಆಗಿದೆಯೋ? ಯೇಸುಕ್ರಿಸ್ತನನ್ನು ನನ್ನ ವೈಯಕ್ತಿಕ ರಕ್ಷಕನೆಂದು ಆತನಿಗೆ ನನ್ನನ್ನು ಹೊಂದಿಸುವುದೇನಾದರೂ ನನ್ನ ಜೀವಿತದಲ್ಲಿದೆಯೋ? ಅಧ್ಯಾತ್ಮಿಕ ಇತಿಹಾಸದಲ್ಲಿ ಯೇಸುಕ್ರಿಸ್ತನ ಬಗೆ ವ್ಯಕ್ತಿಗತ ತಿಳುವಳಿಕೆಯೇ ಅದಕ್ಕೆ ಆಧಾರ ಬಂಡೆಯಾಗಿರಬೇಕು. ಹೊಸದಾಗಿ ಹುಟ್ಟುವುದೆಂದರೆ ನಾನೀಗ ಯೇಸುಕ್ರಿಸ್ತನನ್ನು ಕಾಣುತ್ತಿದ್ದೇನೆ.

''ಒಬ್ಬನು ಹೊಸದಾಗಿ ಹುಟ್ಟದಿದ್ದರೆ ಅವನು ದೇವರ ರಾಜ್ಯವನ್ನು ಕಾಣಲಾರನು'' (ಯೋಹಾ 3:3) ದೇವರ ರಾಜ್ಯದ ಕುರುಹನ್ನು ಹುಡುಕುತ್ತಿರುವೆನೋ ? ಇಲ್ಲವೆ ದೇವರ ರಾಜ್ಯಭಾರ ವನ್ನು ಕಾಣುತ್ತಿರುವೆನೋ? ಹೊಸದಾಗಿ ಹುಟ್ಟುವಿಕೆಯು ಹೊಸ ದೃಷ್ಟಿಯನ್ನು ನನಗೆ ಅನುಗ್ರಹಿಸುವು ದರಿಂದ ನಾನು ಪರಲೋಕ ರಾಜ್ಯದ ದೇವರ ರಾಜ್ಯ ಭಾರವನ್ನು (ನಿಯಂತ್ರಣವನ್ನು) ಸ್ಪಷ್ಟವಾಗಿ ಕಾಣಲಾರಂಭಿಸುತ್ತೇನೆ. ಆತನ ಸತ್ಯಸ್ವಭಾವಕ್ಕೆ ತಕ್ಕಂತೆ ಆತನ ರಾಜ್ಯ ಭಾರವು ಸದಾ ಇದ್ದೇ ಇದೆ; ಆದರೆ ಈಗ ಆತನ ಸ್ವಭಾವವನ್ನು ನಾನು ಹೊಂದಿರುವುದರಿಂದ ಆತನ ರಾಜ್ಯಭಾರವನ್ನು ಕಾಣಬಲ್ಲವ ನಾಗಿದ್ದೇನೆ.

''ದೇವರಿಂದ ಹುಟ್ಟಿದವನು ಪಾಪ ಮಾಡನು'' (1ಯೋಹಾ 13:9) ನಾನು ಪಾಪ ಮಾಡುವುದನ್ನು ನಿಲ್ಲಿಸಬೇಕೆಂದಿರುವೆನೋ ಅಥವಾ ಪಾಪಮಾಡುವುದನ್ನು ನಿಲ್ಲಿಸಿಯೇ ಬಿಟ್ಟಿರು ವೆನೋ? ಹೊಸದಾಗಿ ತಿರುಗಿ ಹುಟ್ಟುವುದೆಂದರೆ, ನಾನು ಪಾಪ ಮಾಡುವದನ್ನು ನಿಲ್ಲಿಸಿಬಿಡುವಂತೆ ದೇವರ ಅಲೌಕಿಕವಾದ ಸಾಮರ್ಥ್ಯವನ್ನು ನಾನು ಪಡೆದಿರುವೆನು. ಕ್ರೈಸ್ತನಾದವನು ಪಾಪ ಮಾಡ ಬಹುದೇ ಎಂಬುದರ ಬಗ್ಗೆ ಸತ್ಯವೇದದಲ್ಲಿ ವಿಮರ್ಶೆಯು ಇಲ್ಲವೇ ಇಲ್ಲ, ಆದರೆ ಸತ್ಯವೇದವು ಸ್ಪಷ್ಟವಾಗಿ ತಿಳಿಸುವುದೇನೆಂದರೆ, ಕ್ರೈಸ್ತನಾದವನು ಪಾಪ ಮಾಡಲೇಬಾರದು. ನಮ್ಮೊಳಗೆ ಹೊಸದಾಗಿ ಹುಟ್ಟಿದ ಜೀವಿತದ ಫಲಪ್ರದವಾದ ಕಾರ್ಯವೆಂದರೆ ಹೊಸದಾಗಿ ನಾವು ಪಾಪವನ್ನು ಮಾಡದೇ ಇರುವಂಥಾದ್ದು, ಕೇವಲ ಪಾಪ ಮಾಡದೇ ಇರುವುದಕ್ಕಾಗಿ ನಾವು ಸಾಮರ್ಥ್ಯ ಹೊಂದಿರುವುದಿಲ್ಲ- ಪಾಪ ಮಾಡುವುದನ್ನು ನಿಲ್ಲಿಸಿಯೇ ಬಿಡಲು ಸಹ. 1 ಯೋಹಾ 3:9 ಅರ್ಥ ನಾವು ಪಾಪ ಮಾಡುವುದಿಲ್ಲ ಎಂದಲ್ಲ, ನಮ್ಮಲ್ಲಿರುವ ದೇವರ ಜೀವಿತಕ್ಕೆ ನಾವು ವಿಧೇಯರಾದರೆ ನಾವು ಪಾಪ ಮಾಡಬೇಕಾಗಿಲ್ಲ ಎಂಬುದು.

# ಆತನು ನನ್ನನ್ನು ಬಲ್ಲನೋ

**''ಹೆಸರು ಹೇಳಿ ಕರೆದು'' - (ಯೋಹಾ - 10:3)**

ಯೇಸುಕ್ರಿಸ್ತನನ್ನು ಶೋಚನೀಯವಾಗಿ ನಾನು ತಪ್ಪು ಕಲ್ಪನೆ ಮಾಡಿಕೊಂಡಿದ್ದು ಯಾವಾಗ? (ಯೋಹಾ 20:11 ನೋಡಿರಿ) ಯೇಸುಕ್ರಿಸ್ತನ ಬೋಧನೆ ಸಿದ್ಧಾಂತಗಳೆಲ್ಲವನ್ನೂ ಅರಿತುಕೊಳ್ಳಲು ಸಾಧ್ಯವಿದ್ದರೂ ಆತನನ್ನು ವ್ಯಕ್ತಿಗತವಾಗಿ ಅರಿತುಕೊಳ್ಳಲು ಸಾಧ್ಯ ವಿರಲಾರದು. ತತ್ವ ಸಿದ್ಧಾಂತಗಳ ಜ್ಞಾನವು ಯೇಸುಕ್ರಿಸ್ತನೊಂದಿಗಿರುವ ನನ್ನ ನಿಕಟ ಆಪ್ತತೆಯನ್ನು, ಅದರ ಸಂವೇದನೆಯನ್ನೂ ಅತಿಕ್ರಮಿಸಿದ್ದಾದರೆ, ನನ್ನ ಆತ್ಮವು ಅಪಾಯದಲ್ಲಿರುತ್ತದೆ. ಮಗ್ದಲದ ಮರಿಯಳು ಯಾಕೆ ಅಳುತ್ತಿದ್ದಳು ? ಅವಳಿದ್ದ ಪರಿಸ್ಥಿತಿಯಲ್ಲಿ ಎಲ್ಲಾ ತತ್ವ ಸಿದ್ಧಾಂತಗಳು ಆಕೆಯ ಪಾಲಿಗೆ, ಆಕೆಯ ಪಾದದಡಿಯ ಹುಲ್ಲಿಗಿಂತ ಹೆಚ್ಚಿನದೇನೂ ಆಗಿರಲಿಲ್ಲ-ಧರ್ಮಸಿದ್ಧಾಂತಗಳ ಆಕರ್ಷಣೀಯ ವಿವರಣೆಯ ಮೂಲಕ ಮಗ್ದಲದ ಮರಿಯಳನ್ನು ಯಾವನೋ ಒಬ್ಬ ಪರಿಸಾಯನು ಮರಳುಗೊಳಿಸಬಹುದಿತ್ತು, ಆದರೆ ಯೇಸುಕ್ರಿಸ್ತನು ಮಗ್ದಲದ ಮರಿಯಳನ್ನು ಏಳುದೆವ್ವಗಳಿಂದ ಬಿಡಿಸಿದ ಸತ್ಯದ ಬಗ್ಗೆ ಅವರು ಕುಚೋದ್ಯ ಮಾಡುವಂತಿರಲಿಲ್ಲ (ಲೂಕ 4:2); ಯೇಸುಕ್ರಿಸ್ತನನ್ನು ವ್ಯಕ್ತಿಗತವಾಗಿ ಬಾಹ್ಯರೂಪದಲ್ಲಿ ಕಾಣಲು ಆಕೆಗಿದ್ದ ತೀವ್ರಾಸಕ್ತಿಗೆ ಹೋಲಿಸಿದಾಗ, ಶರೀರ ಧಾರಿಯಾದ ಯೇಸುಕ್ರಿಸ್ತನ ವಿನಃ, ಯೇಸುಕ್ರಿಸ್ತನ ಆಶೀರ್ವಾದಗಳು ಆಕೆಯ ಪಾಲಿಗೆ ಕೇವಲ ಗಣನೆಗೆ ಬಾರದಷ್ಟು ಶೂನ್ಯವಾಗಿದ್ದವು. ''ಯೇಸುಕ್ರಿಸ್ತನು ನಿಂತಿರುವುದನ್ನು ಕಂಡಳು, ಆದರೆ ಆತನು ಯೇಸು ಅಂತ ಆಕೆಗೆ ತಿಳಿಯಲಿಲ್ಲ'' (ಯೋಹಾ 20:14) ''ಮರಿಯಳೇ'' (ಯೋಹಾ 20:16) ಹೆಸರು ಹೇಳಿ ಕರೆದ ಸ್ವರವನ್ನು ಕೇಳಿದ ಕೂಡಲೇ ತನ್ನೊಡನೆ ಮಾತಾಡುವವನೊಂದಿಗೆ ತನಗೊಂದು ವ್ಯಕ್ತಿಗತ ಇತಿಹಾಸ ವಿದ್ದುದನ್ನು ಅವಳು ಕೂಡಲೇ ಅರಿತಳು - ''ಗುರುವೇ'' (ಅವಳು ಕೂಗಿದಳು).

ಯೇಸುಕ್ರಿಸ್ತನ ವಿಷಯದಲ್ಲಿ ಹಠಮಾರಿತನದಿಂದ ನಾನು ಅನುಮಾನಿಸಿದ್ದು ಯಾವಾಗ? (ಯೋಹಾ 20:27 ನೋಡಿರಿ) ಯೇಸುಕ್ರಿಸ್ತನ ಬಗ್ಗೆ ಯಾವುದೋ ಒಂದು ವಿಷಯದಲ್ಲಿ ನಾನು ಸಂದೇಹ ಪಡುತ್ತಿರುವೆನೋ ? ಇತರರು ತಮಗಾದ ಒಂದು ಅನುಭವವನ್ನು ಕುರಿತು ಸಾಕ್ಷಿ ಹೇಳುತ್ತಿದ್ದರೂ ಅಂಥಾ ಅನುಭವವು ಇದುವರೆಗೂ ನನಗಾಗದೇ ಇರುವುದರಿಂದುಂಟಾದ ಸಂದೇಹವೋ? ಉಳಿದೆಲ್ಲಾ ಶಿಷ್ಯರು ತಾವು ಕ್ರಿಸ್ತನನ್ನು ನೋಡಿರುವೆವೆಂದು ತೋಮನಿಗೆ ಹೇಳಿದರು, ಆದರೆ ತೋಮನು ಅನುಮಾನ ಪಟ್ಟನು- ''ನಾನು ಆತನ ಕೈಗಳಲ್ಲಿ ಮೊಳೆಗಳಿಂದಾದ ಘಾಯವನ್ನು ನೋಡಿ ಆ ಮೊಳೆಯ ಘಾಯದಲ್ಲಿ ನನ್ನ ಬೆರಳನ್ನು ಇಟ್ಟು ಆತನ ಪಕ್ಕೆಯಲ್ಲಿ ತನ್ನ ಕೈಯನ್ನು ಹಾಕಿದರೆ ಹೊರತು ನಿಮ್ಮ ಮಾತನ್ನು ನಂಬುವುದೇ ಇಲ್ಲ (ಯೋಹಾ 20:25) ಯೇಸುಕ್ರಿಸ್ತನ ವ್ಯಕ್ತಿಗತ ಸ್ಪರ್ಷವು ತೋಮನಿಗೆ ಅಗತ್ಯವಿತ್ತು. ಆತನ ಸಂಪರ್ಕ ಬಂದಾಗ -ಅದು ಹೇಗೆ ಬರುತ್ತದೋ ತಿಳಿಯದು - ಆದರೆ ಅದು ಬಂದಾಗ ವರ್ಣಿಸಲ ಸಾಧ್ಯವಾದ ಅಮೂಲ್ಯತೆ ಅಲ್ಲಿರುತ್ತದೆ. ''ನನ್ನ ಸ್ವಾಮಿ ನನ್ನ ದೇವರೇ''. (ತೋಮನು ಕೂಗಿದನು)

ಸ್ವಾರ್ಥ ಪರತೆಯಿಂದ ಯೇಸುಕ್ರಿಸ್ತನನ್ನು ಅರಿಯೆನೆಂದು ನಾನು ಹೇಳಿದ್ದು ಯಾವಾಗ ? (ಯೋಹಾ 21:15-17 ನೋಡಿರಿ) ಯೇಸುಕ್ರಿಸ್ತನನ್ನು ಅರಿಯೆನೆಂಬುದಾಗಿ ಆಣೆಗಳಿಂದಲೂ ಶಾಪಗಳಿಂದಲೂ ಪೇತ್ರನು ಹೇಳಿದಾಗ್ಯೂ ಯೇಸುಕ್ರಿಸ್ತನು ಪುನರುತ್ಥಾನದ ನಂತರ (ಮತ್ತಾ 26:69-75) ಏಕಾಂಗಿಯಾಗಿ ಪೇತ್ರನಿಗೆ ಕಾಣಿಸಿಕೊಂಡನು. ಏಕಾಂತದಲ್ಲಿ ಅವನನ್ನು ಬಲ ಪಡಿಸಿದನು; ಅನಂತರ ಇತರರ ಮುಂದೆಯೂ ಅವನನ್ನು ಬಲಪಡಿಸಿದನು. ''ಸ್ವಾಮಿ ನೀನು ಎಲ್ಲಾ ಬಲ್ಲೆ, ನಿನ್ನ ಮೇಲೆ ನಾನು ಮಮತೆ ಇಟ್ಟಿದ್ದೇನೆಂಬುದು ನಿನಗೆ ತಿಳಿದದೆ'' (ಪೇತ್ರನು ಕೂಗಿದನು) (ಯೋಹಾ 21:17). ಯೇಸುಕ್ರಿಸ್ತನೊಂದಿಗೆ ನಿನಗೆ ವ್ಯಕ್ತಿಗತ ಇತಿಹಾಸವಿದೆಯೋ?

# ನಿರುತ್ಸಾಹವೇ ಅಥವಾ ನಿಷ್ಠೆಯೋ?

**''ಇನ್ನೂ ನಿನಗೆ ಒಂದು ಕಡಿಮೆಯಾಗಿದೆ, ನಿನ್ನ ಬದುಕನ್ನೆಲ್ಲಾ ಮಾರಿ ನೀನು ಬಂದು ನನ್ನನ್ನು ಹಿಂಬಾಲಿಸು'' - (ಲೂಕ 18:22)**

''ಅವನು ಅದನ್ನು ಕೇಳಿ ಬಹಳ ವ್ಯಸನಗೊಂಡನು'' (ಯೋಹಾ 18:23). ಯೇಸುಕ್ರಿಸ್ತನು ನುಡಿದ ಕಠಿಣ ಸ್ವರವನ್ನೆಂದಾದರೂ ನೀನು ಕೇಳಿಸಿ ಕೊಂಡಿರುವಿಯೋ? ಒಂದು ವೇಳೆ ನೀನು ಕೇಳಿಸಿಕೊಂಡಿರದಿದ್ದರೆ ಆತನೇನಾದರೂ ನಿನಗೆ ಹೇಳಿರುವುದನ್ನು ಎಂದಾದರೂ ನೀನು ಕೇಳಿಸಿ ಕೊಂಡಿರುವಿಯೋ ಎಂದು ನಿನ್ನನ್ನು ಪ್ರಶ್ನಿಸಬೇಕಾಗುತ್ತದೆ. ನಾವು ಕೇಳಿಸಿಕೊಳ್ಳಬೇಕಾದ ಅನೇಕ ಸಂಗತಿಗಳನ್ನು ಯೇಸುಕ್ರಿಸ್ತನು ನಮಗೆ ಹೇಳುತ್ತಿರುತ್ತಾನೆ, ಆದರೆ ನಾವು ಕೇಳಿಸಿಕೊಳ್ಳುವುದಿಲ್ಲ. ಒಮ್ಮೆಯಾದರೂ ಕೇಳಿಸಿಕೊಂಡರೆ ಆತನ ನುಡಿಗಳು ಬೆರಗಾಗುವಷ್ಟು ಕಠಿಣವಾಗಿಯೂ, ದೃಢವಾಗಿಯೂ ಇರುತ್ತ ವೆಂಬುದನ್ನು ಅರಿಯುತ್ತೇವೆ.

ಮೇಲಿನ ವಾಕ್ಯದಲ್ಲಿ ಕಂಡುಬರುವ ಈ ವ್ಯಕ್ತಿಯು, ಯೇಸುಕ್ರಿಸ್ತನು ಅವನಿಗೆ ಹೇಳಿದ್ದನ್ನು, ಅವನು ಮಾಡಬೇಕೆಂದು, ಸ್ವಾಮಿಯು ಲವಲೇಶವಾದರೂ ತವಕಿಸುತ್ತಿದ್ದಂತೆ ಕಾಣುತ್ತಿಲ್ಲ ಮತ್ತು ಅವನನ್ನು ತನ್ನ ಸಂಗಡವಿರಿಸಿಕೊಳ್ಳುವ ಯಾವ ಯತ್ನವನ್ನು ಆತನು ಮಾಡಲಿಲ್ಲ. ಅತ್ಯಂತ ಸರಳವಾಗಿ ಆತನು ಹೇಳಿದ್ದು ಇಷ್ಟೇ - ''ನಿನ್ನ ಬದುಕನ್ನೆಲ್ಲಾ ಮಾರಿ ಬಡವರಿಗೆ ಹಂಚಿಕೊಡು, ನೀನು ಬಂದು ನನ್ನನ್ನು ಹಿಂಬಾಲಿಸು''. ನಮ್ಮ ಸ್ವಾಮಿಯು ಆಸಕ್ತಿ ಪೂರ್ವಕವಾಗಿ ಅವನನ್ನು ಕೇಳಿಕೊಳ್ಳಲಿಲ್ಲ , ಅವನನ್ನು ಪುಸಲಾಯಿಸಲು ಇಲ್ಲ ಅಥವಾ ಅವನನ್ನು ಸಂದಿಗ್ದತೆಯಲ್ಲಿ ಸಿಕ್ಕಿಬೀಳುವಂತೆಯೂ ಮಾಡಲಿಲ್ಲ; ಎಂದಾದರೂ ನರಮಾನವನ ಕಿವಿಗಳು ಆಲಿಸಬಲ್ಲ ಅತ್ಯಂತ ಕಠೋರ ನುಡಿಗಳನ್ನು ಆತನು ಅಷ್ಟೇ ಸರಳವಾಗಿ ನುಡಿದಿದ್ದನಷ್ಟೆ; ಅನಂತರ ಅವನಷ್ಟಕ್ಕೆ ಅವನನ್ನು ಬಿಟ್ಟುಬಿಟ್ಟನು.

ಯೇಸುಕ್ರಿಸ್ತನು ಹೇಳುವ ಕಠಿಣ ನುಡಿಯನ್ನು ನಾನೆಂದಾದರೂ ಕೇಳಿಸಿಕೊಂಡಿರುವೆನೋ? ನಾನು ತುಂಬಾವಿವೇಚನೆಯಿಂದ ಆಲಿಸಿದಂಥಾ ವ್ಯಕ್ತಿಗತವಾಗಿದ್ದ ಏನೋ ಒಂದನ್ನು ಆತನು ನನಗೆ ಹೇಳಿರುವನೋ? ನನಗೆ ಮಾತ್ರ ಹೇಳಿದಂಥ ಏನೋ ಒಂದನ್ನು ನಾನು ಕೇಳಿಸಿಕೊಂಡಿರುವೆನೋ? ಇಲ್ಲಿಯಾದರೋ ಈ ಮನುಷ್ಯನು ಯೇಸುಕ್ರಿಸ್ತನು ಹೇಳಿದ್ದನ್ನು ಗ್ರಹಿಸಿದ್ದನು, ಅವನು ಆಸಕ್ತಿಯಿಂದ ಅದನ್ನು ಆಲಿಸಿದ್ದನು, ಅದರ ಪರಿಣಾಮಗಳನ್ನು ಅಂದಾಜು ಮಾಡಿದ್ದನು, ಆದರೆ ಅದೇ ಅವನ ಹೃದಯ ವನ್ನು ಛಿದ್ರಗೊಳಿಸಿತು. ಅವಿಧೇಯತೆಯಿಂದ ಅವನು ಹಿಂದಕ್ಕೆ ಹೋಗಲಿಲ್ಲ; ಪೂರ್ಣ ನಿರುತ್ಸಾಹಗೊಂಡ ವನಾಗಿ ಬಹು ವ್ಯಸನದಿಂದ ಹಿಂದಕ್ಕೆ ಹೋದನು. ಅವನು ಅತ್ಯಂತ ಆಸಕ್ತಿಯುಳ್ಳವನಾಗಿ ತುಂಬಿ ಉರಿಯುತ್ತಿರುವ ಉತ್ಸಾಹದಿಂದ ಯೇಸುಕ್ರಿಸ್ತನ ಬಳಿಗೆ ಬಂದಿದ್ದನು, ಆದರೆ ಯೇಸುಕ್ರಿಸ್ತನ ನುಡಿಯು ಅವನನ್ನು ತಣ್ಣಗೆ ಮಾಡಿತು; ಅವನಲ್ಲಿ ತೀವ್ರಾಸಕ್ತಿಯ ಶ್ರದ್ಧೆಯನ್ನುಂಟು ಮಾಡುವ ಬದಲು ಎದೆಸೀಳುವಂಥ ನಿರುತ್ಸಾಹವನ್ನುಂಟು ಮಾಡಿತು. ಯೇಸುಕ್ರಿಸ್ತನು ಅವನ ಬೆನ್ನುಹತ್ತಿ ಹೋಗಲಿಲ್ಲ; ಅವನಾಗಿಯೇ ಹೋಗಲು ಅವನನ್ನು ಬಿಟ್ಟನು. ತನ್ನ ಮಾತುಗಳನ್ನು ಒಮ್ಮೆ ಕೇಳಿಸಿ ಕೊಂಡರೆ ಸದ್ಯದಲ್ಲಿಯೇ, ಅಥವಾ ತರುವಾಯವೋ, ಅವು ಫಲವನ್ನು ಕೊಡುವವು ಎಂದು ಯೇಸುಕ್ರಿಸ್ತನು ಖಂಡಿತವಾಗಿ ತಿಳಿದಿದ್ದಾನೆ. ಅತ್ಯಂತ ಭಯಂಕರ ಸಂಗತಿ ಎಂದರೆ ನಮ್ಮಲ್ಲಿ ಕೆಲವರು ತಮ್ಮ ನಿಜ ಜೀವನದಲ್ಲಿ ಆತನ ವಾಕ್ಯಗಳು ಫಲ ಕೊಡುವುದನ್ನು ಅಡ್ಡಿಪಡಿಸುತ್ತಾರೆ, ಆದರೂ ಕೊನೆಗೊಮ್ಮೆ, ಒಂದು ವಿಷಯಲ್ಲಿ ಯೇಸುಕ್ರಿಸ್ತನಿಗೆ ನಿಷ್ಠೆಯುಳ್ಳವರಾಗಬೇಕೆಂದು ಮನಸ್ಸು ಮಾಡಿದಾಗ, ಹಿಂದೆ ಇಂಥವುಗಳಿಗೆಲ್ಲಾ ಅಡ್ಡಿ ಪಡಿಸಿದ ಅವರು ಈಗ ಏನು ಹೇಳುತ್ತಾರೆಯೇ ಏನೋ? ಆದರೆ ಒಂದು ಮಾತ್ರ ನಿಜ, ಆತನು ನಮ್ಮ ಹಿಂದಿನ ವಿಫಲತೆಗಳನ್ನು ನಾವು ಆತನಿಗೆ ಅಡ್ಡಿ ಮಾಡಿದ ಪ್ರಸ್ತಾಪಗಳನ್ನು, ನಮ್ಮ ಮುಖದ ಮೇಲೆ ಎಂದೂ ಎಸೆಯುವುದಿಲ್ಲ.

# ಎಂದಾದರೂ ದುಃಖದಿಂದ ಭಾವಶೂನ್ಯನಾಗಿರುವಿಯೋ ?

**''ಅವನು ಬಹಳ ಐಶ್ವರ್ಯವಂತನಾಗಿದ್ದುದರಿಂದ ಇದನ್ನು ಕೇಳಿ ಬಹಳ ವ್ಯಸನಗೊಂಡನು''**
**- (ಲೂಕ 18:23)**

ಐಶ್ವರ್ಯವಂತ ಯುವಕನು ಭಾವಶೂನ್ಯತೆಗೊಳಗಾಗಿ ಬಹಳ ದುಃಖಿತನಾಗಿ ಹೊರಟು ಹೋದನು; ಪ್ರತ್ಯುತ್ತರವಾಗಿ ಹೇಳಲು ಅವನಲ್ಲಿ ಒಂದು ಮಾತೂ ಇರಲಿಲ್ಲ. ಯೇಸುಕ್ರಿಸ್ತನು ಏನು ಹೇಳಿದನೋ ಅದರಲ್ಲಿ ಅವನಿಗೆ ಎಳ್ಳಷ್ಟು ಸಂಶಯವಿರಲಿಲ್ಲ, ಅವುಗಳ ಅರ್ಥ ಪರಿಣಾಮಗಳನ್ನು ಚರ್ಚಿಸಲೇನೂ ಅಲ್ಲಿ ಇರಲಿಲ್ಲ, ಬೇರಾವ ನುಡಿಯು ಉಂಟು ಮಾಡದಷ್ಟು ದುಃಖವನ್ನು ಯೇಸುವಿನ ನುಡಿಗಳು ಅವನಲ್ಲಿ ಉಂಟುಮಾಡಿದ್ದವು. ಅಂಥಾ ಸ್ಥಿತಿ ನಿನಗೆಂದಾದರೂ ಉಂಟಾಗಿದೆಯೋ? ನೀನು ಐಶ್ಚರ್ಯವಂತನಾಗಿರುವ ಯಾವುದೋ ಒಂದು ಸಂಗತಿಯ ವಿಷಯದಲ್ಲಿ ದೇವರಾಡಿದ ಮಾತು ನಿನಗೆ ಕೇಳಿಸಿದೆಯೋ. ನಿನ್ನ ಮನೋಧರ್ಮದಲ್ಲಿ, ವೈಯಕ್ತಿಕ ವಾತ್ಸಲ್ಯಗಳಲ್ಲಿ, ಹೃದಯ ಮತ್ತು ಬುದ್ಧಿಗೆ ಸಂಬಂಧ ಪಟ್ಟವುಗಳಲ್ಲಿ, ನೀನು ಐಶ್ಚರ್ಯವಂತನಾಗಿರುವಿಯೋ? ಹಾಗಿದ್ದರೆ ಅನೇಕ ವೇಳೆ ನೀನು ಸಹಾ ದುಃಖದಿಂದ ಭಾವನಾಶೂನ್ಯನಾಗಿರುವಿ. ಕರ್ತನು ನಿನ್ನ ಬೆನ್ನುಹತ್ತಿ ಬರುವುದಿಲ್ಲ, ನಿನ್ನನ್ನು ಕೇಳಿಕೊಳ್ಳು ವುದೂ ಇಲ್ಲ, ಆತನು ನಿನ್ನನ್ನು ಸಂಧಿಸಿದಾಗೆಲ್ಲಾ ಸರಳವಾಗಿ ಹಿಂದೆನುಡಿದ ಅದೇ ಮಾತನ್ನು ಆಡುವನು-''ನೀನು ಏನು ಹೇಳುತ್ತಿರುವಿಯೋ ಅದರ ಅರ್ಥ ಗ್ರಹಿಕೆಯು ನಿನಗಿದ್ದರೆ, ಇವೇ ಆ ಷರತ್ತುಗಳು.''

''ನಿನ್ನ ಬದುಕನೆಲ್ಲಾ ಮಾರಿ ಬಡವರಿಗ ಹಂಚಿಕೊಡು'' (ಯೋಹಾನ 18:22) ನೀನೊಬ್ಬ ಕೇವಲ ಪ್ರಜ್ಞಾವಂತ ಮನುಷ್ಯ ಮಾತ್ರದವನಷ್ಟೇ ಆಗುವಂತೆ, ಸ್ವಂತದೆನ್ನುವ ನಿನ್ನದೆಲ್ಲವನ್ನು ಕಳಚಿಬಿಟ್ಟು , ದೇವರ ಮುಂದೆ ನೈತಿಕವಾಗಿ ವಿವಸ್ತ್ರನಾಗಿಬಿಡು, ಆಮೇಲೆ ಅದನ್ನು ದೇವರಿಗೆ ಕೊಟ್ಟುಬಿಡು. ಆಗ ಅಲ್ಲಿಯೇ ಹೋರಾಟವಾಗಬೇಕು - ದೇವರನ್ನು ಎದುರಿಗಿಟ್ಟುಕೊಂಡು ಸಂಕಲ್ಪವೆಸಗುವ ನಿನ್ನ ಆತ್ಮದ ರಣರಂಗದಲ್ಲಿ, ಹೋರಾಟ ನಡೆಯಬೇಕು. ವ್ಯಕ್ತಿಗತವಾಗಿ ಯೇಸುಕ್ರಿಸ್ತನನ್ನು ಸಂಪಾದಿಸಿಕೊಳ್ಳುವುದಕ್ಕಿಂತಲೂ ಯೇಸು ಕ್ರಿಸ್ತನು ಏನು ಬಯಸುವನೆನ್ನುವ ವಿಷಯದಲ್ಲಿ ನಿನ್ನದೇ ಭಾವನೆಗಳ ಉಪಾಸಕನು ನೀನಾಗಿರು ವಿಯೋ ? ಅದು ನಿಜವಿದ್ದರೆ ನಿನ್ನಲ್ಲಿ ಬಹಳ ದುಃಖವನ್ನುಂಟುಮಾಡುವ ಯೇಸುಕ್ರಿಸ್ತನ ಕಠೋರ ವಾಕ್ಯಗಳನ್ನು ನೀನು ಕೇಳಿಸಿಕೊಳ್ಳುವ ಸಾದ್ಯತೆಯೇ ಹೆಚ್ಚಿದೆ. ಯೇಸುಕ್ರಿಸ್ತನು ಹೇಳುತ್ತಿರುವುದು ನಿಜವಾಗಿಯೂ ಕಠಿಣವಾಗಿದೆ, ಆದರೆ ಯಾರಲ್ಲಿ ಆತನ ಸ್ವಭಾವವು ನೆಲೆಗೊಂಡಿರುತ್ತದೋ ಅವರು ಅದನ್ನು ಕೇಳಿಸಿಕೊಂಡಾಗ, ಅವು ಅವರಿಗೆ ತುಂಬಾ ಮೃದು ಮಧುರವಾಗಿರುತ್ತದೆ. ಹೇಗಿದ್ದರೂ ಯೇಸುಕ್ರಿಸ್ತನು ನುಡಿದ ಕಠೋರ ವಾಕ್ಯಗಳನ್ನು ಮೃದು ಗೊಳಿಸುವುದರ ಬಗ್ಗೆ ತುಂಬಾ ಎಚ್ಚರದಿಂದಿರಬೇಕು.

ನಾನು ಬಡತನದಲ್ಲಿಯೇ ಬಹಳ ಐಶ್ಚರ್ಯವಂತನಾಗಿರಬಲ್ಲೆನು, ಎಷ್ಟು ಐಶ್ವರ್ಯವಂತ ನೆಂದರೆ 'ನಾನೊಬ್ಬ ಕೇವಲ ಅನಾಮಧೇಯನೂ ಮತ್ತು ನಾನೆಂದೂ ಯೇಸುವಿನ ಶಿಷ್ಯನಾಗಲಾರೆನು' ಎನ್ನುವ ಪ್ರಜ್ಞೆಯಲ್ಲಿ ಐಶ್ಚರ್ಯವಂತನಾಗಿರುವೆನು. ಎಷ್ಟು ಐಶ್ಚರ್ಯವಂತನಾಗಿರಬಲ್ಲೆನೆಂದರೆ ನಾನೆಂದಿಗೂ ಯೇಸು ಕ್ರಿಸ್ತನ ಶಿಷ್ಯನಾಗಲಾರದಂಥವನೊಬ್ಬನೆನ್ನುವ ಪ್ರಜ್ಞೆಯಲ್ಲಿ ಐಶ್ವರ್ಯವಂತನಾಗಿರಬಲ್ಲೆ. ನಾನೊಬ್ಬ ಕೇವಲ ಗತಿಗೆಟ್ಟವನೆನ್ನುವ ಪ್ರಜ್ಞೆಯಲ್ಲಿಯೂ ಗತಿಹೀನನಾಗಲು ನಾನು ಇಚ್ಛಿಸುತ್ತಿರುವೆನೋ? ಇಲ್ಲಿಯೇ ನಿರುತ್ಸಾಹ ಉಂಟಾಗುವುದು. ನಿರುತ್ಸಾಹವೆಂದರೆ ಭ್ರಮನಿಸನಗೊಂಡ ಸ್ವಯಂ ಪ್ರೀತಿ. ಸ್ವಾನುರಾಗವು ಯೇಸುಕ್ರಿಸ್ತನಲ್ಲಿ ನಾನಿಟ್ಟಿರುವ ಶ್ರದ್ಧೆಯ ಅನುರಾಗವಾಗಬಹುದು. ಆದರೆ, ಸ್ವತಃ ಯೇಸುಕ್ರಿಸ್ತನ ಮೇಲೆಯಲ್ಲ.

# ಸ್ವ ಪ್ರಜ್ಞೆ

## ''ನನ್ನ ಬಳಿಗೆ ಬನ್ನಿರಿ'' - (ಮತ್ತಾಯ 11:28)

ಯೇಸುಕ್ರಿಸ್ತನಲ್ಲಿ ನೆಲೆಗೊಂಡು ಆತನ ಪರಿಪೂರ್ಣವಾದ ಸಂತೃಪ್ತಿಕರವಾದ ಜೀವಿತವನ್ನು ನಾವು ಜೀವಿಸಬೇಕೆಂದು ದೇವರು ಬಯಸುತ್ತಾನೆ, ಆದರೆ ಅಂಥಾ ಜೀವಿತವು ಬಾಹ್ಯಶಕ್ತಿಗಳ ಆಕ್ರಮಣಕ್ಕೊಳಗಾಗುವ ಸಂದರ್ಭಗಳಿದ್ದೇ ಇರುತ್ತವೆ, ಅಂಥ ಸಂದರ್ಭಗಳಲ್ಲಿ ಸಹಜವಾಗಿಯೇ ಆತ್ಮಾವಲೋಕನದೊಳಗೆ, ಯಾವ ಅವಲೋಕನವು ನಮ್ಮಿಂದ ಹೊರಟು ಹೋಗಿದೆ ಎಂದು ನಾವು ಭಾವಿಸಿ ಕೊಂಡಿದ್ದೇವೋ ಅದರೊಳಗೆ ಹೊರಳಿ ಬೀಳುತ್ತೇವೆ. ದೇವರನ್ನಾತುಕೊಂಡಿರುವ ನಮ್ಮ ಬದುಕಿನ ಪರಿಪೂರ್ಣತೆಯನ್ನು ಅಸ್ತವ್ಯಸ್ತಗೊಳಿಸುವುಗಳಲ್ಲಿ ಸ್ವಪ್ರಜ್ಞೆಯೇ ಮೊದಲನೆಯದು, ಆತ್ಮಾವಲೋಕನಕ್ಕೆ ನಮ್ಮನ್ನು ತಳ್ಳುವ ಈ ಸ್ವಪ್ರಜ್ಞೆಯು ಸತತವಾಗಿ ನಮ್ಮಲ್ಲಿ ಸೆಣಸಾಟವನ್ನುಂಟು ಮಾಡುತ್ತದೆ. ಸ್ವಪ್ರಜ್ಞೆಯು ಪಾಪವಲ್ಲ, ಕೆರಳಿದ ನಮ್ಮ ಮನೋಭಾವದಿಂದ ಅದು ಉತ್ಪತ್ತಿಯಾಗಿರಬಹುದು ಇಲ್ಲವೇ ಅಪರಿಚಿತ ಹೊಸ ಸನ್ನಿವೇಶಗಳಲ್ಲಿ ಇದ್ದಕ್ಕಿದ್ದಂತೆ ನಾವು ಧಡಾರನೆ ಎಸೆಯಲ್ಪಟ್ಟಿರುವುದರಿಂದಲೂ ಅದು ಉಂಟಾಗಬಹುದು. ನಾವು ದೇವರಲ್ಲಿ ಕೇವಲ ಸಂಪೂರ್ಣತೆಗಿಂತ ಅಲ್ಪವಾದರೂ ಕಡಿಮೆಯಾಗಿ ಬದುಕುವುದು ದೇವರ ಚಿತ್ತವಲ್ಲ. ಆತನ ವಿಶ್ರಾಂತಿಯಲ್ಲಿ ನಾವಿರುವಾಗ, ಆ ವಿಶ್ರಾಂತಿಯನ್ನು ಕದಡುವಂಥಾದ್ದೇನಿದ್ದರೂ ಕೂಡಲೇ ಅದನ್ನು ನೀಗಿಸಿ ಪರಿಹರಿಸಿಕೊಳ್ಳಬೇಕು. ಅದನ್ನು ನಿರ್ಲಕ್ಷಿಸುವುದರಿಂದ ಅದೇನೂ ನೀಗಲಾರದು, ಆದರೆ ಯೇಸುವಿನ ಬಳಿಗೆ ಬಂದರೆ ಮಾತ್ರ ಅದು ಖಂಡಿತವಾಗಿಯೂ ಪರಿಹಾರ ವಾಗುತ್ತದೆ. ನಾವು ಆತನ ಬಳಿಗೆ ಬಂದು ನಮ್ಮಲ್ಲಿರುವ ಆತ್ಮ ಪ್ರಜ್ಞೆಯ ಸ್ಥಳದಲ್ಲಿ ಕ್ರಿಸ್ತ ಪ್ರಜ್ಞೆಯನ್ನುಂಟು ಮಾಡೆಂದು ನಾವು ಬೇಡಿಕೊಂಡರೆ ನಾವು ಆತನಲ್ಲಿ ನೆಲೆಗೊಳ್ಳುವ ತನಕ ಆತನು ನಮ್ಮಲ್ಲಿ ಕ್ರಿಸ್ತ ಪ್ರಜ್ಞೆಯುಂಟು ಮಾಡುವುದನ್ನು ಸಾಧಿಸುತ್ತಲೇ ಇರುತ್ತಾನೆ.

ಕ್ರಿಸ್ತನಲ್ಲಿ ಒಂದಾಗಿರುವ ನಿನ್ನ ಜೀವಿತವನ್ನು ಒಡೆದು ವಿಭಾಗಿಸುವಂಥಾದನ್ನು ಮುಖಾಮುಖಿಯಾಗಿ ಎದುರಿಸದೆ ಅದು ಪ್ರತ್ಯಕ್ಷವಾಗಿ, ಅಪ್ರತ್ಯಕ್ಷವಾಗಿ, ಹಾಗೆಯೇ ನಿನ್ನಲ್ಲಿ ಉಳಿದು ಕೊಂಡಿರಲು ಅವಕಾಶವನ್ನೆಂದಿಗೂ ಕೊಡಬೇಡ. ಸೋರುವಿಕೆಯುಳ್ಳ ಸಂಗತಿಗಳ ಬಗ್ಗೆ ಎಚ್ಚರದಿಂದಿರು, ಗೆಳೆಯರ ಪ್ರಭಾವದಿಂದ ಇಲ್ಲವೇ ಸನ್ನಿವೇಶಗಳ ಒತ್ತಡಗಳಿಂದ ಜೀವಿತದಲ್ಲಾಗಬಹುದಾದ ವಿಭಜನೆಯ ಬಗ್ಗೆ ಎಚ್ಚರದಿಂದಿರು; ಯೇಸುಕ್ರಿಸ್ತನಲ್ಲಿ ಒಂದಾಗಿರುವ ನಿನ್ನನ್ನು, ಸೀಳಿ ಬೇರ್ಪಡಿಸಿ ನಿನ್ನನ್ನು ನೀನು ಪ್ರತ್ಯೇಕವಾಗಿ ಅವಲೋಕಿಸಿಕೊಳ್ಳುವಂತೆ ಮಾಡುವ ಆತ್ಮ ಪ್ರಜ್ಞೆಯ ಎಲ್ಲಾ ವಿಷಯಗಳ ಬಗ್ಗೆ ಕಡು ಎಚ್ಚರದಿಂದಿರಬೇಕು. ಆತ್ಮೀಕವಾಗಿ ಯೋಗ್ಯವಾಗಿರುವುದಕ್ಕಿಂತಲೂ ಬೇರೇನೂ ಮುಖ್ಯವಲ್ಲ. ಇದಕ್ಕಿರುವ ಸರಳ ಪರಿಹಾರವೆಂದರೆ - ''ನನ್ನ ಬಳಿಗೆ ಬನ್ನಿರಿ''. ನಮ್ಮ ನೈಜತೆಯ ನಮ್ಮ ಬೌದ್ಧಿಕತೆಯ, ಸ್ಥಿತಿಗತಿಯ, ಆತ್ಮೀಕತೆಯ, ಆಳವನ್ನು ಪರೀಕ್ಷಿಸುವಂಥಾದ್ದು, ಈ ನುಡಿಯೇ! ಪ್ರತಿಯೊಂದು ಹಂತದಲ್ಲಿ ನಾವು ಆತನ ಬಳಿಗೆ ಬರುವುದರ ಬದಲು ಅದರ ವಿಷಯದಲ್ಲಿ ವಾದವಿವಾದಗಳನ್ನು ಮಾಡುತ್ತಲೇ ಇರುತ್ತೇವೆ. ಆದರೆ ಆತನ ಬಳಿಗೆ ಬರುವುದೇ ಇಲ್ಲ.

**ಆಗಸ್ಟ್ - 20**

# ಪರಿಪೂರ್ಣತೆ ಮತ್ತು ಕ್ರಿಸ್ತಪ್ರಜ್ಞೆ

**''ನಾನು ನಿಮಗೆ ವಿಶ್ರಾಂತಿಕೊಡುವೆನು'' - (ಮತ್ತಾಯ 11:28)**

ಎಂದಾದರೂ, ಯಾವುದೋ ಒಂದು ಸಂಗತಿಯು, ಯೇಸುಕ್ರಿಸ್ತನೊಂದಿಗಿರುವ ನಿನ್ನ ಜೀವಿತ ವನ್ನು ಶಿಥಿಲಗೊಳಿಸಲು ಆರಂಭಿಸಿದ ಕೂಡಲೇ, ಆತನ ಕಡೆಗೆ ತಿರುಗಿಕೊಂಡು ನಿನ್ನ ಜೀವಿತವನ್ನು ಆತನ ವಿಶ್ರಾಂತಿಯಲ್ಲಿ ಪುನಃ ನೆಲೆಗೊಳಿಸುವಂತೆ ಆತನನ್ನು ಪ್ರಾರ್ಥಿಸಬೇಕು. ಶಾಂತಿಭಂಗವನ್ನುಂಟು ಮಾಡು ವಂಥಾದ್ದೇನೂ ನಿನ್ನಲ್ಲಿ ಉಳಿದುಕೊಳ್ಳಲು ಅವಕಾಶವನ್ನೀಯಬೇಡ. ಶಿಥಿಲಗೊಳಿಸುವ ಪ್ರತಿಯೊಂದನ್ನು, ಅದು ಏನೇ ಆಗಿರಲಿ, ಅದನ್ನು ವಿರೋಧಿಸಿ ಹೋರಾಟ ಮಾಡುವಂಥಾದ್ದೆಂದೂ, ಹಾಗೂ ಅದರಿಂದ ಹಿಂಸೆಯನ್ನು ಅನುಭವಿಸಕೂಡದಂಥಾದ್ದೆಂದೂ, ತಿಳಿಯಬೇಕು. ''ಪ್ರಭುವೇ ನಿನ್ನ ಪ್ರಜ್ಞೆಯನ್ನು ನನ್ನಲ್ಲಿ ಸ್ಥಿರಪಡಿಸು'' ಎಂದು ಯೇಸುಕ್ರಿಸ್ತನನ್ನು ಬೇಡಿಕೊಳ್ಳಬೇಕು, ಆಗ ಸ್ವಪ್ರಜ್ಞೆಯು ಹೊರಟು ಹೋಗುತ್ತದೆ ಮತ್ತು ಅಲ್ಲಿ ಯೇಸುಕ್ರಿಸ್ತನೇ ಎಲ್ಲವುಗಳಲ್ಲಿ ಎಲ್ಲವೂ ತಾನೇ ಆಗಿರುತ್ತಾನೆ. ಸ್ವಪ್ರಜ್ಞೆಯು ಮುಂದುವರಿಯಲು ಅದಕ್ಕೆ ಅವಕಾಶವ ನ್ನೀಯಬೇಡ, ಅದು ನಿಧಾನವಾಗಿ ಹಂತ ಹಂತಗಳಲ್ಲಿ ನಿನ್ನ ಸ್ವಾನುಕಂಪವನ್ನು ಎಚ್ಚರಗೊಳಿಸುತ್ತದೆ ಮತ್ತು ಈ ಸ್ವಾನುಕಂಪವು ಪೈಶಾಚಿಕವಾದದ್ದು. ''ನನ್ನನ್ನು ಅವರು ಸರಿಯಾಗಿ ಅರ್ಥ ಮಾಡಿಕೊಂಡಿರುವುದಿಲ್ಲ; ಈ ಒಂದು ನಿರ್ಧಿಷ್ಟ ವಿಷಯದಲ್ಲಿ ಅವರು ನನ್ನ ಕ್ಷಮೆಯಾಚಿಸಬೇಕು; ಆ ಒಂದು ವಿಷಯಾಂಶವನ್ನು ನಿಜವಾಗಿಯೂ ನಾನು ಅವರಿಗೆ ಸ್ಪಷ್ಟಪಡಿಸಬೇಕಿತ್ತು'' ಎಂದು ನಿನ್ನಷ್ಟಕ್ಕೆ ನೀನು ಹೇಳುವ ಅವಕಾಶಕ್ಕೆಡೆಗೊಡಬೇಡ. ಇಂಥಾ ವಿಷಯಗಳಲ್ಲಿ ಇತರರನ್ನು ಅವರ ಪಾಡಿಗೆ ಬಿಟ್ಟುಕೊಟ್ಟು ಕ್ರಿಸ್ತ ಪ್ರಜ್ಞೆ ಯನ್ನು ನಿನಗೆ ದಯಪಾಲಿಸೆಂದು ಯೇಸುಕ್ರಿಸ್ತನನ್ನು ಬೇಡಿಕೊಳ್ಳಬೇಕು. ಆಗ ನೀನು ಕ್ರಿಸ್ತನ ಪ್ರಜ್ಞೆಯಲ್ಲಿ ಪರಿಪೂರ್ಣತೆಯನ್ನು ಹೊಂದುವ ತನಕ ಆತನು ನಿನ್ನನ್ನು ಸಮಚಿತ್ತದಲ್ಲಿರಿಸುತ್ತಾನೆ.

ಚಿಕ್ಕಮಗುವಿನ ಜೀವಿತವೇ ಪರಿಪೂರ್ಣತೆಯ ಜೀವಿತ. ನಾವು ಪ್ರಜ್ಞಾಪೂರ್ವಕವಾಗಿ ಪ್ರಜ್ಞೆ ಯಿಂದಿದ್ದರೆ, ಅಲ್ಲಿ ಏನೋ ಒಂದು ಲೋಪವಿದೆ. ರೋಗಿಯಾದವನಿಗೆ ಮಾತ್ರ ಆರೋಗ್ಯವೆಂದರೇ ನೆಂಬುದು ತಿಳಿದಿರುತ್ತದೆ. ದೇವರ ಮಗುವು ದೇವರ ಚಿತ್ತವೇನೆಂಬುದರ ಪ್ರಜ್ಞೆಯನ್ನು ಹೊಂದಿರುವುದಿಲ್ಲ, ಯಾಕೆಂದರೆ ಆ ಮಗುವೇ ದೇವರ ಚಿತ್ತವಾಗಿದೆ. ದೇವರ ಚಿತ್ತಾನುಸಾರ ಸಾಗುವ ಮಾರ್ಗದಿಂದ, ನಾವು ಕಿಂಚಿತ್ ಪಥಭ್ರಷ್ಟರಾದಾಗಲೇ 'ದೇವರೇ ನಿನ್ನ ಚಿತ್ತವೇನು?' ಎಂದು ಕೇಳಲಾರಂಭಿಸುತ್ತೇವೆ. ದೇವರು ತನ್ನ ಪ್ರಾರ್ಥನೆಗಳಿಗೆ ಉತ್ತರವನ್ನೀಯವವನು ಎಂಬ ಪ್ರಜ್ಞೆಯಿಂದ ದೇವರ ಮಗುವೆಂದೂ ಪ್ರಾರ್ಥಿಸು ವುದಿಲ್ಲ, ಆ ಮಗುವು, ದೇವರು ಯಾವಾಗಲೂ ತನ್ನ ಪ್ರಾರ್ಥನೆಗಳಿಗೆ ಉತ್ತರಕೊಟ್ಟೇ ಕೊಡುವನೆಂಬ ದೈವ ನೆಮ್ಮದಿಯಿಂದ ನಿಸ್ಸಂದೇಹದಿಂದಿರುತ್ತದೆ.

ನಮ್ಮ ವ್ಯವಹಾರ ಜ್ಞಾನ ಸೂತ್ರಗಳ ಮೂಲಕ ಸ್ವಪ್ರಜ್ಞೆಯನ್ನು ಜಯಿಸಲು ಪ್ರಯತ್ನಿಸಿದರೆ ಸ್ವಪ್ರಜ್ಞೆಯನ್ನು ಬಹಳವಾಗಿ ವೃದ್ಧಿಸುವಂತೆ ಮಾಡುತ್ತೇವೆ. ''ನನ್ನ ಬಳಿಗೆ ಬನ್ನಿರಿ, ನಾನು ನಿಮಗೆ ವಿಶ್ರಾಂತಿ ಕೊಡುವೆನು'' ಇದರಿಂದ ಕ್ರಿಸ್ತ ಪ್ರಜ್ಞೆಯು ಸ್ವಪ್ರಜ್ಞೆಯ ಸ್ಥಾನವನ್ನೆಲ್ಲಾ ಆವರಿಸಿಕೊಂಡು ಬಿಡುತ್ತದೆ. ಯೇಸು ಕ್ರಿಸ್ತನು ಎಲ್ಲೆಲ್ಲಿ ಆವರಿಸುವನೋ ಅಲ್ಲಿ, ತನ್ನ ವಿಶ್ರಾಂತಿಯಲ್ಲಿ ಅಂದರೆ ನಮ್ಮ ಜೀವಿತದ ನಡವಳಿಕೆಗಳು - ಯಾವುದರ ಬಗ್ಗೆ ನಮ್ಮ ಪ್ರಜ್ಞೆಯಿಲ್ಲವೋ, ಅವುಗಳ ನೆರವೇರಿಕೆಯಿಂದುಂಟಾದ ವಿಶ್ರಾಂತಿಯಲ್ಲಿ ನೆಲೆಗೊಳಿಸಿ ಕಾಯುತ್ತಾನೆ.

# ಗಮನಕ್ಕೆ ಬಾರದ ಸೇವೆ

**''ಆತ್ಮದಲ್ಲಿ ಬಡವರಾಗಿರುವವರು ಧನ್ಯರು'' - (ಮತ್ತಾಯ 5:13)**

ನಮ್ಮ ಸ್ಟ್ಯಾಂಡರ್ಡ್ ಪ್ರಕಾರ ಯಾವುದು ಗಮನ ಯೋಗ್ಯವಲ್ಲವೋ ಅದನ್ನೇ ಹೊಸ ಒಡಂಬಡಿಕೆಯು ವಿಶೇಷವಾಗಿ ಗಮನಿಸುತ್ತದೆ. ''ಆತ್ಮದಲ್ಲಿ ಬಡವರಾಗಿರುವವರು ಧನ್ಯರು'' ಅಕ್ಷರಶಃ ಅದರ ಅರ್ಥ - ದಿವಾಳಿಯಾದವರು ಧನ್ಯರು. ಅತ್ಯಂತ ಸರ್ವಸಾಮಾನ್ಯ ಸಂಗತಿ ಇದು! ಈಗಿನ ಕಾಲದ ಬೋಧನೆಗಳು ಒಬ್ಬ ವ್ಯಕ್ತಿಯ ಪ್ರಬಲವಾದ ಆಸಕ್ತಿ ಮತ್ತು ಗುಣ ಸೌಂದರ್ಯಗಳಿಗೆ - ಯಾವುದು ಸುಲಭವಾಗಿ ಗಮನಸೆಳೆಯಬಲ್ಲವೊ ಅವುಗಳಿಗೆ - ಹೆಚ್ಚು ಒತ್ತುಕೊಡುತ್ತವೆ. ನಾವು ಪದೇ ಪದೇ ಕೇಳಿಸಿಕೊಳ್ಳುತ್ತಿರುವ ವಾಕ್ಯ ಸರಣಿ ''ಕ್ರಿಸ್ತನಿಗಾಗಿ ನಿರ್ಧಾರ ಮಾಡಿರಿ'' ಇದು ಯಾವುದಕ್ಕೆ ಒತ್ತು ಕೊಡುತ್ತಿರುವುದೋ ಅದನ್ನು ಯೇಸು ಸ್ವಾಮಿಯು ನಂಬುತ್ತಿರಲಿಲ್ಲ. ತನಗಾಗಿ ನಿರ್ಧಾರ ಕೈಕೊಳ್ಳ ಬೇಕೆಂದು ಯೇಸುಕ್ರಿಸ್ತನು ಹೇಳುವುದೇ ಇಲ್ಲ, ಆತನು ಹೇಳುವುದು - ''ನನಗೆ ಒಪ್ಪಿಸಿಕೊಡಿರಿ''. ಇದು ಬೇರೆಯೇ ಆಗಿದೆ. ಸಾಧಾರಣ ಸ್ಥಳಗಳಲ್ಲಿರುವ ಸಾಧಾರಣ ಜನರ ಮನೋಹರತೆಯೇ ಯೇಸುಕ್ರಿಸ್ತನ ರಾಜ್ಯದ ತಳಹದಿಯಾಗಿದೆ. ನನ್ನ ಬಡತನದಲ್ಲಿಯೇ ನಾನು ನಿಜವಾಗಿಯೂ ಆಶೀರ್ವದಿಸಲ್ಪಟ್ಟಿದ್ದೇನೆ. ದೃಢ ನಿರ್ಧಾರ ಕೈಕೊಳ್ಳುವ ಸಾಮರ್ಥ್ಯವು ನನ್ನಲ್ಲಿ ಇಲ್ಲವೆಂಬುದನ್ನು ಮತ್ತು ಅರ್ಹತೆಯೂ, ಗೌರವ ಮಾನ್ಯವಾದದ್ದೇನೂ ನನ್ನಲ್ಲಿ ಇಲ್ಲವೆಂಬುದನ್ನು ನಾನು ಅರಿತಿದ್ದರೆ, ಆಗ ಯೇಸುಕ್ರಿಸ್ತನು ಹೇಳುವನು - ''ನೀನು ಧನ್ಯನು'', ಯಾಕೆಂದರೆ ಇಂಥಾ ಒಂದು ದರಿದ್ರತೆಯಿಂದಲೇ ನಾನು ಆತನ ರಾಜ್ಯವನ್ನು ಪ್ರವೇಶಿಸುವೆನು. ನಾನೊಬ್ಬ ಯೋಗ್ಯ ಪುರುಷನು ಇಲ್ಲವೇ ಸ್ತ್ರೀ, ಎಂಬ ಕಾರಣಕ್ಕಾಗಿ ನಾನು ಆತನ ರಾಜ್ಯದಲ್ಲಿ ಸೇರಲಾರೆನು. ನಾನು ಕೇವಲ ದಿವಾಳಿಯಾಗಿರುವುದರಿಂದಲೇ ಆತನ ರಾಜ್ಯವನ್ನು ಪ್ರವೇಶಿಸುತ್ತೇನೆ.

ದೇವರನ್ನು ಪ್ರಕಟಪಡಿಸುವ ಆ ಪರಮ ಮನೋಹರತೆಯ ಗುಣಲಕ್ಷಣವೆಂದರೆ ಅದನ್ನು ತನ್ನ ಜೀವಿತದಲ್ಲಿ ಪ್ರಕಟಪಡಿಸುತ್ತಿರುವ ವ್ಯಕ್ತಿಗೆ, ತನ್ನಲ್ಲಿರುವ ಇಂಥಾ ವೈಶಿಷ್ಟ್ಯತೆಯ ಬಗ್ಗೆ ಪ್ರಜ್ಞೆಯೇ ಇರುವುದಿಲ್ಲ. ಪ್ರಜ್ಞಾಪೂರ್ವಕ ಪ್ರಭಾವವು ಸ್ವಪ್ರತಿಷ್ಟೆಯುಳ್ಳದ್ದು ಮತ್ತು ಅಕ್ರಿಸ್ತೀಯವಾದದ್ದೂ ಆಗಿದೆ. ''ಕ್ರಿಸ್ತನಿಗಾಗಿ ನಾನೇನಾದರೂ ಉಪಯೋಗಕ್ಕೆ ಬರುವೆನೋ ಎಂಬ ಕುತೂಹಲದಿಂದಿದ್ದೇನೆ'' ಎಂದು ನಾನು ಹೇಳಿದ ಕೂಡಲೇ, ಯೇಸುಕ್ರಿಸ್ತನ ಮನೋಹರತೆಯ ಸಂವೇದನೆಯನ್ನು ಕಳೆದುಕೊಳ್ಳುತ್ತೇನೆ. ''ನನ್ನನ್ನು ನಂಬಿದವನ ಹೊಟ್ಟೆ ಯೊಳಗಿಂದ ಜೀವಕರವಾದ ನೀರಿನ ಹೊಳೆಗಳು ಹರಿಯುವವು'' (ಯೋಹಾ 7:38) ಈ ಹೊರ ಹರಿವನ್ನು ನಾನು ಪರಿಶೀಲನೆಗೊಳಪಡಿಸಿದರೆ, ಸ್ವಾಮಿಯ ಸಂಬಂಧವನ್ನು ಕಳೆದುಕೊಳ್ಳುತ್ತೇನೆ.

ನಮ್ಮ ಮೇಲೆ ಬಹಳವಾಗಿ ಪ್ರಭಾವ ಬೀರಿದ ವ್ಯಕ್ತಿಗಳು ಯಾರು? ನಮ್ಮ ಮೇಲೆ ಪ್ರಭಾವ ಬೀರಿದ್ದೇವೆಂದು ಭಾವಿಸಿಕೊಂಡ ವ್ಯಕ್ತಿಗಳಂತೂ ಅಲ್ಲ, ನಮ್ಮ ಮೇಲೆ ಪ್ರಭಾವ ಬೀರುತ್ತಿದ್ದೇವೆಂಬುದನ್ನು ತೃಣ ಮಾತ್ರವೂ ಅರಿಯದವರೇ ನಿಜವಾಗಿಯೂ ನಮ್ಮ ಮೇಲೆ ತುಂಬಾ ಪ್ರಭಾವ ಬೀರಿದವರಾಗಿರುತ್ತಾರೆ. ಕ್ರಿಸ್ತೀಯ ಜೀವಿತದಲ್ಲಿ ಬೀರುವ ದೈವ ಪ್ರಭಾವವು ತನ್ನ ಬಗ್ಗೆ ಪ್ರಜ್ಞೆಯುಳ್ಳದ್ದಾಗಿರುವುದೇ ಇಲ್ಲ ; ಅದು ಒಮ್ಮೆ ಆ ಪ್ರಜ್ಞೆಯಲ್ಲಿದ್ದರೆ ಯೇಸುಕ್ರಿಸ್ತನ ಆಪ್ತತೆಯ ಲಕ್ಷಣವಾಗಿರುವ, ಪ್ರೀತಿಯ ಲಕ್ಷಣಗಳನ್ನು ಕಳೆದುಕೊಂಡ ಜೀವಿತವಾಗಿರುತ್ತದೆ. ಯೇಸುಕ್ರಿಸ್ತನು ನಮ್ಮ ಜೀವಿತದಲ್ಲಿ ಕಾರ್ಯಸಾಧಿಸುತ್ತಿರುವಾಗ, ಅದು ನಮಗೆ ತಿಳಿಯುತ್ತದೆ; ಯಾಕೆಂದರೆ ಸರ್ವಸಾಧಾರಣವಾದ ಸ್ಥಳಗಳಲ್ಲಿ, ನಮ್ಮ ಸಾಧಾರಣ ಜೀವಿತ ಗಳಲ್ಲಿ ಚೈತನ್ಯವನುಂಟು ಮಾಡುವವುಗಳನ್ನು ಹುಟ್ಟಿಸುತ್ತಾನೆ.

# ನಾನಂತೂ .......... ಆದರೆ ಆತನು

**''ನಾನಂತೂ ..... ನಿಮಗೆ ನೀರಿನಲ್ಲಿ ಸ್ನಾನ ಮಾಡಿಸುತ್ತೇನೆ, ..... ಆತನು ಪವಿತ್ರಾತ್ಮ ನಲ್ಲಿಯೂಬೆಂಕಿಯಲ್ಲಿಯೂ ನಿಮಗೆ ಸ್ನಾನ ಮಾಡಿಸುವನು'' - (ಯೋಹಾನ 3:11)**

ನನ್ನ ಜೀವಿತದ ಅನುಭವದಲ್ಲಿ ''ನಾನಂತೂ ... ಆದರೆ ಆತನು'' ಎಂದು ಹೇಳುವಂಥಾ ಸ್ಥಿತಿಗೆ ಎಂದಾದರೂ ತಲುಪಿರುವೆನೋ ? ಅಂಥಾ ಒಂದು ಸಮಯವೊದಗುವತನಕ ಪವಿತ್ರಾತ್ಮ ಸ್ನಾನವೆಂದರೇನೆಂಬುದನ್ನು ನಾನು ಅರಿಯುವುದಿಲ್ಲ. 'ನಾನಂತೂ' ಅಂತ್ಯಕ್ಕೆ ಬಂದಿದ್ದೇನೆ, ಹೆಚ್ಚಿನ ದೇನನ್ನೂ ಮಾಡಲಾರೆ; ಎಂಬುದು ನನಗೆ ತಿಳಿದದೆ ಎಂದು ನಿನಗೆ ಅರಿವಾದ ಕೂಡಲೇ ಆದರೆ ''ಆತನು'' ಅಲ್ಲಿಂದಲೇ - ಯಾರೂ ಎಂದಿಗೂ ಮಾಡಲಾಗದ್ದನ್ನು ಆತನು ಮಾಡಲಾರಂಭಿಸುತ್ತಾನೆ. ಯೇಸುಕ್ರಿಸ್ತನ ಬರುವಿಕೆಗಾಗಿ ನಾನು ಸಿದ್ಧವಿರುವೆನೋ? ಯೇಸುಕ್ರಿಸ್ತನು ನನ್ನಲ್ಲಿ ಕಾರ್ಯವೆಸಗಲು ಆಗಮಿಸುವ ಮಾರ್ಗಮಧ್ಯದಲ್ಲಿ, ಒಳ್ಳೇದು ಅಥವಾ ಕೆಟ್ಟದ್ದು ಏನೇ ಇದ್ದರೂ ಆತನಿಗೆ ಅದೊಂದು ಅಡಚಣೆಯಾಗಿರುವುದರಿಂದ ಆತನು ಬರುವುದಿಲ್ಲ. ಆತನು ಬಂದಾಗ, ನಾನು ಮಾಡಿದ ಪ್ರತಿಯೊಂದು ಅಪರಾಧಗಳನ್ನು ಆತನು ಹೊರಗೆಳೆದು ಬೆಳಕಿನಲ್ಲಿರಿಸಲಾಗುವಂತೆ ನನ್ನನ್ನು ಸಿದ್ಧಿಪಡಿಸಿಕೊಂಡಿರುವೆನೋ? ಅಂಥಾ ಸ್ಥಳಗಳಲ್ಲಿಯೇ ಆತನು ಬರುತ್ತಾನೆ. ನಾನು ಎಲ್ಲಿ ಅಶುದ್ಧನಾಗಿದ್ದೇನೆಂಬುದು ನನಗೆ ತಿಳಿದಿದೆಯೋ ಅಲ್ಲಿಯೇ ಆತನು ಹೆಜ್ಜೆ ಊರುವನು, ನಾನು ಎಲ್ಲೆಲ್ಲಿ ಶುದ್ಧನಾಗಿರುವೆನೆಂದು ಭಾವಿಸಿಕೊಂಡಿ ರುವೆನೋ ಅಲ್ಲಿಂದ ಆತನು ತನ್ನ ಹೆಜ್ಜೆಗಳನ್ನು ಹಿಂದಕ್ಕೆ ತೆಗೆದುಕೊಂಡುಬಿಡುತ್ತಾನೆ.

ಪಶ್ಚಾತ್ತಾಪವು ಪಾಪ ಪ್ರಜ್ಞೆಯನ್ನುಂಟು ಮಾಡುವದಿಲ್ಲ. ಆದರೆ ಹೇಳಲಾಗದಷ್ಟು ಅಯೋಗ್ಯನು ನಾನು ಎನ್ನುವ ಪ್ರಜ್ಞೆಯನ್ನು ಅದು ಉಂಟುಮಾಡುತ್ತದೆ. ನಾನು ಪಶ್ಚಾತ್ತಾಪ ಪಟ್ಟಾಗ, ನಾನು ಅತ್ಯಂತ ಅಸಹಾಯಕನಾಗಿರುವುದನ್ನು ಗ್ರಹಿಸುತ್ತೇನೆ; ನನ್ನ ಶರೀರದ ಯಾವುದೇ ಅಂಗವೂ ಆತನ ಕೆರಗಳನ್ನು ಹೊರಲು ಯೋಗ್ಯವಲ್ಲದವುಗಳೆಂಬುದನ್ನು ನಾನು ಗ್ರಹಿಸಿರುತ್ತೇನೆ. ಹೀಗೆ ನಾನು ಪಶ್ಚಾತ್ತಾಪ ಪಟ್ಟಿರುವೆನೋ? ಅಥವಾ ನನ್ನನ್ನು ಸಮರ್ಥಿಸಿಕೊಳ್ಳುವಂಥ ಸಲಹೆಯೊಂದು ನನ್ನಲ್ಲಿ ಉಳಿದು ಕೊಂಡಿದೆಯೋ ? ನನ್ನ ಜೀವಿತದಲ್ಲಿ ದೇವರು ಆಗಮಿಸದಿರುವ ಕಾರಣವೆಂದರೆ ನಾನಿನ್ನೂ ಪೂರ್ಣ ಪಶ್ಚಾತ್ತಾಪಪಡುವ ಸ್ಥಿತಿಯನ್ನು ಮುಟ್ಟಿರುವುದಿಲ್ಲ.

''ಆತನು ಪವಿತ್ರಾತ್ಮದಲ್ಲಿಯೂ, ಬೆಂಕಿಯಲ್ಲಿಯೂ, ನಿಮಗೆ ಸ್ನಾನ ಮಾಡಿಸುವನು'' ಪವಿತ್ರಾತ್ಮ ಸ್ನಾನವನ್ನು ಒಂದು ಅನುಭವವೆಂದು ಯೋಹಾನನು ಹೇಳುತ್ತಿಲ್ಲ, ಅದು ಕ್ರಿಸ್ತನು ಮಾಡಿದ ಅತ್ಯಮೋಘ ಕಾರ್ಯ, ''ಆತನು ನಿಮಗೆ ಸ್ನಾನ ಮಾಡಿಸುವನು''. ಪವಿತ್ರಾತ್ಮ ಸ್ನಾನ ಹೊಂದಿರುವವನ ಒಂದೇ ಒಂದು ಪ್ರಜ್ಞಾ ಪೂರ್ವಕ ಅನುಭವವೆಂದರೆ 'ಸಂಪೂರ್ಣವಾಗಿ ಅಯೋಗ್ಯರಾಗಿರುವೆನು' ಎನ್ನುವ ಪ್ರಜ್ಞೆಯನ್ನು ಅವನು ಹೊಂದಿರುತ್ತಾನೆ.

''ನಾನಂತೂ'' ಹಿಂದೆ ಇದು ಆಗಿದ್ದೆನು ಅದು ಆಗಿದ್ದೆನು ಎಂದು ಹೇಳುತ್ತಿರು ವಾಗಲೇ ''ಆದರೆ ಆತನು'' ಆಗಮಿಸಿಯೇ ಬಿಟ್ಟನು ಮತ್ತು ಅತ್ಯಮೋಘವಾದದ್ದು ನಡೆದು ಹೋಯಿತು. ನೀನು ಏನೂ ಮಾಡಲಾಗದಿರುವ ಅಂತ್ಯ ಸ್ಥಿತಿಯನ್ನು ತಲುಪಬೇಕು ಮತ್ತು ಅಲ್ಲಿಂದಲೇ ಯೇಸುಕ್ರಿಸ್ತನು ನಿನ್ನಲ್ಲಿ ಕಾರ್ಯಾರಂಭ ಮಾಡುವನು.

# ಪ್ರಾರ್ಥನೆ -ಅಂತರಂಗದಲ್ಲಿ ಹೋರಾಟ

**''ನೀನು ಪ್ರಾರ್ಥನೆ ಮಾಡಬೇಕಾದರೆ ನಿನ್ನ ಏಕಾಂತವಾದ ಕೋಣೆಯೊಳಗೆ ಹೋಗಿ ಬಾಗಲನ್ನು ಮುಚ್ಚಿಕೊಂಡು ಅಂತರಂಗದಲ್ಲಿಯೂ ಇರುವ ನಿನ್ನ ತಂದೆಗೆ ಪ್ರಾರ್ಥನೆಮಾಡು - (ಮತ್ತಾಯ 6:6)**

''ಅಂತರಂಗದಲ್ಲಿರುವ ನಿನ್ನ ತಂದೆಯ ಕುರಿತು ಕನಸುಕಾಣು'' ಎಂದು ಯೇಸುಸ್ವಾಮಿ ಹೇಳಲಿಲ್ಲ, ಆದರೆ ಅಂತರಂಗದಲ್ಲಿಯೂ ಇರುವ ನಿನ್ನ ತಂದೆಗೆ ಪ್ರಾರ್ಥನೆ ಮಾಡು ಎಂದು ಹೇಳಿದನು. ಪ್ರಾರ್ಥನೆ, ಅದು ಸಂಕಲ್ಪ ಶಕ್ತಿಯ ಪ್ರಯತ್ನವಾಗಿದೆ. ನಾವು ನಮ್ಮ ಏಕಾಂತ ಸ್ಥಳಕ್ಕೆ ಸೇರಿ ಬಾಗಲನ್ನು ಮುಚ್ಚಿಕೊಂಡ ಮೇಲೆ, ಮಾಡಬೇಕಾಗಿರುವ ಅತ್ಯಂತ ಕಷ್ಟಕರ ಸಂಗತಿ ಎಂದರೆ ಪ್ರಾರ್ಥನೆ ಮಾಡುವುದು. ಅಲ್ಲಿ ಸರಿಯಾಗಿ ಕಾರ್ಯಸಾಧಿಸುವ ಸುಸ್ಥಿತಿಗೆ ನಮ್ಮ ಮನಸ್ಸುಗಳನ್ನು ತರಲಾರೆವು ಮತ್ತು ಅಲ್ಲಿ ನಾವು ಸಂಘರ್ಷಿಸುವ ಮೊದಲನೆ ಸಂಗತಿ - ಅದು ಅಲೆಮಾರಿ ಆಲೋಚನೆಗಳು. ಅನ್ಯಮನಸ್ಕತೆಯನ್ನು ಗೆಲ್ಲುವುದೇ ಸ್ವಂತ ಪ್ರಾರ್ಥನೆಗಳಲ್ಲಿರುವ ಹೋರಾಟ. ನಾವು ನಮ್ಮ ಮನಸ್ಸುಗಳನ್ನು ಹತೋಟಿಗೆ ತಂದುಕೊಳ್ಳಬೇಕು ಮತ್ತು ಆಭಾದಿತ ಪ್ರಾರ್ಥನೆಯಲ್ಲಿ ಏಕಾಗ್ರರಾಗಬೇಕು.

ಪ್ರಾರ್ಥನೆ ಮಾಡಲು ಒಂದು ನಿಗದಿತ ಸ್ಥಳವನ್ನಿರಿಸಿಕೊಳ್ಳಬೇಕು. ಅಲ್ಲಿಗೆ ಬಂದಾಗ ಅಲ್ಲಿ ನೊಣಗಳ ಪಿಡುಗು ಆರಂಭವಾಗುವದು - ಇದನ್ನು ನಾನು ಮಾಡಲೇಬೇಕು ಅದನ್ನು ನಾನು ಮಾಡಬೇಕು ಮುಂತಾಗಿ-ಬಾಗಿಲನ್ನು ಮುಚ್ಚಿಬಿಡು. ಏಕಾಂತ ಮೌನವೆಂದರೆ ನಮ್ಮ ಎಲ್ಲಾ ಬಾವೋದ್ವೇಗಗಳ ಬಾಗಿಲನ್ನು ವಿವೇಚನಾಪೂರ್ವಕವಾಗಿ ದೃಢನಿರ್ಧಾರದಿಂದ ಮುಚ್ಚಿಬಿಟ್ಟು, ದೇವರನ್ನು ನೆನೆಯುತ್ತಾ ಇರಬೇಕು. ಅಂತರಂಗದಲ್ಲಿ ದೇವರಿದ್ದಾನೆ ಮತ್ತು ಅಂತರಂಗದಿಂದಲೇ ನಮ್ಮನ್ನು ನೋಡುತ್ತಿದ್ದಾನೆ; ಆತನು ನೋಡುವುದು - ನಮ್ಮನ್ನು ನಾವು ದೃಷ್ಟಿಸಿಕೊಳ್ಳುವಂತೆ ಅಲ್ಲ ಅಥವಾ ಇತರರು ನಮ್ಮನ್ನು ದೃಷ್ಟಿಸುವಂತೆ ಅಲ್ಲ, ತನ್ನದೇ ಆದ ನೋಟದಿಂದ ದೃಷ್ಟಿಸುತ್ತಾನೆ. ನಾವು ಆಂತರ್ಯದಲ್ಲಿ ಜೀವಿಸುತ್ತಿರುವಾಗ ದೇವರ ಬಗ್ಗೆ ಸಂದೇಹ ಪಡುವುದು ಅಸಾಧ್ಯ. ಬೇರೆಲ್ಲವುಗಳಿಗಿಂತಲೂ ಹೆಚ್ಚಾಗಿ ಆತನ ಇರುವಿಕೆಯ ಬಗ್ಗೆ ಖಾತ್ರಿಯುಳ್ಳವರಾಗಿರುತ್ತೇವೆ. ''ನಿನ್ನ ತಂದೆಯು'' - ಯೇಸುಸ್ವಾಮಿಯವರು ಹೇಳುತ್ತಿರುವರು, ''ಆತನು ಅಂತರಂಗದಲ್ಲಿಯೇ ಹೊರತು ಬೇರೆ ಎಲ್ಲಿಯೂ ಇಲ್ಲ''. ನಿನ್ನ ಅಂತರಂಗದೊಳಗೆ ಪ್ರವೇಶಿಸು, ಆಗ ನಿನ್ನ ಸುತ್ತಮುತ್ತಲಿರುವ ಸಹಜ ಸ್ಥಿತಿಗಳಲ್ಲೇ ದೇವರು ಸದಾ ಅಲ್ಲಿಯೇ ಇರುವುದನ್ನು ಕಾಣುವಿ. ನಿನ್ನ ಪ್ರತಿಯೊಂದು ವಿಷಯವನ್ನು ಅಲ್ಲಿ ದೇವರೊಂದಿಗೆ ವಿಚಾರಿಸು. ದಿನಬೆಳಿಗ್ಗೆ ಹಾಸಿಗೆಯಿಂದೇಳುವ ಕ್ಷಣದಲ್ಲಿಯೇ ಹೃದಯದ ಬಾಗಿಲನ್ನು ರಭಸದಿಂದ ಹಿಂದಕ್ಕೆ ಅಗಲವಾಗಿ ಎಳೆದು ದೇವರನ್ನು ನಿನ್ನ ಜೀವಿತದ ಒಳಗೆ ಬರಮಾಡಿಕೊಳ್ಳುವುದನ್ನು ನೀನು ಅಭ್ಯಾಸ ಮಾಡದಿದ್ದರೆ ಆ ದಿನವೆಲ್ಲಾ ದೋಷಭರಿತ ಹಂತದಲ್ಲಿಯೇ ನೀನು ಕಾರ್ಯವೆಸಗುತ್ತಿರುವಿ. ಹೃದಯದ ಬಾಗಿಲನ್ನು ಅಗಲವಾಗಿ ತೆರೆದು ಅಂತರಂಗದಲ್ಲಿರುವ ನಿನ್ನ ತಂದೆಗೆ ಪ್ರಾರ್ಥನೆ ಮಾಡಿದರೆ, ನೀನು ಮಾಡುವ ಎಲ್ಲಾ ಕಾರ್ಯಗಳು ದೇವರ ಪ್ರಸನ್ನತೆಯಿಂದ ಮುದ್ರಿಸಲ್ಪಟ್ಟಿರುತ್ತವೆ.

# ಆಧ್ಯಾತ್ಮಿಕ ಅನ್ವೇಷಣೆ

**''ನಿಮ್ಮಲ್ಲಿ ಯಾವನಾದರೂ ರೊಟ್ಟಿಕೇಳುವ ಮಗನಿಗೆ ಕಲ್ಲನ್ನು ಕೊಡುವನೇ ?'' - (ಮತ್ತಾಯ 7:9)**

ಪ್ರಾರ್ಥನೆಯ ವಿಷಯವಾಗಿ ಯೇಸುಸ್ವಾಮಿಯು ಒಂದು ಒಳ್ಳೆಯ ಮಗುವು ಒಳ್ಳೆಯ ವಸ್ತುಗಳಿಗಾಗಿ ಬೇಡುತ್ತಿರುವ ದೃಷ್ಟಾಂತವನ್ನು ಕೊಟ್ಟಿರುತ್ತಾನೆ. ದೇವರೊಂದಿಗಿರುವ ನಮ್ಮ ಸಂಬಂಧಗಳನ್ನು ಪರಿಗಣನೆಗೆ ತಾರದೆ, ಆತನು ನಮ್ಮ ಪ್ರಾರ್ಥನೆಗಳನ್ನು ಆಲಿಸಿರುವನೆಂಬಂತೆ ನಾವು ಪ್ರಾರ್ಥನೆಯ ಬಗ್ಗೆ ಮಾತನಾಡುತ್ತೇವೆ (ಮತ್ತಾ 5:45 ನೋಡಿರಿ). ನೀನು ಬೇಡಿಕೊಂಡದ್ದನ್ನು ಕೊಡುವ ಇಚ್ಛೆ ದೇವರಿಗೆ ಇಲ್ಲವೆಂದು ಎಂದಿಗೂ ಹೇಳಬಾರದು, ಬೇಡಿದ್ದನ್ನು ದೇವರು ಕೊಡದಿದ್ದಾಗ, ಕುಳಿತುಕೊಂಡು ಮೂರ್ಛೆ ಹೋಗಬೇಡ ಮತ್ತು ಪ್ರಾರ್ಥಿಸುವುದನ್ನು ಬಿಟ್ಟುಕೊಡಬೇಡ, ಆದರೆ ಅದಕ್ಕೆ ಕಾರಣವೇನನ್ನುವುದನ್ನು ತಿಳಿದುಕೊಳ್ಳಬೇಕು. ನಿನ್ನ ಪತ್ನಿ ಯೊಡನೆ ಸರಿಯಾದ ಸಂಬಂಧವನ್ನು ಹೊಂದಿರುವಿಯೋ, ನಿನ್ನ ಮಕ್ಕಳೊಡನೆ, ನಿನ್ನ ಜೊತೆಯ ಜ್ಞಾನಾರ್ಥಿಗಳೊಡನೆ - ನೀನು, ''ಕೇಳುವ ಒಳ್ಳೆಯ ಮಗನು'' ನೀನಾಗಿರುವಿಯೋ? ''ಓಹ್, ಯೇಸುಪ್ರಭುವೇ, ಅಲ್ಲಿಯೇ ನಾನು ಮುಂಗೋಪಿಯೂ, ಇತರರಿಗೆ ಕಷ್ಟಕಾರಣನು ಆಗಿರುವೆನು, ಆದರೂ ಆತ್ಮೀಕ ಆಶೀರ್ವಾದಗಳು ನನಗೆ ಬೇಕು'' ಎಂದು ಹೇಳುವಿಯೋ? ಅವುಗಳನ್ನು ನೀನೆಂದಿಗೂ ಹೊಂದಲಾರೆ; ಒಳ್ಳೇ ಮಗುವಿನ ಸ್ವಭಾವವನ್ನು ನೀನು ಹೊಂದುವ ತನಕ ನೀನು ಬೇಡಿದ್ದನ್ನು ಹೊಂದದೇ ಇರಬೇಕಾಗುತ್ತದೆ.

ಪ್ರತಿರೋದಿಸುವುದನ್ನೇ ಶ್ರದ್ಧೆ ಎಂದು ತಪ್ಪಾಗಿ ಗ್ರಹಿಸುತ್ತೇವೆ. ತ್ಯಜಿಸುವಿಕೆಯನ್ನು ಕುರಿತು ವಾದವಿವಾದ ಮಾಡುತ್ತೇವೆ. ಪ್ರಾರ್ಥನೆಯ ನಾವು ಎಲ್ಲಿ ತಪ್ಪಿದ್ದೇವೆ ಎಂಬುದನ್ನು ಸ್ಪಷ್ಟಪಡಿಸುವ ಪುರಾವೆಗಳನ್ನು ನಾವು ನೋಡುವುದಿಲ್ಲ. ನಾನು ತೀರಿಸಬೇಕಾದ ಸಾಲಕ್ಕೆ ಪಾವತಿ ಮಾಡದೇ, ನನಗೆ ಬೇಕಾಗಿರುವುದನ್ನು ಪಡೆಯಲು ದೇವರಲ್ಲಿ ಹಣಕ್ಕಾಗಿ ಪ್ರಾರ್ಥಿಸುತ್ತಿರುವೆನೋ? ನನಗೆ ಸಂಬಂಧಪಟ್ಟಿರುವವರೊಬ್ಬರಿಗೆ ಕೊಡಬೇಕಾಗಿರುವ ಬಿಡುಗಡೆ ಯನ್ನು ಕೊಡದೆ ಹಿಡಿದಿಟ್ಟುಕೊಂಡು, ನನಗೆ ಬೇಕೆನಿಸುವ ಸ್ವಾತಂತ್ರ್ಯವನ್ನು ದೇವರಿಂದ ಬೇಡಿಕೊಳ್ಳುತ್ತಿ ರುವೆನೋ? ಒಬ್ಬನ ತಪ್ಪುಗಳನ್ನು ಕ್ಷಮಿಸಲಿಲ್ಲ, ಅವನಿಗೆ ನಾನು ದಯೆ ತೋರಲಿಲ್ಲ, ನನ್ನ ಬಂಧುಗಳ ಮತ್ತು ಗೆಳೆಯರ ನಡುವೆ ದೇವರ ಮಗುವಿನಂತೆ ನಾನು ಜೀವಿಸಲಿಲ್ಲ (ಮತ್ತಾಯ 7:12 ನೋಡಿರಿ). ಅನುಕ್ರಮಣಿಯ ಪುಟಗಳನ್ನು ತಿರುವಿನೋಡು.

ಹೊಸದಾಗಿ ಹುಟ್ಟುವುದರಿಂದ ಮಾತ್ರವೇ ನಾನು ದೇವರ ಮಗುವಾಗಬಲ್ಲೆ. ದೇವರ ಮಗುವಾದ ನಾನು ಆತನ ಬೆಳಕಿನಲ್ಲಿ ನಡೆದರೆ ಮಾತ್ರ ಒಳ್ಳೆಯ ಮಗುವಾಗಿರುತ್ತೇನೆ. ಪ್ರಾರ್ಥನೆಯು ಕೇವಲ ಜುಜುಬಿ ಧರ್ಮಾಚರಣೆ ಮಾತ್ರವೆಂದೂ, ಅದೊಂದು ಕೇವಲ ಭಾವೋದ್ವೇಗವೆಂದೂ, ದೇವರೊಂದಿಗೆ ಸಂಪರ್ಕಸಾಧನೆಯು ಕೇವಲ ತರ್ಕಾತೀತ ಒಂದು ಅನುಭವ ಮಾತ್ರವೆಂದೂ ನಮ್ಮಲ್ಲಿ ಅನೇಕರು ತಿಳಿದಿದ್ದಾರೆ. ಆತ್ಮೀಕ ಮುಸುಕನ್ನುಂಟು ಮಾಡುವುದರಲ್ಲಿ ನಾವೆಲ್ಲರು ನಿಪುಣರೇ ಆಗಿದ್ದೇವೆ. ಆದರೆ ಪ್ರಾರ್ಥನೆಯ ವಿಷಯಗಳನ್ನು ಪರೀಕ್ಷಿಸಿ ನೋಡಿದರೆ, ಯಾವುದು, ಎಲ್ಲಿ ತಪ್ಪಿಹೋಗಿದೆ ಎಂಬುದನ್ನು ಸ್ಪಷ್ಟವಾಗಿ ಕಾಣಬಹುದು. ಆ ಗೆಳೆತನ, ಆ ಸಾಲ ತೀರಿಸುವಿಕೆ, ಆ ಮನೋಭಾವ, ನಾವು ದೇವರ ಮಕ್ಕಳಾಗಿ ಜೀವಿಸದ ಹೊರತು ನಾವು ಪ್ರಾರ್ಥಿಸುವದರಿಂದ ಏನೂ ಪ್ರಯೋಜನವಿಲ್ಲ. ದೇವರ ಮಕ್ಕಳಾಗಿದ್ದರೆ ಯೇಸು ಸ್ವಾಮಿ ಹೇಳಿದಂತೆ ''ಬೇಡಿಕೊಳ್ಳುವ ಪ್ರತಿಯೊಬ್ಬನು ಹೊಂದುವನು'' (ಮತ್ತಾಯ 7:8)

# ತ್ಯಾಗ ಮತ್ತು ಗೆಳೆತನ

**''ನಿಮ್ಮನ್ನು ಸ್ನೇಹಿತರೆಂದು ಹೇಳಿದ್ದೇನೆ'' (ಯೋಹಾನ 15:15)**

ನಮ್ಮ ಜೀವಿತದ ಪ್ರತಿಯೊಂದು ರಂಗದಲ್ಲಿಯೂ, ಸಂಪೂರ್ಣವಾಗಿ ನಮ್ಮನ್ನು ಶರಣಾಗತಿ ಮಾಡಿಕೊಳ್ಳುವ ತನಕ, ಸ್ವಾರ್ಥ ತ್ಯಾಗದಲ್ಲಿರುವ ಆನಂದವನ್ನೆಂದಿಗೂ ನಾವು ಅರಿಯುವುದಿಲ್ಲ. ಸ್ವ-ಶರಣಾಗತಿಯು ಬಹುಕಷ್ಟಕರವಾದದ್ದು ''ನಾನು ಮಾಡುತ್ತೇನೆ ಆದರೆ...'' ಎಂಬ ಷರತ್ತನ್ನು ಮುಂದಿಡುತ್ತೇವೆ. ''ಹಾಗೋ, ನನ್ನ ಜೀವಿತವನ್ನು ದೇವರಿಗಾಗಿ ಮೀಸಲಿಡಬೇಕಾಗಬಹುದೆಂದು ನಾನು ಊಹಿಸುತ್ತೇನೆ'' ಎಂದು ಯೋಚಿಸುತ್ತೇವೆ. ಆದರೆ ಈ ಎರಡೂ ಸ್ಥಿತಿಗಳಲ್ಲಿಯೂ ಸ್ವಾರ್ಥತ್ಯಾಗದ ಆನಂದ ವೇನೂ ಇರುವುದಿಲ್ಲ.

ಸರ್ವವನ್ನು ಪರಿತ್ಯಜಿಸಿದ ಕೂಡಲೇ ಪವಿತ್ರಾತ್ಮನು ಯೇಸುಸ್ವಾಮಿಯಲ್ಲಿದ್ದ ಆನಂದದ ಅನುಭವದ ಸೂಚನೆಯನ್ನು ನೀಡುತ್ತಾನೆ. ಸ್ನೇಹಿತನಿಗಾಗಿ ಪ್ರಾಣ ಕೊಡುವುದೇ ಸ್ವಾರ್ಥ ತ್ಯಾಗದ ಅಂತಿಮ ಗುರಿ. (ಯೋಹಾನ 15:13-14) ಪರಿಶುದ್ಧಾತ್ಮನು ನಮ್ಮೊಳಗೆ ಪ್ರವೇಶಿಸಿದಾಗ ಉಂಟಾಗುವ ಅತಿ ಮಹತ್ವದ ಬಯಕೆ - ಅದು ಯೇಸುಕ್ರಿಸ್ತನಿಗಾಗಿ ಪ್ರಾಣವನ್ನು ಕೊಡಬೇಕು ಎಂಬುದೇ; ಆದಾಗ್ಯೂ ಆತ್ಮತ್ಯಾಗದ ಯೋಚನೆಯು ನಮ್ಮ ಮನಸ್ಸಿನೊಳಗೆ ಇಣುಕದಿರುವ ಕಾರಣವೆಂದರೆ ಅಂಥಾ ತ್ಯಾಗವು ಕೇವಲ ಪರಿಶುದ್ಧಾತ್ಮನ ಪ್ರೇಮಾನುರಾಗದ ಪ್ರಕಟಣೆಯಾಗಿರುವುದರಿಂದಲೇ.

ಸ್ವಾರ್ಥತ್ಯಾಗದ ಜೀವಿತದ ವಿಷಯದಲ್ಲಿ ಯೇಸುಕ್ರಿಸ್ತನೇ ನಮ್ಮ ದೃಷ್ಟಾಂತವಾಗಿದ್ದಾನೆ. ''ನನ್ನ ದೇವರೇ, ನಿನ್ನ ಚಿತ್ತವನ್ನು ಅನುಸರಿಸುವುದೇ ನನ್ನ ಸಂತೋಷವು'' (ಕೀರ್ತನೆ 40:8) ಯೇಸುಕ್ರಿಸ್ತನು ತನ್ನ ಆತ್ಮಾರ್ಪಣೆ ಮಾಡುವುದಕ್ಕೆ, ಅನಂತ ಆನಂದ ತುಂಬಿದವನಾಗಿ ತನ್ನನ್ನು ತಾನು ಒಪ್ಪಿಸಿಕೊಟ್ಟನು. ನಾನೆಂದಾದರೂ ಯೇಸುಕ್ರಿಸ್ತನಿಗೆ ಸಂಪೂರ್ಣವಾಗಿ ಅಧೀನನಾಗಲು ನನ್ನನ್ನು ನಾನೇ ಒಪ್ಪಿಸಿಕೊಟ್ಟಿರು ವವನೋ? ಆತ್ಮಾರ್ಪಣೆಯಲ್ಲಿ ಯೇಸುಕ್ರಿಸ್ತನು ನನ್ನ ದೃವತಾರೆಯಾಗಿರದಿದ್ದರೆ (ಮಾರ್ಗ ದರ್ಶನಕ್ಕೆ) ತ್ಯಾಗದಿಂದ ಏನೂ ಪ್ರಯೋಜನವಿಲ್ಲ. ಆದರೆ ಯೇಸುಕ್ರಿಸ್ತನ ಮೇಲೆ ದೃಷ್ಟಿಯನ್ನಿಟ್ಟು ಮಾಡಿದ ಸ್ವಾರ್ಥ ತ್ಯಾಗವು ಸಾವಧಾನವಾಗಿಯೂ, ಖಂಡಿತವಾಗಿಯೂ ನಮ್ಮನ್ನು ರೂಪಿಸುತ್ತಿರುವ, ಅದರ ಪ್ರಭಾವವನ್ನು ಕಾಣುತ್ತೇವೆ. (ಇಬ್ರಿ 12:1-2 ನೋಡಿರಿ)

ನೀವು ಪ್ರೀತಿಯ ಮಾರ್ಗದಲ್ಲಿ ಸಾಗುವಾಗ ಸ್ವಾಭಾವಿಕಪ್ರೀತಿಯ ಸಂಬಂಧಗಳು ಅಡ್ಡ ತೊಡರು ವುದರ ಬಗ್ಗೆ ನೀವು ಎಚ್ಚರ ವಹಿಸಬೇಕು. ಸ್ವಭಾವಸಿದ್ಧ ಪ್ರೇಮವನ್ನು ಕೊಂದು ಹಾಕಬಲ್ಲ ಒಂದು ಅತ್ಯಂತ ಕೆಟ್ಟ ಮಾರ್ಗವೆಂದರೆ, ಸ್ವಾಭಾವಿಕ ಆಶೆಗಳ ಮೇಲೆ ನಿರ್ಮಿತಗೊಂಡ ಪ್ರೀತಿಯ ಫಲಗಳನ್ನು ನಿರಾಕರಿಸುವ ಮೂಲಕವೇ. ಭಕ್ತನ ಆಶೆ ಆಕಾಂಕ್ಷೆಯೆಲ್ಲವೂ ಯೇಸುಕ್ರಿಸ್ತನೇ ಆಗಿದ್ದಾನೆ. ದೇವರ ಮೇಲಿರುವ ಅವನ ಪ್ರೀತಿಯು ಭಾವತನ್ಮಯತೆಯಂತಲ್ಲ, ದೇವರು ಪ್ರೀತಿಸಿದಂತೆ ಪ್ರೀತಿಸುವುದೇ ದೇವಭಕ್ತನ ಯಥಾರ್ಥ ಕಾರ್ಯವಾಗಿದೆ.

''ನಿಮ್ಮನ್ನು ಸ್ನೇಹಿತರೆಂದು ಹೇಳಿದ್ದೇನೆ''. ಈ ಗೆಳೆತನವು ನಮ್ಮಲ್ಲಿ ಹೊಸದಾಗಿ ಸೃಷ್ಟಿಯಾದ ಜೀವಿತದ ಮೇಲೆ ಆಧಾರಗೊಂಡಿದೆ ಮತ್ತು ಈ ಜೀವಿತವು ನಮ್ಮ ಹಳೇ ಜೀವಿತದೊಂದಿಗೆ ಯಾವ ಸಂಬಂಧ ವನ್ನು ಹೊಂದಿರುವುದಿಲ್ಲ; ಆದರೆ ದೇವರ ಜೀವಿತ ದೊಡನೇ ಮಾತ್ರ ಸಂಬಂಧ ಹೊಂದಿರುತ್ತದೆ. ಅದು ವಿವರಿಸಲಶಕ್ಯವಾದ ದೀನತೆಯಿಂದ, ಕಲುಷಿತಗೊಳಿಸಲಾಗದ ನಿರ್ಮಲತೆಯಿಂದ ದೇವರಿಗೆ ಸಂಪೂರ್ಣ ವಾಗಿ ನಿಷ್ಠೆಯುಳ್ಳದ್ದಾಗಿದೆ.

# ನೀನೆಂದಾದರೂ ತೊಂದರೆಗೊಳಗಾಗಿದ್ದೆಯೋ ?

**''ಶಾಂತಿಯನ್ನು ನಿಮಗೆ ಬಿಟ್ಟು ಹೋಗುತ್ತೇನೆ, ನನ್ನಲ್ಲಿರುವಂಥ ಶಾಂತಿಯನ್ನು ನಿಮಗೆ ಕೊಡುತ್ತೇನೆ''**
**- (ಯೋಹಾನ 14:27)**

ಕೆಲವು ಸಮಯಗಳಲ್ಲಿ ನಮ್ಮಲ್ಲಿರುವ ಶಾಂತಿಯು ನಮ್ಮ ಅಪ್ರಭುದ್ಧತೆಯ ಮೇಲೆ ಆಧಾರಗೊಂಡಿರುತ್ತದೆ, ಆದರೆ ಜೀವಿತದ ವಾಸ್ತವಕ್ಕೆ ನಾವು ಎಚ್ಚತ್ತುಕೊಂಡಾಗ, ನಮ್ಮಲ್ಲಿರುವ ಶಾಂತಿಯು ಯೇಸುಕ್ರಿಸ್ತನ ಕೊಡುಗೆಯಾಗಿರದಿದ್ದರೆ ಅದು ನಮ್ಮ ಅಂತರಂಗದಲ್ಲಿ ನೆಲೆಸಲು ಸಾಧ್ಯವಾಗುವುದಿಲ್ಲ. ಶಾಂತಿಯ ಬಗ್ಗೆ ಯೇಸುಸ್ವಾಮಿಯು ಹೇಳುತ್ತಿರುವಂತೆಯೇ, ಆತನೇ ಅದನ್ನುಂಟು ಮಾಡುತ್ತಾನೆ. ಆತನ ನುಡಿಗಳೇ, ''ನಾನು ನಿಮಗೆ ಹೇಳಿರುವ ಮಾತುಗಳೇ ಆತ್ಮವಾಗಿಯೂ ಜೀವವಾಗಿಯೂ ಅವೆ'' (ಯೋಹಾನ 6:63). ಯೇಸುಕ್ರಿಸ್ತನು ಹೇಳಿದುವುಗಳನ್ನು ನಾನೆಂದಾದರೂ ಪಡೆದಿರುವೆನೋ? ''ನನ್ನಲ್ಲಿರುವಂಥಾ ಶಾಂತಿಯನ್ನು ನಿಮಗೆ ಕೊಡುತ್ತೇನೆ'' ಈ ಶಾಂತಿಯು ಆತನ ಮುಖವನ್ನು ದೃಷ್ಟಿಸುವ ಮೂಲಕ ಮತ್ತು ಆತನಲ್ಲಿರುವ ಗೊಂದಲರಹಿತತೆಯನ್ನು ಗ್ರಹಿಸುವುದರ ಮೂಲಕ ನಮಗೆ ಒದಗುತ್ತದೆ.

ನೀನೀಗ ವ್ಯಥೆ ತುಂಬಿ ಕಳವಳಗೊಂಡಿರುವೆಯೋ? ದೇವರ ದೈವಿಕ ಅಪ್ಪಣೆಯಂತೆ ನಿನ್ನ ಮೇಲೆ ಹಾಯುತ್ತಿರುವ, ಉಬ್ಬಿದ ಅಲೆಗಳ ಏರಿಳಿತಗಳಿಂದ ದಿಕ್ಕು ತಪ್ಪಿರುವಿಯೋ, ಅಂಥಾ ಸಮಯದಲ್ಲಿ ಸಹಜವಾಗಿಯೇ ಮಾಡಬೇಕಾಗಿರುವ ನಡವಳಿಕೆಗಳಂತೆ ನಿನ್ನ ನಂಬಿಕೆಗಳೆಲ್ಲವನ್ನು ಪರಿಶೀಲಿಸಿ ತಿರುವಿ ಹಾಕಿರುವಿಯೋ, ಆದಾಗ್ಯೂ ಇನ್ನೂ ಸಮಾಧಾನದ, ಆನಂದದ, ಬಾವಿಯನ್ನು ಕಂಡು ಕೊಳ್ಳಲಿಲ್ಲವೇ? ಎಲ್ಲವೂ ಬತ್ತಿ ಹೋಗಿವೆಯೋ? ನಿನ್ನ ಜೀವಿತವು ಬರಡಾಗಿ ಬಿಟ್ಟಿದೆಯೋ? ಹಾಗಿದ್ದರೆ ಯೇಸುಕ್ರಿಸ್ತನನ್ನು ದೃಷ್ಟಿಸಲು, ನೀನು ಮುಂದಾಗಬೇಕು ಮತ್ತು ಆತನ ನಿರಾತಂಕವಾದ ಶಾಂತಿಯನ್ನು ಪಡೆದುಕೊಳ್ಳಬೇಕು. ನಿನ್ನ ಹೃದಯವನ್ನು ದೇವರ ಕಡೆಗೆ ತಿರುಗಿಸುವ ಸ್ವಾತಂತ್ರ್ಯವು ನಿನ್ನದೇ ಆಗಿರುವುದರಿಂದ, ನಿನ್ನಿಂದ ಪ್ರತಿಫಲಿಸುತ್ತಿರುವ ಶಾಂತಿಯು, ನೀನು ದೇವರೊಂದಿಗೆ ಸಮರಸತೆ ಯಲ್ಲಿರುವುದರ ನಿದರ್ಶನವಾಗಿರುತ್ತದೆ. ನೀನೊಂದು ವೇಳೆ ದೇವರೊಡನೆ ಆತನಿಗೆ ತಕ್ಕ ಹಾಗೆ ಇರದಿದ್ದರೆ, ನೀನು ನಿನ್ನ ಹೃದಯವನ್ನು ನಿನ್ನ ಸ್ವಂತದೆಡೆಗೆ ತಿರುಗಿಸಿರುವಿಯೇ ಹೊರತು ಬೇರೆ ಯಾವ ಕಡೆಗೂ ಇಲ್ಲ. ಯೇಸುಕ್ರಿಸ್ತನ ಮುಖವನ್ನು ನಿನ್ನಿಂದ ಮರೆ ಮಾಡುವ ಯಾವುದಕ್ಕಾದರೂ ಆಸ್ಪದವನ್ನಿತ್ತರೆ, ಅಲ್ಲಿ ನೀನು ತುಂಬಾ ಕಳವಳಗೊಂಡಿರುವೆ ಇಲ್ಲವೆ ಭದ್ರತೆಯ ತಪ್ಪುಕಲ್ಪನೆಗಳಲ್ಲಿಯೇ ಉಳಿದುಕೊಂಡಿರುವಿ.

ಸದ್ಯಕ್ಕೆ ನಿನ್ನನ್ನು ಒತ್ತಾಯ ಪಡಿಸುತ್ತಿರುವ ಸಂಗತಿಯಲ್ಲಿ, ನೀನು ಯೇಸುಕ್ರಿಸ್ತನ ಮೇಲೆ ದೃಷ್ಟಿ ಇಟ್ಟಿರುವೆಯೋ (ಇಬ್ರಿಯ 12:2) ಹಾಗೂ ಆತನಿಂದ ಆತನಲ್ಲಿರುವ ಶಾಂತಿಯನ್ನು ಪಡೆಯುತ್ತಿರುವಿಯೋ? ಹಾಗಿದ್ದರೆ ನಿನ್ನಲ್ಲಿಯೂ, ನಿನ್ನ ಮೂಲಕವೂ ಹರಿಯುವ ಕೃಪಾಭರಿತ ಶಾಂತಿಯು ಆತನೇ ಆಗಿರುತ್ತಾನೆ. ಆದರೆ ಇನ್ನೂ ಆ ಸಂಗತಿಯ ಬಗ್ಗೆ ನೀನು ಚಿಂತಿಸುತ್ತಾ ಅದರಿಂದ ಪಾರಾಗುವ ಮಾರ್ಗಗಳನ್ನರಸುತ್ತಿದ್ದರೆ ಆತನ ಮೇಲಿಡಬೇಕಾದ ದೃಷ್ಟಿಯನ್ನು ಬೇರೆ ಕಡೆಗೆಲ್ಲೋ ಹೊರಳಿಸಿರುವೆ ಮತ್ತು ಅದರಿಂದ ಉಂಟಾಗುವ ಹಿತವಲ್ಲದ ಫಲಗಳನ್ನು ಹೊಂದಲು ನೀನು ಯೋಗ್ಯನಾಗಿರುವಿ. ನಾವು ಆತನನ್ನು ಲಕ್ಷಿಸದೇ ಇರುವುದರಿಂದ ಗೊಂದಲಕ್ಕೊಳಗಾಗುತ್ತೇವೆ. ನಾವು ಯೇಸುಕ್ರಿಸ್ತ ನೊಂದಿಗೆ ವಿಷಯ ಪ್ರಸ್ತಾಪ ಮಾಡಿದಾಗ ಆತನಲ್ಲಿ ಗೊಂದಲವೇ ಇರುವುದಿಲ್ಲ ಮತ್ತು ಆತನಲ್ಲಿ ನೆಲೆಗೊಳ್ಳುವುದೊಂದೇ ನನ್ನ ಹಂಬಲವಾಗಿರುತ್ತದೆ. ಯೇಸುಕ್ರಿಸ್ತನ ಸಮ್ಮುಖದಲ್ಲಿ ಎಲ್ಲವನ್ನು ಹರವಿ, ಸಂಕಷ್ಟವನ್ನು, ವಿಯೋಗವನ್ನು, ದುಃಖವನ್ನು, ಎದುರಿಸುತ್ತಾ ಆತನು ಹೇಳುವುದನ್ನು ಕೇಳಿಸಿಕೊಳ್ಳಬೇಕು. ''ನಿಮ್ಮ ಹೃದಯವು ಕಳವಳಗೊಳ್ಳದೆ ಇರಲಿ'' (ಯೋಹಾನ 14:27) ಇದನ್ನು ನಂಬುವಿಯೋ ?

# ಜೀವಂತ ಸತ್ಯವೇದ ಶಾಸ್ತ್ರ

**''ಕತ್ತಲೆಯು ನಿಮ್ಮನ್ನು ಮುಸುಕಿಕೊಳ್ಳದಂತೆ ಬೆಳಕು ನಿಮಗೆ ಇರುವಾಗಲೇ ಸಂಚಾರ ಮಾಡಿರಿ'' - (ಯೋಹಾನ 12:35)**

ರೂಪಾಂತರದ ಪರ್ವತದ ಮೇಲೆ ದೇವರೊಂದಿಗೆ ನೀವಿದ್ದ ಮಹತ್ವಪೂರ್ಣ ಕ್ಷಣಗಳಲ್ಲಿ, ನೀವು ನೋಡಿದವುಗಳ ಆಧಾರದ ಮೇಲೆ ಕಾರ್ಯನ್ಮುಖರಾಗದಿರುವುದರ ಬಗ್ಗೆ ಎಚ್ಚರದಿಂದಿರಬೇಕು. ಆ ಬೆಳಕಿನ ಪ್ರೇರಣೆಗೆ ವಿಧೇಯರಾಗದಿದ್ದರೆ ಆ ಬೆಳಕು ಕತ್ತಲಾಗಿ ಹೋಗುವುದು. ''ನಿನ್ನೊಳಗಿರುವ ಬೆಳಕೇ ಕತ್ತಲಾದರೆ ಆ ಕತ್ತಲು ಎಷ್ಟೆನ್ನಬೇಕು'' (ಮತ್ತಾಯ 6:23) ಶುದ್ಧೀಕರಣದ ವಿಷಯ ಇಲ್ಲವೇ ಬೇರೆ ವಿಷಯದ ಮೇಲೆ ದೇವರು ನಿಮಗೆ ದಯಪಾಲಿಸಿದ ಬೆಳಕನ್ನು ನೀವು ತೊರೆದುಬಿಟ್ಟ ಕ್ಷಣವೇ ನಿಮ್ಮ ಆತ್ಮೀಕ ಜೀವಿತವು ಕೊಳೆತು ಒಣಗಿಹೋಗಲು ಪ್ರಾರಂಭಿಸುವುದು. ದಿವ್ಯ ಸತ್ಯಗಳನ್ನು ಎಡೆಬಿಡದೆ ನಿಮ್ಮ ನಿಜ ಜೀವನದಲ್ಲಿ ಆಚರಣೆಗೆ ತಂದುಬಿಡಬೇಕು ಮತ್ತು ಜೀವಿತದ ಎಲ್ಲಾ ಕ್ಷೇತ್ರಗಳಲ್ಲಿಯೂ ಯಥಾರ್ಥವಾಗಿ ಅವುಗಳನ್ನು ಕಾರ್ಯಗತಗೊಳಿಸಬೇಕು, ಇಲ್ಲವಾದರೆ ನಿಮ್ಮಲ್ಲಿರುವ ಆ ಬೆಳಕೇ ನಿಮಗೆ ಶಾಪವಾಗಿ ಪರಿಣಮಿಸುತ್ತದೆ.

ಒಬ್ಬನು ತನ್ನ ಹಿಂದಿನ ಅನುಭವದ ಹೆಮ್ಮೆಯ ತೃಪ್ತಿಯಲ್ಲಿರುತ್ತಾ ಅದನ್ನು ತನ್ನ ದೈನಂದಿನ ಜೀವನದಲ್ಲಿ ಕಾರ್ಯಗತ ಮಾಡದೇ, ಕೇವಲ ಅಂಥಾ ಹೇಳಿಕೆಯಲ್ಲಿಯೇ ಸ್ವಸಂತೃಪ್ತಿಗೊಳ್ಳುವನೋ, ಅಂಥವನೊಂದಿಗೆ ವ್ಯವಹರಿಸುವುದು ತುಂಬಾ ಕಠಿಣ. ಶುದ್ಧೀಕರಣಗೊಂಡಿರುವೆನೆಂದು ನೀನು ಹೇಳುತ್ತಿದ್ದರೆ ಮೊದಲು ಅದನ್ನು ನಿನ್ನ ನಿಜ ಜೀವನದಲ್ಲಿ ತೋರಿಸಿಕೊಡು. ಆ ಅನುಭವವು ಎಷ್ಟು ನೈಜವಾಗಿರಬೇಕೆಂದರೆ, ಅದು ದೈನಂದಿನ ಜೀವಿತದಲ್ಲಿ, ತನ್ನನ್ನು ತಾನು ತೋರ್ಪಡಿಸಿಕೊಳ್ಳಬೇಕು. ಸ್ವಮಗ್ನನನ್ನಾಗಿಸುವಂಥ ನಂಬಿಕೆಯ ಬಗ್ಗೆ ಎಚ್ಚರದಿಂದಿರು, ಅದು ಎಷ್ಟೇ ಸುಂದರವೂ, ಆಕರ್ಷಣೀಯವೂ ಆಗಿರಲಿ, ಅದು ಹೊಲಸು ಗುಂಡಿಯೊಳಗಿಂದ ಹೊರಬಂದದ್ದು ಎಂಬುದನ್ನು ಮರೆಯ ಬೇಡ.

ಸತ್ಯವೇದ ಶಾಸ್ತ್ರವು ಜೀವಿತದ ನಿಜ ಸಂಬಂಧಗಳಲ್ಲಿ ತನ್ನಷ್ಟಕ್ಕೆ ತಾನೇ ಕಾರ್ಯಗತವಾಗ ಬೇಕು. ''ನಿಮ್ಮ ನೀತಿಯು ಶಾಸ್ತ್ರಿಗಳ ಮತ್ತು ಪರಿಸಾಯರ ನೀತಿಗಿಂತಲೂ ಹೆಚ್ಚಿನದಾಗಿದ್ದರೆ'' (ಮತ್ತಾ-5:20) ಎಂದು ಯೇಸುಕ್ರಿಸ್ತನೇ ಹೇಳಿದ್ದಾನೆ - ಅಂದರೆ ನಿನಗೆ ಪರಿಚಯವಿರುವ ಅತ್ಯಂತ ಹೆಚ್ಚಿನ ನೀತಿವಂತ ನಿಗಿಂತಲೂ ನೀನು ಹೆಚ್ಚಿನವನಾಗಿರಬೇಕು; ಶುದ್ಧೀಕರಣ, ಸಿದ್ಧಾಂತಗಳೆಲ್ಲವನ್ನು ನೀನು ತಿಳಿದುಕೊಂಡಿರ ಬಹುದು; ಆದರೆ ಅವುಗಳನ್ನು ನಿನ್ನ ಜೀವಿತದ ನಿಜ ಸಮಸ್ಯೆಗಳಲ್ಲಿ ಬಳಸುತ್ತಿರು ವಿಯೋ? ನಮ್ಮ ಜೀವಿತದ ಪ್ರತಿಯೊಂದು ಅಂಶವೂ ಅಂದರೆ ಶಾರೀರಿಕವಾಗಿ, ನೈತಿಕವಾಗಿ, ಹಾಗೂ ಆತ್ಮೀಕವಾಗಿ, ಇವು ಪ್ರಾಯಶ್ಚಿತ್ತ ಯಜ್ಞದ ಸ್ಟ್ಯಾಂಡರ್ಡಿನಲ್ಲಿ ತೀರ್ಮಾನ ವಾಗುವಂಥವುಗಳಾಗಿವೆ.

# ಸಾತ್ವಿಕ ಪ್ರಾರ್ಥನೆಯ ಉದ್ದೇಶ

**''ಸ್ವಾಮೀ ನಮಗೂ ಪ್ರಾರ್ಥನೆ ಮಾಡುವುದನ್ನು ಕಲಿಸು'' - (ಲೂಕ -11:1)**

ಪ್ರಾರ್ಥನೆ ಮಾಡುವುದು ಸ್ವಾಭಾವಿಕ ಮನುಷ್ಯನ ಜೀವಿತದ ಒಂದು ಭಾಗವಲ್ಲ. ಪ್ರಾರ್ಥನೆ ಮಾಡದಿದ್ದರೆ, ನಮ್ಮ ಜೀವಿತದಲ್ಲಿ ಕಷ್ಟಕ್ಕೆ ಗುರಿಯಾಗುತ್ತೇವೆಂದು ಹೇಳುವುದನ್ನು ನಾವು ಕೇಳಿದ್ದೇವೆ; ಆದರೆ ಇದರ ತತ್ಯಥೆಯನ್ನು ನಾನು ಪ್ರಶ್ನಿಸುತ್ತೇನೆ. ಇಲ್ಲಿ ಕಷ್ಟಕ್ಕೊಳಗಾಗುತ್ತಿರುವುದು, ಅದು ನಮ್ಮಲ್ಲಿರುವ ದೇವ ಕುಮಾರನ ಜೀವಿತವು - ಆಹಾರದಿಂದ ಅಲ್ಲ - ಆದರೆ ಕೇವಲ ಪ್ರಾರ್ಥನೆಯ ಮೂಲಕ ಆ ಜೀವಿತವು ಪೋಷಣೆ ಪಡೆಯುತ್ತಿರುವುದರಿಂದ - ಅದು ಕಷ್ಟಕ್ಕೊಳಪಡುತ್ತದೆ. ಒಬ್ಬ ವ್ಯಕ್ತಿಯು ಮೇಲಣನಿಂದ ಹೊಸದಾಗಿ ಹುಟ್ಟಿಬಂದಾಗ ಅವನಲ್ಲಿ ದೇವಕುಮಾರನ ಜೀವಿತವು ಹುಟ್ಟುತ್ತದೆ, ಆ ವ್ಯಕ್ತಿಯು ಅಂಥಾ ಜೀವಿತವನ್ನು ಉಪವಾಸ ಕೆಡವಬಹುದು, ಅಥವಾ ಅದನ್ನು ಜೋಪಾನ ಮಾಡಬಹುದು. ಪ್ರಾರ್ಥನೆಯಿಂದಲೇ ದೇವರ ಜೀವಿತವು ನಮ್ಮಲ್ಲಿ ಪೋಷಣೆ ಹೊಂದುತ್ತದೆ. ಪ್ರಾರ್ಥನೆಯ ಬಗ್ಗೆ ನಮಗಿರುವ ಸಾಮಾನ್ಯ ದೃಷ್ಟಿಕೋನಗಳು ಹೊಸ ಒಡಂಬಡಿಕೆಯಲ್ಲಿ ಎಲ್ಲಿಯೂ ಕಾಣಬರುವುದಿಲ್ಲ. ನಮಗೆ ಬೇಕಾಗಿರುವುದನ್ನು ಪಡೆಯುವ ಮಾರ್ಗವೇ ಪ್ರಾರ್ಥನೆಯೆಂದು ನಾವು ತಿಳಿದಿರುತ್ತೇವೆ; ಸತ್ಯವೇದದ ಪ್ರಾರ್ಥನೆಯ ಉದ್ದೇಶವಾದರೋ ನಾವು ದೇವರನ್ನೇ ಅರಿತು ಕೊಳ್ಳಬೇಕು ಎಂದಾಗಿದೆ.

''ಬೇಡಿಕೊಳ್ಳಿರಿ, ನಿಮಗೆ ಸಿಕ್ಕುವುದು'' (ಯೋಹಾ 16:24) ನಾವು ದೇವರ ಮುಂದೆ ಗುಣಗುಟ್ಟುತ್ತೇವೆ, ಕೆಲವೊಮ್ಮೆ ಕ್ಷಮಾಭಾವದವರೋ ಇಲ್ಲವೇ ನಿರಾಸಕ್ತಿಯುಳ್ಳವರು ಆಗಿರುತ್ತೇವೆ. ಆದರೆ ಕೆಲವೇ ಸಂಗತಿಗಳನ್ನು ಬೇಡಿಕೊಳ್ಳುತ್ತೇವೆ. ಬೇಡುವ ಶಿಶುವಿನಂತಿರುವ ಮಗನ ಕೆಚ್ಚೆದೆಯ ಸ್ವಭಾವವನ್ನು ನೋಡಿರಿ! ಯೇಸುಸ್ವಾಮಿಯು ಹೇಳುವಂತೆ, ''ನೀವು ಚಿಕ್ಕ ಮಕ್ಕಳಂತೆ ಆಗದೆ ಹೋದರೆ'' (ಮತ್ತಾಯ 18:3); 'ಬೇಡಿಕೊಳ್ಳಿರಿ', ದೇವರು ನೆರವೇರಿಸುವನು. ಯೇಸುಕ್ರಿಸ್ತನಿಗೊಂದು ಅವಕಾಶ ಕೊಡಿರಿ, ಆತನಿಗೆ ಸ್ಥಳಾವಕಾಶ ಕಲ್ಪಿಸಿರಿ, ಆದರೆ ಒಬ್ಬ ವ್ಯಕ್ತಿಯು ದಿಕ್ಕು ತೋಚದ ಸ್ಥಿತಿಯನ್ನು ತಲುಪದ ಹೊರತು ಇದನ್ನು ಮಾಡಲಾರನು. ಅಂಥಾ ವ್ಯಕ್ತಿಯು ಪ್ರಾರ್ಥಿಸಿದರೆ, ಅದು ಹೇಡಿತನದ ವಿಷಯವಲ್ಲ, ಅವನು ಪ್ರಾರ್ಥನೆಯ ಮಾರ್ಗವೊಂದರಿಂದಲೇ ವಾಸ್ತವವನ್ನು ಅನುಭವಿಸಬಲ್ಲನು. ದೇವರ ಸಮ್ಮುಖದಲ್ಲಿ ನೀನೇ ನಿನಾಗಿರುತ್ತಾ, ನಿನ್ನನ್ನು ದಿಕ್ಕು ಕೆಡಿಸಿದ ಸಂಗತಿಗಳನ್ನು ಆತನಿಗೆ ನಿವೇದಿಸು. ನೀನು ಸ್ವಸಂತೃಪ್ತಿಯ ಭಾವದಲ್ಲಿರುವವರೆಗೆ ದೇವರನ್ನು ಯಾವ ಕಾರಣಕ್ಕಾಗಿಯೂ ಬೇಡಿಕೊಳ್ಳುವ ಅವಶ್ಯಕತೆ ನಿನಗಿರುವುದಿಲ್ಲ.

''ಪ್ರಾರ್ಥನೆಯು ನನ್ನನ್ನು ಪರಿವರ್ತಿಸುತ್ತದೆ, ಆಗ ನಾನು ಎಲ್ಲವನ್ನು ಪರಿವರ್ತಿಸುವೆನು'' ಎಂಬುದು ''ಪ್ರಾರ್ಥನೆಯು ಎಲ್ಲವನ್ನೂ ಪರಿವರ್ತಿಸುತ್ತದೆ'' ಎಂಬ ವಿವರಣೆಯು ಸತ್ಯಕ್ಕೆ ಹತ್ತಿರವಾಗಿಲ್ಲ. ಪಾಪ ವಿಮೋಚನೆಯ ಆಧಾರದ ಮೇಲೆ, ಒಬ್ಬ ವ್ಯಕ್ತಿಯು, ವಿಷಯಗಳನ್ನು ದಿಟ್ಟಿಸುವುದನ್ನೇ ಪ್ರಾರ್ಥನೆಯು ಬದಲಾಯಿಸುವಂತೆ ದೇವರು ಅವುಗಳನ್ನು ರಚಿಸಿದ್ದಾನೆ. ಬಾಹ್ಯ ರೀತಿಯಲ್ಲಿ, ವಿಷಯಗಳನ್ನು ಬದಲಾಯಿಸಲು ಪ್ರಾರ್ಥನೆ ಇರುವುದಿಲ್ಲ. ಮಾನವನ ಸ್ವಭಾವದಲ್ಲಿ, ಅದ್ಭುತಗಳನ್ನೆಸುಗುವಂತೆ ಮಾಡುವುದೇ ಪ್ರಾರ್ಥನೆ.

# ಘನವಾದ ಆತ್ಮೀಯತೆ (ಪರೀಕ್ಷಿಸಲ್ಪಟ್ಟ ನಂಬಿಕೆ)

**''ನೀನು ನಂಬಿದರೆ ದೇವರ ಮಹಿಮೆಯನ್ನು ಕಾಣುವಿ ಎಂದು ನಾನು ನಿನಗೆ ಹೇಳಲಿಲ್ಲವೇ''**
**-(ಯೋಹಾ -11:40)**

ನಂಬಿಕೆಯ ಜೀವಿತದಲ್ಲಿ ಧೈರ್ಯದಿಂದ ನಾವು ಮುಂದೆ ಸಾಗುತ್ತಿರುವ ಪ್ರತಿ ಸಮಯ ದಲ್ಲಿಯೂ, ನಮ್ಮ ಜೀವಿತದ ಸಾಮಾನ್ಯ ಜ್ಞಾನದ ಪ್ರತಿ ಸನ್ನಿವೇಶಗಳಲ್ಲಿಯೂ ಏನೋ ಒಂದು, ನಮ್ಮ ನಂಬಿಕೆಯೊಡನೆ ಸಂಘರ್ಷಿಸುತ್ತದೆ. ಸಾಮಾನ್ಯಜ್ಞಾನವು ನಂಬಿಕೆ ಅಲ್ಲ; ನಂಬಿಕೆಯು ಸಾಮಾನ್ಯ ಜ್ಞಾನವಲ್ಲ; ಅವುಗಳ ಭಿನ್ನತೆಯು ಆತ್ಮೀಕ ಹಾಗೂ ಸ್ವಾಭಾವಿಕ ಸಂಬಂಧಗಳಲ್ಲಿರು ವಂತೆಯೇ ಇರುತ್ತದೆ. ನಿನ್ನ ಲೌಕಿಕ ಜ್ಞಾನವು ಎಲ್ಲಿ ಶ್ರದ್ಧೆಯನ್ನಿಡುವುದಿಲ್ಲವೋ, ಅಲ್ಲಿ ನೀನು ಯೇಸು ಕ್ರಿಸ್ತನ ಮೇಲೆ ನಂಬಿಕೆಯನ್ನಿಡಬಹುದೋ? ನಿನ್ನ ವ್ಯವಹಾರ ಜ್ಞಾನದ ಜೀವಿತದ ಸತ್ಯಘಟನೆಗಳು, ಯೇಸುಕ್ರಿಸ್ತನ ಹೇಳಿಕೆಯನ್ನು ''ಅವು ಸುಳ್ಳು'' ಎಂದು ಬೊಬ್ಬೆ ಹಾಕುತ್ತಿರುವಾಗಲೂ, ವೀರಾವೇಶದಿಂದ ಆ ಹೇಳಿಕೆ ಗಳನ್ನೇ ಆಧಾರ ಮಾಡಿಕೊಂಡು ಸಾಹಸಗೈಯಬಲ್ಲೆಯೋ? ಯೇಸು ಕ್ರಿಸ್ತನು ರೂಪಾಂತರಗೊಂಡ ಪರ್ವತದ ಮೇಲೆ ನೀನು ಕಾದಿರುವಾಗ ''ಖಂಡಿತವಾಗಿಯೂ ಹೌದು, ದೇವರು ಅದನ್ನು ಮಾಡಿಯೇ ತೀರುವನು'' ಎಂದು ಹೇಳುವುದು ಸುಲಭ; ಆದರೆ ನೀನು ಆ ಪರ್ವತದ ತುದಿಯಿಂದ ಇಳಿದು ದೆವ್ವಗಳು ತುಂಬಿದ ಕಣಿವೆಯೊಳಕ್ಕೆ ಬಂದು, ಪರ್ವತದಲ್ಲಿ ನಡೆದ ರೂಪಾಂತದ ವಿಷಯದ ನಿನ್ನ ಎಲ್ಲಾ ನಂಬಿಕೆಗಳ ಬಗ್ಗೆ ವ್ಯಂಗ್ಯವಾಗಿ ನಗುತ್ತಿರುವ ಸಾಮಾನ್ಯ ಜೀವಿತದ ವಾಸ್ತವಗಳನ್ನು ನೀನು ಸಂಧಿಸ ಬೇಕಾಗುತ್ತದೆ. (ಲೂಕ 9:28-42 ನೋಡಿರಿ) ನನ್ನ ನಂಬಿಕೆಯ ನಡವಳಿಕೆಗಳು ನನ್ನ ಮನಸ್ಸಿಗೆ ಸ್ಪಷ್ಟವಾಗಿರುವಾಗಲೇ ಅದನ್ನು ಎದುರಿಸುವುದೊಂದು ಅಡ್ಡ ಬರುತ್ತದೆ. ದೇವರು ನನ್ನೆಲ್ಲಾ ಅಗತ್ಯ ಗಳನ್ನು ಪೂರೈಸುವನು ಎಂದು ನಾನು ಹೇಳುತ್ತೇನೆ. ಆಗಲೇ, ಅಲ್ಲಿಯೇ, ನನ್ನ ನಂಬಿಕೆಯ ಪರೀಕ್ಷೆ ಯಾಗುತ್ತದೆ. ನನ್ನ ಶಕ್ತಿಯು ಬತ್ತಿಹೋದಾದ ಮತ್ತು ನನ್ನ ದೃಷ್ಟಿ ಕುರುಡಾದಾಗ ಜಯಶಾಲಿಯಾಗಿ ರುವೆನೋ, ಇಲ್ಲವೇ ಸೋತು ಹಿಂದಕ್ಕೆ ಸರಿದು ಕೆಳಗೆ ಬೀಳುವೆನೋ ಎಂಬುದು ನಿರ್ಧಾರವಾಗಿ ಬಿಡುತ್ತದೆ.

ನಂಬಿಕೆಯನ್ನು ಪರೀಕ್ಷೆಗೊಳಪಡಿಸಲೇಬೇಕು - ಯಾಕೆಂದರೆ ಸಂಘರ್ಷಣೆಯ ಮೂಲಕವೇ ನಂಬಿಕೆಯು ನನ್ನ ಸ್ವಂತ ಸ್ವಾಮ್ಯವಾಗಿ ಅಂದರೆ ಅನುಭೋಗವಾಗಿ ಮಾರ್ಪಡುತ್ತದೆ. ಪ್ರಸ್ತುತದಲ್ಲಿ ನಿನ್ನ ನಂಬಿಕೆಯು ಯಾವುದನ್ನು ಎದುರಿಸುತ್ತಿದೆ? ಆ ಪರೀಕ್ಷೆಯು ನಿನ್ನ ನಂಬಿಕೆಯು ಯೋಗ್ಯವಾದದ್ದೆಂದು ಸ್ಥಿರ ಪಡಿಸುತ್ತದೆ, ಇಲ್ಲವೇ ಅದನ್ನು ಸಾಯಿಸಿಬಿಡುತ್ತದೆ. ''ನನ್ನ ವಿಷಯದಲ್ಲಿ ಸಂಶಯ ಪಡೆದವನೇ ಧನ್ಯನು'' (ಮತ್ತಾಯ 11:6). ಅಂತಿಮ ಸಂಗತಿಯೆಂದರೆ ಯೇಸುಕ್ರಿಸ್ತನಲ್ಲಿಟ್ಟಿರುವ ನಂಬಿಕೆಯೇ. ಎಳ್ಳಷ್ಟು ಕದಲದ ನಂಬಿಕೆಯನ್ನು ಆತನ ಮೇಲಿಡು, ಆಗ ನೀನು ಎದುರಿಸುವಂಥವುಗಳೆಲ್ಲವೂ ನಿನ್ನ ನಂಬಿಕೆಯನ್ನು ಅಭಿವೃದ್ಧಿ ಗೊಳಿಸುತ್ತವೆ. ನಂಬಿಕೆಯ ಜೀವಿತದಲ್ಲಿ ಎಡೆಬಿಡದ ಪರೀಕ್ಷೆಗಳು ಇದ್ದೇ ಇರುವವು, ಮತ್ತು ಅವುಗಳಲ್ಲಿ ಬೃಹತ್ತಾದದ್ದು ಮತ್ತು ಕೊನೆಯದಾದದ್ದು ಮರಣ. ದೇವರು ನಮ್ಮನ್ನು ಹೋರಾಟ ಯೋಗ್ಯರನ್ನಾಗಿಸಲಿ ! ನಂಬಿಕೆಯು ಹೇಳಲಸಾಧ್ಯವಾದ ಭರವಸೆಯಾಗಿದೆ, ದೇವರು ನಮ್ಮ ಜೊತೆಗಿರುವುದಿಲ್ಲವೆಂಬ ಕಲ್ಪನೆಯನ್ನು ಅದು ಮಾಡುವುದೇ ಇಲ್ಲ.

# ಕ್ರಿಸ್ತನಿಂದುಂಟಾದ ಮನವರಿಕೆ
# (ಉಪಯೋಗವೋ ಅಥವಾ ಸಂಬಂಧವೋ?)

**''ಆದರೂ ದೆವ್ವಗಳು ನಮಗೆ ಅಧೀನವಾಗಿವೆ ಎಂದು ಸಂತೋಷಪಡದೆ ನಮ್ಮ ಹೆಸರುಗಳು ಪರಲೋಕದಲ್ಲಿ ಬರೆದಿರುತ್ತವೆ ಎಂದು ಸಂತೋಷ ಪಡಿರಿ'' - (ಲೂಕ-10:20)**

ಯೇಸುಕ್ರಿಸ್ತನು ಖಂಡಿತವಾಗಿ ಹೇಳುತ್ತಾನೆ - ಜಯಪ್ರದವಾದ ಸೇವೆಯಲ್ಲಿ ಸಂತೋಷ ಪಡಬೇಡಿರಿ, ಆದರೆ ನನ್ನೊಂದಿಗೆ ನೀವು ಯೋಗ್ಯವಾದ ಸಂಬಂಧವನ್ನು ಹೊಂದಿರುವುದಕ್ಕಾಗಿ ಆನಂದಿಸಿರಿ ಎಂದು. ಜಯಪ್ರದವಾದ ಸೇವೆಯಲ್ಲಿ ಅಂದರೆ ದೇವರು ನಿನ್ನನ್ನು ಉಪಯೋಗಿಸಿಕೊಂಡಿರುವ ಪ್ರಜ್ಞೆಯಲ್ಲಿ ಸಂತೋಷ ಪಡುವುದೇ ಕ್ರಿಸ್ತನ ಸೇವೆಯಲ್ಲಿರುವ ಉರುಲುಗಳಾಗಿವೆ, ಯೇಸುಕ್ರಿಸ್ತನಲ್ಲಿ ಯೋಗ್ಯ ಸಂಬಂಧವನ್ನು ನೀನು ಹೊಂದಿದ್ದರೆ, ದೇವರು ನಿನ್ನನ್ನು ಎಷ್ಟರ ಮಟ್ಟಿಗೆ ಉಪಯೋಗಿಸಿಕೊಳ್ಳುವನೆಂಬುದನ್ನು ನೀನೆಂದಿಗೂ ಅಳೆಯಲಾರೆ. ಆತನೊಂದಿಗೆ ನಿನ್ನ ಬಾಂಧವ್ಯವನ್ನು ಆತನಿಗೆ ಸರಿಹೊಂದುವಂತೆ ಕಾಪಾಡಿ ಕೊಂಡಿದ್ದರೆ ಮಾತ್ರ ಎಂಥಾ ಸನ್ನಿವೇಶಗಳಲ್ಲಿ ನೀನಿದ್ದರೂ, ದಿನದಿನವೂ ನೀನು ಯಾರನ್ನೇ ಸಂಧಿಸಿದರೂ, ನಿನ್ನ ಮೂಲಕ ದೇವರು ನಿತ್ಯ ಜೀವದ ಜಲವನ್ನು ಅವರಿಗೆ ಸುರಿಯುತ್ತಾನೆ ಮತ್ತು ಈ ರೀತಿ ಆತನು ತನ್ನ ಸೇವೆಯಲ್ಲಿ ನಿನ್ನನ್ನು ಉಪಯೋಗಿಸಿಕೊಳ್ಳುತ್ತಿರುವುದನ್ನು, ತನ್ನ ಕನಿಕರದಿಂದ, ಅದು ನಿನ್ನ ಪ್ರಜ್ಞೆಗೆ ಹೊಳೆಯದಂತೆ ಮಾಡಿರುತ್ತಾನೆ. ರಕ್ಷಣೆ ಮತ್ತು ಶುದ್ಧೀಕರಣದ ಮೂಲಕ ನೀನು ಒಮ್ಮೆ ಆತನೊಂದಿಗೆ ಯೋಗ್ಯ ಸಂಬಂಧವನ್ನು ಹೊಂದಿದ್ದರೆ ನಿನ್ನ ಸಂದರ್ಭಗಳು ಹೇಗಾದರೂ ಇರಲಿ, ಅಲ್ಲಿ ಆತನೇ ನಿನ್ನನ್ನು ಇರಿಸಿರುವನೆಂಬುದು ನಿನ್ನ ನೆನಪಿನಲ್ಲಿರುತ್ತದೆ; ಮತ್ತು ನಿನ್ನ ಸುತ್ತ ಮುತ್ತಲಿರುವ ಸಮಯ ಸನ್ನಿವೇಶಗಳಲ್ಲಿ, ನೀನು ತೋರಿಸುವ ಪ್ರತಿಕ್ರಿಯೆಯ ಮೂಲಕ ''ದೇವರು ಬೆಳಕಿನಲ್ಲಿರುವಂತೆ'' ನೀನು ಬೆಳಕಿನಲ್ಲಿರುವಷ್ಟು ಕಾಲ ದೇವರ ಉದ್ದೇಶ ವನ್ನು ಸಫಲಗೊಳಿಸುತ್ತಿರುವೆ.

ಈಗಿನ ಕಾಲದಲ್ಲಿ ಸೇವೆಗೆ ತುಂಬಾ ಒತ್ತು ಕೊಡುವ ಪ್ರವೃತ್ತಿ ಬೆಳೆದಿದೆ. ನಿಮ್ಮ ಉಪಯುಕ್ತತೆಯನ್ನು ಆಧಾರ ಮಾಡಿಕೊಂಡು, ನಿಮ್ಮನ್ನು ದೇವ ಸೇವೆಗೆ ಆಕರ್ಷಿಸುವ ಜನರ ಬಗ್ಗೆ ಎಚ್ಚರವಹಿಸಿರಿ. ಅದಕ್ಕಾಗಿ ಉಪಯುಕ್ತತೆಯನ್ನೇ ಪರೀಕ್ಷಾ ಮಟ್ಟವನ್ನಾಗಿಟ್ಟುಕೊಂಡರೆ, ಬದುಕಿ ಬಾಳಿದವರಲ್ಲಿ ಬಹು ದೊಡ್ಡ ವಿಫಲ ವ್ಯಕ್ತಿ ಯೇಸುಕ್ರಿಸ್ತನೇ ಆಗುವನು. ದೇವರು ತಾನೇ ತನ್ನ ಭಕ್ತನ ದೃವತಾರೆಯಾಗಿರುತ್ತಾ ಮಾರ್ಗದರ್ಶನ ಮಾಡುತ್ತಾನೆ, ಭಕ್ತನ ಉಪಯುಕ್ತತೆಯ ಆಧಾರದ ಮೇಲೆ ಮಾರ್ಗದರ್ಶನವಾಗುವುದಿಲ್ಲ. ನಾವು ಆತನಿಗಾಗಿ ಏನು ಮಾಡುತ್ತಿರುವೆವೆಂಬುದಲ್ಲ, ಆದರೆ ದೇವರು ನಮ್ಮ ಮೂಲಕ ಮಾಡುವ ಕಾರ್ಯವೇ ಪರಿಗಣಿಸಲ್ಪಡುವುದು. ತಂದೆಯಾದ ದೇವರಿಗೆ ಯೋಗ್ಯವಾಗಿ ಕಾಣುವ ಸರಿಯಾದ ಬಾಂಧವ್ಯವನ್ನು ಮಾತ್ರವೇ ಮನುಷ್ಯ ಜೀವನದಲ್ಲಿ ನಮ್ಮ ಪ್ರಭುವು ಬಯಸುತ್ತಾನೆ. ಯೇಸುಕ್ರಿಸ್ತನು ಬಹು ಮಂದಿ ಮನುಷ್ಯರನ್ನು ಪ್ರಭಾವಕ್ಕೆ ಸೇರಿಸುವನು. (ಇಬ್ರಿಯ 2:10)

# ನನ್ನ ಆನಂದ ...... ನಿಮ್ಮ ಆನಂದ

**''ನನ್ನಲ್ಲಿರುವ ಆನಂದವು ನಿಮ್ಮಲ್ಲಿಯೂ ........ ಪರಿಪೂರ್ಣವಾಗ ಬೇಕೆಂತಲೂ''**
**- (ಯೋಹಾ - 15:11)**

ಯೆಸುಕ್ರಿಸ್ತನಲ್ಲಿದ್ದ ಆನಂದವು ಎಂಥಾದಾಗಿತ್ತು? ಯೇಸುಕ್ರಿಸ್ತನಿಗೆ ಸಂಬಂಧಿಸಿದಂತೆ ಹೇಳುವಾಗ ಸಂತೋಷ ಎನ್ನುವ ಪದಪ್ರಯೋಗವು ಅವಮಾನಕರವಾಗಿದೆ, ಯಾಕೆಂದರೆ ಸಂತೋಷವೇ ಬೇರೆ, ಆನಂದವೇ ಬೇರೆ; ಯೇಸುಕ್ರಿಸ್ತನ ಆನಂದವು ಆತನ ಸ್ವಯಂ ಸಮರ್ಪಣೆಯ ಮೂಲಕ ಮತ್ತು ಸ್ವಾರ್ಥತ್ಯಾಗದ ಮೂಲಕ ತಂದೆಯಾದ ದೇವರಿಗೆ ಶರಣಾಗಿರುವ ಆನಂದವಾಗಿದೆ; ತನ್ನನ್ನು ಕಳುಹಿಸಿದ ತಂದೆಯ ಚಿತ್ತವನ್ನು ನೆರವೇರಿಸುವ ಆನಂದವಾಗಿದೆ. ''ನನ್ನ ದೇವರೇ, ನಿನ್ನ ಚಿತ್ತವನ್ನು ಅನುಸರಿಸುವುದೇ ನನ್ನ ಸಂತೋಷ'' (ಕೀರ್ತನೆ - 40:8) ತನ್ನಲ್ಲಿರುವ ಆನಂದದ ಪರಿಪೂರ್ಣತೆಗೆ ನಮ್ಮ ಆನಂದವೂ ವೃದ್ಧಿಯಾಗಬೇಕೆಂದು ಯೇಸುಸ್ವಾಮಿಯು ಪ್ರಾರ್ಥಿಸಿದ್ದಾನೆ. ಈ ಆನಂದವನ್ನು ನನ್ನೊಳಗೆ ಉಂಟು ಮಾಡಲು ನಾನು ಆತನಿಗೆ ಅವಕಾಶವಿತ್ತಿರುವೆನೋ ?

ಪರಿಪೂರ್ಣತೆಯಿಂದ ತುಂಬಿ ಹರಿಯುತ್ತಿರುವ ನನ್ನ ಜೀವಿತವಿರುವುದು - ನನ್ನ ಶರೀರದ ಸದೃಢತೆಯಲ್ಲಿ ಇಲ್ಲ, ಸಂಭವಿಸುವ ಬಾಹ್ಯ ಘಟನೆಗಳಲ್ಲಿ ಇಲ್ಲ, ದೇವರ ಕೆಲಸವನ್ನು ಜಯಪ್ರದಗೊಳಿಸು ವುದರಲ್ಲಿಯೂ ಇಲ್ಲ, ಆದರೆ ದೇವರನ್ನು ಪೂರ್ತಿಯಾಗಿ ಅರಿತು ಕೊಳ್ಳುವುದರಲ್ಲಿಯೂ ಮತ್ತು ಯೇಸುಕ್ರಿಸ್ತನು ದೇವರೊಡನೆ ಹೊಂದಿರುವ ಅನ್ಯೋನ್ಯತೆಯಂತೆ ನಾನೂ ಆತನೊಂದಿಗೆ ಇರುವುದರಲ್ಲಿಯೂ ಇದೆ. ನನ್ನ ವಿದ್ಯಾಮಾನಗಳ ವಿಶ್ಲೇಷಣೆ ಮಾಡಿ, ಚಿಂತಿಸುವ ಕಿರಿಕಿರಿಯೇ ನನ್ನಲ್ಲಿರುವ ಕ್ರಿಸ್ತನ ಆನಂದವನ್ನು ಅಡ್ಡಿಪಡಿಸುವುದರಲ್ಲಿ ಪ್ರಥಮವಾಗಿದೆ. ಈ ಲೋಕದ ಚಿಂತಾ ಭಾರವು, ಯೇಸುಕ್ರಿಸ್ತನು ಹೇಳಿದಂತೆ, ದೇವರ ವಾಕ್ಯಗಳನ್ನು ಅಡಗಿಸಿಬಿಡುತ್ತವೆ. ''ಪ್ರಪಂಚದ ಚಿಂತೆಗಳೂ.... ಒಳಗೆ ಸೇರಿ ಆ ವಾಕ್ಯವನ್ನು ಅಡಗಿಸಿ ಬಿಡುವುದರಿಂದ'' (ಮಾರ್ಕ 4:19) ನಾವು ಎಲ್ಲಿ, ಹೇಗೆ ಇರುತ್ತಿರುವೆವು ಎಂಬುದನ್ನು ತಿಳಿದುಕೊಳ್ಳುವ ಮುಂಚೆಯೇ, ಈ ಲೋಕದ ಚಿಂತಾಭಾರ ಗಳಿಂದ ಹಿಡಿಯಲ್ಪಟ್ಟಿರುತ್ತೇವೆ. ಈವರೆಗೆ ದೇವರು ನಮಗೆ ಮಾಡಿರುವುದೆಲ್ಲಾ ಪ್ರವೇಶ ದ್ವಾರದ ಹೊಸ್ತಿಲು ಮಾತ್ರ; ಯೇಸುಕ್ರಿಸ್ತನಿಗೆ ಸಾಕ್ಷಿಗಳಾಗಿರುತ್ತಾ, ಆತನು ಯಾರೆಂಬುದನ್ನು ಪ್ರಸಿದ್ಧಿಪಡಿಸುವ ಸ್ಥಳಕ್ಕೆ ನಮ್ಮನ್ನು ಕರೆದುಕೊಂಡು ಹೋಗುವುದೇ ಯೇಸುಕ್ರಿಸ್ತನ ಇಚ್ಛೆಯಾಗಿದೆ.

ದೇವರಿಗೆ ಯೋಗ್ಯವಾದ ಸಂಬಂಧದಲ್ಲಿರುತ್ತಾ ಅಲ್ಲಿ ನಿನ್ನ ಆನಂದವನ್ನು ಕಂಡುಕೋ, ಆಗ ನಿತ್ಯ ಜೀವದ ಹೊಳೆಗಳು ನಿನ್ನೊಳಗಿಂದ ಹೊರಗೆ ಹರಿಯುವವು. ಯೇಸುಕ್ರಿಸ್ತನು, ಜೀವಕರ ನೀರನ್ನು ಹೊರ ಸುರಿಯುವ ಕೇಂದ್ರವು ನೀನಾಗಿರಬೇಕು. ಸ್ವಪ್ರಜ್ಞೆಯಿಂದಿರುವುದನ್ನು ನಿಲ್ಲಿಸಿಬಿಡು, ಶುದ್ಧೀಕರಿಸಲ್ಪಟ್ಟಿರುವೆ ಎನ್ನುವ ಸ್ವಪ್ರಶಂಸೆಯನ್ನು ನಿಲ್ಲಿಸಿ ಬಿಡು, ಯೇಸುಕ್ರಿಸ್ತನಲ್ಲಿ ಮರೆಯಾಗಿಟ್ಟಿರುವ ಜೀವಿತವನ್ನು ಬಾಳು. ದೇವರೊಂದಿಗೆ ಯೋಗ್ಯರೀತಿಯಲ್ಲಿ ಬಾಂಧವ್ಯ ಹೊಂದಿದ ಜೀವಿತವು, ಅದು ಎಲ್ಲಿ ಹೋದರೂ ಸಹಜ ಶ್ವಾಸೋಚ್ಛಾರದಂತೆ ಸರಳವಾಗಿ ಜೀವಿಸುತ್ತದೆ. ನಿನಗೆ ಅತ್ಯಂತ ಆಶೀರ್ವಾದಕರವಾಗಿರುವ ಜನರು ಅವುಗಳ ಬಗ್ಗೆ ಪ್ರಜ್ಞಾರಹಿತರಾಗಿರುವಂಥವರೇ.

# ಪರಿಶುದ್ಧನಾಗಿರುವ ನಿಯತಿ

**''ನಾನು ಪರಿಶುದ್ಧ ನಾಗಿರುವುದರಿಂದ ನೀವೂ ಪರಿಶುದ್ಧರಾಗಿರಬೇಕು'' - (1 ಪೇತ್ರ 1:16)**

ನಿನ್ನ ಜೀವಿತದ ಉದ್ದೇಶವೇನೆಂಬುದನ್ನು ಎಡೆಬಿಡದೆ ನಿನ್ನಷ್ಟಕ್ಕೆ ನೀನು ನೆನಪು ಮಾಡಿಕೊಳ್ಳುತ್ತಿರಬೇಕು. ಮಾನವನ ಜೀವಿತದ ಅಂತಿಮ ಉದ್ದೇಶವೆಂದರೆ, ಅದು ಅವನ ಸಂತೋಷವಲ್ಲ, ಅವನ ಸದೃಢತೆಯಲ್ಲ, ಆದರೆ ಪರಿಶುದ್ಧತೆಯೇ ಅದು. ಅನೇಕಾನೇಕ ಆಕರ್ಷಣೆಗಳು ಈ ದಿನಗಳಲ್ಲಿ, ನಮಗಿವೆ, ಅವುಗಳಲ್ಲಿ ನಾವು ಕರಗಿ ಕಣ್ಮರೆಯಾಗಿ ಬಿಟ್ಟಿದ್ದೇವೆ. ಯೋಗ್ಯವಾದವುಗಳೂ, ಒಳ್ಳೆಯವುಗಳೂ, ಗೌರವಾನ್ವಿತವಾದ ಇನ್ನೂ ಅನೇಕ ಆಕರ್ಷಣೆಗಳನ್ನು ಈಡೇರಿಸಬೇಕಾಗಿದೆ, ಆದರೂ ಈ ಮಧ್ಯದಲ್ಲಿ ಅವುಗಳ ಮೇಲೆ ನಮಗಿರುವ ಒಲವುಗಳು ಕ್ಷೀಣಿಸಿ ಹೋಗುವಂತೆ ದೇವರು ಮಾಡಬೇಕಾಗಿದೆ. ತನ್ನನ್ನು ಪರಿಶುದ್ಧನನ್ನಾಗಿ ಮಾಡಬಲ್ಲ ದೇವರನ್ನು ಮಾನವನು ಸ್ವೀಕರಿಸಬಲ್ಲನೋ ಎಂಬ ಸಂಗತಿಯೇ ಮುಖ್ಯವಾದದ್ದು. ಎಷ್ಟೇ ಬೆಲೆ ತೆರಬೇಕಾದರೂ ಸರಿಯೇ, ಮನುಷ್ಯನು ಮಾತ್ರ ದೇವರೊಂದಿಗೆ ಯೋಗ್ಯ ಸಂಬಂಧವನ್ನು ಹೊಂದಿ ಕೊಳ್ಳಲೇ ಬೇಕು.

ಪರಿಶುದ್ಧನಾಗುವ ಅಗತ್ಯತೆ ನನಗಿದೆ ಎಂದು ನಾನು ನಂಬು ತ್ತೇನೆಯೋ? ದೇವರೇ ನನ್ನೊಳಗೆ ಪ್ರವೇಶಿಸಿ ನನ್ನನ್ನು ಪರಿಶುದ್ಧ ಗೊಳಿಸುತ್ತಾನೆಂದು ನಾನು ನಂಬುತ್ತೇನೆಯೋ? ನಿನ್ನ ಬೋಧನೆಯ ಮುಖಾಂತರ ನಾನೊಬ್ಬ ಅಶುದ್ಧನೆಂದು ನೀನು ನನಗೆ ಮನಗಾಣಿಸಿದರೆ ನಾನು ಕೋಪಗೊಳ್ಳುತ್ತೇನೆ. ಸುವಾರ್ತಾ ಬೋಧನೆಗಳು ನಾನೊಬ್ಬ ಅಶುದ್ಧನೆಂದು ನನಗೆ ಮನಗಾಣಿಸುವುದರಿಂದ, ಆ ಬೋಧನೆಗಳು ನನ್ನಲ್ಲಿ ತೀವ್ರವಾದ ರೋಷವನ್ನು ಬಡಿದೆಬ್ಬಿಸುತ್ತವೆ; ಆದರೂ ಆ ಬೋಧನೆಗಳೇ ಪರಿಶುದ್ಧತೆಯನ್ನು ಹೊಂದಬೇಕೆಂಬ ಉತ್ಕಟ ಅಪೇಕ್ಷೆಯನ್ನೂ ಆಶೆಯನ್ನೂ ನನ್ನಲ್ಲಿ ಹುಟ್ಟಿಸುತ್ತವೆ. ಮಾನವರಿಗೆ, ದೇವರು ನಿಯಮಿಸಿರುವ ಅಂತಿಮ ವಿಧಿ-ಅದು ಮಾನವನ ಪರಮ ಪವಿತ್ರತೆ. ಅವರನ್ನು ತನ್ನ ಭಕ್ತರನ್ನಾಗಿ ಮಾಡುವುದೇ ದೇವರ ಗುರಿ. ಮನುಷ್ಯನನ್ನು ಸದಾಕಾಲ ಆಶೀರ್ವದಿಸುವ ಯಂತ್ರವು ದೇವರಲ್ಲ; ಮಾನವರನ್ನು ರಕ್ಷಿಸಲು, ದೇವರಿಗೆ ಅವರ ಮೇಲಿದ್ದ ಕನಿಕರವು ಕಾರಣವಲ್ಲ; ಅವರು ಪರಿಶುದ್ಧರಾಗಿ ರಬೇಕೆಂದು ಅವರನ್ನು ಸೃಷ್ಟಿಸಿದ್ದರಿಂದಲೇ ಅವರನ್ನು ರಕ್ಷಿಸಲು ಬಂದನು. ಪಾಪ ಪರಿಹಾರದ ಪ್ರಾಯಶ್ಚಿತ್ತ ಯಜ್ಞವೆಂದರೆ-ತನ್ನಿಂದ ದೂರವಾಗಿ ಹೋದ ನನ್ನನ್ನು, ತಿರುಗಿ ತನ್ನ ದಿವ್ಯ ಅನ್ಯೋನ್ಯತೆಯೊಳಗೆ ಸೇರಿಸಿಕೊಳ್ಳಲು, ನಮ್ಮಿಬ್ಬರ ನಡುವೆ ಯಾವ ಛಾಯೆಯೂ ಇರದಂತೆ ಮಾಡಿ, ಯೇಸುಕ್ರಿಸ್ತನ ಮರಣದ ಮೂಲಕ ನನ್ನನ್ನು ತನ್ನಲ್ಲಿ ಒಂದು ಮಾಡಿಕೊಳ್ಳುವುದಕ್ಕೆ ದೇವರು ಬಂದನು.

ಸ್ವಾನುಕಂಪನ ಅಥವಾ ಇತರರ ಬಗ್ಗೆ ಸಹಾನುಭೂತಿಯ ಕಾರಣದಿಂದ ಪರಮ ಪರಿಶುದ್ಧನಾದ ದೇವರಿಗೆ ಯೋಗ್ಯವೆನಿಸದ ಆಚರಣೆ ಮತ್ತು ನಡವಳಿಕೆಗಳನ್ನೆಂದಿಗೂ ಸಹಿಸಲೇಬಾರದು. ಪಾದಗಳು ಮಲಿನವಾಗದಂತೆ ನಡೆದಾಡುವುದು, ನಾಲಿಗೆಯಿಂದ ದೋಷರಹಿತ ಮಾತುಗಳು, ಬುದ್ಧಿಯಲ್ಲಿ ನಿರ್ಮಲವಾದ ಚಿಂತನೆಗಳು, ಹೀಗೆ ಜೀವಿತದ ಪ್ರತಿಯೊಂದು ವಿವರಗಳನ್ನು ದೇವರ ಸೂಕ್ಷ್ಮ ದೃಷ್ಟಿಯ ಪರಿಶೀಲನೆಯಲ್ಲಿರಿಸುವುದೇ ಪರಿಶುದ್ಧತೆ. ದೇವರು ನನಗೆ ಪರಿಶುದ್ಧತೆಯನ್ನು ಕೊಡುವುದಷ್ಟೇಯಲ್ಲ, ದೇವರು ನನಗೆ ದಯಪಾಲಿಸಿರುವುದನ್ನು ಸಹಾ ನನ್ನಲ್ಲಿ ಪ್ರಕಟಪಡಿಸಬೇಕು.

# ಪವಿತ್ರ ತ್ಯಾಗಾಚರಣೆಯ ಜೀವಿತ

**''ನನ್ನನ್ನು ನಂಬಿದವನ ಹೊಟ್ಟೆಯೊಳಗಿಂದ ... ಜೀವಕರವಾದ ನೀರಿನ ಹೊಳೆಗಳು ಹರಿಯುವವು''**
**- (ಯೋಹಾ 7:38)**

''ನನ್ನನ್ನು ನಂಬಿದವನು ದೇವರಿಂದ ಹೊಂದಿದ ಪರಿಪೂರ್ಣ ಆಶೀರ್ವಾದಗಳನ್ನು ಸಫಲ ಮಾಡಿ ಕೊಳ್ಳುವನು'' ಎಂದು ಯೇಸುಸ್ವಾಮಿಯು ಹೇಳಲಿಲ್ಲ ; ಆದರೆ ನನ್ನನ್ನು ನಂಬಿದವನೊಳಗಿಂದ ಅವನು ದೇವರಿಂದ ಹೊಂದಿಕೊಂಡದ್ದೆಲ್ಲವೂ ಹೊರಗೆ ಹರಿಯುತ್ತವೆ ಎಂದು ಹೇಳಿದನು. ಯೇಸುಕ್ರಿಸ್ತನ ಬೋಧನೆಯು ಯಾವಾಗಲೂ ಸ್ವಯಂ ಆತ್ಮಸಾಕ್ಷಾತ್ಕಾರದ ವಿರುದ್ಧವಾಗಿತ್ತು. ವ್ಯಕ್ತಿಯ ಅಭಿವೃದ್ಧಿಯು ಆತನ ಉದ್ದೇಶವಾಗಿರಲಿಲ್ಲ; ಮನುಷ್ಯನನ್ನು ತನ್ನ ತದ್ರೂಪಿಯನ್ನಾಗಿ ಮಾಡುವುದೊಂದೇ ಆತನ ಉದ್ದೇಶವಾಗಿದೆ ಮತ್ತು ಸ್ವಯಂ ವ್ಯಯಗೊಳ್ಳುವಿಕೆಯು ದೇವಕುಮಾರನ ಸ್ವರೂಪವಾಗಿದೆ. ನಾವು ಯೇಸುಕ್ರಿಸ್ತ ನನ್ನು ನಂಬಿದರೆ, ಆತನಿಂದ ನಾವು ಏನು ಪಡೆದುಕೊಳ್ಳುತ್ತೇವೆಂಬುದು ಮುಖ್ಯವಲ್ಲ, ಆತನು ನಮ್ಮ ಮೂಲಕ ಏನು ಹೊರಗೆ ಸುರಿಯುತ್ತಾನೆನ್ನುವುದೇ ಗಣನಾರ್ಹವಾಗಿದೆ. ದೇವರು ನಮ್ಮನ್ನು ರಸಭರಿತವಾದ ದುಂಡು ದುಂಡಾದ ದ್ರಾಕ್ಷಾಫಲವನ್ನಾಗಿ ಮಾಡುವುದಷ್ಟೆ ಅಲ್ಲ , ನಮ್ಮನ್ನು ಹಿಚುಕಿ ಕಿವುಚಿ, ಮಧುರರಸವನ್ನು ನಮ್ಮೊಳಗಿಂದ ಹೊರತರುತ್ತಾನೆ. ಆತ್ಮೀಕವಾಗಿ ನಮ್ಮ ಜೀವಿತಗಳನ್ನು, ಯಶಸ್ಸಿನ ಮಟ್ಟದಲ್ಲಿ ಪ್ರಾಪಂಚಿಕವಾಗಿ ನಾವು ಅಳೆಯಲಾಗುವುದಿಲ್ಲ, ನಮ್ಮ ಮುಖಾಂತರ ದೇವರು ಯಾವುದನ್ನು ಹೊರಗೆ ಸುರಿಯುವನೋ ಅದನ್ನು ಅಳೆಯಲಾಗುವುದು, ಆದರೆ ಮಾನವರಾದ ನಮಗೆ ಅದನ್ನು ಅಳತೆ ಮಾಡಲು ಆಗುವುದಿಲ್ಲ.

ಅಂದು ಬೇಥಾನ್ಯದ ಮರಿಯಳು ಬಹು ಬೆಲೆಯುಳ್ಳ ಅಚ್ಚಜಟ ಮಾಂಸಿ ತೈಲದ ಭರಣಿಯನ್ನು ಒಡೆದು ಯೇಸುಕ್ರಿಸ್ತನ ತಲೆಯ ಮೇಲೆ ಸುರಿದಾಗ, ಆಕೆಯು ಮಾಡಿದ ಕಾರ್ಯಕ್ಕೆ ಏನಾದರೂ ವಿಶೇಷ ಸಂದರ್ಭವಿರಬಹುದೆಂಬುದನ್ನು ಬೇರೆಯವರೊಬ್ಬರೂ ಕಾಣಲಿಲ್ಲ; ಶಿಷ್ಯರು ಅದನ್ನು ವ್ಯರ್ಥವೆಂದರು - ''ಈ ತೈಲವನ್ನು ನಷ್ಟ ಮಾಡಿದ್ದೇಕೆ?... ಎಂದು ಹೇಳಿ ಆಕೆಗೆ ಛೀ ಹಾಕಿದರು'' (ಮಾರ್ಕ 14:4). ಆದರೆ ಆಕೆಯ ಶ್ರದ್ಧಾ ಭಕ್ತಿಗಳ ದುಂದುಗಾರಿಕೆಯ ಕ್ರಮವನ್ನು ಯೇಸುಕ್ರಿಸ್ತನು ಶ್ಲಾಘಿಸಿದನು ಮತ್ತು ತನ್ನ ಸುವಾರ್ತೆಯು ಈ ಲೋಕದಲ್ಲಿ ಎಲ್ಲೆಲ್ಲಿ ಸಾರಲ್ಪಡುವುದೋ ''ಅಲ್ಲಲ್ಲಿ ಈಕೆ ಮಾಡಿದ್ದನ್ನು ಸಹ ಈಕೆಯ ನೆನಪಿಗಾಗಿ ಹೇಳುವರು'' (ಮಾರ್ಕ 14:9) ಎಂದು ಹೇಳಿದನು. ನಮ್ಮಲ್ಲಿ ಯಾರಾದರೊಬ್ಬರು ಬೇಥಾನ್ಯದ ಮರಿಯಳು ಮಾಡಿದಂಥಾದನ್ನು ನಾವು ಮಾಡಿದರೆ, ಅಂದರೆ ಅಷ್ಟು ಎಷ್ಟು ಎಂದು ಮಿತವ್ಯಯ ಮಾಡದೆ ನಮ್ಮನ್ನು ನಾವು ಆತನಿಗಾಗಿ ಸಮರ್ಪಣೆ ಮಾಡಿಕೊಂಡಿದ್ದಾದರೆ ಯೇಸುಕ್ರಿಸ್ತನು ನಮ್ಮ ವಿಷಯ ದಲ್ಲಿ ಆನಂದ ಪರವಶತೆಯಿಂದ ತುಂಬಿ ತುಳುಕುತ್ತಾನೆ. ಪ್ರಪಂಚವು ರಕ್ಷಿಸಲ್ಪಡಲೆಂದು ದೇವರು ತನ್ನ ಒಬ್ಬನೇ ಮಗನ ರಕ್ತವನ್ನು ಹೊರಚೆಲ್ಲಿದನು. ''ದೇವರು ತನ್ನ ಮಗನ ಮುಖಾಂತರ ಲೋಕಕ್ಕೆ ರಕ್ಷಣೆಯಾಗ ಬೇಕೆಂದು ಆತನನ್ನು ಕಳುಹಿಸಿಕೊಟ್ಟನು'' (ಯೋಹಾ 3:17) ಆತನಿಗಾಗಿ ನಾವು ಸಹಾ ನಮ್ಮ ಜೀವಿತವನ್ನು ಚೆಲ್ಲಿ ಬಿಡಲು ಸಿದ್ಧರಿದ್ದೇವೆಯೋ ?

''ನನ್ನನ್ನು ನಂಬಿದವನ ಹೊಟ್ಟೆಯೊಳಗಿಂದ ಜೀವಕರವಾದ ನೀರಿನ ಹೊಳೆಗಳು ಹರಿಯುವವು'' ಅಂದರೆ ಈ ನೀರಿನಿಂದ ನೂರಾರು ಜೀವಿತಗಳು ನಿರಂತರವಾಗಿ ಹೊಸ ಜೀವಕಳೆಯನ್ನು ತುಂಬಿ ಕೊಳ್ಳುತ್ತಾರೆ. ನಮ್ಮ ಜೀವಿತದ ಭರಣಿಯನ್ನು ಒಡೆಯುವ ಸಮಯ ಈಗ ಬಂದಿದೆ, ಸ್ವಸಂತೃಪ್ತಿಯ ಅಪೇಕ್ಷೆಗಳನ್ನು ನಿಲ್ಲಿಸಿಬಿಟ್ಟು ನಮ್ಮ ಜೀವಿತಗಳನ್ನು ಆತನ ಮುಂದೆ ಸುರಿದು ಸಮರ್ಪಿಸಿ ಬಿಡೋಣ. ಇಂದು ಇದನ್ನು ಯಾರು ಮಾಡುತ್ತೀರಿ ಎಂದು ಯೇಸು ಪ್ರಭುವು ನಮ್ಮನ್ನು ಕೇಳುತ್ತಿದ್ದಾನೆ.

# ತೃಪ್ತಿದಾಯಕ ಜಲವನ್ನು ಸುರಿಸುವಿಕೆ

**''ಆದರೆ ಅವನು ಅದನ್ನು ಕುಡಿಯಲೊಲ್ಲದೆ ಯೆಹೋವನೇ ಈ ನೀರನ್ನು ಕುಡಿಯುವುದು ನನಗೆ ದೂರವಾಗಿರಲಿ ... ಇದನ್ನು ಕುಡಿಯುವುದೇ ಇಲ್ಲ ಎಂದು ಹೇಳಿ ಅದನ್ನು ಯೆಹೋವನ ಮುಂದೆ ಹೊಯ್ದನು'' - (2 ಸಮುವೇಲ 23:17)**

''ಬೆತ್ಲೆಹೇಮಿನ ಬಾವಿಯ ನೀರು'': ಇದರಂತಿರುವುದೇನಾದರೂ ಈಚೆಗೆ ನಿನಗೆ ಸಂಭವಿಸಿದೆಯೋ? ಪ್ರೇಮವೇ, ಗೆಳೆತನವೇ, ಆತ್ಮೀಕ ಆಶೀರ್ವಾದಗಳೇ? ನಿನ್ನ ಆತ್ಮನಾಶನದ ಅಪಾಯವಿದ್ದರೂ, ಸ್ವಯಂ ಸಂತೃಪ್ತಿಗಾಗಿ ಅವುಗಳನ್ನು ನಿನ್ನಲ್ಲಿರಿಸಿಕೊಂಡಿರುವಿಯಷ್ಟೇ ! ಹಾಗಿದ್ದರೆ, ಅವುಗಳನ್ನು ದೇವರ ಮುಂದೆ ಸುರಿಯಲು ನಿನಗಾಗುವುದಿಲ್ಲ. ಯಾವುದು ನಿನಗೆ ಸಂತೃಪ್ತಿ ನೀಡುವದೆಂದು ನೀನು ಅತ್ಯಾಶೆ ಪಡುತ್ತಿರು ವಿಯೋ, ಅದನ್ನು ದೇವರಿಗಾಗಿ ಶುದ್ಧೀಕರಿಸಿ ಪ್ರತ್ಯೇಕಿಸಿಡಲು ನಿನಗೆ ಆಗುವುದಿಲ್ಲ. ದೇವರ ಆಶೀರ್ವಾದ ವೊಂದರಲ್ಲಿ ನಿನ್ನಷ್ಟಕ್ಕೆ ನೀನೇ ಸಂತೃಪ್ತಿ ಹೊಂದುತ್ತಾ ಇರುವೆಯಾದರೆ, ಆ ಆಶೀರ್ವಾದವೇ ನಿನ್ನನ್ನು ಭ್ರಷ್ಟನನ್ನಾಗಿ ಮಾಡುತ್ತದೆ. ಅದನ್ನು ತ್ಯಾಗಾರ್ಪಣೆ ಮಾಡಿ ಬಿಡಬೇಕು. ಅದನ್ನು ಹೊರಗೆ ಸುರಿದು ಬಿಡು, ಹಾಗೆ ಮಾಡುವುದು ವಿವೇಚನೆ ಇಲ್ಲದ ವ್ಯರ್ಥ ವೆಚ್ಚವೆಂದು ನಿನ್ನ ಸಾಮಾನ್ಯ ಜ್ಞಾನವು ಹೇಳಿದರೂ, ನೀನು ಅದನ್ನು ಸುರಿದು ಬಿಡಬೇಕು.

ನನ್ನ ಸ್ವಾಭಾವಿಕ ಪ್ರೀತಿ ಮತ್ತು ನನ್ನ ಆತ್ಮೀಕ ಆಶೀರ್ವಾದಗಳನ್ನು ಯೇಸುಕ್ರಿಸ್ತನಿಗೆ ಹೇಗೆ ನಾನು ಸುರಿಯಬೇಕು? ಆತ್ಮ ನಿರ್ಧಾರಣವೊಂದೇ ಅದಕ್ಕಿರುವ ದಾರಿ. ದೇವರನ್ನು ಅರಿಯದಿರುವ ಒಬ್ಬ ವ್ಯಕ್ತಿಯು, ಬೇರೆ ಕೆಲವರು ಮಾಡುವ ಕೆಲವು ಕಾರ್ಯಗಳನ್ನು ಸ್ವೀಕರಿಸುವುದಿಲ್ಲ, ಯಾಕೆಂದರೆ ಅಂಥಾ ಕ್ರಿಯೆಗಳಿಗೆ ಪ್ರತಿಯಾಗಿ ಹಿಂತಿರುಗಿಸುವದು ಮಾನವನ ಸಾಮರ್ಥ್ಯಕ್ಕೆ ಮೀರಿದ ಸಂಗತಿಯಾಗಿರುತ್ತದೆ. ಅದರ ಮಹತ್ವವನ್ನು ನೀನು ಗ್ರಹಿಸಿದ ಕೂಡಲೇ ''ಇದು ನನಗೆ ಮೀರಿದ ಮಹತ್ವವೆಂದೂ, ಅದನ್ನು ಪಡಕೊಳ್ಳಲು ನಾನು ಯೋಗ್ಯನಲ್ಲವೆಂದೂ ತಿಳಿದು, ಅದು ಮನುಷ್ಯ ಮಾತ್ರದವರಿಗಲ್ಲವಾದ್ದರಿಂದ ಅದನ್ನು ಯೇಸುಕ್ರಿಸ್ತ ನಿಗೆ ಸುರಿದು ಸಮರ್ಪಿಸಬೇಕು.'' ಎಂದು ನೀನು ಹೇಳುವೆ. ಆಗ ಇವೇ ಸಂಗತಿಗಳೇ ''ಜೀವಕರವಾದ ನೀರಿನ ಹೊಳೆ''ಗಳಾಗಿ, ನನ್ನ ಸುತ್ತಮುತ್ತಲು ಹರಡಿಬಿಡುತ್ತವೆ. (ಯೋಹಾ 7:38) ಇವುಗಳನ್ನು ದೇವರಿಗೆ ಸುರಿಯುವ ತನಕ, ಅವು ನನ್ನಲ್ಲಿರುವಷ್ಟು ಕಾಲವೂ, ನಾನು ಯಾರ್‍ಯಾರನ್ನು ಪ್ರೀತಿಸುತ್ತಿರುವೆನೋ ಅವರನ್ನೂ, ನನ್ನನ್ನೂ, ಅವು ತೀವ್ರವಾದ ಅಪಾಯಕ್ಕೆ ಗುರಿ ಮಾಡುತ್ತವೆ, ಯಾಕೆಂದರೆ ಅವು ನನ್ನೊಳಗಿರುತ್ತಾ ವಿಪರೀತ ಮಟ್ಟದ ವಿಷಯಾಸಕ್ತಿಗಳಾಗಿ ಮಾರ್ಪಟ್ಟಿರುತ್ತವೆ. ಆದಾಗ್ಯೂ ಯಾವುದು ಅಸಹ್ಯ ಮತ್ತು ಕೆಟ್ಟದಲ್ಲವೋ ಅಂಥವುಗಳಲ್ಲಿ ನಾವು ತೀವ್ರಾಸಕ್ತಿಯುಳ್ಳವರಾಗಿರಬಲ್ಲೆವು. ಹೀಗಿರುವು ದರಿಂದ ನಮ್ಮ ಸ್ವಾಭಾವಿಕ ಪ್ರೀತಿಯು ಸಹಾ ಯೇಸುಸ್ವಾಮಿಯ ಮುಂದೆ ಸುರಿಯಲ್ಪಡಲು ಯೋಗ್ಯವಾಗುವಂಥ ಸ್ಥಿತ್ಯಂತರಕ್ಕೊಳಗಾಗಬೇಕು.

ಸದ್ಯದಲ್ಲಿ, ಕಹಿಯುಳ್ಳ ಮತ್ತು ಹದಗೆಟ್ಟ ಸ್ಥಿತಿಯಲ್ಲಿ ನೀನಿರುವುದಾದರೆ, ಅದಕ್ಕೆ ಕಾರಣ ದೇವರು ನಿನಗೆ ದಯಪಾಲಿಸಿದ ವರವೊಂದನ್ನು ಭದ್ರವಾಗಿ ನಿನ್ನೊಳಗೆ, ನಿನಗೋಸ್ಕರ ಹಿಡಿದಿಟ್ಟು ಕೊಂಡಿರುವಿ, ಅದನ್ನೇನಾದರೂ ಯೇಸುಕ್ರಿಸ್ತನ ಮುಂದೆ ಸುರಿದು ಬಿಟ್ಟಿದ್ದರೆ, ಇಂದು, ಪರಲೋಕದ ಹೊರಗೆ ಜೀವಿಸು ವವರಲ್ಲಿ ನೀನೇ ಅತ್ಯಂತ ಪ್ರೇಮಮಯ ವ್ಯಕ್ತಿಯಾಗಿರಬಹುದಿತ್ತು. ನೀನು ದೇವರ ಆಶೀರ್ವಾದಗಳನ್ನು ಸದಾಪಡೆದು ಕೊಳ್ಳುತ್ತಾ, ಅವುಗಳೊಳಗಿಂದ ಎಷ್ಟನ್ನಾದರೂ ಯೇಸುಕ್ರಿಸ್ತನಿಗೆ ಸುರಿದು ಸಮರ್ಪಿಸುವುದನ್ನು ನೀನಿನ್ನೂ ಕಲಿತುಕೊಂಡಿರದಿದ್ದರೇ ನಿನ್ನ ಮುಖಾಂತರ ಜನರು ತಮ್ಮ ಜೀವನ ದಿಗಂತಗಳನ್ನು ವಿಶಾಲ ಗೊಳಿಸಿಕೊಳ್ಳಲು ಆಗುವುದಿಲ್ಲ.

# ಆತನವರು

**''ಇವರು ನಿನ್ನವರಾಗಿದ್ದರು, ನೀನು ಇವರನ್ನು ನನಗೆ ಕೊಟ್ಟಿ'' - (ಯೋಹಾನ 17:6)**

''ನೀವು ನಿಮ್ಮ ಸ್ವಂತ ಸೊತ್ತಲ್ಲ'' (1 ಕೊರಿಂಥ 6:20) ಈ ಗ್ರಹಿಕೆಯನ್ನು ಪವಿತ್ರಾತ್ಮನು ಯಾರಲ್ಲಿ ಸಾಫಲ್ಯಗೊಳಿಸಿರುವನೋ ಅವನೇ ಮಿಷನರಿಯಾಗಿದ್ದಾನೆ. ''ನಾನು ನನ್ನ ಸ್ವಂತ ಸೊತ್ತಲ್ಲ'' ಎಂದು ಹೇಳಬೇಕೆಂದರೆ, ನಾನು ಅತ್ಯುನ್ನತ ಮಟ್ಟದ ಆತ್ಮೀಕ ಘನತೆಯನ್ನು ಸಾಧಿಸಿರುತ್ತೇನೆ. ದೈನಂದಿನ ಬದುಕು ಭರಾಟೆಯ ಚಟುವಟಿಕೆಗಳಲ್ಲಿ ತೊಡಗಿರುವ ಅಂಥಾ ಜೀವಿತದ, ಸತ್ಯ ಸ್ವಭಾವದಂತೆ ತಾನು ಮೆಚ್ಚಿದ ಬೇರೊಬ್ಬ ಪರಮ ಶ್ರೇಷ್ಠ ವ್ಯಕ್ತಿಗೆ ವಿವೇಚನಾ ಪೂರ್ವಕವಾಗಿ ತನ್ನನ್ನು ತಾನು ಸಮರ್ಪಿಸಿ ಕೊಂಡಿರುತ್ತದೆ. ಆ ಬೇರೊಬ್ಬ ವ್ಯಕ್ತಿ - ಯೇಸುಕ್ರಿಸ್ತನೇ. ನನ್ನ ಒಡೆಯನಲ್ಲಿ ನನ್ನನ್ನು ಒಂದು ಮಾಡುವ ಹಾಗೆ ಯೇಸುಕ್ರಿಸ್ತನ ಸ್ವಭಾವವನ್ನು ಪವಿತ್ರಾತ್ಮನು ನನಗೆ ವ್ಯಾಖ್ಯಾನಿಸಿ ತಿಳಿಯಪಡಿಸುವುದು. ಪ್ರದರ್ಶನ ಮಳಿಗೆಯಲ್ಲಿ ಪ್ರದರ್ಶಿತವನ್ನಾಗಿ ಇಡಲು ಏನೊ ಒಂದನ್ನು ಮಾಡುವುದಲ್ಲ. ನಮ್ಮ ಪ್ರಭುವು ತನ್ನ ಶಿಷ್ಯರಿಗೆ ಏನೆಲ್ಲವನ್ನೂ ಮಾಡಿದ್ದನೋ ಅದರ ಆಧಾರದ ಮೇಲೆ ಅವರಲ್ಲೊಬ್ಬರನ್ನೂ ಸುವಾರ್ತೆ ಸಾರಲು ಲೋಕದೊಳಗೆ ಕಳುಹಿಸಿಕೊಡಲಿಲ್ಲ. ತನ್ನ ಪುನರುತ್ಥಾನವಾಗುವವರೆಗೂ ಅದನ್ನು ಮಾಡಲಿಲ್ಲ. ಯೇಸುಕ್ರಿಸ್ತನು ಯಾರು ಎಂಬುದನ್ನು ಶಿಷ್ಯರು ಪವಿತ್ರಾತ್ಮನ ಬಲದಿಂದ ಮನಗಂಡ ನಂತರವೇ ಆತನು ಅವರಿಗೆ 'ಹೋಗಿರಿ' ಎಂದು ಹೇಳಿದನು.

''ಯಾವನಾದರೂ ನನ್ನ ಬಳಿಗೆ ಬಂದು ತನ್ನ ತಂದೆ ತಾಯಿ, ಹೆಂಡತಿ ಮಕ್ಕಳು, ಅಣ್ಣ ತಮ್ಮಂದಿರು, ಅಕ್ಕತಂಗಿಯರು, ಇವರನ್ನೂ , ತನ್ನ ಪ್ರಾಣವನ್ನು, ಸಹ ಹಗೆ ಮಾಡದಿದ್ದರೆ ಅವನು ನನ್ನ ಶಿಷ್ಯನಾಗಿರಲಾರನು''. (ಲೂಕ 14:26) ಅಂದರೆ ಇಂಥಾ ಮನುಷ್ಯನು ಒಳ್ಳೆಯವನೂ ಪ್ರಾಮಾಣಿಕನೂ ಆಗಿರುವುದಿಲ್ಲವೆಂದಲ್ಲ, ಆದರೆ ಯೇಸುಕ್ರಿಸ್ತನು ''ನನ್ನವನು'' ಎನ್ನುವ ಪದವನ್ನು ಅವನ ಮೇಲೆ ಬರೆಯುವುದಿಲ್ಲ. ಯೇಸುಕ್ರಿಸ್ತನು ಹೇಳುವ ಸಂಬಂಧಗಳಲ್ಲೊಂದು ಸ್ಪರ್ಧಾತ್ಮಕ ವಾದುದಾಗಿರಬಹುದು; ನನ್ನ ತಾಯಿಯ ಪ್ರೀತಿಯ ಮಗನಾಗಿರಲು ನಾನು ಮೆಚ್ಚುತ್ತೇನೆ ಅಥವಾ ನನ್ನ ಹೆಂಡತಿ ಅಥವಾ ನನಗೆ ನಾನು ಮಾತ್ರವೇ ಆಗಿರಲು ಮೆಚ್ಚಿರುತ್ತೇನೆ; ಆಗ ಯೇಸು ಕ್ರಿಸ್ತನು ಹೇಳುವನು - ''ನೀನು ನನ್ನ ಶಿಷ್ಯನಾಗಿರಲು ಆಗುವುದಿಲ್ಲ.'' ಹೀಗಾದರೆ ನಾನು ರಕ್ಷಣೆ ಹೊಂದುವುದಿಲ್ಲವೆಂಬುದು ಇದರ ಅರ್ಥವಲ್ಲ, ಆದರೆ ನೀನು ಆತನವ ನಾಗಿರಲಾರೆ ಎನ್ನುವುದೇ ಇದರ ಅರ್ಥ.

ಯೇಸು ಕ್ರಿಸ್ತನು, ತನ್ನ ಶಿಷ್ಯನನ್ನು ತನ್ನ ಸ್ವಂತ ಸ್ವತ್ತಾಗಿ ಮಾಡಿಕೊಳ್ಳುತ್ತಾನೆ ಮತ್ತು ಅವನಿಗಾಗಿ ತಾನು ಹೊಣೆಗಾರನಾಗಿರುತ್ತಾನೆ. ''ನೀವು ನನಗೆ ಸಾಕ್ಷಿಗಳಾಗಿರುವಿರಿ''. ನಾವು ಯೇಸುಸ್ವಾಮಿಗಾಗಿ ಏನಾದರೂ ಮಾಡಬೇಕು ಎನ್ನುವುದಕ್ಕಾಗಿ ಪವಿತ್ರಾತ್ಮನು ನಮ್ಮೊಳಗೆ ಬರುವುದಿಲ್ಲ, ಆದರೆ ನಾವು ಆತನಿಗೆ ಸಂಪೂರ್ಣ 'ಆನಂದಕ'ರಾಗಿರುವಂತೆ ಮಾಡಲು ಬರುತ್ತಾನೆ. ಮಿಷನರಿಯ ರಹಸ್ಯವೆಂದರೆ - ನಾನು ಆತನವನು, ದೇವರು ತನ್ನ ಕಾರ್ಯೋದ್ಯಮವನ್ನೆಲ್ಲಾ ನನ್ನ ಮುಖಾಂತರ ಸಾಧಿಸುವನು, ಆದುದರಿಂದ 'ಸಂಪೂರ್ಣವಾಗಿ ಆತನವನಾಗಿರು' ಎಂಬುದೇ.

**ಸೆಪ್ಟೆಂಬರ್ - 5**

# ಯೇಸುವಿನ ಸಂಗಡ ಎಚ್ಚರದಿಂದಿರುವಿಕೆ

### ''ನನ್ನ ಸಂಗಡ ಎಚ್ಚರವಾಗಿರ್ರಿ'' - (ಮತ್ತಾಯ 26:40)

''ನನ್ನ ಸಂಗಡ ಎಚ್ಚರವಾಗಿರ್ರಿ'' - ನಿನ್ನ ಸ್ವಂತ ವಿಚಾರ ದೃಷ್ಟಿಯಿಂದಲ್ಲವೇ ಅಲ್ಲ, ಆದರೆ ಸಂಪೂರ್ಣವಾಗಿ ನನ್ನೊಡನೆ ಎಚ್ಚರವಾಗಿರಬೇಕು. ಕ್ರಿಸ್ತೀಯ ಜೀವನದ ಪ್ರಥಮ ಹಂತಗಳಲ್ಲಿ ನಾವು ಯೇಸುಸ್ವಾಮಿಯ ಸಂಗಡ ಎಚ್ಚರದಿಂದಿರುವುದಿಲ್ಲ ಆದರೆ ನಾವು ಆತನಿಗೋಸ್ಕರ ಎಚ್ಚರ ವಾಗಿರುತ್ತೇವೆ. ಸತ್ಯವೇದವು ಪ್ರಕಟಪಡಿಸಿದ ಸತ್ಯಾರ್ಥಗಳಲ್ಲಿ, ನಮ್ಮ ಜೀವಿತದ ಎಂಥಾ ಸಮಯ ಸನ್ನಿವೇಶಗಳಲ್ಲಿಯೂ ನಾವು ಆತನ ಸಂಗಡ ಎಚ್ಚರದಿಂದಿರುವುದಿಲ್ಲ. ನಮ್ಮನ್ನು ತನ್ನೊಂದಿಗೆ ಗುರುತಿಸಿ ಕೊಳ್ಳುವ ವಿಶಿಷ್ಟ ಸ್ಥಳವಾದ ಗೆತ್ಸೇಮನೆಯೊಂದರ ಅನುಭವ ಹೊಂದಲು, ನಮ್ಮನ್ನು ಕರೆದೊಯ್ಯಲು ಆತನು ಪ್ರಯತ್ನಿಸುತ್ತಿದ್ದಾನೆ, ಆದರೆ ನಾವು ಆತನ ಸಂಗಡ ಅಲ್ಲಿಗೆ ಹೋಗುವುದಿಲ್ಲ; ''ಬೇಡ ಪ್ರಭುವೇ, ಇದರ ಉದ್ದೇಶವೇನೆಂಬುದನ್ನು ನಾನು ಕಾಣುತ್ತಿಲ್ಲ, ಅದು ತುಂಬಾ ಕಹಿಯಾಗಿದೆ. ವೇದನೆಯಿಂದ ತುಂಬಿದೆ'' ಎಂದು ಹೇಳುತ್ತೇವೆ. ಇಂಥಾ ನಿಗೂಢ ವ್ಯಕ್ತಿಯ ಸಂಗಡ ನಾವು ಹೇಗೆ ತಾನೆ ಎಚ್ಚರದಿಂದಿರಲು ಸಾಧ್ಯ? ಯೇಸುಸ್ವಾಮಿಯು ಯಾವ ಕಾರಣದಿಂದ, ಅಷ್ಟೊಂದು ಶ್ರಮೆಯನ್ನನುಭವಿಸುತ್ತಿರುವ ನೆಂಬುದು ನಮಗೆ ತಿಳಿಯದೇ ಇರುವಾಗಲೂ, ಆತನ ಗೆತ್ಸೇಮನೆಯಲ್ಲಿ, ಆತನ ಸಂಗಡವೇ ಎಚ್ಚರ ದಿಂದಿರಲು ಅವಶ್ಯವಿರುವ ಮಟ್ಟಿಗಾದರೂ ನಾವು ಆತನನ್ನು ಅರಿತು ಕೊಳ್ಳುವುದು ಹೇಗೆ ? ಮೊದಲನೇದಾಗಿ, ಆತನ ಸಂಗಡ ಎಚ್ಚರವಾಗಿರುವುದು ಹೇಗೆಂಬುದನ್ನೇ ನಾವು ಅರಿಯೆವು; ಆದರೆ ಯೇಸುಸ್ವಾಮಿಯೇ ನಮ್ಮ ಸಂಗಡ ಎಚ್ಚರವಾಗಿರುತ್ತಾನೆಂದೇ ಈವರೆಗೂ ನಮಗಿರುವ ಕಲ್ಪನೆ.

ಶಿಷ್ಯರು ತಮ್ಮ ಸ್ವಾಭಾವಿಕ ಶಕ್ತಿಯ ಅಂತಿಮ ಮಿತಿಯವರೆಗೆ ಯೇಸುಸ್ವಾಮಿಯನ್ನು ಪ್ರೀತಿಸಿದ್ದರು; ಆದರೂ ಅವರು ಆತನ ಉದ್ದೇಶಾರ್ಥವನ್ನು ಗ್ರಹಿಸಿಕೊಳ್ಳಲಿಲ್ಲ. ಗೆತ್ಸೇಮನೆ ತೋಟದಲ್ಲಿ ತಮ್ಮದೇ ಆದ ದುಃಖ ಭಾರದಿಂದ ನಿದ್ರೆ ಮಾಡಿದ್ದರು ಮತ್ತು ಆತನ ಸಂಗಡ ಮೂರುವರ್ಷಗಳ ನಿಕಟ ಅನ್ಯೋನ್ಯತೆಯ ಕಾಲದ ಕೊನೆಯಲ್ಲಿ, ಅವರೆಲ್ಲರೂ ''ಆತನನ್ನು ಬಿಟ್ಟು ಓಡಿ ಹೋದರು'' (ಮತ್ತಾಯ 26:56).

''ಅವರೆಲ್ಲರೂ ಪವಿತ್ರಾತ್ಮ ಭರಿತರಾಗಿ'' (ಅ.ಕೃ. 2:4) ಅದೇ ಶಿಷ್ಯರು! ಆದರೆ ಈ ಮಧ್ಯದಲ್ಲಿ, ಏನೋ ಅದ್ಭುತವಾದ ಸಂಗತಿ ಸಂಭವಿಸಿತು - ನಮ್ಮ ಪ್ರಭುವಿನ ಮರಣ, ಪುನರುತ್ಥಾನ ಮತ್ತು ದಿವಾ ರೋಹಣ ಹಾಗೂ ಶಿಷ್ಯರೊಳಗೆ ಪವಿತ್ರಾತ್ಮನ ಆಕ್ರಮಣವಾಗಿತ್ತು. ನಮ್ಮ ಸ್ವಾಮಿಯವರು ಹೇಳಿಯೇ ಇದ್ದರು - ''ಪವಿತ್ರಾತ್ಮ ನಿಮ್ಮ ಮೇಲೆ ಬರಲು ನೀವು ಬಲವನ್ನು ಹೊಂದಿ'' (ಅ.ಕೃ. 1:8) ಅದರ ಅರ್ಥ - ಈಗ ಅವರು ಬಲಗೊಂಡು ತಮ್ಮ ಉಳಿದ ಜೀವಿತದುದ್ದಕ್ಕೂ ಆತನ ಸಂಗಡ ಎಚ್ಚರದಿಂದಿರುವುದನ್ನು ಕಲಿತಿದ್ದರು.

# ದೂರ ತಲುಪುವ ಜೀವಕರ ನೀರಿನ ಹೊಳೆಗಳು

**''ಜೀವಕರವಾದ ನೀರಿನ ಹೊಳೆಗಳು'' - (ಯೋಹಾ 7:38)**

ನದಿಯು ತನ್ನ ಉಗಮ ಸ್ಥಾನದಿಂದ ತನಗೆ ಅರಿವಿರದ ಸ್ಥಳಗಳಿಗೆ ಹರಿದು ಮುಟ್ಟುತ್ತದೆ, ಯೇಸು ಸ್ವಾಮಿಯು ಹೇಳುತ್ತಾನೆ - ನಾವು ಆತನ ಪರಿಪೂರ್ಣತೆಯನ್ನು ಪಡೆದಾಗ ದೃಷ್ಠಿಗೆ ಗೋಚರಿಸುವ ನಮ್ಮ ಜೀವಿತವು ಎಷ್ಟೇ ಅಲ್ಪ ಪ್ರಮಾಣದ್ದಾಗಿರಲಿ, ಅದರೊಳಗಿಂದ ಹೊರಟ ನೀರಿನ ಹೊಳೆಗಳು, ನಿಮಗರಿವಿರದ ಭೂಮಿಯ ಕಟ್ಟ ಕಡೆಯ ಭಾಗಗಳಿಗೆ ಹರಿದು, ಅಲ್ಲಿ ಆಶೀರ್ವಾದ ಕರವಾಗಿರುತ್ತವೆ. ಈ ಹೊರಹರಿವಿ ನೊಂದಿಗೆ ನಮ್ಮ ಸಂಬಂಧಗಳೇನೂ ಇರುವುದಿಲ್ಲ - ''ದೇವರು ಮೆಚ್ಚುವ ಕೆಲಸ ... ನೀವು ನಂಬುವುದೇ'' (ಯೋಹಾ 6:29) ಅಂಥಾ ಒಂದು ಆತ್ಮವು ಇತರರಿಗಾಗಿ ಅದೆಷ್ಟು ಹೆಚ್ಚಾಗಿ ಆಶೀರ್ವಾದಕರವಾಗಿದೆ ಎಂಬುದನ್ನು ದೇವರು ಅದೇ ಆತ್ಮಕ್ಕೆ ತೋರ್ಪಡಿಸುವುದು ಬಹು ವಿರಳ.

ನದಿಯ ಹರಿಯುವಿಕೆಯು, ಪಟ್ಟು ಬಿಡದೆ ಜಯಪ್ರದವಾಗಿ ನಿರಂತರವಾಗಿ ಹರಿಯುವುದಲ್ಲದೆ, ಎಲ್ಲಾ ಅಡೆತಡೆಗಳನ್ನು ದಾಟಿ ಮುಂದೆ ಸಾಗುತ್ತದೆ, ಸ್ವಲ್ಪ ಅವಧಿಯವರೆಗೆ ಏಕಪ್ರಕಾರವಾಗಿ ತನ್ನ ಮಾರ್ಗ ದಲ್ಲಿ ಹರಿಯುತ್ತದೆ, ಆ ಮೇಲೆ ಅಡ್ಡಿಯೊಂದನ್ನು ಎದುರಿಸುತ್ತದೆ. ಅಲ್ಲಿ ಸ್ವಲ್ಪ ಕಾಲ ತಡೆಹಿಡಿಯಲ್ಪಡುತ್ತದೆ, ಬೇಗನೇ ಆ ಅಡ್ಡಿಯಿಂದ ಹೊರಗಿನಿಂದ ಅದನ್ನು ಸುತ್ತಿ ದಾರಿ ಮಾಡಿಕೊಂಡು ಹರಿದು ಮುಂದೆ ಸಾಗುತ್ತದೆ ಅಥವಾ ಕೆಲವೊಮ್ಮೆ ಹಲವು ಮೈಲುಗಳಷ್ಟು ದೂರದವರೆಗೆ ಕಣ್ಮರೆಯಾಗಿ ಗುಪ್ತಗಾಮಿನಿಯಾಗುತ್ತದೆ. ಆದರೆ ಶ್ರೀಘ್ರದಲ್ಲಿಯೇ ಹಿಂದಿಗಿಂತಲೂ ವಿಶಾಲವಾಗಿ ಮೈಹರವಿಕೊಂಡು ಭವ್ಯವಾಗಿ ಹೊರ ಬೀಳುತ್ತದೆ. ದೇವರು ಕೆಲವರ ಜೀವಿತಗಳನ್ನು ಹೀಗೆಯೇ ಉಪಯೋಗಿಸುತ್ತಿರು ವುದನ್ನು ನೀವು ಕಾಣಬಹುದು, ಆದರೆ ಈಗ ನಿನ್ನ ಜೀವಿತದಲ್ಲೊಂದು ಅಡ್ಡಿಯುಂಟಾಗಿದೆ ಮತ್ತು ಅಲ್ಲಿ ನೀನೇನೂ ಉಪಯೋಗವಿಲ್ಲವೆಂಬಂತೆ ಕಾಣಿಸುತ್ತಿರುವಿ. ಹಾಗಿದ್ದರೆ ಉಗಮದ ಮೂಲಸ್ಥಾನಕ್ಕೆ ಹೆಚ್ಚು ಗಮನವನ್ನೀಯ ಬೇಕು. ದೇವರು ಆ ಅಡ್ಡಿಯನ್ನು ಸುತ್ತಿ ಬಳಸು ದಾರಿ ಮಾಡಿ ನಿನ್ನನ್ನು ಮುಂದಕ್ಕೆ ಸಾಗಿಸುವನು ಇಲ್ಲವೆ ಆ ಅಡ್ಡಿಯನ್ನೇ ನಿರ್ಮೂಲ ಮಾಡಿ ಬಿಡುತ್ತಾನೆ. ದೇವರ ಆತ್ಮನ ಹೊಳೆಯು ಎಲ್ಲಾ ಅಡೆತಡೆಗಳನ್ನು ದಾಟಿ ಮುಂದೆ ಸಾಗಿ ಬಿಡುತ್ತದೆ. ಅಡೆ ತಡೆಯ ಮೇಲಾಗಲೀ, ನಿನ್ನ ಸಂಕಷ್ಟದ ಮೇಲಾಗಲೀ ನಿನ್ನ ಕಣ್ಣುಗಳನ್ನು ನೆಡಬೇಡ. ಹೊಳೆಯ ಉಗಮ ಸ್ಥಾನದೊಂದಿಗೆ ಸದಾ ಯೋಗ್ಯ ಸ್ಥಿತಿಯಲ್ಲಿರಬೇಕೆನ್ನುವುದು ನಿನ್ನ ಸ್ಮರಣೆಯಲ್ಲಿದ್ದರೆ, ನಿನ್ನ ಮೂಲಕ ಏಕ ಪ್ರಕಾರವಾಗಿ ಹರಿಯುತ್ತಿರುವ ಪ್ರವಾಹಕ್ಕೆ ಎದುರಾಗುವ ಅಡೆತಡೆಗಳು ಅದಕ್ಕೆ ಕೇವಲ ಅನಾಸ್ಥೆಯ ವಿಷಯ ವಾಗಿರುತ್ತದೆ. ನಿನ್ನ ಮತ್ತು ಯೇಸುಕ್ರಿಸ್ತನ ನಡುವೆ ಯಾವದೇ ಅಡ್ಡಿ ಅಭ್ಯಂತರಗಳು ನುಸುಳಲೂ ಅವಕಾಶ ವನ್ನೀಯಬೇಡ, ಅದು ನಿನ್ನ ಭಾವೋದ್ವೇಗವೇ ಆಗಿರಲಿ, ನಿನ್ನ ಅನುಭವವೇ ಆಗಿರಲಿ, ಅದ್ಯಾವುದೂ ನಿನ್ನನ್ನು ಪರಮ ಮಹತ್ವದ ಉಗಮದಿಂದ ದೂರವಿರಿಸಕೂಡದು.

ಗುಣಪಡಿಸುವ ಮತ್ತು ಬಹುದೂರಕ್ಕೆ ಹರಿಯುತ್ತಿರುವ ಹೊಳೆಗಳು ನಮ್ಮ ಆತ್ಮದಾಳದಲ್ಲಿ ಶುದ್ಧಿ ಗೊಂಡು ಪೋಷಿಸಲ್ಪಡುವುದನ್ನು ಯೋಚಿಸು! ದೇವರು ನಿಮ್ಮ ಹೃದಯಗಳಲ್ಲಿ ಅತ್ಯಮೋಘ ಸತ್ಯಗಳನ್ನು ಪ್ರಕಟ ಪಡಿಸಲಾರಂಭಿಸಿರುವನು, ಆತನು ಹೀಗೆ ಪ್ರಕಟಪಡಿಸುತ್ತಿರುವ ಪ್ರತಿಯೊಂದು ಅಂಶವೂ ಆತನು ನಮ್ಮ ಮೂಲಕ ಹರಿಯುವ ನದಿಯ ಪಾತ್ರವನ್ನು ವೃದ್ಧಿಸಿ ಬಲಪಡಿಸುವ ಸೂಚನೆಯಾಗಿದೆ. ನೀನು ಯೇಸು ಸ್ವಾಮಿಯನ್ನು ನಂಬಿದ್ದರೆ, ಪರರಿಗಾಗಿ ರಭಸ ಪ್ರವಾಹದೋಪಾದಿಯ ಆಶೀರ್ವಾದಗಳನ್ನು ದೇವರು ನಿನ್ನೊಳಗೆ ವೃದ್ಧಿಸಿ ಪೋಷಿಸುವುದನ್ನು ಕಾಣುವೆ.

# ಆಶೀರ್ವಾದದ ಬುಗ್ಗೆಗಳು

**''ನಾನು ಅವನಿಗೆ ಕೊಡುವ ನೀರು ಅವನಲ್ಲಿ ಉಕ್ಕುವ ಒರತೆಯಾಗಿರುವುದು'' - (ಯೋಹಾ 4:14)**

ಯೇಸುಕ್ರಿಸ್ತನು ಇಲ್ಲಿ ಚಿತ್ರಿಸುತ್ತಿರುವುದು ಒಂದು ನೀರಿನ ಕಾಲುವೆಯ ಚಿತ್ರವಲ್ಲ, ಅದು ಉಕ್ಕುವ ಒರತೆಯ ಚಿತ್ರವಾಗಿದೆ. ''ತುಂಬಿಕೊಂಡವರಾಗಿರಬೇಕು'' (ಫಿಲಿ 1:11) ಯೇಸುಕ್ರಿಸ್ತನೊಂದಿಗಿರುವ ಶ್ರೇಷ್ಠ ಬಾಂಧವ್ಯದ ಸುಮಧುರತೆಯು ಎಷ್ಟು ಧಾರಾಳವಾಗಿ ಕ್ರಿಸ್ತಭಕ್ತನಿಗೆ ಅನುಗ್ರಹಿಸಲ್ಪಟ್ಟಿದೆಯೋ, ಅಷ್ಟೇ ಧಾರಾಳವಾಗಿ ಅವನೊಳಗಿಂದ ಸುಮಧುರತೆಯು ಹೊರಗೆ ಹರಿಯುತ್ತದೆ. ಒಂದು ವೇಳೆ ನಿನ್ನಲ್ಲಿರುವ ಆತನ ಜೀವಿತವು ಹೊರಗೆ ಹರಿದು ಸಾಗಬೇಕಾದ ದಾರಿಯಲ್ಲಿ ಮುಂದೆ ಸಾಗದಿದ್ದರೆ ಅದಕ್ಕಾಗಿ ನಿನ್ನನ್ನೇ ದೂಷಿಸಬೇಕಾಗುತ್ತದೆ; ಒಂದು ಅಡೆತಡೆಯು ಹರಿವನ್ನು ತಡೆದುಬಿಟ್ಟಾಗ, ಹರಿವಿನ ಉಗಮ ಸ್ಥಾನದ ಮೇಲೆ ನಿನ್ನ ಗಮನವನ್ನೆಲ್ಲಾ ಇರಿಸಿದರೆ ನೀನು ಆಶೀರ್ವಾದವನ್ನು ಹೊಂದವಿ ಎಂದು ಯೇಸುಕ್ರಿಸ್ತನು ಹೇಳಿದ್ದುಂಟೋ? - ಇಲ್ಲ, ಇಲ್ಲ, ಉಗಮ ಸ್ಥಾನದ ಮೇಲೆ ನಿನ್ನ ನಿಗವೆಲ್ಲಾ ಇದ್ದರೆ, ನಿನ್ನೊಳಗಿಂದ ''ಜೀವಕರವಾದ ನೀರಿನ ಹೊಳೆಗಳು ಹರಿಯುವವು''. ಅದುಮಿ ಹಿಡಿಯಲಾಗದ ಜೀವಿತಗಳವು. (ಯೋಹಾ 7:38)

ಪ್ರತಿಯೊಬ್ಬರಿಗೂ ಆಶೀರ್ವಾದಕರವಾಗಿರುವಂತೆ ಯೇಸುಕ್ರಿಸ್ತನೇ ಜೀವಕರವಾದ ನೀರಿನ ನದಿಯಾಗಿ ಹರಿಯುವ ಮೂಲ ಬುಗ್ಗೆಗಳು ನಾವೇ ಆಗಿರಬೇಕು. ನಮ್ಮಲ್ಲಿ ಕೆಲವರು ಮೃತ್ಯಸಮುದ್ರದಂತೆ ಇರುತ್ತಾರೆ, ಅದು ಹರಿದು ಬರುವ ನೀರನ್ನು ಸದಾ ತನ್ನೊಳಗೆ ಸೇರಿಸಿಕೊಳ್ಳುತ್ತಾ ಇರುತ್ತದೆ ಮತ್ತು ಅದನ್ನು ಹೊರಗೆ ಹರಿಯಲು ಬಿಡುವುದೇ ಇಲ್ಲ. ನಾವು ಸಹಾಹಾಗಿದ್ದೇವೆಂದರೆ, ನಾವು ಯೇಸುಕ್ರಿಸ್ತನಲ್ಲಿ ಯೋಗ್ಯ ಬಾಂಧವ್ಯವನ್ನು  ಹೊಂದಿರುವುದಿಲ್ಲ. ಯೇಸುಕ್ರಿಸ್ತನಿಂದ ನಾನು ಏನಾದರೂ ಪಡೆದುಕೊಂಡಿರುವುದೆಷ್ಟು ಖಚಿತವೋ ಅಷ್ಟೇ ಖಚಿತವಾಗಿ ಆತನು ಅವೆಲ್ಲವುಗಳನ್ನು ನಮ್ಮೊಳಗಿಂದ ಹೊರಗೆ ಹರಿಯುವಂತೆ ಮಾಡುವನು, ಹೊರಹರಿವಿನ ಪ್ರಮಾಣವು ಒಳಹರಿವಿಗಿಂತ ಕಡಿಮೆ ಇದ್ದರೆ, ನನ್ನ ಮತ್ತು ಯೇಸುಕ್ರಿಸ್ತನ ಸಂಬಂಧದಲ್ಲಿ ಏನೋ ನ್ಯೂನ್ಯತೆ ಇರುತ್ತದೆ. ಯೇಸುಕ್ರಿಸ್ತನಲ್ಲಿಟ್ಟಿರುವ ನಿನ್ನ ನಂಬಿಕೆಯನ್ನು ಅಡ್ಡಪಡಿಸುವುದೇನಾದರೂ ಇದೆಯೋ? ಏನೂ ಇಲ್ಲದಿದ್ದರೆ, ಯೇಸುಸ್ವಾಮಿಯವರೆನ್ನುತ್ತಾರೆ'' ನಿನ್ನ ಹೊಟ್ಟೆಯೊಳಗಿಂದ ಜೀವಕರವಾದ ನೀರಿನ ಹೊಳೆಗಳು ಹರಿಯುತ್ತವೆ''-ಆಶೀರ್ವಾದಗಳನ್ನು ಮುಂದಕ್ಕೆ ಸಾಗಣೆ ಮಾಡುವುದಲ್ಲ - ಅಂದರೆ ಆಶೀರ್ವಾದಗಳನ್ನು ಸಾಗಿಸಿ ಇತರರಿಗೆ ಕೊಡುವುದಕ್ಕೆ ಅಥವಾ ನಿನ್ನ ಅನುಭವಗಳನ್ನೇ ಇತರರೊಂದಿಗೆ ಹಂಚಿಕೊಳ್ಳುವದಕ್ಕಾಗಿರುವ ಸಾಗಣೆಯ ಹೊಳೆಗಳು ಇವಲ್ಲ. ಅದು ಏಕ ಪ್ರಕಾರವಾಗಿ ಹರಿಯುವ ನದಿ. ಧಾರೆಯ ಉಗಮ ಸ್ಥಾನದ ಮೇಲೆ ದೃಷ್ಟಿಯನ್ನು ನೆಟ್ಟಿರಬೇಕು, ನಿನ್ನ ಮತ್ತು ಆತನೊಡನಿರುವ ನಿನ್ನ ಸಂಬಂಧವನ್ನು, ಆತನ ಮೇಲಿಟ್ಟಿರುವ ನಿನ್ನ ನಂಬಿಕೆಯನ್ನು ಎಚ್ಚರದಿಂದ ಕಾಪಾಡಿಕೊಳ್ಳಬೇಕು, ಆಗ ಬೇರೆಯವರ ಜೀವಿತಕ್ಕೋಸ್ಕರ ನದಿಯು ಏಕ ಪ್ರಕಾರವಾಗಿ ಅಲ್ಲಿ ಹರಿಯುತ್ತದೆ, ಧಾರೆಯು ಮೃತಿಗೊಳ್ಳುವುದಿಲ್ಲ ಮತ್ತು ಬತ್ತಿಹೋಗುವುದಿಲ್ಲ.

ವೈಯಕ್ತಿಕವಾಗಿ ದೇವರನ್ನು ನಂಬಿದವನೊಬ್ಬನೊಳಗಿಂದ ಈ ನದಿಗಳು ಹೊರಗೆ ಹರಿಯಲು ಆರಂಭವಾಗಲೇಬೇಕೆಂಬ ಹೇಳಿಕೆಯು ಹದ್ದುಮೀರಿದ ಹೇಳಿಕೆಯಲ್ಲವೇ? ನಿನ್ನನ್ನು  ನೀನೇ ದೃಷ್ಟಿಸಿಕೊಂಡು ''ನಾನು ಹೊಳೆಗಳನ್ನೇ ಕಾಣುತ್ತಿಲ್ಲ'' ಎಂದು ನೀನು ಹೇಳುವಿಯೋ?, ''ನಾನು ಯಾರು'' ಎಂಬ ದೃಷ್ಟಿಯಿಟ್ಟುಕೊಂಡು ನಿನ್ನನ್ನು ನೀನು ದೃಷ್ಟಿಸಿಕೊಳ್ಳಬೇಡ. ದೈವ ಕಾರ್ಯದ ಇತಿಹಾಸ ವನ್ನು ನೀನು ಗಮನಿಸಿದ್ದಾದರೆ, ದೇವರ ಕಾರ್ಯವು ಅಸ್ಪಷ್ಟವಾಗಿರುವ ಅಜ್ಞಾತವಾಗಿರುವ, ಅಲಕ್ಷ್ಯಕ್ಕೊಳಗಾಗಿರುವ ನೆಲೆಯಿಂದಲೇ ಉಗಮವಾಗಿರುತ್ತದೆ.

# ಅದನ್ನು ನೀನೆ ಸಾಧಿಸು

ಕೆಲವು ಸಂಗತಿಗಳನ್ನು ದೃಢ ಮನಸ್ಸಿನಿಂದ ಕೆಡವಿಬಿಡು.

**''ದೇವಜ್ಞಾನವನ್ನು ವಿರೋಧಿಸುವುದಕ್ಕೆ ಏರಿಸಲ್ಪಟ್ಟಿರುವ ಉನ್ನತವಾದ ಎಲ್ಲಾ ಕೊತ್ತಲುಗಳನ್ನು ಕೆಡವಿಹಾಕಿ'' - (2 ಕೊರಿ 10:5)**

ಪಾಪದಿಂದ ಬಿಡುಗಡೆ ಅದು ಮಾನವನ ಸಹಜ ಸ್ವಭಾವದಿಂದ ಬಿಡುಗಡೆ ಅಲ್ಲ. ಮನುಷ್ಯ ಸ್ವಭಾವದಲ್ಲಿರುವ ಕೆಲವು ಸಂಗತಿಗಳು ಉದಾಹರಣೆಗಾಗಿ, ಪೂರ್ವಗ್ರಹ ವೆಂಬಂಥ ಒಂದು ಸಂಗತಿ, ಇದನ್ನು ಭಕ್ತನಾದವನು ಅಲಕ್ಷ್ಯ ಮಾಡುವುದರ ಮೂಲಕ ನಾಶಪಡಿಸಬೇಕು; ಬೇರೆ ಕೆಲವು ಸಂಗತಿಗಳನ್ನು ದೇವರಾತ್ಮನು ಅನುಗ್ರಹಿಸುವ ದೈವಬಲದಿಂದ ನಾಶಪಡಿಸಬೇಕು. ಕೆಲವು ಬೇರೆ ಸಂಗತಿಗಳೂ ಅಲ್ಲಿವೆ, ಅವುಗಳ ವಿಚಾರವಾಗಿ ನಾವು ಹೋರಾಡ ಬಾರದು, ಅವುಗಳ ವಿಷಯದಲ್ಲಿ ದೇವರು ಮಾಡುವ ರಕ್ಷಣಾ ಕಾರ್ಯವನ್ನು ನಾವು ಮೌನದಿಂದಿದ್ದು ಗಮನಿಸುತ್ತಿರಬೇಕು; ''ನೀವು ಸುಮ್ಮನೆ ನಿಂತುಕೊಂಡಿದ್ದು ಯೆಹೋವನು... ರಕ್ಷಿಸುವ ರೀತಿಯನ್ನು ನೋಡಿರಿ.'' (ವಿ.ಕಾ. 14:13). ದೇವಜ್ಞಾನಕ್ಕೆ ಪ್ರತಿರೋಧವಾಗಿ ಎಬ್ಬಿಸಲ್ಪಟ್ಟಿರುವ ಪ್ರತಿಯೊಂದು ಸಿದ್ಧಾಂತದ, ಪ್ರತಿಯೊಂದು ಪರಿಕಲ್ಪನೆಯ ಮಣ್ಣುದಿಬ್ಬಗಳನ್ನು ದೇವರ ಶಕ್ತಿಯನ್ನು ಪಡೆದು ದೃಢ ನಿರ್ಧಾರದಿಂದ ಕೆಡವಿ ಹಾಕಬೇಕು (2 ಕೊರಿ 10:4). ಆದರೆ ಅವುಗಳನ್ನೆಂದಿಗೂ ಮಾನವನ ಶಕ್ತಿ ಶ್ರಮಗಳ ಮೂಲಕ, ಇಲ್ಲವೇ ಸಂಧಾನಗಳ ಮೂಲಕ ಕೆಡವಲು ಪ್ರಯತ್ನಿಸಬಾರದು.

ದೇವರು ನಮ್ಮ ಸಹಜ ಸ್ವಭಾವವನ್ನು ಬದಲಾಯಿಸಿದಾಗ ಮತ್ತು ನಾವು ಪವಿತ್ರೀಕರಣದ ಅನುಭವದಲ್ಲಿ ಪ್ರವೇಶಿಸಿದಾಗ ಮಾತ್ರವೇ ಹೋರಾಟವು ಆರಂಭವಾಗುತ್ತದೆ. ಈ ಯುದ್ಧವು ಪಾಪದ ವಿರುದ್ಧ ಅಲ್ಲ ; ಪಾಪದೊಡನೆ ನಾವೆಂದಿಗೂ ಸೆಣಸಲಾರೆವು. ವಿಮೋಚನಾ ಕಾರ್ಯದಲ್ಲಿ ಯೇಸು ಕ್ರಿಸ್ತನು ಪಾಪವನ್ನು ಎದುರಿಸುತ್ತಾನೆ. ನಮ್ಮ ಸಂಘರ್ಷಣೆಯು ನಮ್ಮ ಸ್ವಾಭಾವಿಕ ಜೀವಿತವನ್ನು ಆತ್ಮೀಕ ಜೀವಿತಕ್ಕೆ ಪರಿವರ್ತಿಸುವ ದಾರಿಯುದ್ದಕ್ಕೂ ನಡೆಯುತ್ತದೆ ಮತ್ತು ಸುಲಭದಲ್ಲಿ ಈ ಹೋರಾಟವು ಮುಗಿಯುವುದಿಲ್ಲ. ಹಾಗೆ ಮುಗಿದು ಹೋಗುವುದು ದೇವರ ಇರಾದೆಯೂ ಅಲ್ಲಾ. ಅನುಕ್ರಮವಾದ ನೈತಿಕ ಆಯ್ಕೆಗಳ ಮೂಲಕ ಈ ಯುದ್ಧವನ್ನು ಮುಗಿಸಬೇಕು. ಗುಣ ಚಾರಿತ್ರೆಯ ಭಾವದಲ್ಲಿ ದೇವರು ನಮ್ಮನ್ನು ಶುದ್ಧರನ್ನಾಗಿ ಮಾಡುವುದಿಲ್ಲ. ತನ್ನ ಮುಂದೆ ನಮ್ಮನ್ನು ಸಂಪೂರ್ಣವಾಗಿ ನಿರ್ದೋಷರೂ, ಮುಗ್ಧರೂ ಆಗಿರುವ ಭಾವದಲ್ಲಿ ಶುದ್ಧರನ್ನಾಗಿಸುತ್ತಾನೆ. ಅನಂತರ ನಾವು ಮಾಡುವ ನೈತಿಕ ಆಯ್ಕೆಗಳ ಮೂಲಕ ಇಂಥಾ ಮುಗ್ಧತೆಯನ್ನು ದೈವೀಕ ಗುಣಚಾರಿತ್ರ್ಯವನ್ನಾಗಿ ನಾವು ಮಾರ್ಪಡಿಸಬೇಕು. ಆಳವಾಗಿ ಹೂತುಕೊಂಡಿರುವ ನಮ್ಮ ಸ್ವಾಭಾವಿಕ ಜೀವಿತವು, ಈ ರೀತಿಯ ನೈತಿಕ ಆಯ್ಕೆಗಳಿಗೆ ಸದಾ ಹಗೆತನ ತೋರಿಸುತ್ತದೆ. ಅಂದರೆ ಇಂಥಾ ಜೀವಿತವೇ ದೇವ ಜ್ಞಾನದ ವಿರುದ್ಧ ದೊಡ್ಡ ದಿಬ್ಬಗಳನ್ನು ಏರಿಸುತ್ತದೆ. ಇವುಗಳನ್ನು ಎದುರಿಸಲಾರದೆ, ದೇವರ ರಾಜ್ಯಕ್ಕೆ ನಾವು ಸಲ್ಲದವರೆಂದು ಹೇಳುತ್ತಾ, ಹಿಂತಿರುಗಿ ಹೊರಟು ಹೋಗಬೇಕು ಇಲ್ಲವೇ ದೃಢ ನಿರ್ಧಾರ ದಿಂದ ಅದನ್ನು ಕೆಡವಿಹಾಕುವುದರ ಮೂಲಕ ಯೇಸುಕ್ರಿಸ್ತನು ಇನ್ನೋರ್ವ ಮಗನನ್ನು ಪ್ರಭಾವಕ್ಕೆ ಸೇರಿಸಲನುವಾಗಿಸಬೇಕು. ''ಬಹು ಮಂದಿ ಪುತ್ರರನ್ನು ಪ್ರಭಾವಕ್ಕೆ ಸೇರಿಸಿ'' (ಇಬ್ರಿಯ 2:10)

# ಅದನ್ನು ನೀನೆ ಸಾಧಿಸು

ಕೆಲವು ಸಂಗತಿಗಳನ್ನು ದೃಢಮನಸ್ಸಿನಿಂದ ಕ್ರಮಪಡಿಸಬೇಕು

**''ಎಲ್ಲಾ ಯೋಚನೆಗಳನ್ನು ಕ್ರಿಸ್ತನಿಗೆ ವಿಧೇಯವಾಗುವಂತೆ ಸೆರೆ ಹಿಡಿದು ..........''**

**- (2 ಕೊರಿಂಥ 10:15)**

ಶ್ರಮದಾಯಕ ಸ್ವಭಾವದ ಸಂತತ್ವದ ಮತ್ತೊಂದು ನೋಟವಿದು. ಪೌಲನು ಹೇಳುತ್ತಾನೆ ''ಎಲ್ಲಾ ಯೋಜನೆಗಳನ್ನು ಕ್ರಿಸ್ತನಿಗೆ ವಿಧೇಯವಾಗುವಂತೆ ಸೆರೆಹಿಡಿಯಬೇಕು'' ಈಗಿನ ದಿನಗಳಲ್ಲಿ ಬಹಳಷ್ಟು ಕ್ರೈಸ್ತ ಸೇವಾ ಕಾರ್ಯವು ಸಕ್ರಮಗೊಳಿಸಲ್ಪಟ್ಟಿರುವುದಿಲ್ಲ ! ಅದು ಕೇವಲ ಮನೋಪ್ರೇರಣೆ ಯಿಂದ ಸುತ್ತಮುತ್ತಲೂ ಕ್ರಮವಿಲ್ಲದೆ ಹುಟ್ಟಿಹರಡಿಕೊಂಡಿರುತ್ತದೆ ! ಯೇಸುಕ್ರಿಸ್ತನ ಜೀವಿತದಲ್ಲಿ ಪ್ರತಿ ಯೊಂದು ಯೋಜನೆಯೂ ತಂದೆಯಾದ ದೇವರ ಚಿತ್ತಕ್ಕೆ ತಕ್ಕ ಹಾಗೆ ಸಕ್ರಮವಾಗಿದ್ದವು. ತನ್ನ ತಂದೆಯ ಚಿತ್ತಕ್ಕಿಂತಲೂ ಬೇರೆಯಾದ, ತನ್ನ ಸ್ವಂತ ಚಿತ್ತಾನುಸಾರದ ಯಾವ ನಡವಳಿಕೆಯೂ ಯೇಸುಕ್ರಿಸ್ತನ ಜೀವಿತದಲ್ಲಿರಲಿಲ್ಲ ''... ತನ್ನಷ್ಟಕ್ಕೆ ತಾನೇ ಏನೂ ಮಾಡಲಾರನು'' (ಯೋಹಾ 5:19) ಆದರೆ ನಮ್ಮನ್ನು ಗಮನಿಸಿಕೊಳ್ಳೋಣ; ಸ್ಪಷ್ಟವಾದ ಧಾರ್ಮಿಕ ಅನುಭವದ ಮೇಲೆ, ಅಂತಃ ಪ್ರೇರಣೆಯಿಂದ ಹುಟ್ಟಿದ ಯೋಜನೆಗಳನ್ನು ಕ್ರಿಸ್ತನಿಗೆ ವಿಧೇಯವಾಗುವಂತೆ ಸೆರೆಹಿಡಿಯದೆ, ಕ್ರಿಸ್ತನಿಗೆ ವಿಧೇಯವೆನಿಸುವ ಕ್ರಮ ಶಿಕ್ಷಣವಿಲ್ಲದೆ, ಅನಾವಶ್ಯಕ ಅವಸರದಿಂದ ನಾವು ಯೋಚಿಸಿದವುಗಳನ್ನೇ ಕೈಗೆತ್ತಿಕೊಳ್ಳುತ್ತೇವೆ.

ಈ ದಿನದಲ್ಲಿ ಕಾರ್ಯತಃ ಕಣ್ಣಿಗೆ ಕಾಣುವಂತೆ ಮಾಡಿ ತೋರಿಸುವ ಸೇವೆಗೆ ಹೆಚ್ಚು ಒತ್ತು ಕೊಡಲಾಗುತ್ತಿದೆ ಮತ್ತು ಪ್ರತಿಯೊಂದು ಯೋಜನೆಯನ್ನು ಕ್ರಿಸ್ತನಿಗೆ ವಿಧೇಯ ವಾಗುವಂತೆ ಸೆರೆಹಿಡಿಯುವ ಭಕ್ತರನ್ನು ಟೀಕಿಸುತ್ತಾರೆ, ದೇವರಿಗಾಗಿ ಮತ್ತು ಇತರ ಆತ್ಮಗಳಿಗಾಗಿ ಶ್ರದ್ಧೆಯಿಲ್ಲದವರೆಂದು ಅವರ ವಿಷಯದಲ್ಲಿ ಹೇಳುತ್ತಾರೆ. ನಿಜವಾದ ಶ್ರದ್ಧಾಸಕ್ತಿಯು ದೇವರಿಗೆ ತೋರಿಸುವ ವಿಧೇಯತೆಯಲ್ಲಿ ಕಾಣಬರುತ್ತದೆಯಲ್ಲದೆ, ಸಕ್ರಮವಾಗಿರದ ಮಾನವ ಸ್ವಭಾವದಿಂದ ಹುಟ್ಟಿದ ಸೇವಾ ಕಾಂಕ್ಷೆಯಲ್ಲಿ ಅಲ್ಲ. ಈ ದಿನಮಾನದ ಸೇವಕರು ಪ್ರತಿಯೊಂದು ಯೋಜನೆಯನ್ನು ವಿಧೇಯತೆಯಲ್ಲಿ ಸೆರೆ ಹಿಡಿಯುತ್ತಿಲ್ಲವೆಂಬುದು ಊಹಾತೀತವಾದದ್ದು, ಆದಾಗ್ಯೂ ಅದು ನಿಜವೇ. ಅವರು ದೃಢವಾದ ಶಿಕ್ಷಣದ ಮೂಲಕ ಆತ್ಮೀಕರಿಸಲಾಗದಿರುವ ತಮ್ಮ ಸಹಜ ಸ್ವಭಾವದಿಂದ ಹುಟ್ಟಿದ ಪ್ರಚೋದನೆಯಿಂದ ದೇವರ ಕಾರ್ಯಗಳನ್ನು ಕೈಗೆತ್ತಿಕೊಂಡಿರುತ್ತಾರೆ.

ಮನುಷ್ಯನು ತನ್ನ ರಕ್ಷಣೆಗಾಗಿ ಯೇಸುಕ್ರಿಸ್ತನಿಗೆ ಬದ್ಧನಾಗಿದ್ದಾನೆಂಬುದನ್ನು ನಾವು ನಿಜವಾಗಿಯೂ ಮರೆಯುತ್ತೇವೆ; ಅದಕ್ಕೆ ಬದ್ಧರಾಗಿರುವುದಷ್ಟೇ ಅಲ್ಲದೆ ಈ ಲೋಕದ ಬಗ್ಗೆ , ಪಾಪದ ಬಗ್ಗೆ ಮತ್ತು ಸೈತಾನನ ಬಗ್ಗೆ ಯೇಸುಕ್ರಿಸ್ತನ ದೃಷ್ಟಿಕೋನಕ್ಕೂ ನಾವು ಬದ್ಧರಾಗಿರಬೇಕು, ಇದರ ಅರ್ಥ, ತನ್ನ ಮನಸ್ಸನ್ನು ಹೊಸತು ಮಾಡಿಕೊಳ್ಳುವುದರ ಮೂಲಕ ತಾನು ಸಂಪೂರ್ಣವಾಗಿ ಪರಿವರ್ತನೆ ಯಾಗುವ ಜವಾಬ್ದಾರಿಯನ್ನು ಅವನು ಗಮನದಲ್ಲಿಟ್ಟು ಕೊಂಡಿರಬೇಕು.

# ಮಿಷನರಿಯ ಆಯುಧಗಳು

ಸಮಯ ವಿದ್ದಾಗಲೆಲ್ಲಾ ಆರಾಧಿಸುವುದು

**''ನೀನು ಅಂಜೂರದ ಮರದ ಕೆಳಗೆ ಇದ್ದಾಗ ನಿನ್ನನ್ನು ನೋಡಿದೆನು'' - (ಯೋಹಾ1:48)**

ದೊಡ್ಡದೊಂದು ಬಿಕ್ಕಟ್ಟುಂಟಾಗಿ ನಮ್ಮ ಸತ್ವ ಪರೀಕ್ಷೆಯ ಕಾಲವೆದುರಾದರೆ ಹೋರಾಟಕ್ಕೆ ಸಿದ್ಧರಿದ್ದೇವೆಂದು ನಾವು ಊಹಿಸಿಕೊಂಡಿರುತ್ತೇವೆ; ಆದರೆ ದೊಡ್ಡ ಬಿಕ್ಕಟ್ಟು, ನಮ್ಮಲ್ಲಿರುವ ಸತ್ವವೆಷ್ಟೆಂಬುದನ್ನು ಮಾತ್ರ ತೋರಿಸುತ್ತದೆ, ಆದರೆ ಅದು ನಮಗೆ ಸತ್ವವನ್ನು ನೀಡುವುದಿಲ್ಲ. ''ದೇವರು ತನ್ನ ಸೇವೆಗಾಗಿ ನನಗೆ ಕರೆ ಕೊಟ್ಟರೆ ಆ ಸಂದರ್ಭಕ್ಕೆ ತಕ್ಕ ಯೋಗ್ಯತೆಯಿಂದ ಹೋರಾಟಕ್ಕೆ ನಾನು ಸಿದ್ಧನಿರುತ್ತೇನೆ'' ಎಂದು ನೀನು ಹೇಳಿಕೊಂಡರೂ, ಅದು ನಿನ್ನಿಂದಾಗುವುದಿಲ್ಲ. ದೇವರ ತರಬೇತಿಯ ಕಾರ್ಯಾಗಾರದಲ್ಲಿ ದೇವರ ಮುಂದೆ ನಿನ್ನ ನಿಜ ಸ್ಥಿತಿಯಲ್ಲಿ, ಬಿಕ್ಕಟ್ಟನ್ನು ಎದುರಿಸಿ ಹೋರಾಡಿದ್ದರೆ ಮಾತ್ರ, ಬಾಹ್ಯರಂಗದಲ್ಲಿ ಅದು ಕಾರ್ಯತಃ ಸಾಧ್ಯವಾಗುತ್ತದೆ. ದೇವರು ನಿನ್ನ ಮೇಲೆ ಬರಮಾಡಿದ ಸಾಧಾರಣ ಸಂಗತಿಗಳು ನಿನ್ನ ಸನಿಹದಲ್ಲೇ ಇರುತ್ತಿರುವಾಗ, ಅವುಗಳನ್ನು ನೀನು ನಿಭಾಯಿಸದೆ ಹೋದರೆ, ಮುಂದೆ ಯಾವುದಾದರೂ ದೊಡ್ಡ ಬಿಕ್ಕಟ್ಟು ನಿಜವಾಗಿಯೂ ಸಂಭವಿಸಿದಾಗ, ನೀನು ಹೋರಾಟ ಯೋಗ್ಯನು ಎಂದು ತೋರ್ಪಡುವ ಬದಲು ನಿನ್ನ ಅಯೋಗ್ಯತೆಯು ಹೊರ ಬೀಳುತ್ತದೆ. ಸಂಕಷ್ಟಗಳು ನಮ್ಮ ಗುಣ ನಡತೆಗಳ ಸ್ವರೂಪವನ್ನು ಬಯಲು ಪಡಿಸುತ್ತವೆ.

ದೇವರನ್ನು ಆರಾಧಿಸುವಂಥ ಆಪ್ತ ಸಹವಾಸವೇ ಆತ್ಮೀಕ ದೃಡತೆಗೆ ಅತ್ಯಗತ್ಯವಾಗಿರುವ ಪ್ರಮುಖ ಅಂಶ. ಅಂಜೂರದ ಮರದ ನೆರಳಿನ ಹಿತವಾದ ಖಾಸಗಿ ಜೀವಿತವು ಇನ್ನು ಮುಂದೆ ಲಭ್ಯವಿರಲಾರದ ಸಮಯವುಂಟಾಗಬಹುದು. ಮರೆಯಿಂದ ಹೊರಗೆ ಬರಬೇಕಾದ ಸಮಯ ವುಂಟಾಗುತ್ತದೆ, ಹೊಳೆಯುವ ಬೆಳಕಿಗೆ ಬರಬೇಕಾಗುತ್ತದೆ, ಕಾರ್ಯೋನ್ಮುಖನಾಗಬೇಕಾಗುತ್ತದೆ, ಆಗ ಸಮಯವಿದ್ದಾಗಲೆಲ್ಲಾ ನಿನ್ನ ಮನೆಯಲ್ಲಿ ದೈನಂದಿನ ಸನ್ನಿವೇಶಗಳಲ್ಲಿ ನೀನು ದೇವರನ್ನು ಆರಾಧಿಸುತ್ತಿರದಿದ್ದರೆ ಇಂಥಾ ಸಂದರ್ಭಕ್ಕೆ ನೀನು ತಕ್ಕವನಲ್ಲವೆಂಬುದನ್ನು ನೀನೇ ಕಂಡುಕೊಳ್ಳುವೆ. ನಿನ್ನ ಜೀವಿತದಲ್ಲಿ ದೇವರೊಂದಿಗಿರುವ ನಿನ್ನ ಖಾಸಗಿ ಸಂಬಂಧಗಳಲ್ಲಿ ನಿನ್ನ ಆರಾಧನೆಯು ಸರಿಯಾಗಿ ಇದ್ದರೇ ಸ್ವತಂತ್ರನಾಗಿರಲು ದೇವರು ನಿನಗೆ ಅವಕಾಶವಿತ್ತಾಗ, ಯಾವುದಕ್ಕಾದರೂ ನೀನು ಸಿದ್ಧನಿರುವೆ, ಯಾಕೆಂದರೆ, ದೇವರ ವಿನಃ ಯಾರಿಗೂ ಗೋಚರವಾಗದ ಜೀವಿತದ ಸಂಗತಿಗಳಲ್ಲಿ ನೀನು ಸಂಪೂರ್ಣ ಹೋರಾಟ ಯೋಗ್ಯನಾಗಿರುವುದರಿಂದ, ಶಕ್ತಿಗೆ ಮೀರಿದ ಪ್ರಯಾಸಗಳು ಯಾವಾಗ ನಿನಗೆ ಎದುರಾಗುತ್ತವೆಯೋ ಆಗ ನೀನು ದೇವರ ಮೇಲೆ ಪೂರ್ಣವಾಗಿ ಆತುಕೊಂಡಿರಬಲ್ಲೆ.

''ನಾನಿರುವಂಥಾ ಪರಿಸರದಲ್ಲಿ, ಪವಿತ್ರ ಜೀವಿತವನ್ನು ಜೀವಿಸಬೇಕೆಂದು ನನ್ನಿಂದ ಅಪೇಕ್ಷಿಸಬಾರದು; ಕೂಡಲೇ ಪ್ರಾರ್ಥನೆಯಲ್ಲಿ ತೊಡಗಲು ನನಗೆ ಸಮಯವಿಲ್ಲ , ಸತ್ಯವೇದ ವನ್ನೋದಲೂ ನನಗೆ ಸಮಯವಿಲ್ಲ, ನನ್ನ ಸಮಯಾವಕಾಶವಿನ್ನೂ ಕೂಡಿ ಬಂದಿಲ್ಲ ; ಅದು ಬಂದಾಗ ಅದಕ್ಕೆ ತಕ್ಕ ಹಾಗೆ ನಾನು ಸಿದ್ಧನಿದ್ದೇನೆ'' ಎಂದು ನೀನು ತಿಳಿದಿದ್ದರೆ, ಅದು ನಿನಗೆ ಸಾಧ್ಯವಾಗುವುದೇ ಇಲ್ಲ. ಆಯಾ ಸಂದರ್ಭಗಳಲ್ಲಿ ದೇವರನ್ನು ಆರಾಧಿಸದಿದ್ದರೆ, ಕ್ರಿಸ್ತೀಯ ಸೇವೆಯಲ್ಲಿ ನೀನು ಅಯೋಗ್ಯ ನಾಗಿರುವುದಷ್ಟೇ ಅಲ್ಲದೆ, ನಿನ್ನ ಜೊತೆಯಲ್ಲಿರುವವರಿಗೂ ನೀನೊಬ್ಬ ಭಯಂಕರ ಅಡಚಣೆಯಾಗಿ ಬಿಡುವೆ. ವ್ಯಕ್ತಿಗತವಾದದ್ದೂ, ಮರೆಮಾಚಲ್ಪಟ್ಟದ್ದೂ ಆಗಿರುವ ಆರಾಧನಾ ಜೀವಿತವೇ ಮಿಷನರಿಯ ಆಯುಧದ ಕಾರ್ಯಾಗಾರವಾಗಿದೆ.

# ಮಿಷನರಿಯ ಆಯುಧಗಳು

ಅವಕಾಶಗಳು ಆವರಿಸಿಕೊಂಡಿರುವಾಗ ಸೇವೆ ಮಾಡುವುದು

**''ಕರ್ತನೂ ಗುರುವೂ ಆಗಿರುವ ನಾನು ನಿಮ್ಮ ಕಾಲುಗಳನ್ನು ತೊಳೆದಿರಲಾಗಿ ನೀವು ಸಹಾ ಒಬ್ಬರ ಕಾಲನ್ನು ಒಬ್ಬರು ತೊಳೆಯುವ ಹಂಗಿನವರಾಗಿದ್ದೀರಿ'' - (ಯೋಹಾ13:14)**

ಸದಾವಕಾಶಗಳು ನಮ್ಮನ್ನಾವರಿಸಿರುವಾಗ ಸಮರ್ಥವಾಗಿ ಕ್ರೈಸ್ತ ಸೇವೆಸಲ್ಲಿಸುತ್ತಿರುವುದರ ಅರ್ಥ - ನಮ್ಮ ಸೇವಾ ಪರಿಸರಗಳನ್ನು ನಾವೇ ಆಯ್ಕೆ ಮಾಡಿ ಕೊಳ್ಳಬೇಕು ಎಂಬುದಲ್ಲ. ದೇವರು ನಮಗೊದಗಿಸುವ ಪರಿಸರಗಳ ಅಸ್ತವ್ಯಸ್ತತೆಗಳಲ್ಲಿಯೂ ಸೇವೆ ಮಾಡಲು ನಾವು ದೇವರಿಂದ ವಿಶೇಷವಾಗಿ ಆಯ್ಕೆ ಯಾದವರು ಎಂಬುದೇ ಅದರ ಅರ್ಥ. ಸದ್ಯದಲ್ಲಿ ನಮ್ಮನ್ನಾವರಿಸಿರುವ ಪರಿಸರಗಳಲ್ಲಿ ಮೈದೊರುವ ನಮ್ಮ ಗುಣ ನಡತೆಗಳೇ ನಾವು ಬೇರೆ ಬೇರೆ ಪರಿಸರ, ಬೇರೆ ಸನ್ನಿವೇಶಗಳಲ್ಲಿ ಹೇಗೆ ವರ್ತಿಸುವೆವೆಂಬುದನ್ನು ಸೂಚಿಸುತ್ತವೆ.

ಸಾಮಾನ್ಯ ಪರಿಸರದಲ್ಲಿ, ಮನೆಯಾಳುಗಳು ಮಾಡುವ ಅತ್ಯಂತ ಕೀಳೆನಿಸುವ ಸೇವೆಯನ್ನು ಯೇಸುಕ್ರಿಸ್ತನು ಮಾಡಿದನು, ನಾನು ಸಹಾ ನನ್ನ ಸುತ್ತಮುತ್ತಲಿರುವ ಸಾಮಾನ್ಯ ಪರಿಸರದೊಳಗೆ ಆತನು ಮಾಡಿದ ಹಾಗೆಯೇ ನಾನು ಮಾಡಬೇಕಾದರೆ, ದೇವರ ಶಕ್ತಿಯೇ ನನ್ನಲ್ಲಿ ಕಾರ್ಯವೆಸಗ ಬೇಕೆಂಬುದನ್ನು ಇದು ಸೂಚಿಸುತ್ತದೆ. ಆತನು ಉಪಯೋಗಿಸಿದಂತೆ ಕೈವಾವುಡ (ಟವಲು) ವನ್ನು ನಾನು ಬಳಸಬಲ್ಲೆನೋ? ಟವಲುಗಳು, ಪಾತ್ರೆಗಳು, ಪಾದರಕ್ಷೆಗಳು, ಇವು ನಮ್ಮ ಜೀವಿತದ ಸಾಮಾನ್ಯ ಬಳಕೆಯಲ್ಲಿ ಮಲಿನ ಗೊಳ್ಳುವ ಪರಿಕರಗಳು, ಇವುಗಳೇ, ನಾವು ಎಂಥವರೆಂಬುದನ್ನು ಆಗಿಂದಾಗಲೇ ತೋರಿಸುತ್ತವೆ. ಅತ್ಯಂತ ಕೀಳಾದ ಸೇವೆಯನ್ನು, ಮಾಡಬೇಕಾದ ರೀತಿಯಲ್ಲಿ ಮಾಡಿ ಮುಗಿಸಬೇಕಾದರೆ ಸರ್ವಶಕ್ತನಾದ ದೇವರ ನರಾವತಾರವೇ, ನಮ್ಮಲ್ಲಿ ಕಾರ್ಯ ವೆಸಗಬೇಕಾಗುತ್ತದೆ.

''ನಾನು ನಿಮಗೆ ಮಾಡಿದ ಮೇರೆಗೆ ನೀವು ಸಹ ಮಾಡುವಂತೆ ನಿಮಗೆ ಮಾದರಿಯನ್ನು ತೋರಿಸಿದ್ದೇನೆ'' (ಯೋಹಾ 13:15) ಎಂದು ಯೇಸುಸ್ವಾಮಿಯು ಹೇಳಿರುವನು. ಎಂಥೆಂಥಾ ಜನರನ್ನು ದೇವರು ನಿನ್ನ ಬಳಿಗೆ ಬರ ಮಾಡುತ್ತಾನೆಂಬುದನ್ನು ಎಚ್ಚರದಿಂದ ಗಮನಿಸಬೇಕು, ನೀನು ಸಹಾ ದೇವರ ದೃಷ್ಠಿಯಲ್ಲಿ ಎಂಥವನಾಗಿದ್ದೆ ಎಂಬುದನ್ನು ನಿನಗೆ ತೋರಿಸಲು ದೇವರು ಆರಿಸಿಕೊಂಡ ಮಾರ್ಗವಿದು ಎಂಬುದನ್ನು ನೀನು ಅರಿತಾಗ ನಿನಗೆಷ್ಟು ನಾಚಿಕೆಯಾಗುತ್ತದೆ! ನಾನು ನಿನಗೆ ಮಾಡಿ ತೋರಿಸಿದವುಗಳನ್ನು ನಿನ್ನ ಸುತ್ತ ಮುತ್ತಲಿರುವವರಿಗೆ ಈಗ ನೀನು ಮಾಡಿ ತೋರಿಸಬೇಕು ಎಂದು ಯೇಸುಕ್ರಿಸ್ತನು ಹೇಳುತ್ತಾನೆ.

''ಓಹ್! ನಾನು ಬೇರೆ ಪ್ರದೇಶಕ್ಕೆ ಬಂದಾಗ ನಾನು ಎಲ್ಲವನ್ನೂ ಮಾಡುತ್ತೇನೆ'' ಎಂದು ನೀನು ಹೇಳಿದರೆ, ಯುದ್ಧ ನಡೆಯುತ್ತಿರುವಾಗ, ರಣರಂಗದ ರಕ್ಷಣಾ ಕಂದಕದಲ್ಲಿ ಅಡಗಿಕೊಂಡು ಪ್ರಸ್ತುತದ ಯುದ್ಧಕ್ಕಾಗಿ ಶಸ್ತ್ರಾಸ್ತ್ರಗಳನ್ನು ತಯಾರು ಮಾಡುತ್ತೇನೆಂಬ ಹೇಳಿಕೆಯಂತಿರುತ್ತದೆ. ಹಾಗೆ ಮಾಡುತ್ತಿರು ವಾಗಲೇ ಕೊಲ್ಲಲ್ಪಡುವಿ.

ನೀನು ಬಯಸದಿರುವ ಎರಡನೇ ಮೈಲು: ಈ ದೂರವನ್ನು ನಾವು ದೇವರ ಜೊತೆಯಲ್ಲಿ ನಡೆಯಬೇಕಾಗಿದೆ. ಮೊದಲಿನ ಹತ್ತು ಮಾರುಗಳಲ್ಲಿಯೇ ನಾವು ಸೋತು ಹೋಗುತ್ತೇವೆ, ಮುಂದಿನ ದಾರಿ ಕಾಣಿಸುತ್ತಿಲ್ಲ. ಕಾಣದಿರುವ ದಾರಿಯಲ್ಲಿ ನಡೆದು ಮುಂದೆ ಸಾಗಬೇಕೆಂದು ದೇವರು ಒತ್ತಾಯ ಪಡಿಸುವು ದರಿಂದ ನಾವು ಹೇಳುತ್ತೇವೆ ''ಮುಂದೆ ಇನ್ನೊಂದು ದೊಡ್ಡ ಬಿಕ್ಕಟ್ಟು ನನ್ನ ಜೀವಿತದಲ್ಲಿ ಎದುರಾಗುವ ತನಕ, ಇಲ್ಲಿಯೇ ಹಾಯಾಗಿ ನಿಂತುಬಿಡುತ್ತೇನೆ''. ಸಾಮಾನ್ಯವಾದ ಚಿಕ್ಕಪುಟ್ಟ ಅವಕಾಶ ಗಳಲ್ಲಿ ಏಕ ಪ್ರಕಾರದ ದೃಢವಾದ ಸೇವೆಯನ್ನು ಮಾಡದಿದ್ದರೆ, ಸೇವೆಯಲ್ಲಿ ದೊಡ್ಡ ಬಿಕ್ಕಟ್ಟು ಎದುರಾದಾಗ ನಾವೇನೂ ಮಾಡಲಾರೆವು.

# ಆತ್ಮೀಕ ಗೊಂದಲದಲ್ಲಿ ಸಾಗುವುದು

**''ನೀವು ಬೇಡಿಕೊಂಡದ್ದು ಏನೆಂದು ನಿಮಗೆ ತಿಳಿಯದು'' - (ಮತ್ತಾ 20:22)**

ಆತ್ಮೀಕ ಜೀವಿತದಲ್ಲಿ ಗೊಂದಲದ ಸಮಯಗಳಿದ್ದೇ ಇರುತ್ತವೆ, ಗೊಂದಲಗಳೇ ಇರಬಾರದೆಂದು ಹೇಳುವುದು, ಅವುಗಳಿಂದ ತಪ್ಪಿಸಿಕೊಳ್ಳುವ ದಾರಿಯಲ್ಲ. ಅಂಥಾ ಸಮಯಗಳಲ್ಲಿ ಇದೇ ಸರಿ, ಅದೇ ತಪ್ಪು ಎಂದು ತಬ್ಬಿಬ್ಬಾಗುವ ಪ್ರಶ್ನೆಯಲ್ಲ, ಸದ್ಯದಲ್ಲಿ ದೇವರು ನಿನ್ನನ್ನು ಮುನ್ನಡೆಸುತ್ತಿರುವ ಮಾರ್ಗವು ನಿನಗೆ ತಿಳಿಯದಿರುವುದೇ ನಿನ್ನ ಮುಂದಿರುವ ಗೊಂದಲದ ಪ್ರಶ್ನೆ. ಆತ್ಮೀಕ ಗೊಂದಲದ ಮೂಲಕ ನೀನು ಹಾದು ಹೋದಾಗಲೇ, ನಿನ್ನಿಂದ ದೇವರು ಬಯಸುತ್ತಿರುವುದೇನೆಂಬುದು ನಿನ್ನರಿವಿಗೆ ಬರುತ್ತದೆ.

ಆತನ ಗೆಳೆತನದ ಮೇಲೆ ಮುಸುಕು : ಒಬ್ಬಾನೊಬ್ಬ ವ್ಯಕ್ತಿಯು ತನ್ನ ಗೆಳೆಯನ ಬಗ್ಗೆ ಸ್ವಲ್ಪವೂ ಕಾಳಜಿವಹಿಸದಿರುವ ವಿಷಯದಲ್ಲಿ ಯೇಸುಕ್ರಿಸ್ತನು ಲೂಕ 11:5-8 ಭಾಗದಲ್ಲಿ ಚಿತ್ರಿಸಿದ್ದಾನೆ, ಅದರಲ್ಲಿರುವಂತೆಯೇ ಪರಲೋಕದ ತಂದೆಯು ಸಹಾ ಕೆಲವು ಸಮಯಗಳಲ್ಲಿ ನಿನಗೆ ಹಾಗೆ ಕಾಣಿಸುತ್ತಾನೆ ಎಂದು ಆತನು ತಿಳಿಸಿದ್ದಾನೆ. ಆತನೊಬ್ಬ ದಯಾರಹಿತನಾದ ಗೆಳೆಯನೆಂದು ನೀನು ಯೋಚಿಸಬಹುದು, ಆದರೆ ಆತನು ಹಾಗಿಲ್ಲವೆಂಬುದನ್ನು ನೆನಪಿಡು; ಅದೆಲ್ಲವನ್ನೂ ವಿವರಿಸಿ ನಿನಗೆ ಹೇಳುವ ಸೂಕ್ತ ಸಮಯ ಬಂದೇ ಬರುತ್ತದೆ. ಆತ್ಮೀಯ ಗೆಳೆತನದ ಮೇಲೆ ಮೋಡ ಕವಿದಿರುವಂತೆ ನಿನಗೆ ಕಾಣಿಸುತ್ತದೆ, ಅನೇಕ ವೇಳೆ ಪ್ರೇಮವು ಸಹಾ ಇನ್ನೂ ಹೆಚ್ಚಿನ ಸಹವಾಸದ ಆಶೀರ್ವಾದಕ್ಕಾಗಿ ನೋವಿನಿಂದ, ಕಣ್ಣೀರಿನಿಂದ ಕಾದು ಕೊಂಡಿರುತ್ತದೆ. ದೇವರು ಸಂಪೂರ್ಣವಾಗಿ ಮುಸುಕು ಹಾಕಿಕೊಂಡಿರುವಂತೆ ಕಾಣಿಸಿದರೂ ನೀನು ಮಾತ್ರ ಅಚಲ ವಿಶ್ವಾಸದಿಂದ ಆತನಿಗಾಗಿ ಕಾಯುತ್ತಿರುವಿಯೋ ?

ಆತನ ಪಿತೃತ್ವದ ಮೇಲೆ ಕವಿಯುವ ನೆರಳು : ಲೂಕ 11:11-13. ನಿನ್ನ ತಂದೆಯು, ಅಸಹಜ ತಂದೆಯಂತೆ ಕಾಣುವ ಸಮಯಗಳಿರುತ್ತವೆ ಎಂದು ಯೇಸುಸ್ವಾಮಿಯು ಹೇಳಿದ್ದಾನೆ. ನಿನ್ನ ತಂದೆಯು ನಿರ್ದಯನೂ ಉಪೇಕ್ಷಿಸುವಾತನೂ ಆಗಿರುವಂತೆ ನಿನಗೆ ಕಾಣುತ್ತದೆ, ಆದರೆ ಆತನು ಹಾಗೆ ಇಲ್ಲವೆಂಬುದನ್ನು ನೆನಪಿಡಬೇಕು. ''ಬೇಡಿಕೊಳ್ಳುವ ಪ್ರತಿಯೊಬ್ಬನೂ ಹೊಂದುವವನು''. ಸದ್ಯದ ಪರಿಸ್ಥಿತಿಗಳಲ್ಲಿ, ತಂದೆಯ ಮುಖವು ಕಾಣಿಸದಂತೆ ಮೋಡ ಕವಿದಿದೆ ಎನಿಸುತ್ತದೆ, ಏನೇನೋ ನಿನಗೆ ಸಂಭವಿಸುವಂತೆ ಆತನೇಕೆ ಮಾಡಿದನು ಎಂಬುದನ್ನು ಕೊನೆಯಲ್ಲಿ ಆತನು ತಿಳಿಸುವ ತನಕ ನೀನು ಆತನಿಗಾಗಿ ಕಾಯುತ್ತಾ ಇರಬೇಕು.

ವಿಲಕ್ಷಣವಾದ ಆತನ ವಿಶ್ವಾಸ ಲೂಕ 18.1-8. ''ಮನುಷ್ಯ ಕುಮಾರನು ಬಂದಾಗ ಭೂಮಿಯ ಮೇಲೆ ನಂಬಿಗಸ್ತಿಕೆಯನ್ನು ಕಾಣುವನೋ?'' (ಲೂಕ 18:8) ಗೊಂದಲಗಳೆಷ್ಟೇ ಇದ್ದರೂ ನಂಬಿಗಸ್ತಿಕೆಯಿಂದ ತನ್ನನ್ನು ಆತುಕೊಂಡಿರುವುದನ್ನು ಯೇಸುಕ್ರಿಸ್ತನು ನಿನ್ನಲ್ಲಿ ಕಾಣುವನೋ? ದೇವರು ಏನು ಮಾಡುತ್ತಿರುವನೋ ಎಂಬುದು ಸದ್ಯದಲ್ಲಿ ನಿನಗೆ ತಿಳಿಯದೆ ಹೋದರೂ ನೀನು ಮಾತ್ರ ಯೇಸುಕ್ರಿಸ್ತನು ಹೇಳಿರುವುದೆಲ್ಲವನ್ನೂ ಸತ್ಯವೆಂದು ನಂಬಿ ಆತನಲ್ಲಿ ದೃಡ ವಿಶ್ವಾಸದಿಂದಿರಬೇಕು. ಈಗ ನೀನು ಬೇಡುತ್ತಿರುವ ಒಂದು ನಿರ್ದಿಷ್ಟ ಸಂಗತಿಗಿಂತಲೂ ನಿನ್ನ ವಿಷಯದಲ್ಲಿ ಪಣಕ್ಕೊಡ್ಡಿರುವ ಹೆಚ್ಚಿನ ಸಮಸ್ಯೆಗಳು ಆತನಿಗಿವೆ.

# ಸಮರ್ಪಣೆಯ ನಂತರ - ಮುಂದೇನು ?

**''ಮಾಡಬೇಕೆಂದು ನೀನು ನನಗೆ ಕೊಟ್ಟ ಕೆಲಸವನ್ನು ನಾನು ನೆರವೇರಿಸಿ'' - (ಯೋಹಾ 17:4)**

ಸಮರ್ಪಣೆಯೆಂದರೆ ನಿನ್ನ ಬಾಹ್ಯಜೀವಿತವನ್ನು ತೊರೆದುಬಿಡುವುದಲ್ಲ - ನಿನ್ನ ಇಚ್ಛಾ ಮನೋ ವೃತ್ತಿಯನ್ನು ತ್ಯಜಿಸಿಬಿಡಬೇಕು; ಅಷ್ಟು ಮಾಡಿದರೆ ಸರ್ವವನ್ನೂ ಮಾಡಿದ ಹಾಗಾಯಿತು. ಜೀವಿತದಲ್ಲಿ ಕೆಲವೇ ಕೆಲವು ಸಂದಿಗ್ಧ ಸಂಗತಿಗಳಿರುತ್ತವೆ; ನಿನ್ನ ಇಚ್ಛಾಮನೋವೃತ್ತಿಯನ್ನು ತ್ಯಜಿಸಿ ಅದನ್ನು ದೇವರಿಗೆ ಒಪ್ಪಿಸಿ ಬಿಡುವುದೇ ಅತ್ಯಂತ ಮಹತ್ವದ ಸಂಗತಿ. ನಿನ್ನ ಇಚ್ಛಾ ಮನೋವೃತ್ತಿಯನ್ನು ತನಗೆ ಅರ್ಪಿಸಬೇಕೆಂದು ದೇವರು ಮನುಷ್ಯನನ್ನು ಜಜ್ಜುವುದಿಲ್ಲ ಮತ್ತು ಅದನ್ನು ಮಾಡುವಂತೆ ಅವನನ್ನು ಯಾಚಿಸುವುದೂ ಇಲ್ಲ, ಅವನು ತಾನಾಗಿಯೇ ತನ್ನ ಚಿತ್ತವೃತ್ತಿಯನ್ನು ಒಪ್ಪಿಸಿಕೊಡುವ ತನಕ ದೇವರು ಕಾದಿರುತ್ತಾನೆ. ಚಿತ್ತ ಸಮರ್ಪಣೆಯ ಹೋರಾಟವು ಒಮ್ಮೆ ಮುಗಿದ ನಂತರ ಮರುಹೋರಾಟದ ಅಗತ್ಯವಿರುವುದಿಲ್ಲ.

ಬಿಡುಗಡೆಹೊಂದಲು ಒಪ್ಪಿಸಿಕೊಡುವಿಕೆ : ''ನೀವೆಲ್ಲರೂ ನನ್ನ ಬಳಿಗೆ ಬನ್ನಿರಿ, ನಾನು ನಿಮಗೆ ವಿಶ್ರಾಂತಿಕೊಡುವೆನು'' (ಮತ್ತಾ 11:28) ರಕ್ಷಣೆಯೆಂದರೇನೆಂಬುದನ್ನು ನಿಜವಾಗಿಯೂ ಅನುಭವಿಸ ಲಾರಂಭಿಸಿದ ನಂತರ ಆತನು ಕೊಡುವ ವಿಶ್ರಾಂತಿಯನ್ನು ಹೊಂದಲು ನಮ್ಮ ಇಚ್ಛಾಪ್ರವೃತ್ತಿಯನ್ನು ಯೇಸುಕ್ರಿಸ್ತನಿಗೆ ಒಪ್ಪಿಸಿ ಬಿಡುತ್ತೇವೆ. ನಿನ್ನ ಹೃದಯದಲ್ಲಿ ನಿನ್ನ ಮನಸ್ಸಿನಲ್ಲಿ ದಿಕ್ಕುಕೆಡಿಸುವಂಥಾದ್ದೇನಿದ್ದರೂ ಅದು ''ನನ್ನ ಬಳಿಗೆ ಬನ್ನಿರಿ'' ಎಂದು ನಿನ್ನ ಚಿತ್ತಕ್ಕೆ ನೀಡುವ ಕರೆಯಾಗಿದೆ. ಆದರೆ ಹಾಗೆ 'ಬರುವುದು' ಮಾತ್ರ ನಿನ್ನ ಸ್ವಯಂ ಪ್ರೇರಣೆಗೆ ಬಿಟ್ಟದ್ದು.

ಶ್ರದ್ಧೆಯ ಸಮರ್ಪಣೆ : ''ಯಾವನಿಗಾದರೂ ನನ್ನ ಹಿಂದೆ ಬರುವುದಕ್ಕೆ ಮನಸ್ಸಿದ್ದರೆ ಅವನು ತನ್ನನ್ನು ನಿರಾಕರಿಸಿ'' (ಮತ್ತಾ 16:24) ಇಲ್ಲಿ ಸಮರ್ಪಣೆಯ ಅರ್ಥ-ನನ್ನನ್ನು ನಾನು ಯೇಸುಕ್ರಿಸ್ತನಿಗೆ ಶರಣಾರ್ಪಣೆ ಮಾಡಿ ಆತನ ವಿಶ್ರಾಂತಿಯಲ್ಲಿ ನೆಲೆಗೊಂಡು ನಿಶ್ಚಿಂತನಾಗಿರುವುದೇ. ನೀನು ನನ್ನ ಶಿಷ್ಯ ನಾಗಿರಬೇಕಾದರೆ ನಿನ್ನ ಮೇಲೆ ನಿನಗಿರುವ ಸ್ವಾಮಿತ್ವವನ್ನು ನನಗೆ (ಯೇಸುಕ್ರಿಸ್ತನಿಗೆ) ಬಿಟ್ಟು ಕೊಡಬೇಕು. ನಂತರ ಉಳಿದ ನಿಮ್ಮ ಜೀವಿತಕಾಲವೆಲ್ಲಾ ಈ ಸಮರ್ಪಣೆಯನ್ನು ನಿಮ್ಮ ಬಾಳಿನಲ್ಲಿ ತೋರ್ಪಡಿಸಬೇಕು. ಒಮ್ಮೆ ಈ ಸಮರ್ಪಣೆಯು ಪೂರ್ಣ ಗೊಂಡ ನಂತರ ''ಮುಂದೇನು?'' ಎಂಬ ಊಹೆಯ ಅಗತ್ಯವಿರು ವುದಿಲ್ಲ. ನಮ್ಮ ಸನ್ನಿವೇಶಗಳ ಬಗ್ಗೆ ಚಿಂತಾಲೋಚನೆಯ ಅಗತ್ಯವಿರುವುದಿಲ್ಲ. ಯೇಸುಕ್ರಿಸ್ತನು ನಿನ್ನ ಚಿಂತೆ, ಭಾರಗಳನ್ನು ಹೊತ್ತುಕೊಳ್ಳಲು ಶಕ್ತಿಯುಳ್ಳವನಾಗಿದ್ದಾನೆ (2 ಕೊರಿ, 12:9 ಮತ್ತು ಫಿಲಿ 4:19 ನೋಡಿರಿ).

ಮರಣಿಸಲು ಸಮರ್ಪಣೆ; ಪೇತ್ರನನ್ನು ಕುರಿತು ಯೇಸುಕ್ರಿಸ್ತನು ''ಮತ್ತೊಬ್ಬನು ನಿನ್ನ ನಡುವನ್ನು ಕಟ್ಟಿಕೊಂಡು, ನಿನಗೆ ಇಷ್ಟವಿಲ್ಲದ ಕಡೆಗೆ ನಿನ್ನನ್ನು ತೆಗೆದುಕೊಂಡು ಹೋಗುವನು'' ಎಂದು ಹೇಳಿದನು. ಅವನು ಎಂಥಾ ಸಾವಿನಿಂದ ದೇವರನ್ನು ಮಹಿಮೆ ಪಡಿಸುವನು ಎಂಬುದನ್ನು ಆತನು ಈ ಮಾತಿನಿಂದ ಸೂಚಿಸಿದನು (ಯೋಹಾ 21:18-19) ಸಾವಿನಿಂದ ಸುತ್ತುವರಿಯಲ್ಪಡುವುದೇನೆಂಬುದನ್ನು ಕಲಿತು ಕೊಂಡಿರುವಿಯೋ? ಮಹದಾನಂದದ ಭಾವಾವೇಶದಲ್ಲಿ ದೇವರಿಗೆ ಶರಣಾಗುವುದರ ಬಗ್ಗೆ ಎಚ್ಚರ ವಿರಲಿ, ಯಾಕೆಂದರೆ ಅಂಥಾ ಸಮರ್ಪಣೆಯನ್ನು ಮರಳಿ ಹಿಂತೆಗೆದುಕೊಳ್ಳುವ ಎಲ್ಲಾ ಸಾಧ್ಯತೆಗಳೂ ಇದ್ದೇ ಇರುತ್ತವೆ. ಯೇಸುಕ್ರಿಸ್ತನಿಗೆ ಪ್ರಿಯವಲ್ಲದವುಗಳು, ನಿನಗೆ ಅಪ್ರಿಯವಾಗುವ ತನಕ ನೀನು ಯೇಸುಕ್ರಿಸ್ತನ ಮರಣದಲ್ಲಿ ಒಂದಾಗಿರಬಲ್ಲೆಯೋ ಎಂಬುದೇ ನಿನ್ನ ಮುಂದಿರುವ ಪ್ರಶ್ನೆ ''ಹೇಗೆಂದರೆ, ನಾವು ಆತನ ಮರಣಕ್ಕೆ ಸದೃಶ್ಯವಾದ ಮರಣವನ್ನು ಹೊಂದಿ, ಆತನಲ್ಲಿ ಐಕ್ಯವಾಗಿ''ರುವುದೇ ನಿನ್ನ ಮುಂದಿರುವ ಪ್ರಶ್ನೆ (ರೋಮಾ 6:5). ಸಮರ್ಪಣೆಯ ನಂತರ ಮುಂದೇನು ? ...ಸಂಪೂರ್ಣ ಸಮರ್ಪಣೆಯ ನಂತರ, ನಮ್ಮ ಜೀವಿತವು ಅವಿಚ್ಛಿನ್ನವಾದ (ಏಕಪ್ರಕಾರ) ದೇವರ ಅನ್ಯೋನ್ಯತೆಗಾಗಿ ಹಂಬಲಿಸುತ್ತಿರುತ್ತದೆ.

# ಕಲ್ಪನೆಗಳೋ ಅಥವಾ ವಿಧೇಯತೆಯೋ?

**''ಕ್ರಿಸ್ತನ ವಿಷಯದಲ್ಲಿರಬೇಕಾದ ಯಥಾರ್ಥತೆ'' - (2ಕೊರಿ 11:3)**

ವಿಷಯಗಳನ್ನು ಸ್ಪಷ್ಟವಾಗಿ ನೋಡುವುದೇ ಯಥಾರ್ಥತೆಯ ಮರ್ಮ. ಬಹುಕಾಲದ ವರೆಗೆ ಒಬ್ಬ ಭಕ್ತನು ಸ್ಫುಟವಾಗಿ ಯೋಚನೆ ಮಾಡುವುದಿಲ್ಲವಾದರೂ ಅವನು ಎಲ್ಲಾ ಸಂಗತಿಗಳನ್ನು ತೊಂದರೆ ಇಲ್ಲದೆ ಸ್ಫುಟವಾಗಿ ನೋಡಲೇಬೇಕು. ಆತ್ಮೀಕ ಅವ್ಯವಸ್ಥೆಯನ್ನು ಸರಿಪಡಿಸಲು ಸ್ಪಷ್ಟವಾಗಿ ಆಲೋಚಿಸಲು ನಿನಗಾಗುವುದಿಲ್ಲ, ಆದರೆ ಅದನ್ನು ಸ್ಪಷ್ಟವಾಗಿ ಅರಿಯಲು ನೀನು ವಿಧೇಯನಾಗಬೇಕು. ಬೌದ್ಧಿಕ ವಿಚಾರಗಳನ್ನು ನೀನು ಸ್ಪಷ್ಟವಾಗಿ ಆಲೋಚಿಸಬಹುದು, ಆದರೆ ಆತ್ಮೀಕ ವಿಷಯಗಳನ್ನು ನಿನ್ನಷ್ಟಕ್ಕೆ ನೀನು ಯೋಚಿಸಿದರೆ ಅಲೆಮಾರಿ ಆಲೋಚನೆಗಳಿಂದ ಇನ್ನೂ ಹೆಚ್ಚು ಗೊಂದಲಕ್ಕೊಳಗಾಗುವಿ. ನಿನ್ನ ಜೀವಿತದ ಯಾವುದೋ ಒಂದು ಸಂಗತಿಯ ಮೇಲೆ ದೇವರು ಒತ್ತುಕೊಟ್ಟಿದ್ದರೆ, ಕೂಡಲೇ ಅದಕ್ಕೆ ವಿಧೇಯನಾಗಿಬಿಡು, ಆ ವಿಷಯದಲ್ಲಿ ನಿನ್ನ ಕಲ್ಪನೆಗಳನೆಲ್ಲಾ ಕ್ರಿಸ್ತನಿಗೆ ವಿಧೇಯವಾಗುವಂತೆ ಸೆರೆ ಹಿಡಿದುಬಿಟ್ಟರೆ, ಆಗಲಾ ವಿಷಯವು ಸೂರ್ಯ ಪ್ರಕಾಶದಲ್ಲಿ ಹೇಗೊ ಹಾಗೆ ಸ್ಪಷ್ಟವಾಗಿ ಕಾಣಬರುತ್ತವೆ. ತದನಂತರ ನಮ್ಮ ವಿವೇಚನಾಶಕ್ತಿಯು ಕ್ರಿಯಾಶೀಲವಾಗುತ್ತೆಯಾದರೂ, ಈ ಮಾರ್ಗದಲ್ಲಿ ನಾವೆಂದಿಗೂ ಮುಂದೆ ಸಾಗುವುದಿಲ್ಲ. ಚಿಕ್ಕ ಮಕ್ಕಳಂತೆ ಎಲ್ಲವನ್ನೂ ಯಥಾರ್ಥವಾಗಿ ನಾವು ನೋಡುತ್ತೇವೆ; ನಾವು ನಮ್ಮ ಜ್ಞಾನ ಬುದ್ಧಿಗಳನ್ನು ಉಪಯೋಗಿಸಲು ಆರಂಭಿಸಿದರೆ ನಮಗೇನೂ ಕಾಣುವುದಿಲ್ಲ. (ಮತ್ತಾಯ 11:25 ನೋಡಿರಿ).

ಪವಿತ್ರಾತ್ಮನ ಅಂಕೆಯಲ್ಲಿರದ ಒಂದೇ ಒಂದು ತೃಣ ವಿಷಯಕ್ಕಾದರೂ ನಮ್ಮ ಜೀವಿತದಲ್ಲಿ ನುಸುಳಲು ಅವಕಾಶವಿತ್ತರೆ, ಆತ್ಮೀಕ ಅವ್ಯವಸ್ಥೆಯುಂಟಾಗಲು ಅಷ್ಟು ಮಾತ್ರ ಸಾಕೆನಿಸುವುದು ಮತ್ತು ಅದರ ಬಗ್ಗೆ ನಾವು ಮಾಡುವ ಯಾವ ಯೋಚನೆಗಳೂ ಆ ಅವ್ಯವಸ್ಥೆಯನ್ನು ಸ್ಪಷ್ಟಗೊಳಿಸಲಾರವು. ವಿಧೇಯತೆ ಯಿಂದ ಮಾತ್ರವೇ ಆತ್ಮೀಕ ಅವ್ಯವಸ್ಥೆಯು ಇಲ್ಲವಾಗಿ ಎಲ್ಲವೂ ಸುವ್ಯವಸ್ಥೆಗೊಳ್ಳುತ್ತವೆ. ನಾವು ವಿಧೇಯರಾದ ತಕ್ಷಣವೇ ಸ್ಪಷ್ಟವಾಗಿ ಅದನ್ನು ವಿವೇಚಿಸುತ್ತೇವೆ. ಇಂತಹ ಅವ್ಯವಸ್ಥೆಗೆ ನಾವು ಒಳಗಾಗಿ ರುವುದಕ್ಕೆ ನಮ್ಮ ಮನಸ್ಸಿನ ಪ್ರವೃತ್ತಿಯೇ ಕಾರಣವೆಂದು ನಮಗೆ ಅರಿವಾದಾಗ, ಅದು ನಮ್ಮನ್ನು ತುಂಬಾ ದೈನ್ಯತೆಗೆ ಒಳಪಡಿಸುತ್ತದೆ. ನಮ್ಮ ಸ್ವಾಭಾವಿಕ ವಿವೇಚನಾಬಲವನ್ನು ಪವಿತ್ರಾತ್ಮನ ಶ್ರದ್ಧೆಗೊಳ ಪಡಿಸಿದಾಗ ಅದು ದೇವರ ಚಿತ್ತವನ್ನು ನಮ್ಮ ಇಂದ್ರಿಯ ಗ್ರಾಹ್ಯವಾಗುವಂತೆ ಮಾಡುತ್ತದೆ ಮತ್ತು ಇಡೀ ಜೀವಿತವು ಯಥಾರ್ಥತೆಯಲ್ಲಿ ಕಾಪಾಡಲ್ಪಡುತ್ತದೆ.

# ನಾವು ಏನನ್ನು ತ್ಯಜಿಸಬೇಕು

**''ನಾಚಿಕೆಯನ್ನು ಹುಟ್ಟಿಸುವ ಗುಪ್ತಕಾರ್ಯಗಳನ್ನು ಬಿಟ್ಟು ಬಿಟ್ಟು.......'' - (2ಕೊರಿಂಥ 4:2)**

ನಾಚಿಕೆಯನ್ನು ಹುಟ್ಟಿಸುವ ಗುಪ್ತಕಾರ್ಯಗಳನ್ನು ಬಿಟ್ಟು ಬಿಟ್ಟಿರುವಿಯೋ ? ಅಂದರೆ ನಿನ್ನ ಸ್ವಗೌರವ ಪ್ರಜ್ಞೆಯು, ಯಾವ ಕಾರ್ಯಗಳನ್ನು ಬೆಳಕಿಗೆ ತರದಂತೆ ನಿನ್ನನ್ನು ತಡೆಯುತ್ತಿದೆಯೋ, ಅವುಗಳನ್ನು ನೀನು ಬಹು ಸುಲಭವಾಗಿ ಬಚ್ಚಿಡಬಹುದು. ನೀನು ಬೆಳಕಿಗೆ ತರಲು ಇಷ್ಟಪಡದ ಯಾರ ಬಗ್ಗೆಯಾದರೂ ನಿನ್ನ ಹೃದಯದಲ್ಲಿ ಆಲೋಚನೆ ಇದೆಯೋ? ಅಂತಹ ಯೋಚನೆ ನಿನ್ನಲ್ಲಿ ಮೊಳೆತ ಕೂಡಲೇ ಅದನ್ನು ಆಗಲೇ ತ್ಯಜಿಸಿಬಿಡು; ನಿನ್ನ ವಿಷಯದಲ್ಲಿ ನಾಚಿಕೆ ಹುಟ್ಟಿಸುವ ಗುಪ್ತ ಕಾರ್ಯಗಳು, ತಂತ್ರಗಾರಿಕೆಗಳು ಪೂರ್ಣವಾಗಿ ಅಳಿದು ಹೋಗುವಷ್ಟರ ಮಟ್ಟಿಗೆ ವಿಷಯವನ್ನು ಸಂಪೂರ್ಣವಾಗಿ ವಿಸರ್ಜಿಸಬೇಕು. ಹಗೆತನ, ಮತ್ಸರ, ಜಗಳಗಂಟಿತನ - ಇವು ನಮ್ಮಲ್ಲಿರುವ ಪಾಪ ಸ್ವಭಾವದಿಂದ ಮಾತ್ರವೇ ಅವಶ್ಯವಾಗಿ ಹುಟ್ಟುತ್ತವೆಂಬುದಲ್ಲ - ಅವು ನಮ್ಮ ಶರೀರದ ರಚನಾಸ್ಥಿತಿ ಯಿಂದಲೂ ಹುಟ್ಟಿ ಬರುತ್ತವೆ ಅಂದರೆ ಈ ಶರೀರವು ಬಹು ಹಿಂದಿನ ಕಾಲದಿಂದಲೂ ಇಂತಹ ವಿಷಯಗಳನ್ನು ಓಲೈಸುತ್ತಲೇ ಇದೆ. (ರೋಮಾ 6:19 ಮತ್ತು 1 ಪೇತ್ರ 4:1-2 ನೋಡಿರಿ) ಆದುದರಿಂದ ನೀನು ನಾಚಿಕೆ ಪಡುವಂಥಾದ್ದೊಂದು ನಿನ್ನ ಜೀವಿತದಲ್ಲಿರದಂತೆ ಸದಾಕಾಲ ಎಚ್ಚರದಿಂದಿರಬೇಕು.

''ತಂತ್ರಗಾರಿಕೆಯಲ್ಲಿ ನಡೆಯದೆ......'' (2 ಕೊರಿಂಥ 4:2) - ತನ್ನ ಉದ್ದೇಶವನ್ನೇ ಸಾಧಿಸಿ ಕೊಳ್ಳುವ ಕುತಂತ್ರದಲ್ಲಿ ನಡೆಯಬಾರದು. ಅದೊಂದು ದೊಡ್ಡ ಉರುಲು. ನೀನು ಕಾರ್ಯ ಸಾಧನೆ ಮಾಡಲು ದೇವರು ಒಂದು ಮಾರ್ಗವನ್ನು ಅನುವು ಮಾಡಿಕೊಟ್ಟಿರುವುದನ್ನು ನೀನು ಬಲ್ಲೆ, ಹಾಗಿದ್ದ ಮೇಲೆ, ನಿನ್ನದೇ ಆದ ಬೇರೊಂದು ಮಾರ್ಗದಿಂದ ಜನರನ್ನು ಆಕರ್ಷಿಸುವ ಬಗ್ಗೆ ನೀನು ಎಚ್ಚರದಿಂದಿರಬೇಕು; ಹಾಗೇನಾದರೂ ನೀನು ಮಾಡಿದರೆ, ದೇವರಿಂದ ನಿನ್ನ ಮೇಲೆ ವಿನಾಶವು ಬಂದೆರಗುವುದು. ಅನೇಕರು ಮಾಡುತ್ತಿರುವ ಕಾರ್ಯಗಳನ್ನು ನೀನು ವಿವೇಚಿಸಿದಾಗ, ಅವರು ತಂತ್ರಗಾರಿಕೆಯಲ್ಲಿ ನಡೆಯುತ್ತಿರುವರೆಂದು ನಿನಗನಿಸುತ್ತದೆ; ಅವರಿಗಾದರೋ ತಾವು ಹಾಗೆ ಮಾಡುತ್ತಿರುವೆವು ಎಂದೆನಿಸುವುದಿಲ್ಲ. ದೇವರು ನಿನಗೆ ಬೇರೊಂದು ದೃಷ್ಟಿಕೋನವನ್ನಿತ್ತಿರುವನು. ''ನನ್ನ ಸರ್ವಸ್ವವೂ ಆತನ ಘನತೆಗಾಗಿ'' ಎನ್ನುವ ನಿನ್ನ ಪ್ರಜ್ಞೆಯು ಕುಂಠಿತವಾಗಕೂಡದು. ನಿನಗಾದರೋ ಅತ್ಯುತ್ತಮವೂ, ಅತ್ಯುನ್ನತವೂ, ಆದವುಗಳನ್ನು ಹೊರತುಪಡಿಸಿ ಬೇರೆ ಕೆಲವು ವಿಷಯಗಳನ್ನು ನೀನು ಕೈಗೆತ್ತಿಕೊಳ್ಳುವುದೆಂದರೆ ಯಾವುದೋ ಒಂದು ಉದ್ದೇಶ ಸಾಧನೆಗಾಗಿ ಕುತಂತ್ರತೆಯು ನಿನ್ನ ಜೀವನದಲ್ಲಿ ಪ್ರವೇಶಿಸಿದೆ ಎಂದು ಅರ್ಥ ಮತ್ತು ಅದು ದೇವರು ನಿನಗೆ ದಯಪಾಲಿಸಿರುವ ದೈವ ಪ್ರಜ್ಞೆಯನ್ನು ಕುಂಠಿತ ಗೊಳಿಸುತ್ತದೆ. ದೇವರ ದೃಷ್ಟಿಗನುಸಾರ ವಿಷಯಗಳನ್ನು ದೃಷ್ಟಿಸಲು ಭಯಪಟ್ಟು ಅನೇಕರು ಹಿಂತಿರುಗಿ ಹೋಗಿರುವರು. ಒಬ್ಬ ವ್ಯಕ್ತಿಯು ತಾನು ಅಂಗೀಕರಿಸಿದ ಸೂತ್ರಗಳಿಂದ ಸ್ವಲ್ಪದೂರ ಸರಿದಿರುವುದು ಕಂಡುಬಂದಾಗಲೇ ಅವನಲ್ಲಿ ನಿಜವಾದ ಆತ್ಮೀಕ ಗೊಂದಲ ಉಂಟಾಗುತ್ತದೆ.

# ಅಂತರಂಗದಲ್ಲಿರುವ ದೇವರಿಗೆ ಪ್ರಾರ್ಥನೆ

**''ನೀನು ಪ್ರಾರ್ಥನೆ ಮಾಡಬೇಕಾದರೆ ನಿನ್ನ ಏಕಾಂತವಾದ ಕೋಣೆಯೊಳಗೆ ಹೋಗಿ ಬಾಗಿಲನ್ನು ಮುಚ್ಚಿಕೊಂಡು ಅಂತರಂಗದಲ್ಲಿಯೂ ಇರುವ ನಿನ್ನ ತಂದೆಗೆ ಪ್ರಾರ್ಥನೆ ಮಾಡು'' - (ಮತ್ತಾ 6:6)**

ಧರ್ಮ ಶ್ರದ್ಧೆಯ ಕ್ಷೇತ್ರದಲ್ಲಿರುವ ಮುಖ್ಯ ಚಿಂತನೆ, ನಿನ್ನ ಕಣ್ಣುಗಳು ದೇವರನ್ನೇ ದೃಷ್ಟಿಸಬೇಕು, ಮನುಷ್ಯರನ್ನಲ್ಲ. ಪ್ರಾರ್ಥನಾ ವೀರನೆಂದು ಮಾನ್ಯನಾಗಬೇಕೆಂಬುದು ನಿನ್ನ ಉದ್ದೇಶವಾಗಿರಬಾರದು. ನೀನು ಪ್ರಾರ್ಥಿಸುತ್ತಿರುವುದು ಯಾರಿಗೂ ತಿಳಿಯದಿರುವಂತೆ ಒಂದು ಏಕಾಂತ ಕೋಣೆಯನ್ನು ಆರಿಸಿಕೊಂಡು, ಅದರ ಬಾಗಿಲನ್ನು ಮುಚ್ಚಿ ಅಂತರಂಗದಲ್ಲಿರುವ ನಿನ್ನ ತಂದೆಗೆ ಆತ್ಮೀಯತೆಯಿಂದ ಮಾತಾಡುತ್ತಾ ಪ್ರಾರ್ಥನೆ ಮಾಡಬೇಕು. ಪರಲೋಕದಲ್ಲಿರುವ ತಂದೆಯನ್ನು ಅರಿತುಕೊಳ್ಳುವ ಉದ್ದೇಶವಲ್ಲದೆ ಬೇರೇನೂ ಅಲ್ಲಿ ಇರಕೂಡದು. ಕಾಲನಿರ್ದಿಷ್ಟವಾದ ಏಕಾಂತ ಪ್ರಾರ್ಥನೆ ಇಲ್ಲದೆ, ಯೇಸುಕ್ರಿಸ್ತನ ಶಿಷ್ಯನೆಂಬ ನಿನ್ನ ಜೀವಿತವನ್ನು ಬಾಳುವುದು ನಿನಗೆ ಅಸಾಧ್ಯ.

ಪ್ರಾರ್ಥನೆ ಮಾಡುವಾಗ ಅಜ್ಞಾನಿಗಳ ಹಾಗೆ, ಹೇಳಿದ್ದನ್ನೇ ಸುಮ್ಮ ಸುಮ್ಮನೆ ಹೇಳಬೇಡ (ಮತ್ತಾ 6:7): ನಮ್ಮ ಶ್ರದ್ಧಾಸಕ್ತಿಗಳಿಂದ ದೇವರೆಂದಿಗೂ ಪ್ರಭಾವಿತ ನಾಗುವುದಿಲ್ಲ. ನಾವು ಪ್ರಾರ್ಥನಾಸಕ್ತಿಯುಳ್ಳವರೆಂಬ ಕಾರಣಕ್ಕಾಗಿ ದೇವರು ನಮ್ಮನ್ನಾಲಿಸುವುದಿಲ್ಲ. ದೇವರು, ತಾನೇ ಮಾಡಿದ ಪಾಪ ವಿಮೋಚನಾ ಕಾರ್ಯದ ತಳಹದಿಯ ಮೇಲೆ ಮಾಡಿದ ಪ್ರಾರ್ಥನೆಗಳನ್ನು ಮಾತ್ರ ಕೇಳಿಸಿಕೊಳ್ಳುತ್ತಾನೆ. ದೇವರಿಂದ ಏನಾದರೂ ಪಡೆದು ಕೊಳ್ಳುವುದಕ್ಕಾಗಿರುವುದೇ ಪ್ರಾರ್ಥನೆಯಲ್ಲ, ಅದು, ಪ್ರಾರ್ಥನೆಯ ಪ್ರಥಮ ಹಂತ ಮಾತ್ರವೇ; ದೇವರೊಂದಿಗೆ ಪರಿಪೂರ್ಣ ಅನ್ಯೋನ್ಯತೆಯಲ್ಲಿ ಸೇರಿಕೊಳ್ಳುವುದಕ್ಕಾಗಿಯೇ ಪ್ರಾರ್ಥನೆ. ಹೊಸದಾಗಿ ಹುಟ್ಟುವುದರ ಮೂಲಕ ದೇವಕುಮಾರನು ನಮ್ಮೊಳಗೆ ರೂಪುಗೊಂಡ ಮೇಲೆ, ಆತನೇ ನಮ್ಮ ಲೌಕಿಕ ಜ್ಞಾನಕ್ಕಿಂತಲೂ ಮುಂದೆಸಾಗಿ, ನಾವು ಪ್ರಾರ್ಥಿಸುತ್ತಿರುವ ಸಂಗತಿಗಳ ಬಗ್ಗೆ ನಮಗಿರುವ ಮನೋಭಾವನೆಯನ್ನು ಬದಲಾಯಿಸುತ್ತಾನೆ.

''ಬೇಡಿಕೊಳ್ಳುವ ಪ್ರತಿಯೊಬ್ಬನೂ ಹೊಂದುವನು'' (ಮತ್ತಾ 7:8): ಅರ್ಥಶೂನ್ಯ ಧರ್ಮಾಡಂಬರದಲ್ಲಿ ನಾವು ಪ್ರಾರ್ಥನೆ ಮಾಡುತ್ತೇವೆ. ನಮ್ಮ ಪ್ರಾರ್ಥನೆಗಳಲ್ಲಿ ನಿಜವಾದ ಆಸಕ್ತಿ ಇಲ್ಲ; ಹಾಗಿದ್ದಾಗ್ಯೂ ನಾವು ಹೇಳುತ್ತೇವೆ; ''ದೇವರು ನಮ್ಮ ಪ್ರಾರ್ಥನೆಗಳಿಗೆ ಉತ್ತರ ಕೊಡುವುದಿಲ್ಲ''. ವಾಸ್ತವದಲ್ಲಿ ನಾವು ಏನೂ ಬೇಡಿರುವುದೇ ಇಲ್ಲ. ''ಏನು ಬೇಕಾದರೂ ಬೇಡಿಕೊಳ್ಳಿರಿ, ಅದು ನಿಮಗೆ ದೊರೆಯುವುದು'' (ಯೋಹಾ 15:7). ಬೇಡಿಕೊಳ್ಳುವುದೆಂದರೆ, ನಮ್ಮ ಪೂರ್ಣ ಇಚ್ಛೆ, ಪೂರ್ಣ ಆಸಕ್ತಿ, ನಮ್ಮ ಬೇಡಿಕೆಗಳಲ್ಲಿರಬೇಕು. ಯೇಸುಕ್ರಿಸ್ತನು ಪ್ರಾರ್ಥನೆಯ ವಿಷಯವನ್ನು ಪ್ರಸ್ತಾಪಿಸಿದ ಪ್ರತಿ ಸಮಯದಲ್ಲಿಯೂ, ಚಿಕ್ಕ ಮಗುವಿನಲ್ಲಿರುವ ಯಥಾರ್ಥತೆಯನ್ನು ಮುಂದಿಟ್ಟೇ ನುಡಿದಿದ್ದಾನೆ, ನಾವಾದರೋ ವಿಮರ್ಶಾತ್ಮಕ ಪ್ರವೃತ್ತಿಯಿಂದ ''ಹೌದು, ಆದರೆ...'' ಎಂಬುದನ್ನು ಮುಂದಿಟ್ಟುಕೊಂಡು ''ಬೇಡಿಕೊಳ್ಳಿರಿ'' ಎಂದು ಯೇಸುಕ್ರಿಸ್ತನೇ ಹೇಳಿರುವನಲ್ಲವೇ'' ಎಂದು ಮಾತನಾಡುತ್ತೇವೆ. ಯೇಸು ಕ್ರಿಸ್ತನು ನಮಗೆ ಪ್ರಕಟಪಡಿಸಿದ ದೇವರಿಗೆ ತಕ್ಕದಾದವುಗಳನ್ನು ನಾವು ದೇವರಿಂದ ಬೇಡಿಕೊಳ್ಳಬೇಕೆಂಬು ದನ್ನು ವಿಶೇಷವಾಗಿ ಗಮನದಲ್ಲಿಟ್ಟುಕೊಳ್ಳಬೇಕು.

# ಶೋಧನೆಯಲ್ಲೇನಾದರೂ ಒಳಿತಿದೆಯೋ?

**''ಮನುಷ್ಯರು ಸಹಿಸಬಹುದಾದ ಶೋಧನೆಯೇ ಹೊರತು ಬೇರೆಯಾವದೂ ನಿಮಗೆ ಸಂಭವಿಸಲಿಲ್ಲ''**
**- (1 ಕೊರಿ 10:13)**

ಶೋಧನೆ ಎಂಬ ಪದವು ಈ ಲೋಕದಲ್ಲಿ ಇದ್ದೇ ಇದೆ. ಶೋಧನೆಯು 'ಕೆಟ್ಟದ್ದು' ಎಂದು ನಾವು ಭಾವಿಸಿರುವುದರಿಂದ ಅದನ್ನು ತಪ್ಪಾಗಿಯೇ ಪ್ರಯೋಗಿಸುತ್ತೇವೆ. ಶೋಧನೆಯು ಪಾಪ ಅಲ್ಲ. ನಾವು ಮನುಷ್ಯ ಮಾತ್ರದರಾಗಿದ್ದರೆ, ಅದನ್ನು ನಮ್ಮ ಜೀವಿತದಲ್ಲಿ ಸಂಧಿಸಿಯೇ ಸಂಧಿಸುತ್ತೇವೆ. ಶೋಧನೆಗೆ ಗುರಿಯಾಗುವುದಿಲ್ಲವೆಂದರೆ – ಶೋಧನೆಗೆ ಗುರಿ ಪಡಿಸಲು ಏನೂ ಇರದಷ್ಟರ ಮಟ್ಟಿಗೆ, ನಾಚಿಕೆ ಗೇಡಿಗಳೂ, ತಿರಸ್ಕೃತರಿಗಿಂತಲೂ ಕೀಳಾದವರೂ ಎಂದು ಹೇಳಿದಂತೆಯೇ. ಅಂಥಾ ಸ್ಥಿತಿಯಲ್ಲಿ ಇನ್ನಾವ ಶೋಧನೆ ಯಾಗಲು ಸಾಧ್ಯ! ಆದರೂ ನಮ್ಮಲ್ಲಿ ಅನೇಕರು ಯಾವ ಶೋಧನೆಗಳಿಂದ ಅವರು ನರಳಬಾರದೋ ಅಂಥ ಶೋಧನೆ ಗಳಿಂದ ನರಳುತ್ತಲೇ ಇರುವರು, ಯಾಕೆಂದರೆ ಅಂಥಾ ಶೋಧನೆ ಗಳುಂಟಾಗುವ ಹಂತದಿಂದ, ಮೇಲಿನ ಹಂತಕ್ಕೆ – ಯಾವ ಹಂತದಲ್ಲಿ ಬೇರೆ ವಿಧವಾದ ಶೋಧನೆ ಗಳನ್ನೆದುರಿಸ ಬೇಕೋ ಅಂಥ ಹಂತಕ್ಕೆ ದೇವರು ನಮ್ಮನ್ನು ಮೇಲೆತ್ತುವು ದನ್ನು ನಾವು ತಿರಸ್ಕರಿಸಿರುತ್ತೇವೆ.

ಒಬ್ಬ ವ್ಯಕ್ತಿಯ ಅಂತರಂಗ ಸ್ವಭಾವವು ಅಂದರೆ ಅವನ ವ್ಯಕ್ತಿತ್ವದ ಸ್ವಭಾವವು ಅವನ ಬಾಹ್ಯ ಜೀವಿತದಲ್ಲಿ ಅವನು ಯಾವುದರಿಂದ ಶೋಧಿಸಲ್ಪಡುವನು ಎಂಬುದನ್ನು ನಿರ್ಧರಿಸುತ್ತದೆ. ಶೋಧನೆಗೊಳ ಗಾಗುವ ವ್ಯಕ್ತಿಯ ಸಹಜ ಸ್ವಭಾವಕ್ಕೆ ಹೊಂದಿಕೊಳ್ಳುವಂಥ ಶೋಧನೆ ಉಂಟಾಗುತ್ತದೆ ಮತ್ತು ಈ ಶೋಧನೆಯು, ಶೋಧಿಸಲ್ಪಟ್ಟ ವ್ಯಕ್ತಿಯ ಸ್ವಭಾವದ ಸಾಧ್ಯತೆ, ಅಸಾಧ್ಯತೆಗಳನ್ನು ಬಹಿರಂಗ ಪಡಿಸುತ್ತದೆ. ಪ್ರತಿ ಯೊಬ್ಬನಿಗೂ ಅವನವನ ಶೋಧನೆಯ ಸ್ವಂತ ಪರಿಸರವಿರುತ್ತದೆ. ಶೋಧನೆಯಾದರೋ ಅವನನ್ನಾಳುತ್ತಿರುವ ಅವನ ಸ್ವಭಾವದ ದಾರಿಯಲ್ಲಿಯೇ ಅವನಿಗೆ ಎದುರಾಗುತ್ತದೆ.

ಯಾವ ಮಹತ್ವಾಕಾಂಕ್ಷೆಯನ್ನು ನಾನು ಧ್ಯೇಯವಾಗಿಟ್ಟುಕೊಂಡಿರುವೆನೋ, ಅದನ್ನು ಸಾಧಿಸಲು, ಅತ್ಯಂತ ಸನಿಹದ (Short Cut) ಮಾರ್ಗವನ್ನು ಸೂಚಿಸುವುದೇ ಈ ಶೋಧನೆ, ನಾನು ಯಾವುದನ್ನು ಕೆಟ್ಟದ್ದು ಎಂದು ತಿಳಿದಿರುವೆನೋ ಅದರ ಸಾಧನೆಗಾಗಿ (Short Cut) ಷಾರ್ಟಕಟ್ ದಾರಿಯನ್ನು ಸೂಚಿಸುವುದಲ್ಲ, ಆದರೆ ನಾನು ಯಾವುದನ್ನು ಒಳಿತು ಎಂದು ತಿಳಿದಿರುವೆನೋ ಅದರ ಷಾರ್ಟಕಟ್ ದಾರಿ ಯನ್ನು ಸೂಚಿಸುವುದೇ ಶೋಧನೆ. ಆ ಶೋಧನೆಯು ಸ್ವಲ್ಪ ಸಮಯ ನನ್ನನ್ನು ಗೊಂದಲಕ್ಕೀಡು ಮಾಡುತ್ತದೆ, ಯಾವುದು ಒಳ್ಳೇದು, ಯಾವುದು ಕೆಟ್ಟದ್ದು ಎಂದು ಆಗ ನನಗೆ ತಿಳಿಯುವುದಿಲ್ಲ. ನಾನು ಒಳಗಾದ ಶೋಧನೆಯು ದೈವತ್ವಕ್ಕೇರಿಸಲ್ಪಟ್ಟ ನನ್ನ ಕಾಮಾಭಿಲಾಷೆಯಾಗಿದೆ ಮತ್ತು ಈ ಮೊದಲೇ ನಾನು ಪಾಪದಲ್ಲಿ ಬಿದ್ದಿರದಿದ್ದರೆ ಅದಕ್ಕೆ ಕಾರಣ ನನ್ನಲ್ಲಿರುವ ಅಂಜುಬುರುಕತನವೇ! ಈ ಅಂಜುಗುಳಿತನವೇ ಸುಲಭ ಸಾಧ್ಯವಾದ ಪಾಪವೆಸಗುವುದಕ್ಕೆ ಅಡ್ಡಿಯಾಗಿತ್ತೆಂಬದನ್ನು ಸದ್ಯಕ್ಕೆ ನಾನೆದುರಿಸುತ್ತಿರುವ ಶೋಧನೆಯು ರುಜು ಪಡಿಸುತ್ತದೆ.

ಶೋಧನೆಯು ನಾವು ತಪ್ಪಿಸಿಕೊಳ್ಳಬಹುದಾದ ಒಂದು ಸಂಗತಿಯಲ್ಲ, ಒಬ್ಬ ವ್ಯಕ್ತಿಯ ಸಂಪೂರ್ಣ ವಾದ ಬದುಕಿಗೆ ಶೋಧನೆಯು ಅತ್ಯವಶ್ಯ. ಬೇರೆಯವರಾರೂ ಒಳಪಡದಂಥ ದೊಡ್ಡ ಶೋಧನೆಗೆ ಒಳಗಾಗಿ ರುವೆನೆಂದು ನಿನ್ನಷ್ಟಕ್ಕೆ ನೀನೇ ಯೋಚಿಸಿಕೊಂಡಿರಬೇಡ, ನೀನು ಒಳಗಾಗುತ್ತಿರುವ 'ಶೋಧನೆ' ಎಂಬುದು ಮಾನವ ಜನಾಂಗದ ಅನುವಂಶಿಕೆಯಾಗಿರುವುದರಿಂದ ಹಿಂದೆ ಯಾರೂ ಶೋಧನೆಗೆ ಒಳಗಾಗದಿರುವ ಒಂದು ಸಂಗತಿ ಅಲ್ಲ. ಶೋಧನೆಗೊಳಗಾಗುವಿಕೆಯಿಂದ ದೇವರು ನಮ್ಮನ್ನು ರಕ್ಷಿಸುವುದಿಲ್ಲ. ಆದರೆ ನಾವು ಶೋಧನೆಗಳ ನಡುವಿರುವಾಗಲೂ ತಪ್ಪಿಸಿಕೊಳ್ಳಲು ದೇವರು ಸಹಾಯ ಮಾಡುತ್ತಾನೆ. ''ಶೋಧಿಸಲ್ಪಡು ವವರಿಗೆ ಸಹಾಯ ಮಾಡುವುದಕ್ಕೆ ಶಕ್ತನಾಗಿದ್ದಾನೆ'' (ಇಬ್ರಿ 2:18)

# ಆತನಿಗಾದ ಶೋಧನೆ ಮತ್ತು ನಮ್ಮ ಶೋಧನೆ

**''... ಮಹಾಯಾಜಕನು ... ಅನುತಾಪವಿಲ್ಲದವನಲ್ಲ; ಆತನು ಸರ್ವ ವಿಷಯಗಳಲ್ಲಿ ನಮ್ಮ ಹಾಗೆ ಶೋಧನೆಗೆ ಗುರಿಯಾದನು, ಪಾಪ ಮಾತ್ರ ಮಾಡಲಿಲ್ಲ'' - (ಇಬ್ರಿ 4:15)**

ನಾವು ಹೊಸದಾಗಿ ಹುಟ್ಟುವವರೆಗೂ ಅಪೊಸ್ತಲನಾದ ಯಾಕೋಬನು ಪ್ರಸ್ತಾಪಿಸಿದಂಥ ಶೋಧನೆಯನ್ನು ಮಾತ್ರ ನಾವು ಗ್ರಹಿಸುತ್ತೇವೆ - ''ಪ್ರತಿ ಯೊಬ್ಬನೂ ತನ್ನಲ್ಲಿರುವ ಆಶಾಪಾಶದಿಂದ ಎಳೆಯಲ್ಪಟ್ಟು ಮರಳುಗೊಂಡವನಾಗಿ ಪ್ರೇರೇಪಿಸಲ್ಪಡುತ್ತಾನೆ'' (ಯಾಕೋ 1:14) ಆದರೆ ನಾವು ಹೊಸದಾಗಿ ಹುಟ್ಟುವುದರ ಮೂಲಕ, ನಾವು ಆತ್ಮೀಕ ಜೀವಿತದ ಬೇರೊಂದು ಹಂತಕ್ಕೆ ಎತ್ತಲ್ಪಡುತ್ತೇವೆ ಮತ್ತು ಅಲ್ಲಿ ಬೇರೆ ತರದ ಶೋಧನೆಗಳನ್ನು, ಅಂದರೆ ನಮ್ಮ ಸ್ವಾಮಿಯವರು ಎದುರಿಸಿದಂಥಾ ಶೋಧನೆ ಗಳನ್ನು ನಾವು ಎದುರಿಸಬೇಕಾಗುವುದು. ಮನುಷ್ಯ ಸ್ವಭಾವದಲ್ಲಿ ಅಂಥಾ ಶೋಧನೆಗಳಿಗೆ ಆಸ್ಪದವಿಲ್ಲ ದಿರುವುದರಿಂದ ಯೇಸುಕ್ರಿಸ್ತನಿಗಾದ ಶೋಧನೆಗಳು ನಮ್ಮನ್ನಾಕರ್ಷಿಸುವುದಿಲ್ಲ, ನಾವು ಹೊಸದಾಗಿ ಹುಟ್ಟಿಬಂದು ಆತನ ಸಹೋದರರಾಗುವವರೆಗೆ ಆತನಿಗಾದ ಶೋಧನೆಗಳೂ, ನಮಗಾಗುವ ಶೋಧನೆ ಗಳೂ ಬೇರೆ ಬೇರೆ ಕ್ಷೇತ್ರಗಳಲ್ಲಿರುತ್ತವೆ. ಯೇಸುಕ್ರಿಸ್ತನ ಶೋಧನೆಗಳು ಕೇವಲ ಆತನ ನರಭಾವಕ್ಕಾದವು ಗಳಲ್ಲ, ದೇವರು ಮನುಷ್ಯನಾಗಿರುವಾತನಿಗೆ ಉಂಟಾಗುವ ಶೋಧನೆಗಳವು. ''ಹೊಸದಾಗಿ ಹುಟ್ಟುವು ದರ ಮೂಲಕ ದೇವ ಕುಮಾರನು ನಮ್ಮೊಳಗೆ ರೂಪುಗೊಳ್ಳುತ್ತಾನೆ''. (ಗಲಾ 4:19) ಆತನಿಗೆ, ತಾನು ಈ ಲೋಕದಲ್ಲಿದ್ದಾಗ ಇದ್ದ ಪರಿಸರವೇ ಈಗಲೂ ಹೊಸದಾಗಿ ಹುಟ್ಟಿದ ನಮ್ಮ ಶರೀರದೊಳಗೆ ಇರುತ್ತದೆ. ನಾವು ತಪ್ಪುಗಳನ್ನು ಮಾಡುವಂತೆ ಸೈತಾನನು ನಮ್ಮನ್ನು ಪ್ರೇರೇಪಿಸುವುದಿಲ್ಲ; ನಾನು ಹೊಸದಾಗಿ ಹುಟ್ಟುವುದರಿಂದ, ದೇವರು ನಮ್ಮೊಳಗೆ ಇರಿಸಿರುವುದನ್ನು ಕಳೆದುಕೊಳ್ಳುವ ಹಾಗೆ ನಮ್ಮನ್ನು ಸೈತಾನನು ಪ್ರೇರೇಪಿಸುತ್ತಾನೆ, ಹೇಗೆಂದರೆ ದೇವರಿಗೆ ಬೆಲೆಯುಳ್ಳದ್ದಾದವುಗಳನ್ನು ನಮ್ಮೊಳಗಿಂದ ನಾವೇ ಕಳೆದುಕೊಳ್ಳುವಂತೆ ಮಾಡಿಬಿಡುತ್ತಾನೆ. ನಾವು ಪಾಪ ಮಾಡಬೇಕೆನ್ನುವ ದಾರಿಯಲ್ಲಿ ಸೈತಾನನು ಬರುವುದಿಲ್ಲ, ಪಾಪದ ಬಗ್ಗೆ ನಮಗಿರುವ ದೃಷ್ಟಿಯನ್ನು ಪಲ್ಲಟಗೊಳಿಸುವ ದಾರಿಯಲ್ಲಿ ನಮ್ಮನ್ನು ಶೋಧನೆಗೆ ಸಿಲುಕಿಸಿಬಿಡಲು ಬರುತ್ತಾನೆ. ಆದರೆ ಸೈತಾನನ ಇಂಥಾ ಸೂಕ್ಷ್ಮ ಶೋಧನೆಗಳನ್ನು ಪವಿತ್ರಾತ್ಮನು ಮಾತ್ರವೇ ಪತ್ತೆ ಹಚ್ಚುತ್ತಾನೆ.

ನಮ್ಮ ಅಂತರ್ಯದಲ್ಲಿರುವ ಆತ್ಮೀಕಸಂಪತ್ತನ್ನು ನಮಗರಿವಿರದ ಹೊರಗಿನ ಶಕ್ತಿ ಯೊಂದು ಪರೀಕ್ಷೆಗೊಳಪಡಿಸುವುದೇ ಸೈತಾನನ ಶೋಧನೆ. ಈ ಸತ್ಯಾರ್ಥವೇ, ನಮ್ಮ ಪ್ರಭುವಾದ ಯೇಸುಕ್ರಿಸ್ತನಿ ಗುಂಟಾದ ಶೋಧನೆಗಳನ್ನು ವಿವರಿಸಲು ಸಾಧ್ಯವಾಗುವಂತೆ ಮಾಡಿದೆ. ಯೇಸುಕ್ರಿಸ್ತನು ತನಗಾದ ದೀಕ್ಷಾಸ್ನಾನದಲ್ಲಿ, ಲೋಕದ ಪಾಪವನ್ನು ಹೊತ್ತುಕೊಂಡು ಹೋಗುವ ದೈವ ಸಂಕಲ್ಪಿತ ನಿಯೋಜನೆ ಯನ್ನು ಸ್ವೀಕರಿಸಿದ ನಂತರವೇ, ದೇವರ ಆತ್ಮನು ಆತನನ್ನು ಸೈತಾನನ, ಶೋಧಿಸುವ ಸಾಧನದಲ್ಲಿ ಇರಿಸಿದನು; ಅಲ್ಲಿ ಆತನು ದಣಿದು ಬಳಲಿ ಹೋಗಲಿಲ್ಲ. ಆತನು ಶೋಧನೆಯ ಆಳಕ್ಕೆ ಇಳಿದು ಸಾಗಿದನು. ''ಆದರೆ ಪಾಪ ಮಾತ್ರ ಮಾಡಲಿಲ್ಲ'' ಮತ್ತು ತನ್ನ ಆಂತರ್ಯದೊಳಗಿದ್ದ ಆತ್ಮೀಕ ಸಂಪತ್ತೆಲ್ಲವನ್ನೂ ಭದ್ರವಾಗಿಟ್ಟುಕೊಂಡಿದ್ದನು.

# ಎಡೆಬಿಡದೆ ಯೇಸುವಿನೊಡನೆ ಇರುವಿರೋ ?

**''ನೀವು ನನ್ನ ಕಷ್ಟಗಳಲ್ಲಿ ನನ್ನ ಸಂಗಡ ಎಡೆಬಿಡದೆ ಇದ್ದವರು'' - (ಲೂಕ 22:28)**

ಯೇಸುಕ್ರಿಸ್ತನು ನಮ್ಮ ಶೋಧನೆಗಳಲ್ಲಿ ನಮ್ಮ ಜೊತೆಗೆ ಇರುವುದಂತೂ ನಿಶ್ಚಯವೇ. ಆದರೆ ಆತನ ಶೋಧನೆಗಳಲ್ಲಿ ನಾವು ಎಡೆಬಿಡದೆ ಆತನ ಸಂಗಡವಿರುತ್ತಿರುವೆವೋ? ಅಂಥ ಸಮಯದಲ್ಲಿ ಯೇಸುಕ್ರಿಸ್ತನು ಏನು ಮಾಡುವನೆಂಬ ಅನುಭವವು ನಮಗುಂಟಾದಕೂಡಲೇ, ನಮ್ಮಲ್ಲಿ ಅನೇಕರು ಆತನ ಸಂಗಡ ಹೋಗುವುದನ್ನು ಬಿಟ್ಟೇ ಬಿಟ್ಟಿದ್ದಾರೆ. ದೇವರು ನಿನ್ನ ಸನ್ನಿವೇಶಗಳನ್ನು ಬದಲಾಯಿಸಿದರೆ, ಆಗಲೂ ನೀನು ಯೇಸುವಿನ ಜೊತೆಯಲ್ಲಿ ಹೋಗುವಿಯೋ ? ಲೌಕಿಕ ಜೀವಿತದ ಕಡೆಗೆ, ನರಭಾವದ ಆಶಾಪಾಶಗಳ ಕಡೆಗೆ, ಸೈತಾನನ ಕಡೆಗೆ ವಾಲಿಬಿಡುತ್ತಿರುವಿಯೋ ಎಂಬುದನ್ನು ಗಮನಿಸಬೇಕು. ನಾವೇನೋ ಆತನ ಚಿಹ್ನೆಯನ್ನು (ಬ್ಯಾಡ್ಜನ್ನು) ಧರಿಸಿಬಿಟ್ಟಿದ್ದೇವೆ, ಆದರೆ ಆತನ ಜೊತೆಯಲ್ಲಿಯೇ ಮುಂದೆ ಮುಂದೆ ಸಾಗುತ್ತಿರುವೆವೋ ? ''ಅಂದಿನಿಂದ ಆತನ ಶಿಷ್ಯರಲ್ಲಿ ಅನೇಕರು ಹಿಂಜರಿದು ಆತನ ಕೂಡ ಸಂಚಾರ ಮಾಡುವುದನ್ನು ಬಿಟ್ಟರು'' (ಯೋಹಾ 6:66) ಯೇಸುಕ್ರಿಸ್ತನಿಗೆ ಆತನ ಇಹಲೋಕದ ಜೀವಿತದುದ್ದಕ್ಕೂ, ಎಡೆಬಿಡದೆ ಶೋಧನೆಗಳು ಆತನಿಗುಂಟಾಗುತ್ತಿದ್ದವು. ನಮ್ಮೊಳಗಿರುವ ದೇವಕುಮಾರನ ಜೀವಿತದಲ್ಲಿಯೂ ಶೋಧನೆಗಳು ಎಡೆಬಿಡದೆ ಉಂಟಾಗುತ್ತವೆ. ಆದಾಗ್ಯೂ ಸದ್ಯದ ನಮ್ಮ ಜೀವಿತದಲ್ಲಿ ಯೇಸು ಕ್ರಿಸ್ತನ ಸಂಗಡ ಮುಂದೆ ಸಾಗುತ್ತಿರುವೆವೋ ?

ದೇವರು ನಮ್ಮ ಮೇಲೆ ಬರಮಾಡುವ ಕೆಲವು ಸಂಗತಿಗಳ ವಿರುದ್ಧ ನಾವೇ ರಕ್ಷಿಸಿಕೊಳ್ಳ ಬೇಕೆಂಬ ಕಲ್ಪನೆ ನಮಗಿದೆ, ಆದರೆ ಅಂಥಾ ಕಲ್ಪನೆಗಳಿರಲೇಬಾರದು ! ನಮ್ಮ ಸಂದರ್ಭ ಸನ್ನಿವೇಶಗಳನ್ನು ನಿರ್ವಹಿಸುತ್ತಿರುವಾತನು ದೇವರೇ, ಅವು ಎಂಥವುಗಳೇ ಆಗಿರಲಿ, ನಾವು ಯೇಸುಕ್ರಿಸ್ತನ ಶೋಧನೆಗಳಲ್ಲಿ ಎಡೆಬಿಡದೆ ನೆಲೆಗೊಂಡವರಾಗಿ, ಅಂಥಾ ಶೋಧನೆಗಳನ್ನು ಎದುರಿಸಬೇಕು. ಆ ಶೋಧನೆಗಳು ಆತನಿಗಾಗಿ ಮಾತ್ರ, ಅವು ನಮ್ಮ ಸಲುವಾಗಿ ಅಲ್ಲವೇ ಅಲ್ಲ. ನಮ್ಮೊಳಗಿರುವ ದೇವರ ಕುಮಾರನಿಗೆ ಸಂಭವಿಸುವ ಶೋಧನೆಗಳು ಅವು. ನಿನ್ನ ನರಭಾವದ ಜೀವಿತದಲ್ಲಿ ಯೇಸುಕ್ರಿಸ್ತನ ಗೌರವವು ಪಣಕ್ಕೊಡ್ಡಲ್ಪಟ್ಟಿದೆ. ನಿನ್ನೊಳಗಿರುವ ಆತನ ಜೀವಿತದ ಮೇಲೆ ಆಕ್ರಮಣ ಮಾಡಿದ ಪ್ರತಿಯೊಂದು ಸಂಗತಿಗಳಲ್ಲಿ, ದೇವಕುಮಾರನಿಗೆ ನೀನು ನಂಬಿಗಸ್ತನಾಗಿರುವೆಯೋ ?

ಯೇಸುಕ್ರಿಸ್ತನ ಸಂಗಡ, ಜೊತೆಯಾಗಿ ಆತನ ದಾರಿಯಲ್ಲಿ ಮುಂದೆ ಸಾಗುತ್ತಿರುವಿಯೋ ? ಆ ದಾರಿಯಾದರೋ, ''ಗೆತ್ಸೇಮನೆಯ ಮೂಲಕ, ಯೆರೂಸಲೇಮ ಪಟ್ಟಣದ ಹೆಬ್ಬಾಗಿಲಿನ ಮೂಲಕ, ಪಟ್ಟಣದ ಹೊರಗೆ ಸಾಗಿ ಹೋಗುತ್ತದೆ.'' (ಇಬ್ರಿ 13:13) ಆ ದಾರಿ ಏಕಾಂಗಿಯಾಗಿದೆ. ಅದು ಮುಂದೆ ಸಾಗುತ್ತಾ ಇರುವಾಗ, ಆತನನ್ನು ಹಿಂಬಾಲಿಸಲು ನಿನಗೆ ಆತನ ಹೆಜ್ಜೆಯ ಗುರುತೂ ಕಾಣದಾಗುತ್ತಾ ಮುಂದಕ್ಕೆ ಸಾಗುತ್ತದೆ. ಮುಂದೆ ಹೆಜ್ಜೆಗಳ ಗುರುತೇ ಇರುವುದಿಲ್ಲ ''ನನ್ನನ್ನು ಹಿಂಬಾಲಿಸು'' ಎಂಬ ಧ್ವನಿ ಮಾತ್ರ ಕೇಳಬರುತ್ತದೆ, ಆದರೂ ನೀನು ಮುಂದೆಸಾಗು, ದಾರಿ ತಪ್ಪುವುದೇ ಇಲ್ಲ.

# ಜೀವಿತದ ದೈವ ನಿಬಂಧನೆ

**'' ಆದುದರಿಂದ ಪರಲೋಕದಲ್ಲಿರುವ ನಿಮ್ಮ ತಂದೆಯು ಯಾವ ದೋಷವೂ ಇಲ್ಲದವನಾಗಿರುವಂತೆ ನೀವೂ ದೋಷವಿಲ್ಲದವರಾಗಿರ್ರಿ'' - (ಮತ್ತಾಯ 5:48)**

ಜನರೆಲ್ಲರೊಂದಿಗೆ, ನಮ್ಮ ನಡವಳಿಕೆಯು ತುಂಬಾ ಉದಾರವಾಗಿರಬೇಕೆಂದು, ಯೇಸು ಕ್ರಿಸ್ತನು ಈ ವಾಕ್ಯಗಳ ಮೂಲಕ ನಮ್ಮನ್ನೆಚ್ಚರಿಸುತ್ತಿದ್ದಾನೆ. ಆತ್ಮೀಕ ಜೀವಿತದಲ್ಲಿ ಸ್ವಭಾವಸಿದ್ಧ ಆಕರ್ಷಣೆ ಗಳಿಗನುಗುಣವಾಗಿ ವರ್ತಿಸುವ ಬಗ್ಗೆ ಎಚ್ಚರದಿಂದಿರಬೇಕು. ಪ್ರತಿಯೊಬ್ಬರಿಗೂ ತಮ್ಮದೇ ಆದ ಸ್ವಾಭಾವಿಕ ಆಕರ್ಷಣೆಗಳಿರುತ್ತವೆ; ಕೆಲವರನ್ನು ನಾವು ಇಷ್ಟಪಡುತ್ತೇವೆ ಮತ್ತು ಕೆಲವರನ್ನು ನಾವು ಇಷ್ಟಪಡುವುದಿಲ್ಲ. ಆದರೆ ಕ್ರಿಸ್ತೀಯ ಬಾಳುವೆಯಲ್ಲಿ, ಈ ಬೇಕು ಬೇಡಗಳು ನಮ್ಮನ್ನು ಆಳಲು ಆಸ್ಪದವನ್ನೀಯಕೂಡದು. ''ಆತನು ಬೆಳಕಿನಲ್ಲಿರುವಂತೆಯೇ ನಾವೂ ಬೆಳಕಿನಲ್ಲಿ ನಡೆದರೆ ನಾವು ಒಬ್ಬರ ಸಂಗಡಲೊಬ್ಬರು ಅನ್ಯೋನ್ಯತೆಯಲ್ಲಿದ್ದೇವೆ'' (ಯೋಹಾ 1:7) ನಮಗೆ ಯಾರ ವಿಷಯದಲ್ಲಿ ಸಹಜವಾಗಿಯೇ ಆಕರ್ಷಣೆ ಇರುವುದಿಲ್ಲವೋ ಅಂಥವರನ್ನೆ ದೇವರು ನಮ್ಮ ಅನ್ಯೋನ್ಯತೆಯಲ್ಲಿ ಬರಮಾಡುತ್ತಾನೆ.

ಇಲ್ಲಿ ಯೇಸುಕ್ರಿಸ್ತನು ಕೊಟ್ಟ ದೃಷ್ಟಾಂತವು ಒಬ್ಬ ಒಳ್ಳೆಯ ಮನುಷ್ಯನ ವಿಷಯವಾಗಿ ಅಲ್ಲ ಅಥವಾ ಒಬ್ಬ ಒಳ್ಳೆಯ ಕ್ರೈಸ್ತನ ವಿಷಯವಾಗಿಯೂ ಅಲ್ಲ, ಆದರೇ ದೇವರನ್ನೇ ಉದಾಹರಿಸುತ್ತಿದ್ದಾನೆ. ''ಪರಲೋಕದಲ್ಲಿರುವ ನಿಮ್ಮ ತಂದೆಯು ಯಾವ ದೋಷವೂ ಇಲ್ಲದವನಾಗಿರುವಂತೆ ನೀವೂ ದೋಷವಿಲ್ಲದವರಾಗಿರ್ರಿ''-ದೇವರು ನಿಮಗೆ ತೋರಿಸಿರುವದನ್ನು ಬೇರೆಯವರಿಗೆ ನೀವು ತೋರಿಸ ಬೇಕು; ಪರಲೊಕದಲ್ಲಿರುವ ದೇವರು ಯಾವ ದೋಷವೂ ಇಲ್ಲದವನಾಗಿರುವಂತೆ ನಾವೂ ದೋಷವಿಲ್ಲ ದವರಾಗಿ ದ್ದೇವೆಂದು ನಮ್ಮ ನಿಜ ಜೀವನದಲ್ಲಿ ತೋರ್ಪಡಿಸಲು ದೇವರು ಬಹಳ ಸುಸಂಧಿಗಳನ್ನೊದ ಗಿಸುತ್ತಾನೆ. ಯೇಸುಕ್ರಿಸ್ತನ ಶಿಷ್ಯರಾಗಿರುವುದೆಂದರೆ, ಬೇರೆಯವರಲ್ಲಿ ದೇವರಿಗಿರುವ ಆಸಕ್ತಿಗಳೊಡನೆ ನಮ್ಮನ್ನು ವಿವೇಕಪೂರ್ವಕವಾಗಿ ಗುರುತಿಸಿಕೊಳ್ಳಬೇಕು. ''... ನೀವು ಒಬ್ಬರನೊಬ್ಬರು ಪ್ರೀತಿಸಬೇಕು. ನಾನು ನಿಮ್ಮನ್ನು ಪ್ರೀತಿಸಿದ ಮೇರೆಗೆ ನೀವೂ ಸಹ ಒಬ್ಬರನ್ನೊಬ್ಬರು ಪ್ರೀತಿಸಬೇಕು'' (ಯೋಹಾ 13:34).

ಒಳ್ಳೇದನ್ನು ಮಾಡುವುದೇ ಕ್ರೈಸ್ತ ನಡತೆಯ ಅಭಿವ್ಯಕ್ತನೆಯಲ್ಲ, ನಾವು ದೇವರ ಸದೃಶ್ಯ ರಾಗಬೇಕು. ದೇವರ ಆತ್ಮನು ಆಂತರ್ಯದಲ್ಲಿ ನಿನ್ನನ್ನು ಪರಿವರ್ತನೆಗೊಳಿಸಿದ್ದರೆ, ದೈವಿಕ ಗುಣಲಕ್ಷಣ ಗಳು ನಿನ್ನಲ್ಲಿ ಪ್ರಕಟಗೊಳ್ಳುತ್ತವೆಯಲ್ಲದೆ ಸಾತ್ವಿಕ ಮಾನವನ ಗುಣಗಳಲ್ಲ. ದೇವರ ಜೀವಿತವು ನಮ್ಮೊಳಗೆ ದೇವರ ಜೀವಿತ ವಾಗಿಯೇ ಅಭಿವ್ಯಕ್ತಗೊಳ್ಳುತ್ತದೇ ಹೊರತು ದೇವರ ಜೀವಿತದಂತಿರಲು ಪ್ರಯತ್ನಿಸುವ ಮನುಷ್ಯನ ಜೀವಿತವಲ್ಲ. ಕ್ರಿಸ್ತೀಯ ಮರ್ಮವೆಂದರೆ, ದೇವರ ಕೃಪೆಯಿಂದ ಆ ಜೀವಿತದಲ್ಲಿ ಅಲೌಕಿಕವು ಲೌಕಿಕವಾಗಿ ಮಾರ್ಪಟ್ಟಿರುತ್ತದೆ. ಈ ಅನುಭವವು - ನಾನು ದೇವರ ಸಹವಾಸದಲ್ಲಿದ್ದಾಗ ಮಾತ್ರವಲ್ಲ - ನಮ್ಮ ಜೀವಿತದ ಸತ್ಯಸಂಗತಿಗಳಲ್ಲಿ ಅದು ಕಾರ್ಯವೆಸಗುತ್ತದೆ. ಗಜಿಬಿಜಿಯ ಸಂಗತಿಗಳ ಸಂಪರ್ಕದೊಳಗೆ ನಾವು ಬಂದಾಗಲೂ ಅಲ್ಲಿ ಸಮಚಿತ್ತದಿಂದಿರುವ ಸಾಮರ್ಥ್ಯವನ್ನು ಹೊಂದಿರುವುದು ನಮಗೆ ಅಚ್ಚರಿಯನ್ನುಂಟು ಮಾಡುತ್ತದೆ.

# ಧರ್ಮಬೋಧಕನ ಉದ್ದೇಶ (ಗುರಿ)

**''ಆತನು ಗರ್ಭದಲ್ಲಿಯೇ ನನ್ನನ್ನು ತನ್ನ ಸೇವಕನನ್ನಾಗಿ ರೂಪಿಸಿದನು'' - (ಯೆಶಾ49:5)**

ಕ್ರಿಸ್ತಯೇಸುವಿನಲ್ಲಿ ದೇವರು ನಮ್ಮನ್ನು ಆಯ್ದುಕೊಂಡಿರುವುದು ನಮಗೆ ತಿಳಿದಾಗ, ಪ್ರಥಮವಾಗಿ ಗೋಚರಿಸುವುದೇನೆಂದರೆ ನಮ್ಮ ಪೂರ್ವ ಕಲ್ಪಿತ ಒಲವುಗಳು, ನಮ್ಮ ಸೀಮಿತ ಎಣಿಕೆಗಳು, ದೇಶಾಭಿಮಾನಗಳು ಮುಂತಾದವುಗಳು ನಾಶಗೊಳ್ಳುತ್ತವೆ ಮತ್ತು ನಾವಾದರೋ ದೇವರ ಸ್ವಂತ ಉದ್ದೇಶಾರ್ಥವಾಗಿರಬೇಕಾದ ಸೇವಕರಾಗಿ ಮಾರ್ಪಡುತ್ತೇವೆ. ದೇವರನ್ನು ಸದಾಕಾಲ ಮಹಿಮೆ ಪಡಿಸುವುದಕ್ಕಾಗಿ, ಆತನಲ್ಲಿ ಆನಂದಿಸುವುದಕ್ಕಾಗಿ ಇಡೀ ಮಾನವ ಜನಾಂಗವು ಸೃಷ್ಟಿಸಲ್ಪಟ್ಟಿದೆ. ಪಾಪವು ಮಾನವ ಜನಾಂಗವನ್ನು ಬೇರೊಂದು ದಿಕ್ಕಿಗೆ ಹಾಯಿಸಿ ಬಿಟ್ಟಿದೆಯಾದರೂ, ಅದು ದೇವರ ಉದ್ದೇಶವನ್ನು ತೃಣ ಮಾತ್ರದಷ್ಟಾದರೂ ಬದಲಾಯಿಸಲಿಲ್ಲ. ನಾವು ಹೊಸದಾಗಿ ಹುಟ್ಟಿದಾಗ ಮಾನವ ಜನಾಂಗಕ್ಕೋಸ್ಕರವಾದ ದೇವರ ಮಹೋನ್ನತ ಉದ್ದೇಶಗಳನ್ನು ಅಂದರೆ, ''ದೇವರಿಗಾಗಿ ಮಾತ್ರವೇ ನಾನು ಸೃಷ್ಟಿಸಲ್ಪಟ್ಟಿದ್ದೇನೆ ಮತ್ತು ದೇವರೇ ನನ್ನನ್ನು ರೂಪಿಸಿದನು'' ಎಂಬುದನ್ನು ಪೂರ್ಣವಾಗಿ ಗ್ರಹಿಸಿರುತ್ತೇವೆ. ದೇವರು ನನ್ನನ್ನೇ ಆಯ್ಕೆ ಮಾಡಿ ಕೊಂಡಿರುವನೆನ್ನುವ ಮನವರಿಕೆಯೇ, ಈ ಭೂ ಜೀವಿತದ ಮಹೋನ್ನತವಾದ ಆನಂದ ಭರಿತ ಗ್ರಹಿಕೆಯಾಗಿದೆ, ದೇವರ ಇಂಥ ಅತ್ಯಮೋಘವಾದ, ಸೃಜನಶೀಲ ಉದ್ದೇಶಗಳ ಮೇಲೆ ಆತುಗೊಳ್ಳುವುದನ್ನು ನಾವು ಅಭ್ಯಾಸ ಮಾಡಬೇಕು. ಆಗ ದೇವರು ನಮ್ಮಲ್ಲಿ ಮಾಡುವ ಪ್ರಥಮ ಕಾರ್ಯವೆಂದರೆ, ಈ ಲೋಕ ಸಂಬಂಧವಾದ ನಮ್ಮ ಎಲ್ಲಾ ಉದ್ದೇಶಗಳನ್ನು ಕೇವಲ ಹೃದಯ ನಾಳದ ಮುಖಾಂತರ ಬಲವಂತವಾಗಿ ಹೊರಗೆ ತಳ್ಳುತ್ತಾನೆ. ಅವುಗಳನ್ನು ಸಂಪೂರ್ಣವಾಗಿ ನಮ್ಮೊಳಗಿರದಂತೆ ಮಾಡುತ್ತಾನೆ. ದೇವರ ಪ್ರೀತಿ - ದೇವರ ಸಹಜ ಸ್ವಭಾವವೇ ನಮ್ಮೊಳಗೆ ಸುರಿಯಲ್ಪಡುತ್ತದೆ, ಸರ್ವಶಕ್ತ ದೇವರ ಇಂಥಾ ಮಹಿಮಾ ಸ್ವಭಾವವು ಯೋಹಾನ 3:16ರಲ್ಲಿ ಪ್ರಕಟಿಸಲ್ಪಟ್ಟಿದೆ - ''ದೇವರು ಲೋಕದ ಮೇಲೆ ಎಷ್ಟೋ ಪ್ರೀತಿಯನ್ನಿಟ್ಟು ತನ್ನ ಒಬ್ಬನೇ ಮಗನನ್ನು ಕೊಟ್ಟನು.''

ದೇವರ ಸೃಜನಾತ್ಮಕ ಉದ್ದೇಶಗಳ ಕಾರ್ಯಸಾಧನೆಗೆ ನಮ್ಮ ಹೃದಯಗಳನ್ನು ಸದಾಕಾಲ ತೆರೆದಿಡಬೇಕು ಮತ್ತು ಅವುಗಳನ್ನು ನಮ್ಮ ಸ್ವಂತ ಇಚ್ಛೆಯಂತೆ ಅಸ್ತವ್ಯಸ್ಥಗೊಳಿಸಸಬಾರದು, ಹಾಗೇನಾದರೂ ಮಾಡಿದರೆ, ದೇವರು ನಮ್ಮ ಇಚ್ಛೆಗಳನ್ನೆಲ್ಲಾ - ಅವು ನಮ್ಮನ್ನೆಷ್ಟೇ ಘಾಸಿಗೊಳಿಸಿದರೂ - ಅವು ಲೆಕ್ಕಕ್ಕೆ ಬಾರದವುಗಳೆಂಬಂತೆ ಜಜ್ಜಬೇಕಾಗುತ್ತದೆ. ಒಬ್ಬ ಧರ್ಮ ಬೋಧಕನನ್ನು-ಯಾವ ಧರ್ಮ ಬೋಧಕನಲ್ಲಿ ದೇವರು ತನ್ನನ್ನು ಮಹಿಮೆ ಪಡಿಸಿಕೊಳ್ಳುವನೋ ಅವನನ್ನು ತನ್ನ ಸ್ವಂತ ಸೇವಕನಾಗಿರಲೆಂದೇ ಸೃಷ್ಟಿಸಿದ್ದಾನೆ. ಯೇಸು ಕ್ರಿಸ್ತನು ಮಾಡಿದ ರಕ್ಷಣಾ ಕಾರ್ಯದ ಮೂಲಕ, ನಾವು ದೇವರಿಗೆ ಯೋಗ್ಯರಾಗಿ ಕಾಣುವಂತೆ ಮಾಡಲ್ಪಟ್ಟಿರುವೆವೆಂಬುದನ್ನು ಒಮ್ಮೆ ನಾವು ಗ್ರಹಿಸಿದಾಗಲೇ, ಆತನು ನಮ್ಮಿಂದ ಅಪೇಕ್ಷಿಸುವ ವಿಷಯಗಳಲ್ಲಿ ಯಾಕೆ ಅಷ್ಟೊಂದು ಕಟ್ಟುನಿಟ್ಟಾದವನೂ, ಒತ್ತಾಯಪಡಿಸುವವನೂ ಆಗಿದ್ದನೆಂಬುದನ್ನು ಅರಿಯುತ್ತೇವೆ. ಆತನು ತನ್ನ ಸೇವಕರಿಂದ ಸಂಪೂರ್ಣವಾದ ನಿರ್ದೋಷತ್ವವನ್ನು ಅಪೇಕ್ಷಿಸುತ್ತಾನೆ, ಯಾಕೆಂದರೆ ಅವರಲ್ಲಿ ದೇವರ ಸ್ವಭಾವವನ್ನು ಇರಿಸಿರುವುದರಿಂದಲೇ. ಎಚ್ಚರದಿಂದಿರದಿದ್ದರೆ, ನಿನ್ನ ಜೀವಿತಕ್ಕಾಗಿಯೇ ಇರುವ ದೇವರ ಉದ್ದೇಶವನ್ನು ನೀನು ಮರೆತು ಹೋಗಬಹುದು.

# ಧರ್ಮಬೋಧಕನ ಪ್ರಭುವು

**''ನೀವು ನನ್ನನ್ನು ಗುರುವೆಂದೂ, ಕರ್ತನೆಂದೂ ಕರೆಯುತ್ತೀರಿ; ನೀವು ಕರೆಯುವುದು ಸರಿ; ನಾನು ಅಂಥವನೇ ಹೌದು'' - (ಯೋಹಾ 13:13)**

ಕರ್ತನನ್ನೂ, ಗುರುವನ್ನೂ ಪಡೆದಿರುವುದೂ ಮತ್ತು ಕರ್ತನಿಂದ ನಡೆಸಲ್ಪಡುವಿಕೆ, ಬೋಧಿಸಲ್ಪಡುವಿಕೆ - ಇವೆರಡೂ ಒಂದೇ ಅಲ್ಲ, ಅಂದರೆ ನಾನು ನನ್ನನ್ನರಿತಿರುವುದಕ್ಕಿಂತಲೂ ಹೆಚ್ಚಾಗಿ ನನ್ನನ್ನು ಅರಿತವನೊಬ್ಬನಿರುವನು, ಆತ್ಮೀಯ ಗೆಳೆಯನಿಗಿಂತಲೂ ಹತ್ತಿರವಾದವನೊಬ್ಬನಿರುವನು, ನನ್ನ ಹೃದಯಾಂತರಾಳಕ್ಕೆ ಇಳಿದು ಅದನ್ನು ತುಂಬಿಸಿ ತೃಪ್ತಿಪಡಿಸುವನೊಬ್ಬನಿರುವನು, ನನ್ನ ಮನಸ್ಸಿನ ಗೊಂದಲಗಳನ್ನು, ಸಮಸ್ಯೆಗಳನ್ನೂ ಸಂಧಿಸಿ ಅವುಗಳನ್ನು ನಿವಾರಿಸಿ ನಾನು ಸುರಕ್ಷಿತನೆನ್ನುವ ಭಾವನೆಯೊಳಗೆ ನನ್ನನ್ನು ಬರಮಾಡುವಾತನೊಬ್ಬನಿರುವನೆನ್ನುವುದೇ ಕರ್ತನನ್ನು, ಗುರುವನ್ನೂ ಪಡೆದಿರುವುದರ ಅರ್ಥ. ಅದಕ್ಕಿಂತಲೂ ಸ್ವಲ್ಪವೂ ಕಡಿಮೆಯಲ್ಲ. ಕ್ರಿಸ್ತನೊಬ್ಬನೇ ನಮಗೆ ಗುರುವು (ಮತ್ತಾಯ 23:10)

ತನಗೆ ವಿಧೇಯತೆಯನ್ನು ತೋರಿಸಬೇಕೆಂದು ಯೇಸುಪ್ರಭುವು ನಮಗೆ ಬಲಾತ್ಕಾರ ಮಾಡುವುದಿಲ್ಲ; ತಾನು ಬಯಸುವುದನ್ನು ನಾವು ವಿಧೇಯತೆಯಿಂದ ಕೈಕೊಳ್ಳಲು ಸಾಧ್ಯವಾಗುವಂಥ ಯಾವ ಕ್ರಮವನ್ನೂ ಆತನು ಪ್ರಯೋಗಿಸುವುದಿಲ್ಲ. ಕೆಲವೊಂದು ಸಮಯದಲ್ಲಿ ದೇವರು ನನ್ನನ್ನು ತನ್ನ ಒಡೆತನದಲ್ಲಿ, ತನ್ನ ನಿಯಂತ್ರಣದಲ್ಲಿರಿಸಿ ತನ್ನ ಮಾರ್ಗ ದರ್ಶನದಲ್ಲಿಯೇ, ನಾನು ಕಾರ್ಯಸಾಧಿಸುವಂತೆ ಮಾಡಿದರೆ ಎಷ್ಟು ಒಳಿತು, ಎಂದು ನಾನು ಆಶಿಸುತ್ತೇನೆ, ಆದರೆ ಆತನು ಹಾಗೆ ಮಾಡುವುದಿಲ್ಲ. ಒಂದೊಂದು ಸಲ ನಾನು ಭಾವ ತನ್ಮಯತೆಯಲ್ಲಿದ್ದಾಗ, ದೇವರು ನನ್ನನ್ನು ನನ್ನಷ್ಟಕ್ಕೆ ಬಿಟ್ಟುಬಿಟ್ಟರೆ ಎಷ್ಟೋ ಮೇಲು ಎಂದೆನ್ನುತ್ತೇನೆ. ಆಗಲೂ ಆತನು ಹಾಗೆ ಮಾಡುವುದಿಲ್ಲ.

''ನೀವು ನನ್ನನ್ನು ಗುರುವೆಂದೂ, ಕರ್ತನೆಂದೂ ಕರೆಯುತ್ತೀರಿ'' - ಆತನು ಹಾಗಿರುವನೋ? ಗುರುವೂ, ಕರ್ತನೂ, ಪ್ರಭುವೂ ಎನ್ನುವ ಪದಗಳಿಗೆ ನಮ್ಮ ಶಬ್ದಕೋಶದಲ್ಲಿ ಸ್ಥಳವಿಲ್ಲ, ಅದರ ಬದಲಿಗೆ ರಕ್ಷಕನು, ಶುದ್ಧೀಕರಿಸುವವನೂ ಮತ್ತು ಗುಣಪಡಿಸುವವನೂ ಎನ್ನುವ ಪದಗಳನ್ನು ಅವುಗಳಿಗಿಂತಲೂ ಹೆಚ್ಚಾಗಿ ಮುಂದಿಡುತ್ತೇವೆ. ಕರ್ತನಿಂದ ನಡಿಸಲ್ಪಡುವಿಕೆಯ ಅನುಭವವನ್ನು ನಿಜವಾಗಿ ವಿವರಿಸುವ ಒಂದೇ ಒಂದು ಪದ - 'ಪ್ರೀತಿ'. ದೇವರು ತನ್ನ ವಾಕ್ಯದಲ್ಲಿ ಪ್ರಕಟಪಡಿಸಿದ 'ಪ್ರೀತಿ'ಯ ಬಗ್ಗೆ ನಮಗೇನೂ ತಿಳಿದಿರುವುದಿಲ್ಲ, 'ವಿಧೇಯನಾಗು' ಎನ್ನುವ ಪದವನ್ನು ನಾವು ಬಳಸುವ ರೀತಿಯೇ 'ಪ್ರೀತಿ'ಯ ವಿಷಯದಲ್ಲಿ ಸಾಕ್ಷಿಯಾಗಿದೆ. ಸತ್ಯವೇದದಲ್ಲಿ ವಿಧೇಯತೆಯು ಸಮಾನ ವ್ಯಕ್ತಿಗಳ ಸಂಭಂಧಗಳ ಮೇಲೆ ಆಧಾರಗೊಂಡಿದೆ. ಉದಾಹರಣೆಗೆ - ಮಗನು ತಂದೆಯೊಡನೆ ಹೊಂದಿರುವ ಬಾಂಧವ್ಯ. ನಮ್ಮ ಪ್ರಭುವಾದ ಯೇಸುಕ್ರಿಸ್ತನಾದರೋ ದೇವರ ದಾಸನು ಆಗಿರಲಿಲ್ಲ, ಆತನು ದೇವರಿಗೆ ಮಗನಾಗಿದ್ದನು. ''ಆತನು ಮಗನಾಗಿದ್ದರೂ, ಅನುಭವಿಸಿದ ಬಾಧೆಗಳಿಂದಲೇ ವಿಧೇಯತೆಯನ್ನು ಕಲಿತುಕೊಂಡನು'' (ಇಬ್ರಿ 5:8) ನಾವು ಕರ್ತನ ಯಜಮಾನಿಕೆಯಲ್ಲಿದ್ದೇವೆಂಬುದೇ ನಮ್ಮ ಅಭಿಪ್ರಾಯ ವಾಗಿದ್ದರೆ, ಆ ಅರಿವೇ ಅಂಥಾ ಧಣಿಯು ನಮಗೆ ಇಲ್ಲವೆಂಬುದನ್ನು ರುಜುವಾತು ಪಡಿಸುತ್ತದೆ; ಯೇಸುಕ್ರಿಸ್ತನ ವಿಷಯದಲ್ಲಿಯೂ ಇದೇ ನಮ್ಮ ಪ್ರವೃತ್ತಿಯಾಗಿದ್ದರೆ, ಆತನು ಯಾವ ಬಾಂಧವ್ಯವನ್ನು ನಮ್ಮೊಡನೆ ಹೊಂದಲು ಬಯಸಿರುವನೋ, ಅಂಥಾ ಬಾಂಧವ್ಯದಿಂದ ನಾವು ಬಹುದೂರ ಉಳಿದಿದ್ದೇವೆ. ಆತನು ನಮ್ಮ ಕರ್ತನೂ ಗುರುವೂ ಆಗಿ ಯಥಾರ್ಥವಾಗಿ ನಮ್ಮನ್ನು ನಡೆಸುತ್ತಿರುವುದು, ನಮ್ಮ ಪ್ರಜ್ಞೆಗೆ ಅರಿವೇ ಇರದಂಥಾ ಬಾಂಧವ್ಯವನ್ನು ಆತನು ನಮ್ಮಿಂದ ಬಯಸುತ್ತಾನೆ. ಕೇವಲ ಆತನಿಗೆ ವಿಧೇಯರಾಗಿರುವದಕ್ಕಾಗಿ ಮಾತ್ರವೇ ನಾವು ಆತನವರಾಗಿರುವೆ ವೆಂದಷ್ಟೇ ನಾವು ಅರಿತಿದ್ದೇವೆ.

# ಸುವಾರ್ತಾ ಬೋಧಕನ ಗುರಿ

**''ನೋಡಿರಿ, ನಾವು ಯೆರೂಸಲೇಮಿಗೆ ಹೋಗುತ್ತಾ ಇದ್ದೇವೆ'' - (ಲೂಕ 18:31)**

ನಮ್ಮ ಸ್ವಭಾವಸಹಜ ಜೀವನದಲ್ಲಿ ನಮ್ಮ ಮಹತ್ವಾಕಾಂಕ್ಷೆಗಳು ನಾವು ಅಭಿವೃದ್ಧಿ ಯಾಗುತ್ತಿದ್ದಂತೆ ಅವೂ ಬದಲಾವಣೆಗೊಳಗಾಗುತ್ತವೆ; ಕ್ರಿಸ್ತೀಯ ಜೀವನದ ಆರಂಭದಲ್ಲಿಯೇ ನಮ್ಮ ಗುರಿಯೇನೆಂಬುದು ಗುರುತಿಸಲ್ಪಟ್ಟಿರುತ್ತದೆ, ಆರಂಭವೂ, ಅಂತ್ಯವೂ ಒಂದೇ ಗುರಿಯಾಗಿರುವುದು – ಆ ಗುರಿ ಯೇಸುಕ್ರಿಸ್ತನೇ. ನಾವು ಯೇಸುಕ್ರಿಸ್ತನಿಂದ ಆರಂಭಿಸಿ ಆತನಲ್ಲಿಯೇ ಅಂತ್ಯಗೊಳ್ಳುತ್ತೇವೆ – ''ನಾವೆಲ್ಲರೂ ..... ಕ್ರಿಸ್ತನ ಸಂಪೂರ್ಣತೆಯೆಂಬ ಪ್ರಮಾಣವನ್ನು ಮುಟ್ಟುವ ತನಕ'' (ಎಫೆ 4:13), ಎಂಬುದೇ ಹೊರತು ಕ್ರಿಸ್ತೀಯ ಜೀವಿತವು ಹೀಗೆಯೇ ಇರಬೇಕೆನ್ನುವ ನಮ್ಮ ಕಲ್ಪನೆಯಂತಿರುವ ಜೀವಿತವಲ್ಲ. ಸುವಾರ್ತಾ ಬೋಧಕನ ಗುರಿಯು, ಯೇಸುಕ್ರಿಸ್ತನಿಗೆ ಉಪಯುಕ್ತವಾಗಿರಬೇಕೆಂಬುದಲ್ಲ, ಕ್ರಿಸ್ತನನ್ನರಿಯದವರನ್ನು ಆತನ ಬಳಿಗೆ ಕರೆತರುವುದಲ್ಲ, ಆದರವನು ದೇವರ ಚಿತ್ತವನ್ನು ನೆರವೇರಿಸು ವವನಷ್ಟೇ ಆಗಿರಬೇಕು. ಆತನು ಯೇಸುಕ್ರಿಸ್ತನ ಉಪಯೋಗಕ್ಕೆ ಯೋಗ್ಯನೂ, ಆತನನ್ನರಿಯದವರನ್ನು ಕ್ರಿಸ್ತನ ಬಳಿಗೆ ಕರೆತರುವವನೂ ಆಗಿರುವುದು ನಿಜವೇ, ಆದರೂ ಅದು ಸುವಾರ್ತಾಸೇವಕನ ಗುರಿಯಾಗಿರಕೂಡದು. ದೇವರ ಚಿತ್ತವನ್ನು ನೆರವೇರಿಸುವುದೇ ಆತನ ಗುರಿಯಾಗಿರಬೇಕು.

ಯೇಸುಕ್ರಿಸ್ತನ ಜೀವಿತದಲ್ಲಿ ಯೆರೂಸಲೇಮ್ ಪಟ್ಟಣವು, ಆತನು ಶಿಲುಬೆಯ ಮೇಲೆ ತಂದೆಯ ಚಿತ್ತವನ್ನು ನೆರವೇರಿಸುವ ಪರಕಾಷ್ಠತೆಯನ್ನು, ತಲುಪಿದ ಸ್ಥಳವಾಗಿದ್ದಿತ್ತು ಮತ್ತು ನಾವು ಆತನ ಸಂಗಡ ಅಲ್ಲಿಯವರೆಗೆ ಸಾಗಿಹೋಗದಿದ್ದರೆ ನಾವು ಆತನ ಜೊತೆ ಗೆಳೆತನದಲ್ಲಿರಲಾರೆವು. ನಮ್ಮ ಪ್ರಭುವು ಯೆರೂಸಲೇಮಿಗೆ ಹೋಗುವ ಮಾರ್ಗದಲ್ಲಿ ಏನೊಂದೂ ಆತನನ್ನು ದೃತಿ ಗೆಡಿಸಲಿಲ್ಲ. ಮಾರ್ಗಮಧ್ಯದಲ್ಲಿ ಆತನನ್ನು ಹಿಂಸಿಸಿದ ಊರುಗಳು ಅಡ್ಡ ಬಂದಾಗ ಆತನು ಅವುಗಳನ್ನು ತ್ವರೆಯಾಗಿ ದಾಟಿಹೋಗಲಿಲ್ಲ ಅಥವಾ ತನ್ನನ್ನು ಆದರಿಸಿ ಪುರಸ್ಕರಿಸಿದ, ಊರುಗಳನ್ನು ಸಾವಕಾಶವಾಗಿ ದಾಟಲಿಲ್ಲ. ಕೃತಜ್ಞತೆಗಳಾಗಲೀ, ಕೃತಘ್ನತೆಗಳಾಗಲೀ, ಯೆರೂಸಲೇಮಿಗೆ ಹೋಗುವ ಉದ್ದೇಶದಿಂದ ಆತನನ್ನು ಕೂದಲೆಳೆಯಷ್ಟಾದರೂ ಪಲ್ಲಟಗೊಳಿಸಲಿಲ್ಲ.

''ಗುರುವಿಗಿಂತ ಶಿಷ್ಯನು ದೊಡ್ಡವನಲ್ಲ'' (ಮತ್ತಾ 10:24) ಆತನಿಗೆ ಸಂಭವಿಸಿದವುಗಳೆಲ್ಲವೂ ಆತನ ಶಿಷ್ಯರಾದ ನಮಗೆ, ನಾವು ನಮ್ಮ ಯೆರೂಸಲೇಮಿಗೆ ಹೋಗುವಾಗ ಸಂಭವಿಸುತ್ತವೆ. ಆ ಮಾರ್ಗದಲ್ಲಿರುವಾಗ ದೇವರ ಕಾರ್ಯಗಳು ನಮ್ಮೊಳಗೆ ವ್ಯಕ್ತಗೊಳ್ಳುತ್ತವೆ ಮತ್ತು ಜನರು ಆಶೀರ್ವಾದ ಗಳನ್ನು ಹೊಂದಿಕೊಳ್ಳುವರು; ಅವರಲ್ಲಿ ಒಂದಿಬ್ಬರು ತಮ್ಮ ಕೃತಜ್ಞತೆಯನ್ನು ತೋರಿಸುವರು, ಉಳಿದವರು ಬಹಳಷ್ಟು ಕೃತಘ್ನತೆಯನ್ನೇ ತೋರ್ಪಡಿಸುತ್ತಾರೆ. ಆದರೆ ನಾವು ನಮ್ಮ ಯೆರೂಸಲೇಮಿಗೆ ಹೋಗುವಾಗ ಇವುಗಳಾಗಲೀ, ಬೇರಿನ್ನೇನೇಯಾಗಲಿ, ನಮ್ಮ ಮಾರ್ಗವನ್ನು ಪಲ್ಲಟಗೊಳಿಸಬಾರದು.

''ಅಲ್ಲಿ ಆತನನ್ನು ಶಿಲುಬೆಗೆ ಹಾಕಿದರು'' (ಲೂಕ 23:33): ನಮ್ಮ ಸ್ವಾಮಿಯು ಯೆರೂಸಲೇಮನ್ನು ಸೇರಿದಾಗ ಅದೇ ಆತನಿಗೆ ಸಂಭವಿಸಿತು ಮತ್ತು ಆ ಸಂಭವಿಸುವಿಕೆಯೇ ನಮ್ಮ ರಕ್ಷಣೆಗೆ ಮಹಾದ್ವಾರವಾಯಿತು. ಈಗ ದೇವಭಕ್ತರು ಶಿಲುಬೆಯ ಮರಣದಲ್ಲಿ ಅಂತ್ಯಗೊಳ್ಳುವುದಿಲ್ಲ; ಕ್ರಿಸ್ತನ ಕೃಪೆಯ ಮೂಲಕ ಮಹಿಮೆಯಲ್ಲಿ ಕೊನೆ ಹೊಂದುತ್ತಾರೆ. ಆ ಸಮಯದವರೆಗೂ ''ನಮ್ಮ ಘೋಷಣೆಯು ಇಂತಿರಲಿ'' – ''ನಾವು ಸಹಾ ಯೆರೂಸಲೇಮಿಗೆ ಹೋಗುತ್ತೇವೆ.''

# 'ಹೋಗು'ವುದರ ಸಿದ್ಧತೆ

**''ಆದಕಾರಣ ನೀನು ನಿನ್ನ ಕಾಣಿಕೆಯನ್ನು ಯಜ್ಞವೇದಿಯ ಹತ್ತಿರಕ್ಕೆ ತಂದಾಗ ನಿನ್ನ ಸಹೋದರನ ಮನಸ್ಸಿನಲ್ಲಿ ನಿನ್ನ ಮೇಲೆ ಏನೋ ವಿರೋಧವದೆ ಎಂಬುದು ನಿನ್ನ ನೆನಪಿಗೆ ಬಂದರೆ, ನಿನ್ನ ಕಾಣಿಕೆಯನ್ನು ಆ ಯಜ್ಞವೇದಿಯ ಮುಂದೆಯೇ ಬಿಟ್ಟು ಹೋಗಿ ಮೊದಲು ನಿನ್ನ ಸಹೋದರನ ಸಂಗಡ ಒಂದಾಗು; ಆ ಮೇಲೆ ಬಂದು ನಿನ್ನ ಕಾಣಿಕೆಯನ್ನು ಕೊಡು'' - (ಮತ್ತಾ 5:23-24)**

ನಾವು ನಮ್ಮ ಜೀವನದಲ್ಲಿ ಸಂಪೂರ್ಣವಾಗಿ ಸಿದ್ಧರಾಗಿರುವ ಹಂತಕ್ಕೆ ಬರುತ್ತೇವೆ ಎಂದು ಊಹಿಸಿಕೊಳ್ಳುವುದು ಸುಲಭ, ಆದರೆ ಅದಕ್ಕೆ ಅವಶ್ಯ ವಿರುವ ಸಿದ್ಧತೆಯನ್ನು ಧಿಡೀರನೇ ಸಾಧಿಸಲು ಆಗುವುದಿಲ್ಲ, ಅದೊಂದು ಎಡೆಬಿಡದೆ ಸಾಧನೆ, ಅಲ್ಪವಾಗಿರುವುದನ್ನೇ ಯಾವುದೋ ಒಂದು ಹಂತದಲ್ಲಿ, ನಮಗಾದ ಅನುಭವದಲ್ಲಿ ನೆಲೆಗೊಂಡು 'ಅಷ್ಟು ಸಾಕು' ಎಂಬ ನೆಮ್ಮದಿಯಲ್ಲಿರುವುದು ಅಪಾಯಕರ. ಸಿದ್ಧತೆ ಮತ್ತು ಇನ್ನೂ ಹೆಚ್ಚಿನ ಸಿದ್ದತೆ ಹೀಗೆ, ಅದನ್ನು ಸತತವಾಗಿ ಸಾಧನೆ ಮಾಡುತ್ತಿರುವುದೇ ಕ್ರಿಸ್ತೀಯ ಜೀವನ.

ಹೊಸದಾಗಿ ಕ್ರೈಸ್ತನಾದವನಿಗೆ ತ್ಯಾಗಪ್ರಜ್ಞೆಯು ತುಂಬಾ ಆಕರ್ಷಣೀಯ ವಾಗಿರುತ್ತದೆ. ಮಾನವನ ಒಂದು ದೃಷ್ಟಿಯಂತೆ, ನಮ್ಮಲ್ಲಿರುವ ವೀರಾವೇಶದ ಭಾವನೆಯು ಯೇಸುಕ್ರಿಸ್ತನಿಗೆ ತುಂಬಾ ಹಿಡಿಸುತ್ತದೆಂದು ನಾವು ತಿಳಿದಿರುತ್ತೇವೆ, ಆದರೆ ಯೇಸುಕ್ರಿಸ್ತನ ವಾಕ್ಯಗಳು ವೀರಾವೇಶದ ನಮ್ಮ ಕುತೂಹಲಗಳನ್ನು ಇದ್ದಕ್ಕಿದ್ದಂತೆ ಪರೀಕ್ಷೆಗೊಳಪಡಿಸುವುದನ್ನು ನಾವು ಕಾಣುತ್ತೇವೆ. ''....ಹೋಗಿ ಮೊದಲು ನಿನ್ನ ಸಹೋದರನ ಸಂಗಡ ಒಂದಾಗು''. ಈ 'ಹೋಗು' ಎಂಬುವ ಸಿದ್ಧತೆಯನ್ನು ಬಹು ಸೂಕ್ಷ್ಮವಾಗಿ ಪರಿಶೀಲಿಸಲು ದೇವರ ವಾಕ್ಯಕ್ಕೆ ಆಸ್ಪದ ಮಾಡಿಕೊಡಬೇಕು. ವೀರಾವೇಶದ ತ್ಯಾಗ ಭಾವವು ಅಷ್ಟೇನೂ ಒಳ್ಳೆಯದಲ್ಲ. ದೇವರ ಸೇವೆಗೆ ಯಾವ ಸಮಯದಲ್ಲಿಯೂ ಉಪಯೋಗಕ್ಕೆ ಬರಲಾರದಂಥ ಒಂದು ಸ್ವಭಾವವನ್ನು ಪರಿಶುದ್ಧಾತ್ಮನು ನಿನ್ನಲ್ಲಿ ಪತ್ತೆ ಹಚ್ಚುವನು. ದೇವರು ಹೊರತು ಬೇರೆ ಯಾರೂ ನಿನ್ನೊಳಗಿರುವ 'ಅದನ್ನು' ಪತ್ತೆ ಹಚ್ಚಲಾರರು. ದೇವರಿಗೆ ಮರೆಮಾಡಿ ಬಚ್ಚಿಡುವಂಥಾದ್ದೇನಾದರೂ ನಿನ್ನಲ್ಲುಂಟೋ? ಇದ್ದರೆ, ದೇವರು ತನ್ನ ಬೆಳಕಿನಿಂದ ಅದನ್ನು ಹುಡುಕಿ ನಿನಗೆ ಮನಗಾಣಿಸಲಿ. ಅಲ್ಲಿರುವುದು ಪಾಪವೇ ಆಗಿದ್ದರೆ - ಅದನ್ನು 'ಹೌದು' ಎಂದು ಒಪ್ಪಿಕೊಳ್ಳುವುದಲ್ಲ - ಅದಕ್ಕಾಗಿ ಮಾನಸಾಂತರಪಟ್ಟು ದೇವರಿಗೆ ಅದನ್ನು ಅರಿಕೆ ಮಾಡಬೇಕು. ನಿನ್ನ ಮೇಲೆ ನಿನಗಿರುವ ನ್ಯಾಯವಾದ ಸ್ವಾಮ್ಯವು, ಅದೆಷ್ಟೇ ದೈನ್ಯತೆ ಗೊಳಗಾದರೂ ಸರಿಯೇ, ಕರ್ತನೂ, ಗುರುವೂ ಆಗಿರುವಾತನಿಗೆ ಅದನ್ನು ವಿಧೇಯವಾಗುವಂತೆ ಮಾಡಲು ನಿನಗೆ ಮನಸ್ಸುಂಟೋ ?

ಪವಿತ್ರಾತ್ಮನು ತಿಳಿಸುವ ನಿನ್ನ ತಪ್ಪಿತಸ್ಥಿಕೆಯನ್ನು ತಳ್ಳಿಹಾಕಬೇಡ. ದೇವರ ಆತ್ಮನು ಅದನ್ನು ನಿನ್ನ ಮನಸ್ಸಿಗೆ ತೋರಿಸುವಷ್ಟು ಮುಖ್ಯವಾದ ಸಂಗತಿ ಅದಾಗಿದ್ದರೆ ಮಾತ್ರ ಆ ಸಂಗತಿಯನ್ನು ದೇವರು ನಿನ್ನೊಳಗೆ ಪತ್ತೆ ಹಚ್ಚಿರುತ್ತಾನೆ. ಯಾವುದೋ ಒಂದು ಗುರುತರವಾಗಿರುವದನ್ನು ತ್ಯಜಿಸಿಬೇಕೇನೋ ಎಂದು ನೀನು ಭಾವಿಸಿ ಕೊಂಡಿರುವೆಯಷ್ಟೆ! ಆದರೆ ಅತ್ಯಂತ ಅಲ್ಪವಾಗಿರುವುದನ್ನೇ 'ತ್ಯಜಿಸು' ಎಂದು ದೇವರು ನಿನಗೆ ಹೇಳುತ್ತಾನೆ, ಆ ತೃಣವಾದುದರ ಬೆನ್ನಿನ ಹಿಂದೆಯೇ ನಮ್ಮ ಹಠಮಾರಿತನವೆಂಬ ಅಭೇದ್ಯ ದುರ್ಗವೇ ಇರುತ್ತದೆ. ''ನನ್ನ ಮೇಲೆ ನನಗಿರುವ ಸ್ವಾಮಿತ್ವದ ಹಕ್ಕು, ಇದನ್ನು ನಾನು ಬಿಟ್ಟು ಕೊಡುವುದೇ ಇಲ್ಲ'' - ನೀನು ಯೇಸುಕ್ರಿಸ್ತನ ಶಿಷ್ಯನಾಗಿರುವುದೆಂದರೆ, ಈ ಸ್ವಾಮಿತ್ವವನ್ನೇ ಮೊದಲು ಬಿಟ್ಟುಕೊಡೆಂದು ದೇವರು ನಿನ್ನಿಂದ ಅಪೇಕ್ಷಿಸುತ್ತಾನೆ.

# ‘ಹೋಗು’ ಇದರ ಬಾಂಧವ್ಯ

**‘‘ಒಬ್ಬನು - ಒಂದು ಮೈಲು ದೂರ ಬಾ ಎಂದು ನಿನ್ನನ್ನು ಬಿಟ್ಟಿಹಿಡಿದರೆ, ಅವನ ಸಂಗಡ ಎರಡು ಮೈಲು ಹೋಗು’’ - (ಮತ್ತಾಯ 5:41)**

ಯೇಸುಕ್ರಿಸ್ತನ ಬೋಧನೆಯ (ಪರ್ವತ ಪ್ರಸಂಗ) ಸಾರಾಂಶವೆಂದರೆ, ಆತನು ನಮ್ಮೊಳಗೆ ಅಲೌಕಿಕವಾದ ಕಾರ್ಯವನ್ನು ಮಾಡದ ಹೊರತು, ನಮ್ಮ ಜೀವಿತದಲ್ಲಿ ಆತನು ಬಯಸುತ್ತಿರುವ ಸಂಬಂಧ ಗಳು ನಮಗೆ ಅಸಾಧ್ಯವಾಗಿರುತ್ತವೆ. ತನ್ನ ಶಿಷ್ಯನಾದವನು, ದಬ್ಬಾಳಿಕೆ ಮತ್ತು ಅನ್ಯಾಯಕ್ಕೊಳಗಾದಾಗ ಅವನಿಗೆ ಉಂಟಾಗುವ ಅವಮಾನದ, ಅಸಮಾಧಾನದ, ಅತ್ಯಲ್ಪ ಅಸಮಾಧಾನವನ್ನಾದರೂ ತೋರಿಸದೆ, ಹೃದಯಾಂತರಾಳದಲ್ಲಿಯೂ ಸಹಾ ಹತ್ತಿಕ್ಕಿಕೊಳ್ಳದೇ ಇರುವಂಥ ಮನೋಭಾವವನ್ನು ಅವನಿಂದ ಯೇಸು ಕ್ರಿಸ್ತನು ಖಂಡಿತ ವಾಗಿಯೂ ಬಯಸುತ್ತಾನೆ. ಯೇಸುಕ್ರಿಸ್ತನು ತನ್ನ ಸೇವಕನ ಮೇಲೆ ಹೇರುವ ಒತ್ತಡವನ್ನು ಅವನಲ್ಲಿರುವ ತೀವ್ರ ಉತ್ಸಾಹವೂ ಸಹ ಎಂದಿಗೂ ತಾಳಲಾರದು, ಆದರೆ ಒಂದು ಮಾತ್ರ ಅದನ್ನು ತಾಳುತ್ತದೆ, ಅದು ಆತನೊಂದಿಗೆ, ಆತನ ಸೇವಕನು ಹೊಂದಿರುವ ವೈಯಕ್ತಿಕ ಬಾಂಧವ್ಯ. ಆ ಬಾಂಧವ್ಯವು - ‘ದೇವರು ನನ್ನನ್ನು ಎಲ್ಲಿಗಾದರೂ ಕಳುಹಿಸಲಿ ನಾನು ಸಿದ್ಧನಾಗಿದ್ದೇನೆ’ ಎನ್ನುವ ಒಂದೇ ಒಂದು ಉದ್ದೇಶವು ಮಾತ್ರ ಉಳಿಯುವ ತನಕ, ಉಳಿದಿರುವ ಬೇರೆಲ್ಲವನ್ನೂ ಸಮಗ್ರವಾಗಿ ಚೊಕ್ಕಟಗೊಳಿಸುವಂಥ ಶ್ರಮಾ ಸಾಧನದೊಳಗೆ ಸಾಗಿಸಿ ಬಿಡುತ್ತದೆ. ಆಗ ಬೇರೆ ಬಾಂಧವ್ಯಗಳೆಲ್ಲವೂ ಮೊಬ್ಬು ಕವಿದ ಹಾಗೆ ಕಾಣದೇ ಹೋಗಿ ಬಿಡುತ್ತವೆ. ಆದರೆ ಯೇಸುಕ್ರಿಸ್ತ ನೊಂದಿಗಿರುವ ನಮ್ಮ ವೈಯಕ್ತಿಕ ಭಾಂದವ್ಯ ಮಾತ್ರ ಎಂದಿಗೂ ಅಳಿದು ಹೋಗಲಾರದು.

ಯೇಸುಕ್ರಿಸ್ತನು ಮಾಡಿದ ಪರ್ವತ ಪ್ರಸಂಗವು ಸಾಧಿಸಲಾರದಷ್ಟು ಆದರ್ಶಮಯವಾದುದಲ್ಲ, ಯೇಸುಕ್ರಿಸ್ತನು ನಮ್ಮ ಸ್ವಭಾವವನ್ನು ಬದಲಾಯಿಸಿ ಅದೇ ಜಾಗದಲ್ಲಿ ತನ್ನ ಸ್ವಂತ ಸ್ವಭಾವವನ್ನಿರಿಸಿದ ನಂತರ ಏನಾಗುತ್ತದೆ ಎಂಬದನ್ನು ತಿಳಿಯಪಡಿಸುವುದೇ ಪರ್ವತ ಪ್ರಸಂಗ. ಯೇಸುಕ್ರಿಸ್ತನು ಮಾತ್ರವೇ ಪರ್ವತ ಪ್ರಸಂಗವನ್ನು ನಮ್ಮ ನಿಜ ಜೀವಿತದಲ್ಲಿ ಈಡೇರಿಸುತ್ತಾನೆ.

ನಾವು ಕ್ರಿಸ್ತನ ಶಿಷ್ಯರಾಗಬೇಕಾದರೆ, ಅಲೌಕಿಕ ಶಕ್ತಿಯೊಂದು ನಮ್ಮನ್ನು ಆತನ ಶಿಷ್ಯರನ್ನಾಗಿ ಮಾಡಬೇಕು; ಎಲ್ಲಿಯವರೆಗೆ, ನಾವು ಹೇಗಾದರೂ ಮಾಡಿ ಆತನ ಶಿಷ್ಯರಾಗಿಯೇ ತೀರುತ್ತೇವೆನ್ನುವ ದೃಢ ಸಂಕಲ್ಪದ ಉದ್ದೇಶವುಳ್ಳವರಾಗಿರುವವರೆಗೂ ನಾವು ಆತನ ಶಿಷ್ಯರಾಗುವುದಿಲ್ಲ. ‘‘ನೀವು ನನ್ನನ್ನು ಆರಿಸಿ ತೆಗೆದುಕೊಂಡಿಲ್ಲ ಆದರೆ ನಾನು ನಿಮ್ಮನ್ನು ಆರಿಸಿ ತೆಗೆದುಕೊಂಡಿರುವೆನು’’ (ಯೋಹಾನ 15:16) ಈ ರೀತಿ ಯಾಗಿಯೇ ದೇವರ ಕೃಪಾವರವು ಸುರಿಯಲಾರಂಭಿಸುತ್ತದೆ. ಇದು ನಾವೆಂದಿಗೂ ತಪ್ಪಿಸಿಕೊಳ್ಳಲಾರದ ಬಂಧನ. ಇದಕ್ಕೆ ನಾವು ಅವಿಧೇಯತೆಯನ್ನು ತೋರಬಹುದು ಆದರೆ ಅವಿಧೇಯತೆಯನ್ನು ಉತ್ಪನ್ನ ಮಾಡಲು ನಮ್ಮಿಂದಾಗುವುದಿಲ್ಲ. ದೇವರ ಅಲೌಕಿಕವಾದ ಕೃಪೆಯಿಂದ ನಾವು ಆತನ ಬಳಿಗೆ ಸೆಳೆಯಲ್ಪ ಟ್ಟಿರುವೆವು ಮತ್ತು ಈ ಕಾರ್ಯವು ಎಲ್ಲಿಂದ ಆರಂಭವಾಯಿತೆನ್ನುವುದನ್ನು ನಾವು ಹಿಂತಿರುಗಿ ನೋಡಿ ಗುರುತಿಸಲಾರೆವು. ನಮ್ಮ ಸ್ವಾಮಿಯು ನಮ್ಮನ್ನು ಶಿಷ್ಯರನ್ನಾಗಿ ಮಾಡುವುದೊಂದು ಅಲೌಕಿಕ ಸಂಗತಿ. ನಮ್ಮಲ್ಲಿರುವ ಯೋಗ್ಯತೆಗಳ ಆಧಾರದ ಮೇಲೆ ಶಿಷ್ಯನನ್ನು ರೂಪಿಸುವುದಿಲ್ಲ. ನಮಗೆ ಸಹಜವಾಗಿ ಸಾಧ್ಯ ವಿರುವ ಕಾರ್ಯಗಳನ್ನು ನಾವು ಮಾಡುವಂತೆ ದೇವರು ನಮ್ಮನ್ನು ಕೇಳುವುದಿಲ್ಲ-ಆತನ ಕೃಪೆಯ ಮುಖಾಂತರ ನಾವು ಕಾರ್ಯ ಮಾಡಲು ಪರಿಪೂರ್ಣವಾಗಿ ಯೋಗ್ಯರಾಗಿರುವಂಥವುಗಳನ್ನೇ ನಾವು ಮಾಡುವಂತೆ ಆತನು ಕೇಳುತ್ತಾನೆ - ಹಾಗೆ ನಾವು ಮಾಡುತ್ತಿರಬೇಕಾದಾಗ ನಾವೇ ಹೊತ್ತುಕೊಳ್ಳಬೇಕಾದ ಶಿಲುಬೆಯು ಆ ದಾರಿಯಲ್ಲಿ ಸದಾ ನಮ್ಮೆದುರಿಗೆ ಬರುತ್ತದೆ.

# ಸಮಾಧಾನಕ್ಕಾಗಿ 'ಹೋಗು'ವಿಕೆ

**''ನಿನ್ನ ಸಹೋದರನ ಮನಸ್ಸಿನಲ್ಲಿ ಏನೋ ವಿರೋಧವದೆ ಎಂಬುದು ನಿನ್ನ ನೆನಪಿಗೆ ಬಂದರೆ .........'' - (ಮತ್ತಾಯ 5:23)**

ನೀನು ಯಜ್ಞವೇದಿಯ ಹತ್ತಿರಕ್ಕೆ ಬಂದಾಗ ಅಲ್ಲಿ - ನಿನ್ನ ಸಹೋದರನ ಮನಸ್ಸಿನಲ್ಲಿ ಏನೋ ವಿರೋಧವದೆ ಎಂಬುದು ನಿನ್ನ ನೆನಪಿಗೆ ಬಂದರೆ, - ಯಾವುದೋ ಅನಾರೋಗ್ಯಕರ ಸೂಕ್ಷ್ಮತೆಗಳಿಂದ ಏನನ್ನಾದರೂ ಕೆದಕಿ ನೆನಪು ಮಾಡಿಕೊಳ್ಳುವುದಲ್ಲ - ತಾನಾಗಿಯೇ ''ನಿನ್ನ ನೆನಪಿಗೆ ಬಂದರೆ'' ಅಂದರೆ ದೇವರ ಆತ್ಮನ ಮುಖಾಂತರ ನಿನ್ನ ಜಾಗೃತ ಮನಸ್ಸಿಗೆ ಹೊಳೆದರೆ : ''ಮೊದಲು ನಿನ್ನ ಸಹೋದರನ ಸಂಗಡ ಒಂದಾಗು; ಆ ಮೇಲೆ ಬಂದು ನಿನ್ನ ಕಾಣಿಕೆಯನ್ನು ಕೊಡು'' (ಮತ್ತಾ 5:24). ಲವಲೇಶವಾದರೂ ಸಂಕೋಚವಿರದ ಶಿಕ್ಷಣವನ್ನು ದೇವರು ನಿನಗೆ ಕೊಡುತ್ತಿರುವಾಗ, ನಿನ್ನೊಳಗುಂಟಾಗುವ ಪವಿತ್ರಾತ್ಮನ ತೀವ್ರ ಸಂವೇದನೆಗಳಿಗೆಂದಿಗೂ ಅಡ್ಡಿ ಮಾಡಬೇಡ.

''ಮೊದಲು ನಿನ್ನ ಸಹೋದರನ ಸಂಗಡ ಒಂದಾಗು.'' ಇಲ್ಲಿ ನಮ್ಮ ಸ್ವಾಮಿಯವರ ನಿರ್ದೇಶನವು ತುಂಬಾ ಸರಳವಾಗಿದೆ ''ಮೊದಲು ಒಂದಾಗು'' ನೀನು ಬಂದ ದಾರಿಯಲ್ಲಿಯೇ ಹಿಂದಿರುಗಿ ಹೊರಟುಹೋಗು, ಯಜ್ಞವೇದಿಯ ಹತ್ತಿರ ನಿನಗುಂಟಾದ ಪಾಪಾಪರಾದ ನಿರ್ಣಯವು ಸೂಚಿಸಿದ ದಾರಿಯಲ್ಲಿ ಹೊರಟುಹೋಗ ಬೇಕು; ಯಾರ ಮನಸ್ಸಿನಲ್ಲಿ ನಿನ್ನ ಮೇಲೆ ವಿರೋಧವಿದೆಯೋ ಅವನೊಡನೆ ಒಂದಾಗುವ ಕಾರ್ಯವು ಶ್ವಾಸೋಚ್ಛಾರದಷ್ಟು ಸರಳವಾಗಲು ಅಗತ್ಯವಿರುವ ಮನೋದೃಷ್ಟಿಯನ್ನು ಮತ್ತು ಆತ್ಮ ಸಂಯಮವನ್ನು ನೀನು ಹೊಂದಿಕೋ. ಆ ಮನುಷ್ಯನನ್ನು ಅಂದರೆ ಯಾರೊಳಗೆ ನಿನ್ನ ವಿಷಯವಾಗಿ ವಿರೋಧವಿದೆಯೋ ಅವನನ್ನು ಕುರಿತು ಯೇಸುಕ್ರಿಸ್ತನು ಏನೂ ಇಲ್ಲಿ ಹೇಳುತ್ತಿಲ್ಲ, ಆತನು ಹೇಳುತ್ತಿರುವುದು ''ನೀನು ಮೊದಲು ಹೋಗು''. ನನ್ನ ಅರ್ಹತೆ, ನನ್ನ ಹಕ್ಕುಗಳ ಪ್ರಶ್ನೆಯೇ ಇಲ್ಲಿ ಇಲ್ಲ. ತನ್ನ ಸ್ವಂತ ಹಕ್ಕನ್ನು ಬಿಟ್ಟುಕೊಡಬಲ್ಲವನಾಗಿರುವುದು ಮತ್ತು ಯೇಸು ಕ್ರಿಸ್ತನಿಗೆ ವಿಧೇಯ ನಾಗಿರುವುದೇ ಕ್ರಿಸ್ತ ಭಕ್ತನ ಗುರುತು.

''ಆ ಮೇಲೆ ಬಂದು ನಿನ್ನ ಕಾಣಿಕೆಯನ್ನು ಕೊಡು'' - ಅಗತ್ಯವಿರುವ ಪ್ರಕ್ರಿಯೆಯು ಇಲ್ಲಿ ಸ್ಪಷ್ಟವಾಗಿ ಗುರುತಿಸಲ್ಪಟ್ಟಿದೆ. ಪ್ರಥಮವಾಗಿ ಸ್ವಾರ್ಥ ತ್ಯಾಗದ ವೀರಾವೇಶದ ಹುಮ್ಮನಸ್ಸು ನಮ್ಮಲ್ಲಿದೆ, ಆ ಮೇಲೆ ಪವಿತ್ರಾತ್ಮನ ಸಂವೇದನೆಗಳಿಂದ ಪರಿಶೀಲನೆಯಿಂದ ಹಠಾತ್ ಸಂಯಮ, ಆಮೇಲೆ ಪಾಪಾಪರಾಧ ನಿರ್ಣಯದ ಅರಿವಿನ ಸ್ಥಾನಕ್ಕೆ ಬಂದು ನಿಲ್ಲುವಿಕೆ; ತದನಂತರ ಯಾರೊಂದಿಗೆ ನೀನು ಅಪಚಾರವೆಸಗಿರುವಿಯೋ ಅವನ ವಿಷಯವಾಗಿ ನಿಂದ್ಯವಲ್ಲದ ದೃಷ್ಟಿಕೋನ ಮತ್ತು ಸಾರ್ಥಕ ಮನೋಭಾವನೆಗಳಿಂದ ದೇವರ ವಾಕ್ಯಕ್ಕೆ ವಿಧೇಯನಾಗುವ ದಾರಿಯಲ್ಲಿ ಮುಂದಕ್ಕೆಸಾಗಬೇಕು. ಅನಂತರವೇ ಸಂತೋಷದಿಂದ, ಯಥಾರ್ಥತೆಯಿಂದ ಯಾವ ಅಡೆತಡೆಯೂ ಇಲ್ಲದೆ ದೇವರಿಗೆ ಕಾಣಿಕೆಯನ್ನು ಅರ್ಪಿಸಬೇಕು. ಇದೇ ಅಗತ್ಯವಿರುವ ಪ್ರಕ್ರಿಯೆಯು.

# ಸರ್ವವನ್ನು ತ್ಯಜಿಸಿದ 'ಹೋಗು'ವಿಕೆ

**''ಯೇಸುವಿಗೆ - ನೀನು ಎಲ್ಲಿಗೆ ಹೋದರೂ ನಾನು ನಿನ್ನ ಹಿಂದೆ ಬರುತ್ತೇನೆ'' - (ಲೂಕ 9:57)**

ಈ ಮನುಷ್ಯನ ವಿಷಯದಲ್ಲಿ, ಪ್ರಭುವಾದ ಯೇಸುಕ್ರಿಸ್ತನ ಧೋರಣೆಯು ತೀವ್ರವಾದ ನಿರುತ್ಸಾಹವನ್ನು ಮೂಡಿಸುತ್ತದೆ, ಯಾಕೆಂದರೆ ''ಆತನು ಮನುಷ್ಯನ ಆಂತರ್ಯದಲ್ಲಿ ಏನಿದೆ ಎಂಬುದನ್ನು ತಿಳಿದಿದ್ದನು''. (ಯೊಹಾ 2:25) ಇಂಥಾ ಸಂದರ್ಭದಲ್ಲಿ ನಾವಾಗಿದ್ದರೆ - ಒಬ್ಬ ವ್ಯಕ್ತಿಯನ್ನು ದೇವರಿಗಾಗಿ ಗೆದ್ದುಕೊಳ್ಳುವ ಸುಸಂಧಿಯನ್ನು ಕಳೆದುಕೊಳ್ಳುವುದಲ್ಲದೆ ಅವನ ಬಗ್ಗೆ ಅಷ್ಟು ತಣ್ಣನೆಯ ಭಾವನೆಯನ್ನು ಹೊಂದಿ, ಅವನನ್ನು ನಿರುತ್ಸಾಹದಿಂದ ಹಿಂತಿರುಗುವಂತೆ ಮಾಡಿರುವುದುನ್ನು ಊಹಿಸಿರಿ ಎಂದು ಹೇಳುತ್ತಿದ್ದೆವು. ಯೇಸುಕ್ರಿಸ್ತನ ಪರವಾಗಿ ನಿನ್ನ ಸಮರ್ಥನೆಗಳನ್ನು, ನಿನ್ನ ಅಭಿಪ್ರಾಯಗಳನ್ನು ಕೊಡಬೇಡ. ನಿನ್ನೊಳಗೆ ನೋಯಿಯುವಂಥದ್ದೊಂದೂ ಉಳಿಯಲಾರದ ತನಕ ಯೇಸುಕ್ರಿಸ್ತನ ನುಡಿಗಳು ಗಾಯ ಪಡಿಸುತ್ತಾ, ನೋಯಿಸುತ್ತಲೇ ಇರುತ್ತವೆ. ದೇವರ ಸೇವೆಯಲ್ಲಿರುವ ಭಕ್ತನನ್ನು ಅಂತಿಮವಾಗಿ ಹಾಳುಗೆಡುವಂಥವುಗಳೇನಿದ್ದರೂ ಅವುಗಳ ಬಗ್ಗೆ ಯೇಸು ಕ್ರಿಸ್ತ ನಲ್ಲಿ ಮೃದುತ್ವವಿರುವುದಿಲ್ಲ. ಯೇಸುಕ್ರಿಸ್ತನ ಉತ್ತರಗಳು ಕಲ್ಪನೆ ಯಾಧಾರಿತವಲ್ಲ. ಅವು, ಮನುಷ್ಯನ ಆಂತರ್ಯದಲ್ಲೇನಿದೆ ಎಂಬ ತಿಳುವಳಿಕೆಯ ಆಧಾರದ ಮೇಲೆ ನುಡಿಯಲ್ಪಟ್ಟಿವೆ. ನಿನಗೆ ನೋವುಂಟು ಮಾಡುವ, ಯೇಸುಕ್ರಿಸ್ತನ ನುಡಿಯನ್ನು ದೇವರ ಆತ್ಮನು ನಿನ್ನ ಪ್ರಜ್ಞೆಗೆ ತಂದರೆ, ನಿನ್ನೊಳಗಿರುವ ಏನೋ ಒಂದು ಸತ್ತು ಹೋಗುವ ತನಕ ಆತನು ನಿನ್ನನ್ನು ಘಾಸಿ ಗೊಳಿಸುತ್ತಾನೆಂಬುದು ಖಚಿತವಾಗಿದೆ.

ವಚನ 58ರಲ್ಲಿ , ಕ್ರಿಸ್ತನ ಸೇವೆಯು ನನಗೆ ತುಂಬಾ ಹಿತವೆನಿಸಿರುವುದರಿಂದ : ಯೇಸುಕ್ರಿಸ್ತನ ಸೇವೆಯನ್ನು ಮಾಡುತ್ತೇನೆಂದು ಬಯಸುವ ನನ್ನ ಹೃದಯವನ್ನು ಈ ವಚನದಲ್ಲಿರುವ ನುಡಿಗಳು ಹೊಡೆದುರುಳಿಸಿ ಬಿಡುತ್ತವೆ. ಇಂಥಾ ನಿಷ್ಠುರವಾದ ತಿರಸ್ಕಾರವು ನನ್ನ ಸ್ವಾಮಿಯನ್ನು ನನ್ನನ್ನು ಮತ್ತು ನನ್ನ ಹತಾಶೆಯ ನಿರೀಕ್ಷೆಯನ್ನು ಹೊರತುಪಡಿಸಿ ಉಳಿದೆಲ್ಲವನ್ನು ಇಲ್ಲದಂತೆ ನಾಶ ಮಾಡುತ್ತದೆ. 'ನೂರಾರು ಜನರು ಬರಲಿ, ಇಲ್ಲವೇ ಹೋಗಲಿ, ನನ್ನ ಸಂಗಡ ಇರುವ ನಿನ್ನ ಸಂಬಂಧವೇ ನಿನ್ನ ಮಾರ್ಗದರ್ಶಿಯಾಗಿರಬೇಕು. ಆದರೂ 'ನನಗೆ ತಲೆಯಿಡುವಷ್ಟು ಜಾಗವೂ ಇಲ್ಲ' ಎಂಬುದನ್ನು ನೆನಪಿಡಬೇಕು.

ವಚನ 59ರಲ್ಲಿ, ಈ ಮನುಷ್ಯನಾದರೋ ಯೇಸುಕ್ರಿಸ್ತನನ್ನು ನಿರಾಶೆಗೊಳಿಸಲಿಚ್ಛಿಸುತ್ತಿಲ್ಲ ವೆಂದು ಕಾಣುತ್ತದೆ. ಅದೇ ಸಮಯದಲ್ಲಿ ತನ್ನ ಇಹಲೋಕದ ತಂದೆಯನ್ನು ನೋಯಿಸಲು ಬಯಸುತ್ತಿಲ್ಲ. ಯೇಸು ಕ್ರಿಸ್ತನಿಗೆ ತೋರಿಸುವ ನಿಷ್ಠೆಯ ಜಾಗದಲ್ಲಿ, ಬಂಧು ಬಳಗದವರಿಗಾಗಿ ನಮ್ಮ ಸೂಕ್ಷ್ಮ ನಿಷ್ಠೆಯನ್ನು ತೋರಿಸುತ್ತೇವೆ; ಅದರಿಂದ, ನಮ್ಮ ನಿಷ್ಠೆಗಳ ಯಾದಿಯಲ್ಲಿ ಕೊನೆ ಜಾಗವನ್ನು ಯೇಸುಕ್ರಿಸ್ತನು ತೆಗೆದುಕೊಳ್ಳ ಬೇಕಾಗುತ್ತದೆ. ನಿಷ್ಠೆಗಳ ಘರ್ಷಣೆಯ ಸಮಯದಲ್ಲಿ ತೆರಬೇಕಾದ ಬೆಲೆ ಎಷ್ಟೇ ಇರಲಿ, ನೀನು ಮಾತ್ರ ಯಾವಾಗಲೂ ಯೇಸುಕ್ರಿಸ್ತನ ಪರವಾಗಿರಬೇಕು.

ವಚನ 61 : ''ಆದರೆ, ಮೊದಲು...'' ಎಂದು ಹೇಳುವ ಈ ವ್ಯಕ್ತಿಯು, ಯೇಸುಕ್ರಿಸ್ತನನ್ನು ಹಿಂಬಾಲಿಸಲು ತೀವ್ರಾಸಕ್ತಿಯಿಂದ ಸಿದ್ಧನಿರುವನು, ಆದರೆ ಅವನೆಂದಿಗೂ ಆತನ ಹಿಂದೆ ಹೋಗುವುದೇ ಇಲ್ಲ. ಈ ಮನುಷ್ಯನು ಒಂದೆರಡು ಷರತ್ತುಗಳನ್ನು ಕಾಯ್ದಿರಿಸಿಕೊಂಡಿರುವನು. ದೇವರ ಕರೆ ಬಂದೊಡನೆಯೇ, ಕೂಡಲೇ 'ಹೋಗು'ವುದನ್ನಾರಂಭಿಸು ಮತ್ತು ಹೋಗುವುದನ್ನೆಂದಿಗೂ ನಿಲ್ಲಿಸಬೇಡ.

# ಕರಾರು ರಹಿತ 'ಹೋಗು'ವಿಕೆ

**''ನಿನಗೆ ಒಂದು ಕಡಿಮೆಯಾಗಿದೆ... ನೀನು ಬಂದು ನನ್ನನ್ನು ಹಿಂಬಾಲಿಸು'' - (ಮಾರ್ಕ 10:21)**

ಐಶ್ವರ್ಯವಂತನಾದ ಯೌವನಸ್ಥನಿಗೆ, ತಾನು ಪರಿಪೂರ್ಣನಾದ ವ್ಯಕ್ತಿಯಾಗಬೇಕೆಂಬ ಪ್ರಧಾನ ಆಸಕ್ತಿ ಇದ್ದಿತ್ತು. ಆತನು ಯೇಸುಕ್ರಿಸ್ತನನ್ನು ನೋಡಿದಾಗ ಆತನಂತೆ ತಾನೂ ಆಗಬೇಕೆಂದು ಆಶಿಸಿದನು. ಪ್ರಭುವಾದ ಯೇಸುಕ್ರಿಸ್ತನು ಒಬ್ಬನನ್ನು ತನ್ನ ಶಿಷ್ಯನನ್ನಾಗಿ ಮಾಡಿಕೊಳ್ಳುವಾಗ ಅವನ ವೈಯಕ್ತಿಕ ಪರಿಶುದ್ಧತೆಯನ್ನು ಮುಂದಿಡುವುದಿಲ್ಲ ; ''ನನ್ನ ಮೇಲೆ ನನಗಿರುವ ನ್ಯಾಯವಾದ ಹಕ್ಕನ್ನು ಸಂಪೂರ್ಣವಾಗಿ ನಿರ್ನಾಮಗೊಳಿಸಿ, ಯೇಸುಕ್ರಿಸ್ತನೊಂದಿಗೆ ಗುರುತಿಸಿಕೊಳ್ಳಬೇಕು'' ಎಂಬ ಅವಶ್ಯಕತೆ ಯನ್ನು ಅವನ ಮುಂದಿಡುತ್ತಾನೆ. ಯೇಸುಕ್ರಿಸ್ತನೊಂದಿಗಿರುವ ಸಂಬಂಧದ ಜೊತೆಗೆ ಬೇರೆ ಯಾವ ನಂಟೂ ಇರಬಾರದು. ಲೂಕ 14:26ನೇ ವಚನವು ಶುದ್ಧೀಕರಣಕ್ಕೂ, ರಕ್ಷಣೆಗೂ ಯಾವುದೇ ಸಂಬಂಧ ವನ್ನು ಸೂಚಿಸುವುದಿಲ್ಲ. ಯೇಸುಕ್ರಿಸ್ತನೊಂದಿಗೆ ಕರಾರುರಹಿತವಾದ ಗುರುತಿಸಿಕೊಳ್ಳುವಿಕೆಯನ್ನು ಈ ವಚನದಲ್ಲಿ ಕಾಣುತ್ತೇವೆ. ಯೇಸುಕ್ರಿಸ್ತನಿಗಾಗಿ ಸರ್ವಸ್ವವನ್ನೂ ಪರಿತ್ಯಜಿಸಿ ಆತನ ಹಿಂದೆ 'ಹೋಗು'ವಿಕೆ ಎಂದರೇನೆಂಬುದನ್ನು ನಮ್ಮಲ್ಲಿ ಕೆಲವರು ಮಾತ್ರವೇ ತಿಳಿದಿದ್ದಾರೆ.

''ಯೇಸು ಅವನನ್ನು ದೃಷ್ಟಿಸಿ ನೋಡಿ ಪ್ರೀತಿಸಿ...'' (ಮಾರ್ಕ 10:21). ಯೇಸುಕ್ರಿಸ್ತನ ನೋಟವು ಇನ್ನು ಮೇಲೆ ನಿನ್ನ ಸ್ವಾಮಿನಿಷ್ಠೆಯು ಬೇರೆ ಯಾರಿಗೇ ಆಗಲೀ, ಯಾವುದಕ್ಕೇ ಆಗಲೀ ಯಾವ ಸಂಬಂಧವನ್ನೂ ಹೊಂದಿರದಂತೆ, ನಿನ್ನ ಹೃದಯವನ್ನು ಮುರಿದು ಬಿಡುತ್ತದೆ. ಎಂದಾದರೂ ಯೇಸುಕ್ರಿಸ್ತನು ನಿನ್ನನ್ನು ಈ ರೀತಿಯಲ್ಲಿ ದೃಷ್ಟಿಸಿರುವನೇ? ಆತನ ದೃಷ್ಟಿಯು ನಿನ್ನನ್ನು ಪರಿವರ್ತಿಸುತ್ತದೆ ಮತ್ತು ಒಳಹೊಕ್ಕು ಭೇದಿಸುತ್ತದೆ ಮತ್ತು ಸೆರೆಹಿಡಿಯುತ್ತದೆ. ದೇವರ ವಿಚಾರದಲ್ಲಿ ನಿನ್ನ ಜೀವಿತದಲ್ಲಿ ನೀನೆಲ್ಲೆಲ್ಲಿ ಮೃದುವಾಗಿ ರುವೆಯೋ ಅಲ್ಲಿಯೇ ಯೇಸುಕ್ರಿಸ್ತನು ತನ್ನ ದೃಷ್ಟಿಯನ್ನು ನೆಡುವನು. ನೀನಿನ್ನೂ ಕಠಿಣ ಹೃದಯವುಳ್ಳವನೂ, ಪ್ರತಿಕಾರ ಮನೋವೃತ್ತಿಯುಳ್ಳವನೂ ಮತ್ತು ನಿನ್ನ ದಾರಿಯನ್ನೇ ಸಮರ್ಥಿಸಿಕೊಳ್ಳುವವನೂ, ನಿನಗಿಂತಲೂ ಇತರ ವ್ಯಕ್ತಿಗಳೇ ಹೆಚ್ಚು ತಪ್ಪಿತಸ್ಥರೆಂಬ ಧೋರಣೆಯುಳ್ಳ ವನೂ ಆಗಿದ್ದರೆ, ಕ್ರಿಸ್ತನ ದೃಷ್ಟಿಸುವಿಕೆಯು ನಿನ್ನ ಜೀವಿತದಲ್ಲಿರುವ ಅಂಥಾ ಸ್ವಭಾವ ತುಂಬಿದ ದೊಡ್ಡ ಕ್ಷೇತ್ರವಿನ್ನೂ ಪರಿವರ್ತನೆಯಾಗಿಯೇ ಇಲ್ಲವೆಂಬುದನ್ನು ಸೂಚಿಸುತ್ತದೆ.

''ನಿನಗೆ ಒಂದು ಕಡೆಮೆಯಾಗಿದೆ''-ಯೇಸುಕ್ರಿಸ್ತನ ದೃಷ್ಟಿಯಲ್ಲಿ ಒಂದೇ ಒಂದು 'ಒಳ್ಳೆಯ ಸಂಗತಿ' - ತನ್ನ ಸಂಗಡವಿರುವ ಅನ್ಯೋನ್ಯತೆಯ ನಡುವೆ ಬೇರೇನೂ ಇರಬಾರದು ಎಂಬುದೇ.

''ನಿನ್ನ ಬದುಕನೆಲ್ಲಾ ಮಾರಿ...'' (ಮಾರ್ಕ 10:22) ನಾನು ಕೇವಲ ಪ್ರಜ್ಞಾಜೀವಿ ಮಾತ್ರವೇ ಆಗಿರುವಷ್ಟು ನನ್ನನ್ನು ನಾನು ತಗ್ಗಿಸಿಕೊಳ್ಳಬೇಕು. ಎಲ್ಲಾ ವಿಧದ ಅನುಭೋಗಗಳನ್ನು, ನನ್ನದೆನ್ನುವುದೆಲ್ಲವನ್ನು ನಾನು ತ್ಯಜಿಸಿಬಿಡಬೇಕು. ನನ್ನ ಆತ್ಮವನ್ನು ರಕ್ಷಿಸುವುದಕ್ಕೋಸ್ಕರವಲ್ಲ (ಒಂದೇ ಒಂದು ಮಾತ್ರ ಮನುಷ್ಯನನ್ನು ರಕ್ಷಿಸುತ್ತದೆ - ಯೇಸುಕ್ರಿಸ್ತನನ್ನು ಆತುಕೊಂಡಿರುವಿಕೆ) ಯೇಸುಕ್ರಿಸ್ತನನ್ನು ಹಿಂಬಾಲಿಸು ವುದಕ್ಕಾಗಿಯೇ ಈ ತ್ಯಜಿಸುವಿಕೆ. ತ್ಯಜಿಸಿದ ನಂತರ ''ನೀನು ಬಂದು ನನ್ನನ್ನು ಹಿಂಬಾಲಿಸು'' ಆತನ ಮಾರ್ಗವಾದರೋ ಆತನು ನಡೆದು ಹೋಗಿರುವ ಮಾರ್ಗವೇ - ಅದು ಕಲ್ವಾರಿಯ ಮಾರ್ಗ.

# ಕರೆಯುವಿಕೆಯ ಅರಿವು

**''ಸಾರಲೇಬೇಕೆಂಬ ನಿರ್ಬಂಧ ನನಗುಂಟು, ಸಾರದಿದ್ದರೆ ನನ್ನ ಗತಿಯನ್ನು ಏನು ಹೇಳಲಿ'' - (1 ಕೊರಿ 9:16)**

ನಾವು, ದೇವರ ರಹಸ್ಯವಾದ ಮತ್ತು ಅಲೌಕಿಕವಾದ ಸ್ಪರ್ಷವನ್ನು ಮರೆಯುವಂಥವರೇ. ದೇವರ ಕರೆಯುವಿಕೆಯು ಎಲ್ಲಿ ನಿನಗುಂಟಾಯಿತು ಎಂಬುದೆಲ್ಲವನ್ನೂ ನೀನು ವಿವರಿಸಿದರೆ, ಆಗ ಎಂದಾದರೂ ದೇವರ ಕರೆಯುವಿಕೆಯು ನಿನಗಾದಿಯೋ ಎಂದು ನಿನ್ನನ್ನೇ ಪ್ರಶ್ನಿಸಬೇಕಾಗುತ್ತದೆ. ದೇವರ ಕರೆಯುವಿಕೆಯು ಹಾಗೆಲ್ಲಾ ನೀನು ವರ್ಣಿಸಬಹುದಾದ ರೀತಿಯಲ್ಲಿ ಬರುವಂಥಾದ್ದು ಅಲ್ಲ. ಅದು ಅಲೌಕಿಕತೆಗಿಂತಲೂ ಅತ್ಯಧಿಕವಾಗಿರುತ್ತದೆ. ಒಬ್ಬ ಮನುಷ್ಯನ ಜೀವಿತದಲ್ಲಿ, ದೇವರ ಕರೆಯುವಿಕೆಯು ಸಿಡಿಲಿನ ಬಡಿತದಂತೆ, ದಿಢೀರನೆ ಬರುತ್ತದೆ, ಇಲ್ಲವೇ ಪ್ರಾತಃಕಾಲದ ಅರುಣೋದಯದಂತೆ ಕ್ರಮೇಣವಾಗಿ, ಮನವರಿಕೆಯಾಗುತ್ತದೆ, ಅದು ಹೇಗೆಯೇ ಬರಲಿ, ಅದು ಬರುವುದು ಮಾತ್ರ ಅಲೌಕಿಕವಾದ ಒಳಪ್ರವಾಹವಾಗಿ ಬರುತ್ತದೆ. ಅದನ್ನು ವಾಕ್ಯಗಳ ಮೂಲಕ ವಿವರಿಸಲಾಗದು, ನಿನ್ನ ಮೇಲೆ ಹಿಡಿತಹೊಂದಿರುವ ಈ ಲೆಕ್ಕಹಾಕಲಾಗದ ಅಲೌಕಿಕವಾದ ದಿಗ್ಭ್ರಮೆಗೊಳಿಸುವ ದೇವರ ಕರೆಯುವಿಕೆಯ ಪ್ರಜ್ಞೆಯು, ಯಾವ ಕ್ಷಣದಲ್ಲಾದರೂ ದಿಢೀರನೇ ನಿನ್ನನ್ನು ಛೇದಿಸುತ್ತದೆ. ''ನಾನು ನಿನ್ನನ್ನು ಹುಡುಕಿ ಆರಿಸಿಕೊಂಡೆನು'' (ಯೋಹಾನ 15:16). ದೇವರ ಕರೆಯುವಿಕೆಯು, ರಕ್ಷಣಾ ಕಾರ್ಯಕ್ಕಾಗಲೀ ಮತ್ತು ಶುದ್ಧೀಕರಣಕ್ಕಾಗಲೀ ಸಂಬಂಧ ಹೊಂದಿರುವುದಿಲ್ಲ. ನೀನು ಶುದ್ಧೀಕರಿಸಲ್ಪಟ್ಟಿರುವಿ ಎಂಬುವ ಕಾರಣಕ್ಕಾಗಿ ದೇವರ ಸುವಾರ್ತೆ ಸಾರಲು ನೀನು ಕರೆಯಲ್ಪಟ್ಟಿರುವಿ ಎಂಬುದಲ್ಲ; ದೇವರ ಸುವಾರ್ತೆ ಸಾರಲು ಬರುವ ಕರೆಯುವಿಕೆಯು ತೀರಾ ಭಿನ್ನವಾದದ್ದು, ಪೌಲನಾದರೋ 'ಸುವಾರ್ತೆಯನ್ನು ಸಾರಲೇ ಬೇಕೆಂಬ ನಿರ್ಬಂಧ ನನಗುಂಟು' ಎನ್ನುತ್ತಾನೆ.

ನಿನ್ನ ಜೀವಿತದಲ್ಲಿ, ದೇವರ ಮಹತ್ವದ ಅಲೌಕಿಕ ಕರೆಯುವಿಕೆಯನ್ನು ನೀನು ನಿರ್ಲಕ್ಷಿಸಿ, ಅದನ್ನು ಬದಲಾಯಿಸುತ್ತಿರುವೆಯಾದರೆ ಮೊದಲು ನಿನ್ನ ಪರಿಸರಗಳನ್ನು ಮರುಪರಿಶೀಲನೆ ಮಾಡಬೇಕು. ಸುವಾರ್ತಾ ಸೇವೆಯಲ್ಲಿ ದೇವರಿಗೆ ಪ್ರಥಮ ಸ್ಥಾನವನ್ನು ನೀಡದೆ, ನಿನ್ನದೇ ಆದ ಸೇವಾ ಕಲ್ಪನೆಗಳನ್ನು ಇಲ್ಲವೇ ಭಾವೋದ್ವೇಗದ ಅರ್ಹತೆಗಳನ್ನು ಮುಂದು ಮಾಡಿರುವಿಯೋ? ಪೌಲನು ಹೇಳುತ್ತಾನೆ, ''ಸುವಾರ್ತೆಯನ್ನು ಸಾರದಿದ್ದರೆ ನನ್ನ ಗತಿಯನ್ನು ಏನು ಹೇಳಲಿ''! ದೇವರ ಕರೆಯುವಿಕೆಯನ್ನು ಆತನು ಮನಗಂಡಿದ್ದಾನೆ. ಸಾರುವ ಆತನ ಶಕ್ತಿಗೆ ಸ್ಪರ್ಧಿಸುವಂಥಾದ್ದು ಬೇರೆ ಯಾವುದೂ ಇಲ್ಲ.

ದೇವರಿಂದ ಕರೆಯಲ್ಪಟ್ಟ ಒಬ್ಬ ಸ್ತ್ರೀಯಾಗಲಿ, ಪುರುಷನಾಗಲಿ; ಅವರಿಗೆ ಪ್ರತಿಕೂಲ ಸನ್ನಿವೇಶಗಳೂ, ಕಾರ್ಯವೆಸಗುತ್ತಿರುವ ಶಕ್ತಿಗಳೂ ಮುಖ್ಯವಲ್ಲ. ಅಂತಿಮವಾಗಿ ಅವೆಲ್ಲವುಗಳನ್ನು ದೇವರು ತನ್ನ ಉದ್ದೇಶಾರ್ಥಕ್ಕಾಗಿ ಬಳಸಿಕೊಳ್ಳುವನು. ನಿನ್ನ ಜೀವಿತದಲ್ಲಿ ದೇವರ ಉದ್ದೇಶಗಳಿಗೆ ಸಮ್ಮತಿಸುವುದಾದರೆ, ಆಗ ದೇವರು ನಿನ್ನ ಪ್ರಜ್ಞಾಜೀವಿತವನ್ನು ಮಾತ್ರವಲ್ಲದೇ, ನೀನು ಅರಿಯಲಸಾಧ್ಯವಾದ ನಿನ್ನ ಜೀವಿತದ ಆಳವಾದ ಕ್ಷೇತ್ರಗಳನ್ನು ಸಹಾ ಸಮರಸಗೊಳಿಸುತ್ತಾನೆ.

# ಕರೆಯುವಿಕೆಯ ನಿಯೋಜನೆ

**''ಈಗ ನಿಮಗೋಸ್ಕರ ಅನುಭವಿಸುತ್ತಿರುವ ಬಾಧೆಗಳಲ್ಲಿ ಸಂತೋಷಪಟ್ಟು ಕ್ರಿಸ್ತನ ಸಂಕಟಗಳೊಳಗೆ ಇನ್ನೂ ಉಳಿದಿದ್ದನ್ನು ..... ಆತನ ದೇಹಕ್ಕೋಸ್ಕರ ನನ್ನ ಶರೀರದಲ್ಲಿ ಅನುಭವಿಸುತ್ತೇನೆ'' - (ಕೊಲೊಸ್ಸೆ 1:24)**

ನಾವು ಮಾಡಿಕೊಂಡ ನಮ್ಮ ಸ್ವಂತ ಆಧ್ಯಾತ್ಮಿಕ ಸಮರ್ಪಣೆಯನ್ನೇ, ದೇವರ ಕರೆಯುವಿಕೆ ಎಂದು ಹೇಳಿಕೊಳ್ಳುತ್ತೇವೆ, ಆದರೆ ದೇವರೊಂದಿಗೆ ಯೋಗ್ಯ ಸಂಬಂಧ ವನ್ನು ಪಡೆದಾಗ, ಅದೆಲ್ಲವನ್ನು ದೇವರು ತಳ್ಳಿ ಬದಿಗೆ ಸರಿಸಿಬಿಡುವನು. ನೀನೆಂದೂ ಕನಸಿನಲ್ಲಿಯೂ ಎಣಿಸಲಾರದ ರೀತಿಯಲ್ಲಿದ್ದ ತನ್ನ ಕರೆಯುವಿಕೆ ಏನಾಗಿತ್ತೆಂಬುದನ್ನು ದೇವರು ನಿನ್ನ ಗ್ರಹಿಕೆಗೆ ತಂದಾಗ, ಅದೇ ದೇವರ ಕರೆಯುವಿಕೆ ಎಂಬುದನ್ನು ನೀನು ಮನಗಾಣದಿದ್ದದ್ದಕ್ಕಾಗಿ ಉಂಟಾಗುವ ಪ್ರಚಂಡ ವ್ಯಥೆಗೆ ಈಡಾಗಿಬಿಡುವೆ. ಪ್ರಕಾಶಮಾನವಾದ, ಮಿಂಚಿನ ಕ್ಷಣ ವೊಂದರಲ್ಲಿ ನಾವು ದೇವರ ಉದ್ದೇಶವನ್ನು ಗ್ರಹಿಸಿ ಹೇಳುತ್ತೇವೆ. ''ಇಗೋ, ನಾನಿದ್ದೇನೆ. ನನ್ನನ್ನು ಕಳುಹಿಸು'' (ಯೆಶಾ 6:8).

ಈ ಕರೆಯುವಿಕೆಯು, ವೈಯಕ್ತಿಕ ಶುದ್ಧೀಕರಣಕ್ಕೇನೂ ಸಂಬಂಧ ಹೊಂದಿರುವುದಿಲ್ಲ, ಆದರೆ ಮುರಿಯಲ್ಪಡುವ ರೊಟ್ಟಿಗೂ ಸುರಿಯಲ್ಪಡುವ ದ್ರಾಕ್ಷಾರಸಕ್ಕೂ ಸಂಬಂಧಹೊಂದಿದೆ. ನಮ್ಮನ್ನು ಕಿವುಚಿ ಜಜ್ಜಲು, ದೇವರು ಬಳಸುವ ಬೆರಳುಗಳನ್ನು ನಾವು ಅಡ್ಡಿಪಡಿಸಿದರೆ, ಆತನು ನಮ್ಮನ್ನು ದ್ರಾಕ್ಷಾ ರಸವನ್ನಾಗಿ ಮಾಡುವುದೇ ಇಲ್ಲ. ಒಂದು ವೇಳೆ ದೇವರು ತನ್ನ ಸ್ವಂತ ಕೈಬೆರಳು ಗಳಿಂದ ನಮ್ಮನ್ನು ಕಿವುಚಿ ಜಜ್ಜಿ, ವಿಶಿಷ್ಠ ರೀತಿಯಲ್ಲಿ ಸುರಿಯಲ್ಪಡುವ ದ್ರಾಕ್ಷಾರಸವನ್ನಾಗಿಯೂ ಮುರಿಯಲ್ಪಡುವ ರೊಟ್ಟಿಯನ್ನಾಗಿಯೂ ಮಾಡುವಂತಿದ್ದರೆ, ನಾವೇನೂ ಆಕ್ಷೇಪಣೆ ಮಾಡುವುದಿಲ್ಲ. ಆದರೆ ನಾವು ಇಷ್ಟ ಪಡದಿರುವ ಬೇರೊಬ್ಬನನ್ನಾಗಲೀ, ನಾವೆಂದಿಗೂ ಅದಕ್ಕೆ ಮಣಿಯುವು ದಿಲ್ಲವೆಂದು ಹೇಳಿಕೊಂಡ ಸಮಯ ಸಂದರ್ಭಗಳೆನ್ನುವ ಬೆರಳುಗಳನ್ನು ಕಿವುಚಲೂ, ಜಜ್ಜಲೂ ದೇವರು ಬಳಸಿದಾಗ, ಅದನ್ನು ನಾವು ಅಡ್ಡಿಪಡುತ್ತೇವೆ. ನಮ್ಮ ಹುತಾತ್ಮತೆಯ ದೃಷ್ಯಾವಳಿಯನ್ನು ನಾವೇ ಆರಿಸಿಕೊಳ್ಳುವ ಪ್ರಯತ್ನ ಮಾಡಬಾರದು. ನಾವೇನಾದರೂ ದ್ರಾಕ್ಷಾರಸವಾಗಿ ಮಾಡಲ್ಪಡ ಬೇಕಾದರೆ, ನಾವು ಜಜ್ಜಲ್ಪಡಲೇ ಬೇಕು. ದ್ರಾಕ್ಷೆಹಣ್ಣುಗಳನ್ನು ಕುಡಿಯಲಿಕ್ಕಾಗದು. ದ್ರಾಕ್ಷೆ ಹಣ್ಣುಗಳನ್ನು ಕಿವುಚಿ ಜಜ್ಜಿದರೆ ಮಾತ್ರ ಅದು ದ್ರಾಕ್ಷಾರಸವಾಗುತ್ತವೆ. ದೇವರು ತನಗಿಷ್ಟ ಬಂದಂತೆ ಮಾಡಲಿ.

ನಿನ್ನನ್ನು ಕಿವುಚಲು ದೇವರು ಯಾವ ರೀತಿಯ ಹೆಬ್ಬೆರಳನ್ನೂ, ಬೆರಳುಗಳನ್ನು ಉಪಯೋಗಿ ಸುವನೋ ಎಂಬುದರ ಬಗ್ಗೆ ನಾನು ಆಶ್ಚರ್ಯದಿಂದಿರುತ್ತೇನೆ. ನೀನೇನಾದರೂ ಜಾರಿ ಪುಸುಗಿಕೊಳ್ಳುವ ನುಣುಪಾದ ಬೆಣಚುಕಲ್ಲಿನಂತೆ ಜಾರಿಹೋಗಿರುವೆಯೋ? ನೀನಿನ್ನೂ ಹಣ್ಣಾಗಿರದಿದ್ದರೆ, ಆ ಸ್ಥಿತಿ ಯಲ್ಲಿಯೇ ದೇವರು ನಿನ್ನನ್ನು ಕಿವುಚಿದರೆ ಅದರಿಂದ ಉತ್ಪತ್ತಿಯಾದ ದ್ರಾಕ್ಷಾರಸವು ತುಂಬಾ ಹುಳಿ ಯಾಗಿರುತ್ತದೆ. ಪವಿತ್ರೀಕೃತ ವ್ಯಕ್ತಿತ್ವವೆಂದರೆ ದೇವರ ಕೃಪೆಯಿಂದ ಅವನ ಸ್ವಾಭಾವಿಕ ಜೀವಿತದ ಮೂಲಾಧಾರಗಳೆಲ್ಲವೂ ಮುರಿಯಲ್ಪಟ್ಟು ಆತನ ಪ್ರಸನ್ನತೆಗಳಿಂದ ತುಂಬಿ ದೇವರ ಸೇವಾರ್ಥ ವಾಗಿರುತ್ತದೆ. ದೇವರ ಕರಗಳಲ್ಲಿ ಮುರಿಯಲ್ಪಡುವ ರೊಟ್ಟಿಯಾಗುವುದಕ್ಕೆ ಮೊದಲು ನಮ್ಮನ್ನು ದೇವರೊಂದಿಗೆ ಸರಿಪಡಿಸಿ ಕೊಳ್ಳಬೇಕು. ಆತನು ನಿನ್ನನ್ನು ಏನು ಬೇಕಾದರೂ ಮಾಡಲಿ, ನೀನು ಮಾತ್ರ ಆತನಿಗೆ ಯೋಗ್ಯನಾಗಿರುವುದನ್ನು ಕಾಪಾಡಿಕೊಳ್ಳಬೇಕು. ಆತನು ತನ್ನ ಮಕ್ಕಳಿಗೆ ತಕ್ಕದಾದ ರೊಟ್ಟಿ ಯನ್ನೂ ದ್ರಾಕ್ಷಾರಸವನ್ನೂ ಸಿದ್ಧಪಡಿಸುತ್ತಿರುವುದನ್ನು ನೀನು ಕಾಣುವೆ.

# ಆನಂದ ಪರವಶತೆಯ ವಲಯ

**''ಅವರನ್ನು ಮಾತ್ರ ಏಂಗಡವಾಗಿ ಕರಕೊಂಡು ಎತ್ತರವಾದ ಬೆಟ್ಟಕ್ಕೆ ಹೋದನು'' - (ಮಾರ್ಕ 9:2)**

ಬೆಟ್ಟದ ಮೇಲೆ ನಮಗೆಲ್ಲರಿಗೂ ಮಹಿಮೆಯ ಸಮಯಗಳು ದೊರಕಿದ್ದವು ಮತ್ತು ಅಲ್ಲಿ ನಡೆದದ್ದನ್ನು ನಾವು ದೇವರ ದೃಷ್ಟಿಕೋನದಲ್ಲಿ ದೃಷ್ಟಿಸಿ ಅಲ್ಲಿಯೇ ಇರಲು ಬಯಸಿದ್ದೆವು; ಆದರೆ ದೇವರು ನಮ್ಮನ್ನು ಅಲ್ಲಿಯೇ ಇರಲು ಬಿಡಲೇ ಇಲ್ಲ. ನಮ್ಮ ಆತ್ಮೀಕ ಜೀವಿತದ ಒಂದು ಪರೀಕ್ಷೆ ಯೆಂದರೆ ನಾವು ಬೆಟ್ಟದ ಮೇಲಿನಿಂದ ಕೆಳಕ್ಕಿಳಿದು ಬರುವ ಸಾಮರ್ಥ್ಯವುಳ್ಳವರೋ ಎಂಬುದು; ಮೇಲಕ್ಕೇರಲು ಮಾತ್ರ ನಮಗೆ ಶಕ್ತಿಯಿದ್ದರೆ, ಅಲ್ಲಿ ಏನೋ ಲೋಪವಿದೆ. ದೇವರ ಸಂಗಡ ಬೆಟ್ಟದ ಮೇಲೆ ಇರುವುದು ಅತ್ಯಂತ ಮಹತ್ವದ ವಿಷಯವೇ ಸರಿ, ಆದರೆ ಒಬ್ಬ ಮನುಷ್ಯನು ಬೆಟ್ಟದ ಮೇಲೇರಿದ ನಂತರ ಅವನು ಅಲ್ಲಿಂದ ದೆವ್ವ ಹಿಡಿದವರಿರುವ ಕಣಿವೆಯ ಆಳಕ್ಕೆ ಇಳಿದು ಬರಬೇಕು ಹಾಗೂ ಅಲ್ಲಿರುವವರನ್ನು ತಾನು ಏರಿದ ಎತ್ತರಕ್ಕೆ ಏರಿಸಬೇಕು. ಈ ಉದ್ದೇಶಕ್ಕಾಗಿಯೇ ಮೊದಲು ಅವನು ಬೆಟ್ಟದ ಮೇಲಕ್ಕೆ ಏರಿಸಲ್ಪಡುವನು. ಎತ್ತರದ ಬೆಟ್ಟಗಳಲ್ಲಿಯೇ ವಾಸಿಸುವುದಕ್ಕಾಗಿ, ರಮಣೀಯ ಅರುಣೋದಯದ ದೃಷ್ಯಾವಳಿಗಾಗಿ, ಜೀವಿತದ ಸೌಂದರ್ಯದ ಆಕರ್ಷಣೆಗಳಿಗಾಗಿ ನಾವು ಸೃಷ್ಟಿಸಲ್ಪಟ್ಟಿರುವುದಿಲ್ಲ, ಅವೆಲ್ಲವೂ ಕೇವಲ ಸ್ಫೂರ್ತಿ ದಾಯಕ ಕ್ಷಣಗಳು ಅಷ್ಟೇ. ಕಡಿದಾದ ಕಣಿವೆಗಳಿಗಾಗಿಯೇ ನಾವು ರೂಪಿಸಲ್ಪಟ್ಟಿರುವೆವು, ಅಲ್ಲಿರುವ ಸಾಮಾನ್ಯ ಜೀವಿತವನ್ನು ಬದುಕು ವುದಕ್ಕಾಗಿ ಮತ್ತು ಅಲ್ಲಿಯೇ ಇರುತ್ತಾ ದೇವರು ನಮ್ಮಲ್ಲಿಟ್ಟಿರುವ ಸತ್ವವನ್ನು ಅಲ್ಲಿರುವವರಿಗೆ ಮನಗಾಣಿ ಸುವುದಕ್ಕಾಗಿ, ನಾವು ರೂಪಿಸಲ್ಪಟ್ಟಿದ್ದೇವೆ. ಅಧ್ಯಾತ್ಮಿಕ ಸ್ವಾರ್ಥತೆಯು, ಬೆಟ್ಟದ ಮೇಲೆ ಕಳೆದ ಮಹಿಮಾ ಸಮಯದ ಪುನರಾವರ್ತನೆಗಳನ್ನು ಸದಾ ಬಯಸುತ್ತದೆ. ನಾವು ಬೆಟ್ಟದ ಮೇಲೆಯೇ ಇದ್ದು ಬಿಟ್ಟರೆ, ದೇವದೂತರುಗಳಂತೆ ನಾವು ಮಾತುಗಳನ್ನಾಡುತ್ತಿದ್ದೆವು ಹಾಗೂ ಅವರಂತೆ ಜೀವಿಸುತ್ತಿದ್ದೆವೆಂದು ನಮಗನ್ನಿಸುತ್ತದೆ. ಆನಂದಪರವಶತೆಯ ಸಮಯಗಳು ಕೇವಲ ವಿಶೇಷವಾದವುಗಳು, ದೇವರ ಸಂಗಡ ವಿರುವ ನಮ್ಮ ಜೀವಿತದಲ್ಲಿ, ಅವು ತಮ್ಮದೇ ಆದ ಅರ್ಥವನ್ನು ಹೊಂದಿರುತ್ತವೆ, ಆದರೆ ನಾವು ಎಚ್ಚರ ದಿಂದಿರದಿದ್ದರೆ, ಅದೊಂದನ್ನೇ-ಆನಂದ ಪರವಶತೆಯೊಂದನ್ನೇ ನಮ್ಮ ಆತ್ಮೀಕ ಸ್ವಾರ್ಥತೆಯು ಬಯಸುತ್ತದೆ.

ಹೀಗೆ ಏನೆಲ್ಲಾ ನಮಗೆ ಸಂಭವಿಸುತ್ತವೆಯೋ, ಅವೆಲ್ಲವೂ ಉಪಯುಕ್ತವಾದ ಬೋಧನೆ ಯಾಗಿ ಪರಿವರ್ತಿಸಲ್ಪಡುತ್ತವೆ ಎಂದು ನಾವು ಯೋಚಿಸುವುದು ಸಹಜವೇ. ಆದರೆ, ಬೋಧಿಸುವುದ ಕ್ಕಿಂತಲೂ ಹೆಚ್ಚಿನದೊಂದಕ್ಕೆ ಪರಿವರ್ತನೆಗೊಳ್ಳಬೇಕಾಗಿದೆ-ಉತ್ತಮ ಗುಣನಡತೆಗೆ. ನಮಗೆ ಏನನ್ನಾದರೂ ಬೋಧಿಸುವುದಕ್ಕೆ ಬೆಟ್ಟವು ಅಲ್ಲಿರುವುದಿಲ್ಲ. ನಮ್ಮನ್ನು ಏನೋ ಮಾಡುವುದಕ್ಕಾಗಿ ಅದು ಅಲ್ಲಿ ಇದೆ. ಹಾಗಾದರೆ, ಇಂಥಾ ವಿಶಿಷ್ಟ ಅನುಭವಗಳಿಂದ 'ನಮಗೇನು ಪ್ರಯೋಜನ'ವೆಂದು ಕೇಳುವುದರಲ್ಲಿ ದೊಡ್ಡ ಉರುಲು ಇರುತ್ತದೆ. ಆ ದಾರಿಯಲ್ಲಿ ಆಧ್ಯಾತ್ಮಿಕ ವಿಷಯಗಳನ್ನು ಎಣಿಕೆ ಮಾಡಬಾರದು. ಬೆಟ್ಟದ ಮೇಲೆ ಕಳೆದ ಸಮಯಗಳು, ವಿಶೇಷವಾದ ಅಪೂರ್ವ ಸಮಯಗಳು - ಅವು ದೇವರ ಉದ್ದೇಶಾರ್ಥವಾಗಿರುವ ಸಮಯಗಳು.

# ಅವಮಾನದ ವಲಯ

**''ನಿನ್ನ ಕೈಲಿ ಏನಾದರೂ ಆಗುವ ಹಾಗಿದ್ದರೆ ನಮ್ಮ ಮೇಲೆ ಕರುಣವಿಟ್ಟು ನಮಗೆ ಸಹಾಯ ಮಾಡು'' - (ಮಾರ್ಕ 9:22)**

ಬೆಟ್ಟದ ಮೇಲೆ ಅನುಭವಿಸಿದ ಆನಂದ ಪರವಶತೆಯ ಪ್ರತಿಯೊಂದು ಮಹಿಮಾ ಸಮಯದ ನಂತರ ನಾವು ಇದ್ದಕ್ಕಿದ್ದಂತೆಯೇ ಅತ್ಯವಸರದಿಂದ ಬೆಟ್ಟದ ಕೆಳಗಿರುವ ವಾಸ್ತವಿಕ ಸನ್ನಿವೇಶಗಳ ಆಳಕ್ಕೆ ತಳ್ಳಲ್ಪಡುತ್ತೇವೆ. ಆ ಸನ್ನಿವೇಶಗಳಾದರೋ ಸುಂದರವಾಗಿಯೂ ಇಲ್ಲ, ಕಾವ್ಯಾತ್ಮಕ ವಾಗಿಯೂ ಇಲ್ಲ ಮತ್ತು ರೋಮಾಂಚಕವೂ ಅಲ್ಲ ; ಇಂಥಾ ಕೊಳಕಾದ, ಶ್ರಮಾಭರಿತ ಸೇವಾ ಜೀವನದ ಕೊಳ್ಳದ ಆಳವೇ, ಬೆಟ್ಟದ ತುದಿಯ ನಮ್ಮ ಆನಂದ ಪರವಶತೆಯ ಎತ್ತರವನ್ನು ಅಳೆಯುತ್ತದೆ. ಇಂಥಾ ಕಣಿವೆಯಾಳದಲ್ಲಿಯೇ ದೇವರನ್ನು ಮಹಿಮೆ ಪಡಿಸಲು ನಾವು ಜೀವಿಸಬೇಕು. ಬೆಟ್ಟದ ಮೇಲೆ ಆತನ ಮಹಿಮೆಯನ್ನು ನೋಡುತ್ತೇವೆವಾದರೂ ಅಲ್ಲಿಯೇ ಆತನ ಮಹಿಮೆಗಾಗಿ ನಾವೆಂದೂ ಜೀವಿಸುವುದಿಲ್ಲ. ಆದರೆ ಬೆಟ್ಟದ ಕೆಳಗೆ ಅವಮಾನದ, ದೀನ ವಲಯದಲ್ಲಿ ಜೀವಿಸುತ್ತಿರುವಾಗ, ದೇವರಿಗೋಸ್ಕರ ನಮ್ಮಲ್ಲಿರುವ ನಿಜ ಯೋಗ್ಯತೆ ಎಷ್ಟೆಂಬುದನ್ನು ಕಂಡುಕೊಳ್ಳುತ್ತೇವೆ ಮತ್ತು ಅಲ್ಲಿಯೇ ನಮ್ಮ ನಂಬಿಗಸ್ತಿಕೆಯು ಪ್ರಕಟಗೊಳ್ಳುತ್ತದೆ. ನಮ್ಮ ಹೃದಯದ ಸ್ವಾಭಾವಿಕ ಸ್ವಾರ್ಥತೆಯ ಕಾರಣದಿಂದ, ನಮ್ಮಲ್ಲಿ ಅನೇಕರು ಯಾವಾಗಲೂ ತಮ್ಮ ಶೌರ್ಯದ ಉಚ್ಚಂಗತೆಯ ಸನ್ನಿವೇಶಗಳಲ್ಲಿದ್ದರೆ ಮಾತ್ರ ಕೆಲಸ ಮಾಡುತ್ತಾರೆ, ಆದರೆ ಕೊಳಕಾದ ದೈನಂದಿನ ಸಾಮಾನ್ಯ ಸ್ಥಿತಿಯ ವಿವಿಧ ಹಂತಗಳಲ್ಲಿ, ದೇವರ ಸಂಗಡ ನಮಗಿರುವ ಬಾಂಧವ್ಯಕ್ಕೆ ತಕ್ಕಂತೆ ನಾವಿರುವ ಕಣಿವೆಯಲ್ಲಿಯೇ ನಾವು ಜೀವಿಸಬೇಕೆಂದು ದೇವರು ಬಯಸುತ್ತಾನೆ. ಬೆಟ್ಟದ ಮೇಲೆಯೇ ಇದ್ದು ಬಿಡುವುದು ಉತ್ತಮವೆಂದು ಪೇತ್ರನು ಯೋಚಿಸಿದ್ದನು, ಆದರೆ ಯೇಸುಕ್ರಿಸ್ತನು ತನ್ನ ಶಿಷ್ಯರನ್ನು ಬೆಟ್ಟದ ಕೆಳಗಿರುವ ಕಣಿವೆಯಾಳಕ್ಕೆ, ಬೆಟ್ಟದ ಮೇಲೆ ಉಂಟಾದ ದರ್ಶನದ ಅರ್ಥವನ್ನು ವಿವರಿಸಲು ಕರೆತಂದನು.

ನಿನ್ನ ಕೈಲಿ ಏನಾದರೂ ಆಗುವದಿದ್ದರೆ .....? ನಮ್ಮೊಳಗಿರುವ ಇಂಥಾ ಸಂದೇಹದ ಸ್ವಭಾವವನ್ನು ಕಿತ್ತೆಸೆಯಬೇಕಾದರೆ, (ದೇವಕುಮಾರನನ್ನು ಯಾವ ರೀತಿಯಲ್ಲಿ ಅಳೆಯುತ್ತಿದ್ದಾರೆ ನೋಡಿರಿ) ಅವಮಾನ ಗೊಳಿಸುವ ಕಣಿವೆಯು ನಮಗೆ ಬೇಕಾಗಿರುತ್ತದೆ. ನೀನು ನಿನ್ನ ಜೀವನದಲ್ಲಾದ ಅನುಭವಗಳನ್ನು ಹಿಂತಿರುಗಿ ನೋಡಿ ಪರಿಶೀಲಿಸು. ಯೇಸುಕ್ರಿಸ್ತನು ನಿಜವಾಗಿಯೂ ಯಾರು ಎಂಬುದನ್ನು ನೀನು ಅರಿಯುವ ತನಕ, ನೀನು ಸಹಾ ಆತನ ಸಾಮರ್ಥ್ಯದ ಬಗ್ಗೆ ಚತುರಸಂದೇಹಿಯಾಗಿದ್ದೆಯಷ್ಟೇ ! ಬೆಟ್ಟದ ಮೇಲಿದ್ದಾಗ ಯೇಸುಸ್ವಾಮಿಯ ವಿಷಯದಲ್ಲಿ ಏನು ಬೇಕಾದರೂ ನೀನು ನಂಬುತ್ತಿದ್ದೆ, ಆದರೆ ಜೀವಿತದ ಕಣಿವೆಯಲ್ಲಿ ನಿನಗೆ ಎದುರಾಗುವ ಸತ್ಯ ಸಂಗತಿಗಳ ಸಮಯದಲ್ಲಿ, ಈ ನಿನ್ನ ನಂಬಿಕೆಯು ಹೇಗಿರಬಹುದು? ನಿನಗಾದ ಶುದ್ಧೀಕರಣದ ಬಗ್ಗೆ ನೀನು ಸಾಕ್ಷಿ ಕೊಡಬಹುದು; ಆದರೆ ಕಣಿವೆಯಾಳದ ಸದ್ಯದ ಅವಮಾನಕರ ಸಂಗತಿಯ ಬಗ್ಗೆ ಏನು ಹೇಳುವಿ? ಕಳೆದ ಸಾರಿ, ಬೆಟ್ಟದ ಮೇಲೆ ದೇವರ ಸಂಗಡ ನೀನಿದ್ದಾಗ, ಪರಲೋಕದಲ್ಲಿಯೂ, ಭೂಲೋಕದಲ್ಲಿಯೂ ಸಕಲವೂ ಯೇಸುಕ್ರಿಸ್ತನ ಅಧೀನದಲ್ಲಿ ರುವುದನ್ನು ಕಣ್ಣಾರೆ ಕಂಡೆಯಷ್ಟೆ - ಈಗಲೂ ಈ ಅವಮಾನದ ಕಣಿವೆಯಲ್ಲಿ ನೀನಿರುತ್ತಿರುವಾಗ, ಅದೇ ರೀತಿಯ ಸಂಶಯಗಳು ನಿನ್ನಲ್ಲಿ ಪುಟಿದೇಳುತ್ತಿವೆಯೋ ?

# ದೇವಸೇವೆಯ ವಲಯ (ಸ್ಥಳ)

**''ಈ ಜಾತಿಯು ದೇವರ ಪ್ರಾರ್ಥನೆಯಿಂದಲೇ ಹೊರತು ಬೇರೆ ಯಾತರಿಂದಲೂ ಬಿಟ್ಟು ಹೋಗುವುದಿಲ್ಲ'' - (ಮಾರ್ಕ 9:29)**

ಶಿಷ್ಯರು ''ಅದನ್ನು ಬಿಡಿಸಲು ನಮ್ಮಿಂದ ಯಾಕೆ ಆಗಲಿಲ್ಲ ?''ವೆಂದು ಏಕಾಂತದಲ್ಲಿ ಯೇಸುವನ್ನು ಕೇಳಿದರು (ಮಾರ್ಕ 9:28) ಇದರ ಉತ್ತರವು, ನಿನ್ನ ಮತ್ತು ಯೇಸುಕ್ರಿಸ್ತನೊಂದಿಗಿರುವ ವೈಯಕ್ತಿಕ ಸಂಬಂಧ ಗಳಲ್ಲಿ ಅಡಗಿದೆ. ಇಂಥಾ ಒಂದು ಕಾರ್ಯವನ್ನು ಮಾಡಬೇಕಾದರೆ, ''ಈ ಜಾತಿಯು ... ಹೊರತು ಬೇರೆ ಯಾತರಿಂದಲೂ...'' ಆತನಲ್ಲಿ ಎರಡರಷ್ಟು, ಮತ್ತೆರಡರಷ್ಟು ಹೆಚ್ಚಾದ ಏಕಾಗ್ರತೆಯಿನ್ನಿಡದ ಹೊರತು, ಆ ದೆವ್ವವನ್ನು ಹೊರಗೆ ಓಡಿಸಲಾಗದು. ದೇವರ ಸಾಮರ್ಥ್ಯದ ಮೇಲೆ ಏಕಾಗ್ರತೆಯಿಂದಿರದೆ, ನಮ್ಮ ಸ್ವಂತ ಸ್ವಭಾವದೊಳಗಿಂದ ಸೆಳೆದುಕೊಂಡ ಕಲ್ಪನೆಗಳ ಮೇಲೆ ಏಕಾಗ್ರತೆಯನ್ನಿಡುವ ಮೂಲಕ ಆತನ ಕಾರ್ಯಗಳನ್ನು ಮಾಡಲೆತ್ನಿಸಿದಾಗ ಶಿಷ್ಯರಂತೆಯೇ ನಾವು ಸಹಾ ಬಲವಿಲ್ಲದವರಾಗ ಬಲ್ಲೆವು. ದೇವರನ್ನು ಅರಿತುಕೊಳ್ಳದೆ ಆತನಿಗಾಗಿ ಸೇವೆ ಮಾಡುವ ತೀವ್ರಾಸಕ್ತಿಯ ಮೂಲಕ ಆತನನ್ನೇ ಅವಹೇಳನ ಮಾಡುತ್ತೇವೆ.

ಒಂದು ಕಷ್ಟಕರವಾದ ಸಮಸ್ಯೆಯನ್ನು ಮುಖಾಮುಖಿಯಾಗಿ ಎದುರಿಸುವ ಸನ್ನಿವೇಶದಲ್ಲಿ ನೀನು ಬಯಸಿದ ರೀತಿಯಲ್ಲಿ ಬಾಹ್ಯರೂಪದ ಪರಿಣಾಮಗಳೇನೂ ಉಂಟಾಗದಿದ್ದರೂ, ನೀನು ಮಾತ್ರ ಯೇಸು ಕ್ರಿಸ್ತನಲ್ಲಿ ಏಕಾಗ್ರತೆಯಿಂದಿರುವುದರಿಂದ, ದೆವ್ವದಿಂದ ಬಿಡುಗಡೆಯಾಗುತ್ತದೆಂದು ನಿನಗೆ ಖಂಡಿತವಾಗಿ ತಿಳಿದದೆ. ಇದೇ ನಿನ್ನ ಸೇವಾ ಕ್ರಮ - ಯೇಸುಕ್ರಿಸ್ತನಿಗೂ ನಿನಗೂ ನಡುವೆ ಏನೊಂದು ಅಡ್ಡವಿರದಂತೆ ನೀನು ನೋಡಿಕೊಳ್ಳಬೇಕು. ಪ್ರಸ್ತುತದಲ್ಲಿ ನಿಮ್ಮಿಬ್ಬರ ನಡುವೆ ಏನಾದರೂ ಇದೆಯೋ? ಒಂದು ವೇಳೆ ಏನಾದರೂ ಇದ್ದರೆ ಅದನ್ನು ಕೊನೆಗಾಣಿಸಬೇಕು - ಅದೊಂದು ಕಿರಿಕಿರಿ ಎಂದು ಅದನ್ನು ಉಪೇಕ್ಷಿಸುವ ಮೂಲಕ ಅಲ್ಲ, ಅದನ್ನು ಮೇಲೇರಿಸುವ ಮೂಲಕವೂ ಅಲ್ಲ; ಯೇಸುಕ್ರಿಸ್ತನ ಸಮ್ಮುಖತೆ ಯಲ್ಲಿ ಅದನ್ನು ಎದುರಿಸಿ ಪರಿಹರಿಸಿ ಕೊಳ್ಳಬೇಕು. ಆ ಮೇಲೆ ಅದೇ ಸಂಗತಿಯು, ಅಂದರೆ ಯಾವುದನ್ನು ಕ್ರಿಸ್ತನ ಸನ್ನಿಧಿಯಲ್ಲಿ ಎದುರಿಸಿ ಬಿಟ್ಟಿರುವಿಯೋ ಮತ್ತು ಯಾವ ಸಂಗತಿಯ ವಿಷಯದಲ್ಲಿ ನೀನು ಏನೆಲ್ಲವನ್ನೂ ಮಾಡಿ, ಅನುಭವಿಸಿರು ವೆಯೋ, ಆ ಸಂಗತಿಗಳೇ, ನೀನು ಯೇಸು ಕ್ರಿಸ್ತನನ್ನು ಮುಖಾಮುಖಿಯಾಗಿ ಕಾಣುವ ತನಕ, ನಿನಗೆ ತಿಳಿಯದ ರೀತಿಯಲ್ಲಿ ಈಗಲೂ ಯೇಸುಕ್ರಿಸ್ತನನ್ನು ಮಹಿಮೆ ಪಡಿಸುತ್ತವೆ.

ಹದ್ದುಗಳಂತೆ ರೆಕ್ಕೆಗಳನ್ನು ಚಾಚಿಕೊಂಡು ಎತ್ತರಕ್ಕೆ ಏರಲು ನಾವು ಶಕ್ತರಾಗಿರಬೇಕು; ಆದರೆ ಕೆಳಗಿಳಿ ಯುವುದನ್ನೂ ನಾವು ತಿಳಿದಿರಬೇಕು. ಕೆಳಗಿಳಿಯುವುದರಲ್ಲಿ ಮತ್ತು ಕೆಳಗಿನ ಕಣಿವೆಗಳಲ್ಲಿ ಜೀವಿಸುವು ದರಲ್ಲಿಯೂ ಭಕ್ತನ ಸಾಮರ್ಥ್ಯವಡಗಿದೆ. ''ನನ್ನನ್ನು ಬಲಪಡಿಸುವಾತನಲ್ಲಿದ್ದುಕೊಂಡು ಎಲ್ಲಕ್ಕೂ ಶಕ್ತ ನಾಗಿದ್ದೇನೆ'' (ಫಿಲಿ 4:13) ಎಂದು ಪೌಲನು ಹೇಳಿದ್ದಾನೆ. ಈ ಸಂಬಂಧದಲ್ಲಿ ಆತನು ಪ್ರಸ್ತಾಪಿಸಿದ ಸಂಗತಿ ಗಳಲ್ಲಿ ಬಹುತೇಕ ಎಲ್ಲವೂ ಅವಮಾನಕರ ಸಂಗತಿಗಳೇ ಆಗಿದೆ. ''ಬೇಡವೇ ಬೇಡ, ನಿನಗೆ ನನ್ನ ವಂದನೆಗಳು, ನಾನು ಬೆಟ್ಟದ ಮೇಲೆಯೇ ಇದ್ದು ಬಿಡುತ್ತೇನೆ'' ಎಂದು ಹೇಳಿ, ಅವಮಾನ ಪಡುವುದನ್ನು ತಿರಸ್ಕರಿಸಿ ಬಿಡುವ ಹಕ್ಕು ನಿನಗೆ ಇದ್ದೇ ಇದೆ. ಯೇಸುಕ್ರಿಸ್ತನು ಹರಡುವ ವಾಸ್ತವದ ಬೆಳಕಿನಲ್ಲಿ ಈ ಸಂಗತಿಗಳು ಹೇಗೆ ಇರುವವೋ ಹಾಗೆಯೇ ಅವುಗಳನ್ನು ನಾನು ಎದುರಿಸಬಲ್ಲೆನೋ? ಅಥವಾ ಅದೇ ಸಂಗತಿಗಳು ಆತನ ಮೇಲೆ ನನಗಿರುವ ಭರವಸೆಯನ್ನು ಸಂಪೂರ್ಣವಾಗಿ ಅಳಿಸಿ ಹಾಕಿ, ನನ್ನನ್ನು ಗೊಂದಲಕ್ಕೊಳಪಡಿಸುತ್ತವೆಯಾದ್ದರಿಂದ ಅವುಗಳಿಗೇ ಒಳಪಡುವೆನೋ?

# ದರ್ಶನ ಮತ್ತು ವಾಸ್ತವಿಕತೆ

**''ದೇವ ಜನರಾಗುವುದಕ್ಕೆ ಕರೆಯಲ್ಪಟ್ಟವರು'' - (1ಕೊರಿ 1:2)**

ನೀನಿನ್ನೂ ಏನಾಗಿಲ್ಲವೋ ಅದನ್ನು ಕಾಣುವಂತೆ ಮಾಡಿದ ದೇವರಿಗೆ ಸ್ತೋತ್ರವಾಗಲಿ. ನಿನಗೆ ದಿವ್ಯ ದರ್ಶನವಾಗಿಬಿಟ್ಟಿದೆ, ಆದರೆ ಆ ದರ್ಶನದಂತೆ ನೀನೇನಾಗ ಬೇಕಾಗಿದೆಯೋ ಅದಿನ್ನೂ, ಹೇಗೂ ಆಗಿಯೇ ಇಲ್ಲ. ನಾವು ಆಳವಾದ ಕಣಿವೆಯಲ್ಲಿ ಬದುಕಿದಾಗಲೇ, ದೇವರಾದುಕೊಂಡವರು ನಾವಾಗಿರುವೆವೋ, ಇಲ್ಲವೋ ಎಂಬುದನ್ನು ರುಜುವಾತು ಪಡಿಸುತ್ತೇವೆ ಮತ್ತು ಅಲ್ಲಿಂದಲೇ ನಮ್ಮಲ್ಲಿ ಅನೇಕರು ಹಿಂತಿರುಗಿ ಹೋಗುತ್ತಾರೆ. ಆ ದಿವ್ಯದರ್ಶನದಲ್ಲಿರುವಂಥ ರೂಪಕ್ಕೆ ನಾವು ಮಾರ್ಪಾಟಾಗ ಬೇಕಾದರೆ, ಅದಕ್ಕೆ ಅವಶ್ಯ ವಿರುವ ಪೆಟ್ಟುಗಳನ್ನು ಹೊಡೆಸಿಕೊಳ್ಳಲು ನಾವು ಸಿದ್ಧರಿರುವುದಿಲ್ಲ. ನಾವೇನಾಗಿಲ್ಲವೋ ಮತ್ತು ನಾವೇನಾಗಿರ ಬೇಕೆಂದು ದೇವರು ಬಯಸುವನೋ ಎಂಬುದು ದಿವ್ಯದರ್ಶನದ ಮೂಲಕ ನಮಗೆ ತಿಳಿದಿದೆ, ಆದರೆ ಆ ದಿವ್ಯದರ್ಶನದಂತೆ ನಾವು ದೇವರ ಕಾರ್ಯಗಳಿಗೆ ಉಪಯುಕ್ತರಾಗಬಲ್ಲ ರೂಪವನ್ನು ಪಡೆಯಲಗತ್ಯವಾದ ಕಮ್ಮಾರನ ಪೆಟ್ಟುಗಳನ್ನು ಸ್ವೀಕರಿಸಲು ಇಷ್ಟವುಳ್ಳವರಾಗಿದ್ದೇವೆಯೋ? ದೈನಂದಿನ ಸಾಮಾನ್ಯ ಜೀವಿತದ ಆಗು ಹೋಗುವಿಕೆಯಲ್ಲಿ ಸಾಮಾನ್ಯ ಜನರಿಂದಲೇ ನಮ್ಮನ್ನು ರೂಪಿಸುವ ಹೊಡೆತಗಳು ಬೀಳುತ್ತವೆ.

ನಮ್ಮ ವಿಷಯದಲ್ಲಿ ದೇವರ ಉದ್ದೇಶವೇನೆಂಬುದನ್ನು ನಾವು ತಿಳಿದಿರುವ ಕೆಲವು ಸಮಯ ಗಳುಂಟು; ನಮಗಾದ ದಿವ್ಯದರ್ಶನವೇ ನಮ್ಮ ನೈಜಗುಣಗಳಾಗಿ ಪರಿವರ್ತನೆ ಯಾಗುವಂತೆ ನಾವು ಅನುವು ಮಾಡಿಕೊಡುತ್ತೇವೆಯೋ ಎಂಬುದು ನಮ್ಮನ್ನೇ ಅವಲಂಬಿಸಿರುತ್ತದೆ - ದೇವರ ಮೇಲೆ ಅಲ್ಲ. ಬೆಟ್ಟದ ಮೇಲೆಯೇ ಆರಾಮಾಗಿರುತ್ತಾ ದಿವ್ಯದರ್ಶನದ ಸ್ಮರಣೆಯಲ್ಲಿಯೇ ಇರಲು ನಾವು ಇಚ್ಛೈಸಿದ್ದೇಯಾದರೆ, ಸಾಮಾನ್ಯ ಸಂಗತಿಗಳಿಂದಲೇ ಕೂಡಿದ ಮಾನವ ಜೀವಿತವನ್ನು ಜೀವಿಸಲು ನಾವು ಉಪಯೋಗವಿಲ್ಲದ ವರಾಗುತ್ತೇವೆ. ನಾವು ನೋಡಿದ ದಿವ್ಯ ದರ್ಶನವನ್ನು ಆತುಕೊಂಡು ಅದರಂತೆ ಬದುಕಲು ನಾವು ಅಭ್ಯಾಸಿಸ ಬೇಕಲ್ಲದೆ ಆ ದಿವ್ಯ ದರ್ಶನದ ಪರವಶತೆಯಲ್ಲಿ, ಪ್ರಜ್ಞಾಪೂರ್ವಕವಾಗಿ ದೇವರ ಬಗ್ಗೆ ಚಿಂತನೆ ಮಾಡುತ್ತಾ ಇರುವುದಲ್ಲ. ಆದರೆ ದಿವ್ಯ ದರ್ಶನವು ವಾಸ್ತವವಾಗುವ ತನಕ, ನಾವು ಅದರ ಬೆಳಕಿನಲ್ಲಿ ಜೀವಿಸುತ್ತಾ ಮುಂದೆ ಸಾಗುತ್ತಿರಬೇಕು. ನಮ್ಮ ತರಬೇತಿಯ ಪ್ರತಿಯೊಂದು ಅಂಶವೂ ಈ ದಿಶೆಯಲ್ಲಿರಬೇಕು. ದೇವರು ತಾನು ಬಯಸುತ್ತಿರುವ ದೇನೆಂಬುದನ್ನು ನಮಗೆ ತಿಳಿಯಪಡಿಸಿದ್ದಕ್ಕಾಗಿ ಆತನಿಗೆ ಸ್ತೋತ್ರ ಸಲ್ಲಿಸೋಣ.

ಏನಾದರೂ ''ಮಾಡು'' ಎಂದು ದೇವರು ನಮಗೆ ಹೇಳಿದಾಗ ನಮ್ಮಲ್ಲಿರುವ ''ನಾನೇ'' ಎಂಬುದು ಮುನಿಸಿಕೊಳ್ಳುತ್ತದೆ. ''ಇರುವಾತ ನೆಂಬವನು ನನ್ನನ್ನು ನಿಮ್ಮ ಬಳಿಗೆ ಕಳುಹಿಸಿದನು'' (ವಿ.ಕಾ.3:14). ಇರುವಾತನು ಎಂಬುವ ದೇವರ ಸಾತ್ವಿಕ ರೋಷದ ಹಾಗೂ ಕಡು ಕ್ರೋಧದ ಮುಂದೆ ಈ ಕಿರಿಯ ''ನಾನೇ'' ಎಂಬುದು ಕುಗ್ಗಿ ಹೋಗಲಿ. ಆತನು ಪ್ರಬಲನಾಗಬೇಕು. ನಾವೆಲ್ಲಿ ಜೀವಿಸುತ್ತಿರುವೆ ವೆಂಬುದನ್ನೂ ಮತ್ತು ನನ್ನಷ್ಟಕ್ಕೆ ನಾನು ''ನಾನೇ'' ಎಂದು ತೆವುಳುತ್ತಾ ಬಿದ್ದಿರುವ ನಮ್ಮ ನಾಯಿಗೂಡು ಗಳನ್ನು ದೇವರು ಬಲ್ಲನು ಎಂಬ ಅರಿವು ನಮ್ಮ ಹೃದಯವನ್ನು ಚುಚ್ಚುವುದಿಲ್ಲವೇ! ಆಕಾಶದ ಮಿಂಚಿನ ಬೆಳಕಿನಂತೆ ದೇವರು ನಮ್ಮನ್ನು ಬೆನ್ನಟ್ಟಿ ಹಿಡಿಯುವನು. ಮಾನವನನ್ನು ದೇವರು ತಿಳಿದಷ್ಟು ಬೇರೆ ಯಾವ ಮಾನವನೂ ಮಾನವನನ್ನು ತಿಳಿದಿಲ್ಲ.

# ಅವನತಿಯ ಸ್ವಭಾವ

**''ಒಬ್ಬ ಮನುಷ್ಯನಿಂದಲೇ ಪಾಪವೂ, ಪಾಪದಿಂದ ಮರಣವೂ ಲೋಕದೊಳಗೆ ಸೇರಿದವು; ಎಲ್ಲರೂ ಪಾಪ ಮಾಡಿದ್ದರಿಂದ ಮರಣವು ಹೀಗೆ ಎಲ್ಲರಲ್ಲಿಯೂ ವ್ಯಾಪಿಸಿತು'' - (ರೋಮಾ 5:12)**

ಒಬ್ಬ ಮನುಷ್ಯನು ಪಾಪಮಾಡಿದ್ದರಿಂದ ಇಡೀ ಮಾನವ ಜನಾಂಗವನ್ನು ದೇವರು ಶಿಕ್ಷೆಗೊಳಪಡಿಸಿದನು ಎಂದು ಸತ್ಯವೇದವು ಹೇಳುವುದಿಲ್ಲ; ಆತನು ಶಿಕ್ಷೆಗೊಳಪಡಿಸಿದ್ದು, ಪಾಪ ಮಾಡುವ ಮಾನವ ಸ್ವಭಾವವನ್ನು - ನನ್ನ ಮೇಲೆ ನನಗಿರುವ ಹಕ್ಕುಗಳ ಪ್ರತಿಪಾದನೆ ಮಾಡುವ ಪಾಪಸ್ವಭಾವವನ್ನು. ಈ ಸ್ವಭಾವವು ಒಬ್ಬನ ಮೂಲಕ ಮಾನವ ಜನಾಂಗದೊಳಗೆ ಸೇರಿಕೊಂಡಿತು ಮತ್ತು ಅದನ್ನು ಇನ್ನೊಬ್ಬ ಮನುಷ್ಯನು ಮಾನವ ಜನಾಂಗದ ಆ ಸ್ವಭಾವವನ್ನು ತನ್ನ ಮೇಲೆ ಹೊತ್ತುಕೊಂಡು ಅದನ್ನು ನಿವಾರಿಸಿಬಿಟ್ಟನು (ಇಬ್ರಿಯ 9:26 ನೋಡಿರಿ) ಇದು ಅನಂತವಾದ ಬಹುಗಹನವಾದ ಪ್ರಕಟಿಸುವಿಕೆ. ಪಾಪ ಸ್ವಭಾವವೆಂದರೆ ಅನೈತಿಕತೆ ಅಲ್ಲ ಮತ್ತು ಅಪರಾಧವೆಸಗುವಿಕೆಯಲ್ಲ ಆದರೆ ''ನನಗೆ ನಾನೇ ದೇವರು'' ಎನ್ನುವ ಆತ್ಮಜ್ಞಾನದ ಸ್ವಭಾವವೇ ಅದು. ಇಂಥಾ ಸ್ವಭಾವವು ಉಚಿತವಾದ ನೈತಿಕತೆಯಲ್ಲಿಯೂ, ಅನುಚಿತವಾದ ಅನೈತಿಕತೆ ಯಲ್ಲಿಯೂ ಒಂದೇ ವಿಧವಾಗಿ ಕಾರ್ಯವೆಸಗುತ್ತದೆ. ಅದಕ್ಕಿರುವ ಒಂದೇ ಒಂದು ಆಸರೆ ಅದು ನನ್ನ ಮೇಲೆ ನನಗಿರುವ ಹಕ್ಕುಗಳ ನ್ಯಾಯವಾದ ನನ್ನ ಹಕ್ಕನ್ನು ಪ್ರತಿಪಾದಿಸುವ ಶಕ್ತಿ. ಸಕಲ ದುಷ್ಟ ಶಕ್ತಿಗಳಿಂದ ಕೂಡಿದ ಮನುಷ್ಯನನ್ನೂ ಮತ್ತು ಪರಿಶುದ್ಧ ಬಾಳ್ವೆಯನ್ನು ಮಾಡುವ ನೀತಿಯುಳ್ಳ, ಸನ್ನಡತೆಯ ಮನುಷ್ಯನನ್ನೂ ಯೇಸುಕ್ರಿಸ್ತನು ಎದುರಿಸಿದಾಗ, ಒಬ್ಬನ ನೈತಿಕ ಅವನತಿಯ ಕಡೆಗೆ ಇಲ್ಲವೇ ಮತ್ತೊಬ್ಬನ ನೈತಿಕ ಸಫಲತೆಯ ಕಡೆಗೆ ಆತನು ಗಮನ ಕೊಡಲಿಲ್ಲ. ನಾವ್ಯಾರೂ ಗಮನಿಸದಿರುವುದೊಂದನ್ನು ಆತನು ಗಮನಿಸಿದನು - ಅದು ಮನುಷ್ಯ ಸ್ವಭಾವ.

ಪಾಪವೆಂಬುದು ನನ್ನ ಹುಟ್ಟಿನಿಂದ ನನಗೆ ಬಂದಿದೆ, ಅದನ್ನು ನಾನು ಸ್ಪರ್ಶಿಸಲಾರೆನು; ಬಿಡುಗಡೆಯ ಯಜ್ಞದಲ್ಲಿ ದೇವರು ಪಾಪವನ್ನು ಸ್ಪರ್ಶಿಸುವನು. ಅನುವಂಶಿಕವಾಗಿ ಬಂದ ಪಾಪದಿಂದ ಒದಗಬಹುದಾದ ನಿತ್ಯನರಕದ ನ್ಯಾಯ ತೀರ್ಪಿನಿಂದ ನಮ್ಮನ್ನು ದೇವರು ಯೇಸುಕ್ರಿಸ್ತನ ಶಿಲುಬೆಯ ಮೇಲೆ ಬಿಡುಗಡೆ ಮಾಡಿದನು. ಅನುವಂಶಿಕ ಪಾಪವನ್ನು ಹೊಂದಿರುವುದಕ್ಕಾಗಿ ದೇವರು ಮನುಷ್ಯನನ್ನೆಲ್ಲಿಯೂ ಜವಾಬ್ದಾರನನ್ನಾಗಿ ಮಾಡಲಿಲ್ಲ. ಅನುವಂಶಿಕ ಪಾಪದಿಂದ ಜನಿಸಿರುವುದರ ಕಾರಣಕ್ಕಾಗಿ ಮಾನವನನ್ನು ಖಂಡಿಸಿ ತೀರ್ಪು ಮಾಡಲೂ ಇಲ್ಲ. ಯೇಸುಕ್ರಿಸ್ತನು ಅಂಥಾ ಪಾಪದಿಂದ ನನ್ನನ್ನು ವಿಮೋಚಿಸಲು ನನ್ನ ಬಳಿಗೆ ಬಂದಿರುವುದನ್ನು ಗ್ರಹಿಸಿಯೂ ನಾನು ಆತನನ್ನು ತಿರಸ್ಕರಿಸಿ ರುವುದನ್ನು ನಾನು ಮನಗಂಡಾಗಲೇ ಆ ತೀರ್ಪು ನನ್ನ ಮೇಲೆಬರುತ್ತದೆ. ಆ ಕ್ಷಣದಲ್ಲಿಯೇ ನರಕ ಶಿಕ್ಷೆಯ ನ್ಯಾಯನಿರ್ಣಯಕ್ಕೆ ಒಳಗಾದವನೆಂಬ ಮುದ್ರೆಯನ್ನು ನಾನು ಹೊಂದಿರುತ್ತೇನೆ. ''ಆ ತೀರ್ಪು ಏನೆಂದರೆ (ಬಹು ತೀಕ್ಷ್ಣವಾದದ್ದು) ಬೆಳಕು ಲೋಕಕ್ಕೆ ಬಂದಿದ್ದರೂ ಮನುಷ್ಯರ ಕೃತ್ಯಗಳು ಕೆಟ್ಟವುಗಳಾಗಿರುವುದರಿಂದ'' (ಯೋಹಾನ 3:19).

# ಹೊಸದಾಗಿ ಹುಟ್ಟುವಿಕೆಯ ಆಸಕ್ತಿ

**''ಆತನನ್ನು ನನ್ನೊಳಗೆ ಪ್ರಕಟಿಸುವುದಕ್ಕೆ ಇಚ್ಛೈಸಿದಾಗಲೇ'' - (ಗಲಾತ್ಯ 1:16)**

ಯೇಸುಕ್ರಿಸ್ತನು ನನ್ನನ್ನು ಹೊಸದಾಗಿ ಹುಟ್ಟಿಸುವಂತಿದ್ದರೆ, ಆತನನ್ನು ಅಡ್ಡಿ ಪಡಿಸುವಂಥ ಸಮಸ್ಯೆ ನನ್ನೊಳಗೇನಿದೆ? ಅದು, ನನಗಿರುವ ಒಂದು ಅನುವಂಶಿಕತೆ, ಅದರ ವಿಷಯದಲ್ಲಿ ಹೇಳುವಂಥದ್ದೇನೂ ನನ್ನಲ್ಲಿ ಇಲ್ಲ; ನಾನು ಪರಿಶುದ್ಧನಲ್ಲ, ಪರಿಶುದ್ಧನಾಗುವ ಸಾಧ್ಯತೆಯೂ ಇಲ್ಲ. ಹೀಗಿದ್ದರೂ ನೀನು ಪರಿಶುದ್ಧನಾಗಬೇಕು ಎಂದು ಹೇಳುವುದಷ್ಟನ್ನೇ ಯೇಸುಕ್ರಿಸ್ತನು ಮಾಡಿದರೆ, ಆತನ ಬೋಧನೆಯು ನನ್ನಲ್ಲಿ ಬೇಸರ ಹುಟ್ಟಿಸುತ್ತದೆ. ಆದರೆ ಆತನು ತನ್ನಲ್ಲಿರುವ ಪರಿಶುದ್ಧ ಅನುವಂಶಿಕೆಯನ್ನು ನನ್ನೊಳಗೆ ಇರಿಸಬಲ್ಲನಾದರೆ, 'ನೀನು ಪರಿಶುದ್ಧನಾಗಬೇಕು' ಎಂಬುವ ಆತನ ಒತ್ತಾಯದಲ್ಲಿ ಅಡಗಿರುವ ಆತನ ಉದ್ದೇಶವನ್ನು ಕಾಣಲಾರಂಬಿಸುತ್ತೇನೆ. ಪಾಪ ವಿಮೋಚನೆಯ ಅರ್ಥ-ಯೇಸುಕ್ರಿಸ್ತನು ತನ್ನಲ್ಲಿರುವ ತನ್ನ ಅನುವಂಶಿಕ ಸ್ವಭಾವವನ್ನು ಎಂಥಾ ಮನುಷ್ಯನಲ್ಲಿಯಾದರೂ ಇರಿಸುತ್ತಾನೆ. ಬೋಧನೆಗಳ ಮೂಲಕ ಆತನು ಹೇಳುವ ಸ್ಟ್ಯಾಂಡರ್ಡ್‌ಗಳು ಈ ಒಂದು ಸ್ವಭಾವದ ಮೇಲೆ ಮಾತ್ರ ಆಧಾರಗೊಂಡಿವೆ. ಆತನ ಬೋಧನೆಗಳೆಲ್ಲವೂ ನಮ್ಮೊಳಗೆ ಆತನು ನೆಲೆಗೊಳಿಸುವ ತನ್ನ ಜೀವಿತಕ್ಕೆ ಅಳವಡಿಸುವುದಕ್ಕಾಗಿಯೇ ಇವೆ. ಯೇಸುಕ್ರಿಸ್ತನ ಶಿಲುಬೆಯ ಮೇಲೆ, ದೇವರು ಮಾಡಿದ ಪಾಪ ನಿರ್ಣಯದ ತೀರ್ಪಿನಲ್ಲಿ ಸಹಮತವುಳ್ಳವನಾಗಿರುವುದೇ ನನ್ನ ಪಾಲಿನ ನೈತಿಕ ನಡವಳಿಕೆಯಾಗಿದೆ.

ಹೊಸ ಒಡಂಬಡಿಕೆಯ ಬೋಧನೆಯಂತೆ ಹೊಸದಾಗಿ ಹುಟ್ಟುವಿಕೆಯೆಂದರೆ, ಒಬ್ಬ ವ್ಯಕ್ತಿಯಲ್ಲಿ ಅಂಥಾ ಹುಟ್ಟಿನ ಅಗತ್ಯತೆಯು ಅವನಿಗೆ ಹೊಳೆದಾಗ, ದೇವರು ತನ್ನ ಆತ್ಮವನ್ನು ಮನುಷ್ಯನ ಆತ್ಮದಲ್ಲಿ ಇರಿಸುವನು. ಆಗ ಮನುಷ್ಯನ ಸ್ವಂತ ಜೀವಾತ್ಮವು ದೇವಕುಮಾರನ ಆತ್ಮನ ಮೂಲಕ ಬಲಗೊಳ್ಳುತ್ತದೆ ''ಕ್ರಿಸ್ತನ ಸಾರೂಪ್ಯವು ನಿಮ್ಮಲ್ಲಿ ಉಂಟಾಗುವ ತನಕ'' (ಗಲಾತ್ಯ 4:19). ನಾನು ಸಂಪೂರ್ಣವಾಗಿ ಹೊಸದಾದ ಜೀವಿತವನ್ನು ಬದುಕುವಂತೆ ದೇವರು ನನ್ನೊಳಗೆ ನೂತನ ಸ್ವಭಾವವನ್ನು ಇರಿಸುವುದೇ ಪಾಪ ವಿಮೋಚನೆಯಲ್ಲಿರುವ ನೈತಿಕ ಅದ್ಭುತ ಕಾರ್ಯ. ಅಂಥಾ ಅತ್ಯವಶ್ಯಕತೆಯ ಅಂತಿಮ ಮೇರೆಯನ್ನು ನಾನು ತಲುಪಿ, ನನ್ನ ಮಿತಿಗಳನ್ನು , ಅರಿತುಕೊಂಡಾಗಲೇ ಯೇಸುಕ್ರಿಸ್ತನು ಹೇಳುವನು-''ನೀನು ಧನ್ಯನು''. ಆದರೆ ನಿಜವಾಗಿಯೂ ಆ ಮೇರೆಯನ್ನು , ಆ ಮಿತಿಯನ್ನು , ನಾನು ತಲುಪಲೇಬೇಕು. ಜವಾಬ್ದಾರಿಯುತ ಸೃಷ್ಟಿಯು ನಾನಾಗಿರುವದರಿಂದ, ಯೇಸುಕ್ರಿಸ್ತ ನಲ್ಲಿರುವ ಸ್ವಭಾವದ ಅಗತ್ಯತೆಯು ಪ್ರಜ್ಞಾ ಪೂರ್ವಕವಾಗಿ ನನ್ನಲ್ಲಿ ಉಂಟಾಗದ ಹೊರತು, ದೇವರು ನನ್ನಲ್ಲಿ ಆ ಸ್ವಭಾವವನ್ನು ಇರಿಸುವುದಿಲ್ಲ.

ಪಾಪ ಸ್ವಭಾವವು ಹೇಗೆ ಒಬ್ಬ ವ್ಯಕ್ತಿಯ ಮುಖಾಂತರ ಮಾನವ ಜನಾಂಗದೊಳಗೆ ಸೇರಿಬಿಟ್ಟಿತೋ, ಹಾಗೆಯೇ ಮತ್ತೊಬ್ಬ ವ್ಯಕ್ತಿಯ ಮುಖಾಂತರ, ಪವಿತ್ರಾತ್ಮನು ಮಾನವ ಜನಾಂಗದಲ್ಲಿ ಸೇರಿಕೊಂಡನು. ವಿಮೋಚನೆ ಎಂದರೆ ಪಾಪ ಸ್ವಭಾವದ ಅನುವಂಶಿಕತೆಯಿಂದ ನಾನು ಬಿಡುಗಡೆಯನ್ನು ಹೊಂದಬಲ್ಲೆನು ಮತ್ತು ಯೇಸು ಕ್ರಿಸ್ತನ ಮೂಲಕ ಕಳಂಕ ರಹಿತ ಅನುವಂಶಿಕತೆಯನ್ನು ಹೊಂದುವೆನು, ಅದುವೇ ಪರಿಶುದ್ಧಾತ್ಮನು.

# ಸಮಾಧಾನ ಮಾಡಿಕೊಳ್ಳುವಿಕೆ

**''ನಾವು ಆತನಲ್ಲಿ ದೇವರಿಗೆ ಸಮರ್ಪಕರಾದ ನೀತಿ ಸ್ವರೂಪಿಗಳಾಗುವಂತೆ ದೇವರು ಪಾಪ ಜ್ಞಾನವಿಲ್ಲದ ಆತನನ್ನು ನಮಗೋಸ್ಕರ ಪಾಪ ಸ್ವರೂಪಿಯಾಗ ಮಾಡಿದನು'' - (2 ಕೊರಿಂಥ 5:21)**

ಮಾನವ ಜೀವಿತದಲ್ಲಿ ಪಾಪವು ಮೂಲಭೂತವಾದ ನೆಂಟಸ್ಥಿಕೆಯನ್ನು ಹೊಂದಿದೆ; ಪಾಪವೆಂದರೆ ದುಷ್ಟಕಾರ್ಯವನ್ನೆಸಗುವುದಲ್ಲ. ದುಷ್ಟನಾಗಿರುವುದೇ ಪಾಪ, ದೇವರಿಂದ ಹೊರತಾಗಿರುವ, ಸ್ವ ವಿವೇಚನೆಯಿಂದ ಕೂಡಿದ, ದೃಢನಿರ್ಧಾರಣದ ಸ್ವಾತಂತ್ರವೇ, ಪಾಪ. ಅನಿಯಂತ್ರಿತವಾಗಿ ವೃದ್ಧಿಸುವ, ಕಠೋರವಾದ ಮೂಲರೂಪದ 'ಪಾಪವನ್ನು' ಆಧಾರ ಮಾಡಿಕೊಂಡು ಕ್ರೈಸ್ತಧರ್ಮವು ವಿಷಯ ಪ್ರತಿಪಾದನೆ ಮಾಡುತ್ತದೆ. ಉಳಿದ ಧರ್ಮಗಳು 'ಪಾಪಗಳನ್ನು' ವಿಚಾರಿಸುತ್ತವೆ. ಸತ್ಯವೇದವು ಮಾತ್ರವೇ 'ಪಾಪವನ್ನು' ವಿಚಾರಿಸುತ್ತದೆ; ಯೇಸುಕ್ರಿಸ್ತನು ಮನುಷ್ಯರಲ್ಲಿ ಮೊದಲು ಎದುರಿಸಿದ್ದು ಅವರಲ್ಲಿರುವ ಪಾಪದ ಅನುವಂಶಿಕತೆಯನ್ನು; ಆದರೆ ನಾವು ಸುವಾರ್ತೆಯನ್ನು ಪ್ರತಿಪಾದಿಸುವಾಗ ಇಂಥಾ ಮೂಲಭೂತ ಸತ್ಯಾಂಶವನ್ನು ಅಲಕ್ಷ್ಯ ಮಾಡಿದ್ದರಿಂದ, ಸುವಾರ್ತೆಯ ಸಂದೇಶವು ತನ್ನ ಕುಟುಕುವಿಕೆಯನ್ನು ಹಾಗೂ ಸ್ಫೋಟಿಸುವ ಸಾಮರ್ಥ್ಯವನ್ನು ಕಳೆದುಕೊಂಡಿದೆ.

ನಮ್ಮ ಶಾರೀರಿಕ ಪಾಪಗಳನ್ನು ಯೇಸುಕ್ರಿಸ್ತನು ತನ್ನ ಮೇಲೆ ಹೊತ್ತುಕೊಂಡನು ಎಂಬುದು ಅಲ್ಲವೇ ಅಲ್ಲ. ಆದರೆ ಯಾವ ಮನುಷ್ಯನೂ ಸ್ಪರ್ಶಿಸಲಾಗದ ಪಾಪದ ಅನುವಂಶಿಕೆಯನ್ನು ಯೇಸುಕ್ರಿಸ್ತನು ತನ್ನ ಮೇಲೆ ಹೊತ್ತುಕೊಂಡನು ಎಂಬುದೇ ಸತ್ಯವೇದದ ಪ್ರಕಟನೆ. ಪಾಪಿಯನ್ನು , ಸಂತ (ಭಕ್ತ) ನನ್ನಾಗಿ ಮಾಡಲೆಂದು ದೇವರು ತನ್ನ ಸ್ವಂತ ಮಗನನ್ನು ಪಾಪಸ್ವರೂಪಿಯಾಗ ಮಾಡಿದನು. ನಮ್ಮ ಪ್ರಭುವಾದ ಯೇಸುಕ್ರಿಸ್ತನು ಲೋಕದ ಮೇಲೆ ಕನಿಕರಗೊಂಡು ಪಾಪವನ್ನು ತನ್ನ ಮೇಲೆ ಹೊತ್ತನು ಎಂಬುದಲ್ಲ. ಆದರೆ, ಲೋಕದ ಪಾಪದೊಂದಿಗೆ ತನ್ನನ್ನು ಪಾಪಸ್ವರೂಪಿಯಾಗಿ ಗುರುತಿಸಿಕೊಂಡು ಅದನ್ನು ತನ್ನ ಮೇಲೆ ಹೊತ್ತುಕೊಂಡನು ಎಂಬುದೇ ಸತ್ಯವೇದದ ಎಲ್ಲಾ ಭಾಗಗಳಲ್ಲಿಯೂ ಪ್ರಕಟಿಸಲ್ಪಟ್ಟಿದೆ. ಇಡೀ ಮಾನವ ಜನಾಂಗದ ಪಾಪರಾಶಿಯನ್ನು ವಿವೇಚನಾ ಪೂರ್ವಕವಾಗಿ ತನ್ನ ಸ್ವಂತ ಭುಜದ ಮೇಲೆ ಹೊತ್ತುಕೊಂಡು, ತನ್ನ ಸ್ವಂತ ಶರೀರದಲ್ಲಿ ಅದರ ಶ್ರಮೆಯನ್ನು ತಾಳಿದನು. ''ಪಾಪ ಜ್ಞಾನವಿಲ್ಲದ ಆತನನ್ನು ನಮಗೋಸ್ಕರ ಪಾಪ ಸ್ವರೂಪಿಯಾಗ ಮಾಡಿದನು''. ಹೀಗೆ ಮಾಡುವುದರ ಮೂಲಕ ಇಡೀ ಮಾನವ ಜನಾಂಗದ ರಕ್ಷಣೆಯನ್ನು ತನ್ನ ವಿಮೋಚನಾ ಕಾರ್ಯದ ತಳಹದಿಯ ಮೇಲೆ ತಂದು ನಿಲ್ಲಿಸಿದನು. ಮಾನವ ಜನಾಂಗವನ್ನು ಯೇಸುಕ್ರಿಸ್ತನು ದೇವರ ಬಳಿಯಲ್ಲಿ ಪುನಃ ನೆಲೆಗೊಳಿಸಿದನು. ಮಾನವ ಜನಾಂಗವು ಹೇಗಿರಬೇಕೆಂದು ದೇವರು ಮೊದಲು ಸಂಕಲ್ಪಿಸಿದ್ದನೋ, ಅದೇ ಪೂರ್ವಸ್ಥಿತಿಯಲ್ಲಿ ಅದನ್ನು ನೆಲೆ ಗೊಳಿಸಿದನು ಮತ್ತು ಯೇಸುಕ್ರಿಸ್ತನು ಶಿಲುಬೆಯ ಮೇಲೆ ಏನು ಸಾಧಿಸಿದನೋ, ಅದರ ಆಧಾರದ ಮೇಲೆ ಯಾರು ಬೇಕಾದರೂ ದೇವರ ಅನ್ಯೋನ್ಯತೆಯಲ್ಲಿ ಸೇರಬಹುದು.

ಮನುಷ್ಯನು ತನ್ನನ್ನು ತಾನು ಪಾಪದಿಂದ ಬಿಡುಗಡೆ ಮಾಡಿಕೊಳ್ಳಲಾರನು; ವಿಮೋಚನೆಯು ದೇವರ ಒಂದು ''ಕಾರ್ಯ''. ಅದು ಸಂಪೂರ್ಣವಾದದ್ದು, ಪರಿಪೂರ್ಣವಾಗಿ ಮುಗಿದು ಹೋದ ಕಾರ್ಯ; ಅದನ್ನು ವೈಯಕ್ತಿಕ ಜೀವನದಲ್ಲಿ ಅಳವಡಿಸಿ ಕೊಳ್ಳುವುದು ಒಬ್ಬನ ಕಾರ್ಯವ್ಯಾಪ್ತಿಗೆ ಮತ್ತು ಅವನ ಆಯ್ಕೆಗೆ ಬಿಟ್ಟ ವಿಷಯ. ವಿಮೋಚನೆಯ ಪ್ರಕಟನೆ ಮತ್ತು ಮನುಷ್ಯನ ಬದುಕಿನ ಜ್ಞಾನಪೂರ್ವಕವಾದ ರಕ್ಷಣಾನುಭವ, ಇವುಗಳ ನಡುವಿರುವ ತಾರತಮ್ಯವನ್ನು ಗುರುತಿಸಬೇಕು.

# ಯೇಸುಕ್ರಿಸ್ತನ ವಿಶಿಷ್ಟ ಮನೋಭಾವ

**''ನನ್ನ ಬಳಿಗೆ ಬನ್ನಿರಿ'' - (ಮತ್ತಾಯ 11:28)**

ಯೇಸುಕ್ರಿಸ್ತನ ಬಳಿಗೆ 'ಬನ್ನಿರಿ' ಎಂದು ನಾವು ಹೇಳಿಸಿಕೊಳ್ಳುವದೆಷ್ಟು ಅವಮಾನಕರ ! ಯೇಸುಕ್ರಿಸ್ತನ ಬಳಿಗೆ ನಾವೇಕೆ ಬರಲಾರೆವು ಎಂಬ ವಿಷಯಗಳನ್ನು ಕುರಿತು ಆಲೋಚಿಸೋಣ. ನೀನೆಷ್ಟರ ಮಟ್ಟಿಗೆ ಯಥಾರ್ಥನಾಗಿರುವೆ ಎಂಬುದನ್ನು ನೀನು ತಿಳಿದುಕೊಳ್ಳಬೇಕೆಂದಿದ್ದರೆ ''ನನ್ನ ಬಳಿಗೆ ಬನ್ನಿರಿ'' ಎನ್ನುವ ವಾಕ್ಯಗಳ ಮೂಲಕ ನಿನ್ನನ್ನು ನೀನು ಪರೀಕ್ಷಿಸಿಕೊಳ್ಳಬೇಕು. ನೀನು ಯಥಾರ್ಥನಾಗಿಲ್ಲದಿರುವ ಪ್ರತಿಯೊಂದು ಹಂತಗಳಲ್ಲಿ ಆತನ ಬಳಿಗೆ ಬರುವುದರ ಬದಲು ತಕರಾರು ಮಾಡುವಿ, ಆತನ ಬಳಿಗೆ ಬರುವುದಕ್ಕಿಂತಲೂ ಕಷ್ಟ ಸಂಕಟಗಳನ್ನು ಆರಿಸಿಕೊಂಡು ಅನುಭವಿಸುವಿ; ಹೇಳಲಾಗದ ಮೂರ್ಖತೆ ಎಂದು ಕಾಣುವ ''ನಾನು ಹೇಗಿರುವೆನೋ ಹಾಗೆಯೇ ಬರುವೆನು'' ಎಂದು ಹೇಳಲೇ ಬೇಕಾದ ಅಂತಿಮ ಹಂತದ ನಿನ್ನ ಬರುವಿಕೆಗಿಂತಲೂ ಬೇರೆ ಏನು ಬೇಕಾದರೂ ನೀನು ಮಾಡುವೆ, ಆದರೆ ಆತನ ಬಳಿಗೆ ಮಾತ್ರ ಬರುವುದಿಲ್ಲ. ಎಲ್ಲಿಯವರೆಗೆ ನಿನ್ನಲ್ಲಿ ತೃಣಮಾತ್ರದಷ್ಟು ಆತ್ಮೀಕ ಅಗೌರವ ಇರುತ್ತದೆಯೋ, ಅಲ್ಲಿಯ ತನಕ ಒಂದು ದೊಡ್ಡ ಕಾರ್ಯವನ್ನು ಮಾಡೆಂದು ದೇವರು ನಿನಗೆ ಹೇಳಬಹುದೆಂದು ನೀನು ನಿರೀಕ್ಷಿಸುತ್ತಿರುವಿ ಎಂಬುದನ್ನು ಅದು ತೋರಿಸುತ್ತದೆ, ಆದರೆ ದೇವರು ಹೇಳುವುದೆಲ್ಲಾ ಇಷ್ಟೇ - 'ಬನ್ನಿರಿ'.

''ನನ್ನ ಬಳಿಗೆ ಬನ್ನಿರಿ'' ಈ ವಾಕ್ಯವನ್ನು ಕೇಳಿಸಿಕೊಂಡಾಗ, ನೀನು ಆತನ ಬಳಿಗೆ ಬರುವುದಕ್ಕಿಂತ ಮೊದಲು ನಿನ್ನೊಳಗೆ ಏನೋ ಒಂದು ಸಂಭವಿಸಬೇಕು ಎಂದು ನೀನು ತಿಳಿದಿರುವೆ. ನಿನ್ನನ್ನು ಯೇಸು ಕ್ರಿಸ್ತನ ಬಳಿಗೆ ಬರದಂತೆ ಅಡ್ಡಿಮಾಡುವ ನಿನ್ನೊಳಗಿರುವ ಅಂಥ ಪ್ರತಿಯೊಂದರ ಮೂಲಕ್ಕೆ ಕೊಡಲಿಯನ್ನು ಹಾಕಲು ಏನೆಲ್ಲವನ್ನು ನೀನು ಮಾಡಬೇಕಾಗುವುದು ಎಂಬುದನ್ನು ಪವಿತ್ರಾತ್ಮನು ನಿನಗೆ ಪ್ರಕಟ ಪಡಿಸುವನು; ಆ ಒಂದು ಕಾರ್ಯವನ್ನು ಕಾರ್ಯಗತ ಮಾಡಲು ನೀನು ಇಚ್ಛಿಸದಿದ್ದರೆ ನೀನು ಎಳ್ಳಷ್ಟೂ ಮುಂದಕ್ಕೆ ಸಾಗುವುದಿಲ್ಲ. ನಿನ್ನೊಳಗಿರುವ ಅಭೇಧ್ಯವಾದದ್ದೊಂದನ್ನು ಪರಿಶುದ್ಧಾತ್ಮನು ಗುರುತಿಸಿದ್ದಾನೆ. ಆದರೆ ನೀನಾಗಿ ಅನುವು ಮಾಡಿಕೊಡದಿದ್ದರೆ ಪರಿಶುದ್ಧಾತ್ಮನು ಅಂಥಾ ಅಬೇಧ್ಯವನ್ನು ಮಣಿಸುವುದಿಲ್ಲ.

ನೀವೆಷ್ಟು ಸಲ ನಿಮ್ಮ ಕೋರಿಕೆಗಳಿಂದ ದೇವರ ಬಳಿಗೆ ಬಂದು ''ಈ ಸಾರಿ ಪವಿತ್ರಾತ್ಮನು ಹೇಳಿದ್ದೆಲ್ಲವನ್ನೂ ಮಾಡಿದ್ದೇನೆ'' ಆದುದರಿಂದ ಬೇಡಿದವುಗಳನ್ನು ಹೊಂದಿದ್ದೇನೆಂಬ ಭಾವನೆಯಿಂದ ಹೊರಟು ಹೋಗಿರುವೆಯಷ್ಟೆ! ಆದರೆ ನೀನೇನನ್ನೂ ಪಡಕೊಳ್ಳಲಾರದೆ ಹೊರಟು ಹೋಗಿರುವೆ, ಆದಾಗ್ಯೂ ದೇವರು ನಿನ್ನನ್ನು ಬರಸೆಳೆದು ಅಪ್ಪಿಕೊಳ್ಳಬೇಕೆಂದು ತನ್ನ ಕೈಗಳನ್ನು ಅಡ್ಡಗಲಕ್ಕೆ ಚಾಚಿಕೊಂಡು ಸದಾ ನಿಂತಿರುವನು, ಮಾತ್ರವಲ್ಲದೆ ನೀನು ಸಹಾ ಆತನನ್ನು ಅಪ್ಪಿಕೊಳ್ಳಲೆಂದು ಆತನು ಕಾದಿರುವನು. ಸೋಲರಿಯದ, ಅಜೇಯನಾದ, ಬೇಸರಗೊಳ್ಳದ ಯೇಸುಕ್ರಿಸ್ತನ ತಾಳ್ಮೆಯನ್ನು ಪರಾಮರ್ಶಿಸು ! ''ನನ್ನ ಬಳಿಗೆ ಬನ್ನಿರಿ''.

# ಪ್ರಾಯಶ್ಚಿತ್ತ ಯಜ್ಞದ ಸಿದ್ಧತೆ

**''ನಿಮ್ಮ ಅಂಗಗಳನ್ನು ನೀತಿ ಕೃತ್ಯಗಳನ್ನು ನಡಿಸುವ ಸಾಧನಗಳನ್ನಾಗಿ ಆತನಿಗೆ ಸಮರ್ಪಿಸಿರಿ''**
**- (ರೋಮಾ 6:13-22)**

ನನ್ನನ್ನು ನಾನೇ ಶುದ್ಧೀಕರಿಸಿಕೊಳ್ಳಲಾರೆ ಮತ್ತು ನನ್ನಷ್ಟಕ್ಕೆ ನಾನೇ ರಕ್ಷಣೆ ಹೊಂದಲಾರೆ; ಪಾಪಕ್ಕೆ ಪ್ರಾಯಶ್ಚಿತ್ತವನ್ನು ನಾನು ಮಾಡಲಾರೆ, ನಾನು ಲೋಕವನ್ನು ಪಾಪದಿಂದ ವಿಮೋಚಿಸಲಾರೆ, ಯಾವುದು ತಪ್ಪಾಗಿದೆಯೋ ಅದನ್ನು ನಾನು ಸರಿಪಡಿಸ ಲಾರೆ, ಯಾವುದು ಅಶುದ್ಧವೋ ಅದನ್ನು ಶುದ್ಧಮಾಡಲಾರೆ, ಯಾವುದು ಅಪವಿತ್ರವೋ ಅದನ್ನು ಪವಿತ್ರಗೊಳಿಸಲಾರೆ. ಅವೆಲ್ಲವುಗಳೂ ಪರಾತ್ಪರನಾದ ದೇವರು ಮಾಡುವ ಕಾರ್ಯಗಳು. ಯೇಸುಕ್ರಿಸ್ತನು ಮಾಡಿರುವ ಕಾರ್ಯದಲ್ಲಿ ನನಗೆ ನಂಬಿಕೆ ಉಂಟೋ ? ಆತನು ಸಂಪೂರ್ಣವಾದ ಪ್ರಾಯಶ್ಚಿತ್ತ ಯಜ್ಞವನ್ನು ಮಾಡಿಬಿಟ್ಟಿರುವನು, ಎಡೆಬಿಡದೆ ಅದನ್ನು ಮನನ ಮಾಡುವ ರೂಢಿಯಲ್ಲಿ ನಾನಿರುತ್ತಿರುವೆನೋ? ಕಾರ್ಯ ಮಾಡುವುದಲ್ಲ, ನಡೆದ ಕಾರ್ಯವನ್ನು ನಂಬುವುದೇ ನಮಗಿರುವ ದೊಡ್ಡ ಅಗತ್ಯತೆ. ಯೇಸುಕ್ರಿಸ್ತನು ಮಾಡಿದ ವಿಮೋಚನೆಯ ಕಾರ್ಯವು ಒಂದು ಅನುಭವ ಅಲ್ಲ, ಅದು ಯೇಸುಕ್ರಿಸ್ತನ ಮುಖಾಂತರ ದೇವರು ಮಾಡಿದ ಮಹತ್ಕಾರ್ಯವಾಗಿದೆ ಮತ್ತು ಈ ಮಹತ್ಕಾರ್ಯದ ಮೇಲೆ ನನ್ನ ನಂಬಿಕೆಯನ್ನು ಬೆಳೆಸಿ ಕೊಳ್ಳಬೇಕು. ನಾನು ನನ್ನ ಅನುಭವದ ಮೇಲೆ ನನ್ನ ವಿಶ್ವಾಸವನ್ನು ಬೆಳೆಸಿಕೊಂಡರೆ, ಸತ್ಯವೇದಕ್ಕನು ಸಾರವಾಗಿರದ, ಪ್ರತ್ಯೇಕಿಸಲ್ಪಟ್ಟ ಜೀವಿತವನ್ನು ಆರಂಭಿಸುತ್ತೇನೆ ಮತ್ತು ನಾನೇ ಶುದ್ಧನೆನ್ನುವ, ನನ್ನ ಬಿಳಿ ಬಣ್ಣದ ಶುಭ್ರತೆಯ ಮೇಲೆ ನನ್ನ ದೃಷ್ಟಿಯನ್ನು ನೆಟ್ಟಿರುತ್ತೇನೆ. ಯೇಸುಕ್ರಿಸ್ತನ ಪ್ರಾಯಶ್ಚಿತ್ತ ಯಜ್ಞದ ಪೂರ್ವಕಲ್ಪನೆಯಿರದ, ವ್ಯಕ್ತಿಗತ ಶುದ್ಧತೆಯನ್ನು , ಪ್ರತಿಪಾದಿಸುವ ಧರ್ಮಶ್ರದ್ಧೆಯ ಜೀವಿತದ ಬಗ್ಗೆ ಎಚ್ಚರದಿಂದಿರಬೇಕು. ಅದು ಜನಸಂಪರ್ಕವಿಲ್ಲದ ವಿವಿಕ್ತ, ಪ್ರತ್ಯೇಕಿಸಲ್ಪಟ್ಟ ಜೀವಿತಕ್ಕೇ ಹೊರತು ಬೇರೆ ಎಂಥಾ ಬದುಕಿಗೂ ಉಪಯೋಗಕ್ಕೆಬಾರದು; ಅಂಥ ಜೀವಿತವು ದೇವರಿಗೆ ನಿರುಪಯುಕ್ತ ಮಾತ್ರವಲ್ಲದೆ, ಮನುಷ್ಯರಿಗೆ ಕಿರಿಕಿರಿಯುಳ್ಳದ್ದಾಗಿರುತ್ತದೆ. ನಿನ್ನ ಎಲ್ಲಾ ಬಗೆಯ ಅನುಭವ ಗಳನ್ನು ಕ್ರಿಸ್ತನೇ ಅಳೆದು ವಿಮರ್ಶಿಸಲಿ. ನಾವು ವಿವೇಕಪೂರ್ವಕವಾಗಿ ಯೇಸುಕ್ರಿಸ್ತನು ಮಾಡಿದ ಪ್ರಾಯಶ್ಚಿತ್ತದ ಪೂರ್ವ ಕಲ್ಪನೆಯ ಮೇಲೆ ನೆಲೆಗೊಂಡ ನಂಬಿಕೆಯಲ್ಲದೆ ಬೇರೆ ಯಾವುದರಿಂದಲೂ ನಾವು ದೇವರನ್ನು ಸಂತೋಷ ಪಡಿಸಲಾರೆವು.

ಯೇಸುಕ್ರಿಸ್ತನು ಮಾಡಿದ ಪ್ರಾಯಶ್ಚಿತ್ತವು ನಮ್ಮ ನಿಜ ಜೀವನದಲ್ಲಿ ಕ್ರಿಯಾತ್ಮಕವಾಗಿರಬೇಕು ಮತ್ತು ಯಾರ ಗಮನಕ್ಕೂ ಬೀಳದೆ ಕಾರ್ಯಗತವಾಗುತ್ತಿರಬೇಕು. ಇದಕ್ಕೆ ನಾನು ವಿಧೇಯನಾಗಿರುವ ಪ್ರತಿ ಸಮಯದಲ್ಲಿಯು, ಸರ್ವ ಶಕ್ತನಾದ ದೇವರು ನನ್ನ ಕಡೆಗೆ ಇರುತ್ತಾನೆ, ಆ ಕಾರಣದಿಂದ ದೇವರ ಕೃಪೆಯೂ ಮತ್ತು ನನ್ನ ಸಹಜ ವಿಧೇಯತೆಯೂ ನನ್ನ ಜೀವಿತದಲ್ಲಿ ಒಂದುಗೂಡಿರುತ್ತವೆ. ವಿಧೇಯತೆಯೆಂದರೆ ನನ್ನ ಸರ್ವಸ್ವವನ್ನೂ ಪ್ರಾಯಶ್ಚಿತ್ತದ ಮೇಲೆ ಆಧಾರ ಪಡಿಸಿರುತ್ತೇನೆ, ನನ್ನ ಈ ವಿಧೇಯತೆಯು ಕೂಡಲೇ ದೇವರ ಅಲೌಕಿಕವಾದ ಕೃಪೆಯ ಆನಂದವನ್ನು  ಪಡೆದುಕೊಳ್ಳುತ್ತದೆ.

ಸಹಜವಾಗಿ ಜೀವಿಸಬೇಕಾಗಿರುವ ಸ್ವಾಭಾವಿಕ ಜೀವಿತವನ್ನು ನಿರಾಕರಿಸುವ ಧರ್ಮಶ್ರದ್ಧೆಯ ಬಗ್ಗೆ ಎಚ್ಚರದಿಂದಿರಬೇಕು, ಅದೊಂದು ಮೋಸ. ಪ್ರಾಯಶ್ಚಿತ್ತ ಯಜ್ಞಸ್ಥಾನಕ್ಕೆ ನಿಮ್ಮನ್ನು ನೀವು ಬರಮಾಡಿಕೊಂಡು ಪ್ರಾಯಶ್ಚಿತ್ತ ಯಜ್ಞದ ವಿವೇಚನೆಯು ಇದರಲ್ಲಿಯೋ, ಅದರಲ್ಲಿಯೋ? ಎಂಬುದನ್ನು ವಿಮರ್ಶಿಸಬೇಕು.

# ಹೇಗೆ ನಾನು ಗ್ರಹಿಸಬೇಕು?

**''ತಂದೆಯೇ, ಪರಲೋಕ ಭೂಲೋಕಗಳ ಒಡೆಯನೇ, ನೀನು ಜ್ಞಾನಿಗಳಿಗೂ ಬುದ್ಧಿವಂತರಿಗೂ ಈ ಮಾತುಗಳನ್ನು ಮರೆ ಮಾಡಿ ಬಾಲಕರಿಗೆ ಪ್ರಕಟ ಮಾಡಿದ್ದೀ ಎಂದು ನಿನ್ನನ್ನು ಕೊಂಡಾಡುತ್ತೇನೆ'' - (ಮತ್ತಾಯ 11:25)**

ಅಧ್ಯಾತ್ಮಿಕ ಸಂಬಂಧಗಳಲ್ಲಿ ಹಂತ ಹಂತವಾಗಿ ನಾವು ಬೆಳೆಯುವುದಿಲ್ಲ, ನಾವು ಆ ಮಟ್ಟದ ಸಂಬಂಧವನ್ನು ಹೊಂದುತ್ತೇವೆ ಅಥವಾ ಹೊಂದದೆ ಹೋಗುತ್ತೇವೆ. ದೇವರು ನಮ್ಮನ್ನು ಪಾಪದಿಂದ ಹಂತಹಂತವಾಗಿ ಹೆಚ್ಚು ಹೆಚ್ಚಾಗಿ ಶುದ್ಧೀಕರಿಸುವುದಿಲ್ಲ, ''ಆದರೆ ನಾವು ಬೆಳಕಿನಲ್ಲಿ ನಡೆದರೆ... ನಮ್ಮನ್ನು ಶುದ್ದೀ ಮಾಡುವನು'' (1ಯೋಹಾನ 1:7-9) ನಮ್ಮನ್ನು ಎಲ್ಲಾ ಪಾಪದಿಂದ ಒಂದೇ ಸಾರಿ ಶುದ್ದೀಕರಿಸುವನು. ಇದು ವಿಧೇಯತೆಯ ಪ್ರಶ್ನೆಯಾಗಿದೆ. ಒಮ್ಮೆ ವಿಧೇಯರಾದ ತತ್‌ಕ್ಷಣವೇ ದೇವರೊಂದಿಗೆ ಸಂಬಂಧವೇರ್ಪಟ್ಟು ಅದು ಪರಿಪೂರ್ಣವಾಗಿಬಿಡುತ್ತದೆ. ಈ ವಿಧೇಯತೆಯಿಂದ ಒಂದೇ ಒಂದು ಕ್ಷಣಕ್ಕಾದರೂ ಬೇರೊಂದು ಕಡೆ ತಿರುಗಿದರೆ ಮರಣವೂ ಕಾರ್ಗತ್ತಲೂ ಕೂಡಲೇ ಕಾರ್ಯೋನ್ಮುಖ ವಾಗುತ್ತವೆ.

ವಿಧೇಯತೆಯ ಮುಖಾಂತರ ನಮಗೆ ತೆರೆಯಲ್ಪಡುವ ತನಕ, ದೇವರ ಎಲ್ಲಾ ಪ್ರಕಟಣೆಗಳೂ ಮುಚ್ಚಲ್ಪಟ್ಟು ಮುದ್ರೆ ಹಾಕಲ್ಪಟ್ಟಿರುತ್ತವೆ. ವೇದಾಂತದ ಮೂಲಕವಾಗಲೀ ಅಥವಾ ಚಿಂತನೆಯ ಮೂಲಕ ವಾಗಲೀ ಅವುಗಳ ಮುದ್ರೆಯನ್ನೊಡೆದು ತೆರೆಯಲಾಗದು. ನೀನು ಒಮ್ಮೆ ವಿಧೇಯನಾದ ಕೂಡಲೇ ಮಿಂಚಿನಂಥಾ ಬೆಳಕುಂಟಾಗುವುದು. ದೇವರ ಸತ್ಯಾರ್ಥಗಳು ಆ ಬೆಳಕಿನಲ್ಲಿ ನಿನ್ನನ್ನು ತೋಯಿಸಿ ಕಾರ್ಯಸಾಧುವಾಗುತ್ತವೆ - ಅವುಗಳ ಬಗ್ಗೆ ಚಿಂತೆ ಮಾಡುವುದಲ್ಲ. ದೈವ ಸತ್ಯಾರ್ಥಗಳನ್ನು ಅರಿಯುವ ಒಂದೇ ಮಾರ್ಗವೆಂದರೆ ಅವುಗಳನ್ನು ಅರಿಯುವ ಪ್ರಯಾಸವನ್ನು ನಿಲ್ಲಿಸಿಬಿಡಬೇಕು, ಹೊಸದಾಗಿ ಹುಟ್ಟುವುದರಿಂದ ಮಾತ್ರವೇ ಅವುಗಳನ್ನು ನೀನು ಅರಿತುಕೊಳ್ಳುವಿ. ದೇವರು ನಿನಗೆ ತೋರಿಸುವ ಸಂಗತಿಗೆ ನೀನು ವಿಧೇಯನಾಗು, ತತ್‌ಕ್ಷಣವೇ ಮುಂದಿನ ಸತ್ಯಾರ್ಥವು ನಿನಗೆ ತೆರೆಯಲ್ಪಡುವುದು. ಪವಿತ್ರಾತ್ಮನ ವಿಷಯವಾಗಿ ಪುಸ್ತಕದ ಸಂಪುಟಗಳನ್ನೇ ನೀನು ಓದುವಿ, ಆದರೆ ಕೇವಲ ಐದು ನಿಮಿಷಗಳ ಗಂಭೀರವಾದ ಪಟ್ಟುಹಿಡಿದ ವಿಧೇಯತೆಯು, ಸೂರ್ಯನ ಬೃಹತ್ ಕಿರಣ ಪ್ರಕಾಶದಲ್ಲಿ ಹೊಳೆದು ಕಾಣುವ ಹಾಗೆ ದೈವ ಸತ್ಯಾರ್ಥವನ್ನು ಸ್ಪಷ್ಟವಾಗಿ ನಿನಗೆ ಗೋಚರಿಸುವಂತೆ ಮಾಡುವುದು. ''ಈ ಸಂಗತಿಗಳನ್ನು ನಾನು ಒಂದಲ್ಲ ಒಂದುದಿನ ಅರ್ಥ ಮಾಡಿಕೊಳ್ಳುವೆನೆಂದು ಊಹಿಸುವೆ'' ಎಂದೆನ್ನಬೇಡ, ಈಗಲೇ ಅವುಗಳನ್ನು ನೀನು ಅರ್ಥ ಮಾಡಿಕೊಳ್ಳಬಹುದು. ನಿರಂತರ ವಾದ ಅಧ್ಯಯನದಿಂದ ಅದನ್ನು ಅರ್ಥಮಾಡಿಕೊಳ್ಳಲಾಗದು, ಆದರೆ ವಿಧೇಯತೆಯಿಂದ ಅವುಗಳನ್ನು ಅರ್ಥ ಮಾಡಿಕೊಳ್ಳಬಹುದು. ಅಲ್ಪತೃಣಮಾತ್ರದ ವಿಧೇಯತೆಯು ಜ್ಞಾನದಾಕಾಶವನ್ನು ತೆರೆದು ಕೊಳ್ಳುವಂತೆ ಮಾಡುತ್ತದೆ ಮತ್ತು ಅತ್ಯಂತ ಆಳವಾದ ದೇವರ ಸತ್ಯಗಳು ನಿನಗೆ ನೇರವಾಗಿ ಬಂದೊದ ಗುತ್ತವೆ. ದೇವರು ನಿನಗಾಗಲೇ ಬಯಲು ಪಡಿಸಿದ ಸತ್ಯಕ್ಕೆ ನೀನು ಮೊದಲು ವಿಧೇಯನಾಗುವ ತನಕ ದೇವರು ತನ್ನ ವಿಷಯದ ಇತರ ಸತ್ಯಗಳನ್ನು ನಿನಗೆ ತಿಳಿಯಪಡಿಸುವುದಿಲ್ಲ. ಜ್ಞಾನಿಯೂ ಮತ್ತು ವಿವೇಕವಂತನೂ ನೀನಾಗುವುದರ ಬಗ್ಗೆ ಎಚ್ಚರದಿಂದಿರು. ''ಆತನ ಚಿತ್ತದಂತೆ ನಡೆಯುವುದಕ್ಕೆ ಯಾರಿಗೆ ಮನಸ್ಸದೆಯೋ ಅವರಿಗೆ ..........'' (ಯೋಹಾನ 7:17) ಮಾತ್ರ.

# ದೇವರ ಮೌನದ ನಂತರ - ಮತ್ತೇನು ?

**ಲಾಜರನು ''ಅಸ್ವಸ್ಥನಾಗಿದ್ದನೆಂದು ಆತನು ಕೇಳಿದ ಮೇಲೆ ಎರಡು ದಿನ ತಾನಿದ್ದ ಸ್ಥಳದಲ್ಲೇ ನಿಂತನು'' - (ಯೋಹಾನ 11:6)**

ದೇವರು ತನ್ನ ಮೌನದ ಮುಖಾಂತರ - ಯಾವ ಮೌನವು ಮಹತ್ವದ ಅರ್ಥವನ್ನು ಹೊಂದಿದೆಯೋ, ಅದರ ಮುಖಾಂತರ ನಿನ್ನಲ್ಲಿ ವಿಶ್ವಾಸವನ್ನಿಟ್ಟಿರುವನೋ? ದೇವರ ಮೌನಗಳೇ ಆತನ ಉತ್ತರವಾಗಿವೆ. ಬೇಥಾನ್ಯದ ಮನೆಯಲ್ಲಿ ಗಾಢಮೌನವು ಆವರಿಸಿದ ಆ ದಿನಗಳನ್ನು ಯೋಚಿಸಿ ನೋಡು! ಆ ದಿನಗಳಿಗೆ ಸದೃಶ್ಯವಾದ ಸಂಗತಿಯು ನಿನ್ನ ಜೀವಿತದಲ್ಲಿರುವುದೊ? ಅವರನ್ನು ನಂಬಿದಂತೆ ದೇವರು ನಿನ್ನನ್ನು ನಂಬುವನೋ ಅಥವಾ ಕಣ್ಣಿಗೆ ಗೋಚರಿಸುವಂಥಾ ಉತ್ತರಕ್ಕಾಗಿ ನೀನು ಇನ್ನೂ ದೇವರನ್ನು ಬೇಡಿಕೊಳ್ಳುತ್ತಿರುವಿಯೋ? ನಿನ್ನ ಉತ್ತರವಿಲ್ಲದೆ ನಾನು ಮುಂದೆ ಸಾಗಲಾರೆನೆಂದು ನೀನು ಬೇಡಿಕೊಳ್ಳುತ್ತಾ ಇರುವೆಯಾದರೆ ನೀನು ಬೇಡುವ ಆಶೀರ್ವಾದಗಳನ್ನು ದೇವರು ಕೊಟ್ಟೇ ಕೊಡುತ್ತಾನೆ; ಆದರೆ ಆತನ ಮೌನವು ಆತನನ್ನು ನೀನು ಅತ್ಯಮೋಘವಾಗಿ ಅರ್ಥಮಾಡಿಕೊಳ್ಳುವೆಡೆಗೆ ನಿನ್ನನ್ನು ಬರ ಮಾಡುವ ಸಂಕೇತವಾಗಿದೆ. ಆಲಿಸಬಲ್ಲ ಉತ್ತರವು ನಿನಗೆ ದೊರಕಲಿಲ್ಲವಾದ್ದರಿಂದ ದೇವರ ಮುಂದೆ ಶೋಕಿಸುತ್ತಿರುವೆಯೋ? ಇದಕ್ಕಿಂತಲೂ ಹಿರಿದಾದ ರಹಸ್ಯವೊಂದು ಬಯಲಾದುದನ್ನು ಹಿಂದೆ ನೀನು ಎದುರಿಸಿ ದುದನ್ನು ದೇವರು ನೋಡಿದ್ದಾನೆ. ಆದುದರಿಂದ ತನಗೆ ಸಾಧ್ಯವಿರಬಹುದಾದ ಅತ್ಯಂತ ಆತ್ಮೀಯತೆಯ ದಿವ್ಯ ಮೌನದ ಮೂಲಕ-ಜಿಗುಪ್ಸೆಯ ಮೌನದಿಂದಲ್ಲ-ನಿನ್ನಲ್ಲಿ ಆತನು ಭರವಸೆ ಯಿಟ್ಟಿರುವುದನ್ನು ನೀನು ಕಾಣುವೆ. ಸಧ್ಯದಲ್ಲಿ ದೇವರು ತನ್ನದೊಂದು ಮೌನವನ್ನು ನಿನಗೆ ಕೊಟ್ಟಿದ್ದರೆ, ಆತನನ್ನು ಸ್ತುತಿಸು, ತನ್ನ ಉದ್ದೇಶ ಸಾಧನಾ ಮಾರ್ಗದಲ್ಲಿ ಬೃಹತ್ ಓಟವನ್ನು ಓಡಲು ಆತನು ನಿನ್ನನ್ನು ಸೇರಿಸಿ ಕೊಳ್ಳುತ್ತಿದ್ದಾನೆ. ಸಕಾಲದಲ್ಲಿ ಉತ್ತರದ ಈಡೇರಿಕೆಯು ದೇವರ ಸರ್ವತಂತ್ರಕ್ಕೆ ಬಿಟ್ಟ ವಿಷಯ ವಾಗಿದೆ. ಸಮಯವು ದೇವರಿಗೆ ಏನೂ ಅಲ್ಲ. ಕೆಲವು ಸಲ ನೀನು ಹೀಗೆ ಹೇಳುವಿ - ''ನನಗೆ ತಿನ್ನಲು ರೊಟ್ಟಿಯನ್ನು ಕೊಡೆಂದು ದೇವರನ್ನು ನಾನು ಕೇಳಿಕೊಂಡೆ, ಆದರೆ ಆತನು ನನಗೆ ಕಲ್ಲು ಕೊಟ್ಟನು''. (ಮತ್ತಾಯ 7:9 ನೋಡಿರಿ) ಇಲ್ಲ , ಆ ಸಮಯದಲ್ಲಿ ಆತನು ಹಾಗೆ ಮಾಡಲಿಲ್ಲ. ಈ ದಿನನೋಡು! ದೇವರು ನಿನಗೆ ಜೀವಕರವಾದ ರೊಟ್ಟಿಯನ್ನು ಅನುಗ್ರಹಿಸಿದ್ದಾನೆ (ಯೋಹಾನ 6:35 ನೋಡಿರಿ).

ದೇವರ ಮೌನದ ವಿಷಯದಲ್ಲೊಂದು ಅದ್ಭುತವೆಂದರೆ, ಆತನ ನಿಶ್ಚಲತೆಯು ಸಾಂಕ್ರಾಮಿಕ ವಾಗಿರುವುದರಿಂದ ಅದು ನಿನ್ನೊಳಗೆ ಸೇರಿಕೊಂಡಿತು ಮತ್ತು ನೀನು ಪರಿಪೂರ್ಣ ವಿಶ್ವಾಸವುಳ್ಳ ವನಾಗಿ-''ದೇವರು ನನ್ನ ಪ್ರಾರ್ಥನೆಯನ್ನು ಆಲಿಸಿರುವನೆಂಬುದು ನನಗೆಗೊತ್ತದೆ'' ಎಂದು ಪ್ರಮಾಣಿಸಿ ಹೇಳುವಿ. ಹೌದು ಆತನ ಮೌನವೇ ದೇವರು ನಿನ್ನ ಪ್ರಾರ್ಥನೆಯನ್ನು ಕೇಳಿದ್ದಾನೆಂಬದರ ಪುರಾವೆಯಾಗಿದೆ. ನಿನ್ನ ಪ್ರಾರ್ಥನೆಗಳಿಗೆ ಉತ್ತರಿಸುವ ಮೂಲಕ ದೇವರು ನಿನ್ನನ್ನು ಕರುಣಿಸಿರುವ ನೆಂಬುವ ಭಾವನೆಯಲ್ಲಿ ನೀನಿರುವ ತನಕ ಆತನು ಉತ್ತರವನ್ನು ಕೊಡುತ್ತಿರುತ್ತಾನೆ. ಆದರೆ ಆತನ ಮೌನದ ಕೃಪೆಯನ್ನು ನಿನಗೆಂದಿಗೂ ದಯಪಾಲಿಸುವುದಿಲ್ಲ. ಪ್ರಾರ್ಥನೆಯು ತನ್ನ ತಂದೆಯನ್ನು ಮಹಿಮೆ ಪಡಿಸುವದಕ್ಕಾಗಿಯೇ ಎನ್ನುವ ಅರ್ಥಗ್ರಹಿಕೆಯೊಳಗೆ ಯೇಸುಕ್ರಿಸ್ತನು ನಿನ್ನನ್ನು ಬರ ಮಾಡಿದಾಗ ಆತನು ನಿನಗೆ ದಯಪಾಲಿಸುವ ಪ್ರಥಮ ಆತ್ಮೀಯತೆಯ ಸೂಚನೆ ''ಆತನ ಮೌನವೇ''- ಕೃಪಾಭರಿತ ಮೌನವೇ ಅದು.

# ದೇವರ ದಾಪುಗಾಲಿನ ಹೆಜ್ಜೆಯ ಜೊತೆಯಾಗಿ

**''ಹನೋಕನು ದೇವರೊಂದಿಗೆ ಅನ್ಯೋನ್ಯವಾಗಿ ನಡೆದುಕೊಳ್ಳುತ್ತಾ'' - (ಆದಿಕಾಂಡ 5:24)**

ಒಬ್ಬ ಮನುಷ್ಯನ ಧಾರ್ಮಿಕ ಜೀವಿತ ಮತ್ತು ಅವನ ಗುಣ ಚಾರಿತ್ರ್ಯದ ಪರೀಕ್ಷೆಯು ಅವನ ಜೀವಿತದ ಅಸಾಧಾರಣ ಸಮಯದಲ್ಲಿ ಅವನು ಹೇಗೆ ವರ್ತಿಸುವನು ಎಂಬುದನ್ನು ಅವಲಂಬಿಸಿಲ್ಲ ; ಆದರೆ ಅವನು ಮಹತ್ವದ ಇಲ್ಲವೇ ಉತ್ಸಾಹಭರಿತ ಸನ್ನಿವೇಶಗಳಿಲ್ಲದಿರುವ, ದೈನಂದಿನ ಸರ್ವಸಾಮಾನ್ಯ ಸಮಯದಲ್ಲಿ ಹೇಗೆ ವರ್ತಿಸುವನೆನ್ನುವುದನ್ನು ಅದು ಅವಲಂಬಿಸಿದೆ. ಒಬ್ಬ ವ್ಯಕ್ತಿಯು, ತಾನು ಗಮನಿಸ್ಪಡುವ ಬೆಳಕು ಇಲ್ಲದಿರುವಾಗ ತನ್ನ ಸುತ್ತಲಿರುವ ಸಾಮಾನ್ಯ ಸಂಗತಿಗಳಲ್ಲಿ ಅವನು ತಾಳುವಧೋರಣೆಯೇ ಅವನ ಯೋಗ್ಯತೆಯನ್ನು, ಬಯಲು ಪಡಿಸುತ್ತದೆ (ಯೋಹಾನ 1:36 ನೋಡಿರಿ). ದೇವರ ದಾಪುಗಾಲಿನ ಹೆಜ್ಜೆಗೆ ಜೊತೆಯಾಗಿ ನಡೆಯುವುದು, ಅತ್ಯಂತ ನೋವಿನ ನಡೆದಾಟವಾಗಿದೆ ಯಾಕೆಂದರೆ ಅದಕ್ಕೆ ಆತ್ಮೀಕವಾಗಿ ಹೆಚ್ಚಿನ ಬಲ ಇರಬೇಕಾಗುತ್ತದೆ. ದೇವರ ಜೊತೆಯಾಗಿ ನಡೆಯವುದನ್ನು ಅಭ್ಯಾಸ ಮಾಡುವಾಗ, ಆತನಂತೆ ದಾಪುಗಾಲು ಹಾಕುವುದು ಬಹು ಕಷ್ಟಕರವಾದದ್ದು; ಒಮ್ಮೆ ನಾವು ಹಾಗೆ ಮುಂದುವರಿಯಲು ಶುರು ಮಾಡಿದಾಗ, ನಮ್ಮಲ್ಲಿ ಕಾಣುವ ಒಂದೇ ಒಂದು ಗುಣವೆಂದರೆ ಅದು ದೇವರ ಜೀವಿತದ ಗುಣಲಕ್ಷಣವಾಗಿರುತ್ತದೆ. ಸಹಜ ಮನುಷ್ಯನೊಬ್ಬನು ದೇವರ ವ್ಯಕ್ತಿತ್ವದಲ್ಲಿ ಒಂದಾಗಿ ಮರೆಯಾಗಿಬಿಡುವುದರಿಂದ ಅವನಲ್ಲಿ, ದೇವರ ದಾಪುಕಾಲು ಮತ್ತು ದೇವರ ಸಾಮರ್ಥ್ಯವು ಮೈದೋರುತ್ತವೆ.

ದೇವರ ದಾಪುಕಾಲಿನ ಹೆಜ್ಜೆಯೊಳಗೆ ಸೇರುವುದು ತುಂಬಾ ಕಷ್ಟಕರ, ಯಾಕೆಂದರೆ ನಾವು ಆತನ ಜೊತೆಯಲ್ಲಿ ನಡೆಯುವುದನ್ನು ಆರಂಭ ಮಾಡುವಾಗ, ನಾವು ಮೂರು ಹೆಜ್ಜೆಯನ್ನು ಇಟ್ಟಿರುವೆವೋ, ಇಲ್ಲವೋ ಅಷ್ಟರೊಳಗೆ ದೇವರು ನಮ್ಮನ್ನು ದಾಟಿಮುಂದೆ ಹೋಗಿ ಬಿಟ್ಟಿರುವುದನ್ನು ನಾವು ಕಾಣುತ್ತೇವೆ. ಕಾರ್ಯಗಳನ್ನು ಸಾಧಿಸಲು ಆತನಿಗೆ ಬೇರೆ ದಾರಿಗಳುಂಟು, ಆದ್ದರಿಂದ ಅಂಥಾ ದಾರಿಗಳಲ್ಲಿ ಸಾಗುವಂತೆ ನಾವು ಶಿಕ್ಷಣವನ್ನೂ ತರಬೇತಿಯನ್ನೂ ಪಡೆದುಕೊಳ್ಳಬೇಕಾಗಿದೆ. ಯೇಸುಕ್ರಿಸ್ತನ ವಿಷಯವಾಗಿ ಹೀಗೆ ಹೇಳಿದೆ - ''ಇವನು ಕಳೆಗುಂದದೆಯೂ, ಜಜ್ಜಿಹೋಗದೆಯೂ'' (ತನ್ನ ಕಾರ್ಯದಲ್ಲಿ ನಿರತನಾಗಿರುವನು) (ಯೆಶಾಯ 42:4) ಯಾಕೆಂದರೆ ಆತನು ತನ್ನ ವೈಯಕ್ತಿಕ ದೃಷ್ಟಿಗನುಗುಣವಾಗಿ ಎಂದೂ ಕೆಲಸ ಮಾಡಲಿಲ್ಲ, ಆದರೆ ತನ್ನ ತಂದೆಯ ದೃಷ್ಟಿಗನುಸಾರವಾಗಿ ಕೆಲಸ ಮಾಡುತ್ತಿದ್ದನು. ಹಾಗೆ ಮಾಡುವುದನ್ನು ನಾವು ಅಭ್ಯಾಸ ಮಾಡಬೇಕು. ನಮ್ಮನ್ನಾವರಿಸಿರುವ ಪರಿಸರಗಳ ಮೂಲಕ ನಾವು ಆತ್ಮೀಕ ಸತ್ಯಾರ್ಥಗಳನ್ನು ಕಲಿತುಕೊಳ್ಳಬೇಕಲ್ಲದೆ ಬೌದ್ಧಿಕ ವಿವೇಚನೆಯಿಂದಲ್ಲ. ಆಗ ನಾವು ಸಮಸ್ಯೆಗಳನ್ನು ದೃಷ್ಟಿಸುವ ಪರಿಸರವನ್ನೇ ದೇವರ ಆತ್ಮನು ಬದಲಾಯಿಸಿ ಬಿಡುತ್ತಾನೆ ಮತ್ತು ಆ ಸಂಗತಿಗಳು, ಅಂದರೆ ಯಾವ ಸಂಗತಿಗಳು ಈವರೆಗೂ ನಮಗೆ ಅಸಾಧ್ಯವಾಗಿದ್ದವೋ, ಅವುಗಳು ಈಗ ಸಾಧ್ಯವಾಗುವಂತೆ ಕಾಣಿಸುವುವು. ದೇವರ ದಾಪುಗಾಲಿನ ಜೊತೆಯಲ್ಲಿ ನಡೆಯವುದೆಂದರೆ ಆತನಲ್ಲಿ ನಾವು ಒಂದಾಗಿರುವುದಕ್ಕಿಂತಲೂ ಬೇರೇನೂ ಅಲ್ಲ, ಹಾಗಾಗಲು ಬಹಳ ಸಮಯ ಬೇಕಾಗುತ್ತದೆ, ಆದರೂ ಪ್ರಯತ್ನವನ್ನು ಮುಂದುವರಿಸಬೇಕು. ಪ್ರಸ್ತುತ ವೇದನೆಯು ಬಹು ಕೆಟ್ಟದ್ದಾಗಿ ಕಂಡರೂ ಪ್ರಯತ್ನವನ್ನು ಬಿಟ್ಟುಕೊಡಬೇಡ. ಹಾಗೆಯೇ ಮುಂದೆ ಸಾಗಲೇಬೇಕು; ಅನತಿಕಾಲದಲ್ಲಿಯೇ ಅಲ್ಲಿ ಹೊಸದೊಂದು ಉದ್ದೇಶವಿರುವುದನ್ನು , ಹೊಸದೊಂದು ದರ್ಶನವಿರುವುದನ್ನು ನೀನು ಕಂಡುಕೊಳ್ಳುವಿ.

# ವೈಯಕ್ತಿಕ ನಿರುತ್ಸಾಹ ಮತ್ತು ವ್ಯಕ್ತಿಗತ ಬೆಳವಣಿಗೆ

**''ಮೋಶೆ .... ಸ್ವಜನರ ಬಳಿಗೆ ಹೋಗಿ ಇವರ ಬಿಟ್ಟೀ ಕೆಲಸಗಳನ್ನು ನೋಡುತ್ತಿದ್ದನು''**
**- (ವಿಮೋ. 2:11)**

ಮೋಶೆಯು ತನ್ನ ಜನರ ಮೇಲಾಗುತ್ತಿದ್ದ ದಬ್ಬಾಳಿಕೆಯನ್ನು ಕಣ್ಣಾರೆ ನೋಡಿದನು ಮತ್ತು ಅವರನ್ನು ಬಿಡುಗಡೆ ಮಾಡಬಲ್ಲವನು ತಾನೇ ಎಂದು ನಿಶ್ಚಯವಾಗಿ ತಿಳಿದನು, ತನ್ನ ಆತ್ಮದ ಪ್ರಾಮಾಣಿಕ ರೋಷದಿಂದ ತನ್ನ ಜನರ ತಪ್ಪುಗಳನ್ನು ಸರಿಪಡಿಸಲು ಮುಂದಾದನು. ಒಳ್ಳೇ ಕಾರಣಕ್ಕಾಗಿ ದೇವರ ಸಲುವಾಗಿ ಆತನು ಕೊಟ್ಟ ಮೊದಲನೆಯ ಹೊಡೆತದ ನಂತರ ದೇವರು ಮೋಶೆಯನ್ನು ತೀರಾ ನಿರುತ್ಸಾಹ ದೊಳಗಡೆಗೆ ಓಡಿಸಿಬಿಟ್ಟನು, ಮನುಷ್ಯರನ್ನು ಕಾಯುವವನೆಂದು ತಿಳಿದಿದ್ದವನನ್ನು ನಲ್ವತ್ತು ವರ್ಷಗಳ ಕಾಲ ಮರುಭೂಮಿಯಲ್ಲಿ ಕುರಿಗಳನ್ನು ಕಾಯಲು ಕಳುಹಿಸಿಕೊಟ್ಟನು. ಆ ಕಾಲದ ಕೊನೆಯಲ್ಲಿ ದೇವರು ಮೋಶೆಗೆ ಕಾಣಿಸಿಕೊಂಡು ಅವನಿಗೆ, ಹೋಗಿ ತನ್ನ ಜನರನ್ನು ಬಿಡಿಸಿ ಕರೆದುಕೊಂಡು ಬರಲಿಕ್ಕೆ ಹೇಳಿದನು. ಆಗ ಮೋಶೆಯು ''ಕರಕೊಂಡು ಬರುವುದಕ್ಕೆ ನಾನು ಎಷ್ಟರವನು'' ಎಂದು ಜಿಗುಪ್ಸೆಯಿಂದ ಪ್ರತ್ಯುತ್ತರಿ ಸಿದನು. (ವಿಮೋ. 3:10) ತನ್ನ ಜನರನ್ನು ಬಿಡುಗಡೆ ಮಾಡುವವನು ತಾನೇ ಎಂಬುದಾಗಿ ಪ್ರಾರಂಭ ದಲ್ಲಿಯೇ ಮೋಶೆಯು ಗ್ರಹಿಸಿದ್ದನು. ಆದರೆ ಅದಕ್ಕಿಂತಲೂ ಮೊದಲು ಮೋಶೆಯು ದೇವರಿಂದ ಶಿಕ್ಷಣ ವನ್ನೂ ತರಬೇತಿಯನ್ನೂ ಪಡೆಯ ಬೇಕಾಗಿತ್ತು. ಮೋಶೆಯು ತನ್ನ ವ್ಯಕ್ತಿಗತ ಯಥಾರ್ಥ ದೃಷ್ಟಿಯಲ್ಲಿ ಮೊದಲು ತಿಳಿದದ್ದು ಸರಿಯಾದುದೇ ಆಗಿತ್ತು, ಆದರೆ ದೇವರೊಡನೆ ಅನ್ಯೋನ್ಯತೆಯಲ್ಲಿರುವುದನ್ನು ಆತನು ಕಲಿತುಕೊಳ್ಳುವ ತನಕ ಜನರ ಬಿಡುಗಡೆಯ ಕಾರ್ಯಕ್ಕೆ ತಕ್ಕ ವ್ಯಕ್ತಿಯಾಗಿರಲಿಲ್ಲ.

ದೇವರಿಂದುಂಟಾಗುವ ದರ್ಶನಗಳು ನಮಗೂ ಆಗಬಹುದು ಮತ್ತು ದೇವರು ಏನನ್ನು ಬಯಸುವನೆಂಬುದರ ಬಗ್ಗೆ ಸ್ಪಷ್ಟವಾದ ಗ್ರಹಿಕೆಯೂ ನಮಗುಂಟಾಗಬಹುದು, ಅದರಂತೆ ಕಾರ್ಯೋ ನ್ಮುಖರಾಗಿಯೂ ಬಿಡುತ್ತೇವೆ; ಆಗಲೇ ನಮ್ಮ ಎಲ್ಲಾ ಆಸಕ್ತಿಗಳನ್ನು ದೇವರು ಸಂಪೂರ್ಣವಾಗಿ ಉಪೇಕ್ಷಿಸಿ ರುವನೋ ಎಂದು ಕಾಣುವ ಆ ನಲ್ವತ್ತು ವರ್ಷಗಳ ಮರುಭೂಮಿಯ ದಿನಗಳಿಗೆ ಸರಿಸಮಾನ ವಾದದ್ದು ನಮಗೆ ಸಂಭವಿಸುತ್ತದೆ. ಯಾವಾಗ ನಾವು ಪೂರ್ಣವಾಗಿ ನಿರುತ್ಸಾಹಕ್ಕೊಳಗಾಗುತ್ತೇವೆಯೋ, ಆಗ ದೇವರು ನಮ್ಮ ಕಡೆಗೆ ಹಿಂತಿರುಗಿಕೊಂಡು ತನ್ನ ಕರೆಯುವಿಕೆಯನ್ನು ಪುನರೂರ್ಜಿತಗೊಳಿಸುತ್ತಾನೆ, ಆಗ ನಾವು ನಡಗುತ್ತಾ ಕಂಪಿಸುವ ಧ್ವನಿಯಲ್ಲಿ ದೇವರಿಗೆ ಹೇಳುತ್ತೇವೆ. - ಓ ದೇವರೇ, ನಾನು ಎಷ್ಟರವನು!'' ದೇವರ ಮೊದಲನೆಯ ದಾಪುಗಾಲಿನ ಹೆಜ್ಜೆಯನ್ನು ನಾವು ಮನಗಾಣಬೇಕು. ಅದು - ''ಇರುವಾತ ನೆಂಬುವನು ನನ್ನನ್ನು ನಿಮ್ಮ ಬಳಿಗೆ ಕಳುಹಿಸಿದನು''. ದೇವರಿಗಾಗಿ ನಾವು ಮಾಡುವ ವ್ಯಕ್ತಿಗತ ಪ್ರಯಾಸವು ಅಸಂಬದ್ಧವಾದುದೆಂದು ನಾವು ತಿಳಿದುಕೊಳ್ಳಬೇಕು; ದೇವರೊಡನಿರುವ ವೈಯಕ್ತಿಕ ಸಂಬಂಧದ ಕಾರಣದಿಂದ ನಮ್ಮ ವೈಯಕ್ತಿಕತೆಯು ಪ್ರಕಾಶಮಾನವವಾಗಿ ತೋರಿಬರಬೇಕು (ಮತ್ತಾ 3:11 ನೋಡಿರಿ). ನಾವು ನಮ್ಮ ವ್ಯಕ್ತಿಗತ ದೃಷ್ಟಿಭಾವದಿಂದ ಸರಿಕಾಣುವ ವಿಷಯಗಳ ಮೇಲೆ ದೃಷ್ಟಿಯನ್ನು ನೆಟ್ಟಿರುತ್ತೇವೆ; ನಮಗೆ ದರ್ಶನವಾಗಿದೆ. ''ಇದನ್ನೇ ನಾನು ಮಾಡಬೇಕೆಂದು ದೇವರು ಬಯಸುತ್ತಿರುವನು'' ಎಂದು ಭಾವಿಸುತ್ತೇವೆ; ಆದರೆ ದೇವರ ದಾಪುಗಾಲಿನ ಜೊತೆಜೊತೆಯಾಗಿ ನಾವು ಸಾಗುತ್ತಿಲ್ಲ, ವಿಷಣ್ಣತೆಯ ಸನ್ನಿವೇಶಗಳಲ್ಲಿ ಈಗ ನೀನಿರುವಿಯಾದರೆ, ಹಿರಿದಾದ ವ್ಯಕ್ತಿಗತ ಬೆಳವಣಿಗೆಯು ನಿನ್ನ ಮುಂದಿಡಲ್ಪಟ್ಟಿದೆ.

# ಕಳುಹಿಸಲ್ಪಟ್ಟವನ ಮಿಷನರಿಯ ಬಗ್ಗೆ ತಿಳಿಯುವಿಕೆ

**''ಪರಲೋಕದಲ್ಲಿಯೂ ಭೂ ಲೋಕದಲ್ಲಿಯೂ ಎಲ್ಲಾ ಅಧಿಕಾರವು ನನಗೆ ಕೊಡಲ್ಪಟ್ಟಿದೆ ಆದ್ದರಿಂದ ನೀವು ಹೊರಟು ಹೋಗಿ ಎಲ್ಲಾ ದೇಶಗಳ ಜನರನ್ನು ಶಿಷ್ಯರನ್ನಾಗಿ ಮಾಡಿರಿ'' - (ಮತ್ತಾಯ 28:18-19)**

ಸುವಾರ್ತೆಯನ್ನು ಬೋಧಿಸುವ ಆಕರ್ಷಣೆಗಳಿಗೆ ಯೇಸುಕ್ರಿಸ್ತನ ಅಧಿಕಾರವು, ಆಧಾರವಾಗಿರ ಬೇಕೇ ವಿನಃ ಕ್ರಿಸ್ತನನ್ನರಿಯದಿರುವವರ ಆತ್ಮೀಕ ಅಗತ್ಯಗಳಲ್ಲ, ದೇವರ ಸಲುವಾಗಿ ನಾವು ಮಾಡುವ ಪ್ರಯಾಸ ಯತ್ನಗಳಲ್ಲಿ ನಮಗೆ ಸಹಾಯ ಮಾಡುವಾತನು ಯೇಸುಸ್ವಾಮಿ ಎಂದು ಆತನ ಕಡೆಗೆ ದೃಷ್ಟಿಸುವುದು ಸಹಜವೇ. ಆದರೆ ನಮ್ಮ ಪ್ರಭುವಾದ ಯೇಸುಕ್ರಿಸ್ತನೇ ಸಂಪೂರ್ಣಸಾರ್ವಭೌಮನಾಗಿ ಪರಮಾಧಿಕಾರದ ಪ್ರಭು ವಾಗಿ ತನ್ನ ಶಿಷ್ಯರ ಮೇಲೆ ಅಧಿಕಾರವನ್ನು ಸ್ಥಾಪಿಸಿಕೊಂಡಿರುತ್ತಾನೆ. ನಾವು ವಿಧರ್ಮಿಗಳ ಬಳಿಗೆ ಹೋಗದೇ ಇದ್ದರೆ ಅವರು ನಾಶವಾಗಿ ಹೋಗುವರೆಂದು ಯೇಸುಕ್ರಿಸ್ತನು ಹೇಳಲಿಲ್ಲ. ಆತನು ಸರಳವಾಗಿ ಹೇಳುವುದು ಇಷ್ಟೇ - ''ನೀವು ಹೊರಟು ಹೋಗಿ ... ಅವರಿಗೆ ಉಪದೇಶ ಮಾಡಿರಿ'' (ಮತ್ತಾಯ 28:18-20) ನಿಮಗೆ ಪ್ರಕಟಿಸಲ್ಪಟ್ಟ ನನ್ನ ಸರ್ವಾಧಿಕಾರವನ್ನು ಸಾರುತ್ತಾ ಹೊರಟುಹೋಗಿರಿ; ನನ್ನ ವಿಷಯವಾಗಿರುವ ನಿಮ್ಮ ಜೀವಂತ ಅನುಭವವನ್ನು ಅವರಿಗೆ ಕಲಿಸಿಕೊಡುವುದಕ್ಕೂ, ಬೋಧಿಸುವು ದಕ್ಕೂ ಹೊರಟು ಹೋಗಿರಿ'' ಎಂದಷ್ಟೇ ಹೇಳಿದನು.

''ಬಳಿಕ ಹನ್ನೊಂದು ಮಂದಿ ಶಿಷ್ಯರು... ತಮಗೆ ಗೊತ್ತು ಮಾಡಿದ್ದ ಬೆಟ್ಟಕ್ಕೆ ಸೇರಿದರು'' (ಮತ್ತಾಯ 28:16) ಯೇಸುಕ್ರಿಸ್ತನ ಸರ್ವಮಾನ್ಯ ಸ್ವತಂತ್ರತೆಯ ಸಾರ್ವಭೌಮತ್ವವನ್ನು ನಾನು ತಿಳಿದು ಕೊಳ್ಳಬೇಕಾದರೆ, ಮೊದಲು ನಾನು ಆತನನ್ನು ವ್ಯಕ್ತಿಗತವಾಗಿ ಅರಿತುಕೊಳ್ಳಬೇಕು, ಹೇಗೆ ಆತನೊಂದಿಗೆ ಏಕಾಂತವಾಗಿರ ಬೇಕೆಂಬುದನ್ನು ಕಲಿತುಕೊಳ್ಳಬೇಕು; ಯಾರ ಹೆಸರು ನನ್ನ ಮೇಲೆ ಬರೆದಿದೆಯೋ ಆ ಇರುವಾತನನ್ನು ಆರಾಧಿಸಲು ನಾನು ಸಮಯವನ್ನಿರಿಸಕೊಳ್ಳಬೇಕು. ''ನೀವೆಲ್ಲರೂ ನನ್ನ ಬಳಿಗೆ ಬನ್ನಿರಿ''- ಅದುವೇ ಯೇಸುಕ್ರಿಸ್ತ ನನ್ನು ಸಂಧಿಸುವ ಸ್ಥಳ. ನೀನು ಕಷ್ಟಪಡುತ್ತಿರುವಿಯೋ, ಹೊರೆ ಹೊತ್ತಿರುವೆಯೋ? ಎಷ್ಟು ಜನ ಕಳುಹಿಸಲ್ಪಟ್ಟವರು (ಸುವಾರ್ತಾ ಬೋಧಕರು) ಹೀಗಿರುತ್ತಿರುವರು! ಸರ್ವಮಾನ್ಯ ಸ್ವತಂತ್ರ ನಾದ ಈ ಲೋಕದೊಡೆಯನ ಈ ಮಾತುಗಳನ್ನು ಸಂಪೂರ್ಣವಾಗಿ ನಿರ್ಲಕ್ಷಿಸುತ್ತೇವೆ. ಆದರೆ ಆ ಮಾತು ಗಳೇ ಈಗ, ಇಲ್ಲಿಯೇ, ಯೇಸುಕ್ರಿಸ್ತನು ತನ್ನ ಶಿಷ್ಯರಿಗೆ ಹೇಳಿದ ಮಾತುಗಳು.

''ಆದುದರಿಂದ ನೀವು ಹೊರಟು ಹೋಗಿ'' ಇದರ ಯಥಾತಾರ್ಥವೆಂದರೆ ಅಕ್ಷರಶಃ ಅದನ್ನು ಜೀವಿಸಬೇಕು. ಅ.ಕೃ.1:8, ನಾವು ಹೊರಟು ಹೋಗಿ ಹೇಗೆ ಜೀವಿಸಬೇಕೆಂಬ ವಿವರವನ್ನು ಅದು ತಿಳಿಸುತ್ತದೆ. 'ನೀವು ಯೆರೋಸಲೇಮಿನೊಳಗೆ ಹೋಗಿರಿ, ಯೂದಾಯದೊಳಗೆ ಹೋಗಿರಿ ಮತ್ತು ಸಮಾರ್ಯದೊಳಗೆ ಹೋಗಿರಿ ಎಂದು ಯೇಸುಕ್ರಿಸ್ತನು ಹೇಳಲಿಲ್ಲ, ಆದರೆ ಈ ಎಲ್ಲಾ ಸ್ಥಳಗಳಲ್ಲಿಯೂ ''ನನಗೆ ಸಾಕ್ಷಿಗಳಾಗಿರಬೇಕು'' ಎಂದು ಹೇಳಿದನು. ಹೊರಟು ಹೋಗುವಿಕೆಯನ್ನು ಅಂದರೆ ಹೊರಟು ಹೋಗಿ ಜೀವಿಸುವದನ್ನು ದೇವರೇ ನಿರ್ವಹಿಸುತ್ತಾನೆ.

''ನೀವು ನನ್ನಲ್ಲಿಯೂ, ನನ್ನ ವಾಕ್ಯಗಳು ನಿಮ್ಮಲ್ಲಿಯೂ ನೆಲೆಗೊಂಡಿದ್ದರೆ'' (ಯೋಹಾ 15:7) ನಮ್ಮ ವೈಯಕ್ತಿಕ ಜೀವಿತವನ್ನು ಮುಂದಕ್ಕೆ ಕೊಂಡೊಯ್ಯುತ್ತಿರುವ ಮಾರ್ಗ ಇದೇ. ನಾವು ಎಲ್ಲಿ ಇರಿಸಲ್ಪ ಟ್ಟಿರುವೆವೋ ಅದು ಅಪ್ರಾಮುಖ್ಯದ ವಿಷಯ; ನಮ್ಮ ಹೊರಟು ಹೋಗುವಿಕೆಯನ್ನು ದೇವರು ನಿರ್ವಹಿ ಸುತ್ತಾನೆ. ಪ್ರಾಣವನ್ನು ಉಳಿಸಿಕೊಳ್ಳುವುದನ್ನು ವಿಶೇಷವೆಂದು ನಾನು ಎಣಿಸುವುದಿಲ್ಲ, ನಾವು ಈ ಲೋಕವನ್ನು ಬಿಟ್ಟುಹೋಗುವವರೆಗೆ ಈ ರೀತಿಯಾಗಿ ಹೊರಟು ಹೋಗುತ್ತಿರಬೇಕು.

# ಮಿಷನರಿಯ ಸಂದೇಶದ ತಿಳುವಳಿಕೆ

**''ಆತನು ನಮ್ಮ ಪಾಪಗಳನ್ನು ನಿವಾರಣೆ ಮಾಡುವ ಯಜ್ಞವಾಗಿದ್ದಾನೆ. ನಮ್ಮ ಪಾಪಗಳನ್ನು ಮಾತ್ರವಲ್ಲದೆ ಸಮಸ್ತ ಲೋಕದ ಪಾಪಗಳನ್ನು ಸಹ ನಿವಾರಣೆ ಮಾಡುತ್ತಾನೆ'' - (1 ಯೋಹಾನ 2:2)**

ಪಾಪ ನಿವಾರಣಾರ್ಥ ಕ್ರಿಸ್ತಯೇಸು ಮಾಡಿದ ಪ್ರಾಯಶ್ಚಿತ್ತ ಯಜ್ಞ - ಯಾವ ಯಜ್ಞವು ದೇವರ ಕೋಪವನ್ನು ಉಪಶಮನಗೊಳಿಸಿತೋ ಅದೇ ಕಳುಹಿಸಲ್ಪಟ್ಟವನ ಸಂದೇಶದ ತಿರುಳಾಗಿರಬೇಕು. ಯೇಸುಕ್ರಿಸ್ತನ ಸುವಾರ್ತಾ ಕಾರ್ಯದ ಹಂತವನ್ನು ನೋಡಿಕೊಳ್ಳೋಣ - ರೋಗಿಗಳನ್ನು ಸ್ವಸ್ಥಪಡಿಸುವ ಹಂತವಾಗಲೀ, ರಕ್ಷಣೆ ಮತ್ತು ಶುದ್ಧೀಕರಣದ ಹಂತವಾಗಲೀ, ಇವುಗಳ ಬಗ್ಗೆ ಅಂಥಾ ಅಪರಿಮಿತ ವಾದವುಗಳೇನೂ ನಮಗೆ ಕಂಡು ಬರುವುದಿಲ್ಲ. ''ಯಜ್ಞಕ್ಕೆ ದೇವರು ನೇಮಿಸಿದ ಕುರಿ, ಲೋಕದ ಪಾಪವನ್ನು ನಿವಾರಣೆ ಮಾಡುವನು'' (ಯೋಹಾನ 1:29) - ಇದೇ ಅಪರಿಮಿತವಾದದ್ದು. ನಮ್ಮ ಪಾಪಗಳ ನಿವಾರಣೆಗಾಗಿ ಯೇಸುಕ್ರಿಸ್ತನು ಪ್ರಾಯಶ್ಚಿತ್ತ ಮಾಡಿಕೊಂಡಿರುವ ಯೇಸುಕ್ರಿಸ್ತನ ಅಪರಿಮಿತ ಪ್ರಾಮುಖ್ಯತೆಯೇ ಕಳುಹಿಸಲ್ಪಟ್ಟವನ (ಮಿಷನರಿಯ) ಸಂದೇಶದ ಹುರುಳಾಗಿರಬೇಕು ಮತ್ತು ಆ ರಹಸ್ಯಾರ್ಥದ ಅನಾವರಣದಲ್ಲಿ ತೊಯ್ದು ಹೋಗಿರುವವನೇ ನಿಜವಾದ ಮಿಷನರಿ.

ಯೇಸುಕ್ರಿಸ್ತನ ಜೀವಿತದಲ್ಲಿ ನಡೆದ ಪಾಪನಿವಾರಣಾ ಅಂಶವೇ ಕಳುಹಿಸಲ್ಪಟ್ಟವನ ಸಂದೇಶದ ಪ್ರಾಮುಖ್ಯ ವಿಷಯವಾಗಿರಬೇಕು, ಆತನ ದಯಾಪರತೆಯಲ್ಲ, ಆತನ ಸಾತ್ವಿಕತೆಯಲ್ಲ, ಆತನು ಬಯಲು ಪಡಿಸಿದ ದೇವರ ಪಿತೃತ್ವವೂ ಅಲ್ಲ , ಅಪರಿಮಿತ ಪ್ರಾಮುಖ್ಯತೆಯುಳ್ಳ ಮಹಾ ಸಂದೇಶ - ನಮ್ಮ ಪಾಪಗಳನ್ನು ನಿವಾರಣೆ ಮಾಡುವ ಯಜ್ಞ ಬಲಿಯೇ ಆತನು. ಮಿಷನರಿಯ ಸಂದೇಶವು ರಾಷ್ಟ್ರ ಭಕ್ತಿಯಲ್ಲ, ದೇಶಗಳನ್ನಾಗಲೀ, ವ್ಯಕ್ತಿಗಳನ್ನಾಗಲೀ ಪರಿಗಣಿಸುವಂಥದಲ್ಲ, ಅದು ಇಡೀ ಲೋಕಕ್ಕೆ ಸಂಬಂಧ ಪಟ್ಟದ್ದು, ಪವಿತ್ರಾತ್ಮನು ನನ್ನೊಳಗೆ ಬಂದಾಗ ಆತನು ನನ್ನ ಪ್ರೀತಿ, ಪಕ್ಷಪಾತಗಳನ್ನು ಪರಿಗಣಿಸುವುದಿಲ್ಲ, ಆತನು ನನ್ನನ್ನು ಯೇಸುಕ್ರಿಸ್ತನ ಅನ್ಯೋನ್ಯತೆಯೊಳಗೆ ಸೇರಮಾಡುತ್ತಾನೆ.

ತನ್ನ ಕರ್ತನೂ, ಗುರುವೂ ಆಗಿರುವಾತನ ಕರಾರುಗಳಿಗೆ, ನಿಷ್ಠಾಪೂರ್ವಕವಾಗಿ ಕಟ್ಟು ಬಿದ್ದಿರುವವನೇ ನಿಜವಾಗಿ ಕಳುಹಿಸಲ್ಪಟ್ಟವನು. ಅವನು ತನ್ನ ಸ್ವಂತ ಅಭಿಪ್ರಾಯ ದೃಷ್ಟಿಕೋನಗಳನ್ನು ಘೋಷಣೆ ಮಾಡಬಾರದು. ಆದರೆ ದೇವರ ಯಜ್ಞದ ಕುರಿಮರಿಯನ್ನೇ ಘೋಷಣೆ ಮಾಡಬೇಕು. ಯೇಸುಕ್ರಿಸ್ತನು ನನಗೇನು ಮಾಡಿರುವನೆಂದು ಘೋಷಿಸುವ ಗೋಷ್ಠಿಗೆ ಸೇರಿದವನಾಗಿರುವುದು ಸುಲಭದ ಸಂಗತಿ, ದೈವಿಕ ಸ್ವಸ್ಥ ಪಡಿಸುವಿಕೆಗೆ ಶ್ರದ್ಧೆಯಿಂದಿರುವುದು ಸುಲಭ ಸಂಗತಿ, ಅಥವಾ ವಿಶಿಷ್ಟ ರೀತಿಯ ಶುದ್ಧೀಕರಣಕ್ಕೆ ಇಲ್ಲವೇ ಪರಿಶುದ್ಧಾತ್ಮನ ದೀಕ್ಷಾಸ್ನಾನಕ್ಕೆ ನಿಷ್ಠೆಯುಳ್ಳವನಾಗಿರುವುದು ಸುಲಭ ಸಂಗತಿ. 'ಯೇಸುಕ್ರಿಸ್ತನು ನನಗೇನು ಮಾಡಿದ್ದಾನೆಂಬುವುದನ್ನು ನಾನು ಬೋಧಿಸದಿದ್ದರೆ ನನ್ನ ಗತಿಯೇನು ?' ಎಂದು ಭಕ್ತನಾದ ಪೌಲನು ಹೇಳಲಿಲ್ಲ. ಆದರೆ ''ಸುವಾರ್ತೆಯನ್ನು ಸಾರದಿದ್ದರೆ ನನ್ನ ಗತಿಯೇನು ?'' ಎಂದು ಹೇಳಿದನು. ''ಯಜ್ಞಕ್ಕೆ ದೇವರು ನೇಮಿಸಿದ ಕುರಿ, ಲೋಕದ ಪಾಪವನ್ನು ನಿವಾರಣೆ ಮಾಡುವನು'' ಇದು ಸುಲಭದ ಸಂಗತಿಯೋ ? ಆದರೆ ಇದೇ ಸುವಾರ್ತೆ.

# ಪ್ರಭುವಿನ ಆದೇಶಗಳ ತಿಳುವಳಿಕೆ

**'' ಆದುದರಿಂದ ಬೆಳೆಯ ಯಜಮಾನನನ್ನು - ನಿನ್ನ ಬೆಳೆಗೆ ಕೆಲಸದವರನ್ನು ಕಳುಹಿಸಬೇಕೆಂದು ಬೇಡಿಕೊಳ್ಳಿರಿ'' - (ಮತ್ತಾಯ 9:38)**

ಕಳುಹಿಸಲ್ಪಟ್ಟವನ ಸಮಸ್ಯೆಗಳನ್ನು ಪರಿಹರಿಸುವ ಸಾಧನವು ದೇವರ ಕೈಯಲ್ಲಿದೆ. ಪ್ರಾರ್ಥನೆಯೇ ಸಾಧನ, ದೇವರಿಗಾಗಿ ಕೆಲಸ ಮಾಡುವುದು ಅಲ್ಲ, ಕೆಲಸವೆನ್ನುವ ಪದವು ಈ ದಿನ ಮಾನಗಳಲ್ಲಿ ಜನರು ಅರ್ಥೈಸಿಕೊಂಡಂತೆ ಇಲ್ಲ , ಯಾಕೆಂದರೆ ಈ ಕಾಲದ ಕೆಲಸವೆನ್ನುವ ಪದವು, ದೇವರ ಮೇಲಿನ ಏಕಾಗ್ರತೆಯನ್ನು ತಪ್ಪಿಸುವಂಥಾ ಅರ್ಥವನ್ನು ಕೊಡುತ್ತಿದೆ. ಕಳುಹಿಸಲ್ಪಟ್ಟವನ ಸಮಸ್ಯೆಗಳಿಗೆ ಲೌಕಿಕ ಜ್ಞಾನವು ಪರಿಹಾರವೊದಗಿಸಬಲ್ಲ ಒಂದು ಸಾಧನವಲ್ಲ, ವೈದ್ಯಕೀಯವು ಸಾಧನವಲ್ಲ. ಸಂಸ್ಕೃತಿಯ ಅಥವಾ ವಿದ್ಯಾ ಸಾಧನವಾಗಲೀ, ಇಲ್ಲವೆ ಸುವಾರ್ತೀಕರಣವು ಸಹಾ ಅಂಥಾ ಸಾಧನವಾಗಿ ಇಲ್ಲವೇ ಇಲ್ಲ. ಪ್ರಾರ್ಥನೆಯೇ ಅದರ ಸಾಧನ. ''ಆದುದರಿಂದ ಬೆಳೆಯ ಯಜಮಾನನನ್ನು ಬೇಡಿಕೊಳ್ಳಿರಿ.'' ಸ್ವಾಭಾವಿಕ ದೃಷ್ಟಿಯಲ್ಲಿ ಪ್ರಾರ್ಥನೆಯು ಕಾರ್ಯೋಪ ಯೋಗಿಯಲ್ಲ, ಅದೊಂದು ಅಸಂಬದ್ಧತೆ; ಸಾಮಾನ್ಯವಾದ ವ್ಯವಹಾರಿಕ ದೃಷ್ಟಿಯಲ್ಲಿ ಪ್ರಾರ್ಥನೆಯು ಮೂರ್ಖತನದ್ದೆಂದು ನಾವು ಮನಗಾಣುತ್ತೇವೆ.

ಯೇಸುಕ್ರಿಸ್ತನ ನೋಟದಲ್ಲಿ ತುಂಬಿಕೊಂಡಿರುವುದು, ಇಡೀ ಲೋಕವೇ ಹೊರತು ಪ್ರತ್ಯೇಕ ವಾಗಿ ಒಂದೊಂದು ರಾಷ್ಟ್ರವಾಗಿ ಅಲ್ಲ. ಯೇಸುಕ್ರಿಸ್ತನೊಬ್ಬನಿಗೆ ಮಾತ್ರ ಮನ್ನಣೆ ಕೊಟ್ಟು ಇನ್ನುಳಿದ ಯಾವ ವ್ಯಕ್ತಿಗೂ ಮಾನ್ಯತೆ ನೀಡದೆ ಪ್ರಾರ್ಥಿಸುವವರು ನಮ್ಮಲ್ಲೆಷ್ಟು ಜನರಿರುವರು? ದಾರುಣ ವ್ಯಥೆಯೂ ಮತ್ತು ಪಾಪಾಪರಾದ ನಿರ್ಣಯವೂ ಉತ್ಪಾದಿಸಿದ ಬೆಳೆಯ ಒಡೆತನವನ್ನು ಯೇಸು ಕ್ರಿಸ್ತನು ಹೊಂದಿದ್ದಾನೆ ಮತ್ತು ಇದನ್ನು ಸುಗ್ಗಿ ಮಾಡಲು ಬೆಳೆಯೊಳಗೆ ಕೂಲಿಯಾಳುಗಳನ್ನು ನುಗ್ಗಿಸಬೇಕೆಂದು ನಾವು ದೇವರನ್ನು ಪ್ರಾರ್ಥಿಸಬೇಕು. ಮಾಗಿದ ಬೆಳೆಯಂತಿರುವ ಜನರು ನಮ್ಮ ಸುತ್ತ ಮುತ್ತಲು ಇರುವಾಗ, ನಾವಾದರೋ ದೇವರ ಕೆಲಸವೆನ್ನಿಸಿಕೊಳ್ಳುವ ಬೇರೆ ಯಾವುದೋ ಒಂದರಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದೇವೆ ಮತ್ತು ಆ ಜನರಲ್ಲಿ ಒಬ್ಬರನ್ನೂ ನಾವು ಸುಗ್ಗಿ ಮಾಡುವುದಿಲ್ಲ. ದೇವರು ನಮಗೆ ದಯಪಾಲಿಸಿದ ಸಮಯವನ್ನು ದೇವರ ಸೇವೆಯೆಂದೆನ್ನುತ್ತಾ, ಮಿತಿ ಮೀರಿ ಶಕ್ತಿ ಹರಣವಾಗುವ ಬೇರೆ ಕಾರ್ಯಗಳಲ್ಲಿ ತೊಡಗಿಸಿ ವ್ಯರ್ಥ ಮಾಡುತ್ತಿದ್ದೇವೆ. ಇಂಥಾ ಒಂದು ಸಮಸ್ಯೆಯು ನಿನ್ನ ತಂದೆಯ ಜೀವಿತದಲ್ಲಿ ಇಲ್ಲವೇ ನಿನ್ನ ಸಹೋದರನ ಜೀವಿತದಲ್ಲಿ ಉಂಟಾಗಿರು ವುದೆಂದು ಭಾವಿಸೋಣ, ಆಗ ಯೇಸುಕ್ರಿಸ್ತನಿಗಾಗಿ ಸುಗ್ಗೀ ಮಾಡುವ ಆಳಿನಂತೆ ನೀನು ಅಲ್ಲಿರು ವಿಯೋ? ಅಥವಾ ''ಓಹೋ, ಅದಕ್ಕಿಂತಲೂ ಮುಖ್ಯವಾದ ಕೆಲಸವನ್ನು ನಾನು ಮಾಡಬೇಕಾಗಿದೆ!'' ಎನ್ನುವಿಯೋ? ಕ್ರೈಸ್ತನಾದವನಿಗೆ ಮಾಡಲು ಬೇರ್ಯಾವ ವಿಶೇಷ ಕೆಲಸಗಳಿಲ್ಲ; ಕ್ರೈಸ್ತನಾದವನು ಯೇಸುಕ್ರಿಸ್ತನವನಾಗಿರುವುದಕ್ಕಾಗಿಯೇ ಕರೆಯಲ್ಪಟಿರುತ್ತಾನೆ, ಅವನು ತನ್ನ ಯಜಮಾನ ನಿಗಿಂತಲೂ ಹೆಚ್ಚಿನವನಲ್ಲ, ಅವನು ತಾನೇನು ಮಾಡಬಯಸುತ್ತೇನೆಂಬುದನ್ನು ಯೇಸುಕ್ರಿಸ್ತನಿಗೆ ಆದೇಶಪೂರ್ವಕ ವಾಗಿ ಹೇಳುವಂತಿಲ್ಲ. ವಿಶೇಷ ಕಾರ್ಯವನ್ನು ಮಾಡಲು ನಮ್ಮ ಪ್ರಭುವು ನಮ್ಮನ್ನು ಕರೆಯುವುದಿಲ್ಲ; ಆತನು ನಮ್ಮನ್ನು ತನ್ನ ಬಳಿಗೆ ಬನ್ನಿರೆಂದು ಕರೆಯುತ್ತಾನೆ. ''ಆದುದರಿಂದ ಬೆಳೆಯ ಯಜಮಾನನಿಗೆ ಬೇಡಿಕೊಳ್ಳಿರಿ'', ಆಗಲಾತನು ನಿಮ್ಮ ಎಲ್ಲಾ ಸಂದರ್ಭಗಳನ್ನು ತಾನೇ ನಿರ್ವಹಿಸಿ, ನಿಮ್ಮನ್ನು ಅವುಗಳೊಳಗಿಂದ ಹೊರದೊಬ್ಬಿ ಸುಗ್ಗಿ ಮಾಡಲು ನಿಮ್ಮನ್ನು ಕಳುಹಿಸಿಕೊಡುತ್ತಾನೆ.

# ಮಹತ್ತಾದ ಕಾರ್ಯಗಳ ತಿಳುವಳಿಕೆ

**''ಅವುಗಳಿಗಿಂತ ಮಹತ್ತಾದ ಕ್ರಿಯೆಗಳನ್ನು ನಡಿಸುವನು ಯಾಕೆಂದರೆ ನಾನು ತಂದೆಯ ಬಳಿಗೆ ಹೋಗುತ್ತೇನೆ'' - (ಯೋಹಾನ 14:12)**

ಮಹತ್ತಾದ ಕೆಲಸಗಳನ್ನು ಮಾಡುವುದಕ್ಕಾಗಿ ಪ್ರಾರ್ಥನೆಯು ನಮ್ಮನ್ನು ಸಮರ್ಥರನ್ನಾಗಿ ಮಾಡುವುದಿಲ್ಲ. ಪ್ರಾರ್ಥನೆಯು ಸ್ವತಃ ಮಹತ್ತಾದ ಕೆಲಸವೇ ಆಗಿದೆ. ದೇವರ ಕಾರ್ಯಗಳನ್ನು ಮಾಡುವಂತೆ ನಮ್ಮನ್ನು ಸಿದ್ಧಪಡಿಸಲು ನಮ್ಮಲ್ಲಿರುವ ಉನ್ನತಶಕ್ತಿಗಳನ್ನು ನಮ್ಮ ಸಾಮಾನ್ಯ ಜ್ಞಾನದಾನುಸಾರ ಪ್ರದರ್ಶಿಸುವುದೇ ಪ್ರಾರ್ಥನೆಯೆಂದು ನಾವು ತಿಳಿಯುತ್ತೇವೆ. ಯೇಸುಕ್ರಿಸ್ತನ ಬೋಧನೆಯು ತಿಳಿಸುವಂತೆ ಪ್ರಾರ್ಥನೆಯು ದೇವರ ಶಕ್ತಿಯಿಂದ ಪಾಪವಿಮೋಚನೆ ಎಂಬ ಅದ್ಭುತವನ್ನು ನನ್ನೊಳಗೆ ಸಾಧಿಸುತ್ತದೆ ಮತ್ತು ಬೇರೆಯವರಲ್ಲಿಯೂ ಪಾಪವಿಮೋಚನೆಯ ಅದ್ಭುತವನ್ನುಂಟು ಮಾಡುತ್ತದೆ. ಪ್ರಾರ್ಥನೆಯಿಂದ ಮಾತ್ರವೇ ಇಂಥಾ ಫಲವು ಸದಾಕಾಲ ದೃಢವಾಗಿರುತ್ತದೆ. ಆದರೆ ನೆನಪಿರಲಿ - ಈ ಪ್ರಾರ್ಥನೆಯು ಪಾಪವಿಮೋಚನೆಯಲ್ಲಡಗಿರುವ ಯೇಸುಕ್ರಿಸ್ತನ ವೇದನೆಗಳ ಮೇಲೆ ಆಧಾರಗೊಂಡಿರುತ್ತದೆ - ನನ್ನ ವೈಯಕ್ತಿಕ ವೇದನೆಗಳ ಮೇಲೆ ಎಂದಿಗೂ ಅಲ್ಲ. ಚಿಕ್ಕ ಮಗುವು ಮಾತ್ರ ತನ್ನ ಪ್ರಾರ್ಥನೆ ಗಳಿಗೆ ಉತ್ತರವನ್ನು ಪಡೆಯುತ್ತದೆ; ಜ್ಞಾನಿಯು ತನ್ನ ಜ್ಞಾನದ ಆಧಾರದ ಮೇಲೆ ಉತ್ತರವನ್ನು ಪಡೆಯುವುದಿಲ್ಲ. (ಮತ್ತಾ 11:25)

ಪ್ರಾರ್ಥನೆ ಅದೊಂದು ಹೋರಾಟ; ನೀನು ಎಲ್ಲಿರುವಿಯೋ, ಅದು ಮುಖ್ಯವಲ್ಲ. ದೇವರು ನಮ್ಮ ಸನ್ನಿವೇಶಗಳನ್ನು ಹೇಗಾದರೂ ನಿರ್ವಹಿಸಲಿ, ಅಲ್ಲಿಯೂ ಪ್ರಾರ್ಥಿಸುವುದೇ ನಮ್ಮ ಕೆಲಸ, ಆದರೆ ''ನಾನಿರುವ ಸ್ಥಳದಲ್ಲಿ ನಾನು ಯಾವುದಕ್ಕೂ ಉಪಯುಕ್ತನಲ್ಲ'' ಎನ್ನುವ ಯೋಚನೆಗೆ ಆಸ್ಪದ ವನ್ನೆಂದೂ ಕೊಡಬಾರದು; ಯಾಕೆಂದರೆ ನೀನು ಇರದಿದ್ದ ಸ್ಥಳಗಳಲ್ಲಿ ನಿನ್ನನಿರಿಸಿದರೆ ಅಲ್ಲಿಯೂ ನಿಶ್ಚಯ ವಾಗಿ ನೀನು ಉಪಯುಕ್ತನಲ್ಲವೇ ಅಲ್ಲ. ಯಾವುದೋ ಸ್ಥಳಕ್ಕೆ, ಎಂಥದೋ ಸಂದರ್ಭದೊಳಗೆ ದೇವರು ನಿನ್ನನ್ನು ಎತ್ತಿ ಬೀಸಾಡುವನೋ, ಅಲ್ಲಿಯೇ ಇದ್ದು ಪ್ರಾರ್ಥಿಸು, ಸದಾಕಾಲ ಭಾವಾವೇಶದಿಂದ ಪ್ರಾರ್ಥನೆ ಯನ್ನು ಉದ್ಗರಿಸು. ''ನೀವು ನನ್ನ ಹೆಸರಿನಲ್ಲಿ ಏನೇನು ಬೇಡಿಕೊಳ್ಳುವಿರೋ ಅದನ್ನು ನೆರವೇರಿಸುವೆನು'' (ಯೋಹಾನ 14:13) ಅನೇಕ ವೇಳೆ, ಪ್ರಾರ್ಥನೆಯು ನಮ್ಮನ್ನು ರೋಮಾಂಚನಗೊಳಿಸದ ಹೊರತು ನಾವು ಪ್ರಾರ್ಥನೆ ಮಾಡುವುದಿಲ್ಲ, ಆದರೆ ಅದು ಅತ್ಯಂತ ತೀವ್ರವಾದ ಅಧ್ಯಾತ್ಮಿಕ ಸ್ವಾರ್ಥತೆಯಾಗಿರುತ್ತದೆ. ಪ್ರತಿಯೊಂದು ವಿಷಯದಲ್ಲಿಯೂ ದೇವರ ನಿರ್ದೇಶನದಂತೆ ನಾವು ಪ್ರಯಾಸ ಪಡಬೇಕು, ಆಗಲಾತನು ''ಬೇಡಿಕೊಳ್ಳಿರಿ'' (ಪ್ರಾರ್ಥಿಸಿರಿ) ಎಂದು ಹೇಳುತ್ತಾನೆ. ಆದುದರಿಂದ ಬೆಳೆಯ ಯಜಮಾನನನ್ನು ನಿನ್ನ ಬೆಳೆಗೆ ಕೆಲಸದವರನ್ನು ಕಳುಹಿಸಬೇಕೆಂದು ಬೇಡಿಕೊಳ್ಳಿರಿ'' (ಮತ್ತಾಯ 9:38)

ಕೆಲಸದಾಳಿನ ಕೆಲಸದಲ್ಲೇನೂ ರೋಮಾಂಚನವಿರುವುದಿಲ್ಲ, ಆದರೆ ಆ ಕೆಲಸದವನೇ ಜ್ಞಾನಿಗಳ ಪರಿಕಲ್ಪನೆಗಳನ್ನು ನನಸಾಗಿ ಮಾಡುತ್ತಾನೆ, ಅಂತೆಯೇ ಕೆಲಸ ಮಾಡುವ ದೇವರ ಸೇವಕನೇ ತನ್ನ ಯಜಮಾನನಾದ ದೇವರ ಉದ್ದೇಶಗಳನ್ನು ನನಸಾಗುವಂತೆ ಮಾಡುತ್ತಾನೆ. ನೀನು ಪ್ರಾರ್ಥನೆಯ ಕಾರ್ಯದಲ್ಲಿ ತೊಡಗು, ಆಗ ಎಲ್ಲಾ ಕಾಲದಲ್ಲಿಯೂ ದೇವರ ದೃಷ್ಟಿಯಂತೆ ಫಲವು ಪ್ರಾಪ್ತಿಯಾಗುವುದು. ನಿನ್ನ ಕಣ್ಣುಗಳ ಮೇಲಿದ್ದ ಮುಸುಕು ತೆರೆಯಲ್ಪಟ್ಟು ನೀನು ಸುಗ್ಗಿ ಮಾಡಿದ ಫಲವಾಗಿರುವ ಆತ್ಮಗಳನ್ನು ನೀನು ನೋಡಿದಾಗ ಅದೆಂಥಾ ಮಹದಾಶ್ಚರ್ಯ! ಅದು ಹೇಗಾಯಿತೆಂದರೆ ನೀನು ಯೇಸು ಕ್ರಿಸ್ತನಿಂದ ನಿರ್ದೇಶನಗಳನ್ನು ಪಡೆದುಕೊಳ್ಳುವ ಹವ್ಯಾಸದಲ್ಲಿ ಇದ್ದುದರಿಂದಲೇ ಹೀಗಾಯಿತು.

# ಕಳುಹಿಸಲ್ಪಟ್ಟವನ ಮಿಷನರಿಯ ಶ್ರದ್ಧೆಯ ತಿಳುವಳಿಕೆ

**ಅವರು ''ಕ್ರಿಸ್ತನ ಹೆಸರನ್ನು ಪ್ರಸಿದ್ಧಿ ಪಡಿಸುವುದಕ್ಕೋಸ್ಕರ ಹೊರಟು ಹೋಗಿದ್ದಾರೆ''**
**- (3 ಯೋಹಾ 1:7)**

ಯೇಸುಕ್ರಿಸ್ತನ ಮೇಲೆ ನಮಗಿರುವ ಪ್ರೀತಿಯು ತನ್ನಷ್ಟಕ್ಕೆ ತಾನೇ ಹೇಗೆ ಅಭಿವ್ಯಕ್ತವಾಗ ಬೇಕೆಂಬುದನ್ನು ಆತನು ಹೇಳಿದ್ದಾನೆ. ''ನನ್ನ ಮೇಲೆ ಪ್ರೀತಿ ಇಟ್ಟಿದ್ದಿಯೋ ?'' ''ನನ್ನ ಕುರಿಗಳನ್ನು ಕಾಯಿ'' - ಇತರರಲ್ಲಿ ನನಗಿರುವ ಆಸಕ್ತಿಗಳೊಂದಿಗೆ ನಿನ್ನನ್ನು ಗುರುತಿಸಿ ಕೊಳ್ಳಬೇಕು, ಇತರರಲ್ಲಿ ನಿನಗಿರುವ ಆಸಕ್ತಿ ಗಳಲ್ಲಿ ನನ್ನನ್ನು ಗುರುತಿಸುವುದಲ್ಲ. ಪ್ರೀತಿಯ ಗುಣಲಕ್ಷಣಗಳನ್ನು 1 ಕೊರಿಂಥ 13:4-8ರಲ್ಲಿ ವಿವರಿಸ ಲಾಗಿದೆ. ಅಂಥಾ ಪ್ರೀತಿಯೇ ದೇವರ ಪ್ರೀತಿ, ಅದು ಸ್ವಪ್ರೇರಿತವಾದದ್ದು. ಯೇಸುಕ್ರಿಸ್ತನ ಮೇಲೆ ನನಗಿರುವ ಪ್ರೀತಿಯ ಒಂದು ಟೆಸ್ಟ್ - ಆ ಪ್ರೀತಿಯು ಯಾವಾಗಲೂ ಕ್ರಿಯಾಶೀಲವಾಗಿರುತ್ತದೆ. ಪ್ರೀತಿಯ ಉಳಿದ ರೀತಿಯ ವ್ಯಕ್ತನೆಗಳು ಕೇವಲ ಭಾವಪರವಶತೆಯ ಬಡಬಡಿಸುವಿಕೆಯಾಗಿರುತ್ತವೆ.

ಪವಿತ್ರಾತ್ಮನು ನನ್ನೊಳಗೆ ಮಾಡಿದ ಪಾಪವಿಮೋಚನೆಯೆಂಬ ಅಲೌಕಿಕ ಕಾರ್ಯವೇ ಯೇಸು ಕ್ರಿಸ್ತನಲ್ಲಿಡುವ ಸ್ವಾಮಿನಿಷ್ಠೆ. ''ಪವಿತ್ರಾತ್ಮನ ಮೂಲಕವಾಗಿ ದೇವರ ಪ್ರೀತಿರಸವು ನಮ್ಮ ಹೃದಯಗಳಲ್ಲಿ ಧಾರಾಳವಾಗಿ ಸುರಿದದೆಯಲ್ಲಾ'' (ರೋಮಾ 5:5) ಮತ್ತು ನಾನು ಯಾರ್ಯಾರನ್ನು ಸಂಧಿಸುವೆನೋ, ಅವರಲ್ಲಿ ನನ್ನ ಮೂಲಕ ಅದೇ ಪ್ರೀತಿಯು ಸಾರ್ಥಕವಾದ ಪರಿಣಾಮಕಾರಿಯಾಗಿ ಕಾರ್ಯ ಸಾಧಿಸುತ್ತದೆ. ಸಾಮಾನ್ಯ ಅನುಭವ ದೃಷ್ಟಿಯು, ಆತನ ಬಗ್ಗೆ ಆತನ ಸಾಮರ್ಥ್ಯವು ಕೇವಲ ಮುಂಜಾವಿನ ಮಂಜಿಗಿಂತಲೂ ಹೆಚ್ಚೇನು ಅಲ್ಲವೆಂಬ ಅಸತ್ಯವನ್ನು ಘೋಷಿಸಿದರೂ, ನಾನು ಮಾತ್ರ ಆತನ ಹೆಸರಿನಲ್ಲಿ ನಿಷ್ಠೆಯುಳ್ಳವ ನಾಗಿರುತ್ತೇನೆ.

ಯೇಸುಕ್ರಿಸ್ತನಿಗಲ್ಲದೆ ಬೇರೆ ಯಾವುದಕ್ಕೂ, ಬೇರೆ ಯಾರಿಗೂ, ಅಂಟಿಕೊಳ್ಳದೆ ಬಾಹ್ಯ ಜೀವನದ ಸಂಗತಿಗಳಿಗೆ ಆಸಕ್ತನಾಗದಿರುವುದೇ ಕಳುಹಿಸಲ್ಪಟ್ಟವನ ಶ್ರದ್ಧೆಯ ತಿರುಳು. ನಮ್ಮ ಸ್ವಾಮಿಯು ಆಶ್ಚರ್ಯಕರವಾದ ರೀತಿಯಲ್ಲಿ ತನ್ನ ಜೀವಿತದ ಲೌಕಿಕ ಸಂಗತಿಗಳ ಒಳಗೂ ಹೊರಗೂ ಒಂದೇ ಆಗಿದ್ದನು. ಬಾಹ್ಯ ಜೀವಿತದ ಸಾಮಾನ್ಯ ಸಂಗತಿಗಳ ವಿಷಯದಲ್ಲಿ ಅದ್ಭುತವಾದ ಅರಿವುಳ್ಳವ ನಾಗಿದ್ದನು. ಆದರೆ ಅಂತರಂಗದಲ್ಲಿ ದೇವರನ್ನು ಬಿಟ್ಟರೇ ಉಳಿದೆಲ್ಲವುಗಳ ವಿಷಯದಲ್ಲಿ ತುಂಬಾ ಅನಾಸಕ್ತನಾಗಿದ್ದನು. ಅನೇಕ ವೇಳೆ ಬಾಹ್ಯವಿರಕ್ತಿಯು ನಾವು ಬಾಹ್ಯ ಜೀವಿತದಲ್ಲಿ ಯಾವ್ಯಾವುಗಳನ್ನು ದೂರವಿರಿಸುತ್ತೇವೆಯೋ, ಅವುಗಳಿಗೆ ಅಂತರಂಗದಲ್ಲಿ ರಹಸ್ಯವಾಗಿ ಅಂಟಿಕೊಂಡಿರುವ ಸೂಚನೆ ಯಾಗಿದೆ.

ತನ್ನ ಆತ್ಮವನ್ನು, ನಮ್ಮ ಪ್ರಭುವಾದ ಯೇಸುಕ್ರಿಸ್ತನ ಸ್ವಭಾವದ ಮುಂದೆ ಸಂಪೂರ್ಣ ವಾಗಿಯೂ, ಸತತವಾಗಿಯೂ, ತೆರೆದಿಡುವುದರಲ್ಲಿ ಸದಾಗಮನವಿಡುವದೇ ಕಳುಹಿಸಲ್ಪಟ್ಟವನ ನಿಜ ವಾದ ನಿಷ್ಠೆಯಾಗಿದೆ. ನಮ್ಮ ಸ್ವಾಮಿಯ ಕಾರ್ಯ ಕಲಾಪಗಳಿಗೆ ಕಳುಹಿಸಿಕೊಡುವ ಸ್ತ್ರೀ, ಪುರುಷರು ಕೇವಲ ಸಾಮಾನ್ಯ ಜನರೇ ಆಗಿರುತ್ತಾರೆ. ಪವಿತ್ರಾತ್ಮನು ಅವರಲ್ಲಿ ಮಾಡಿದ ಕಾರ್ಯದ ಫಲವಾಗಿರುವ ಯೇಸು ಕ್ರಿಸ್ತನ ಪ್ರಭಾವ ಭರಿತ ಶ್ರದ್ಧೆಯೇ, ಇವರೆಲ್ಲರನ್ನು ನಿಯಂತ್ರಿಸಿ ಮುನ್ನಡೆಸುತ್ತದೆ.

# ಉಪೇಕ್ಷಿತ ರಹಸ್ಯ

## ''ನನ್ನ ರಾಜ್ಯವು ಈ ಲೋಕದ್ದಲ್ಲ'' - (ಯೋಹಾನ 18:36)

ಪ್ರಸ್ತುತ ದಿನಗಳಲ್ಲಿ ಯೇಸುಕ್ರಿಸ್ತನ ಮಹಾವೈರಿ ಯಾವುದೆಂದರೆ, ಹೊಸ ಒಡಂಬಡಿಕೆಗೆ ಸಂಬಂಧಪಡದ, ಕೂಡಲೇ ಮಾಡಿತೋರಿಸಬಲ್ಲಂಥ ಕಾರ್ಯದ ಪರಿಕಲ್ಪನೆ - ಆದರೆ, ಇದು ದೇವರೊಂದಿಗೆ ಆಪ್ತಜೀವಿತವಿರಲಾರದ, ತೀವ್ರ ಬಲಪ್ರದರ್ಶನ ಮತ್ತು ತೀವ್ರ ಚಟುವಟಿಕೆಗಳಿಗೆ ಮಾತ್ರ ಒತ್ತುಕೊಡುವ ಲೌಕಿಕ ಸಂಪ್ರದಾಯಗಳಿಂದ ಹುಟ್ಟಿರುತ್ತದೆ. ತಪ್ಪಾದ ಸಂಗತಿಗಳಿಗೆ ಹೆಚ್ಚು ಮಹತ್ವ ಕೊಡಲಾಗಿದೆ. ಯೇಸುಕ್ರಿಸ್ತನು ಹೇಳಿದ್ದು - ''ದೇವರ ರಾಜ್ಯವು ಪ್ರತ್ಯಕ್ಷವಾಗಿ ಬರುವಂಥದ್ದಲ್ಲ ... ದೇವರ ರಾಜ್ಯವು ನಿಮ್ಮಲ್ಲಿಯೇ ಅದೆ ಅಂತ ತಿಳಿದುಕೊಳ್ಳಿರಿ'' (ಲೂಕ 17:41) ಇದು ತಪ್ಪಾದ ವಿಷಯಗಳಿಗೆ ಒತ್ತು ಕೊಡುವ ವಿಷಯ. ಅನೇಕ ವೇಳೆ ಕ್ರಿಯಾಶೀಲ ಕ್ರೈಸ್ತ ಸೇವಕನು, ಜನರು ಗಮನಿಸಲಾಗುವಂತೆ ಮಳಿಗೆ ಯಲ್ಲಿರುವ ವಸ್ತು ಪ್ರದರ್ಶಕ ಕಿಂಡಿಯ ಜೀವಿತವನ್ನು ಜೀವಿಸುತ್ತಾನೆ, ಅವನು ಅಂತರಾಳದ ವೈಯಕ್ತಿಕ ವಲಯವು ಅವನ ಜೀವಿತದ ಸಾಮರ್ಥ್ಯವನ್ನು ಹೊರಗೆಡುಹುತ್ತದೆ.

ನಾವು ಜೀವಿಸುತ್ತಿರುವ ಈ ಕಾಲದ ಧರ್ಮಾಸಕ್ತಿಯ ಪಿಡುಗನ್ನು ನಾವು ತೊಡೆದು ಹಾಕಬೇಕು. ಈ ದಿನಗಳಲ್ಲಿ ನಾವು ಯಾವ ಚಟುವಟಿಕೆಗಳಿಗೆ ಮಾನ್ಯತೆ ನೀಡುತ್ತಿರುವೆವೋ ಅಂಥ ರಭಸದ ತೀವ್ರ ಚಟುವಟಿಕೆಗಳಾಗಲೀ, ಕಾರ್ಯದೊತ್ತಡವಾಗಲೀ ನಮ್ಮ ಪ್ರಭುವಾದ ಯೇಸುಕ್ರಿಸ್ತನಲ್ಲಿ ಇರಲಿಲ್ಲ, ಆದುದರಿಂದ ಶಿಷ್ಯನು ಸಹಾ ತನ್ನ ಗುರುವಿದ್ದಂತೆ ತಾನು ಇರಬೇಕು. ಯೇಸುಕ್ರಿಸ್ತನ ರಾಜ್ಯದ ವಿಷಯದಲ್ಲಿ ಪ್ರಾಮುಖ್ಯವಾದ ಸಂಗತಿಯೆಂದರೆ ಅದು ಆತನೊಂದಿಗೆ ನೀನು ಹೊಂದಿರುವ ಸಂಬಂಧವೇ ಹೊರತು ಸಾರ್ವಜನಿಕವಾಗಿ ನೀನೊಬ್ಬ ಉಪಯುಕ್ತನೆಂಬುದಕ್ಕಲ್ಲ.

ಈ ಸತ್ಯವೇದಾಧ್ಯಯನ ಕಾಲೇಜಿನ ಸಾಮರ್ಥ್ಯವು ಅದರ ಕ್ರಿಯಾಶೀಲ ಚಟುವಟಿಕೆಗಳು ಅಲ್ಲ, ದೇವರ ಮುಂದೆ, ಆತನ ದಿವ್ಯ ಸತ್ಯಾರ್ಥಗಳಲ್ಲಿ ನಿಮ್ಮನ್ನು ಮುಳುಗಿಸಿ ತೋಯಿಸುವುದರಲ್ಲಿ ಈ ಕಾಲೇಜಿನ ಸಾಮರ್ಥ್ಯವಡಗಿದೆ. ನಿಮ್ಮ ಸಮಯ ಸನ್ನಿವೇಶಗಳನ್ನು ದೇವರು ಹೇಗೆ ನಿರ್ವಹಿಸುವನು ಎನ್ನುವ ಯಾವ ಕಲ್ಪನೆಯೂ ನಿಮಗಿಲ್ಲ, ನಿಮ್ಮ ಸ್ವಂತ ದೇಶದಲ್ಲಿಯಾಗಲೀ ಅಥವಾ ಹೊರದೇಶದಲ್ಲಿಯಾಗಲೀ ದೇವರು ಯಾವ ರೀತಿಯ ಶ್ರಮ ಪ್ರಯಾಸಗಳನ್ನು ನಿಮ್ಮ ಮೇಲೆ ಹೊರಿಸುವನು ಎಂಬುದರ ಅರಿವೂ ನಿಮಗಿಲ್ಲ ಮತ್ತು ದೇವರು ಮಾಡಿದ ವಿಮೋಚನಾ ಕಾರ್ಯದ ಮೂಲ ಸತ್ಯಗಳನ್ನು ಅರಿತು ಅವುಗಳಲ್ಲಿ ಮುಳುಗಿ ಮಿಂದು ಹೋಗುವ ಬದಲು ಮಿತಿ ಮೀರಿ ತ್ರಾಣ ಸೆಳೆಯುವ ಚಟುವಟಿಕೆಗಳಲ್ಲಿ ನಿಮ್ಮ ಸಮಯವನ್ನು ವ್ಯರ್ಥ ಮಾಡಿದರೆ, ಮುಂದೆ ದೇವ ಸೇವೆಯಲ್ಲಿ ನಿಜವಾದ ಪ್ರಯಾಸವು ನಿಮ್ಮ ಮೇಲೆ ಬಂದಾಗ ಚಟ್ಟನೆ ಮುರಿದು ಬೀಳುವಿರಿ; ಸದ್ಯದಲ್ಲಿ ದೇವರ ಮುಂದೆ ಹೀಗೆ ಮುಳುಗಿ ಮಿಂದು ಹೋಗುವ ಸಮಯವು ಪ್ರಾಯೋಗಿಕವಲ್ಲವೆನಿಸಿದರೂ, ದೇವರಲ್ಲಿ ಭದ್ರವಾಗಿ ನೆಲೆಗೊಂಡು ಬೇರೂರುವುದಕ್ಕಾಗಿ ಈ ಸಮಯ ವನ್ನು ವ್ಯಯ ಮಾಡಿದರೆ, ಮುಂದೆ ನಿಮಗೇನು ಸಂಭವಿಸಿದರೂ ನೀವು ಮಾತ್ರ ದೇವರಿಗೆ ನಿಷ್ಠೆಯುಳ್ಳವರಾಗಿ ಇರುವಿರಿ.

# ದೇವರ ಚಿತ್ತವೇ ನನ್ನ ಚಿತ್ತವಾಗಿದೆಯೋ ?

**''ದೇವರ ಚಿತ್ತವೇನಂದರೆ - ನೀವು ಶುದ್ಧರಾಗಿರಬೇಕೆಂಬುದೇ'' - (1 ಥೆಸ 4:3)**

ನನ್ನನ್ನು ಪವಿತ್ರನನ್ನಾಗಿ ಮಾಡಲು ದೇವರು ಇಚ್ಛಿಸುತ್ತಿರುವನೋ ಎಂಬುವುದು ಪ್ರಶ್ನೆಯಲ್ಲ ; ಅದು ನನ್ನ ಇಚ್ಛೆಯೂ ಆಗಿದೆಯೋ ? ಯೇಸುಕ್ರಿಸ್ತನು ಮಾಡಿದ ಪ್ರಾಯಶ್ಚಿತ್ತ ಯಜ್ಞವು ಸಾಧ್ಯಗೊಳಿಸಿರು ವುದನ್ನು ನನ್ನ ಜೀವಿತದಲ್ಲಿಯೂ ನೆರವೇರಿಸಲು ದೇವರಿಗೆ ಆಸ್ಪದ ಕೊಡಲು ನಾನು ಸಿದ್ದನಿರುವೆನೋ? ಕ್ರಿಸ್ತಯೇಸುವೇ ನನ್ನ ಶುದ್ಧೀಕರಣವೆಂದೂ ಮತ್ತು ನನ್ನ ನರಭಾವದಲ್ಲಿಯೇ ಯೇಸುಕ್ರಿಸ್ತನ ಜೀವಿತವು ಅಭಿವ್ಯಕ್ತವಾಗಬೇಕೆಂದು ನಾನು ಇಚ್ಛಿಸುತ್ತಿರುವೆನೋ ? (1 ಕೊರಿ 1:30 ನೋಡಿರಿ). ''ಓಹ್, ನಾನು ಪವಿತ್ರನಾಗಬೇಕೆಂದು ಹಂಬಲಿಸುತ್ತಿರುವೆನು''- ಎಂದು ಹೇಳುವ ಬಗ್ಗೆ ಎಚ್ಚರವಿರಲಿ. ನಿನಗೆ ಅಂಥಾ ಕಾತುರತೆ ಇಲ್ಲ, ಈ ರೀತಿ ಹಂಬಲಿಸುವುದನ್ನು ತ್ಯಜಿಸಿ, ನಿನಗಿರುವ ಅಗತ್ಯತೆಯನ್ನು ಗ್ರಹಿಸಿ, ಅದನ್ನು ಕಾರ್ಯಶೀಲ ವಿಷಯವಾಗಿರಿಸಬೇಕು. ''ಕೈಯಲ್ಲಿ ಒಂದೂ ಇಲ್ಲದೆ ನಿನ್ನತ್ರ ಬಂದೆ ಯೇಸುವೇ'' - ಯೇಸುಕ್ರಿಸ್ತನೇ, ನನ್ನ ಶುದ್ಧೀಕರಣದ ಕಾರಣಕರ್ತನೆಂಬ ದೃಢವಾದ ನಂಬಿಕೆಯಿಂದ ಆತನನ್ನು ಅಂಗೀಕರಿಸಬೇಕು, ಆಗ ಶಿಲುಬೆಯ ಮೇಲೆ ನಡೆದ ಪ್ರಾಯಶ್ಚಿತ್ತ ಯಜ್ಞದ ಅದ್ಭುತ ಫಲಗಳು ನಿನ್ನ ಜೀವಿತದಲ್ಲಿ ನಿಜವಾಗುತ್ತವೆ. ದೇವರ ಉಚಿತಾರ್ಥವಾದ ಪ್ರೀತಿಯ ವರದಿಂದ ಯೇಸುಕ್ರಿಸ್ತನು ಶಿಲುಬೆಯ ಮೇಲೆ ಮಾಡಿದ ಮಹಾಯಜ್ಞದ ನೆಲೆಯಲ್ಲಿ ಆತನು ಸಾಧಿಸಿರುವುದೆಲ್ಲಾ ನನ್ನಲ್ಲಿ ಸಫಲವಾಗುತ್ತದೆ. ರಕ್ಷಣೆ ಹೊಂದಿರುವ, ಪವಿತ್ರೀಕರಣ ಗೊಂಡಿರುವ, ನನ್ನ ಆತ್ಮದ ದೋರಣೆಯು ಕೇವಲ ದೀನಭಾವದ ಪರಿಶುದ್ಧತೆಯಾಗಿರುತ್ತದೆ. (ದುರಾಭಿಮಾನದ ಪರಿಶುದ್ಧತೆ ಯೆಂಬದು ಇಲ್ಲವೇ ಇಲ್ಲ ) ಆ ಪರಿಶುದ್ಧತೆಯು, ಬಹು ವ್ಯಥೆಯುಳ್ಳ ಪಶ್ಚಾತ್ತಾಪದ ಮೇಲೆ, ಹೇಳಲ ಸಾಧ್ಯವಾದ ಲಜ್ಜಾಭಾವನೆಯ ಮೇಲೆ ಮತ್ತು ನನ್ನ ಅವನತಿಯ ಮೇಲೆ ಆಧಾರಗೊಂಡಿರುತ್ತದೆ; ದೇವರನ್ನು ನಾನು ಅಲ್ಪದಷ್ಟಾದರೂ ಗಣನೆಗೆ ತಾರದೆ ಇದ್ದ ಸಮಯದಲ್ಲಿಯೇ ಆತನು ನನ್ನ ಮೇಲೆ ತನಗಿರುವ ಪ್ರೀತಿಯನ್ನು ಸಿದ್ದಾಂತ ಪಡಿಸಿದ ಅಚ್ಚರಿಯ ಅರಿವಿನ ಮೇಲೆ ಅದು ಆಧಾರಗೊಂಡಿದೆ. ನನ್ನ ರಕ್ಷಣೆಗೂ ಶುದ್ಧೀಕರಣಕ್ಕೂ ಅಗತ್ಯವಿದ್ದದ್ದನ್ನೆಲ್ಲಾ ಆತನು ಮಾಡಿ ಮುಗಿಸಿದ್ದಾನೆ. (ರೋಮಾ 5:8 ನೋಡಿರಿ) ''ಯಾವುದೂ ನಮ್ಮನ್ನು ನಮ್ಮ ಕರ್ತನಾದ ಯೇಸುಕ್ರಿಸ್ತನಲ್ಲಿ ತೋರಿಬಂದ ದೇವರ ಪ್ರೀತಿಯಿಂದ ಅಗಲಿಸಲಾರವೆಂದು ನನಗೆ ನಿಶ್ಚಯವುಂಟು'' (ರೋಮಾ 8:39) ಎಂದು ಪೌಲನು ಹೇಳಿರುವುದರಲ್ಲಿ ಆಶ್ಚರ್ಯವೇನೂ ಇಲ್ಲ.

ಪವಿತ್ರೀಕರಣವು ಯೇಸುಕ್ರಿಸ್ತನಲ್ಲಿ ನನ್ನನ್ನು ಏಕಗೊಳಿಸುತ್ತದೆ. ಆತನಲ್ಲಿದ್ದು ತಂದೆಯಾದ ದೇವರಲ್ಲಿ ಒಂದಾಗುವೆನು ಮತ್ತು ಇದೆಲ್ಲವೂ ಯೇಸುಕ್ರಿಸ್ತನು ಶಿಲುಬೆಯ ಮೇಲೆ ಮಾಡಿದ ಶ್ರೇಷ್ಠವಾದ ಪಾಪಪರಿಹಾರ ಯಜ್ಞದಿಂದಲೇ ನೆರವೇರುವುದು. ಪರಿಣಾಮವನ್ನು ಕಾರಣವೆಂದು ತಿಳಿಯಬೇಡ. ವಿಧೇಯತೆ, ಆತನ ಸೇವೆ ಹಾಗೂ ಪ್ರಾರ್ಥನೆಗಳೇ ಅದರ ಫಲ ಹಾಗೂ ಯೇಸುಕ್ರಿಸ್ತನ ಶಿಲುಬೆಯ ಪ್ರಾಯಶ್ಚಿತ್ತ ಯಜ್ಞದ ಮೂಲಕ ನನ್ನೊಳಗೆ ನಡೆದ ಅದ್ಭುತ ಶುದ್ಧೀಕರಣಕ್ಕಾಗಿ ನಾನು ತೋರಿಸುವ ಮೂಕ ಕೃತಜ್ಞತೆ ಮತ್ತು ಆರಾಧನೆಗಳೇ ಆ ಪರಿಣಾಮದ ಫಲ.

# ಹಠಾತ್ ಪ್ರಚೋದನೆಯ ಮಾರ್ಗ

## ''ನಿಮಗಿರುವ ಅತಿ ಪರಿಶುದ್ಧವಾದ ಕ್ರಿಸ್ತನ ನಂಬಿಕೆಯನ್ನು ಆಧಾರ ಮಾಡಿಕೊಂಡು ಭಕ್ತಿಯಲ್ಲಿ ಅಭಿವೃದ್ಧಿಯನ್ನು ಹೊಂದುತ್ತಾ'' - (ಯೂದ 1:20)

ಹಠಾತ್ ಪ್ರಚೋದನೆಗೊಳ್ಳುವ ಸ್ವಭಾವ ಮತ್ತು ನಿಷ್ಕಾರುಣ್ಯ ಸ್ವಭಾವ - ಇವೆರಡರಲ್ಲಿ ಒಂದಾದರೂ ನಮ್ಮ ಪ್ರಭುವಾದ ಯೇಸುಕ್ರಿಸ್ತನಲ್ಲಿ ಇರಲಿಲ್ಲ, ಎಂಥಾ ಪರಿಸ್ಥಿತಿಗಳಲ್ಲಿಯೂ ದಿಗಿಲು ಬೀಳದೆ ಶಾಂತಿಯಿಂದಿರುವ ಸಾಮರ್ಥ್ಯವು ಆತನಲ್ಲಿತ್ತು. ನಮ್ಮಲ್ಲಿ ಅನೇಕರು, ನಮ್ಮ ಹುಟ್ಟು ಸ್ವಭಾವದ ಹಾದಿಯಲ್ಲಿ ಕ್ರೈಸ್ತತ್ವವನ್ನು ಬೆಳೆಸುತ್ತೇವಲ್ಲದೆ, ದೇವರ ಸ್ವಭಾವಕ್ಕನುಗುಣವಾಗಿಯಲ್ಲ, ನಮ್ಮ ಸ್ವಾಭಾವಿಕ ಜೀವಿತದಲ್ಲಿ ಹಠಾತ್ ಪ್ರವೃತ್ತಿಯು ಒಂದು ವಿಶಿಷ್ಠಗುಣವಾಗಿದೆ, ಆದರೆ ಯೇಸುಕ್ರಿಸ್ತನು ಯಾವಾಗಲೂ ಅದನ್ನು ಉಪೇಕ್ಷಿಸುತ್ತಾನೆ, ಯಾಕೆಂದರೆ ಅದು ತನ್ನ ಶಿಷ್ಯನ ಬೆಳವಣಿಗೆಯನ್ನು ಅಡ್ಡಿ ಪಡಿಸುತ್ತದೆ. ದೇವರ ಆತ್ಮನು ಹಠಾತ್ ಪ್ರವೃತ್ತಿಯನ್ನು ಹೇಗೆ ನಿಯಂತ್ರಿಸುವನೆಂಬದನ್ನು ಎಚ್ಚರದಿಂದ ಗಮನಿಸು, ದಿಢೀರನೇ ಈ ಪ್ರವೃತ್ತಿಯನ್ನು ಆತನು ನಮ್ಮಲ್ಲಿ ಎದುರಿಸಿದಾಗ, ಹಠಾತ್ ಪ್ರವೃತ್ತಿಯ ಮೂರ್ಖತನದ ಭಾವನೆಗಳನ್ನು ನಮ್ಮ ಸ್ವಪ್ರಜ್ಞೆಯ ಮೂಲಕ ಸಮರ್ಥಿಸಿಕೊಳ್ಳಬೇಕೆಂಬ ಒಲವನ್ನು ನಾವು ತೋರಿಸುತ್ತೇವೆ. ಚಿಕ್ಕ ಮಕ್ಕಳಲ್ಲಿ ಹಠಾತ್ ಪ್ರಚೋದನೆಯನ್ನು ನಾವು ಸಹಿಸಬಹುದು, ಆದರೆ ಪ್ರಬುದ್ಧ ಪುರುಷ ಅಥವಾ ಸ್ತ್ರೀಯಲ್ಲಿ ಅದು ವಿನಾಶಕಾರಕ; ಹಠಾತ್ ಪ್ರಚೋದನಾ ಪ್ರವೃತ್ತಿಯ ವ್ಯಕ್ತಿಯು ಅತಿಯಾಗಿ ಪ್ರೀತಿಸಲ್ಪಟ್ಟವನೂ ಸದಾಕಾಲಕ್ಕೂ ಹಾಳಾಗಿರುವ ವ್ಯಕ್ತಿಯಾಗಿದ್ದಾನೆ. ಶಿಸ್ತು ಶಿಕ್ಷಣಗಳ ಮೂಲಕ ಅಂತಃ ಪ್ರಚೋದನೆಯನ್ನು ಅಂತಃ ಪ್ರಜ್ಞೆಯನ್ನಾಗಿ ಮಾರ್ಪಡಿಸಬೇಕು.

ಶಿಷ್ಯತ್ವವು ಸಂಪೂರ್ಣವಾಗಿ, ದೇವರ ಅಲೌಕಿಕವಾದ ಕೃಪೆಯಲ್ಲಿ ರಚಿಸಲ್ಪಟ್ಟಿದೆ. ಹಠಾತ್ ಪ್ರವೃತ್ತಿಯ ಎದೆಗಾರಿಕೆಗೆ, ನೀರಿನ ಮೇಲೆ ನಡೆಯುವುದು ಸುಲಭ; ಆದರೆ ಯೇಸುಕ್ರಿಸ್ತನ ಶಿಷ್ಯನಾಗಿ ಒಣಭೂಮಿಯ ಮೇಲೆ ನಡೆಯುವುದು ಬೇರೆ ವಿಷಯ. ಯೇಸುಕ್ರಿಸ್ತನ ಬಳಿ ಸಾಗಲು ಪೇತ್ರನು ನೀರಿನ ಮೇಲೆ ನಡೆದನು, ಆದರೆ ಭೂಮಿಯ ಮೇಲೆ ಆತನು ಯೇಸುವನ್ನು ದೂರದಿಂದ ಹಿಂಬಾಲಿಸಿದನು. (ಮಾರ್ಕ 14:54 ನೋಡಿರಿ) ಪರಿಸ್ಥಿತಿಗಳನ್ನು ಎದುರಿಸಲು ದೇವರ ದಯೆ ನಮಗೆ ಅಗತ್ಯವಿಲ್ಲ. ಮಾನವ ಸ್ವಭಾವ ಮತ್ತು ಅವನ ಅಹಂಗಳೇ ಅದನ್ನು ನಿಭಾಯಿಸುತ್ತವೆ ಮತ್ತು ಶ್ರಮೆಯನ್ನು ನಾವು ಸೊಗಸಾಗಿ ಎದುರಿಸುತ್ತೇವೆ. ಆದರೆ ದಿನಂಪ್ರತಿ ಇಪ್ಪತ್ನಾಲ್ಕು ಗಂಟೆ ದೇವಭಕ್ತನಾಗಿರುತ್ತಾ, ಯೇಸುಕ್ರಿಸ್ತನ ಶಿಷ್ಯನಾಗಿ ಶ್ರಮಾಭರಿತ ದಾಸತ್ವದಲ್ಲಿ ಸಾಮಾನ್ಯ ಜೀವನವನ್ನು ಸಾಗಿಸುತ್ತಾ, ದೇವರ ಶಿಷ್ಯನೆಂಬ ಅರಿವೂಇರದ ತಾತ್ಸಾರಕ್ಕೊಳಗಾಗಿ, ಯಾರ ಗಮನಕ್ಕೂ ಬಾರದ ಜೀವಿತವನ್ನು ಸಾಗಿಸಬೇಕಾದರೆ, ಅದಕ್ಕೆ ದೇವರ ಅಲೌಕಿಕವಾದ ಕೃಪೆಯೇಬೇಕು; ಆದರೆ ನಾವು ಅಂಥಾ ಜೀವಿತವನ್ನು ಜೀವಿಸುವುದಿಲ್ಲ, ಬಹು ಸಾಧಾರಣ ವಿಷಯಗಳಲ್ಲಿಯೂ ನಾವು ಅಸಾಧಾರಣವಾಗಿರಬೇಕು, ಅತ್ಯಂತ ಕೊಳಕಾದ ರಸ್ತೆಗಳಲ್ಲಿ, ನೀಚ ಜನರ ಮಧ್ಯದಲ್ಲಿ ನಾವು ಪರಿಶುದ್ಧರಾಗಿರಬೇಕು, ಆದರೆ ಇದನ್ನು ಐದು ನಿಮಿಷಗಳಲ್ಲಿ ಕಲಿತುಕೊಳ್ಳಲಾಗದು.

# ಪವಿತ್ರಾತ್ಮನ ಸಾಕ್ಷಿ

**''ಪವಿತ್ರಾತ್ಮನೇ ನಮ್ಮ ಆತ್ಮದೊಂದಿಗೆ ಸಾಕ್ಷಿ ಹೇಳುತ್ತಾನೆ'' - (ರೋಮಾ 8:16)**

ದೇವರ ಬಳಿಗೆ ನಾವು ಬಂದಾಗ, ಆತನೊಂದಿಗೆ ಚೌಕಾಸಿ ಮಾಡುವ ಮನೋಭಾವದ ಅಪಾಯದಲ್ಲಿರುತ್ತೇವೆ. ದೇವರು ನಮಗೆ ಹೇಳಿದ್ದನ್ನು ಮಾಡುವ ಮೊದಲೇ ಅದರ ಸಾಕ್ಷಿಯನ್ನು ಬಯಸುತ್ತೇವೆ. ''ದೇವರು ಯಾಕೆ ನನಗೆ ಪ್ರಕಟ ಮಾಡಿಕೊಳ್ಳುವುದಿಲ್ಲ'' - ಆತನು ಅದನ್ನು ಮಾಡುವುದಿಲ್ಲ, ಅದನ್ನು ಆತನು ಮಾಡಲಾರನೆಂದಲ್ಲ. ಆದರೆ ಅದು ಆತನಿಗಾಗುವುದಿಲ್ಲ, ಯಾಕೆಂದರೆ ನೀನು ಸಂಪೂರ್ಣವಾಗಿ ಆತನಿಗೆ ಒಪ್ಪಿಸಿಕೊಡದೆ ಇರುವ ತನಕ, ನೀನೇ ಆ ದಾರಿಯಲ್ಲಿ ಅಡ್ಡಿಯಾಗಿರುವೆ. ನೀನು ನಿನ್ನನ್ನು ಒಪ್ಪಿಸಿಕೊಟ್ಟ ಕೂಡಲೇ ಆತನು ತನ್ನ ವಿಷಯದಲ್ಲಿ ಸಾಕ್ಷಿ ಹೇಳುತ್ತಾನೆ, ನೇರವಾಗಿ ನಿನಗಲ್ಲ - ನಿನ್ನಲ್ಲಿರುವ ತನ್ನ ಸ್ವಭಾವಕ್ಕೆ ಸಾಕ್ಷಿ ಹೇಳುತ್ತಾನೆ. ವಾಸ್ತವಕ್ಕಿಂತ ಮೊದಲೇ ಅದರ ಸಾಕ್ಷಿ ನಿನಗುಂಟಾದರೆ, ಅದು ಭಾವಾತ್ಮಕ ಮನೋವಿಕಾರದಲ್ಲಿ ಅಂತ್ಯಗೊಳ್ಳುತ್ತದೆ. ಪ್ರಾಯಶ್ಚಿತ್ತ ಯಜ್ಞದ ಆಧಾರದ ಮೇಲೆ ಕಾರ್ಯಪ್ರಯುಕ್ತನಾಗಿ, ಮತ್ತು ಅವಿನಯದ ವಾಗ್ವಾದಗಳನ್ನು ನಿಲ್ಲಿಸಿದಾಗ ದೇವರು ತನಗಾಗಿ ನಿನಗೆ ಸಾಕ್ಷಿ ನುಡಿಯುತ್ತಲೇ ಇರುತ್ತಾನೆ. ವಿವೇಚಿಸುವುದನ್ನೂ, ವಾದ ಮಾಡುವುದನ್ನೂ ನಿಲ್ಲಿಸಿದ ಕೂಡಲೇ, ದೇವರು, ತಾನು ನಿನ್ನಲ್ಲಿ ನೆರವೇರಿಸಿದವುಗಳಿಗೆ ಸಾಕ್ಷಿ ಹೇಳುತ್ತಾನೆ, ಮತ್ತು ಇಷ್ಟು ಕಾಲ ಆತನು ಕಾದಿರುವಂತೆ ಮಾಡಿದ ನಮ್ಮ ಲಜ್ಜಾಹೀನತೆಯ ಬಗ್ಗೆ ನಮಗೆ ಅಚ್ಚರಿಯುಂಟಾಗುತ್ತದೆ. ದೇವರು ನಿನ್ನನ್ನು ಪಾಪದಿಂದ ಬಿಡುಗಡೆ ಮಾಡುವುದು ಸಾಧ್ಯವೇ ಎಂಬ, ವಾದ ವಿವಾದಗಳಲ್ಲಿ ನೀನಿರುತ್ತಿರುವೆ ಯಾದರೆ, ಪಾಪ ನಿವಾರಣೆ ಮಾಡಲು ಮೊದಲು ದೇವರಿಗೆ ಆಸ್ಪದ ಕೊಡು, ಇಲ್ಲವೇ ಅದು ಆತನಿಂದಾಗದ ಕೆಲಸವೆಂದು ಆತನಿಗೆ ಹೇಳಿ ಬಿಡು. ಸುಮ್ಮ ಸುಮ್ಮನೇ ಆ ವ್ಯಕ್ತಿಯ ಹೆಸರನ್ನು, ಈ ವ್ಯಕ್ತಿಯ ಹೆಸರನ್ನು ಉದಾಹರಿಸಬೇಡ; ವಾದವಿವಾದಕ್ಕೆ ಕೊನೆ ಯೆಂಬುದಿಲ್ಲ. ಮತ್ತಾಯ 11:28ರಲ್ಲಿರುವದನ್ನು ಪ್ರಯತ್ನಿಸು.-''ನೀವೆಲ್ಲರೂ ನನ್ನ ಬಳಿಗೆ ಬನ್ನಿರಿ''. ಬಹುದುಃಖ ಪಡುತ್ತಿರುವವರೂ, ಭಾರಹೊತ್ತಿರುವವರೂ ನೀವಾಗಿದ್ದರೆ ಈಗಲೇ ''ಬಳಿಗೆ ಬನ್ನಿರಿ''. ನೀವು ಕೆಟ್ಟ ನಡತೆಯುಳ್ಳವರೆಂದು ನಿಮಗೆ ತಿಳಿದಿದ್ದರೆ ಬೇಡಿಕೊಳ್ಳಿರಿ. (ಲೂಕ 11:13 ನೋಡಿರಿ)

ನಮ್ಮ ಸ್ವಾಮಿಯು ಮಾಡಿದ ಪಾಪ ವಿಮೋಚನೆಗೆ ದೇವರಾತ್ಮನು ಸಾಕ್ಷಿ ಹೇಳುತ್ತಾನೆ, ಬೇರೆ ಯಾವುದೊಂದಕ್ಕೂ ಅಲ್ಲ ; ನಮ್ಮ ವಿವೇಚನೆಗೆ ಸಾಕ್ಷಿ ಹೇಳುವುದಿಲ್ಲ. ನಮ್ಮ ಸಾಮಾನ್ಯ ಜ್ಞಾನದ ನಿರ್ಧಾರ ಗಳಿಂದ ಉಂಟಾಗುವ ಸರಳತೆಯನ್ನೇ ಪವಿತ್ರಾತ್ಮನ ಸಾಕ್ಷಿಯೆಂದು ತಪ್ಪಾಗಿ ಗ್ರಹಿಸಲು ಸಾಧ್ಯವಿದೆ. ಆದರೆ ದೇವರ ಆತ್ಮನು ನಮ್ಮಲ್ಲಿರುವ ತನ್ನ ಸ್ವಂತ ಸ್ವಭಾವಕ್ಕೆ ಮತ್ತು ಪಾಪ ವಿಮೋಚನೆಯು ಮಾಡಿದ ಅದ್ಭುತ ಕಾರ್ಯಕ್ಕೆ ಸಾಕ್ಷಿಯಾಗಿರುವನಲ್ಲದೆ ನಮ್ಮ ಸ್ವಂತ ವಿವೇಚನೆಗೆ ಅಲ್ಲ. ನಮ್ಮ ವಿವೇಚನೆಗಳಿಗೆ ಆತನು ಸಾಕ್ಷಿಯಾಗಿರಬೇಕೆಂದು ನಾವು ಪ್ರಯತ್ನಿಸಿದರೆ, ನಾವು ಕಾರ್ಗತ್ತಲಿನಲ್ಲಿಯೂ ಗಲಿಬಿಲಿಯಲ್ಲಿಯೂ ಬೀಳುವುದೇನೂ ಆಶ್ಚರ್ಯವಲ್ಲ. ನಿನ್ನ ವಿವೇಚನೆಯನ್ನು ಬಯಲಿಗೆ ತೂರಿಬಿಟ್ಟು ದೇವರನ್ನು ನಂಬು, ಆಗ ಆತನು ನಿನ್ನಲ್ಲಿ ಸಾಧಿಸಿರುವುದಕ್ಕೆ ತಾನೇ ಸಾಕ್ಷಿಯಾಗಿರುತ್ತಾನೆ.

# (ಹಳೇ ಜೀವಿತದ) ತೃಣ ಮಾತ್ರವೂ ಇಲ್ಲವೇ ಇಲ್ಲ

**''ಯಾವನಾದರೂ ಕ್ರಿಸ್ತನಲ್ಲಿದ್ದರೆ ಅವನು ನೂತನ ಸೃಷ್ಟಿಯಾದನು. ಇಗೋ, ಪೂರ್ವ ಸ್ಥಿತಿಹೋಗಿ ಎಲ್ಲಾ ನೂತನವಾಯಿತು'' - (2 ಕೊರಿಂಥ 5:17)**

ನಮ್ಮ ಪ್ರಭುವಾದ ಯೇಸುಕ್ರಿಸ್ತನು ಕಾರಣವಿಲ್ಲದೆ ಮಾಡಿಕೊಂಡ ಪೂರ್ವ ಕಲ್ಪಿತ ಭಾವನೆಗಳನ್ನು ಎಂದೂ ಪೋಷಿಸುವುದಿಲ್ಲ. ಅವುಗಳನ್ನು ನಾಶ ಮಾಡುತ್ತಾನೆ. ನಮ್ಮ ಸ್ವಂತ ಪೂರ್ವಗ್ರಹಗಳ ವಿಷಯದಲ್ಲಿ ದೇವರು ಆಸಕ್ತಿಯುಳ್ಳವನೆಂಬುದಾಗಿ ನಾವು ಊಹಿಸಿಕೊಳ್ಳುತ್ತೇವೆ; ಪೂರ್ವಗ್ರಹದಿಂದ ಕೂಡಿರುವ ಬೇರೆಯವರೊಂದಿಗೆ ದೇವರು ಹೇಗೆ ವರ್ತಿಸುವನೋ ಹಾಗೆಯೇ ದೇವರು ನಮ್ಮೊಂದಿಗೆ ವರ್ತಿಸುವುದಿಲ್ಲವೆಂದು ನಮಗೆ ನಾವೇ ಖಾತರಿಪಡಿಸಿಕೊಂಡಿರುತ್ತೇವೆ. ಪೂರ್ವಗ್ರಹ ಪೀಡಿತರಾದ ಬೇರೆಯವರನ್ನು ದೇವರು ಕಠಿಣವಾಗಿ ನಿಭಾಯಿಸಬೇಕು ಎಂದೂ, ಆದರೆ ನನ್ನ ವಿಷಯದಲ್ಲಿ ಆತನು, ನನ್ನ ಪೂರ್ವ ಭಾವಿಕಲ್ಪನೆಗಳು ಸರಿಯಾದವುಗಳೆಂದು ಬಲ್ಲನೆಂದೂ ನಮ್ಮಷ್ಟಕ್ಕೆ ನಾವು ತಿಳಿಯುತ್ತೇವೆ. ಆದರೆ ದೇವರಿಗೆ ಇದು ಸಲ್ಲದೆಂದು ನಾವು ತಿಳಿಯಬೇಕು. ದೇವರು ಪೂರ್ವಗ್ರಹ ಪೀಡಿತ ಜೀವಿತವನ್ನು ಅಂಗೀಕರಿಸುವುದಿಲ್ಲವೆಂಬುದನ್ನು ಅಷ್ಟೇ ಖಚಿತವಾಗಿ ನಾವು ತಿಳಿದಿರಬೇಕು. ಆತನು ನಮ್ಮ ಪೂರ್ವ ಗ್ರಹಗಳ ಪರವಾಗಿರುವುದರ ಬದಲು ಉದ್ದೇಶ ಪೂರ್ವಕವಾಗಿ ಅವುಗಳನ್ನು ಅಳಿಸಿ ಹಾಕುತ್ತಿರುವನು. ನಮ್ಮ ಪೂರ್ವಗ್ರಹಗಳ ನಾಶ ಪಡಿಸುವ ದೈವಾನುಗ್ರಹದ ಕ್ರಮವು ನಮ್ಮ ನೈತಿಕ ಶಿಕ್ಷಣದ ಭಾಗವಾಗಿದೆ ಮತ್ತು ದೇವರು ಅವುಗಳನ್ನು ಹೇಗೆ ನಿರ್ನಾಮಗೊಳಿಸುತ್ತಾನೆ ಂಬುದನ್ನು ನಾವು ಎಚ್ಚರದಿಂದ ಗಮನಿಸಬೇಕು. ನಾವು ಸಮರ್ಪಿಸುವ ಬೇರೆ ಯಾವುದಕ್ಕೂ ದೇವರು ಮನ್ನಣೆ ನೀಡುವುದಿಲ್ಲ; ಆತನು ನಮ್ಮಿಂದ ಬಯಸುವುದು ಒಂದನ್ನು ಮಾತ್ರ - ಅದು ಬೇಷರತ್ತಾದ ನಮ್ಮ ಶರಣಾಗತಿ ಮಾತ್ರವೇ.

ನಾವು ಹೊಸದಾಗಿ ಹುಟ್ಟಿದಾಗ, ಪವಿತ್ರಾತ್ಮನು ನಮ್ಮೊಳಗೆ ನೂತನ ಸೃಷ್ಟಿಯ ನ್ನುಂಟು ಮಾಡಲು ಆರಂಭಿಸುತ್ತಾನೆ. ನಮ್ಮ ಹಳೇ ಜೀವಿತಕ್ಕೆ ಸಂಬಂಧಿಸಿದಂತೆ ಒಂದಾದರೂ ಉಳಿದಿರದ ಸಮಯ ಬರುತ್ತದೆ. ಪೂರ್ವಮನೋಭಾವವು ಹೋಗಿಯೇ ಬಿಡುತ್ತದೆ, ವಿಷಯಗಳನ್ನು ದೃಷ್ಟಿಸುವ ಹಳೇ ಮನೋಭಾವವು ಇಲ್ಲವಾಗಿಬಿಡುತ್ತದೆ, ಹೀಗೆ ''ಇದೆಲ್ಲಾ ದೇವರಿಂದಲೇ ಉಂಟಾದದ್ದು'' (2 ಕೊರಿ 5:18). ವಿಷಯಾಭಿ ಲಾಷೆಯಿಲ್ಲದ ಜೀವಿತ, ಸ್ವಾರ್ಥಾಸಕ್ತಿಯಿಲ್ಲದ ಜೀವಿತ, ಚುಚ್ಚುವಿಕೆಗಳಿಗೆ ಪ್ರತಿಕ್ರಿಯಿಸದ ಜೀವಿತ, ಕೆರಳದಿರುವಂಥಾ ಪ್ರೀತಿಯ ಜೀವಿತ, ಯಾವ ಪ್ರೀತಿ ಕೆಡುಕನ್ನುಂಟು ಮಾಡುವುದಿಲ್ಲವೋ, ಯಾವ ಪ್ರೀತಿ ಸದಾ ಕರುಣೆಯಿಂದ ತುಂಬಿರುವುದೋ ಅಂಥ ಪ್ರೀತಿಯ ಜೀವಿತವನ್ನು ನಾವು ಹೇಗೆ ಹೊಂದಬಹುದು? ಅದಕ್ಕೆ ಒಂದೇ ಒಂದು ಮಾರ್ಗವಿದೆ - ಹಳೇ ಜೀವಿತಕ್ಕೆ ಸಂಬಂಧಿಸಿದೊಂದೂ ಇಲ್ಲದಿರುವಂತೆ ನೋಡಿಕೊಳ್ಳ ಬೇಕು ಮತ್ತು ಸರಳವೂ ಪರಿಪೂರ್ಣವೂ ಆದ ವಿಶ್ವಾಸವನ್ನು ದೇವರಲ್ಲಿರಿಸ ಬೇಕು, ಅಂಥಾ ವಿಶ್ವಾಸಕ್ಕೆ ಇನ್ನು ಮುಂದೆ ದೇವರ ಆಶೀರ್ವಾದಗಳ ಆಧಾರ ನಮಗೆ ಬೇಕಾಗಿರುವುದಿಲ್ಲ, ಅಲ್ಲಿ ನಮಗೆ ಬೇಕಾಗಿರುವುದು ಸ್ವತಃ ದೇವರೇ. ದೇವರು ತನ್ನ ಆಶೀರ್ವಾದಗಳನ್ನು ನಮ್ಮಿಂದ ಹಿಂದಕ್ಕೆ ಪಡೆದರೂ ನಮ್ಮ ವಿಶ್ವಾಸಕ್ಕೇನೂ ಧಕ್ಕೆಯಾಗದ ಮಟ್ಟವನ್ನು ನಾವು ಮುಟ್ಟಿರುವೆವೋ? ದೇವರು ಕಾರ್ಯನಿರತ ನಾಗಿರುವುದನ್ನು ಒಮ್ಮೆ ನಾವು ನೋಡಿದರೆ ಸಾಕು, ಎಂಥಾ ಸಂಗತಿಗಳು ಸಂಭವಿಸಿದರೂ ನಾವೆಂದಿಗೂ ತಲೆಕೆಡಿಸಿಕೊಳ್ಳುವುದಿಲ್ಲ - ಯಾಕೆಂದರೆ ಲೋಕವು ಕಾಣದೇ ಇರುವ ಪರಲೋಕದ ತಂದೆಯಲ್ಲಿ ನಾವು ನಿಜವಾಗಿಯೂ ವಿಶ್ವಾಸ ವನ್ನಿಟ್ಟಿರುವೆವು.

# ಸರಿಯಾದ ದೃಷ್ಟಿಕೋನ

**''ಕ್ರಿಸ್ತನ ಅನ್ಯೋನ್ಯತೆಯಲ್ಲಿ ನಮ್ಮನ್ನು ಯಾವಾಗಲೂ ಜಯೋತ್ಸವದೊಡನೆ ಮೆರೆಸುತ್ತಾ ......... ಬರುವ ದೇವರಿಗೆ ಸ್ತೋತ್ರವು'' - (2 ಕೊರಿಂಥ 2:14)**

ದೇವರ ಸೇವಕನ ಮನೋದೃಷ್ಟಿಯು, ಅತ್ಯುನ್ನಗೆ ಆದಷ್ಟು ಸನಿಹವೆಂದಿರದೆ, ಅದು ಅತ್ಯುನ್ನತೆಯೇ ಆಗಿರಬೇಕು. ದೇವರ ಮನೋದೃಷ್ಟಿಯನ್ನು ಸತತ ಪರಿಶ್ರಮದಿಂದ ಕೊಂಚ ಕೊಂಚವಾಗಿ ಪ್ರತಿ ದಿನವೂ ಕಾಪಾಡಿಕೊಳ್ಳಲು ಎಚ್ಚರ ವಹಿಸಬೇಕು. ಮೇರೆ ಮಿತಿಗಳ ಬಗ್ಗೆ ಯೋಚಿಸಲೇಬಾರದು. ಯಾವುದೇ ಬಾಹ್ಯ ಶಕ್ತಿಯು ಈ ಮನೋದೃಷ್ಟಿಯನ್ನು ಸ್ಪರ್ಶಿಸಲಾರದು.

ಯೇಸುಕ್ರಿಸ್ತನ ಜಯೋತ್ಸವದ ಮೆರವಣಿಗೆಯಲ್ಲಿ ಬಂಧಿತರಾಗುವ ಒಂದೇ ಉದ್ದೇಶದ ಮನೋ ದೃಷ್ಟಿಯನ್ನು ಕಾಪಾಡಿಕೊಂಡು ಬದುಕಲು ನಾವು ಈ ಲೋಕದಲ್ಲಿದ್ದೇವೆ. ದೇವರ ಪ್ರದರ್ಶನದ ಮಳಿಗೆಯಲ್ಲಿ ಜನರು ನೋಡಲಿ ಎಂದು ನಾವು ಇಡಲ್ಪಟ್ಟವರಲ್ಲ, ಒಂದೇ ಸಂಗತಿಯ ಪ್ರದರ್ಶನಕ್ಕಾಗಿ ನಾವು ಈ ಲೋಕದಲ್ಲಿ ಇರಿಸಲ್ಪಟ್ಟಿದ್ದೇವೆ - ನಮ್ಮ ಜೀವಿತಗಳನ್ನು ''ಕ್ರಿಸ್ತನಿಗೆ ವಿಧೇಯರಾಗುವಂತೆ ಸೆರೆ ಹಿಡಿದು'' (2 ಕೊರಿಂಥ 10:5). ಬೇರೆ ದೃಷ್ಟಿಗಳು ಎಷ್ಟು ಅಲ್ಪತನದ್ದಾಗಿವೆ ನೋಡಿರಿ - ''ಯೇಸುಕ್ರಿಸ್ತನಿಗಾಗಿ ಹೋರಾಡುತ್ತಾ ನಾನೊಬ್ಬನೇ ಇಲ್ಲಿ ಇದ್ದೇನೆ''; ಯೇಸುಕ್ರಿಸ್ತನನ್ನು ಸಮರ್ಥಿಸಿ ಕೊಂಡು ಆತನಿಗಾಗಿ ಈ ಕೋಟೆಯನ್ನು ನಾನು ರಕ್ಷಿಸುತ್ತಾ ಇದ್ದೇನೆ''. ಆದರೆ ಪೌಲನು ಹೇಳುತ್ತಾನೆ - ಜಯಶಾಲಿಯ ಮೆರವಣಿಗೆಯ ಗುಂಪಿನಲ್ಲಿ ನಾನು ಸಾಗುತ್ತಿದ್ದೇನೆ, ಏನೇ ಕಷ್ಟಗಳುಂಟಾದರೂ ಅವು ನನಗೆ ಮುಖ್ಯವಲ್ಲ, ಜಯಶಾಲಿಯು, ಜಯೋತ್ಸವದಲ್ಲಿ ನನ್ನನ್ನು ನಡಿಸುತ್ತಿರುವನು''. ಈ ಕಲ್ಪನೆಯು ನಮ್ಮ ನಿಜ ಜೀವಿತದಲ್ಲಿ ಕಾರ್ಯಸಾಧಿಸುತ್ತಿದೆಯೋ? ಪೌಲನಲ್ಲಿದ್ದ ರಹಸ್ಯ ಆನಂದ - ಅದು ತಾನಿನ್ನೂ ಯೇಸುಕ್ರಿಸ್ತನಿಗೆ ಅಪರಾಧ ಮಾಡುತ್ತಾ ಆತನಿಗೆ ವಿರೋಧವಾಗಿರುವಾಗಲೇ ದೇವರು ತನ್ನನ್ನು ಹಿಡಿದು, ತನ್ನ ಸೆರೆಯವ ನನ್ನಾಗಿ ಮಾಡಿಕೊಂಡಿರುವುದರಿಂದಲೇ ತಾನು ಈ ಲೋಕದಲ್ಲಿದ್ದೇನೆ ಎಂಬುವುದೇ. ಯೇಸುಸ್ವಾಮಿಯ ಸೆರೆಯಲ್ಲಿರುವುದೇ ಪೌಲನ ಆನಂದ. ಇದನ್ನು ಬಿಟ್ಟು ಪರಲೋಕದಲ್ಲಿಯಾಗಲೀ ಭೂಲೋಕದಲ್ಲಿ ಯಾಗಲೀ ಯಾವ ಆಸಕ್ತಿಯು ಆತನಿಗಿಲ್ಲ. ಕ್ರೈಸ್ತ ನೊಬ್ಬನು ತಾನೇ ತಾನಾಗಿ ಜಯಗಳಿಸುವುದರ ಬಗ್ಗೆ ಮಾತನಾಡುವುದು ಕೇವಲ ಲಜ್ಜಾಸ್ಪದವಾಗಿದೆ. ಜಯಶಾಲಿಯಾದವನಿಗೆ ನಾವು ಎಷ್ಟರ ಮಟ್ಟಿಗೆ ವಶ ವರ್ತಿಯಾಗಿರಬೇಕೆಂದರೆ, ಜಯಶಾಲಿಯ ಜಯವೇ ನಮ್ಮ ಜಯ ವಾಗಿರುತ್ತದೆ. ''ನಮ್ಮನ್ನು ಪ್ರೀತಿಸಿದಾತನ ಮೂಲಕವಾಗಿ ನಾವು ಎಲ್ಲಾ ವಿಷಯಗಳಲ್ಲಿ ಪೂರ್ಣ ಜಯಶಾಲಿಗಳಾಗುತ್ತೇವೆ'' (ರೋಮಾ 8:37)

''ನಾವು ದೇವರ ಮುಂದೆ ಕ್ರಿಸ್ತನ ಪರಿಮಳವಾಗಿದ್ದೇವೆ.'' (2 ಕೊರಿಂಥ 2:15) ಯೇಸು ಕ್ರಿಸ್ತನ ಪರಿಮಳದ ಸುವಾಸನೆಯಿಂದ ಆವರಿಸಲ್ಪಟ್ಟಿದ್ದೇವೆ. ಆದ್ದರಿಂದ ನಾವೆಲ್ಲಿಗೆ ಹೋದರೂ ದೇವರಿಗೆ ನಾವು ಪರಿಮಳ ಸೂಸುವ ಹರ್ಷದಾಯಕರಾಗಿರುತ್ತೇವೆ.

# ದೇವರ ಉದ್ದೇಶಾರ್ಥ ಜಜ್ಜಲ್ಪಡುವಿಕೆ

**''ಯಾವ ವಿಧದಲ್ಲಿಯಾದರೂ ಕೆಲವರನ್ನು ರಕ್ಷಿಸಬೇಕೆಂದು ಯಾರಾರಿಗೆ ಎಂಥೆಂಥವನಾಗಬೇಕೋ ಅಂಥಂಥವನಾಗಿದ್ದೇನೆ'' - (1 ಕೊರಿಂಥ 9:22)**

ಕ್ರೈಸ್ತ ಸೇವಕರಾದವರು ಅಲ್ಪಜನರ ಮಧ್ಯದಲ್ಲಿ ನಿಷ್ಪ್ರಯೋಜಕ ಸಂಗತಿಗಳ ನಡುವೆ ಯೋಗ್ಯರೂ, ಉದಾತ್ತರೂ ಆಗಿರುವ ದೇವರ ಪುರುಷರೂ, ಸ್ತ್ರೀಯರೂ ಆಗಿರುವುದನ್ನು ಕಲಿತುಕೊಳ್ಳಬೇಕು. ''ಬೇರೊಂದು ಸ್ಥಳದಲ್ಲಿ ನಾನಿದ್ದರೆ ಹಾಗಿರಲು ಸಾಧ್ಯವಾಗುತ್ತಿತ್ತು'' ಎನ್ನುವ ಬೇಡಿಕೆಯನ್ನೆಂದಿಗೂ ಮುಂದಿಡಬೇಡ. ಎಲ್ಲಾ ದೇವ ಜನರು, ಕೇವಲ ಸಾಧಾರಣ ಜನರಾಗಿದ್ದಾಗ್ಯೂ, ದೇವರು ಅವರೊಳಗೆ ಇರಿಸಿರುವ ವಿಷಯ ಸತ್ವದ ಕಾರಣ ಅವರು ಅಸಾಧಾರಣ ಜನರಾಗಿ ಮಾಡಲ್ಪಟ್ಟಿರುತ್ತಾರೆ. ಈ ವಿಷಯ ಸತ್ವಕ್ಕೆ ಹೃದಯದಲ್ಲಿ ಮಮತೆ ಇರದಿದ್ದರೆ, ನಮ್ಮ ಬೌದ್ಧಿಕ ಮನಸ್ಸಿನಲ್ಲಿ ಸರಿಯಾದ ವಿಷಯ ಸತ್ವವು ಇರದಿದ್ದರೆ, ದೇವರಿಗೆ ಉಪಯುಕ್ತರಾಗುವ ಕ್ಷೇತ್ರದಿಂದ ಹೊರಕ್ಕೆ ತಳ್ಳಲ್ಪಡುತ್ತೇವೆ. 'ಆಯ್ಕೆ ಮಾಡುವುದಾದರೆ' ಎಂದು ಆರಿಸಲ್ಪಟ್ಟ ಸೇವಕರು ನಾವಲ್ಲ. ಅನೇಕರು ಬೇಕೆಂದೇ, ತಾವಾಗಿ ದೇವರ ಸೇವೆಯನ್ನು ಆಯ್ಕೆ ಮಾಡಿಕೊಂಡಿರುತ್ತಾರೆ. ಆದರೆ ದೇವರ ಮಹಾ ಕೃಪೆಯುಳ್ಳ ವಿಷಯ ಸತ್ವವು ಮತ್ತು ದೇವರ ವಾಕ್ಯಗಳ ಸಾಮರ್ಥ್ಯವೂ ಅವರಲ್ಲಿ ಇರುವುದಿಲ್ಲ. ಭಕ್ತನಾದ ಪೌಲನು ತನ್ನ ಪೂರ್ಣ ಹೃದಯದಿಂದಲೂ, ಪೂರ್ಣ ಬುದ್ಧಿಯಿಂದಲೂ, ಪೂರ್ಣ ಆತ್ಮನಿಂದಲೂ, ಯೇಸುಕ್ರಿಸ್ತನು ಏನು ಮಾಡಲು ಈ ಲೋಕಕ್ಕೆ ಬಂದನು ಎನ್ನುವ ವಿಷಯ ಸತ್ವವನ್ನು ಹಿಡಿದಿಟ್ಟುಕೊಂಡಿದ್ದನು ಮತ್ತು ಈ ಒಂದು ಸತ್ಯ ಸಂಗತಿಯ ಮೇಲಿದ್ದ ತನ್ನ ದೃಷ್ಟಿಯನ್ನೆಂದಿಗೂ ಕಳೆದುಕೊಳ್ಳಲಿಲ್ಲ. ನಾವು ಸಹ ಈ ಪ್ರಾಮುಖ್ಯವಾದ ಸತ್ವವನ್ನು ಮುಖಾ ಮುಖಿಯಾಗಿ ಕಾಣಬೇಕು - ''ಶಿಲುಬೆಗೆ ಹಾಕಲ್ಪಟ್ಟವನಾದ ಯೇಸುಕ್ರಿಸ್ತನನ್ನೇ ಹೊರತು, ಬೇರೆ ಯಾವುದನ್ನು ತಿಳಿಯದವನಾಗಿ''. (1 ಕೊರಿಂಥ 2:2)

''ನಾನು ನಿಮ್ಮನ್ನು ಆರಿಸಿ ತೆಗೆದು ಕೊಂಡೆನು'' (ಯೋಹಾ 15:16) ಈ ಮಹತ್ವದ ಅಂಶವನ್ನು ನಿನ್ನ ಜೀವನದ ಸೂತ್ರವನ್ನಾಗಿರಿಸಿಕೋ. ನೀನು ದೇವರನ್ನು ಹಿಡುಕೊಳ್ಳುವುದಲ್ಲ, ದೇವರು ನಿನ್ನನ್ನು ಆರಿಸಿ ಹಿಡುಕೊಂಡಿದ್ದಾನೆ. ಇಲ್ಲಿ ಈ ಸತ್ಯವೇದ ವಿದ್ಯಾಲಯದಲ್ಲಿ ದೇವರು ಕಾರ್ಯನಿರತನಾಗಿದ್ದಾನೆ. ಬಗ್ಗಿಸುತ್ತಿರುವನು, ಮುರಿಯುತ್ತಿರುವನು, ರೂಪಿಸುತ್ತಿರುವನು, ತನ್ನ ಇಚ್ಛೆಯ ಮೇರೆಗೆ ಮಾಡುತ್ತಿರುವನು. ಆತನು ಇವೆಲ್ಲವುಗಳನ್ನು ಹಾಗೇಕೆ ಮಾಡುತ್ತಿರುವನೆಂಬುದು ನಮಗೆ ತಿಳಿಯದು - ಇವನು ನನ್ನವನು, ಇವಳು ನನ್ನವಳು ಎಂದು ತಾನು ಹೇಳಲು ಸಾಧ್ಯವಾಗುವ ಒಂದೇ ಒಂದು ಉದ್ದೇಶದಿಂದ ಆತನು ಅದನ್ನು ಮಾಡುತ್ತಿರುವನು. ನಮ್ಮನ್ನು ಆತನು ಬಂಡೆಯ ಮೇಲೆ ನೆಲೆಗೊಳಿಸಿದಂತೆ, ಇತರರನ್ನು ಯೇಸುಕ್ರಿಸ್ತನೆಂಬ ಬಂಡೆಯ ಮೇಲೆ ನೆಲೆಗೊಳಿಸುವಂತೆ ನಾವು ದೇವರ ಕೈಯಲ್ಲಿರುವ ಸಾಧನಗಳಾಗಿರಬೇಕು. ಅದಕ್ಕಾಗಿಯೇ ಈ ಶಿಕ್ಷಣ ಮತ್ತು ಈ ತರಬೇತಿ.

ದೇವರ ಸೇವಕನಾಗುವುದನ್ನು ಎಂದಿಗೂ ನೀನೇ ಆಯ್ಕೆ ಮಾಡಿಕೊಳ್ಳಬೇಡ, ಆದರೆ ದೇವರು ತನ್ನ ಸೇವೆಗಾಗಿ ತನ್ನ ಕರೆಯುವಿಕೆಯನ್ನು ನಿನ್ನ ಮುಂದೆ ಇಟ್ಟಾಗ, ''ನೀವು ಬಿಟ್ಟು ಎಡ ಬಲಕ್ಕೆ ತೊಲಗಿದರೆ (ಧರ್ಮೋ ಕಾಂಡ 28:14) ನಿಮ್ಮ ಸಂಗತಿಯನ್ನು ಏನು ಹೇಳಲಿ! ಆತನ ಕರೆಯುವಿಕೆಗೆ ಮೊದಲು ಆತನು ನಿನ್ನಲ್ಲಿ ಏನು ಮಾಡಲಿಲ್ಲವೋ, ಅವುಗಳನ್ನು ಈಗ ನಿನ್ನೊಳಗೆ ಮಾಡುತ್ತಾನೆ; ಬೇರೆಯವರಲ್ಲಿ ಆತನು ಏನು ಮಾಡುತ್ತಿಲ್ಲವೋ ಅದನ್ನು ಈಗ ನಿನ್ನೊಳಗೆ ಮಾಡುತ್ತಾನೆ. ಆದ್ದರಿಂದ ನಿನ್ನ ಜೀವಿತದಲ್ಲಿ ಆತನು ತನ್ನ ದಾರಿಯಲ್ಲಿ ತಾನು ಸಾಗಲು ಆತನಿಗೆ ಬಿಟ್ಟು ಕೊಡಬೇಕು.

# ಕಳುಹಿಸಲ್ಪಟ್ಟವನೆಂದರೇನು ? (ಮಿಷನರಿ ಎಂದರೇನು ?)

**''ತಂದೆ ನನ್ನನ್ನು ಕಳುಹಿಸಿಕೊಟ್ಟ ಹಾಗೆಯೇ ನಾನೂ ನಿಮ್ಮನ್ನು ಕಳುಹಿಸಿ ಕೊಡುತ್ತೇನೆ''**
**- (ಯೋಹಾನ 20:21)**

ದೇವರಿಂದ ಯೇಸುಕ್ರಿಸ್ತನು ಕಳುಹಿಸಲ್ಪಟ್ಟಂತೆಯೇ ಯೇಸುಕ್ರಿಸ್ತನು ಯಾರನ್ನು ಕಳುಹಿಸಿ ಕೊಡುವನೋ ಅವನೇ ಮಿಷನರಿಯಾಗಿರುತ್ತಾನೆ. ದೇವರ ಸೇವೆಯಲ್ಲಿ ಪ್ರಾಮುಖ್ಯ ವಾಗಿರುವ ವಿಷಯವೆಂದರೆ, ಅದು ಜನರ ಅಗತ್ಯಗಳಲ್ಲ, ಯೇಸುಕ್ರಿಸ್ತನ ಆಜ್ಞೆಯೇ. ದೇವರ ಸೇವೆಗಾಗಿ ಬರುವ ನಮ್ಮ ಮೂಲ ಪ್ರೇರಣೆಯು ನಮ್ಮ ಬೆನ್ನಿಗೆ ಇರಬೇಕೇ ವಿನಃ ನಮ್ಮ ಮುಂದೆ ಇರಬಾರದು. ಈ ದಿನಗಳಲ್ಲಿ ಪ್ರೇರಣೆಯನ್ನೇ ಮುಂದಿಟ್ಟು ಕೊಳ್ಳುವ ಪ್ರವೃತ್ತಿ ಬೆಳೆದಿದೆ. ನಮ್ಮ ಮುಂದಿರುವುದನ್ನೆಲ್ಲಾ ಸೇರಿಸಿ ಗುಡಿಸಿ ಹಾಕಿ, ಅದೇ ಸುವಾರ್ತಾ ಸೇವೆಯ ಯಶಸ್ಸು ಎನ್ನುವ ನಮ್ಮ ಪರಿಕಲ್ಪನೆಯನ್ನು ತೃಪ್ತಿ ಪಡಿಸಿಕೊಳ್ಳುತ್ತೇವೆ. ಹೊಸ ಒಡಂಬಡಿಕೆಯಲ್ಲಿ ಈ ಪ್ರೇರಣೆಯನ್ನು ಅಂದರೆ ಯೇಸುಕ್ರಿಸ್ತನನ್ನೇ ನಮ್ಮ ಬೆನ್ನಿಗಿಡಲಾಗಿದೆ. ನಾವು ಆತನ ಕಾರ್ಯಗಳನ್ನು ಕೈಗೊಳ್ಳುವುದರಲ್ಲಿ ಆತನಿಗೆ ನಿಷ್ಠೆಯುಳ್ಳವ ರಾಗಿರಬೇಕು ಎಂಬುದು ನಮ್ಮ ಗುರಿಯಾಗಿರಬೇಕು.

ಯೇಸುಕ್ರಿಸ್ತನನ್ನೇ ಅಂಟಿಕೊಂಡಿರಬೇಕು ಮತ್ತು ಆತನ ದೃಷ್ಟಿಕೋನದಲ್ಲಿ ವಿಶ್ವಾಸವಿಡಬೇಕು ಎನ್ನುವ ಈ ಒಂದು ವಿಷಯವನ್ನೆಂದಿಗೂ ಅಸಡ್ಡೆ ಮಾಡಬಾರದು. ಸುವಾರ್ತಾ ಸೇವೆಯ ಕಾರ್ಯ ಚಟುವಟಿಕೆಗಳಲ್ಲಿರುವ ದೊಡ್ಡ ಅಪಾಯವೆಂದರೆ 'ದೇವರ ಕರೆಯುವಿಕೆ'ಯೆಂಬುವ ಸ್ಥಾನದಲ್ಲಿ, ಜನರ ಅಗತ್ಯಗಳಿಗೆ ನೀಡುವ ಪ್ರಾಧಾನ್ಯತೆಯಿಂದ ಜನಿಸಿದ ಸಹಾನುಭೂತಿಯು ''ಯೇಸುಕ್ರಿಸ್ತನಿಂದ ಕಳುಹಿಸಲ್ಪಟ್ಟ ವನು'' ಎಂಬ ಸತ್ಯಾರ್ಥವನ್ನು ನಿರ್ನಾಮಗೊಳಿಸುವ ಸಾಧ್ಯತೆ ಇದೆ. ಮಾನವರ ಅಗತ್ಯಗಳು ತುಂಬಾ ಅಗಾಧವಾಗಿವೆ, ಅವರ ಪರಿಸ್ಥಿತಿಗಳು ತುಂಬಾ ಜಟಿಲವಾಗಿವೆ, ಈ ವಿಷಯದಲ್ಲಿ ಮನುಷ್ಯನ ಬುದ್ಧಿಶಕ್ತಿಯೂ ಏರುಪೇರಾಗಿಬಿಡುವುದು. ಸುವಾರ್ತಾ ಸೇವೆಯ ಚಟುವಟಿಕೆಗಳಿಗೆ ಅಡಿಪಾಯ ವಾಗಿರುವ ಮುಖ್ಯ ಕಾರಣವನ್ನು ನಾವು ಮರೆತು ಬಿಟ್ಟಿದ್ದೇವೆ. ಜನರ ಉತ್ಕರ್ಷವು ಪ್ರಥಮವಲ್ಲ, ಜನರ ವಿದ್ಯಾಭ್ಯಾಸವಲ್ಲ, ಅಥವಾ ಅವರ ಅಗತ್ಯಗಳಲ್ಲ, ಪ್ರಥಮವೂ ಪ್ರಾಮುಖ್ಯವೂ ಆಗಿರುವಂಥಾ ಯೇಸು ಕ್ರಿಸ್ತನ ಆಜ್ಞೆ - ''ನೀವು ಹೊರಟುಹೋಗಿ ... ಎಲ್ಲಾ ದೇಶಗಳ ಜನರನ್ನು ಶಿಷ್ಯರನ್ನಾಗಿ ಮಾಡಿರಿ'' (ಮತ್ತಾ 28:19)

ದೇವರ ಸೇವೆಯಲ್ಲಿರುವ ಸ್ತ್ರೀ, ಪುರುಷರ, ಜೀವಿತಗಳನ್ನು ಸಿಂಹಾವಲೋಕನ ಮಾಡಿದಾಗ ಅವರೆಂಥಾ ಅದ್ಭುತವಾದ ಜಾಣ್ಮೆಯುಳ್ಳ ಜ್ಞಾನವನ್ನು ಹೊಂದಿರುವರು; ದೇವರು ಇಚ್ಛಿಸುವುದನ್ನೆಲ್ಲಾ ಅವರೆಷ್ಟು ಪರಿಪೂರ್ಣವಾಗಿ ತಿಳಿದಿರುವರು! ಎಂದು ಹೇಳುವ ಪ್ರವೃತ್ತಿ ನಮಗಿದೆ. ಅಂಥಾ ಜಾಣ್ಮೆಯ ಜ್ಞಾನವು ದೇವರ ಜ್ಞಾನವಾಗಿರುತ್ತದೇ ಹೊರತು ಮಾನವ ಜ್ಞಾನ ಅಲ್ಲವೇ ಅಲ್ಲ. ದೇವರ ದೈವಿಕ ಮಾರ್ಗದರ್ಶನಕ್ಕೆ ಮಹತ್ವವನ್ನೀಯ ಬೇಕಾಗಿರುವಾಗ ನಾವು ಮನುಷ್ಯ ಜ್ಞಾನಕ್ಕೆ ಮಹತ್ವವನ್ನು ಕೊಡುತ್ತೇವೆ. ದೇವರ ಜ್ಞಾನವನ್ನು ಆತನ ಅಲೌಕಿಕ ಸಾಧನಗಳನ್ನು ಚಿಕ್ಕ ಮಕ್ಕಳಂತೆ ನಂಬಿರುವ ಮೂರ್ಖರಂತೆ ತೋರುವ ಜನರಿಂದ ದೇವರ ಮಾರ್ಗದರ್ಶನವು ಪ್ರಕಟಗೊಳ್ಳುತ್ತದೆ.

# ಸುವಾರ್ತೆಯ ಬೋಧನಾ ಕ್ರಮ

**''ಆದ್ದರಿಂದ ನೀವು ಹೊರಟು ಹೋಗಿ .... ಜನರನ್ನು ಶಿಷ್ಯರನ್ನಾಗಿ ಮಾಡಿರಿ''**
**- (ಮತ್ತಾಯ 28:19)**

''ಹೊರಟು ಹೋಗಿ ಆತ್ಮಗಳ ರಕ್ಷಣೆಯನ್ನು ಮಾಡಿರಿ'' ಎಂದು ಯೇಸುಕ್ರಿಸ್ತನು ಹೇಳಲಿಲ್ಲ (ಆತ್ಮಗಳ ರಕ್ಷಣೆಯು ದೇವರ ಕಾರ್ಯವಾಗಿದೆ) ಆತನು ಹೇಳಿದ್ದು ''ಎಲ್ಲಾ ದೇಶಗಳ ಜನರನ್ನು ಶಿಷ್ಯರನ್ನಾಗಿ ಮಾಡಿರಿ. ಅವರಿಗೆ ಉಪದೇಶ ಮಾಡಿರಿ'' ಎಂದು ಮಾತ್ರವೇ. ನೀನು ಸ್ವತಃ ಯೇಸುಕ್ರಿಸ್ತನ ಶಿಷ್ಯನಾಗಿರದಿದ್ದರೆ ಬೇರೆಯವರನ್ನು ನೀನು ಆತನ ಶಿಷ್ಯರನ್ನಾಗಿ ಮಾಡಲು ಆಗುವುದಿಲ್ಲ. ಆತನ ಶಿಷ್ಯರು ತಮ್ಮ ಮೊದಲನೆಯ ಸುವಾರ್ತಾ ಸೇವೆಯನ್ನು ಮಾಡಿ ಹಿಂದಿರುಗಿ ಬಂದಾಗ ಅವರು ಆನಂದದಿಂದ ತುಂಬಿದ್ದರು, ಯಾಕೆಂದರೆ ದೆವ್ವಗಳು ಅವರಿಗೆ ಅಧೀನವಾಗಿದ್ದವು, ಆದರೆ ಯೇಸುಕ್ರಿಸ್ತನು ಅವರಿಗೆ ಹೇಳಿದ್ದೇನೆಂದರೆ - ''ಯಶಸ್ವೀ ಸೇವೆಯಲ್ಲಿ ಸಂತೋಷ ಪಡಬೇಡಿರಿ. ನೀವು ನನ್ನೊಂದಿಗೆ ಯೋಗ್ಯವಾದ ಸಂಬಂಧ ಹೊಂದಿರುವುದೇ ಹಿರಿದಾದ ಸಂತೋಷ'' (ಲೂಕ 10:17-20) ಸುವಾರ್ತಾ ಸೇವಕನಿಗಿರ ಬೇಕಾದ ದೊಡ್ಡ ಅಗತ್ಯತೆ ಎಂದರೆ ಅವನು ದೇವರ ಕರೆಯುವಿಕಗೆ ಪ್ರಾಮಾಣಿಕನಾಗಿರಬೇಕು ಮತ್ತು ಸ್ತ್ರೀ, ಪುರುಷರನ್ನು ಯೇಸುಕ್ರಿಸ್ತನ ಶಿಷ್ಯರನ್ನಾಗಿ ಮಾಡುವ ತನ್ನ ಒಂದೇ ಉದ್ದೇಶವನ್ನು ಅರಿತಿರಬೇಕು. ಜನರ ಆತ್ಮಗಳಿಗಾಗಿ, ದೇವರಿಂದ ಮೂಡಿಬಂದಿರದ, ಆದರೆ ನಮ್ಮ ದೃಷ್ಠಿಕೋನಾನುಸಾರ ಆತ್ಮಗಳ ಪರಿವರ್ತನೆ ಮಾಡುವ ಉದ್ರೇಕಭಾವವು ಅಲ್ಲಿ ಇದ್ದೇ ಇರುತ್ತವೆ.

ಜನರನ್ನು ರಕ್ಷಣಾ ಮಾರ್ಗಕ್ಕೆ ತರುವುದು ಕಷ್ಟಕರವೆಂದೂ, ಪುನಃ ಪಾಪಕ್ಕೆ ಜಾರಿದವನನ್ನು ಸನ್ಮಾರ್ಗಕ್ಕೆ ತರುವುದು ಕಷ್ಟಕರವೆಂದೂ, ಅನಾಸಕ್ತಿಯಿಂದ ತುಂಬಿದ ಜನರ ತುಕಡಿಯೊಂದಿದೆಯೆಂದೂ ಯೋಚಿಸುವ ದಾರಿಯಲ್ಲಿ ಧರ್ಮ ಬೋಧಕನಿಗೆ ಸವಾಲು ಎದುರಾಗುವುದಿಲ್ಲ; ಆದರೆ ಯೇಸುಕ್ರಿಸ್ತನೊಂದಿಗಿರಬೇಕಾದ ತನ್ನ ವೈಯಕ್ತಿಕ ಸಂಬಂಧದ ದಾರಿಯಲ್ಲಿ ನಿಜವಾದ ಸವಾಲು ಎದುರಾಗುತ್ತದೆ. ''ನಾನು ಇದನ್ನು ಮಾಡಬಲ್ಲೆನೆಂಬುದನ್ನು ನಂಬುತ್ತೀರೋ ?'' (ಮತ್ತಾಯ 10:28) ಯೇಸುಕ್ರಿಸ್ತನು ಏಕಪ್ರಕಾರವಾಗಿ ಪ್ರಶ್ನೆ ಮಾಡುತ್ತಾನೆ, ನಾವು ಸಂಧಿಸುವ ಒಂದೊಂದೇ ವಿಷಯದಲ್ಲಿಯೂ ಈ ಪ್ರಶ್ನೆಯು ನಮ್ಮನ್ನೆದುರಿಸುತ್ತದೆ. ಒಂದು ಮಹತ್ವದ ಸವಾಲು - ಪುನರುತ್ಥಾನವಾದ ನನ್ನ ಸ್ವಾಮಿಯನ್ನು ನಾನು ಬಲ್ಲೆನೋ ? ಆತನೊಳಗಿರುವ ದೇವರ ಆತ್ಮನ ಶಕ್ತಿಯನ್ನು ಬಲ್ಲೆನೋ ? ದೇವರ ದೃಷ್ಟಿಯಲ್ಲಿ ಬೇಕಾದಷ್ಟು ಜ್ಞಾನಿಯಾಗಿರುತ್ತಾ, ಪ್ರಪಂಚದ ದೃಷ್ಟಿಯಲ್ಲಿ ಸಾಕಷ್ಟು ಮೂರ್ಖನಾಗಿರುತ್ತಾ, ಯೇಸುಕ್ರಿಸ್ತನು ಹೇಳಿದವುಗಳ ಮೇಲೆ ಆಧಾರಗೊಂಡಿರುವೆನೋ; ಅಥವಾ ಅಲೌಕಿಕವಾದ ಸುವಾರ್ತಾ ಬೋಧನೆಯ ಪದವಿಗಾಗಿರುವ ದೇವರ ಒಂದೇ ಒಂದು ಕರೆಯುವಿಕೆಯನ್ನು , ಅಂದರೆ ಯೇಸುಕ್ರಿಸ್ತನಲ್ಲಿಟ್ಟಿರುವ ಅಮಿತ ವಿಶ್ವಾಸವನ್ನು ತ್ಯಜಿಸಿ ಬಿಡುತ್ತಿರುವೆನೋ ? ಬೇರೊಂದು ಕ್ರಮವನ್ನು ನಾನು ಆರಿಸಿಕೊಂಡರೆ, ಯೇಸುಕ್ರಿಸ್ತನು ನಮ್ಮ ಮುಂದೆ ಇಟ್ಟಿರುವ ಕ್ರಮದಿಂದ ಸಂಪೂರ್ಣವಾಗಿ ಸರಿದು ಬಿಟ್ಟಿರುತ್ತೇನೆ, - ''ಎಲ್ಲಾ ಅಧಿಕಾರವು ನನಗೆ ಕೊಡಲ್ಪಟ್ಟಿದೆ ಆದ್ದರಿಂದ ನೀವು ಹೊರಟು ಹೋಗಿ ...'' (ಮತ್ತಾಯ 28:18-19)

# ನಂಬಿಕೆಯಿಂದಲೇ ನೀತಿವಂತರೆಂಬ ನಿರ್ಣಯ

**''ದೇವರಿಗೆ ವೈರಿಗಳಾಗಿದ್ದ ನಾವು ಆತನ ಮಗನ ಮರಣದ ಮೂಲಕ ಆತನೊಂದಿಗೆ ಸಮಾಧಾನವಿರಲಾಗಿ ಆತನಕೂಡ ಸಮಾಧಾನವಾದ ನಮಗೆ ಆ ಮಗನಿಗಿರುವ ಜೀವದಿಂದ ರಕ್ಷಣೆಯಾಗುವುದು ಮತ್ತು ನಿಶ್ಚಯವಲ್ಲವೇ ?'' - (ರೋಮಾಯ 5:10)**

ನಂಬುತ್ತಿರುವುದರಿಂದ ನಾನು ರಕ್ಷಣೆ ಹೊಂದಿಲ್ಲ ; ನಂಬುತ್ತಿರುವುದರಿಂದಲೇ ನಾನು ರಕ್ಷಣೆ ಹೊಂದಿದ್ದೇನೆಂದು ನಾನು ಮನಗಂಡಿದ್ದೇನೆ. ನನ್ನನ್ನು ರಕ್ಷಿಸುವುದು ನನ್ನ ಪಶ್ಚಾತ್ತಾಪವಲ್ಲ; ಯೇಸು ಕ್ರಿಸ್ತನಲ್ಲಿ ದೇವರು ಮಾಡಿರುವದನ್ನು ನಾನು ಗ್ರಹಿಸಿರುವುದೇ ನನ್ನ ಪಶ್ಚಾತ್ತಾಪದ ಕುರುಹು. ಕಾರಣಕ್ಕೆ ಹೆಚ್ಚು ಒತ್ತು ಕೊಡುವ ಬದಲು, ಪರಿಣಾಮಕ್ಕೆ ಒತ್ತು ನೀಡುವುದು ಅಪಾಯಕರ. 'ನನ್ನ ವಿಧೇಯತೆ, ನನ್ನ ಸಮರ್ಪಣೆ, ನನ್ನ ಪ್ರತಿಷ್ಠೀಕರಣ ಇವೆಲ್ಲವೂ ನನ್ನನ್ನು ದೇವರಿಗೆ ಯೋಗ್ಯ ವಾಗುವಂತೆ ಮಾಡಿವೆಯೋ?' ಎಂದಿಗೂ ಇಲ್ಲ, ಇವುಗಳಿಗಿಂತ ಮೊದಲೇ ಯೇಸುಕ್ರಿಸ್ತನು ಅದಕ್ಕಾಗಿ ಮರಣ ಹೊಂದಿದ್ದರಿಂದ ನಾನು ದೇವರೊಂದಿಗೆ ಯೋಗ್ಯ ಸಂಬಂಧವನ್ನು ಪಡೆದಿರುತ್ತೇನೆ. ನಾನು ದೇವರ ಕಡೆಗೆ ತಿರುಗಿಕೊಂಡಾಗ, ನಾನು ಅಂಗೀಕರಿಸಬೇಕಾಗಿರುವುದನ್ನು ದೇವರು ತಿಳಿಯಪಡಿಸಿದಾಗ, ನನ್ನ ನಂಬಿಕೆಯು ಅದನ್ನು ಅಂಗೀಕರಿಸಿದ ತತ್‌ಕ್ಷಣವೇ, ಯೇಸುಕ್ರಿಸ್ತನು ಶಿಲುಬೆಯ ಮೇಲೆ ಮಾಡಿದ ವಿಸ್ಮಯಕರವಾದ ಪ್ರಾಯಶ್ಚಿತ್ತವು ದೇವರೊಂದಿಗೆ ಯೋಗ್ಯ ಬಾಂಧವ್ಯವನ್ನು ಹೊಂದುವಂತೆ ನನ್ನನ್ನು ಮುಂದಕ್ಕೆ ತಳ್ಳಿ ಬಿಡುತ್ತದೆ ಮತ್ತು ದೇವರ ಕೃಪೆಯ ಅಲೌಕಿಕ ಅದ್ಭುತಕಾರ್ಯದಿಂದ ಮಾತ್ರವೇ ನಾನು ನೀತಿವಂತನೆಂದು ನಿರ್ಣಯಿಸಲ್ಪಟ್ಟಿರುವೆನು - ನಾನು ನನ್ನ ಪಾಪಗಳಿಗಾಗಿ ದುಃಖ ಪಡುವೆನೆಂಬ ಕಾರಣಕ್ಕಾಗಿ ಅಲ್ಲ - ಇಲ್ಲವೇ ನನ್ನ ಪಾಪಗಳಿಗಾಗಿ ಪಶ್ಚಾತ್ತಾಪ ಪಟ್ಟಿರುವೆನೆಂಬುದಕ್ಕಾಗಿಯೂ ಅಲ್ಲ - ದೇವರ ಆತ್ಮನು ನಾನು ನೀತಿವಂತನೆಂಬುದಾಗಿ ನಿರ್ಣಯಿಸ ಲ್ಪಟ್ಟಿರುವುದನ್ನು ಕತ್ತಲೆಯನ್ನು ಛೇದಿಸಿ, ಸರ್ವ ಪ್ರಕಾಶದ ಬೆಳಕಿನಲ್ಲಿ ಇದನ್ನು ಬಹಿರಂಗಪಡಿಸುತ್ತಾನೆ. ನಾನು ಹೇಗೆ ರಕ್ಷಿಸಲ್ಪಟ್ಟೆನೆನ್ನುವುದು ನನಗೆ ತಿಳಿಯದೆ ಇದ್ದರೂ, ನಾನು ರಕ್ಷಣೆ ಹೊಂದಿದ್ದೇನೆಂಬುದನ್ನು ನಾನು ತಿಳಿದಿದ್ದೇನೆ.

ದೇವರು ಮಾಡಿದ ರಕ್ಷಣಾ ಕಾರ್ಯವು ಮಾನವನ ತರ್ಕಗಳಿಗೆ ಸರಿ ಹೊಂದಲಾರದು, ಅದು ಯೇಸುಕ್ರಿಸ್ತನ ತ್ಯಾಗಮಯ ಮರಣದ ಮೇಲೆ ನೆಲೆಗೊಂಡಿದೆ. ಯೇಸುಕ್ರಿಸ್ತನು ಮಾಡಿದ ಪಾಪ ನಿವಾರಣೆಯ ಮೂಲಕ ಮಾತ್ರವೇ ನಾವು ಹೊಸದಾಗಿ ಹುಟ್ಟುತ್ತೇವೆ. ಪಾಪಿಗಳಾದ ಸ್ತ್ರೀ, ಪುರುಷರೆಲ್ಲರೂ ನೂತನ ಸೃಷ್ಟಿಗಳಾಗಿ ಬದಲಾಯಿಸಲ್ಪಡುತ್ತಾರೆ, ಅದು ಅವರ ಪಶ್ಚಾತ್ತಾಪದ ಕಾರಣ ದಿಂದ ಅಲ್ಲ, ಅಥವಾ ಅವರ ನಂಬಿಕೆಯಿಂದಲೂ ಅಲ್ಲ, ಆದರೆ ನಮ್ಮ ಎಲ್ಲಾ ಅನುಭವಗಳಿಗಿಂತ ಮೊದಲೇ ಕ್ರಿಸ್ತಯೇಸುವಿನಲ್ಲಿ ದೇವರು ಮಾಡಿದ ಅತ್ಯಮೋಘವಾದ ಕಾರ್ಯದ ಮೂಲಕವೇ (2 ಕೊರಿಂಥ 5:17-19 ನೋಡಿರಿ). ನೀತಿವಂತನೆಂಬ ನಿರ್ಣಯಕ್ಕೂ ಮತ್ತು ರಕ್ಷಣೆಗೂ ಸುರಕ್ಷತೆಯು ಸ್ವತಃ ದೇವರೇ ಆಗಿದ್ದಾನೆ. ಈ ಕಾರ್ಯಗಳನ್ನು ನಮ್ಮಷ್ಟಕ್ಕೆ ನಾವೇ ಮಾಡಲು ಮುಂದಾಗಬಾರದು; ಅವೆಲ್ಲವುಗಳನ್ನು ಯೇಸು ಕ್ರಿಸ್ತನು ಮಾಡಿದ ಪ್ರಾಯಶ್ಚಿತ್ತವು ನೆರವೇರಿಸಿ ಬಿಟ್ಟಿದೆ. ದೇವರ ಅದ್ಭುತ ಕಾರ್ಯದಿಂದ, ಅಲೌಕಿಕವಾದದ್ದು ಲೌಕಿಕವಾಗಿದೆ; ಯೇಸುಕ್ರಿಸ್ತನು ಆಗಲೇ ಮಾಡಿ ಮುಗಿಸಿರುವುದು ಗ್ರಹಿಸಲ್ಪಟ್ಟಿದೆ ''ತೀರಿತು'' (ಯೋಹಾನ 19:30)

# ಬದಲಿಡುವುದು (ಒಬ್ಬನ ಬದಲಿಗೆ ಬೇರೊಬ್ಬನು)

**''ನಾವು ದೇವರಿಗೆ ಸಮರ್ಪಕರಾದ ನೀತಿಸ್ವರೂಪಿಗಳಾಗುವಂತೆ ದೇವರು ಪಾಪಜ್ಞಾನವಿಲ್ಲದ ಆತನನ್ನು ನಮಗೋಸ್ಕರ ಪಾಪಸ್ವರೂಪಿಯಾಗುವಂತೆ ಮಾಡಿದನು'' - (2 ಕೊರಿಂಥ 5:21)**

ಯೇಸುಸ್ವಾಮಿಯು ನಮ್ಮ ಮೇಲೆ ಅನುಕಂಪವುಳ್ಳವನಾದ್ದರಿಂದ ನಮ್ಮ ಪಾಪಗಳಿಗಾಗಿ ಮರಣ ಹೊಂದಿದನೆಂಬುದು ಆಧುನಿಕ ದೃಷ್ಟಿಕೋನವಾಗಿದೆ. ಹೊಸ ಒಡಂಬಡಿಕೆಯ ದೃಷ್ಟಿಯಲ್ಲಿ ಆತನು ನಮ್ಮ ಪಾಪಗಳನ್ನು ತನ್ನ ಮೇಲೆ ಹೊತ್ತುಕೊಂಡದ್ದು, ನಮ್ಮ ಮೇಲೆ ಆತನಿಗಿದ್ದ ಅನುಕಂಪದಿಂದ ಅಲ್ಲ, ಆದರೆ ಪಾಪಿಗಳಾದ ನಮ್ಮೊಂದಿಗೆ ತನ್ನನ್ನು ಗುರುತಿಸಿಕೊಂಡಿದ್ದರಿಂದಲೇ. ದೇವರು ಆತನನ್ನು ''ಪಾಪಸ್ವರೂಪಿ ಯಾಗುವಂತೆ ಮಾಡಿದನು''. ಯೇಸುಕ್ರಿಸ್ತನ ಮರಣದ ಮೂಲಕ ನಮಗೆ ಪಾಪವಿಮೋಚನೆಯಾಯಿತು, ಆತನ ಮರಣಕ್ಕೆ ಕೊಡುವ ವಿವರಣೆ, ಹೀಗಿದೆ - ಆತನು ತನ್ನ ತಂದೆಯಾದ ದೇವರಿಗೆ ವಿಧೇಯ ನಾದ್ದರಿಂದಲೇ ಹೊರತು, ನಮ್ಮ ಮೇಲಿನ ಅನುಕಂಪದಿಂದ ಅಲ್ಲ. ನಾವು ದೇವರಿಗೆ ವಿಧೇಯರಾಗಿರುವುದರಿಂದಲೂ ಅಲ್ಲ, ಅಥವಾ ನಮ್ಮ ಸಂಗತಿಗಳನ್ನು ಬಿಟ್ಟು ಕೊಡುವೆವೆಂಬ ನಮ್ಮ ಪ್ರತಿಜ್ಞೆಗಳಿಂದಾಗಿಯೂ ಅಲ್ಲ, ಅದು ಕ್ರಿಸ್ತನ ಮರಣದಿಂದಲೇ ಹೊರತು ಮತ್ಯಾವುದರಿಂದಲೂ ಅಲ್ಲ. ಅದೇ ದೃಷ್ಟಿಕೋನದಂತೆ ದೇವರ ಪಿತೃತ್ವವನ್ನು ಮತ್ತು ಆತನ ದಯಾಭರಿತ ಪ್ರೀತಿಯನ್ನು ಪ್ರಕಟಿಸುವುದಕ್ಕೆ ಯೇಸುಕ್ರಿಸ್ತನು ಈ ಲೋಕಕ್ಕೆ ಬಂದನು ಎಂದು ನಾವು ಹೇಳುತ್ತೇವೆ; ಆದರೆ ಹೊಸ ಒಡಂಬಡಿಕೆಯು ಹೇಳುವುದೇನೆಂದರೆ, ಲೋಕದ ಪಾಪವನ್ನು ಹೊತ್ತುಕೊಂಡು ಹೋಗಲು ಯೇಸುಕ್ರಿಸ್ತನು ಬಂದನು ಎಂದು. (ಯೋಹಾ 11:29) ಯಾರ್ಯಾರಿಗೆ ಯೇಸುಕ್ರಿಸ್ತನು ರಕ್ಷಕನೆಂದು ಪರಿಚಯವುಂಟಾಯಿತೋ, ಅವರಿಗೆ ತನ್ನ ದೇವರ ಪಿತೃತ್ವವು ಪ್ರಕಟವಾಗುತ್ತದೆ. ತಾನೇ ತನ್ನ ತಂದೆಯನ್ನು ಪ್ರಕಟಪಡಿಸಿದನು ಎಂಬುದಾಗಿ ತನ್ನನ್ನು ಕುರಿತು ಯೇಸುವು ಎಂದಿಗೂ ಹೇಳಿ ಕೊಳ್ಳಲಿಲ್ಲ, ಆದರೆ ಆತನು ತಾನು ಮುಗ್ಗರಿಸುವ ಕಲ್ಲು ಆಗಿದ್ದೇನೆಂಬುದಾಗಿ ತನ್ನ ವಿಷಯದಲ್ಲಿ ಹೇಳಿಕೊಂಡನು. ಯೋಹಾನ 14:19ನೇ ವಚನವು ಆತನ ಶಿಷ್ಯರಿಗೆ ಹೇಳಲ್ಪಟ್ಟಿತು (ಯೋಹಾನ 15:22-24 ನೋಡಿರಿ)

ಅಂಥಾ ಕ್ರಿಸ್ತನು ನನಗಾಗಿ ಸತ್ತನು, ಆದ್ದರಿಂದ ನಾನು ಪಾಪಮಾಡಿದ್ದರೂ, ಅದರ ದಂಡನೆ ಯಿಂದ ತಪ್ಪಿಸಿಕೊಂಡೆನು, ಎಂಬುದಾಗಿ ಹೊಸ ಒಡಂಬಡಿಕೆಯು ನಮಗೆ ಬೋಧಿಸುವುದೇ ಇಲ್ಲ. ಅದು ಬೋಧಿಸುವುದೇನೆಂದರೆ ''ಆತನು ಎಲ್ಲರಿಗೋಸ್ಕರ ಸತ್ತನು'' (2 ಕೊರಿಂಥ 5:15) ನನ್ನ ಮರಣವನ್ನು ಆತನು ಸತ್ತನು ಎಂಬುದಾಗಿ ಅಲ್ಲ, ನಾನು ಆತನ ಮರಣದಲ್ಲಿ ಗುರುತಿಸಿಕೊಂಡರೇ ನಾನು ನನ್ನ ಪಾಪಗಳಿಂದ ಬಿಡುಗಡೆಯಾಗಬಲ್ಲೆನು ಮತ್ತು ಯೇಸುಕ್ರಿಸ್ತನು ತನ್ನ ನೈತಿಕತೆಯನ್ನು ನನಗೆ ದಯ ಪಾಲಿಸುವನು ಎಂಬುದೇ ಆ ಬೋಧನೆ. ಹೊಸ ಒಡಂಬಡಿಕೆಯ ಬೋಧನೆಯಲ್ಲಿ 'ಬದಲಿಡುವಿಕೆ'ಯು ಎರಡು ವಿಷಯಗಳಾಗಿ ವಿವರಿಸಲ್ಪಟ್ಟಿದೆ. ''ನಾವು ದೇವರಿಗೆ ಸಮರ್ಪಕರಾದ ನೀತಿ ಸ್ವರೂಪಿಗಳಾಗುವಂತೆ ದೇವರು ಪಾಪಜ್ಞಾನವಿಲ್ಲದ ಆತನನ್ನು ನಮಗೋಸ್ಕರ ಪಾಪ ಸ್ವರೂಪಿ ಯಾಗುವಂತೆ ಮಾಡಿದನು.'' ಎರಡನೆಯದು ಕ್ರಿಸ್ತನು ನನ್ನೊಳಗೆ ರೂಪುಗೊಳ್ಳುವುದನ್ನು ನಾನು ನಿರ್ಧರಿಸದೇ ಇರುವ ತನಕ ಯೇಸು ಕ್ರಿಸ್ತನು ನನಗಾಗಿ ಲಭ್ಯವಿಲ್ಲ.

# ನಂಬಿಕೆ

**''ನಂಬಿಕೆಯಿಲ್ಲದೆ ದೇವರನ್ನು ಮೆಚ್ಚಿಸುವುದು ಅಸಾಧ್ಯ'' – (ಇಬ್ರಿ 11:6)**

ಸಾಮಾನ್ಯಜ್ಞಾನವು ವಿರೋಧಿಸುವಿಕೆಯಲ್ಲಿ ನಂಬಿಕೆಯಿಟ್ಟರೆ ಅದು ಮತಾಂಧತೆ, ನಂಬಿಕೆಯನ್ನು ವಿರೋಧಿಸುವುದರಲ್ಲಿ ಸಾಮಾನ್ಯ ಜ್ಞಾನವು ನಂಬಿಕೆ ಇಟ್ಟರೆ ಅದು ವಿಚಾರವಾದವಾಗುತ್ತದೆ. ನಂಬಿಕೆಯ ಜೀವಿತವು ಇವೆರಡರನ್ನೂ ಸಮರ್ಪಕ ಸಂಬಂಧದಲ್ಲಿ ತರುತ್ತದೆ. ಲೌಕಿಕ ಜ್ಞಾನವು ನಂಬಿಕೆಯಲ್ಲ, ನಂಬಿಕೆಯು ಲೌಕೀಕ ಜ್ಞಾನವಲ್ಲ; ಸ್ವಾಭಾವಿಕತೆ ಮತ್ತು ಆಧ್ಯಾತ್ಮೀಕತೆ ಹೇಗೋ ಹಾಗೆಯೇ ಇವುಗಳ ಸಂಬಂಧ; ಭಾವ ಪ್ರಚೋದನೆ ಮತ್ತು ದೈವ ಪ್ರೇರಣೆಗಳಂತೆಯೇ ಇದು ಒಂದು ಸಂಬಂಧ. ಯೇಸುಕ್ರಿಸ್ತನು ಬೋಧಿಸಿದವುಗಳ್ಯಾವೂ ಲೌಕಿಕ ಜ್ಞಾನವಾಗಿರಲಿಲ್ಲ, ಅದು ದೈವ ಜ್ಞಾನದ ಬಹಿರಂಗ ಪ್ರಜ್ಞೆ ಮತ್ತು ಸಾಮಾನ್ಯ ಜ್ಞಾನವು ತಲುಪಲಾರದ ತೀರಗಳಿಗೆ ಅದು ತಲುಪುತ್ತದೆ. ಸಾಮಾನ್ಯಜ್ಞಾನಕ್ಕೆ ಅಷ್ಟು ಸಾಧ್ಯವಾಗುವುದಿಲ್ಲ. ವಿಶ್ವಾಸದ ನಿಜತ್ವವು ನಮ್ಮ ಜೀವಿತದಲ್ಲಿ ವಾಸ್ತವವಾಗುವ ಮೊದಲೇ ನಂಬಿಕೆಯನ್ನು ಪರೀಕ್ಷಿಸಿ ನೋಡಬೇಕು. ''ಎಲ್ಲಾ ಕಾರ್ಯಗಳೂ ಅನುಕೂಲವಾಗುತ್ತವೆ ಎಂದು ನಮಗೆ ಗೊತ್ತದೆ'', (ರೋಮಾ 8:28) ಹಾಗಿದ್ದ ಮೇಲೆ ನಮಗೆ ಏನೇ ಸಂಭವಿಸಲಿ ಅದು ನಮಗೆ ಸಂಬಂಧವಿಲ್ಲ, ಆದರ್ಶವೆನಿಸುವ ವಿಶ್ವಾಸವು ನಮ್ಮ ನಿಜ ಜೀವನದಲ್ಲಿ ಸ್ವಾಭಾವಿಕವಾಗಿ ಮಾರ್ಪಾಟು ಹೊಂದುವುದೇ ದೇವರ ತತ್ವವಾಗಿದೆ. ನಂಬಿಕೆಯು ಸದಾ ನಮ್ಮ ವೈಯಕ್ತಿಕ ದೃಷ್ಟಿಕೋನದಲ್ಲಿ ಕಾರ್ಯಸಾಧಿಸುತ್ತದೆ. ತನ್ನ ಮಕ್ಕಳ ಜೀವಿತದಲ್ಲಿ ಆದರ್ಶಕರವಾದ ನಂಬಿಕೆಯು ಸ್ವಾಭಾವಿಕವೂ ನೈಜವೂ ಆಗಬೇಕೆಂಬುದೇ ದೇವರ ಉದ್ದೇಶ.

ಲೌಕೀಕ ಜ್ಞಾನ ಜೀವಿತದ ಪ್ರತಿಯೊಂದು ಸಂಗತಿಗಳಲ್ಲಿರುವ ದೇವರ ಸತ್ಯಾರ್ಥಗಳ ತಿಳಿಯಪಡಿಸುವಿಕೆ ಸದಾ ಇದ್ದೇ ಇರುತ್ತದೆ ಮತ್ತು ಆ ಮೂಲಕ ದೇವರು ಏನಾಗಿರುವನೆಂದು ನಾವು ನಂಬಿರುವೆವೋ ಅದನ್ನು ನಮ್ಮ ನಿಜ ಅನುಭವಗಳಲ್ಲಿ ಸಿದ್ಧಮಾಡಿ ತೋರಿಸ ಬಲ್ಲೆವು. ನಂಬಿಕೆಯು ಅತ್ಯಧಿಕವಾದ ಕ್ರಿಯಾಶೀಲ ಸೂತ್ರವಾಗಿದ್ದು , ಅದು ಯೇಸುಕ್ರಿಸ್ತನನ್ನು ಸದಾ ಪ್ರಥಮವಾಗಿ ತನ್ನ ಮುಂದಿಟ್ಟು ಕೊಂಡಿರುತ್ತದೆ. ''ನನ್ನ ಪ್ರಭುವೇ, ಅದು ಹೀಗೆ ಅದು ಹಾಗೆ ಎಂದು ನೀನೆ ಹೇಳಿರುವಿ. ಅದು ಹುಚ್ಚುತನದ್ದೆಂದೂ ಕಾಣಿಸಿದರೂ ನಿನ್ನ ವಾಕ್ಯಗಳ ಮೇಲೆ ನಂಬಿಕೆಯಿಟ್ಟು ಕಾರ್ಯೋನ್ಮುಖವಾಗುವೆನು'' ಎಂದು ನಂಬಿಕೆಯ ಜೀವಿತವು ಹೇಳುತ್ತದೆ (ಮತ್ತಾಯ 6:33 ನೋಡಿರಿ). ನಮ್ಮ ಬೌದ್ಧಿಕ ವಿಶ್ವಾಸವನ್ನು ನನ್ನ ಸ್ವಂತ ಸೊತ್ತಾಗಿ ಮಾರ್ಪಡಿಸುವುದು – ಕೆಲವೊಂದು ವೇಳೆಯಲ್ಲಿ ಮಾತ್ರವಲ್ಲ – ಸದಾಕಾಲಕ್ಕೂ ಅದು ಹೋರಾಟವೇ. ನಮ್ಮ ನಂಬಿಕೆಯಲ್ಲಿ ನಮ್ಮನ್ನು ಜ್ಞಾನಿಗಳನ್ನಾಗಿ ಮಾಡಲು ದೇವರು ತಕ್ಕದಾದ ಸನ್ನಿವೇಶಗಳಲ್ಲಿ ನಮ್ಮನ್ನು ತಂದಿರಿಸುತ್ತಾನೆ, ಯಾಕೆಂದರೆ ನಂಬಿಕೆಯ ಉದ್ದೇಶವನ್ನು ನಮ್ಮ ನಿಜ ಜೀವನದಲ್ಲಿ ವಾಸ್ತವಗೊಳಿಸಲು ಯೇಸುಕ್ರಿಸ್ತನನ್ನು ನಾವು ಅರಿತುಕೊಳ್ಳುವವರೆಗೆ, ದೇವರು ನಮಗೆ ಕೇವಲ ಕಲ್ಪನಾ ಮೂರ್ತಿಯಾಗಿರುತ್ತಾನೆ. ಆತನಲ್ಲಿ ನಂಬಿಕೆಯಿಡಲು ನಮಗೆ ಅಸಾಧ್ಯ. ಯೇಸುಕ್ರಿಸ್ತನು ''ನನ್ನನ್ನು ನೋಡಿದವನು ನನ್ನ ತಂದೆಯನ್ನು ನೋಡಿದ್ದಾನೆ'' ಎಂದು ಹೇಳುವುದನ್ನು ಕೇಳಿದ ಕೂಡಲೇ ಆ ಕಲ್ಪನೆಯು ವಾಸ್ತವವಾಗುತ್ತದೆ (ಯೋಹಾ 14:9) ಮತ್ತು ನಮ್ಮ ನಂಬಿಕೆಯು ಮಿತಿ ರಹಿತವಾಗುತ್ತದೆ. ಯೇಸುಕ್ರಿಸ್ತನ ಆತ್ಮನ ಬಲದಿಂದ ಮನುಷ್ಯನು ಸಂಪೂರ್ಣವಾಗಿ ದೇವರಿಗೆ ಸಮರ್ಪಕನಾಗಿರುವುದೇ ನಂಬಿಕೆ.

# ನಂಬಿಕೆಯ ವಿವೇಚನೆ

**''ಸಾಸಿವೆ ಕಾಳಿನಷ್ಟು ನಂಬಿಕೆ'' - (ಮತ್ತಾಯ 17:20)**

ದೇವರಲ್ಲಿ ನಾವಿಟ್ಟಿರುವ ನಂಬಿಕೆಯ ವಿವೇಚನೆಗೆ ದೇವರು ನಮಗೆ ಪ್ರತಿಫಲವನ್ನು ಕೊಡುವನೆಂಬ ಕಲ್ಪನೆ ನಮಗಿದೆ, ನಂಬಿಕೆಯನ್ನಿಡುವ ಪ್ರಾಥಮಿಕ ಹಂತದಲ್ಲಿ ಹಾಗಿರುವುದು ಸಹಜವೇ; ಆದರೆ ನಂಬಿಕೆಯ ಮೂಲಕ ನಾವೇನನ್ನೂ ಸಂಪಾದಿಸುವುದಿಲ್ಲ. ನಂಬಿಕೆಯು ನಮ್ಮನ್ನು ದೇವರಿಗೆ ಸಮರ್ಪಕರಾಗಿರುವಂತೆ ಮಾಡುತ್ತದೆ ಹಾಗೂ ನಮ್ಮಲ್ಲಿ ಕಾರ್ಯ ಸಾಧಿಸಲು ದೇವರಿಗೆ ಅವಕಾಶ ವನ್ನೊದಗಿಸುತ್ತದೆ. ನೀನು ದೇವರ ಸಂತನಾಗಿದ್ದರೆ, ಆತನು ನಿನ್ನನ್ನು, ತನ್ನ ಸಂಪರ್ಕದಲ್ಲಿ ಬರಮಾಡಿ ಕೊಳ್ಳಲು, ನೀನು ಆಧಾರ ಮಾಡಿ ಕೊಂಡಿರುವ ನಿನ್ನ ಅನುಭವಗಳು ನಿರುಪಯುಕ್ತವೆಂದು ತೋರಿಸಲು ದೇವರು ಪದೇ ಪದೇ ನಿನ್ನನ್ನು ಜಜ್ಜುವನು. ಅದೇ ನಂಬಿಕೆಯ ಜೀವಿತವೆಂದು ಗ್ರಹಿಸಬೇಕಲ್ಲದೆ, ದೇವರ ಆಶೀರ್ವಾದಗಳನ್ನು ಅನುಭೋಗಿಸುವ ಭಾವೋದ್ವೇಗದ ಜೀವಿತವು, ಜೀವಿತವಲ್ಲವೆಂದು ನೀನು ಗ್ರಹಿಸಬೇಕೆಂಬುದನ್ನೇ ದೇವರು ಬಯಸುತ್ತಾನೆ. ನಂಬಿಕೆಯನ್ನಿಡುವ ಪ್ರಾರಂಭದಲ್ಲಿ ನಿನ್ನ ನಂಬಿಕೆಯ ಜೀವಿತವು ತುಂಬಾ ಸಂಕುಚಿತವಾಗಿಯೂ, ಉತ್ಕಟವಾಗಿಯೂ, ಇದ್ದುದರಿಂದ ಸೌರಕಲೆಯ ಸುತ್ತಲಿರುವ ಬೆಳಕಿನಂತೆ, ನಿನಗಾದ ಒಂದು ಚಿಕ್ಕ ಅನುಭವದ ಮೇಲೆ ನಿನಗೆಷ್ಟು ನಂಬಿಕೆ ಇತ್ತೋ, ಅಷ್ಟೇ ಭಾವೋದ್ವೇಗವೂ ಇದ್ದುದರಿಂದ ಅದು ನಿನಗೆ ಪ್ರಕಾಶ ಮಾನವಾಗಿಯೂ ಸುಮಧುರವಾಗಿಯೂ, ಕಾಣುತ್ತಲಿತ್ತು; ಆ ಮೇಲೆ ದೇವರು ನಿನ್ನನ್ನು ''ನಂಬುವ ವರಾಗಿ ನಡೆಯುವಂತೆ'' (2 ಕೊರಿಂಥ 5:7) ಕಲಿಸಿಕೊಡಲು ಪ್ರಜ್ಞಾಪೂರ್ವಕವಾಗಿದ್ದಂಥ ತನ್ನ ಆಶೀರ್ವಾದಗಳನ್ನು ಹಿಂದಕ್ಕೆ ತೆಗೆದುಕೊಂಡು ಬಿಟ್ಟನು. ಪ್ರಜ್ಞಾನಂದದ ಮತ್ತು ರೋಮಾಂಚಕರ ಸಾಕ್ಷಿಯ ಹಿಂದಿನ ದಿನಗಳಿಗಿಂತಲೂ, ಈಗ ನೀನು ದೇವರಿಗೆ ಬಹುಬೆಲೆಯುಳ್ಳ ವನಾಗಿರುವಿ.

ನಂಬಿಕೆಯ ಸ್ವಭಾವವನ್ನು ಪರೀಕ್ಷಿಸಬೇಕು, ದೇವರಲ್ಲಿ ನಂಬಿಕೆಯನ್ನಿಡುವುದು ಬಹು ಕಷ್ಟಕರವೆಂದು ಕಂಡುಕೊಳ್ಳುವುದು ನಂಬಿಕೆಯ ನಿಜ ಪರೀಕ್ಷೆಯಲ್ಲ. ದೇವರ ಸ್ವಭಾವದ ವಿಷಯವಾಗಿ ನಮ್ಮ ಮನಸ್ಸಿನಲ್ಲಿ ಯಾವ ಅನುಮಾನವು ಇಲ್ಲದೆ, ಅದು ವಿಶ್ವಾಸನೀಯವೆಂದು ಕಂಡುಕೊಳ್ಳುವುದೇ ಆ ಪರೀಕ್ಷೆ. ವಿಶ್ವಾಸವು ನಮ್ಮ ನಿಜ ಜೀವಿತದಲ್ಲಿ ವಾಸ್ತವವಾಗಿ ಕಾರ್ಯಗತವಾಗಬೇಕಾದರೆ, ಅದು ಸತತವಾದ ಏಕಾಂತದ ಸಮಯದಲ್ಲಿ ಸಾಗಿಹೋಗಬೇಕು ಮತ್ತು ಜೀವಿತದ ಸಾಮಾನ್ಯ ಶಿಕ್ಷಣದ ಹಾಗೆ ನಂಬಿಕೆಯ ಪರೀಕ್ಷೆಯನ್ನು ಸೀಮಿತಗೊಳಿಸಬಾರದು. ನಾವು ಯಾವುದನ್ನು ವಿಶ್ವಾಸದ ಪರೀಕ್ಷೆ ಯೆನ್ನುತ್ತೇವೆಯೋ ಅದೇ ನಾವು ಜೀವಿಸುತ್ತಿದ್ದೇವೆಂಬುದರ ಅನಿವಾರ್ಯವಾದ ಫಲಿತಾಂಶ ವಾಗಿದೆ. ಸತ್ಯವೇದದ ಪ್ರಕಾರ ನಂಬಿಕೆಯೆಂದರೆ ದೇವರನ್ನು ಪ್ರತಿರೋಧಿಸುವಂಥವುಗಳೆಲ್ಲವುಗಳಿಗೆ ವಿರುದ್ಧ ವಾಗಿ ಜೀವಿಸುವುದೇ; ದೇವರ ಸ್ವಭಾವವು ಹೇಗೇ ಇರಲಿ ಎಂತಾದರೂ ಇರಲಿ, ಏನು ಬೇಕಾದರೂ ಆತನು ನನಗೆ ಮಾಡಲಿ ನಾನು ಮಾತ್ರ ದೇವರಿಗೆ ನಿಷ್ಠೆಯುಳ್ಳವನಾಗಿರುತ್ತೇನೆ. ''ಆತನು ನನ್ನನ್ನು ಕೊಲ್ಲುವನು ಅದಕ್ಕಾಗಿ ಕಾದಿರುವೆನು'' (ಯೊಬ 13:15) ಸತ್ಯ ವೇದದಲ್ಲಿ ನಂಬಿಕೆಯನ್ನು ಕುರಿತು ಹೇಳಿರುವ ಅತ್ಯಂತ ಉದಾತ್ತವಾದ ಹೇಳಿಕೆಯೇ ಈ ವಾಕ್ಯವಾಗಿದೆ.

# ನೀವು ನಿಮ್ಮ ಸ್ವಂತ ಸೊತ್ತಲ್ಲ

**''ನಿಮಗೆ ತಿಳಿಯದೋ ? ... ನೀವು ನಿಮ್ಮ ಸ್ವಂತ ಸೊತ್ತಲ್ಲ.'' - (ಕೋರಿಂಥ 6:19)**

ಯೇಸುಕ್ರಿಸ್ತನ ಶ್ರಮೆಯಲ್ಲಿ ಸಹ ಭಾಗಿಯಾದ ಪುರುಷನಿಗಾಗಲೀ ಸ್ತ್ರೀಗಾಗಲೀ ಪ್ರಪಂಚ ದೊಳಗೊಂದು ಪ್ರಪಂಚವೆನ್ನುವ ಬಾಹ್ಯ ಜಗತ್ತಿನಿಂದ ತನ್ನನ್ನು ತಾನು ಅಡಗಿಸಿಕೊಳ್ಳಬಹುದಾದ, ತಮ್ಮದೇ ಆದ ಖಾಸಗಿ ಜೀವಿತವೆನ್ನುವುದೊಂದಿಲ್ಲ, ದೇವರು ತನ್ನ ಭಕ್ತನ ಖಾಸಗಿ ಜೀವಿತವನ್ನು ಇಬ್ಭಾಗವಾಗಿ ಸೀಳಿ ಒಂದನ್ನು ಪ್ರಾಪಂಚಿಕ ಜೀವಿತಕ್ಕಾಗಿಯೂ ಇನ್ನೊಂದನ್ನು ತನಗಾಗಿಯೂ ಇರುವ ಹೆದ್ದಾರಿ ಯನ್ನಾಗಿ ಮಾಡುತ್ತಾನೆ. ಯೇಸುಕ್ರಿಸ್ತನೊಂದಿಗೆ ಪೂರ್ಣವಾಗಿ ಗುರುತಿಸಿಕೊಳ್ಳದ ಯಾವ ಮಾನವನೂ ಇದನ್ನು ತಾಳಲಾರನು. ನಮ್ಮ ಸ್ವಂತಕ್ಕಾಗಿ ನಾವು ಪವಿತ್ರೀಕರಿಸಲ್ಪಟ್ಟಿಲ್ಲ. ನಾವು ದೇವರ ಸುವಾರ್ತೆಯ ಸಹಭಾಗಿಗಳಾಗಿರುವುದಕ್ಕೆ ಕರೆಯಲ್ಪಟ್ಟಿದ್ದೇವೆ ಮತ್ತು ನಮಗೆ ಸಂಬಂಧವಿಲ್ಲವೇನೋ ಎಂಬಂತೆ ಕಾಣಬರುವ ಸಂಗತಿಗಳು ಘಟಿಸುತ್ತವೆ. ದೇವರು ನಮ್ಮನ್ನು ತನ್ನ ಅನ್ಯೋನ್ಯತೆಯಲ್ಲಿರಿಸಿಕೊಳ್ಳಲು ಕರೆದೊಯ್ಯುತ್ತಿದ್ದಾನೆ. ದೇವರು ತನ್ನ ದಾರಿದಲ್ಲಿ ಮುಂದೆ ಸಾಗಲು ಬಿಟ್ಟುಬಿಡಬೇಕು. ನೀನು ಅವಕಾಶ ಮಾಡಿಕೊಡದಿದ್ದರೆ ದೇವರು ಈ ಲೋಕದಲ್ಲಿ ಮಾಡುತ್ತಿರುವ ಪಾಪ ವಿಮೋಚನ ಕಾರ್ಯದಲ್ಲಿ ನೀನು ಅಲ್ಪವಾದರೂ ಉಪಯೋಗವಾಗುವದರ ಬದಲು ನೀನು ಆ ಕಾರ್ಯಕ್ಕೆ ಅಡ್ಡಿಯೂ, ನಡೆದಾಟಕ್ಕೆ ತೊಡರುವ ಕೊರಡು ಆಗಿರುವೆ.

ದೇವರು ಲೋಕವಿಮೋಚನಾ ಕಾರ್ಯದ ತನ್ನ ಉದ್ದೇಶವನ್ನು ನಮ್ಮೊಳಗೆ, ತನ್ನಿಚ್ಛೆಯಂತೆ ಸಾಧಿ ಸುತ್ತಿರುವವರೆಗೂ ಮತ್ತು ಅದರಿಂದ ವ್ಯಕ್ತಿಗತವಾಗಿ ನಮಗೇನಾಗುವುದೋ ಎಂಬುದನ್ನು ನಾವು ಇನ್ನು ಮುಂದೆ ಚಿಂತಿಸದಂತಾಗುವ ತನಕ, ನಮ್ಮನ್ನು ಸತ್ಯದ ವಾಸ್ತವಿಕ ನೆಲಗಟ್ಟಿನ ಮೇಲೆ ಭದ್ರಗೊಳಿಸುವುದೇ ಆತನು ಮಾಡುವ ಮೊದಲ ಕಾರ್ಯ. ನಾವೇಕೆ ಹೃದಯ ವೇದನೆಗೊಳಗಾಗಬಾರದು ? ಇಂಥಾ ಹೃದಯವೇದನೆಯ ದ್ವಾರಗಳ ಮೂಲಕವೇ ತನ್ನ ಮಗನ ಅನ್ಯೋನ್ಯತೆಯಲ್ಲಿ ನಾವು ಸೇರುವಂತೆ ಬಾಗಿಲುಗಳನ್ನು ತೆರೆಯುತ್ತಿದ್ದಾನೆ. ಆದರೆ ವೇದನೆಯ ಮೊದಲ ಹಿಡಿತಕ್ಕೆ ನಮ್ಮಲ್ಲಿ ಅನೇಕರು ಆಯ ತಪ್ಪಿ ಕುಸಿದು ಬೀಳುತ್ತಾರೆ; ನಾವು ದೇವರ ಉದ್ದೇಶದ ದ್ವಾರದ ಹೊಸ್ತಿಲು ಮೇಲೆ ಕುಳಿತು ಸ್ವಾನುಕಂಪದಲ್ಲಿಯೇ ಸಾಯುತ್ತೇವೆ ಮತ್ತು ಜನರು ಹೇಳುವ ಕ್ರಿಸ್ತೀಯ ಅನುಕಂಪವು ನಮ್ಮನ್ನು ಬೇಗನೇ ಮರಣದ ಹಾಸಿಗೆಗೊಯ್ಯಲು ಸಹಾಯ ಮಾಡುತ್ತದೆ. ದೇವರು ಹೀಗೆ ಮಾಡುವುದಿಲ್ಲ. ಮೊಳೆಗಳು ತೂರಿಹೋದ ತನ್ನ ಮಗನ ಹಸ್ತದ ಹಿಡಿತವನ್ನು ನಮ್ಮ ಮೇಲಿರಿಸಿ ನಮ್ಮ ಬಳಿಗೆ ಬಂದು ಹೀಗೆ ಹೇಳುವನು - ''ನನ್ನ ಅನ್ಯೋನ್ಯತೆಯೊಳಗೆ ಪ್ರವೇಶಿಸಿರಿ, ಎದ್ದು ನಿಲ್ಲಿರಿ, ಪ್ರಕಾಶಿಸಿರಿ'' ಸೀಳಲ್ಪಟ್ಟ ಹೃದಯದ ಮೂಲಕ ತನ್ನ ಉದ್ದೇಶವನ್ನು ಲೋಕದಲ್ಲಿ ಆತನು ಸಾಧಿಸುತ್ತಿದ್ದರೆ ನಿನ್ನ ಹೃದಯವನ್ನು ಸೀಳಿರುವುದಕ್ಕಾಗಿ ಆತನಿಗೆ ಸ್ತೋತ್ರಸಲ್ಲಿಸು.

# ಅಧಿಕಾರ ಮತ್ತು ಸ್ವಾತಂತ್ರ್ಯ

**''ನೀವು ನನ್ನನ್ನು ಪ್ರೀತಿಸುವವರಾದರೆ ನನ್ನ ಆಜ್ಞೆಗಳನ್ನು ಕೈಕೊಂಡು ನಡೆಯುವಿರಿ;''**
**- (ಯೋಹಾನ 14:15)**

ನಮ್ಮ ಪ್ರಭುವು, ವಿಧೇಯತೆಯನ್ನು ಒತ್ತಾಯ ಪಡಿಸುವುದಿಲ್ಲ; ನಾವು ಏನು ಮಾಡಲೇ ಬೇಕಾಗಿದೆಯೋ ಅದನ್ನು ಮಾಡಲು ಸ್ಪಷ್ಟವಾಗಿ ಹೇಳುತ್ತಾನೆ, ಆದರೆ ನಾವು ಅದನ್ನು ಮಾಡಿ ಮುಗಿಸುವಂತೆ ಆತನು ಸಾಧನಗಳೇನನ್ನೂ ಬಳಸುವುದಿಲ್ಲ. ನಮ್ಮ ಆತ್ಮವು ಆತನೊಂದಿಗೆ ಒಂದಾಗಿರುವ ಕಾರಣಕ್ಕಾಗಿ ನಾವು ಆತನಿಗೆ ವಿಧೇಯರಾಗಬೇಕು. ಈ ಕಾರಣದಿಂದಲೇ ನಮ್ಮ ಸ್ವಾಮಿಯವರು ಶಿಷ್ಯತ್ವವನ್ನು ಕುರಿತು ಹೇಳುವಾಗಲೆಲ್ಲಾ ''ಆದರೆ'' ಎನ್ನುವ ಪದವನ್ನು ಪೀಠಿಕೆಯಾಗಿರಿಸಿ ಕೊಂಡಿದ್ದರು - ನೀನು ಇಚ್ಛಿಸದೆ ಹೋದರೆ ನೀನು ಶಿಷ್ಯನಾಗಿರಬೇಕಾಗಿಲ್ಲ. ''ಯಾವನಿಗಾದರೂ ನನ್ನ ಹಿಂದೆ ಬರುವದಕ್ಕೆ ಮನಸ್ಸಿದ್ದರೆ ಅವನು ತನ್ನನ್ನು ನಿರಾಕರಿಸಿ ... ನನ್ನ ಹಿಂದೆ ಬರಲಿ'' (ಲೂಕ 9:23) ಅರ್ಥಾತ್, ನನ್ನ ಮೇಲೆ ನನಗಿರುವ ಸ್ವಾಮಿತ್ವದ ಹಕ್ಕನ್ನು ನಿರಾಕರಿಸಿ, ಅದನ್ನು ಯೇಸುಕ್ರಿಸ್ತನಿಗೆ ಬಿಟ್ಟುಕೊಡಬೇಕು. ನಿತ್ಯ ಜೀವಿತದ ಸ್ಥಾನ ಮಾನಗಳನ್ನು ಕುರಿತು ಸ್ವಾಮಿಯವರು ಇಲ್ಲಿ ಹೇಳುತ್ತಾ ಇಲ್ಲ. ಪ್ರಸ್ತುತದ ವ್ಯವಸ್ಥೆಯಲ್ಲಿ ದಿನನಿತ್ಯದ ಜೀವಿತದಲ್ಲಿ ನೀನೆಷ್ಟರ ಮಟ್ಟಿಗೆ ಆತನಿಗೆ ಯೋಗ್ಯನಾಗಿರುವೆ ಎಂಬುದೇ ಮುಖ್ಯವೆಂದು ಆತನು ಹೇಳುತ್ತಿರುವನು. ಆದ್ದರಿಂದಲೇ ಲೂಕ 14:26 ರಲ್ಲಿ ಆತನು ಬಹು ಕಠಿಣ ಹೃದಯಿ ಎಂಬಂತೆ ಕಂಡು ಬರುತ್ತಾನೆ. ಆದರೆ ಈ ವಾಕ್ಯಗಳನ್ನು ನುಡಿದಾತನನ್ನು ಹೊರಗಿಟ್ಟು, ಈ ವಾಕ್ಯಗಳನ್ನು ಅರ್ಥೈಯಿಸ ಬಾರದು.

ಯೇಸುಪ್ರಭುವು ನನಗೆ ಯಾವುದೇ ಸೂತ್ರಗಳನ್ನು ವಿಧಿಸುವುದಿಲ್ಲ. ತನ್ನ ಸ್ಟ್ಯಾಂಡರ್ಡನ್ನು ಸ್ಪಷ್ಟ ಪಡಿಸುವನು, ಆತನೊಂದಿಗಿರುವ ನನ್ನ ಸಹವಾಸ ಸಂಬಂಧವು ಪ್ರೀತಿಯೇ ಆಗಿದ್ದರೆ, ಆತನ ಆಜ್ಞೆಗಳನ್ನು ಸಂದೇಹ ಪಡದೆ ಕೈಗೊಂಡು ನಡೆಯುತ್ತೇನೆ. ನಾನು ಸಂದೇಹ ಪಟ್ಟರೆ, ಅದಕ್ಕೆ ಕಾರಣ, ಆತನೊಡನೆ ಸ್ಪರ್ದೆ ಗಿಳಿದಿರುವ ಮತ್ತೊಬ್ಬನನ್ನು ನಾನು ಪ್ರೀತಿಸುತ್ತಿರುವೆನು ಆ ಮತ್ತೊಬ್ಬನು ಬೇರೆಯಾರೂ ಅಲ್ಲ; - ''ನಾನೇ'' ತನಗೆ ವಿಧೇಯನಾಗುವಂತೆ ಯೇಸುಕ್ರಿಸ್ತನು ನನಗೆ ಸಹಾಯ ಮಾಡುವುದಿಲ್ಲ, ನಾನೇ ಆತನಿಗೆ ವಿಧೇಯ ನಾಗಬೇಕು; ನಾನು ಯಾವಾಗ ಆತನಿಗೆ ವಿಧೇಯನಾಗುವೆನೋ, ಆಗಲೇ ನಾನು ಆತ್ಮೀಕ ವಿಧಿಯನ್ನು ನೆರವೇರಿಸುತ್ತೇನೆ. ಮುಖ್ಯವಲ್ಲದ ಸಣ್ಣ ಪುಟ್ಟ ಘಟನೆಗಳಿಂದ ನನ್ನ ವೈಯಕ್ತಿಕ ಜೀವಿತವು ತುಂಬಿ ಕಿಕ್ಕಿರ ಬಹುದು, ಅವೆಲ್ಲಾ ಗಣನೀಯವಲ್ಲದವುಗಳೂ, ಕ್ಷುಲ್ಲಕವೂ, ಆಗಿರಬಹುದು, ಆದರೆ ಅಸ್ತವ್ಯಸ್ತವೆಂದು ಕಂಡುಬರುವ ಸನ್ನಿವೇಶಗಳಲ್ಲಿ ನಾನು ಯೇಸುಕ್ರಿಸ್ತನಿಗೆ ವಿಧೇಯನಾದರೆ ಅವುಗಳೇ ದೇವರ ಮುಖವನ್ನು ನಾನು ದೃಷ್ಟಿಸುವ ಸೂಕ್ಷ್ಮರಂದ್ರಗಳಾಗಿ ಮಾರ್ಪಾಟಾಗಿ ಬಿಡುತ್ತವೆ. ನಾನು ದೇವರಿಗೆ ಮುಖಾಮುಖಿ ಯಾಗಿ ನಿಂತುಕೊಂಡಾಗಲೇ ನನ್ನ ವಿಧೇಯತೆಯ ಮೂಲಕ ಸಾವಿರಾರು ಜನರು ದೇವರಿಂದ ಆಶೀರ್ವದಿಸ ಲ್ಪಟ್ಟಿರುವುದನ್ನು ನಾನು ಆಗ ಕಾಣುವೆನು. ದೇವರ ವಿಮೋಚನ ಕಾರ್ಯವು ಒಮ್ಮೆ ಮಾನವನ ಆತ್ಮವನ್ನು ದೇವರಿಗೆ ಪರಿಪೂರ್ಣ ವಿಧೇಯತೆಯನ್ನು ತೋರುವ ಮಟ್ಟಕ್ಕೆ ತಂದರೆ, ಆ ಆತ್ಮವು ಯಾವಾಗಲೂ ಸೃಜನಾತ್ಮಕವಾಗಿರುತ್ತದೆ. ನಾನು ಯೇಸು ಕ್ರಿಸ್ತನಿಗೆ ವಿಧೇಯನಾಗಿ ಬಿಟ್ಟರೆ ದೇವರು ತನ್ನ ವಿಮೋಚನಾ ಕಾರ್ಯವನ್ನು ನನ್ನ ಮೂಲಕವಾಗಿ ಇತರರ ಜೀವಿತದೊಳಕ್ಕೆ ರಭಸದಿಂದ ಪೂರೈಸುವನು. ಯಾಕೆಂದರೆ, ವಿಧೇಯತೆಯ ನಡವಳಿಕೆಗೆ ಆಧಾರವಾಗಿರುವುದು ಸರ್ವಶಕ್ತ ದೇವರ ವಾಸ್ತವವೇ.

# ಯೇಸುಸ್ವಾಮಿಯ ದಾಸನು

**''ಕ್ರಿಸ್ತನೊಂದಿಗೆ ಶಿಲುಬೆಗೆ ಹಾಕಿಸಿ ಕೊಂಡವನಾಗಿದ್ದೇನೆ - ಇನ್ನು ಜೀವಿಸುವವನು ನಾನಲ್ಲ, ಕ್ರಿಸ್ತನು ನನ್ನಲ್ಲಿ ಜೀವಿಸುತ್ತಾನೆ.'' - (ಗಲಾತ್ಯ 2:20)**

ನನ್ನ ಸ್ವಾತಂತ್ರ್ಯವನ್ನು ನಾನೇ ನನ್ನ ಸ್ವಂತ ಕೈಗಳಿಂದ ಒಡೆದು ಪುಡಿ ಮಾಡಿ, ಅದನ್ನು ಯೇಸುಸ್ವಾಮಿಯ ಸರ್ವೋತ್ತಮತೆಗೆ ಶರಣಾಗಿಸುತ್ತೇನೆಂಬುದೇ ಈ ವಾಕ್ಯಗಳ ಅರ್ಥ. ನನಗಾಗಿ ಇದನ್ನು ಬೇರೆ ಯಾರೂ ಮಾಡುವುದಿಲ್ಲ, ಸ್ವತಃ ನಾನೇ ಮಾಡಬೇಕಾಗಿದೆ. ವರ್ಷದಲ್ಲಿ ಮೂನ್ನೂರ ಅರವತ್ತೈದು ಸಲ ದೇವರು ನನ್ನನ್ನು ಇಂಥಾ ಸ್ಥಿತಿಯೊಳಗೆ ಬರಮಾಡುತ್ತಿರಬಹುದಾದರೂ ಅದನ್ನು ಮಾಡುವಂತೆ ನನ್ನನ್ನು ಆತನು ಒತ್ತಾಯಿಸುವುದಿಲ್ಲ-ಅಂದರೆ ನನ್ನ ವ್ಯಕ್ತಿಗತ ಸ್ವಾತಂತ್ರ್ಯದ ಕವಚವನ್ನು ಒಡೆದು ಹಾಕಿ, ನನ್ನ ವ್ಯಕ್ತಿತ್ವವನ್ನೆಲ್ಲಾ ನನ್ನ ಸ್ವಯಂನಿಂದ ವಿಮುಕ್ತಿಗೊಳಿಸಿ ಅದನ್ನು ದೇವರಲ್ಲಿ ಒಂದಾಗಿಸಿಬಿಡುವುದು. ಇದೆಲ್ಲಾ ನನ್ನ ಉದ್ದೇಶಾರ್ಥವಾಗಿ ಅಲ್ಲ, ಅದು ಕೇವಲ ಯೇಸುಸ್ವಾಮಿಯ ನಿಷ್ಠೆಗಾಗಿ ಮಾತ್ರವೇ. ಒಮ್ಮೆ ಅಂಥಾ ಸ್ಥಿತಿಯಲ್ಲಿ ನಾನಿದ್ದರೆ, ಅದರ ಬಗ್ಗೆ ತರ್ಕವು ಅಸಾಧ್ಯ. ಯೇಸು ಕ್ರಿಸ್ತನಿಗೆ ನಿಷ್ಠೆಯೆಂದರೆ ಏನೆಂಬುದನ್ನು ಕೆಲವರು ಮಾತ್ರ ತಿಳಿದಿರುತ್ತಾರೆ-''ನನ್ನ ನಿಮಿತ್ತವಾಗಿ'' (ಮತ್ತಾಯ 5:11) ಇದೇ ಒಬ್ಬ ಭಕ್ತನನ್ನು ಉಕ್ಕಿನಂಥ ಸಂತ ನನ್ನಾಗಿ ಮಾಡುತ್ತದೆ.

ಅಂಥಾ ಹೀಗೆ ನಿನ್ನ ಸ್ವಾತಂತ್ರ್ಯದ ಒಡೆಯುವಿಕೆ ನಿನ್ನಲ್ಲಿ ಉಂಟಾಗಿದೆಯೋ? ಈ ಸತ್ಯಕ್ಕೆ ಹೊರತಾದವುಗಳೆಲ್ಲಾ ಕೇವಲ ಧಾರ್ಮಿಕ ವಂಚನೆಗಳಾಗಿವೆ. ನಿರ್ಧರಿಸಬೇಕಾದ ಒಂದು ವಿಷಯ ವೆಂದರೆ, ನನ್ನನ್ನು ನಾನು ತ್ಯಜಿಸಿಕೊಂಡು ಯೇಸುಕ್ರಿಸ್ತನಿಗೆ ಸಮರ್ಪಣೆ ಮಾಡಿಕೊಳ್ಳಬಲ್ಲೆನೊ ಮತ್ತು ಆ ಒಡೆಯುವಿಕೆ ಹೇಗಾದರೂ ಬರಲಿ, ಅದಕ್ಕೆ ಷರತ್ತುಗಳನೊಡ್ಡದಿರಬಲ್ಲೆನೋ? ನನ್ನ ಬಗ್ಗೆ ನನ್ನ ಸ್ವಂತ ತಿಳುವಳಿಕೆಯಿಂದ ನಾನು ಬೇರ್ಪಡಬೇಕು. ಈ ಮಟ್ಟಕ್ಕೆ ನಾನು ಮುಟ್ಟಿದ ಕೂಡಲೇ ಯೇಸುಕ್ರಿಸ್ತ ನೊಡನೆ ಅಲೌಕಿಕವಾದ ಗುರುತಿಸುವಿಕೆಯುಂಟಾಗುವುದು ಮತ್ತು ಸಂದೇಹಕ್ಕಾಸ್ಪದವಿಲ್ಲದ ದೇವರಾತ್ಮನ ಸಾಕ್ಷಿ ಉಂಟಾಗುತ್ತದೆ. ''ಕ್ರಿಸ್ತನೊಂದಿಗೆ ಶಿಲುಬೆಗೆ ಹಾಕಿಸಿಕೊಂಡವನಾಗಿದ್ದೇನೆ''. ಕ್ರೈಸ್ತತ್ವದ ತೀವ್ರಾಸಕ್ತಿ ಎಂದರೆ ವಿವೇಚನಾ ಪೂರ್ವಕವಾಗಿ ನನ್ನ ಮೇಲೆ ನನಗಿರುವ ನನ್ನೆಲ್ಲಾ ಹಕ್ಕುಗಳನ್ನು ವರ್ಜಿಸಿ ಯೇಸು ಕ್ರಿಸ್ತನ ದಾಸನಾಗಲು ಒಪ್ಪಿಸಿ ಬಿಡುವುದು; ಇದನ್ನು ಮಾಡುವ ತನಕ ನಾನೆಂದೂ ಕ್ರಿಸ್ತ ಭಕ್ತನಾಗ ಲಾರೆನು.

ವರ್ಷಕ್ಕೆ ಒಬ್ಬನಾದರೂ ದೇವರ ಕರೆಯುವಿಕೆಯನ್ನು ಆಲಿಸಿದರೆ ಈ ವಿದ್ಯಾಲಯದ ಅಸ್ತಿತ್ವವು ಸಾರ್ಥಕವಾಗುತ್ತದೆ. ಈ ವಿದ್ಯಾಲಯವು, ಒಂದು ಸಂಸ್ಥೆ ಎಂದು ಯಾವ ಬೆಲೆಯೂ ಇದಕ್ಕಿಲ್ಲ, ಇದು ಶೈಕ್ಷಣಿಕ ಸಂಸ್ಥೆಯೂ ಅಲ್ಲ; ದೇವರು ಇತರರ ಜೀವಿತವನ್ನು ಉಜ್ಜೀವಿಸ ಮಾಡುವು ದಕ್ಕಾಗಿ ಮಾತ್ರವೇ ಈ ವೇದವಿದ್ಯಾಲಯವಿರುವುದೇ ವಿನಃ ಬೇರೆ ಯಾವುದಕ್ಕಾಗಿಯೂ ಅಲ್ಲ. ಆತನು ನಮ್ಮನ್ನು ಏನು ಬೇಕಾದರೂ ಮಾಡಲು ನಾವು ಆತನಿಗೆ ಅವಕಾಶವಿತ್ತಿರುವೆವೋ ಅಥವಾ ನಾವು ಏನಾಗಿರಬೇಕೆಂಬುವ ನಮ್ಮದೇ ಆದ ಪರಿಕಲ್ಪನೆಯಲ್ಲಿ ನಾವಿಲ್ಲಿ ಇರುತ್ತಿರುವೆವೋ ?

# ಸತ್ಯದ ಅಧಿಕಾರ

**''ದೇವರ ಸಮೀಪಕ್ಕೆ ಬನ್ನಿರಿ, ಆಗ ಆತನು ನಿಮ್ಮ ಸಮೀಪಕ್ಕೆ ಬರುವನು'' - (ಯಾಕೋಬ 4:8)**

ದೇವರ ವಾಸ್ತವದ ಮೇಲೆ ಕಾರ್ಯ ಮಾಡುವ ಸುಸಂಧಿಯನ್ನು ಜನರಿಗೆ ಒದಗಿಸುವುದು ಅಗತ್ಯವಾಗಿದೆ. ಇದರ ಹೊಣೆಗಾರಿಕೆಯನ್ನು ಅವರವರ ವೈಯಕ್ತಿಕತೆಗೆ ಬಿಡಬೇಕು ಮತ್ತು ಮತ್ತೊಬ್ಬನ ಪರವಾಗಿ ನೀನು ಕಾರ್ಯಮಾಡಕೂಡದು, ಅದು ಅವನ ವಿವೇಚನಾಪೂರ್ವಕವಾದ ಕ್ರಮವಾಗಿರಬೇಕು. ಆದರೆ ಹಾಗೆ ಕಾರ್ಯಸಾಧಿಸುವಂತೆ ಸುವಾರ್ತಾಸಂದೇಶವು ಅವನನ್ನು ಸದಾ ಪ್ರಬೋಧಿಸುತ್ತಿರಬೇಕು. ಹೀಗೆ ಕಾರ್ಯಶೀಲನಾಗುವುದನ್ನು ನಿರಾಕರಿಸುವ ಮನುಷ್ಯನು ನಿಷ್ಕ್ರೀಯನಾಗಿ, ತಾನು ಮೊದಲು ಎಲ್ಲಿದ್ದನೋ ಅಲ್ಲಿಯೇ ಉಳಿದಿರುತ್ತಾನೆ; ಒಮ್ಮೆ ಅವನು ಕಾರ್ಯಪ್ರವೃತ್ತನಾದರೆ, ಅವನೆಂದಿಗೂ ಮೊದಲಿದ್ದಂತೆ ಇರುವುದಿಲ್ಲ. ದೇವರಾತ್ಮನಿಂದ ನೂರಾರು ಜನರು ತಾವು ತಪ್ಪಿತಸ್ಥರೆಂಬುದನ್ನು ಮನವರಿಕೆ ಮಾಡಿಕೊಂಡಿ ರುವ ಮಾರ್ಗಮಧ್ಯದಲ್ಲಿ ಒಂದು ಸಂದೇಶವು ಅಡ್ಡಬರುವುದಾದರೆ ಅದು ಸ್ಪಷ್ಟ ಮೂರ್ಖತನ. ನಾನು ನನ್ನನ್ನು ತ್ವರೆಪಡಿಸಿಕೊಂಡು ಕಾರ್ಯನಿರತನಾದ ಕೂಡಲೇ, ಅದೇ ಕ್ಷಣದಲ್ಲಿ ನಾನು ಬದುಕುವವ ನಾಗುವೆನು. ಇದಕ್ಕಿಂತಲೂ ಕಡಿಮೆಯಾದದ್ದೆಲ್ಲವೂ ಕೇವಲ ಹುಲು ಬದುಕಾಗಿರುತ್ತದೆ. ನಾನು ಪೂರ್ಣ ಹೃದಯದಿಂದ ಕಾರ್ಯೋನ್ಮುಖ ನಾಗುವ ಕ್ಷಣಗಳೇ, ನಾನು ನಿಜವಾಗಿಯೂ ಬದುಕಿರುವ ಕ್ಷಣಗಳಾಗಿರುತ್ತವೆ.

ದೇವರ ಸತ್ಯವೊಂದು ನಿನ್ನ ಆತ್ಮನ ಅರಿವಿಗೆ ಬಂದಾಗ, ಆ ಸತ್ಯದನುಸಾರ ಕಾರ್ಯೋನ್ಮುಖ ನಾಗದೇ ಅದನ್ನು ಹಾಗೆಯೇ ಹೋಗಗೊಡಬೇಡ, ಬಾಹ್ಯ ಜೀವಿತದಲ್ಲಿ ಮಾತ್ರವೆಂದಲ್ಲ ನಿನ್ನ ಅಂತರಂಗ ದಲ್ಲಿಯೂ ಕಾರ್ಯಗತವಾಲೇಬೇಕು. ಬರೆಯುವ ಮಸಿಯಿಂದಲೋ, ನಿನ್ನ ರಕ್ತದಿಂದಲೋ ಹೃದಯದಲ್ಲಿ ಅದನ್ನು ಬರೆದು ದಾಖಲಿಸಿಟ್ಟುಕೋ, ಯೇಸುಕ್ರಿಸ್ತನೊಡನೆ ಕಾರ್ಯ ಸಾಧಿಸುತ್ತಿರುವ ಅತ್ಯಂತ ಅಶಕ್ತ ಸಂತನು ಸಹಾ ದೇವರ ಸತ್ಯಕ್ಕನುಸಾರ ಕಾರ್ಯನಿರತನಾದ ಕ್ಷಣವೇ ಅವನು ತನ್ನ ಅಶಕ್ತತೆಯಿಂದ ವಿಮುಕ್ತಿ ಗೊಳ್ಳುತ್ತಾನೆ. ದೇವರ ಸರ್ವ ಶಕ್ತಿಯ ಸಾಮರ್ಥ್ಯವು ಅವನ ಪರವಾಗಿರುತ್ತದೆ. ದೇವರ ಸತ್ಯವೊಂದು ನಮಗೆ ಮೂಡಿದಾಗ, ನಾವು ತಪ್ಪಿತಸ್ಥರಾಗಿದ್ದೇವೆ ಎಂಬುದನ್ನು ಮನಗಂಡು ಅರಿಕೆ ಮಾಡುತ್ತೇವಾದರೂ ತಿರುಗಿ ಅದೇ ಜೀವಿತಕ್ಕೆ ಹಿಂದಿರುಗಿ ಹೋಗುತ್ತೇವೆ. ಮತ್ತೊಮ್ಮೆ ಅರಿಕೆ ಮಾಡುತ್ತೇವೆ, ಮಗದೊಮ್ಮೆ ಹಿಂತಿರುಗುತ್ತೇವೆ. ಹಿಂತಿರುಗಿ ಹೋಗುವ ಅವಶ್ಯಕತೆ ಇಲ್ಲವೆಂದು ನಮಗೆ ಮನವರಿಕೆಯಾಗುವವರೆಗೂ ನಾವು ಈ ಪ್ರಕ್ರಿಯೆಯಲ್ಲಿರುತ್ತೇವೆ. ನಮ್ಮನ್ನು ಪಾಪದಿಂದ ವಿಮುಕ್ತಿಗೊಳಿಸಿದ ಸ್ವಾಮಿಯ ಒಂದು ವಾಕ್ಯವು ನಮ್ಮ ಎದುರಿಗೆ ಬಂದಾಗ, ಅದಕ್ಕನುಸಾರವಾಗಿ ಪೂರ್ಣ ಹೃದಯದಿಂದ ಯೇಸುಕ್ರಿಸ್ತನ ಮುಂದೆ ನಡೆದುಕೊಳ್ಳಬೇಕು. 'ಬನ್ನಿರಿ' ಎನ್ನುವ ಆತನ ವಾಕ್ಯದ ಅರ್ಥ ''ನಡೆದುಕೊಳ್ಳಿರಿ'' ''ನನ್ನ ಬಳಿಗೆ ಬನ್ನಿರಿ'' (ಮತ್ತಾಯ 11:28) ಅಂದರೆ ನಡವಳಿಕೆಗಳಲ್ಲಿ ಕಾರ್ಯೋನ್ಮುಖರಾಗಿರಿ ಎಂದು. ಅಂತಿಮವಾಗಿ ನಾವು ಮಾಡುವ ಕೆಲಸವೆಂದರೆ ಆತನ ಬಳಿಗೆ ಬರುವುದು. ಆತನ ಬಳಿಗೆ ಬರುವ ಪ್ರತಿಯೊಬ್ಬರಿಗೂ ತಿಳಿದಿರುವ ಒಂದು ಸಂಗತಿ, ಅದು ಆತನ ಬಳಿಗೆ ಬಂದ ಕ್ಷಣದಲ್ಲಿಯೇ ದೇವರ ಅಲೌಕಿಕ ಜೀವಿತವು ಅವನೊಳಗೆ ನುಗ್ಗಿ ಅವನೊಳಗೆ ವಿಲೀನವಾಗುತ್ತದೆ. ಪ್ರಪಂಚವನ್ನಾಳುವ ಪ್ರಾಪಂಚಿಕ ಶಕ್ತಿಯೂ ನರಭಾವವನ್ನಾಳುವ ಶಕ್ತಿಯೂ ಮತ್ತು ಸೈತಾನನ ಶಕ್ತಿಯೂ ಕೂಡಲೇ ನಿಷ್ಕ್ರೀಯವಾಗುತ್ತವೆ. ಆದರೆ ನಿನ್ನ ಕಾರ್ಯದಿಂದಲ್ಲ ; ನಿನ್ನ ಕ್ರಿಯೆಯು ದೇವರೊಂದಿಗೂ ಮತ್ತು ಪಾಪ ವಿಮೋಚನೆಯ ಆತನ ಸಾಮರ್ಥ್ಯ ದೊಂದಿಗೂ ಮಿಳಿತ ಗೊಂಡಿರುವುದರಿಂದ ಅದು ಸಾಧ್ಯವಾಗಿದೆ.

# ಕ್ರಿಸ್ತನ ಬಾಧೆಗಳಲ್ಲಿ ಪಾಲುಗಾರರು

**''ನೀವು ಎಷ್ಟರ ಮಟ್ಟಿಗೂ ಕ್ರಿಸ್ತನ ಬಾಧೆಗಳಲ್ಲಿ ಪಾಲುಗಾರರಾಗಿದ್ದೀರೋ ಅಷ್ಟರ ಮಟ್ಟಿಗೆ ಸಂತೋಷ ವುಳ್ಳವರಾಗಿರ್ರಿ'' - (1 ಪೇತ್ರ 4:13)**

ದೇವರು ನಿನ್ನನ್ನು ತನಗಾಗಿ ಉಪಯೋಗಿಸಿಕೊಳ್ಳುವಂತಿದ್ದರೆ, ನಿನ್ನ ಸ್ವಂತಕ್ಕೆ ಸಂಬಂಧಪಡದ ಅನೇಕಾನೇಕ ಅನುಭವಗಳ ಮೂಲಕ ದೇವರು ನಿನ್ನನ್ನು ಕರೆದೊಯ್ಯುತ್ತಾನೆ. ಆತನ ಹಸ್ತಗಳಲ್ಲಿ ನೀನು ಉಪಯುಕ್ತನಾಗಿರಬೇಕೆಂದೇ ಅವೆಲ್ಲವೂ ರೂಪಿಸಲ್ಪಟ್ಟಿವೆ ಮತ್ತು ಬೇರೆಯವರ ಆತ್ಮಗಳಲ್ಲಿ ಉಂಟಾಗುವ ಪರಿಣಾಮಗಳನ್ನು ಅರಿಯುವ ಸಾಮರ್ಥ್ಯವನ್ನು ನೀನು ಪಡೆಯುವಂತೆ ಅವು ಮಾಡುತ್ತವೆ. ಮಾತ್ರವಲ್ಲದೆ ದೇವರು ನಿನ್ನನ್ನು ಉಪಯೋಗಿಸುವ ಮಾರ್ಗದಲ್ಲಿ ನಿನಗೆ ಅಂಥವು ಗಳೇನೇ ಸಂಭವಿಸಿದರೂ ಅವುಗಳ ಬಗ್ಗೆ ನೀನೆಂದೂ ಆಶ್ಚರ್ಯಚಕಿತನಾಗದಿರಲು ಆ ಅನುಭವಗಳು ನಿನಗೇ ಬೇಕಾಗಿವೆ. ''ಓಹ್! ಆ ವ್ಯಕ್ತಿಯೊಡನೆ ನಡೆದುಕೊಳ್ಳಲಾರೆನು'' ಯಾಕೆ ಆಗಲಾರದು? ಆ ದಿಶೆಯಲ್ಲಿ ನಡಕೊಳ್ಳುವುದನ್ನು ನೀನು ಕಲಿಯುವಂತೆ ದೇವರು ಬೇಕಾದಷ್ಟು ಸುಸಂಧಿಗಳನ್ನು ನಿನಗೆ ದಯಪಾಲಿಸಿ ಅವುಗಳಲ್ಲಿ ನಿನ್ನನ್ನು ಮುಣುಗಿಸಿ ತೋಯಿಸಿದ್ದಾನೆ, ನೀನಾದರೋ ''ಹೇಳದೇ ಕೇಳದೆ ಹೊರಗೆ ಓಡಿಬಿಟ್ಟೆ'' ಯಾಕೆಂದರೆ ಈ ರೀತಿಯಾಗಿ ನಡಕೊಳ್ಳುತ್ತಾ ಸಮಯ ಕಳೆಯುವುದು ಮೂರ್ಖತನವೆಂದು ನಿನಗನಿಸಿರಬೇಕು.

ಯೇಸುಕ್ರಿಸ್ತನ ಬಾಧೆಗಳು ಸಾಮಾನ್ಯ ಮನುಷ್ಯನ ಬಾಧೆಗಳಂತೆ ಅಲ್ಲ. ''ಆತನು ದೇವರ ಚಿತ್ತಾನುಸಾರ ಬಾಧೆ'' (1ಪೇತ್ರ 4:19) ಪಟ್ಟನಲ್ಲದೆ ಒಬ್ಬೊಬ್ಬವ್ಯಕ್ತಿಯಾಗಿ ನಾವು ಬಾಧೆಯನ್ನ ನುಭವಿಸುವ ದೃಷ್ಟಿಯಿಂದಲ್ಲ. ನಾವು ಯೇಸುಕ್ರಿಸ್ತನಲ್ಲಿ ಯೋಗ್ಯ ಸಂಬಂಧವನ್ನು ಹೊಂದಿದ್ದರೆ ಮಾತ್ರ ದೇವರ ನಡುವಳಿಕೆಗಳು ಯಾವ ಉದ್ದೇಶಾರ್ಥವಾಗಿವೆ ಎಂಬುದು ನಮಗೆ ಅರ್ಥವಾಗುತ್ತದೆ. ದೇವರ ಗುರಿ ಏನೆಂಬುದನ್ನು ಅರಿತುಕೊಳ್ಳುವುದೇ ಕ್ರಿಸ್ತೀಯ ಸಂಸ್ಕೃತಿಯಾಗಿದೆ. ಕ್ರೈಸ್ತಸಭೆಯ ಇತಿಹಾಸದಲ್ಲಿ ಯೇಸುಕ್ರಿಸ್ತನ ಬಾಧೆಗಳಲ್ಲಿ ಗುರುತಿಸಿಕೊಳ್ಳುವಿಕೆಯನ್ನು ತಪ್ಪಿಸಿ ಬಿಡುವ ಒಲವಿದೆ; ದೇವರ ಆದೇಶಗಳನ್ನು ಪಾಲಿಸಲು ಜನರು ತಮ್ಮದೇ ಆದ ಅಲ್ಪ ಶ್ರಮೆಯ ಒಳದಾರಿಗಳನ್ನು ಆರಿಸಿ ಕೊಳ್ಳುತ್ತಿದ್ದಾರೆ. ದೇವರ ದಾರಿಯು ಸದಾಕಾಲಕ್ಕೂ ಶ್ರಮೆಯ ದಾರಿಯಾಗಿದೆ, ''ದೂರ ದೂರ ಶ್ರಮಿಸಿ ಮುಟ್ಟುವ ದಾರಿಯಾಗಿದೆ.''

ಯೇಸುಕ್ರಿಸ್ತನ ಬಾಧೆಗಳಲ್ಲಿ ನಾವು ಪಾಲುಗಾರರಾಗುವೆವೋ? ನಮ್ಮ ವೈಯಕ್ತಿಕ ಆಶೆ ಆಕಾಂಕ್ಷೆಗಳನ್ನು ದೇವರು ನಮ್ಮಿಂದ ಕಿತ್ತೊಸೆಯುವುದಕ್ಕೆ ನಾವು ಸಿದ್ಧರಿರುವೆವೋ? ನಮ್ಮ ಸಕಲ ನಿರ್ಧಾರಗಳ ರೂಪಾಂತರಗೊಳಿಸುವಿಕೆಗೆ, ನಾಶ ಪಡಿಸುವಿಕೆಗೆ ನಾವು ಸಿದ್ಧರಿರುವೆವೋ? ದೇವರು ಅಂಥಾ ದಾರಿಯ ಮೂಲಕವೇ ಯಾಕೆ ನಮ್ಮನ್ನು ನಡೆಸುತ್ತಿದ್ದಾನೆಂಬುದು ನಮಗೆ ತಿಳಿಯುವದಿಲ್ಲ ವೆಂಬದು ಅದರ ಅರ್ಥವಲ್ಲ; ತಿಳಿದುಕೊಂಡರೆ ಅದು ನಮ್ಮನ್ನು ಆತ್ಮಿಕ ದುರಹಂಕಾರಿಗಳನ್ನಾಗಿ ಮಾಡುತ್ತದೆ. ದೇವರು ನಮ್ಮನ್ನೇನು ಮಾಡುತ್ತಿರುವನೆಂಬುದು ಆ ಸಮಯದಲ್ಲಿ ನಮಗೆ ತಿಳಿಯುವು ದಿಲ್ಲ; ಹೆಚ್ಚು ಕಡಿಮೆ ಅನೇಕ ಸಾರಿ ತಪ್ಪಾದ ಗ್ರಹಿಕೆಯಿಂದಲೇ ಆ ದಾರಿಗಳಲ್ಲಿ ಸಾಗುತ್ತಿರುತ್ತೇವೆ. ಹಾಗೆ ಸಾಗುತ್ತಾ ಜ್ಞಾನೋದಯದಿಂದ ಪ್ರಜ್ವಲಿಸುತ್ತಿರುವ ಸ್ಥಳವನ್ನು ಸೇರಿಬಿಡುತ್ತೇವೆ ಮತ್ತು ಅಲ್ಲಿ ಹೀಗೆ ಹೇಳುತ್ತೇವೆ; ''ಅದ್ಯಾವುದೂ ನಮಗೆ ತಿಳಿಯದಿದ್ದರೂ ದೇವರು ನಮ್ಮ ನಡುವನ್ನು ಬಲ ಪಡಿಸುವನು''.

# ನಂಬಿಕೆಯ ನಡವಳಿಕೆ

**''ಇದನ್ನು ನಂಬುತ್ತೀಯಾ ?'' – (ಯೋಹಾನ 11:26)**

ಮಾರ್ಥಳು ಯೇಸುಕ್ರಿಸ್ತನ ವಶದಲ್ಲಿದ್ದ ದೈವ ಸಾಮರ್ಥ್ಯದಲ್ಲಿ ನಂಬಿಕೆ ಇಟ್ಟಿದ್ದಳು; ಆತನು ಹತ್ತಿರವಿದ್ದಿದ್ದರೆ ಅಸ್ವಸ್ಥನಾಗಿದ್ದ ತನ್ನ ತಮ್ಮನನ್ನು ಸ್ವಸ್ಥ ಮಾಡುತ್ತಿದ್ದನೆಂದು ನಂಬಿದ್ದಳು. ಯೇಸು ಸ್ವಾಮಿಯು ದೇವರ ಸಂಗಡ ವಿಶಿಷ್ಟವಾದ ಆತ್ಮೀಯತೆಯನ್ನು ಹೊಂದಿರುವುದಾಗಿಯೂ ಮತ್ತು ಆತನು ದೇವರನ್ನು ಏನು ಕೇಳಿಕೊಂಡರೂ ಅದನ್ನು ದೇವರು ದಯಪಾಲಿಸುವನೆಂತಲೂ ಆಕೆ ನಂಬಿದ್ದಳು; ಯೇಸುಸ್ವಾಮಿಯ ಬಗ್ಗೆ ಆಕೆಗೆ ಇನ್ನೂ ಹೆಚ್ಚಾದ ಆತ್ಮೀಯತೆಯ ಬಾಂಧವ್ಯ ಅಗತ್ಯವಿದ್ದಿತ್ತು. ಮಾರ್ಥಳಿಗಿದ್ದ ನಂಬಿಕೆಯ ಸಿದ್ಧಾಂತವು, ಭವಿಷ್ಯತ್ತಿನಲ್ಲಿ ನೆರವೇರುವಂಥವುಗಳ ಮೇಲೆ ನೆಲೆಸಿತ್ತು; ಆಕೆಯ ನಂಬಿಕೆಯು ಆಕೆಯ ಸ್ವಂತ ಸೊತ್ತು ಎಂದು ಆಕೆ ಅರಿಯುವಂತೆ ಯೇಸುಸ್ವಾಮಿಯು ಆಕೆಯನ್ನು ಆಕರ್ಷಿಸಿ ಪ್ರೇರೇಪಿಸಿದನು. ಅನಂತರ ಆಕೆಯ ನಂಬಿಕೆಯೇ, ಆಕೆಯ ವ್ಯಕ್ತಿಗತ ಸ್ವಾಸ್ಥ್ಯವಾಗಿ ಹೊರಹೊಮ್ಮಿ ಬಿಟ್ಟಿತು. ''ಹೌದು ಸ್ವಾಮೀ, ಲೋಕಕ್ಕೆ ಬರಬೇಕಾದ ದೇವಕುಮಾರನಾದ ಕ್ರಿಸ್ತನು ನೀನೇ ಎಂದು ನಂಬಿದ್ದೇನೆ'' (ಯೋಹಾನ 11:27)

ಪ್ರಸ್ತುತದಲ್ಲಿ ಸ್ವಾಮಿಯು ನಿನ್ನನ್ನು ಮುನ್ನಡೆಸುತ್ತಿರುವಾಗ, ಮಾರ್ಥಳಿಗಿದ್ದಂಥಾ ಸ್ಥಿತಿಯೊಂದು ನಿನಗುಂಟಾಗಿದೆಯೋ? ಯೇಸುಸ್ವಾಮಿಯು ತನ್ನೊಂದಿಗೆ ವ್ಯಕ್ತಿಗತ ಆತ್ಮೀಯತೆಯನ್ನು ಹೊಂದಿಕೊಳ್ಳುವಂತೆ ಆತನೇನಾದರೂ ಉಪದೇಶ ಮಾಡುತ್ತಿರುವನೋ ? ಆತನು ತನ್ನ ಪ್ರಶ್ನೆಯನ್ನು ಪರಿಣಾಮ ಕರವಾಗಿ ಪ್ರಶ್ನಿಸಲು ಆಸ್ಪದ ಕೊಡಬೇಕು. ''ಇದನ್ನು ನಂಬುತ್ತೀಯೋ ?'' ಸದ್ಯದಲ್ಲಿ ನಿನಗಿರುವ ಸಂದೇಹದ ಅಗ್ನಿಪರೀಕ್ಷೆ ಯಾವುದು? ಮಾರ್ಥಳಂತೆ ಬಂದಿರುವೆಯೋ? ಪರವಶಗೊಳಿಸುವಂಥಾ ಅಗಾಧವಾದದ್ದೇನಾದರೂ ಘಟಿಸಿದರೆ ನಿನ್ನ ನಂಬಿಕೆಯ ನಡವಳಿಕೆಯು ನಿನ್ನ ಸ್ವಂತ ಸೊತ್ತಾಗಬಹುದೆನ್ನುವ ಸಂದಿಗ್ಧತೆಯಲ್ಲಿ ನೀನಿರುವೆಯೋ ? ವೈಯಕ್ತಿಕ ಕಷ್ಟಗಳಿಂದ ಹುಟ್ಟುವ ವ್ಯಕ್ತಿಗತ ಅಗತ್ಯತೆಯು ನಿನಗುಂಟಾಗುವ ತನಕ ಅಂಥಾದ್ದೇನೂ ನಿನಗೆ ಸಂಭವಿಸುವುದೇ ಇಲ್ಲ.

ನಂಬಿಕೆಯೆಂದರೆ ಬದ್ಧತೆ, ಕಟ್ಟುಬೀಳುವಿಕೆ. ಬೌದ್ಧಿಕ ಕ್ಷೇತ್ರದಲ್ಲಿ ನಾನು ಮಾನಸಿಕವಾಗಿ ನಂಬಿಕೆಯ ನಡವಳಿಕೆಗೆ ಬದ್ಧನಾಗಿರುತ್ತೇನೆ ಮತ್ತು ಆ ನಂಬಿಕೆಗೆ ಸಂಬಂಧ ಪಡದವುಗಳನ್ನು ತಿರಸ್ಕರಿಸುತ್ತೇನೆ. ಹಾಗೆಯೇ ವ್ಯಕ್ತಿಗತ ಕ್ಷೇತ್ರದಲ್ಲಿ ನಂಬಿಕೆಯ ನಡವಳಿಕೆಯಲ್ಲಿ ನೈತಿಕಾಭಿಪ್ರಾಯಗಳಿಗೆ ನಾನು ಬದ್ಧನಾಗಿರುತ್ತೇನೆ ಮತ್ತು ಬೇರೆಲ್ಲಾ ಹೊಂದಾಣಿಕೆಗಳನ್ನು ನಿರಾಕರಿಸುತ್ತೇನೆ; ಆತ್ಮೀಯವಾದ ವ್ಯಕ್ತಿಗತ ನಂಬಿಕೆಯಿಂದ ಯೇಸುಕ್ರಿಸ್ತನೊಬ್ಬನಿಗೆ ಆತ್ಮೀಕವಾಗಿ ಬದ್ಧನಾಗಿರುತ್ತೇನೆ. ಆಗ ಸ್ವಾಮಿಯು ಮಾತ್ರ ನನ್ನ ಮೇಲೆ, ಅಧಿಪತ್ಯ ಹೊಂದಿರಬೇಕೆಂದು ನಾನು ನಿರ್ಧಾರ ಮಾಡುತ್ತೇನೆ.

ಅನಂತರ ಯೇಸುಕ್ರಿಸ್ತನೊಂದಿಗೆ ನಾನು ಮುಖಾಮುಖಿಯಾದಾಗ ''ಇದನ್ನು ನಂಬುತ್ತೀಯೋ'' ಎಂದು ಆತನು ಕೇಳುತ್ತಾನೆ. ನಂಬಿಕೆಯೆಂಬುದು ಕೇವಲ ಸಹಜವಾದ ಉಸಿರಾಟದಂತೆ ಎಂಬುದು ಆಗ ನನಗೆ ತಿಳಿದುಬರುತ್ತದೆ. ಆದರೆ ಮೊದಲೇ ಯೇಸುಕ್ರಿಸ್ತನನ್ನು ನಂಬದೇ ಅತ್ತಿಂದಿತ್ತ ಜಾಲಾಡಿದ ನಾನೆಂಥಾ ಮೂರ್ಖನು !

# ಸನ್ನಿವೇಶಗಳಲ್ಲಿರುವ ಪತ್ತೆಯಾಗದ ಪಾವಿತ್ರ್ಯ

**''ಆತನನ್ನು ಪ್ರೀತಿಸುವವರ ಹಿತಕ್ಕಾಗಿ ಎಲ್ಲಾ ಕಾರ್ಯಗಳು ಅನುಕೂಲವಾಗುತ್ತವೆ'' – (ರೋಮಾ 8:28)**

ಭಕ್ತನ ಜೀವಿತದ ಎಲ್ಲಾ ಸಂದರ್ಭಗಳು ದೇವರಿಂದ ನಿಯಮಿಸಲ್ಪಟ್ಟಿವೆ. ಭಕ್ತನ ಜೀವಿತದಲ್ಲಿ 'ಆಕಸ್ಮಿಕ' ಎನ್ನುವ ಸಂಗತಿಗಳು ಇಲ್ಲ. ದೇವರು ತನ್ನ ಕೃಪಾನುಗ್ರಹದಿಂದ ನಿನಗೆಂದಿಗೂ ಅರ್ಥವಾಗದ ಸನ್ನಿವೇಶದೊಳಗೆ ನಿನ್ನನ್ನು ಬರಮಾಡುವನು, ಆದರೆ ದೇವರ ಆತ್ಮನು ಅದನ್ನು ಅರ್ಥ ಮಾಡಿಕೊಳ್ಳುತ್ತಾನೆ. ನಿನ್ನಲ್ಲಿರುವ ಆತ್ಮನು ಒಂದು ನಿರ್ದಿಷ್ಟ ಉದ್ದೇಶಾರ್ಥ, ಪರಾರ್ಥ ಪ್ರಾರ್ಥನೆಯನ್ನು ಮಾಡುವಂತೆ ದೇವರು ನಿನ್ನನ್ನು ಎಂಥದ್ದೋ ಜನರ ಮಧ್ಯದಲ್ಲಿ, ಯಾವುದೋ ಸ್ಥಳಗಳಲ್ಲಿ , ಎಂಥಾದ್ದೊ ಸ್ಥಿತಿಗಳಲ್ಲಿ, ಬರಮಾಡಿದಾಗ ಅಂಥಾ ಸಂದರ್ಭದಲ್ಲಿ ನಿನ್ನನ್ನೇ ಮುಂದಿಟ್ಟು ಕೈ ಮುಂದೆ ಮಾಡಿ – ''ಈ ಸನ್ನಿವೇಶ ದಲ್ಲಿ ನನ್ನಷ್ಟಕ್ಕೆ ನಾನೇ ಸ್ವಂತವಾಗಿ ಮುನ್ನೆಚ್ಚರಿಕೆಯಿಂದ ಇರುವೆನು. ಇದನ್ನು ಎಚ್ಚರದಿಂದ ಗಮನಿಸುವೆನು ಮತ್ತು ಅದನ್ನು ನಾನು ಕಾಪಾಡುವೆನು'' ಎಂದು ಹೇಳಬೇಡ. ನಿನ್ನ ಎಲ್ಲಾ ಸಮಯ ಸಂದರ್ಭಗಳು ದೇವರ ಕೈಯಲ್ಲಿ ಇವೆ, ಆದ್ದರಿಂದ ಸಧ್ಯದಲ್ಲಿ ನೀನಿರುವ ಸನ್ನಿವೇಶವು ಅಸ್ವಾಭಾವಿಕ ವಾಗಿದೆ ಎಂದು ಯೋಚಿಸಬೇಡ. ಪರಾರ್ಥ ಪ್ರಾರ್ಥನೆಯಲ್ಲಿ ನಿನ್ನ ಪಾತ್ರವು ಪರಾರ್ಥ ಪ್ರಾರ್ಥನೆ ಯನ್ನು ಹೇಗೆ ಮಾಡಬೇಕೆನ್ನುವ ವೇದನೆಗೊಳ ಗಾಗುವಂಥಾದ್ದು ಅಲ್ಲ , ದೇವರು ತನ್ನ ಕೃಪೆಯಿಂದ ನಿನ್ನನ್ನು ಇರಿಸಿರುವ ಸರ್ವ ಸಾಮಾನ್ಯ ಸನ್ನಿವೇಶಗಳನ್ನು ಬಳಸಿಕೊಂಡು ನಿನ್ನನ್ನು ತನ್ನ ಕೃಪೆಯಿಂದ ಯಾರ ಮಧ್ಯದಲ್ಲಿರಿಸಿ ರುವನೋ, ಅದೇ ಸಾಮಾನ್ಯ ಜನರನ್ನು ದೇವರ ಸಿಂಹಾಸನದ ಬಳಿಗೆ ಕರೆತರಲೂ ಮತ್ತು ನಿನ್ನಲ್ಲಿರುವ ಆತ್ಮನು ಅವರೆಲ್ಲರಿಗಾಗಿ ಪ್ರಾರ್ಥನೆ ಮಾಡಲು ಸುಸಂಧಿಯೊಂದನ್ನು ಪಡೆದಿರುವುದೇ ಪರಾರ್ಥ ಪ್ರಾರ್ಥನೆ. ಈ ರೀತಿಯಾಗಿ ದೇವರು ತನ್ನ ಭಕ್ತರ ಮೂಲಕ ಇಡೀ ಲೋಕವನ್ನು ಬರಸೆಳೆದು ಕೂಡಿಸುತ್ತಾನೆ.

ನಾನೇ ಅನಿಶ್ಚಿತೆಯುಳ್ಳವನೂ ಉದಾಸೀನನೂ ಆಗಿದ್ದು ದೇವರ ಆತ್ಮನ ಕಾರ್ಯಕ್ಕೆ ತೊಂದರೆಯುಂಟು ಮಾಡಲೆತ್ನಿಸುವುದರ ಮೂಲಕ ಅಥವಾ ಆತನ ಪರವಾಗಿ ಆತನು ಮಾಡಬೇಕಾದ ಕೆಲಸವನ್ನು ನಾನೇ ಮಾಡುವುದರ ಮೂಲಕ ತೊಂದರೆ ಕೊಡುತ್ತಿರುವೆನೋ ? ಮಾನವನ ಪರವಾಗಿ ನಾನು ಪರಾರ್ಥ ಪ್ರಾರ್ಥನೆ ಮಾಡಬೇಕು, ಮಾನವಪರವೆಂದರೆ ನಾನಿರುವ ಸನ್ನಿವೇಶಗಳು ಮತ್ತು ನನ್ನ ಸಂಪರ್ಕದಲ್ಲಿರುವ ಸಾಮಾನ್ಯ ಜನರು. ನನ್ನ ಪ್ರಜ್ಞಾಜೀವಿತವನ್ನು ಪವಿತ್ರಾತ್ಮನ ಗರ್ಭಗುಡಿಯಾಗಿರಿಸಿ ಕೊಂಡಿರಬೇಕು, ಆಗ ಬೇರೆಯವರನ್ನು ನಾನು ದೇವರ ಮುಂದೆ ತಂದಾಗ ಪವಿತ್ರಾತ್ಮನು ತಾನೇ ಅವರಿಗಾಗಿ ಪ್ರಾರ್ಥನೆ ಮಾಡುತ್ತಾನೆ.

ನೀನು ಮಾಡುವ ಪರಾರ್ಥ ಪ್ರಾರ್ಥನೆಯು ಎಂದಿಗೂ ನನ್ನದಾಗಿರುವುದಿಲ್ಲ, ನಾನು ಮಾಡುವ ಪರಾರ್ಥ ಪ್ರಾರ್ಥನೆ ಎಂದಿಗೂ ನಿನ್ನದಾಗುವುದಿಲ್ಲ, ಆದರೆ ''ಪವಿತ್ರಾತ್ಮನು ತಾನೇ ಮಾತಿಲ್ಲದಂಥ ನರಳಾಟದಿಂದ ನಮಗೋಸ್ಕರ ಬೇಡಿಕೊಳ್ಳುತ್ತಾನೆ'' (ರೋಮಾ 8:26) ಹೀಗೆ ನಮಗೋಸ್ಕರವೂ ದೇವರ ಆತ್ಮನು ಪ್ರಾರ್ಥಿಸುತ್ತಾನೆ. ಹೀಗಿರುವಾಗ ಇಂಥಾ ಪರಾರ್ಥ ಪ್ರಾರ್ಥನೆ ಗಳನ್ನು ನಾವು ಮಾಡದಿದ್ದರೆ ಯಾರೋ ಒಬ್ಬರು ದಿಕ್ಕಿಲ್ಲದವರಾಗುತ್ತಾರೆ.

# ಪ್ರಾರ್ಥನೆಯ ಸರಿಸಾಟಿಯಿಲ್ಲದ ಬಲ

**''ನಾವು ತಕ್ಕ ಪ್ರಕಾರ ಏನು ಬೇಡಿಕೊಳ್ಳಬೇಕೋ ನಮಗೆ ಗೊತ್ತಿಲ್ಲದ್ದರಿಂದ ಪವಿತ್ರಾತ್ಮನು ತಾನೇ ಮಾತಿಲ್ಲದಂತ ನರಳಾಟದಿಂದ ನಮಗೋಸ್ಕರ ಬೇಡಿಕೊಳ್ಳುತ್ತಾನೆ.'' – (ರೋಮಾ 8:26)**

ಪ್ರಾರ್ಥಿಸುವುದಕ್ಕಾಗಿಯೇ, ನಾವು ಪವಿತ್ರಾತ್ಮನಿಂದ ಬಲಗೊಳ್ಳುತ್ತೇವೆಂಬುದನ್ನು ನಾವು ಅರಿತಿದ್ದೇವೆ. ಆತ್ಮಭರಿತರಾಗಿ ಪ್ರಾರ್ಥಿಸುವುದೇನೆಂಬುದನ್ನು ಅರಿತಿದ್ದೇವೆ; ನಮ್ಮ ಅಸಹಾಯಕತೆಯನ್ನು ಬಲ್ಲ ಪವಿತ್ರಾತ್ಮನು ನಾವು ಉಚ್ಚರಿಸಲಾಗದ ಪ್ರಾರ್ಥನೆಗಳನ್ನು ತಾನೇ ಪ್ರಾರ್ಥಿಸುತ್ತಾನೆಂಬುದನ್ನು ನಾವು ಅನೇಕ ಸಾರಿ ಅರಿತಿರುವುದಿಲ್ಲ. ನಾವು ದೇವರಿಂದ ಹೊಸದಾಗಿ ಹುಟ್ಟಿದಾಗ ಮತ್ತು ದೇವರ ಆತ್ಮನು ನಮ್ಮಲ್ಲಿ ವಾಸಿಸುತ್ತಿರುವಾಗ, ನಾವು ಉಚ್ಚರಿಸಲಾಗದವುಗಳನ್ನು ಆತನು ನಮಗೋಸ್ಕರ ನುಡಿಯುತ್ತಾನೆ.

''ಆತನು'' ಅಂದರೆ ನಿನ್ನಲ್ಲಿರುವ ಪರಿಶುದ್ಧಾತ್ಮನು ''ದೇವರ ಚಿತ್ತಾನುಸಾರವಾಗಿ ದೇವ ಜನರಿಗೋಸ್ಕರ ಬೇಡಿಕೊಳ್ಳುವನು'' (ರೋಮಾ 8:27). ಪ್ರಜ್ಞಾಪೂರ್ವಕವಾಗಿ ಮಾಡಿದ ನಿನ್ನ ಪ್ರಾರ್ಥನೆ ಗಳು ಏನಾಗಿರಬಹುದೆಂದು ತಿಳಿಯಲು ದೇವರು ನಿನ್ನ ಹೃದಯವನ್ನು ಶೋಧಿಸುವುದಿಲ್ಲ , ಆದರೆ ನಿನ್ನಲ್ಲಿರುವ ಪವಿತ್ರಾತ್ಮನು ಮಾಡುವ ಪ್ರಾರ್ಥನೆ ಏನೆಂಬದನ್ನು ನಿನ್ನ ಹೃದಯದಲ್ಲಿ ಶೋಧಿಸುತ್ತಾನೆ.

ದೇವರ ಆತ್ಮನು ಸಲ್ಲಿಸುವ ಪರಾರ್ಥ ಪ್ರಾರ್ಥನೆಗಳಿಗೆ, ಭಕ್ತನ ಸ್ವಭಾವವು ದೇಗುಲ ವಾಗಿರಬೇಕೆಂದು ಆತ್ಮನು ಬಯಸುತ್ತಾನೆ. ''ನಿಮ್ಮೊಳಗೆ ನೆಲೆಗೊಂಡಿರುವ ಪವಿತ್ರಾತ್ಮನಿಗೆ ನಿಮ್ಮ ದೇಹವು ಗರ್ಭಗುಡಿಯಾಗಿದೆಂಬುದು ನಿಮಗೆ ತಿಳಿಯದೋ ?'' (1ಕೊರಿ 6:19) ಯೇಸುಕ್ರಿಸ್ತನು ದೇವಾಲಯ ವನ್ನು ಶುಚಿಮಾಡಿದಾಗ ''....ಒಬ್ಬನನ್ನಾದರೂ ಸಾಮಾನು ಹೊತ್ತುಕೊಂಡು ದೇವಾಲಯದೊಳಗೆ ಹಾದು ಹೋಗಗೊಡಿಸಲಿಲ್ಲ.'' (ಮಾರ್ಕ 11:16) ನಿನ್ನ ಅನುಕೂಲಕ್ಕೆ ತಕ್ಕಂತೆ ನಿನ್ನ ಶರೀರವನ್ನು ಬಳಸಲು ದೇವರ ಆತ್ಮನು ಅವಕಾಶವನ್ನೆಂದಿಗೂ ಕೊಡುವುದಿಲ್ಲ. ಯೇಸುಕ್ರಿಸ್ತನು ಯಾವ ಕರುಣೆಯೂ ಇಲ್ಲದೆ, ದೇವಾಲಯದಲ್ಲಿದ್ದ ಮಾರುವವರನ್ನು ಕೊಳ್ಳುವವರನ್ನು ಹೊಡೆದೋಡಿಸಿದನು. ''ನನ್ನ ಆಲಯವು ಎಲ್ಲಾ ಜನಾಂಗ ಗಳಿಗೂ ಪ್ರಾರ್ಥನಾಲಯ ವೆನಿಸಿಕೊಳ್ಳುವುದು ....... ನೀವು ಅದನ್ನು ಕಳ್ಳರ ಗವಿ ಮಾಡಿದ್ದೀರಿ'' (ಮಾರ್ಕ 11:17) ಎಂದು ಹೇಳಿದನು.

ನಮ್ಮ ಶರೀರವೂ ದೇವರಾತ್ಮನ ಆಲಯವಾಗಿದೆ, ಎಂಬುದನ್ನು ನಾವು ಗಮನಿಸಿರುವೆವೋ ? ಹಾಗಿದ್ದರೆ, ಅದು ಯೋಗ್ಯವಾಗಿರುವ ಹಾಗೆ ಕಲುಷಿತವಾಗದಂತೆ ನಾವು ಎಚ್ಚರವಹಿಸಬೇಕು. ನಮ್ಮ ಪ್ರಜ್ಞಾ ಜೀವಿತವು ನಮ್ಮ ಸಂಪೂರ್ಣ ವ್ಯಕ್ತಿತ್ವದಲ್ಲಿ ಅತ್ಯಲ್ಪ ಪ್ರಮಾಣದಷ್ಟಿದರೂ ಸಹಾ ಪವಿತ್ರಾತ್ಮನ ಗರ್ಭಗುಡಿಯೆಂದು, ಅದನ್ನು ಗೌರವಿಸಲು ನೆನಪಿರಬೇಕು. ನಮಗರಿವಿರಲಾರದ, ಸುಪ್ತ ಪ್ರಜ್ಞೆಯ ಭಾಗವನ್ನು ದೇವರ ಆತ್ಮನು ನೋಡಿಕೊಳ್ಳುತ್ತಾನೆ. ಆದರೆ ಪ್ರಜ್ಞಾ ಜೀವಿತದ ಭಾಗವನ್ನು ನಾವೇ ಎಚ್ಚರದಿಂದ ಕಾಪಾಡಬೇಕು ಮತ್ತು ಅದು ನಮ್ಮ ಹೊಣೆಗಾರಿಕೆಯೂ ಹೌದು.

# ಪವಿತ್ರವಾದ ಸೇವೆ

**''ನಾನು ಈಗ ನಿಮಗೋಸ್ಕರ ಅನುಭವಿಸುತ್ತಿರುವ ಭಾದೆಗಳಲ್ಲಿ ಸಂತೋಷಪಟ್ಟು, ಕ್ರಿಸ್ತನ ಸಂಕಟಗಳೊಳಗೆ ಇನ್ನೂ ಉಳಿದದ್ದನ್ನು ಸಭೆಯೆಂಬ ಆತನ ದೇಹಕ್ಕೋಸ್ಕರ ನನ್ನ ಶರೀರದಲ್ಲಿ ಅನುಭವಿಸಿ ತೀರಿಸುತ್ತೇನೆ.'' – (1 ಕೊಲೊಸ್ಸೆ 1:24)**

ಕ್ರೈಸ್ತ ಕಾರ್ಯಕರ್ತನು ಕಳಂಕರಹಿತ ಸಂಧಾನ ಕಾರನಾಗಿರಬೇಕು ಮತ್ತು ಅವನು ತನ್ನ ಸ್ವಾಮಿಯೊಂದಿಗೂ ಮತ್ತು ಆತನು ಮಾಡಿದ ಪಾಪವಿಮೋಚನೆಯ ವಾಸ್ತವದೊಂದಿಗೂ ಎಷ್ಟರ ಮಟ್ಟಿಗೆ ಗುರುತಿಸಿಕೊಂಡಿರಬೇಕೆಂದರೆ, ಅವನ ಮೂಲಕ ಯೇಸುಕ್ರಿಸ್ತನ ಸೃಜನಾತ್ಮಕ ಜೀವಿತವು ಸತತವಾಗಿ ಇತರರಿಗೆ ಒದಗುವಂತೆ ಅವನು ಪರಿಶುದ್ಧನಾದ ಮಧ್ಯಸ್ಥಗಾರನಾಗಿರಬೇಕು. ಅದು ಮತ್ತೊಬ್ಬನ ಮೇಲೆ ಹೇರುತ್ತಿರುವ ಒಬ್ಬನ ವ್ಯಕ್ತಿತ್ವದ ಪ್ರಭಾವದ ಶಕ್ತಿಯಾಗಿರಬಾರದು, ಆದರದು ನಿಜ ಕ್ರೈಸ್ತ ಸೇವಕನ ಜೀವಿತದ ಕಣಕಣಗಳಲ್ಲಿ ತೋರಿಬರುವ ಯೇಸುಕ್ರಿಸ್ತನ ಪ್ರಸನ್ನತೆಯಾಗಿರಬೇಕು. ಹೊಸ ಒಡಂಬಡಿಕೆಯು ತಿಳಿಯಪಡಿಸುತ್ತಿರುವ, ನಮ್ಮ ಪ್ರಭುವಾದ ಯೇಸುಕ್ರಿಸ್ತನ ಜೀವಿತ ಮತ್ತು ಆತನ ಮರಣಗಳ ಐತಿಹಾಸಿಕ ಸತ್ಯಾರ್ಥಗಳನ್ನು ನಾವು ಬೋಧಿಸುತ್ತಿರುವಾಗಲೇ, ನಮ್ಮ ವಾಕ್ಯಗಳು ಪರಿಶುದ್ಧಗೊಳಿಸಲ್ಪಡುತ್ತವೆ; ದೇವರು ತಾನು ಮಾಡಿದ ಪಾಪ ವಿಮೋಚನಾ ಕಾರ್ಯದ ತಳಹದಿಯ ಮೇಲೆ ಬೋಧನೆಯನ್ನು ಆಲಿಸುವವರ ಹೃದಯದಲ್ಲಿ, ಬೇರೆ ಯಾವ ವಿಧದಿಂದಲೂ ಸೃಷ್ಟಿಸಲಸಾಧ್ಯವಾದುದನ್ನು ಸೃಷ್ಟಿಸುವ, ವಾಕ್ಯಗಳನ್ನು ದೇವರು ಉಪಯೋಗಿಸುತ್ತಾನೆ. ಯೇಸುಕ್ರಿಸ್ತನ ವಿಷಯದ ಸತ್ಯಾರ್ಥಗಳನ್ನು ಪ್ರಕಟಪಡಿಸುವ ಬದಲು, ಮಾನವರ ಜೀವಿತದಲ್ಲಿ ಪರಿಣಾಮವನ್ನುಂಟು ಮಾಡುವ ಪಾಪ ವಿಮೋಚನೆಯ ಫಲಗಳ ವಿಷಯವನ್ನು ಮಾತ್ರ ನಾವು ಬೋಧಿಸಿದರೆ, ಅದನ್ನು ಕೇಳಿಸಿಕೊಳ್ಳುವವರಲ್ಲುಂಟಾಗುವ ಫಲವು ನೂತನ ಹುಟ್ಟುವಿಕೆಯಲ್ಲ, ಅದು ಕೇವಲ ಆತ್ಮೀಕ ಸುಸಂಸ್ಕೃತಿ ಮಾತ್ರವೇ ಆಗಿರುತ್ತದೆ ಮತ್ತು ದೇವರು ಇದಕ್ಕೆಂದಿಗೂ ಸಾಕ್ಷಿ ನೀಡುವುದಿಲ್ಲ ಯಾಕೆಂದರೆ ಯೇಸುಕ್ರಿಸ್ತನನ್ನು ಮರೆಮಾಚುವ ಬೋಧನೆಗಳು ಬೇರೊಂದು ಕ್ಷೇತ್ರಕ್ಕೆ ಸಂಭಂಧ ಪಟ್ಟಿರುತ್ತವೆ. ದೇವರ ವಿಷಯದ ಸತ್ಯಗಳನ್ನು ನಾವು ಘೋಷಿಸಿದಾಗ ಅದನ್ನು ಆಲಿಸಿದವರ ಆತ್ಮಗಳಲ್ಲಿ ಆತನಲ್ಲದೆ ಬೇರೆ ಇನ್ಯಾರೂ ಉಂಟು ಮಾಡದಿರುವಂಥವುಗಳನ್ನು ಆತನು ಮಾತ್ರವೇ ಸೃಷ್ಟಿಸುವನಾದ್ದರಿಂದ, ದೇವರೊಂದಿಗೆ ಪ್ರೀತಿ ತುಂಬಿದ ಸಮರಸವುಳ್ಳ ಬಾಳನ್ನು ಬದುಕಲು ನಾವು ನಿಗಾವಹಿಸಬೇಕು.

''ಆತನದು ನಿಜವಾಗಿಯೂ ಅದ್ಭುತವಾದ ವ್ಯಕ್ತಿತ್ವ! ಆತನೆಂಥಾ ಆಕರ್ಷಕ ವ್ಯಕ್ತಿ! ಆತನಲ್ಲಿರುವುದು ಅದೆಂಥಾ ಅಮೋಘ ಅಂತಃ ದೃಷ್ಟಿ!'' ಹಾಗಿದ್ದರೆ ಪರಿಣಾಮ ಬೀರಲು ದೇವರ ಸುವಾರ್ತೆಗೆ ಅವಕಾಶವೆಲ್ಲಿದೆ? ಬೋಧಿಸುವವನ ವ್ಯಕ್ತಿತ್ವವೇ ಕೇಳಿಸಿಕೊಳ್ಳುವವರ ಮನಮುಟ್ಟಿಸುವ ಮಾರ್ಗವಾದರೆ ಸುವಾರ್ತೆಯು ಫಲಕಾರಿಯಾಗುವುದಿಲ್ಲ. ಒಬ್ಬ ವ್ಯಕ್ತಿಯು ತನ್ನ ವ್ಯಕ್ತಿತ್ವದ ಮೂಲಕ ಆಕರ್ಷಿಸಬಲ್ಲನಾದರೆ, ಅವನ ಬೋಧನೆಯು ಅದೇ ದಾರಿಯಲ್ಲಿರುತ್ತದೆ. ಒಬ್ಬನು ಯೇಸುಕ್ರಿಸ್ತನ ವ್ಯಕ್ತಿತ್ವದೊಂದಿಗೆ ಗುರುತಿಸಿಕೊಂಡರೆ ಆಗ, ತನ್ನ ಪ್ರಭುವು ಏನೆಲ್ಲವನ್ನೂ ಮಾಡಬಹುದೋ, ಆ ದಾರಿಯಲ್ಲಿಯೇ ಬೋಧನೆಯು ಸಾಗುತ್ತದೆ. ಮನುಷ್ಯರಲ್ಲಿರುವ ಅಪಾಯವೆಂದರೆ ತಮ್ಮನ್ನು ತಾವು ಮಹಿಮೆ ಪಡಿಸಿಕೊಳ್ಳುವುದು, ಆದರೆ ಯೇಸುಕ್ರಿಸ್ತನು ಹೇಳುವುದಾದರೋ, ''ದೇವರನ್ನು ಮಹಿಮೆ ಪಡಿಸಿರಿ''.

# ಸುವಾರ್ತೆಯಲ್ಲಿರುವ ಅನ್ಯೋನ್ಯತೆ

**''ಕ್ರಿಸ್ತನ ಸುವಾರ್ತೆಯ ಉದ್ಯೋಗದಲ್ಲಿ ದೇವರ ಸೇವಕನು'' – (1 ಥೆಸ 3:2)**

ಪವಿತ್ರೀಕರಣದ ನಂತರ ನಿನ್ನ ಜೀವಿತದಲ್ಲಿ ನಿನ್ನ ಧ್ಯೇಯವೇನೆಂಬುದನ್ನು ಹೇಳುವುದು ಕಷ್ಟ, ಯಾಕೆಂದರೆ ತನ್ನ ಉದ್ದೇಶಾರ್ಥ ಪವಿತ್ರಾತ್ಮನ ಮೂಲಕ ದೇವರು ನಿನ್ನನ್ನು ಆರಿಸಿಕೊಂಡಿರುತ್ತಾನೆ. ತನ್ನ ಮಗನನ್ನು ಲೋಕ ರಕ್ಷಣೆಗಾಗಿ ಹೇಗೆ ಉಪಯೋಗಿಸಿ ಕೊಂಡನೋ ಅಂತೆಯೇ, ನಿನ್ನನ್ನು ಲೋಕದಲ್ಲಿ ತನ್ನ ಉದ್ದೇಶಕ್ಕಾಗಿ ಉಪಯೋಗಿಸಿಕೊಳ್ಳುತ್ತಾನೆ. ನಿನಗೋಸ್ಕರ ಮಹತ್ತಾದವುಗಳನ್ನು ನೀನು ಕೇಳಿಕೊಂಡರೇ, 'ದೇವರು ನನ್ನನ್ನು ಇಂಥಾ ಕಾರ್ಯಕ್ಕಾಗಿ, ಅಂಥಾ ಸೇವೆಗಾಗಿ ಕರೆದಿರುವನು' ಎಂದರೆ, ದೇವರ ಉದ್ದೇಶಕ್ಕೆ ನೀನೇ ಅಡ್ಡಿಯಾಗಿರುವೆ. ಎಲ್ಲಿಯವರೆಗೆ ನಿನ್ನ ಸ್ವಂತ ಗುಣ ಚಾರಿತ್ರ್ಯದ ಬಗ್ಗೆ, ಹಾಗೂ ಆಕಾಂಕ್ಷೆಗಳ ಬಗ್ಗೆ ವ್ಯಕ್ತಿಗತ ಆಸಕ್ತಿ ನಿನಗಿರುತ್ತದೋ, ಅಲ್ಲಿಯವರೆಗೆ, ದೇವರ ಆಸಕ್ತಿಗಳೊಡನೆ ಗುರುತಿಸಿಕೊಳ್ಳಲು ನಿನಗಾಗುವುದಿಲ್ಲ. ನಿನ್ನ ಬಗ್ಗೆ ನಿನಗಿರುವ ಕಲ್ಪನೆಗಳನ್ನೆಲ್ಲಾ ಇನ್ನೆಂದಿಗೂ ಇಲ್ಲವಾಗುವಂತೆ ನಿನ್ನಿಂದ ಕಳಚಿಕೊಂಡು, ಈ ಲೋಕದಲ್ಲಿ ತನ್ನ ಉದ್ದೇಶಾರ್ಥವಾಗಿ ನಿನ್ನನ್ನು ಪ್ರತ್ಯೇಕಿಸಲು ನೀನು ದೇವರಿಗೆ ಆಸ್ಪದ ಕೊಟ್ಟಾಗಲೇ ಆತನ ಆಸಕ್ತಿಗಳಲ್ಲಿ ನಿನ್ನನ್ನು ಗುರುತಿಸಿಕೊಳ್ಳಲು ಸಾಧ್ಯವಾಗುತ್ತದೆ, ಯಾಕೆಂದರೆ ನಿನ್ನ ಚಲನವಲನಗಳೆಲ್ಲಾ ಸ್ವಾಮಿಯವರದೇ ಆಗಿರುವುದರಿಂದ ನಿನ್ನ ಮಾರ್ಗಗಳನ್ನು ನೀನು ಗ್ರಹಿಸಲಾರೆ.

ನನ್ನ ಜೀವಿತದ ಉದ್ದೇಶವು ದೇವರದೇ ಆಗಿರುತ್ತದೆ ಹೊರತು ನನ್ನದಲ್ಲವೆಂಬುದನ್ನು ನಾನು ತಿಳಿದಿರಬೇಕು. ದೇವರು ನನ್ನನ್ನು ತನ್ನ ಪರಮ ನಿರೀಕ್ಷೆಗೆ ತಕ್ಕಂತೆ ಉಪಯೋಗಿಸಿಕೊಳ್ಳುತ್ತಾನೆ. ನಾನು ಆತನಲ್ಲಿ ಮಾತ್ರ ವಿಶ್ವಾಸದಿಂದಿರಬೇಕೆಂದು ಆತನು ಬಯಸುತ್ತಾನೆ ಮತ್ತು ''ಸ್ವಾಮಿ, ಇದೆಲ್ಲವೂ ನನ್ನ ಹೃದಯಕ್ಕೆ ನೋವುಂಟು ಮಾಡುತ್ತದೆ'' ಎಂದು ಹೇಳಬೇಡ. ಹಾಗೆಲ್ಲಾ ಮಾತನಾಡಿದರೆ, ನೀನೇ ನಿನ್ನ ಕಾಲಿಗೆ ತೊಡರುವ ಕೊರಡಾಗಿ ಬಿಡುವೆ. ನನಗೇನು ಬೇಕು ಎಂದು ದೇವರಿಗೆ ಹೇಳುವುದನ್ನು ನಾನು ನಿಲ್ಲಿಸಿದಾಗಲೇ, ದೇವರು ತನಗೇನು ಬೇಕೋ ಹಾಗೆ ಮಾಡಲು, ಯಾವುದೇ ಆತಂಕವಿಲ್ಲದೆ, ನನ್ನ ಒಪ್ಪಿಗೆ ಕೇಳದೆ ನನ್ನನ್ನು ಹಿಡಿದುಕೊಳ್ಳುತ್ತಾನೆ. ಆತನು ನನ್ನನ್ನು ಹಿಚುಕಿ ಮುದ್ದೆ ಮಾಡಿಬಿಡುವನು ಅಥವಾ ಘನತೆಗೇರಿಸುವನು, ಅಂತೂ ತನಗೆ ಹೇಗೆ ಬೇಕೋ ಹಾಗೆ ಮಾಡುತ್ತಾನೆ. ದೇವರು ತನ್ನಲ್ಲಿಯೂ, ತನ್ನ ಉದಾತ್ತತೆಯಲ್ಲಿಯೂ ದೃಢ ವಿಶ್ವಾಸವಿಡಬೇಕೆಂದು ಮಾತ್ರ ಕೇಳುತ್ತಾನೆ. ಸ್ವಾನುಕಂಪನವು ಸೈತಾನನಿಗೆ ಸೇರಿದ್ದು, ನಾನೊಂದು ವೇಳೆ ಸ್ವಾನುಕಂಪನದ ದಾರಿಯನ್ನು ಹಿಡಿದರೆ, ದೇವರು ಈ ಲೋಕದಲ್ಲಿ ತನಗಾಗಿ ನನ್ನನ್ನು ಉಪಯೋಗಿಸಿಕೊಳ್ಳುವುದಿಲ್ಲ. ಸ್ವಾನುಕಂಪವು ''ನಿನ್ನಲ್ಲಿ ಜಗತ್ತಿನೊಳಗೊಂದು ಜಗತ್ತನ್ನು'' ಸೃಷ್ಠಿಸಿ ಅಲ್ಲಿಯೇ ಹಾಯಾಗಿ ಬೀಳುವಂತೆ ಮಾಡಿ ಹೊರಗಿನ ಜೀವನದ ಹಿಮತಡಿತಕ್ಕೆ ಅಂಜಿ ಹೊರಜೀವನಕ್ಕೆ ಬರುವುದಿಲ್ಲ.

# ಪರಮ ಶ್ರೇಷ್ಠ ಆರೋಹಣ

**''ನಿನಗೆ ಪ್ರೀಯನಾಗಿರುವ ಒಬ್ಬನೇ ಮಗನಾದ ಇಸಾಕನನ್ನು ತೆಗೆದು ಕೊಂಡು'' - (ಆದಿಕಾಂಡ 22:2)**

ಅಬ್ರಹಾಮನಿಗೆ ದೇವರು ಕೊಟ್ಟ ಆಜ್ಞೆ ''... ಈಗಲೇ ನಿನ್ನ ಮಗನನ್ನು ತೆಗೆದುಕೊಂಡು - ಸದ್ಯದಲ್ಲಿ ಅಲ್ಲ, ಪ್ರಸ್ತುತದಲ್ಲಿ ಅಲ್ಲ, ''ಈಗಲೇ ...'' ಇದನ್ನು ಕುರಿತು ಹೇಗೆ ಚರ್ಚೆ ಮಾಡುತ್ತೇವೆಂಬುದು ವಿಶೇಷವಾದ ಸಂಗತಿ! ಒಂದು ಸಂಗತಿಯು ಸರಿಯಾದದ್ದು ಎಂದು ನಾವು ಅರಿತಿರುತ್ತೇವೆ. ಆದರೆ ಅದನ್ನು ಕೂಡಲೇ ಮಾಡಲು ಕುಂಟು ನೆಪಗಳನ್ನೊಡ್ಡುತ್ತೇವೆ. ದೇವರು ತೋರಿಸಿದ ಬೆಟ್ಟದ ಎತ್ತರಕ್ಕೆ ಹತ್ತುವುದನ್ನು ಸದ್ಯದಲ್ಲಿ ಮಾಡುವುದೇ ಇಲ್ಲ, ಅದನ್ನು ಈಗಿಂದೀಗಲೇ ಮಾಡಬೇಕು. ಬಲಿದಾನವು ಬೆಟ್ಟದ ಮೇಲೆ ನಡೆಯುವ ಮೊದಲೇ ಅದು ಆತ್ಮದಲ್ಲಿ ನಡೆದು ಹೋಗಿರಬೇಕು.

''ಬೆಳಿಗ್ಗೆ ಅಬ್ರಹಾಮನು ಎದ್ದು ಕತ್ತೆಗೆ ತಡಿ ಹಾಕಿಸಿ ಯಜ್ಞಕ್ಕೆ ಬೇಕಾದ ಕಟ್ಟಿಗೆಯನ್ನು ಒಡಿಸಿ ತನ್ನ ಸೇವಕರಲ್ಲಿ ಇಬ್ಬರನ್ನೂ, ತನ್ನ ಮಗನಾದ ಇಸಾಕನನ್ನು, ಕರೆದುಕೊಂಡು ದೇವರು ಹೇಳಿದ ಸ್ಥಳಕ್ಕೆ ಹೊರಟನು'' (ಆದಿಕಾಂಡ 22:3) ಅಬ್ರಹಾಮನದು ಎಂಥಾ ಸರಳತೆ! ದೇವರು ಅವನೊಂದಿಗೆ ಮಾತನಾಡಿದಾಗ ''ಮನುಷ್ಯರ ಆಲೋಚನೆಯನ್ನು ಅವನು ವಿಚಾರಿಸಲಿಲ್ಲ (ಗಲಾತ್ಯ 1:16). ನೀನು ಮನುಷ್ಯರ ಆಲೋಚನೆಗಳನ್ನು , ಅಂದರೆ ನಿನ್ನದೇ ಆದ ಅನುಕಂಪಗಳಾಗಲೀ ನಿನ್ನ ಸ್ವಂತ ಒಳನೋಟ ಮುಂತಾದವುಗಳಾಗಲಿ ದೇವರೊಂದಿಗೆ ನಿನಗಿರುವ ಆತ್ಮೀಯ ಸಂಬಂಧಗಳ ಮೇಲೆ ಆಧಾರಗೊಂಡಿರದ ಇನ್ನೂ ಯಾವುದೇ ಆಗಲಿ, ಅವುಗಳನ್ನು ವಿಚಾರಿಸಬೇಕೆಂದೆನಿಸಿದಾಗ ತುಂಬಾ ಎಚ್ಚರದಿಂದಿರಬೇಕು. ಇವೇ ಮುಂತಾದ ವಿಷಯಗಳೇ ನೀನು ದೇವರಿಗೆ ವಿಧೇಯನಾಗಿರದಂತೆ ದೇವರ ಆದೇಶಗಳಿಗೆ ಸ್ಪರ್ಧಾತ್ಮಕವಾಗಿ ಅಡ್ಡಿಯುಂಟು ಮಾಡುತ್ತವೆ.

ಅಬ್ರಹಾಮನು ಈ ಯಜ್ಞ ಕಾರ್ಯವನ್ನು ತಾನಾಗಿ ಆಯ್ಕೆ ಮಾಡಲಿಲ್ಲ. ದೇವರಿಗಾಗಿ ಸ್ವಂತ ಆಯ್ಕೆ ಮಾಡಿದಸೇವೆಯ ಬಗ್ಗೆ ಎಚ್ಚರದಿಂದಿರಬೇಕು. ಪರಹಿತಕ್ಕಾಗಿ ಸ್ವಹಿತವನ್ನು ಬಿಡುವ, ಅಂದರೆ ಸ್ವಾರ್ಥ ತ್ಯಾಗವು ಒಂದು ರೋಗವಾಗಿರಬಹುದು; ದೇವರು ನಿನ್ನ ಪಾತ್ರೆಯನ್ನು ಮದುರಗೊಳಿಸಿದ್ದರೆ ಕೃತಜ್ಞತೆ ಯಿಂದ ಅದರಲ್ಲಿರುವುದನ್ನು ಕುಡಿದು ಬಿಡು. ಒಂದು ವೇಳೆ ಅದನ್ನು ಕಹಿರುಚಿಯನ್ನಾಗಿ ಮಾಡಿದ್ದರೆ, ದೇವರ ಅನ್ಯೋನ್ಯತೆಯಲ್ಲಿದ್ದೇ ಅದನ್ನು ಕುಡಿದು ಬಿಡು. ದೇವರ ಕೃಪಾಕಾರ್ಯವು ನಿನಗೆ ಸಂಕಷ್ಟದ ಸಮಯವನ್ನು ತಂದೊಡ್ಡಿದ್ದರೆ, ಅದರೊಳಗೆ ಸಾಗಿ ಹೋಗು. ಆದರೆ ನಿನ್ನ ಹುತಾತ್ಮತೆಯ ದೃಷ್ಯಾವಳಿ ಯನ್ನೆಂದಿಗೂ ನೀನೇ ಅಲ್ಲಿ ಆಯ್ಕೆ ಮಾಡಿಕೊಳ್ಳಬೇಡ. ದೇವರು ಅಬ್ರಹಾಮನಿಗಾಗಿ ಅಗ್ನಿ ದಿವ್ಯವನ್ನು (ಬೆಂಕಿಯಲ್ಲಿ ಲೋಹಗಳನ್ನು ಕರಗಿಸುವ ಪಾತ್ರೆ) ಆಯ್ಕೆ ಮಾಡಿದನು, ಅಂದರೆ ಅಬ್ರಹಾಮನು ಅದನ್ನು ಆಕ್ಷೇಪಿಸಲಿಲ್ಲ ದೃಡ ಚಿತ್ತದಿಂದ ಅದರಲ್ಲಿ ಸಾಗಿಹೋದನು. ದೇವರ ಸಂಪರ್ಕ ದಲ್ಲಿ ನೀನು ಜೀವಿಸದೇ ಹೋದರೆ, ದೇವರ ವಿಷಯದಲ್ಲಿ ಅಸಭ್ಯ ತೀರ್ಪನ್ನು ನೀಡುವುದು ನಿನಗೆ ಸುಲಭವಾಗಿರುತ್ತದೆ. ಹಾಗೆ ತೀರ್ಪು ಕೊಡಲು ನಿನಗಿರುವ ಹಕ್ಕಿಗಿಂತ ಮೊದಲು ಅಗ್ನಿ ದಿವ್ಯದೊಳಗೆ ನೀನು ಹಾಯ್ದು ಬರಲೇ ಬೇಕು, ಯಾಕೆಂದರೆ ಆ ಅಗ್ನಿದಿವ್ಯದೊಳಗಿರುವಾಗಲೇ ನೀನು ದೇವರನ್ನು ಹೆಚ್ಚಾಗಿ ಅರಿತುಕೊಳ್ಳುವಿ. ದೇವರು ತನ್ನ ಉದ್ದೇಶ ಮತ್ತು ಮನುಷ್ಯನ ಉದ್ದೇಶಗಳು ಏಕರೂಪವಾಗುವವರೆಗೂ ತನ್ನ ಪರಮೋಚ್ಛ ಗುರಿ ಸಾಧನೆ ಗಾಗಿ ಕಾರ್ಯ ನಿರ್ವಹಿಸುತ್ತಿರುವನು.

# ರೂಪಾಂತರಗೊಂಡ ಜೀವಿತ

**''ಯಾವನಾದರೂ ಕ್ರಿಸ್ತನಲ್ಲಿದ್ದರೆ ಅವನು ನೂತನ ಸೃಷ್ಟಿಯಾದನು. ಇಗೋ ! ಪೂರ್ವಸ್ಥಿತಿ ಹೋಗಿ ಎಲ್ಲಾ ನೂತನವಾಯಿತು'' - (2 ಕೊರಿ 5:17)**

ನಿನ್ನ ಆತ್ಮದ ರಕ್ಷಣೆಯ ಬಗ್ಗೆ ಯಾವ ಕಲ್ಪನೆಯನ್ನು ನೀನು ಹೊಂದಿರುವಿ ? ರಕ್ಷಣೆಯ ಅನುಭವವೆಂದರೆ ನಿನ್ನ ವಾಸ್ತವ ಜೀವಿತದಲ್ಲಿ ಎಲ್ಲಾ ವಿಷಯಗಳಲ್ಲೂ ಬದಲಾವಣೆಯುಂಟಾಗುತ್ತಿರುತ್ತದೆ, ಈ ಮೊದಲು ದೃಷ್ಟಿಸಿದಂತೆ ಸಂಗತಿಗಳನ್ನು ಇನ್ನು ಮುಂದೆ ನೀನು ದೃಷ್ಟಿಸುವುದಿಲ್ಲ; ನಿನ್ನ ಆಶೆಗಳು ಹೊಸತಾಗಿರುತ್ತವೆ, ಹಳೇ ವಿಷಯಗಳು ನಿನ್ನನ್ನಾಕರ್ಷಿಸುವ ಶಕ್ತಿಯನ್ನು ಕಳೆದುಕೊಂಡಿರುತ್ತವೆ. ರಕ್ಷಣಾನುಭವವನ್ನು ಒರೆ ಹಚ್ಚುವ ಒಂದು ವಿಧಾನವೆಂದರೆ ನಿನಗೆ ಮಹತ್ವವಾಗಿರುವ ಸಂಗತಿಗಳನ್ನು ದೇವರು ಬದಲಾಯಿಸಿ ಬಿಟ್ಟಿರುವನೋ ? ನೀನಿನ್ನು ಆ ಹಳೇ ಸಂಗತಿಗಳಿಗಾಗಿ ಹಾತೊರೆಯುತ್ತಿದ್ದರೆ, ಹೊಸದಾಗಿ ಹುಟ್ಟುವುದನ್ನು ಕುರಿತು ಮಾತನಾಡುವುದು ಕೇವಲ ಅಸಂಬದ್ಧತೆ ಹಾಗೂ ನಿನ್ನನ್ನು ನೀನು ಮೋಸಗೊಳಿಸಿಕೊಳ್ಳುವಿ. ನೀನು ಹೊಸದಾಗಿ ಹುಟ್ಟಿದ್ದಾದರೆ, ದೇವರ ಆತ್ಮನು ನಿನ್ನ ನಿಜ ಜೀವನ ದಲ್ಲಿಯೂ ನಿನ್ನ ವಿವೇಚನೆಯಲ್ಲಿಯೂ ಬದಲಾವಣೆಯು ವ್ಯಕ್ತಗೊಳ್ಳುವಂತೆ ಮಾಡುತ್ತಾನೆ ಮತ್ತು ಬಿಕ್ಕಟ್ಟಿನ ಸಮಯವು ನಿನಗುಂಟಾದಾಗ ನಿನ್ನಲ್ಲುಂಟಾಗಿರುವ ಅದ್ಭುತವಾದ ಬದಲಾವಣೆಯು ಆ ಸಮಯದಲ್ಲಿ ವ್ಯಕ್ತಗೊಳ್ಳುವುದರ ಮೂಲಕ, ಭೂಮಿಯ ಮೇಲೆ ಇರುವ ಆಶ್ಚರ್ಯಕರ ವ್ಯಕ್ತಿಯು ನೀನಾಗಿರುವೆ. ಆ ಬಿಕ್ಕಟ್ಟನ್ನು ನೀನೇ ನಿಭಾಯಿಸಿದ್ದೇನೆಂದು ಊಹಿಸುವ ಸಾಧ್ಯತೆಯಿಲ್ಲ. ಪರಿಪೂರ್ಣ ವಾದ ಮತ್ತು ಅಚ್ಚರಿಯ ಬದಲಾವಣೆಯೇ ನಿನ್ನ ಆತ್ಮವು ರಕ್ಷಣೆ ಹೊಂದಿರುವುದಕ್ಕೆ ಸಾಕ್ಷಿಯಾಗಿದೆ. ನನ್ನಲ್ಲಿ ಉಂಟಾಗಿರುವ ರಕ್ಷಣೆ ಮತ್ತು ಪವಿತ್ರೀಕರಣವು ಏನು ವ್ಯತ್ಯಾಸಗಳನ್ನು ಮಾಡಿವೆ? 1ಕೊರಿಂಥ 13ನೇ ಅಧ್ಯಾಯದ ಬೆಳಕಿನಲ್ಲಿ ನಾನು ಇರಬಲ್ಲೆನೋ ಇಲ್ಲವೇ ಜಾರುತ್ತಿರುವೆನೋ ? ಪವಿತ್ರಾತ್ಮವು ನನ್ನಲ್ಲಿ ಕಾರ್ಯಸಾಧನೆ ಮಾಡಿರುವ ರಕ್ಷಣಾ ಕಾರ್ಯವು ನನ್ನನ್ನು ಸಂಪೂರ್ಣವಾಗಿ ನನ್ನನ್ನು ಬಿಡುಗಡೆಗೊಳಿಸುತ್ತದೆ ಮತ್ತು ಎಲ್ಲಿಯವರೆಗೆ ನಾನು, ''ಆತನು ಬೆಳಕಿನಲ್ಲಿರುವಂತೆಯೇ ನಾವೂ ಬೆಳಕಿನಲ್ಲಿ ನಡೆಯುತ್ತಿರು ವವರೆಗೆ'' (1ಯೋಹಾನ 1:7) ನನ್ನ ಜಾಗೃತ ಪ್ರಜ್ಞೆಯಲ್ಲಿ ಅಲ್ಲ - ನನ್ನ ಪ್ರಜ್ಞೆಯ ಅರಿವನ್ನು ಮೀರಿದ ಅಂತರ್ಯದಲ್ಲಿ ಆತನ ಜೀವಿತವು ನನ್ನ ಜೀವಿತದ ಸರ್ವ ಸಂಗತಿಗಳಲ್ಲಿ ಕಾರ್ಯ ಸಾಧಿಸುತ್ತಿರುವುದರಿಂದ ನನ್ನೊಳಗೆ ಖಂಡಿಸುವಂಥಾದ್ದೇನನ್ನೂ ಆತನು ಕಾಣಲಾರನು.

# ನಂಬಿಕೆ ಮತ್ತು ಅನುಭವ

**''ದೇವಕುಮಾರನು ... ನನ್ನನ್ನು ಪ್ರೀತಿಸಿ ನನಗೋಸ್ಕರ ತನ್ನನ್ನು ಒಪ್ಪಿಸಿ ಬಿಟ್ಟನು'' - (ಗಲಾತ್ಯ 2:20)**

ಯೇಸು ಸ್ವಾಮಿಗೆ ನಾವು ಶ್ರದ್ಧೆಯಿಂದಿರುವಂತೆ ಭಾವೋದ್ವೇಗಗಳನ್ನೆದುರಿಸಿ ಹೋರಾಡಬೇಕು ಮತ್ತು ರಹಸ್ಯವಾಗಿರುವ ನಮ್ಮ ಅನುಭವಗಳ ಹೊರಗೆ ಬಂದು ಯೇಸುಕ್ರಿಸ್ತನಿಗಾಗಿ ಅವೆಲ್ಲವನ್ನು ತ್ಯಜಿಸಿ ಆತನಿಗೆ ನಿಷ್ಠೆಯುಳ್ಳವರಾಗಿರಬೇಕು. ಹೊಸ ಒಡಂಬಡಿಕೆಯು ಯೇಸುಕ್ರಿಸ್ತನು ಯಾರು ಎಂದು ಹೇಳುತ್ತ ದೆಂಬುದನ್ನು ಯೋಚಿಸು. ನಂತರ ನಾನು ಪ್ರದರ್ಶಿಸುವ ಶೋಚನೀಯ ನಂಬಿಕೆಯ ಹೀನಭಾವದ ಅಲ್ಪತನದಿಂದ-''ನನಗೆ ಅಂಥಾ ಅನುಭವ ಆಗಿಲ್ಲ, ಇಂಥಾ ಅನುಭವ ನನಗಾಗಿಲ್ಲ'' ಎಂದು ಹೇಳುವುದನ್ನು ಯೋಚಿಸು. ಯೇಸುಕ್ರಿಸ್ತ ನಲ್ಲಿಟ್ಟಿರುವ ನಂಬಿಕೆಯು ಯಾವುದನ್ನು ಪ್ರತಿಪಾದಿಸುತ್ತದೆಂಬುದನ್ನು ಯೋಚಿಸು. ಆತನು ನಮ್ಮನ್ನು ದೋಷವಿಲ್ಲದವರಾಗಿಯೂ ಹೇಳಲಸಾಧ್ಯವಾದಷ್ಟು ಶುದ್ಧರನ್ನಾಗಿಯೂ ಮಾಡಿ ಪೂರ್ಣವಾಗಿ ತಿದ್ದಿ ಸರಿಪಡಿಸಿ, ಶ್ರೇಷ್ಠ ನೀತಿವಂತರೆಂದು ನಿರ್ಣಯಿಸಿ ದೇವರ ಸಿಂಹಾಸನದ ಮುಂದೆ ತಂದು ನಿಲ್ಲಿಸಿದನು. ಅಮೂಲ್ಯ ನಂಬಿಕೆಯಿಂದ, ಸಂಪೂರ್ಣ ಶ್ರದ್ಧೆಯಿಂದ ನಾವು ಆತನಲ್ಲಿ ನೆಲೆಗೊಂಡಿರಬೇಕು. ''ನೀವು ಕ್ರಿಸ್ತನಲ್ಲಿರುವುದು ಆತನಿಂದಲೇ, ಕ್ರಿಸ್ತಯೇಸು ನಮಗೆ ದೇವರ ಕಡೆಯಿಂದ ಜ್ಞಾನವೂ ನೀತಿ ಶುದ್ಧೀಕರಣ ವಿಮೋಚನೆಗಳಿಗೆ ಕಾರಣನಾದನು'' (1ಕೊರಿ 1:30). ನಮಗೋಸ್ಕರ ಆತನು ಹೀಗೆ ಮಾಡಲ್ಪಟ್ಟನು, ಇಂಥ ದೇವ ಕುಮಾರನಿಗಾಗಿ ನಾವು ತ್ಯಾಗ ಮಾಡುತ್ತೇವೆಂದು ಯಾವ ಎದೆಗಾರಿಕೆಯಿಂದ ಹೇಳಬಲ್ಲೆವು! ಸರ್ವನಾಶನದಿಂದ ನರಕದೊಳಗಿಂದ ತಪ್ಪಿಸಲ್ಪಟ್ಟ ರಕ್ಷಣೆ ನಮಗುಂಟಾಗಿದೆ, ನಾವಾದರೋ ಆತನಿಗೋಸ್ಕರ ತ್ಯಾಗ ಮಾಡುವ ಮಾತುಗಳನ್ನಾಡುತ್ತೇವೆ.

ಯೇಸುಕ್ರಿಸ್ತನಲ್ಲಿ ಸತತವಾಗಿ ವಿಶ್ವಾಸವನ್ನಿರಿಸಿ ಕೊಂಡವರಾಗಿ, ಈ ಲೋಕದೊಳಗೆ ಹೋಗಬೇಕು; ಭಕ್ತಿ ಸಂಜೀವನ ಕೂಟದ ಯೆಸುಕ್ರಿಸ್ತನಲ್ಲ, ಪುಸ್ತಕದ ಯೇಸುಕ್ರಿಸ್ತನಲ್ಲ, ಹೊಸ ಒಡಂಬಡಿಕೆಯು ವ್ಯಕ್ತ ಪಡಿಸುವ ಯೇಸುಕ್ರಿಸ್ತನಲ್ಲಿ ಯಾರಲ್ಲಿ ದೇವರು ನರಾವತಾರ ವೆತ್ತಿರುವನೋ, ಯಾರ ಪಾದದಡಿಗಳಲ್ಲಿ ಸತ್ತು ಬೀಳುವಂತೆ ನಮ್ಮನ್ನು ಹೊಡೆಯ ಬಲ್ಲನೋ, ಆತನಲ್ಲಿ ನಿರಂತರ ವಿಶ್ವಾಸವಿಡಬೇಕು. ಯಾರೊಳಗಿಂದ ನಮ್ಮ ರಕ್ಷಣಾನುಭವಗಳು ಹುಟ್ಟಿ ಪುಟಿಯುತ್ತವೆಯೋ, ಆತನಲ್ಲಿ ನಾವು ಶ್ರದ್ಧೆಯಿಂದ ಇರಬೇಕು. ನಮ್ಮನ್ನು ನಾವು ಸಂಪೂರ್ಣವಾಗಿ ತ್ಯಜಿಸಿಕೊಂಡು ಆತನಿಗೆ ನಿಷ್ಠೆಯುಳ್ಳವರಾಗಿರಬೇಕೆಂದು ಯೇಸು ಕ್ರಿಸ್ತನು ಬಯಸುತ್ತಾನೆ. ನಾವೆಂದಿಗೂ ಯೇಸುಕ್ರಿಸ್ತನನ್ನು ವ್ಯಕ್ತಿಗತವಾಗಿ ಅನುಭವಕ್ಕೆ ತಂದುಕೊಳ್ಳಲಾಗದು, ಸ್ವಾರ್ಥತೆ ಯಿಂದ ನಮ್ಮ ಹೃದಯ ಕ್ಷೇತ್ರದಲ್ಲಿಯೇ ಆತನನ್ನು ಹಿಡಿದಿಟ್ಟು ಕೊಳ್ಳಲಾರೆವು, ಆದರೂ ಆತನಲ್ಲಿಟ್ಟಿರುವ ನಮ್ಮ ನಂಬಿಕೆಯು ದೃಢವಾದ ಭರವಸದ ತಳಹದಿಯ ಮೇಲೆ ಕಟ್ಟಲ್ಪಡಬೇಕು.

ನಮ್ಮ ಅನುಭವಗಳ ಮೇಲೆ ನಮಗಿರುವ ಭರವಸೆಯ ಕಾರಣದಿಂದ ಯೇಸುಕ್ರಿಸ್ತನಲ್ಲಿ ನಮಗೆ ಉಂಟಾಗುವ ಅಪನಂಬಿಕೆಯ ವಿರುದ್ಧ ಪವಿತ್ರಾತ್ಮನ ಕಠೋರವಾದ ಅಸಹನೆಯನ್ನು ನಾವು ಕಾಣುತ್ತೇವೆ. ನಮ್ಮೆಲ್ಲಾ ಭಯಗಳು ದುರುದ್ದೇಶದಿಂದ ಕೂಡಿದವುಗಳೇ; ನಾವೇಕೆ ಭಯಗ್ರಸ್ತರಾಗಿರುವೆವೆಂದರೆ ನಮ್ಮಲ್ಲಿ ರುವ ನಂಬಿಕೆಯನ್ನು ನಾವು ಪೋಷಿಸುವುದಿಲ್ಲ. ಯೇಸುಕ್ರಿಸ್ತನೊಡನೆ ಗುರುತಿಸಲ್ಪಟ್ಟವನು ಹೇಗೆ ತಾನೇ ಸಂಶಯ ಅಥವಾ ಭಯಗಳಲ್ಲಿರಬಹುದು! ನಂಬಿಕೆಯು ಸಂಪೂರ್ಣ, ಅದಮ್ಯವಾದ ಜಯ ಗೀತೆಯ ಉತ್ಸಾಹದಿಂದ ತುಂಬಿರಬೇಕು.

# ದೈವ ವಿನ್ಯಾಸಗಳನ್ನು ಕಂಡುಕೊಳ್ಳುವಿಕೆ

**''ನೀಟಾದ ದಾರಿಯಿಂದಲೇ ಕರಕೊಂಡು ಬಂದಿದ್ದಾನೆ'' - (ಆದಿಕಾಂಡ 24:27)**

ಪದೇ ಪದೇ ದೇವರ ಮಾರ್ಗದರ್ಶನವನ್ನು ಕೇಳದಿರುವ ಮಟ್ಟಿಗೆ ನಾವು ಆತನಲ್ಲಿ ಒಂದಾಗಿರಬೇಕು. ಪವಿತ್ರೀಕರಣವೆಂದರೆ ನಾವು ದೇವರ ಮಕ್ಕಳಾಗಿ ಮಾಡಲ್ಪಟ್ಟಿದ್ದೇವೆ; ಮಕ್ಕಳ ಜೀವಿತವು ವಿಧೇಯನಾಗುವುದಿಲ್ಲವೆಂದು ತಾನಾಗಿ ಇಚ್ಛಿಸುವವರೆಗೆ ಅದು ಸಹಜವಾದ ವಿಧೇಯತೆ ಯಿಂದ ಕೂಡಿರುತ್ತದೆ, ಆದರೆ ಅವಿಧೇಯನಾಗಲು ಇಚ್ಛಿಸಿದ ಕೂಡಲೆ ಅಂತರ್ಯದಲ್ಲಿ ಸಂಘರ್ಷವು ಹುಟ್ಟಿಕೊಳ್ಳುತ್ತದೆ. ಆಧ್ಯಾತ್ಮಿಕ ವಲಯದಲ್ಲಿ ಈ ಅಂತರಂಗದ ತಿಕ್ಕಾಟವು, ಅದು ದೇವರಾತ್ಮನು ನೀಡುವ ಮುನ್ನೆಚ್ಚರಿಕೆಯಾಗಿರುತ್ತದೆ. ದೇವರು ತಡೆಯನ್ನುಂಟು ಮಾಡಿದ ಕೂಡಲೇ ಎಲ್ಲವನ್ನೂ ಅಷ್ಟಕ್ಕೇ ನಿಲ್ಲಿಸಿಬಿಟ್ಟು ಆ ಸಂಬಂಧದಲ್ಲಿ ದೇವರ ಚಿತ್ತವೇನೆಂಬುದನ್ನು ತಿಳಿದು ಕೊಳ್ಳುವ ಹಾಗೆ ನಮ್ಮ ಮನಸಾಕ್ಷಿಯನ್ನು ನವೀಕರಿಸಿಕೊಳ್ಳಬೇಕು (ರೋಮ 12:2 ನೋಡಿರಿ). ನಾವು ದೇವರ ಆತ್ಮನಿಂದ ಹೊಸದಾಗಿ ಹುಟ್ಟಿದವರಾಗಿದ್ದರೇ, ನನಗೆ ಇಲ್ಲಿ ದಾರಿ ತೋರಿಸು, ಅಲ್ಲಿ ದಾರಿ ತೋರಿಸು ಎಂದು ದೇವರನ್ನು ಕೇಳಿಕೊಳ್ಳುವದೆಂದರೆ, ಆತನ ಮೇಲೆ ನಮಗಿದ್ದ ಶ್ರದ್ಧೆಯ ಗರ್ಭಪಾತದಂತೆ. ''ದೇವರು ಕರೆದುಕೊಂಡು ಬಂದಿದ್ದಾನೆ'', ಹಾಗೆ ಬಂದ ನಂತರ ನಾವು ಹಿಂತಿರುಗಿ ನೋಡಿದಾಗ, ಅಚ್ಚರಿಯ ಒಂದು ವಿನ್ಯಾಸವು, ಅಂದರೆ ನೀಲ ನಕ್ಷೆಯು ಅಲ್ಲಿರುವುದನ್ನು ನಾವು ಕಾಣುತ್ತೇವೆ ಮತ್ತು ನಾವು ದೇವರಿಂದ ಹುಟ್ಟಿದವರಾಗಿದ್ದರೆ, ನಮಗಾಗಿ ಆತನು ಸಿದ್ಧಪಡಿಸಿದ ಅಂಥಾ ವಿನ್ಯಾಸಕ್ಕಾಗಿ ದೇವರಿಗೆ ಕೃತಜ್ಞತೆಗಳನ್ನು ಸಲ್ಲಿಸುತ್ತೇವೆ.

ನಾವೆಲ್ಲರೂ ಅಸಾಧಾರಣ ವಿಷಯಗಳಲ್ಲಿ ದೇವರನ್ನು ಕಾಣುತ್ತೇವೆ. ಆದರೆ ನಮ್ಮ ಜೀವನದ ಪ್ರತಿಯೊಂದರಲ್ಲಿಯೂ ದೇವರನ್ನು ಕಾಣಲು ಆತ್ಮೀಕ ಶಿಕ್ಷಣದ ಸಂಸ್ಕೃತಿಯು ಬೇಕಾಗಿದೆ. ನಮ್ಮ ಜೀವಿತದಲ್ಲಿ ಉಂಟಾಗುವ ಅಸ್ತವ್ಯಸ್ಥತೆಗಳು ದೇವರ ಆದೇಶಗಳಂತೆ ಇಲ್ಲವೇನೋ ಎನ್ನುವ ಭಾವನೆಗೆ ಆಸ್ಪದ ಕೊಡಬಾರದು, ಆದರೆ ಎಲ್ಲೆಲ್ಲಿಯೂ ದೈವಿಕ ವಿನ್ಯಾಸಗಳನ್ನು ಕಾಣಲು ನಾವು ಸಿದ್ಧರಿರಬೇಕು.

ದೇವರಿಗೆ ನಿಷ್ಠೆಯುಳ್ಳವನಾಗಿರುವುದರ ಬದಲು ನಿನ್ನ ನಿಶ್ಚಿತಾಭಿಪ್ರಾಯಗಳ ಏಕನಿಷ್ಠತೆಯಲ್ಲಿ ಅಂಧಶ್ರದ್ಧೆಯುಳ್ಳವನಾಗಿರುವುದರ ಬಗ್ಗೆ ಎಚ್ಚರದಿಂದಿರಬೇಕು. ''ಅದನ್ನು ನಾನೆಂದಿಗೂ ಮಾಡುವು ದಿಲ್ಲ'' - ಆದರೆ ನೀನು ಸಂತನಾಗಿದ್ದರೆ ಪ್ರಾಯಶಃ ಅದನ್ನೇ ನೀನು ಮಾಡಬೇಕಾಗುತ್ತದೆ. ಭೂಮಿಯ ಮೇಲೆ ನಡೆದಾಡಿದ ನಮ್ಮ ಸ್ವಾಮಿಯವರಂಥ ಅಸಂಗತ ವ್ಯಕ್ತಿ ಬೇರೊಬ್ಬರಿರಲಾರರು, ಆದರೆ ಆತನು ತನ್ನ ತಂದೆಯೊಂದಿಗೆ ಅಸಂಗತನಾಗಿರಲಿಲ್ಲ. ಭಕ್ತನೊಬ್ಬನ ಏಕನಿಷ್ಠೆಯು ಒಂದು ಸಿದ್ಧಾಂತಕ್ಕಾಗಿ ರುವುದಲ್ಲ, ದೈವಿಕ ಜೀವನಕ್ಕಾಗಿ ಇರಬೇಕು. ಇಂಥಾ ದೈವಿಕ ಜೀವಿತವೇ ದೈವಿಕ ಮನೋಗತವನ್ನು ಹೆಚ್ಚು ಹೆಚ್ಚಾಗಿ ಪ್ರಕಟಗೊಳಿಸುತ್ತದೆ. ನಂಬಿಕೆಯುಳ್ಳ ವ್ಯಕ್ತಿಯಾಗಿರುವುದಕ್ಕಿಂತಲೂ ಮತಾಂಧ ನಾಗಿರುವುದು ಸುಲಭ; ನಾವು ದೇವರಲ್ಲಿ ನಂಬಿಗಸ್ತಿಕೆಯಿಂದಿರುವಾಗ, ವಿಶೇಷವಾಗಿ ನಮ್ಮ ಧಾರ್ಮಿಕ ಮೋಸಗಾರಿಕೆಗೆ ಆಶ್ಚರ್ಯ ಪಡುವಂಥಾ ದೀನತೆಗೊಳಪಡಿಸುವಂಥಾದ್ದೊಂದು ಅಲ್ಲಿರುತ್ತದೆ.

# ಅದು ನಿನಗೇನು ?

**''ಸ್ವಾಮಿ, ಇವನ ವಿಷಯವೇನು ? ಎಂದು ಕೇಳಲು - ನಾನು ಬರುವ ತನಕ ಇವನು ಇರಬೇಕೆಂದು ನನಗೆ ಮನಸ್ಸಿದ್ದರೆ, ಅದು ನಿನಗೇನು ? ನೀನು ನನ್ನನ್ನು ಹಿಂಬಾಲಿಸು'' - (ಯೋಹಾನ 21:21-22)**

ಇತರರ ಜೀವಿತದಲ್ಲಿ ನಾವು ತಲೆ ಹಾಕದಿರಲು ಮೊಂಡುತನದ ನಿರಾಕರಿಸುವಿಕೆಯಿಂದ ನಾವು ಕಠಿಣವಾದ ಪಾಠವನ್ನು ಕಲಿಯುತ್ತೇವೆ. ಇತರರ ಸಲುವಾಗಿ ಸರಿಯಾದ ತಿಳುವಳಿಕೆ ಇಲ್ಲದ ಆಶ್ರಯ ದಾತರಾಗಿ ರುವುದರಲ್ಲಿರುವ ಅಪಾಯವನ್ನು ಅರಿಯಲು ಬಹಳಷ್ಟು ಕಾಲ ಬೇಕಾಗುತ್ತದೆ, ಅದೇಂದರೆ, ದೇವರು ಇತರರಿಗೆ ವಿಧಿಸಿದ ಕ್ರಮಗಳಲ್ಲಿ ಹಸ್ತಕ್ಷೇಪ ಮಾಡುವುದು. ಒಬ್ಬಾನೊಬ್ಬ ವ್ಯಕ್ತಿಯು ಬಾಧೆಯನ್ನನು ಭವಿಸುತ್ತಿರುವುದನ್ನು ನೀನು ನೋಡಿ, ಹೀಗೆ ಹೇಳುವೆ ''ಅವನು ಹೀಗೆಲ್ಲಾ ಬಾಧೆ ಪಡಬಾರದು, ಅವನು ಬಾಧೆ ಪಡದಂತೆ ನಾನು ನೋಡಿಕೊಳ್ಳುವೆ''. ಆಗ ನೀನು ದೇವರ ವಿಧಿ ನಿಯಮವನ್ನು ತಡೆಯಲು ನೇರವಾಗಿ ನಿನ್ನ ಹಸ್ತವನ್ನು ಚಾಚಿದರೆ, ದೇವರು ಹೇಳುವನು - ''ಅದು ನಿನಗೇನು'' ಆತ್ಮೀಕ ನಿಶ್ಚಲತೆ ಏನಾದರೂ ನಿನ್ನಲ್ಲಿ ಉಂಟಾದಾಗ, ಹಾಗೆಯೇ ಅದನ್ನು ಮುಂದರಿಯಲು ಬಿಡಬೇಡ, ಆದರೆ ಅದನ್ನು ದೇವರ ಸನ್ನಿಧಿಯಲ್ಲಿ ತಂದು ಅದರ ಕಾರಣವನ್ನು ಕಂಡುಕೋ. ಅದನ್ನು ಬಹುಮಟ್ಟಿಗೆ ಕಂಡುಕೊಳ್ಳುವಿ, ಯಾಕೆಂದರೆ ನೀನಾಗಲೇ ಇತರರ ಜೀವಿತದಲ್ಲಿ ಹಸ್ತಕ್ಷೇಪ ಮಾಡುತ್ತಾ ಇರುವೆ. ಬುದ್ಧಿ ಹೇಳುವ ಹಕ್ಕು ನಿನಗಿಲ್ಲದಾಗ ಬುದ್ಧಿ ಹೇಳುತ್ತಿರುವಿ, ಸಲಹೆ ನೀಡುವ ಹಕ್ಕು ನಿನಗಿರದಿರುವಾಗ, ನೀನು ಅವರಿಗೆ ಸಲಹೆ ನೀಡುತ್ತಾ ಇರುವೆ. ಒಂದೊಮ್ಮೆ ಬೇರೆಯವರಿಗೆ ಬುದ್ಧಿ ಹೇಳಲೇಬೇಕಾದಾಗ ದೇವರು ತನ್ನ ಆತ್ಮನ ನೇರವಾದ ತಿಳುವಳಿಕೆಯನ್ನು ನಿನಗೆ ಕೊಟ್ಟು ನಿನ್ನ ಮೂಲಕ ಅವರಿಗೆ ಸಲಹೆ ನೀಡುವನು; ನಿನ್ನ ಪಾತ್ರವಾದರೋ, ನೀನು ದೇವರೊಂದಿಗೆ ಅಂಥಾ ಯೋಗ್ಯವಾದ ಬಾಂಧವ್ಯವನ್ನು ಹೊಂದಿ ಕೊಂಡಿರಬೇಕು. ಆಗ ದೇವರ ವಿವೇಚನೆಯ ಸಲಹೆಗಳು ಇತರರಿಗೋಸ್ಕರ ಆಶೀರ್ವಾದದಾಯಕವಾಗಿ ಸದಾ ಕಾಲಕ್ಕೂ ನಿನಗೆ ದೊರೆಯುತ್ತಿರುತ್ತವೆ.

ನಮ್ಮಲ್ಲಿ ಅನೇಕರು ತಮ್ಮ ಪ್ರಜ್ಞೆಯ ಮಟ್ಟದಲ್ಲಿಯೇ ಸುತ್ತುತ್ತಾ ಇರುತ್ತಾರೆ. ಅಂದರೆ ಪ್ರಜ್ಞಾ ಪೂರಕವಾಗಿ ಸೇವೆ ಮಾಡುತ್ತಿರುವುದು ಮತ್ತು ಪ್ರಜ್ಞಾಪೂರ್ವಕವಾಗಿಯೇ ದೇವರಿಗೆ ನಿಷ್ಠೆಯುಳ್ಳವ ರಾಗಿರುವುದು; ಇದೆಲ್ಲಾ ಒಂದು ಅಪ್ರಬುದ್ಧ ಜೀವನ - ನಿಜವಾದ ಕ್ರೈಸ್ತ ಜೀವಿತವಲ್ಲ. ಪ್ರಜ್ಞಾಹೀನ ಮಟ್ಟದಲ್ಲಿ ದೇವರ ಮಗುವಿನ ಜೀವನದಲ್ಲಿ ಪ್ರಬುದ್ಧತೆ ಉಂಟಾಗುತ್ತದೆ. ದೇವರು ನಮ್ಮನ್ನು ಉಪಯೋಗಿಸಿಕೊಳ್ಳುತ್ತಿರುವನೆನ್ನುವ ಪ್ರಜ್ಞೆಯು ನಮ್ಮಲ್ಲಿ ಎಂದಿಗೂ ಉಂಟಾಗದಿರುವಷ್ಟರ ಮಟ್ಟಿಗೆ ನಾವು ದೇವರಿಗಾಗಿ ನಮ್ಮನ್ನು ಸಮರ್ಪಿಸಿಕೊಂಡಿರಬೇಕು. ಮುರಿಯಲ್ಪಟ್ಟ ರೊಟ್ಟಿಯಾಗಿ, ಸುರಿಯಲ್ಪಟ್ಟ ದ್ರಾಕ್ಷಾರಸವಾಗಿ ನಾವು ಪ್ರಜ್ಞಾಪೂರ್ವಕವಾಗಿ ಉಪಯೋಗಿಸಲ್ಪಡುತ್ತಿದ್ದರೆ ನಾವು ಮತ್ತೊಂದು ಹಂತವನ್ನು ಇನ್ನೂ ಮುಟ್ಟಬೇಕಾಗಿದೆ, ಯಾವ ಹಂತದಲ್ಲಿ ನಮ್ಮ ಬಗ್ಗೆ ನಮಗಿರುವ ಪ್ರಜ್ಞೆಯೆಲ್ಲವೂ ಮತ್ತು ದೇವರು ನಮ್ಮ ಮೂಲಕ ಏನನ್ನು ಮಾಡುತ್ತಿರುವನೆಂಬ ಪ್ರಜ್ಞೆಯೂ ಸಂಪೂರ್ಣವಾಗಿ ತೆಗೆದು ಹಾಕಲ್ಪಡುತ್ತದೋ ಅಂಥಾ ಹಂತಕ್ಕೆ ಮುಟ್ಟಬೇಕು. ಭಕ್ತನಾದವನು ಪ್ರಜ್ಞಾ ಪೂರ್ವಕವಾಗಿ ಭಕ್ತನಾಗಿರುವುದಿಲ್ಲ; ಅವನು ಪ್ರಜ್ಞಾಪೂರ್ವಕವಾಗಿ ದೇವರ ಮೇಲೆ ಆತು ಕೊಂಡಿರುತ್ತಾನೆ.

# ಇನ್ನೂ ಮಾನವನೇ

**''ಇನ್ನೇನು ಮಾಡಿದರೂ ಎಲ್ಲವನ್ನೂ ದೇವರ ಘನತೆಗಾಗಿ ಮಾಡಿರಿ'' - (1 ಕೊರಿ 10:31)**

ಯೇಸುಕ್ರಿಸ್ತನಲ್ಲಿ ದೇವರ ನರಾವತಾರದ ಮಹಾ ಅದ್ಭುತವು, ಸಾಧಾರಣ ಮಗುವಿನ ಬಾಲ್ಯಾವಸ್ಥೆಯಾಗಿ ನುಸುಳಿ ಹೋಗುತ್ತದೆ; ಬೆಟ್ಟದ ಮೇಲೆ ನಡೆದ ರೂಪಾಂತರದ ಅದ್ಭುತ ವಿಸ್ಮಯವು, ಭೂತ ತುಂಬಿದ ಕಣಿವೆಯಲ್ಲಿ ಕಣ್ಮರೆಯಾಗುತ್ತದೆ. ಪುನರುತ್ಥಾನದ ಅದ್ಭುತ ಮಹಿಮೆಯು, ಸಮುದ್ರ ತೀರದ ಬೆಳಗಿನ ಉಪಹಾರದಲ್ಲಿ ಇಳಿದು ಬರುತ್ತದೆ. ಇದೊಂದು ನಿರಾಶೆಗೊಳಿಸುವ ಮುಕ್ತಾಯವಲ್ಲ ಇದು ದೇವರ ಮಹತ್ವದ ಪ್ರಕಟಿಸುವಿಕೆ.

ನಮ್ಮ ಅನುಭವಗಳಲ್ಲಿಯೇ ವಿಸ್ಮಯಗಳನ್ನು ಕಾಣಬೇಕೆನ್ನುವ ಒಲವು ನಮಗಿದೆ; ವೀರಾವೇಶ ಭಾವವನ್ನೇ ವೀರನೆಂಬುದಾಗಿ ತಪ್ಪಾಗಿ ಗ್ರಹಿಸುತ್ತೇವೆ. ಸಂಕಟಗಳಲ್ಲಿ ಮೆರೆಯುತ್ತಾ ಸಾಗಿ ಹೋಗುವುದು ಒಂದು ವಿಧವಾದರೆ, ದೇವರನ್ನು ಮಹಿಮೆಪಡಿಸುತ್ತಾ ಸಂಕಟಗಳಲ್ಲಿರುವಾಗ, ನೋಡುವ ವರಾರೂ ಇಲ್ಲದೆ, ಅಲ್ಪ ಲಕ್ಷವನ್ನಾದರೂ ತೋರಿಸುವವರಿಲ್ಲದೆ ಮುಂದಕ್ಕೆ ಸಾಗಿ ಹೋಗುವುದು ಇನ್ನೊಂದು ವಿಧ. ಶಿರದ ಸುತ್ತಲೂ ಪ್ರಭಾವ ವಲಯವು ನಮಗೆ ಬೇಕಾಗಿರದಿದ್ದರೂ, ''ಆತನೆಂಥಾ ಆಶ್ಚರ್ಯಕರವಾದ ಪ್ರಾರ್ಥನಾ ವ್ಯಕ್ತಿ ! ಆಧ್ಯಾತ್ಮಿಕತೆಯಿಂದ ತುಂಬಿದವಳೂ, ಧರ್ಮ ಶ್ರದ್ಧೆಯುಳ್ಳವಳೂ ಆಗಿರುವ ಆಕೆ ಎಂಥಾ ಮಹಾನ್ ಸ್ತ್ರೀ!'' ಎಂದು ಜನರು ಹೇಳುವಂಥಾದ್ದೇನೋ ಒಂದನ್ನು ನಾವು ಬಯಸುತ್ತೇವೆ. ನೀನು ಯೇಸು ಸ್ವಾಮಿಯೊಂದಿಗೆ ಯೋಗ್ಯವಾದ ನಿಷ್ಠೆಯಿಂದಿದ್ದರೆ, ಜನರು ನಿನ್ನನ್ನು ವೈಯಕ್ತಿಕವಾಗಿ ಗುರುತಿಸಲಾಗದ ಉದಾತ್ತವಾದ ಉನ್ನತ ಸ್ಥಾನವನ್ನು ನೀನಾಗಲೇ ಮುಟ್ಟಿರುವೆ. ಈಗ ನಿನ್ನಲ್ಲಿ ಗಮನಿಸುವಂಥಾದ್ದು ಏನಿದ್ದರೂ, ಅದು ನಿನ್ನ ಮೂಲಕ ಹೊರ ಹೊಮ್ಮುತ್ತಿರುವ ದೇವರ ಶಕ್ತಿ ಮಾತ್ರವೇ.

''ಓಹ್! ದೇವರಿಂದ ನನಗೊಂದು ಅದ್ಭುತವಾದ ಕರೆ ಬಂದಿದೆ'' ಎಂದು ಹೇಳಲೇನೋ ನಾನು ಬಯಸುತ್ತೇನೆ. ಆದರೆ ದೇವರ ಮಹಿಮೆಗೋಸ್ಕರ ಅತ್ಯಂತ ದೈನ್ಯತೆಯ ಕಾರ್ಯವೆಸಗ ಬೇಕಾದರೆ, ಸರ್ವಶಕ್ತ ದೇವರ ನರಾವತಾರವೇ ನನ್ನೊಳಗೆ ಕಾರ್ಯಮಾಡಬೇಕಾಗುತ್ತದೆ. ಸಂಪೂರ್ಣ ವಾಗಿ ಅಲಕ್ಷಿಸಲ್ಪಟ್ಟ ಗಣನೆಗೆ ಬಾರದ ಸೇವೆಯನ್ನು ನಾನು ಮಾಡಬೇಕಾದರೆ, ದೇವರು ನನ್ನನ್ನು ಪರಿಪೂರ್ಣವಾಗಿ, ಮಾನವೀಯವಾಗಿ ತನ್ನವನ್ನನ್ನಾಗಿಸಿಕೊಳ್ಳಬೇಕು. ಭಕ್ತನ ಜೀವಿತದ ಒಂದು ಪರೀಕ್ಷೆಯೆಂದರೆ ಅದು ಅವನ ಸೇವೆಯಲ್ಲಿ ಸಾಧಿಸಿದ ಯಶಸ್ಸು ಅಲ್ಲ; ತಾನು ಬದುಕುತ್ತಿರುವ ಮಾನವ ಜೀವಿತದಲ್ಲಿ, ಇದ್ದ ಸ್ಥಿತಿಯಲ್ಲಿಯೇ, ದೇವರಿಗೆ ನಂಬಿಗಸ್ಥನಾಗಿರಬೇಕು. ಕ್ರಿಸ್ತೀಯ ಸೇವೆಯಲ್ಲಿ ಯಶಸ್ಸನ್ನೇ ಮುಖ್ಯ ಗುರಿಯನ್ನಾಗಿ ಮಾಡಿರುತ್ತೇವೆ, ಆದರೆ ದೇವರ ಮಹಿಮೆಯನ್ನು ಮಾನವ ಜೀವಿತದಲ್ಲಿ ಪ್ರಕಟಪಡಿಸುವುದೇ ಮುಖ್ಯಗುರಿಯಾಗಿರಬೇಕು; ದೈನಂದಿನ ಸ್ಥಿತಿಗತಿಗಳಲ್ಲಿ ''ಕ್ರಿಸ್ತನಲ್ಲಿ ಮರೆಮಾಚಿದ'' (ಕೊಲೆ 3:3) ಜೀವಿತವನ್ನು ಜೀವಿಸಬೇಕು. ನಮ್ಮ ಮಾನವೀಯ ಸಂಬಂಧಗಳಲ್ಲಿ, ನಮ್ಮ ಸಾಮಾನ್ಯ ಜೀವಿತದ ಸ್ಥಿತಿಗತಿಗಳಲ್ಲಿಯೇ, ದೇವರ ಆದರ್ಶ ಜೀವಿತವನ್ನು ಪ್ರದರ್ಶಿಸಬೇಕು.

# ಶಾಶ್ವತ ಗುರಿ

**''ಯಹೋವನು ನುಡಿದದ್ದನ್ನು ಕೇಳು, ನೀನು ನಿನ್ನ ಒಬ್ಬನೇ ಮಗನನ್ನು ಸಮರ್ಪಿಸುವದಕ್ಕೆ ಹಿಂದೆಗೆಯದೆ ಹೋದದ್ದರಿಂದ... ನಿನ್ನ ಸಂತತಿಯ ಮೂಲಕ ಆಶೀರ್ವಾದವುಂಟಾಗುವುದು ಎಂಬುದಾಗಿ ಯೆಹೋವನು ತನ್ನಾಣೆಯಿಟ್ಟು ಹೇಳಿದ್ದಾನೆ'' - (ಆದಿಕಾಂಡ 22:15-19)**

ದೇವರ ಸತ್ಯ ಸ್ವಭಾವದ ಸಂಪರ್ಕ ಹೊಂದುವ ಸ್ಥಳಕ್ಕೆ ಅಬ್ರಹಾಮನು ತಲುಪಿದನು, ಈಗ ಅವನು ದೇವರ ವಾಸ್ತವವನ್ನು ಅರ್ಥ ಮಾಡಿಕೊಂಡಿದ್ದನು. ''ನನ್ನ ಗುರಿ ದೇವರು ಮಾತ್ರವೇ. ತೆರಬೇಕಾದ ಬೆಲೆ ಎಷ್ಟೇ ಇರಲಿ, ನನ್ನ ಸ್ವಾಮಿ, ದಾರಿಯಾವುದೇ ಇರಲಿ''. ಬೆಲೆ ಎಷ್ಟೇ ಇರಲಿ ಯಾವುದೇ ದಾರಿ ಇರಲಿ ಅಂದರೆ ಗುರಿ ತಲುಪಲು ''ದೇವರು ಕರೆ ತರುವ'' ದಾರಿಯಲ್ಲಿ ನನ್ನ ಸ್ವಂತ ಆಯ್ಕೆಗಳೇನೂ ಇಲ್ಲವೇ ಇಲ್ಲವೆಂಬಷ್ಟರ ಮಟ್ಟಿಗೆ ನನ್ನನ್ನು ಒಪ್ಪಿಸಿಕೊಡಬೇಕು.

ನನ್ನೊಳಗಿರುವ ದೇವರ ಸ್ವಭಾವದೊಂದಿಗೆ ಆತನು ಮಾತನಾಡುವಾಗ ಪ್ರಶ್ನೆ ಮಾಡುವ ಸಾಧ್ಯತೆ ಗಳಿಲ್ಲವೇ ಇಲ್ಲ, ತತ್‌ಕ್ಷಣದ ವಿಧೇಯತೆಯೊಂದೇ ಅದರ ಫಲಿತಾಂಶ. ''ಬನ್ನಿರಿ'' ಎಂದು ಯೇಸುಕ್ರಿಸ್ತನು ಹೇಳಿದಾಗ ನಾನು ಸುಮ್ಮನೇ ಬಂದು ಬಿಡುವೆ, ''ಹೋಗಲಿ ಬಿಡು'' ಎಂದು ಆತನು ಹೇಳಿದಾಗ ಸುಮ್ಮನೆ ಹೋಗಗೊಡುತ್ತೇನೆ, ''ಈ ವಿಷಯಲ್ಲಿ ದೇವರನ್ನು ನಂಬು'' ಎಂದು ಆತನು ಹೇಳಿದಾಗ ನಾನು ನಿಜ ವಾಗಿಯೂ ನಂಬುತ್ತೇನೆ. ಈ ರೀತಿಯ ಕಾರ್ಯ ನಡವಳಿಕೆಯೇ, ದೇವರ ಸ್ವಭಾವ ನನ್ನೊಳಗಿದೆ ಎಂಬುದಕ್ಕೆ ಸಾಕ್ಷಿಯಾಗಿದೆ.

ದೇವರು ತನ್ನನ್ನು ತಾನು ನನಗೆ ಪ್ರಕಟಿಸಿಕೊಳ್ಳುವುದನ್ನು ನನ್ನ ಗುಣಲಕ್ಷಣವು ನಿರ್ಧರಿಸುತ್ತದೆ ಯಲ್ಲದೆ ದೇವರ ಗುಣಗಳಲ್ಲ.

''ನಾನು ನೀಚನಾಗಿರುವ ಕಾರಣ ನಿನ್ನ ಮಾರ್ಗಗಳು ಪದೇಪದೇ ಕೀಳಾಗಿ ನನಗೆ ಕಾಣುತ್ತವೆ''

ವಿಧೇಯತೆಯ ಶಿಕ್ಷಣದ ಮೂಲಕ ಅಬ್ರಹಾಮನು ತಲುಪಿದ ಸ್ಥಳವನ್ನು ನಾನೂ ತಲುಪುತ್ತೇನೆ, ಮತ್ತು ದೇವರು ಯಾರು ಎಂಬುದನ್ನು ಕಾಣುತ್ತೇನೆ. ಯೇಸು ಕ್ರಿಸ್ತನಲ್ಲಿ ದೇವರಿಗೆ ಮುಖಾ ಮುಖಿಯಾಗುವ ತನಕ ನಿಜವಾದ ದೇವರು ನನಗಿರುವುದಿಲ್ಲ. ಅನಂತರವೇ 'ಲೋಕದಲ್ಲೆಲ್ಲಾ ನನ್ನ ದೇವರೇ ನೀನಿಲ್ಲದೆ ನನಗಾರೂ ಇಲ್ಲ' ಎಂಬುದನ್ನು ತಿಳಿಯುತ್ತೇನೆ.

ವಿಧೇಯತೆಯ ಮೂಲಕ ದೇವರ ಸ್ವಭಾವವನ್ನು ಅರಿಯುವ ತನಕ ದೇವರ ವಾಗ್ದಾನಗಳಿಗೇನೂ ಬೆಲೆ ಇರುವುದಿಲ್ಲ. ಮುನ್ನೂರು ಅರವತ್ತೈದು ಸಲ ಸತ್ಯವೇದದಲ್ಲಿ ಏನೇನೋ ಓದಿರುತ್ತೇವೆ. ಆದರೆ ಅವು ನಮಗೆ ಅರ್ಥಪೂರ್ಣವಾಗಿರುವುದಿಲ್ಲ. ಕೆಲವು ವಿಷಯಗಳಲ್ಲಿ ನಾವು ದೇವರಿಗೆ ವಿಧೇಯರಾಗಿರುವ ಕಾರಣ, ನಾವು ಓದಿದವುಗಳಲ್ಲಿ ದೇವರ ಉದ್ದೇಶವನ್ನು ಇದ್ದಕ್ಕಿದ್ದಂತೆ ನಾವು ಕಂಡಿರುತ್ತೇವೆ. ಕೂಡಲೇ ಆತನ ಸ್ವಭಾವವು ನಮಗೆ ಗೋಚರವಾಗಿರುತ್ತದೆ. ''ನಿಶ್ಚಯವಾಗಿ ದೇವರ ವಾಗ್ದಾನಗಳು ಎಷ್ಟಿದ್ದರೂ ಕ್ರಿಸ್ತನಲ್ಲಿ ದೃಢವಾಗುತ್ತವೆ. ಆತನ ಮೂಲಕವಾಗಿ ನಾವು 'ಆಮೆನ್' ಎಂದು ಹೇಳುತ್ತೇವೆ'' (2 ಕೊರಿಂಥ 11-20) ದೃಢಪಡಿಸುವ ''ಹೌದು'' ಎಂಬುವುದು ವಿಧೇಯತೆಯಿಂದ ಹುಟ್ಟಬೇಕು; ನಮ್ಮ ಜೀವಿತದ ವಿಧೇಯತೆ ಯಿಂದ ದೇವರ ವಾಗ್ದಾನಕ್ಕೆ'' ''ಆಮೆನ್'' ಹೇಳಿದ ನಂತರವೇ ಆ ವಾಗ್ದಾನವು ನಮ್ಮದಾಗುತ್ತದೆ.

# ಸ್ವಾತಂತ್ರ್ಯದಲ್ಲಿ ಸೇರುವುದು

**''ಮಗನು ನಿಮ್ಮನ್ನು ಬಿಡುಗಡೆ ಮಾಡಿದರೆ ನಿಜವಾಗಿ ನಿಮಗೆ ಬಿಡುಗಡೆಯಾಗುವದು'' -(ಯೋಹಾ8:36)**

ವೈಯಕ್ತಿಕ ಸ್ವಸಂತೃಪ್ತಿಯ ಅಲ್ಪಶೇಷವೇನಾದರೂ ನಮ್ಮಲ್ಲಿದ್ದರೆ ''ಅದನ್ನು ಮಾಡಲಾರೆ'' ಅಂದರೆ 'ಸ್ವತಂತ್ರನಾಗಲಾರೆ' ಎಂದು ಅದು ಹೇಳುತ್ತದೆ. ಆತ್ಮೀಕ ವ್ಯಕ್ತಿತ್ವವಾದರೋ ''ನನ್ನಿಂದಾಗದು'' ಎಂದು ಹೇಳುವುದಿಲ್ಲ, ಎಲ್ಲವನ್ನು ಹೀರಿಕೊಳ್ಳುತ್ತದೆ ಮತ್ತು ಮತ್ತೂ ಹೀರಿಕೊಳ್ಳುತ್ತದೆ. ಹೀರಿಕೊಳ್ಳುತ್ತಾ ಇರುವ ಆತ್ಮೀಕ ವ್ಯಕ್ತಿತ್ವವು, ಇನ್ನಷ್ಟು ಬೇಕು ಎಂದು ಕೇಳುತ್ತದೆ; ನಾವು ರಚಿಸಲ್ಪಟ್ಟಿರುವುದೇ ಹೀಗೆ. ದೇವರ ಸಲುವಾಗಿ ಅಪಾರಧಾರಣ ಶಕ್ತಿಯುಳ್ಳವರಾಗಿ ನಾವು ರಚಿಸಲ್ಪಟ್ಟಿದ್ದೇವೆ; ಆದರೆ ಪಾಪವು ಹಾಗೂ ನಮ್ಮ ವೈಯಕ್ತಿಕತೆಗಳು ನಮ್ಮನ್ನು ದೇವರ ಹತ್ತಿರಕ್ಕೆ ಬರದಂತೆ ಮಾಡುತ್ತವೆ. ದೇವರು ನಮ್ಮನ್ನು ಪಾಪದಿಂದ ಬಿಡುಗಡೆ ಮಾಡುತ್ತಾನೆ; ಆದರೆ ವೈಯಕ್ತಿಕತೆಯಿಂದ ನಮ್ಮಷ್ಟಕ್ಕೆ ನಾವೇ ಬಿಡುಗಡೆ ಮಾಡಿಕೊಳ್ಳಬೇಕು. ಹೇಗೆಂದರೆ ನಮ್ಮ ಸ್ವಾಭಾವಿಕ ಜೀವಿತವನ್ನು ದೇವರಿಗೆ ಅರ್ಪಿಸಬೇಕು ಮತ್ತು ನಮ್ಮ ವಿಧೇಯತೆಯ ಮುಖಾಂತರ ನಮ್ಮ ಸ್ವಾಭಾವಿಕ ಜೀವನವನ್ನು ಆತ್ಮೀಕ ಜೀವಿತವನ್ನಾಗಿ ದೇವರು ಮಾರ್ಪಾಟು ಮಾಡಲು ಅದನ್ನು ತ್ಯಾಗಾರ್ಪಣೆ ಮಾಡಬೇಕು.

ನಮ್ಮ ಆತ್ಮೀಕ ಜೀವಿತದ ಅಭಿವೃದ್ಧಿ ಮಾರ್ಗದಲ್ಲಿ ನಮ್ಮ ಸಹಜ ವೈಯಕ್ತಿಕತೆಗೆ ದೇವರೆಂದೂ ಗಮನವೀಯುವುದಿಲ್ಲ. ದೇವರ ಯೋಜನೆಯು ನಮ್ಮ ಸಹಜ ಜೀವನದ ಮೂಲಕವೇ ಸಾಗುತ್ತದೆ. ನಾವು ದೇವರಿಗೆ ಬೆಂಬಲ ಮತ್ತು ನೆರವು ನೀಡಬೇಕು, ಅದರ ಬದಲು ಆತನ ವಿರುದ್ಧವಾಗಿ ''ನಾನದನ್ನು ಮಾಡುವುದಿಲ್ಲ'' ಎಂದು ಹೇಳಬಾರದು. ದೇವರು ನಮಗೆ ಶಿಕ್ಷಣವನ್ನು ಕೊಡುವುದಿಲ್ಲ. ನಮ್ಮನ್ನು ನಾವೇ ಶಿಕ್ಷಣಕ್ಕೊಳಪಡಿಸಿಕೊಳ್ಳಬೇಕು. ''ದೇವರು ನಮ್ಮ ಎಲ್ಲಾ ಯೋಚನೆಗಳನ್ನು ಕ್ರಿಸ್ತನಿಗೆ ವಿಧೇಯವಾಗುವಂತೆ ಸೆರೆಹಿಡಿ''ಯುವುದಿಲ್ಲ. (2 ಕೊರಿಂಥ 10:5) ಅದನ್ನು ನಾವೇ ಮಾಡಬೇಕು. ''ಓ ದೇವರೇ! ಅಲೆಮಾರಿ ಆಲೋಚನೆಗಳಿಂದ ತುಂಬಿ ಬಾಧೆಪಡುತ್ತಿರುವೆನು'' ಎಂದು ಹೇಳಬೇಡ. ಅಲೆದಾಡುವ ಯೋಚನೆಗಳಿಂದ ಭಾದೆಯನ್ನೆಂದೂ ಪಡಬಾರದು. ನಿನ್ನ ವೈಯಕ್ತಿಕ ಸಹಜ ಜೀವನದ ದಬ್ಬಾಳಿಕೆಯ ಸ್ವರವನ್ನಾಲಿಸುವುದನ್ನು ಮೊದಲು ನಿಲ್ಲಿಸಿಬಿಟ್ಟು, ಆತ್ಮೀಕ ಜೀವನದ ಸ್ವಾತಂತ್ರ್ಯವನ್ನು ಪಡೆದುಕೊಳ್ಳಬೇಕು.

''ಮಗನು ನಿಮ್ಮನ್ನು ಬಿಡುಗಡೆ ಮಾಡಿದರೆ...'' ಮಗನ ಸ್ಥಳದಲ್ಲಿ ರಕ್ಷಕನನ್ನು ಬದಲಿಡಬೇಡ. ರಕ್ಷಕನು ನಮ್ಮನ್ನು ಪಾಪದಿಂದ ಮುಕ್ತಗೊಳಿಸುತ್ತಾನೆ. ಮಗನು ನನ್ನನ್ನು ವೈಯಕ್ತಿಕತೆಯ ಬಂಧನದಿಂದ ಬಿಡುಗಡೆ ಮಾಡಿರುವುದರಿಂದ ಈ ಸ್ವಾತಂತ್ರ್ಯವು ನನಗೆ ಲಭ್ಯವಾಗಿದೆ. ಶ್ರೀ ಪೌಲನು ಗಲಾತ್ಯ 2:20ರಲ್ಲಿ ಏನು ಹೇಳಿರುವನೋ ಅದರ ಅರ್ಥ - ''ಕ್ರಿಸ್ತನೊಂದಿಗೆ ಶಿಲುಬೆಗೆ ಹಾಕಿಸಿ ಕೊಂಡವ ನಾಗಿದ್ದೇನೆ'' ಅಂದರೆ ಅವನ ಸ್ವಭಾವಸಿದ್ಧ ವೈಯಕ್ತಿಕ ಜೀವಿತವು ಮುರಿಯಲ್ಪಟ್ಟಿದೆ ಮತ್ತು ಅವನ ವ್ಯಕ್ತಿತ್ವವು ತನ್ನ ಸ್ವಾಮಿಯ ವ್ಯಕ್ತಿತ್ವದೊಳಗೆ ಸೇರಿ ಹೋಗಿದೆ, - ಕರಗಿ ಹೋಗಿದೆ ಎಂದಲ್ಲ, ಅದು ಐಕ್ಯಗೊಂಡಿದೆ; ''ನಿಜವಾಗಿ ನಿಮಗೆ ಬಿಡುಗಡೆಯಾಗುವುದು'' ಇದು ಅರ್ಥಪೂರ್ಣವಾದ ಸ್ವಾತಂತ್ರ - ಅಂತರಂಗದ ಹಿಡಿತವಿರದ ಸ್ವಾತಂತ್ರ. ಯೇಸುಕ್ರಿಸ್ತನಲ್ಲಿ ಗುರುತಿಸಿಕೊಳ್ಳಲು ಒಲವುಳ್ಳವರಾಗುವಂತೆ ಮಾಡುವ ಬದಲು ನಮಗೇ ವ್ಯಕ್ತಿಗತ ಬಲವು ಬೇಕೆಂದು ನಾವು ಒತ್ತಾಯ ಮಾಡುತ್ತೇವೆ.

# ಆತನು ಬಂದಾಗ ...

**''ಆತನು ಬಂದು, ಪಾಪ ನೀತಿ ನ್ಯಾಯತೀರ್ವಿಕೆ ಈ ವಿಷಯಗಳಲ್ಲಿ ಲೋಕಕ್ಕೆ ಅರುಹನ್ನು ಹುಟ್ಟಿಸುವನು '' - (ಯೋಹಾನ 16:8)**

ಪಾಪಾಪರಾಧ ನಿರ್ಣಯದ ಅರುಹುವಿನ ಬಗ್ಗೆ ಒಂದಷ್ಟನ್ನು ನಮ್ಮಲ್ಲಿ ಕೆಲವರು ತಿಳಿದಿರುವರು; ನಾವು ತಪ್ಪಾದವುಗಳನ್ನು ಮಾಡಿರುವದರಿಂದುಂಟಾದ ತಿಕ್ಕಾಟದ ಅನುಭವವನ್ನು ನಾವು ಬಲ್ಲೆವು; ಆದರೆ ಪವಿತ್ರಾತ್ಮನಿಂದಾಗುವ ಪಾಪಾಪರಾಧ ನಿರ್ಣಯದ ಅರುಹು ಭೂಮಿಯ ಮೇಲಿರುವ ಪಾಪದ ಸಂಬಂಧಗಳನ್ನೆಲ್ಲಾ ಅಳಿಸಿ ಹಾಕಿ, ಒಂದನ್ನು ಮಾತ್ರವೇ ಉಳಿಸುತ್ತದೆ. ಅದು ''ನಿನಗೇ, ಕೇವಲ ನಿನಗೇ ತಪ್ಪು ಮಾಡಿದ್ದೇನೆ'' (ಕೀರ್ತನೆ 51:4) ಈ ಪರಿಯಾಗಿ, ಒಬ್ಬ ಮನುಷ್ಯನು ಪಾಪಾಪರಾಧ ನಿರ್ಣಯದ ಅರುಹನ್ನು ಹೊಂದಿದಾಗ, ತನ್ನ ಪಾಪವನ್ನು ಕ್ಷಮಿಸುವಂಥ ಸಾಹಸವನ್ನು ದೇವರು ಮಾಡಲಾರನೆಂದು ತನ್ನ ಪೂರ್ಣ ಮನಸಾಕ್ಷಿಯಿಂದ ತಿಳಿದಿರುತ್ತಾನೆ. ಒಂದು ವೇಳೆ ದೇವರು ಅವನನ್ನು ಕ್ಷಮಿಸುವುದಾದರೆ, ದೇವರ ನ್ಯಾಯಪರತೆಗಿಂತಲೂ ತನ್ನಲ್ಲೇ ಹೆಚ್ಚಾದ ನ್ಯಾಯ ಪರತೆ ಇದೆ ಎಂದು ಭಾವಿಸಿಕೊಳ್ಳುತ್ತಾನೆ. ದೇವರು ಖಂಡಿತವಾಗಿಯೂ ಕ್ಷಮಿಸುವನು. ಆದರೆ ಹಾಗೆ ಮಾಡಲು ಆತನು ಯೇಸುಕ್ರಿಸ್ತನ ಮರಣದಲ್ಲಿ ಮಹಾವ್ಯಥೆಯಿಂದ, ತನ್ನ ಹೃದಯವನ್ನೇ ಸೀಳಿಕೊಡುವ ಬೆಲೆಯನ್ನು ಅವನ ಪಾಪಗಳ ಕ್ಷಮೆಗಾಗಿ ಆತನು ತೆರಬೇಕಾಗಿರುತ್ತದೆ. ದೇವರ ಕೃಪಾ ಮಹತ್ವದ ಅದ್ಭುತ ಕಾರ್ಯವೆಂದರೆ ಆತನು ಪಾಪವನ್ನು ಕ್ಷಮಿಸುತ್ತಾನೆ. ಪಾಪ ಕ್ಷಮಾಪಣೆ ಮಾಡುವಂತೆಯೂ ಮತ್ತು ಹಾಗೆ ಮಾಡುತ್ತಿರುವಾಗ ತನಗೆ ತಾನು ಪರಿಶುದ್ಧತೆಯಲ್ಲಿರುವಂತೆಯೂ ದೈವಸ್ವಭಾವವನ್ನು ಯೇಸುಕ್ರಿಸ್ತನ ಮರಣವೊಂದೇ ಬಲಪಡಿಸುತ್ತದೆ. ದೇವರು 'ಪ್ರೀತಿ'ಯಾಗಿರುವುದರಿಂದ ಪಾಪವನ್ನು ಕ್ಷಮಿಸಿಯೇ ಕ್ಷಮಿಸುವನೆಂಬು ದೊಂದು ಅಸಂಬದ್ಧತೆಯ ಹೇಳಿಕೆ. ನಾವು ಪಾಪಾಪರಾಧದ ನಿರ್ಣಯದ ಅರಿವಿಗೊಳಗಾಗಿದ್ದರೆ ಆ ರೀತಿಯಲ್ಲಿ ಹೇಳುವುದೇ ಇಲ್ಲ. ದೇವರ ಪ್ರೀತಿ ಎಂದರೆ ಅದು ಕಲ್ವಾರಿಯೇ, ಅದಕ್ಕಿಂತ ಅಲ್ಪವೂ ಕಡಿಮೆಯಲ್ಲ; ದೇವರ ಪ್ರೀತಿಯು ಶಿಲುಬೆಯ ಮೇಲೆ ನುಡಿಯಲ್ಪಟ್ಟಿದೆ, ಬೇರೆಲ್ಲಿಯೂ ಇಲ್ಲ. ನನ್ನ ಸ್ವಾಮಿಯಾದ ಯೇಸುಕ್ರಿಸ್ತನ ಶಿಲುಬೆಯ ಮರಣದ ನೆಲೆಯಲ್ಲಿ ಮಾತ್ರವೇ ದೇವರು ನನ್ನನ್ನು ಕ್ಷಮಿಸುತ್ತಾನೆ. ಅಲ್ಲಿ ಆತನ ಆಂತರ್ಯವು ತೃಪ್ತಿಗೊಂಡಿದೆ.

ಪಾಪಕ್ಷಮಾಪಣೆಯೆಂದರೆ - ನಾನು ನರಕದಿಂದ ರಕ್ಷಿಸಲ್ಪಟ್ಟಿದ್ದೇನೆ, ಮತ್ತು ಸ್ವರ್ಗಕ್ಕಾಗಿ ನನ್ನನ್ನು ಯೋಗ್ಯನನ್ನಾಗಿ ಮಾಡಲಾಗಿದೆ ಎಂದು ಅರ್ಥವಲ್ಲ. (ಇಂಥಾ ನೆಲೆಯ ಮೇಲೆ ಯಾವೊಬ್ಬ ವ್ಯಕ್ತಿಯೂ ಈ ಪಾಪಕ್ಷಮಾಪಣೆಯನ್ನು ಸ್ವೀಕರಿಸಲಾರನು.) ಪಾಪಕ್ಷಮಾಪಣೆಯೆಂದರೆ - ಮರು ಸೃಷ್ಟಿಸಿದ ಬಾಂಧವ್ಯದೊಳಗೆ ಸೇರಿ ಹಾಗೂ ಯೇಸುಕ್ರಿಸ್ತನಲ್ಲಿ ಗುರುತಿಸಿಕೊಂಡು ದೇವರೊಂದಿಗೆ ಒಂದಾಗಿರುವಿಕೆ. ಬಿಡುಗಡೆಯ ಅದ್ಭುತವೆಂದರೆ ನನ್ನೊಳಗೆ ನೂತನ ಸ್ವಭಾವವನ್ನು - ಯೇಸುಕ್ರಿಸ್ತನ ಸ್ವಭಾವವನ್ನಿರಿಸುವುದರ ಮೂಲಕ, ದೇವರು ಕಲುಷಿತನಾದ ನನ್ನನ್ನು ಮಹಾಪರಿಶುದ್ಧನಾದ ತನ್ನ ಮಟ್ಟಕ್ಕೆ ಮಾರ್ಪಡಿಸಿ ಬಿಡುವನು.

# ದೇವರಿಂದುಂಟಾಗುವ ಪಾಪಕ್ಷಮಾಪಣೆ

**ಆತನ ಪ್ರಿಯನಲ್ಲಿಯೇ ...... ''...... ನಮ್ಮ ಅಪರಾಧಗಳು ಪರಿಹಾರವಾಗಿ ನಮಗೆ ಬಿಡುಗಡೆಯಾಯಿತು'' - (ಎಫೆಸ 1:7)**

ದೇವರ ಪಿತೃತ್ವದ ಬಗ್ಗೆ ಹರ್ಷಭರಿತ ದೃಷ್ಟಿಯುಳ್ಳವನಾಗಿರುವುದರ ಬಗ್ಗೆ ಎಚ್ಚರಿಕೆ ಇರಲಿ - ದೇವರು ಮಹಾಕರುಣೆಯುಳ್ಳವನೂ ಮತ್ತು ಪ್ರೀತಿಯುಳ್ಳವನೂ ಆಗಿರುವುದರಿಂದ, ನಮ್ಮ ಪಾಪ ಗಳನ್ನು ಕ್ಷಮಿಸಿಯೇ ಕ್ಷಮಿಸುವನು. ಅದು ಕೇವಲ ಭಾವುಕತೆಯೇ ಹೊರತು ಅದರ ಬಗ್ಗೆ ಹೊಸ ಒಡಂಬಡಿಕೆಯಲ್ಲಿ ಪ್ರಸ್ತಾಪವಿಲ್ಲ. ಯೇಸುಕ್ರಿಸ್ತನ ಶಿಲುಬೆಯ ಭೀಕರ ದುರಂತದ ತಳಹದಿಯ ಮೇಲೆ ಮಾತ್ರವೇ ದೇವರು ನಮ್ಮ ಪಾಪಗಳನ್ನು ಕ್ಷಮಿಸುತ್ತಾನೆ; ಬೇರಿನ್ನಾವುದೇ ತಳಹದಿಯ ಮೇಲೆ ಪಾಪ ಕ್ಷಮಾಪಣೆಯನ್ನು ಪ್ರತಿಪಾದಿಸುವುದು ಪ್ರಜ್ಞಾ ಶೂನ್ಯವಾದ ದೇವ ದೂಷಣೆ. ದೇವರು ನಮ್ಮ ಪಾಪಗಳನ್ನು ಕ್ಷಮಿಸುವುದಕ್ಕೆ ಮತ್ತು ತನ್ನ ಪ್ರಸನ್ನತೆಯಲ್ಲಿ ನಮ್ಮನ್ನು ಪುನಃ ಸ್ಥಾಪಿಸುವುದಕ್ಕೆ ಇರುವ ಒಂದೇ ಒಂದು ಮಾರ್ಗ - ಅದು ಕ್ರಿಸ್ತನ ಶಿಲುಬೆ. ಅದರ ಮೂಲಕವೇ ಹೊರತು ಬೇರೆ ಯಾವ ಮಾರ್ಗದಿಂದಲೂ ಅಲ್ಲ. ಪಾಪ ಕ್ಷಮಾಪಣೆಯನ್ನು ನಾವು ಸುಲಭವಾಗಿ ಹೊಂದಿಕೊಳ್ಳುವುದಕ್ಕಾಗಿ ಕಲ್ವಾರಿಯಲ್ಲಿ ಅಪಾರ ವೇದನೆಯ ಬೆಲೆ ತೆರಲಾಗಿದೆ. ಪಾಪ ಕ್ಷಮಾಪಣೆ, ವರವಾಗಿರುವ ಪರಿಶುದ್ಧಾತ್ಮ ಹಾಗೂ ನಮ್ಮ ಶುದ್ಧೀಕರಣ, ಇವುಗಳನ್ನು ಸರಳ ನಂಬಿಕೆಯಿಂದ ಪಡೆದಿದ್ದೇವೆಂದು ಎಂದಿಗೂ ಭಾವಿಸ ಬಾರದು. ಇದೆಲ್ಲವನ್ನು ನಮಗೊದಗಿಸಲು ದೇವರು ತೆತ್ತಿರುವ ಅಪಾರವಾದ ಬೆಲೆಯನ್ನು ಅಷ್ಟೇ ಸುಲಭವಾಗಿ ಮರೆಯಲು ಸಹ ಸಾಧ್ಯವಿದೆ.

ಪಾಪ ಕ್ಷಮಾಪಣೆಯು ದೇವರ ಕೃಪೆಯ ಅದ್ಭುತಕಾರ್ಯ; ದೇವರು ತಾನು ಪರಿಶುದ್ಧ ನಾಗಿದ್ದುಕೊಂಡೇ ನಮ್ಮ ಪಾಪವನ್ನು ಕ್ಷಮಿಸುವ ಮೊದಲೇ ಯೇಸುಕ್ರಿಸ್ತನ ಶಿಲುಬೆಯಲ್ಲಿ ತಾನೇ ಅಪಾರ ಬೆಲೆಯನ್ನು ತೆತ್ತನು. ಯೇಸುಕ್ರಿಸ್ತನ ಪ್ರಾಯಶ್ಚಿತ್ತ ಯಜ್ಞವನ್ನು ಮರೆಮಾಡಿರುವ ದೇವರ ಪಿತೃತ್ವದ ದೃಷ್ಟಿಯನ್ನೆಂದಿಗೂ ಒಪ್ಪಿಕೊಳ್ಳಬಾರದು. ಪಾಪವನ್ನೆಂದಿಗೂ ಕ್ಷಮಿಸದಿರುವುದೇ, ದೇವರ ಪ್ರಕಟಿಸುವಿಕೆ ಯಾಗಿದೆ; ಆತನು ಪಾಪವನ್ನು ಕ್ಷಮಿಸಿದರೆ ತನ್ನ ಸ್ವಭಾವವನ್ನು ತಾನೇ ಅಲ್ಲಗಳೆ ದಂತಾಗುತ್ತದೆ. ಪ್ರಾಯಶ್ಚಿತ್ತ ಯಜ್ಞದ ಮೂಲಕ ಮಾತ್ರವೇ ನಾವು ದೇವರ ಬಳಿಗೆ ತಿರುಗಿ ಕರೆತರಲ್ಪಡುತ್ತೇವೆ ಮತ್ತು ನಮ್ಮ ಪಾಪವು ಕ್ಷಮಿಸಲ್ಪಡುತ್ತದೆ. ದೇವರು ಮಾಡುವ ಪಾಪ ಕ್ಷಮೆಯು ಅಲೌಕಿಕವಾದ ಕ್ಷೇತ್ರದಲ್ಲಿ ಮಾತ್ರ ಸಹಜ ವಾಗಿರುತ್ತದೆ.

ಪಾಪ ಕ್ಷಮಾಪಣೆಯ ಅದ್ಭುತಕ್ಕೆ ಹೋಲಿಸಿದಾಗ ಶುದ್ಧೀಕರಣದ ಅನುಭವವು ಲಘುವಾಗಿ ಕಾಣಿಸುತ್ತದೆ. ಮಾನವ ಜೀವಿತದಲ್ಲಿ ಪಾಪಕ್ಷಮಾಪಣೆಯ ಅಮೋಘವಾದ ವಾಸ್ತವಿಕ ನಿರೂಪಣೆಯೇ ಈ ಶುದ್ಧೀಕರಣವಾಗಿದೆ; ಆದರೆ ಒಬ್ಬ ವ್ಯಕ್ತಿಯ ಜೀವಿತದಲ್ಲಿ ಕೃತಜ್ಞತೆಯ ಗಾಢವಾದ ಹಾತೊರೆಯು ವಿಕೆಯನ್ನು ಎಚ್ಚರಗೊಳಿಸುವಂಥಾದ್ದು, ಅದು ದೇವರು ಪಾಪವನ್ನು ಕ್ಷಮಿಸಿಬಿಟ್ಟಿರುವನು ಎಂಬುದೇ. ಪೌಲನು ಈ ಸತ್ಯದಿಂದ ದಾರಿ ತಪ್ಪಲಿಲ್ಲ. ನಿನ್ನನ್ನು ಕ್ಷಮಿಸಲು ಎಷ್ಟು ಅಪಾರ ಬೆಲೆಯನ್ನು ದೇವರು ತೆರಬೇಕೆಂಬುದು ನಿನಗೊಮ್ಮೆ ಅರ್ಥವಾದಾಗ ಕಬ್ಬಿಣದ ಬಿಗಿಹಿಡಿಕೆಯಲ್ಲಿ ಬಲವಾಗಿ ಹಿಡಿದಿಟ್ಟಿರುವಂತೆ, ದೇವರ ಮಹಾ ಪ್ರೀತಿಯಲ್ಲಿ ನೀನು ಬಂಧಿಸಲ್ಪಡುವಿ.

# ತೀರಿತು

**''ಮಾಡ ಬೇಕೆಂದು ನೀನು ನನಗೆ ಕೊಟ್ಟ ಕೆಲಸವನ್ನು ನಾನು ನೆರವೇರಿಸಿ'' – (ಯೋಹಾನ 17:4)**

ಇತಿಹಾಸದಲ್ಲಿ ನಡೆದುಹೋದ ಯೇಸುಕ್ರಿಸ್ತನ ಮರಣವು ದೇವರ ಅತ್ಯಮೂಲ್ಯ ಮನೋಗತ ವಾಗಿದೆ. ಯೇಸುಕ್ರಿಸ್ತನೊಬ್ಬ ಹುತಾತ್ಮನೆಂದು ಭಾವಿಸಲು ಯಾವ ಅವಕಾಶವೂ ಇಲ್ಲ ; ಯಾವ ಮರಣವನ್ನು ತಡೆಯಬಹುದಾಗಿತ್ತೋ, ಅಂಥದೊಂದು ಮರಣವು ಆತನದಾಗಿರಲಿಲ್ಲ. ಆತನು ಈ ಲೋಕಕ್ಕೆ ಬಂದ ನಿಜಕಾರಣವೇ ಆತನ ಮರಣ.

ದೇವರು ನಮ್ಮ ತಂದೆ ಮತ್ತು ಆತನು ನಮ್ಮನು  ಬಹುವಾಗಿ ಪ್ರೀತಿಸುತ್ತಿರುವುದರಿಂದ ನಮ್ಮನ್ನು ಕ್ಷಮಿಸುವನು ಎಂಬ ಆಧಾರದ ಮೇಲೆ ಪಾಪಕ್ಷಮಾಪಣೆಯ ವಿಷಯದಲ್ಲಿ ನಿನ್ನ ಬೋಧನೆಯನ್ನೆಂದಿಗೂ ರಚಿಸಬೇಡ. ಹಾಗೆ ಮಾಡುವುದು ಯೇಸುಕ್ರಿಸ್ತನಲ್ಲಿ ಪ್ರಕಟಗೊಂಡ ದೈವಸತ್ಯದ ಮಿಥ್ಯ ಪ್ರತಿಪಾದನೆ ಯಾಗುತ್ತದಲ್ಲದೆ ಅದು ಯೇಸುಕ್ರಿಸ್ತನ ಶಿಲುಬೆಯನ್ನು ಅನಗತ್ಯ ಮಾಡುತ್ತದೆ ಮತ್ತು ಪಾಪ ವಿಮೋಚನೆಯನ್ನು ಖಾಲಿ ಹರಟೆಯನ್ನಾಗಿಸಿ ಬಿಡುತ್ತದೆ. ದೇವರು ಪಾಪವನ್ನು ಕ್ಷಮಿಸಿರುವುದು ನಿಜವಾಗಿದ್ದರೆ ಅದಕ್ಕೆ ಕಾರಣ ಯೇಸುಕ್ರಿಸ್ತನ ಮರಣವೇ. ತನ್ನ ಮಗನ ಮರಣದ ಮುಖಾಂತರವಲ್ಲದೆ, ಬೇರಾವ ಮಾರ್ಗದಿಂದಲೂ ಮನುಷ್ಯರ ಪಾಪಗಳನ್ನು ದೇವರು ಕ್ಷಮಿಸುವುದಿಲ್ಲ. ತನ್ನ ಮರಣದಿಂದಲೇ ಯೇಸುಕ್ರಿಸ್ತನು ರಕ್ಷಕನಾಗಿ ಮಹಿಮೆ ಹೊಂದಿದ್ದಾನೆ. ''ಯೇಸುವು .......... ಮೃತ ಪಟ್ಟದ್ದರಿಂದಲೇ ಮಾನ ಪ್ರಭಾವಗಳನ್ನು ಹೊಂದಿದ್ದನು'' (ಇಬ್ರಿಯ 2:9) ಮಹಾ ಶಬ್ದದ ವಿಜಯ ಘೋಷಣೆಯೊಂದು ಸೃಷ್ಟಿಯ ಕಿವಿಗಳ ಮೇಲೆ ಬೆಚ್ಚಿಬೀಳುವಂತೆ ಎಂದಾದರೂ ಧ್ವನಿಸಿದ್ದರೆ,  ಅದು ಯೇಸುಕ್ರಿಸ್ತನ ಶಿಲುಬೆಯ ಮೇಲೆ ಧ್ವನಿಸಿತ್ತು. ''ತೀರಿತು'' (ಯೋಹಾನ 19:30) ಮಾನವನನ್ನು ಅವನ ಪಾಪದಿಂದ ಬಿಡುಗಡೆಮಾಡಿದ ಅಂತಿಮ ಮಹಾಶಬ್ದವೇ ಇದು.

ದೇವರ ಮಹಾಪ್ರೀತಿಯ ಬಗ್ಗೆ ತಪ್ಪಾದ ದೃಷ್ಟಿಯನ್ನು ಹೊಂದಿ, ದೇವರ ಮಹಾ ಪರಿಶುದ್ಧತೆ ಯನ್ನು ಕಿರಿದಾಗಿಸುವ ಮತ್ತು ಅಳಿಸಿ ಹಾಕುವ ಯಾವುದೇ ಬೋಧನೆಯು, ಯೇಸುಕ್ರಿಸ್ತನು ಪ್ರತಿಪಾದಿಸಿದ ದೇವರ ವಿಷಯದ ಪ್ರಕಟಿಸುವಿಕೆಯನ್ನು ಅಸತ್ಯವೆಂದು ತೋರಿಸುತ್ತದೆ. ದೇವರಿಗೆ ವಿರೋಧವಾಗಿ ಯೇಸುಕ್ರಿಸ್ತನು ನಮ್ಮ ಮೇಲೆ ತನಗಿರುವ ಕರುಣೆ ಮತ್ತು ಅನುಕಂಪಗಳಿಂದ ನಮ್ಮ ಜೊತೆಗಿರುತ್ತಿರುವನು; ಮತ್ತು ನಮ್ಮ ಮೇಲಿರುವ ಆತನ ಅಂತಕರಣದಿಂದ ನಮಗಾಗಿ ಆತನು ಶಾಪಗ್ರಸ್ತನಾದನು ಎಂಬುವ ಆಲೋಚನೆಗೆ ಆಸ್ಪದ ಕೊಡಬಾರದು. ದೈವ ಶಾಸನಕ್ಕಾನುಸಾರವಾಗಿ ಯೇಸುಕ್ರಿಸ್ತನು ನಮಗಾಗಿ ಶಾಪಗ್ರಸ್ತ ನಾದನು. ''ಶಾಪಗ್ರಸ್ತನು'' ಎಂಬುವ ಭೀಕರತೆಯಿಂದ ಕೂಡಿದ ಪಾಪಪ್ರಜ್ಞೆಯನ್ನು ಅರಿಯುವುದಷ್ಟೇ ನಮ್ಮ ಪಾಲಿಗಿರುತ್ತದೆ, ನಾಚಿಕೆ ಮತ್ತು ಪಶ್ಚಾತ್ತಾಪವೆಂಬುವ ಬಳುವಳಿಗಳನ್ನು ಪಾಪಪ್ರಜ್ಞೆಯು ನೀಡುತ್ತದೆ; ಇದು ನಿಜವಾಗಿಯೂ ದೇವರ ಮಹಾಕರುಣೆಯೇ. ಯೇಸುಕ್ರಿಸ್ತನು ಮನುಷ್ಯನಲ್ಲಿರುವ ಪಾಪವನ್ನು ದ್ವೇಷಿಸುತ್ತಾನೆ. ಆತನ ದ್ವೇಷದ ಅಂದಾಜು ಎಷ್ಟೆಂದರೆ ಅದು ಕಲ್ವಾರಿಯೇ.

# ಲಘುವಾದವುಗಳು ಮತ್ತು ಗಹನವಾದವುಗಳು

**''ಹೀಗಿರಲಾಗಿ ನೀವು ಉಂಡರೂ ಕುಡಿದರೂ ಇನ್ನೇನು ಮಾಡಿದರೂ ಎಲ್ಲವನ್ನೂ ದೇವರ ಘನತೆಗಾಗಿ ಮಾಡಿರಿ'' - (1 ಕೊರಿಂಥ 10:31)**

ಜೀವಿತದ ಆಳವಿಲ್ಲದ ಹಿತಾಸಕ್ತಿಗಳೆಲ್ಲವೂ ದೇವರಿಂದ ನೇಮಿಸಲ್ಪಟ್ಟಿಲ್ಲ ಎಂಬ ಯೋಚನೆಗೆ ಆಸ್ಪದ ವೀಯುವುದರ ಬಗ್ಗೆ ಎಚ್ಚರದಿಂದಿರಬೇಕು; ಗಹನವಾದವುಗಳು ಹೇಗೊ ಹಾಗೆಯೇ ಆಳವಿಲ್ಲದವುಗಳು ಸಹ ದೇವರಿಂದ ವಿಧಿಸಲ್ಪಟ್ಟಿರುತ್ತವೆ. ದೇವರಲ್ಲಿ ನೀನಿಟ್ಟಿರುವ ಶ್ರದ್ಧೆಯು, ನಿನ್ನ ಆಳವಿಲ್ಲದ ಹಿತಾಸಕ್ತಿಗಳನ್ನು ನೀನು ನಿರಾಕರಿಸುವಂತೆ ಮಾಡುವುದಿಲ್ಲವಾದರೂ ನಾನು ಮಾತ್ರ ಆಳವಿಲ್ಲದವನಲ್ಲ ಎಂದು ಇತರರ ಮೇಲೆ ಪ್ರಭಾವ ಬೀರುವ ಆಶೆಯಿಂದ ಆಳವಿಲ್ಲದವುಗಳನ್ನು ನಿರಾಕರಿಸಿರುವಿ. ಆದರದು, ಖಂಡಿತವಾಗಿಯು ನೀನೊಬ್ಬ ಆತ್ಮೀಕ ದುರಹಂಕಾರಿ ಎಂಬುದರ ಪ್ರತೀಕವಾಗಿದೆ. ಈ ರೀತಿಯಲ್ಲಿಯೇ ಇತರರ ಬಗೆ ತಾತ್ಸಾರ ಭಾವವು ನಿನ್ನಲ್ಲಿ ಹುಟ್ಟಿಕೊಳ್ಳುವುದರ ಬಗ್ಗೆ ನೀನು ಎಚ್ಚರದಿಂದ ಇರಬೇಕು. ಆಗ ನೀನು ಬೇರೆಯವರನ್ನು ಸದಾ ಜರೆಯುತ್ತಿರುವ ಜೀವಂತ ವ್ಯಕ್ತಿಯಾಗಿ ಬಿಡುವೆ, ಯಾಕೆಂದರೆ ಅವರು ನಿನಗಿಂತಲೂ ಹೆಚ್ಚು ಪೊಳ್ಳು ಗಾರರಾಗಿದ್ದಾರೆ. ನೀನೊಬ್ಬ (ಪೊಳ್ಳಲ್ಲದ) ಘನವ್ಯಕ್ತಿಯಂತೆ ತೋರಿಸಿ ಕೊಳ್ಳುವುದರ ಬಗ್ಗೆ ಎಚ್ಚರದಿಂದಿರು - 'ದೇವರು ಶಿಶುವಾದನು' ಅಲ್ಲವೇ?

ಆಳವಿಲ್ಲದಿರುವಿಕೆಯು ದುಷ್ಟನಾಗಿರುವಿಕೆಯ ಗುರುತೇನೂ ಅಲ್ಲ ಅಥವಾ ಪೊಳ್ಳಾಗಿರುವಿಕೆಯು ನಿನ್ನ ಜೀವಿತವು ಆಳವಿಲ್ಲೆಂದಲ್ಲ - ಸಾಗರವು ದಡವನ್ನು ಹೊಂದಿದೆ. ಜೀವಿತದ ಲಘು ಸೌಕರ್ಯಗಳೆನಿಸುವ ಉಣ್ಣುವುದೂ ಮತ್ತು ಕುಡಿಯುವುದೂ, ನಡೆದಾಡುವುದೂ ಮತ್ತು ಮಾತನಾಡುವುದೂ - ಇವೆಲ್ಲವೂ ದೇವರಿಂದಲೇ ವಿಧಿಸಲ್ಪಟ್ಟಿವೆ. ಇವುಗಳಲ್ಲಿಯೇ ನಮ್ಮ ಸ್ವಾಮಿಯು ಜೀವಿಸಿದನು. ಅವುಗಳ ನಡುವೆಯೇ ಆತನು ದೇವರ ಮಗನಾಗಿ ಜೀವಿಸಿದನು, ಆತನು ಹೀಗೆ ಹೇಳಿದ್ದಾನೆ ''ಯಜಮಾನನಿಗಿಂತ ಆಳು ದೊಡ್ಡವನಲ್ಲ'' (ಮತ್ತಾಯ 10:24)

ಜೀವಿತದ ಆಳವಿಲ್ಲದ ವಿಷಯಗಳಲ್ಲಿಯೇ ನಮ್ಮ ರಕ್ಷಣೆ ಇರುತ್ತದೆ. ಸಾಮಾನ್ಯ ಬಾಹ್ಯರಂಗದ ದಾರಿಗಳಲ್ಲಿಯೇ ನಾವು ಜೀವಿಸಬೇಕು; ಯಾವಾಗ ಗಹನವಾದ ಸಂಗತಿಗಳು ಒದಗಿಬರುತ್ತವೆಯೋ ಆಗಲೇ ದೇವರು, ಅವುಗಳನ್ನು ಮಾತ್ರವಲ್ಲದೆ ಆಳವಿಲ್ಲದ ಹಿತಾಸಕ್ತಿಗಳನ್ನೂ ನಮಗೆ ಕೊಡುತ್ತಾನೆ. ಆಳವಾದ ಸಂಗತಿಗಳನ್ನು ದೇವರಿಗಲ್ಲದೆ ಬೇರೆಯಾರಿಗೂ ನಿವೇದಿಸಬೇಡ. ನಾವು ಎಷ್ಟರ ಮಟಿಗೆ ಅಸಹ್ಯಕರ ಗಂಭೀರತೆಯಲ್ಲಿ ಇರುತ್ತೇವೆಂದರೆ, ನಮ್ಮ ಸ್ವಂತ ಗುಣನಡವಳಿಕೆಯಲ್ಲಿ ನಾವೆಷ್ಟರ ಮಟ್ಟಿಗೆ ಹಾಹಾ ಕಾರದ ಆಸಕ್ತಿಯುಳ್ಳವರಾಗಿರುತ್ತೇವೆಂದರೆ, ಸಾಮಾನ್ಯ ಜೀವಿತದಲ್ಲಿ ಆಳವಿಲ್ಲದ ಆಳವಿಲ್ಲದಿರುವಿಕೆಯು ಹಿತಾಸಕ್ತಿ ಗಳಲ್ಲಿ ನಿಜ ಕ್ರೈಸ್ತರಂತೆ ವರ್ತಿಸಲು ನಿರಾಕರಿಸುತ್ತೇವೆ.

ದೇವರನ್ನು ಬಿಟ್ಟು ಬೇರೆಯಾರನ್ನೂ ಗಂಭೀರವಾಗಿ ಪರಿಗಣಿ ಸದಿರಲು ನಿರ್ಧರಿಸಬೇಕು. ನಿನಗೆ ಮೊದಲು ಕಾಣಬರುವ ವ್ಯಕ್ತಿಯಂತೂ - ನೀನು ಸದಾ ನೋಡುತ್ತಿರುವ ಮಹಾವಂಚಕನು ಅವನಾಗಿರುವ ದರಿಂದ ನಿರ್ದಾಕ್ಷಿಣ್ಯಯವಾಗಿ ಒಬ್ಬೊಂಟಿಗನಾಗಿರಲು ಅವನನ್ನು ಬಿಟ್ಟು ಬಿಡಬೇಕು. ಅವನು ಬೇರೆ ಯಾರೂ ಅಲ್ಲ, ''ನೀನೇ ಅವನು''

# ಬದ್ಧ ದ್ವೇಷದ ಗಲಿಬಿಲಿ

**''ಕರ್ತನೇ, ನಮ್ಮನ್ನು ಕಟಾಕ್ಷಿಸು, ಕಟಾಕ್ಷಿಸು, ಅಪಮಾನ ಹೊಂದಿ ಹೊಂದಿ ನಮಗೆ ಸಾಕಾಯಿತು''**
**- (ಕೀರ್ತನೆ 123:3)**

ದೇವರಲ್ಲಿ ನಮಗಿರುವ ನಂಬಿಕೆಯು ಅಪಾಯಕ್ಕೊಳಗಾಗುವುದರ ಬಗ್ಗೆ ಅಷ್ಟೊಂದು ಎಚ್ಚರವಹಿಸುವುದಕ್ಕಿಂತಲೂ ನಮ್ಮ ಮನೋಭಾವಕ್ಕುಂಟಾಗುವ ಅಪಾಯದ ಬಗ್ಗೆ ಹೆಚ್ಚು ಎಚ್ಚರ ದಿಂದಿರಬೇಕು. ''ಆದಕಾರಣ ನಿಮ್ಮ ಆತ್ಮವನ್ನು ಎಚ್ಚರಿಕೆಯಿಂದ ನೋಡಿಕೊಳ್ಳಿರಿ, ದ್ರೋಹಮಾಡ ಬೇಡಿರಿ'' (ಮಲಾಕಿ 2:16). ಮನೋಧರ್ಮದ ಪರಿಣಾಮಗಳು ತುಂಬಾ ಭಯಂಕರವಾಗಿರುತ್ತವೆ. ನಮ್ಮ ಆತ್ಮದೊಳಗೆ ನೇರವಾಗಿ ತೂರಿಹೋಗಿ ನಮ್ಮ ಮನಸ್ಸನ್ನು ದೇವರಿಂದ ದಾರಿ ತಪ್ಪಿಸುವ ಶತ್ರುವೇ ಈ ಮನೋಧರ್ಮ. ಮನದಣಿಸಲು ಸಾಹಸಮಾಡದಿರುವ ನಮ್ಮ ಮನಸ್ಸಿನ ಕೆರಳುವಿಕೆಗಳು, ಇದ್ದೇ ಇರುತ್ತವೆ; ಅವುಗಳನ್ನೇನಾದರೂ ನಾವು ತಣಿಸಿದರೆ, ದೇವರಲ್ಲಿ ನಮಗಿರುವ ಭರವಸೆಯು ಗಲಿಬಿಲಿ ಗೊಳಗಾಗಿರುವುದನ್ನು ನಾವು ಕಾಣುತ್ತೇವೆ. ದೇವರ ಸನ್ನಿಧಿಗೆ ಪ್ರಸನ್ನ ಭಾವದಿಂದ ಹಿಂತಿರುಗುವ ವರೆಗೂ ದೇವರಲ್ಲಿ ನಮ್ಮ ನಂಬಿಕೆ ಶೂನ್ಯವಾಗಿರುತ್ತದೆ ಮತ್ತು ನಾವು ನಮ್ಮ ನರಭಾವದಲ್ಲಿಯೂ ಮತ್ತು ಮಾನವೀಯ ನೈಜಸ್ವಭಾವದಲ್ಲಿಯೂ ಭರವಸವಿಟ್ಟಿರುವು ದರಿಂದ ಅವುಗಳೇ ನಮ್ಮನ್ನಾಳುತ್ತಿರುತ್ತವೆ.

''ಪ್ರಪಂಚದ ಚಿಂತೆಗಳು...'' (ಮಾರ್ಕ 4:19) ಇವುಗಳ ವಿಷಯವಾಗಿ ಎಚ್ಚರದಿಂದಿರ ಬೇಕು, ಯಾಕೆಂದರೆ ಅವುಗಳೇ ತಪ್ಪಾದ ಮನೋಧರ್ಮವನ್ನು ಉತ್ಪತ್ತಿ ಮಾಡುತ್ತವೆ. ದೇವರ ಕಡೆಗಿರುವ ನಮ್ಮ ಚಿತ್ತವನ್ನು ಭಂಗಗೊಳಿಸಿ ಬೇರೆ ಕಡೆಗೆ ತಿರುಗಿಸಲು, ಇಂಥಾ ಅಲ್ಪ ಸಂಗತಿಗಳಲ್ಲಿಯೂ ಇರುವ ಅಗಾಧ ಶಕ್ತಿಯು ನಿಜವಾಗಿಯೂ ಅಸಾಧಾರಣವಾಗಿದೆ. ಜೀವಿತದ ಚಿಂತೆಗಳಲ್ಲಿ ಮುಣುಗಿ ಕಾಣೆಯಾಗು ವುದನ್ನು ನಿರಾಕರಿಸಬೇಕು. ದೇವರ ಕಡೆಗಿರುವ ನಮ್ಮ ಗಮನವನ್ನು ಭಂಗಗೊಳಿಸುವ ಮತ್ತೊಂದು ವಿಷಯವೆಂದರೆ ಸ್ವ-ಸಮರ್ಥನೆಯ ಭಾವೋದ್ವೇಗ. ಭಕ್ತನಾದ ಅಗಸ್ಟಿನ್ ಹೀಗೆ ಪ್ರಾರ್ಥಿಸಿದನು - 'ದೇವರೇ, ಯಾವಾಗಲೂ ನನ್ನನ್ನು ನಾನು ನಿರ್ದೋಷಿಯಾಗಿ ಸಮರ್ಪಿಸಿಕೊಳ್ಳುವ ತೀವ್ರಾಸಕ್ತಿಯಿಂದ ನನ್ನನ್ನು ಬಿಡುಗಡೆ ಮಾಡು'. ಮನಸ್ಸಿನ ಕೆರಳುವಿಕೆಗಳು, ದೇವರಲ್ಲಿಟ್ಟಿರುವ ನಮ್ಮ ಆತ್ಮದ ನಂಬಿಕೆಯನ್ನು ನಾಶ ಪಡಿಸಿಬಿಡುತ್ತವೆ. - 'ನನ್ನನ್ನು ನಾನೇ ವಿವರಿಸಿ ತಿಳಿಯಪಡಿಸಬೇಕು; ಜನರು ನನ್ನನ್ನು ಅರ್ಥ ಮಾಡಿ ಕೊಳ್ಳುವಂತೆ ಮಾಡಬೇಕು'. ಯೇಸುಸ್ವಾಮಿಯಯಾದರೋ ಏನೊಂದನ್ನೂ ವಿವರಿಸಿ ಹೇಳಲಿಲ್ಲ. ತಪ್ಪುಗಳು ಸರಿಪಡಲು ಅದರಷ್ಟಕ್ಕೆ ಅವುಗಳನ್ನು ಬಿಟ್ಟುಬಿಟ್ಟನು.

ಜನರು ಆತ್ಮೀಕ ವಿಷಯಗಳಲ್ಲಿ ಯೋಗ್ಯರೀತಿಯಲ್ಲಿರುತ್ತಿಲ್ಲವೆಂದು ನಾವು ವಿವೇಚಿಸಿದರೂ, ಆ ವಿವೇಚನೆಯೇ ಇತರರ ಖಂಡನೆಯಾಗಿ ಮಾರ್ಪಡುತ್ತದೆ, ದೇವರ ಬಳಿಗೆ ಬರುವ ನಮಗಿರುವ ಮಾರ್ಗವನ್ನು ನಾವೇ ಅಡ್ಡಿಪಡಿಸುತ್ತೇವೆ. ಇತರರನ್ನು ಖಂಡಿಸುವ ವಿವೇಚನೆಯನ್ನು ದೇವರು ನಮಗೆ ಕೊಡುವುದಿಲ್ಲ. ಆದರೆ ಇತರರಿಗಾಗಿ ಪ್ರಾರ್ಥಿಸಲು ವಿವೇಚನೆಯನ್ನು ದೇವರು ಕೊಡುತ್ತಾನೆ.

# ಮಹತ್ಕಾಂಕ್ಷೆಯ ನಿರ್ದೇಶನ

**''ಯಜಮಾನನ ಕೈಯನ್ನು ದಾಸನ ಕಣ್ಣುಗಳು ... ನೋಡುವ ಪ್ರಕಾರವೇ ನಮ್ಮ ಕಣ್ಣುಗಳು ನಮ್ಮ ಯೆಹೋವ ದೇವರನ್ನು ನೋಡುತ್ತಾ'' – (ಕೀರ್ತನೆ 123:2)**

ಸಂಪೂರ್ಣವಾಗಿ ದೇವರನ್ನು ಆತುಕೊಳ್ಳುವ ವರ್ಣನೆ ಈ ವಾಕ್ಯಗಳಲ್ಲಿದೆ. ದಾಸನ ಕಣ್ಣುಗಳು ತನ್ನ ಯಜಮಾನನ ಮೇಲೆ ಹೇಗೆ ನೆಟ್ಟಿರುವವೋ ಹಾಗೆಯೇ ನಮ್ಮ ಕಣ್ಣುಗಳನ್ನು ದೇವರ ಕಡೆಗೆ ತಿರುಗಿಸಿ ಆತನನ್ನು ದೃಷ್ಟಿಸುವ ಮೂಲಕ, ಆತನ ಮುಖಭಾವದ ಜ್ಞಾನವನ್ನು ಸಂಪಾದಿಸಿ ಕೊಳ್ಳುತ್ತೇವೆ. ಈ ರೀತಿಯಲ್ಲಿ ದೇವರು ತನ್ನನ್ನು ನಮಗೆ ಪ್ರಕಟ ಮಾಡಿಕೊಳ್ಳುವನು (ಯೆಶಾಯ 53:1 ನೋಡಿರಿ) ನಮ್ಮ ಕಣ್ಣುಗಳನ್ನು ಆತನ ಕಡೆಗೆ ಎತ್ತಿ ದೃಷ್ಟಿಸುವುದನ್ನು ನಿಲ್ಲಿಸಿಬಿಟ್ಟಾಗಲೇ, ನಮ್ಮ ಆತ್ಮೀಕ ಜೀವಿತವು ಸೋರಿಹೋಗಲು ಆರಂಭಿಸುತ್ತದೆ. ನಮ್ಮ ಆಂತರ್ಯದ ಕಾಲ್ಪನಿಕ ಚಿಂತೆಗಳು ಹುಟ್ಟಿಸಿದ ತೊಂದರೆಗಳಿಂದ ಉಂಟಾಗುವ ಆತ್ಮೀಕ ಶಕ್ತಿಯ ಸೋರಿಕೆಯಷ್ಟು ಬಾಹ್ಯ ಸಂಕಟಗಳಿಂದಾಗಿ ಸೋರಿ ಹೋಗುವುದಿಲ್ಲ. 'ಸ್ವಲ್ಪ ಮಟ್ಟಿಗೆ ನನ್ನನ್ನು ನಾನು ವ್ಯಾಪ್ತಿಮೀರಿ ಹೆಚ್ಚಿಗೆ ಬಳಸಿಕೊಳ್ಳುತ್ತಿದ್ದೆನೆಂದು ಭಾವಿಸಿರುವೆನು ಮತ್ತು ಸಾಮಾನ್ಯ ದೀನ ವ್ಯಕ್ತಿಯಾಗಿರುವ ಬದಲು ದೇವರಂತೆ ಕಾಣುವ ಪ್ರಯತ್ನದಲ್ಲಿ ತುದಿಕಾಲಿನ ಮೇಲೆ ನಿಂತಿದ್ದೇನೆಂದೆನಿಸುತ್ತದೆ' ಎಂದು ತಪ್ಪಾಗಿ ಹೇಳಲು ನಾವು ಆರಂಭಿಸುತ್ತೇವೆ. ಆತ್ಮೀಕ ವಿಷಯಗಳಲ್ಲಿ ಯಾವ ಪ್ರಯತ್ನವೂ ಅತಿ ಹೆಚ್ಚು ಅಲ್ಲವೆಂಬುದನ್ನು ನಾವು ತಿಳಿದುಕೊಳ್ಳಬೇಕು.

ಉದಾಹರಣೆಗಾಗಿ ದೇವರ ವಿಷಯವಾಗಿ, ಒಂದು ನಿರ್ಧಿಷ್ಟ ಧೋರಣೆಯನ್ನು ನೀನು ತಾಳಿದಾಗ, ನಿನ್ನ ಜೀವಿತದಲ್ಲಿ ಬಿಕ್ಕಟ್ಟು ಉಂಟಾಯಿತು ಮತ್ತು ನೀನು ಹಾಗೆ ಮಾಡಿರುವುದು ಸರಿ ಎಂದು ನಿನ್ನ ಆತ್ಮವು ಸಾಕ್ಷಿ ನುಡಿಯಿತು. ಆದರೆ ವಾರಗಳೇ ಉರುಳಿದವು, ಬಹುಶಃ ವರ್ಷಗಳೇ ಉರುಳಿ ಹೋದವೇನೋ, ಆಗನೀನು ಸಾವಧಾನದಿಂದ ಒಂದು ತೀರ್ಮಾನಕ್ಕೆ ಬಂದು, ''ಸರಿಬಿಡು'' ಎಷ್ಟಾದರೂ ನಾನು ಸ್ವಲ್ಪಮಟ್ಟಿಗೆ ಆಡಂಬರ ಹಾಗೂ ಢಾಂಬಿಕ ನಾಗಿದ್ದೇನಲ್ಲವೇ ? ಸ್ವಲ್ಪ ಮಟ್ಟಿಗಾದರೂ ನನಗೆ ಮೀರಿದ ಮಹತ್ವದ ಧೋರಣೆಯನ್ನು ತಳೆದೆನೋ'' ಎಂದು ಹೇಳುವಿ. ಆಗ ವಿಚಾರಶೀಲರಾದ ನಿನ್ನ ಗೆಳೆಯರು ನಿನಗೆ ಹೇಳುವರು, ''ಮೂರ್ಖನಂತಿರಬೇಡ, ಆತ್ಮೀಕ ಜಾಗೃತಿಯ ವಿಷಯವನ್ನು ಅಂದು ನೀನು ಮಾತನಾಡಿದಾಗ, ನಿನ್ನದೊಂದು ಕ್ಷಣಿಕವಾದ ಹಠಾತ್ ಪ್ರಚೋದನೆ ಎಂದು ನಮಗೆ ಗೊತ್ತಿತ್ತು. ಅದರ ಪ್ರಯಾಸವನ್ನು ನೀನು ತಾಳಲಾರೆ, ನೀನು ಶ್ರಮೆ ಪಡುವುದನ್ನು ದೇವರೂ ಬಯಸುವುದಿಲ್ಲ' ಆಗ ನೀನು 'ಹೌದು, ಬಹಳ ಹೆಚ್ಚಿನದನ್ನು ನಾನು ಪ್ರತೀಕ್ಷಿಸಿದ್ದೆ' ಎಂದೆನ್ನುವುದೊಂದು ದೀನ ಹೇಳಿಕೆ ಎಂದೆನಿಸಿದರೂ, ದೇವರನ್ನು ಆತುಕೊಂಡಿರುವಿಕೆಯು ನಿನ್ನಲ್ಲಿ ಸಂಪೂರ್ಣವಾಗಿ ಅಳಿದುಹೋಗಿರುವುದೂ ಮತ್ತು ಲೌಕಿಕ ಅಭಿಪ್ರಾಯಗಳ ಮೇಲೆ ನೀನು ಆತುಕೊಳ್ಳುವಿಕೆಯು ಒಳಗೆ ಸೇರಿದೆಯೆಂದೂ ತಿಳಿದು ಬರುತ್ತದೆ. ಇನ್ನು ಮೇಲಾದರೂ ದೇವರನ್ನು ಆತುಕೊಳ್ಳದಿದ್ದರೆ ಮತ್ತು ನಿನ್ನ ಕಣ್ಣುಗಳನ್ನು ಎತ್ತಿ ದೇವರನ್ನು ದೃಷ್ಟಿಸಲು ಅಲಕ್ಷಿಸಿದರೆ ಖಂಡಿತವಾಗಿಯೂ ನೀನು ಅಪಾಯದಲ್ಲಿರುವಿ. ಇದ್ದಕ್ಕಿದ್ದಂತೆಯೇ ದೇವರು ನಿನ್ನನ್ನು ತಡೆದು ನಿಲ್ಲಿಸಿದಾಗ, ನೀನು ಹೇಗೆ ಹಾಳಾಗುತ್ತಿರುವಿ ಎಂಬುದನ್ನು ನೀನು ಗ್ರಹಿಸುವಿ. ಯಾವಾಗ ಸೋರಿಕೆ ಉಂಟಾಗುತ್ತದೆಯೋ ಅದನ್ನು ಕೂಡಲೇ ಸರಿಪಡಿಸಿ ಪರಿಹಾರ ವನ್ನೊದಗಿಸಬೇಕು. ದೇವರಿಗೂ ನಿನಗೂ ನಡುವೆ ಏನಾದರೂ ನುಸುಳುತ್ತಿರುವುದನ್ನು ಗುರುತಿಸಿ ಕೂಡಲೇ ಅದನ್ನು ಮೊದಲಿನ ಸ್ಥಿತಿಗೆ ಸರಿಪಡಿಸಬೇಕು.

# ಆತ್ಮೀಕ ಸುಸಂಬದ್ಧತೆಯ ರಹಸ್ಯ

**‘‘ನನಗಾದರೋ ....... ಹೆಚ್ಚಳ ಪಡುವದು ಬೇಡವೇ ಬೇಡ’’ – (ಗಲಾತ್ಯ 6:14)**

ಮನುಷ್ಯನು ಹೊಸದಾಗಿ ಹುಟ್ಟಿದ ಪ್ರಥಮದಲ್ಲಿ, ಅವನು ಹೊಂದಾಣಿಕೆ ಇಲ್ಲದವನಾಗುತ್ತಾನೆ. ಅಷ್ಟಿಷ್ಟು ಸಂಬಂಧವಿರುವ ಭಾವೋದ್ವೇಗಗಳಲ್ಲಿ, ಸಂಬಂಧವಿರದ ಬಾಹ್ಯಜೀವಿತದ ಹಂತಗಳಲ್ಲಿ ಅವನಿರುತ್ತಾನೆ. ಏಕ ಪ್ರಕಾರವಾಗಿರುವ ಬಲವಾದ ಸುಸಂಬದ್ಧತೆಯ ತಳಪಾಯವು ಅಪೊಸ್ತಲನಾದ ಶ್ರೀ ಪೌಲನಿಗಿದ್ದಿತು. ಅದರಿಂದಾಗಿ ತನ್ನ ಬಾಹ್ಯ ಜೀವಿತವನ್ನು, ಆಯಾ ಪರಿಸ್ಥಿತಿಗನುಗುಣವಾಗಿ ಬದಲಾವಣೆ ಗೊಳಪಡಿಸಿದನು. ಮತ್ತು ಆ ಬದಲಾವಣೆಗಳು, ಅವನನ್ನು ವ್ಯಥೆಗೀಡು ಮಾಡಲಿಲ್ಲ, ಯಾಕೆಂದರೆ, ಅವನು ದೇವರಲ್ಲಿ ನೆಲೆಗೊಂಡು ಭದ್ರವಾಗಿ ಬೇರೂರಿದ್ದನು. ನಮ್ಮಲ್ಲಿ ಅನೇಕರು ಆತ್ಮೀಕವಾಗಿ ಸುಸಂಬದ್ಧತೆ ಯಲ್ಲಿ ಇರದಿರಲು ಕಾರಣವೆಂದರೆ, ನಮ್ಮ ಬಾಹ್ಯ ಜೀವಿತದ ಸುಸಂಬದ್ಧತೆ ಯಲ್ಲಿಯೇ ನಾವು ಆಸಕ್ತಿಯುಳ್ಳವರಾಗಿ ರುತ್ತೇವೆ. ಬಾಹ್ಯ ಜೀವಿತದ ಸುಸಂಬದ್ಧತೆಯ ವಿಷಯಗಳಿಗೆ ಸಂಬಂಧಿಸಿದಂತೆ, ಶ್ರೀ ಪೌಲನು ನೆಲಮಾಳಿಗೆಯ ಹಂತದಲ್ಲಿ ಜೀವಿಸುತ್ತಿದ್ದನು; ತರ್ಕಬದ್ಧರಾದ ಅವನ ವಿಮರ್ಶಕರು ಸುಸಂಬದ್ಧತೆಯ ವಿಷಯದಲ್ಲಿ ಬಾಹ್ಯ ಹೇಳಿಕೆಯನ್ನು ಕೊಡುತ್ತಾ ಬಾಹ್ಯ ಜೀವಿತದ ಮೇಲ್ಮಹಡಿಯಲ್ಲಿ ವಾಸಿಸುತ್ತಿದ್ದರು. ನೆಲಮಾಳಿಗೆ ಮತ್ತು ಮೇಲ್ಮಾಳಿಗೆ ಒಂದಕ್ಕೊಂದು ಸುಸಂಗತ ವಾಗಿರಲಿಲ್ಲ. ಶ್ರೀಪೌಲನ ಸಮರಸತೆಯು ಆಳವಾದ ಮೂಲಭೂತ ಕ್ರಿಸ್ತೀಯ ತತ್ವದಲ್ಲಿತ್ತು. ಲೋಕವನ್ನು ಪಾಪದಿಂದ ಬಿಡುಗಡೆ ಮಾಡಿದ ದೇವರ ಅಗಾಧವಾದ ಬಾಧೆಯೇ ಶ್ರೀಪೌಲನ ಸುಸಂಬದ್ಧತೆಗೆ ಆಧಾರವಾಗಿತ್ತು; ಅದು ಯೇಸುಕ್ರಿಸ್ತನ ಶಿಲುಬೆಯೇ.

ನಿನ್ನ ನಂಬಿಕೆಗಳನೆಲ್ಲ ಪುನರುಚ್ಚರಿಸು ಮತ್ತು ಈ ಸತ್ಯಾಂಶಕ್ಕೆ ಸಂಬಂಧಪಡದವುಗಳನ್ನು ತೆಗೆದುಹಾಕಿ, ಆಧಾರಶಿಲೆಯಾದ ಯೇಸುಕ್ರಿಸ್ತನ ಶಿಲುಬೆಗೆ ಹಿಂತಿರುಗಬೇಕು. ಇತಿಹಾಸದ ಬಾಹ್ಯರಂಗದಲ್ಲಿ ಶಿಲುಬೆಯು ಗಮನಕ್ಕೆ ಬಾರದಷ್ಟು ಅತ್ಯಂತ ಸೂಕ್ಷ್ಮಾತಿ ಸೂಕ್ಷ್ಮವಾದ ಅತೀ ಅಲ್ಪವಾಗಿರುವ ಒಂದು ವಿಷಯ; ಆದರೆ ಸತ್ಯವೇದದ ದೃಷ್ಟಿಯಲ್ಲಿ ಶಿಲುಬೆಯು, ಲೋಕದ ಮಹಾ ಸಾಮ್ರಾಜ್ಯಗಳಿಗಿಂತಲೂ ಹೆಚ್ಚು ಪ್ರಾಮುಖ್ಯವಾದ ಅತ್ಯಂತ ಬೃಹತ್ ವಿಷಯ. ನಮ್ಮ ಬೋಧನೆಗಳಲ್ಲಿ ಶಿಲುಬೆಯ ಮೇಲೆ ನಡೆದ ದೇವರ ದುರಂತದ ಬಗ್ಗೆ ವ್ಯಥೆ ಪಡುವುದನ್ನು ತಪ್ಪಿಸಿ ಬೋಧಿಸಿದರೆ, ಅದು ಯಾವುದೇ ಪರಿಣಾಮವನ್ನು ಉಂಟುಮಾಡುವುದಿಲ್ಲ. ಅದು ದೇವರ ಬಲವನ್ನು ಮನುಷ್ಯರಿಗೆಂದಿಗೂ ವರ್ಗಾಯಿಸುವುದಿಲ್ಲ; ಅಂಥಾ ಬೋಧನೆಯೇನೋ ಆಕರ್ಷಕವಾಗಿರಬಹುದು, ಕುತೂಹಲಕಾರಿಯಾಗಿರಬಹುದು, ಆದರೆ ಅದರಲ್ಲಿ ದೈವ ಬಲವೇ ಇರುವುದಿಲ್ಲ. ಶಿಲುಬೆಯನ್ನು ಪ್ರಾಮುಖ್ಯವಾಗಿರಿಸಿಕೊಂಡು ಬೋಧಿಸು, ಆಗ ದೈವ ಬಲವು ಮುಕ್ತವಾಗಿ ಒದಗಿ ಬರುತ್ತದೆ. ‘‘ಹುಚ್ಚುಮಾತು ಎನಿಸಿಕೊಂಡಿರುವ ನಮ್ಮ ಪ್ರಸಂಗದಿಂದಲೇ ನಂಬುವವರನ್ನು ರಕ್ಷಿಸುವುದು ದೇವರಿಗೆ ಒಳ್ಳೇದೆಂದು ತೋಚಿತು’’ (1 ಕೊರಿಂಥ 1:21) ‘‘ನಾವಾದರೋ ಶಿಲುಬೆಗೆ ಹಾಕಲ್ಪಟ್ಟವನಾದ ಕ್ರಿಸ್ತನನ್ನು ಪ್ರಚುರಪಡಿಸುತ್ತೇವೆ’’ (1 ಕೊರಿ 1:23)

# ಆತ್ಮೀಕ ಬಲದ ಮೇಲೆ ಏಕಾಗ್ರತೆ

**''ನನಗಾದರೋ ನಮ್ಮ ಕರ್ತನಾದ ಯೇಸುಕ್ರಿಸ್ತನ ಶಿಲುಬೆಯ ವಿಷಯದಲ್ಲಿ ಹೊರತು ...''**
**- (ಗಲಾತ್ಯ 6:14)**

ನಿನ್ನ ನರಭಾವದ ಶರೀರದಲ್ಲಿಯೇ ನೀನು ದೇವರ ಶಕ್ತಿಯನ್ನು (ಪುನರುತ್ಥಾನವಾದ ಯೇಸು ಕ್ರಿಸ್ತನ ಜೀವಿತ) ಅರಿತುಕೊಳ್ಳಬೇಕೆಂದಿದ್ದರೆ ದೇವರ ಶಿಲುಬೆಯ ದುರಂತದ ವ್ಯಥೆಯಲ್ಲಿ ಮರುಗಬೇಕು. ನಿನ್ನ ಸ್ವಂತ ಆತ್ಮೀಕ ಜೀವಿತದ ಲಕ್ಷಣಗಳಲ್ಲಿ ನಿನ್ನ ವೈಯಕ್ತಿಕ ಆಸಕ್ತಿಗಳಿಗಾಗಿ ಇಣಕಿ ನೋಡುವುದನ್ನು ಮೊದಲು ಕತ್ತರಿಸಿಬಿಟ್ಟು ಬಿಚ್ಚು ಹೃದಯದಿಂದ ದೇವರ ದುರಂತವನ್ನು ಮನನ ಮಾಡಬೇಕು, ಆಗ ತಕ್ಷಣವೇ ದೇವರಬಲವು ನಿನ್ನೊಳಗೆ ಸೇರಿಕೊಳ್ಳುತ್ತದೆ. ''ನನ್ನ ಕಡೆಗೆ ತಿರುಗಿಕೊಳ್ಳಿರಿ'' (ಯೆಶಾ 45:22) ಬಾಹ್ಯವಿಷಯಗಳ ಮೂಲಕ್ಕೆ ಗಮನ ಕೊಡಬೇಕು, ಆಗ ವ್ಯಕ್ತಿನಿಷ್ಠ ಆಂತರಿಕ ಬಲವು ಅಲ್ಲಿಯೇ ಒದಗುತ್ತದೆ. ಯೋಗ್ಯ ವಿಷಯಗಳ ಮೇಲೆ ಏಕಾಗ್ರತೆಯನ್ನಿರಿಸದಿದ್ದರೆ ನಾವು ಬಲವನ್ನು ಕಳೆದು ಕೊಳ್ಳುತ್ತೇವೆ. ರಕ್ಷಣೆ, ಶುದ್ಧೀಕರಣ, ಸ್ವಸ್ಥತೆ, ಮುಂತಾದವುಗಳೆಲ್ಲ ಶಿಲುಬೆಯಿಂದುಂಟಾದ ಪರಿಣಾಮ ಗಳು, ಇವುಗಳನ್ನು ನಾವು ಬೋಧಿಸಬಾರದು, ''ಆದರೆ ನಾವು ಶಿಲುಬೆಗೆ ಹಾಕಲ್ಪಟ್ಟವನಾದ ಯೇಸು ಕ್ರಿಸ್ತನನ್ನೇ'' (1 ಕೊರಿಂಥ 2:2) ಬೋಧಿಸಬೇಕು. ಯೇಸುಕ್ರಿಸ್ತನ ಸಾರುವಿಕೆಯೇ ತನ್ನ ಕಾರ್ಯಗಳನ್ನು ತಾನೇ ಮಾಡಿಕೊಳ್ಳುತ್ತದೆ. ನಿನ್ನ ಬೋಧನೆಗಳಲ್ಲಿ ದೇವರ ಮುಖ್ಯ ಉದ್ದೇಶವನ್ನು ಪ್ರಮುಖವಾಗಿರಿಸಿ ಕೊಂಡಿರಬೇಕು ಮತ್ತು ಕೂಡಿಬಂದಿರುವ ಸಭೆಯ ಗುಂಪು ಈ ಸತ್ಯಾಂಶಕ್ಕೆ ಬಾಹ್ಯ ನೋಟದಲ್ಲಿ ಲಕ್ಷಕೊಡದೇ ಇರಬಹುದು, ಆದರೆ ಅದನ್ನು ಯಾರು ಆಲಿಸಿರುವರೋ ಅವರು ತಾವು ಮೊದಲಿದ್ದಂತೆ ಮುಂದೆ ಇರುವುದಿಲ್ಲ. ನಾನು ನನ್ನ ಸ್ವಂತ ವಿಷಯಗಳನ್ನೇ ಬೋಧಿಸಿದರೆ, ನಿನ್ನ ಮಾತುಗಳು ನನಗೆ ಹೇಗೋ ಹಾಗೆಯೇ ನನ್ನ ಮಾತುಗಳು ನಿನಗೆ ಅಮುಖ್ಯವಾಗಿರುತ್ತವೆ; ದೇವರ ಸತ್ಯಾರ್ಥಗಳನ್ನು ನಾವು ಒಬ್ಬರಿಗೊಬ್ಬರು ಹಂಚಿಕೊಂಡರೆ, ದೇವರ ವಿಷಯವಾದ ಸತ್ಯಾರ್ಥಗಳನ್ನು ನಾನು ನುಡಿದರೆ, ಅದನ್ನು ನೀನು ಪುನಃ ಮನನ ಮಾಡುವಿಯಲ್ಲದೆ ನಾನು ಸಹಾ ಪುನಃ ಅದನ್ನು ಮನನ ಮಾಡುತ್ತೇನೆ. ಆತ್ಮೀಕ ಬಲವೆಂಬ ಪ್ರಾಮುಖ್ಯ ಅಂಶದ ಮೇಲೆ ನಮ್ಮ ಗಮನವನ್ನಿರಿಸಬೇಕು. ಬಲವೆಂದರೆ ಶಿಲುಬೆ, ಯಾವ ಶಿಲುಬೆಯಲ್ಲಿ ಸಕಲ ಶಕ್ತಿ ಸಾಮರ್ಥ್ಯಗಳು ಕೇಂದ್ರೀಕೃತವಾಗಿವೆಯೋ, ಅದರ ನಿಕಟ ಸಂಪರ್ಕದಲ್ಲಿ ನಾವಿದ್ದರೆ ನಮ್ಮ ಜೀವಿತದಲ್ಲಿ ದೇವರ ಬಲವು ಮುಕ್ತವಾಗಿ ನಮಗೆ ಲಭ್ಯವಿರುತ್ತದೆ. ಪವಿತ್ರತೆಯ ವಿಷಯವಾದ ಚಟುವಟಿಕೆಗಳಲ್ಲಿ ಮತ್ತು ಅಧ್ಯಾತ್ಮಿಕ ಅನುಭವ ಕೂಟಗಳಲ್ಲಿ ಶಿಲುಬೆಯ ಮೇಲೆ ಗಮನವನ್ನು ಕೇಂದ್ರಿಕರಿಸದೇ ಶಿಲುಬೆಯಿಂದುಂಟಾಗುವ ಪರಿಣಾಮಗಳ ಮೇಲೆ ಮಾತ್ರವೇ ಒತ್ತು ಕೊಡುವ ಪರಿಪಾಟವಂತೂ ಈಗಲೂ ಇದ್ದೇ ಇದೆ.

ಈಗಿನ ದಿನಗಳಲ್ಲಿ ಸಭೆಯ ಬಲಹೀನತೆಯನ್ನು ಟೀಕಿಸಲಾಗುತ್ತಿದೆ ಮತ್ತು ಅಂಥಾ ಟೀಕೆಯು ನ್ಯಾಯ ಸಮ್ಮತವೆಂದೆನಿಸಿದೆ. ಇಂಥಾ ಸತ್ವಹೀನತೆಗೆ ಕಾರಣವೆಂದರೆ, ನಿಜವಾದ ಆತ್ಮೀಕ ಬಲದ ಮೇಲೆ ಗಮನವಿಡದಿರುವುದು; ಕಲ್ವಾರಿಯ ದುರಂತದ ಬಾಧೆಯನ್ನಾಗಲೀ ಇಲ್ಲವೇ ಪಾಪವಿಮೋಚನೆಯ ಅರ್ಥವನ್ನಾಗಲೀ ನಾವು ಸಾಕಷ್ಟು ಚಿಂತನೆ ಮಾಡುವುದಿಲ್ಲ.

# ಆತ್ಮೀಕ ಬಲವನ್ನು ಮೀಸಲಾಗಿರಿಸುವಿಕೆ

**''ಆತನ ಮೂಲಕ ಲೋಕವು ಶಿಲುಬೆಗೆ ಹಾಕಿಸಿಕೊಂಡು ನನ್ನ ಪಾಲಿಗೆ ಸತ್ತಿತ್ತು, ನಾನು ಶಿಲುಬೆಗೆ ಹಾಕಿಸಿಕೊಂಡು ಲೋಕದ ಪಾಲಿಗೆ ಸತ್ತೆನು '' – (ಗಲಾತ್ಯ 6:14)**

ನಾನು ಯೇಸುಕ್ರಿಸ್ತನ ಶಿಲುಬೆಯನ್ನು ಧ್ಯಾನಿಸುತ್ತಿದ್ದರೆ ಸ್ವಂತ ನಿರ್ದೋಷತ್ವದಲ್ಲಿ ಆಸಕ್ತಿಯುಳ್ಳ ವ್ಯಕ್ತಿನಿಷ್ಠ ಭಕ್ತನಾಗುವುದಿಲ್ಲ; ಆದರೆ ಯೇಸುಕ್ರಿಸ್ತನ ಆಸಕ್ತಿಗಳಲ್ಲಿ ನಾನು ಹೆಚ್ಚು ಏಕಾಗ್ರತೆಯುಳ್ಳವನಾಗಿರುತ್ತೇನೆ. ನಮ್ಮ ಪ್ರಭುವು ನಿಸ್ಸಂಗಿಯಾಗಿರಲಿಲ್ಲ, ಇಲ್ಲವೇ ಸನ್ಯಾಸಿಯೂ ಆಗಿರಲಿಲ್ಲ ಮತ್ತು ಸಾಮಾನ್ಯ ಸಮಾಜದಿಂದ ತನ್ನನ್ನು ದೂರವಿರಿಸಿಕೊಂಡು ಜೀವಿಸಲೂ ಇಲ್ಲ, ಆದರೆ ಆತನು ಅಂತರ್ಯದಲ್ಲಿ ಲೌಕಿಕತೆಯ ಸಂಪರ್ಕವನ್ನು ಕಡಿದುಕೊಂಡಿದ್ದನು. ಈ ಜಗತ್ತಿನ ಬದುಕಿನಿಂದ ತನ್ನನ್ನು ದೂರವಿರಿಸಿಕೊಂಡಿರಲಿಲ್ಲ, ಆದರೆ ಅಂತರಂಗದಲ್ಲಿ ಆತನು ಬೇರೊಂದು ಜಗತ್ತಿನಲ್ಲಿ ಜೀವಿಸಿದನು. ಸಾಮಾನ್ಯರ ಜೀವಿತದಲ್ಲಿ ಎಷ್ಟರ ಮಟ್ಟಿಗೆ ಆತನು ಬೆರೆತು ಕೊಂಡಿದ್ದನೆಂದರೆ ಆತನನ್ನು ಕುಡುಕನೆಂದೂ ಹೊಟ್ಟೆಬಾಕನೆಂದೂ ಕರೆದರು. ನಮ್ಮ ಸ್ವಾಮಿಯು ತನ್ನ ಆತ್ಮೀಕ ಬಲದ ಮೀಸಲಾಗಿರಿ ಸುವಿಕೆಯಲ್ಲಿ ಮಧ್ಯಪ್ರವೇಶಿಸುವಂಥವುಗಳಿಗೆಂದಿಗೂ ಆಸ್ಪದ ವೀಯಲಿಲ್ಲ.

ಮುಂದಿನ ದಿನಗಳಲ್ಲಿ ದೇವರ ಉಪಯೋಗಾರ್ಥವಾಗಿ ಇಂದು ದೇವರಿಂದ ಉಪಯೋಗಿಸಲ್ಪಡುವಿಕೆಯನ್ನು ಪ್ರಜ್ಞಾಪೂರ್ವಕವಾಗಿ ತೊಡೆದುಹಾಕಿ ಆತ್ಮೀಕಬಲವನ್ನು ಶೇಖರಿಸಿಟ್ಟುಕೊಳ್ಳುವುದು ಪ್ರತಿಷ್ಠೀಕರಣದ ಕಪಟತೆಯ ಮುಖವಾಗಿದೆ. ಹಾಗೆ ಮಾಡುವುದು ಹತಾಶೆಯ ಫಲವಾದ ತಪ್ಪು ಭ್ರಮೆ. ಬಹಳ ಜನರ ಪಾಪವನ್ನು ದೇವರ ಆತ್ಮನು ನಾಶಗೊಳಿಸಿ, ಅವರನ್ನು ಬಿಡುಗಡೆ ಮಾಡಿರುವನು, ಆದರೂ ಅವರಲ್ಲಿ ನಿಜವಾದ ಬಿಡುಗಡೆಯ ಭಾವನೆಯು ಇನ್ನೂ ಮೂಡಿರುವುದಿಲ್ಲ. ಅವರ ಜೀವಿತದಲ್ಲಿ ಸಂಪೂರ್ಣತೆ ಇಲ್ಲ. ಈ ದಿನಮಾನಗಳಲ್ಲಿ ಬಾಹ್ಯ ಜಗತ್ತಿನಲ್ಲಿರುವ ಧಾರ್ಮಿಕ ಜೀವಿತವು ಯೇಸುಕ್ರಿಸ್ತನ ಸದೃಢ ಸಮಗ್ರತೆಯ ಪರಿಶುದ್ಧ ಜೀವಿತಕ್ಕಿಂತ ಅದು ಸಂಪೂರ್ಣವಾಗಿ ಭಿನ್ನವಾಗಿರುವುದನ್ನು ನಾವು ಕಾಣುತ್ತೇವೆ. ''ಇವರನ್ನು ಲೋಕದೊಳಗಿಂದ ತೆಗೆದುಕೊಂಡು ಹೋಗಬೇಕೆಂದು ನಾನು ಕೇಳಿಕೊಳ್ಳುವುದಿಲ್ಲ, ಕೆಡುಕಿನಿಂದ ತಪ್ಪಿಸಿ ಕಾಪಾಡಬೇಕೆಂದು ಕೇಳಿಕೊಳ್ಳುತ್ತೇನೆ'' (ಯೋಹಾನ 17:15). ನಾವು ಪ್ರಪಂಚದೊಳಗೇ ಇರಬೇಕು. ಆದರೆ ಪ್ರಪಂಚದವರಾಗಿರಬಾರದು; ಬಾಹ್ಯಜೀವಿತದಲ್ಲಿ ಅಲ್ಲ ಆದರೆ ಆಂತರ್ಯದಲ್ಲಿ ಲೋಕ ಸಂಬಂಧವನ್ನು ಕಳಚಿಕೊಂಡಿರಬೇಕು.

ನಮ್ಮ ಆತ್ಮೀಕ ಬಲದ ಪ್ರತಿಷ್ಠೀಕರಣದ ವಿಷಯದಲ್ಲಿ ಮಧ್ಯಪ್ರವೇಶಿಸಲು ಯಾವುದಕ್ಕೂ ಆಸ್ಪದ ಕೊಡಬಾರದು. ಪ್ರತಿಷ್ಠಿಸಿಕೊಳ್ಳುವುದು ನಮ್ಮ ಪಾಲಿನ ಕೆಲಸ, ಶುದ್ಧೀಕರಿಸುವುದು ದೇವರ ಕೆಲಸ; ಆದರೆ ದೇವರು ಆಸಕ್ತಿ ಹೊಂದಿರುವವುಗಳಲ್ಲಿ ಮಾತ್ರ ನಾವು ಪೂರ್ಣಾಸಕ್ತಿಯುಳ್ಳವರಾಗಿರುವಂತೆ ವಿವೇಕಪೂರ್ಣ ನಿರ್ಧಾರವನ್ನು ನಾವು ಕೈಕೊಳ್ಳಬೇಕು. ದಿಗಿಲುಗೊಳಿಸುವ ಸಮಸ್ಯೆಗಳನ್ನು ಪರಿಹರಿಸಲಿರುವ ಒಂದೇ ಮಾರ್ಗವೆಂದರೆ ''ಈ ವಿಧದ ಸಂಗತಿಗಳಲ್ಲಿ ಯೇಸುಕ್ರಿಸ್ತನಿಗೆ ಆಸಕ್ತಿ ಇದ್ದಿತೇ ಅಥವಾ ಈ ಸಂಗತಿಗಳು ಯೇಸುಕ್ರಿಸ್ತನನ್ನು ವಿರೋಧಿಸುವ ಆತ್ಮನಿಂದುಂಟಾದವುಗಳೇ?'' ಎಂದು ನಮ್ಮನ್ನು ನಾವು ಪ್ರಶ್ನಿಸಿಕೊಂಡು ವಿವೇಚಿಸಬೇಕು.

# ನಿರ್ಗತಿಕನಿಗೊದಗಿದ ವರದಾನ

**''ಅವರು ನೀತಿವಂತರೆಂದು ನಿರ್ಣಯ ಹೊಂದುವದು ದೇವರ ಉಚಿತಾರ್ಥವಾದ ಕೃಪೆಯಿಂದಲೇ'' – (ರೋಮಾ 3:24)**

ದೇವರ ಕೃಪಾಭರಿತ ಸುವಾರ್ತೆಯು ಮಾನವರ ಆತ್ಮಗಳಲ್ಲಿ ತೀವ್ರವಾದ ಹಂಬಲವನ್ನು ಜಾಗೃತಗೊಳಿಸುತ್ತದೆ ಮತ್ತು ಅಷ್ಟೇ ತೀವ್ರವಾದ ಅಸಂತೋಷವನ್ನು ಕೆರಳಿಸುತ್ತದೆ, ಯಾಕೆಂದರೆ ಅದು ಯಾವುದನ್ನು ಪ್ರಕಟಿಸುವುದೋ ಅದು ರುಚಿಸುವಂಥಾದ್ದಲ್ಲ. ಮನುಷ್ಯನಲ್ಲಿರುವ ಒಂದು ಬಗೆಯ ಅಹಂಕಾರವು ಪದೇ ಪದೇ ಉಚಿತವಾಗಿ ಕೊಡುವುದನ್ನೇ ಮಾಡುತ್ತದೆ, ಆದರೆ ಅದೇ ವ್ಯಕ್ತಿಗೆ ತಾನೂ ಇತರರ ಬಳಿಗೆ ಬಂದು ಉಚಿತವಾಗಿ ಸ್ವೀಕರಿಸುವುದೆಂದರೆ ಅದು ಬೇರೆ ವಿಷಯ. ಬೇಕಾದರೆ ನನ್ನ ಜೀವವನ್ನು ಹುತಾತ್ಮತೆಗಾಗಿ ಅರ್ಪಿಸುತ್ತೇನೆ, ನನ್ನ ಜೀವವನ್ನು ಸೇವೆಗಾಗಿ ಮೀಸಲಿಡುತ್ತೇನೆ, ಇನ್ನೂ ಏನುಬೇಕಾದರೂ ಮಾಡುತ್ತೇನೆ, 'ಆದರೆ, ಅತ್ಯಂತ ನರಕಪಾತ್ರ ಪಾಪಿ ಎನ್ನುವ ಹೀನ ಮಟ್ಟದ ದೀನತೆಗೆ ನನ್ನನ್ನು ಬರಮಾಡಿ, ಈಗ ನೀನು ಯೇಸುಕ್ರಿಸ್ತನ ಮೂಲಕ ರಕ್ಷಣೆಯನ್ನು ಉಚಿತವಾಗಿ ಸ್ವೀಕರಿಸಬೇಕು' ಎಂದು ಮಾತ್ರ ನನಗೆ ಹೇಳಬೇಡ.

ನಾವು ದೇವರಿಂದ ಏನನ್ನೂ ಸಂಪಾದಿಸುವುದಕ್ಕಾಗುವುದಿಲ್ಲ ಅಥವಾ ಆತನಿಂದ ಯಾವುದನ್ನೂ ಗೆದ್ದುಕೊಳ್ಳಲಾಗುವುದಿಲ್ಲವೆಂಬುದನ್ನು ನಾವು ತಿಳಿಯಬೇಕು; ದೇವರಿಂದ ಏನನ್ನೇ ಆಗಲಿ ಅದನ್ನು ಉಚಿತ ಬಹುಮಾನವೆಂದೇ ಸ್ವೀಕರಿಸಬೇಕು, ಇಲ್ಲವೆ ಅದನ್ನು ನಿರಾಕರಿಸಬೇಕು. ನಾವು ದಟ್ಟ ಕಡುಬಡವರಾಗಿರುವೆವೆಂಬ ತಿಳುವಳಿಕೆಯೇ ಒಂದು ದೊಡ್ಡ ಆತ್ಮೀಕ ಆಶೀರ್ವಾದ; ಅಂಥಾ ಸ್ಥಿತಿಯನ್ನು ನಾವು ಮುಟ್ಟುವ ತನಕ ನಮಗೆ ಏನಾದರೂ ದಯಪಾಲಿಸಲು ನಮ್ಮ ಪ್ರಭುವು ಶಕ್ತಿಹೀನ ನಾಗಿರುವನು. ನಾವು ಸರ್ವ ಸಂತೃಪ್ತರೆಂದು ಭಾವಿಸಿಕೊಂಡಿರುವವರೆಗೂ ಆತನು ನಮಗೇನನ್ನೂ ಮಾಡುವುದಿಲ್ಲ; ದೇವರ ರಾಜ್ಯದೊಳಗೆ ದೀನತೆ, ಬಡತನ ಇವುಗಳ ಮೂಲಕ ಮಾತ್ರವೇ ಪ್ರವೇಶಿಸ ಬೇಕಾಗಿದೆ. ನಮ್ಮ ಅಹಂಕಾರದ ಮತ್ತು ಸ್ವಾತಂತ್ರ್ಯ ಜೀವಿತದ ವಲಯದಲ್ಲಿ ನಾವು ಎಲ್ಲಿಯವರೆಗೆ ಐಶ್ವರ್ಯವಂತರೂ, ಏನನ್ನಾದರೂ ಪಡೆದಿದ್ದೇವೆಂದು ಭಾವಿಸುವವರೂ ನಾವಾಗಿರುತ್ತೇವೆವೋ ಅಷ್ಟರವರೆಗೆ ದೇವರು ನಮಗಾಗಿ ಏನೂ ಮಾಡುವುದಿಲ್ಲ. ನಾವು ಆತ್ಮೀಕವಾಗಿ ಹಸಿದಿದ್ದರೆ ಮಾತ್ರ ಪವಿತ್ರಾತ್ಮನನ್ನು ಪಡೆದು ಕೊಳ್ಳುತ್ತೇವೆ. ದೇವರ ಸ್ವಭಾವವೆಂಬ ಬಹುಮಾನವು ಪವಿತ್ರಾತ್ಮನ ಮೂಲಕ ನಮ್ಮ ಜೀವಿತದಲ್ಲಿ ಇಡಲ್ಪಟ್ಟಿದೆ ಮತ್ತು ಪರಿಣಾಮಕಾರಿಯಾಗಿರುತ್ತದೆ. ಚೈತನ್ಯಗೊಳಿಸುವ ಯೇಸುಸ್ವಾಮಿಯ ಜೀವಿತ ವನ್ನು ಪವಿತ್ರಾತ್ಮನು ನಮಗೆ ಅನುಗ್ರಹಿಸುತ್ತಾನೆ. ಆಗ ನಾವು ನಿಜವಾದ ಜೀವಿತವನ್ನು ಬಾಳುತ್ತೇವೆ. ಆ ಜೀವಿತವು ಜ್ಞಾನಕ್ಕೆ ಮೀರಿರುವುದನು ನಮ್ಮ ಆಂತರ್ಯದೊಳಗೆ ಬರಮಾಡುತ್ತದೆ, ಇದು ನಮ್ಮೊಳಗಡೆ ಬಂದ ಕೂಡಲೇ ಅದು ದೇವರ ರಾಜ್ಯದ ಕಡೆಗೆ ಮೇಲೇರುವುದು ಮತ್ತು ಅದರ ಸಂಗಡ ನಾವು ಸಹ ಯೇಸುಸ್ವಾಮಿಯು ಜೀವಿಸುವ ಲೋಕದೊಳಕ್ಕೆ ಎತ್ತಲ್ಪಡುತ್ತೇವೆ. (ಯೋಹಾನ 5:3 ನೋಡಿರಿ)

# ಯೇಸುಕ್ರಿಸ್ತನ ಸರ್ವಶ್ರೇಷ್ಠತೆ

**''ನನ್ನನ್ನೇ ಮಹಿಮೆ ಪಡಿಸುವನು'' – (ಯೋಹಾನ 16:14)**

ಈಗಿನ ದಿನಗಳಲ್ಲಿ ನಡೆಯುತ್ತಿರುವ ಭಕ್ತಿಭಾವದ ಚಟುವಟಿಕೆಗಳನ್ನು ಗಮನಿಸಿದರೆ ಹೊಸ ಒಡಂಬಡಿಕೆಯಲ್ಲಿರುವ ಸತ್ಯತೆಗಳನ್ನು ನಾವು ಇಂಥಾ ಚಟುವಟಿಕೆಗಳಲ್ಲಿ ಕಾಣುವುದಿಲ್ಲ; ಯೇಸುಕ್ರಿಸ್ತನ ಮರಣದ ಅಗತ್ಯವಿರುವಂಥವುಗಳೇನೋ ಅವುಗಳಲ್ಲಿ ಇಲ್ಲ, ಆ ಚಟುವಟಿಕೆಗಳಿಗೆ ಬೇಕಾಗಿರುವುದು – ಧರ್ಮಾಡಂಬರದ ವಾತಾವರಣ, ಆಡಂಬರದ ಪ್ರಾರ್ಥನೆ, ಮತ್ತು ಆಡಂಬರ ಗಳಲ್ಲಿ ಶ್ರದ್ಧೆ ಮಾತ್ರ. ಈ ಬಗೆಯ ಚಟುವಟಿಕೆಗಳಿಂದ ಉಂಟಾಗುವ ಅನುಭವವು ಅಲೌಕಿಕ ವಾದುದಲ್ಲ ಮತ್ತು ಅದ್ಭುತ ವಾದದ್ದೂ ಅಲ್ಲ, ಅದಕ್ಕೆ ದೇವರ ಶ್ರಮೆಯ ಬೆಲೆಯ ಅಗತ್ಯತೆ ಇಲ್ಲ, ಯಜ್ಞದ ಕುರಿಮರಿಯ ರಕ್ತದಲ್ಲಿ ಅದು ಮುಳುಗಿರುವುದಿಲ್ಲ, ಪವಿತ್ರಾತ್ಮನ ಶುದ್ಧತೆಯ ಮುದ್ರೆಯನ್ನು ಅದು ಹೊಂದಿರುವುದಿಲ್ಲ. ಅಂಥ ಯಾವ ಚಿಹ್ನೆಯನ್ನೂ ಅದು ಹೊಂದಿರುವುದಿಲ್ಲ–ಅಂದರೆ ಯಾವ ಚಿಹ್ನೆಯನ್ನು ಜನರು ಗುರುತಿಸಿ ಆಶ್ಚರ್ಯಚಕಿತರೂ ಸ್ಥಂಭೀಭೂತರೂ ಆಗಿ ''ಇದು ಸರ್ವಶಕ್ತನಾದ ದೇವರ ಕಾರ್ಯ'' ಎಂದು ಹೇಳುವರೋ ಅದನ್ನು ಈ ಚಟುವಟಿಕೆಗಳು ಹೊಂದಿರುವುದಿಲ್ಲ. ದೇವರ ಕಾರ್ಯವನ್ನು – ಬೇರೆ ಯಾವುದನ್ನೂ ಅಲ್ಲ – ಹೊಸ ಒಡಂಬಡಿಕೆಯು ತಿಳಿಯಪಡಿಸುತ್ತದೆ.

ಹೊಸಒಡಂಬಡಿಕೆಯಲ್ಲಿ ಕಾಣಬರುವ ಕ್ರಿಸ್ತೀಯ ಅನುಭವವು, ಕೇವಲ ಯೇಸುಕ್ರಿಸ್ತ ನೆಂಬಾತನಿಗೆ ತೋರಿಸುವ ವ್ಯಕ್ತಿಗತವಾದ ಅನನ್ಯಭಾವಪೂರಿತ ಶ್ರದ್ಧೆ. ಕ್ರಿಸ್ತೀಯ ಅನುಭವಗಳೆಂದು ಕರೆಯಲ್ಪಡುವ ಬೇರೆ ಅನುಭವಗಳೆಲ್ಲವೂ ವ್ಯಕ್ತಿರೂಪದ ಯೇಸು ಕ್ರಿಸ್ತನಿಂದ ಕಳಚಿ ಹೋಗಿವೆ. ಅಲ್ಲಿ ಪುನರ್ಜೀವನವಿಲ್ಲ, ಯೇಸುಕ್ರಿಸ್ತನು ಜೀವಿಸುತ್ತಿರುವ ರಾಜ್ಯದೊಳಗೆ ಹೊಸದಾಗಿ ಹುಟ್ಟಿಬರುವಿಕೆ ಅಲ್ಲಿ ಇಲ್ಲ, ಅಲ್ಲಿರುವುದು ಯೇಸುಕ್ರಿಸ್ತನೇ ನಮ್ಮ ಮಾದರಿ ಎಂಬ ಭಾವನೆ ಮಾತ್ರ. ಹೊಸ ಒಡಂಬಡಿಕೆ ಗನುಸಾರ ಯೇಸುಕ್ರಿಸ್ತನು ನಮಗೆ ಮಾದರಿ ವ್ಯಕ್ತಿಯಾಗುವ ಬಹಳ ಮುಂಚೆಯೇ ಆತನು ನಮ್ಮ ರಕ್ಷಕ ನಾಗಿದ್ದನು. ಈ ದಿನಗಳಲ್ಲಾದರೋ ಆತನನ್ನು ಧಾರ್ಮಿಕತೆಯ ಶಿರವೆಂದು ವರ್ಣಿಸುತ್ತಾ, ಆತನನ್ನು ಕೇವಲ ಉದಾಹರಣಾರ್ಥ ಮಾತ್ರವೆಂದು ಪ್ರಸಿದ್ಧಿಪಡಿಸುತ್ತಾರೆ. ಆತನು ಉದಾಹರಣಾರ್ಥನೂ ಮಾತ್ರವಲ್ಲದೆ ಅದಕ್ಕೂ ಮಿಗಿಲಾದ ಅನಂತವೂ ಆಗಿದ್ದಾನೆ. ಆತನೇ ರಕ್ಷಣೆಯಾಗಿದ್ದಾನೆ. ಆತನೇ ದೇವರ ಸುವಾರ್ತೆಯಾಗಿದ್ದಾನೆ.

ಯೇಸುಕ್ರಿಸ್ತನು ಹೇಳಿದ್ದು – ''ಸತ್ಯದ ಆತ್ಮನು ಬಂದಾಗ... ನಿಮಗೆ ತಿಳಿಸುತ್ತಾ ನನ್ನನ್ನೇ ಮಹಿಮೆಪಡಿಸುವನು'' (ಯೋಹಾನ 16:13–14) ಹೊಸ ಒಡಂಬಡಿಕೆಯಲ್ಲಿ ಪ್ರಕಟವಾದ ಸತ್ಯಾರ್ಥಗಳಿಗೆ ನಾನು ಬದ್ಧನಾದಾಗ ಮಾತ್ರವೇ ದೇವರಿಂದ ಪವಿತ್ರಾತ್ಮನನ್ನು ಬಹುಮಾನವಾಗಿ ಹೊಂದುವೆನು ಮತ್ತು ಯೇಸುಕ್ರಿಸ್ತನು ಹೇಳಿದ್ದವುಗಳನ್ನೆಲ್ಲಾ ಪವಿತ್ರಾತ್ಮನು ನಮಗೆ ವಿವರಿಸಿಹೇಳುತ್ತಾನೆ ಮತ್ತು ಯೇಸುಕ್ರಿಸ್ತನು ಬಾಹ್ಯರೂಪದಲ್ಲಿ ನನಗೆ ಮಾಡಿದವುಗಳನ್ನೆಲ್ಲಾ ಪವಿತ್ರಾತ್ಮನು ನನ್ನಲ್ಲಿ ವ್ಯಕ್ತಿಗತವಾಗಿಸಿ ಬಿಡುತ್ತಾನೆ.

# ನಾನು ಎಂಥವನಾಗಿದ್ದೇನೋ ದೇವರ ಕೃಪೆಯಿಂದಲೇ ಅಂಥವನಾಗಿದ್ದೇನೆ

**''ನಾನು ಎಂಥವನಾಗಿದ್ದೇನೋ ದೇವರ ಕೃಪೆಯಿಂದಲೇ ಅಂಥವನಾಗಿದ್ದೇನೆ. ನನಗುಂಟಾದ ಆತನ ಕೃಪೆಯು ನಿಷ್ಫಲವಾಗಲಿಲ್ಲ'' - (1 ಕೊರಿ 15:10)**

ನಾವು ನಮ್ಮ ಅಸಮರ್ಥ್ಯತೆಯ ಬಗ್ಗೆ ಸದಾಕಾಲ ಮಾತಾಡುವ ರೀತಿಯು ನಮ್ಮ ಸೃಷ್ಟಿಕರ್ತನನ್ನು ಅಪಮಾನಪಡಿಸುತ್ತದೆ. ನಮ್ಮ ಅನರ್ಹತೆಯನ್ನು ಕುರಿತು ಗೋಳಾಡುವುದೆಂದರೆ ದೇವರು ನಮ್ಮನ್ನು ಅಲಕ್ಷಿಸಿರುವನೆಂದು ಆತನನ್ನು ನಿಂದಿಸಿದಂತೆ. ಮನುಷ್ಯರ ಮುಂದೆ ದೀನವಾಗಿ ತೋರಿಬರುವಂಥವುಗಳನ್ನು ದೇವರ ದೃಷ್ಟಿಯಲ್ಲಿಟ್ಟು ಪರಿಶೀಲಿಸುವ ರೂಢಿಯನ್ನು ಅಭ್ಯಾಸಿಸಬೇಕು, ಆಗ, ಅಂಥಾ ತೋರಿಕೆಗಳೆಲ್ಲವೂ ಎಷ್ಟು ಮಾತ್ರಕ್ಕೂ ನಂಬಲಾಗದ, ಅನುಚಿತವಾದ ಮತ್ತು ಗೌರವಹೀನವಾದದ್ದೆಂದು ತಿಳಿದುಕೊಳ್ಳುವಿ. ''ಓ! ನಾನು ಪವಿತ್ರೀಕರಿಸಲ್ಪಟ್ಟಿದ್ದೇನೆಂದು ಹೇಳಿಕೊಳ್ಳಲು ಇಚ್ಛಿಸುವುದಿಲ್ಲ, ನಾನು ಒಬ್ಬ ಸಂತನಲ್ಲ'' ಎಂದು ಮನುಷ್ಯರ ಮುಂದೆ ನಯವಿನಯದಿಂದ ನೀನು ಹೇಳಿಕೊಂಡಿರುವುದನ್ನು ದೇವರ ಮುಂದೆ ಹೇಳುವಿಯಾ! ಆಗ ಅದರ ಅರ್ಥ - ''ಇಲ್ಲ, ಇಲ್ಲ, ಪ್ರಭುವೇ ನೀನು ನನ್ನನ್ನು ರಕ್ಷಿಸುವು ದಾಗಲೀ, ಶುದ್ಧೀಕರಿಸುವುದಾಗಲೀ ನಿನಗೆ ಅಸಾಧ್ಯ. ಒದಗದೇ ಹೋದ ಅವಕಾಶಗಳು ಇದ್ದವು ನಿಜ, ನನ್ನ ಶರೀರದಲ್ಲಿ, ನನ್ನ ಮೆದುಳಿನಲ್ಲಿ ತುಂಬಾ ಅಪರಿಪೂರ್ಣತೆಗಳಿರುವುದರಿಂದ ನನ್ನಲ್ಲಿ ಎಲ್ಲವೂ ದೋಷಯುಕ್ತವಾಗಿವೆ, ಇಲ್ಲ ಪ್ರಭುವೇ ಇಲ್ಲ, ಇದು ಎಂದೆಂದಿಗೂ ನಿನಗೆ ಸಾಧ್ಯವಿಲ್ಲ'' - 'ಹೌದು' ಈ ರೀತಿಯಾಗಿ ಮನುಷ್ಯರ ಮುಂದೆ ಹೇಳಿಕೊಂಡರೆ ನೀನೆಂಥಾ ಆಶ್ಚರ್ಯಕರ ದೀನ ವ್ಯಕ್ತಿ ಎಂದು ಜನರು ತಿಳಿಯಬಹುದು, ಆದರೆ ದೇವರ ಮುಂದೆ ಇದು ಕೇವಲ ನಿನ್ನ ಉದ್ಧಟತನದ ಪ್ರದರ್ಶನ ವಾಗಿದೆ.

ಇದಕ್ಕೆ ವ್ಯತಿರಿಕ್ತವಾಗಿ, ದೇವರ ಮುಂದೆ ನಮ್ರತೆಯುಳ್ಳವುಗಳಾಗಿ ತೋರಿಬರುವಂಥವುಗಳೆಲ್ಲಾ ಮನುಷ್ಯರ ಮುಂದೆ ತದ್ವಿರುದ್ಧವಾಗಿ ತೋರಿಬರುತ್ತವೆ. ''ದೇವರೇ ನಿನಗೆ ಕೃತಜ್ಞತೆಗಳನ್ನು ಅರ್ಪಿಸುವೆನು ನೀನು ನನ್ನನ್ನು ರಕ್ಷಿಸಿರುವಿ ಮತ್ತು ನನ್ನನ್ನು ಶುದ್ಧೀಕರಿಸಿರುವಿ'' ಎಂದು ಹೇಳುವುದು ದೇವರ ದೃಷ್ಟಿಯಲ್ಲಿ ನಮ್ರತೆಯ ಪರಮಾವಧಿಯಾಗಿದೆ, ಇದರ ಅರ್ಥ ದೇವರು ನಂಬಿಗಸ್ತನೂ, ಸತ್ಯವೂ ಆಗಿರುವನೆಂದು ನೀನು ಅರಿತುಕೊಂಡಿರುವೆಯಲ್ಲದೆ ಆತನಿಗೆ ಸಂಪೂರ್ಣವಾಗಿ ನಿನ್ನನ್ನು ನೀನು ಸಮರ್ಪಿಸಿಬಿಟ್ಟಿರುವೆ. ಜನರ ಮುಂದೆ ನೀನು ಹೇಳುವಂಥವುಗಳು ನಮ್ರತೆಯುಳ್ಳವುಗಳಾಗಿ ತೋರಿಬರುತ್ತವೋ ಇಲ್ಲವೋ ಎಂಬುದರ ಬಗ್ಗೆ ನೀನೆಂದಿಗೂ ತಲೆಕೆಡಿಸಿಕೊಳ್ಳಬೇಡ. ದೇವರೆದುರಿನಲ್ಲಿ ಯಾವಾಗಲೂ ದೀನನಾಗಿರಬೇಕು ಮತ್ತು ಆತನೇ ನಿನ್ನ ಸರ್ವಸ್ವದಲ್ಲಿ ಸರ್ವವೂ ಆಗಿರಬೇಕು.

ಒಂದೇ ಒಂದು ಸಂಬಂಧವು ಬಹು ಮುಖ್ಯವಾಗಿದೆ. ನಿನ್ನ ಪ್ರಭುವೂ, ನಿನ್ನ ಸ್ವಂತ ವಿಮೋಚಕನೂ, ರಕ್ಷಕನೂ, ಆಗಿರುವ ಯೇಸುಕ್ರಿಸ್ತನ ಬಾಂಧವ್ಯವೇ ಅದು. ಬೇರೆಲ್ಲವೂ ಹೋಗಿಬಿಡಲಿ, ಎಷ್ಟೇ ಬೆಲೆ ತೆರಬೇಕಾದರೂ ಸರಿಯೇ, ಈ ಬಾಂಧವ್ಯವನ್ನು ಕಾಪಾಡಿಕೊಳ್ಳಲೇ ಬೇಕು. ಆಗ ದೇವರು ನಿನ್ನ ಜೀವಿತದ ಮೂಲಕ ತನ್ನ ಉದ್ದೇಶಗಳನ್ನು ನೆರವೇರಿಸಿಕೊಳ್ಳುತ್ತಾನೆ. ದೇವರ ಉದ್ದೇಶಾರ್ಥವಾಗಿ ಒಬ್ಬನ ವ್ಯಕ್ತಿಗತ ಜೀವನವು ದೇವರಿಗೆ ಹೆಚ್ಚು ಅಮೂಲ್ಯವಾದದ್ದು ಮತ್ತು ಆ ಜೀವವು ನೀನೇ ಆಗಿರಲೂಬಹುದು.

# ಧರ್ಮಶಾಸ್ತ್ರ ಮತ್ತು ಸುವಾರ್ತೆ

**''ಯಾವನಾದರೂ ಧರ್ಮ ಶಾಸ್ತ್ರವನ್ನೆಲ್ಲಾ ಕೈಕೊಂಡು ನಡೆದು ಒಂದೇ ಒಂದರಲ್ಲಿ ತಪ್ಪಿದರೆ, ಅವನು ಎಲ್ಲಾ ವಿಷಯದಲ್ಲಿಯೂ ಅಪರಾಧಿಯಾಗುತ್ತಾನೆ'' - (ಯಾಕೋಬ 2:10)**

ನೈತಿಕ ನಿಬಂಧನೆಗಳ ಧರ್ಮಶಾಸ್ತ್ರವು ಮಾನವನನ್ನು ಬಲಹೀನನೆಂದು ಪರಿಗಣಿಸುವುದೇ ಇಲ್ಲ. ಅದು ನಮ್ಮ ಅನುವಂಶಿಕೆ ಯನ್ನಾಗಲೀ, ದೈಹಿಕ ದುರ್ಬಲತೆಯನ್ನಾಗಲೀ ಲೆಕ್ಕಿಸುವುದಿಲ್ಲ, ನಾವು ಸಂಪೂರ್ಣವಾಗಿ ನೀತಿವಂತರಾಗಿರಬೇಕೆಂದು ಅದು ಒತ್ತಾಯ ಪಡಿಸುತ್ತದೆ. ಧರ್ಮಶಾಸ್ತ್ರವು ಅತ್ಯಂತ ಘನವಂತವರಿಗಾಗಿ ಇಲ್ಲವೇ ಅತ್ಯಂತ ಬಲಹೀನರಿಗಾಗಿ ಅವರವರಿಗೆ ತಕ್ಕಂತೆ ಎಂದಿಗೂ ಬದಲಾಯಿಸಲ್ಪ ಡುವುದಿಲ್ಲ. ಧರ್ಮಶಾಸ್ತ್ರವು ಏಕ ರೀತಿಯಲ್ಲಿ ನಿತ್ಯನಿರಂತರವಾಗಿದೆ. ದೇವರಿಂದ ವಿಧಿಸಲ್ಪಟ್ಟ ಧರ್ಮ ಶಾಸ್ತ್ರವು ಬಲಹೀನರಿಗೋಸ್ಕರ ತನ್ನನ್ನು ದುರ್ಬಲಗೊಳಿಸಿ ಕೊಳ್ಳುವುದಿಲ್ಲ ಮತ್ತು ನಮ್ಮ ಕುಂದುಕೊರತೆ ಗಳನ್ನು ಉಪಶಮನ ಮಾಡುವುದೂ ಇಲ್ಲ. ಅದು ಕಾಲಾನು ಕಾಲದಲ್ಲಿಯೂ ಸ್ಥಿರವಾಗಿರುತ್ತದೆ. ಇದರ ಅರಿವು ನಮಗಿಲ್ಲದಿದ್ದರೇ, ಅದಕ್ಕೆ ಕಾರಣ, ನಾವು ಪೂರ್ಣ ಜೀವಂತಿಕೆಯ ಜೀವಿತವನ್ನು ಜೀವಿಸುತ್ತಿಲ್ಲ; ನಾವು ಧರ್ಮಶಾಸ್ತ್ರ ಕ್ಕೆ ಜೀವಂತರಾದ ಕೂಡಲೇ ಅಂದರೆ ಎಚ್ಚೆತ್ತಕೂಡಲೇ ನಮ್ಮ ಜೀವಿತವೊಂದು ದುರಂತವಾಗಿ ಬಿಡುತ್ತದೆ. ''ಮೊದಲು ನಾನು ಧರ್ಮಶಾಸ್ತ್ರವಿಲ್ಲದವನಾಗಿ ಜೀವದಿಂದಿದ್ದೆನು! ಆಜ್ಞೆಯು ಬಂದಾಗ ಪಾಪಕ್ಕೆ ಜೀವ ಬಂತು. ನಾನು ಸತ್ತೆನು''. (ರೋಮಾ 7:9) ಇದನ್ನು ನಾವು ಗ್ರಹಿಸಿದ ಕೂಡಲೇ ದೇವರ ಆತ್ಮನು, ನಮ್ಮನ್ನು ನಮ್ಮ ಪಾಪ ದೋಷಗಳ ನಿಮಿತ್ಯ ನಮ್ಮನ್ನು ಅಪರಾಧಿಗಳೆಂದು ನಿರ್ಣಯಿಸುವನು. ಮನುಷ್ಯನು ಇಂಥಾ ಗತಿಯನ್ನು ತಲುಪಿ ಮುಂದಾವ ಗತಿಯೂ ಇಲ್ಲ ವೆಂದರಿಯುವ ತನಕ, ಅವನಿಗೆ ಯೇಸುಕ್ರಿಸ್ತನ ಶಿಲುಬೆಯು ಕೇವಲ ಹಾಸ್ಯಾಸ್ಪದವಾಗಿರುತ್ತದೆ. ಪಾಪಾಪರಾಧ ನಿರ್ಣಯವು, ನಾವು ಸದಾಕಾಲ ಧರ್ಮಶಾಸ್ತ್ರಕ್ಕೆ ಭಯ, ಭೀತಿಯಿಂದ ಬಂಧಿಸಲ್ಪಟ್ಟಿರುವ ಭಾವನೆಯನ್ನು ನಮ್ಮಲ್ಲಿ ಉಂಟು ಮಾಡುತ್ತದೆ ಹಾಗೂ ಮನುಷ್ಯನನ್ನು ಹತಾಶನನ್ನಾಗಿಸಿ ಬಿಡುತ್ತದೆ. ''ಪಾಪದ ಸ್ವಾಧೀನ ದಲ್ಲಿರುವುದಕ್ಕೆ ಮಾರಲ್ಪಟ್ಟವನೂ ಆಗಿದ್ದೇನೆ'' (ರೋಮಾ 7:14). ದೋಷ ಭರಿತ ಪಾಪಿಯಾದ ನಾನು ದೇವರಿಗೆ ಸರಿ ಕಾಣುವುದು ಸಾಧ್ಯವೇ ಇಲ್ಲ, ದೇವರಿಗೆ ಯೋಗ್ಯನಾಗಿ ಕಂಡು ಬರಲಿರುವ ಒಂದೇ ಒಂದು ಮಾರ್ಗ-ಅದು ಯೇಸುಕ್ರಿಸ್ತನ ಮರಣದ ಮೂಲಕ. ನನ್ನ ವಿಧೇಯತ್ವದ ಮೂಲಕ ನಾನು ದೇವರ ದೃಷ್ಟಿಯಲ್ಲಿ ನಿರ್ದೋಷಿಯಾಗಿ ಕಂಡುಬರಬಹುದೆಂಬ ಗುಪ್ತ ಕಲ್ಪನೆಯನ್ನು ನನ್ನಿಂದ ತೊಲಗಿಸಲೇಬೇಕು. ಪರಿಶುದ್ಧವಾದ ಪರಿಪೂರ್ಣತೆಯಿಂದ ದೇವರಿಗೆ ವಿಧೇಯರಾಗುವುದು, ನಮ್ಮಲ್ಲಿ ಯಾರಿಗಾದರೂ ಸಾಧ್ಯವೇ!

ಧರ್ಮಶಾಸ್ತ್ರವು ಷರತ್ತುಗಳಿಂದ, ವಾಗ್ದಾನಗಳಿಂದ ನಮ್ಮನ್ನು ಎದುರಿಸಿದರೆ ಮಾತ್ರ ಅದರ ಸಾಮರ್ಥ್ಯವನ್ನು ಅರಿಯುತ್ತೇವೆ. ದೇವರು, ಅದಕ್ಕಾಗಿ ನಮ್ಮನ್ನೆಂದಿಗೂ ಬಲಾತ್ಕಾರಿಸುವುದಿಲ್ಲ. ಒಂದು ಕಾರ್ಯವನ್ನು ನಾವು ಮಾಡಲು ಸಾಧ್ಯವಾಗುವಂತೆ ದೇವರು ನಮ್ಮನ್ನು ಬಲಪಡಿಸಲಿ ಎಂದು ಬಯಸುವುದು ಒಂದು ಮೂಡ್ (Mood) ಆಗಿದ್ದರೆ, ಇನ್ನೊಂದು ಮೂಡ್-ದೇವರು ನಮ್ಮಷ್ಟಕ್ಕೆ ನಾವೇ ಕಾರ್ಯನಿರ್ವಹಿಸಲು ನಮ್ಮನ್ನು ಸ್ವತಂತ್ರವಾಗಿರಲು ಬಿಡಬಾರದೇ ಎಂದು ಬಯಸುತ್ತದೆ. ಯಾವಾಗ ದೇವರ ಚಿತ್ತವೇ ಶ್ರೇಷ್ಠವಾಗಿರುತ್ತದೋ, ಆಗ ಎಲ್ಲಾ ನಿರ್ಬಂಧಗಳೂ, ಒತ್ತಡಗಳೂ ಮಾಯವಾಗಿ ಹೋಗುತ್ತವೆ. ಯಾವಾಗ ನಾವು ಪೂರ್ಣ ವಿವೇಚನೆಯಿಂದ ದೇವರಿಗೆ ವಿಧೇಯರಾಗುವುದನ್ನು ಆಯ್ಕೆ ಮಾಡಿಕೊಳ್ಳುತ್ತೇವೆಯೋ, ಆಗ, ದೇವರು ತನ್ನ ಸರ್ವಶಕ್ತಿಯಿಂದ, ಅತ್ಯಂತ ದೂರದಲ್ಲಿರುವ ನಕ್ಷತ್ರವನ್ನೂ, ಸಾಗರದಂಡೆಯ ಉಸುಬಿನ ಕಡೆಯ ಕಣವನ್ನು ನಮ್ಮೊಂದಿಗೆ ಸಹಕರಿಸುವಂತೆ ಮಾಡುತ್ತಾನೆ.

# ಕ್ರಿಸ್ತೀಯ ಸರ್ವಸಂಪನ್ನತೆ

**''ಇಷ್ಟರೊಳಗೆ ನಾನು ಬಿರುದನ್ನು ಪಡಕೊಂಡು ಸಿದ್ಧಿಗೆ ಬಂದವನೆಂದು ಹೇಳುವುದಿಲ್ಲ'' - (ಫಿಲಿ 3:12)**

ದೇವರು ನಮ್ಮನ್ನು ಏನು ಮಾಡಬೇಕೆಂದಿರುವನೋ ಅಂಥಾ ಒಂದು ಸಂಪನ್ನತೆಯ, ಆದರ್ಶ ಮಾದರಿಯನ್ನಾಗಿ ನಮ್ಮನ್ನು ಮಾಡಲು ಬಯಸಿರುವನು ಎಂದು ನೀನು ಕಲ್ಪನೆ ಮಾಡಿಕೊಂಡರೆ ಅದೇ ಕಂಟಕವಾಗಿಬಿಡುತ್ತದೆ; ತನ್ನೊಡನೆ ನಾವು ಒಂದಾಗಿರುವಂತೆ ಮಾಡುವುದೇ ದೇವರ ಉದ್ದೇಶ. 'ಪರಿಶುದ್ಧತೆ'ಯ ವಿಷಯದ ಕ್ರಿಸ್ತೀಯ ಚಟುವಟಿಕೆಗಳಲ್ಲಿ ಈ ದಿನ ಮಾನಗಳಲ್ಲಿ ಪ್ರತಿಪಾದಿಸುವ ಒಂದು ಅಂಶವೆಂದರೆ, ದೇವರು ನಮ್ಮನ್ನು ಪರಮ ಪರಿಶುದ್ಧತೆಯ, ಆದರ್ಶ ಮಾದರಿಗಳನ್ನಾಗಿ ಮಾಡಿ ತನ್ನ ವಸ್ತು ಸಂಗ್ರಹಾಲಯಗಳಲ್ಲಿ, ಜನರಿಗೆ ಆದರ್ಶರಾಗಿ ಕಾಣುವ ಪ್ರದರ್ಶಿತರನ್ನಾಗಿ ಮಾಡುವನು ಎಂಬ ಚಿಂತನೆಗೆ ಹೆಚ್ಚು ಒತ್ತು ಕೊಡಲಾಗುತ್ತಿದೆ. 'ವ್ಯಕ್ತಿಗತ ಪರಿಶುದ್ಧತೆ'ಯ ಕಲ್ಪನೆಯನ್ನು ನೀನು ಒಪ್ಪಿಕೊಂಡು ಮುಂದೆ ಸಾಗುವಾಗ, ನಿನ್ನ ಜೀವಿತದ ದೃಢ ನಿರ್ಧಾರಗಳು ದೇವರ ಪರವಾಗಿ ಇರುವುದಿಲ್ಲ, ಅವೆಲ್ಲವೂ ನಿನ್ನ ಜೀವಿತದಲ್ಲಿ ದೇವರಿದ್ದಾನೆಂದು ತೋರಿಬರುವಂಥವುಗಳೆಂದು ನೀನು ಯಾವುದನ್ನು ಕರೆಯುವಿಯೋ ಅದರ ಪರವಾಗಿರುತ್ತವೆ. ''ನಾನು ಅಸ್ವಸ್ಥತೆಗೊಳಗಾಗುವುದು ದೇವರ ಚಿತ್ತವಲ್ಲ'' ವೆಂದು ನೀನು ಹೇಳುವೆ, ಆದರೆ ತನ್ನ ಒಬ್ಬನೇ ಮಗನನ್ನು ಜಜ್ಜುವುದೇ ದೇವರ ಚಿತ್ತವಾಗಿದ್ದರೆ, (ಯೆಶಾ 53:10) ಆತನು ನಿನ್ನನ್ನೇಕೆ ಜಜ್ಜಬಾರದು? ನಿನ್ನ ವ್ಯಕ್ತಿಗತ ತುಲನಾತ್ಮಕ ಪರಿಶೀಲನೆಯ ಕಲ್ಪನೆಯಂತೆ, ದೇವ ಭಕ್ತನಾದವನು ಇರಬೇಕೆಂಬಂತೆ, ನೀನು ಜೀವಿಸುವುದು ನಿನ್ನಲ್ಲಿ ದೇವರನ್ನು ಪ್ರಕಟಿಸುತ್ತದೆ ಎಂದಲ್ಲ. ನೀನು ಸ್ವಸ್ಥನೋ, ಇಲ್ಲವೊ ಅಸ್ವಸ್ಥನೋ ಅದು ಮುಖ್ಯವಲ್ಲ, ಯೇಸುಕ್ರಿಸ್ತನಿಗೆ ನೀನು ಸಂಪೂರ್ಣವಾಗಿ ನಿನ್ನನ್ನು ಸಮರ್ಪಿಸಿ ಕೊಂಡು, ಆತನೊಂದಿಗೆ ಸಮರಸವುಳ್ಳ ಬಾಂಧವ್ಯವನ್ನು ಹೊಂದಿರುವುದೇ ದೇವರು ತನ್ನ ಭಕ್ತನಾದವನಿಂದ ಅಪೇಕ್ಷಿಸುತ್ತಾನೆ.

ಮಾನವನ ಪರಿಪೂರ್ಣತೆಯು, ಕ್ರಿಸ್ತೀಯ ಪರಿಪೂರ್ಣತೆಯಲ್ಲ, ಅದು ಸಾಧ್ಯವಾಗುವದೂ ಇಲ್ಲ. ಕ್ರಿಸ್ತೀಯ ಪರಿಪೂರ್ಣತೆಯು ದೇವರೊಂದಿಗಿರುವ ನಿನ್ನ ಬಾಂಧವ್ಯದ ಪರಿಪೂರ್ಣತೆಯಾಗಿರುತ್ತದೆ, ಹಾಗೂ ಈ ಪರಿಪೂರ್ಣತೆಯು ದೈನಂದಿನ ಜೀವಿತದ ಅಪ್ರಸ್ತುತ ಸನ್ನಿವೇಶಗಳಲ್ಲಿಯೂ ತನ್ನ ಸಂಪನ್ನತೆ ಯನ್ನು ತೋರಿಸುತ್ತದೆ. ಯೇಸುಕ್ರಿಸ್ತನ ಕರೆಯುವಿಕೆಗೆ ನೀನು ವಿಧೇಯನಾದ ಕೂಡಲೇ ಮೊದಲು ನಿನಗೆ ಹೊಳೆಯುವುದು-ನೀನು ಮಾಡಬೇಕಾಗಿರುವ ಕೆಲಸಗಳಲ್ಲಿರುವ ಅಸಂಬದ್ಧತೆ, ತದನಂತರ ಮತ್ತೂ ಹೊಳೆಯುವ ಸಂಗತಿ-ದೇವರೊಂದಿಗೆ ಯಾವುದೇ ರೀತಿಯ ಸಂಬಂಧಗಳಿರಲಾರದ ಬೇರೆ ಜನರು, ಮಾನವೀಯ ಪರಿಪೂರ್ಣತೆಯಲ್ಲಿ ಸುಸಂಬದ್ಧವಾದ ಜೀವಿತವನ್ನು ಅವರು ಜೀವಿಸುತ್ತಿರುವ ವಾಸ್ತವತೆ; ಅವರ ಜೀವಿತವನ್ನು ಗಮನಿಸುತ್ತಿರುವ ನಿನಗೆ, ದೇವರು ಅನಗತ್ಯನೆಂಬ ಕಲ್ಪನೆ ಹೊಳೆಯುವುದು ಸಹಜವೇ, ದೇವರು ಬಯಸುವ ಜೀವಿತದ ಸ್ಟ್ಯಾಂಡರ್ಡನ್ನು ಮಾನವನ ಪರಿಶ್ರಮ ಮತ್ತು ಶ್ರದ್ಧೆಯ ಫಲವಾಗಿ ಮುಟ್ಟಬಹುದೆಂಬ ಕಲ್ಪನೆಯೂ ನಿನಗೆ ಹೊಳೆಯುತ್ತದೆ. ಪತನಗೊಂಡ ಪ್ರಪಂಚದಲ್ಲಿ ಕ್ರಿಸ್ತೀಯ ಜೀವನವನ್ನು ಬಾಳಲು ಸಾಧ್ಯವೇ ಇಲ್ಲವೆಂದೂ ನಿನಗೆ ಗೋಚರಿಸುತ್ತದೆ. ಆದರೆ ನಾನು ಜೀವಿಸುವ ದೈನಂದಿನ ಬದುಕು, ದೇವರ ಅಗತ್ಯತೆಯನ್ನರಿಯದವರಲ್ಲಿ, ದೇವರ ಹಂಬಲಿಕೆಯನ್ನುಂಟು ಮಾಡುವಂತೆ, ಪರಿಪೂರ್ಣವಾದ ದೈವ ಸಂಬಂಧ ಹೊಂದಿದ ಜೀವಿತವನ್ನು ಬದುಕಲು ನಾನು ಕರೆಯಲ್ಪಟ್ಟಿದ್ದೇನೆಯೇ ಹೊರತು ನನಗಾಗಿ, ವ್ಯಕ್ತಿಗತ ಮೆಚ್ಚುಗೆಯನ್ನು ಸಂಪಾದಿಸುವುದಕ್ಕಾಗಿ ಅಲ್ಲ. ನನ್ನ ಸ್ವಾರ್ಥಪರ ಆಲೋಚನೆ ಗಳು, ನಾನು ದೇವರಿಗೆ ಉಪಯೋಗವಾಗಲು ಅಡ್ಡಿಪಡಿಸುತ್ತವೆ.

# ಪರಾಕ್ರಮದಿಂದಲ್ಲ ಬಲದಿಂದಲ್ಲ

**''ನನ್ನ ಬೋಧನೆಯಲ್ಲಿಯೂ, ಪ್ರಸಂಗದಲ್ಲಿಯೂ ಮನವೊಲಿಸುವ ಜ್ಞಾನ ವಾಕ್ಯಗಳನ್ನು ನಾನು ಪ್ರಯೋಗಿಸದೆ ದೇವರಾತ್ಮನ ಬಲವನ್ನು ತೋರ್ಪಡಿಸುವ ವಾಕ್ಯಗಳನ್ನೇ ಪ್ರಯೋಗಿಸಿದೆನು.''**
**- (1 ಕೊರಿಂಥ 2:5)**

ಸುವಾರ್ತೆಯನ್ನು ನೀನು ಬೋಧಿಸುವಾಗ ಸುವಾರ್ತೆಯ ಬಲದಲ್ಲಿಟ್ಟಿರುವ ನಂಬಿಕೆಯ ಸ್ಥಾನದಲ್ಲಿ, ರಕ್ಷಣಾ ಮಾರ್ಗದ ವಿಷಯದ ನಿನ್ನ ನಿಶ್ಚಿತ ಜ್ಞಾನವನ್ನು ಪರ್ಯಾಯವಾಗಿರಿಸಿದರೆ, ಜನರು ಸತ್ಯವನ್ನರಿಯುವ ಮಾರ್ಗದಲ್ಲಿ ನೀನೇ ಅಡ್ಡಿಯಾಗಿರುತ್ತಿ. ರಕ್ಷಣಾ ಮಾರ್ಗದ ಬಗ್ಗೆ ನಿನಗಿರುವ ತಿಳುವಳಿಕೆಯನ್ನು ಘೋಷಿಸುವ ಮೊದಲು ದೇವರಲ್ಲಿಟ್ಟಿರುವ ನಿನ್ನ ನಂಬಿಕೆಯು ಭದ್ರವಾಗಿ ನೆಲೆಯೂರಿದೆಯೇ, ಎಂಬುದನ್ನು ನೀನು ಖಚಿತ ಪಡಿಸಿಕೊಳ್ಳಬೇಕು. ನೀನು ಪ್ರತಿಪಾದಿಸುವ ಸ್ಪಷ್ಟೀಕರಣದ ಪಾರದರ್ಶಕತೆಯ ಮೇಲೆ ನೀನು ಆಧಾರಗೊಂಡಿರದೆ, ನೀನು ವ್ಯಾಖ್ಯಾನಿಸುತ್ತಿರುವಾಗಲೇ ನೀನು ಪವಿತ್ರಾತ್ಮನ ಮೇಲೆ ಆಧಾರಗೊಂಡಿರಬೇಕು ಮತ್ತು ಗಮನವನ್ನಿಡಬೇಕು. ದೇವರು ನೆರವೇರಿಸಿರುವ ನಿಸ್ಸಂದೇಹವಾದ ಪಾಪವಿಮೋಚನಾ ಬಲದ ಮೇಲೆ ನೀನು ಆತುಕೊಂಡಿರಬೇಕು, ಆಗ ದೇವರು ತನ್ನ ಸ್ವಂತ ಜೀವಿತವನ್ನು ನಿನ್ನ ಬೋಧನೆಯನ್ನು ಆಲಿಸಿದ ಜನರ ಆತ್ಮಗಳಲ್ಲಿ ಸೃಷ್ಟಿಸುತ್ತಾನೆ.

ಈ ವಾಸ್ತವದಲ್ಲಿ ನೀನೊಮ್ಮೆ ಬೇರೂರಿದ್ದರೆ, ಬೇರೆ ಯಾವುದೂ ನಿನ್ನನ್ನು ಅಲುಗಾಡಿಸಲಾರದು. ನಿನ್ನ ಅನುಭವಗಳಲ್ಲಿ ಮಾತ್ರ ನಿನಗೆ ನಂಬಿಕೆ ಇದ್ದರೆ, ಏನಾದರೂ ಸಂಭವಿಸಿ ನಿನ್ನ ನಂಬಿಕೆಯನ್ನು ಅದು ತಲೆಕೆಳಗೆ ಮಾಡುತ್ತದೆ; ದೇವರನ್ನು ಯಾವ ಸಂಗತಿಯೂ ಪಲ್ಲಟಗೊಳಿಸಲಾರದು ಅಥವಾ ಪಾಪ ವಿಮೋಚನೆಯ ವಾಸ್ತವದ ಸರ್ವ ಶಕ್ತಿಯನ್ನು ಯಾವುದೂ ದಿಕ್ಕುತಪ್ಪಿಸಲಾರದು; ಈ ನಿಜ ಸತ್ಯದ ಮೇಲೆ ನೀನು ಆಧಾರಗೊಂಡಿರಬೇಕು, ಆಗ ನೀನು ಸದಾಕಾಲ ದೇವರೆಷ್ಟು ಭದ್ರಾಶ್ರಯನಾಗಿರುವನೋ, ಅಷ್ಟೇ ಭದ್ರವಾಗಿ ನೆಲೆಯೂರಿ ಬಿಡುವಿ. ಯೇಸುಕ್ರಿಸ್ತನ ವೈಯಕ್ತಿಕ ಸಂಬಂಧದೊಳಗೆ ಒಮ್ಮೆ ನೀನು ಬಂದಿದ್ದಾದರೆ, ಇನ್ನೊಮ್ಮೆ ನೀನೆಂದಿಗೂ ಕದಲಿಬೀಳುವುದಿಲ್ಲ. ಪವಿತ್ರೀಕರಣದ ಅರ್ಥವೇ ಇದು. ಪವಿತ್ರೀಕರಣವೆಂದರೆ ತನ್ನನ್ನು ತಾನು ಪ್ರತಿಷ್ಠಿಸಿಕೊಳ್ಳಬೇಕು. (ಯೋಹಾ 17:19 ನೋಡಿರಿ) ಇದನ್ನು ಮರೆತು ಪವಿತ್ರೀಕರಣವೆನ್ನುವುದೊಂದು ಅನುಭವ ಮಾತ್ರವೆನ್ನುವ ಪರಿಕಲ್ಪನೆಗೆ ಅಂಟಿಕೊಳ್ಳುವಂತೆ ಮಾಡುವ ಮಾನವನ ಅನುಭವಕ್ಕೆ ದೇವರು ಸಮ್ಮತಿಸುವುದಿಲ್ಲ. ಪವಿತ್ರೀಕರಣಗೊಂಡ ನನ್ನ ಜೀವಿತವನ್ನು ದೇವರ ಸೇವೆಗಾಗಿ ವಿವೇಚನಾ ಪೂರ್ವಕವಾಗಿ ಆತನಿಗೆ ನಾನು ಒಪ್ಪಿಸಿಕೊಟ್ಟರೆ, ಆಗಲಾತನು ನನ್ನ ಕೈಗಳನ್ನು ತನ್ನ ಕೈಗಳನ್ನಾಗಿಯೂ ಮತ್ತು ನನ್ನ ಕಾಲುಗಳನ್ನು ತನ್ನ ಕಾಲುಗಳನ್ನಾಗಿಯೂ ಉಪಯೋಗಿಸಿಕೊಳ್ಳುತ್ತಾನೆ.

# ವಿರೋಧಾಭಾಸದ ನಿಯಮ

**''ಯಾವನು ಜಯಹೊಂದುತ್ತಾನೊ ...'' – (ಪ್ರಕಟನೆ 2:7)**

ಪ್ರಕೃತಿಯಲ್ಲಿಯಾಗಲೀ ಕೃಪೆಹೊಂದಿದ ಜೀವಿತದಲ್ಲಿಯೇ ಆಗಲಿ ಸಂಘರ್ಷ ರಹಿತ ಜೀವನವು ಅಸಾಧ್ಯ, ದೈಹಿಕ, ಮಾನಸಿಕ, ನೈತಿಕ ಮತ್ತು ಆತ್ಮೀಕ ಜೀವಿತಗಳಲ್ಲಿಯೇ ಪರಸ್ಪರ ಸಂಘರ್ಷಣೆ ಘಟಿಸುತ್ತದೆ. ಇದೇ ಜೀವಿತದ ಪರಮ ಸತ್ಯ.

ಭೌತಿಕ ಜೀವನ ಮತ್ತು ಬಾಹ್ಯ ಸ್ವಭಾವಗಳ ನಡುವೆ ಸಮತೆ ಇರಬೇಕಾದರೆ ದೃಢವಾದ ದೇಹಾರೋಗ್ಯವಿರಬೇಕು. ಬಾಹ್ಯ ಸಂಗತಿಗಳ ವಿರುದ್ಧ ಅಂತರಂಗದಲ್ಲಿ ಅಗತ್ಯದಷ್ಟಿರುವ ಪ್ರಾಣಧಾರಣ ಶಕ್ತಿಯು ಈ ಸಮತೆಯನ್ನು ಕಾಪಾಡುತ್ತದೆ. ನನ್ನ ಐಹಿಕ ಜೀವಿತದ ಹೊರಗಿರುವ ಎಲ್ಲಾ ಬಾಹ್ಯ ಸಂಗತಿಗಳು ನನ್ನನ್ನು ಮರಣಕ್ಕೊಪ್ಪಿಸುವಂತೆ ರಚಿಸಲ್ಪಟ್ಟಿವೆ – ನಾನು ಬದುಕಿದ್ದಾಗ ನನ್ನ ಜೀವಂತಿಕೆಗೆ ಕಾರಣ ವಾದುವುಗಳೇ ನನ್ನ ಮರಣಾ ನಂತರ ನನ್ನನ್ನು ಕೊಳೆತು ನಾಶವಾಗುವಂತೆ ಮಾಡುತ್ತವೆ. ಹೋರಾಡಲು ಅಗತ್ಯವಿರುವ ಪ್ರಾಣಶಕ್ತಿಯು ನನ್ನಲ್ಲಿ ಇರುವವರೆಗೂ ನಾನು ದೇಹಾರೋಗ್ಯದ ಸಮತೆಯನ್ನು ಕಾಯ್ದು ಕೊಂಡಿರುತ್ತೇನೆ. ಮಾನಸಿಕ ಜೀವನದಲ್ಲಿಯೂ ಇದೇ ನಿಯಮವು ನಿಜವಾಗಿರುತ್ತದೆ. ಸತ್ವ ಭರಿತ ಮಾನಸಿಕ ಆರೋಗ್ಯವನ್ನು ಕಾಪಾಡಿಕೊಳ್ಳಬೇಕಾದರೆ ನಾನು ಹೋರಾಡಲೇಬೇಕು, ಆಗ ಮಾತ್ರವೇ ವಿಚಾರವೆಂಬ ಮಾನಸಿಕ ಸಮತೋಲನೆಯು ಪ್ರಕಟಗೊಳ್ಳುತ್ತದೆ.

ನೈತಿಕ ಜೀವಿತದಲ್ಲಿರುವುದೂ ಇದೇ ನಿಯಮ. ಸಹಜ ನೈತಿಕ ಸ್ವಭಾವಗಳಲ್ಲಿ ಭಾಗವಹಿಸದೆ ಇರುವಂಥವುಗಳೇನೇ ನನ್ನಲ್ಲಿದ್ದರೂ, ಅವೆಲ್ಲವುಗಳೂ ನನ್ನ ಋಜುತ್ವದ ಅಂದರೆ ಸಹಜ ನೈತಿಕತೆಯ ಶತ್ರುಗಳೇ ಮತ್ತು ಈ ಶತ್ರುಗಳನ್ನು ಜಯಿಸಿ ಸದ್ಗುಣಗಳನ್ನು ಪ್ರದರ್ಶಿಸಬಲ್ಲೆನೋ ಎಂಬುದು ನನ್ನೊಳಗಿರುವ ನೈತಿಕ ಯೋಗ್ಯತೆ ಎಂಥಾದ್ದೆಂಬುದನ್ನು ಅವಲಂಬಿಸಿದೆ. ಒಂದು ವಿಷಯದಲ್ಲಿ ನಾನು ನೈತಿಕನಾಗಿರುವುದರಿಂದ ಆ ವಿಷಯದ ಬಗ್ಗೆ ಕೂಡಲೇ ಹೋರಾಟಕ್ಕಿಳಿಯುತ್ತೇನೆ. ಯಾವ ಮನುಷ್ಯನೂ ಹುಟ್ಟಿದಂದಿನಿಂದ ನೀತಿವಂತನಲ್ಲ, ಅದಕ್ಕೇನೂ ಮಾಡಲಾಗದು. ನೈತಿಕತೆಯನ್ನು ಸಂಪಾದಿಸಿಕೊಳ್ಳಬೇಕು.

ಆಧ್ಯಾತ್ಮಿಕ ಜೀವಿತದಲ್ಲಿಯೂ ಇದೇ ನಿಯಮವಿದೆ. ಯೇಸುಕ್ರಿಸ್ತನು ಹೇಳಿರುವನು ''ಲೋಕದಲ್ಲಿ ನಿಮಗೆ ಸಂಕಟವುಂಟು. ಆದರೆ ಧೈರ್ಯವಾಗಿರ್ರಿ ನಾನು ಲೋಕವನ್ನು ಜಯಿಸಿದ್ದೇನೆ'' (ಯೋಹಾನ 16:33) ಅಂದರೆ, ಆಧ್ಯಾತ್ಮಿಕವಾಗಿರದ ಯಾವುದೇ ಸಂಗತಿಯೂ ನನ್ನ ಅವನತಿಗೆ ದಾರಿಮಾಡುತ್ತದೆ. ನನ್ನ ವಿರುದ್ಧ ಎರಗಿ ಬರುವಂಥವುಗಳನ್ನು ಎದುರಿಸಿ ನಿವಾರಿಸಿಕೊಳ್ಳುವುದನ್ನು ನಾನು ಕಲಿತು ಕೊಳ್ಳಲೇಬೇಕು, ಹಾಗೆ ಮಾಡಿದರೆ, ನನ್ನ ಪರಿಶುದ್ಧತೆಯಲ್ಲಿ ಸಮತೆಯುಂಟಾಗುತ್ತದೆ ಹಾಗೂ ಪ್ರತಿರೋಧಗಳನ್ನೆದುರಿಸಲು ನನಗೆ ಹರ್ಷವೆನಿಸುತ್ತದೆ.

ನನ್ನ ಸ್ವಭಾವದ ನಿಯಮ ಮತ್ತು ಯೇಸುಕ್ರಿಸ್ತನಲ್ಲಿ ದೇವರು ವ್ಯಕ್ತ ಪಡಿಸಿದ ನಿಯಮಗಳ ನಡುವೆ ಸಮತೆಯನ್ನುಂಟು ಮಾಡುವುದು ಪರಿಶುದ್ಧತೆಯೇ.

# ಪವಿತ್ರಾತ್ಮನ ಗರ್ಭಗುಡಿ

**''ಸಿಂಹಾಸನದ ವಿಷಯದಲ್ಲಿ ಮಾತ್ರ ನಾನು ನಿನಗಿಂತ ದೊಡ್ಡವನಾಗಿರುವೆನು''**
**- (ಆದಿಕಾಂಡ 41:40)**

ದೇವರ ಪ್ರಭುತ್ವದಲ್ಲಿರುವ ಈ ನನ್ನ ಶರೀರವನ್ನು, ನಾನು ಹೇಗೆ ಆಳುತ್ತಿರುವೆನೆಂಬ ವಿಷಯ ದಲ್ಲಿ ನಾನು ಆತನಿಗೆ ಲೆಕ್ಕವನ್ನೊಪಿಸಬೇಕು. ''ದೇವರ ಕೃಪಾವರವನ್ನು'' ವ್ಯರ್ಥ (ಗಲಾ 2:21) ಮಾಡಲಿಲ್ಲವೆಂದು ಶ್ರೀ ಪೌಲನು ಹೇಳಿರುವನು. ಅಂದರೆ ಕೃಪೆಯನ್ನು ನಿಷ್ಪರಿಣಾಮಕಾರಿಯಾಗಿ ಮಾಡಲಿಲ್ಲ. ದೇವರ ಕೃಪೆಯು ಪರಮ ಶ್ರೇಷ್ಠವೂ, ಯೇಸುಕ್ರಿಸ್ತನ ಮೂಲಕ ಉಂಟಾದ ರಕ್ಷಣಾ ಕಾರ್ಯವು ಪರಿಪೂರ್ಣವೂ ಮಾತ್ರವಲ್ಲದೆ, ಇದು ನಿತ್ಯಕಾಲಕ್ಕೂ ಆಗಿ ಹೋದ, ಮುಗಿದು ಹೋದ ಕಾರ್ಯ. ನಾನು ರಕ್ಷಣೆಯನ್ನು ಹೊಂದುತ್ತಾ ಇರುವೆನೆಂದಲ್ಲ, ರಕ್ಷಿಸಲ್ಪಟ್ಟಿದ್ದೇನೆ; ಈ ರಕ್ಷಣಾಕಾರ್ಯವು ದೇವರ ಸಿಂಹಾಸನವೆಷ್ಟು ಸತ್ಯವೋ ಅಷ್ಟೇ ಶಾಶ್ವತವಾದದ್ದು; ಈಗ ನಾನು ಮಾಡಬೇಕಾಗಿರುವುದಿಷ್ಟೇ; ದೇವರು ನಮ್ಮೊಳಗಡೆ ಇಟ್ಟಿರುವ ರಕ್ಷಣೆಯನ್ನು ನಾನು ನನ್ನ ಬಾಹ್ಯಜೀವಿತದಲ್ಲಿ ಅನುಷ್ಠಾನ ಗೊಳಿಸಬೇಕು. ''ನಿಮ್ಮ ನಿಮ್ಮ ರಕ್ಷಣೆಯನ್ನು ಸಾಧಿಸಿಕೊಳ್ಳಿರಿ'' (ಫಿಲಿ 2:12) ದೇವರು ನನ್ನೊಳಗೆ ಏನನ್ನು ಇರಿಸಿರುವನೋ ಅದನ್ನು ಉಪಯೋಗಿಸುವ ಜವಾಬ್ದಾರಿ ನನ್ನದೇ ಆಗಿದೆ. ಅದನ್ನು - ಯೇಸುಕ್ರಿಸ್ತನ ಜೀವಿತವನ್ನು ನನ್ನ ಶರೀರದಲ್ಲಿ ನಿಗೂಢವಾಗಿ ಅಥವಾ ರಹಸ್ಯವಾಗಿ ಜೀವಿಸುವುದಲ್ಲ. ಆದರೆ ಬಹಿರಂಗವಾಗಿ ಧೈರ್ಯದಿಂದ ಮತ್ತು ಅರ್ಥಪೂರ್ಣವಾಗಿ ಜೀವಿಸಬೇಕು. ''ನನ್ನ ಮೈಯನ್ನು ಜಜ್ಜಿ ಸ್ವಾಧೀನಪಡಿಸಿಕೊಳ್ಳುತ್ತೇನೆ.'' (1 ಕೊರಿ 9:27) ಪ್ರತಿಯೊಬ್ಬ ಭಕ್ತನೂ ದೇವರಿಗೋಸ್ಕರ ತನ್ನ ಶರೀರವನ್ನು ಸಂಪೂರ್ಣವಾಗಿ ತನ್ನ ಸ್ವಾಧೀನದಲ್ಲಿಟ್ಟು ಕೊಂಡಿರಬೇಕು. ಪವಿತ್ರಾತ್ಮನ ಗರ್ಭ ಗುಡಿಯ ಮೇಲೆ, ನಮ್ಮ ಕಲ್ಪನೆಗಳ ಮೇಲೆ, ಮತ್ತು ಮನಃಪ್ರವೃತ್ತಿಯ ಮೇಲೆ ನಾವು ಅಧಿಕಾರ ಹೊಂದಿರುವಂತೆ ದೇವರು ಮಾಡಿದ್ದಾನೆ. ಆದ್ದರಿಂದ ಇವೆಲ್ಲವುಗಳಿಗೂ ನಾವು ಹೊಣೆಗಾರರಾಗಿ ರುವುದರಿಂದ ವಿಪರೀತ ಒಲವುಗಳಿಗೆ ದಾರಿಮಾಡಿಕೊಡಬಾರದು. ನಮ್ಮಲ್ಲಿ ಅನೇಕರು ತಮ್ಮ ವಿಷಯಗಳಲ್ಲಿ ಎಷ್ಟು ನಿರ್ಣಾಯಕ ರಾಗಿರುವರೋ ಅದಕ್ಕಿಂತಲೂ ಹೆಚ್ಚಾಗಿ ಇತರರಲ್ಲಿ ಅದೇ ವಿಷಯಗಳ ಬಗ್ಗೆ ನಿಷ್ಠುರ ನಿರ್ಣಯಗಳುಳ್ಳವ ರಾಗಿರುತ್ತಾರೆ. ನಮ್ಮ ಸಂಗತಿಗಳ ಬಗ್ಗೆ ಕುಂಟುನೆಪವೊಡ್ಡಿ ಸಮರ್ಥಿಸಿ ಕೊಳ್ಳುತ್ತೇವೆ, ಆದರೆ ಇತರ ರಲ್ಲಿರುವ ಅದೇ ಸಂಗತಿಗಳನ್ನು ತೀವ್ರವಾಗಿ ಖಂಡಿಸುತ್ತೇವೆ; ಯಾಕೆಂದರೆ ಅವುಗಳ ಬಗ್ಗೆ ಸಹಜ ವಾಗಿಯೇ ನಮಗೆ ಒಲವು ಇರುವುದಿಲ್ಲ.

''ನಿಮ್ಮ ಶರೀರಗಳನ್ನು ಸಜೀವ ಯಜ್ಞಗಳನ್ನಾಗಿ ಸಮರ್ಪಿಸಿರಿ ಎಂದು ಬೇಡಿಕೊಳ್ಳುತ್ತೇನೆ''. (ರೋಮಾ 12:1) ಶ್ರೀ ಪೌಲನು ಹೇಳುತ್ತಿರುವನು. ಈ ನನ್ನ ಶರೀರವು ದೇವ ಮಂದಿರವಾಗಿದೆ ಯೆಂದು ಹೇಳುತ್ತಿರುವ ನನ್ನ ಸ್ವಾಮಿಯೂ, ನನ್ನ ಗುರುವೂ ಆಗಿರುವ ಯೇಸುಕ್ರಿಸ್ತನೊಡನೆ ಸಮ್ಮತಿಸು ವಿಯೋ? ಈ ಸತ್ಯಾಂಶವನ್ನು ನಾವು ಗ್ರಹಿಸಬೇಕು. ಹಾಗಿದ್ದರೆ ನನ್ನ ಶರೀರದ ಸಕಲ ನಿಯಮಗಳು, ನನ್ನ ಮಟ್ಟಿಗೆ ''ಪವಿತ್ರಾತ್ಮನ ಗರ್ಭಗುಡಿಯಾಗಿದೆ'' ಎಂಬ ವಾಕ್ಯದಲ್ಲಿ ಏಕೀಕೃತವಾಗಿವೆ.

# ಮೇಘಗಳಲ್ಲಿ ಮುಗಿಲು ಬಿಲ್ಲು

**''ಮೇಘಗಳಲ್ಲಿ ನಾನಿಟ್ಟಿರುವ ಮುಗಿಲು ಬಿಲ್ಲೇ ಗುರುತಾಗಿರುವುದು. ನನಗೂ ಭೂಪ್ರಾಣಿಗಳಿಗೂ ಆದ ಒಡಂಬಡಿಕೆಗೆ ಇದೇ ಗುರುತಾಗಿರಲಿ.'' – (ಆದಿಕಾಂಡ 9:13)**

ದೇವರೊಡನೆ ಮಾನವನು ನೈತಿಕವಾಗಿ ಸರಿಯಾದ ಸಂಬಂಧ ಹೊಂದಿರಬೇಕೆನ್ನುವುದು ದೇವರ ಚಿತ್ತವಾಗಿದೆ. ಆತನ ಎಲ್ಲಾ ಒಡಂಬಡಿಕೆಗಳೂ ಈ ಉದ್ದೇಶಕ್ಕಾಗಿ ಇವೆ. ''ದೇವರು ನನ್ನನ್ನೇಕೆ ರಕ್ಷಿಸಬಾರದು ?'' ಆದರೆ ನನ್ನನ್ನು ರಕ್ಷಿಸಿಯೇ ರಕ್ಷಿಸಿರುವನು, ಆದರೆ ನಾನೇ ದೇವರ ಸಂಬಂಧದೊಳಗೆ ಇನ್ನೂ ಪ್ರವೇಶಿಸಿಲ್ಲ. ''ದೇವರು ನನಗಾಗಿ ಅದನ್ನು ಯಾಕೆ ಮಾಡುವುದಿಲ್ಲ ? ಮತ್ತು ಇದನ್ನೇಕೆ ಮಾಡುವುದಿಲ್ಲ ?'' ಆತನು ಅದನ್ನೂ ಮಾಡಿರುವನು, ಆದರೆ ಇಲ್ಲಿ ಮುಖ್ಯವಾಗಿರುವ ಅಂಶ – ದೇವರ ಒಡಂಬಡಿಕೆಯ ಸಂಬಂಧ ದೊಳಗೆ ನಾನು ಸೇರಿಕೊಳ್ಳಬಲ್ಲೆನೋ ? ದೇವರ ಮಹತ್ವವಾದ ಎಲ್ಲಾ ಆಶೀರ್ವಾದಗಳೂ ಅನುಗ್ರಹಿ ಸಲ್ಪಟ್ಟಿವೆ ಮತ್ತು ಅವು ಪರಿಪೂರ್ಣವಾಗಿವೆ. ಆದರೆ ಆತನ ಒಡಂಬಡಿಕೆಯ ಆಧಾರದ ಮೇಲೆ ಆತನ ಸಂಬಂಧದೊಳಗೆ ನಾನು ಪ್ರವೇಶಿಸುವ ತನಕ ಆತನ ಆಶೀರ್ವಾದಗಳು ನನ್ನದಾಗುವುದೇ ಇಲ್ಲ.

ದೇವರಿಗಾಗಿ ಕಾದು ಕುಳಿತಿರುವುದು ನರರೂಪದ ಒಂದು ಅಪನಂಬಿಕೆ, ಅಂದರೆ ದೇವರಲ್ಲಿ ನನಗೆ ನಂಬಿಕೆಯೇ ಇಲ್ಲವೆಂದು ಅದರ ಅರ್ಥ; ನಾನು ಆತನಲ್ಲಿ ನಂಬಿಕೆ ಇಡುವಂತೆ ನನ್ನ ಗ್ರಹಿಕೆಗೆ ಬರುವಂಥಾ ಏನೋ ಒಂದನ್ನು ಆತನು ನನ್ನಲ್ಲಿ ಮಾಡಲಿ ಎಂದು ನಾನು ಕಾಯುತ್ತೇನೆ. ದೇವರು ಅದನ್ನು ಮಾಡುವುದೇ ಇಲ್ಲ. ಯಾಕೆಂದರೆ ದೇವರ ಮತ್ತು ಮನುಷ್ಯನ ನಡುವಿರಬೇಕಾದ ಸಂಬಂಧಕ್ಕೆ ಅದು ಆಧಾರವಲ್ಲ. ದೇವರು ತಾನು ಮಾಡಿಕೊಂಡ ಒಡಂಬಡಿಕೆಯೊಂದಿಗೆ ಹೇಗೆ ತನ್ನನ್ನು ಮೀರಿ ಮನುಷ್ಯನಲ್ಲಿ ಕ್ರಿಯಾಶೀಲನಾಗುತ್ತಾನೋ ಹಾಗೆಯೇ ಮನುಷ್ಯನು ತನ್ನ ಶರೀರವನ್ನೂ, ತನ್ನ ಭಾವನೆಗಳನ್ನೂ ಮೀರಿ ಕ್ರಿಯಾಶೀಲನಾಗಬೇಕು. ಮನುಷ್ಯನಿಗೆ ದೇವರಲ್ಲಿಡಬೇಕಾದ ನಂಬಿಕೆಯ ಪ್ರಶ್ನೆ ಇಲ್ಲಿದೆ – ಅತ್ಯ ಮೂಲ್ಯವಾದ ಸಂಗತಿ ಇದು. ನಾವಾದರೋ, ನಮ್ಮ ಕಲ್ಪನಾಭಾವನೆಗಳಲ್ಲಿ ಮಾತ್ರ ನಂಬಿಕೆ ಇಟ್ಟಿದ್ದೇವೆ. ನಾನು ಹೊಂದಿರುವುದು ನಿಜವೆಂದು ನಂಬುವಂತೆ ಇಂದ್ರಿಯ ಗ್ರಾಹ್ಯವಾದುದೇ ನಾದರೊಂದನ್ನು ದೇವರು ನನ್ನ ಹಸ್ತಗಳಲ್ಲಿರಿಸುವ ತನಕ ನಾನು ದೇವರನ್ನು ನಂಬುವುದಿಲ್ಲ. ಹಾಗಾದ ನಂತರವೇ ''ಈಗ ನಾನು ನಂಬುತ್ತೇನೆ'' ಎಂದು ಹೇಳುವೆನು. ಇಲ್ಲಿ ನಂಬಿಕೆ ಎನ್ನುವುದು ಇಲ್ಲವೇ ಇಲ್ಲ. ''ನನ್ನನ್ನು ದೃಷ್ಟಿಸಿರಿ ಮತ್ತು ನೀವು ರಕ್ಷಣೆ ಹೊಂದಿರಿ'' (ಯೆಶಾ 45:22)

ನಮ್ಮನ್ನು ನಾವು ಸಂಪೂರ್ಣವಾಗಿ ಆತನಿಗೆ ಒಪ್ಪಿಸಿಕೊಂಡು ಒಡಂಬಡಿಕೆಗನುಸಾರವಾಗಿ ಆತನಲ್ಲಿ ನಿಜವಾಗಿ ನಡೆದುಕೊಂಡಾಗ ನನ್ನ ಯೋಗ್ಯತೆ, ಅರ್ಹತೆಯ ಪ್ರಜ್ಞೆ ಅಲ್ಲಿ ಇರುವುದಿಲ್ಲ. ಮನುಷ್ಯನ ಸ್ವಯಂಗೆ ಸಂಬಂಧಿಸಿದ ಯಾವುದೇ ಅಂಶವೂ ಅದರಲ್ಲಿ ಇರುವುದಿಲ್ಲ. ನಾನು ದೇವರ ಅನ್ಯೋನ್ಯತೆ ಯೊಳಗೆ ಸೇರಿರುವೆನೆನ್ನುವ ಅನನ್ಯ ಭಾವನೆ ಮಾತ್ರ ಅಲ್ಲಿರುತ್ತದೆ ಮತ್ತು ಜೀವಿತವು ಶಾಂತಿ ಆನಂದಗಳ ರೂಪಾಂತರ ವಾಗಿರುತ್ತದೆ.

# ಪಶ್ಚಾತ್ತಾಪ

**''ದೇವರ ಚಿತ್ತಾನುಸಾರವಾಗಿರುವ ದುಃಖವು ಮಾನಸಾಂತರವನ್ನುಂಟು ಮಾಡಿ ರಕ್ಷಣೆಗೆ ಕಾರಣವಾಗಿದೆ''**
**– (2 ಕೊರಿಂಥ 7:10)**

ಪಾಪಾಪರಾಧದ ನಿರ್ಣಯದ ಅರುಹು ಈ ಕೆಳಕಂಡ ಶಬ್ದಗಳಲ್ಲಿ ಸ್ಪಷ್ಟವಾಗಿ ಚಿತ್ರಿಸಲಾಗಿದೆ.

My sins, my sins my saviour
How sad on thee they fall !

ಮನುಷ್ಯನಿಗೆ ಎಂದಾದರೂ ಹೊಳೆಯುವ ವಿರಳ ಸಂಗತಿಯೆಂದರೆ ಅದು ಪಾಪಾಪರಾಧ ನಿರ್ಣಯದ ಅರುಹು. ಆದರೇ ಅದೇ ದೇವರನ್ನು ಅರಿಯುವ ಪ್ರವೇಶದ್ವಾರ. ಪವಿತ್ರಾತ್ಮನು ಬಂದಾಗ ಆತನು ಮನುಷ್ಯನಿಗೆ ಅವನ ಪಾಪಾಪರಾಧ ನಿರ್ಣಯದ ಅರುಹನ್ನು ಹುಟ್ಟಿಸುವನು ಎಂದು ಯೇಸು ಕ್ರಿಸ್ತನು ಹೇಳಿದ್ದಾನೆ, ''ಆತನು ಬಂದು ಪಾಪ, ನೀತಿ, ನ್ಯಾಯತೀರ್ವಿಕೆ ಈ ವಿಷಯಗಳಲ್ಲಿ ಲೋಕಕ್ಕೆ ಅರುಹನ್ನು ಹುಟ್ಟಿಸುವನು'' (ಯೋಹಾ 16:8) ಪವಿತ್ರಾತ್ಮನು ಮನುಷ್ಯನ ಮನಸಾಕ್ಷಿಯನ್ನು ಬಡಿದೆಬ್ಬಿಸಿ ಅದನ್ನು ದೇವರ ಸಮ್ಮುಖದಲ್ಲಿ ಕರೆ ತಂದಾಗ ಅವನನ್ನು ಕಾಡುವುದು – ಬೇರೆಯವರೊಂದಿಗಿರುವ ತನ್ನ ಸಂಬಂಧಗಳಲ್ಲ, ದೇವರೊಂದಿಗಿರುವ ತನ್ನ ಸಂಬಂಧವೇ ಅವನನ್ನು ಕಾಡಿಸುತ್ತದೆ. ''ನಿನಗೇ ಕೇವಲ ನಿನಗೇ ತಪ್ಪು ಮಾಡಿದ್ದೇನೆ, ನಿನ್ನ ದೃಷ್ಟಿಗೆ ಕೆಟ್ಟದ್ದಾಗಿರುವದನ್ನೇ ಮಾಡಿದ್ದೇನೆ'' (ಕೀರ್ತನೆ 51:4) ಪಾಪಾಪರಾಧ ದಂಡನೆಯು, ಪಾಪ ಕ್ಷಮಾಪಣೆಯ ಅದ್ಭುತ ಮತ್ತು ಅದರ ಪರಿಶುದ್ಧತೆಗಳು ಒಂದಕ್ಕೊಂದು ಎಷ್ಟರ ಮಟ್ಟಿಗೆ ಆಶ್ಚರ್ಯಕರವಾಗಿ ಹೆಣೆಯಲ್ಪಟ್ಟಿವೆಯೆಂದರೆ, ದೇವರ ಕೃಪೆಯಿಂದ ಕ್ಷಮಿಸಲ್ಪಟ್ಟ ವ್ಯಕ್ತಿ ಮಾತ್ರವೇ ಪರಿಶುದ್ಧನು ಮತ್ತು ಅವನೇ, ತಾನು ಮೊದಲು ಹೇಗಿದ್ದನೋ ಅದಕ್ಕೆ ತದ್ವಿರುದ್ಧವಾಗಿ ಜೀವಿಸುವುದರ ಮೂಲಕ ತನ್ನ ಪಾಪಗಳು ಕ್ಷಮಿಸಲ್ಪಟ್ಟಿರುವುದಕ್ಕೆ ಸಾಕ್ಷಿಯಾಗಿರುವುದನ್ನು ನಾವು ಕಾಣುತ್ತೇವೆ. ಪಶ್ಚಾತ್ತಾಪವು ಮನುಷ್ಯನನ್ನು ಒಂದು ಮುಖ್ಯ ಹಂತಕ್ಕೆ ತಂದು ನಿಲ್ಲಿಸುತ್ತದೆ; ''ನಾನು ಪಾಪ ಮಾಡಿದ್ದೇನೆ''. ಒಬ್ಬ ಮನುಷ್ಯನು, ಈ ವಾಕ್ಯವನ್ನು ನುಡಿದು, ತಾನು ನುಡಿದಿರುವುದನ್ನು ಅರ್ಥಪೂರ್ಣವಾಗಿ ಗ್ರಹಿಸುವುದೇ, ದೇವರು ಅವನಲ್ಲಿ ಕ್ರಿಯಾಶೀಲನಾಗಿರುವುದರ ನಿಜ ಸೂಚನೆಯಾಗಿದೆ. ಇದಕ್ಕಿಂತ ಕಡಿಮೆಯಾದ ಗ್ರಹಿಕೆ ಏನಿದ್ದರೂ ಅದು ಕೇವಲ ತಾನು ಮಾಡಿರುವ ಪ್ರಮಾದಗಳಿಗೆ ತೋರುವ ತನಗಾದ ಜಿಗುಪ್ಸೆಯ ಒಂದು ಪ್ರತಿಫಲನ ಮಾತ್ರ.

ಒಬ್ಬ ವ್ಯಕ್ತಿಯ ಸನ್ನಡತೆಗಳನ್ನು ಚೂರುಚೂರಾಗಿ ಮಾಡುವ ಮನೋಯಾತನೆಯ ಪಶ್ಚಾತ್ತಾಪದ ಮೂಲಕವೇ ದೇವರ ರಾಜ್ಯದೊಳಕ್ಕೆ ಪ್ರವೇಶವಾಗುತ್ತದೆ; ಆಗ ಇಂಥಾ ವೇದನೆಯನ್ನುಂಟುಮಾಡುವ ಪವಿತ್ರಾತ್ಮನು, ದೇವಕುಮಾರನ ಜೀವಿತವನ್ನು ಆ ವ್ಯಕ್ತಿ ಯಲ್ಲಿ ರೂಪಿಸಲಾರಂಭಿಸುವನು. ಇಂಥಾ ನೂತನ ಜೀವಿತವೇ ಪ್ರಜ್ಞಾಪೂರ್ವಕವಾದ ಪಶ್ಚಾತ್ತಾಪದಲ್ಲಿಯೂ, ಪ್ರಜ್ಞಾರಹಿತ ಪರಿಶುದ್ಧತೆಯಲ್ಲಿಯೂ ತನ್ನಷ್ಟಕ್ಕೆ ತಾನೇ ವ್ಯಕ್ತಗೊಳ್ಳುವದಲ್ಲದೆ, ಬೇರೆ ಇನ್ನಾವ ಮಾರ್ಗ ದಿಂದಲೂ ಅಲ್ಲ. ಪಶ್ಚಾತ್ತಾಪವು ಕ್ರೈಸ್ತತ್ವದ ಆಧಾರ ಬಂಡೆ. ಖಡಾ ಖಂಡಿತವಾಗಿ ಹೇಳಬೇಕೆಂದರೆ ವ್ಯಕ್ತಿ ಯೊಬ್ಬನು ತಾನು ಬಯಸಿದಾಗ ಪಶ್ಚಾತ್ತಾಪ ಪಡುವೆನೆಂದರೆ ಅದು ಸಾಧ್ಯವಿಲ್ಲ; ಪಶ್ಚಾತ್ತಾಪವು ದೇವರ ಕೃಪಾವರವೇ; ಕಣ್ಣೀರಿನ ವರಕ್ಕಾಗಿ ಹಿಂದಿನ ಕಾಲದಲ್ಲಿ ಪ್ರಾರ್ಥಿಸುತ್ತಿದ್ದರು – ಪಶ್ಚಾತ್ತಾಪದ ಸದ್ಗುಣದ ಅರಿಯುವಿಕೆಯನ್ನು ನೀನು ನಿಲ್ಲಿಸಿದ ಕೂಡಲೇ ನೀನು ಕಾರ್ಗತ್ತಲಿನಲ್ಲಿರುವಿ. ಮಾನಸಾಂತರದ ಮರಗುವಿಕೆ ಹೇಗೆನ್ನುವುದನ್ನು ಮರೆತಿರುವಿಯೋ ಏನೋ? ನಿನ್ನನ್ನು ನೀನು ಪರೀಕ್ಷಿಸಿಕೋ''.

# ದೇವರ ಸಮದೃಷ್ಟಿಯ ಬಲ

**''ಪವಿತ್ರಾರಾಗಿರುವವರನ್ನು ಒಂದೇ ಸಮರ್ಪಣೆಯಿಂದ ನಿರಂತರವಾಗಿ ಸಿದ್ಧಿಗೆ ತಂದಿದ್ದಾನಷ್ಟೆ''**
**- (ಇಬ್ರಿಯ 10:14)**

ನಾವು ನಮ್ಮ ಪಾಪಗಳಿಗಾಗಿ ದುಃಖಪಟ್ಟದ್ದರಿಂದ ನಮ್ಮ ಪಾಪಗಳು ಕ್ಷಮಿಸಲ್ಪಟ್ಟಿವೆ ಎಂದು ನಾವು ಯೋಚಿಸಿದರೆ, ದೇವಕುಮಾರನ ರಕ್ತವನ್ನು ನಮ್ಮ ಪಾದದಡಿಯಲ್ಲಿ ಹಾಕಿ ತುಳಿಯುತ್ತಿದ್ದೇವೆ. ದೇವರಿಂದುಂಟಾಗುವ ಪಾಪಕ್ಷಮಾಪಣೆಗೂ ಮತ್ತು ಪಾಪಗಳನ್ನು ಸಂಪೂರ್ಣವಾಗಿ ಮರೆತು ಬಿಡುವ ಆತನ ಅಗಾಧ ಗಹನತೆಗೂ ನೀಡಬಹುದಾದ ಒಂದೇ ಒಂದು ವಿವರಣೆ, ಅದು ಯೇಸುಕ್ರಿಸ್ತನ ಮರಣ. ಯಾವ ಪ್ರಾಯಶ್ಚಿತ್ತ ಯಜ್ಞವನ್ನು ದೇವರು ನಮ್ಮ ಪಾಪ ನಿವಾರಣೆಗಾಗಿ ಮೊದಲೇ ಸಿದ್ಧಪಡಿಸಿದ್ದನೋ, ಆ ಯಜ್ಞವನ್ನು ವ್ಯಕ್ತಿಗತವಾಗಿ ಗ್ರಹಿಸಿದ ಫಲವೇ ನಮ್ಮ ಪಶ್ಚಾತ್ತಾಪ. ''ಕ್ರಿಸ್ತೇಸು....ಜ್ಞಾನವೂ ನೀತಿ ಶುದ್ಧೀಕರಣ ಇವೆಲ್ಲವುಗಳಿಗೆ ಕಾರಣನೂ ಆದನು (1ಕೊರಿಂಥ 1:30) ಯೇಸುಕ್ರಿಸ್ತನು ಇವುಗಳನ್ನು ನಮಗೆ ಮಾಡಿದ್ದಾನೆಂದು ಒಮ್ಮೆ ನಾವು ಅರಿತುಕೊಂಡಾಗಲೇ ಮಿತಿಯಿಲ್ಲದ ದೇವರ ಆನಂದವು ನಮ್ಮೊಳಗೆ ಉಂಟಾಗುವುದು; ದೇವರ ಆನಂದದ ಪ್ರಸನ್ನತೆಯು ಎಲ್ಲಿ ಇರುವುದಿಲ್ಲವೋ, ಅಲ್ಲಿ ಮರಣಶಾಸನವು ಕಾರ್ಯವೆಸಗುತ್ತಿರುತ್ತದೆ.

ನಾವು ಯಾರು ಅಥವಾ ನಾವು ಏನು ಎಂಬುದು ಮುಖ್ಯವಲ್ಲ, ಯೇಸುಕ್ರಿಸ್ತನ ಮರಣ ದಿಂದಲೇ-ಬೇರೆ ಯಾವ ರೀತಿಯಿಂದಲೂ ಅಲ್ಲ-ದೇವರಿಗೆ ಸಮರ್ಪಕವಾದ ಸ್ಥಾನದಲ್ಲಿ ನಮ್ಮನ್ನು ಆತನು ಪುನಃ ಸ್ಥಾಪಿಸುತ್ತಾನೆ. (ಸೃಷ್ಟಿ ಪ್ರಥಮದಲ್ಲಿ ದೇವರು ನಮ್ಮನ್ನು ರೂಪಿಸಿದಂಥ ಸ್ಥಿತಿಯಲ್ಲಿ). ಪುನಃ ಸ್ಥಾಪನೆ ಮಾಡೆಂದು ಯೇಸುಕ್ರಿಸ್ತನು ನಮಗಾಗಿ ದೇವರಲ್ಲಿ ಬೇಡುತ್ತಿರುವುದಕ್ಕಾಗಿ ಅಲ್ಲ. ಯೇಸುಕ್ರಿಸ್ತನು ಮರಣ ಹೊಂದಿದ್ದರಿಂದಲೇ ದೇವರು ಇದನ್ನು ಮಾಡುವವನಾದನು. ಪುನಃ ಸ್ಥಾಪಿಸುವಿಕೆಯನ್ನು ನಾವು ಸಂಪಾದಿಸಿ ಕೊಳ್ಳಲಿಲ್ಲ. ಅದನ್ನು ಸ್ವೀಕರಿಸಿದ್ದೇವಷ್ಟೇ. ಯೇಸುಕ್ರಿಸ್ತನ ಶಿಲುಬೆ ಯನ್ನು ವಿವೇಚನಾಪೂರ್ವಕವಾಗಿ ಮತ್ತು ಉದ್ದೇಶಪೂರ್ವಕವಾಗಿ ನಿರಾಕರಿಸಿ, ಸಲ್ಲಿಸಿದ ಮನವಿಗಳೆಲ್ಲವೂ-ಅವು ಎಷ್ಟೇ ಹುತ್ಪೂರ್ವಕವಾಗಿರಲಿ-ಪ್ರಯೋಜನವಿಲ್ಲದವುಗಳೇ ಆಗಿವೆ. ಹೇಗೆಂದರೆ, ಯೇಸುಕ್ರಿಸ್ತನು ನಮಗಾಗಿ ಮೊದಲೇ ತೆರೆದಿಟ್ಟಿರುವ ಬಾಗಿಲನ್ನು ತೊರೆದು, ಮುಚ್ಚಿರುವ ಬೇರೊಂದು ಬಾಗಿಲನ್ನು ಎಡೆಬಿಡದೆ ತಟ್ಟಿದಂತೆಯೇ, ಈ ಮನವಿಗಳು. ''ನಾನು ಮಾತ್ರ ಆ ಬಾಗಿಲಲ್ಲಿ ಬರಲಾರೆ, ನಾನು ಪಾಪಿ ಎಂಬ ಕಾರಣಕ್ಕಾಗಿ ನನ್ನನ್ನು ಸೇರಿಸಿಕೊಳ್ಳುವುದು ತುಂಬಾ ದೈನ್ಯತೆಯಾಗಿದೆ'' ಎಂದು ನೀನು ಹೇಳಬಹುದು. ''ಆ ಹೆಸರಿನಿಂದಲೇ ಹೊರತು... ಬೇರೆ ಯಾವ ಹೆಸರಿನಿಂದಲೂ ನಮಗೆ ರಕ್ಷಣೆ ಯಾಗುವುದಿಲ್ಲ'' (ಅ. ಕೃತ್ಯ 4:12) ನಮ್ಮನ್ನು ದೀನಾವಸ್ಥೆಗೆ ಬರಮಾಡುವುದು ದೇವರ ಹೃದಯವಂತಿಕೆಯಲ್ಲವೆಂದು ಪ್ರಥಮದಲ್ಲಿ ಹೊರನೋಟಕ್ಕೆ ಕಂಡುಬಂದರೂ ಅದೇ ದೇವರ ನಿಜವಾದ ಹೃದಯವಂತಿಕೆ ಎಂದು ಅನಂತರ ತಿಳಿದು ಬರುತ್ತದೆ. ಆತನ ಮಾರ್ಗಕ್ಕೆ ಮಿತಿಯಿಲ್ಲದ ಪ್ರವೇಶವಿದೆ. ನಮಗೋಸ್ಕರ ತನ್ನ ರಕ್ತವನ್ನು ಸುರಿಸಿದ್ದರಿಂದ ನಮ್ಮ ಅಪರಾಧ ಗಳು ಪರಿಹಾರವಾಗಿ ನಮಗೆ ಬಿಡುಗಡೆಯಾಯಿತು'' (ಎಫೆ 1:7) ಯೇಸುಕ್ರಿಸ್ತನೊಂದಿಗೆ ಗುರುತಿಸಿ ಕೊಳ್ಳುವಿಕೆಯೆಂದರೆ, ಯೇಸು ಕ್ರಿಸ್ತನಲ್ಲಿರಲಾರದವುಗಳ ಪಾಲಿಗೆ ನಾವು ಮರಣ ಹೊಂದಬೇಕು.

ನಿಜವಾಗಿಯೂ ದುಷ್ಟರಾದ ಮನುಷ್ಯರನ್ನು ರಕ್ಷಿಸಿ, ಅವರನ್ನು ಒಳ್ಳೇಯವರನ್ನಾಗಿ ಮಾಡುತ್ತಿ ರುವದರಿಂದ ದೇವರು ನೀತಿವಂತನೆಂಬುದು ತಿಳಿದು ಬರುತ್ತದೆ. ನಾವು ನಿಜವಾಗಿಯೂ ಕೆಟ್ಟವರಾಗಿ ದ್ದಾಗ್ಯೂ ನಾವು ಒಳ್ಳೇಯವರೆಂಬ ನಟನೆಯನ್ನು ದೇವರು ಮಾಡುವುದಿಲ್ಲ. ಪ್ರಾಯಶ್ಚಿತ್ತವು ಪಾಪ ನಿವಾರಣಾರ್ಥವಾಗಿದೆ. ದೇವರು ಯೇಸುಕ್ರಿಸ್ತನ ಮರಣದ ಮೂಲಕವೇ ಅಪರಿಶುದ್ಧರಾದ ಮನುಷ್ಯರನ್ನು ಪರಿಶುದ್ಧರನ್ನಾಗಿ ಮಾಡುತ್ತಾನೆ.

# ಸಹಜಸ್ವಭಾವದ ಅಪರಾಧ

**''ಕ್ರಿಸ್ತ ಯೇಸುವಿನವದು ತಮ್ಮ ಶರೀರ ಭಾವವನ್ನು ಅದರ ವಿಷಯಾಭಿಲಾಷೆ, ಸ್ವೇಚ್ಛಾಭಿಲಾಷೆ ಸಹಿತ ಶಿಲುಬೆಗೆ ಹಾಕಿದವರು'' - (ಗಲಾತ್ಯ 5:24)**

ಸ್ವಾಭಾವಿಕ ಜೀವಿತವು ಪಾಪಮಯವಾದುದಲ್ಲ. ಆದರೆ ನಾವು ಪಾಪವನ್ನು ತೊರೆಯಬೇಕು. ಪಾಪದ ಯಾವುದೇ ರೂಪ ಆಕಾರಗಳೊಡನೆ ನಮಗೆ ಸಂಬಂಧವಿರಕೂಡದು. ಪಾಪವು ನರಕಕ್ಕೂ ಸೈತಾನನಿಗೂ ಸೇರಿದೆ; ದೇವರ ಮಗುವಾದ ನಾನು, ಪರಲೋಕಕ್ಕೂ ದೇವರಿಗೂ ಸೇರಿದವನಾಗಿದ್ದೇನೆ. ಇಲ್ಲಿ ಪಾಪವನ್ನು ತೊರೆಯುವ ಪ್ರಶ್ನೆಯಲ್ಲ. ನನ್ನ ಮೇಲೆ ನನಗಿರುವ ಹಕ್ಕುಗಳನ್ನು , ನನ್ನ ಸ್ವಭಾವಸಿದ್ದ ಸ್ವಾತಂತ್ರ್ಯವನ್ನು, ಸ್ವಆತ್ಮಪ್ರತಿಷ್ಠೆಯನ್ನು ತೊರೆಯುವುದೇ ನಿಜವಾದ ಪ್ರಶ್ನೆ ಮತ್ತು ಇಲ್ಲಿಯೇ ನಿಜವಾದ ಹೋರಾಟ ನಡೆಯಬೇಕಾಗಿದೆ. ನಮ್ಮ ಸ್ವಾಭಾವಿಕ ದೃಷ್ಟಿಯಲ್ಲಿ ಉಚಿತವಾದದ್ದೂ, ಉದಾತ್ತವೂ ಮತ್ತು ಉತ್ತಮವೂ ಆದ ಸಂಗತಿಗಳೇ, ನಮ್ಮನ್ನು ದೇವರ ಅತ್ಯುತ್ತಮವಾದ ಸಂಗತಿಗಳಿಂದ ದೂರವಿರಿಸುತ್ತವೆ. ನಾವು ದೇವರಿಗೆ ಶರಣಾಗುವುದನ್ನು ನಮ್ಮ ಸ್ವಾಭಾವಿಕ ಸದ್ಗುಣಗಳೇ ವಿರೋಧಿಸುತ್ತಿವೆ ಎಂಬುದನ್ನು ನಾವು ಗ್ರಹಿಸಿದ್ದರಿಂದಲೇ, ನಮ್ಮ ಆತ್ಮವನ್ನು ಹೋರಾಟದ ಕೇಂದ್ರ ಸ್ಥಾನಕ್ಕೆ ಬರುವಂತೆ ಮಾಡಿರುತ್ತೇವೆ. ನಮ್ಮಲ್ಲಿ ಕೆಲವೇ ಕೆಲವರು ಮಾತ್ರ ತುಚ್ಛವಾದವುಗಳ, ದುಷ್ಟತೆ ಮತ್ತು ಅಕ್ರಮಗಳ ವಿಷಯದಲ್ಲಿ ಚರ್ಚಿಸುತ್ತಿರಬಹುದು, ಆದರೆ ಉತ್ತಮವಾದವುಗಳ ವಿಷಯದಲ್ಲಿ ನಾವೆಲ್ಲರೂ, ಯಾವಾಗಲೂ ಚರ್ಚಿಸುತ್ತೇವೆ. ಉತ್ತಮವು, ಅತ್ಯುತ್ತಮವನ್ನು ಹಗೆ ಮಾಡುತ್ತದೆ. ನೈತಿಕ ಹಿರಿಮೆಯಲ್ಲಿ ಒಬ್ಬ ವ್ಯಕ್ತಿಯು ಹೆಚ್ಚಿನ ಮಟ್ಟಕ್ಕೆ ಏರಿದಷ್ಟೂ, ಯೇಸುಕ್ರಿಸ್ತನಿಗೆ ಅವನಿಂದ ಇನ್ನೂ ಹೆಚ್ಚಾದ ತೀವ್ರ ವಿರೋಧ ವುಂಟಾಗುತ್ತದೆ. ''ಕ್ರಿಸ್ತೇಸುವಿನವರು ತಮ್ಮ ಶರೀರಭಾವವನ್ನು... ಸಹಿತ ಶಿಲುಬೆಗೆ ಹಾಕಿದವರು''. ಇದು, ನಿನ್ನೊಳಗಿರುವ ಸ್ವಭಾವಸಿದ್ಧ ಗುಣವನ್ನು, ತನ್ನಲ್ಲಿರುವುದೆಲ್ಲವನ್ನು ಬೆಲೆಯಾಗಿ ತೆರುವಂತೆ ಮಾಡುತ್ತದೆ-ಎಲ್ಲವನ್ನೂ ಅಂದರೆ ಯಾವುದೋ ಒಂದನ್ನು ಅಥವಾ ಅಲ್ಪವಾದರೂ ಉಳಿಸಿಕೊಂಡು ಎಂದಲ್ಲ-ಸಮಗ್ರವಾಗಿ ಎಲ್ಲವನ್ನೂ ಎಂದೇ ಅರ್ಥ. ಯೇಸುಕ್ರಿಸ್ತನು ಹೇಳಿದ್ದಾನೆ ''ಯಾವನಿಗಾದರೂ ನನ್ನ ಹಿಂದೆ ಬರುವುದಕ್ಕೆ ಮನಸ್ಸಿದ್ದರೆ ಅವನು ತನ್ನನ್ನು ನಿರಾಕರಿಸಿ ...'' (ಮತ್ತಾಯ 16:24) ಹಾಗೆಂದರೆ ತನ್ನ ಮೇಲೆ ತನಗಿರುವ ಹಕ್ಕುಗಳ ನಿರಾಕರಣೆ, ಮತ್ತು ನಿರಾಕರಿಸುವ ಮೊದಲು ಯೇಸುಕ್ರಿಸ್ತನು ಯಾರು ಎಂಬದನ್ನು ಆ ವ್ಯಕ್ತಿಯು ಅರಿತುಕೊಂಡಿರಬೇಕು. ನಿನ್ನ ವೈಯಕ್ತಿಕ ಸ್ವಾತಂತ್ರ್ಯದ ಶವಸಂಸ್ಕಾರದಲ್ಲಿ ಪಾಲುಗಾರನಾಗುವುದನ್ನು ನೀನೇ ನಿರಾಕರಿಸುವುದರ ಬಗ್ಗೆ ಎಚ್ಚರದಿಂದಿರಬೇಕು.

ಸ್ವಾಭಾವಿಕ ಜೀವಿತವು ಆತ್ಮೀಕ ಜೀವಿತವಲ್ಲ ; ತ್ಯಾಗದ ಮೂಲಕವೇ ಅದನ್ನು ಆತ್ಮೀಕವನ್ನಾಗಿಸಬೇಕು. ನಾವು ದೃಢಸಂಕಲ್ಪದಿಂದ ನಮ್ಮ ನರ ಸ್ವಭಾವವನ್ನು ತ್ಯಾಗ ಮಾಡದಿದ್ದರೆ, ಅಲೌಕಿಕವಾದದ್ದು ನಮ್ಮೊಳಗೆ ಸ್ವಾಭಾವಿಕವಾಗುವುದಿಲ್ಲ. ಇದಕ್ಕಾಗಿ ಸುಲಭವಾದ ರಾಜಮಾರ್ಗವೊಂದಿಲ್ಲ; ನಮ್ಮಲ್ಲಿ ಪ್ರತಿಯೊಬ್ಬರೂ ಇದರ ಸಾಧಿಸುವಿಕೆಯನ್ನು ನಮ್ಮ ಕೈಗಳಲ್ಲೇ ಇಟ್ಟುಕೊಂಡಿದ್ದೇವೆ. ಇದು ಪ್ರಾರ್ಥಿಸುವ ಪ್ರಶ್ನೆಯಲ್ಲ, ಆದರೆ ಇದು ಪ್ರದರ್ಶಿಸುವ ಪ್ರಶ್ನೆ.

# ಶರೀರಭಾವದ ಆಹುತಿ

**''ಅಬ್ರಹಾಮನಿಗೆ ಇಬ್ಬರು ಮಕ್ಕಳಿದ್ದರು. ಒಬ್ಬನು ತೊತ್ತಿನಿಂದ ಹುಟ್ಟಿದವನು ಒಬ್ಬನು ಧರ್ಮಪತ್ನಿಯಿಂದ ಹುಟ್ಟಿದವನು'' - (ಗಲಾತ್ಯ 4:22)**

ಗಲಾತ್ಯದವರಿಗೆ ಬರೆದ ಪತ್ರಿಕೆಯ ಈ ಅಧ್ಯಾಯದಲ್ಲಿ ಶ್ರೀ ಪೌಲನು ಪಾಪವನ್ನು ವಿಮರ್ಶಿಸುತ್ತಿಲ್ಲ; ಸ್ವಾಭಾವಿಕವಾದದ್ದಕ್ಕೂ ಮತ್ತು ಆಧ್ಯಾತ್ಮಿಕವಾದದಕ್ಕೂ ಇರುವ ಸಂಬಂಧವನ್ನು ಪರಾಮರ್ಶಿಸಿದ್ದಾನೆ. ತ್ಯಾಗದ ಮೂಲಕ ಸ್ವಾಭಾವಿಕವಾದದ್ದನ್ನು ಆಧ್ಯಾತ್ಮಿಕವಾಗಿ ಪರಿವರ್ತಿಸಬೇಕು. ಹಾಗೆ ಮಾಡದಿದ್ದರೆ ನಮ್ಮ ನಿಜ ಜೀವನದಲ್ಲಿ ಭೀಕರವಾದ ವಿಚ್ಛೇದನೆಯುಂಟಾಗುತ್ತದೆ. ನೈಸರ್ಗಿಕವಾದದ್ದನ್ನು ಅಂದರೆ ಸ್ವಾಭಾವ ಸಿದ್ಧವಾದದ್ದನ್ನು ಬಲಿಕೊಡಬೇಕೆಂದು ದೇವರು ಯಾಕೆ ನಿಯಮಿಸಿದನು? ದೇವರು ಅದನ್ನು ಮಾಡೆಂದು ಕೇಳುವುದಿಲ್ಲ; ಅದು ಆತನ ಚಿತ್ತವೂ ಅಲ್ಲ. ಆದರೆ ಅದು ಅನುಮತ ಮಾತ್ರ. ವಿಧೇಯನಾಗುವುದರ ಮೂಲಕ ಹುಟ್ಟು ಸ್ವಭಾವವನ್ನು ಆಧ್ಯಾತ್ಮಿಕ ಸ್ವಭಾವವನ್ನಾಗಿ ಪರಿವರ್ತಿಸುವುದೇ ದೇವರ ಆಜ್ಞೆ. ಸ್ವಾಭಾವಿಕವಾದದ್ದನ್ನು ತ್ಯಾಗ ಮಾಡುವ ಅಗತ್ಯತೆಯನ್ನು ಪಾಪವೇ ಮಾಡಿತು.

ಅಬ್ರಹಾಮನು ಯಜ್ಞಬಲಿಯನ್ನಾಗಿ ಇಸಾಕನನ್ನು ಅರ್ಪಿಸುವುದಕ್ಕಿಂತ ಮುಂಚೆ ಇಷ್ಮಾಯೇಲನನ್ನು ಅರ್ಪಿಸಿಬಿಡಬೇಕಾಯಿತು. (ಆದಿಕಾಂಡ 21:8-14) ನಮ್ಮಲ್ಲಿ ಕೆಲವರು ಸ್ವಾಭಾವಿಕವಾದವುಗಳನ್ನು ಅರ್ಪಿಸುವ ಮೊದಲು ಆತ್ಮೀಕ ಆಹುತಿಗಳನ್ನರ್ಪಿಸಲು ಯತ್ನಿಸುತ್ತಾರೆ. ಆತ್ಮೀಕ ಬಲಿಯನ್ನು ದೇವರಿಗರ್ಪಿಸಲಿರುವ ಒಂದೇ ಒಂದು ಮಾರ್ಗವೆಂದರೆ ಮೊದಲು ನಮ್ಮ ದೇಹಗಳನ್ನು ದೇವರಿಗೆ ಮೀಸಲಾಗಿಯೂ ಮೆಚ್ಚಿಗೆ ಯಾಗಿಯೂ ಇರುವ ಸಜೀವಯಜ್ಞವಾಗಿ ಅರ್ಪಿಸಬೇಕು. (ರೋಮಾ 12:1) ಪವಿತ್ರೀಕರಣವು - ಅದು ಪಾಪವಿಮೋಚನೆಗಿಂತಲೂ ಹೆಚ್ಚು ಮಹತ್ವದ್ದಾಗಿದೆ. ಪವಿತ್ರೀಕರಣವೆಂದರೆ ದೇವರಿಂದ ರಕ್ಷಿಸಲ್ಪಟ್ಟವನಾದ ನಾನು, ವಿವೇಚನಾ ಪೂರ್ವಕವಾಗಿ, ದೇವರಿಗೆ ಬದ್ಧನಾಗಿರಬೇಕು ಮತ್ತು ಅದಕ್ಕೆಷ್ಟು ಬೆಲೆ ತೆರಬೇಕೆನ್ನುವುದರ ಬಗ್ಗೆ ನಾನು ಚಿಂತಿಸುವುದೂ ಇಲ್ಲ.

ಆತ್ಮೀಕತೆಯ ಸಲುವಾಗಿ ನಾನು ಸ್ವಾಭಾವಿಕವಾದದ್ದನ್ನು ಯಜ್ಞಾರ್ಪಣೆ ಮಾಡದೆ ಹೋದರೆ ಸ್ವಾಭಾವಿಕವಾದ ನನ್ನ ಜೀವಿತವು ನನ್ನೊಳಗಿರುವ ದೇವಕುಮಾರನ ಜೀವಿತವನ್ನು ಅಪಹಾಸ್ಯ ಮಾಡುತ್ತದೆ ಮತ್ತು ಜೀವಿತದಲ್ಲಿ ಎಡಬಿಡದ ಗೊಂದಲವನ್ನು, ಅನಿಶ್ಚಿತತೆಯನ್ನು ಉಂಟು ಮಾಡುತ್ತದೆ. ಶಿಸ್ತುರಹಿತ ಆತ್ಮೀಕ ಜೀವಿತದ ಫಲವೇ ಹೀಗಿರುತ್ತದೆ. ಶಾರೀರಿಕವಾಗಿ ನೈತಿಕವಾಗಿ ಮತ್ತು ಬೌದ್ಧಿಕವಾಗಿ ಶಿಕ್ಷಿತರಾಗುವುದನ್ನು, ಮೊಂಡುತನದಿಂದ ತಿರಸ್ಕರಿಸುವುದರಿಂದಲೇ ನಾವು ತಪ್ಪಾದ ದಾರಿಯಲ್ಲಿ ನಡೆಯುತ್ತೇವೆ. ''ನಾನು ಚಿಕ್ಕಮಗುವಿದ್ದಾಗಲೇ ಈ ರೀತಿಯಲ್ಲಿ ಶಿಕ್ಷಿತನಾಗಲಿಲ್ಲ'' ಎಂದು ಕುಂಟುನೆಪ ಹೇಳಬೇಡ. ಈಗಲೇ ನಿನ್ನನ್ನು ನೀನು ಶಿಕ್ಷಣಕ್ಕೆ ಒಳಪಡಿಸಿಕೋ. ಅದನ್ನು ನೀನು ಮಾಡದಿದ್ದರೆ ದೇವರಿಗಾಗಿಯೇ ಇರುವ ನಿನ್ನ ವೈಯಕ್ತಿಕ ಜೀವನವನ್ನೆಲ್ಲಾ ನೀನೇ ನಾಶಪಡಿಸಿಬಿಡುವಿ.

ನಾವು ನಮ್ಮ ಸ್ವಭಾವಸಿದ್ಧ ಜೀವಿತವನ್ನು ಓಲೈಸುತ್ತಿರುವಾಗ ದೇವರು ಈ ಜೀವಿತದೊಂದಿಗೆ ಇರುವುದಿಲ್ಲ; ಆದರೆ ಅದನ್ನು ನಾವು ಮರುಭೂಮಿಯಲ್ಲಿರಿಸಿ ದೃಢವಾಗಿ ಅದನ್ನು ನಮ್ಮ ನಿಯಂತ್ರಣದಲ್ಲಿಟ್ಟು ಕೊಂಡರೆ, ಆಗ ದೇವರು ಅದರ ಸಂಗಡಲೂ ಇರುವನು; ಆಗಲೇ ಸ್ವಾಭಾವಿಕವಾದ ಜೀವಿತಕ್ಕಾಗಿ ಮರುಭೂಮಿಯಲ್ಲಿ ನೀರಿನ ಬಾವಿಗಳನ್ನು, ಒರತೆಗಳನ್ನು ತೆರೆಯ ಮಾಡುತ್ತಾನೆ ಮತ್ತು ತಾನೇ ಸೃಷ್ಟಿಸಿದ ನೈಸರ್ಗಿಕ ಜೀವಿತಕ್ಕೆ ತಾನು ಮಾಡಿದ ಎಲ್ಲಾ ವಾಗ್ದಾನಗಳನ್ನು ಪೂರೈಸುತ್ತಾನೆ.

# ವೈಯಕ್ತಿಕತೆ

**''ಯಾವನಿಗಾದರೂ ನನ್ನ ಹಿಂದೆ ಬರುವುದಕ್ಕೆ ಮನಸ್ಸಿದ್ದರೆ ಅವನು ತನ್ನನ್ನು ನಿರಾಕರಿಸಿ ........ ಬರಲಿ'' - (ಮತ್ತಾಯ 16:24)**

ವೈಯಕ್ತಿಕತೆಯು ನಮ್ಮ ವ್ಯಕ್ತಿಗತ ಜೀವಿತದ ಹೊರಕವಚವಾಗಿದೆ. ವೈಯಕ್ತಿಕತೆಯು ತನ್ನ ಸುತ್ತು ಮುತ್ತಲಿರುವವರನ್ನು ತಳ್ಳಿ ದಬ್ಬುತ್ತದೆ, ಬೇರೆ ಬೇರೆ ಮಾಡುತ್ತದೆ ಮತ್ತು ಒಬ್ಬೊಂಟಿಗರನ್ನಾಗಿ ಮಾಡುತ್ತದೆ. ಹೀಗೆ ಮಾಡುವುದು ಸಾಧಾರಣವಾಗಿ ಚಿಕ್ಕಮಗುವಿನ ಗುಣ ವೈಶಿಷ್ಟ್ಯ ಮತ್ತು ಮಗುವಿಗೆ ಅದು ಸಹಜವೇ ಹೌದು, ಆದರೆ ಈ ವೈಯಕ್ತಿಕತೆಯನ್ನು ವ್ಯಕ್ತಿಗತ ಜೀವಿತವೆಂದು ತಪ್ಪಾಗಿ ಗ್ರಹಿಸಿದರೆ ಆಗ ನಾವು ಒಬ್ಬೊಂಟಿಗರಾಗಿಯೇ ಉಳಿಯುತ್ತೇವೆ. ವೈಯಕ್ತಿಕತೆ ಎಂಬ ಹೊರಕವಚವು, ನಮ್ಮ ವ್ಯಕ್ತಿಗತ ಜೀವಿತವನ್ನು ಕಾಪಾಡಲೆಂದು ದೇವರಿಂದ ರೂಪಿಸಲ್ಪಟ್ಟ ಸ್ವಾಭಾವಿಕ ಹೊದಿಕೆ ಮಾತ್ರ; ನಮ್ಮ ವ್ಯಕ್ತಿಗತ ಜೀವಿತವು, ದೇವರ ಅನ್ಯೋನ್ಯತೆಯೊಳಗೆ ಸೇರಲು ಹೊರಗೆ ಬರಬೇಕಾದರೆ ಹೊರ ಕವಚವಾಗಿರುವ ವೈಯಕ್ತಿಕತೆಯು ಹೋಗಲೇಬೇಕು. ಭೋಗಾಪೇಕ್ಷೆಯು ಹೇಗೆ ಪ್ರೀತಿಯ ನಕಲಿ ಅನುಕರಣೆಯಾಗಿದೆಯೋ ಹಾಗೆಯೇ ವೈಯಕ್ತಿಕತೆಯು ವ್ಯಕ್ತಿತ್ವದ ನಕಲಿ ಅನುಕರಣೆಯಾಗಿದೆ. ದೇವರು ತನಗೋಸ್ಕರವಾಗಿ ಮಾನವ ಸ್ವಭಾವವನ್ನು ರಚಿಸಿದ್ದಾನೆ; ಆದರೆ ವೈಯಕ್ತಿಕತೆಯು ತನಗೋಸ್ಕರ ಮಾನವ ಸ್ವಭಾವವನ್ನು ಕೀಳು ಮಟ್ಟಕ್ಕೆ ಇಳಿಸುತ್ತದೆ.

ಸರ್ವಸ್ವತಂತ್ರತೆ ಮತ್ತು ಸ್ವಸಮರ್ಥನೆಗಳು ವೈಯಕ್ತಿಕತೆಯ ಗುಣಲಕ್ಷಣಗಳು. ವೈಯಕ್ತಿಕತೆ ಯನ್ನು ಸತತವಾಗಿ ಸಮರ್ಥಿಸಿಕೊಳ್ಳುವುದೇ ನಮ್ಮ ಆತ್ಮೀಕ ಜೀವಿತವನ್ನು ಬೇರಾವ ಮಾರ್ಗಕ್ಕಿಂತಲೂ ಹೆಚ್ಚಾಗಿ ಅಡೆತಡೆಗೊಡ್ಡುತ್ತದೆ. ''ನಾನು ಅದನ್ನು ನಂಬುವುದಿಲ್ಲ'' ಎಂದು ನೀನು ಹೇಳುವಿಯಾದರೆ, ಅದಕ್ಕೆ ಕಾರಣ ವೈಯಕ್ತಿಕತೆಯು ಎಂದಿಗೂ ನಂಬುವುದೇ ಇಲ್ಲ. ನಮ್ಮ ವ್ಯಕ್ತಿತ್ವಕ್ಕಾದರೋ, ನಂಬದೇ ಇರಲು ಆಗುವುದಿಲ್ಲ. ಪವಿತ್ರಾತ್ಮನು ನಿನ್ನಲ್ಲಿ ಕ್ರಿಯಾಶೀಲನಾದಾಗ ಆತನನ್ನು ಬಹು ಎಚ್ಚರಿಕೆಯಿಂದ ಗಮನಿಸಬೇಕು. ಆತನು ನಿನ್ನನ್ನು ನಿನ್ನ ವೈಯಕ್ತಿಕತೆಯ ಕೊನೆಯಂಚಿನವರೆಗೂ, ಎಲ್ಲಿ ನೀನು ಆಯ್ಕೆ ಮಾಡಲೇ ಬೇಕೋ ಅಲ್ಲಿಯವರೆಗೆ, ತಳ್ಳಿ ಬಿಟ್ಟಾಗ ಎರಡರಲ್ಲೊಂದನ್ನು ನೀನು ಹೇಳಲೇ ಬೇಕಾಗುತ್ತದೆ. 'ನಿನಗೆ ಶರಣಾಗತ ನಾಗುವುದೇ ಇಲ್ಲ' ಅಥವಾ ದೇವರಿಗೆ ಶರಣಾಗತನಾಗಿ ಬಿಡುವೆ, ಅಂದರೆ ವ್ಯಕ್ತಿಗತ ಜೀವಿತವು ಹೊರಹೊಮ್ಮುವ ಹಾಗೆ ಹೊರಕವಚವನ್ನು ಸೀಳಿಬಿಡಲು ಸಾಧ್ಯವಾಗುವಷ್ಟರವರೆಗೆ ಈ ಒಂದು ವಿಷಯಾಂಶಕ್ಕಾಗಿ ಪವಿತ್ರಾತ್ಮನು ಪ್ರತಿಸಲವು ನಿನ್ನ ವೈಯಕ್ತಿಕತೆಯನ್ನು ಇಕ್ಕಟ್ಟಿಗೊಳ ಪಡಿಸುತ್ತಾನೆ. (ಮತ್ತಾಯ 5:23-24 ನೋಡಿರಿ) ನಿನ್ನ ಸಹೋದರನ ಸಂಗಡ ಒಂದಾಗದಿರುವಂತೆ ಅಡ್ಡಿ ಪಡಿಸುತ್ತಿರುವುದು ನಿನ್ನ ವೈಯಕ್ತಿಕತೆಯಾಗಿದೆ. ದೇವರು ನಿನ್ನನ್ನು ತನ್ನಲ್ಲಿ ಒಂದು ಮಾಡಿಕೊಳ್ಳಲು ಇಚ್ಛಿಸುತ್ತಿದ್ದಾನೆ ಆದರೆ ನಿನ್ನ ಮೇಲೆ ನಿನಗಿರುವ ಸ್ವಾಮಿತ್ವದ ಹಕ್ಕನ್ನು ಬಿಟ್ಟುಕೊಡುವವರೆಗೂ ದೇವರು ನಿನ್ನನ್ನು ತನ್ನಲ್ಲಿ ಒಂದು ಮಾಡಿ ಕೊಳ್ಳುವುದಿಲ್ಲ - ''ತನ್ನನ್ನು ನಿರಾಕರಿಸಿ''. ನಿನ್ನ ಮೇಲೆ ನಿನಗಿರುವ ಸರ್ವಸ್ವತಂತ್ರದ ಸರ್ವಸ್ವಾಮ್ಯ ಹಕ್ಕನ್ನು ನಿರಾಕರಿಸಿದ ನಂತರವೇ ನಿನ್ನ ನಿಜ ಜೀವಿತವು ದೇವರಲ್ಲಿ ಅಭಿವೃದ್ಧಿ ಹೊಂದುವ ಅವಕಾಶವಿರುತ್ತದೆ.

# ವ್ಯಕ್ತಿತ್ವ

**''ನಾವು ಒಂದಾಗಿರುವ ಹಾಗೆ ಇವರೂ ಒಂದಾಗಿರಬೇಕು'' – (ಯೋಹಾನ 17:11)**

ಇತರರಿಗಿಂತ ನಾವು ಭಿನ್ನವಾಗಿದ್ದೇವೆಂದು ಪ್ರಸ್ತಾಪಿಸುತ್ತಿದ್ದೇವೆಂದರೆ ಅದು ವಿಶಿಷ್ಟವೂ, ಗಣನಾತೀತವೂ ಆಗಿರುವ ನಮ್ಮ ವ್ಯಕ್ತಿತ್ವವೇ ಆಗಿರುತ್ತದೆ. ಈ ನಮ್ಮ ವ್ಯಕ್ತಿತ್ವವು ನಮ್ಮ ಗ್ರಹಿಕೆಗೆ ನಿಲುಕಲಾರದಷ್ಟು ಬೃಹತ್ತಾದುದು. ಸಮುದ್ರದಲ್ಲಿ ಹೊರಗೆ ಕಾಣಬರುವ ನಡುಗಡ್ಡೆಯ ದ್ವೀಪವು ಕಿರಿದಾಗಿ ಕಂಡುಬಂದರೂ ಅದರಡಿಯಲ್ಲಿರುವ ಮಹಾಪರ್ವತದ ಕೇವಲ ತುತ್ತತುದಿ ಮಾತ್ರ ಅದು ಆಗಿರಬಹುದು; ಹಾಗೆಯೇ ಈ ವ್ಯಕ್ತಿತ್ವವೂ ಇರುತ್ತದೆ. ಅದರಡಿಯಲ್ಲಿರುವ ಆಳದ ಆಗಾಧತೆಯ ಬಗ್ಗೆ ನಮಗೇನೂ ತಿಳಿಯದು. ಅದರಂತೆಯೇ ನಮ್ಮನ್ನು ನಾವು ಎಂದೂ ಅಂದಾಜು ಮಾಡಲಾರೆವು. ಮಾಡಬಹುದೆಂಬ ಯೋಚನೆಯಿಂದ ಪ್ರಾರಂಭಿಸಿದರೂ, ಒಬ್ಬನು ಮಾತ್ರವೇ ನಮ್ಮನ್ನು ಸಂಪೂರ್ಣವಾಗಿ ಅರ್ಥ ಮಾಡಿಕೊಂಡಿರುವನೆಂಬುದು, ನಮಗೆ ತಿಳಿದು ಬರುತ್ತದೆ – ಆತನು ನಮ್ಮ ಸೃಷ್ಟಿಕರ್ತನು.

ವೈಯಕ್ತಿಕತೆಯು ಹೇಗೆ ಮನುಷ್ಯನ ಬಾಹ್ಯ ಸ್ವಭಾವದ ಲಕ್ಷಣವೋ ಹಾಗೆಯೇ ವ್ಯಕ್ತಿತ್ವವು ಆತ್ಮೀಕ ವ್ಯಕ್ತಿಯ ಗುಣಲಕ್ಷಣವಾಗಿದೆ. ನಮ್ಮ ಸ್ವಾಮಿಯವರನ್ನೆಂದಿಗೂ ಸ್ವಾತಂತ್ರ್ಯ ಮತ್ತು ವೈಯಕ್ತಿ ಕತೆಯ ಆಧಾರದ ಮೇಲೆ ವರ್ಣಿಸಲಾಗದು, ಅದನ್ನು ಆತನ ಪೂರ್ಣವಾದ ವ್ಯಕ್ತಿತ್ವವನ್ನು ಮಾತ್ರ ವಿವರಿಸಬಹುದು. 'ನಾನೂ ತಂದೆಯೂ ಒಂದಾಗಿದ್ದೇವೆ.' (ಯೋಹಾ 10:30) ವ್ಯಕ್ತಿತ್ವವು ಐಕ್ಯಗೊಳ್ಳುತ್ತದೆ. ನೀನು ಮತ್ತೊಬ್ಬ ವ್ಯಕ್ತಿಯೊಡನೆ ಐಕ್ಯಹೊಂದಿದಾಗ ಮಾತ್ರವೇ ನೀನು ಯಾರು ಎಂಬುದನ್ನು ಗುರುತಿಸ ಬಹುದು. ಪ್ರೀತಿ ಅಥವಾ ದೇವರ ಆತ್ಮನು ಒಬ್ಬ ವ್ಯಕ್ತಿಯನ್ನು ಆವರಿಸಿದಾಗ, ಅವನು ಪರಿವರ್ತಿತ ನಾಗಿ ಬಿಡುತ್ತಾನೆ ಮತ್ತು ತನ್ನದೇ ಆದ ವೈಯಕ್ತಿಕತೆಯ ಗುರುತಿಸುವಿಕೆಯನ್ನು ಇನ್ನು ಮುಂದೆ ಒತ್ತಾಯಿಸುವುದಿಲ್ಲ. ನಮ್ಮ ಸ್ವಾಮಿಯವರು ಒಬ್ಬ ವ್ಯಕ್ತಿಯ ವೈಯಕ್ತಿಕತೆಯನ್ನು ಆಧರಿಸಿಯಾಗಲೀ, ತಳ್ಳಿ ತಳ್ಳಿ ಸ್ಥಳಾವಕಾಶ ಮಾಡಿಕೊಂಡ ಮನುಷ್ಯನನ್ನಾಧರಿಸಿಯಾಗಲೀ ಇಲ್ಲವೇ, ಪ್ರತ್ಯೇಕಿಸಿಕೊಂಡ ಅವನ ಸ್ಥಾನವನ್ನಾಧರಿಸಿಯಾಗಲೀ, ಏನೂ ಹೇಳಲಿಲ್ಲ; ಆತನು ಅವನ ವ್ಯಕ್ತಿತ್ವದ ಆಧಾರದಿಂದ ಹೇಳಿದನು. ಆತನು ಹೇಳಿದ್ದು ಇಷ್ಟೇ ''ನಾವು ಒಂದಾಗಿರುವ ಹಾಗೆ ಇವರೂ ಒಂದಾಗಿರಬೇಕು'' ನೀನು ನಿನ್ನ ಮೇಲೆ ನಿನಗಿರುವ ಸ್ವಾಮಿತ್ವದ ಹಕ್ಕನ್ನು ದೇವರಿಗೆ ಸಮರ್ಪಿಸಿದರೆ ನಿನ್ನ ವ್ಯಕ್ತಿತ್ವದ ನಿಜ ಸ್ವಭಾವವು ದೇವರಿಗೆ ನೇರವಾಗಿ ಸ್ಪಂಧಿಸುತ್ತದೆ. ಯೇಸುಕ್ರಿಸ್ತನು ವ್ಯಕ್ತಿತ್ವವನ್ನು ಸ್ವತಂತ್ರ ಗೊಳಿಸುತ್ತಾನೆ. ಆಗ ವೈಯಕ್ತಿಕತೆಯು ಪರಿವರ್ತನೆ ಗೊಳ್ಳುತ್ತದೆ; ಪರಿವರ್ತನೆ ಮಾಡುವ ಮೂಲವು ಪ್ರೀತಿಯೇ. ಯೇಸುಕ್ರಿಸ್ತನಿಗೆ ನಾವು ತೋರುವ ಆತ್ಮೀಕ ಶ್ರದ್ದೆಯೇ ಆ ಪ್ರೀತಿ. ಮತ್ತೊಬ್ಬನ ಅನ್ಯೋನ್ಯತೆ ಯಲ್ಲಿರುವ ಇನ್ನೊಬ್ಬ ವ್ಯಕ್ತಿಯೊಳಗಿಂದ ಹರಿದು ಬರುವ ಧಾರೆಯು ಆ ಪ್ರೀತಿಯೇ.

# ಯಾವುದಕ್ಕೋಸ್ಕರ ಪ್ರಾರ್ಥಿಸಬೇಕು

**''ಬೇಸರಗೊಳ್ಳದೆ ಯಾವಾಗಲೂ ಪ್ರಾರ್ಥನೆ ಮಾಡುತ್ತಿರಬೇಕು.'' - (ಲೂಕ 18:1)**

ಪಾಪ ವಿಮೋಚನೆಯ ವಾಸ್ತವವನ್ನು ನೀನು ನಂಬದಿದ್ದರೆ, ಇತರರಿಗೋಸ್ಕರ ಪ್ರಾರ್ಥಿಸಲು ನಿನಗಾಗುವುದಿಲ್ಲ; ಹಾಗೆ ನೀನು ಮಾಡುವ ಪರಾರ್ಥ ಪ್ರಾರ್ಥನೆಯನ್ನು ಇತರರಿಗೆ ತೋರಿಸುವ ಉಪಯೋಗವಿಲ್ಲದ ಅನುಕಂಪನವಾಗಿ ಮಾರ್ಪಡಿಸಿ ಬಿಡುವೆ, ಅದೇ ಅನುಕಂಪನವೇ, ಅವರು ದೇವರ ಮುಂದೆ ವಿಧೇಯತೆಯಿಂದ ತಲೆ ಬಾಗಿದರೆ ಸಾಕೆನ್ನುವ ಸಂತೃಪ್ತಿಯನ್ನು ಅವರಿಗೆ ಕೊಡುವುದರಿಂದ ಅವರು ದೇವರ ಸಂಪರ್ಕವಿಲ್ಲದೆ ಹೋಗುತ್ತಾರೆ. ನಿಜವಾದ ಪರಾರ್ಥ ಪ್ರಾರ್ಥನೆ ಎಂದರೆ ನಿನ್ನನ್ನು ಘಾಸಿ ಗೊಳಿಸುತ್ತಿರುವ ಒಬ್ಬ ವ್ಯಕ್ತಿಯನ್ನಾಗಲೀ, ಅಂಥದ್ದೇ ಒಂದು ಸನ್ನಿವೇಶವನ್ನಾಗಲೀ ಪ್ರಾರ್ಥನೆಗಳ ಮೂಲಕ ದೇವರ ಸನ್ನಿಧಿಯಲ್ಲಿ, ನಿನ್ನ ಭಾವನೆಯಂತೆ ಎಷ್ಟರ ವರೆಗೆ ಮಂಡಿಸುತ್ತಿರುವೆಯೆಂದರೆ, ಆ ವ್ಯಕ್ತಿ ಅಥವಾ ಆ ಸನ್ನಿವೇಶದ ಬಗ್ಗೆ ದೇವರಿಗಿರುವ ಧೋರಣೆಯು ಅವರ ಬಗ್ಗೆ ನಿನ್ನಲ್ಲಿ ಉಂಟಾಗಿದ್ದ ಭಾವನೆಯನ್ನು, ಆತನ ಧೋರಣೆ ಯಂತೆಯೇ ನಿನ್ನಲ್ಲಿ ಪ್ರೇರಣೆಯಾಗುವ ತನಕ ನೀನು ಹಾಗೆಯೇ ನಿವೇದಿಸುತ್ತಿರುವೆ. ಪರಾರ್ಥ ಪ್ರಾರ್ಥನೆಯ ಅರ್ಥ-''ಕ್ರಿಸ್ತನ ಸಂಕಟಗಳೊಳಗೆ ಇನ್ನೂ ಉಳಿದದ್ದನ್ನು...ನನ್ನ ಶರೀರದಲ್ಲಿ ಅನುಭವಿಸಿ ತೀರಿಸುತ್ತೇನೆ'' (ಕೊಲೊಸ್ಸೆ 1:24) ಈ ಕಾರಣದಿಂದಲೇ ಪರಾರ್ಥ ಪ್ರಾರ್ಥನಾಕಾರರು ಕೆಲವೇ ಕೆಲವು ಜನರಿದ್ದಾರೆ. ಯಾರಿಗಾಗಿ ಪ್ರಾರ್ಥಿಸ ಬೇಕಾಗಿದೆಯೋ ''ಅವರ ಸ್ಥಳದಲ್ಲಿ ನಿನ್ನನ್ನಿರಿಸಿ''ಕೊಳ್ಳಬೇಕೆಂದು ಪರಾರ್ಥ ಪ್ರಾರ್ಥನಾ ವಿಷಯದಲ್ಲಿ ವಿವರಣೆ ಇದೆ. ಆದರೆ ಇದು ಶುದ್ಧ ತಪ್ಪು, ಹಾಗೆಂದಿಗೂ ಮಾಡಬಾರದು. ದೇವರ ಸ್ಥಳದಲ್ಲಿ ನಿನ್ನನ್ನಿರಿಸಿಕೊಂಡು ಪ್ರಾರ್ಥನೆ ಮಾಡುವುದೇ ಪರಾರ್ಥ ಪ್ರಾರ್ಥನೆ, ಆತನ ಮನಸ್ಸನ್ನು ಮತ್ತು ಆತನ ದೃಷ್ಟಿಯನ್ನು ಹೊಂದಿ ಪ್ರಾರ್ಥಿಸಬೇಕು.

ಪರಾರ್ಥ ಪ್ರಾರ್ಥನೆ ಮಾಡುವ ಒಬ್ಬ ಕ್ರೈಸ್ತ ಸೇವಕನಾಗಿ, ನೀನು ಪ್ರಾರ್ಥಿಸುವ ವಿಷಯದಲ್ಲಿ ದೇವರು ನಿನಗೆ ತಿಳಿಸಿದ ವಾಸ್ತವಾಂಶಗಳ ಬಗ್ಗೆ, ತುಂಬಾ ಎಚ್ಚರದಿಂದಿರಬೇಕು, ಇಲ್ಲದಿದ್ದರೆ ನೀನು ಜಜ್ಜಲ್ಪಡುವಿ. ಯಾರ ವಿಷಯದಲ್ಲಿ ನೀನು ಪ್ರಾರ್ಥಿಸಬೇಕೆಂದಿರುವೆಯೋ ಅವರ ವಿಷಯದಲ್ಲಿ ದೇವರು ನಿಯಮಿಸಿರುವುದಕ್ಕಿಂತಲೂ ಹೆಚ್ಚಿನ ವಿವರಗಳನ್ನು ನೀನು ತಿಳಿದುಕೊಂಡರೆ, ನೀನು ಅವರಿಗಾಗಿ ನಿಜವಾದ ಪರಾರ್ಥ ಪ್ರಾರ್ಥನೆಯನ್ನು ಮಾಡುವುದೇ ಇಲ್ಲ, ಯಾಕೆಂದರೆ ಅವರ ಪರಿಸ್ಥಿತಿಗಳು ಎಷ್ಟರ ಮಟ್ಟಿಗೆ ಜಜ್ಜಲ್ಪಡುವಂತಿವೆ ಎನ್ನುವುದನ್ನೇ ನೀನು ಗ್ರಹಿಸಿದರೆ, ಸತ್ಯವೇನೆಂಬುದನ್ನು ಗ್ರಹಿಸಲು ನಿನಗಾಗುವುದಿಲ್ಲ.

ಪ್ರಾರ್ಥನೆ ಮಾಡಬೇಕಾಗಿರುವ ಪ್ರತಿಯೊಂದು ವಿಷಯದಲ್ಲಿ ಆತನ ಮನಸ್ಸನ್ನು ಹೊಂದಿಕೊಳ್ಳಲು ದೇವರೊಂದಿಗೆ ನಿಶ್ಚಿತವಾದ ಸಂಪರ್ಕವನ್ನು ಪಡೆದುಕೊಳ್ಳುವುದೇ ಪರಾರ್ಥ ಪ್ರಾರ್ಥನೆ ಯಲ್ಲಿರುವವರಾದ ನಮ್ಮ ಕೆಲಸ. ಆದರೆ ನಾವು ಆ ಹೊಣೆಗಾರಿಕೆಯಿಂದ ನುಣುಚಿಕೊಂಡು, ಕೇವಲ ಕ್ರಿಯಾಶೀಲ ಪ್ರಾರ್ಥನಾ ಕಾರ್ಯಕರ್ತ ರಾಗಿ ಬಿಡುತ್ತೇವೆ. ಪಟ್ಟಿ ಮಾಡಿ ಪ್ರದರ್ಶಿಸಬಲ್ಲಂಥ ಪ್ರಾರ್ಥನೆಗಳನ್ನು ಮಾಡುವೆವಲ್ಲದೆ, ನಿಜವಾದ ಪರಾರ್ಥ ಪ್ರಾರ್ಥನೆಯನ್ನು ಮಾಡುವುದಿಲ್ಲ. ಪರಾರ್ಥ ಪ್ರಾರ್ಥನಾ ಸೇವೆಯಲ್ಲಿ ಸಿಕ್ಕಿಬೀಳುವಂಥ ಉರುಲುಗಳೇನೂ ಇರುವುದಿಲ್ಲ. ಯಾಕೆಂದರೆ ಅದು ದೇವರೊಂದಿಗೆ ನಮಗಿರುವ ಸಂಬಂಧವನ್ನು ಪಾರದರ್ಶಕವಾಗಿರಿಸುತ್ತವೆ.

ಪರಾರ್ಥ ಪ್ರಾರ್ಥನೆಯಲ್ಲಿ ಗಮನಿಸಬೇಕಾದ ಒಂದು ಮುಖ್ಯ ವಿಷಯವೆಂದರೆ, ಯಾವುದೋ ಒಂದು ಆತ್ಮವನ್ನು ತೇಪೆ ಹಚ್ಚಿ ಸರಿಪಡಿಸುವದಲ್ಲ, ಆ ಆತ್ಮವನ್ನು ದೇವರ ಜೀವಿತದ ಸಂಪರ್ಕದೊಳಗೆ ಬರುವಂತೆ ಮಾಡುವುದಕ್ಕಾಗಿರುವುದೇ ಪರಾರ್ಥ ಪ್ರಾರ್ಥನೆ. ಪಾಪ ವಿಮೋಚನೆಯ ತಳಹದಿಯ ಮೇಲೆ ನಾವು ಪ್ರಾರ್ಥನೆ ಮಾಡಿದಾಗ, ಬೇರೆ ಯಾವ ಮಾರ್ಗದಿಂದಲೂ ಸೃಷ್ಟಿಸಲಾಗದ ಏನೋ ಒಂದನ್ನು ಪರಾರ್ಥನೆಯ ಮೂಲಕ ದೇವರು ಸೃಷ್ಟಿಸುತ್ತಾನೆ.

# ಉದಾತ್ತ ಜೀವಿತ

**''ಶಾಂತಿಯನ್ನು ನಿಮಗೆ ಬಿಟ್ಟು ಹೋಗುತ್ತೇನೆ, ನನ್ನಲ್ಲಿರುವಂಥಾ ಶಾಂತಿಯನ್ನು ನಿಮಗೆ ಕೊಡುತ್ತೇನೆ ... ನಿಮ್ಮ ಹೃದಯವು ಕಳವಳಗೊಳ್ಳದಿರಲಿ'' - (ಯೋಹಾನ 14:27)**

ವ್ಯಕ್ತಿಗತ ಅನುಭವಗಳಲ್ಲಿ ಏನಾದರೊಂದು ಸಂಗತಿಯು ಕಷ್ಟಕರವಾಗಿ ಪರಿಣಮಿಸಿದಾಗ, ಅದಕ್ಕಾಗಿ ದೇವರನ್ನು ದೂರುವ ಅಪಾಯದಲ್ಲಿ ನಾವಿರುತ್ತೇವೆ, ಆದರೆ ಆ ವಿಷಯದಲ್ಲಿ ನಾವೇ ತಪ್ಪಿತಸ್ಥ ರಾಗಿರುತ್ತೇವೆ, ದೇವರಲ್ಲ. ದುರಾಗ್ರತೆಯೊಂದು ನಮ್ಮೊಳಗೆಲ್ಲಿಯೋ ನೆಲೆಸಿದೆ ಮತ್ತು ಅದನ್ನು ನಾವು ಬಿಟ್ಟು ಕೊಡುತ್ತಿಲ್ಲ. ನಾವು ಅದನ್ನು ಬಿಟ್ಟುಕೊಟ್ಟಕೂಡಲೇ ನಮಗೆ ಎಲ್ಲವೂ ಸೂರ್ಯಪ್ರಕಾಶದಷ್ಟು ಸ್ಪಷ್ಟವಾಗಿ ಬಿಡುವುದು. ಯಾವಾಗ ನಾವು ಇಬ್ಬರನ್ನು ಅಂದರೆ ನಮ್ಮನ್ನೂ ಮತ್ತು ದೇವರನ್ನು ಒಟ್ಟಿಗೆ ಸೇವಿಸಲು ಪ್ರಯತ್ನಿಸುವೆವೋ, ಆಗ ಅಲ್ಲಿ ಗೊಂದಲವನ್ನುಂಟು ಮಾಡುವ ಕಷ್ಟಕರ ಸಂಗತಿಗಳು ಪರಿಣಮಿಸುತ್ತವೆ. ದೇವರ ಮೇಲೆ ಸಂಪೂರ್ಣವಾಗಿ ಆತುಕೊಳ್ಳುವ ಮನೋದೃಷ್ಟಿ ನಮಗಿರಬೇಕು. ಆ ಸ್ಥಿತಿಯನ್ನೊಮ್ಮೆ ನಾವು ತಲುಪಿದರೆ ಭಕ್ತನಿಗೆ ಯೋಗ್ಯವಾದ ಪವಿತ್ರ ಜೀವಿತವನ್ನು ಜೀವಿಸುವುದಕ್ಕಿಂತ ಸುಭವಾದದ್ದು ಮತ್ತೊಂದಿರುವುದಿಲ್ಲ; ನಮ್ಮ ಸ್ವಂತ ಉದ್ದೇಶಗಳನ್ನು ನೆರವೇರಿಸಿ ಕೊಳ್ಳುವ ಸಲುವಾಗಿ ಪವಿತ್ರಾತ್ಮನ ಅಕಾರ ವನ್ನು ಅತಿಕ್ರಮಿಸಲಿಚ್ಛಿಸಿದಾಗಲೇ ತೊಂದರೆಗಳುಂಟಾಗುತ್ತವೆ.

ದೇವರಿಗೆ ನೀವು ವಿಧೇಯರಾದಾಗಲೆಲ್ಲ ಆತನ ಶಾಂತಿಯ ಮುದ್ರೆಯು ನಿಮ್ಮ ಮೇಲಿರುತ್ತದೆ, ಅಳೆಯಲಸಾಧ್ಯವಾದ ಶಾಂತಿಯ ಸಾಕ್ಷಿ ಮುದ್ರೆ, ಲೋಕವು ಕೊಡುವ ರೀತಿಯ ಶಾಂತಿ ಅದಲ್ಲ, ಅದು ಯೇಸುಕ್ರಿಸ್ತನಲ್ಲಿರುವ ಶಾಂತಿಯೇ. ಯಾವಾಗ ಈ ಶಾಂತಿಯು ನಿಮ್ಮೊಳಗೆ ಬರುತ್ತಿಲ್ಲವೋ, ಅದು ಬರುವವರೆಗೆ ಕಾಯುತ್ತಾ ಇರಬೇಕು. ಇಲ್ಲವೆ ಅದು ಬರದಿರುವುದರ ಕಾರಣವನ್ನು ಹುಡುಕಬೇಕು. ನೀನೇನಾದರೂ ಅಂತಃ ಪ್ರೇರಣೆಯಿಂದ ಅಥವಾ ವೀರಾವೇಶದ ಪ್ರಜ್ಞೆಯಿಂದ ಕಾರ್ಯ ಸಾಧಿಸುತ್ತಿದ್ದರೆ, ಯೇಸುಕ್ರಿಸ್ತನ ಶಾಂತಿಯು ಅಲ್ಲಿ ಪ್ರಕಟಗೊಳ್ಳುವುದಿಲ್ಲ, ಅಲ್ಲಿ ಯಾವ ಯಥಾರ್ಥತೆಯೂ ಇಲ್ಲ, ದೇವರಲ್ಲಿ ನಂಬಿಕೆಯೂ ಇಲ್ಲ, ಯಾಕೆಂದರೆ ಸರಳತೆಯ ಚೈತನ್ಯವು ಪರಿಶುದ್ಧಾತ್ಮನಿಂದ ಹುಟ್ಟಿ ಬರುತ್ತದೆಯಲ್ಲದೆ, ನೀನು ಮಾಡುವ ತೀರ್ಮಾನಗಳಿಂದ ಅಲ್ಲ. ನೀನು ಮಾಡುವ ನಿರ್ಧಾರಗಳೆಲ್ಲವೂ ಪವಿತ್ರಾತ್ಮ ನಿಂದುಂಟಾದ ಯಥಾರ್ಥತೆಯ ಪ್ರತಿಕ್ರಿಯೆಗಳನ್ನೆದುರಿಸಬೇಕಾಗುತ್ತದೆ.

ನಾನು ದೇವರಿಗೆ ವಿಧೇಯ ನಾಗುವುದನ್ನು ನಿಲ್ಲಿಸಿದ ಕೂಡಲೇ, ವಿಪರೀತ ಪ್ರಶ್ನೆಗಳು ನನ್ನಲ್ಲಿ ಉದ್ಭವಿಸುತ್ತವೆ. ನಾನು ದೇವರಿಗೆ ವಿಧೇಯನಾದಾಗ ನನಗೂ ಮತ್ತು ದೇವರಿಗೂ ನಡುವೆ ಯಾವ ತೊಂದರೆಯೂ ಉದ್ಭವಿಸುವುದಿಲ್ಲ. ದೇವರು ತನ್ನ ಸತ್ಯಗಳನ್ನು ನಮಗೆ ಪ್ರಕಟಪಡಿಸುತ್ತಿರುವಾಗ ನನ್ನ ಮನಸ್ಸು ಎಚ್ಚರದಿಂದಿರುವಂತೆ, ಆಶ್ಚರ್ಯಚಕಿತನಾಗುವಂತೆ ತೊಂದರೆಗಳು ಬಾಣದೋಪಾದಿಯಲ್ಲಿ ಬರುತ್ತವೆ. ದೇವರ ಮತ್ತು ನನ್ನ ನಡುವೆ ಬರುವ ಎಲ್ಲಾ ಸಮಸ್ಯೆಗಳು ನನ್ನ ಅವಿಧೇಯತೆಯಿಂದ ಹುಟ್ಟಿ ಬರುತ್ತವೆ. ಸಮಸ್ಯೆಯು ಹೇಗೇ ಇರಲು (ಅಂಥವುಗಳು ಬಹಳಷ್ಟಿವೆ) ನಾನು ದೇವರಿಗೆ ವಿಧೇಯನಾಗಿ ಬಿಟ್ಟರೆ ಅವೆಲ್ಲವು ನನ್ನ ಪರವಾಗಿರುತ್ತಾ ನನ್ನ ಮಹದಾನಂದವನ್ನು ಹೆಚ್ಚಿಸುತ್ತವೆ. ಯಾಕೆಂದರೆ ಆ ಸಮಸ್ಯೆ ಗಳೆಲ್ಲವನ್ನು ದೇವರು ಬಲ್ಲನು ಎಂಬುದನ್ನು ನಾನು ತಿಳಿದಿರುತ್ತೇನೆ ಮತ್ತು ಆ ಸಮಸ್ಯೆಗಳ ಗೋಜನ್ನು ದೇವರು ಹೇಗೆ ಬಿಡಿಸುವನೆನ್ನುವುದನ್ನು ನಾನು ಕಣ್ಣಾರೆ ಕಾಣುತ್ತೇನೆ.

# ದೇವರ ದೃಷ್ಟಿಗೆ ಯೋಗ್ಯನಾಗುವುದು

**''ನೀನು ದೇವರ ದೃಷ್ಟಿಗೆ ಯೋಗ್ಯನಾಗಿ ಕಾಣಿಸಿಕೊಳ್ಳುವುದಕ್ಕೆ ಪ್ರಯಾಸಪಡು, ಅವಮಾನಕ್ಕೆ ಗುರಿಯಾಗದ ಕೆಲಸದವನೂ, ಸತ್ಯವಾಕ್ಯವನ್ನು ಸರಿಯಾಗಿ ಉಪದೇಶಿಸುವವನೂ ಆಗಿರು'' - (2 ತಿಮೊ 2:15)**

ಯಾವ ವಿಷಯದಲ್ಲಿ ನಿನ್ನಷ್ಟಕ್ಕೆ ನೀನೆ ಯೋಗ್ಯವಾಗಿ ಅಭಿವ್ಯಕ್ತನೆ ಮಾಡಲಾಗದಿದ್ದರೆ, ಅದು ಸಾಧ್ಯವಾಗುವ ತನಕ ಪ್ರಯಾಸಪಡು. ಅದನ್ನು ನೀನು ಮಾಡದಿದ್ದರೆ ಬೇರೆ ಯಾರೋ ಒಬ್ಬನು ಅದರ ಸತ್ಯವನ್ನು ತಿಳಿಯುವುದರಿಂದ ಅವನು ಹೊಂದಬಹುದಾದ ಆಶೀರ್ವಾದಗಳನ್ನು ಹೊಂದಲಾರದೆ ಬಲಹೀನನಾಗಿ ಹೋಗುವನು. ದೇವರ ವಿಷಯದಲ್ಲಿ ಸತ್ಯವೊಂದನ್ನು ನಿನ್ನಷ್ಟಕ್ಕೆ ನೀನು ಪುನಃ ಅಭಿವ್ಯಕ್ತನೆ ಮಾಡಿಕೊಳ್ಳಲು ಒದ್ದಾಡಬೇಕು. ಈ ನಿನ್ನ ಅಭಿವ್ಯಕ್ತನೆಯನ್ನು ದೇವರು ಬೇರೊಬ್ಬರ ಉಜ್ಜೀವನಕ್ಕಾಗಿ ಉಪಯೋಗಿಸಿ ಕೊಳ್ಳುತ್ತಾನೆ. ದ್ರಾಕ್ಷೆ ಹಣ್ಣುಗಳನ್ನು ಜಜ್ಜಿ ರಸಹಿಂಡುವ ದ್ರಾಕ್ಷಾಗಾಣದಲ್ಲಿ ನೀನು ಸಾಗಿಹೋಗಬೇಕು. ದೇವರ ಸತ್ಯಗಳನ್ನು ಪ್ರತ್ಯಕ್ಷವಾಗಿ, ಕಾರ್ಯತಃ ಯೋಗ್ಯವಾಗಿ ವ್ಯಕ್ತ ಪಡಿಸಲು ದೃಢ ಪ್ರಯಾಸ ಪಡಬೇಕು; ಆಗ ಈ ನಿನ್ನ ಅಭಿವ್ಯಕ್ತನೆಯನ್ನೇ ಯಾರೊ ಒಬ್ಬನಲ್ಲಿ ಸತ್ವ ತುಂಬುವ ದೈವಿಕ ದ್ರಾಕ್ಷಾರಸವನ್ನಾಗಿ ಬಳಸುವ ಒಂದು ಸಮಯ ಬರುತ್ತದೆ. ''ಈ ಸಂಗತಿಯನ್ನು ನನ್ನಷ್ಟಕ್ಕೆ ನನಗೆ ಅಭಿವ್ಯಕ್ತನೆ ಮಾಡಲು, ಸುಸ್ಪಷ್ಟವಾಗಿ ನುಡಿಯಲು ನಾನೇನೂ ಪ್ರಯತ್ನ ಮಾಡುವುದಿಲ್ಲ. ನಾನು ವ್ಯಕ್ತಪಡಿಸ ಬೇಕಾಗಿರುವ ನುಡಿಗಳನ್ನು ಯರವಲು ಪಡೆಯುತ್ತೇನೆ.'' ಎಂದು ಸೋಮಾರಿಯಂತೆ ನೀನು ಹೇಳಿದರೆ ಯರವಲು ಪಡೆದ ಅಭಿವ್ಯಕ್ತನೆ ಯಿಂದ ನಿನಗೇನೂ ಉಪಯೋಗವಾಗುವುದಿಲ್ಲ ಅಥವಾ ಬೇರೆ ಇನ್ಯಾರಿಗೂ ಉಪಯೋಗ ವಾಗುವುದಿಲ್ಲ. ನೀನು ನಿಸ್ಸಂದೇಹವಾಗಿ ಯಾವುದನ್ನು ದೇವರ ಸತ್ಯವೆಂದು ಭಾವಿಸಿರುವಿಯೋ ಆ ಸಂಗತಿಯನ್ನು ನಿನ್ನಷ್ಟಕ್ಕೆ ನೀನು ಪುನಃ ಪುನಃ ಅಭಿವ್ಯಕ್ತನೆ ಮಾಡಿಕೊಳ್ಳಬೇಕು ಮತ್ತು ಆ ಅಭಿವ್ಯಕ್ತನೆಯನ್ನು ನಿನ್ನ ಮೂಲಕ ಇತರರಿಗೆ ಸಾಗಿಸಲು, ನೀನು ದೇವರಿಗೆ ಸುಸಂಧಿಯನ್ನೊದಗಿಸುವೆ.

ನಿನ್ನ ಮನಸ್ಸು ಯಥಾರ್ಥವಾಗಿ ಅಂಗೀಕರಿಸುವ ಒಂದು ಸತ್ಯವನ್ನು ನಿನ್ನ ಮನವು ಆಲೋಚಿಸುವಂತೆ ಅದನ್ನು ಬಡಿದೆಬ್ಬಿಸುವ ಅಭ್ಯಾಸವನ್ನು ಸದಾ ಮಾಡುತ್ತಿರಬೇಕು. ಉಪದೇಶಿಸುವ ನಮ್ಮ ಸ್ಥಾನವನ್ನು ಶ್ರಮೆ ಮತ್ತು ಅಧ್ಯಯನಗಳ ಮೂಲಕ ನಮ್ಮದನ್ನಾಗಿಸಿಕೊಳ್ಳಲಾಗದಿದ್ದರೆ, ನಮ್ಮ ಸ್ಥಾನವು ನಮ್ಮ ಸ್ವಾಸ್ಥ್ಯವಾಗುವುದಿಲ್ಲ. ನಿನಗೆ ಸಹಾಯವನ್ನು ಗ್ರಂಥಕರ್ತನು ಯಾರೆಂದರೆ, ಈವರೆಗೆ ನಿನಗೆ ತಿಳಿಯದಿರುವುದನ್ನು ತಿಳಿಯಪಡಿಸುವಾತನು ನಿಜವಾದ ಸಹಾಯಕನಲ್ಲ. ಆದರೆ ಯಾವ ಸತ್ಯವನ್ನು ನೀನು ಉಚ್ಚರಿಸಿ ಹೇಳಲು ಪ್ರಯಾಸ ಪಡುತ್ತಿರುವೆಯೋ ಆ ಸತ್ಯಕ್ಕೆ ಭಾವನೆ ಮತ್ತು ಅಭಿವ್ಯಕ್ತನೆ ಗಳನ್ನೊದಗಿಸುವ ಗ್ರಂಥಕರ್ತನೇ ನಿಜವಾದ ಸಹಾಯಕನು.

# ದೇವರ ಸನ್ನಿಧಿಯಲ್ಲಿ ಹೋರಾಡುವಿಕೆ

**''ದೇವರು ದಯಪಾಲಿಸುವ ಸರ್ವಾಯುಧಗಳನ್ನು ತೆಗೆದುಕೊಳ್ಳಿರಿ ... ದೇವರನ್ನು ಪ್ರಾರ್ಥಿಸಿರಿ''**
**- (ಎಫೆ 6:13-18)**

ದೇವರ ಬಳಿಗೆ ನಿನ್ನ ಬರುವಿಕೆಯನ್ನು ತಡೆಗಟ್ಟುವಂಥವುಗಳೆಲ್ಲವುಗಳ ವಿರುದ್ಧ ನೀನು ಹೋರಾಡಬೇಕು; ಬೇರೆಯವರ ಆತ್ಮಗಳಿಗೋಸ್ಕರ ಪ್ರಾರ್ಥನೆಯಲ್ಲಿ ಹೋರಾಡಬೇಕು; ಆದರೆ ಪ್ರಾರ್ಥನೆ ಯಲ್ಲಿ ದೇವರ ಸಂಗಡ ಹೋರಾಡುವೆನೆಂದು ಎಂದಿಗೂ ಹೇಳಬೇಡ, ಸತ್ಯವೇದದ ಪ್ರಕಾರ ಅದೊಂದು ಅಸತ್ಯ. ಒಂದು ವೇಳೆ ನೀನು ದೇವರ ಸಂಗಡ ಹೋರಾಡಿದರೆ, ಉಳಿದ ಜೀವನಪರ್ಯಂತ ನೀನು ಕುಂಟನಾಗಿ ಬಿಡುವೆ. ನಿನಗಿಷ್ಟವಿಲ್ಲದ ಯಾವುದೋ ಹಾದಿಯಲ್ಲಿ ದೇವರು ನಿನ್ನೆದುರಿಗೆ ಬಂದಾಗ, ಯಾಕೋಬನಂತೆ ನೀನು ಆತನನ್ನು ಹಿಡುಕೊಂಡು ಆತನ ಸಂಗಡ ಹೋರಾಟಕ್ಕಿಳಿದು, ಆತನು ನಿನ್ನ ತೊಡೆಯ ಕೀಲನ್ನು ತಪ್ಪಿಸುವಂತೆ ನೀನೇ ಆತನನ್ನು ಬಲಾತ್ಕರಿಸುವೆ. (ಆದಿಕಾಂಡ 32:24-25 ನೋಡಿರಿ) ದೇವರ ಮಾರ್ಗದಲ್ಲಿ ಸೆಣಸಾಡುವ ವ್ಯಕ್ತಿಯಾಗಿ ಕುಂಟುಬೀಳಬೇಡ, ಆದರೆ ದೇವರ ಸನ್ನಿಧಿಯಲ್ಲಿ ಲೌಕಿಕ ಸಂಗತಿಗಳ ವಿರುದ್ಧ ಹೋರಾಡುವವನಾಗಿದ್ದು, ನಮ್ಮನ್ನು ಪ್ರೀತಿಸಿದಾತನ ಮೂಲಕ ನಾವು ಈ ಎಲ್ಲಾ ವಿಷಯಗಳಲ್ಲಿ ಪೂರ್ಣ ಜಯಶಾಲಿಯಾಗಬೇಕು. (ರೋಮಾ 8:37) ದೇವರ ಮುಂದೆ ನಾವು ನಡೆಸುವ ಹೋರಾಟವು ಆತನ ರಾಜ್ಯದಲ್ಲಿ ಪರಿಣಾಮ ಬೀರುತ್ತದೆ. ನಿನಗಾಗಿ ಪ್ರಾರ್ಥನೆ ಮಾಡೆಂದು ನೀನು ನನ್ನನ್ನು ಕೇಳಿಕೊಂಡರೆ, ನಾನು ಯೇಸುಕ್ರಿಸ್ತನಲ್ಲಿ ಪರಿಪೂರ್ಣನಲ್ಲದಿರುವುದರಿಂದ ನಾನು ನಿನಗಾಗಿ ಪ್ರಾರ್ಥಿಸಬಹುದಾದರೂ ಅದರಿಂದೇನೂ ಪ್ರಯೋಜನವಾಗದು; ಆದರೆ ನಾನು ಯೇಸುಕ್ರಿಸ್ತನಲ್ಲಿ ಪರಿಪೂರ್ಣನಾಗಿದ್ದರೆ ಮಾತ್ರ ನನ್ನ ಪ್ರಾರ್ಥನೆಯು ಸದಾ ಫಲಕಾರಿಯಾಗಿರುತ್ತದೆ. ಪರಿಪೂರ್ಣತೆ ಇದ್ದಾಗಲೇ ಪ್ರಾರ್ಥನೆಯು ಪರಿಣಾಮಕಾರಿಯಾಗಿರುತ್ತದೆ. ''ದೇವರು ದಯಪಾಲಿಸುವ ಸರ್ವಾಯುಧ ಗಳನ್ನು ತೆಗೆದುಕೊಳ್ಳಿರಿ''.

ದೇವರ ನೈತಿಕ ವ್ಯವಸ್ಥೆ ಮತ್ತು ದೇವರ ಅನುಮತಿಸುವ ಇಚ್ಛೆ, ಇವೆರಡರ ನಡುವಿರುವ ಭೇದವನ್ನು ಯಾವಾಗಲೂ ಗುರುತಿಸಬೇಕು. ದೇವರ ನೈತಿಕ ವ್ಯವಸ್ಥೆಯನ್ನು ಮಾರ್ಪಡಿಸಲು ಅಸಾಧ್ಯ. ದೇವರ ಅನುಮತಿಸುವ ಇಚ್ಛೆಯಂತೆ ಅಥವಾ ಆತನು ನಮ್ಮ ಜೀವಿತದಲ್ಲಿ ನಮ್ಮ ಮೇಲೆ ಎರಗಿ ಬರುವಂತೆ ಮಾಡಿದಂಥವುಗಳ ವಿರುದ್ಧ ದೇವರ ಮುಂದೆ ನಾವು ಹೋರಾಟ ಮಾಡಬೇಕು. ಆತನ ಅನುಮತಿಸುವ ಇಚ್ಛೆಯಂತೆ ದೇವರೇ ನಮ್ಮ ಮೇಲೆ ಬರಮಾಡಿದವುಗಳಿಗೆ ನಾವು ತೋರುವ ಪ್ರತಿಕ್ರಿಯೆಗಳೇ ನಮ್ಮ ವಿಷಯದಲ್ಲಿ ಆತನಿಗಿರುವ ನೈತಿಕ ಚಿತ್ತವನ್ನು ನಾವು ಮನಗಾಣುವಂತೆ ಮಾಡುತ್ತವೆ. ''ಆತನನ್ನು ಪ್ರೀತಿಸುವವವರ ಹಿತಕ್ಕಾಗಿ ಎಲ್ಲಾ ಕಾರ್ಯಗಳು ಅನುಕೂಲವಾಗುತ್ತವೆ'' (ರೋಮಾ 8:28). ದೇವರ ನೈತಿಕ ವ್ಯವಸ್ಥೆಗೆ ನಿಷ್ಠರಾಗಿರುವವರೆಲ್ಲರು ಅಂದರೆ ಯೇಸುಕ್ರಿಸ್ತನಲ್ಲಿ ಆತನ ಕರೆಯುವಿಕೆಗೆ ನಿಷ್ಠರಾಗಿರು ವವರೆಲ್ಲರ ಹಿತಕ್ಕಾಗಿ, ದೇವರ ಈ ಅನಿರ್ಬಂಧಿತ ಚಿತ್ತದ ಮೂಲಕವೇ ಆತನ ಕುಮಾರ ಕುಮಾರ್ತೆಯರು ಸಾಕ್ಷಾತ್ಕಾರಗೊಳ್ಳುವರು. ಬೆನ್ನೆಲುಬಿಲ್ಲದ ಜೆಲ್ಲಿ ಮೀನಿನಂತೆ ಎಲ್ಲಾ ವಿಷಯಗಳಿಗೂ ಇದು ದೇವರ ಚಿತ್ತವೆಂದು ಹೇಳಬಾರದು. ಎಲ್ಲಾ ವಿಷಯಗಳಿಗಾಗಿಯೂ ದೇವರ ಮುಂದೆ ಯುದ್ಧಕ್ಕೆ ನಿಂತುಕೊಳ್ಳ ಬಾರದು. ದೇವರ ಸಂಗಡ ಹೋರಾಡಬಾರದು. ಈ ಲೋಕದ ಸಂಗತಿಗಳ ವಿರುದ್ಧ ದೇವರ ಮುಂದೆ ಹೋರಾಡಬೇಕು. ಕೀರ್ತಿ ತರುವಂಥ ಯುದ್ಧವನ್ನು ಹೂಡಿ, ಆ ಮೂಲಕ ದೇವರ ಶಕ್ತಿಯನ್ನು ಪಡೆಯುವ ಬದಲು ದೇವರ ಮುಂದೆ ಸೋಮಾರಿಯಾಗಿ ಕಾಲು ಮಡಿಚಿಕೊಂಡು ದೇವರ ಚಿತ್ತವೆನ್ನುತ್ತಾ ಬಿದ್ದು ಕೊಂಡಿರುವುದರ ಬಗ್ಗೆ ಎಚ್ಚರದಿಂದಿರಬೇಕು.

# ವಿಮೋಚನೆಯೇ ತಾನು ತಣಿಸುವಂಥ ಅಗತ್ಯತೆಯನ್ನು ನಿರ್ಮಿಸುತ್ತದೆ

**''ಪ್ರಾಕೃತಮನುಷ್ಯನು ದೇವರಾತ್ಮನ ವಿಷಯಗಳನ್ನು ಬೇಡವೆನ್ನುತ್ತಾನೆ. ಅವು ಅವನಿಗೆ ಹುಚ್ಚು ಮಾತಾಗಿ ತೋರುತ್ತವೆ'' - (1 ಕೊರಿ 2:14)**

ದೇವರ ಸುವಾರ್ತೆಯು, ಸುವಾರ್ತೆಯ ಅಗತ್ಯತೆಯ ಭಾವನೆಯನ್ನು ಹುಟ್ಟಿಸುತ್ತದೆ. ಶ್ರೀ ಪೌಲನು ಹೇಳಿದ್ದು ''ನಾವು ಸಾರುವ ಸುವಾರ್ತೆಯು ಕೆಲವರಿಗೆ ಮರೆಯಾಗಿರುವುದಾದರೆ'' (2 ಕೊರಿ 4:3) ಮರೆಯಾಗಿದೆ, ಯಾರಿಗೆ? ನೀಚರಾದವರಿಗೋ? ಇಲ್ಲ, ''ನಾಶನ ಮಾರ್ಗದಲ್ಲಿರುವವರಿಗೆ ಮರೆಯಾಗಿರುತ್ತದೆ.'' ಸುವಾರ್ತೆಯ ಪ್ರಕಾಶವು ಉದಯವಾಗ ಬಾರದೆಂದು ಈ ಪ್ರಪಂಚದ ದೇವರು ನಂಬಿಕೆಯಿಲ್ಲದವರ ಮನಸ್ಸನ್ನು ಮಂಕುಮಾಡಿದನು'' (2 ಕೊರಿ 4:4) ಬಹುತೇಕ ಜನರು ತಾವು ಯೋಗ್ಯವಾದ ನೈತಿಕ ಮಟ್ಟದಲ್ಲಿ ಇದ್ದೇವೆಂದು ತಿಳಿದುಕೊಂಡಿರುತ್ತಾರೆ. ಇನ್ನು ಮೇಲೆ, ತಮಗೆ ಸುವಾರ್ತೆಯ ಅಗತ್ಯತೆ ಇಲ್ಲವೆಂದು ತಿಳಿದಿರುತ್ತಾರೆ. ಆದರೆ ಸುವಾರ್ತೆಯ ಅಗತ್ಯತೆಯ ಭಾವನೆಯನ್ನು ಹುಟ್ಟಿಸುವಾತನು ದೇವರೇ ಮತ್ತು ದೇವರು ತನ್ನಷ್ಟಕ್ಕೆ ತಾನೇ ಪ್ರಕಟಪಡಿಸಿ ಕೊಳ್ಳುವ ತನಕ ಯಾವ ಮಾನವನೂ ಆತನ ಸುವಾರ್ತೆಯ ಬಗ್ಗೆ ಪ್ರಜ್ಞೆಯುಳ್ಳವ ನಾಗಿರುವುದಿಲ್ಲ. ಯೇಸು ಹೇಳಿದನು, ''ಬೇಡಿಕೊಳ್ಳಿರಿ ನಿಮಗೆ ದೊರೆಯುವುದು'' (ಮತ್ತಾಯ 7:7) ಮನುಷ್ಯನು ಕೇಳಿಕೊಳ್ಳುವ ತನಕ ದೇವರು ಕೊಡುವುದಿಲ್ಲ; ಕೊಡಬೇಕೆಂದಿರುವುದನ್ನು ಆತನು ತಡೆ ಹಿಡಿಯುವನೆಂದಲ್ಲ; ಆದರೆ ಪಾಪವಿಮೋಚನೆಯ ಆಧಾರದ ಮೇಲೆ ತಾನು ಮಾಡುವ ಅನುಗ್ರಹಗಳ ವ್ಯವಸ್ಥೆಯನ್ನು ಹಾಗೆ ರಚಿಸಿದ್ದಾನೆ. ನಾವು ಕೇಳಿಕೊಂಡ ಕಾರಣಕ್ಕಾಗಿ, ನಾವು ಕೇಳಿಕೊಳ್ಳುವ ತನಕ ನಮ್ಮಲ್ಲಿ ಇದುವರೆಗೂ ಅಸ್ತಿತ್ವದಲ್ಲಿರದಿದ್ದುದನ್ನು ಹುಟ್ಟಿಸುವ ಪ್ರಕ್ರಿಯೆಯನ್ನು ಕ್ರಿಯಾಶೀಲವಾಗುವಂತೆ ಮಾಡುತ್ತಾನೆ. ಪಾಪ ವಿಮೋಚನೆಯ ಮರ್ಮದ ವಾಸ್ತವ ವೆಂದರೆ ಅದು ಸದಾಕಾಲವೂ ಸೃಜನ ಶೀಲವಾಗಿರುತ್ತದೆ. ಪಾಪವಿಮೋಚನೆಯು ದೇವರ ಜೀವಿತವನ್ನು ನಮ್ಮೊಳಗೆ ಹುಟ್ಟಿಸುವಂತೆಯೇ, ಅದು, ಅಂಥ ಜೀವಿತಕ್ಕೆ ಸಂಬಂಧಪಟ್ಟವುಗಳನ್ನೂ ನಮ್ಮಲ್ಲಿ ಹುಟ್ಟಿಸುತ್ತದೆ, ಯಾವುದು ಅಗತ್ಯತೆಯನ್ನು ಉಂಟು ಮಾಡಿರುವುದೋ, ಅದು ಮಾತ್ರವೇ ಆ ಅಗತ್ಯತೆಯನ್ನು ತಣಿಸ ಬಲ್ಲದು. ಪಾಪವಿಮೋಚನೆಯ ಅರ್ಥವು ಇದೇ - ಅದು ಸೃಷ್ಟಿಸುತ್ತದೆ ಮತ್ತು ಅದನ್ನು ತೃಪ್ತಿ ಪಡಿಸುತ್ತದೆ.

''ನಾನು ಭೂಮಿಯಲ್ಲಿಂದ ಮೇಲಕ್ಕೆ ಎತ್ತಲ್ಪಟ್ಟಾಗ ಎಲ್ಲರನ್ನೂ ನನ್ನ ಬಳಿಗೆ ಎಳಕೊಳ್ಳುವೆನು'' (ಯೋಹಾನ 12:32) ನಾವಾದರೋ ನಮ್ಮ ಅನುಭವಗಳನ್ನೇ ನಮ್ಮ ಬೋಧನೆಗಳಲ್ಲಿ ಪ್ರಾಧಾನ್ಯತೆ ಕೊಟ್ಟು ಬೋಧಿಸುತ್ತೇವೆ ಮತ್ತು ಜನರು ಅದರಲ್ಲಿ ಆಸಕ್ತಿಯನ್ನು ತೋರಿಸುವರು, ಆದರೆ ಯೇಸುಕ್ರಿಸ್ತನ ಅಗತ್ಯತಾ ಭಾವನೆಯು ಅವರಲ್ಲಿ ಎಚ್ಚರಗೊಳ್ಳುವುದಿಲ್ಲ. ನಮ್ಮ ಬೋಧನೆಗಳಲ್ಲಿ ಯೇಸುಕ್ರಿಸ್ತನನ್ನು ನಾವು ಮೇಲಕ್ಕೆ ಎತ್ತಿಹಿಡಿದರೆ, ಯೇಸುಕ್ರಿಸ್ತನು ಅವಶ್ಯವೆಂಬ ಪ್ರಜ್ಞಾಪೂರ್ವಕ ಅಗತ್ಯತೆಯನ್ನು ದೇವರ ಆತ್ಮನು ಅವರಲ್ಲಿ ಹುಟ್ಟಿಸುತ್ತಾನೆ. ಸುವಾರ್ತಾಬೋಧನೆಯ ಬೆನ್ನಿಗೆ ದೇವರು ಮಾಡಿದ ಪಾಪವಿಮೋಚನೆಯ ಸೃಜನಾತ್ಮಕ ಬಲವು ಪ್ರತಿಯೊಂದು ಆತ್ಮಗಳಲ್ಲಿ ಕಾರ್ಯವೆಸಗುತ್ತದೆ. ಒಬ್ಬನ ವೈಯಕ್ತಿಕ ಸಾಕ್ಷಿಯು ಜನರನ್ನು ರಕ್ಷಿಸುವುದಿಲ್ಲ, ''ನಾನು ನಿಮಗೆ ಹೇಳಿರುವ ಮಾತುಗಳೇ ಆತ್ಮವಾಗಿಯೂ, ಜೀವವಾಗಿಯೂ ಅವೆ'' (ಯೋಹಾ 6:63)

# ಸ್ವಾಮಿ ನಿಷ್ಠೆಯ ಪರೀಕ್ಷೆ

**''ಆತನನ್ನು ಪ್ರೀತಿಸುವವರ ಹಿತಕ್ಕಾಗಿ ಎಲ್ಲಾ ಕಾರ್ಯಗಳು ಅನುಕೂಲವಾಗುತ್ತವೆ''**
**- (ರೋಮಾ 8:28)**

ಸ್ವಾಮಿನಿಷ್ಠೆಯುಳ್ಳ ವ್ಯಕ್ತಿಯು ತನಗೊದಗುವ ಎಲ್ಲಾ ಸನ್ನಿವೇಶಗಳನ್ನು ದೇವರೇ ನಿರ್ವಹಿಸುತ್ತಾನೆ ಎಂದು ನಂಬಿರುತ್ತಾನೆ. ನಿಮಗೊದಗುವ ಸಂದರ್ಭ ಸನ್ನಿವೇಶಗಳನ್ನು ಲಘುವಾಗಿ ಪರಿಗಣಿಸುತ್ತೇವೆ. ಆದರೂ ಅವುಗಳನ್ನು ದೇವರೇ ನಿರ್ವಹಿಸುತ್ತಿರುವನೆಂದು ನಾವು ಹೇಳಿಕೊಳ್ಳುತ್ತೇವೆಯಾದರೂ ನಿಜವಾಗಿ ದೇವರ ನಿರ್ವಹಿಸುವಿಕೆಯನ್ನು ನಾವು ನಂಬುವುದಿಲ್ಲ; ನಮಗುಂಟಾಗುವ ಸಂಗತಿಗಳೆಲ್ಲವೂ ಮನುಷ್ಯರಿಂದಲೇ ಉಂಟಾಗಿ ಅವರಿಂದಲೇ ನಿರ್ವಹಿಸಲ್ಪಡುತ್ತಿರುವವೋ ಎಂಬಂತೆ ಭಾವಿಸಿ, ನಾವೇ ಅವುಗಳನ್ನು ನಿಭಾಯಿ ಸುತ್ತೇವೆ. ಪ್ರತಿಯೊಂದು ಸಂದರ್ಭಗಳಲ್ಲಿಯೂ ನಾವು ನಂಬಿಗಸ್ತರಾಗಿರುತ್ತೇವೆ ಎಂಬುದರ ಅರ್ಥ ನಮಗಿರುವುದು ಒಂದೇ ಒಂದು ಸ್ವಾಮಿ ನಿಷ್ಠೆ, ಅದು ನಮ್ಮ ಪ್ರಭುವಾದ ಯೇಸುಕ್ರಿಸ್ತನಿಗೇ. ನಮ್ಮಷ್ಟಕ್ಕೆ ನಾವೇ ನಿಭಾಯಿಸುತ್ತಿರುವ ಸನ್ನಿವೇಶಗಳ ಒಂದು ಸೆಟ್ಟನ್ನು (ಗುಂಪು) ದೇವರು ಧಿಡೀರನೆ ಚದುರಿಸಿ ಬಯಲು ಮಾಡಿದಾಗ, ಈ ಎಲ್ಲಾ ಸನ್ನಿವೇಶಗಳನ್ನು ದೇವರೇ ಸಂಘಟಿಸಿರುವನೆಂದು ನಾವು ನಂಬದಿರುವು ದರಿಂದಲೇ ನಾವು ಅವುಗಳಲ್ಲಿ ಸ್ವಾಮಿನಿಷ್ಠೆಯುಳ್ಳವ ರಾಗಿರಲಿಲ್ಲವೆಂಬ ಅರಿವು ಮೂಡುತ್ತದೆ. ಇಂಥಾ ಒಂದು ಸನ್ನಿವೇಶಗಳ ಘಟನೆಗಳಲ್ಲಿ ದೇವರೇನನ್ನು ಸಾಧಿಸುತ್ತಿರಬಹುದೆಂಬುದು ನಮಗೆ ತಿಳಿಯಲೇ ಇಲ್ಲ, ಆದರೆ ಅದೇ ನಿರ್ಧಿಷ್ಟ ಘಟನೆಯು ನಮ್ಮ ಜೀವಿತ ಕಾಲದಲ್ಲಿ ಎಂದಿಗೂ ಮರುಕಳಿಸುವುದಿಲ್ಲ; ಇಂಥಾ ಪರಿಸ್ಥಿತಿಗಳಲ್ಲಿಯೇ ನಮ್ಮ ಸ್ವಾಮಿನಿಷ್ಠೆಯ ಪರೀಕ್ಷೆ ನಡೆಯುತ್ತದೆ. ನಮ್ಮ ಸಹನೆಯನ್ನು ಮೀರಿಸುವ ಸನ್ನಿವೇಶಗಳಲ್ಲಿಯೇ ದೇವರನ್ನು ಆರಾಧಿಸಲು ಕಲಿತುಕೊಂಡರೆ, ಆಗ ಆತನು ತಾನು ಬಯಸಿದಾಗ ನಮ್ಮ ಸನ್ನಿವೇಶಗಳನ್ನು ನಮ್ಮ ಒಳಿತಿಗಾಗಿ ಎರಡೇ ಕ್ಷಣಗಳಲ್ಲಿ ಮಾರ್ಪಡಿಸುವನು.

ಯೇಸುಕ್ರಿಸ್ತನಿಗೆ ಸ್ವಾಮಿ ನಿಷ್ಠೆ ಎಂಬ ಸಂಗತಿಗೆ ಅಂಟಿಕೊಂಡಿರುವುದು ಈ ದಿನಗಳಲ್ಲಿ ತುಂಬಾ ಪ್ರಯಾಸಕರವಾಗಿದೆ. ಬೇಕಾದರೆ ನಮ್ಮ ಕೆಲಸಗಳಿಗೆ ನಿಷ್ಠೆಯುಳ್ಳವರಾಗಿರುತ್ತೇವೆ, ನಮ್ಮ ಸೇವೆಗೆ ನಿಷ್ಠೆಯುಳ್ಳವರಾಗಿರುತ್ತೇವೆ, ಬೇರೆ ಯಾವುದಕ್ಕಾದರೂ ನಿಷ್ಠೆಯಿಂದಿರುತ್ತೇವೆ; ಆದರೆ ಯೇಸು ಕ್ರಿಸ್ತನಿಗೆ ನಿಷ್ಠೆಯುಳ್ಳವರಾಗಿರಬೇಕೆಂದು ಮಾತ್ರ ನಮ್ಮನ್ನು ಯಾರೂ ಕೇಳಬಾರದು. 'ಯೇಸುಕ್ರಿಸ್ತನಿಗೆ ಸ್ವಾಮಿ ನಿಷ್ಠೆ' ಎಂಬ ವಿಷಯವನ್ನು ಪ್ರಸ್ಥಾಪನೆ ಮಾಡಿದರೆ ಸಾಕು, ನಮ್ಮಲ್ಲಿ ಅನೇಕರು ತೀವ್ರವಾಗಿ ಸಿಡಿಮಿಡಿಗೊಳ್ಳುತ್ತಾರೆ. ಪ್ರಪಂಚದ ಬೇರೆ ಜನರಿಗಿಂತಲೂ ಹೆಚ್ಚು ನಿರ್ಣಾಯಕವಾಗಿ, ಕ್ರಿಸ್ತಸೇವಕರೇ ಯೇಸುಕ್ರಿಸ್ತ ನನ್ನು ಆತನ ಸಿಂಹಾಸನದಿಂದ ಕೆಳಕ್ಕೆ ಉರುಳಿಸುತ್ತಿದ್ದಾರೆ. ದೇವರು, ಮನುಷ್ಯರನ್ನು ಆಶೀರ್ವದಿಸುವ ಯಂತ್ರವಾಗಿ ಮಾಡಲ್ಪಟ್ಟಿದ್ದಾನೆ ಮತ್ತು ಯೇಸುಕ್ರಿಸ್ತನು ಕ್ರೈಸ್ತ ಕಾರ್ಯಕರ್ತರಲೊಬ್ಬ ಕಾರ್ಯಕರ್ತನಾಗಿ ಮಾಡಲ್ಪಟ್ಟಿರುವನು.

ದೇವರಿಗಾಗಿ ನಾವು ಕೆಲಸಮಾಡುತ್ತಿದ್ದೇವೆ ಎನ್ನುವ ಕಲ್ಪನೆ ಇಲ್ಲಿ ಇಲ್ಲ, ಆದರೆ ನಮ್ಮ ಮೂಲಕ ಆತನು ತನ್ನ ಕಾರ್ಯಗಳನ್ನು ಮಾಡುವಷ್ಟು ಆತನಿಗೆ ನಿಷ್ಠೆಯುಳ್ಳವರಾಗಿರಬೇಕೆಂಬುದೇ ಇಲ್ಲಿರುವ ಉದ್ದೇಶ ''ಅತ್ಯಂತ ಕಠಿಣವಾದ ನನ್ನ ಸೇವೆಗೆ ನಿನ್ನನ್ನು ಪರಿಗಣಿಸಿ ಆಯ್ದುಕೊಂಡಿರುವೆನು. ನೀನೇನೂ ನಿನ್ನ ಕಡೆಯಿಂದ ಅಪಾದನೆ ಅಥವಾ ಫಿರ್ಯಾದು ಮಾಡುವಂತಿಲ್ಲ, ನನ್ನ ಕಡೆಯಿಂದ ನಿನಗೇನೂ ವಿವರಣೆಗಳನ್ನು ನೀಡುವುದಿಲ್ಲ'' ದೇವರು ತನ್ನ ಸ್ವಂತ ಮಗನನ್ನು ಹೇಗೆ ಉಪಯೋಗಿಸಿದನೋ ಹಾಗೆಯೇ ನಮ್ಮನ್ನು ಉಪಯೋಗಿಸಲು ಬಯಸುತ್ತಿರುವನು.

# ಏಕಾಗ್ರತೆ ಯಾವುದರ ಮೇಲೆ ?

**''ಸಮಾಧಾನವನ್ನು ಹುಟ್ಟಿಸುವುದಕ್ಕೆ ನಾನು ಬಂದಿಲ್ಲ. ಖಡ್ಗವನ್ನು ಹಾಕುವುದಕ್ಕೆ ಬಂದೆನು''-(ಮತ್ತಾಯ10:34)**

ಯಾರೋ ಒಬ್ಬನ ವಿಷಯದಲ್ಲಿ ದೇವರು ಅವನೊಂದಿಗೆ ಕಠಿಣವಾಗಿದ್ದಾನೆ ಎಂಬುವ ನಿರ್ಧಾರಕ್ಕೆ ನೀನು ಬಂದಿರುವೆಯಾದರೆ, ಅಂಥವನ ಬಗ್ಗೆ ಸಹಾನುಭೂತಿಯಿಂದಿರಬಾರದು. ನಾವು ಭಾವಿಸಿಕೊಂಡಿರುವುದಕ್ಕಿಂತಲೂ, ಬಹು ಹೆಚ್ಚಾಗಿ ದೇವರು ಮೃದುವಾಗಿದ್ದಾನೆ, ಆದರೂ ಕೆಲವೊಬ್ಬರ ಬಗ್ಗೆ ನಾವು ತುಂಬಾ ಕಠಿಣರಾಗಿ ವರ್ತಿಸುವಂಥಾ ಅವಕಾಶ ಗಳನ್ನು ದೇವರು ನಮಗೆ ಕೊಡುವನು. ನಮ್ಮ ಕಠಿಣ ನಡವಳಿಕೆಯನ್ನು ಹೋಲಿಕೆ ಮಾಡಿ, ದೇವರು ನಿಜವಾಗಿಯೂ ಮೃದುಹೃದಯನು ಎಂದು ಅವನು ತಿಳಿಯುತ್ತಾನೆ. ಒಬ್ಬ ವ್ಯಕ್ತಿಯು ನೇರವಾಗಿ ದೇವರ ಸಂಪರ್ಕ ಹೊಂದದಿರು ವದಕ್ಕೆ ಕಾರಣ, ಅವನ ಬಿಟ್ಟುಕೊಡಲಾರದಂಥ ಏನಾದರೊಂದು ಗುಪ್ತ ಸಂಗತಿಯು ಅವನೊಳಗಿರುತ್ತದೆ. ''ನಾನು ತಪ್ಪು ಮಾಡಿರುವೆನೆಂದು ಒಪ್ಪಿಕೊಳ್ಳುತ್ತೇನೆ. ಆದರೆ ನನ್ನಲ್ಲಿರುವುದನ್ನು - ದೇವರ ಬಳಿಗೆ ಬರಲು ಅಡ್ಡಿಯಾಗಿರುವ ಒಂದರ ರಹಸ್ಯವನ್ನು ಎಂದಿಗೂ ಬಿಟ್ಟು ಕೊಡುವುದಿಲ್ಲ. ಅದನ್ನು ಮಾಡುವುದಕ್ಕಿಂತಲೂ ''ನಿನ್ನಿಂದ ದೂರ ಸರಿದು ತಪ್ಪಿಸಿಕೊಂಡು ಆಗಸದಲ್ಲಿ ಹಾರಿಹೋಗುತ್ತೇನೆ'' ಎಂದು ಅವನು ಹೇಳುವನು. ಇಂಥಾ ವ್ಯಕ್ತಿಯೊಂದಿಗೆ ಅನುಕಂಪ ದಿಂದಿರುವುದು ಅಸಾಧ್ಯ; ಆ ವ್ಯಕ್ತಿಯ ಸಮಸ್ಯೆಯ ಮೂಲದವರೆಗೆ ನಿರ್ಧಯದಿಂದ ಒಳಹೊಕ್ಕು ಎಷ್ಟರ ಮಟ್ಟಿಗೆ ಪರಿಶೀಲನೆ ಮಾಡಬೇಕೆಂದರೆ, ಅವನು ಅದಕ್ಕೆ ತೀವ್ರವಾದ ವಿರೋಧವನ್ನು, ಆಳವಾದ ಅಸಮಾಧಾನವನ್ನು, ತೋರುವಷ್ಟರ ಮಟ್ಟಿಗೆ ಅನ್ವೇಷಣೆ ಮಾಡಬೇಕು. ಜನರು ದೇವರ ಆಶೀರ್ವಾದಗಳನ್ನು ಬಯಸುತ್ತಾರೆ, ಆದರೆ ತಮ್ಮ ಸಮಸ್ಯೆಯ ಆಳದವರೆಗೆ ಚುಚ್ಚಿ ನೋಡಿ ಎಚ್ಚರಿಸುವುದನ್ನು ಅವರು ಸಹಿಸುವುದಿಲ್ಲ.

ದೇವರ ಮಾರ್ಗದ ಬಗ್ಗೆ ನೀನು ಸೂಕ್ಷಗ್ರಾಹಿಯಾಗಿದ್ದರೆ, ಆತನ ಸೇವಕನಾಗಿರುವ ನಿನ್ನ ಸಂದೇಶವು ಅದೇ ಮಾರ್ಗದಲ್ಲಿ, ದಯಾಶೂನ್ಯವೂ ಒತ್ತಾಯಪೂರ್ವಕವೂ ಆಗಿರುವುದಷ್ಟೇಯಲ್ಲದೆ ಅವನ ಸಮಸ್ಯೆಯ ಬುಡ ಕತ್ತರಿಸುವಂತಿರಬೇಕು. ಇಲ್ಲದಿದ್ದರೆ ಅಲ್ಲಿ ಸ್ವಸ್ಥತೆಯುಂಟಾಗುವುದಿಲ್ಲ. ಒಬ್ಬ ವ್ಯಕ್ತಿಯು ಬೇರೆಯಾವ ಆಶ್ರಯ ವನ್ನೂ ಕಾಣದೆ, ನಿನ್ನ ಸಂದೇಶವನ್ನು ತನ್ನ ಜೀವಿತದಲ್ಲಿ ಅನುಷ್ಠಾನ ಮಾಡಿಕೊಳ್ಳುವ ತನಕ ಅದನ್ನು ಪರಿಣಾಮ ಕಾರಿಯಾಗಿ ಅವನಿಗೆ ಬೋಧಿಸುತ್ತಿರಬೇಕು. ಜನರು ಹೇಗಿರುವರೋ, ಎಲ್ಲಿರುವರೋ, ಅಲ್ಲಿಯೇ ಅದೇ ಸಿದ್ಧತೆ ಯಲ್ಲಿ ಅವರನ್ನು ಸಂಪರ್ಕಿಸಿ, ಅವರು ತಮಗಿರುವ ಆತ್ಮೀಕ ಕೊರತೆಯನ್ನು ಅರಿಯುವಂತೆ ಬೋಧಿಸಬೇಕು. ಅವರು ಅದನ್ನು ಅರಿತ ನಂತರ ಅವರ ಜೀವಿತಕ್ಕೆ ಅಗತ್ಯವಾಗಿರುವ ಯೇಸುಕ್ರಿಸ್ತನ ಸ್ಟ್ಯಾಂಡರ್ಡನ್ನು ಅವರಿಗೆ ಎತ್ತಿ ಹಿಡಿದು ತೋರಿಸಬೇಕು. ಆಗ ಅವರು ಹೇಳುವರು. - ''ನಾವೆಂದಿಗೂ ಆತನಂತಾಗಲು ಸಾಧ್ಯವಿಲ್ಲ''. ಆಗ ನೀನು ಅವರಿಗೆ ''ಯೇಸುಕ್ರಿಸ್ತನೇ ಹೇಳುತ್ತಿರುವನು ನೀವು ಹಾಗಾಗಲೇಬೇಕು'' ಎಂಬುದನ್ನು ಮನಗಾಣಿಸಬೇಕು. ''ನಾವು ಹಾಗಾಗುವದು ಹೇಗೆ ?'' ಆಗುವುದಿಲ್ಲ; ಹೊಸ ಆತ್ಮವನ್ನು ನೀನು ಹೊಂದದೇ ಹೋದರೆ ಹಾಗಾಗುವದಕ್ಕೆ ನಿನಗೆ ಆಗುವುದೇ ಇಲ್ಲ. (ಲೂಕ 11:13 ನೋಡಿ ಯೋಚಿಸಿರಿ)

ನಿನ್ನ ಸಂದೇಶವು ಯಾರಿಗಾದರೂ ಪ್ರಯೋಜನಕಾರಿ ಯಾಗಬೇಕಾದರೆ ಅದರ ಅಗತ್ಯತೆಯ ಭಾವನೆ ಅವರಲ್ಲಿ ಮೊದಲು ಹುಟ್ಟಿರಬೇಕು. ಈ ಲೋಕದಲ್ಲಿ ಸಾವಿರಾರು ಜನರು ದೇವರಿಲ್ಲದೇ ಸಂತೋಷವಾಗಿಯೇ ಇರುವರು. ಯೇಸುಕ್ರಿಸ್ತನು ಬರುವ ತನಕ ನಾನು ನೀತಿವಂತನೂ ಸಂತೋಷ ಉಳ್ಳವನೂ ಆಗಿರುವೆನಾದರೆ ಯೇಸುಕ್ರಿಸ್ತನಾದರೂ ಯಾಕೆ ಬಂದನು? ತನ್ನೊಂದಿಗೆ ವೈಯಕ್ತಿಕ ಸಂಬಂಧದ ಮೇಲೆ ನೆಲೆಗೊಂಡಿರದ ಪ್ರತಿಯೊಂದು ಸಮಾಧಾನದೊಳಗಡೆ ಕತ್ತಿಯನ್ನು ಹಾಕಲು ಯೇಸುಕ್ರಿಸ್ತನು ಬಂದನು.

# ಯೋಗ್ಯವಾದ ಸಹಾಯ

**''ನಾನು .... ಮೇಲಕ್ಕೆ ಎತ್ತಲ್ಪಟ್ಟಾಗ ಎಲ್ಲರನ್ನು ನನ್ನ ಬಳಿಗೆ ಎಳಕೊಳ್ಳುವೆನು'' – (ಯೋಹಾನ 12:32)**

ಯೇಸುಕ್ರಿಸ್ತನು ಶಿಲುಬೆಯ ಮರಣವನ್ನು ಯಾಕೆ ಹೊಂದಿದನೆಬುಂದರ ಅರ್ಥವು ನಮ್ಮಲ್ಲಿ ಕೆಲವರಿಗೆ ಮಾತ್ರ ತಿಳಿದಿದೆ. ಕೇವಲ ಅನುಕಂಪವಷ್ಟೇ ಮಾನವರಿಗೆ ಅಗತ್ಯವಾಗಿದ್ದರೆ ಯೇಸುಕ್ರಿಸ್ತನ ಶಿಲುಬೆಯು ಕೇವಲ ವ್ಯರ್ಥವೂ ಹಾಸ್ಯಾಸ್ಪದವೂ ಆಗಿದೆ, ಅಲ್ಲಿ ಅದರ ಅಗತ್ಯತೆಯಿಲ್ಲ. ಈಗ ಲೋಕಕ್ಕೆ ಬೇಕಾಗಿರುವುದು–ಚೂರು ಪಾರು ಪ್ರೀತಿಯಲ್ಲ, ದೊಡ್ಡ ಶಸ್ತ್ರಚಿಕಿತ್ಸೆಯೇ ಬೇಕಾಗಿದೆ.

ಆತ್ಮೀಕ ಸಂಕಷ್ಟದಲ್ಲಿರುವ ಒಬ್ಬ ವ್ಯಕ್ತಿಯನ್ನು ನೀನು ಮುಖಾಮುಖಿಯಾಗಿ ಸಂಧಿಸಿದಾಗ, ಶಿಲುಬೆಯ ಮೇಲೆ ತೂಗಾಡುತ್ತಿರುವ ಯೇಸುಕ್ರಿಸ್ತನ್ನು ಮೊದಲು ನಿನ್ನ ನೆನಪಿಗೆ ತಂದುಕೊಳ್ಳಬೇಕು. ಆ ವ್ಯಕ್ತಿಯನ್ನು ಬೇರಾವುದೋ ದಾರಿಯಲ್ಲಿ ನೀನು ದೇವರ ಬಳಿಗೆ ಕರೆತರಲು ಸಾಧ್ಯವಿದ್ದರೇ ಅಲ್ಲಿ ಯೇಸು ಕ್ರಿಸ್ತನ ಶಿಲುಬೆಯು ಅಗತ್ಯವಿಲ್ಲ. ನಿನ್ನ ಅನುಕಂಪ, ನಿನ್ನ ಮನವರಿಕೆಯ ಮೂಲಕ ಅಂಥವರಿಗೆ ನೀನು ಸಹಾಯ ಮಾಡುವಂತಿದ್ದರೆ, ಶಿಲುಬೆಯನ್ನು ಅನಗತ್ಯ ಮಾಡಿರುವ ನೀನೇ ಯೇಸುಕ್ರಿಸ್ತನಿಗೆ ಪರಮ ದ್ರೋಹಿಯಾಗಿರುವಿ. ದೇವರಿಗೆ ಯೋಗ್ಯವಾದ ಸಂಬಂಧದಲ್ಲಿ ನೀನಿರಬೇಕು. ಆತನು ತೋರಿಸುವ ಮಾರ್ಗದಲ್ಲಿಯೇ ನೀನು ಇತರರಿಗೆ ನಿನ್ನ ಸಹಾಯವನ್ನು ಧಾರೆಯೆರೆಯಬೇಕು. ದೇವರನ್ನು ಅಲಕ್ಷ ಮಾಡುವ ಮಾನವೀಯತೆಯ ದಾರಿಹಿಡಿದು ನಿನ್ನ ಸಹಾಯವನ್ನು ಅವರಿಗೆ ಧಾರೆಯೆರೆಯಬಾರದು. ಆದರೆ ಸಧ್ಯದಲ್ಲಿ ಜಾರಿಯಲ್ಲಿರುವಂಥದ್ದು – ಹಿತಕರವಾಗಿಯೂ, ಯಾರನ್ನೂ ಎದುರುಹಾಕಿಕೊಳ್ಳದೆಯೂ, ಎಲ್ಲಾ ಸೂತ್ರಗಳಿಗೆ ತಲೆಯಾಡಿಸುತ್ತಾ ಎಲ್ಲ ವಿಷಯಗಳಿಗೆ ಹೊಂದಿಕೆ ಮಾಡಿಕೊಳ್ಳುವ ಕಪಟಧಾರ್ಮಿಕತೆಯ ಸೇವೆ.

ಶಿಲುಬೆಗೆ ಹಾಕಲ್ಪಟ್ಟ ಯೇಸುಕ್ರಿಸ್ತನನ್ನು ಪ್ರಕಟ ಪಡಿಸುವುದು ಮತ್ತು ಆತನನ್ನು ಯಾವಾಗಲೂ ಮೇಲಕ್ಕೆ ಎತ್ತಿ ಹಿಡಿಯುವುದೊಂದೇ ನಮ್ಮ ಮುಂದಿರುವ ಗುರಿ. ಯೇಸುಕ್ರಿಸ್ತನ ಶಿಲುಬೆಯಲ್ಲಿ ಆಳವಾಗಿ ಹೂತುಕೊಂಡಿರದ ಪ್ರತಿಯೊಂದು ದೈವಸಿದ್ಧಾಂತಗಳು ನಮ್ಮನ್ನು ದಾರಿ ತಪ್ಪಿಸುತ್ತವೆ. ಕ್ರೈಸ್ತ ಸೇವಕನು ಯೇಸುಕ್ರಿಸ್ತನಲ್ಲಿ ಭರವಸೆಯುಳ್ಳವನಾಗಿ ಪಾಪವಿಮೋಚನೆಯ ವಾಸ್ತವವನ್ನು ಆಧಾರವಾಗಿಟ್ಟು ಕೊಂಡಿದ್ದರೆ, ಆತನಾಡುವ ಮಾತುಗಳು ಜನರಿಗೆ ಕುತೂಹಲಕಾರಿಯಾಗಿರುತ್ತವೆ. ಹೀಗೆ ಆತನು ನುಡಿಯುವ ಸಂಗತಿಗಳು ಕೇಳಿದವರ ಹೃದಯದಾಳಕ್ಕೆ ಇಳಿದು ಅಲ್ಲಿ ನೆಲೆಗೊಳ್ಳುವುದಕ್ಕೆ ಕಾರಣ, ಕ್ರೈಸ್ತ ಸೇವಕನಿಗೆ ಯೇಸುಕ್ರಿಸ್ತ ನೊಂದಿಗಿರುವ ನೇರವೂ ಸರಳವೂ ಆದ ಸಂಬಂಧವೇ; ದೇವರಿಗೆ ಬೇಕಾಗಿರುವ ಆ ಸೇವಕನ ಉಪಯೋಗವು ಈ ಸಂಬಂಧದ ಮೇಲೆ ಮಾತ್ರವೇ ಆತುಕೊಂಡಿದೆ.

ಹೊಸ ಒಡಂಬಡಿಕೆಯಲ್ಲಿ ಕ್ರೈಸ್ತ ಸೇವಕನಿಗುಂಟಾಗುವ ಕರೆಯು, ಅವನು ಜನರ ಪಾಪವನ್ನು ಬಯಲು ಮಾಡುವುದಕ್ಕೆ ಮತ್ತು ಅವರನ್ನು ಪಾಪದಿಂದ ಬಿಡುಗಡೆಮಾಡುವ ರಕ್ಷಕನು ಯೇಸುಕ್ರಿಸ್ತನೇ ಎಂದು ಪ್ರಕಟಪಡಿಸುವುದಕ್ಕಾಗಿಯೇ. ಅದನ್ನು ಪ್ರಕಟಿಸುವಾಗ ಅದು ಕಾವ್ಯಾತ್ಮಕವಾಗಿರಬಾರದು; ಅವನೊಬ್ಬ ನಿರ್ದಾಕ್ಷಿಣ್ಯದ ಶಸ್ತ್ರಚಿಕಿತ್ಸಕನಾಗಬೇಕು. ನಾವು ಯೇಸುಕ್ರಿಸ್ತನನ್ನು ಮೇಲಕ್ಕೆ ಎತ್ತಲು ಕಳುಹಿಸಲ್ಪಟ್ಟಿ ರುವೆವೇ ವಿನಃ ಆಶ್ಚರ್ಯಕರವಾದ ಸೌಂದರ್ಯಭರಿತ ಪ್ರಚೋದನೆಯ ಪ್ರವಚನಗಳನ್ನು ನೀಡುವುದಕ್ಕಲ್ಲ. ದೇವರು ನಮ್ಮನ್ನು ಎಷ್ಟು ಆಳವಾಗಿ ಒಳಹೊಕ್ಕು ಶೋಧಿಸಿರುವನೋ ಅದೇ ರೀತಿಯಲ್ಲಿ ನಮ್ಮ ಪ್ರಕಟಿಸುವಿಕೆಗಳನ್ನು ನೇರವಾಗಿ ಹೃದಯಕ್ಕೆ ಮುಟ್ಟಿಸಬೇಕು. ಅಗತ್ಯವಿರುವ ಸತ್ಯವೇದ ಪಾಠಗಳನ್ನು ಅರಿತು ಕೊಂಡು ಅವುಗಳನ್ನು ನಿರ್ಭಯದಿಂದ, ಹೃದಯ ಮುಟ್ಟುವಂತೆ ಸಾರಬೇಕು.

# ಅನುಭವ ಅಥವಾ ದೇವರ ಸತ್ಯಾರ್ಥದ ಪ್ರಕಟಣೆ

**''ದೇವರು ನಮಗೆ ದಯಪಾಲಿಸಿರುವ ಕೃಪಾವರಗಳನ್ನು ತಿಳುಕೊಳ್ಳುವುದಕ್ಕಾಗಿ ದೇವರಿಂದ ಬಂದ ಆತ್ಮವನ್ನೆ ಹೊಂದಿದೆವು'' – (1 ಕೊರಿ 2:12)**

ಪಾಪ ವಿಮೋಚನೆಯೇ ನಿಜವಾದ ವಾಸ್ತವತೆ, ಪಾಪ ವಿಮೋಚನೆಯ ನನ್ನ ಅನುಭವವು ವಾಸ್ತವಿಕವಲ್ಲ ; ಆದರೆ ಪಾಪವಿಮೋಚನೆಯು ನನ್ನ ಪ್ರಜ್ಞಾಜೀವಿತದಲ್ಲಿ ಅನುಷ್ಠಾನಗೊಳ್ಳುವ ತನಕ ಅದು ನನಗೆ ಅರ್ಥ ಶೂನ್ಯವಾಗಿರುತ್ತದೆ. ನಾನು ಹೊಸದಾಗಿ ಹುಟ್ಟಿದಾಗ ದೇವರ ಆತ್ಮನು ನನ್ನನ್ನು ನನ್ನ ಸ್ವಂತಿಕೆಯಿಂದಾಚೆಗೆ, ನನ್ನ ಅನುಭವಗಳಾಚೆಗೆ ತೆಗೆದುಕೊಂಡು ಹೋಗುವನು ಮತ್ತು ನನ್ನನ್ನು ಯೇಸು ಕ್ರಿಸ್ತನೊಂದಿಗೆ ಗುರುತಿಸಿಕೊಳ್ಳುವಂತೆ ಮಾಡುವನು. ವ್ಯಕ್ತಿಗತ ಅನುಭವಗಳಲ್ಲಿಯೇ ನಾನು ಉಳಿದಿದ್ದರೆ, ಅಂಥಾ ಅನುಭವಗಳು ಪಾಪ ವಿಮೋಚನೆಯಿಂದುಂಟಾದವುಗಳಲ್ಲ. ನನ್ನ ಅನುಭವಗಳು, ನನ್ನ ಪಾಪ ವಿಮೋಚನೆಯಿಂದುಂಟಾಗಿರುವುದೆಂಬುದಕ್ಕೆ ಸಾಕ್ಷಿಯೆಂದರೆ, ನಾನು ಸದಾಕಾಲವೂ ಸ್ವಯಂ ನಿಂದಾಚೆಗೆ, ನನ್ನ ಸ್ವಂತಿಕೆಯಿಂದಾಚೆಗೆ ನಡೆಸಲ್ಪಡುತ್ತಿರುತ್ತೇನೆ ಮತ್ತು ಪಾಪವಿಮೋಚನೆಯ ವಾಸ್ತವತೆಗೆ ನನ್ನ ಅನುಭವಗಳು ಆಧಾರವೆಂದು ನಾನು ಪರಿಗಣಿಸುವುದೇ ಇಲ್ಲ. ಆದರೆ ಪಾಪವಿಮೋಚನೆಯ ವಾಸ್ತವವೇ ಅನುಭವಗಳನ್ನುಂಟು ಮಾಡಿದೆ ಎಂಬುದನ್ನು ಗ್ರಹಿಸಿರುತ್ತೇನೆ. ಈ ವಾಸ್ತವಿಕತೆಗೆ ಮೂಲನಾದ ಯೇಸುಕ್ರಿಸ್ತನ ಮೇಲೆ ಗಮನವನ್ನೀಯದಂತೆ ಮಾಡುವ ನನ್ನ ಅನುಭವಗಳಿಗೇನೂ ಬೆಲೆಯಿಲ್ಲ.

ಹೆಚ್ಚು ಆಂತರಿಕ ಆತ್ಮೀಕ ಅನುಭವಗಳನ್ನು ಉಂಟು ಮಾಡಲಿ ಎಂಬ ಉದ್ದೇಶದಿಂದ, ಪರಿಶುದ್ಧಾತ್ಮನನ್ನು ಹೊರಗೆ ಹರಿಯಲು ಬಿಡದೆ, ಆಣೆಕಟ್ಟಿನಂತೆ ನಿನ್ನಲ್ಲಿಯೇ ಸಂಗ್ರಹಿಸಿಟ್ಟು ಕೊಳ್ಳಲು ನೀನು ಯತ್ನಿಸಿದರೆ ಪರಿಶುದ್ಧಾತ್ಮನು, ನೀನು ನಿರ್ಮಿಸಿರುವ ಎಲ್ಲಾ ಅಡ್ಡಗೋಡೆಗಳನ್ನು ಸ್ಫೋಟಿಸಿ, ಹೊರಹೊಮ್ಮಿ ಹರಿಯುವುದನ್ನು ಮತ್ತು ಐತಿಹಾಸಿಕ ಕ್ರಿಸ್ತನೆಡೆಗೆ ನಿನ್ನನ್ನು ತಿರುಗಿ ಸೆಳೆದೊಯ್ಯುವುದನ್ನು ನೀನು ಕಾಣುವೆ. ಯಾವ ಅನುಭವಕ್ಕೆ ದೇವರು ಮೂಲನಾಗಿಲ್ಲವೋ, ಯಾವ ಅನುಭವವು ದೇವರಲ್ಲಿ ನಂಬಿಕೆ ಯನ್ನುಂಟು ಮಾಡುವುದಿಲ್ಲವೋ, ಅದನ್ನು ನೀನು ಪೋಷಿಸಬಾರದು. ಅದನ್ನು ನೀನು ಪೋಷಿಸಿದರೇ, ಅಂಥ ಅನುಭವವು ನಿನ್ನಲ್ಲಿ ಎಷ್ಟೇ ಮಹತ್ವದ ದರ್ಶನವನ್ನುಂಟು ಮಾಡಿದ್ದರೂ ಅದು ಕ್ರಿಸ್ತವಿರೋಧಿಯಾಗಿದೆ; ನಿನ್ನ ಅನುಭವಗಳ ಪ್ರಭುವು ಯೇಸುಕ್ರಿಸ್ತನೋ ಅಥವಾ ಯೇಸುಕ್ರಿಸ್ತನ ಮೇಲೆ ನಿನ್ನ ಅನುಭವಗಳು ಪ್ರಭುತ್ವ ನಡೆಸುವಂತೆ ನೀನು ಮಾಡುತ್ತಿರುವೆಯೋ? ಯೇಸುಕ್ರಿಸ್ತನಿಗಿಂತಲೂ ಪ್ರಿಯವಾದ ಅನುಭವವು ನಿನಗುಂಟೋ? ಯೇಸುಕ್ರಿಸ್ತನೇ ನಿನ್ನ ಪ್ರಭುವಾಗಿರಬೇಕು ಮತ್ತು ಯಾವ ಅನುಭವಕ್ಕೆ ಆತನು ಪ್ರಭುವಾಗಿರುವುದಿಲ್ಲವೋ ಅಂಥಾ ಅನುಭವಕ್ಕೆ ನಿನ್ನ ಗಮನವನ್ನೀಯ ಕೂಡದು. ದೇವರು, ನಿನ್ನ ಸ್ವಂತ ಅನುಭವಗಳ ಬಗ್ಗೆ ನೀನು ಕಿರಿಕಿರಿಗೊಳ್ಳುವಂಥ ಸಮಯವನ್ನುಂಟು ಮಾಡುತ್ತಾನೆ. ''ನನಗಾಗುವ ಅನುಭವವನ್ನು ನಾನು ಲಕ್ಷಿಸುವುದಿಲ್ಲ. ಯೇಸುಕ್ರಿಸ್ತನಲ್ಲಿ ಶ್ರದ್ಧೆಯುಳ್ಳವನಾಗಿರುತ್ತೇನೆ.'' ನಿನಗುಂಟಾದ ಅನುಭವವನ್ನು ಹೇಳಲೇ ಬೇಕಾದಾಗ ನೀನು ಕಠೋರನಾಗಿರಬೇಕು. ಯಾವ ಶ್ರದ್ಧೆಯು ತನ್ನಷ್ಟಕ್ಕೆ ತನಗೇ ಶ್ರದ್ಧೆ ಯುಳ್ಳದ್ದಾಗಿ ದೆಯೋ ಅದು ಶ್ರದ್ಧೆಯಲ್ಲ. ದೇವರ ವಾಸ್ತವದ ಬಗ್ಗೆ ಇರುವ ನಂಬಿಕೆಯೇ ನಿಜವಾದ ಶ್ರದ್ಧೆ.

# ತಂದೆಯ ಎಳೆತ

**''ನನ್ನನ್ನು ಕಳುಹಿಸಿಕೊಟ್ಟಂಥ ತಂದೆಯು ಎಳೆದ ಹೊರತು ಯಾವನೂ ನನ್ನ ಬಳಿಗೆ ಬರಲಾರನು''**
**– (ಯೋಹಾ 6:44)**

ದೇವರು ನನ್ನನ್ನು ತನ್ನತ್ತ ಸೆಳೆಯಲಾರಂಭಿಸಿದ ಕೂಡಲೇ, ನನ್ನ ಇಚ್ಛೆ ಎಂಬ ಸಮಸ್ಯೆಯು ತಲೆ ತೂರಿಸುತ್ತದೆ – ದೇವರು ಪ್ರಕಟಮಾಡಿದ ಈ ಸತ್ಯಾರ್ಥಕ್ಕೆ ಯೋಗ್ಯ ಪ್ರತಿಕ್ರಿಯೆ ತೋರಿಸುವೆನೋ – ಆತನ ಬಳಿಗೆ ನಾನು ಬರುವೆನೋ ? ಇಂಥಾ ಎಳೆತಕ್ಕೆ ಸಂಬಂಧಿಸಿದಂತೆ ಆತ್ಮೀಕ ವಿಷಯಗಳ ಬಗ್ಗೆ ತರ್ಕವು ಕೇವಲ ಉದ್ದಟತನವಾಗಿದೆ. ದೇವರು ನಿನ್ನ ಸಂಗಡ ಮಾತಾಡುತ್ತಿರುವಾಗ ಆ ವಿಷಯವನ್ನು ಇತರರೊಂದಿಗೆ ಚರ್ಚಿಸಬಾರದು. ನಂಬಿಕೆಯೆನ್ನುವುದು ಬೌದ್ಧಿಕ ಕ್ರಿಯೆಯಲ್ಲ ; ನಂಬಿಕೆಯು ನೈತಿಕ ಕ್ರಿಯೆ, ಅದರ ಮೂಲಕ ನಾನು ವಿವೇಚನಾಪೂರ್ವಕವಾಗಿ ದೇವರಿಗೆ ಬದ್ಧನಾಗಿರುತ್ತೇನೆ. ದೇವರ ಮುಂದೆ ಸಾಷ್ಟಾಂಗನಾಗಿ ಬಿದ್ದುಕೊಂಡು ಆತನು ಏನು ಹೇಳುವನೋ ಅದನ್ನು ನಿರ್ವಹಿಸುವೆನೋ ? ಅದನ್ನು ನಾನು ಮಾಡಿದರೆ ದೇವರ ಸಿಂಹಾಸನವು ಎಷ್ಟು ಖಚಿತವೋ ಅಷ್ಟೇ ನಿಶ್ಚಯವಾಗಿ ದೇವರ ವಾಸ್ತವದ ಮೇಲೆ ನಾನು ನೆಲೆಗೊಂಡಿರುವುದನ್ನು ನಾನು ಗ್ರಹಿಸುತ್ತೇನೆ.

ಸುವಾರ್ತೆಯನ್ನು ಸಾರುವಾಗ, ಮೊದಲು 'ಇಚ್ಛೆಯ' ವಿಷಯವನ್ನು ಮುಂದಿಡಬೇಕು. ನಂಬಿಕೆಯು, ನಂಬುವ ಇಚ್ಛೆಯಾಗಿರಬೇಕು. ನಂಬುವಂತೆ ಮನವೊಲಿಸಬಲ್ಲ ಶಕ್ತಿಗೆ ಒಪ್ಪಿಸಿಕೊಡುವುದಲ್ಲ, ನಂಬುವ ಸಂಕಲ್ಪವನ್ನೇ ದೇವರಿಗೆ ಒಪ್ಪಿಸಿಕೊಡಬೇಕು; ನಾನು ಸಾಧಿಸಿದವುಗಳ ಮೇಲೆ ಭರವಸೆ ಇಲ್ಲದಾಗುವ ತನಕ, ದೇವರ ಮೇಲೆ ಮತ್ತು ಆತನು ತಿಳಿಸಿದ ಸತ್ಯಾರ್ಥಗಳ ಮೇಲೆ ನಂಬಿಕೆಯನ್ನಿಟ್ಟು ವಿವೇಚನಾಪೂರ್ವಕವಾಗಿ ಕಾರ್ಯೋನ್ಮುಖನಾಗಬೇಕು. ದೇವರಲ್ಲಿ ಮಾತ್ರ ನಾನು ಭರವಸೆಯಿಂದಿರುತ್ತೇನೆ. ನಾನು ನನ್ನ ಬೌದ್ಧಿಕ ತಿಳುವಳಿಕೆಯ ಮೇಲೆ ಭರವಸೆಯುಳ್ಳವನಾಗಿರುವುದರಿಂದಲೇ, ದೇವರನ್ನು ನಾನು ನಂಬದಿರುವುದಕ್ಕೆ ನನಗಿರುವ ನಿಜವಾದ ಅಡಚಣೆ. ನನ್ನ ಭಾವನೆಯಂತೆ ನೋಡದೆ, ಅದನ್ನು ನಿರ್ಲಕ್ಷಿಸಿ, ನಾನು ಮಾತ್ರ ಕಣ್ಮುಚ್ಚಿಕೊಂಡು, ಬೇರೇನನ್ನೂ ವಿವೇಚಿಸದೆ ದೇವರನ್ನು ನಂಬಲು ಇಚ್ಛಿಸಬೇಕು. ವಿಷಯಗಳನ್ನು ಪರಾಮರ್ಶಿಸಿ ನೋಡುವ ನನ್ನ ಹಿಂದಿನ ದೃಷ್ಟಿಯಿಂದ ನನ್ನನ್ನು ನಾನು ಬೇರ್ಪಡಿಸಿಕೊಳ್ಳಲು ಬಿರುಸಾದ ಪ್ರಯತ್ನಗಳನ್ನು ನಾನು ಮಾಡದಿದ್ದರೆ ಇದನ್ನು ಸಾಧಿಸಲು ಸಾಧ್ಯವಿಲ್ಲ; ದೇವರ ಮೇಲೆ ಸಂಪೂರ್ಣವಾಗಿ ಆತುಕೊಂಡಿರಬೇಕು.

ಪ್ರತಿಯೊಬ್ಬ ಮನುಷ್ಯನೂ ತನ್ನ ಗ್ರಹಿಕೆಗೆ ಮೀರಿದ್ದನ್ನು ಮುಟ್ಟಲು ಸೃಷ್ಟಿಸಲ್ಪಟ್ಟಿರುತ್ತಾನೆ. ಅಲ್ಲಿಗೆ ನನ್ನನ್ನು ಎಳೆಯುತ್ತಿರುವಾತನು ದೇವರೇ. ದೇವರ ಸಂಗಡ ನನಗಿರುವ ಸಂಬಂಧವು ಪ್ರಪ್ರಥಮವಾಗಿ ವ್ಯಕ್ತಿಗತವಾದದ್ದು – ಅದು ಬೌದ್ಧಿಕವಾದದಲ್ಲ. ದೇವರ ಅದ್ಭುತ ಕಾರ್ಯದ ಮೂಲಕ ಹಾಗೂ ಅದನ್ನು ನಂಬುವ ನನ್ನ ಇಚ್ಛೆಯ ಮೂಲಕ ನಾನು ದೇವರ ನಿಕಟ ಸಂಬಂಧದೊಳಗೆ ಸೇರಿದ್ದೇನೆ. ಆನಂತರವೇ ನನ್ನ ಜೀವಿತದಲ್ಲುಂಟಾದ ಈ ಅದ್ಭುತ ಪರಿವರ್ತನೆಯ ಮರ್ಮವನ್ನರಿಯುತ್ತೇನೆ ಮತ್ತು ಅದರಲ್ಲಿರುವ ಜ್ಞಾನದ ಸ್ವಾರಸ್ಯವನ್ನು ಗ್ರಹಿಸುತ್ತೇನೆ.

# ಪ್ರಾಯಶ್ಚಿತ ಯಜ್ಞದಲ್ಲಿ ಹೇಗೆ ನಾನು ಭಾಗಿಯಾಗ ಬಲ್ಲೆನು ?

**''ನನಗಾದರೋ ನಮ್ಮ ಕರ್ತನಾದ ಯೇಸುಕ್ರಿಸ್ತನ ಶಿಲುಬೆಯ ವಿಷಯದಲ್ಲಿ ಹೊರತು ಹೆಚ್ಚಳ ಪಡುವುದು ಬೇಡವೇ ಬೇಡ'' - (ಗಲಾತ್ಯ 6:14)**

ಯೇಸುಕ್ರಿಸ್ತನ ಸುವಾರ್ತೆಯು, ತೀರ್ಮಾನ ಕೈಗೊಳ್ಳುವ ನನ್ನ ಸಂಕಲ್ಪ ಬಲವನ್ನು ಒತ್ತಾಯ ಪಡಿಸುತ್ತದೆ. ಯೇಸುಕ್ರಿಸ್ತನ ಶಿಲುಬೆಯ ಮೇಲೆ ಪಾಪಕ್ಕೆ ಆದ ತೀರ್ಪನ್ನು ನಾನು ಅಂಗೀಕರಿಸು ವೆನೋ? ಯೇಸುಕ್ರಿಸ್ತನ ಮರಣದಲ್ಲಿ ಅಲ್ಪವಾದರೂ ಆಸಕ್ತಿ ನನಗುಂಟೋ? ಪಾಪದ ವಿಷಯದಲ್ಲಿ ನನಗಿರುವ ಸಕಲ ಆಸಕ್ತಿಗಳನ್ನು, ಲೌಕಿಕ ಆಸಕ್ತಿಗಳನ್ನು ನನ್ನ ಸ್ವಾರ್ಥತೆಗಳನ್ನು, ಸಾಯಿಸಿಬಿಟ್ಟು ಯೇಸು ಕ್ರಿಸ್ತನ ಮರಣ ದೊಂದಿಗೆ ಗುರುತಿಸಿಕೊಳ್ಳಲು ನಾನು ಇಚ್ಚೆಸುತ್ತಿರುವೆನೋ - ಆತನೊಬ್ಬನಿಗೇ ವಿನಃ ಜೀವಿತದ ಎಲ್ಲಾ ರಂಗಗಳಲ್ಲಿ ಎಲ್ಲಾ ವಿಷಯಗಳಲ್ಲಿ ಕೆಲಸಕ್ಕೆ ಬಾರದವನೂ, ಹಾಳಾದವನೂ ಆಗಿರಲು ಇಚ್ಚೆಸುತ್ತಿರುವೆನೋ? ಯೇಸುಕ್ರಿಸ್ತನ ಶಿಷ್ಯನಾಗಿರುವ ಸುಯೋಗವೆಂದರೆ ಆತನ ಶಿಲುಬೆಯಡಿಯಲ್ಲಿ ನಾನು ಸೇರಿಕೊಳ್ಳಬಹುದು-ಅಂದರೆ ಪಾಪದ ಪಾಲಿಗೆ ಸತ್ತು ಹೋಗುವುದು. ಯೇಸುಕ್ರಿಸ್ತನೊಡನೆ ಏಕಾಂಗಿಯಾಗಿರುತ್ತಾ, ಆತನಿಗೆ ಹೇಳಿ ಬಿಡಬೇಕು, ಒಂದೋ, ನನ್ನೊಳಗಿರುವ ಪಾಪವು ಸತ್ತು ಹೋಗುವುದು ನನ್ನಿಚ್ಛೆಯಲ್ಲವೆಂದೂ, ಅದಿಲ್ಲವೆಂದರೆ ಅದೆಷ್ಟೇ ಬೆಲೆಯನ್ನು ತೆರಬೇಕಾದರೂ ಸರಿಯೇ ನಾನು ಯೇಸುಕ್ರಿಸ್ತನ ಶಿಲುಬೆಯ ಮರಣದೊಂದಿಗೆ ಗುರುತಿಸಲ್ಪಡಲು ಇಚ್ಚೆಸುತ್ತೇನೆಂದೂ, ಹೀಗೆ ಎರಡರಲ್ಲೊಂದನ್ನು ಹೇಳಿಬಿಡಬೇಕು. ಆಗ ಯೇಸುಕ್ರಿಸ್ತನು ಶಿಲುಬೆಯ ಮೇಲೆ ಏನು ಸಾಧಿಸಿ ರುವನೋ ಅದರಲ್ಲಿ ಪೂರ್ಣ ವಿಶ್ವಾಸವನ್ನಿಟ್ಟು ನೀನು ಕಾರ್ಯೋನ್ಮುಖನಾದಾಗ ಕೂಡಲೇ ಆತನ ಮರಣದಲ್ಲಿ ಅಲೌಕಿಕವಾದ ನಿನ್ನ ಗುರುತಿಸಲ್ಪಡುವಿಕೆಯು ನೆರವೇರುತ್ತದೆ. ''ನಾವು ಇನ್ನೂ ಪಾಪದ ವಶದಲ್ಲಿರದಂತೆ... ಪೂರ್ವಸ್ವಭಾವವು ಕ್ರಿಸ್ತನ ಕೂಡ ಶಿಲುಬೆಗೆ ಹಾಕಲ್ಪಟ್ಟಿತೆಂದು ತಿಳಿದು ಬರುವುದು!'' (ರೋಮಾ 6:6) ಅದರಂತೆ ನಿನ್ನ ಪೂರ್ವಸ್ವಭಾವವು ಕೂಡ ಕ್ರಿಸ್ತನೊಡನೆ ಶಿಲುಬೆಗೆ ಹಾಕಲ್ಪಟ್ಟಿರುವುದೆಂಬುದು, ಎಲ್ಲಾ ಜ್ಞಾನವನ್ನು ಮೀರಿದ ದಿವ್ಯಜ್ಞಾನದ ಮೂಲಕ ನಿನಗೆ ತಿಳಿದು ಬರುತ್ತದೆ. ನಿಜವಾಗಿಯೂ ನಿನ್ನ ಪೂರ್ವಸ್ವಭಾವವು ಯೇಸುಕ್ರಿಸ್ತನೊಂದಿಗೆ ಶಿಲುಬೆಗೆ ಹಾಕಿಸಿ ಕೊಂಡಿರುವುದರ (ಗಲಾತ್ಯ 2:20) ಸಾಕ್ಷಿಯೆಂದರೆ ನಿನ್ನೊಳಗಿರುವ ದೇವರ ಜೀವಿತವು ಅದ್ಭುತವಾದ ಅನಾಯಾಸದಿಂದ ಯೇಸುಕ್ರಿಸ್ತನ ಸ್ವರಕ್ಕೆ ನೀನು ವಿಧೇಯನಾಗುವಂತೆ ನಿನ್ನನ್ನು ಬಲಪಡಿಸುತ್ತದೆ.

ನಾವು ಯೇಸುಕ್ರಿಸ್ತನವರಾಗದಿದ್ದರೆ ಹೇಗಿರುತ್ತೇವೆಂಬುದನ್ನು ಆಗಾಗ ನಾವು ನೋಡುವಂತೆ ಆತನು ಮಾಡುತ್ತಿರುತ್ತಾನೆ; ''ನೀವು ನನ್ನನ್ನು ಬಿಟ್ಟು ಏನೂ ಮಾಡಲಾರಿರಿ'' (ಯೋಹಾನ 15:16) ಎಂಬುದನ್ನು ನಿರ್ಣಾಯಕವಾಗಿ ಅದು ಸಮರ್ಥಿಸುತ್ತದೆ. ಆದುದರಿಂದಲೇ ಯೇಸುಕ್ರಿಸ್ತನಿಗೆ ವ್ಯಕ್ತಿಗತವಾದ, ಅತ್ಯಾಸಕ್ತಿಯ ದೃಢ ನಿಷ್ಠೆಯೇ ಕ್ರೈಸ್ತತ್ವದ ಆಧಾರಶಿಲೆ. ದೇವರ ರಾಜ್ಯದ ಪ್ರಥಮ ಪ್ರವೇಶದಿಂದಾಗುವ ಮಹದಾನಂದವನ್ನು, ದೇವರು ತನ್ನ ಉದ್ದೇಶ ಸಾಧನೆಗಾಗಿ ನಮ್ಮನ್ನು ಅಲ್ಲಿಗೆ ಕರೆತಂದಿರುವನೆಂದು ತಪ್ಪಾಗಿ ಗ್ರಹಿಸುತ್ತೇವೆ; ದೇವರ ರಾಜ್ಯದಲ್ಲಿ ಸೇರುವ ಅನುಭವವನ್ನು ದೇವರು ನಮಗೆ ಅನುಗ್ರಹಿಸಿದ ಉದ್ದೇಶವೆಂದರೆ, ಯೇಸುಕ್ರಿಸ್ತನ ಸಂಗಡ ಗುರುತಿಸಿಕೊಳ್ಳುವಿಕೆ ಎಂದರೇ ನೆಂಬುದನ್ನು ಆಮೂಲಾಗ್ರವಾಗಿ ಗ್ರಹಿಸುವುದಕ್ಕಾಗಿಯೇ.

# ಮರೆಯಾಗಿಟ್ಟ ಜೀವಿತ

**''ನಿಮ್ಮ ಜೀವವು ಕ್ರಿಸ್ತನೊಂದಿಗೆ ದೇವರಲ್ಲಿ ಮರೆಯಾಗಿಟ್ಟದೆ'' - (ಕೊಲೊಸ್ಸೆ 3:3)**

ಕ್ರಿಸ್ತನೊಂದಿಗೆ ದೇವರಲ್ಲಿ ಮರೆಯಾಗಿಟ್ಟಿರುವ ಜೀವಿತವು ಸರ್ವಶಕ್ತನ ಆಶ್ರಯದಲ್ಲಿ ಸುರಕ್ಷಿತವೂ, ಯಥಾರ್ಥವೂ ಆಗಿರುವುದಕ್ಕೆ ದೇವರ ಆತ್ಮನೇ ಸಾಕ್ಷಿಯಾಗಿದ್ದಾನೆ, ಸತ್ಯವೇದದ ಪತ್ರಿಕಾ ವಿಭಾಗಗಳಲ್ಲಿ ಈ ಸತ್ಯಾಂಶವನ್ನು ಸತತವಾಗಿ ಪ್ರತಿಪಾದಿಸಲಾಗಿದೆ. ಪವಿತ್ರೀಕರಿಸಲ್ಪಟ್ಟ ಜೀವಿತವನ್ನು ಜೀವಿಸುವುದು ತುಂಬಾ ಅನಿಶ್ಚಿತತೆಯಿಂದ ಕೂಡಿದ ಸುರಕ್ಷಿತವಲ್ಲದ ಸಂಗತಿಯೆಂದು ನಾವು ಹೇಳುತ್ತೇವೆ; ಆದರೆ ಅಂಥಾ ಜೀವಿತವು ಅತೀ ಸುರಕ್ಷಿತವಾದ ಜೀವಿತ, ಯಾಕೆಂದರೆ ಆ ಜೀವಿತದೊಳಗೆ ಹಾಗೂ ಆ ಜೀವಿತಕ್ಕೆ ಸರ್ವಶಕ್ತನಾದ ದೇವರು ಆಶ್ರಯವಾಗಿರುತ್ತಾನೆ. ಅತ್ಯಂತ ಅಪಾಯದ ಅನಿಶ್ಚಿತ ಸಂಗತಿಯೆಂದರೆ, ದೇವರಿಲ್ಲದೆ ಜೀವಿಸಲು ಪ್ರಯಾಸಪಡುವುದು. ನಾವು ಹೊಸದಾಗಿ ಹುಟ್ಟಿದವರಾದರೆ ದೇವರ ಎಚ್ಚರಿಕೆಗಳಿಗೆ ನಾವು ವಿಧೇಯರಾಗಿ ''ನಾವು ಬೆಳಕಿನಲ್ಲಿ ನಡೆದರೆ'' (ಯೋಹಾನ 1:7) ನಾವು ದೇವರೊಂದಿಗೆ ಯೋಗ್ಯವಾದ ಸಂಬಂಧವನ್ನು ಹೊಂದಿ ಜೀವಿಸುವುದು ಅತ್ಯಂತ ಸುಲಭ ಸಂಗತಿ, ಆದರೆ ತಪ್ಪಾದ ಜೀವಿತವನ್ನು ಸಾಗಿಸುವುದು ನಿಜವಾಗಿಯೂ ಅತ್ಯಂತ ಕಷ್ಟಕರವಾದ ಸಂಗತಿ.

ನಾವು ಪಾಪದಿಂದ ಬಿಡುಗಡೆಯಾಗುತ್ತಿದ್ದೇವೆಂಬುದನ್ನು ನಾವು ಯೋಚಿಸುವಾಗ ಮತ್ತು ಪವಿತ್ರಾತ್ಮಭರಿತರಾಗಿದ್ದೇವೆಂದು ಯೋಚಿಸುವಾಗ (ಎಫೆ 5:18) ಮತ್ತು 'ಬೆಳಕಿನಲ್ಲಿ ನಡೆ' ಎಂಬುದನ್ನು ಮನನ ಮಾಡುವಾಗ, ನಾವು ಅಂತೆಯೇ ಇರಬೇಕೆಂದು ಬಯಸಿದಾಗ, ಮಹಾನ್ ಪರ್ವತದ ತುತ್ತ ತುದಿಯ ಚೂಪಾದ ಚಿತ್ರವನ್ನು ಊಹಿಸಿಕೊಂಡು 'ಅಬ್ಬಾ ! ಅದೆಷ್ಟು ಎತ್ತರವಾಗಿದೆ, ಅದೆಷ್ಟು ಅದ್ಭುತ ವಾಗಿದೆ ! ಓಹ್ ನಾನೆಂದೂ ಅಲ್ಲಿ ಜೀವಿಸಲಾರೆ' ಎಂದು ಹೇಳುತ್ತೇವೆ. ದೇವರ ದಯೆದಿಂದ ನಾವು ನಿಜವಾಗಿಯೂ ಆ ತುದಿಯನ್ನು ಸೇರಿದರೆ, ಅಲ್ಲಿ ವಿಶಾಲವಾಗಿ ಹರಡಿಕೊಂಡಿರುವ ಸಮತಲವನ್ನು ಮತ್ತು ಬದುಕಿ ಬಾಳಲು ಬೇಕಾದಷ್ಟು ಅವಕಾಶವಿರುವುದನ್ನು ಕಾಣುತ್ತೇವೆ. ''ನೀನು ನನ್ನ ಕಾಲುಗಳಿಗೆ ವಿಶಾಲ ಸ್ಥಳವನ್ನು ಕೊಟ್ಟದ್ದರಿಂದ ನನ್ನ ಹರಡುಗಳು ಕದಲುವುದಿಲ್ಲ'' (ಕೀರ್ತ 18:36)

ಯೇಸುಕ್ರಿಸ್ತನನ್ನು ನಿಜವಾಗಿಯೂ ನೋಡಿದ ನೀನು, ಆತನ ವಿಷಯದಲ್ಲಿ ಇನ್ನೂ ಸಂದೇಹ ಪಡುವುದನ್ನು ನಾನು ವಿರೋಧಿಸುತ್ತೇನೆ. ''ನಿನ್ನ ಹೃದಯವು ಕಳವಳಗೊಳ್ಳದಿರಲಿ'' (ಯೋಹಾನ 14:27) ಎಂದು ಹೇಳುವ ಯೇಸುಕ್ರಿಸ್ತನನ್ನು ನೋಡಿದ ನೀನು ಕಳವಳ ಪಡುವುದನ್ನು ನಾನು ವಿರೋಧಿ ಸುತ್ತೇನೆ. ನೀನು ನೋಡುವ 'ಆತನು' ಅಲ್ಲಿರುವಾಗ ಆತನನ್ನು ಸಂಶಯಿಸುವುದು ಒಂದು ನೈತಿಕ ಅಸಾಧ್ಯತೆಯಾಗಿದೆ. ಯೇಸುಕ್ರಿಸ್ತನೊಂದಿಗೆ ವೈಯಕ್ತಿಕ ಸಂಪರ್ಕಬಂದ ಸಮಯದಲ್ಲಿಯೂ, ಆತನ ಮಾತುಗಳು ಸತ್ಯವೇ ಆಗಿರುತ್ತವೆ. 'ನನ್ನಲ್ಲಿರುವ ಶಾಂತಿಯನ್ನು ನಿಮಗೆ ಕೊಡುತ್ತೇನೆ' (ಯೋಹಾ 14:27) ನಿನ್ನ ಮುಡಿಯಿಂದ ಅಡಿಯವರೆಗೂ ಆತನ ಶಾಂತಿ ತುಂಬಿರುತ್ತದೆ. ಅದು ಹತ್ತಿಕ್ಕಲ ಸಾಧ್ಯವಾದ ಭರವಸೆಯಿಂದ ಕೂಡಿದೆ. ''ನಿಮ್ಮ ಜೀವವು ಕ್ರಿಸ್ತನೊಂದಿಗೆ ದೇವರಲ್ಲಿ ಮರೆಯಾಗಿಟ್ಟದೆ''. ಯೇಸುಕ್ರಿಸ್ತನ ಕಲುಕಲಸಾಧ್ಯವಾದ ಶಾಂತಿಯು ನಮಗೆ ಅನುಗ್ರಹಿಸಲ್ಪಟ್ಟಿದೆ.

# ಆತನ ಜನನ ಮತ್ತು ನಮ್ಮ ನೂತನ ಜನನ

**''ಇಗೋ, ಒಬ್ಬ ಕನ್ನಿಕೆಯು ಗರ್ಭಿಣಿಯಾಗಿ ಮಗನನ್ನು ಹಡೆದು ಅವನಿಗೆ ಇಮ್ಮಾನುವೇಲ್ ಎಂದು ಹೆಸರಿಡುವಳು – ದೇವರು ನಮ್ಮ ಕೂಡ ಇದ್ದಾನೆಂದು ಈ ಹೆಸರಿನ ಅರ್ಥ''**
**– (ಯೆಶಾ 7:14 ಮತ್ತು ಮತ್ತಾ 1:23)**

ಇತಿಹಾಸದಲ್ಲಿ ಆತನ ಜನನ : ''ಅದರಿಂದ ಹುಟ್ಟುವ ಪವಿತ್ರ ಶಿಶು ದೇವರ ಮಗನೆನಿಸಿ ಕೊಳ್ಳುವುದು'' (ಲೂಕ 1:35) ಯೇಸುಕ್ರಿಸ್ತನು ಈ ಲೋಕದೊಳಗಡೆಗೆ ಹುಟ್ಟಿಬಂದನು. ಆತನು ಲೋಕದಿಂದ ಹುಟ್ಟಿ ಬರಲಿಲ್ಲ, ಆತನು ಇತಿಹಾಸದೊಳಗಿಂದ ಉದಯಿಸಿ ಬರಲಿಲ್ಲ ; ಆತನು ಹೊರಗಿನಿಂದ ಇತಿಹಾಸದ ಒಳಗೆ ಪ್ರವೇಶಿಸಿದನು. ಯೇಸುಕ್ರಿಸ್ತನು ಒಬ್ಬ ಅತ್ಯುತ್ತಮನಾದ ಮಾನವನಲ್ಲ, ಆತನು ಮಾನವ ಕುಲದಲ್ಲಿ ಗಣಿಸಲಾಗದಂಥವನು. ಮನುಷ್ಯನು ದೇವರಂತೆ ಆಗಿರುವಾತನಲ್ಲ, ದೇವರ ನರಾವತಾರವೇ ಆತನು, ಅಂದರೆ ದೇವರು ನರಸ್ವರೂಪದೊಳಗೆ ಪ್ರವೇಶಿಸಿದನು – ಹೊರಗಿನಿಂದ ನರನೊಳಗೆ ಪ್ರವೇಶ ಮಾಡಿದನು. ಆತನ ಜೀವವು ಪರಮೋನ್ನತವಾದದ್ದು ಮತ್ತು ಪರಮಪವಿತ್ರವಾದದ್ದು ; ಆತನು ಅತ್ಯಂತ ದೀನದ್ವಾರದ ಮೂಲಕ ಈ ಲೋಕದೊಳಗೆ ಪ್ರವೇಶ ಮಾಡಿದನು. ನಮ್ಮ ಪ್ರಭುವಾದ ಯೇಸುಕ್ರಿಸ್ತನ ಜನನವು ಒಂದು ಆಗಮಿಸುವಿಕೆಯಾಗಿದೆ.

ನನ್ನೊಳಗೆ ಆತನ ಜನನ: ''ಕ್ರಿಸ್ತನ ಸಾರೂಪ್ಯವು ನಿಮ್ಮಲ್ಲಿ ಉಂಟಾಗುವ ತನಕ ನಿಮಗೋಸ್ಕರ ತಿರುಗಿ ಪ್ರಸವವೇದನೆ ಪಡುತ್ತೇನೆ.'' (ಗಲಾತ್ಯ 4:19) ನಮ್ಮ ಪ್ರಭುವಾದ ಯೇಸುಕ್ರಿಸ್ತನು ಹೊರಗಿನಿಂದ ಇತಿಹಾಸದೊಳಗೆ ಹೇಗೆ ಪ್ರವೇಶ ಮಾಡಿದನೋ ಹಾಗೆಯೇ, ಆತನು ನನ್ನೊಳಗೆ ಹೊರಗಿನಿಂದ ಪ್ರವೇಶ ಮಾಡಬೇಕು. ನನ್ನ ವ್ಯಕ್ತಿಗತ ಮಾನವಜೀವಿತವನ್ನು ದೇವಕುಮಾರನಿಗೆ 'ಬೆತ್ಲೆಹೇಮ್' ಆಗಲು ಆಸ್ಪದ ಮಾಡಿಕೊಟ್ಟಿರುವೆನೋ? ನನ್ನ ಸ್ವಾಭಾವಿಕ ಜನನದಂತೆ ಅಲ್ಲ, ಆದರೆ ಮೇಲಣದಿಂದಾಗುವ ಒಂದು ಜನಿಸುವಿಕೆಯಿಂದ ನಾನು ಹೊಸದಾಗಿ ಹುಟ್ಟದಿದ್ದರೆ ದೇವರ ರಾಜ್ಯದ ಸೀಮೆಯಲ್ಲಿ ಪ್ರವೇಶಿಸಲಾರೆನು. ''ನೀವು ಹೊಸದಾಗಿ ಹುಟ್ಟಬೇಕು'' (ಯೋಹಾನ 3:7) ಇದು ಒಂದು ಆಜ್ಞೆಯಲ್ಲ, ದೇವರ ಸರ್ವಾಧಿಕಾರದ ಮೇಲೆ ಆಧಾರಗೊಂಡ ಪರಮ ಸತ್ಯ. ಹೊಸದಾಗಿ ಹುಟ್ಟಿರುವಿಕೆಯ ಗುಣಲಕ್ಷಣಗಳೆಂದರೆ ಯೇಸುಕ್ರಿಸ್ತನು ನನ್ನೊಳಗೆ ರೂಪಿಸಲ್ಪಡುವಷ್ಟರ ಮಟ್ಟಿಗೆ ನಾನು ದೇವರಿಗೆ ಒಳಪಟ್ಟಿರಬೇಕು. ಯೇಸುಕ್ರಿಸ್ತನು ನನ್ನಲ್ಲಿ ರೂಪುಗೊಂಡ ಕೂಡಲೇ ಆತನ ಸ್ವಭಾವವು ನನ್ನ ಮೂಲಕ ಕಾರ್ಯಾರಂಭ ಮಾಡುತ್ತದೆ.

ದೇವರು ನರನಲ್ಲಿ ಪ್ರತ್ಯಕ್ಷನಾದನು. ದೇವರು ಮಾಡಿದ ಪಾಪವಿಮೋಚನೆಯಿಂದ ಇಂಥಾ ಒಂದು ಗಹನವು, ಅಂದರೆ ಮನುಷ್ಯನನ್ನು ಪಾಪಗಳಿಂದ ಬಿಡುಗಡೆ ಮಾಡಿದ ಯೇಸುಕ್ರಿಸ್ತನ ಯಜ್ಞವು ನನ್ನಲ್ಲಿಯೂ ಮತ್ತು ನಿನ್ನಲ್ಲಿಯೂ ನೆರವೇರಲು ಸಾಧ್ಯವಾಯಿತು.

# ಬೆಳಕಿನಲ್ಲಿ ನಡೆಯುವುದು

**''ಆದರೆ ಆತನು ಬೆಳಕಿನಲ್ಲಿರುವಂತೆಯೇ ನಾವು ಬೆಳಕಿನಲ್ಲಿ ನಡೆದರೆ ಆತನ ಮಗನಾದ ಯೇಸುವಿನ ರಕ್ತವು ಸಕಲ ಪಾಪವನ್ನು ನಿವಾರಣೆ ಮಾಡಿ ನಮ್ಮನ್ನು ಶುದ್ಧಿ ಮಾಡುತ್ತದೆ'' – (1 ಯೋಹಾ 1:7)**

ನಾವು ಪಾಪದ ಸ್ವಾಧೀನತೆಯಲ್ಲಿಲ್ಲವೆಂದು ನಮ್ಮ ಪ್ರಜ್ಞಾ ಜೀವಿತದ ಮಟ್ಟದಲ್ಲಿರುವ ನಮ್ಮ ಅರಿವನ್ನೇ ಯೇಸುಕ್ರಿಸ್ತನು ಶಿಲುಬೆಯ ಮೇಲೆ ಮಾಡಿದ, ಪ್ರಾಯಶ್ಚಿತ್ತ ಯಜ್ಞದಿಂದುಂಟಾದ ಪಾಪ ವಿಮೋಚನೆ ಎಂದು ತಪ್ಪಾಗಿ ಗ್ರಹಿಸುವುದೊಂದು ದೊಡ್ಡ ತಪ್ಪು. ಒಬ್ಬ ವ್ಯಕ್ತಿಯು ತಾನು ಹೊಸದಾಗಿ ಹುಟ್ಟುವ ತನಕ ಪಾಪವೆಂದರೇನು ಎಂಬುದನ್ನು ಅರಿಯುವುದಿಲ್ಲ. ಯೇಸುಕ್ರಿಸ್ತನು ಕಲ್ವಾರಿಯಲ್ಲಿ ಏನನ್ನು ಎದುರಿಸಿದನೋ ಅದೇ ಪಾಪ. ನಾನು ಪಾಪದಿಂದ ಬಿಡುಗಡೆ ಹೊಂದಿರುವುದಕ್ಕೆ ಸಾಕ್ಷಿಯೇನೆಂದರೆ ನನ್ನೊಳಗಿರುವ ನಿಜವಾದ ಪಾಪಸ್ವಭಾವವನ್ನು ನಾನು ತಿಳಿದಿರುತ್ತೇನೆ. ಪಾಪ ವೆಂದರೇನು ಎಂಬುದನ್ನು ಒಬ್ಬನು ತಿಳಿಯಬೇಕಾದರೆ, ಯೇಸುಕ್ರಿಸ್ತನು ಮಾಡಿದ ಪ್ರಾಯಶ್ಚಿತ ಯಜ್ಞದ ಆಳವಾದ ಅಂತಿಮ ಅರಿವು ಮತ್ತು ಆತನು ತನ್ನ ಪರಿಪೂರ್ಣತೆಯನ್ನು ಅವನಿಗೆ ಅನುಗ್ರಹಿಸ ಬೇಕಾಗುತ್ತದೆ.

ಇಂಥಾ ಪ್ರಾಯಶ್ಚಿತ ಯಜ್ಞದ ಫಲವನ್ನು ಪರಿಶುದ್ಧಾತ್ಮನು ನಮ್ಮ ಜೀವಿತದ ಪ್ರಜ್ಞಾರಹಿತ ವಲಯದಲ್ಲಿಯೂ, ಪ್ರಜ್ಞಾಭರಿತ ವಲಯದಲ್ಲಿಯೂ ಅನುಷ್ಠಾನಗೊಳಿಸುತ್ತಾನೆ, ನಮ್ಮೊಳಗಿರುವ ಎಣೆಯಿಲ್ಲದ ಪವಿತ್ರಾತ್ಮನ ಬಲವನ್ನು ನಾವು ಗ್ರಹಿಸಿದಾಗ ಮಾತ್ರವೇ 1 ಯೋಹಾನ 1:7 ರಲ್ಲಿರುವ ವಾಕ್ಯಾರ್ಥವನ್ನು ಅರಿಯುತ್ತೇವೆ. ''ಯೇಸುವಿನ ರಕ್ತವು ಸಕಲ ಪಾಪವನ್ನು ನಿವಾರಣ ಮಾಡಿ ನಮ್ಮನ್ನು ಶುದ್ಧಿ ಮಾಡುತ್ತದೆ'' ಈ ವಾಕ್ಯವು ನಮ್ಮ ಪ್ರಜ್ಞಾಪಾಪಗಳಿಗೆ ಅನ್ವಯವಾಗುವುದಷ್ಟಲ್ಲದೆ, ಪಾಪದ ಬಗ್ಗೆ ಅಪಾರ ತಿಳುವಳಿಕೆಯುಳ್ಳ ಪವಿತ್ರಾತ್ಮನು ಮಾತ್ರ ಅರಿಯಬಲ್ಲ ನನ್ನ ಅಂತರಂಗದ ಪಾಪಗಳಿಗೂ ಅನ್ವಯವಾಗುತ್ತದೆ.

'ಆತನು ಬೆಳಕಿನಲ್ಲಿರುವಂತೆಯೇ ನಾನೂ ಬೆಳಕಿನಲ್ಲಿ ನಡೆದರೆ' – ನನ್ನ ಮನಸ್ಸಾಕ್ಷಿಯ ಬೆಳಕಿನಲ್ಲಿಯಲ್ಲ; ದೇವರ ಬೆಳಕಿನಲ್ಲಿ ನಡೆಯಬೇಕು. ಒಂದನ್ನೂ ಮರೆಮಾಡದೆ ನಾನು ಆ ಬೆಳಕಿನಲ್ಲಿ ನಡೆದರೆ, ಆಗ ಅಮೋಘ ಸತ್ಯವು ಪ್ರಕಟವಾಗುತ್ತದೆ – ಯೇಸುಕ್ರಿಸ್ತನ ರಕ್ತವು ನನ್ನ ಸಕಲ ಪಾಪಗಳನ್ನು ತೊಳೆದು ಬಿಟ್ಟಿರುವುದರಿಂದ, ನನ್ನನ್ನು ಖಂಡಿಸಿ ತೀರ್ಪು ಕೊಡಲು ಸರ್ವಶಕ್ತನಾದ ದೇವರಿಗೆ ನನ್ನಲ್ಲಿ ದೋಷವೇನೂ ಕಾಣಿಸುವುದಿಲ್ಲ. ಈ ಅದ್ಭುತವು, ಪಾಪವೆಂದರೇನು ಎಂಬುವ ಹೃದಯ ಛೇದನ ತಿಳುವಳಿಕೆಯಿಂದ ನನ್ನ ಜಾಗೃತ ಜೀವಿತದಲ್ಲಿ ಕಾರ್ಯವೆಸಗುತ್ತದೆ. ದೇವರ ಮಹಾಪರಿಶುದ್ಧತೆಗೆ ತಕ್ಕಂತೆ ಇರಲಾರದವುಗಳನ್ನು ಪರಿಶುದ್ಧಾತ್ಮನು ಎಷ್ಟು ಪರಿಯಾಗಿ ದ್ವೇಷಿಸುವನೋ, ಹಾಗೆಯೇ ನಾನು ಸಹಾ ದ್ವೇಷ ಮಾಡುವಂತೆ ದೇವರ ಪ್ರೀತಿಯು ನನ್ನೊಳಗೆ ಕಾರ್ಯವೆಸಗುತ್ತದೆ. ಬೆಳಕಿನಲ್ಲಿ ನಡೆಯುವುದೆಂದರೆ, ಕತ್ತಲೆಗೆ ಸಂಬಂಧಪಟ್ಟವುಗಳೆಲ್ಲವೂ ಬಹಿರಂಗಗೊಂಡು ನನ್ನನ್ನು ಬೆಳಕಿನ ಮೂಲದ ಕಡೆಗೆ ಓಡಿಸಿಬಿಡುತ್ತದೆ.

# ಯುದ್ಧವೆಲ್ಲಿ ಸೋತಿತು ಮತ್ತು ಎಲ್ಲಿ ಜಯಿಸಿತು

**''ಇಸ್ರಾಯೇಲೇ, ನೀನು ಹಿಂದಿರುಗುವಿಯಾದರೆ ನನ್ನ ಬಳಿಗೆ ಬರುವಿ'' – (ಯೆರೆ 4:1)**

ನಮ್ಮ ಸಂಕಲ್ಪಶಕ್ತಿಯ ರಹಸ್ಯಸ್ಥಳಗಳಲ್ಲಿ ಪ್ರಥಮವಾಗಿ ದೇವರೆದುರಿಗೆ ನಾವು ನಡೆಸುವ ಹೋರಾಟಗಳಲ್ಲಿ ಜಯವನ್ನು ಗಳಿಸಿರುತ್ತೇವೆ, ಇಲ್ಲವೇ ಅಪಜಯ ಹೊಂದಿರುತ್ತೇವೆ. ಆದರೆ ಈ ಹೋರಾಟವು ಎಲ್ಲರೂ ನೋಡಬಹುದಾದ ಬಹಿರಂಗ ವಲಯಗಳಲ್ಲಿ ನಡೆಯುವುದಿಲ್ಲ. ದೇವರ ಆತ್ಮನು ನನ್ನನ್ನು ಹಿಡಿದು, ನಾನು ಆತನೊಂದಿಗೆ ಒಬ್ಬೊಂಟಿಗನಾಗಿರುವಂತೆ ಕಟ್ಟುಪಾಡು ಮಾಡುತ್ತಾನೆ, ಆ ಏಕಾಂತಸ್ಥಳದಲ್ಲಿ ದೇವರ ಸಮ್ಮುಖದಲ್ಲಿ ಯುದ್ಧ ಮಾಡಬೇಕು. ಮೊದಲು ಅಲ್ಲಿ ಯುದ್ಧ ಮಾಡದಿರುವ ತನಕ, ಬಾಹ್ಯ ಜೀವಿತದ ಎಲ್ಲಾ ಸಮಸ್ಯೆಗಳಲ್ಲಿಯೂ, ಸೋತುಹೋಗುತ್ತೇನೆ. ಈ ಹೋರಾಟಕ್ಕೆ ಒಂದೇ ನಿಮಿಷ ಸಾಕಾಗಬಹುದು. ಅಥವಾ ವರ್ಷವೇ ಬೇಕಾಗಬಹುದು. ಅದು ನನ್ನನ್ನು ಅವಲಂಬಿಸಿದೆಯೇ ಹೊರತು ದೇವರ ಮೇಲೆ ಅಲ್ಲ; ಎಷ್ಟೇಕಾಲವಾದರೂ ಈ ಯುದ್ಧ ಮಾತ್ರ ದೇವರ ಎದುರಿನಲ್ಲಿ, ಏಕಾಂಗಿ ಯಾಗಿ ನಡೆಯಲೇಬೇಕಾಗಿದೆ. ಅದಕ್ಕಾಗಿ ಸರ್ವತ್ಯಾಗದ ಮತ್ತು ನಿರಾಕರಣೆಯ ನರಕದ ಮೂಲಕ ಸಾಗುವ ದೃಢ ನಿಶ್ಚಯದಿಂದ ಹೋರಾಟ ಮಾಡಬೇಕಾಗಿದೆ. ದೇವರ ಎದುರಿನಲ್ಲಿ ಹೋರಾಟ ಮಾಡಿ ಜಯಗೊಂಡ ವ್ಯಕ್ತಿಯ ಮೇಲೆ ಲೋಕದ ಯಾವ ಶಕ್ತಿಯೂ ಏನೂ ಮಾಡಲಾರದು.

''ಮೊದಲು ಒಂದು ದೊಡ್ಡ ಬಿಕ್ಕಟ್ಟಿನ ಸನ್ನಿವೇಶಕ್ಕೊಳಗಾಗುವವರೆಗೆ ಕಾದಿರುವೆನು, ಅನಂತರ ದೇವರನ್ನು ಪರೀಕ್ಷಿಸಿದರಾಯಿತು'' ಎಂದು ನಾನು ಹೇಳಿದರೆ ನಿಜವಾಗಿಯೂ ಅಂಥ ಕ್ಲಿಷ್ಟ ಸ್ಥಿತಿ ಯುಂಟಾದಾಗ ನಾನೇನೂ ಮಾಡಲಾರೆ. ಅದಕ್ಕಿಂತ ಮೊದಲೇ, ನನ್ನ ಆತ್ಮನ ರಹಸ್ಯ ಸ್ಥಳಗಳಲ್ಲಿ – ಎಲ್ಲಿ ಪರಕೀಯರು ತಲೆ ಹಾಕುವುದಿಲ್ಲವೋ ಅಲ್ಲಿ ದೇವರ ಮತ್ತು ನನ್ನ ನಡುವೆ ಎಲ್ಲವನ್ನೂ ಪರಿಹರಿಸಿ ಕೊಳ್ಳಬೇಕು, ಅನಂತರ, ಯುದ್ಧದಲ್ಲಿ ಜಯಗೊಳಿಸಿಯೇ ತೀರುವೆನೆಂಬ ದೃಢ ವಿಶ್ವಾಸದಿಂದ ಹೋರಾಟಕ್ಕಿಳಿಯಬೇಕು. ಹಾಗೆ ಮಾಡದೆ ಯುದ್ಧದಲ್ಲಿ ನಾನು ಸೋತು ಹೋದರೆ ಘೋರವಿಪತ್ತು, ಸರ್ವನಾಶನ ಮತ್ತು ಅಸ್ತವ್ಯಸ್ತತೆಗಳು ದೇವರ ತೀರ್ಪಿಗನುಸಾರ ನನ್ನನ್ನು ಆವರಿಸಿ ಬಿಡುತ್ತವೆ. ನಾನೇಕೆ ಮೊದಲು ಇಲ್ಲಿಯೇ ಗೆಲ್ಲಲಿಲ್ಲವೆಂದರೆ, ಪ್ರಪಂಚದ ಬಾಹ್ಯರಂಗದಲ್ಲಿ ಮೊದಲು ಯುದ್ಧ ಮಾಡಿ ಜಯಗಳಿಸುವ ಪ್ರಯತ್ನ ಮಾಡಿದ್ದೆನಷ್ಟೆ. ದೇವರ ಸಂಗಡ ಏಕಾಂತವಾಗಿರುವ ಸ್ಥಳವನ್ನು ಹುಡುಕಿ ಕೊಂಡು ಆತನ ಸಮ್ಮುಖದಲ್ಲಿಯೇ ಯುದ್ಧ ಮಾಡಿ ಅಂತಿಮವಾಗಿ ವಿಷಯಗಳನ್ನು ತೀರ್ಮಾನಿಸಿ ಕೊಳ್ಳಬೇಕು.

ಇತರರೊಂದಿಗೆ ವ್ಯವಹರಿಸುತ್ತಿರುವಾಗ ಅವರ ಇಚ್ಛೆಯ ಸಮಸ್ಯೆಯನ್ನು ಅವರ ಮುಂದಿಡುವ ಸೂತ್ರವನ್ನನುಸರಿಸಬೇಕು. ದೇವರಿಗಾಗಿ ಮಾಡಬೇಕಾದ ತ್ಯಾಗವು ಆರಂಭವಾಗುವ ದಾರಿಯೇ ಅದು. ಯಾವಾಗಲೂ ಅಲ್ಲ, ಆಗಾಗ್ಗೆ, ಕೆಲವು ಸಮಯಗಳಲ್ಲಿ ದೇವರು ಅಂಥಾ ತೀರ್ಮಾನ ಕೈಗೊಳ್ಳಬೇಕಾದ ನಮ್ಮ ಸಂಕಲ್ಪ ಶಕ್ತಿಯನ್ನು ಅದರ ಪರಮಾವಧಿಯ ತುತ್ತತುದಿಗೆ ಬರಮಾಡುವನು. ಜೀವಿತದ ಮಹಾ ವಿಭಜನೆಯು ಅಲ್ಲಿಂದಲೇ ಆರಂಭವಾಗುತ್ತದೆ. ಆ ಸ್ಥಳದಿಂದಲೇ ನಾವು ಹೆಚ್ಚು ಹೆಚ್ಚು ಕಾಲಹರಣ ಮಾಡುವ ಮತ್ತು ಕೆಳಮಟ್ಟದ ಕ್ರಿಸ್ತೀಯ ಜೀವಿತವನ್ನು ಬಾಳುವ ಕಡೆಗೆ ಸಾಗುತ್ತೇವೆ ಅಥವಾ ದೇವರ ಮಹಿಮೆಗಾಗಿ ಪ್ರಜ್ವಲಿಸುವ ಕಡೆಗೆ ಹೊರಳಿ ಬಿಡುತ್ತೇವೆ. ''ನನ್ನ ಆದ್ಯಂತವೆಲ್ಲಾ ಆತನ ಪರಮೋನ್ನತತೆಗಾಗಿ''

# ಎಡೆಬಿಡದ ಪರಿವರ್ತನೆ

**''ನೀವು ತಿರುಗಿಕೊಂಡು ಚಿಕ್ಕಮಕ್ಕಳಂತೆ ಆಗದೆ ಹೋದರೆ'' - (ಮತ್ತಾ 18:3)**

ನಮ್ಮ ಪರಿವರ್ತನೆಯ ಪ್ರಥಮದಲ್ಲಿ ಯೇಸುಕ್ರಿಸ್ತನ ಈ ವಾಕ್ಯಗಳು – ಹೊಸ ಸ್ವಭಾವವನ್ನು ಧರಿಸಿಕೊಂಡ ಪ್ರಥಮದಲ್ಲಿ – ತುಂಬಾ ಸರಳವಾಗಿ ಕಾಣುತ್ತವೆ. ನಮ್ಮ ಜೀವಿತ ಕಾಲವೆಲ್ಲಾ ಮಕ್ಕಳಂತೆ ನಾವು ದೇವರ ಕಡೆಗೆ ತಿರುಗಿಕೊಂಡು ಸದಾ ಪರಿವರ್ತಿತರಾಗುತ್ತಲೇ ಇರಬೇಕು. ಈ ಪ್ರಕ್ರಿಯೆಯಲ್ಲಿ ದೇವರ ಮೇಲೆ ಭರವಸವಿಡದೆ, ನಮ್ಮ ಬುದ್ಧಿಚಾತುರ್ಯಗಳ ಮೇಲೆ ಭರವಸವಿಡುವುದರಿಂದ ದೇವರು ನಮ್ಮನ್ನು ಹೊಣೆಗಾರರನ್ನಾಗಿ ಮಾಡುವಂಥಾ ಪರಿಣಾಮಗಳನ್ನುಂಟು ಮಾಡುತ್ತೇವೆ. ದೇವರು ತನ್ನ ಕೃಪಾ ಕನಿಕರಗಳಿಂದ ನಮ್ಮನ್ನು ಪರಿವರ್ತಿತ ಸ್ಥಿತಿಗತಿಗೆ ಬರಮಾಡಿದ ಕೂಡಲೇ ನಮ್ಮ ಸ್ವಾಭಾವಿಕ ಜೀವಿತವು ದೇವರಾತ್ಮನ ಆದೇಶಗಳಿಗೆ ವಿಧೇಯವಾಗುವಂತೆ ನಾವು ನೋಡಿಕೊಳ್ಳಬೇಕು. ಯಾಕೆಂದರೆ ಹಿಂದೊಮ್ಮೆ ನಾವು ಪರಿವರ್ತನೆಗೊಂಡು ವಿಧೇಯರಾಗಿ ರುವುದರಿಂದ ಮುಂದೆಯೂ ಹಾಗೆಯೇ ಇರುವೆ ವೆಂಬುದು ಖಚಿತವಲ್ಲ. ಸ್ವಾಭಾವಿಕ ಜೀವಿತದೊಂದಿಗೆ ಆತ್ಮೀಕ ಜೀವಿತಕ್ಕಿರುವ ಸಂಬಂಧವು ನಿರಂತರ ವಾದ ಪರಿವರ್ತನೆಗೊಳಗಾಗುತ್ತಲೇ ಇರಬೇಕು. ಆದರೆ ನಾವು ಇದನ್ನೇ ಬೇಡವೆನ್ನುತ್ತೇವೆ. ನಮ್ಮನ್ನಿರಿಸ ಲಾಗಿರುವ ಪ್ರತಿಯೊಂದು ಸನ್ನಿವೇಶದಲ್ಲಿ ದೇವರ ಆತ್ಮನು ಮಾತ್ರ ಎಂದಿಗೂ ಬದಲಾಗುವುದಿಲ್ಲ. ಆತನು ಮಾಡಿರುವ ರಕ್ಷಣಾ ಕಾರ್ಯವು ಪರಿವರ್ತನೆಗೊಳ್ಳುವುದಿಲ್ಲ. ಆದರೂ ನಾವು ಮಾತ್ರ ಪರಿವರ್ತಿತರಾಗುತ್ತಲೇ ಇರಬೇಕು ಮತ್ತು ನಾವು ನೂತನ ಸ್ವಭಾವವನ್ನು ಧರಿಸಿಕೊಳ್ಳಬೇಕು. (ಎಫೆ 4:24). ನಮ್ಮನ್ನು ನಾವು ಪರಿವರ್ತಿಸಿಕೊಳ್ಳಲು ನಿರಾಕರಿಸುವ ಪ್ರತಿ ಸಮಯದಲ್ಲಿಯೂ, ಆತನು ನಮ್ಮನ್ನು ಹೊಣೆಗಾರರನ್ನಾಗಿ ಮಾಡುತ್ತಾನೆ, ಉದ್ದೇಶಪೂರ್ವಕವಾದ ನಮ್ಮ ಹಠಮಾರಿತನದಿಂದಲೇ ನಾವು ಪರಿವರ್ತನೆಯನ್ನು ನಿರಾಕರಿಸುತ್ತೇವೆ. ಸ್ವಾಭಾವಿಕ ಜೀವಿತವು ನಮ್ಮನ್ನಾಳಬಾರದು, ದೇವರೇ ನಮ್ಮನ್ನು ಆಳಬೇಕು.

ನಮ್ಮ ಆತ್ಮೀಕ ಜೀವಿತದಲ್ಲಿರುವ ಅಡೆತಡೆಯೆಂದರೆ, ನಾವು ಸತತವಾಗಿ ಪರಿವರ್ತನೆಗೊಳ ಗಾಗದೆ ಇರುವುದೇ. ಮೊಂಡುತನದ ದೊಡ್ಡಭಾಗವೊಂದು ನಮ್ಮ ಸ್ವಭಾವದಲ್ಲಿದ್ದಾಗ, ನಮ್ಮ ಅಹಂಕಾರವು ದೇವರ ಕಡೆಗೆ ದೃಷ್ಟಿಸಿ 'ನಾನು ಅದನ್ನು ಮಾಡುವುದಿಲ್ಲ' ಎಂದು ಹೇಳುತ್ತದೆ, ನಿರಂತರ ಪರಿವರ್ತನೆ ನನಗೆ ಬೇಡವಾಗಿದೆ. ನಮಗಿರುವ ಸ್ವಾತಂತ್ರ್ಯವನ್ನು, ನಮ್ಮ ಹಠಮಾರಿತನವನ್ನು, ದೈವೀಕರಿಸಿ ಅವುಗಳನ್ನು ತಪ್ಪಾದ ಹೆಸರಿನಿಂದ ಹಿತವಾಗಿ ಕರೆಯುತ್ತೇವೆ. ದೇವರು ಯಾವ ಹಠಮಾರಿ ತನವನ್ನು ಬಲಹೀನತೆ ಎಂದು ಕರೆದಿರುವನೋ ಅದನ್ನೆ ನಾವು ಬಲಭರಿತವೆಂದು ಕರೆಯುತ್ತೇವೆ. ಸ್ವಾಧೀ ನಕ್ಕೊಳ ಪಡಿಸಲಾಗದ ಇಡೀ ಕ್ಷೇತ್ರಗಳು ನಮ್ಮೊಳಗೆ ಇದ್ದೇ ಇವೆ. ಎಡೆಬಿಡದ ಪರಿವರ್ತನೆಯ ಮೂಲಕ ಮಾತ್ರವೇ ಅವುಗಳನ್ನು ಸ್ವಾಧೀನಕ್ಕೊಳಪಡಿಸಬಹುದು. ಸಾವಧಾನವಾದರೂ ಸರಿಯೇ, ಖಂಡಿತವಾಗಿ ನಮ್ಮ ಜೀವಿತದ ಎಲ್ಲಾ ಕ್ಷೇತ್ರಗಳನ್ನು ದೇವರಾತ್ಮನ ಸ್ವಾಧೀನಕ್ಕೊಳಪಡಿಸಬಲ್ಲೆವು.

# ಹಿಂಜರಿಯುವವನೋ ಇಲ್ಲವೇ ಶಿಷ್ಯನೋ?

**''ಆತನ ಶಿಷ್ಯರಲ್ಲಿ ಅನೇಕರು ಹಿಂಜರಿದು, ಆತನ ಕೂಡ ಸಂಚಾರ ಮಾಡುವುದನ್ನು ಬಿಟ್ಟರು''**
**– (ಯೋಹಾ 6:66)**

ದೇವರು ತಾನು ಅಪೇಕ್ಷಿಸುವುದನ್ನು ತನ್ನ ವಾಕ್ಯಗಳ ಮೂಲಕ ತನ್ನ ಆತ್ಮನಿಂದ ಒಂದು ದರ್ಶನ ವನ್ನು ದಯಪಾಲಿಸಿದಾಗ, ನಿನ್ನ ಮನಸ್ಸೂ, ನಿನ್ನ ಆತ್ಮವೂ ಪುಳಕಿತಗೊಳ್ಳುತ್ತವೆ; ಆ ದರ್ಶನದ ಬೆಳಕಿನಲ್ಲಿ ನೀನು ನಡೆಯದಿದ್ದರೆ, ಯೇಸುಸ್ವಾಮಿಯ ದೃಷ್ಟಿಯಲ್ಲಿ , ಎಂದೂ ಇರದಿದ್ದ ದೃಷ್ಟಿಕೋನಕ್ಕೆ ದಾಸನಾಗಿ ಬಿಡುವೆ. (1 ಯೋಹಾ 1:7) ಸ್ವರ್ಗೀಯ ದರ್ಶನಕ್ಕೆ, ನಿನ್ನ ಹೃದಯದಲ್ಲಿ ತೋರಿಸುವ ಬೌದ್ಧಿಕ ಅವಿಧೇಯತೆಯು (ಅ.ಕೃ. 26:19) ಯೇಸುಕ್ರಿಸ್ತನಿಗೆ ಪರಕೀಯವೂ, ಅಸಂಗತವೂ ಆದ ಬೇರೊಂದು ನಿಲುವಿಗೆ ನಿನ್ನನ್ನು ದಾಸನನ್ನಾಗಿ ಮಾಡುತ್ತದೆ. ಬೇರೆ ಒಬ್ಬನನ್ನು ನೋಡಿ – ''ಅದು ಸರಿ, ನನ್ನಂಥದ್ದೇ ನಿಲುವನ್ನು ಹೊಂದಿರುವ ಅವನು ಅಭಿವೃದ್ಧಿ ಹೊಂದುತ್ತಿರುವಾಗ ನಾನೇಕೆ ಅದನ್ನು ಹೊಂದಿರ ಬಾರದು'' ಎಂದು ಹೇಳಬೇಡ, ದೇವರು ನಿನಗೆ ದಯಪಾಲಿಸಿದ ದರ್ಶನದ ಬೆಳಕಿನಲ್ಲಿ ನೀನು ನಡೆಯಬೇಕಲ್ಲದೆ, ಬೇರೆಯವರೊಂದಿಗೆ ಹೋಲಿಸಿಕೊಳ್ಳಬಾರದು ಮತ್ತು ಅವರ ಬಗ್ಗೆ ತೀರ್ಪು ಮಾಡಬಾರದು, ಅದೆಲ್ಲಾ ದೇವರು ಮತ್ತು ಅವರ ನಡುವೆ ಇರುವ ವಿಷಯವಷ್ಟೆ. ನಿನ್ನನ್ನು ಆನಂದಭರಿತ ನನ್ನಾಗಿ ಮಾಡುತ್ತಿರುವ ನಿನ್ನ ಒಂದು ನಿಲುವು, ದಿವ್ಯದರ್ಶನದೊಂದಿಗೆ ವಿರುದ್ಧಾಭಿಪ್ರಾಯ ಹೊಂದಿದೆ ಎಂಬುದನ್ನು ನೀನು ಅರಿತಕೂಡಲೇ ನೀನು ವಾಗ್ವಾದಕ್ಕೇ ಇಳಿದು ಬಿಡುವಿ. ಆಗಲೇ, ಆಸ್ತಿಪಾಸ್ತಿಯ ಭಾವನೆಗಳು, ವೈಯಕ್ತಿಕ ಹಕ್ಕು ಪ್ರತಿಪಾದನೆಯ ಸಂವೇದನೆಗಳು ಮತ್ತು ಯೇಸುಕ್ರಿಸ್ತನು ಶೂನ್ಯವೆಂದೆಣಿಸಿದ ಸಂಗತಿಗಳು ನಿನ್ನಲ್ಲಿ ಹುಟ್ಟಿ ಬೆಳೆಯುತ್ತವೆ. ಯೇಸುಕ್ರಿಸ್ತನು ತನಗೆ ಅಸಂಗತವಾದ ವಿಷಯಗಳಿಗೆ ಮೂಲವಾಗಿರುವಂಥವುಗಳಿಗೆ ವಿರುದ್ಧನಾಗಿದ್ದನು. ''ಒಬ್ಬನಿಗೆ ಎಷ್ಟು ಆಸ್ತಿಯಿದ್ದರೂ ಅದು ಅವನಿಗೆ ಜೀವಾಧಾರಾವಾಗುವುದಿಲ್ಲ'' (ಲೂಕ 12:15) ಇದನ್ನು ನಾವೇಕೆ ಗಮನಿಸುವುದಿಲ್ಲವೆಂದರೆ ಯೇಸುಕ್ರಿಸ್ತನ ಈ ಬೋಧನೆಯಡಿಯಲ್ಲಿರುವ ಮೂಲತತ್ವಗಳನ್ನು ನಾವು ನಿರ್ಲಕ್ಷಿಸಿದ್ದೇವೆ.

ನಾವು ಪಡೆದಿದ್ದ ಒಂದು ಅಚ್ಚರಿಯ ಅನುಭವದ ಸ್ಮರಣೆಯಲ್ಲಿಯೇ ಹಾಯಾಗಿ ಮೈಚೆಲ್ಲಿ ಬಿದ್ದು ಕೊಳ್ಳುವುದೇ ನಮ್ಮ ಒಲವು. ದೇವರ ಬೆಳಕಿನಲ್ಲಿ ಹೊಸ ಒಡಂಬಡಿಕೆಯು ಪ್ರಕಟಿಸುವ ಒಂದು ಸ್ಟ್ಯಾಂಡರ್ಡು ಅಲ್ಲಿರುವುದಾದರೆ ಮತ್ತು ಆ ಮಟ್ಟಕ್ಕೆ ಏರಿ ನೀನು ಬರದಿದ್ದರೆ, ಇಲ್ಲವೇ ಆ ಮಟ್ಟಕ್ಕೇರುವ ಒಲವೂ ನಿನಗಿರದಿದ್ದರೆ, ಅದೇ ನಿನ್ನ ಹಿಂಜರಿತದ ಆರಂಭ. ಯಾಕೆಂದರೆ, ನಿನ್ನ ಮನಸ್ಸಾಕ್ಷಿಯು ನಿನ್ನ ಮುಂದಿರುವ ಸತ್ಯಕ್ಕೆ ಸ್ಪಂದಿಸುತ್ತಾ ಇಲ್ಲ. ಒಂದು ಸತ್ಯದ ಮೇಲಿರುವ ಮುಸುಕನ್ನು ಬದಿಗೆ ಸರಿಸಿದಾಗ ಕಾಣಿಸುವುದನ್ನು ನೀನು ನೋಡಿದರೆ, ಮೊದಲಿದ್ದಂತೆ ಇನ್ನು ಮೇಲೆ ನೀನಿರಲು ಸಾಧ್ಯವಿಲ್ಲ. ಅಂಥಾ ಸಮಯವೇ, ಯೇಸುಕ್ರಿಸ್ತನಿಗೆ ಹೆಚ್ಚು ನಂಬಿಗಸ್ತನಾದ ನೀನೇ ನಿಜವಾದ ಶಿಷ್ಯನೆಂದು ಗುರುತಿಸುತ್ತದೆ, ಅಥವಾ ಯೇಸುಕ್ರಿಸ್ತನನ್ನು ತೊರೆದು ಹಿಂದಕ್ಕೆ ಹೋಗುವಂಥವನು ಎಂದು ನಿನ್ನನ್ನು ಗುರುತಿಸುತ್ತದೆ.

# ನಾವು ಹೊಂದಿರುವ ಪ್ರತಿಯೊಂದು ಸದ್ಗುಣಗಳು

**''ನನ್ನ ಜೀವ ಜಲದ ಒರತೆಗಳೆಲ್ಲಾ ನಿನ್ನಲ್ಲಿಯೇ ಅವೆ'' - (ಕೀರ್ತ 87:7)**

ನಮ್ಮ ಸ್ವಾಮಿಯವರು ನಮ್ಮ ಸ್ವಾಭಾವಿಕ ಗುಣಗಳ ಮೇಲೆ ಆತ್ಮೀಕ ಗುಣಗಳನ್ನೆಂದಿಗೂ ತೇಪೆ ಹಚ್ಚುವುದಿಲ್ಲ. ಒಬ್ಬ ವ್ಯಕ್ತಿಯನ್ನು ಅಂತರ್ಯದಲ್ಲಿ ಸಂಪೂರ್ಣವಾಗಿ ಹೊಸದಾಗಿ ಪುನರ್ಸೃಷ್ಟಿ ಮಾಡುತ್ತಾನೆ. ''ನೂತನ ಸ್ವಭಾವವನ್ನು ಧರಿಸಿಕೊಳ್ಳಿರಿ'' (ಎಫೆ 4:23). ನಿಮ್ಮ ಸ್ವಾಭಾವಿಕ ಜೀವಿತವು ನೂತನ ಜೀವಿತಕ್ಕನು ಗುಣವಾದ ಹೊಸ ಸ್ವಭಾವವನ್ನು ಅದು ಧರಿಸಿಕೊಳ್ಳುವಂತೆ ಮಾಡಿರಿ. ದೇವರು ನಮ್ಮಲ್ಲಿ ಬಿತ್ತುವ ಜೀವವು ಮೊಳೆತು ತನ್ನ ಸ್ವಂತ ಗುಣಗಳಲ್ಲಿ ಬೆಳೆಯುತ್ತದೆ - ಆದಾಮನ ಗುಣಗಳಲ್ಲಿ ವೃದ್ಧಿಸುವುದಿಲ್ಲ - ಅದು ಯೇಸುಕ್ರಿಸ್ತನ ಗುಣಗಳಲ್ಲಿ ಬೆಳೆಯುತ್ತದೆ. ಪವಿತ್ರೀಕರಣದ ನಂತರ ಅದು ತನ್ನ ಬೆಳವಣಿಗೆಗೆ ಅಗತ್ಯವಾದ ಜಲವನ್ನು ಯೇಸುಕ್ರಿಸ್ತನ ಪುನರುತ್ಥಾನದ ಜೀವಿತವೆಂಬ ಜಲಾಶಯ ದಿಂದ ತನ್ನಷ್ಟಕ್ಕೆ ತಾನೇ ಸೆಳೆದುಕೊಳ್ಳುವ ತನಕ, ನಿನ್ನ ಎಲ್ಲಾ ಸಾಮರ್ಥ್ಯಗಳಲ್ಲಿ ನಿನ್ನ ಸಹಜ ಸದ್ಗುಣ ಗಳಲ್ಲಿ ನಿನಗಿರುವ ಭರವಸೆಯು ಬತ್ತಿ ಹೋಗುವಂತೆ ದೇವರು ಮಾಡುವುದನ್ನು ಗಮನಿಸು. ಬತ್ತಿ ಹೋಗುವ ಅನುಭವದಲ್ಲಿ ದೇವರು ನಿನ್ನನ್ನು ಸಾಗಿಸುತ್ತಿದ್ದರೆ, ದೇವರಿಗೆ ಸ್ತೋತ್ರ ಹೇಳು.

ದೇವರು ನಮ್ಮೊಳಗೆ ಈ ಕಾರ್ಯ ಸಾಧಿಸುತ್ತಿರುವ ಸೂಚನೆಯೆಂದರೆ ನಮ್ಮ ಸಹಜ ಗುಣ ಸ್ವಭಾವದ ಮೇಲೆ ನಮಗಿರುವ ಭರವಸೆಯನ್ನು ಆತನು ನಾಶಗೊಳಿಸುತ್ತಿದ್ದಾನೆ. ಯಾಕೆಂದರೆ ಆ ಸ್ವಭಾವಗಳು ಈಗ ನಾವೇನಾಗಬೇಕಾಗಿದೆಯೋ, ಹಾಗಾಗಲು ನೆಚ್ಚಿಕೊಳ್ಳುವ ಸ್ವಭಾವಗಳಲ್ಲ. ಆ ಸ್ವಭಾವಗಳು ದೇವರು ನಮ್ಮನ್ನು ಸೃಷ್ಟಿಸಿದಾಗ ನಮ್ಮಲ್ಲಿದ್ದ ಸ್ವಭಾವದ ಅಲ್ಪಾವಶೇಷಗಳು ಮಾತ್ರ. ನಾವಾದರೋ ನಮ್ಮ ಸಹಜ ಸ್ವಭಾವಗಳಿಗೆ ಜೋತು ಬಿದ್ದಿರುತ್ತೇವೆ. ಯೇಸುಕ್ರಿಸ್ತನ ಜೀವಿತ - ಯಾವ ಜೀವಿತವನ್ನು ನಮ್ಮ ಸಹಜ ಸ್ವಭಾವದ ಪ್ರಕಾರ ವಿವರಿಸಲಾಗದೋ, ಅಂಥ ಜೀವಿತವನ್ನು ನಾವು ಪಡೆಯುವಂತೆ ದೇವರು ಸತತವಾಗಿ ಪ್ರಯತ್ನಿಸುತ್ತಿದ್ದಾನೆ. ಇಂದು ದೇವರ ಸೇವೆಯಲ್ಲಿರುವ ಜನರು, ದೇವರ ಕೃಪೆಯು ತಮಗೆ ಏನು ಅನುಗ್ರಹಿಸಿಲ್ಲವೋ, ಯಾವ ಅನುಗ್ರಹವು ಅವರಿಗೆ ಆಕಸ್ಮಿಕ ಅನುವಂಶಿಕೆ ಯಿಂದ ಲಭಿಸಿದೆಯೋ, ಅದನ್ನೇ ಆತುಕೊಂಡಿರುವುದನ್ನು ನಾವು ಕಾಣುತ್ತಿರುವುದು ಅತ್ಯಂತ ದುಃಖಕರ ಸಂಗತಿ. ದೇವರು ನಮ್ಮ ಸಹಜಸ್ವಭಾವಗಳನ್ನು ಅಭಿವೃದ್ಧಿಗೊಳಿಸಿ ಅದನ್ನೇ ರೂಪಾಂತರ ಮಾಡುವುದಿಲ್ಲ ; ಯೇಸುಕ್ರಿಸ್ತನು ಬಯಸುವ ಸ್ಟ್ಯಾಂಡರ್ಡದ ಸನಿಹಕ್ಕೂ ಸಹಾ ಈ ನಮ್ಮ ಸಹಜ ಸ್ವಭಾವಗಳು ಬರಲಾರವು. ನಮ್ಮ ಸಹಜ ಪ್ರೀತಿಯಾಗಲಿ, ಸಹಜ ಸಹನತೆಯೇ ಆಗಲಿ, ಸಹಜ ಪವಿತ್ರತೆಯಾಗಲೀ ಇವ್ಯಾವುಗಳು ಯೇಸುಕ್ರಿಸ್ತನ ಬೇಕುಗಳ ಮಟ್ಟಕ್ಕೇರಿ ಬರಲಾರವು. ದೇವರು ನಮ್ಮೊಳಗೆ ಇಟ್ಟಿರುವ ಹೊಸ ಜೀವಿತಕ್ಕೆ ಸಮರಸದಿಂದ ಹೊಂದಿಕೊಳ್ಳುವ ಹಾಗೆ ನಮ್ಮ ಶರೀರದ ಪ್ರತಿಯೊಂದು ಭಾಗವನ್ನು ಸ್ವಾಧೀನಕ್ಕೆ ಬರುವಂತೆ ಮಾಡಿದರೆ, ಆಗ ದೇವರು, ಯೇಸುಕ್ರಿಸ್ತನ ವಿಶಿಷ್ಟ ಸದ್ಗುಣಗಳನ್ನು ನಮ್ಮ ಜೀವಿತದಲ್ಲಿ ಪ್ರಕಟಪಡಿಸುವನು. ''ನಾವು ಹೊಂದಿರುವ ಪ್ರತಿಯೊಂದು ಸದ್ಗುಣವು ಆತನದೇ - ಆತನದು ಮಾತ್ರವೇ''.

# ಹಿಂದಿನ ದಿನ (YESTERDAY)

**''ಇಸ್ರಾಯೇಲಿನ ದೇವರು ನಿಮಗೆ ಹಿಂಬಲವಾಗಿಯೂ ಇರುವನು'' - (ಯೆಶಾ 52:12)**

ಗತಿಸಿದ ದಿನದ ಹೊಣೆ : ''ಈಗಿನದು ಹಿಂದೆ ಇತ್ತು, ಕಳೆದದ್ದನ್ನು ದೇವರು ತಿರುಗಿ ಬರ ಮಾಡುವನು'' (ಪ್ರಸಂಗಿ 3:15). ವರ್ಷದ ಕೊನೆಯ ದಿನದಲ್ಲಿ ನಮ್ಮ ಮುಂದಿನ ದಿನಗಳಿಗಾಗಿ, ಮುಂದಿನ ಭವಿಷ್ಯತ್ತಿನಲ್ಲಿ ದೇವರು ನಮಗಾಗಿ, ಏನೆಲ್ಲವನ್ನು ಇಟ್ಟಿರುವನೆಂಬುದನ್ನು ತಿಳಿಯಲು ಕುತೂಹಲದಿಂದಿದ್ದೇವೆ, ಆದರೂ ಹಿಂದಿನ ದಿನಗಳನ್ನು ನೆನಸಿಕೊಳ್ಳುವುದರಿಂದ, ನಮ್ಮಲ್ಲಿ ಕಳವಳ ಉಂಟಾಗುತ್ತದೆ. ದೇವರ ಕೃಪೆಯಿಂದ ಲಭಿಸಿರುವ ಇಂದಿನ ಸುಖಾನುಭವದ ನಲಿವು ಹಿಂದಿನ ದಿನದ ನಮ್ಮ ಪಾಪಗಳ ಮತ್ತು ದ್ರೋಹಗಳ ಸ್ಮರಣೆಯಿಂದ ತಡೆಹಿಡಿಯಲ್ಪಡುವುದು. ಆದರೆ ದೇವರು - ಆತನೇ ನಮ್ಮ ಹಿಂದಿನ ದಿನಗಳಿಗೂ ದೇವರೇ ಆಗಿದ್ದಾನೆ, ಗತಿಸಿದಂಥವುಗಳನ್ನು ಭವಿಷ್ಯತ್ತಿನ ಆತ್ಮೀಕ ಸುಸಂಸ್ಕೃತಿಯ ಸೇವೆಗಾಗಿ ಅವುಗಳನ್ನು ಮಾರ್ಪಡಿಸುವ ಸಲುವಾಗಿ ದೇವರು ನಮ್ಮ ಗತಕಾಲವನ್ನು ನಾವು ಸ್ಮರಿಸಲು ಅವಕಾಶ ಮಾಡಿಕೊಡುವನು. ಸಧ್ಯದ ವರ್ತಮಾನದಲ್ಲಿ ಹಗುರವಾದ ಭದ್ರತೆಯಲ್ಲಿ ನಾವಿರ ಬಾರದೆಂದು ದೇವರು ನಮಗೆ ನಮ್ಮ ಗತಕಾಲವನ್ನು ನೆನಪು ಮಾಡಿಕೊಡುತ್ತಾನೆ.

ಮುಂದಿನ ದಿನದ ಸುರಕ್ಷತೆ ''ಯೆಹೋವನು ನಿಮಗೆ ಮುಂಬಲವಾಗಿ ಮುಂದರಿಯುವನು'' (ಯೆಶಾ 52:12) ಇದು ಮಹಾ ಕೃಪೆಯುಳ್ಳ ಪ್ರಕಟಣೆ, ನಾವೆಲ್ಲಿ ಸೋತು ಹೋಗಿದ್ದೆವೋ ಅಲ್ಲಿ ದೇವರು ತನ್ನ ಕಾವಲು ಸೈನ್ಯವನ್ನು ನಮಗಾಗಿ ಇರಿಸುತ್ತಾನೆ. ನಮಗೆ ಹಿಂದೆ ಉಂಟಾದ ಸೋಲಿನಂತೆ ತಿರುಗಿ ಎಡವಿ ಬೀಳದ ಹಾಗೆ ಮುಂದಿನ ದಿನಗಳಲ್ಲಿ ದೇವರು ನಮ್ಮನ್ನು ಕಾಯುವನು; ಯಾಕೆಂದರೆ ದೇವರು ನಮಗೆ ಹಿಂಬಲವಾಗಿರದಿದ್ದರೆ, ಖಂಡಿತವಾಗಿಯೂ ಹಿಂದಿನವುಗಳು ನಮ್ಮನ್ನು ಸೋಲಿಸಲು ನಮ್ಮ ಮೇಲೆ ದಂಡೆತ್ತಿ ಬಂದೇರಗುತ್ತವೆ. ದೇವರ ಹಸ್ತವು ನಮ್ಮ ಗತಕಾಲದ ಅಂತಿಮ ಸೀಮಾ ಮೇರೆಯವರೆಗೆ ಚಾಚಲ್ಪಡುತ್ತದೆ ಮತ್ತು ನಮ್ಮ ಮನಸಾಕ್ಷಿಯನ್ನು  ಗತದಿಂದ ಮುಕ್ತಗೊಳಿಸುತ್ತದೆ.

ಈದಿನಕ್ಕೆ ಭದ್ರತೆ: ''ನೀವು ಅವಸರದಿಂದ ಹೊರಡಬೇಕಾಗಿಲ್ಲ, ಓಡಿ ಹೋಗಬೇಕಾಗಿಲ್ಲ'' (ಯೆಶಾ 52:12) ನಾವು ಮುಂದಿನ ವರ್ಷದೊಳಗೆ ಹೆಜ್ಜೆಯನ್ನಿಡುತ್ತಿರುವಾಗ ದುಡುಕಿನ ಆತುರತೆಯ ಹೆಜ್ಜೆಬೇಡ - ಮರೆತುಹೋಗುವ ಆನಂದದಿಂದ ಹೆಜ್ಜೆ ಇಡಬೇಡ. ಹಠಾತ್ ವಿಚಾರರಹಿತ ಅವಸರದ ಓಟದ ಹೆಜ್ಜೆ ಇಡಬೇಡ. ಆದರೆ ಇಸ್ರಾಯೇಲಿನ ದೇವರು ನಿಮಗೆ ಮುಂಬಲವಾಗಿ ಮುಂದರಿಯುತ್ತಿರುವ ತಿಳುವಳಿಕೆಯ ಬಲದಿಂದ, ಸಾವಧಾನವಾಗಿ ನೆಮ್ಮದಿಯ ಹೆಜ್ಜೆಯನ್ನಿಟ್ಟು ಮುಂದೆ ಸಾಗಬೇಕು. ನಮ್ಮ ಹಿಂದಿನ ದಿನಗಳು, ಸರಿಪಡಿಸಲಾರದಂಥ ಕಳೆದು ಹೋದ ಸಂಗತಿಗಳನ್ನು ನಮ್ಮ ಮುಂದಿರಿಸುತ್ತವೆ; ಯಾವ ಸುಯೋಗಗಳು ತಿರುಗೆಂದಿಗೂ ಬರಲಾರವೋ, ಅವುಗಳನ್ನು ನಾವು ಕಳೆದುಕೊಂಡಿರುವುದು ನಿಜವೇ, ಆದರೆ ದೇವರು ಈ ವಿನಾಶಕರ ತಳಮಳವನ್ನು ರಚನಾತ್ಮಕ ವಿವೇಚನಾಶಕ್ತಿಯನ್ನಾಗಿ ಭವಿಷ್ಯದ ಉಪಯೋಗಾರ್ಥ ಅದನ್ನು ಮಾರ್ಪಡಿಸಬಲ್ಲನು. ಗತಕಾಲವನ್ನು ನಿದ್ರಿಸಲು ಬಿಟ್ಟುಬಿಡು; ಆದರೆ ಅದು ಯೇಸುಕ್ರಿಸ್ತನ ಎದೆಯ ಮೇಲೆಯೇ ನಿದ್ರಿಸಲಿ.

ಸರಿ ಪಡಿಸಲಾರದಂಥ ಗತವನ್ನು ದೇವರ ಹಸ್ತಗಳಲ್ಲಿರಿಸಿಬಿಟ್ಟು ಎದುರಿಸಲಾರದ ಭವಿಷ್ಯತ್ತನ್ನು ಎದುರಿಸಲು ಆತನ ಜೊತೆಯಲ್ಲಿಯೇ ಮುಂದಡಿಯನ್ನಿರಿಸು.